Hermann Berger
15. VII. 1957.

E H Wareham
Belgaum
7/12/64

KATHA SANGRAHA

OR

CANARESE SELECTIONS.

PROSE.

COMPILED BY

DANIEL SANDERSON,

WESLEYAN MISSIONARY.

BANGALORE:

PRINTED AT THE WESLEYAN MISSION PRESS,

1863.

PREFACE.

This volume is the First of an intended Series, designed to furnish, in a convenient form, all the help of this kind needed by Europeans to acquire a thorough knowledge of the Canarese language.

European students of Canarese are baffled and disheartened by the bulkiness of native works, the inconvenient form in which they are written, the errors that abound in all, the immense difficulty of procuring copies, and the expense of transcription; and disgusted with the revolting obscenity that taints the writings of even the best authors. It may be justly questioned whether there exists any native work, except a grammar or vocabulary, that could be published, as a whole, without a violent outrage to common decency.

It is therefore intended to publish four volumes: namely,

One of Ordinary Prose.
One of Simple Poetry.
One of More Difficult Prose.
One of the Higher styles of Poetry.

These will consist of Extracts from the best native works, and be sufficiently large to contain ample specimens of the most correct and approved styles, and to convey a tolerable idea of the best side of native literature.

As slight mistakes often prove very puzzling to learners, great care has been taken to ensure correct printing. The whole has been carefully re-read, and a table of errata (owing principally to distance from the press and types breaking,) is given.

The completion of the scheme depends upon the reception accorded to this first volume.

D. S.

TOOMKOOR,
December 24th 1863.

CONTENTS.

PART I.

STORIES FROM THE PANCHATANTRA AND VARIOUS OTHER SOURCES.

PART II.

EXTRACTS FROM THE SHIVA PURANA.

PART III.

EXTRACTS FROM THE MAHA BHARATA.

PART IV.

EXTRACTS FROM THE RAMAYANA.

PART V.

THE TEN INCARNATIONS OF VISHNU.

PART VI.

CANARESE SELECTIONS.

ಕಥಾ ಸಂಗ್ರಹ.

1. The Blind Man who carried a Torch.

೧. ಕುರುಡನು ದೀವಿಟಿಗೆಯನ್ನು ಹಿಡಿದು ಕೊಂಡು ಬಂದ ಕಥೆ.

ಒಂದು ಊರಿನಲ್ಲಿ ಒಬ್ಬ ಕುರುಡನು ರಾತ್ರಿ ವೇಳೆಯಲ್ಲಿ ನೀರು ತುಂಬಿದ ಗಡಿಗೆಯನ್ನು ತಲೆಯ ಮೇಲೆ ಹೊತ್ತು ಕೊಂಡು, ಕೈಯಲ್ಲಿ ಒಂದು ದೀವಿಟಿಯನ್ನು ಹಚ್ಚಿಸಿ, ಹಿಡಿದು ಕೊಂಡು, ಬರುತ್ತಾ ಇದ್ದನು. ಅವನಿಗೆ ಎದುರಾಗಿ ಬರುವ ಒಬ್ಬ ಮನುಷ್ಯನು—ಈ ಮುದುಕನಿಗೆ ಕುರುಡುತನವು ಅಲ್ಲದೆ, ಹುಚ್ಚುತನವೂ ಇರುವ ಹಾಗೆ ಕಾಣುತ್ತದೆ. ಒಳ್ಳೇದು, ಮಾತಾಡಿಸಿ, ನೋಡೋಣ ಎಂದು—ಏನೈಯ್ಯಾ, ಹಳೇ ಮನುಷ್ಯನೇ, ನಿನಗೆ ರಾತ್ರಿ ಹಗಲು ಸಹ ಒಂದೇ. ಹೀಗಿರುವಲ್ಲಿ ಈ ದೀವಿಟಿಗೆಯನ್ನು ಕೈಯಲ್ಲಿ ಹಿಡಿದು ಕೊಂಡು ಬರುವದರಿಂದ ನಿನಗೆ ಪ್ರಯೋಜನವೇನು ಎಂದು ಕೇಳಿದನು. ಅದಕ್ಕೆ ಆ ಮುದುಕನು—ಅಯ್ಯಾ, ಕೇಳುವ ಮನುಷ್ಯನೇ, ಇದರಿಂದ ನನಗೆ ಇರುವ ಪ್ರಯೋಜನವು ನಿನ್ನ ಬುದ್ಧಿಗೆ ತೋರದ್ದರಿಂದ ನಿನ್ನ ಬುದ್ಧಿ ಬಹಳ ದಪ್ಪವು ಎಂದು ಎಣಿಸುತ್ತೇನೆ. ಆದರೂ ಹೇಳುವೆನು; ಕೇಳು. ದೀವಿಟಿಗೆಯನ್ನು ಈ ರಾತ್ರಿ ವೇಳೆಯಲ್ಲಿ ನಾನು ಹಚ್ಚಿ ಕೊಂಡು ಬಾರದೆ ಇದ್ದರೆ, ನನಗೆ ಎದುರಾಗಿ ಬರುವ ಜನರು ಆಗಲಿ, ದನ ಕರುಗಳು ಆಗಲಿ ಕಾಣದೆ, ನನ್ನ ಮೇಲೆ ಬಿದ್ದರೆ, ನಾನು ಗಡಿಗೆಯನ್ನು ಎತ್ತಿ ಹಾಕಿ ಕೊಂಡು ಬೀಳುವೆನಲ್ಲವೋ? ಹಾಗೆ ಬಿದ್ದರೆ, ನನ್ನ ಮೈ ಘಾಯವಾಗುವದಲ್ಲದೆ, ಕಷ್ಟ ಪಟ್ಟು ಕೊಂಡು, ಹೊತ್ತು ಕೊಂಡು ಬಂದ ನೀರು ಹೋಗಿ, ಕ್ರಯ ಕೊಟ್ಟು ತಂದ ಗಡಿಗೆಯೂ ಹೋಗುವದಿಲ್ಲವೋ? ಆದಕಾರಣ ನಾನು ದೀವಿಟಿಗೆಯನ್ನು ಹಚ್ಚಿ ಕೊಂಡು ಬಂದದರಿಂದ, ಜನರೂ ದನ ಕರುಗಳೂ ನನ್ನ ಮೇಲೆ ಬೀಳಲಾರರು; ನನಗೆ ಒಂದು ಅನರ್ಥವೂ ಉಂಟಾಗಲಾರದು. ಇದೆಲ್ಲಾ ನನಗೆ ಪ್ರಯೋಜನವಲ್ಲವೇ? ಇದು ಅಲ್ಲದೆ, ಹಾವು, ಚೇಳು, ಮುಂತಾದವುಗಳು ನನ್ನನ್ನು ಬಿಟ್ಟು, ತೊಲಗಿ ಹೋಗುವವು, ಎಂದು ಹೇಳುವದನ್ನು ಕೇಳಿದ ಮನುಷ್ಯನು ಆ ಕುರುಡನ ಮಾತಿಗೆ ಒಪ್ಪಿ ಕೊಂಡು, ಹೊರಟು ಹೋದನು.

2. The Tiger and Man.

೨. ಹುಲಿಯನ್ನೂ ಮನುಷ್ಯನನ್ನೂ ಕುರಿತು.

ಒಂದು ಊರಿನಲ್ಲಿ ಒಬ್ಬ ಮನುಷ್ಯನೂ ಒಂದು ಹುಲಿಯೂ ಸ್ನೇಹಿತರಾಗಿದ್ದು, ಒಂದು ಮಶೀತಿಗೆ ಹೋದರು. ಆ ಮಶೀತಿಯಲ್ಲಿ ಒಂದು ಹುಲಿಯನ್ನು ಒಬ್ಬ ಮನುಷ್ಯನು ಏರಿ ಕೊಂಡು, ಕಠಾರಿಯಿಂದ ತಿವಿಯುತ್ತಾ ಇರುವದಾಗಿ ಚಿತ್ರದಲ್ಲಿ ಬರೆದಿತ್ತು. ಅದನ್ನು ಈ ಮನುಷ್ಯನು ನೋಡಿ—ಐಯ್ಯಾ, ಹುಲಿ ರಾಯನೇ, ನೋಡು! ಈ ಮನುಷ್ಯನು ಎಷ್ಟು ಘಟ್ಟಿಗನು! ಇಂಥಾ ಕ್ರೂರವಾದ ಹುಲಿಯನ್ನು ತಾನು ಹತ್ತಿ ಕೊಂಡು, ಕಠಾರಿಯಿಂದ ಇರಿಯುತ್ತಾನೆ ಎಂದು, ಹೇಳಲು; ಅದಕ್ಕೆ ಆ ಹುಲಿಯು—ಈ ಚಿತ್ರವನ್ನು ಮನುಷ್ಯ ಬರೆದು ಇದ್ಧಾನೆ. ಹುಲಿಯು ಎಂದಿಗೂ ಹೀಗೆ ಬರೆಯಲಾರದು ಎಂದು ಹೇಳಿದ್ದರಿಂದ, ಮನುಷ್ಯನು ನಾಚಿ ಕೊಂಡು, ಸುಮ್ಮನಾದನು.

3. The Mussulman and his Wife.

3. ತುರುಕನನ್ನೂ ಅವನ ಹೆಂಡತಿಯನ್ನೂ ಕುರಿತು.

ಒಂದು ಹಳ್ಳಿಯಲ್ಲಿ ಒಬ್ಬ ತುರುಕನು ಸಂಸಾರವನ್ನು ಮಾಡಿ ಕೊಂಡು ಇದ್ದನು. ಹೀಗಿರುವಲ್ಲಿ ಆತನು ಒಂದು ದಿವಸ ಸಾಯಂಕಾಲವಾದ ಎರಡು ಘಳಿಗೆಯ ಮೇಲೆ ಪೇಟೆಗೆ ಹೋಗ ಬೇಕೆಂದು ಹೊರಟು, ಅರ್ಧ ದಾರಿಗೆ ಬಂದು, ಅಯ್ಯೋ, ಮೋಸ ಹೋಯಿತು! ನನ್ನ ಹೆಂಡತಿಯು ನಾನು ಬರುವ ತನಕ ಮನೆಯ ದೀಪವನ್ನು ನಂದಿಸದೆ, ಉರಿಸಿ, ಎಣ್ಣೆಯನ್ನು ಎಲ್ಲಿ ಹಾಳು ಮಾಡುತ್ತಾಳೋ! ನಾನು ಬರುವಾಗ, ಹೇಳಿ ಬರಲಿಲ್ಲವಲ್ಲಾ, ಎಂದು ಯೋಚಿಸಿ, ತಿರಿಗಿ ಮನೆಗೆ ಬರುವ ಹೊತ್ತಿಗೆ ಅವನ ಹೆಂಡತಿಯು ಮನೆಯ ಬಾಗಿಲು ಹಾಕಿ ಕೊಂಡು, ಮಲಗಿದ್ದಳು. ಈ ತುರುಕನು ಬಾಗಿಲಲ್ಲಿ ನಿಂತು—ಏನೇ, ಏನೇ, ದೀಪ ನಂದಿಸಿದೆಯೋ, ಇಲ್ಲವೋ? ಎಂದು ಕೇಳಲು; ಅದಕ್ಕೆ ಆಕೆಯು—ನಾನು ಎಂದಿಗೆ ನಂದಿಸದೆ ಇದ್ದೇನು? ನಾನು ಹೆಡ್ಡಳಲ್ಲ. ನನ್ನ ತಂದೆ ತಾಯಿಗಳು ನನಗೆ ಚನ್ನಾಗಿ ಬುದ್ಧಿ ಕಲಿಸಿದ್ಧಾರೆ. ನೀನು ನನ್ನ ಸ್ವಭಾವವನ್ನು ತಿಳಿಯದೆ, ಕೆಲವು ದೂರ ಹೋಗಿ, ಹಿಂತಿರಿಗಿ, ಬಂದು, ಜೋಡನ್ನು ವ್ಯರ್ಥವಾಗಿ ಸವೆಯಿಸಿ ಬಿಟ್ಟೆ ಅಲ್ಲಾ, ಎಂದು ಹೇಳಲು; ಅದಕ್ಕೆ ಇವನು ಹೆಂಡತಿಯನ್ನು ಕುರಿತು—ಶಾಬಾಸು! ನೀನು ಬಹು ಬುದ್ಧಿವಂತಳು. ನೀನು ಯೋಚನೆ ಮಾಡ ಬೇಡ; ಹಿಂತಿರಿಗಿ ಬರುವಾಗ್ಯೆ, ಸವೆಯುತ್ತದೆ ಎಂದು, ಜೋಡನ್ನು

ಕಂಕುಳಲ್ಲಿ ಇಟ್ಟು ಕೊಂಡು, ಬಂದಿದ್ಧೇನೆಂದು ಸಮಾಧಾನ ಪಡಿಸಿ, ಪೇಟೆಗೆ ಹೋದನು.

4. The Kogile and Ass.
೪. ಕೋಗಿಲೆ ಕತ್ತೆಗಳ ಕಥೆ.

ಒಂದಾನೊಂದು ಅರಣ್ಯದಲ್ಲಿ ನೂರಾರು ಕೋಗಿಲೆಗಳು ಒಂದು ಮಾವಿನ ಮರದ ಮೇಲೆ ವಾಸಾ ಮಾಡಿ ಕೊಂಡು ಇದ್ದವು. ಹೀಗಿರುವಲ್ಲಿ, ಒಂದು ಕೋಗಿಲೆಯು ಮೇವಿಗೋಸ್ಕರ ತಿರುಗುತ್ತಾ ಇರುವಲ್ಲಿ, ಒಂದು ಕಾಗೆಯು ಅದನ್ನು ಕಂಡು, ಜಾತಿ ದ್ವೇಷದಿಂದ ಅಟ್ಟಿ ಕೊಂಡು ಬರಲು; ಕೋಗಿಲೆ ಹೆದರಿ, ಹಾರಿ ಬಂದು, ಒಂದು ಹಳ್ಳಿಯಲ್ಲಿ ಒಬ್ಬ ಅಗಸನ ಕೊಟ್ಟಿಗೆಯನ್ನು ಹೊಕ್ಕಿತು. ಆಗ ಅಲ್ಲಿ ಕಟ್ಟಿ ಇದ್ದ ಕತ್ತೆಯು ಈ ಕೋಗಿಲೆಯನ್ನು ನೋಡಿ—ಛೀ! ಛೀ! ನೀನು ನನ್ನ ಹತ್ತಿರ ಬರ ಬೇಡ; ಅತ್ತ ಹೋಗು. ನೀನು ಹುಟ್ಟಿದಾರಭ್ಯ ಒಬ್ಬರಿಗಾದರೂ ಒಂದು ಸಹಾಯ ಮಾಡಿದವನಲ್ಲ. ನಾನು ನನ್ನ ಶಕ್ತಿ ತಗ್ಗುವ ವರಿಗೂ ಪರರಿಗೆ ಸಹಾಯವನ್ನೇ ಮಾಡಿ ಕೊಂಡಿದ್ಧೇನೆಂದು, ಹೇಳಲು; ಕೋಗಿಲೆಯು ಕತ್ತೆಯನ್ನು ಕುರಿತು—ನೀನು ಪರರಿಗೆ ಎಷ್ಟು ಸಹಾಯ ಮಾಡಿದಾಗ್ಯೂ, ಕ್ರೂರವಾದ ವಾಕ್ಕುಳ್ಳವನಾದದರಿಂದ, ನಿನ್ನನ್ನು ಎಲ್ಲರು ನಿಂದಿಸುತ್ತಾರೆ. ನಾನು ಯಾರಿಗೂ ಉಪಕಾರಾ ಮಾಡದೆ ಇದ್ದಾಗ್ಯೂ, ನಾನು ಮಧುರವಾದ ವಾಕ್ಕುಳ್ಳವನಾದ್ದರಿಂದ, ನನ್ನನ್ನು ಎಲ್ಲರು ಹೊಗಳುತ್ತಾರೆಂದು, ಉತ್ತರ ಕೊಟ್ಟು, ಹಾರಿ ಹೋಗಿ, ತನ್ನ ಗುಂಪನ್ನು ಸೇರಿ ಕೊಂಡಿತು.

5. The Mantri Appaji divides the deceased Merchant's seventeen Elephants among his three sons.
೫. ವರ್ತಕನ ಮೂರು ಮಂದಿ ಮಕ್ಕಳಿಗೆ ಹದಿನೇಳು ಆನೆಗಳನ್ನು ಪಾಲು ಮಾಡಿದ ಕಥೆ.

ವಿಜಯನಗರವೆಂಬ ಪಟ್ಟಣದಲ್ಲಿ ಮಣಿಕಾರ ಶೆಟ್ಟಿ ಎಂಬ ಒಬ್ಬ ವರ್ತಕನಿದ್ದನು. ಆತಗೆ ಮೂರು ಜನ ಗಂಡು ಮಕ್ಕಳು ಇದ್ದರು. ಆತನು ಸಾಯುವ ಕಾಲದಲ್ಲಿ ಮೂರು ಮಕ್ಕಳನ್ನು ಕರೆದು—ನಾನು ಹದಿನೇಳು ಆನೆಗಳನ್ನು ಸಂಪಾದಿಸಿದ್ಧೇನೆ. ಇವು ಬಹಳ ಲಕ್ಷಣಗಳಾದ ಆನೆಗಳು. ಯಾರಿಗೂ ಕ್ರಯಕ್ಕೆ ಮಾರ ಬೇಡಿರಿ. ಇವುಗಳಲ್ಲಿ ಎರಡರಲ್ಲಿ ಒಂದು ಭಾಗ ಹಿರೀ ಮಗನೂ—ಮೂರರಲ್ಲಿ ಒಂದು ಭಾಗ ನಡಕಲ ಮಗನೂ—ಒಂಭತ್ತರಲ್ಲಿ ಒಂದು ಭಾಗ ಕಿರೀ ಮಗನೂ—ತೆಗೆದು ಕೊಂಡು, ಚನ್ನಾಗಿ ಆರೈಕೆ ಮಾಡಿ ಕೊಂಡು

ಬನ್ನಿ. ಮಿಕ್ಕ ಒಡವೆ, ವಸ್ತು, ಧನ, ಧಾನ್ಯ, ಪಂಚಲೋಹ, ಪಶ್ವಾದಿಗಳನ್ನು ಸಮ ಭಾಗವಾಗಿ ಮೂವರು ಹಂಚಿ ಕೊಳ್ಳಿರಿ ಎಂದು ಹೇಳಿ, ಸತ್ತು ಹೋದನು. ತರುವಾಯ ಮೂವರು ಮಕ್ಕಳು ಆತನಿಗೆ ಉತ್ತರ ಕ್ರಿಯಾದಿಗಳನ್ನು ಮಾಡಿ, ತಂದೆ ಸಂಪಾದಿಸಿದ್ದ ಸಕಲ ಆಸ್ತಿಯನ್ನು ಮೂರು ಪಾಲು ಮಾಡಿ, ಒಬ್ಬರೊಬ್ಬರು ಒಂದೊಂದು ಪಾಲು ತೆಗೆದು ಕೊಂಡು, ಆನೆಗಳನ್ನು ತಂದೆ ಹೇಳಿದ್ದ ಪ್ರಕಾರ ಭಾಗಗಳನ್ನು ಮಾಡಿ ತೆಗೆದು ಕೊಳ್ಳುವದಕ್ಕೆ ತಿಳಿಯದೆ, ಯಾರಲ್ಲಿ ಹೇಳಿ ಕೊಂಡಾಗ್ಯೂ ಒಬ್ಬರೂ—ನಮ್ಮಿಂದ ಆಗದು ಎಂದು ಹೇಳಿ ಬಿಟ್ಟದರಿಂದ, ಇವರು ಬಹಳ ವ್ಯಸನ ಪಟ್ಟು ಕೊಂಡು ಇರುವಲ್ಲಿ, ಆನೆಗೊಂದಿ ಸಂಸ್ಥಾನದ ರಾಯರ ಅಪ್ಪಾಜಿ ಎಂಬ ಮಂತ್ರಿಯು ಬಳಿಗೆ ಹೋಗಿ, ಹೇಳಿ ಕೊಂಡದ್ದರಿಂದ, ಆತನು ಒಂದು ಘಳಿಗೆ ಆಲೋಚಿಸಿ, ಈ ಮೂವರನ್ನು ಕುರಿತು—ತಂದೆ ಹೇಳಿದ ಪ್ರಕಾರವೇ ಭಾಗಾ ಮಾಡಿ ಕೊಡುತ್ತೇನೆಂದು ಹೇಳಿ, ತಾನು ಒಂದು ಆನೆಯ ಮೇಲೆ ಕುಳಿತು ಕೊಂಡು, ವಿಜಯ ನಗರಕ್ಕೆ ಬಂದು—ನಿಮ್ಮ ಹದಿನೇಳು ಆನೆಯ ಜೊತೆಗೆ ನನ್ನದು ಒಂದು ಆನೆಯನ್ನು ಸೇರಿಸಿ ಕೊಂಡು, ನಿಮ್ಮ ತಂದೆ ಹೇಳಿದ ಪ್ರಕಾರ ನಿಮ್ಮ ನಿಮ್ಮ ಭಾಗಕ್ಕೆ ಬಂದ ಆನೆಗಳನ್ನು ತೆಗೆದು ಕೊಂಡು ಹೋಗಿರಿ ಎಂದು ಹೇಳಲು; ಮತ್ತೂ ಹೆಚ್ಚಾಯಿತು ಎಂದು ಸಂತೋಷ ಪಟ್ಟು ಕೊಂಡು, ಹಿರಿಯ ಮಗನು ಒಂಭತ್ತು ಆನೆಯನ್ನೂ, ನಡುಕಲವನು ಆರು ಆನೆಯನ್ನೂ, ಕಿರಿಯನು ಎರಡು ಆನೆಯನ್ನೂ ತೆಗೆದು ಕೊಂಡು ಹೋದರು. ರಾಯರ ಅಪ್ಪಾಜಿಯು ತಾನು ಕೊಟ್ಟು ಇದ್ದ ಆನೆ ಉಳಿದ್ದರಿಂದ, ಹತ್ತಿ ಕೊಂಡು, ತಿರಿಗಿ ಆನೆಗೊಂದಿ ಸಂಸ್ಥಾನಕ್ಕೆ ಬಂದು ಸೇರಿದನು.

6. The Miserly Merchant and Doctor.

೬. ಕೋಮಟಿಗನನ್ನೂ ವೈದ್ಯನನ್ನೂ ಕುರಿತು.

ಒಂದು ಊರಲ್ಲಿ ಒಬ್ಬ ಲೋಭಿಯಾದ ಕೋಮಟಿಗನು ಇದ್ದನು. ಅವನಿಗೆ ಒಂದು ದಿವಸದ ಬೆಳಿಗ್ಗೆ ಬಹಳ ಹೊಟ್ಟೆ ಬೇನೆಯಾದ್ದರಿಂದ, ಒಬ್ಬ ಪಂಡಿತನ ಬಳಿಗೆ ಹೋಗಿ—ಐಯ್ಯಾ, ಪಂಡಿತರೇ, ನಾನು ಹೊಟ್ಟೆ ಬೇನೆಯಿಂದ ಸಾಯುತ್ತೇನೆ. ನನಗೆ ಏನಾದರೂ ಔಷಧ ಕೊಡಿಸ ಬೇಕೆಂದು ಬಹಳವಾಗಿ ಕೇಳಿ ಕೊಂಡನು. ಅದಕ್ಕೆ ಆ ವೈದ್ಯನು—ನಿನ್ನೇ ರಾತ್ರಿಯಲ್ಲಿ ಏನು ತಿಂದೆ? ಎಂದು ಕೇಳಲು—ಸೀದ ರೊಟ್ಟಿಯನ್ನು ತಿಂದೆ ಎಂದು ಹೇಳಿದನು. ಆಗ ವೈ

ದ್ಯಸು ಅಂಜನವನ್ನು ತನ್ನ ಬೆರಳಿಗೆ ಹಚ್ಚಿ ಕೊಂಡು, ಆ ಕೋಮಟಿಗನ ಕಣ್ಣುಗಳಿಗೆ ಹಚ್ಚಿಸುವದಕ್ಕೆ ಬರಲು; ಕೋಮಟಿಗನು—ಪಂಡಿತರೇ, ನಿಮ್ಮ ಬಳಿಯಲ್ಲಿ ನಾನು ಕಣ್ಣು ಬೇನೆ ಎಂದು ಹೇಳಿ ಕೊಳ್ಳಲಿಲ್ಲ; ಹೊಟ್ಟೆ ಬೇನೆ ಎಂದು ಹೇಳಿ ಕೊಂಡದ್ದಕ್ಕೆ ಹೊಟ್ಟೆಗೆ ಔಷಧಿಯನ್ನು ಕೊಡದೆ, ಕಣ್ಣುಗಳಿಗೆ ಔಷಧಿಯನ್ನು ಹಾಕುವದಕ್ಕೆ ಬರುತ್ತೀರಿ. ಇದೇನಾಶ್ಚರ್ಯ? ಎಂದು ಕೇಳಿದನು. ಅದಕ್ಕೆ ಆ ಪಂಡಿತನು—ನಿನಗೆ ಚನ್ನಾಗಿ ಕಣ್ಣು ಕಾಣಿಸುತ್ತಾ ಇದ್ದಲ್ಲಿ, ನಿನ್ನೇ ರಾತ್ರಿ ಶೀದ ರೊಟ್ಟಿಯನ್ನು ತಿನ್ನುತ್ತಾ ಇರಲಿಲ್ಲ. ಆದ್ದರಿಂದ ನಿನ್ನ ಕಣ್ಣುಗಳಿಗೆ ಪರೆ ಮುಚ್ಚಿ ಕೊಂಡಿಧೆ. ಅದು ಪರಿಹರವಾಗುವಂತೆ ಔಷಧಿಯನ್ನು ಮಾಡಿದರೆ, ಇನ್ನು ಮೇಲೆ ಹೊಟ್ಟೆ ಬೇನೆ ಬಾರದಂತೆ, ಪದಾರ್ಥಗಳನ್ನು ಚನ್ನಾಗಿ ನೋಡಿ, ತಿನ್ನುವಿ, ಎಂದು ಹೇಳಿದನು. ಆಗ ಕೋಮಟಿಗನು ನಾಚಿಕೊಂಡು, ಮನೆಗೆ ಹೋದನು.

7. The Greedy Jackal.

೭. ನರಿ ಲೋಭ ಬುದ್ಧಿಯಿಂದ ಸತ್ತ ಕಥೆ.

ಗೊಂಡಾರಣ್ಯದಲ್ಲಿ ಭೈರವನೆಂಬ ಒಬ್ಬ ಬೇಡನು ಇರುವನು. ಅವನು ಒಂದು ದಿವಸ ಬೇಟೆಯನ್ನು ಆಡುತ್ತಾ ಬಂದು, ಹುಲ್ಲೇಕರುವನ್ನು ಹೊಡೆದು, ಅದನ್ನು ತೆಗೆದು ಕೊಂಡು ಬರುವ ಮಾರ್ಗದಲ್ಲಿ, ಒಂದು ದೊಡ್ಡ ಕಾಡ ಹಂದಿಯನ್ನು ಕಂಡು, ಸತ್ತ ಹುಲ್ಲೆಯನ್ನು ಕೆಳಗೆ ಇಟ್ಟು, ಬಿಲ್ಲಿಗೆ ಅಂಬನ್ನೇರಿಸಿ, ಹಂದಿಯನ್ನು ಹೊಡೆದನು. ಅದು ಆ ಪೆಟ್ಟನ್ನು ಸಹಿಸಲಾರದೆ, ಓಡಿ ಬಂದು, ಈ ಬೇಡನ ಮೇಲೆ ಬಿತ್ತು. ಅದು ಬಿದ್ದ ರಭಸಕ್ಕೆ ಅದರ ಕೋರೆದಾಡೆಯಿಂದ ಬೇಡನ ಹೊಟ್ಟೆ ಶೀಳಿ, ಅವನು ಕೆಳಗೆ ಬಿದ್ದನು. ಸಾಯುವಾಗ, ಈ ಹಂದಿ ಬೇಡನ ಹೊಡದಾಟದಲ್ಲಿ ಒಂದು ಹಾವು ಕೂಡಾ ಸತ್ತು ಹೋಯಿತು. ಅಷ್ಟರಲ್ಲಿ ದೀರ್ಘರಾವನೆಂಬ ಒಂದು ಗುಳ್ಳೇ ನರಿಯು ಅಶನಾರ್ಥಿಯಾಗಿ ಬರುತ್ತಾ, ಇವುಗಳನ್ನು ಕಂಡು—ಆಹಾ, ನನಗೆ ಆರು ತಿಂಗಳಾಹಾರವು ಶಿಕ್ಕಿತು! ಈ ಹಾವು ಒಂದು ದಿವಸದ ಆಹಾರವು. ಈ ಹುಲ್ಲೇಕರುವು ಒಂದು ತಿಂಗಳಾಹಾರವು. ಈ ಹಂದಿಯು ಎರಡು ತಿಂಗಳಾಹಾರವು. ಈ ಮನುಷ್ಯನು ಮೂರು ತಿಂಗಳಾಹಾರವು ಆಗುತ್ತದೆ. ಈ ದಿನದ ಮುಟ್ಟಿಗೆ ಈ ಬಿಲ್ಲಿನ ನರದ ಹೆದೆಯನ್ನು ಕತ್ತರಿಸಿ, ತಿಂದು, ಕಾಲಕ್ಷೇಪಾ ಮಾಡುತ್ತೇನೆ. ನಾಳೆ ದಿವಸದಾರಭ್ಯ ಹಾವು, ಹುಲ್ಲೆ, ಹಂದಿ, ಮನುಷ್ಯರನ್ನು ಪಾಂ

ಜ್ಞವಾಗಿ ತಿನ್ನುವೆನೆಂದು ನಿಶ್ಚೈಸಿ, ಬಿಲ್ಲಿನ ಹೆದೆಯನ್ನು ಕಡಿಯಲು; ಅದರ ಕೊಪ್ಪು ಗೋಣಿಗೆ ತಗಲಿ, ನರಿಯು ಸತ್ತು ಹೋಯಿತು. ಆದ್ದರಿಂದ ದೇವರು ಕೊಟ್ಟಂಥಾ ಕಾಲದಲ್ಲಿ ಹೆಡ್ಡರು ಲೋಭ ಬುದ್ಧಿಯಿಂದ ಉಣ್ಣದೆ, ಉಡದೆ, ಕೊಡದೆ, ಸಂಚಿತವಾಗಿ ಹೂಣಿ ಇಟ್ಟು, ಸಾಯುವರು.

8. The Brahman, Son, and Grand-father.

೮. ತಂದೆ ಮಗ ಅಜ್ಜರ ಕಥೆ.

ಒಂದು ಊರಲ್ಲಿ ಒಬ್ಬ ಬ್ರಾಹ್ಮಣನು ಇದ್ದನು. ಆತನಿಗೆ ಬಹಳ ಮುದುಕನಾದ ತಂದೆಯೂ ಒಬ್ಬ ಚಿಕ್ಕ ಮಗನೂ ಇರುವರು. ಈ ಬ್ರಾಹ್ಮಣನು ಪ್ರತಿ ದಿನದಲ್ಲಿಯೂ ಅನ್ನ, ಸಾರು, ಕಾಯಿ, ಪಲ್ಯ, ಮುಂತಾದ್ದು ಮಾಡಿ, ಮಗನಿಗೆ ಬಡಿಸಿ, ತಾನೂ ಬಡಿಸಿ ಕೊಂಡು, ಉಂಡ ಮೇಲೆ, ಆ ಅನ್ನ ಬಸಿದ ಗಂಜಿಯನ್ನು ಒಂದು ಬಕ್ಕರೆಗೆ ಹಾಕಿ, ಆ ಮುದುಕ ತಂದೆಗೆ ಕುಡಿಸುತ್ತಾ ಇದ್ದನು. ಇದನ್ನು ಆ ಚಿಕ್ಕ ಹುಡುಗನು ಕಂಡು—ಅಯ್ಯೋ, ಮುದುಕನಾದ ಅಜ್ಜೈಯಗೆ ಈ ಬುದ್ಧಿ ಇಲ್ಲದ ನಮ್ಮ ತಂದೆಯು ಹೀಗೆ ಮಾಡುತ್ತಾನಲ್ಲ? ಇದನ್ನು ಹ್ಯಾಗೆ ತಪ್ಪಿಸ ಬೇಕೆಂದು ಯೋಚಿಸಿ, ಒಂದು ದಿವಸ ಆ ಗಂಜಿಯನ್ನು ಕುಡಿಸುವ ಬಕ್ಕರೆಯನ್ನು ಒಂದು ಕಡೆಯಲ್ಲಿ ಬಚ್ಚಿಟ್ಟನು. ಬ್ರಾಹ್ಮಣನು ಎಂದಿನಂತೆ ತಾನು, ಮಗ ಸಹ, ಉಂಡ ಮೇಲೆ, ತಂದೆಗೆ ಗಂಜಿಯನ್ನು ಕುಡಿಸುವದಕ್ಕೆ ಬಕ್ಕರೆಯನ್ನು ಇಟ್ಟ ಬಳಿಯಲ್ಲಿ ನೋಡಿದನು. ಅದು ಅಲ್ಲಿ ಇಲ್ಲದ್ದರಿಂದ—ಎಲ್ಲಿ ಹಾಳು ಮಾಡಿದೆ? ಎಂದು, ತಂದೆಯನ್ನು ಬೈದು, ಹೊಡೆಯುತ್ತಾ ಇರುವಲ್ಲಿ, ಈ ಚಿಕ್ಕ ಹುಡುಗನು—ಅಪ್ಪಾ, ಅಪ್ಪಾ, ಅಜ್ಜೈಯನ್ನು ಯಾಕೆ ಬೈಯುತ್ತೀ? ಎಂದು ಕೇಳಲು; ನೋಡು—ಹುಡುಗನೇ, ಗಂಜೀ ಬಕ್ಕರೆಯನ್ನು ಎಲ್ಲಿಯೋ ಹಾಳು ಮಾಡಿದನು. ಮತ್ತೊಂದು ಬಕ್ಕರೆಯನ್ನು ಎಲ್ಲಿಂದ ತರಲಿ? ಎಂದು ಹೇಳಿದನು. ಆಗ ಆ ಹುಡುಗನು—ಆ ಬಕ್ಕರೆಯನ್ನು ಅಜ್ಜೈಯು ಹಾಳು ಮಾಡಲಿಲ್ಲ. ನೀನು ಮುದುಕನಾದಾಗ್ಯೆ ನಾನು ನಿನಗೆ ಗಂಜಿಯನ್ನು ಎರೆಯುವದಕ್ಕೆ ಬೇರೆ ಬಕ್ಕರೆಯನ್ನು ಎಲ್ಲಿ ತರಲಿ ಎಂದು, ನಾನೇ ಬಚ್ಚಿಟ್ಟದ್ದೇನೆಂದು ಹೇಳಲು; ಅದನ್ನು ಕೇಳಿದ ಮಾತ್ರದಿಂದಲೇ ಬ್ರಾಹ್ಮಣನಿಗೆ ಬುದ್ಧಿ ಬಂದು, ತಂದೆಯನ್ನು ಆ ದಿನದಾರಭ್ಯ ಚನ್ನಾಗಿ ಆರೈಕೆ ಮಾಡಿದನು.

9. The Jamedar and Thief.

೯. ಜಮೇದಾರನಿಗೆ ಕಳ್ಳನು ಮೋಸಾ ಮಾಡಿದ್ದು.

ಒಂದು ಪಟ್ಟಣದಲ್ಲಿ ಒಬ್ಬ ಜಮೇದಾರನು ಇಪ್ಪತ್ತು ಕುದುರೆಗಳನ್ನು ಕಟ್ಟಿಕೊಂಡು ಇದ್ದನು. ಆ ಕುದುರೆಗಳನ್ನು ಕಳ ಬೇಕು ಎಂದು ಒಬ್ಬ ಕಳ್ಳನು ಬಹಳ ದಿವಸದಿಂದ ಸಾಧಿಸಿ ಕೊಂಡು ಇದ್ದನು. ಒಂದು ದಿವಸ ಅರ್ಧ ರಾತ್ರಿಯಲ್ಲಿ ಆ ಕಳ್ಳನು ಬಂದು, ಕುದುರೆಯ ಅಗಾಡಿ ಪಿಛಾಡಿ ಹಗ್ಗಗಳನ್ನು ಕೊಯ್ಯುತ್ತಾ ಇರುವಲ್ಲಿ, ಆ ಜಮೇದಾರನ ಕಡೆಯ ಆಳುಗಳು ಕಂಡು, ಹಿಂಗಟ್ಟು ಕಟ್ಟಿ, ತಮ್ಮ ಧಣಿಯ ಬಳಿಗೆ ಕರೆದು ಕೊಂಡು ಹೋಗಿ—ಈ ಕಳ್ಳನು ಕುದುರೆಯನ್ನು ಕಳುತ್ತಾ ಇದ್ದನು. ಇಗೋ, ಹಿಡಿದು ತಂದು ಇದ್ದೇವೆ ಎಂದು ತೋರಿಸಲು; ಆ ಜಮೇದಾರನು ಈ ಕಳ್ಳನನ್ನು ನೋಡಿ—ಎಲೋ, ಕಳ್ಳನೇ, ನಿನಗೆ ಬರುವ ಕಳ್ಳತನದ ವಿದ್ಯವನ್ನು ನನಗೆ ಕಲಿಸಿ ಕೊಟ್ಟರೆ, ನಿನ್ನನ್ನು ಬಿಟ್ಟು ಬಿಡುತ್ತೇನೆ. ಇಲ್ಲದಿದ್ದರೆ, ಬೇಡಿ ಹಾಕಿಸುತ್ತೇನೆ ಎಂದು ಹೇಳಿದನು. ಅದಕ್ಕೆ ಆ ಕಳ್ಳನು—ಸ್ವಾಮಿ, ಜಮೇದಾರರೇ, ಅದು ಎಷ್ಟರ ಕೆಲಸ? ನಾಳೆ ಮುಂಜಾನೆ ಕಲಿಸಿ ಕೊಡುತ್ತೇನೆ ಎಂದು ಹೇಳಲು; ಜಮೇದಾರನು ಬಹಳ ಸಂತೋಷ ಪಟ್ಟು, ಈ ಕಳ್ಳನಿಗೆ ಊಟ ಉಪಚಾರಗಳನ್ನು ಮಾಡಿಸಿ, ರಾತ್ರಿಯಲ್ಲಿ ಪಹರೇದಲ್ಲಿ ಇಟ್ಟು ಕೊಂಡು ಇದ್ದು, ಮುಂಜಾನೆ—ಕರ ತನ್ನಿ ಎಂದು ತನ್ನ ಆಳುಗಳಿಗೆ ಅಪ್ಪಣೆ ಕೊಡಲು; ಅವರು ಅದೇ ಪ್ರಕಾರ ಮಾಡಿದರು. ಆಗ ಆ ಕಳ್ಳನಿಗೆ—ಎಲ್ಲಿ? ಕಳ್ಳತನವನ್ನು ಕಲಿಸು, ಎಂದು ಕೇಳಲು; ಕಳ್ಳನು ಆ ಕುದುರೆಗಳಲ್ಲಿ ಒಂದು ಒಳ್ಳೇ ಕುದುರೆಗೆ ಜೀನು ಕಟ್ಟಿಸಿ, ತಾನು ಕುದುರೆಯ ಮೇಲೆ ಹತ್ತಿ ಕೊಂಡು—ಐಯ್ಯಾ, ಜಮೇದಾರರೇ, ನೋಡಿ! ಹೀಗೆಯೇ ಕಳ್ಳತನವನ್ನು ಮಾಡುವದು ಎಂದು, ನಾಗಾಲು ಓಟಾ ಓಡಿಸಿ ಕೊಂಡು ಹೋದನು. ಜಮೇದಾರನು ಎಷ್ಟು ಜನರನ್ನು ಬೆನ್ನಟ್ಟಿ ಓಡಿಸಿದಾಗ್ಯೂ, ಕಳ್ಳನು ಅವರಿಗೆ ಶಿಕ್ಕದೆ ಹೋದ್ದರಿಂದ—ಮೋಸವಾಯಿತು ಎಂದು, ಬಹಳ ಪಶ್ಚಾತ್ತಾಪವನ್ನು ಹೊಂದಿದನು.

10. The Snake-charmer, Snake and Rat.

೧೦. ಹಾವಾಡಿಗನನ್ನೂ ಹಾವನ್ನೂ ಇಲಿಯನ್ನೂ ಕುರಿತು.

ಒಬ್ಬ ಹಾವಾಡಿಗನು ತನ್ನ ಊರಿಂದ ಹಾವುಗಳ ಬುಟ್ಟಿಯನ್ನು ಅಡ್ಡೇ ಕಟ್ಟಿ, ಹೊತ್ತು ಕೊಂಡು, ಮತ್ತೊಂದು ಊರಿಗೆ ಹೋಗಿ, ಹಾವುಗಳನ್ನು ಆಡಿ

ಸಿ, ದವಸ, ಧಾನ್ಯ, ಕಾಸು, ದುಡ್ಡುಗಳನ್ನು ತಿರು ಕೊಂಡು ಬರ ಬೇಕೆಂದು, ಹೊರಟು ಬರುವ ದಾರಿಯಲ್ಲಿ ಒಂದು ನಾಗರ ಹಾವು, ಇವನು ಕಾಣುವ ಹಾಗೆ, ಹುತ್ತವನ್ನು ಹೊಕ್ಕದ್ದರಿಂದ, ಈ ಹಾವಾಡಿಗನು ಆ ಹುತ್ತವನ್ನು ಅಗಿದು, ಅದನ್ನು ಹಿಡಿದು, ಒಂದು ಪುಟ್ಟಿಯಲ್ಲಿ ಇಟ್ಟು, ಮುಚ್ಚಳವನ್ನು ಹಾಕಿ, ಹೊತ್ತು ಕೊಂಡು ಹೋಗಿ, ಮತ್ತೊಂದು ಊರಿನ ಒಂದು ಗುಡಿಯಲ್ಲಿ ಇಳಿದು ಕೊಂಡನು. ಮೂರನೇ ದಿವಸ ಆ ಹಾವಾಡಿಗನಿಗೆ ಛಳಿಜ್ವರ ಬಂದು, ಎರಡು ಮೂರು ದಿವಸ ಅಲ್ಲಿಯೇ ಬಿದ್ದು ಕೊಂಡು, ಇದ್ದನು. ಆ ಹಿಡಿದ ಹಾವು ಬುಟ್ಟಿಯಲ್ಲಿ ಶಿಕ್ಕಿ ಕೊಂಡು—ಅಯ್ಯೋ, ದೇವರೇ, ಇಂಥಾ ಸಂಕಟವನ್ನು ಕೊಟ್ಟೆಯಾ? ಮೂರು ದಿವಸದಿಂದ ಆಹಾರವಿಲ್ಲದೆ ಸಾಯುವ ಸಂಗತಿ ಬಂತಲ್ಲ? ಇನ್ನೇನು ಗತಿ? ಎಂದು ಯೋಚಿಸುತ್ತಿರುವಲ್ಲಿ, ಆ ಗುಡಿಯ ಬಿಲದಲ್ಲಿ ಇದ್ದ ಒಂದು ಇಲಿಯು ರಾತ್ರಿಯಲ್ಲಿ ಹೊರಗೆ ಬಂದು, ಈ ಬುಟ್ಟಿಯನ್ನು ನೋಡಿ,—ಓಹೋ, ಈ ದಿನ ನನಗೆ ಒಳ್ಳೇ ಆಹಾರ ದೊರಕಿತು. ಈ ಬುಟ್ಟಿಯಲ್ಲಿ ಯಾವದೋ ಒಂದು ವಿಧವಾದ ಧಾನ್ಯ ತುಂಬಿರುವದು. ಇದಕ್ಕೆ ಕನ್ನ ಕೊರೆದು, ಒಳ ಹೊಕ್ಕು, ಧಾನ್ಯವನ್ನು ತಿಂದು, ಜೀವಿಸುವೆನೆಂದು, ಆಲೋಚಿಸಿ, ಆ ಪ್ರಕಾರ ಮಾಡಿ, ಒಳ ಹೊಕ್ಕಿತು. ಹೊಕ್ಕ ಕ್ಷಣದಲ್ಲಿಯೇ, ಹಸಿದು ಸಾಯುತ್ತಾ ಇದ್ದ ಹಾವು—ದೇವರು ನನಗೆ ಆಹಾರ ಕೊಟ್ಟನು ಎಂದು, ಸಂತೋಷದಿಂದ ಆ ಇಲಿಯನ್ನು ನುಂಗಿ, ಹೊಟ್ಟೆಯನ್ನು ತುಂಬಿ ಕೊಂಡು, ಆ ಇಲಿ ಕೊರೆದು ಇದ್ದ ಕನ್ನದಿಂದಲೇ ಹೊರಗೆ ಹೊರಟು, ತನ್ನ ಹುತ್ತವನ್ನು ಶೇರಿ ಕೊಂಡಿತು.

11. The Doves, Fowler, Falcon and Snake.

೧೧. ಪಾರಿವಾಣದ ಹಕ್ಕಿ, ಗಿಡಗ, ಹಾವು, ಬೇಡನು, ಇವರ ಕಥೆ.

ಒಂದಾನೊಂದು ಅರಣ್ಯದಲ್ಲಿ ಒಂದು ಅರಳೀ ಮರದ ಮೇಲೆ ಒಂದು ಗಂಡು ಪಾರಿವಾಣದ ಹಕ್ಕಿಯೂ ಒಂದು ಹೆಣ್ಣು ಪಾರಿವಾಣದ ಹಕ್ಕಿಯೂ ಸ್ನೇಹವಾಗಿ ಬಹಳ ದಿವಸದಿಂದ ಇದ್ದವು. ಒಂದು ದಿವಸ ಹೆಣ್ಣು ಹಕ್ಕಿಯು ತನ್ನ ನಾಯಕನನ್ನು ಕುರಿತು—ಎಲೈ, ನಾಯಕನೇ, ನಮ್ಮಿಬ್ಬರಿಗೂ ಸಾಯುವ ಕಾಲ ಬಂದು ಇದೆ. ಅದೇನೆಂಬೆಯಾ? ಇಗೋ, ನೋಡು! ಈ ಮರದ ಕೆಳಗೆ ಒಬ್ಬ ಬೇಡನು ಬಿಲ್ಲಿಗೆ ಹೆದೆಯನ್ನು ಏರಿಸಿ, ಅದರಲ್ಲಿ ಅಂಬನ್ನು ತೊಡಿಸಿ, ನಮ್ಮಿಬ್ಬರನ್ನು ಹೊಡೆಯುವದಕ್ಕೆ ಗುರಿ ನೋಡುತ್ತಾ, ವೀರಮುಂಡಿ ಹಾಕಿ,

ಕೂತು ಕೊಂಡಿದ್ದಾನೆ. ಮೇಲಕ್ಕೆ ಹಾರಿ ಹೋಗೋಣ ಎಂದರೆ, ಹಾರಿದ ಕ್ಷಣದಲ್ಲಿ ನಮ್ಮಿಬ್ಬರನ್ನು ಕಚ್ಚಿ ತಿಂದು ಬಿಡ ಬೇಕೆಂದು, ಒಂದು ಗಿಡಗನು ಮರದ ಮೇಲೆ ಮಂಡಲಾಕಾರವಾಗಿ ಸುತ್ತುತ್ತಾ ಇದೆ. ಇಂಥಾ ಗಂಡದಲ್ಲಿ ನಾವು ಹ್ಯಾಗೆ ಬದುಕೇವೆಂದು, ದುಃಖ ಪಡುತ್ತಾ ಹೇಳಲು; ಆ ಗಂಡು ಹಕ್ಕಿಯು—ಎಲೈ, ಹೆಂಡತಿಯೇ, ಯಾಕೆ ಯೋಚನೆ ಮಾಡುತ್ತೀಯೇ? ದೇವರ ದಯದಿಂದ ಬೆಟ್ಟದ ಹಾಗೆ ಬಂದ ಆಪತ್ತುಗಳು ಹುಲ್ಲಿನ ಹಾಗೆ ಹಾರಿ ಹೋಗುವವು. ಇದಕ್ಕೆ ನಾವು ವ್ಯಸನ ಪಟ್ಟು, ಪ್ರಯೋಜನವೇನು? ದೇವರು ಮಾಡಿಸಿದ್ದಾಗಲಿ; ಧೈರ್ಯದಿಂದ ಇರು, ಎಂದು ಹೇಳುತ್ತಾ ಇರುವಲ್ಲಿ, ಮರದ ಕೆಳಗೆ ಇರುವ ಬೇಡನ ಬಲಗಾಲಿನ ಹಿಮ್ಮಡಿಯನ್ನು ಒಂದು ನಾಗರ ಹಾವು ಬಂದು ಕಚ್ಚಿತು. ಅದರ ವಿಷವೇರಿ, ಈ ಬೇಡನು ತಬ್ಬಿಬ್ಬಾಗಿ ಬಾಣವನ್ನು ಇಟ್ಟನು. ಆ ಬಾಣವು ಗುರಿ ತಪ್ಪಿ, ಇವುಗಳನ್ನು ಕಚ್ಚ ಬೇಕೆಂದು, ಮೇಲೆ ಸುತ್ತುತ್ತಾ ಇದ್ದ ಗಿಡಗನಿಗೆ ತಗಲಿ, ಅದು ಸತ್ತು, ಕೆಳಗೆ ಬಿತ್ತು. ಈ ಬೇಡನು ಹಾವಿನ ವಿಷ ತಲೆಗೇರಿ, ಸತ್ತು ಬಿದ್ದನು. ದೇವರ ದಯದಿಂದ ಎರಡು ಗಂಡಗಳು ತಪ್ಪಿ, ಎರಡು ಪಾರವಾಣದ ಹಕ್ಕಿಗಳು ಬದುಕಿ ಕೊಂಡವು.

12. The Uncorrected Son.

೧೨. ತಂದೆ ಶಿಕ್ಷಿಸದ ಮಗನ ಕಥೆ.

ಲೀಲಾವತಿ ಎಂಬ ಪಟ್ಟಣದಲ್ಲಿ ಪೆದ್ದಭಟ್ಟನೆಂಬ ಜೋಯಿಸನು ಇರುವನು. ಅವನಿಗೆ ನಾಲ್ಕು ವರುಷದ ಒಬ್ಬ ಮಗನಿರುವನು. ಮತ್ತೊಂದು ಗ್ರಾಮದಲ್ಲಿ ತನ್ನ ನೆಂಟರಲ್ಲಿ ಮದುವೇ ಪ್ರಸ್ತವಾದ್ದರಿಂದ, ಹೆಂಡತಿಯನ್ನೂ ಮಗನನ್ನೂ ಕರೆದು ಕೊಂಡು ಹೋಗಿ, ಪ್ರಸ್ತಾ ಬೆಳಸಿ ಕೊಂಡು, ತಿರಿಗಿ ಪಟ್ಟಣಕ್ಕೆ ಬರುವಾಗ, ಮಗನನ್ನು ಹೆಗಲಿನ ಮೇಲೆ ಕೂಡ್ರಿಸಿ ಕೊಂಡು, ಬರುತ್ತಾ ಇದ್ದನು. ಆಗ ದಾರಿಯಲ್ಲಿ ಆ ಪಟ್ಟಣದ ಸಂತೆಗೆ ಮಾರುವದಕ್ಕೆ ಕೆಲವರು ಗೂಡೆಯಲ್ಲಿ ಬಾಳೆ ಹಣ್ಣು ಹೊತ್ತು ಕೊಂಡು ಹೋಗುತ್ತಾ ಇದ್ದರು. ಈ ಜೋಯಿಸನ ಹೆಗಲಿನ ಮೇಲೆ ಕೂತಿದ್ದ ಹುಡುಗನ ಕೈಗೆ ಮುಂದೆ ಹೋಗುವವನ ಬಾಳೆ ಹಣ್ಣಿನ ಗೂಡೆ ಎಟಕಿದ್ದರಿಂದ, ಒಂದು ಚಿಪ್ಪು ಬಾಳೆ ಹಣ್ಣನ್ನು ತೆಗೆದು ಕೊಂಡು, ತಾನು ಹೊದ್ದು ಇದ್ದ ಒಲ್ಲಿಯ ಒಳಗೆ ಬಚ್ಚಿಟ್ಟು ಕೊಂಡಿದ್ದು, ಜೋಯಿಸನು ಮನೆಗೆ ಹೋಗಿ, ಮಗನನ್ನು ಇಳಿಸಿದಾಗ—ಇಗೋ, ಅಪ್ಪಾ, ಬಾಳೆಹಣ್ಣು! ಸಂತೆಗೆ ಹೋಗುವ ಗೂಡೆಯಿಂದ ತೆಗೆದು ಕೊಂಡು, ಬ

ಚ್ಚಿಟ್ಟು ಕೊಂಡಿದ್ದೆನು ಎಂದು ತೋರಿಸಲು;—ಶಾಬಾಸು, ಹುಡುಗಾ! ಎಂದು ತಬ್ಬಿ ಕೊಂಡು, ಮುದ್ದು ಕೊಟ್ಟನು. ಆ ಹುಡುಗನು,—ತಂದೆ ಸಂತೋಷ ಪಟ್ಟನು; ಇದು ಒಳ್ಳೇ ಕೆಲಸ ಎಂದು ಎಣಿಸಿ, ಅಂದಿನಿಂದ ನೆರೆ ಹೊರೆಯುವರ ಮನೆಗಳಲ್ಲಿ ಶಿಕ್ಕಿದ ಪದಾರ್ಥಗಳನ್ನು ಕದ್ದು ಕೊಂಡು ಬರುತ್ತಾ ಇದ್ದು, ಪ್ರಾಯಸ್ಥನಾದ ಮೇಲೆ, ಧೊರೆಯ ಅರಮನೆಗೆ ಹೊಕ್ಕು, ವಜ್ರ ಪಡೀ ನಗಗಳನ್ನು ಕದ್ದು ಕೊಂಡು ಬರುವಲ್ಲಿ ಕಾವಲಿನವರು ಅವನನ್ನು, ಒಡವೆ ಸಹಿತ, ಹಿಡಿದು, ಅರಸಿಗೆ ಒಪ್ಪಿಸುವಲ್ಲಿ, ಸಂಕೋಲೆ ಹಾಕಿ, ಪಹರೇದಲ್ಲಿ ಇಡಿ ಎಂದು ಅಪ್ಪಣೆ ಕೊಟ್ಟನು. ಆಗ ಈ ಹುಡುಗನು,—ನನಗೆ ಸಂಕೋಲೆ ಹಾಕ ಕೂಡದು. ನಮ್ಮಪ್ಪನಿಗೆ ಹಾಕ ಬೇಕು ಎನ್ನಲು; ಅರಸು—ನೀನು ಕದ್ದರೆ, ನಿಮ್ಮಪ್ಪನಿಗೆ ಯಾಕೆ ಹಾಕ ಬೇಕೆಂದು ಕೇಳಿದ್ದಕ್ಕೆ, ತಾನು ಬಾಳೆ ಹಣ್ಣು ಕದ್ದು, ತನ್ನ ತಂದೆಗೆ ತೋರಿಸುವಾಗ, ಅವನು ಹೊಗಳಿ, ತಬ್ಬಿ ಕೊಂಡು, ಮುದ್ದಾಡಿದ್ದರಿಂದ, ಇದು ಒಳ್ಳೇ ಕೆಲಸವೆಂದು ನಾನು ಹೀಗೆ ಕಳುತ್ತಾ ಬಂದೆನು. ಆ ದಿವಸವೇ —ಇಂಥಾ ಕೆಲಸ ಯಾಕೆ ಮಾಡಿದೆ? ಎಂದು ಬೈದು, ಎರಡು ಪೆಟ್ಟು ಹೊಡೆದು ಇದ್ದಲ್ಲಿ, ನಾನು ಯಾವಾಗಲೂ ಕಳುತ್ತಿರಲಿಲ್ಲ. ಆದ್ದರಿಂದ ಈ ತಪ್ಪು ನಮ್ಮ ತಂದೆಯದು. ತಪ್ಪು ಮಾಡಿದವನಿಗೆ ಶಿಕ್ಷೆ ಮಾಡಿಸ ಬೇಕೆಂದು ಹೇಳಿದೆನೆನಲು; ಅರಸು ಆ ಹುಡುಗನ ಮಾತಿಗೆ ಮೆಚ್ಚಿ, ಅವನ ತಂದೆಯನ್ನು ಕರಿಸಿ, ಅವನಿಗೆ ಹುಡುಗ ಹೇಳಿದ ಮಾತನ್ನು ಹೇಳಿ, ಬಹುಮಾನಾ ಮಾಡಿ, ಅವನ ವಶಕ್ಕೆ ಕೊಟ್ಟು ಕಳುಹಿಸಿದನು. ಆದ್ದರಿಂದ ತಂದೆ ತಾಯಿಗಳು ಮಕ್ಕಳನ್ನು ಚಿಕ್ಕಂದಿನಿಂದಲೇ ಕೆಟ್ಟ ಕೆಲಸಾ ಮಾಡಿದರೆ, ಶೀಕ್ಷಿಸುತ್ತಾ ಬರಬೇಕು.

13. The Imaginary Demon driven away.

೧೩. ಅಡುಗೂಲಜ್ಜಿ ಘುಂಟಾಕರ್ಣನನ್ನು ಓಡಿಸಿದ ಕಥೆ.

ವಿದ್ಯಾನಗರವೆಂಬ ಪಟ್ಟಣದಲ್ಲಿ ವೇಗಸಿಂಧು ಎಂಬ ಒಬ್ಬ ಅರಸು ಇರುವನು. ಆ ದೇಶದ ಪ್ರಜೆಗಳು—ಈ ದೇಶದಲ್ಲಿ ಘಂಟಾಕರ್ಣನೆಂಬ ಒಬ್ಬ ಬ್ರಹ್ಮರಾಕ್ಷಸನು ಇದ್ದು ಕೊಂಡು, ಜನರ ಬಾಧಿಸುತ್ತಾನೆಂಬ ವರ್ತಮಾನವನ್ನು ಸುತಾನುಸುದ್ದಿಯಾಗಿ ಕೇಳಿ, ಹೆದರಿ ಕೊಂಡು ಇದ್ದರು. ಈ ಸುದ್ದಿಯು ಅರಸಿಗೂ ತಿಳಿದಿತ್ತು. ಹೀಗಿರುವಲ್ಲಿ, ಆ ಪಟ್ಟಣದ ಸಮೀಪದ ಕಾಡಿನಲ್ಲಿ ಒಂದು ಹುಲಿಯು ಒಬ್ಬ ಕಳ್ಳನನ್ನು ಕೊಂದು ಹಾಕಿತು. ಆ ಕಳ್ಳನ ಬಳಿಯಲ್ಲಿ ಒಂದು ಘಂಟೆ ಇತ್ತು. ಅದನ್ನು ಒಂದು ಕೋತಿ ಎತ್ತಿ ಕೊಂಡು, ಮನಸ್ಸು

ಬಂದ ಹಾಗೆ ಬಾರಿಸುತ್ತಾ ಇತ್ತು. ಆ ಘಂಟೆಯ ಶಬ್ದವನ್ನು ಕೇಳಿ, ಹುಲಿ ಕೊಂದ ಮನುಷ್ಯನನ್ನು ನೋಡಿ,—ಘಂಟಾಕರ್ಣನು ಪಟ್ಟಣದ ಸಮೀಪಕ್ಕೆ ಬಂದು, ಘಂಟೆಯನ್ನು ಬಾರಿಸುತ್ತಾ ಮನುಷ್ಯರನ್ನು ತಿನ್ನುತ್ತಾನೆಂದು ದಿಗುಲು ಬಿದ್ದು, ಆ ಪಟ್ಟಣದವರೇ ಊರನ್ನು ಬಿಟ್ಟು ಹೋಗ ಬೇಕೆಂದು ಎಣಿಸಿ ಕೊಂಡು ಇರುವಲ್ಲಿ, ಈ ಸುದ್ದಿಯನ್ನು ಅರಸು ಕೇಳಿ, ತುಂಬಾ ಚಿಂತೆ ಮಾಡುತ್ತಾ ಇದ್ದನು. ಈ ಮರ್ಮವನ್ನು ಸೌದೆಯ ನಿಮಿತ್ಯ ಕಾಡಿಗೆ ಹೋಗಿದ್ದ ಆ ಪಟ್ಟಣದ ಅಡುಗೂಲಜ್ಜಿಯು ಕಂಡಿದ್ದವಳಾದ ಕಾರಣ, ಅರಸಿನ ಬಳಿಗೆ ಬಂದು—ಸ್ವಾಮೀ, ತಾವು ಬಹಳ ಹಣ ಕೊಟ್ಟರೆ, ನಾನು ಕಾಡಿಗೆ ಹೋಗಿ, ಆ ಘಂಟಾಕರ್ಣನನ್ನು ನಮ್ಮ ದೇಶದಿಂದ ದೂರ ದಾಟಿಸಿ ಬಿಟ್ಟು ಬರುತ್ತೇನೆ ಎನ್ನಲು; ಅರಸು ಸಂತೋಷದಿಂದ ಬಹಳ ಹಣವನ್ನು ಕೊಟ್ಟನು. ಆಕೆಯು ಹಣವನ್ನೆಲ್ಲಾ ಮನೆಯಲ್ಲಿ ಹೂಣಿ ಇಟ್ಟು, ಸ್ವಲ್ಪ ಅನ್ನವೂ ಕಜ್ಜಾಯಗಳೂ ಮಾಡಿ ಕೊಂಡು, ಕಾಡಿಗೆ ಹೋಗಿ, ಅಲ್ಲಿ ಇಡಲು; ಆ ಕೋತಿ ಬಂದು, ಘಂಟೆಯನ್ನು ಬಿಟ್ಟು, ಅನ್ನವನ್ನೂ ಕಜ್ಜಾಯಗಳನ್ನೂ ತಿನ್ನುತ್ತಾ ಇರುವಲ್ಲಿ, ಈ ಅಡುಗೂಲಜ್ಜಿಯು ಘಂಟೆಯನ್ನು ತಂದು, ತನ್ನ ಮನೆಯಲ್ಲಿಟ್ಟು, ಅರಸಿನ ಬಳಿಗೆ ಬಂದು—ಘಂಟಾಕರ್ಣನನ್ನು ಓಡಿಸಿ ಬಂದೆನೆಂದು ಹೇಳಿದಳು. ಆ ಮೇಲೆ ಊರಿನ ಜನವೆಲ್ಲಾ ಘಂಟೆಯ ಶಬ್ದವನ್ನು ಕೇಳದೆ, ಸಂತೋಷ ಪಟ್ಟು, ಈ ಅಡುಗೂಲಜ್ಜಿಯನ್ನು ಬಹಳವಾಗಿ ಪೂಜಿಸುತ್ತಾ ಬಂದರು. ಆದ್ದರಿಂದ ಬುದ್ಧಿವಂತರಾದವರು ಸಮಯವರಿತು ಉಪಾಯಗಳನ್ನು ಮಾಡಿ, ಜೀವಿಸುವರು.

14. The Brahman and oppressing Kotwal.

೧೪. ಬ್ರಾಹ್ಮಣ ಕೊತ್ತವಾಲ ಇವರ ಕಥೆ.

ಒಬ್ಬ ಬ್ರಾಹ್ಮಣನು, ಯಾರೋ ಒಬ್ಬನು ತನಗೆ ಕೊಟ್ಟ ಅರಬ್ಬಿ ದೇಶದ ಟಾಕಣವನ್ನು ಹತ್ತಿ ಕೊಂಡು, ಒಂದು ಪಟ್ಟಣದ ಕೋಮಟಿಗರ ಬೀದಿಯಲ್ಲಿ ಬರುತ್ತಾ ಇರಲು; ಆ ಊರಿನ ಕೊತ್ತವಾಲನು,—ಈ ಟಾಕಣ ಬಹು ಚೆಲೋದು; ಹೇಡಿಯ ಕೈಗೆ ಚಂದ್ರಾಯುಧ ಶಿಕ್ಕಿದ ಹಾಗೆ ಈ ಬಡ ಹಾರುವನಿಗೆ ಇಂಥಾ ಉತ್ತಮ ಕುದುರೆ ಎಲ್ಲಿ ದೊರಕಿತೋ? ಇದನ್ನು ಅಪಹರಿಸ ಬೇಕೆಂದು, ಮನಸ್ಸಿನಲ್ಲಿ ಎಣಿಸಿ, ಓಡುತ್ತಾ ಬಂದು, ಕುದುರೆಯ ಮೇಲಿನಿಂದ ಬ್ರಾಹ್ಮಣನನ್ನು ಎಳೆದು ಹಾಕಿ, ತಾನು ಕುದುರೆಯ ಮೇಲೆ ಹತ್ತಿ ಕೊಂಡು, ತನ್ನ ಮನೆಗೆ ಹೋದನು. ಈ ಬ್ರಾಹ್ಮಣನು ಅಳುತ್ತಾ ಕರೆ

ಯುತ್ತಾ, ಆ ಊರಿನ ಧೊರೆಯ ಸಭೆಗೆ ಹೋಗಿ, ದೂರು ಹೇಳಿ ಕೊಂಡನು. ಆಗ ಧೊರೆಯು ಬಿಲ್ಲೆಕಾರರನ್ನು ಕಳುಹಿಸಿ, ಕೊತ್ತವಾಲನನ್ನು ಕರಿಸಿ, ವಿಚಾರಿಸುವಲ್ಲಿ—ಈ ಬಡ ಹಾರುವ ಎಲ್ಲಿ? ಇಂಥಾ ಜಾತಿಯ ಟಾಕಣವೆಲ್ಲಿ? ಇವನದು ಎಂದಿಗೆ ಆದೀತು? ಇದು ನನ್ನದು ಎಂದು ಕೊತ್ತವಾಲನು ಹೇಳಿದ್ದಕ್ಕೆ, ಆ ಬ್ರಾಹ್ಮಣನು—ಈ ಊರಿನ ಕೋಮಟಿಗರೆಲ್ಲಾ ಈ ಕುದುರೆ ನನ್ನದು ಎಂಬುವದನ್ನು ಚನ್ನಾಗಿ ಬಲ್ಲರು. ಧಣಿಯರು ಅವರನ್ನು ಕರಿಸಿ, ವಿಚಾರಿಸ ಬಹುದು, ಎಂದು ಅರಿಕೆ ಮಾಡಿದನು. ಆಗ ಧೊರೆಯು ಆಳುಗಳನ್ನು ಕಳುಹಿಸಿ, ಕೋಮಟಿಗರನ್ನು ಕರಿಸಲು; ಕೋಮಟಿಗರೆಲ್ಲಾ ಗುಂಪು ಕೂಡಿ—ಇದೇನೈಯ್ಯಾ ಪೀಕುಲಾಟ ಬಂತು? ಎಂದು ಯೋಚಿಸುತ್ತಾ, ಚಾವಡಿಗೆ ಬಂದು, ಧೊರೆಗೆ ಕೈ ಮುಗಿದು, ಕೂತು ಕೊಂಡರು. ಆಗ—ಈ ಕುದುರೆ ಯಾರದು? ನೀವು ಬಲ್ಲಿರಾ? ಎಂದು ಕೇಳಲು; ಆ ಕೋಮಟಿಗರಲ್ಲಿ ಒಬ್ಬ ಮುದುಕನು ಎದ್ದು ಆ ಕುದುರೆಯ ಬಳಿಗೆ ಹೋಗಿ, ಅದರ ಮುಂದುಗಡೆಯನ್ನೆಲ್ಲಾ ಚನ್ನಾಗಿ ನೋಡಿ, ಆ ಮೇಲೆ ಅದರ ಹಿಂದುಗಡೆಯನ್ನೂ ಚನ್ನಾಗಿ ನೋಡಿ, ಅರಸಿನ ಬಳಿಗೆ ಬಂದು, ಕೈ ಮುಗಿದು—ಸ್ವಾಮೀ, ಈ ಟಾಕಣವು ಮುಂದೆ ಬ್ರಾಹ್ಮಣನದಾಗಿಯೂ, ಹಿಂದೆ ಕೊತ್ತವಾಲನದಾಗಿಯೂ, ಇದೆ. ಸರ್ವಜ್ಞರಾದ ಧೊರೆಗಳ ಚಿತ್ತಕ್ಕೆ ತೋರಿದ ರೀತಿ ಮಾಡಿಸ ಬಹುದು ಎಂದು, ಹೇಳಲು;—ಇವರು ಕೊತ್ತವಾಲನಿಗೆ ಅಂಜಿ ಮಾತಾಡುತ್ತಾರೆ ಎಂದು, ಧೊರೆ ನಕ್ಕು, ಇದು ಬ್ರಾಹ್ಮಣನದೇ ಎಂದು ನಿಶ್ಚೈಸಿ, ಕುದುರೆಯನ್ನು ಕೊಡಿಸಿ, ಕಳುಹಿಸಿ, ಕೊತ್ತವಾಲನಿಗೆ ಶಿಕ್ಷೆ ಮಾಡಿಸಿದನು.

15. The King, Mantri, and Milk-cheat.

೧೫. ಧೊರೆ, ಮಂತ್ರಿ, ಹಾಲು ತುಂಬದೆ ನೀರು ತುಂಬಿದವರ ಕಥೆ.

ಮಧುರಾಪುರಿ ಎಂಬ ಪಟ್ಟಣದಲ್ಲಿ ವಿವೇಕಚಿಂತಾಮಣಿ ಎಂಬ ಅರಸು ಬುದ್ಧಿಸಾಗರನೆಂಬ ಪ್ರಧಾನಿಯೊಡನೆ ರಾಜ್ಯಭಾರವನ್ನು ಮಾಡಿ ಕೊಂಡು ಇದ್ದನು. ಹೀಗಿರುವಲ್ಲಿ, ಅರಸು ಒಂದು ಕಾರ್ಯವನ್ನು ಆಲೋಚಿಸಿ, ಹೀಗೆ ಮಾಡ ಬೇಕೆಂದು ತನ್ನ ಮನದಲ್ಲಿ ನಿಶ್ಚೈಸಿ, ಈ ಕಾರ್ಯಕ್ಕೆ ನಮ್ಮ ಮಂತ್ರಿಯು ಏನು ಹೇಳುತ್ತಾನೋ? ಕೇಳುವ ಎಂದು, ಅಮಾತ್ಯನನ್ನು ಕರಿಸಿ, ಅಂತರಂಗದಲ್ಲಿ ಕುಳಿತು, ಆ ಕಾರ್ಯವನ್ನು ಹೇಳಿ—ಇದಕ್ಕೆ ಹ್ಯಾಗೆ ಮಾಡ ಬೇಕೆಂದು ಕೇಳಲು; ಪ್ರಧಾನಿಯು ಅರಸು ತನ್ನ ಮನಸ್ಸಿನಲ್ಲಿ ನಿಶ್ಚೈಸಿದ್ದ ಪ್ರಕಾ

ರವೇ, ಹೇಳಿದನು. ಅದಕ್ಕೆ ಅರಸು—ಏನೈಯ್ಯಾ, ಮಂತ್ರಿಯೇ, ನನ್ನ ಮನಸ್ಸಿನಲ್ಲಿ ನಿಶ್ಚೈಸಿದ್ದ ಪ್ರಕಾರವೇ ನೀನು ಹೇಳಿದೆ ಎನ್ನಲು; ಮಂತ್ರಿಯು—ಸ್ವಾಮೀ, ಬುದ್ಧಿವಂತರ ಆಲೋಚನೆಗಳೆಲ್ಲಾ ಒಂದೇ ಪ್ರಕಾರವಾಗಿರುವವು ಅಂದನು. ಅದಕ್ಕೆ ಅರಸು—ಅರ್ಧ ರಾತ್ರಿಯಲ್ಲಿ ನೀನು ಹೊರಗೆ ಹೋಗದೆ, ನನ್ನ ಬಳಿಯಲ್ಲಿಯೇ ಇದ್ದು ಕೊಂಡು, ಪರಿಕ್ಷೆ ಮಾಡಿ, ತೋರಿಸು ಎನ್ನಲು; ಆ ಕ್ಷಣವೇ ಮಂತ್ರಿಯು ಇಪ್ಪತ್ತು ಜನ ಬುದ್ಧಿವಂತರನ್ನು ಧೊರೆಯ ಬಳಿಗೆ ಕರಿಸಿ, ಧೊರೆಯ ಮುಂದುಗಡೆಯಲ್ಲಿಯೇ—ನೀವು ಒಬ್ಬರೊಬ್ಬರು ಈ ಕತ್ತಲೇ ಮನೆಯಲ್ಲಿರುವ ಗಾರೆ ಗುಂಡಿಗೆ ಒಂದೊಂದು ಹರಿವೀ ಹಾಲನ್ನು ಸುರಿದು, ತುಂಬಿಸಿ, ನಮ್ಮ ಬಳಿಗೆ ಬಂದು, ಹೇಳ ಬೇಕೆಂದು, ಅಪ್ಪಣೆ ಕೊಡಲು; ಎರಡು ಘಳಿಗೆಯಲ್ಲಿ ಅವರೆಲ್ಲಾ ಅಪ್ಪಣೆಯ ಪ್ರಕಾರ ಮಾಡಿ, ಧೊರೆಯ ಬಳಿಗೆ ಬಂದು—ಅಪ್ಪಣೆ ಆದಂತೆ ಹಾಲು ತುಂಬಿ ಇದ್ದೇವೆ ಎಂದು ಹೇಳಲು; ಇವರನ್ನೆಲ್ಲಾ ಬೇರೆ ಬೇರೆ ಪಹರೆಯಲ್ಲಿ ಇಡಿಸಿ, ಧೊರೆಯೂ ಪ್ರಧಾನಿಯೂ ದೀವಿಟಗೆ ಹಚ್ಚಿಸಿ ಕೊಂಡು, ಆ ಗಾರೆ ಗುಂಡಿಯ ಬಳಿಗೆ ಬಂದು ನೋಡಲು; ಆ ಗಾರೆ ಗುಂಡಿಯ ತುಂಬಾ ಬರೀ ನೀರೇ ತುಂಬಿರುವದರಿಂದ, ಆ ಇಪ್ಪತ್ತು ಜನದೊಳಗೆ ಒಬ್ಬನನ್ನು ಕರಿಸಿ,—ನೀನು ಅಪ್ಪಣೆಯ ಪ್ರಕಾರ ಒಂದು ಹರಿವಿ ಹಾಲು ತಂದು ಸುರಿದೆಯೋ? ಸುಳ್ಳು ಹೇಳಿದರೆ, ಶಿಕ್ಷೆಯಾದೀತು; ನಿಜ ಹೇಳಿದರೆ, ಮನ್ನಿಸುವೆವು, ಎಂದು ಕೇಳಲು;—ಸ್ವಾಮೀ, ನಾನು ಹಾಲು ತಂದು ಸುರಿಯಲಿಲ್ಲ. ನೀರು ತಂದು ಸುರಿದೆನು, ಅಂದನು. ಅದಕ್ಕೆ ಮಂತ್ರಿಯು—ಧೊರೆಗಳ ಅಪ್ಪಣೆಯ ಮೇರೆ ಹಾಲು ತಂದು ಸುರಿಯದೆ, ನೀರು ತಂದು ಸುರಿಯುವದಕ್ಕೆ ಕಾರಣವೇನೆಂದು ಕೇಳಲು; ಅವನು—ಈ ಅರ್ಧ ರಾತ್ರಿಯ ಹೊತ್ತಿನಲ್ಲಿ ಹಾಲು ತರುವದಕ್ಕೆ ಕೂಡದೆ, ಹತ್ತೊಂಭತ್ತು ಹರವಿ ಹಾಲಿನೊಳಗೆ ಒಂದು ಹರವೀ ನೀರು ಬೆರಸಿದರೆ, ಕೂಡಿ ಹೋಗುತ್ತದೆ ಎಂದು ಎಣಿಸಿ, ನೀರು ತಂದು ಸುರಿದೆನು, ಅಂದನು. ತರುವಾಯ ಇವನನ್ನು ಬೇರೆ ಇರಿಸಿ, ಒಬ್ಬೊಬ್ಬರಾಗಿ ಕರಿಸಿ, ವಿಚಾರಿಸುವಲ್ಲಿ, ಎಲ್ಲರು ಮೊದಲಿನವನು ಹೇಳಿದ ಹಾಗೆಯೇ ಹೇಳಿದರು. ಆಗ ಧೊರೆಯು ಸಂತೋಷ ಪಟ್ಟು, ಮಂತ್ರಿಗೂ ಆ ಇಪ್ಪತ್ತು ಜನಕ್ಕೂ ಬಹುಮಾನಾ ಮಾಡಿ, ಕಳುಹಿಸಿದನು.

16. The Merchant, Brahman and Lost Purse.

೧೬. ಕೋಮಟಿ ಬ್ರಾಹ್ಮಣರ ಗಂಟು ವ್ಯಾಜ್ಯದ ಕಥೆ.

ವಿಜಯನಗರದಲ್ಲಿ ಘಾತಕಶೆಟ್ಟಿ ಎಂಬ ಒಬ್ಬ ಕೋಮಟಿಗನು ಇದ್ದ

ನು. ಆತನು ವ್ಯಾಪಾರಕ್ಕೆ ನೂರು ವರಹವನ್ನು ಗಂಟು ಕಟ್ಟಿ ಕೊಂಡು,
ದಾರಿಯಲ್ಲಿ ಶಿಕ್ಕಿದ ಸತ್ಯಶೀಲನೆಂಬ ಬ್ರಾಹ್ಮಣನೊಡನೆ ಜಗಳವಾಡಿ ಕೊಂಡು,
ಸಮೀಪದಲ್ಲಿ ಇರುವ ಪಟ್ಟಣಕ್ಕೆ ಹೋಗಿ, ಅಲ್ಲಿ ಧೊರೆಯ ಬಳಿಯಲ್ಲಿ ತನ್ನ
ನೂರು ವರಹಾ ಗಂಟನ್ನು ಇಟ್ಟು, ಹೇಳಿ ಕೊಂಡದ್ದು ಏನಂದರೆ—ಸ್ವಾಮೀ, ನ
ನ್ನ ಊರಿಂದ ವ್ಯಾಪಾರಕ್ಕೋಸ್ಕರ ಇನ್ನೂರು ವರಹವನ್ನು ಗಂಟು ಕಟ್ಟಿ
ತೆಗೆದು ಕೊಂಡು ಬಂದು ಈ ಊರಿಗೆ ಹರದಾರಿಯಲ್ಲಿರುವ ನದಿಯಲ್ಲಿ ಸ್ನಾನಾ
ಮಾಡಿ, ಬುತ್ತೀ ಅನ್ನವನ್ನು ತಿಂದು, ರಾತ್ರಿ ಪಟ್ಟಣಕ್ಕೆ ಬಂದು, ಇಳಿದು
ಕೊಳ್ಳುವ ಎಂದು, ಗಂಟನ್ನು ನದೀ ಮರಳಿನಲ್ಲಿ ಇರಿಸಿ, ಅದರ ಮೇಲೆ ನನ್ನ
ಜೊಗೆ, ರುಮಾಲು, ಹಸಬೆ ಚೀಲ ಸಹ ಇರಿಸಿ, ಹೊಳೆಯಲ್ಲಿ ಸ್ನಾನಾ ಮಾ
ಡಿ, ಬುತ್ತಿ ಅನ್ನಾ ಉಂಡು, ನನ್ನ ಸಾಮಾನುಗಳನ್ನೆಲ್ಲಾ ತೆಗೆದು ಕೊಂಡು,
ನನ್ನ ಗಂಟು ಮಾತ್ರ ಮರೆತು, ಕೊಂಬಿನ ಕೂಗು ದಾರಿ ಬಂದು, ನೆನಸಿ ಕೊಂ
ಡು, ತಿರಿಗಿ ಹೊಳೆಯ ಬಳಿಗೆ ಓಡಿ ಹೋಗುತ್ತಾ ಇರುವಲ್ಲಿ; ಆಳು ಕೂಗು ದಾ
ರಿಯಲ್ಲಿ ಈ ಮೋಸಗಾರ ಹಾರುವನು ಎದುರಿಗೆ ಶಿಕ್ಕಿದನು. ಈತನನ್ನು—ನೀ
ವು ಹೊಳೆಯಲ್ಲಿ ಇಳಿದು, ಬಂದಿರಾ? ನಿಮಗೆ ಒಂದು ಗಂಟು ಶಿಕ್ಕಿತೇ?
ಶಿಕ್ಕಿ ಇದ್ದರೆ, ಕೊಟ್ಟರೆ, ಹತ್ತು ವರಹಾ ಕೊಡುತ್ತೇನೆಂದು, ಬಹಳವಾಗಿ ಅಂಗ
ಲಾಚಿ ಕೊಂಡು ಕೇಳಿದ್ದಕ್ಕೆ, ನನ್ನ ಇನ್ನೂರು ವರಹದ ಗಂಟು ಕೊಡದೆ, ಇ
ಗೋ, ಈ ನೂರು ವರಹದ ಗಂಟು ಕೊಟ್ಟು ಇದ್ದಾನೆ ಎಂದು ಹೇಳಲು; ಅರ
ಸು ಈ ಬ್ರಾಹ್ಮಣನನ್ನು—ಈ ವಿಚಾರವೇನೆಂದು ಕೇಳಲು;—ನಾನು ಆ ಹೊಳೆ
ಯಲ್ಲಿ ಸ್ನಾನಕ್ಕೆ ಇಳಿದಾಗ, ಮರಳಿನಲ್ಲಿ ಈ ಗಂಟು ಶಿಕ್ಕಿತು. ಯಾರು ಮರೆ
ತು ಹೋದರೋ? ಎಷ್ಟು ವ್ಯಸನ ಪಡುತ್ತಾರೋ ಎಂದು, ಆ ಗಂಟನ್ನೇ ಬಿಚ್ಚಿ
ನೋಡದೆ, ತೆಗೆದು ಕೊಂಡು ಬರುವ ದಾರಿಯಲ್ಲಿ ಈ ವರ್ತಕನು ಅಳುತ್ತಾ ಕ
ರೆಯುತ್ತಾ, ಓಡಿ ಬಂದು ಕೇಳಿದ್ದರಿಂದ, ಇವನದೇ ಎಂದು ಶಿಕ್ಕಿದ್ದ ಗಂಟನ್ನು
ಕೊಟ್ಟು ಬಿಟ್ಟೆನು, ಅಂದನು. ಆ ಮೇಲೆ ಅರಸು ಒಂದು ಘಳಿಗೆ ಯೋಚಿಸಿ,
ಕೋಮಟಿಗನನ್ನು ಕುರಿತು—ಈ ನೂರು ವರಹದ ಗಂಟು ನಿನ್ನದಲ್ಲವೋ?
ಎಂದು ಕೇಳಿದ್ದಕ್ಕೆ—ಅಲ್ಲ, ಸ್ವಾಮೀ; ನನ್ನದು ಇನ್ನೂರು ವರಹದ ಗಂಟು
ಎಂದು ಹೇಳಿದನು. ಆಗ ಅರಸು ಕೊತ್ತವಾಲನನ್ನು ಕರಿಸಿ—ಈ ಕೋಮಟಿಗ
ನು ಇನ್ನೂರು ವರಹದ ಗಂಟು ಹೊಳೆಯಲ್ಲಿ ಮರೆತು ಬಂದು ಇದ್ದಾನೆ.
ಯಾರಿಗೆ ಶಿಕ್ಕಿದರೂ ತಂದು ಕೊಟ್ಟರೆ, ಇನಾಮು ಕೊಡಿಸುತ್ತೇವೆ ಎಂದು
ಸಾರಿಸುವ ಹಾಗೆ ಅಪ್ಪಣೆ ಕೊಟ್ಟು, ಕಳುಹಿಸಲು; ಅವನು ಅದೇ ಪ್ರಕಾರ

ಮಾಡಿದನು. ಅರಸು ಬ್ರಾಹ್ಮಣನನ್ನು ಕರೆದು—ಈ ಗಂಟು ಅವನದಲ್ಲವಂತೆ. ನಿನ್ನ ಪುಣ್ಯದಿಂದ ಶಿಕ್ಕಿತು. ಇದನ್ನು ನೀನೇ ತೆಗೆದು ಕೊಂಡು ಹೋಗು ಎಂದು ಕೊಟ್ಟು ಕಳುಹಿಸಿ, ಆ ಮೇಲೆ ಆ ಕೋಮಟಿಗನಿಗೆ—ನಿನ್ನ ಗಂಟು ಶಿಕ್ಕುವವರಿಗೂ ನೀನು ಈ ಪಟ್ಟಣದಲ್ಲಿಯೇ ಕಾದು ಇರ ಬೇಕೆಂದು ಹೇಳಿ, ಕಳುಹಿಸಿದನು. ಆಗ ಕೋಮಟಿಯು—ಕೆಟ್ಟೆನಲ್ಲಾ! ಎಂದು ಬ್ರಾಹ್ಮಣನ ಬಳಿಗೆ ಬಂದು, ಅಡ್ಡಡ್ಡ ಬಿದ್ದು ಇಪ್ಪತ್ತು ವರಹಾ ಕೊಟ್ಟು, ಗಂಟು ತೆಗೆದು ಕೊಂಡು ಹೋದನು.

17. The Vain Jackal.

೧೭. ಹೆಮ್ಮೆ ಬಂದ ನರಿಯ ಕಥೆ.

ಜಂಬೂವನವೆಂಬ ಕಾಡಿನಲ್ಲಿ ಶೀಘ್ರಬುದ್ಧಿ ಎಂಬ ಒಂದು ನರಿಯು ಆಹಾರಾರ್ಥವಾಗಿ ಸಂಚರಿಸುತ್ತಾ, ಸಂಜೇ ವೇಳೆಯಲ್ಲಿ, ನೀಲೀ ಮಾಡುವ ಒಬ್ಬ ಸಾವುಕಾರನ ನೀಲೀ ಕಾರಖಾನೆಯಲ್ಲಿ ಹೊಕ್ಕು, ಅಲ್ಲಿರುವ ನೀಲೀ ಗುಡಾಣದಲ್ಲಿ ಬಿದ್ದು, ಮೇಲಕ್ಕೆ ಏಳುವದಕ್ಕೆ ಚೈತನ್ಯವಿಲ್ಲದೆ, ಬೆಳಗ್ಯೆ ಸಾವುಕಾರ ಬರುವ ಹೊತ್ತಿನಲ್ಲಿ, ಹೊಟ್ಟೆಯನ್ನು ಉಬ್ಬರಿಸಿ ಕೊಂಡು, ಹಲ್ಲು ಗಿಟಕು ಹಾಕಿ ಕೊಂಡು, ಸತ್ತ ಹಾಗೆ ಕಾಣಿಸಿ ಕೊಂಡು, ಬಿದ್ದು ಇತ್ತು. ಅದನ್ನು ಸಾವುಕಾರನು ನೋಡಿ, ತನ್ನ ಆಳುಗಳ ಕಡೆಯಿಂದ ದೂರ ಎತ್ತಿ ಹಾಕಿಸಿದನು. ತರುವಾಯ ತನ್ನ ಮೈ ಬಿಳುಪು ವರ್ಣವು ಹೋಗಿ, ನೀಲೀ ಬಣ್ಣವಾಗಿರುವದನ್ನು ನೋಡಿ, ಇದರಿಂದ ಒಂದು ಯುಕ್ತಿಯನ್ನು ಮಾಡಿ, ಪ್ರತಿಷ್ಠೆಯನ್ನು ಹೊಂದ ಬೇಕೆಂದೆಣಿಸಿ, ತನ್ನ ನರಿಗಳ ಗುಂಪನ್ನು ಶೇರಿ, ಅವುಗಳನ್ನು ಕುರಿತು—ಎಲೋ, ನರಿಗಳಿರಾ, ನನ್ನನ್ನು ಮೊದಲಿನಂತೆ ತಿಳಿಯ ಬೇಡಿರಿ. ನೆನ್ನೇ ರಾತ್ರಿ ಈ ವನ ದೇವತೆಯು ದಯೆಯಿಂದ ನನಗೆ ಈ ವನ ರಾಜ್ಯಕ್ಕೆ ಸಮಸ್ತ ವನೌಷಧಿ ರಸಗಳಿಂದ ತನ್ನ ಕೈಯಿಂದಲೇ ಪಟ್ಟಾಭಿಷೇಕವನ್ನು ಮಾಡಿದ್ದರಿಂದ, ಇಗೋ, ನೋಡಿ! ನನ್ನ ಮೈಯೆಲ್ಲಾ ನೀಲೀ ಬಣ್ಣವಾಗಿದೆ. ಇನ್ನು ಮೇಲೆ ನನ್ನನ್ನು ಅರಸನಾಗಿ ಓಲೈಸಿರಿ ಎಂದು ಹೇಳಲು; ಆ ನರಿಗಳೆಲ್ಲಾ—ತಮ್ಮ ಜಾತಿಯವನು ಅರಸಾದರೆ, ತಮಗೂ ಒಳ್ಳೇದೆಂದು ಎಣಿಸಿ, ಹಾಗೆಯೇ ಮಾಡುತ್ತಾ ಇದ್ದವು. ದಿನಪ್ರತಿಯು ಮೇಲೆ ಈ ಸುದ್ದಿಯನ್ನು ಕೇಳಿ, ಹುಲಿ ಸಿಂಹ ಮುಂತಾದ ಎಲ್ಲಾ ಮೃಗಗಳು ಈ ನರಿಯ ಬಳಿಗೆ ಬಂದು, ಇದನ್ನು ನೋಡಿ—ಇದು ವಿಜಾತಿಯ ಮೃಗವು; ಇದಕ್ಕೆ ವನ

ದೇವತೆಯು ಪಟ್ಟಾಭಿಷೇಕವನ್ನು ಮಾಡಿರ ಬಹುದೆಂದು ನಿಶ್ಚೈಸಿ, ನರಿಯನ್ನು ಓಲೈಸುತ್ತಾ ಬಂದವು. ಆಗ ಈ ನರಿಯು ತನ್ನನ್ನು ಅನ್ಯ ಜಾತಿಯ ದೊಡ್ಡ ದೊಡ್ಡ ಮೃಗಗಳೆಲ್ಲಾ ಓಲೈಸುತ್ತವೆ ಎಂಬ ಟೇಂಕಾರದಿಂದ ತನ್ನ ಜಾತಿಯಾದ ನರಿಗಳನ್ನು ತಿರಸ್ಕರಿಸುತ್ತಾ ಬಂತು. ಅದನ್ನು ನೋಡಿ, ನರಿಗಳೆಲ್ಲಾ ಯೋಚನೆ ಮಾಡುತ್ತಾ ಇರುವಲ್ಲಿ, ಅವುಗಳನ್ನು ಕುರಿತು ಒಂದು ಮುದಿ ನರಿಯು ಹೇಳಿದ್ದೇನಂದರೆ—ಲೋಕದಲ್ಲಿ ಯಾವ ಅರಸು ತನ್ನ ಜನರಲ್ಲಿ ವಿರೋಧವನ್ನು ಬಳಸುವನೋ, ತನಗಿಂತ ಬಲಿಷ್ಠನಲ್ಲಿ ಜಗಳವನ್ನು ಮಾಡುವನೋ, ರಾಜ ನೀತಿಗೆ ತಕ್ಕದ್ದಲ್ಲದ ಕೆಲಸವನ್ನು ಮಾಡುವನೋ, ಅವನಿಗೆ ಬೇಗ ಕೇಡು ಉಂಟಾಗುವದು. ಇದು ಸಿದ್ಧ. ಆದ್ದರಿಂದ ಇದರ ಹೆಮ್ಮೆಯನ್ನು ಮುರಿಯ ಬೇಕು. ನೀವೆಲ್ಲಾ ಸಂಜೇ ವೇಳ್ಯದಲ್ಲಿ ಒಂದು ಕಡೆ ಗುಂಪು ಕೂಡಿ, ಘಟ್ಟಿಯಾಗಿ ಬಗುಳಿರಿ ಎನ್ನಲು; ಅವುಗಳು ಅದೇ ಪ್ರಕಾರ ಬಗುಳಿದವು. ಆಗ ಈ ನರಿಯು ಕೂಡಾ ಜಾತೀ ಸ್ವಭಾವದಿಂದ ಕೂಗಲು; ಹುಲಿಯು—ನರಿ ಎಂದು ಅರಿತು, ಕೊಂದು ಬಿಟ್ಟಿತು. ಆದ್ದರಿಂದ ಸ್ವಜನರನ್ನು ತಿರಸ್ಕರಿಸುವದರಿಂದ ಯಾರಿಗೂ ಒಳ್ಳೇದಾಗಲಾರದು.

18. Shivappanaik employs boxers to punish the Jangama.

೧೮. ಶಿವಪ್ಪನಾಯಕನು ಜಟ್ಟಿಗಳ ಕೈಯಿಂದ ಜಂಗಮನನ್ನು ಶಿಕ್ಷಿಸಿದ ಕಥೆ.

ನಗರದ ಸಂಸ್ಥಾನದ ಶಿವಪ್ಪನಾಯಕನು ಚಾವಡಿಯಲ್ಲಿ ಕುಳಿತು, ಆಡಳಿತಾ ಮಾಡುತ್ತಿರುವಾಗ, ಪ್ರತಿ ದಿನದಲ್ಲೂ ಒಬ್ಬ ಜಂಗಮ್ಮೈಯನು ಬಂದು—ನಾವು ಕೈಲಾಸದಿಂದ ಬಂದೆವು. ಅಲ್ಲಿ ಪಟ್ಟೇ ಮಂಚದ ಮೇಲೆ ಪಾರ್ವತಿಯೂ ಪರಮೇಶ್ವರನೂ ಪವಡಿಸಿದ್ದರು. ವಿಷ್ಣುವು ಪರಮೇಶ್ವರರ ಕಾಲನ್ನು ಒತ್ತುತ್ತಿದ್ದನು. ಲಕ್ಷ್ಮಿಯು ಪಾರ್ವತಿಯಮ್ಮನವರ ಕಾಲೊತ್ತುತ್ತಿದ್ದಳು ಎಂದು ಹೇಳುತ್ತಾ ಇದ್ದನು. ಅರಸು ಇದನ್ನು ಸಹಿಸಲಾರದೆ, ಒಂದು ದಿವಸ ಇಬ್ಬರು ಜಟ್ಟಿಗಳಿಗೆ ಗುಟ್ಟಾಗಿ ಕೆಲವು ಯುಕ್ತಿಗಳನ್ನು ಹೇಳಿ ಕೊಟ್ಟು, ಚಾವಡಿಯ ಅಟ್ಟದ ಮೇಲೆ ಕೂರಿಸಿದನು. ಆ ದಿವಸವು ಆ ಜಂಗಮ್ಮೈಯನು ಬಂದು, ನಿತ್ಯಗಟ್ಲೆಯ ಪ್ರಕಾರವೇ ಹೇಳುತ್ತಿರುವಲ್ಲಿ, ಮೊಗ ಮೈಗೆಲ್ಲಾ ನಾಮವನ್ನು ಇಟ್ಟು ಕೊಂಡು, ತುಲಸೀ ದಂಡೆಯನ್ನು ಹಾಕಿ ಕೊಂಡು, ಇಬ್ಬರು ಜಟ್ಟಿಗಳು ಅಟ್ಟದಿಂದ ಆಸ್ಥಾನ ಚಾವಡಿಗೆ ಧುಮುಕಲು; ಅರಸು ಎದ್ದು, ಕೈಮುಗಿದು—ಸ್ವಾಮಿಗಳೇ, ಎಲ್ಲಿಂದ ಬಿಜ ಮಾಡಿದಿರಿ? ಎಂದು ಕೇಳಿದನು. ಅದಕ್ಕೆ

ಅವರು—ನಾವು ವೈಕುಂಠದಿಂದ ಬಂದೆವು. ಅಲ್ಲಿ ಮಹಾ ವಿಷ್ಣುವೂ ಲಕ್ಷ್ಮೀ ದೇವಿಯರೂ ಮಹಾ ಶೇಷನ ಮೇಲೆ ಮಲಗಿದ್ದರು. ಶಿವನು ಮಹಾ ವಿಷ್ಣುವಿನ ಕಾಲುಗಳನ್ನು ಒತ್ತುತ್ತಾ ಇದ್ದನು. ಪಾರ್ವತಿಯು ಮಹಾ ಲಕ್ಷ್ಮೀ ದೇವಿಯರ ಕಾಲುಗಳನ್ನು ಒತ್ತುತ್ತಿದ್ದಳು, ಅನ್ನುವದು; ಆ ಒಡೆಯರಯ್ಯನು—ಇವರು ತುಂಟರು. ಸುಳ್ಳು ಹೇಳುತ್ತಾರೆ. ಎಲೋ, ಶಿವಗಾ, ಇವರನ್ನು ಚನ್ನಾಗಿ ದಂಡಿಸು, ಅಂದನು. ಆಗ—ನಮ್ಮನ್ನು ತುಂಟರು ಅನ್ನುತ್ತೀಯಾ? ಎಂದು, ಇಬ್ಬರು ಜಟ್ಟಿಗಳು ಬಂದು, ಈ ಜಂಗಮನನ್ನು ಹಿಡು ಕೊಂಡು, ಗುದ್ದಿ, ಗುದ್ದಿ, ಸಾಯು ಕೊಲ್ಲುತ್ತಾ ಇರಲು; ಜಂಗಮಯ್ಯನು—ಎಲಾ, ಶಿವಗಾ, ಈ ವೈಕುಂಠದವರು ನಮ್ಮನ್ನು ಸಾಯು ಬಡಿಯುತ್ತಾರಲ್ಲಾ? ನೀನು ನೋಡಿಕೊಂಡು, ಸುಮ್ಮಗೆ ಇದ್ಧೀಯಾ? ಬಿಡಿಸೋ, ಎಂದು ಕೂಗುತ್ತಿರಲು; ಶಿವಪ್ಪನಾಯಕನು—ಬುದ್ಧೀ, ನಾನೇನು ಮಾಡಲಿ? ಕೈಲಾಸದವರುಂಟು, ವೈಕುಂಠದವರುಂಟು, ಅಂದನು. ಆಗ ಜಟ್ಟಿಗಳು ಆ ಜಂಗಮನನ್ನು ಗುದ್ದಿ, ನೆಲಕ್ಕೆ ಕೆಡವಿ, ಅರಸಿನ ಸಾಜ್ಞೆಯ ಮೇಲೆ ಬಿಟ್ಟು ಬಿಟ್ಟರು. ಆ ದಿವಸದಾರಭ್ಯ ಆ ಜಂಗಮಯ್ಯನು ಅಂಥಾ ಮಾತನಾಡುವದನ್ನು ಬಿಟ್ಟು ಬಿಟ್ಟನು.

19. Shivappanaik cuts off the Jangama's feet.

೧೯. ಶಿವಪ್ಪನಾಯಕನು ಜಂಗಮನ ಪಾದಗಳನ್ನು ಕತ್ತರಿಸಿ ಹಾಕಿದ ಕಥೆ.

ನಗರ ಸಂಸ್ಥಾನದಲ್ಲಿ ಶಿವಪ್ಪನಾಯಕನೆಂಬ ಅರಸು ರಾಜ್ಯಭಾರವನ್ನು ಮಾಡಿ ಕೊಂಡು, ಪಕ್ಷಪಾತವಿಲ್ಲದೆ ನ್ಯಾಯಾನ್ಯಾಯಗಳನ್ನು ವಿಚಾರಿಸಿ, ದಂಡಖಂಡನೆಗಳನ್ನು ಮಾಡುತ್ತಾ, ಬಹಳ ಧರ್ಮಿಷ್ಠನಾಗಿದ್ದನು. ಅವನು ಶಿವಾಚಾರದವನಾದ್ದರಿಂದ, ಅವನ ದೇಶದಲ್ಲಿ ಜಂಗಮರು—ಅರಸು ನಮ್ಮ ಶಿಷ್ಯನಾಗಿದ್ಧಾನೆಂದು ಹೆಮ್ಮೆಯಿಂದ ಬ್ರಾಹ್ಮಣಾದಿ ಇತರ ಜಾತಿಗಳನ್ನು ಅನ್ಯಾಯದಿಂದ ಅವಮಾನ ಮಾಡುತ್ತಾ ಬಂದರು. ಈ ದೂರು ಬಹಳವಾಗಿ ಶಿವಪ್ಪನಾಯಕನು ಕೇಳಿ, ಈ ಜಂಗಮರುಗಳ ಪುಂಡನ್ನು ನಿಲ್ಲಿಸ ಬೇಕೆಂದು ಯೋಚಿಸಿ ಕೊಂಡು ಇದ್ದನು. ಹೀಗಿರುವಲ್ಲಿ ಒಂದು ದಿವಸ ದೇಶಾಂತರಿಯಾದ ಬ್ರಾಹ್ಮಣನು ಅರಸಿನ ಬಳಿಗೆ ಬಂದು—ಐಯ್ಯಾ, ಅರಸೇ, ನಿನ್ನ ಊರ ಹೊರಗಿನ ಹೂದೋಟದಲ್ಲಿ ಒಂದು ಕೊಳವು ತಿಳಿ ನೀರುಗಳಿಂದ ಕೂಡಿ, ಮನಸ್ಸಿಗೆ ಪ್ರಶಸ್ತವಾಗಿದ್ದದರಿಂದ, ಅಲ್ಲಿ ಸ್ನಾನ ಮಾಡಿ, ಸಾಲಿಗ್ರಾಮ ಪೂಜೆಯನ್ನು ಮಾಡುತ್ತಾ ಇದ್ದೆನು. ಅಲ್ಲಿಗೆ ಒಬ್ಬ ಜಂಗಮಯ್ಯನು ಬಂದು—ನನ್ನ ಸಾಲಿಗ್ರಾಮ

ಪೆಟ್ಟಿಗೆಗಳನ್ನು ಎತ್ತಿ, ಭಾವಿಗೆ ಒಗೆದು, ನನ್ನನ್ನು ಕಾಲಿನಿಂದ ಒದ್ದು, ಕೆಡ
ವಿದನು, ಎಂದು ಹೇಳುವದು; ಶಿವಪ್ಪನಾಯಕನು ಬಹಳ ವ್ಯಸನ ಪಟ್ಟು,
ಆ ಬ್ರಾಹ್ಮಣನನ್ನು ಧನ ಕನಕ ವಸ್ತ್ರಾಭರಣಗಳಿಂದ ಸನ್ಮಾನವನ್ನು ಮಾಡಿ,
ಸಮಾಧಾನ ಪಡಿಸಿ, ಕಳುಹಿಸಿ ಬಿಟ್ಟನು. ಆ ಬಳಿಕ, ಒದ್ದ ಜಂಗಮೈಯನು
ಅರಸಿಗೆ ಮುಖ್ಯವಾದ ಗುರುವಾದ್ದರಿಂದ, ಅರಸಿಗೆ ತಾನು ಮಾಡಿದ ಕೆಲಸವನ್ನು
ಹೇಳಿದರೆ, ಅರಸು ಸಂತೋಷ ಪಡುವನೆಂದು ತಿಳಿದು, ಚಾವಡಿಗೆ ಬರಲು; ಅರಸು
ಎದ್ದು, ಐಗಳ ಕಾಲಿಗೆ ಶರಣು ಮಾಡಿ, ದೊಡ್ಡ ಗದ್ದಿಗೆಯ ಮೇಲೆ ಕೂರಿಸಿ—ಮ
ತ್ತೇನು ಬಿಜ ಮಾಡಿದ್ದು? ಎಂದು ಕೇಳಿದನು. ಆಗ ಜಂಗಮೈಯನು—ಕೇ
ಳೋ, ಶಿವಗಾ, ಈ ದಿನ ಮಧ್ಯಾಹ್ನದಲ್ಲಿ ಒಬ್ಬ ಹಾರೋಪರ್ವಾದಿ ಬಂದು, ನಮ್ಮ
ಮಜ್ಜನದ ಭಾವಿಯನ್ನು ಮುಟ್ಟಿ, ಅಶುಚಿ ಮಾಡಿ, ಅದರ ಪಾವಟಿಗೆಯ ಮೇ
ಲೆ ಕುಳಿತು ಕೊಂಡು, ಕರೀ ದುಂಡು ಕಲ್ಲುಗಳನ್ನು ಇಟ್ಟು ಕೊಂಡು, ತುಲಸೀ
ಎಲೆಗಳಿಂದ ಪೂಜಿಸುತ್ತಾ ಇರುವಲ್ಲಿ; ನಾವು ಹೋಗಿ, ಆ ಕಲ್ಲುಗಳನ್ನೆಲ್ಲಾ ಭಾ
ವಿಗೆ ಹಾಕಿ, ಆ ಹಾರುವ ಪರವಾದಿಯನ್ನು ಜುಟ್ಟು ಹಿಡಿದು, ಕೆಡವಿ, ಎರಡು
ಪಾದಗಳನ್ನು ಚನ್ನಾಗಿ ಪಾಲಿಸಿ, ಆ ಮೇಲೆ ನಮ್ಮ ಜಳಕದ ಭಾವೀ ನೀರುಗ
ಳು ಹಾರುವ ಪರವಾದಿ ಮುಟ್ಟಿ, ಅಶುಚಿ ಮಾಡಿದ ಕಾರಣ, ಆ ಹಳೇ ನೀರುಗ
ಳನ್ನೆಲ್ಲಾ ಯಾತದಿಂದ ಮೇಲಕ್ಕೆ ಎತ್ತಿ, ಸುರಿಸಿ, ಹೊಸದಾಗಿ ಬಂದ ನೀರಿಗೆ ಸಂ
ಪ್ರೋಕ್ಷಣೆ ಮಾಡಿ, ಶುದ್ಧಿ ಮಾಡಿದೆವು, ಎಂದು ಹೇಳಿದನು. ಆಗ ಶಿವಪ್ಪನಾ
ಯಕನು—ಬುದ್ಧೀ, ಬುದ್ಧೀ, ಬಲು ಒಳ್ಳೇ ಕೆಲಸಾ ಮಾಡಿಸಿದಿರಿ! ಆದರೆ ಹಾರು
ವ ಪರವಾದಿಯನ್ನು ಮುಟ್ಟಿ, ಅಶುಚಿಯಾದ ತಮ್ಮ ಪಾದಗಳಿಗೆ ತಮ್ಮ ಶಿಷ್ಯನಾ
ದ ನಾನು ಶರಣು ಮಾಡಿದರೆ, ಕೆಟ್ಟು ಹೋಗುವೆನಲ್ಲವೋ? ಎಂದು ಹೇಳಿ, ತನ್ನ
ಕೈಯಲ್ಲಿ ಇದ್ದ ಕತ್ತಿಯಿಂದ ಆ ಜಂಗಮೈಯನ ಎರಡು ಕಾಲು ಹೆಜ್ಜೆಗಳನ್ನು
ಕತ್ತರಿಸಿ ಬಿಟ್ಟನು. ಆಗ ಈ ಸುದ್ದಿಯನ್ನು ಜಂಗಮರೆಲ್ಲಾ ಕೇಳಿ, ಭಯಸ್ಥ
ರಾಗಿ, ಹೆಮ್ಮೆ ಮುರಿದು, ನ್ಯಾಯದಿಂದ ನಡೆದು ಕೊಳ್ಳುತ್ತಾ ಬಂದರು.

20. The Lark and Elephant.

೨೦. ಟಿಟ್ಟಿಭವನ್ನೂ ಆನೆಯನ್ನೂ ಕುರಿತು.

ಕಾರ್ಮುಕವೆಂಬ ವನದಲ್ಲಿ ವಿನಾಡಿಕವೆಂಬ ಟಿಟ್ಟಿಭವು ನೆಲದಲ್ಲಿ ಗೂ
ಡು ಮಾಡಿ ಕೊಂಡು, ಆ ಗೂಡಿನಲ್ಲಿ ತತ್ತಿಗಳನ್ನು ಇಟ್ಟು ಕೊಂಡು, ಸುಖ
ದಿಂದ ಇರಲು; ಒಂದು ದಿನ ಆ ಮಾರ್ಗವಾಗಿ ಬಂದು ಮದದಾನೆಯು ಬಂ

ದು, ಆ ಗುಡ್ಡುಗಳನ್ನು ತುಳಿಯಲು; ಆ ಟಿಟ್ಟಿಭನು ಅತಿ ದುಃಖದಿಂದ ಆ ಮದದಾನೆಯ ಬಳಿಗೆ ಹೋಗಿ—ಎಲೋ, ಗಜರಾಜಾ, ನೀನು ಈ ಪ್ರಕಾರ ನನ್ನ ತತ್ತಿಗಳನ್ನು ತುಳಿಯ ಬಹುದೇ? ಎನ್ನಲು; ಆ ಗಜವು—ನಾನು ತಿಳಿಯದೆ ನಿನ್ನ ಗುಡ್ಡುಗಳನ್ನು ತುಳಿದೆನು. ಇನ್ನು ಮೇಲೆ ಈ ಪ್ರಕಾರ ನಿನಗೆ ದ್ರೋಹವನ್ನು ಮಾಡುವದಿಲ್ಲ ಎಂದು, ನಂಬಿಗೆಯನ್ನು ಕೊಟ್ಟು, ಕಳುಹಲು; ಆ ಟಿಟ್ಟಿಭನು ಕೆಲವು ದಿನಗಳ ತರುವಾಯ ಪುನಹ ತತ್ತಿಗಳನ್ನು ಇಟ್ಟಿರಲು; ಆ ಗಜವು ಅದೇ ಮಾರ್ಗದಲ್ಲಿ ಬರುತ್ತಾ, ಕೊಟ್ಟ ನಂಬಿಗೆಯನ್ನು ಮರೆತು ಬಿಟ್ಟು, ಅದರ ಗುಡ್ಡುಗಳನ್ನು ತುಳಿಯಲು; ಟಿಟ್ಟಿಭನು—ಈ ಆನೆಯಿಂದ ನನ್ನ ಸಂತತಿ ಅಭಿವೃದ್ಧಿ ಆಗುವದಿಲ್ಲ ಎಂದು, ಮಹಾ ಕೋಪದಿಂದ—ಸರ್ವದ ಪ್ರಕಾರ ಈ ಆನೆಯನ್ನು ಕೊಲ್ಲಿಸ ಬೇಕೆಂದು ಯೋಚಿಸಿ, ತನ್ನ ಸ್ನೇಹಿತನಾದ ಮಂಡೂಕನ ಬಳಿಗೆ ಬಂದು, ಈ ವಿವರವನ್ನು ಹೇಳಲು; ಆ ಮಂಡೂಕವು ತನ್ನ ಸ್ನೇಹಿತರಾದ ವಾಯಸ ಪಕ್ಷಿಗಳನ್ನು ಕರಿಸಿ ಕೊಂಡು, ಆಲೋಚನೆಯನ್ನು ಮಾಡಿ, ನಾಲ್ಕು ಜನರೂ ಕೂಡಿ, ತಂತ್ರಯುಕ್ತನೆಂಬ ಜಂಬುಕ ರಾಜನ ಬಳಿಗೆ ಬಂದು, ವಂದನೆಯನ್ನು ಮಾಡಿ, ಟಿಟ್ಟಿಭನ ವಿವರವನ್ನು ಹೇಳಿ—ಇದಕ್ಕೆ ಏನು ಯೋಚನೆ? ಎಂದು ಕೇಳಲು; ಆ ಜಂಬುಕವು, ಒಂದು ಕುಹಕವನ್ನು ನೆನದು, ವಾಯಸವನ್ನು ನೋಡಿ—ನೀನು ಹೋಗಿ, ಆನೆಯ ಮೇಲೆ ಕುಳಿತು ಕೊಂಡು, ಅದರ ಶರೀರದ ತಿನಸು ಹೋಗುವ ಹಾಗೆ ಒರಸುತ್ತಾ, ಅದರ ಎರಡು ಕಣ್ಣುಗಳನ್ನೂ ತಿವಿದು ಬಾ, ಎಂದು ಹೇಳಲು; ಅದು—ಒಳ್ಳೇದೆಂದು ಒಪ್ಪಿ, ಅತಿ ವೇಗದಿಂದ ಮದೋನ್ಮತ್ತದಿಂದಿರುವ ಆ ಆನೆಯ ಸಮೀಪಕ್ಕೆ ಬಂದು, ಅದರ ಮೇಲೆ ಕುಳಿತು, ಶರೀರವನ್ನು ತುರಿಸಲು; ಆ ಗಜವು ಶರೀರವನ್ನು ತಿಳಿಯದೆ ಪರವಶದಿಂದ ಇರುವ ವೇಳೆಯಲ್ಲಿ, ಅದರ ಎರಡು ಕಣ್ಣುಗಳನ್ನು ತಿವಿದು ಬರಲು; ಆ ಮಕ್ಷಿಕನನ್ನು ಕರೆದು—ನಿನ್ನ ಸಮೂಹದ ಕೂಡಾ ಹೋಗಿ, ಅದರ ಶರೀರದ ರಕ್ತವನ್ನೆಲ್ಲಾ ಕುಡಿ, ಎಂದು ಹೇಳಿ ಕಳುಹಿಸಲು; ಅದು ಹಾಗೆಯೇ ಹೋಯಿತು. ಆ ಮೇಲೆ ಕಪ್ಪೆಯನ್ನು ಕರೆದು—ನೀನು ಹಾಳು ಭಾವಿಯಲ್ಲಿ ನಿನ್ನ ಸಮೂಹದ ಕೂಡ ಕೋಲಾಹಲ ಧ್ವನಿಯನ್ನು ಮಾಡಿ ಕೊಂಡು ಇರು, ಎಂದು ಹೇಳಿ ಕಳುಹಿಸಿ, ತಾನು ತನ್ನ ಕುಲ ಕೋಟಿಯನ್ನು ಕರೆದು ಕೊಂಡು ಹೋಗಿ, ಸಿದ್ಧವಾಗಿ ಕಾದು ಇರಲು; ಆ ಮದ ಗಜವು ಕಣ್ಣು ಕಾಣದೆ, ನರೀ ಕಾಟ, ನೊಣದ ಕಾಟದಿಂದ ತೊಳಲಿ, ಬಳಲಿ, ದಾವರ ಗೊಂಡು, ಉದಕವಿರುವ ಸ್ಥಳವನ್ನು ಕಾಣದೆ, ಹಾಳು ಭಾವಿಯಲ್ಲಿ ಬಂದು ಬೀಳಲು; ಆ ಜಂಬುಕ

ಗಳು ಕಟ್ಟಿಗೆ, ಸೊಪ್ಪು, ಕಲ್ಲು, ಮುಳ್ಳುಗಳನ್ನು ತಂದು ಹಾಕಿ, ಬೆಂಕಿಯು ನ್ನು ಹತ್ತಿಸಲು, ಅಲ್ಲೇ ಆನೆಯು ಮೃತವಾಯಿತು.

21. The Two Merchants.

೨೧. ಇಬ್ಬರು ವರ್ತಕರನ್ನು ಕುರಿತು.

ಶಯ್ಯಾವತಿ ಎಂಬ ಪಟ್ಟಣದಲ್ಲಿ ವಿವೇಕದರ್ಪಣನೆಂಬ ವರ್ತಕನು ಕಬ್ಬಿಣದ ಪಾಳಗಳನ್ನು ಹೇರುಗಳಲ್ಲಿ ತುಂಬಿ ಕೊಂಡು, ಕಳಾವತಿ ಎಂಬ ಪಟ್ಣಕ್ಕೆ ಬಂದು, ಅಲ್ಲಿ ಕಬ್ಬಿಣವು ಬಹಳ ಅಗ್ಘವಾಗಿರಲು—ಈಗ ಮಾರಿದರೆ, ಮೂಲ ಧನವೇ ಮುಣಿಗೀತು ಎಂದು ಯೋಚಿಸಿ, ಆ ಕಬ್ಬಿಣದ ಹೇರುಗಳನ್ನು ಅದೇ ಪಟ್ಣದಲ್ಲಿ ಇರುವ ಕ್ರೂರವರ್ಮನೆಂಬ ವರ್ತಕನ ಮನೆಯಲ್ಲಿ ಹಾಕಿ, ಅವನಿಗೆ ಬಾಡಿಗೆಯನ್ನು ನಿರ್ಣಯ ಮಾಡಿ ಕೊಟ್ಟು, ತನ್ನ ಪಟ್ಟಣಕ್ಕೆ ಹೋದನು. ಕೆಲವು ದಿವಸಗಳ ಮೇಲೆ ಕಬ್ಬಿಣವು ತಗ್ಗಾಗಿ, ಗಿರಾಕಿಗಳು ಬಹಳವಾಗಿ ಬರಲು; ಈ ಕ್ರೂರವರ್ಮನು ಆ ಕಬ್ಬಿಣವೆಲ್ಲವನ್ನು ಮಾರಿ, ಏನೂ ಅರಿಯದವನ ಹಾಗೆ ಇರುತ್ತಿರಲು; ಆ ಕಬ್ಬಿಣದವನು ಬಂದು, ತನ್ನ ಕಬ್ಬಿಣವನ್ನು ಕಾಣದೆ, ಕ್ರೂರವರ್ಮನ ಬಳಿಗೆ ಬಂದು, ಕೇಳಲು; ಆ ವರ್ತಕನು—ನೀನು ಹೋಗಿ ಬಹಳ ದಿವಸಗಳಾದ ಕಾರಣ, ಉತ್ಪಾತವಾದ ಇಲಿಗಳು ಬಂದು, ಕಬ್ಬಿಣವೆಲ್ಲವನ್ನು ತಿಂದು ಹೋದವು ಎನ್ನಲು; ಆ ವಿವೇಕದರ್ಪಣನು ಅವನ ಸಂಗಡ ವ್ಯವಹಾರವಾಡದೆ, ಲಭ್ಯವಿಲ್ಲದ ಕಾರಣ, ಹೋಯಿತೆಂದು ಹೇಳಿ, ಅವನಲ್ಲಿ ಮತ್ತೂ ಸ್ನೇಹವನ್ನು ಬಳಸಿ ಕೊಂಡು ಇದ್ದು, ಒಂದಾನೊಂದು ದಿನ ಆ ವರ್ತಕನ ಮಗನನ್ನು ತನ್ನ ಸಂಗಡ ಕರೆದು ಕೊಂಡು ಹೋಗಿ, ತನಗೆ ಆಪ್ತನಾದ ಒಬ್ಬ ವರ್ತಕನ ಮನೆಯಲ್ಲಿ ಆ ಹುಡುಗನನ್ನು ಇರಿಸಿ, ಸಾಯಂಕಾಲದ ವೇಳೆಯಲ್ಲಿ ಬಳಲುತ್ತಾ, ಒಬ್ಬನೇ ಈ ವರ್ತಕನ ಮನೆಗೆ ಬರಲು; ಕ್ರೂರವರ್ಮನು ವಿವೇಕದರ್ಪಣನನ್ನು ನೋಡಿ, —ಚಿಕ್ಕವನು ಎಲ್ಲಿ? ಎಂದು ಕೇಳಲು; ಆ ವರ್ತಕನು ಖಿನ್ನನಾಗಿ—ಎಲೋ, ಕ್ರೂರವರ್ಮನೇ, ನಾನು ಮಾಡಿದ ಕಾರ್ಯವನ್ನು ಏನೆಂದು ಹೇಳಲಿ? ನಾನು ನಿನ್ನ ಹುಡುಗನನ್ನು ಕರೆದು ಕೊಂಡು, ತಟಾಕದ ತಡಿಯಲ್ಲಿ ಕುಳ್ಳಿರಿಸಿ, ತಟಾಕದೊಳಗೆ ಮುಖ ಮಜ್ಜನವನ್ನು ಮಾಡುತ್ತಿರಲು; ಒಂದು ಉತ್ಪಾತವಾದ ಹದ್ದು ಬಂದು, ನಿನ್ನ ಸುಕುಮಾರನನ್ನು ಎತ್ತಿ ಕೊಂಡು ಹೋಯಿತು ಎನ್ನಲು; ಕ್ರೂರವರ್ಮನು ಆಗ್ರಹ ಪಟ್ಟು, ಆ ವರ್ತಕನ ಶಿರಗು ಹಿಡಿದು, ಎಳೆದು ಕೊಂಡು, ಸಭೆಯುವರ ಮುಂದೆ ನಿಲ್ಲಿಸಲು; ಸಭೆಯುವ

ರು ವಿವೇಕದರ್ಪಣನನ್ನು ನೋಡಿ–ನಿನ್ನ ನ್ಯಾಯವೇನೆಂದು ಕೇಳಲು; ಅವ
ನು–ಸ್ವಾಮಿಾ, ನಾನು ಈ ವರ್ತಕನ ಮಗನನ್ನು ಕರೆದು ಕೊಂಡು ಹೋಗಿ,
ಕೆರೆಯ ತಡಿಯಲ್ಲಿ ಕುಳ್ಳಿರಿಸಿ, ಮುಖ ಮಜ್ಜನವನ್ನು ಮಾಡಿ ಕೊಳ್ಳುತ್ತಿರುವ
ಸಮಯದಲ್ಲಿ, ಒಂದು ಉತ್ಪಾತವಾದ ಹದ್ದು ಬಂದು, ಆ ಹುಡುಗನನ್ನು ಎತ್ತಿ
ಕೊಂಡು ಹೋಯಿತು ಎನ್ನಲು; ಆ ಸಭೆಯವರೆಲ್ಲರೂ ವರ್ತಕನನ್ನು ಜರಿ
ದು–ಮನುಷ್ಯರನ್ನು ಹದ್ದು ಎತ್ತಿ ಕೊಂಡು ಹೋಗುವದು ಉಂಟೇ? ಎಂ
ದು ಕೇಳಲು; ಅವನು–ಎಲೈ, ಧರ್ಮಾತ್ಮರುಗಳಿರಾ, ಮನುಷ್ಯರನ್ನು ಹದ್ದು
ಎತ್ತಿ ಕೊಂಡು ಹೋಗುವದುಂಟೇ? ಎಂದು ಕೇಳಿದಿರಲ್ಲಾ? ಇಲಿಗಳು ಕಬ್ಬಿ
ಣವನ್ನು ತಿನ್ನುವದುಂಟೋ? ವಿಚಾರಿಸಿ, ಎನಲು; ಅವನ ಉಪಾಯಕ್ಕೆ ಮೆ
ಚ್ಚಿ, ಸಭೆಯವರು ಕ್ರೂರವರ್ಮನನ್ನು ದಂಡಿಸಿ, ಆ ಕಬ್ಬಿಣವನ್ನು ಮಾರಿದ
ಹಣವನ್ನೂ ಆ ವರಿಗೆ ಆದ ಬಡ್ಡಿಯನ್ನೂ ವಿವೇಕದರ್ಪಣನಿಗೆ ಕೊಡಿಸಿ,
ಕಳುಹಿಸಿ ಬಿಟ್ಟರು.

22. The Evil of Bad Company.

೨೨. ದುಸ್ಸಹವಾಸ ದೋಷ.

ಬ್ರಹ್ಮಪುರವೆಂಬ ಅಗ್ರಹಾರದಲ್ಲಿ ಪುಣ್ಯಶೀಲನೆಂಬ ಬ್ರಾಹ್ಮಣನು ಒಂದು
ಆಕಳು ಸಂಪಾದಿಸಿದನು. ಆ ಗೋವು ಸಾಧುವಾಗಿ, ಹಾಲು ಕೊಟ್ಟು ಕೊಂ
ಡು ಇರುವದು. ಅದೇ ಊರಲ್ಲಿ ದುರ್ನಯನೆಂಬ ತಳವಾರನ ಮನೆಯಲ್ಲಿ ಇ
ರುವ ಒಂದು ಆಕಳು ರಾತ್ರೀ ಕಾಲವೆಲ್ಲಾ ತುಂಡು ಮೇದು, ಪ್ರಾತಃಕಾಲಕ್ಕೆ
ಮನೆಯನ್ನು ಶೇರುವದು. ಒಂದಾನೊಂದು ದಿವಸ ಈ ಎರಡು ಆಕಳುಗಳು
ಅಡವಿಯಲ್ಲಿ ಮೇಯುತ್ತಾ ಇರುವಾಗ, ಆ ಸಾಧುವಾದ ಆಕಳನ್ನು ನೋಡಿ–ನೀ
ನು ಬಡವಾಗಿರುವದಕ್ಕೆ ಕಾರಣವೇನು? ಎನ್ನಲು; ಆ ಹಸುವು–ನನ್ನ ಒಡೆ
ಯನು ದರಿದ್ರನಾದ ಕಾರಣ, ಮನೆಯಲ್ಲಿ ಹುಲ್ಲು ಇಲ್ಲದೆ, ಈ ಪ್ರಕಾರ ಕೃಶ
ವಾದೆನು, ಎಂದು ಹೇಳಲು; ಆ ದುಷ್ಟ ಗೋವು–ಈ ದಿವಸ ನನ್ನ ಬಳಿಯಲ್ಲಿ
ಇದ್ದರೆ, ನಿನಗೆ ಗ್ರಾಸ ಪೂರಿತವಾಗಿ ಕೊಡಿಸುವೆನು ಎಂದು ಹೇಳಲು; ಆ ಗೋ
ವು ನಂಬಿ, ಆ ರಾತ್ರೆ ಮನೆಗೆ ಹೋಗದೆ, ದುಷ್ಟ ಗೋವಿನ ಸಂಗಡಲೇ ಇರ
ಲು; ಆ ಎರಡು ಗೋವುಗಳು ಕತ್ತಲೆಯಾದ ತರುವಾಯ, ಅರಮನೆಯ ಗದ್ದೆ
ಯನ್ನು ಹೊಕ್ಕು, ಹುಲ್ಲು ಮೇಯುತ್ತಾ ಇದ್ದವು. ದುಷ್ಟ ಆಕಳು ಶೀಘ್ರ
ವಾಗಿ ಕಬಳವನ್ನು ತೆಗೆದು ಕೊಳ್ಳುತ್ತಾ, ಕಾವಲವರನ್ನು ಕಂಡು, ಮತ್ತೊಂದು

ಹಸುವಿಗೆ ಹೇಳದೆ, ಓಡಿ ಹೋಯಿತು. ಈ ಸಾಧುವಾದ ಆಕಳು—ಬಹು ದಿವಸಕ್ಕೆ ಪೂರ್ಣವಾದ ಗ್ರಾಸ ದೊರಕಿತೆಂದು ನಿಧಾನವಾಗಿ ಮೇಯುತ್ತಿರಲು; ಆ ಆಕಳನ್ನು ನೋಡಿ, ಕಾವಲವರು ಹೊಂಚಿ ಕೊಂಡು, ಸಮೀಪಕ್ಕೆ ಬಂದು, ದೊಣ್ಣೆಗಳಿಂದ ಹೊಡೆದು, ಚಾವಡಿಗೆ ಹಿಡಿದು ತಂದು, ಆ ವಿಪ್ರನನ್ನು ಕರಿಸಿ—ಬಹಳ ದಿನಗಳಿಂದ ಅರಮನೆಯ ಗದ್ದೆಯನ್ನು ಮೇದದ್ದಕ್ಕೆ ಅಪರಾಧವನ್ನು ಕೊಡ ಬೇಕೆಂದು, ಬಹಳ ಬಾಧೆ ಪಡಿಸಿ, ಅಪರಾಧವನ್ನು ತೆಗೆದು ಕೊಂಡು, ವಿಪ್ರನ ವಶಕ್ಕೆ ಆಕಳನ್ನು ಕೊಟ್ಟು, ಭಯವಿರುವ ಹಾಗೆ ಹೇಳಿ, ಕಳುಹಿಸಲು; ಆ ವಿಪ್ರನು ಮನೆಗೆ ಬಂದು, ಮಹಾ ಕೋಪದಿಂದ ಆಕಳನ್ನು ಹೊಡೆದು, ಕೊರಳಿಗೆ ದಡಿಯನ್ನು ಕಟ್ಟಿ, ಮಂದೆಗೆ ಬಿಡಲು; ಆ ಮಂದೆಯಲ್ಲಿದ್ದ ದುಷ್ಟ ಗೋವು—ಕೊರಳಿಗೆ ದಡಿ ಬರುವದಕ್ಕೆ ಕಾರಣವೇನೆಂದು ಕೇಳಲು; ಆ ಸಾಧುವಾದ ಹಸುವು—ನಿನ್ನ ಸಹವಾಸದಿಂದ ಹೀಗಾಯಿತೆಂದು ಹೇಳಿ, ಅದರ ಜೊತೆಯನ್ನು ಬಿಟ್ಟುಬಿಟ್ಟಿತು. ಆದಕಾರಣ ದುರ್ಜನರ ಸಹವಾಸ ಮಾಡಿದರೆ, ಸಜ್ಜನರಿಗೆ ಕೇಡು ಬರುವದು.

23. Tennalaramakrishna and the King's Kitten.

೨೩. ತೆನ್ನಾಲರಾಮಕೃಷ್ಣನನ್ನೂ ಅರಸಿನ ಬೆಕ್ಕಿನ ಮರಿಯನ್ನೂ ಕುರಿತು.

ಅಚ್ಯುತರಾಯರು ಒಂದು ದಿವಸ ಪ್ರತಿ ಮನೆಯವರಿಗೂ ಒಂದೊಂದು ಬೆಕ್ಕಿನ ಮರಿಯನ್ನೂ ಒಂದೊಂದು ಆಕಳನ್ನೂ ಕೊಟ್ಟು—ಈ ಆಕಳಿನ ಹಾಲನ್ನು ಬೆಕ್ಕಿಗೆ ಹಾಕಿ, ಸಾಕಿ, ನಾನು ಹೇಳಿ ಕಳುಹಿಸಿದಾಗ, ತೆಗೆದು ಕೊಂಡು ಬನ್ನಿ, ಎಂದು ಆಜ್ಞಾಪಿಸಿದನು. ಆಗ ತೆನ್ನಾಲರಾಮಕೃಷ್ಣನು ತಾನೂ ಒಂದು ಬೆಕ್ಕನ್ನೂ ಆಕಳನ್ನೂ ತೆಗೆದು ಕೊಂಡು ಹೋಗಿ, ಆಕಳಿನ ಹಾಲನ್ನು ಉಕ್ಕುವ ಹಾಗೆ ಕಾಯಿಸಿ, ಬೆಕ್ಕಿನ ಮರಿಯ ಮುಂದೆ ಇಟ್ಟನು. ಅದು ಹಾಲನ್ನು ಕುಡಿಯುವದಕ್ಕೆ ಬಾಯಿ ಹಾಕಿದ್ದರಿಂದ, ಅದರ ತುಟಿಯು ಸುಡಲು; ಅದು ಮೊದಲ್ಗೊಂಡು ಆ ಬೆಕ್ಕಿನ ಮರಿಯು ಹಾಲು ಕಂಡರೆ, ದೂರ ಓಡಿ ಹೋಗುತ್ತಾ ಇತ್ತು. ಮಿಕ್ಕ ಜನರೆಲ್ಲರೂ ಕ್ರಮವಾಗಿ ಹಾಲು ಹಾಕಿ, ಸಾಕುತ್ತಾ ಬಂದರು. ತರುವಾಯ ಆರು ತಿಂಗಳಾದ ಮೇಲೆ ರಾಯನು, ಬೆಕ್ಕಿನ ಮರಿಗಳನ್ನು ತೆಗೆದು ಕೊಂಡು ಬರುವ ಹಾಗೆ ಎಲ್ಲರಿಗೂ ಹೇಳಿ ಕಳುಹಿಸಲು; ಎಲ್ಲರೂ ಹಾಗೆಯೇ ತೆಗೆದು ಕೊಂಡು ಬಂದರು. ರಾಯನು ಎಲ್ಲಾ ಬೆಕ್ಕುಗಳನ್ನೂ ನೋಡಿ, ರಾಮಕೃಷ್ಣಣನ ಬೆಕ್ಕು ಮಾತ್ರ ಬಡವಾಗಿರುವದನ್ನು

ನೋಡಿ–ಇದ್ಯಾಕೆ ಹೀಗೆ ಇದೆ? ಎಂದು ಕೇಳಲು; ಅವನು–ಸ್ವಾಮಿಾ, ಈ ಮರಿಯು ಹಾಲು ಕಂಡರೆ, ಓಡಿ ಹೋಗುತ್ತದೆ. ಆದ್ದರಿಂದ ಕಡಿಮೆ ಬೆಕ್ಕುಗಳ ಹಾಗೆ ಇಲ್ಲವೆಂದು ಹೇಳಲು; ರಾಯನು ಅವನ ಮಾತನ್ನು ನಂಬದೆ, ಹಾಲನ್ನು ಇರಿಸಿ, ನೋಡಲು; ಅದೇ ಪ್ರಕಾರ ಓಡಿ ಹೋಗುವದನ್ನು ನೋಡಿ, ಅದರ ತುಟಿಗಳು ಸುಟ್ಟು ಇರುವ ಗುರುತನ್ನು ಕಂಡು–ಬಿಸಿಯು ತೋರಿದ ಬೆಕ್ಕು ಒಲೆಯ ಬಳಿಯಲ್ಲಿ ಶೇರದು ಎಂಬ ಗಾಧೆಯಾಗಿದೆ ಎಂದು ಹೇಳಿ, ರಾಮಕೃಷ್ಣನ ಅಗತ್ಯಕ್ಕೆ ನಕ್ಕು, ಅವನನ್ನು ಕಳುಹಿಸಿ ಬಿಟ್ಟನು.

24. Tennalaramakrishna and the King's Colt.

೨೪. ತೆನ್ನಾಲರಾಮಕೃಷ್ಣನನ್ನೂ ರಾಯನ ಕುದುರೇ ಮರಿಯನ್ನೂ ಕುರಿತು.

ಗೌಡ ದೇಶದಲ್ಲಿ ಅಚ್ಯುತರಾಯರೆಂಬ ಒಬ್ಬ ಅರಸನು ಇದ್ದನು. ಆ ರಾಯರು ಒಂದು ದಿವಸ ಕೆಲವು ಕುದುರೇ ಮರಿಗಳನ್ನು ತರಿಸಿ, ತನ್ನ ಪಟ್ಣದೊಳಗೆ ಇದ್ದ ರೈತರಿಗೆಲ್ಲರಿಗೂ, ಒಬ್ಬೊಬ್ಬರಿಗೆ ಒಂದೊಂದು ಕುದುರೇ ಮರಿಯನ್ನು ಕೊಟ್ಟು–ಇವುಗಳನ್ನು ಸಾಕುವದಕ್ಕೆ ತಿಂಗಳಿಗೆ ಮೂರು ವರಹಾಗಳನ್ನು ಕೊಡುತ್ತೇನೆ. ಇವನ್ನು ತೆಗೆದು ಕೊಂಡು, ತ್ವರೆಯಾಗಿ ದೊಡ್ಡದಾಗುವ ಹಾಗೆ ಮಾಡಿ, ನನ್ನ ಬಳಿಗೆ ತೆಗೆದು ಕೊಂಡು ಬನ್ನಿ ಎಂದು ಆಜ್ಞಾಪಿಸಿ, ಕಳುಹಿಸಿದನು. ಅದೇ ಮೇರೆಗೆ ಒಕ್ಕಲೆಲ್ಲರು ಆ ಮರಿಗಳನ್ನು ಬಹಳ ಚನ್ನಾಗಿ ಪೋಷಿಸಿ ಕೊಂಡು ಬರುತ್ತಾ ಇದ್ದರು. ತೆನ್ನಾಲರಾಮಕೃಷ್ಣನು ಮಾತ್ರ ತನ್ನ ಮನೆಯ ಅಂಗಳದಲ್ಲಿ ನಾಲ್ಕು ಕಡೆಗೂ ಗೋಡೆಯನ್ನು ಹಾಕಿ, ಅದರ ಒಳಗೆ ಕುದುರೇ ಮರಿಯನ್ನು ಬಿಟ್ಟು, ಆ ಗೋಡೆಯಲ್ಲಿ ಒಂದು ದ್ವಾರವನ್ನು ಮಾಡಿ, ಒಳಗೆ ಅದರ ಮೂತಿಯ ಎದುರಿಗೆ ಒಂದು ಹಳ್ಳವನ್ನು ಮಾಡಿ, ಬೆಳಗಿನ ಹೊತ್ತು ಒಂದು ಹಿಡಿ ಹುಲ್ಲನ್ನು ಆ ದ್ವಾರದಿಂದಲೇ ಕೊಟ್ಟು, ಅದೇ ದ್ವಾರದಿಂದಲೇ ಹಳ್ಳದಲ್ಲಿ ಕುಡಿಯುವದಕ್ಕೆ ನೀರು ಬಿಟ್ಟು, ಸಾಯಂಕಾಲದಲ್ಲಿಯೂ ಅದೇ ಮೇರೆಗೆ ಮಾಡುತ್ತಾ ಬಂದನು. ಈ ಪ್ರಕಾರ ಮೂರು ಸಂವತ್ಸರಗಳಾದ ತರುವಾಯ, ರಾಯನು ಕುದುರೇ ಮರಿಗಳನ್ನು ತೆಗೆದು ಕೊಂಡು ಬನ್ನಿರೆಂದು ಎಲ್ಲರಿಗೂ ಅಪ್ಪಣೆಯನ್ನು ಮಾಡಲು; ಅದೇ ಮೇರೆಗೆ ಒಕ್ಕಲೆಲ್ಲರು ತೆಗೆದು ಕೊಂಡು ಬಂದರು. ಅವರು ತಂದ ಮರಿಗಳೆಲ್ಲವು ಮಾಂಸ ಕೂಡಿ, ಹೊಳೆಯುತ್ತಿದ್ದವು, ಹೀಗೆ ಇರುವ ಮರಿಗಳನ್ನು ರಾಯನು ನೋಡಿ, ಸಂತೋಷ ಪಟ್ಟು, ತೆನ್ನಾಲರಾಮಕೃಷ್ಣನು ಮಾತ್ರ ಕುದುರೇ ಮರಿಯ

ನ್ನು ತರಲಿಲ್ಲವೆಂದು ತಿಳಿದು, ಅವನನ್ನು ಕರಿಸಿ—ನೀನು ಯಾಕೆ ತೆಗೆದು ಕೊಂಡು ಬರಲಿಲ್ಲವೆಂದು ಕೇಳಲು; ರಾಮಕೃಷ್ಣನು—ನನ್ನ ಬಳಿಯಲ್ಲಿ ಇರುವ ಕುದುರೇ ಮರಿಯನ್ನು ನಾನು ತರಲಾರೆನು. ನಿಮ್ಮ ಬಳಿಯಲ್ಲಿರುವ ಸೇವಕರಲ್ಲಿ ಒಬ್ಬನನ್ನು ಕಳುಹಿಸಿದರೆ, ತೆಗೆದು ಕೊಂಡು ಬರುವೆನೆಂದು ಹೇಳಲು; ಅದೇ ಮೇರೆ ರಾಯನು ಒಬ್ಬ ಸೇವಕನನ್ನು ಕರಿಸಿ, ರಾಮಕೃಷ್ಣನ ಸಂಗಡ ಕಳುಹಿಸಿದನು. ಆ ರಾವುತನಿಗೆ ಒಂದೂ ಮುಕ್ಕಾಲು ಮೊಳ ಉದ್ದವಾದ ಗಡ್ಡ ಇರುವದು. ಅವನನ್ನು ತನ್ನ ಸಂಗಡ ಕರೆದು ಕೊಂಡು ಹೋಗಿ—ಆ ದ್ವಾರದಿಂದ ಕುದುರೆಯನ್ನು ನೋಡೆಂದು ಹೇಳಿದನು. ಆಗ ಅವನು ಅದೇ ಪ್ರಕಾರ ಕನ್ನದಲ್ಲಿ ಬೊಗ್ಗಿ, ನೋಡಲು; ಆ ಕುದುರೆಯು ಎಂದಿನ ಹಾಗೆ ಹುಲ್ಲು ಕೊಡುತ್ತಾನೆಂದು ತಿಳಿದು, ಅವನ ಗಡ್ಡವನ್ನು ಹಿಡಿದು ಕೊಂಡಿತು. ಆಗ ಆ ರಾವ್ರತನು—ಐಯ್ಯೋ! ದೇವರೇ! ಎಂದು ಅತ್ತನು. ರಾಮಕೃಷ್ಣನು ತ್ವರೆಯಾಗಿ ರಾಯನ ಬಳಿಗೆ ಹೋಗಿ, ಸೇವಕನಿಗೆ ಸಂಭವಿಸಿದ ಆಪತ್ತು ಹೇಳಲು; ರಾಯನು ಅಪ್ಪಾಜಿಯನ್ನು ಸಂಗಡ ಕರೆದು ಕೊಂಡು ಬಂದು, ಕುದುರೆಯನ್ನು ಹೊರಗೆ ತೆಗಿಸಿ, ಅದು ಬಡವಾಗಿರುವದನ್ನು ನೋಡಿ—ಯಾಕೆ ಕುದುರೆ ದುರ್ಬಲವಾಗಿದೆ? ಎಂದು ಕೇಳಲು; ರಾಮಕೃಷ್ಣನು—ಐಯ್ಯಾ, ನಾನು ಈ ಪ್ರಕಾರವಾಗಿ ಇಟ್ಟಿರುವಾಗಲೇ ರಾವುತನ ಗಡ್ಡವನ್ನು ಹಿಡಿದು ಕೊಂಡಿತು. ಚನ್ನಾಗಿ ಪೋಷಿಸಿದ್ದರೆ, ಇನ್ನೇನು ಮಾಡುತ್ತಾ ಇತ್ತೋ? ಎಂದು ಹೇಳಲು; ರಾಯನು ಅವನ ಕುಚೇಷ್ಟೆಗೆ ನಕ್ಕು, ಅರಮನೆಗೆ ಹೋದನು.

25. The Lark and Myna.

೨೫. ಟಿಟ್ಟಿಭ ಪಕ್ಷಿಯನ್ನೂ ಗೊರವಂಕ ಪಕ್ಷಿಯನ್ನೂ ಕುರಿತು.

ಚಂಪಕಾರಣ್ಯವೆಂಬ ವನದಲ್ಲಿ ಒಂದು ಆಲದ ಮರವು ಇರುವದು. ಅದರಲ್ಲಿ ಟಿಟ್ಟಿಭನೆಂಬ ಒಂದು ಪಕ್ಷಿಯು ಗೂಡು ಮಾಡಿ ಕೊಂಡು, ಬಹಳ ದಿವಸಗಳಿಂದ ಇರುವದು. ಒಂದು ದಿನ ಆ ಟಿಟ್ಟಿಭವು ಆಹಾರಾರ್ಥವಾಗಿ ಹೋಗಲು; ಶಕಟನೆಂಬ ಒಂದು ಗೊರವಂಕನು ಆ ಟಿಟ್ಟಿಭನ ಗೂಡನ್ನು ಶೇರಿ ಕೊಂಡು ಇರಲು; ಈ ಟಿಟ್ಟಿಭನು ಬಂದು, ತನ್ನ ಗೂಡನ್ನು ಶೇರಿ ಕೊಂಡು ಇದ್ದ ಗೊರವಂಕನನ್ನು ನೋಡಿ—ನನ್ನ ಗೂಡಿನಲ್ಲಿ ನೀನು ಇರುವದಕ್ಕೆ ಕಾರಣವೇನು? ಎನಲು; ಗೊರವಂಕನು—ಈ ಗೂಡು ನಮ್ಮ ತಂದೆಯ ಕಾಲದಿಂದ ನನ್ನದಾಗಿರುವಾಗ, ನೀನು—ನನ್ನದು ಎಂಬುವದು ಬಹಳ ಚನ್ನಾಯಿ

ತು! ನಿನಗೆ ವಿವೇಕವಿಲ್ಲವೆಂದು, ಟಿಟ್ಟಿಭನನ್ನು ಜರಿಯಲು; ಆ ಟಿಟ್ಟಿಭವು ಆಗ್ರಹ ಪಟ್ಟು—ನಿನಗೆ ವಿವೇಕವಿಲ್ಲ. ನೀನು ಇಂಥ ದುರಾಚಾರವನ್ನು ಮಾಡಿದರೆ, ನಿನಗೆ ತಕ್ಕ ಬುದ್ಧಿಯನ್ನು ಕಲಿಸುವೆನೆಂದು, ಒಬ್ಬರಿಗೊಬ್ಬರಿಗೆ ರೋಷಾವೇಶಗಳು ಹುಟ್ಟಿ, ಕೆಟ್ಟ ಮಾತುಗಳನ್ನು ಆಡಿ ಕೊಂಡು, ತಮ್ಮ ಕುಲದವರ ಬಳಿಗೆ ಬಂದು, ತಮ್ಮ ನ್ಯಾಯವನ್ನು ಹೇಳಿ ಕೊಳ್ಳಲು; ಆ ಪಕ್ಷಿಗಳು ಇಂತೆಂದವು—ನಾವು ಪಕ್ಷಿಗಳು; ನಮ್ಮಗೆ ಮನೆ ಅಂದರೆ ಏನು? ಅಡವಿಯಲ್ಲಿದ್ದ ಫಲಗಳನ್ನು ತಿಂದು ಕೊಂಡು, ವಸತಿಯಾದ ಸ್ಥಳದಲ್ಲಿ ನಿದ್ರೆ ಮಾಡಿ ಕೊಂಡು ಇರ ಬೇಕಲ್ಲದೆ, ಈ ಕಲಹದಿಂದ ಏನು ಪ್ರಯೋಜನವೆಂದು, ಎಷ್ಟು ಪ್ರಕಾರ ತಿಳಿಯ ಹೇಳಿದರೂ, ಕೇಳದೆ, ರಾಜದ್ವಾರಕ್ಕೆ ಹೋಗುವೆವೆಂದು ಗರ್ವದಿಂದ ಅಮರಾವತಿ ಎಂಬ ಪಟ್ಟಣವಾಳುವ ಬಾಹುಬಲನೆಂಬ ರಾಯನ ಬಳಿಗೆ ಹೋದವು.

ಆ ಪಟ್ಟಣವನ್ನು ಆಳುವ ರಾಯನು ತನ್ನ ಶರೀರವು ಪುಷ್ಟಿಯಾಗುವದಕ್ಕೆ ಏನು ಭಕ್ಷಿಸ ಬೇಕೆಂದು, ತನ್ನ ರಾಜ್ಯದಲ್ಲಿ ಇರುವ ವೈದ್ಯರನ್ನು ಕರಿಸಿ ಕೇಳಲು; ಆ ವೈದ್ಯರು—ಎಲೋ, ರಾಯಾ, ತುಪ್ಪದಿಂದ ಬುದ್ಧಿಯೂ, ಹಾಲಿನಿಂದ ಆಯುಸ್ಸೂ, ಶಾಖಗಳಿಂದ ರೋಗವೂ, ಮಾಂಸದಿಂದ ಮಾಂಸವೂ ಅಭಿವೃದ್ಧಿಯಾಗುವದು ಎಂದು, ಶಾಸ್ತ್ರವು ಇರುವದರಿಂದ, ನೀನು ಹಗಲು ಭೋಜನಕ್ಕೆ ಮೃಗಗಳನ್ನೂ, ರಾತ್ರಿ ಭೋಜನಕ್ಕೆ ಪಕ್ಷಿಗಳನ್ನೂ ಭಕ್ಷಿಸೆಂದು ಹೇಳಲು; ರಾಯನು ಬೇಟೆಗಾರರನ್ನು ಕರಿಸಿ, ಮೃಗಗಳನ್ನೂ ಪಕ್ಷಿಗಳನ್ನೂ ತಂದು ಕೊಡುವ ಹಾಗೆ ಕಟ್ಟಳೆಯನ್ನು ಮಾಡಲು; ಅವರು ಅದೇ ಪ್ರಕಾರ ತಂದು ಕೊಡುತ್ತಾ ಇರಲು; ಒಂದು ದಿನ ಬೇಟೆಗಾರರಿಗೆ ಪಕ್ಷಿಗಳು ಶಿಕ್ಕದೆ, ಸಾಯಂಕಾಲದ ಪರ್ಯಂತರವೂ ತಿರಿಗಿ, ಬಂದು ಜೇನು ಹೊರೆಯನ್ನು ಕೈಯಲ್ಲಿ ಹಿಡಿದು ಕೊಂಡು, ರಾಯನ ಸಮುಖಕ್ಕೆ ಬಂದು—ಎಲೋ, ಸ್ವಾಮೀ, ಎಷ್ಟು ಪ್ರಯಾಸ ಪಟ್ಟಾಗ್ಯೂ, ಈ ದಿನ ಪಕ್ಷಿಗಳು ದೊರಿಯದೆ ಹೋದವೆಂದು, ಬಿನ್ನಹವನ್ನು ಮಾಡಲು; ಆ ರಾಯನು ಬೇಟೆಗಾರರ ಮೇಲೆ ಕೋಪಾ ಮಾಡುತ್ತಾ ಇರುವ ಸಮಯದಲ್ಲಿ, ಈ ಟಿಟ್ಟಿಭ ಶಕಟಗಳು ಬರುವದನ್ನು ಕಂಡು, ಊಳಿಗದವರು ಬಿನ್ನಹವನ್ನು ಮಾಡಲು; ಅಲ್ಲಿದ್ದ ಸೇವಕರೊಳಗೆ ಒಬ್ಬನು ಆ ಎರಡು ಪಕ್ಷಿಗಳನ್ನೂ ಹೊಡೆದು, ಅರಮನೆಯ ಒಳಗೆ ಕೊಟ್ಟು ಬಿಟ್ಟನು. ಆದ್ದರಿಂದ ರಾಜಾಸ್ಥಾನಗಳಿಗೆ ಹೋದರೆ, ಈ ಪ್ರಕಾರ ಕೆಟ್ಟು ಹೋಗುವರು.

26. The Ascetic and his hypocritical Disciple.

೨೬. ಸನ್ಯಾಸಿಯನೂ ಅವನ ಕಪಟ ಶಿಷ್ಯನನೂ ಕುರಿತು.

ಕಾವೇರೀ ತೀರದಲ್ಲಿ ಧರ್ಮಪುರವೆಂಬ ಅಗ್ರಹಾರವು ಇರುವದು. ಅಲ್ಲಿ ವೇದಶರ್ಮನೆಂಬ ಯತೀಶ್ವರನು ಮಠದಲ್ಲಿ ನಿವಾಸಾ ಮಾಡಿ ಕೊಂಡು, ಭಿಕ್ಷಾನ್ನಗಳನ್ನು ಉಂಡು ಕೊಂಡು, ಬಹು ಕಾಲದಿಂದ ಅನೇಕ ದ್ರವ್ಯವನ್ನು ಸಂಪಾದಿಸಿ, ಅವುಗಳನ್ನು ಎಲ್ಲಿ ಇಡ ಬೇಕೆಂದು ಯೋಚಿಸಿ—ತಾನು ಉಣ್ಣದೆಯೂ, ಉಡದೆಯೂ, ದಾನ ಧರ್ಮಗಳನ್ನು ಮಾಡದೆಯೂ, ಕೂಡಿಸಿದ ದ್ರವ್ಯಗಳೆಲ್ಲಾ ಅರಸುಗಳಿಂದಾಗಲಿ, ಬೆಂಕಿಯಿಂದಲಾಗಲಿ, ಹೂಳಿಟ್ಟ ಸ್ಥಳದಲ್ಲ್ಯಾಗಲಿ, ನಾಶವಾಗಿ ಹೋಗುವವು ಎಂಬ ನೀತಿ ಇರುವದರಿಂದ, ಹೂಳಿಡದೆ, ತಾನು ಸಂಪಾದಿಸಿದ ದ್ರವ್ಯವೆಲ್ಲವನ್ನು ಕಂಥೆಯಲ್ಲಿ ಹಾಕಿ, ಬೊಂತೆಯನ್ನು ಹೊಲಿದು, ಮೇಲೆ ಹೊದ್ದು ಕೊಂಡು, ನಿಂತ ಕೆಲವು ದ್ರವ್ಯವನ್ನು ದಂಡ ಕೋಲಿನಲ್ಲಿ ತುಂಬಿ, ಕೈಯಲ್ಲಿ ಹಿಡಿದು ಕೊಂಡು, ದಿವಾ ರಾತ್ರಿಗಳಲ್ಲಿಯೂ ಎಚ್ಚರಿಕೆ ತಪ್ಪದೆ, ನೋಡಿ ಕೊಂಡು ಇರುತ್ತಾ ಇರಲು; ಆಷಾಢಭೂತಿ ಎಂಬ ಒಬ್ಬ ಬ್ರಾಹ್ಮಣನು ಈ ವಿವರವನ್ನು ತಿಳಿದು, ಆ ದ್ರವ್ಯವನ್ನು ಸಂಗ್ರಹಿಸ ಬೇಕೆಂದು ಯೋಚಿಸಿ, ಶಿಷ್ಯ ವೇಷವನ್ನು ಹಾಕಿ ಕೊಂಡು, ಆ ಸನ್ಯಾಸಿಯ ಬಳಿಗೆ ಬಂದು, ಭಯ ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ, ಕೈ ಮುಗಿದು, ಅತಿ ವಿನಯದಿಂದ—ಸ್ವಾಮೀ, ತಾನು ಘಳಿಸಿದ ಒಡವೆ ಮನೆಯಲ್ಲೇ ಇರುವದು. ತನ್ನ ಪುತ್ರ ಮಿತ್ರ ಕಳತ್ರಾದಿ ಬಾಂಧವರು ಸ್ಮಶಾನದ ಪರಿಯಂತರವೂ ಬರುವರು. ತಾನು ಮಾಡಿದ ಪಾಪ ಪುಣ್ಯಗಳೆರಡು ಮಾತ್ರ ತನ್ನ ಸಂಗಡಲೇ ಬರುವವು. ಮತ್ತು ಐಶ್ವರ್ಯವು ನೀರಿನ ಗುಳ್ಳೆಯ ಹಾಗೆ ತೋರಿ ಹೋಗುವದು. ಯೌವನವು ಅಸ್ಥಿರವಾದದ್ದು. ಆಯುಸ್ಸು ಶರತ್ಕಾಲದ ಮೇಘದೋಪಾದಿಯಲ್ಲಿ ಘಳಿಗೆ ಘಳಿಗೆಗೂ ನಾಶವಾಗಿ ಹೋಗುವದು. ಆದಕಾರಣ ತಮ್ಮಂಥ ಸತ್ಪುರುಷರ ಸೇವೆಯನ್ನು ಮಾಡಿ, ಕೃತಾರ್ಥನಾಗ ಬೇಕೆಂದು ಹೇಳಿ, ಮತ್ತು—ಸ್ವಾಮೀ, ಮೃತ್ಯುವು ಹುಲಿಯ ಹಾಗೆ ಘರ್ಜಿಸಿ ಕೊಂಡು ಇಧೆ. ರೋಗಗಳು ಶತ್ರುಗಳ ಹಾಗೆ ಸಮಯವನ್ನು ನಿರೀಕ್ಷಿಸಿ ಕೊಂಡು ಇವೆ. ಆಯುಸ್ಸು ಒಡೆದ ಗಡಿಗೆಯಲ್ಲಿ ತುಂಬಿ ಇಟ್ಟ ನೀರಿನ ಹಾಗೆ ಹೋಗುತ್ತಾ ಇರುವದು. ಆದ್ದರಿಂದ ನನ್ನನ್ನು ಶಿಷ್ಯನಾಗಿ ಅಂಗೀಕರಿಸ ಬೇಕೆಂದು, ನಾನಾ ವಿಧವಾದ ತತ್ವ ವಾಕ್ಯಗಳನ್ನು ಹೇಳಲು; ಆ ಯತೀಶ್ವರನು—ಇವನು ಸೇವಾ ಯೋಗ್ಯನೆಂದು ಸಮ್ಮತಿ ಪಟ್ಟು, ಇರು ಎಂದು ಹೇಳಲು; ಆ ಆಷಾಢ

ಭೂತಿಯು ಅತಿ ವಿನಯ ಭಯ ಭಕ್ತಿ ಯುಕ್ತನಾಗಿ, ಈ ಯತೀಶ್ವರನ ಮನಸ್ಸು ತಿಳಿದು, ಕಾಲ ಕಾಲಕ್ಕೆ ಸರಿಯಾಗಿ ಸೇವೆಯನ್ನು ಮಾಡಿ ಕೊಂಡು, ವಿಶ್ವಾಸಿಯಾಗಿ ಇರುತ್ತಾ ಇರಲು; ಒಂದಾನೊಂದು ದಿವಸ ಅಲ್ಲಿಗೆ ಸಮೀಪದಲ್ಲಿ ಇರುವ ಅಗ್ರಹಾರದಿಂದ ಒಬ್ಬ ಬ್ರಾಹ್ಮಣನು ಈ ಸನ್ಯಾಸಿಯನ್ನು ತನ್ನ ಮನೆಗೆ ಭಿಕ್ಷಕ್ಕೆ ಬರ ಬೇಕೆಂದು ಕರೆಯಲು; ಆ ಯತೀಶ್ವರನು ಸಮ್ಮತಿ ಪಟ್ಟು, ಆಷಾಢಭೂತಿ ಎಂಬ ಶಿಷ್ಯನನ್ನು ಸಹ ಕರೆದು ಕೊಂಡು, ಆ ಅಗ್ರಹಾರಕ್ಕೆ ಹೋಗಲು; ಬ್ರಾಹ್ಮಣನು ಅತಿ ವಿನಯದಿಂದ ಭಿಕ್ಷವನ್ನು ಮಾಡಿಸಲು; ಯತಿಯು ಭೋಜನವನ್ನು ಮಾಡಿ, ತನ್ನ ನಿವಾಸವಾದ ಮಠಕ್ಕೆ ಬರುತ್ತಿರಲು; ಆಷಾಢಭೂತಿಯು ಆ ಬ್ರಾಹ್ಮಣನ ಮನೆಯ ಒಂದು ಕಾಚೀ ಪುಳ್ಳೆಯನ್ನು ತನ್ನ ತಲೆಯಲ್ಲಿ ಶಿಕ್ಕಿಸಿ ಕೊಂಡು, ಯತೀಶ್ವರನ ಸಂಗಡ ಸ್ವಲ್ಪ ದೂರ ಬಂದು, ತನ್ನ ಶಿಖೆಯಲ್ಲಿ ಇದ್ದ ತೃಣವನ್ನು ಕೈಗೆ ತೆಗೆದು ಕೊಂಡು, ಸನ್ಯಾಸಿಗೆ ವಂದನೆಯನ್ನು ಮಾಡಿ—ಎಲೋ, ಗುರುರಾಯಾ, ನಾನು ಮಹಾ ಪಾಪಕ್ಕೆ ಒಳಗಾದೆನು. ಆ ಗೃಹಸ್ಥನ ಮನೆಯಲ್ಲಿ ಭೋಜನವನ್ನು ಮಾಡಿ ಕೊಂಡು, ಮಠಕ್ಕೆ ಬರುವ ವೇಳೆಯಲ್ಲಿ ಆತನ ಮನೆಯ ತೃಣವು ನನ್ನ ಶಿಖೆಗೆ ತಗಲಿ ಬಂತು. ಈ ಪಾಪವನ್ನು ನಾನು ಯಾವ ಪ್ರಕಾರ ಕಳೆದು ಕೊಳ್ಳುವೆನೆಂದು ದುಃಖಿಸಲು; ಆ ಯತೀಶ್ವರನು ಆಶ್ಚರ್ಯ ಪಟ್ಟು—ತೃಣದಿಂದ ಬರುವ ಪಾತಕವೇನು? ಆದರೂ ಇದು ಅಜ್ಞಾನ ಕೃತ. ಇದಕ್ಕೆ ದೋಷವಿಲ್ಲ ಅನ್ನಲು; ಆಷಾಢಭೂತಿಯು—ಸ್ವಾಮಿ, ಪ್ರಾಜ್ಞರು ವಿಷವನ್ನು ವಿಷವೆಂದು ಹೇಳುವದಿಲ್ಲ. ಆದರೆ ಪರರ ಒಡವೆಯೇ ವಿಷವೆಂದು ಹೇಳುತ್ತಾರೆ. ಯಾಕೆಂದರೆ ವಿಷವು ಒಬ್ಬನನ್ನು ಕೊಲ್ಲುತ್ತದೆ. ಪರರ ಸೊತ್ತು ಪುತ್ರ ಪೌತ್ರರನ್ನು ಸಹ ಕೊಲ್ಲುತ್ತದೆ, ಎಂದು ನೀತಿ ಉಂಟು. ಆದಕಾರಣ ಸ್ವಪ್ನದಲ್ಲ್ಯಾದರೂ ಪರರ ಒಡವೆಗೆ ಆಶೆ ಮಾಡ ಬಾರದು ಎಂದು ಹೇಳಿ, ಈ ತೃಣವನ್ನು ಆ ಬ್ರಾಹ್ಮಣನ ಮನೆಗೆ ಶೇರಿಸಿ, ಬರುತ್ತೇನೆ ಎಂದು, ಗುರುವಿನ ಅಪ್ಪಣೆಯನ್ನು ತೆಗೆದು ಕೊಂಡು, ಸ್ವಲ್ಪ ದೂರ ಬಂದು, ಒಂದು ಮರದ ಕೆಳಗೆ ಸ್ವಲ್ಪ ಹೊತ್ತು ಕೂತು ಇದ್ದು, ಭಾವಿಯಲ್ಲಿ ಸ್ನಾನಾ ಮಾಡಿ ಕೊಂಡು, ಬಂದು, ಯತೀಶ್ವರನಿಗೆ ವಂದನೆಯನ್ನು ಮಾಡಿ, ನಿಲ್ಲಲು; ಆ ಸನ್ಯಾಸಿಯು ಆಷಾಢಭೂತಿಯ ಮನೋನಿಷ್ಕರ್ಷೆಗೆ ಮೆಚ್ಚಿ, ಅತಿ ಪ್ರೀತಿಯುಳ್ಳವನಾಗಿ ಇದ್ದನು.

ಕೆಲವು ದಿನಗಳಾದ ಮೇಲೆ, ಆ ಯತೀಶ್ವರನು ಗಂಗಾ ಸ್ನಾನ ಮಾಡ ಬೇಕೆಂದು ಕಾಶೀ ಯಾತ್ರೆಯನ್ನು ಹೊರಟು, ಪಯಣ ಗತಿಯಿಂದ ನಾನಾ ಜನಪದ

ಗಳನ್ನು ದಾಟಿ ಬಂದು, ಗೊಂಡಾರಣ್ಯಕ್ಕೆ ಬಂದು, ಅಲ್ಲಿ ತಾನು ಶೌಚಕ್ಕೆ ಹೋಗ ಬೇಕಾದದರಿಂದ, ಹೊದ್ದಿದ್ದ ಬೊಂತೆಯನ್ನೂ ದಂಡ ಕೋಲನ್ನೂ ಈ ಆಷಾಢಭೂತಿಯ ಕೈಗೆ ಕೊಟ್ಟು, ಒಂದು ಮರದ ಕೆಳಗೆ ಕೂತಿರ ಹೇಳಿ, ಸ್ವಲ್ಪ ದೂರ ಹೋಗಿ, ಬಹಿರ್ಭೂಮಿಯಲ್ಲಿ ಕುಳಿತಿರಲು; ಅಲ್ಲಿ ಎರಡು ಟಗರುಗಳು ರಾಗದ್ವೇಷದಿಂದ ಪ್ರೋಟ್ಲಾಡಿ, ತಲೆಗಳು ಒಡೆದು, ರಕ್ತ ಸುರಿಯುತ್ತಾ ಇರಲು; ಅದನ್ನು ಕಂಡು, ಬುದ್ಧಿ ಇಲ್ಲದ ಒಂದು ಜಂಬುಕವು ಆ ಟಗರುಗಳ ತಲೆಗಳಿಂದ ಬೀಳುವ ರಕ್ತವನ್ನು ಪಾನಾ ಮಾಡ ಬೇಕೆಂದು, ಆಶೆಯಿಂದ ಆ ಎರಡು ಟಗರುಗಳ ನಡುವೆ ಬಂದು, ನಿಲ್ಲಲು; ಆಗ ಟಗರುಗಳೆರಡೂ ಹಿಂದಕ್ಕೆ ತೆಗೆದು, ಅತಿ ರೋಷದಿಂದ ಮುಂದಕ್ಕೆ ಬಂದು, ತಾಕಲು; ಈ ಜಂಬುಕವು ನಡುವೆ ಸಿಕ್ಕಿ, ಮೃತವಾಯಿತು. ಈ ಯತೀಶ್ವರನು ಆ ವಿನೋದವನ್ನು ನೋಡಿ ಕೊಂಡು, ಆಲಸ್ಯವನ್ನು ಮಾಡಲು; ಆಷಾಢಭೂತಿಯು ಆ ವಸ್ತುಗಳನ್ನು ತೆಗೆದು ಕೊಂಡು, ಮಾರ್ಗವನ್ನು ಬಿಟ್ಟು, ಅರಣ್ಯ ಮಾರ್ಗದಲ್ಲಿ ಹೊರಟು, ತನ್ನ ನಿವಾಸಕ್ಕೆ ಹೋದನು. ಇತ್ತಲೀ ಯತೀಶ್ವರನು ಶೌಚವಾದ ತರುವಾಯ ಕಾಲು ತೊಳೆದು ಕೊಂಡು, ನದಿಯಲ್ಲಿ ಸ್ನಾನವನ್ನು ಮಾಡಿ, ಆಷಾಢಭೂತಿಯನ್ನು ಕೂರಿಸಿದ್ದ ಮರದ ತಳಕ್ಕೆ ಬಂದು, ಅವನನ್ನು ಕಾಣದೆ, ನಾಲ್ಕು ದಿಕ್ಕುಗಳನ್ನೂ ನೋಡಿ, ಕೂಗಿ, ಎಲ್ಲಿ ಹುಡುಕಿದರೂ ಅವನನ್ನು ಕಾಣದೆ, ತನ್ನೊಳಗೆ ತಾನೇ ಹೇಳಿ ಕೊಂಡನು, ಏನಂದರೆ—ದ್ರವ್ಯ ಸಂಪಾದಿಸುವದು ಒಂದು ದುಖ್ಖ; ಅದನ್ನು ರಕ್ಷಿಸುವದು ಒಂದು ದುಖ್ಖ; ಅದು ನಾಶವಾದರೆ ಒಂದು ದುಖ್ಖ; ಅದು ಖರ್ಚಾದರೆ ಒಂದು ದುಖ್ಖ. ಆದ್ದರಿಂದ ದ್ರವ್ಯವು ದುಃಖಕ್ಕೆ ಕಾರಣವಾದದ್ದು ಎಂದು, ನಾನಾ ಪ್ರಕಾರವಾಗಿ ಪ್ರಲಾಪಿಸಿ, ಸಂಕಟ ಪಡುತ್ತಾ, ಹೊರಟು ಹೋದನು.

27. The Brahman and Frog.

೨೭. ಬ್ರಾಹ್ಮಣನನ್ನೂ ಮಂಡೂಕವನ್ನೂ ಕುರಿತು.

ಕಾವೇರೀ ತೀರದಲ್ಲಿ ವಿಶಾಲವತಿ ಎಂಬ ಪಟ್ಣವಿರುವದು. ಆ ಪಟ್ಟಣ ಪ್ರಾಂತ್ಯದಲ್ಲಿ ಒಂದು ಅಗ್ರಹಾರ ಇರುವದು. ಆ ಅಗ್ರಹಾರದಲ್ಲಿ ಕೃತವರ್ಮನೆಂಬ ಬ್ರಾಹ್ಮಣನು ಸಂಸಾರ ಯುಕ್ತನಾಗಿ ಸಂತಾನವನ್ನು ಪಡೆದು, ವೈರಾಗ್ಯದಿಂದ ಸ್ನಾನವನ್ನು ಮಾಡ ಬೇಕೆಂದು, ಕಾಶೀ ಯಾತ್ರೆಗೆ ಹೊರಟು, ಗೊಂಡಾ

ರಣ್ಯವನ್ನು ಹೊಕ್ಕು, ಬರುತ್ತಾ ಇದ್ದು, ಮಾರ್ಗದಲ್ಲಿ ಒಂದು ತಟಾಕವನ್ನು ಕಂಡು, ಅದರಲ್ಲಿ ಸ್ನಾನ ಸಂಧ್ಯಾವಂದನೆ ಅನುಷ್ಠಾನಗಳನ್ನು ಮಾಡುವ ಸಮಯದೊಳಗೆ, ಆ ತಟಾಕದಲ್ಲಿ ಇದ್ದ ಮಂಡೂಕವು ಈ ವಿಪ್ರನನ್ನು ನೋಡಿ—ನನ್ನನ್ನು ತೆಗೆದು ಕೊಂಡು ಹೋಗಿ, ಗಂಗೆಯಲ್ಲಿ ಬಿಡಲಾರೆಯಾ? ನಿನಗೆ ಪ್ರತ್ಯುಪಕಾರವನ್ನು ಮಾಡುತ್ತೇನೆಂದು ಹೇಳಲು; ಆ ಬ್ರಾಹ್ಮಣನು ಮಂಡೂಕವನ್ನು ನೋಡಿ, ನಿನ್ನಂಥ ಸ್ವಲ್ಪ ಜೀವಿಗಳು ಮನುಷ್ಯರಿಗೆ ಉಪಕಾರವನ್ನು ಮಾಡುವದುಂಟೇ? ಎನಲು; ಆ ಮಂಡೂಕವು ಒಂದು ಕಥೆಯನ್ನು ಹೇಳಿತು. ಹ್ಯಾಗಂದರೆ—

23. The Elephant and Rats.

೨೩. ಆನೆ ಇಲಿಗಳ ಕಥೆ.

ಯಮುನಾ ತೀರದಲ್ಲಿ ಪ್ರಜಾವತಿ ಎಂಬ ಅಗ್ರಹಾರದೊಳಗೆ ವೇದಪಾಲನೆಂಬ ರಾಯನು ಬ್ರಾಹ್ಮಣರನ್ನು ಅನೇಕ ವಿಧದಿಂದ ರಕ್ಷಿಸಿ, ಪೂಜಿಸುತ್ತಾ, ಕೀರ್ತಿ ಸಂಪಾದಿಸಿ ಕೊಂಡು, ಪುಣ್ಯವಂತನಾಗಿ ಇರಲು; ಆ ರಾಯನು ಒಂದು ದಿನ ಬೇಟೆಗೋಸ್ಕರ ಹೊರಟು, ದುಷ್ಟ ಜಂತುಗಳನ್ನು ಸಂಹರಿಸಿ ಬರುವ ಮಾರ್ಗದೊಳಗೆ ಸತ್ವಸೇನನೆಂಬ ಒಂದು ಮದದಾನೆಯು ಆ ರಾಯನ ಸೈನ್ಯದ ಮೇಲೆ ಬಿದ್ದು, ನೂರಾರು ಮಂದಿ ಜನರನ್ನು ಕೊಂದು, ಹೋಗಲು; ರಾಯನು ಕೋಪಾರೂಢನಾಗಿ, ತನ್ನ ಗೇಶದಲ್ಲಿ ಇದ್ದ ಕಾಮಾಟದ ಜನರನ್ನು ಕರಿಸಿ, ಆನೆ ಇರುವ ಸ್ಥಳಕ್ಕೆ ಬಂದು, ವಿಸ್ತಾರವಾದ ವಾದವನ್ನು ತೆಗಿಸಿ, ಕಟ್ಟಿಗೆ, ಸೊಪ್ಪು, ಮಣ್ಣು ಸಹ ಆ ವಾದದ ಮೇಲೆ ಹಂದರವನ್ನು ಹಾಕಿಸಿ, ಸುತ್ತಲು ಜನಗಳು ಬೆದರಿಸುತ್ತಾ ಬರಲು; ಆ ಗಜರಾಜನು ಈ ಸೈನ್ಯವೆಲ್ಲವನ್ನು ಕೊಲ್ಲುವೆನೆಂದು ಮಹಾ ರೋಷಾವೇಶದಿಂದ ಓಡಿ ಬಂದು, ವಾದದಲ್ಲಿ ಬೀಳಲು; ಆ ರಾಯನು ಬಂದು, ನೋಡಿ, ಮೂರು ದಿನಗಳ ಮೇಲೆ ಇದನ್ನು ತನ್ನ ಪಟ್ಣಕ್ಕೆ ತೆಗೆದು ಕೊಂಡು ಹೋಗುವೆನೆಂದು, ಚತುರಂಗ ಬಲದೊಡನೆ ತನ್ನ ಪಟ್ಟಣಕ್ಕೆ ಹೋದನು. ಇತ್ತಲು ಈ ಗಜರಾಜನು ವಾದದಲ್ಲಿ ಬಿದ್ದು, ಏಳಲಾರದೆ, ಮಹಾ ಸಂಕಟ ಪಡುತ್ತಾ ಇರುವ ಸಮಯದೊಳಗೆ, ಒಬ್ಬ ಬ್ರಾಹ್ಮಣನು ಆ ಮಾರ್ಗದಿಂದ ಬರುವದನ್ನು ಕಂಡು—ಎಲೈ, ಬ್ರಾಹ್ಮಣೋತ್ತಮನೇ, ನನ್ನನ್ನು ಹೊರಗೆ ತೆಗಿಯಲಾರಿಯಾ? ಎಂದು ಬೇಡಿ ಕೊಳ್ಳುವ ಆ ಆನೆಯನ್ನು ನೋಡಿ,—ನಾನು ಅಶಕ್ತನು; ನಿನ್ನನ್ನು ಹೊರಡ ತೆಗಿಯುವ ಸಾಮರ್ಥ್ಯವಿಲ್ಲ.

ನೀನು ಹುಟ್ಟಿದಾರಭ್ಯ ಯಾರಿಗಾದರೂ ಉಪಕಾರ ಮಾಡಿದ್ದು ಇಲ್ಲವೇ? ಎನ್ನಲು; ಆ ಗಜವು ಇಂತೆಂದುದು—ಎಲೈ, ಬ್ರಾಹ್ಮಣನೇ, ನಾನು ನನ್ನ ಮದೋನ್ಮತ್ತದಿಂದ ಲಕ್ಷ್ಯವಿಲ್ಲದೆ ಯಾರಿಗೂ ಉಪಕಾರ ಮಾಡಲಿಲ್ಲ. ಆದರೆ ಒಂದು ದಿನ ಇಲಿಗಳಿಗೆ ಉಪಕಾರವನ್ನು ಮಾಡಿ ಇದ್ದೇನೆ. ಅದು ಹ್ಯಾಗಂದರೆ—ಕಾಳಂಗ ದೇಶದೊಳಗೆ ಇಲಿಗಳು ಹೆಚ್ಚಾಗಿ ಉಪದ್ರ ಮಾಡಲು; ಸಕಲ ಪ್ರಜೆಗಳು ಆ ಇಲಿಗಳನ್ನು ಹಿಡಿದು, ಭಾಂಡಗಳಲ್ಲಿ ತುಂಬಿ, ಬಾಯಿ ಕಟ್ಟಿ, ಅರಣ್ಯದಲ್ಲಿ ಇಟ್ಟು, ಹೋಗಲು; ನಾನು ಆ ಮಾರ್ಗದಲ್ಲಿ ಬರುವದನ್ನು ಇಲಿಗಳು ಕಂಡು, ನನ್ನನ್ನು ಪ್ರಾರ್ಥಿಸಿ, ಕರೆದು—ಎಲೋ, ಗಜರಾಜಾ, ನಮ್ಮ ಬಂಧನವನ್ನು ಬಿಡಿಸಲಾರಿಯಾ? ನಾವೂ ನಿನಗೆ ಒಂದು ಕಾಲದಲ್ಲಿ ಉಪಕಾರವನ್ನು ಮಾಡುವೆವು ಎನ್ನಲು;—ನೀವು ಮಾಡುವಂಥ ಉಪಕಾರವೇನು? ಎಂದು ನನ್ನಲ್ಲಿ ಅಂದು ಕೊಂಡು, ಆ ಗಡಿಗೆಗಳೆಲ್ಲವನ್ನು ಒಡೆಯ ಬಡಿಯಲು; ಅದರೊಳಗಿದ್ದ ಸಮಸ್ತ ಮೂಷಿಕಗಳು ಹೊರಗೆ ಬಂದು, ನನ್ನನ್ನು ಕೊಂಡಾಡಿ—ಆಪತ್ಕಾಲದಲ್ಲಿ ನಮ್ಮನ್ನು ನೆನಿ ಎಂದು ಹೇಳಿ, ಹೋದವು, ಎನಲು; ಈ ಬ್ರಾಹ್ಮಣನು—ಮೂಷಿಕಗಳನ್ನೇ ನೆನಿ ಎಂದು ಹೇಳಿ, ಹೋಗಲು; ಈ ಗಜರಾಜನು ಆ ಇಲಿಗಳನ್ನು ನೆನಿಯಲು; ಆ ಮೂಷಿಕಗಳು ತಮ್ಮ ಕುಲ ಕೋಟಿಯನ್ನು ಕೂಡಿ ಕೊಂಡು, ಅತಿ ವೇಗದಿಂದ ಬಂದು, ವಾದದಲ್ಲಿ ಬಿದ್ದಿದ್ದ ಆನೆಯನ್ನು ನೋಡಿ—ಎಲೋ, ಗಜರಾಜಾ, ಧೈರ್ಯಂ ಸರ್ವತ್ರ ಸಾಧಕಂ ಎಂಬ ನೀತಿ ಇರುವದರಿಂದ, ನೀನು ಧೈರ್ಯವನ್ನು ಬಿಡಬೇಡವೆಂದು ಹೇಳಿ, ಇಲಿಗಳೆಲ್ಲಾ ಕೂಡಿ, ಮಣ್ಣು ತೋಡಿ, ಆ ವಾದವನ್ನು ಹೂಳಿ, ಆನೆಯನ್ನು ಹೊರಡಿಸಲು; ಆ ಗಜರಾಜನು ಮೂಷಿಕಗಳನ್ನು ಕೊಂಡಾಡಿ, ತನ್ನ ನಿವಾಸಕ್ಕೆ ಹೋಯಿತು.

29. The King and Rats.

೨೯. ಅರಸನನ್ನೂ ಇಲಿಗಳನ್ನೂ ಕುರಿತ ಕಥೆ.

ಮರು ದಿವಸ ವೇದಶೀಲನೆಂಬ ರಾಯನು ಆನೆಯನ್ನು ತನ್ನ ಪಟ್ಣಕ್ಕೆ ತರ ಬೇಕೆಂದು ಸಕಲ ಸನ್ನಾಹದಿಂದ ಅರಣ್ಯಕ್ಕೆ ಬಂದು, ವಾದದಲ್ಲಿ ಆನೆ ಇಲ್ಲದ್ದರಿಂದ ವಿಚಾರ ಪಡುತ್ತಿರಲು; ಆತನ ಮಂತ್ರಿಯು ರಾಯನನ್ನು ನೋಡಿ—ಅಯ್ಯಾ, ಮಹಾರಾಯಾ, ಈ ಆನೆಯನ್ನು ಮೂಷಿಕಗಳು ಹೊರಡಿಸಿ ಕೊಂಡು ಹೋದವು ಎಂದು ಹೇಳಲು; ರಾಯನು ಕೋಪಾರೂಢನಾಗಿ, ತನ್ನ ದೇ

ಶದಲ್ಲಿ ಇರುವ ಪ್ರಜೆಗಳೆಲ್ಲರನ್ನು ಕರಿಸಿ, ಮೂಷಿಕಗಳನ್ನು ಸಂಹರಿಸಿರೆಂದು ನೇಮಿಸಿ, ಕಳುಹಿಸಲು; ಸರ್ವ ಪ್ರಜೆಗಳು ಬೋನುಗಳಿಂದಲೂ ಮಂತ್ರ ತಂತ್ರಗಳಿಂದಲೂ ವಿಷ ಪ್ರಯೋಗಗಳಿಂದಲೂ ಮೂಷಿಕ ನಿಗ್ರಹವನ್ನು ಮಾಡುತ್ತಾ ಇರಲು; ಸಮಸ್ತ ಮೂಷಿಕ ಸಮೂಹವು ತಮಗೆ ಯಜಮಾನನಾದ ಬುದ್ಧಿವಂತನೆಂಬ ಮೂಷಿಕದ ಬಳಿಗೆ ಬಂದು, ತಮ್ಮ ವಿಪತ್ತು ಹೇಳಿ ಕೊಳ್ಳಲು; ಆ ಮೂಷಿಕ ರಾಜನು ಅವುಗಳನ್ನು ಸಂತೈಸಿ, ನಿಮ್ಮ ವಿಪತ್ತು ಪರಿಹರಿಸುವೆನೆಂದು ಅಭಯವನ್ನು ಕೊಟ್ಟು, ಆ ದಿನ ರಾತ್ರಿಯಲ್ಲಿ ರಾಯನ ಮೇಲು ಮಾಳಿಗೆಯಲ್ಲಿ ಅಡಗಿರಲು; ಈ ರಾಯನು ಆ ದಿನ ರಾತ್ರಿ ಮಜ್ಜನ ಭೋಜನಾದಿಗಳನ್ನು ತೀರಿಸಿ ಕೊಂಡು, ಕೇಳಿಕಾ ಗೃಹಕ್ಕೆ ಬಂದು, ಮಣಿ ಮಂಚದ ಮೇಲೆ ಮಲಗಿರುವ ಸಮಯದಲ್ಲಿ, ಆ ಇಲಿ ರಾಯನು ಧೊರೆಯ ಸಮೀಪಕ್ಕೆ ಬಂದು—ಎಲೋ, ರಾಯಾ, ಮೂಷಿಕ ನಿಗ್ರಹಾ ಮಾಡಿದ್ದರಿಂದ ನಿನಗೆ ಬರುವ ಆದಾಯವೇನು? ನೀನು ಅವಿವೇಕಿಯು. ಹ್ಯಾಗೆಂದರೆ, ನಾವು ಆನೆಗೆ ಉಪಕಾರವನ್ನು ಮಾಡಿದವರು. ನಿನಗೆ ಉಪಕಾರವನ್ನು ಮಾಡಲಾರೆವೇ? ಎಂದು ಹೇಳುವ ಇಲಿ ರಾಜನ ವಾಕ್ಯವನ್ನು ಕೇಳಿ, ಇದರ ಮಾತು ನಿಜವೆಂದು ನಿಶ್ಚಯಿಸಿ—ಎಲೋ, ಇಲಿರಾಜಾ, ಇನ್ನು ಮೇಲೆ ಇಲಿಗಳನ್ನು ಕೊಲ್ಲಿಸುವದಿಲ್ಲ ಎಂದು ಅಭಯವನ್ನು ಕೊಟ್ಟು, ಕಳುಹಿಸಿ, ಮೂಷಿಕ ಹಿಂಸೆ ಮಾಡದ ಹಾಗೆ ಪ್ರಜೆಗಳಿಗೆ ಕಟ್ಟು ಮಾಡಿಸಿ, ಸುಖದಿಂದಿರುತ್ತಿರಲು; ಕೆಲವು ದಿನಗಳ ಮೇಲೆ ಪರ ರಾಯರ ದಂಡು ಬಂದು, ಪಟ್ಣಕ್ಕೆ ಸುತ್ತು ಜೇರು ಮುತ್ತಿಗೆಯನ್ನು ಹಾಕಿ, ಬಹಳ ಉಪದ್ರವ ಪಡಿಸಲು; ಆ ರಾಯನು ನಿರ್ವಹಿಸಲಾರದೆ, ಚಿಂತಾಕ್ರಾಂತನಾಗಿ, ಆಲೋಚನೆ ಮಾಡಿ, ಮೂಷಿಕ ವಾಕ್ಯವನ್ನು ನೆನದು, ಮನಸ್ಸಿನಲ್ಲಿ ಇಲಿರಾಜನನ್ನು ಸ್ಮರಿಸಲು; ಆ ಮೂಷಿಕ ರಾಜನು ತನ್ನ ಸಮೂಹದೊಡನೆ ಬಂದು, ರಾಯನ ಮನೋಗತ ವರ್ತಮಾನವನ್ನು ತಿಳಿದು, ರಾಯನಿಗೆ—ಹೆದರ ಬೇಡವೆಂದು ನಂಬಿಗೆಯನ್ನು ಕೊಟ್ಟು, ಆ ದಿನ ರಾತ್ರಿಯಲ್ಲಿ ತನ್ನ ಸಮೂಹದ ಕೂಡ ದಂಡು ಪಾಳ್ಯವನ್ನು ಹೊಕ್ಕು, ಭೇರಿಗಳ ಚರ್ಮಗಳನ್ನೆಲ್ಲಾ ಕಡಿದು, ಆನೆ ಕುದುರೆಗಳ ಮುಸ್ತೈದೆಗಳನ್ನೆಲ್ಲಾ ಕತ್ತರಿಸಿ, ಆಯುಧಗಳ ಒರೆಗಳೆಲ್ಲವನ್ನು ಪುಡಿ ಪುಡಿ ಮಾಡಿ, ನಾನಾ ವಿಧ ಚಿತ್ರ ವಿಚಿತ್ರ ವಸ್ತ್ರಗಳನ್ನೆಲ್ಲಾ ಶತ ಸಹಸ್ರ ಛಿದ್ರಗಳು ಮಾಡಿ, ದಂಡಿಗೆ ತಂದು ಇದ್ದ ಸಾಮಗ್ರಿಗಳನ್ನೆಲ್ಲಾ ಭಕ್ಷಿಸಿ, ಕುದುರೆಗಳಿಗೆ ಕಟ್ಟಿ ಇದ್ದ ಅಗಾಡಿ ಪಿಛಾಡಿಗಳನ್ನೆಲ್ಲಾ ಕತ್ತರಿಸಿ, ಇನ್ನೂ ಬಹು ಪ್ರಕಾರವಾಗಿ ಉಪದ್ರಗಳನ್ನು ಮಾಡಿ, ಈ ವಿವರವನ್ನು ರಾ

ಯನಿಗೆ ಹೇಳಿ, ಇಲಿಗಳೆಲ್ಲಾ ತಮ್ಮ ತಮ್ಮ ನಿವಾಸಗಳಿಗೆ ಹೋದವು. ಮರು ದಿವಸ ಆ ದಂಡಿನವರು ನಿದ್ರೆ ತಿಳಿದೆದ್ದು, ಈ ದಿನ ಕೋಟೇ ಹಲ್ಲಾ ಮಾಡ ಬೇಕೆಂದು ಪ್ರಯತ್ನಾ ಮಾಡಲು; ಒಡೆದ ಭೇರಿಗಳನ್ನೂ, ಶತ ಛಿದ್ರಗಳಾದ ವಸ್ತ್ರಗಳನ್ನೂ, ನಲಿ ನಲಿಯಾದ ಹಲ್ಲಣಗಳನ್ನೂ, ಪುಡಿ ಪುಡಿಯಾದ ಬಿಲ್ಲುಗಳನ್ನೂ, ಖಂಡಿತವಾದ ಸಕಲ ಪದಾರ್ಥಗಳನ್ನೂ ನೋಡಿ, ಆಶ್ಚರ್ಯ ಪಟ್ಟು—ಈ ರಾಯನು ಸರ್ವಜ್ಞನಾದ ದೇವರ ಭಕ್ತನೆಂದು ಭಯ ಪಟ್ಟು, ಎಲ್ಲರು ಪಲಾಯನವಾಗಿ ಹೋದರು ಎಂದು, ಈ ಕಥೆಯನ್ನೂ ಹೇಳಲು; ಆ ಬ್ರಾಹ್ಮಣನು ಸಂತೋಷ ಪಟ್ಟು, ಆ ಮಂಡೂಕವನ್ನು ತನ್ನ ಕಮಂಡಲದಲ್ಲಿ ಇಟ್ಟು ಕೊಂಡು, ಪಯಣ ಗತಿಯಿಂದ ಬರುತ್ತಿರಲು—

ಒಂದು ದಿನ ಬಿಸಲಲ್ಲಿ ಒಂದು ಅರಣ್ಯದಲ್ಲಿ ಬರುತ್ತಾ, ಅಲಸಿ, ಒಂದು ವೃಕ್ಷದ ಕೆಳಗೆ ಕುಳಿತು ಕೊಂಡನು. ಆ ವೃಕ್ಷದ ಮಹತ್ತು ಏನಂದರೆ—ಯಾರಾದರೂ ಕೆಳಗೆ ಕೂತು ಕೊಂಡರೆ, ನಿದ್ರೆ ಬರುವದು. ಆ ಮರದ ಮೇಲೆ ಕಾಷ್ಟಮುಖನೆಂಬ ಒಂದು ವಾಯಸವು ಗೂಡು ಮಾಡಿ ಕೊಂಡಿರುವದು. ಹೀಗೆ ನಿದ್ರೆ ಹೋಗುವವನನ್ನು ಕಂಡು, ಆ ವಾಯಸವು ಕೂಗುವದು. ಆಗಲೇ ಅದೇ ಮರದಲ್ಲಿ ವಾಸವಾಗಿರುವ ಕಾರ್ಕೋಟಕನೆಂಬ ಸರ್ಪವು ಬಂದು, ಕಚ್ಚಿ ಹೋಗುವದು. ಆ ವಾಯಸವು ತನ್ನ ಕುಲ ಕೋಟಿಯೊಡನೆ ಬಂದು, ಭಕ್ಷಿಸುವದು. ಈ ಪ್ರಕಾರ ಬಹು ದಿವಸದಿಂದ ಆ ವಾಯಸವೂ ಸರ್ಪವೂ ಇಷ್ಟದಿಂದ ಇರುತ್ತಿದ್ದವು. ಆ ವೃಕ್ಷದ ಕೆಳಗೆ ಈ ಬ್ರಾಹ್ಮಣನು ಮೈ ಮರದು, ನಿದ್ದೆ ಹೋಗಲು; ಆ ವೃಕ್ಷದ ಮೇಲಿದ್ದ ವಾಯಸವು ಕೂಗಲು; ಕಾರ್ಕೋಟಕನೆಂಬ ಸರ್ಪವು ಬಂದು, ಈ ಬ್ರಾಹ್ಮಣನನ್ನು ಕಚ್ಚಿ ಹೋಗಲು; ಆ ವಾಯಸವು, ಬ್ರಾಹ್ಮಣನು ಮೃತವಾದನೋ, ಇಲ್ಲವೋ, ಎಂದು ನೋಡುವ ಅಪೇಕ್ಷೆಯಿಂದ ಅವನ ಸಮೀಪದಲ್ಲಿದ್ದ ಕಮಂಡಲದ ಮೇಲೆ ಕುಳಿತು, ನೋಡಿ, ಮೃತವಾದನೆಂದು ನಿಶ್ಚಯಿಸಿ, ದೈವಗತಿಯಿಂದ ತನಗೆ ದಾಹವಾಗಲು; ಆ ಕಮಂಡಲದಲ್ಲಿ ನೀರು ಕುಡಿಯುವದಕ್ಕೆ ಬಯಸಿ, ಕಮಂಡಲದಲ್ಲಿ ತನ್ನ ಮೂತಿಯನ್ನು ಇಡಲು; ಅದರಲ್ಲಿದ್ದ ಮಂಡೂಕವು ಈ ಬ್ರಾಹ್ಮಣನ ಮರಣವನ್ನು ತಿಳಿದು ಇದ್ದ ಕಾರಣ, ಆ ವಾಯಸದ ಕೊರಳನ್ನು ಘಟ್ಟಿಯಾಗಿ ಕಚ್ಚಿ, ಹಿಡಿದು ಕೊಂಡು—ಎಲೋ, ವಾಯಸನೇ, ನನಗೆ ರಕ್ಷಕನಾದ ವಿಪ್ರನನ್ನು ಬದುಕಿಸಿ ಕೊಟ್ಟರೆ, ನಿನ್ನನ್ನು ಬಿಡುವೆನು. ಇಲ್ಲದಿದ್ದರೆ, ನಿನ್ನ ಪ್ರಾಣವನ್ನು ಕೊಲ್ಲುವೆನೆಂದು ಹೇಳಲು; ವಾಯಸವು ಭಯ ಪಟ್ಟು,

ತನ್ನವರನ್ನು ಕೂಗಿ, ಈಗ ತನಗೆ ಬಂದಿರುವ ವಿಪತ್ತನ್ನು ಕಾರ್ಕೋಟಕ
ನೊಡನೆ ಹೇಳಿ, ಕರೆದು ಕೊಂಡು ಬನ್ನಿ ಎಂದು ಹೇಳಿ, ಕಳುಹಿಸಲು; ಆ
ವಾಯಸನ ಮರಿಗಳು ಸರ್ಪದೊಡನೆ ಈ ಸಂಗತಿಯನ್ನು ಹೇಳಿ, ಮೊರೆ ಇ
ಡಲು; ಕಾರ್ಕೋಟಕನು ತನ್ನ ಸ್ನೇಹಿತನಿಗೆ ವಿಪತ್ತು ಬಂತೆಂದು ಅತಿ ವೇ
ಗದಿಂದ ಹೊರಟು ಬಂದು, ಬ್ರಾಹ್ಮಣನ ತಲೆಗೆ ಏರಿ ಇದ್ದ ವಿಷವೆಲ್ಲವನ್ನು
ಹೀರಿ ಕೊಂಡು, ಹೋಗಲು; ಆ ಬ್ರಾಹ್ಮಣನು ನಿದ್ರೆ ತಿಳಿದವನ ಹಾಗೆ ಎ
ದ್ದು, ಕೂತು ಕೊಂಡು, ತನ್ನ ಪ್ರಾಣವನ್ನು ಬದುಕಿಸಿದ ಮಂಡೂಕನನ್ನು
ಕೊಂಡಾಡಿ—ಈ ಕಾಗೆಯನ್ನು ಬಿಟ್ಟು ಬಿಡು ಎಂದು ಹೇಳಲು; ಆ ವಿಪ್ರನ
ನ್ನು ನೋಡಿ, ಕಪ್ಪೆಯು—ಎಲೋ, ಮರುಳು ಬ್ರಾಹ್ಮಣಾ, ಈ ದುಷ್ಟ ಕಾ
ಗೆಯನ್ನು ಬಿಟ್ಟರೆ, ಸಕಲ ಪ್ರಾಣಿಗಳನ್ನು ಕೊಂದ ಪಾಪಕ್ಕೆ ಒಳಗಾಗುವೆವು
ಎಂದು ಹೇಳಿ, ಒಂದು ಕಥೆಯನ್ನು ಹೇಳಿತು. ಏನಂದರೆ—

30. The Brahman and Crocodile.
೩೦. ಬ್ರಾಹ್ಮಣನನ್ನೂ ಮೊಸಳೆಯನ್ನೂ ಕುರಿತ ಕಥೆ.

ಗೋದಾವರೀ ತೀರದಲ್ಲಿ ರಾಮಪುರವೆಂಬ ಅಗ್ರಹಾರವು ಇರುವದು. ಅಲ್ಲಿ
ಕಾಲಶರ್ಮನೆಂಬ ಬ್ರಾಹ್ಮಣನು ವೇದ ಶಾಸ್ತ್ರ ಸಂಪನ್ನನಾಗಿ, ಇಹಲೋ
ಕದಲ್ಲಿ ಮಾಡ ತಕ್ಕ ಕರ್ಮಗಳನ್ನು ಮಾಡಿ ಕೊಂಡು, ಮೋಕ್ಷಕ್ಕೆ ಸಾ
ಧನವಾದ ಗಂಗಾ ಸ್ನಾನವನ್ನು ಮಾಡಿ ಕೊಂಡು ಬರ ಬೇಕೆಂದು, ಕಾಶೀ
ಯಾತ್ರೆಯನ್ನು ಹೊರಟು, ಗೊಂಡಾರಣ್ಯದಲ್ಲಿ ಬರುತ್ತಾ ಇರಲು; ಒಂದು
ಮಡುವಿನಲ್ಲಿ ನೀರು ಇರುವದನ್ನು ಕಂಡು, ಸ್ನಾನವನ್ನು ಮಾಡಿ, ಸಂಧ್ಯಾ
ವಂದನೆ ನಿತ್ಯ ಕರ್ಮಗಳನ್ನು ತೀರಿಸಿ ಕೊಳ್ಳುವದಕ್ಕೆ ಪ್ರಶಸ್ತವಾಗಿದೆ ಎಂ
ದು ಅಲ್ಲಿ ನಿಂತು, ಮಡುವಿನಲ್ಲಿ ಇಳಿದು, ಸ್ನಾನಾ ಮಾಡುತ್ತಾ ಇರುವ ಸಮ
ಯದಲ್ಲಿ, ಅದರೊಳಗೆ ಇದ್ದ ಒಂದು ಮೊಸಳೆಯು ಈ ವಿಪ್ರನನ್ನು ನೋಡಿ—
ನನ್ನನ್ನು ತೆಗೆದು ಕೊಂಡು ಹೋಗಿ, ಗಂಗೆಯಲ್ಲಿ ಬಿಟ್ಟರೆ, ನಿನಗೆ ಪ್ರತ್ಯು
ಪಕಾರವನ್ನು ಮಾಡುವೆನೆನಲು; ಆ ಬ್ರಾಹ್ಮಣನು ಸಂಧ್ಯಾವಂದನೆ ನಿತ್ಯ
ಕರ್ಮಗಳನ್ನು ಮಾಡಿ ಕೊಂಡು, ಅನಂತರದಲ್ಲಿ ತನ್ನನ್ನು ದೈನ್ಯದಿಂದ ಬೇ
ಡಿ ಕೊಳ್ಳುವ ಮೊಸಳೆಯ ಮೇಲೆ ದಯವುಳ್ಳವನಾಗಿ, ಆ ಮೊಸಳೆಯನ್ನು
ಸಂಚಿಯಲ್ಲಿ ಹೊಗಿಸಿ, ಬಿಗಿದು, ತಲೆಯ ಮೇಲೆ ಹೊತ್ತು ಕೊಂಡು, ಕಾ
ಶಿಯನ್ನು ಸೇರಿ, ಗಂಗಾ ಸ್ನಾನವನ್ನು ಮಾಡಿ, ಆ ಮೊಸಳೆಯನ್ನು ಗಂಗೆಯ
ಲ್ಲಿ ಬಿಡಲು; ಅದು ಬ್ರಾಹ್ಮಣನ ಕಾಲು ಹಿಡಿದು ಕೊಂಡು, ಭಕ್ಷಿಸುವದ

ಕ್ಕೆ ಪ್ರಾರಂಭಾ ಮಾಡಲು; ವಿಪ್ರನು ಮೊಸಳೆಯನ್ನು ನೋಡಿ—ಎಲೈ, ಮೊ
ಸಳೆಯೇ, ಸ್ವಲ್ಪ ನೀರಿನಲ್ಲಿ ಇದ್ದ ನಿನ್ನನ್ನು ಮಹಾ ಪುಣ್ಯ ಸ್ಥಳವಾದ ಗಂಗೆ
ಯಲ್ಲಿ ಬಿಡುವದಕ್ಕೆ ಹೊತ್ತು ಕೊಂಡು ಬಂದು, ಸಂರಕ್ಷಣೆ ಮಾಡಿದ ನ
ನ್ನನ್ನು ನೀನು ಭಕ್ಷಿಸುವದಕ್ಕೆ ಉದ್ಯೋಗಿಸ ಬಹುದೇ? ಎನ್ನಲು; ಮೊ
ಸಳೆಯು—ಈ ಕಾಲದಲ್ಲಿ ಉಪಕಾರಾ ಮಾಡಿದವರಿಗೆ ಅಪಕಾರಾ ಮಾಡ ಬ
ಹುದೆಂದು, ಮೂರು ಸಾಕ್ಷಿ ನುಡಿಸುತ್ತೇನೆ ಎಂದು ಹೇಳಲು; ಆ ಬ್ರಾಹ್ಮ
ಣನು—ಹಾಗೆ ಸಾಕ್ಷಿಯನ್ನು ನುಡಿಸಿದ ತರುವಾಯ ಭಕ್ಷಿಸೆಂದು ಹೇಳಲು;
ಮೊಸಳೆಯು ಗಂಗಾ ತೀರದಲ್ಲಿ ಇದ್ದ ಮಾವಿನ ಮರವನ್ನು ನೋಡಿ—ಎ
ಲೋ, ವೃಕ್ಷರಾಜಾ, ಉಪಕಾರಾ ಮಾಡಿದವರಿಗೆ ಅಪಕಾರಾ ಮಾಡ ಬಹು
ದೇ? ಎಂದು ಕೇಳಲು; ಆ ವೃಕ್ಷವು—ನಾನು ಸಕಲರಿಗೂ ಪುಷ್ಪ ಫಲ
ಗಳಿಂದಲೂ ನೆರಳಿನಿಂದಲೂ ಉಪಕಾರವನ್ನು ಮಾಡುತ್ತೇನೆ. ಅವರು ನನ್ನ
ಉಪಕಾರವನ್ನು ಅರಿಯದೆ, ಕಲ್ಲುಗಳಿಂದ ಬಡಿಯುವರು; ಮನೆಗಳ ನಿಮಿತ್ಯ
ನನ್ನನ್ನು ಕಡಿಯುವರು; ಮತ್ತು ಮೇಲೆ ಹತ್ತಿ, ಕಾಲುಗಳಿಂದ ಒದೆಯುವ
ರು. ಹೀಗೆ ನಾನಾ ಪ್ರಕಾರ ಶ್ರಮೆ ಪಡಿಸುವರು. ಆದದರಿಂದ ಉಪಕಾರಾ
ಮಾಡಿದವರಿಗೆ ಅಪಕಾರಾ ಮಾಡ ಬಹುದೆಂದು ನುಡಿಯಲು;—ಎಲೋ, ವಿ
ಪ್ರನೇ, ಒಂದು ಸಾಕ್ಷಿ ಆಯಿತಲ್ಲ? ಎಂದು, ಮೊಸಳೆ ಹೇಳುವಷ್ಟರಲ್ಲೇ, ಒಂ
ದು ಮುದಿ ಆಕಳು ನೀರಿಗೆ ಬರುತ್ತಾ ಇರಲು; ಅದನ್ನು ನೋಡಿ—ಎಲೈ,
ಆಕಳೇ, ಉಪಕಾರಿಗಳಿಗೆ ಅಪಕಾರಾ ಮಾಡ ಬಹುದೇ? ಎಂದು ಕೇಳಲು;
ಆ ಹಸುವು—ನಾನು ದೇವಶರ್ಮನೆಂಬ ಬ್ರಾಹ್ಮಣನ ಮನೆಯಲ್ಲಿ ಇರುವೆ
ನು. ಅವನಿಗೆ ನನ್ನಿಂದ ಹತ್ತು ಕಾಲುನಡೆಗಳು ಆದವು. ವಿಶೇಷವಾಗಿ ಕ್ಷೀ
ರವನ್ನು ಕರೆಯುತ್ತಿದ್ದನು. ನೆನ್ನೇ ದಿವಸ ಶರೀರದ ಜಾಡ್ಯದಿಂದ ಹಾಲು ಕೊ
ಡದೆ ಇರಲು; ನನ್ನನ್ನು ನಡು ಮುರಿಯುವ ಹಾಗೆ ಹೊಡೆದು, ಹೊರಡಿಸಿ
ದನು. ಆದ್ದರಿಂದ ಉಪಕಾರಾ ಮಾಡಿದವರಿಗೆ ಅಪಕಾರಾ ಮಾಡ ಬಹು
ದು ಎಂದು ಹೇಳಲು; ಮೊಸಳೆಯು—ಎರಡು ಸಾಕ್ಷಿಗಳಾದವು ಎಂದು ಹೇಳು
ವಷ್ಟರಲ್ಲೇ, ಅಲ್ಲಿಗೆ ಒಂದು ಜಂಬುಕ ಬರಲು; ಮೊಸಳೆಯು—ಎಲೋ, ಜಂ
ಬುಕರಾಯಾ, ಉಪಕಾರಿಗಳಿಗೆ ಅಪಕಾರಾ ಮಾಡ ಬಹುದಲ್ಲವೇ? ಎನ್ನಲು;
ಆ ಜಂಬುಕವು—ಈ ಕಾಲದಲ್ಲಿ ಉಂಟಾದ ಮಾತು ಹೇಳಿದರೆ, ಲೋಕ
ವಿರುದ್ಧವಾಗಿ ಕಾಣುವದು. ಇದಲ್ಲದೆ ಮನುಷ್ಯರು ಮಹಾ ಪಾಪಿಗಳು.
ನೀರೊಳಗಿರುವವರಿಗೆ ನ್ಯಾಯವನ್ನು ಹೇಳ ಬಾರದೆಂಬ ನೀತಿ ಉಂಟು. ನೀವು

ನೀರನ್ನು ಬಿಟ್ಟು, ಈಚೆಗೆ ಬಂದರೆ, ನ್ಯಾಯವನ್ನು ವಿಚಾರಿಸಿ, ಹೇಳ ಬಹುದು ಎನ್ನಲು; ಮೊಸಳೆಯು ಬ್ರಾಹ್ಮಣನ ಕಾಲನ್ನು ಬಿಟ್ಟು, ತಡಿಗೆ ಬಂದು, ತಮ್ಮ ವ್ಯಾಜ್ಯವನ್ನು ಹೇಳಲು; ನರಿಯು ಬ್ರಾಹ್ಮಣನ ಮೇಲೆ ಕೋಪಿಸಿ ಕೊಂಡು– ಈ ಮೊಸಳೆಯನ್ನು ಹ್ಯಾಗೆ ತಂದೆ? ಎಂದು ಗದ್ದಿಸಿ ಕೇಳಲು; ವಿಪ್ರನು– ಸಂಚಿಯಲ್ಲಿ ತಂದೆನು ಎನ್ನಲು; ಜಂಬುಕನು ವಿಪ್ರನನ್ನು ಜರಿದು–ತಂದ ವಿವರವನ್ನು ತೋರಿಸು ಎಂದು ಕೇಳಲು; ಮೊಸಳೆಯನ್ನು ಸಂಚಿಯಲ್ಲಿ ಹೊಗಿಸಿ, ಹತ್ತ ಕಟ್ಟಿ, ತಲೆಯ ಮೇಲೆ ಹೊತ್ತು ಕೊಂಡು–ಹೀಗೆ ತಂದೆನು ಎನ್ನಲು; ಜಂಬುಕನು ಮೊಸಳೆಯನ್ನು ಸ್ವಲ್ಪ ದೂರ ಹೊರಿಸಿ ಕೊಂಡು ಹೋಗಿ, ನಿರ್ಜಲ ಭೂಮಿಯಲ್ಲಿ ಇಳಿಸಿ–ಎಲೋ, ಶುದ್ಧ ಸಾತ್ವೀಕ ಬ್ರಾಹ್ಮಣೋತ್ತಮಾ, ಇಂಥ ದುಷ್ಟ ಜಂತುಗಳಿಗೆ ಎಂದಿಗೂ ಉಪಕಾರವನ್ನು ಮಾಡ ಬೇಡ ಎಂದು ಬುದ್ಧಿಯನ್ನು ಹೇಳಿ, ಒಂದು ಚಾಪು ಕಲ್ಲನ್ನು ತರಿಸಿ, ಆ ಮೊಸಳೆಯ ತಲೆಯ ಮೇಲೆ ಹಾಕಿಸಿ, ಕೊಂದ ಮೇಲೆ, ತಾನು ಅದನ್ನು ಸಮೃದ್ಧಿಯಾಗಿ ಭಕ್ಷಿಸಿ ಹೋಯಿತು. ಆದ್ದರಿಂದ ಇಂಥ ದುಷ್ಟ ಜಂತುಗಳನ್ನು ಪ್ರಾಣ ಸಹಿತ ಬಿಡ ಬಾರದೆಂದು, ಆ ಕಾಗೆಯನ್ನು ಕೊಲ್ಲಿಸಿತು. ಆ ವಿಪ್ರನು ಮಂಡೂಕದೊಡನೆ ಕಾಶಿಯನ್ನು ಶೇರಿ, ಗಂಗೆಯಲ್ಲಿ ಕಪ್ಪೆಯನ್ನು ಬಿಟ್ಟು, ಸ್ನಾನಾ ಮಾಡಿ, ಅಲ್ಲಿ ಇರುವ ವಿಶ್ವನಾಥನಿಗೆ ವಂದನೆಯನ್ನು ಮಾಡಿ, ಗಯಾವಾರ್ಜನೆಯನ್ನು ಮಾಡಿ ಕೊಂಡು, ಕಾವಡಿಯನ್ನು ಹೊತ್ತು ಕೊಂಡು, ತನ್ನ ಊರಿಗೆ ತಿರಿಗಿ ಬಂದು, ತಂದೆ ತಾಯಿಗಳಿಗೆ ಗಂಗೋದಕದಿಂದ ಅಭಿಷೇಕವನ್ನು ಮಾಡಿ, ಪುತ್ರ ಮಿತ್ರ ಸಮೇತನಾಗಿ ಸುಖವಾಗಿ ಇದ್ದನು.

31. The Sick Mussulman and his Lazy Servant.

೩೧. ತುರುಕನನ್ನೂ ಅವನ ಸೋಮಾರಿಯಾದ ಸೇವಕನನ್ನೂ ಕುರಿತು.

ಮಛಲೀ ಪಟ್ಣದಲ್ಲಿ ಒಬ್ಬ ತುರುಕನು ಇದ್ದನು. ಆತನ ಬಳಿಯಲ್ಲಿ ಒಬ್ಬ ಒಕ್ಕಲಿಗನು ಸಂಬಳಕ್ಕೆ ಇದ್ದನು. ಒಂದಾನೊಂದು ದಿವಸ ಆ ತುರುಕನಿಗೆ ಬಹಳ ಛಳಿ ಜ್ವರ ಬಂದು, ರಾತ್ರಿಯ ವರಿಗೂ ಕಡಿಮೆಯಾಗದೆ ಇತ್ತು. ಅದರಿಂದ ಆ ತುರುಕನು ಬಹಳ ಸಂಕಟ ಪಡುತ್ತಾ, ತಲೆಬಾಗಲಿನ ಬಳಿಯಲ್ಲಿ ಮಲಗಿ ಕೊಂಡು ಇದ್ದ ತನ್ನ ಭಂಟನನ್ನು ಕೂಗಿ–ಎಲೋ, ಸೇವಕನೇ, ನಾನು ಸಂಕಟವನ್ನು ತಾಳಲಾರೆನು. ಆದ್ದರಿಂದ ನೀನು ಚಿಕ್ಕ ಪೇಟೆಯಲ್ಲಿ ಇರುವ ವೈದ್ಯನ ಹತ್ರಕ್ಕೆ ಹೋಗಿ, ನನ್ನ ದೇಹ ಸ್ಥಿತಿಯನ್ನು ಅವನಿಗೆ ತಿಳಿಸಿ, ಇಲ್ಲಿಗೆ ಕರೆದು ಕೊಂಡು ಬಾ ಎಂದು ಹೇಳಲು; ಆ ಸೋಮಾರಿಯಾದ

ಆಳು—ಈತನು ನನ್ನ ನಿದ್ರೆಯನ್ನು ಕೆಡಿಸುತ್ತಾನಲ್ಲಾ? ಎಂದು ಅಂದು ಕೊಂಡು, ತನ್ನ ತಲೆಯ ಮುಸುಕನ್ನು ತೆಗಿಯದೆ—ಬುದ್ಧೀ, ಇಷ್ಟು ಹೊತ್ತಿನಲ್ಲಿ ಪಂಡಿತನು ಮನೆಯಲ್ಲಿ ಇರುತ್ತಾನೋ, ಇಲ್ಲವೋ? ಎಂದು ಹೇಳಿದನು. ಅದಕ್ಕೆ ಆ ತುರುಕನು—ವೈದ್ಯನು ನಿಶ್ಚಯವಾಗಿ ಮನೆಯಲ್ಲಿ ಇರುತ್ತಾನೆ. ಹೋಗಿ ಬಾ, ಅನ್ನಲು; ಆಳು—ಸ್ವಾಮಿ, ನಾನು ಹೋದರೂ, ಅವನಿಗೆ ಇಲ್ಲಿಗೆ ಬರುವದಕ್ಕೆ ಕೂಡುವದೋ, ಇಲ್ಲವೋ? ಎಂದು ಹೇಳಿದನು. ತುರುಕನು—ಒಂದು ವೇಳೆ ಅವನಿಗೆ ಇಲ್ಲಿ ಬರುವದಕ್ಕೆ ಸಮಯ ಶಿಕ್ಕದೆ ಹೋದರೆ, ಔಷಧವನ್ನು ಖಂಡಿತವಾಗಿ ಕೊಡುತ್ತಾನೆ. ತೆಗೆದು ಕೊಂಡು ಬಾ, ಅನ್ನಲು; ಭಂಟನು—ಒಡೆಯನೇ, ಆ ವೈದ್ಯನ ಬಳಿಯಲ್ಲಿ ತಮ್ಮ ದೇಹದ ರೋಗಕ್ಕೆ ತಕ್ಕ ಔಷಧವು ಮಾಡಿದ್ದು ಇದೆಯೋ, ಇಲ್ಲವೋ? ಎಂದು ಹೇಳಿದನು. ತಿರಿಗಿ ಆ ತುರುಕನು—ಎಲೋ, ಭೃತ್ಯನೇ, ಸಿದ್ಧವಾದ ಔಷಧವು ಬೇಕಾದಷ್ಟು ಇದೆ. ಬೇಗ ತೆಗೆದು ಕೊಂಡು ಬಾ, ಎಂದು, ಹೇಳಿದ್ದಕ್ಕೆ, ಭೃತ್ಯನು—ಯಜಮಾನನೇ, ಒಂದು ವೇಳೆ ಅವನು ಔಷಧವನ್ನು ಕೊಡುವನೋ, ಇಲ್ಲವೋ? ಅನ್ನಲು; ಮ್ಲೇಂಛನು ಅವನ ಮಾತಿಗೆ ಅಸಹ್ಯಪಟ್ಟು ಕೊಂಡು—ಎಲೋ, ಖಂಡಿತವಾಗಿ ಅವನು ಔಷಧವನ್ನು ಕೊಡುತ್ತಾನೆ. ಬೇಗ ತೆಗೆದು ಕೊಂಡು ಬಾ, ಅನ್ನಲು; ಇವನು—ಸ್ವಾಮಿ, ನಾನು ಹೋಗಿ, ಔಷಧವನ್ನು ತರುತ್ತೇನೆ. ಆದರೆ ಅದರಿಂದ ನಿಮಗೆ ಗುಣವಾಗುತ್ತದೋ, ಇಲ್ಲವೋ? ತಿಳಿಯದು, ಅಂದನು. ಆ ತುರುಕನು ಬಹಳ ಕೋಪಾ ಮಾಡಿ—ಎಲೋ, ಸೋಮಾರಿಯೇ, ಹ್ಯಾಗಾದರೂ ಆಗಲಿ, ನೀನು ಹೋಗಿ ಬಾ, ಅನ್ನಲು; ಈ ಸೇವಕನು—ಇದು ಎಲ್ಲಿಯ ತಂಟೆ? ಎಂದು ಗುಣುಗುಟ್ಟುತ್ತಾ—ಧೊರೆಯೇ, ಲೋಕದಲ್ಲಿ ಮನುಷ್ಯನಾಗಿ ಹುಟ್ಟಿದವನು ಯಾವಾಗಲಾದರೂ ಒಂದು ದಿವಸ ಸಾಯಲೇ ಸಾಯ ಬೇಕು. ಹೀಗಿರುವಲ್ಲಿ ಯಾಕೆ ಇಷ್ಟು ತೊಂದರೆ ತಾವು ಅನುಭವಿಸ ಬೇಕು? ಎಂದು, ಮುಚ್ಚಿದ ಮುಸುಕಿನಲ್ಲಿಯೇ ಉತ್ತರ ಹೇಳುತ್ತಾ ಬಂದನು. ಆಗ ಆ ತುರುಕನು ಇವನ ಮಾತುಗಳನ್ನು ಕೇಳಿ, ನಕ್ಕು, ಸುಮ್ಮನೇ ಮಲಗಿ ಕೊಂಡನು.

32. The Reddi and Brahman.

೩೨. ರಡ್ಡಿಯನೂ ಬ್ರಾಹ್ಮಣನನೂ ಕುರಿತದ್ದು.

ತೆಲಗಾಣ್ಯದಲ್ಲಿ ಚನ್ನಾರಡ್ಡಿ ಎಂಬ ಒಬ್ಬ ಗೌಡನು ನೂರಾರು ಆಳುಗಳನ್ನೂ ಉಳುವ ಎತ್ತುಗಳನ್ನೂ ಹೇರುವ ಎತ್ತುಗಳನ್ನೂ ಕಟ್ಟಿ ಕೊಂಡು,

ಆರಂಬವನ್ನೂ ಹೇರಾಟವನ್ನೂ ಮಾಡಿ ಕೊಂಡು, ಬಹಳ ಗುಳಿಗಳಲ್ಲಿ ದವಸ ಧಾನ್ಯಗಳನ್ನು ತುಂಬಿ ಕೊಂಡು, ಸರಿಯುವರಲ್ಲಿ ಬಲು ಹೆಸರುವಾಸಿಕೆಯಾಗಿ ಇದ್ದನು. ಅವನ ದಳಸರವನ್ನು ಒಬ್ಬ ಬಡ ಬ್ರಾಹ್ಮಣನು ಕಂಡು, ಇವನನ್ನು ಆಶ್ರಯ ಮಾಡಿದರೆ, ಏನಾದರೂ ಬಹಳವಾಗಿ ಕೊಟ್ಟಾನು; ತನ್ನ ಬಡತನ ಇಂಗೀತು ಎಂದು, ನಾಲ್ಕಾರು ವರುಷ ಆಶ್ರಯಾ ಮಾಡಿ ಕೊಂಡು ಇದ್ದಾಗ್ಯೂ, ಒಂದು ಕಾಸಾಗಲಿ, ಒಂದು ಕಾಳು ದವಸವಾಗಲಿ ಕೊಡಲಿಲ್ಲ. ಹೀಗಿರುವಲ್ಲಿ ಆ ರಡ್ಡಿಯು ಒಂದು ಹೊಸ ಮನೇ ಕಟ್ಟಿಸ ಬೇಕೆಂದು ಚೆಲುವಾದ ಸ್ಥಳದಲ್ಲಿ ಸಮವಾಗಿ ನೆಲಗಟ್ಟು ಮಾಡಿಸಿ, ಗಜ ಅಗಲ ಗಜ ಮಟ್ಟಕ್ಕೆ ತಳಹದಿಯನ್ನು ತೆಗಿಸಿ, ಅದನ್ನು ಪಡಿ ಗುಂಡುಗಳಿಂದ ತುಂಬಿಸಿ, ಎರಡು ಗಜ ಉದ್ದಕ್ಕೆ ಇಟ್ಟಿಗೆ ಗಾರೆಗಳಿಂದ ಗೋಡೇ ಹಾಕಿಸಿ ಇದ್ದನು. ಒಂದು ದಿವಸ ಸಾಯಂಕಾಲದ ವೇಳೆಯಲ್ಲಿ, ಒಂದು ಬಿಳೀ ನಾಯಿ ಬಂದು, ರಡ್ಡಿ ನೋಡುವ ಹಾಗೆ ಒಂದು ಗೋಡೆಯಿಂದ ಮತ್ತೊಂದು ಗೋಡೆಗೆ ಹಾರಿ, ಮತ್ತೊಂದು ಸಾರಿಯೂ ಅದೇ ಪ್ರಕಾರ ಹಾರಿ, ಓಡಿ ಹೋಯಿತು. ಅದನ್ನು ರಡ್ಡಿಯು ಕಂಡು, ಹೊಸ ಗೋಡೆಯ ಮೇಲೆ ನಾಯಿ ಹಾರಿ ಹೋಯಿತಲ್ಲ? ಇದರಿಂದ ತನಗೇನಾದರೂ ಕೇಡು ಬಂದೀತೋ, ಏನೋ, ಎಂದು ಕೊರಗುತ್ತಾ, ರಾತ್ರಿಯಲ್ಲಿ ತನ್ನ ರಡ್ಡಿಸಾನಿಯ ಸಂಗಡ ಹೇಳಲು; ಆಕೆಯು—ತಮ್ಮನ್ನು ಕಾದು ಕೊಂಡಿರುವ ಹಾರುವೈಯನ ಸಂಗಡ ಹೇಳಿ, ಅಂದಳು. ಹೊತಾರೆ ಈ ಬ್ರಾಹ್ಮಣನು ಕಟ್ಲೆಯ ಪ್ರಕಾರ ರಡ್ಡಿಯನ್ನು ಕಂಡು, ಆಶೀರ್ವಾದವನ್ನು ಮಾಡಿ, ಮಂತ್ರಾಕ್ಷತೆಯನ್ನು ಕೊಡಲು; ರಡ್ಡಿಯು ನಾಯಿ ಗೋಡೇ ದಾಟಿದ್ದನ್ನು ಹೇಳಿದನು. ಆಗ ಬ್ರಾಹ್ಮಣನು, ಈ ಲೋಭಿಯಿಂದ ಹಣಾ ಎಳೆಯುವದಕ್ಕೆ ಇದೇ ಸಮಯವೆಂದು ತನ್ನ ಮನಸ್ಸಿನಲ್ಲಿ ತಿಳಿದು, ಬೇಗ ಮನೆಗೆ ಹೋಗಿ, ಒಂದು ಪುಸ್ತಕವನ್ನು ತಂದು, ಅವನ ಮುಂದೆ ಎರಡು ಘಳಿಗೆ ಹುಡುಕಿದ ಹಾಗೆ ಮಾಡಿ—ಗೋಡೆಯನ್ನು ಬಿಳೀ ನಾಯಿ ಹಾರಲು, ಮತ್ತೆ ಹಾರಲು ರಡ್ಡಿಯೂ ರಡ್ಡಿಸಾನಿಯೂ ಸಹಮೂಲಂ ವಿನಶ್ಯತಿ—ಅಂದರೆ, ಬುಡ ಸಹಿತ ನಾಶವಾಗುತ್ತಾರೆ—ಎಂದು ಓದಿ, ಇದು ಬಹು ಕೆಟ್ಟದ್ದು ಅಂದನು. ಆಗ ರಡ್ಡಿಯು ಕಣ್ಣಿನಲ್ಲಿ ನೀರನ್ನು ಬಿಡುತ್ತಾ—ಇದಕ್ಕೆ ಏನು ಮಾಡ ಬೇಕೆಂದು, ತುಂಬ ಅಂಗಲಾಚಿ ಕೊಂಡು ಕೇಳಲು; ಬ್ರಾಹ್ಮಣನು—ನೀವು ಇದಕ್ಕೆ ಹೆದರ ಬೇಡಿ. ಇದಕ್ಕೆ ನಾನು ಶಾಂತಿಯನ್ನು ಮಾಡುತ್ತೇನೆಂದು ಹೇಳಿ, ಆ ಹೊಸ ಮನೆಯ ಗೋಡೆಯ ಒಳಗೆ ಆ

ಳುದ್ದ ಗುಂಡಿಯನ್ನು ಮಾಡಿ, ಅಲ್ಲಿ ಸಾರಿಸಿ, ರಂಗೋಲೇ ಇಕ್ಕಿಸಿ, ನೂರು ಹೊರೆ ಮುತ್ತುಗದ ಕಡ್ಡಿಯನ್ನೂ, ನೂರು ಗಡಿಗೆ ತುಪ್ಪವನ್ನೂ, ನೂರು ವರಹವನ್ನೂ ನೂರು ಕರೆಯುವ ಹಸುಗಳನ್ನೂ ತರಿಸಿ ಕೊಂಡು, ರಡ್ಡಿಯನ್ನೂ ರಡ್ಡಿಸಾನಿಯನ್ನೂ ಆ ಕುಂಡದ ಮುಂದೆ ಒಂದು ಹಸೆ ಮಣೆಯ ಮೇಲೆ ಕೂರಿಸಿ, ಬನ್ನೀ ಮರದ ಕೊರಡನ್ನು ಕಡಿದು, ಅದರಲ್ಲಿ ಹುಟ್ಟಿದ ಬೆಂಕಿಯ ಕಿಡಿಯನ್ನು ಬೆರಣಿಯ ಪುಡಿಯನ್ನು ಹಾಕಿ, ಹತ್ತಿಸಿ, ಗುಂಡಿಯಲ್ಲಿ ಇಟ್ಟು, ಸೌದೆಯನ್ನು ಹಾಕಿ, ಉರೀ ಮಾಡಿ, ಅದರೊಳಗೆ ಒಂದು ಹೊರೆ ಮುತ್ತುಗದ ಕಡ್ಡಿಯನ್ನೂ ಒಂದು ಹರವಿಯ ತುಪ್ಪವನ್ನೂ, ಬಾಯಿಯಲ್ಲಿ ಏನೇನೋ ಹೇಳುತ್ತ, ಹೋಮವನ್ನು ಮಾಡಿ, ಹೊರೇ ಕಟ್ಟಿಗೆಯೂ ಹರಿವಿಯ ತುಪ್ಪವೂ ಮುಗಿದ ಮೇಲೆ, ಒಂದು ಕರೆಯುವ ಹಸುವನ್ನೂ ಒಂದು ವರಹವನ್ನೂ ರಡ್ಡಿಯಿಂದ ತನಗೆ ಧಾರೆ ಎರಿಸಿ ಕೊಳ್ಳುತ್ತಿದ್ದನು. ಈ ಮಾತನ್ನು ಮತ್ತೊಬ್ಬ ದಾರಿಕಾರನು ಕೇಳಿ, ಅಲ್ಲಿಗೆ ಬಂದದರಿಂದ, ಮೊದಲಿನ ಬ್ರಾಹ್ಮಣನು ಕಂಡು, ನನ್ನ ಗುಟ್ಟನ್ನು ಏನಾದರೂ ಹೊರ ಮಾಡಿಯಾನೋ, ಏನೋ, ಎಂಬ ಅಂದೇಶದಿಂದ ತುಪ್ಪವನ್ನು ಹೋಮ ಮಾಡುವಾಗ್ಯೆ—ನಿನಗರ್ಧ ನನಗರ್ಧ ಸ್ವಾಹ ಎಂದು ಮಂತ್ರವನ್ನು ಹೇಳುವ ಹಾಗೆ ಹೇಳಿ, ಹೋಮವನ್ನು ಮಾಡಿದ್ದರಿಂದ, ಬಂದ ಬ್ರಾಹ್ಮಣನು ಆ ಸನ್ನೆಯನ್ನು ತಿಳಿದು, ಸುಮ್ಮಗಿದ್ದನು. ಆಗ ಆ ಬ್ರಾಹ್ಮಣನು ತುಪ್ಪವನ್ನೆಲ್ಲಾ ಹೋಮಾ ಮಾಡಿ, ಆ ನೂರು ಹೈನಾಕಳುಗಳನ್ನೂ ನೂರು ವರಹಗಳನ್ನೂ ತೆಗೆದು ಕೊಂಡು, ಹೊರಗೆ ಹೋಗಿ, ಇಬ್ಬರೂ ಹಂಚಿ ಕೊಂಡು, ತಮ್ಮ ಊರಿಗೆ ಹೋದರು.

33. The Merchants and their Cat.

33. ವರ್ತಕರ ಪಾಲಿನ ಬೆಕ್ಕಿನ ಕಥೆ.

ಧಾರವಾಡದ ದೇಶದಲ್ಲಿ ನಾಲ್ಕು ಜನ ವರ್ತಕರು ಪಾಲುವಂತಿಗೆಯಲ್ಲಿ ಅರಳೆಯನ್ನು ಬಹಳವಾಗಿ ಕೊಂಡು, ನಗಗಳನ್ನು ಕಟ್ಟಿಸಿ, ಬಾಡಿಗೇ ಎತ್ತುಗಳ ಮೇಲೆ ಹೇರಿಸಿ ಕೊಂಡು, ಒಂದು ಪಟ್ಟಣಕ್ಕೆ ಬಂದು, ಈ ಪಟ್ಟಣವು ಬಹಳ ಬಸ್ತಿಯಾಗಿದೆ; ಇಲ್ಲಿ ಮಾರಿ ಕೊಂಡು, ನಮ್ಮ ದೇಶಕ್ಕೆ ಹೋಗೋಣ ಎಂದು, ಒಂದು ಬಾಡಿಗೇ ಮನೆಯನ್ನು ಮಾಡಿ ಕೊಂಡು, ಅಲ್ಲಿ ತಮ್ಮ ಅರಳೇ ನಗಗಳನ್ನೆಲ್ಲಾ ಒಟ್ಟಿ, ಅಲ್ಲಿಯೇ ಒಂದು ಸ್ಥಳದಲ್ಲಿ ಅಡಿಗೆ ಊಟಗಳನ್ನು ಮಾಡಿ ಕೊಂಡಿದ್ದರು. ಹೀಗಿರುವಲ್ಲಿ, ಆ ಅರಳೇ ನಗಗಳಿಗೆ ಇಲಿಗಳು ಬಿದ್ದು, ಕತ್ತರಿಸಿ, ಕೆಡಿಸುತ್ತಾ ಬಂದದರಿಂದ, ನಾಲ್ಕು ಜನವು ಕೂಡಿ, ಮದ್ದಕದಲ್ಲಿ ಒಂದು

ಮೋಳೆ ಬೆಕ್ಕಿನ ಮರಿಯನ್ನು ಕ್ರಯಕ್ಕೆ ತಂದು, ಒಬ್ಬರೊಬ್ಬರು ಆ ಬೆಕ್ಕಿನ ಮರಿಯ ಒಂದೊಂದು ಕಾಲು ಹಂಚಿ ಕೊಂಡು, ತಮ್ಮ ತಮ್ಮ ಪಾಲಿನ ಕಾಲಿಗೆ ಗೆಜ್ಜೆ ಮುಂತಾದ್ದು ಕಟ್ಟಿ, ಪರಾಂಬರಿಕೆ ತೆಗೆದು ಕೊಳ್ಳುತ್ತಾ, ಪ್ರೀತಿಯಿಂದ ಚನ್ನಾಗಿ ಆರೈಕೆಯನ್ನು ಮಾಡುತ್ತಾ ಬಂದರು. ಕೆಲವು ದಿವಸದ ಮೇಲೆ ಅದರ ಒಂದು ಕಾಲಿನ ಮೇಲೆ ಒಂದು ಕೆಟ್ಟ ಹುಣ್ಣು ಎದ್ದು, ನಾಲ್ಕು ಕಾಲುಗಳನ್ನು ಊರಿ ನಡೆಯುವದಕ್ಕೆ ಆಗದೆ, ಮೂರೇ ಕಾಲುಗಳಲ್ಲಿ ನಡೆಯುತ್ತಾ ಇತ್ತು. ಆ ಕಾಲಿನ ಯಜಮಾನನು ಹುಣ್ಣು ವಾಸಿಯಾಗುವದಕ್ಕೋಸ್ಕರ ಎಣ್ಣೇ ಬಟ್ಟೆಯನ್ನು ಸುತ್ತಿದನು. ಈ ವರ್ತಕರೆಲ್ಲಾ ವ್ಯಾಪಾರಕ್ಕೆ ಹೋಗಿದ್ದ ವೇಳೆಯಲ್ಲಿ, ಈ ಬೆಕ್ಕು ಒಲೆಯ ಮುಂದೆ ಕೂತಿತ್ತು. ಆಗ ಒಲೆಯಲ್ಲಿ ಇದ್ದ ಬೆಂಕಿಯ ಕಿಡಿಯು ಹುಣ್ಣು ಕಾಲಿಗೆ ಸುತ್ತಿದ್ದ ಎಣ್ಣೇ ಬಟ್ಟೆಯ ಮೇಲೆ ಬಿದ್ದು, ಹತ್ತಿ ಕೊಂಡು, ಉರಿಯುತ್ತಾ ಇದ್ದದರಿಂದ, ಆ ಬೆಕ್ಕು ಗಾಬರಿಯಾಗಿ ಅಲ್ಲಿಂದ ಮೂರು ಕಾಲಿನಲ್ಲಿಯೇ ಓಡಿ ಬಂದು, ಅರಳೇ ನಗಗಳ ಮೇಲೆ ಓಡ್ಯಾಡುತ್ತಾ ಇದ್ದದರಿಂದ, ಅವರ ಕಡೆಯ ಆಳು ಕಂಡು, ಬೆಕ್ಕನ್ನು ಕೆಳಗೆ ತೆಗೆದು, ಅದರ ಕಾಲಿನ ಎಣ್ಣೇ ಬಟ್ಟೆಯನ್ನು ಬಿಚ್ಚಿ ಬಿಟ್ಟನು. ಅಷ್ಟು ಹೊತ್ತಿಗೆ ಸಾವಿರಾರು ರೂಪಾಯಿ ಅರಳೆ ಸುಟ್ಟು ಹೋಯಿತು. ಆ ಬಳಿಕ, ವರ್ತಕರು ಮನೆಗೆ ಬಂದು, ಈ ಸುದ್ದಿಯನ್ನು ಕೇಳಿ, ಹುಣ್ಣಾದ ಕಾಲಿನ ಯಜಮಾನನನ್ನು ಕುರಿತು ಮಿಕ್ಕ ಮೂರು ಮಂದಿ ವರ್ತಕರು—ಅಯ್ಯಾ, ನಿನ್ನ ಕಾಲಿಗೆ ನೀನು ಎಣ್ಣೇ ಬಟ್ಟೆ ಸುತ್ತಿದ್ದರಿಂದ ಅರಳೆ ಸುಟ್ಟು ಹೋಯಿತು. ಈ ನಷ್ಟದಲ್ಲಿ ನಿನ್ನ ಪಾಲಿನದು ಹೋಗಲಾಗಿ, ನಮ್ಮ ಮೂರು ಪಾಲಿನ ನಷ್ಟವನ್ನು ನೀನು ಕೊಡ ಬೇಕೆಂದು ಅವನನ್ನು ಕರೆದು ಕೊಂಡು, ಆ ಪಟ್ಟಣದ ನ್ಯಾಯಾಧಿಪತಿಯ ಬಳಿಗೆ ಬಂದು, ತಮ್ಮ ಫಿರಿಯಾದು ಸಂಗತಿಯನ್ನು ಹೇಳಿ ಕೊಂಡರು. ಆ ನ್ಯಾಯಾಧಿಪತಿಯು ಇದನ್ನು ಕೇಳಿ—ಎಲೈ, ವರ್ತಕರೇ, ಇದು ಆತನ ತಪ್ಪಲ್ಲ; ತನ್ನ ಪಾಲಿನ ಕಾಲು ವಾಸಿಯಾಗುವದಕ್ಕೆ ಅವನು ಎಣ್ಣೇ ಬಟ್ಟೆ ಸುತ್ತಿದನು. ಈ ನಷ್ಟವು ನಿಮಗೆ ದೇವರ ಚಿತ್ತದಿಂದ ಆದದ್ದು. ನೀವು ಎಲ್ಲರು ಸಮಭಾಗಿಗಳಾಗಿ ಅನುಭವಿಸ ಬೇಕೆಂದು ಎಷ್ಟು ಒಡಂಬಡಿಕೆ ಹೇಳಿದಾಗ್ಯೂ, ಆ ಮೂರು ಜನವು ಕೇಳದ್ದರಿಂದ, ನ್ಯಾಯಾಧಿಪತಿಯು, ಈ ನಷ್ಟವು ನಿಮ್ಮ ಮೂರು ಜನದ ಪಾಲಿನ ಕಾಲಿನಿಂದ ಉಂಟಾಗಿದೆ. ಅವನ ಪಾಲಿನ ಕಾಲಿನಿಂದ ಉಂಟಾದದ್ದಲ್ಲ. ಯಾಕಂದರೆ ಅವನ ಪಾಲಿನ ಕಾಲಿನ ಹಾಗೆ ನಿಮ್ಮ ಪಾಲಿನ ಕಾಲುಗಳೂ ಹುಣ್ಣಾಗಿದ್ದರೆ, ಅರಳೇ ನಗಗಳ ಮೇಲೆ ಹೋಗಲಿ

ಕ್ಕೆ ಇಲ್ಲ. ಹಾಗಾಗದೆ, ಚನ್ನಾಗಿದ್ದದರಿಂದ ನಿಮ್ಮ ಕಾಲುಗಳಿಂದಲೇ ಹೋಗಿ, ಅರಳೆಯನ್ನು ಸುಟ್ಟಿತು. ಆದಕಾರಣ ಆತನ ಪಾಲಿನ ಭಾಗವನ್ನು ನೀವು ಮೂರು ಜನವೂ ಹಂಚಿ ಕೊಂಡು, ಆತನಿಗೆ ಕೊಡ ಬೇಕೆಂದು, ತೀರ್ಪು ಮಾಡಿ, ಕಳುಹಿಸಿ ಬಿಟ್ಟನು.

34. The Swans and Turtle.

೩೪. ಹಂಸಗಳೂ, ಕೂರ್ಮವೂ, ಇವುಗಳ ಕಥೆ.

ಪುಷ್ಕರ ದ್ವೀಪದಲ್ಲಿ ಒಂದು ಕುಮುದಾಕರವೆಂಬ ಸರಸ್ಸಿರುವದು. ಅಲ್ಲಿ ಎರಡು ಹಂಸ ಪಕ್ಷಿಗಳು ಕಮಲಗಳ ದಂಟಿನ ಆಹಾರಕ್ಕೋಸ್ಕರ ಮಾನಸ ಸರಸ್ಸಿನಿಂದ ಬಂದು ಇದ್ದವು. ಆ ಸರಸ್ಸಿನಲ್ಲಿ ಬಹು ಕಾಲದಿಂದ ಒಂದು ಆಮೆಯು ವಾಸ ಮಾಡಿ ಕೊಂಡು ಇತ್ತು. ಇದು ಆ ಹಂಸಗಳೊಡನೆ ಸ್ನೇಹವನ್ನು ಮಾಡಿ ಕೊಂಡು ಇತ್ತು. ಹೀಗಿರುವಲ್ಲಿ, ಮಾಗೀ ಕಾಲ ಬಂದದರಿಂದ, ಈ ಹಂಸ ಪಕ್ಷಿಗಳಿಗೆ ತಾವರೇ ದಂಟಿನ ಆಹಾರ ತಪ್ಪಿ, ತಿರಿಗಿ ಮಾನಸ ಸರಸ್ಸಿಗೆ ಹೋಗ ಬೇಕೆಂದು ಯತ್ನಾ ಮಾಡಲು; ಈ ಆಮೆಯು ಆ ಹಂಸಗಳನ್ನು ಕುರಿತು—ಎಲೈ, ಅಣ್ಣಾಗಳಿರಾ, ನೀವು ಇಲ್ಲಿಗೆ ಬಂದದರಿಂದ ನಿಮ್ಮ ಸ್ನೇಹವು ದೊರಕಿ, ನಿಮ್ಮೊಡನೆ ನಾನು ಬಹು ಸುಖದಿಂದ ಇದ್ದೆನು. ಈಗ ತಿರಿಗಿ ನೀವು ಹೊರಟು ಹೋಗುವದು ಆದರೆ, ನಿಮ್ಮನ್ನು ಬಿಟ್ಟು, ನಾನು ಇರಲಾರೆನು. ದಯಮಾಡಿ, ನನ್ನನ್ನು ಕರ ಕೊಂಡು ಹೋಗಿ, ಆ ಮಾನಸ ಸರಸ್ಸಿನಲ್ಲಿ ಬಿಟ್ಟರೆ, ನಿಮ್ಮೊಡನೆ ಸುಖವಾಗಿರುವೆನು, ಎಂದು ಹೇಳಿತು. ಆಗ ಹಂಸ ಪಕ್ಷಿಗಳು—ಏನು, ಸ್ನೇಹಿತನೇ, ಇದೆಂಥ ಹುಚ್ಚಾಲೋಚನೆ ಮಾಡಿದೆ? ಬಹು ದೂರವಾದ ಮಾನಸ ಸರಸ್ಸು ಎಲ್ಲಿ? ನೀರಿನಲ್ಲಿ ಓಡ್ಯಾಡುವ ನೀನೆಲ್ಲಿ? ಆಕಾಶದಲ್ಲಿ ಬಹು ವೇಗದಿಂದ ಹಾರಿ ಹೋಗುವ ನಾವು ನಿನ್ನ ಕರ ಕೊಂಡು ಹೋಗುವದು ಹ್ಯಾಗೆ? ಇಂಥಾ ದುರ್ಘಟವಾದ ಕೆಲಸ ನಮ್ಮಿಂದ ಹ್ಯಾಗೆ ಆದೀತು? ಎಂದು ಹೇಳಿದವು. ಅದಕ್ಕೆ ಆಮೆಯು—ಎಲೈ, ಅಣ್ಣಾಗಳಿರಾ, ಇದೇನು ಹೀಗೆ ಹೇಳುತ್ತೀರಿ? ಘಟ್ಟಿಗರಾದವರಿಗೆ ಯಾವ ಕೆಲಸ ತಾನೇ ಅಸಾಧ್ಯ? ಉದ್ಯೋಗಿಯಾದವನಿಗೆ ಯಾವ ದೇಶ ತಾನೇ ದೂರ? ವಿದ್ಯಾವಂತನಿಗೆ ಯಾವದು ತಾನೇ ಪರದೇಶ? ಒಳ್ಳೇ ಮಾತಾಡುವವನಿಗೆ ಯಾರು ತಾನೇ ಹಗೆಗಳು? ಎಂದು ನೀತಿ ಉಂಟು. ಆದ್ದರಿಂದ ಒಂದು ಕೋಲನ್ನು ತೆಗೆದು ಕೊಂಡು, ಅದರ ಎರಡು ತುದಿಗಳನ್ನು ನೀವು ಒಬ್ಬರೊಬ್ಬರು ಒಂದೊಂದು ತುದಿ ನಿಮ್ಮ ನಿಮ್ಮ ಕೊಕ್ಕಿನಿಂದ ಕಚ್ಚಿಕೊಂಡರೆ, ನಾನು ಆ ಕೋಲಿನ ನಡುವೆಯನ್ನು ಬಾಯಿಯಿಂದ ಘಟ್ಟಿಯಾಗಿ

ಕಚ್ಚಿ ಕೊಳ್ಳುತ್ತೇನೆ. ಆ ಮೇಲೆ ನೀವು ಎಷ್ಟು ಚುರುಕಾಗಿಯಾದರೂ ಆಕಾಶದಲ್ಲಿ ಹಾರಿ ಹೋಗ ಬಹುದು, ಎಂದು ಹೇಳಿತು. ಅದಕ್ಕೆ ಆ ಹಂಸ ಪಕ್ಷಿಗಳು—ಇದು ಉಪಾಯ ಸರಿ. ಆದರೆ ತಲಾ ಮುಟ್ಟುವ ವರಿಗೂ ನೀನು ಬಾಯಿ ಬಿಡದೆ ಇರ ಬೇಕು. ಮಧ್ಯೆ ಬಿಟ್ಟದ್ದಾದರೆ, ಕೆಳಗೆ ಬಿದ್ದು, ನುಚ್ಚುನೂರಾಗಿ ಹೋಗುವಿ ಎಂದು ಹೇಳಿ, ಅದೇ ಪ್ರಕಾರ ಮಾಡಿದವು. ಹೀಗೆ ಆಕಾಶ ಮಾರ್ಗದಲ್ಲಿ ಹೋಗುವಾಗ್ಯೆ, ಒಂದು ಸ್ಥಳದಲ್ಲಿ ದನಗಳನ್ನು ಮೇಯಿಸುತ್ತಾ ಇದ್ದ ದನ ಕಾಯುವ ಹುಡುಗರು ಇದನ್ನು ನೋಡಿ—ಎಲಾ, ನೋಡಿರೋ! ಇದೇನು ಆಶ್ಚರ್ಯ? ಒಂದು ಕೋಲಿನ ತುದಿಗಳನ್ನು ಎರಡು ಹಂಸಗಳು ಕಚ್ಚಿ ಕೊಂಡು, ಹಾರಿ ಹೋಗುತ್ತವೆ. ಅದರ ನಡುವೆಯನ್ನು ಆಮೆ ಕಚ್ಚಿ ಕೊಂಡ ಹೋಗುತ್ತದೆ. ನಾವು ಇದನ್ನು ನೋಡುತ್ತಾ, ಇದರ ಕೆಳಗೆ ಹೋಗೋಣ. ದೇವರ ದಯದಿಂದ ಈ ಆಮೆ ಏನಾದರೂ ನಡುವೆ ಬಾಯಿ ಬಿಟ್ಟರೆ, ಕೆಳಗೆ ಬಿದ್ದು, ಸತ್ತು ಹೋಗುತ್ತದೆ. ನಾವೆಲ್ಲರು ಸುಟ್ಟು ಕೊಂಡು, ತಿನ್ನ ಬಹುದು ಎಂದು, ಒಬ್ಬರಿಗೊಬ್ಬರು ಮಾತಾಡಿ ಕೊಳ್ಳುವದನ್ನು ಆ ಆಮೆಯು ಕೇಳಿ—ಬಾಯಿ ಬಿಡುವದಕ್ಕೆ ನಾನು ಹುಚ್ಚನಲ್ಲ ಎಂದು ಪ್ರತ್ಯುತ್ತರವನ್ನು ಕೊಡುವದಕ್ಕೆ ಬಾಯಿ ತೆರೆದು, ಕೆಳಗೆ ಬಿದ್ದು, ಸತ್ತು ಹೋದ್ದರಿಂದ, ದನ ಕಾಯುವ ಹುಡುಗರು ಅದನ್ನು ಸುಟ್ಟು, ತಿಂದು ಬಿಟ್ಟರು. ಹಂಸಗಳು—ಬುದ್ಧಿಹೀನನೆಂದು ವ್ಯಸನ ಪಟ್ಟು, ಕೋಲನ್ನು ಬಿಟ್ಟು, ಮಾನಸ ಸರಸ್ಸಿಗೆ—ಹೊರಟು ಹೋದವು.

35. The Crow, Deer and Jackal.

೩೫. ಕಾಗೆ, ಹುಲ್ಲೆ, ನರಿಗಳ ಕಥೆ.

ಮಗಧ ದೇಶದಲ್ಲಿ ಚಂಪಕಾವತೀ ಎಂಬ ಅರಣ್ಯದಲ್ಲಿ ಸಂಪಿಗೆ ಮರದ ಮೇಲೆ ಸುಬುದ್ಧಿ ಎಂಬ ಒಂದು ಕಾಗೆಯು ವಾಸವನ್ನು ಮಾಡಿ ಕೊಂಡಿತ್ತು. ಆ ಕಾಗೆಯೊಡನೆ ಸಾಧುಬುದ್ಧಿ ಎಂಬ ಒಂದು ಹುಲ್ಲೆಯು ಬಹು ಕಾಲದಿಂದ ಸ್ನೇಹವನ್ನು ಮಾಡಿ ಕೊಂಡು, ಹಗಲೆಲ್ಲಾ ತನ್ನ ಹೊಟ್ಟೇ ಪಾಡಿಗೆ ತಿರುಗುತ್ತಾ, ರಾತ್ರಿ ವೇಳೆ ಆ ಕಾಗೆ ಇರುವ ಸಂಪಿಗೆ ಮರದ ಕೆಳಗೆ ಇದ್ದು ಕೊಂಡು, ಆ ಕಾಗೆಯೊಡನೆ ಸುಖ ಸಲ್ಲಾಪಗಳನ್ನು ಮಾಡಿ ಕೊಂಡು ಇತ್ತು. ಹೀಗಿರುವಲ್ಲಿ, ಒಂದು ದಿವಸ ಈ ಹುಲ್ಲೆಯು ಮೇವಿಗೋಸ್ಕರ ಅರಣ್ಯದಲ್ಲಿ ತಿರುಗುತ್ತಾ ಇರಲು ದುರುಳಬುದ್ಧಿ ಎಂಬ ಒಂದು ಗುಳ್ಳೆ ನರಿಯು ಕಂಡು—ಅಹಹ! ಈ ಹುಲ್ಲೆಯು ಬಹಳ ತುಂಬಿದ ಮೈಯುಳ್ಳದ್ದಾಗಿ ಇದೆ. ಸುಖದಿಂದ ಇದರ

ಖಂಡ ಮಾಂಸಗಳನ್ನು ನಾನು ಹ್ಯಾಗೆ ತಿಂಬೆನು? ಇದಕ್ಕೇನು ಉಪಾಯವ
ನ್ನು ಮಾಡ ಬೇಕೆಂದು ಒಂದು ಘಳಿಗೆ ಯೋಚಿಸಿ, ಒಳ್ಳೇದು, ಇದರ ಕೂಡ
ಸ್ನೇಹವನ್ನು ಬಳಸಿ ನೋಡುವೆನೆಂದು, ಅದರ ಬಳಿಗೆ ಬಂದು—ಐಯ್ಯಾ, ಮಿ
ತ್ರನೇ, ನಾನು ನಂಟರಿಷ್ಟರಿಲ್ಲದೆ ಪರದೇಶಿಯಾಗಿ ಈ ಕಾಡಿನಲ್ಲಿ ಏಕಾಂಗಿಯಾ
ಗಿ ತಿರುಗುತ್ತಾ ಇದ್ದೆನು. ಈ ಹೊತ್ತು ನನ್ನ ಪುಣ್ಯದಿಂದ ಸ್ನೇಹಿತನಾದ
ನಿನ್ನನ್ನು ಕಂಡು, ಬಹಳ ಸಂತುಷ್ಟನಾದೆನು. ಇಂದಿನಾರಭ್ಯ ನಿನ್ನ ದಾಸ
ನಾಗಿ, ನಿನ್ನೊಡನೆ ತಿರಿಗಿ ಕೊಂಡಿರುವೆನೆಂದು, ಬಹಳ ಅಂಗಲಾಚಿ ಕೊಂಡು,
ಹೇಳಿ ಕೊಂಡದರಿಂದ, ಹುಲ್ಲೆಯು—ಹಾಗಾಗಲಿ ಎಂದು ಅದನ್ನು ಕರೆದು
ಕೊಂಡು, ಸಂಜೇ ವೇಳೆಯಲ್ಲಿ ಸಂಪಿಗೆ ಮರದ ಬಳಿಗೆ ಬಂತು. ಆಗ ಕಾಗೆ
ಯು ಹುಲ್ಲೆಯನ್ನು ನೋಡಿ—ಇದ್ಯಾರು? ಮತ್ತೊಬ್ಬ ಹೊಸಬ ಬಂದಿರುವನು,
ಎನ್ನಲು; ಇದು ದುರುಳಬುದ್ಧಿ ಎಂಬ ನರಿಯು. ನಮ್ಮೊಡನೆ ಸ್ನೇಹವನ್ನು
ಬಯಸಿ, ಬಂದು ಇದೆ ಎಂದು, ಹುಲ್ಲೆಯು ಹೇಳಲು; ಅದಕ್ಕಾ ಕಾಗೆಯು—
ಗುರುತು ಪರಿಚಿತಿ ಇಲ್ಲದವರೊಡನೆ ಸ್ನೇಹ ಬಳಸುವದು ನ್ಯಾಯವಲ್ಲ, ಎನ್ನ
ಲು; ಆ ನರಿಯು—ಮುಂಚಿತವಾಗಿಯೇ ಹ್ಯಾಗೆ ಗುರುತು ಪರಿಚಿತಿ ಆದೀತು?
ನೀನು ಈ ಹುಲ್ಲೆಯ ಸ್ನೇಹ ಮಾಡುವ ಮೊದಲು ದಿವಸ ನಿನಗೂ ಇದಕ್ಕೂ
ಗುರುತು ಪರಿಚಿತಿ ಇತ್ತೋ? ಈಚಿಗೆ ಆಯಿತು. ಹಾಗೆಯೇ ಇನ್ನು ಮೇಲೆ
ನನ್ನ ಗುರುತು ಪರಿಚಿತಿ ಆಗುತ್ತೆ. ನೀವು ದಯ ಮಾಡಿ, ನನ್ನನ್ನು ನಿಮ್ಮ
ಸ್ನೇಹದಲ್ಲಿ ಶೇರಿಸಿ ಕೊಳ್ಳ ಬೇಕೆಂದು, ಕಾಗೆಯನ್ನು ಬೇಡಿ ಕೊಂಡಿತು. ಆ
ಕಾಗೆಯು ಅರ್ಧಾಂಗೀಕಾರವಾಗಿ ಒಪ್ಪಿ ಕೊಂಡಿತು. ಹೀಗಿರುವಲ್ಲಿ, ಮತ್ತೊಂ
ದು ದಿವಸ ಕಾಡಿನಲ್ಲಿ ಈ ನರಿಯು—ಐಯ್ಯಾ, ಸ್ನೇಹಿತನೇ, ಸಮೀಪದಲ್ಲಿ ಒಂದು
ಗದ್ದೆಯು ಹೊಂಬಣ್ಣವಾದ ಭತ್ತದ ತೆನೆಗಳಿಂದ ಕೂಡಿ ಇಧೆ. ನೋಡು! ಬಾ
ಎಂಬು ಕರ ಕೊಂಡು ಹೋಗಿ, ತೋರಿಸಿತು. ಹುಲ್ಲೆಯು ಬಹು ಸಂತೋಷ
ದಿಂದ ದಿನ ಪ್ರತಿಯಲ್ಲಿಯೂ ಹೋಗಿ, ಮೇಯುತ್ತಾ ಇತ್ತು. ಅದನ್ನು ಕಂ
ಡು, ಆ ಗದ್ದೆಯ ಒಡೆಯನು—ಮಿಕ ಬಂದು, ಮೇದು, ಹೋಗುತ್ತದೆಂದು
ತಿಳಿದು, ಗದ್ದೆಯ ಸುತ್ತಾ ಬಲೆ ಒಡ್ಡಿ, ಮನೆಗೆ ಹೋಗಿದ್ದನು. ಅದನ್ನು
ಕಾಣದೆ, ಹುಲ್ಲೆಯು ಯಥಾ ಪ್ರಕಾರ ಹೋಗಿ, ಮೇದು, ಹಾರಿ ಬರುವ
ಲ್ಲಿ ಬಲೆಯಲ್ಲಿ ಶಿಕ್ಕಿ ಬಿತ್ತು. ಆಗ ಸಮೀಪದಲ್ಲಿರುವ ನರಿಯನ್ನು ನೋಡಿ—
ಐಯ್ಯಾ, ಗೆಳಿಯನೇ, ಈಗ ಈ ಬಲೆಯನ್ನು ಕಡಿದು, ನನ್ನನ್ನು ಹೊರಡಿ
ಸಿ ಕೊಂಡು ಹೋಗು, ಎನ್ನಲು; ನರಿಯು ತನ್ನ ಮನಸ್ಸಿನಲ್ಲಿ—ನಾನು ಮಾ

ಡಿದ ತಂತ್ರ ನೆರವೇರಿತು ಎಂದು ಸಂತೋಷ ಪಟ್ಟು, ಹುಲ್ಲೆಯನ್ನು ಕುರಿತು–ಐಯ್ಯಾ, ಮಿತ್ರನೇ, ಇದು ದನದ ನರಗಳಿಂದ ಮಾಡಿ ಇಧೆ. ಇದನ್ನು ಕಡಿದರೆ, ನನ್ನ ಹಲ್ಲುಗಳು ಉಳಿದಾವೇ? ಆದರೂ ಚಿಂತೆ ಇಲ್ಲ; ನಿನಗೋಸ್ಕರ ಕಡಿಯುವ ಎಂದರೆ, ಈ ಸೋಮವಾರ ದಿವಸ ಅಶುಚಿಯಾದ ನರವನ್ನು ಬಾಯಿಯಿಂದ ಹ್ಯಾಗೆ ಮುಟ್ಟಲಿ? ನಾಳೆ ಮುಂಜಾನೆ ನೋಡುವ, ಎನ್ನಲು; ಹುಲ್ಲೆಯು–ಇದು ಮೋಸಗಾರನೆಂದು, ಸುಮ್ಮಗಾಯಿತು. ಅಲ್ಲಿ ಸಂಜೇ ವೇಳೆಗೆ ಕಾಗೆಯು ತನ್ನ ಮಿತ್ರನಾದ ಹುಲ್ಲೆಯೂ ಆ ನರಿಯೂ ಬಾರದಿರಲು; ವ್ಯಸನದಿಂದ ನಿದ್ರೇ ಮಾಡದೆ, ಮುಂಜಾನೆ ಎದ್ದು, ಹುಡುಕುತ್ತಾ ಬರುತ್ತಾ ಇರುವಲ್ಲಿ, ಬಲೆಯಲ್ಲಿ ಶಿಕ್ಕಿರುವ ಸ್ನೇಹಿತನನ್ನು ಕಂಡು–ಇದೇನು ಎಂದು ಕೇಳಲು;–ಸ್ನೇಹಿತನ ಮಾತು ಕೇಳದ್ದಕ್ಕೆ ಪ್ರಾಯಶ್ಚಿತ್ತವೆಂದಿತು. ಆ ದುರುಳನೆಲ್ಲಿ ಎನಲು; ಅಗೋ, ನನ್ನ ಮಾಂಸವನ್ನು ತಿನ್ನುವದಕ್ಕೆ ಅಲ್ಲಿ ಕಾದು ಕೊಂಡು, ಕೂತಿದೆ ಎಂದಿತು. ಅಷ್ಟರಲ್ಲಿ ಆ ಗದ್ದೆಯವನು ಕೈಯಲ್ಲಿ ದೊಣ್ಣೆಯನ್ನು ತೆಗೆದು ಕೊಂಡು ಬರುವದನ್ನು ಕಂಡು–ಅಗೋ, ನಿನ್ನನ್ನು ಕೊಲ್ಲುವದಕ್ಕೆ ಗದ್ದೆಯವನು ಬರುತ್ತಾನೆ. ನೀನು ನಾಲ್ಕು ಕಾಲುಗಳನ್ನು ಬೀರಿ ಕೊಂಡು, ಉಸುರನ್ನು ಕಟ್ಟಿ, ಹೊಟ್ಟೆಯನ್ನು ಉಬ್ಬರಿಸಿ ಕೊಂಡು, ಕಣ್ಣು ಮುಚ್ಚಿ ಕೊಂಡು, ಬಿದ್ದುಕೋ. ನಿನ್ನ ಕಣ್ಣನ್ನು ಕುಕ್ಕುವವನ ಹಾಗೆ ನಿನ್ನ ಮೇಲೆ ಕೂತಿರುವೆನು. ನಾನು ಯಾವಾಗ ಕೂಗಿ ಕೊಂಡು, ಮೇಲಕ್ಕೆ ಹಾರುತ್ತೇನೋ, ಆಗ ನಿನ್ನ ಸರ್ವ ಶಕ್ತಿಯಿಂದ ಹಾರಿ ಹೋಗು ಎಂದು, ಆ ರೀತಿ ಮಾಡಿಸಿ, ತಾನು ಅದರ ಮೇಲೆ ಕೂತಿತ್ತು. ಆಗ ಗದ್ದೆಯ ಒಡೆಯನು ಬಂದು, ಹುಲ್ಲೆಯ ಇರುವಿಕೆಯನ್ನು ನೋಡಿ, ಇದು ತನ್ನೊಳಗೆ ತಾನೇ ಸತ್ತಿದೆ ಎಂದು ಎಣಿಸಿ, ಬಲೆಯನ್ನು ಬಿಚ್ಚಿ ಇಟ್ಟು, ಹುಲ್ಲೆಯನ್ನು ತೆಗೆದು ಕೊಳ್ಳುವದಕ್ಕೆ ಬರುತ್ತಿರಲು; ಕಾಗೆಯು ಕೂಗಿ ಕೊಂಡು, ಹಾರಿ ಹೋಯಿತು. ಸಂಗಾತಲೇ ಹುಲ್ಲೆಯು ಹಾರುವದನ್ನು ಕಂಡು, ಗದ್ದೆಯವನು ದೊಣ್ಣೆ ಎಸೆಯಲು; ಅದು ಹುಲ್ಲೆಗೆ ತಗಲದೆ, ಕೂತಿದ್ದ ನರಿಗೆ ತಗಲಿ, ನರಿಯು ಸತ್ತು ಹೋಯಿತು. ಆದ್ದರಿಂದ ಒಬ್ಬರಿಗೆ ಮೋಸವನ್ನು ಮಾಡ ಬೇಕೆಂದೆಣಿಸಿದವರನ್ನು ದೇವರು ಕೆಡಿಸುವನು.

36. The Shopkeeper's Son and Jewel.

೩೬. ಕೋಮಟಿಗನ ಮಗನಿಗೆ ರತ್ನ ಶಿಕ್ಕಿದ್ದನ್ನು ಕುರಿತು.

ಅಳಕಾವತಿ ಎಂಬ ಪಟ್ಟಣದಲ್ಲಿ ಅಳಕಶೇಖರರಾಯನೆಂಬ ಅರಸು ಇದ್ದನು. ಆ ಪಟ್ಟಣದಲ್ಲಿ ಚಿನ್ನಶೆಟ್ಟಿ ಎಂಬ ಒಬ್ಬ ಕೋಮಟಿಗನು ಚಿಲ್ಲರೇ ಅಂಗಡಿ

ಯನ್ನು ಹಾಕಿಕೊಂಡು, ವ್ಯಾಪಾರವನ್ನು ಮಾಡಿ ಕೊಂಡು ಇದ್ದನು. ಒಂದಾನೊಂದು ದಿವಸ ತನ್ನ ಮಗ ಯೆಂಗಶೆಟ್ಟಿ ಎಂಬವನನ್ನು ಕರೆದು—ಅಂಗಡಿಯಲ್ಲಿ ಚವುಳುಪ್ಪು ಇಲ್ಲ; ಉಪ್ಪಾರರ ಮೋಳೆಗೆ ಹೋಗಿ, ಚವುಳುಪ್ಪು ತೆಗೆದು ಕೊಂಡು ಬಾ ಎಂದು ಒಂದು ರೂಪಾಯಿಯನ್ನು ಕೊಟ್ಟು, ಕಳುಹಿಸಿದನು. ಈ ಯೆಂಗಶೆಟ್ಟಿಯು ಪಕ್ಕಾ ಸೇರನ್ನೂ ಕುಕ್ಕಿಯನ್ನೂ ತೆಗೆದು ಕೊಂಡು, ಉಪ್ಪಾರರ ಮೋಳೆಗೆ ಹೋಗಿ, ಚವುಳುಪ್ಪನ್ನು ಅಗ್ಗವಾಗಿ ಖರೀದಿಯನ್ನು ಮಾಡಿ, ತೆಗೆದು ಕೊಂಡು ಬರುತ್ತಾ, ಪಟ್ಟಣದ ಬೀದಿಯಲ್ಲಿ ಉಪ್ಪಿನ ಕುಕ್ಕಿಯನ್ನು ಎತ್ತಿ ಹಾಕಿಕೊಂಡು, ಬಿದ್ದು, ಅಳುತ್ತಾ, ಆ ಉಪ್ಪನ್ನು ಅಲ್ಲಿಯೇ ಮಣ್ಣು ಸಹ ಬಾಚಿ, ಬಾಚಿ, ಕುಕ್ಕಿಗೆ ತುಂಬಿ ಕೊಳ್ಳುತ್ತಾ ಇದ್ದನು. ಇದನ್ನು ಬರುವ ಹೋಗುವ ಜನರಲ್ಲಿ ಇವನ ಗುರುತು ಇದ್ದವರು ಕಂಡು, ಇವನ ಅಪ್ಪನ ಬಳಿಗೆ ಹೋಗಿ,—ನಿನ್ನ ಮಗನು ರಾಜ ಬೀದಿಯಲ್ಲಿ ಉಪ್ಪಿನ ಮುಂಕರಿ ಎತ್ತಿ ಹಾಕಿಕೊಂಡು, ಬಿದ್ದು, ತಿರಿಗಿ ಮಣ್ಣಿನಲ್ಲಿ ಬೆರೆದ ಉಪ್ಪನ್ನು ಅಳುತ್ತಾ ತುಂಬುತ್ತಲಿದ್ದಾನೆ, ಎನಲು; ಆ ಕೋಮಟಿಗನು—ನನ್ನ ಮಗ ಬಲು ಜಾಣನು; ಏನೋ ಲಾಭವನ್ನು ಕಂಡು, ಹೀಗೆ ಮಾಡಿದ್ದಾನೆಂದು, ಮನಸ್ಸಿನಲ್ಲಿ ಸಂತೋಷವನ್ನು ಹೊಂದಿ, ಹೇಳಿದವನ ಸಂಗಡ—ನಷ್ಟಕಾಲ! ಏನು ಮಾಡ ಬೇಕು? ಎಂದು ವ್ಯಸನ ಪಟ್ಟು, ಕಳುಹಿಸಿ ಬಿಟ್ಟನು. ಆ ಮೇಲೆ ಮಣ್ಣು ಬೆರೆದ ಉಪ್ಪನ್ನು ಹೊತ್ತು ಕೊಂಡು, ಅಳುತ್ತಾ ಬರುವ ಮಗನ ಕುಕ್ಕಿಯನ್ನು ಇಳಿಸಿ ಕೊಂಡು, ತಲಬಾಗಲನ್ನು ಹಾಕಿ, ಅಪ್ಪ ಮಗ ಸಹ ಆ ಉಪ್ಪನ್ನು ಕೇರಿ ನೋಡುವಲ್ಲಿ, ಲಕ್ಷಾಂತರ ವರಹಾ ಬಾಳುವ ರತ್ನ ಶಿಕ್ಕಿದ್ದರಿಂದ, ಅದನ್ನು ಮಾರಿ, ಅದರಿಂದ ದ್ವೀಪಾಂತರಗಳ ವ್ಯಾಪಾರವನ್ನು ಮಾಡುತ್ತಾ, ದೊಡ್ಡ ಸಾವುಕಾರರು ಅನ್ನಿಸಿ ಕೊಂಡು, ಚನ್ನಾಗಿ ಬದುಕಿದರು.

37. The Cocoanut and Mango Trees.

38. ತೆಂಗಿನ ಮರವನ್ನೂ ಮಾವಿನ ಮರವನ್ನೂ ಕುರಿತದ್ದು.

ಮಧುವನವೆಂಬ ವನದಲ್ಲಿ ಚನ್ನಾಗಿ ಬೆಳೆದು, ಉದ್ದವಾದ ಗರಿಗಳಿಂದಲೂ, ಬಿಳೀ ಚಾಮರದೋಪಾದಿಯಲ್ಲಿ ಇರುವ ಹೊಂಬಾಳೆಗಳಿಂದಲೂ, ಹರಳು ಗಾಯಿಗಳಿಂದಲೂ, ಕುರುಬೆಗಳಿಂದಲೂ, ಎಳೆ ನೀರುಗಳಿಂದಲೂ, ಮೋತೆ ಗಾಯಿಗಳಿಂದಲೂ, ತಳಲು ಗಾಯಿಗಳಿಂದಲೂ, ಒಪ್ಪುತ್ತಿರುವ ತೆಂಗಿನ ಮರವು ತನಗೆ ಸರಿಯಾಗಿ ತನ್ನ ಬಳಿಯಲ್ಲಿರುವ ಶೀ ಮಾವಿನ ಮರವನ್ನು ನೋಡಿ—ಎಲೋ,

ಹೆಮ್ಮೆಗಾರನೇ, ನಾನು ಒಬ್ಬ ದೊಡ್ಡ ಮನುಷ್ಯನೆಂದು, ನನಗೆ ಸರಿಯಾಗಿ ನನ್ನ ಬಳಿಯಲ್ಲಿ ನೀನು ನಿಲ್ಲ ಬಹುದೇ? ನೀನು ಹೊರಗೆ ಮಧುರವಾಗಿದ್ದಾಗ್ಯೂ, ಒಳಗೆ ಬಹಳ ಕಠಿಣವಾಗಿದ್ಧೀ. ಆದ್ದರಿಂದ ನಿನ್ನನ್ನು ಬರುವ ಹೋಗುವ ಜನರೆಲ್ಲಾ ಕಲ್ಲಿನಿಂದಲೂ ದೊಣ್ಣೆಗಳಿಂದಲೂ ಎಸೆಯುತ್ತಾರೆ. ಇದರ ಮೇಲೂ ನೀನು ವರುಷಕ್ಕೆ ಒಂದೆರಡು ತಿಂಗಳು ಜನರಿಗೆ ಉಪಕಾರಿಯಾಗಿದ್ಧೀ. ನಾನೋ ಅಂದರೆ, ಮುನ್ನೂರು ಅರುವತ್ತು ದಿವಸವು ಜನರಿಗೆ ಉಪಕಾರವನ್ನು ಮಾಡುತ್ತೇನೆ. ಶಿಪ್ಪೆ ಎಂಬ ಚರ್ಮದಿಂದ ಮುಚ್ಚಲ್ಪಟ್ಟದ್ದಾಗಿಯೂ—ಕರಟವೆಂಬ ಬ್ರಹ್ಮಕಪಾಲದಿಂದ ಕೂಡಿದ್ದಾಗಿಯೂ—ಸ್ಫಟಿಕದಂತೆ ಬಿಳುಪಾಗಿಯೂ—ಗಂಗೋದಕವನ್ನು ಧರಿಸಿದ್ದಾಗಿಯೂ—ಗಣಪತಿಗೆ ಸಂತೋಷಕರವಾಗಿಯೂ—ಮೂರು ಕಣ್ಣುಗಳು ಉಳ್ಳದ್ದಾಗಿಯೂ—ಎತ್ತಿನ ಮೇಲೆ ಸಂಚಾರ ಮಾಡುವದಾಗಿಯೂ—ಇರುವ ನನ್ನ ಫಲವನ್ನು, ಸಾಕ್ಷಾತ್ ಶಿವನೆಂದು, ಎಲ್ಲರು ಸೇವಿಸುತ್ತಾರೆ ಎನಲು; ಮಾವಿನ ಮರವು ತೆಂಗಿನ ಮರವನ್ನು ಕುರಿತು—ಛೀ! ಛೀ! ನೀನು ಯಾವ ದೊಡ್ಡ ಮನುಷ್ಯ? ದೊಡ್ಡವರು ನಿನ್ನಂತೆ ಮತ್ತೊಬ್ಬರನ್ನು ನಿಂದಿಸುವರೇ? ತಮ್ಮ ತಾವು ಹೊಗಳಿ ಕೊಳ್ಳುವರೇ? ನನ್ನಲ್ಲಿ ಒಳಗೆ ಕಾಠಿಣ್ಯವಿದ್ದರೆ, ನಿನ್ನಲ್ಲಿ ಹೊರಗೆ ಕಾಠಿನ್ಯವಿದೆ. ಆದರೆ, ನನ್ನ ಕಾಠಿಣ್ಯದಲ್ಲಿ ಪ್ರಯೋಜನವಿರುವದರಿಂದ, ಅದನ್ನು ಜನರು ಕುಣಿಯಲ್ಲಿ ನೆಟ್ಟು, ನೀರು ಹೊಯ್ದು, ಲಾಲಿಸುತ್ತಾರೆ. ನಿನ್ನ ಕಾಠಿನ್ಯವು ವ್ಯರ್ಥವಾದ್ದರಿಂದ, ಬೆಂಕಿಯಲ್ಲಿ ಸುಟ್ಟು ಬಿಡುತ್ತಾರೆ. ಸದಾಕಾಲವು ಶ್ರಮ ಪಟ್ಟು ಬಂದವರಿಗೆ ನನ್ನ ನೆಳಲಿಂದ ಸೌಖ್ಯ ಪಡಿಸುತ್ತೇನೆ. ನೀನು ಮಟ್ಟೆಯನ್ನು ಕೆಡವಿ, ಪ್ರಾಣವನ್ನು ಕೊಲ್ಲುವವನಾದ್ದರಿಂದ, ಒಬ್ಬರೂ ನಿನ್ನ ನೆಳಲನ್ನು ಸೇರುವದಿಲ್ಲ. ಮನ್ಮಥನು ನನ್ನ ಹೂಬಾಣದಿಂದ ಶಿವನೆದೆಗೆ ಇಡಲು, ಸೋತು, ಅರೆವೆಣ್ಣಾದನು. ನನ್ನ ಹಣ್ಣು ಶಿವನೆಂದು ಹೆಮ್ಮೆ ಕೊಚ್ಚಿ ಕೊಳ್ಳುತ್ತೀ. ಲೋಕದಲ್ಲಿ ಅಯೋಗ್ಯವಾದ ವಸ್ತುವೂ ಇಲ್ಲ. ಸರ್ವ ಗುಣ ಸಂಪನ್ನ ವಸ್ತುವೂ ಇಲ್ಲವೆನಲು; ತೆಂಗಿನ ಮರ ನಾಚಿ ಕೊಂಡು, ಸುಮ್ಮಗಾಯಿತು.

38. The Story of Maharaja.

೩೮. ಮಹಾರಾಜನ ಚರಿತ್ರೆ.

ಮಲನಾಡಿನಲ್ಲಿ ರಾಜಮಹೇಂದ್ರಪುರವೆಂಬ ಒಂದು ಪಟ್ಟಣವು ಇರುವದು. ಆ ಪಟ್ಟಣದಲ್ಲಿ ಮಹಾರಾಜನೆಂಬ ಅರಸು ಇರುವನು. ಅವನ ಅಡಿಗೆಯ ಮನೆಗೆ ನಿತ್ಯ ಗಟ್ಲೆಯಲ್ಲಿಯೂ, ಬೇಟೆಯನ್ನು ಆಡಿ, ಯಾವದಾದರೂ ಒಂ

ದು ಮೃಗ ಮಾಂಸವನ್ನು ತಂದು ಕೊಡುವಂತೆ, ಬೇಟೆಗಾರರಿಗೆ ಕಟೆಯನ್ನು ಮಾಡಿಸಿ ಇದ್ದದರಿಂದ, ಅವರು ಅದೇ ಮೇರೆ ತಂದು ಕೊಡುತ್ತಾ ಇದ್ದರು. ಅರಸು ಅದನ್ನು ಬಾಣಸಿಗನ ಕಡೆಯಿಂದ ಅಡಿಗೆ ಮಾಡಿಸಿ, ತಿನ್ನುತ್ತಾ ಇದ್ದನು. ಹೀಗಿರುವಲ್ಲಿ ಒಂದು ದಿವಸ ಸೋನೆ ಮಳೆಯು ಜಡಿಯು ಹಿಡಿದು, ಹೊರಗೆ ಕಾಲನ್ನು ಇಡುವದಕ್ಕೆ ಆಗದೆ ಇದ್ದದರಿಂದ, ಆ ಬೇಟೆಗಾರರು ಯಾವನೋ ಒಬ್ಬ ಹತ್ತು ವರುಷದ ಹುಡುಗನನ್ನು ಕೊಂದು ಹಾಕಿ, ಅವನ ಮಾಂಸವನ್ನು ಅರಸಿನ ಅಡಿಗೆಯ ಮನೆಗೆ ಕೊಟ್ಟರು. ಅಡಿಗೆಯವನು ಪಾಕವನ್ನು ಮಾಡಿ, ಅರಸಿಗೆ ಬಡಿಸಿದ್ದರಿಂದ ಅದನ್ನು ಅರಸು ತಿಂದು, ಈ ದಿನದ ಮಾಂಸವು ಬಹಳ ರುಚಿಯಾಗಿದೆ. ನಿತ್ಯದಲ್ಲಿಯೂ ಈ ದಿವಸ ತಂದ ಮೃಗ ಮಾಂಸವನ್ನೇ ತಂದು ಕೊಡಿ ಎಂದು ಬೇಟೆಗಾರರಿಗೆ ಕಟ್ಟು ಮಾಡಲು; ಆ ಬೇಟೆಗಾರರು—ಸ್ವಾಮಿ, ಅಭಯವಾದರೆ, ನಡೆದ ವಿವರವನ್ನು ಅರಿಕೆ ಮಾಡುತ್ತೇವೆ, ಅಂದರು. ಅರಸು—ಹೆದರ ಬೇಡಿ; ಹೇಳಿ, ಎನ್ನಲು; ಬೇಡರು—ಸ್ವಾಮಿ, ನೆನ್ನೇ ಹಿಡದ ಜಡಿ ಬಿಡದೆ ಸುರಿಯುತ್ತಾ ಇದ್ದದರಿಂದ, ಹೊರಗೆ ಹೋಗುವದಕ್ಕೆ ಪಾಲುಮಾಗಿ, ಒಬ್ಬ ಹತ್ತು ವರುಷದ ಹುಡುಗನನ್ನು ಕೊಂದು, ಅವನ ಮಾಂಸವನ್ನು ತಂದು ಕೊಟ್ಟೆವು, ಅಂದರು. ಅರಸು ಬೇಟೆಯವರನ್ನು—ಹೋಗಿ ಎಂದು ಹೇಳಿ, ಗುಟ್ಟಾಗಿ ಅಡಿಗೆಯವನನ್ನು ಕರೆದು—ಇನ್ನು ಮೇಲೆ ದಿನ ವಹಿಯಲ್ಲೂ ನನ್ನ ಅಡಿಗೇ ಮನೆಗೆ ಯಾವ ಹುಡುಗನು ನಿಂಬೇ ಹಣ್ಣಿನ ಹೋಳನ್ನು ತಂದು ಕೊಡುತ್ತಾನೋ, ಅವನು ಯಾರೇ ಆಗಲಿ, ಅವನನ್ನು ಇರಿದು, ಪಾಕವನ್ನು ಮಾಡಿ, ನಮಗೆ ಬಡಿಸುತ್ತಾ ಬಾ ಎಂದು ಕಟ್ಟು ಮಾಡಿ, ತಾನು ಯಾರಾದರೂ ಒಬ್ಬ ಹುಡುಗನನ್ನು ಕರೆದು, ಅವನ ಕೈಯಲ್ಲಿ ಒಂದು ನಿಂಬೇ ಹಣ್ಣಿನ ಹೋಳನ್ನು ಕೊಟ್ಟು—ನಮ್ಮ ಅಡಿಗೆಯ ಮನೆಗೆ ಕೊಟ್ಟು ಬಾ ಎಂದು ಕಳುಹಿಸುತ್ತಾ ಬಂದನು. ಅಡಿಗೆಯವನು ಅವನ ಇರಿದು, ಪಾಕವನ್ನು ಮಾಡಿ, ಅರಸಿಗೆ ಬಡಿಸುತ್ತಾ ಬಂದನು. ಹೀಗೆ ಕೆಲವು ದಿವಸ ನಡೆಯುತ್ತಾ ಇರುವಲ್ಲಿ, ಒಂದು ದಿವಸ ಈ ಅರಸಿನ ಮಗನೂ ಮತ್ತೊಬ್ಬ ಹುಡುಗನೂ ಲಗ್ಗೆ ಚಂಡನ್ನು ಆಡುತ್ತಾ ಇದ್ದರು. ಅವರನ್ನು ಅರಸು ನೋಡಿ, ತನ್ನ ಮಗನ ಜೊತೆಯಲ್ಲಿ ಆಡುವ ಹುಡುಗನನ್ನು ಕರೆದು—ಈ ನಿಂಬೇ ಹಣ್ಣಿನ ಹೋಳನ್ನು ನಮ್ಮ ಅಡಿಗೇ ಮನೆಗೆ ಕೊಟ್ಟು ಬಾ ಎಂದು ಹೇಳಿ, ಕೊಡಲು; ಅವನು ಅಡಿಗೆಯ ಮನೆಗೆ ಹೋಗದೆ, ತನ್ನ ಜೊತೆಗಾರನಾದ ಈ ಅರಸಿನ ಹುಡುಗನ ಬಳಿಗೆ ಬಂದು, ಅರಸು

ಹೇಳಿದ ಮಾತನ್ನು ಹೇಳಲು; ಅವನು—ನೀನು ಚಂಡನ್ನೂ ಲಗ್ಗೆಯನ್ನೂ ಕಾದು ಕೊಂಡು ಇರು; ನಾನು ಕೊಟ್ಟು ಬರುತ್ತೇನೆಂದು, ಅವನ ಕೈಯಲ್ಲಿ ಇದ್ದ ನಿಂಬೇ ಹೋಳನ್ನು ತೆಗೆದು ಕೊಂಡು, ಅಡಿಗೇ ಮನೆಗೆ ಹೋಗಿ, ಅಡಿಗೆಯವನ ಕೈಯಲ್ಲಿ ಕೊಡಲು; ಅವನು ಮನಸ್ಸಿನಲ್ಲಿ ವ್ಯಸನ ಪಟ್ಟು, ಅವನನ್ನು ಕಠಾರಿಯಿಂದ ಇರಿದು, ಅವನ ಮಾಂಸವನ್ನು ಅಡಿಗೆಯನ್ನು ಮಾಡಿ, ಅರಸಿಗೆ ಬಡಿಸಿದನು. ಅರಸು ಅದರಲ್ಲಿ ಒಂದು ಗುಕ್ಕನ್ನಾದರೂ ತಿನ್ನುವದಕ್ಕೆ ಆಗದೆ, ಬಹಳ ಹೊಲಸಾಗಿ ತಿಳಿದು, ಅಡಿಗೆಯವನನ್ನು ಕೇಳಲು; ಅವನು ನಡೆದ ಸ್ಥಿತಿಯನ್ನು ಹೇಳುವದು;—ನಾನು ಮಾಡಿದ ಪಾಪವೇ ನನಗೆ ಬಂತೆಂದು, ಕುದುರೆಯನ್ನೇರಿ, ಒಂದು ದೊಡ್ಡ ಕಲ್ಲಿನ ಮೇಲೆ ಏರಿಸಿ, ಹಾರಿಸಿ, ಕೆಳಗೆ ಬಿದ್ದು, ಸತ್ತು ಹೋದನು. ಆ ದೊಡ್ಡ ಕಲ್ಲಿಗೆ ಮಹಾರಾಜ ದುರ್ಗವೆಂದು ಹೆಸರಾಗಿ ಈಗಲೂ ಇಧೆ.

39. The Rice and Husks.

೩೯. ಅಕ್ಕಿಗಳನ್ನೂ ಹೊಟ್ಟುಗಳನ್ನೂ ಕುರಿತದ್ದು.

ಮಧುರಾವತಿ ಎಂಬ ಪಟ್ಟಣದಲ್ಲಿ ಕೊಟ್ಣಗೇರಿಯಲ್ಲಿ ಒಬ್ಬ ಕೊಟ್ಣಗಾರನ ಮನೆಯೊಳಗೆ ಕೊಟ್ಣಕ್ಕೆ ಭತ್ತವನ್ನು ತಂದು, ಕುಟ್ಟಿ, ಕೇರಿ, ಹೊಟ್ಟುಗಳನ್ನು ತಿಪ್ಪೆಗೆ ಹಾಕುತ್ತಾ, ಚನ್ನಾಗಿ ತೊಳಿಸಿದ ಅಕ್ಕಿಗಳನ್ನು ಕೊಮ್ಮೆಗಳಲ್ಲಿಯೂ, ಕಡಿಕೆಗಳಲ್ಲಿಯೂ, ಓಡೆಗಳಲ್ಲಿಯೂ, ಅಳಗೆಗಳಲ್ಲಿಯೂ, ಗೂಡೆಗಳಲ್ಲಿಯೂ, ತುಂಬುತ್ತಾ ಇದ್ದರು. ಆಗ ಅಕ್ಕಿಗಳು ಹೊಟ್ಟುಗಳನ್ನು ನೋಡಿ—ಎಲೈ, ಹೊಟ್ಟುಗಳಿರಾ, ನೀವೂ ನಾವೂ ಒಂದೇ ಮನೆಯಲ್ಲಿ ಒಬ್ಬನಲ್ಲಿಯೇ ಹುಟ್ಟಿ, ಇಬ್ಬರು ಈ ವರಿಗೂ ಕೂಡ ಇದ್ದೆವು. ಈಗ ನೀವು ಲಘುಗಳಾದ್ದರಿಂದ, ನಿಮ್ಮನ್ನು ಭಾರಿಯವರಾದ ನಮ್ಮ ಜೊತೆಯಿಂದ ಬೇರೆ ಮಾಡಿ, ತೆಗೆದು ಕೊಂಡು ಹೋಗಿ, ಮನೆಯ ಹೊರಗೆ ತಿಪ್ಪೆಗೆ ಸುರಿಯುತ್ತಾರೆ. ನಮ್ಮನ್ನು ಒಳಗೆ ಇಟ್ಟು, ಪೂಜಿಸುತ್ತಾರೆ. ಆದಕಾರಣ ಲೋಕದಲ್ಲಿ ಘನವಂತರಿಗೆ ಮರಿಯಾದೆ ಆಗುತ್ತದೆ, ನೀಚರಿಗೆ ಅವಮಾನವಾಗುತ್ತದೆ, ಎಂದು ಹಾಸ್ಯವನ್ನು ಮಾಡಿದವು. ಆಗ ಹೊಟ್ಟುಗಳು—ಎಲೈ, ಅಕ್ಕಿಗಳಿರಾ, ನೀವೂ ನಿಮ್ಮ ಹುಟ್ಟೂ ಯಾರಿಂದಾಯಿತು? ನಿಮ್ಮ ಬೆಳಸು ಯಾರಿಂದಾಯಿತು? ಈ ವರಿಗೂ ನಿಮ್ಮ ಕಾಪಾಡುವಿಕೆಯು ಯಾರಿಂದಾಯಿತು? ಇವನ್ನೆಲ್ಲಾ ಚನ್ನಾಗಿ ತಿಳಿದು ನೋಡದೆ, ನಿಮ್ಮ ನಂಟರಾದ ನಮ್ಮನ್ನು ಹೀಗೆ ಹೀಹಾಳಿಸಿ, ನುಡಿಯುವದು ಯಾವ ನಡತೆ? ನಾವು ನಿಮ್ಮೊಡನೆ ಇಲ್ಲದೆ ಇದ್ದರೆ, ನೀವು ಹುಟ್ಟಿ ಹೆಚ್ಚಾಗಲಾರಿರಿ. ತಿಪ್ಪೆಗೆ ಹಾಕಿ

ದ ನಮ್ಮಿಂದಲೇ ನೀವು ಚನ್ನಾಗಿ ಬೆಳದಿರಿ. ಈ ವರಿಗೂ ನಮ್ಮ ಜೊತೆಯಲ್ಲಿ ಇದ್ದದರಿಂದಲೇ, ನೀವು ಸೌಖ್ಯವಾಗಿದ್ದಿರಿ. ಇನ್ನು ಮೇಲೆ ನಿಮಗೆ ಉಂಟಾಗುವ ಕಷ್ಟವನ್ನು ಕೇಳರಿ;—ಜನರು ಮಡಿಕೆಯಲ್ಲಿಯೋ ತಪ್ಪಲೆಯಲ್ಲಿಯೋ ನೀರನ್ನು ಕುದಿಸಿ, ಆ ಕುದಿಯುವ ನೀರಿನಲ್ಲಿ ನಿಮ್ಮನ್ನು ಸುರಿದು, ಬೇಯಿಸಿ, ನುಂಗಿ ಬಿಡುವರು. ಒಂದು ವೇಳೆ ಹಾಗಾಗದೆ ನಿಂತಲ್ಲಿ, ನಿಮ್ಮನ್ನು ಹುಳುಗಳು ತಿಂದು, ಹುಡಿ ಮಾಡಿ, ಹಾಳು ಮಾಡುವವು. ಆದ್ದರಿಂದ ಬುದ್ಧಿವಂತರಾದವರು ತಾವು ದೊಡ್ಡವರೆಂದು ಬಡವರಾದ ಸ್ವಜನಗಳನ್ನು ತಿರಸ್ಕರಿಸದೆ, ಕೂಡಿ ಇದ್ದು, ವೃದ್ಧಿಯನ್ನು ಹೊಂದುವರು. ಬುದ್ಧಿ ಇಲ್ಲದವರು ನಿಮ್ಮಂತೆ ಸ್ವಜನಗಳನ್ನು ಬಿಟ್ಟು, ಕ್ಷಯಿಸಿ ಹೋಗುವರು ಎಂದು, ಪ್ರತ್ಯುತ್ತರವನ್ನು ಕೊಟ್ಟದರಿಂದ, ಅಕ್ಕಿಗಳು ಇವುಗಳ ಮಾತನ್ನು ಕೇಳಿ, ಇದೆಲ್ಲಾ ಯುಕ್ತವೆಂದು ಎಣಿಸಿ, ಬಹಳ ವ್ಯಸನ ಪಟ್ಟವು.

40. The Bees and the Frogs.

೪೦. ತುಂಬಿಗಳನ್ನೂ ಕಪ್ಪೆಗಳನ್ನೂ ಕುರಿತದ್ದು.

ಚಂಪಕಾವನದಲ್ಲಿ ಪದ್ಮಾಕರವೆಂಬ ಒಂದು ದೊಡ್ಡ ಕೆರೆಯು ಆಳವಾದ ನೀರುಳ್ಳದ್ದರಿಂದ, ಬಹು ಕೆಸರಿನಿಂದ ಕೂಡಿ ಇತ್ತು. ಆ ಕೆಸರಿನಲ್ಲಿ ಕೆಂದಾವರೆಗಳೂ ಬಿಳಿದಾವರೆಗಳೂ ಹೊಂದಾವರೆಗಳೂ ಕನ್ನೈದಿಲೆಗಳೂ ಕುಮುದಗಳೂ ಮೊದಲಾದ ಅನೇಕ ಹೂವುಗಳು ಬೆಳೆದು, ಬಂಡುಗಳಿಂದ ತುಂಬಿ, ಬಹಳ ಇಂಪಾಗಿದ್ದವು. ಮತ್ತೊಂದು ಕಾಡಿನಲ್ಲಿ ಇದ್ದ ತುಂಬಿಗಳ ಹಿಂಡು ಈ ಕೆರೆಗೆ ಬಂದು, ಈ ಹೂವುಗಳಲ್ಲಿ ಕುಳಿತು, ಜೇನುಗಳನ್ನು ಸವಿಯುತ್ತಾ ಇದ್ದವು. ಆ ಹೂವುಗಳ ಬುಡದ ಕೆಸರುಗಳಲ್ಲಿರುವ ಕಪ್ಪೆಗಳು ಈ ಆರಡಿಗಳ ತಂಡಗಳನ್ನು ನೋಡಿ—ಎಲೈ, ಪರದೇಶಿಗಳಿರಾ, ನಿಮ್ಮ ದೇಶದಲ್ಲಿ ನಿಮಗೆ ತಿನ್ನುವದಕ್ಕೆ ಗತಿ ಇಲ್ಲದೆ, ನಮ್ಮ ದೇಶಕ್ಕೆ ಬಂದು, ಹೊಟ್ಟೆಯನ್ನು ಹೊರಕೊಳ್ಳುತ್ತೀರಾ? ಎಂದು ಕೇಳಿದ್ದಕ್ಕೆ, ಆ ಬಂಡುಣಿಗಳು ಈ ಮಂಡೂಕಗಳನ್ನು ಕುರಿತು—ಎಲೈ, ಮತಿಗೇಡಿಗಳಿರಾ, ನಿಮಗೆ ಸ್ವಲ್ಪವಾದರೂ ಬುದ್ಧಿ ಇಲ್ಲದ ಕಾರಣ, ನಿಮ್ಮ ಸ್ವದೇಶದಲ್ಲಿರುವ ಒಳ್ಳೇ ವಸ್ತುಗಳ ಗುಣಗಳನ್ನು ತಿಳಿಯದೆ, ಕೆಸರು ತಿಂದು, ಹೊಟ್ಟೆ ಹೊರೆಯುತ್ತಾ, ವಟವಟಾ ಎಂದು ಒರಳಿ ಕೊಳ್ಳುತ್ತೀರಿ. ನಾವು ನಿಮ್ಮ ಅವಿವೇಕವನ್ನೂ ನಿಮ್ಮ ದೇಶದ ಗುಣವನ್ನೂ ತಿಳಿದವರಾದ್ದರಿಂದ, ಪರದೇಶದಿಂದ ಬಂದು, ನಿಮ್ಮ ದೇಶವನ್ನು ಆಕ್ರಮಿಸಿ ಕೊಂಡು, ನಿಮ್ಮ ದೇಶದಲ್ಲಿರುವ ಚೆಲುವ ವಸ್ತುಗಳ

ನ್ನು ಅನುಭವಿಸಿ, ಕೇಳುವವರ ಕಿವಿಗೆ ಇನಿದಾಗಿ ಸಂತೋಷದಿಂದ ಸಂಗೀತವನ್ನು ಹಾಡುತ್ತೇವೆ. ಹೀಗೆಯೇ ಬುದ್ಧಿವಂತರಾದ ಅನ್ಯ ದೇಶಸ್ಥರು ಅಪ್ರಬುದ್ಧರ ದೇಶಗಳನ್ನು ಸ್ವಾಧೀನ ಮಾಡಿ ಕೊಂಡು, ಸುಖ ಪಡುತ್ತಾರೆ. ಸ್ವದೇಶಸ್ಥರು ಅವರು ತಿಂದು ಮಿಕ್ಕದ್ದರಿಂದ ಉದರ ಭರಣವನ್ನು ಮಾಡಿ ಕೊಂಡು, ಕಷ್ಟ ಪಡುತ್ತಾರೆ. ಆದ್ದರಿಂದ ನೀವು ಹಿಂದೆ ಚನ್ನಾಗಿ ದೇವರ ಪ್ರಾರ್ಥನೆಯನ್ನು ಮಾಡದ್ದರಿಂದ ನಿಮಗೆ ಇಂಥಾ ಕಷ್ಟ ಸಂಭವಿಸಿತು. ನಾವು ಏಕ ಮನಸ್ಸಿನಿಂದ ದೇವರನ್ನು ಚನ್ನಾಗಿ ಪ್ರಾರ್ಥಿಸಿದ್ದರಿಂದ, ಹೀಗೆ ಅನ್ಯ ದೇಶದಲ್ಲಿಯೂ ನಮಗೆ ದೇವರು ಸೌಖ್ಯವನ್ನು ಕೊಟ್ಟು ಇದ್ದಾನೆ. ಮುಂದೆಯೂ ಕೊಡುವನು ಅಂದವು. ಕಪ್ಪೆಗಳು ಕೇಳಿ, ಸುಮ್ಮಗಾದವು.

41. Anecdote of Shibichakrawarti.

೪೧. ಶಿಬಿಚಕ್ರವರ್ತಿಯ ಕಥೆ.

ಪೂರ್ವದಲ್ಲಿ ಶಿಬಿಚಕ್ರವರ್ತಿ ಎಂಬ ಮಹಾ ಸತ್ಯವಂತನಾದ ಒಬ್ಬ ಅರಸನಿದ್ದನು. ಆತನ ಸತ್ಯವನ್ನು ಪರೀಕ್ಷಿಸ ಬೇಕೆಂದು ಇಂದ್ರನೂ ಅಗ್ನಿಯೂ ಆಲೋಚಿಸಿ, ಇಂದ್ರನು ಡೇಗೆ ಹಕ್ಕಿಯಾದನು; ಅಗ್ನಿಯು ಕಪೋತ ಪಕ್ಷಿಯಾದನು. ಈ ಮೇರೆಗೆ ರೂಪಗಳನ್ನು ಧರಿಸಿ, ಆ ಕಪೋತವನ್ನು ಹಿಡಿದು ಭಕ್ಷಿಸುವದಕ್ಕೆ ಆ ಡೇಗೆಯು ಬೆನ್ನು ಹತ್ತಿ, ಅಟ್ಟ ಕೊಂಡು ಬರಲು; ಆ ಕಪೋತವು ಪ್ರಾಣ ಭೀತಿಯಿಂದ ಓಡುತ್ತಾ, ಓಡುತ್ತಾ, ಶಿಬಿಚಕ್ರವರ್ತಿಯ ಬಳಿಗೆ ಬಂದು, ಆ ರಾಯನ ಬೆನ್ನಿನ ಮರೆಯಲ್ಲಿ ನಿಂತು—ಸತ್ಯಸಂಧನೇ, ಪ್ರಾಣ ಭೀತಿಯಿಂದ ನಾನು ನಿನ್ನ ಮರೆಯನ್ನು ಹೊಕ್ಕು ಇದ್ದೇನೆ. ನನ್ನನ್ನು ಕೈ ಬಿಡದೆ ರಕ್ಷಿಸೈಯ್ಯಾ, ಎಂದು ಕೂಗಲು;—ಅಂಜ ಬೇಡವೈ, ಕಪೋತವೇ, ನಿನ್ನ ಪ್ರಾಣಕ್ಕೆ ಬದಲಾಗಿ ನನ್ನ ಪ್ರಾಣವನ್ನಾದರೂ ಕೊಟ್ಟು, ನಿನ್ನನ್ನು ಸಂರಕ್ಷಿಸುವೆನೇ ಹೊರ್ತು, ಶರಣಾಗತನಾದ ನಿನ್ನನ್ನು ಬಿಟ್ಟು ಕೊಡುವದಿಲ್ಲವೆಂದು ಅಭಯವನ್ನು ಕೊಟ್ಟು, ಮಾತಾಡುತ್ತಿದ್ದ ಅರಸಿನ ಎದುರಿಗೆ ತೀಕ್ಷ್ಣವಾದ ಮೂಗುಳ್ಳ ಡೇಗೆಯು ಬಂದು, ಕೂತು ಕೊಂಡು,—ಎಲೈ, ಸತ್ಯವಂತನಾದ ರಾಯನೇ, ನನಗೆ ಆಹಾರಾರ್ಥವಾಗಿ ದೇವರು ನಿರ್ಮಾಣ ಮಾಡಿದ ಈ ಕಪೋತ ಪಕ್ಷಿಯು ನಿನ್ನ ಹಿಂದೆ ಕೂತು ಕೊಂಡು ಇರುವದರಿಂದ, ನಾನು ಅದನ್ನು, ನೀನು ಪ್ರಭುವಾದ ಕಾರಣ ನಿನ್ನ ಮಾತು ವಿನಾಯಿಸಿ, ಹಿಡಿದು ಕೊಳ್ಳ ಕೂಡದು. ಇದು ಧರ್ಮವೆಂದು ನಿನಗೆ ಹೇಳಿ ಇದ್ದೇನೆ. ಆದ್ದರಿಂದ, ಧರ್ಮಾತ್ಮನೇ, ನನ್ನ ಆಹಾರವನ್ನು ನನಗೆ ದಯ ಮಾಡಿ ಕೊಟ್ಟು, ಕೀರ್ತಿಯನ್ನು ಸಂಪಾದಿಸೈ, ಪ್ರ

ಣ್ಯಾತ್ಮಾ, ಎಂದು ಹೇಳಿದ ಶ್ಯೇನ ಪಕ್ಷಿಯ ವಾಕ್ಯವನ್ನು ಕೇಳಿ, ಆಶ್ಚರ್ಯದಿಂದ ನಕ್ಕು, ಎಲೈ, ಪಕ್ಷಿ ಶ್ರೇಷ್ಠನೇ, ನೀನು ಮಹಾ ಪರಾಕ್ರಮಶಾಲಿಯಾಗಿ, ಸಕಲ ಪಕ್ಷಿಗಳನ್ನೂ ಹಿಂಸಿಸಿ ತಿನ್ನುವದು ನಿನಗೆ ಧರ್ಮವೇ ಸರಿ. ಆದಾಗ್ಯೂ ನನ್ನ ಬೆನ್ನಿನ ಮರೆ ಬೀಳುವದಕ್ಕೆ ಮುಂಚಿತವಾಗಿಯೇ ನೀನಿದನ್ನು ಹಿಡಿದು ಭಕ್ಷಿಸಿ ಇದ್ದರೆ, ನಿರ್ವ್ಯಾಜ್ಯವಾಗಿರುವದು. ಈಗ ನನ್ನ ಮರೆಯನ್ನು ಬಿದ್ದು—ನನ್ನನ್ನು ರಕ್ಷಿಸೈ, ರಕ್ಷಿಸೈ, ಎಂದು ಮೊರೆ ಇಡುವ ಸಾಧು ಕಪೋತವನ್ನು ನಿನಗೆ ಒಪ್ಪಿಸಿ, ಕೊಲ್ಲಿಸಿದರೆ, ನಾನು ಯಾವ ಲೋಕದಲ್ಲಿ ಏನಾಗಿ ಬಾಧೆ ಪಡಲಿ? ಮತ್ತು ಮರೆ ಹೊಕ್ಕವರನ್ನು ಕಾಯದೆ ಬಿಟ್ಟರೆ, ಅದಕ್ಕಿಂತಲೂ ಅರಸುಗಳಿಗೆ ಹಾನಿಯಾದ ಕೆಲಸ ಬೇರೊಂದು ಎಲ್ಲಿಯೂ ಇಲ್ಲ. ನೀನು ಬೇರೆ ಆಹಾರವನ್ನು ಹುಡುಕಿ ಕೊಂಡು, ಈ ಪಕ್ಷಿಯನ್ನು ಬಿಡು. ಇಲ್ಲವಾಯಿತೇ? ನಿನ್ನ ಆಹಾರಕ್ಕೆ ತಕ್ಕ ಹಾಗೆ ಮಾಂಸವನ್ನು ತರಿಸಿ ಕೊಡುವೆನು; ಭಕ್ಷಿಸಿ, ಸುಖದಿಂದ ಹೋಗು, ಎಂದು ಹೇಳುವ ಚಕ್ರವರ್ತಿಯನ್ನು ಕುರಿತು ಶ್ಯೇನನಿಂತೆಂದಿತು:—ಐಯ್ಯಾ, ಭೂಪಾಲತಿಲಕನೇ, ಚಕ್ರವರ್ತಿಯೇ, ನಿನ್ನ ಮಾತು ಸತ್ಯವೇ ಸರಿ. ಆದರೂ ನನಗೆ ಈ ದೇವದತ್ತವಾದ ಕಪೋತದ ಮಾಂಸಕ್ಕಿಂತಲೂ ಇನ್ನು ಬೇರೆ ಮೃಗ ಪಕ್ಷಿಗಳ ಮಾಂಸಗಳು ರುಚಿಯಾಗಿರವು. ನನಗೆ ಅವು ಬೇಡಲೇ ಬೇಡ. ನೀನು ಅಷ್ಟು ದಯಾಳುತ್ವವನ್ನು ವಹಿಸಿ, ನನ್ನ ಆಹಾರವಾದ ಕಪೋತವನ್ನು ರಕ್ಷಿಸ ಬೇಕೆಂದು ಮನಸ್ಸು ಮಾಡಿದರೆ, ಆ ಕಪೋತದ ತೂಕಕ್ಕೆ ಸರಿಯಾಗಿ ನಿನ್ನ ದಿವ್ಯ ಭೋಜನದಿಂದ ಬೆಳದ ಶರೀರ ಮಾಂಸವನ್ನು ಕೊಟ್ಟರೆ, ಅದನ್ನು ನಾನು ಭುಂಜಿಸಿ, ಈ ಕಪೋತವನ್ನು ಬಿಟ್ಟು ಹೋಗುತ್ತೇನೆಂದು ಹೇಳಲು; ಅರಸು ಪರಮ ಸಂತೋಷವನ್ನು ಹೊಂದಿ, ಹಾಗೆಯೇ ಆಗಲಿ, ಶ್ಯೇನ ಪಕ್ಷಿಯೇ; ನನ್ನ ಮಾಂಸವನ್ನೇ ಕೊಡುತ್ತೇನೆಂದು, ಮಹಾ ತೀಕ್ಷ್ಣವಾದ ಅರುಗುಳ್ಳ ಖಡ್ಗದಿಂದ ಮಹಾ ಧೀರನಾದ ಶಿಬಿಚಕ್ರವರ್ತಿಯು ತನ್ನ ಕೋಮಲವಾದ ಅಂಗದ ಮಾಂಸವನ್ನು ಖಂಡ ಖಂಡವಾಗಿ ಕೊಯಿದು, ಕೊಯಿದು, ಒಂದು ತ್ರಾಸಿನಲ್ಲಿ ಕಪೋತವನ್ನು ಇಟ್ಟು, ಅದಕ್ಕೆ ಸರಿ ತೂಕವಾಗಿ ತೂಗುತ್ತಾ, ತೂಗುತ್ತಾ ಇದ್ದರೂ, ಆ ಕಪೋತಕ್ಕೆ ಸರಿಯಾಗಿ ಮಾಂಸವು ತೂಗಲಾರದೆ ಹೋಯಿತು. ಆಗಲಾ ರಾಯನು ಅತಿ ಶಾಂತತ್ವವನ್ನು ತಾಳಿ, ಸತ್ಯವನ್ನು ಈಡೇರಿಸ ಬೇಕೆಂದು ತನ್ನ ಶಿರಸ್ಸನ್ನು ಖಂಡ್ರಿಸಿ ಕೊಡುವದಕ್ಕೆ ಕಂಠ ಪ್ರದೇಶಕ್ಕೆ ಖಡ್ಗವನ್ನು ಚಾಚಿದನು. ಆಗಲಾ ಇಂದ್ರಾಗ್ನಿಗಳಿಬ್ಬರು ಶ್ಯೇನ ಕಪೋತ ರೂಪಗಳನ್ನು ಬಿಟ್ಟು, ನಿಜ ರೂಪಗಳಿಂದ ಅರಸಿನ ಎದುರಿಗೆ

ನಿಂತು, ಅವನ ಕೈಯಲ್ಲಿ ಇದ್ದ ಖಡ್ಗವನ್ನು ಹಿಡಿದು, ಅಡ್ಡಗಿಸಿ, ಇಂತೆಂದರು;— ಓ ಸತ್ಯ ಪ್ರತಿಜ್ಞೆಯುಳ್ಳ ಚಕ್ರವರ್ತಿಯೇ, ನಿನ್ನ ಪದ ವಾಕ್ಯ ಪ್ರಮಾಣಜ್ಞತೆಗೆ ಮೆಚ್ಚಿದೆವು. ನಾವು ಇಂದ್ರಾಗ್ನಿಗಳು. ನಿನ್ನ ಸತ್ಯ ಗುಣವನ್ನು ಪರೀಕ್ಷೆ ಮಾಡ ಬೇಕೆಂಬರ್ಥದಿಂದ ಬಂದು, ಸಾಂಗವಾಗಿ ಪರೀಕ್ಷಿಸಿದೆವು. ನಿನ್ನ ಸತ್ಯಕ್ಕೆ ಮೆಚ್ಚಿದೆವು ಎಂದು ಹೇಳಿ, ತಮ್ಮ ಲೋಕಕ್ಕೆ ಹೊರಟು ಹೋದರು.

42. King Sudarshana and His Three Sons.
೪೨. ಸುದರ್ಶನನೆಂಬ ರಾಯನ ಮಕ್ಕಳ ಕಥೆ.

ಪಾಟಲೀ ಪುರವೆಂಬ ಪಟ್ಟಣದಲ್ಲಿ ಸುದರ್ಶನನೆಂಬ ರಾಯನು, ಅಮರಶಕ್ತಿ ಎಂಬ ಪ್ರಧಾನನು ಸಹ, ರಾಜ್ಯ ಪರಿಪಾಲನೆಯನ್ನು ಮಾಡಿಕೊಂಡು ಇರುತ್ತಿದ್ದರು. ಆ ರಾಯನ ಗುಣಗಳು ಯಾವವೆಂದರೆ—ತನ್ನ ಬಂಧು ಜನರಲ್ಲಿ ದಾಕ್ಷಿಣ್ಯವೂ, ಸೇವಕ ಜನರಲ್ಲಿ ದಯೆಯೂ, ಸ್ತ್ರೀ ಜನರಲ್ಲಿ ಧೂರ್ತತ್ವವೂ, ದುರ್ಜನರಲ್ಲಿ ಕೋಪವೂ, ಸಜ್ಜನರಲ್ಲಿ ಪ್ರೀತಿಯೂ, ನೃಪ ಜನರಲ್ಲಿ ನಯವೂ, ಗುರು ಜನಗಳಲ್ಲಿ ಕ್ಷಮೆಯೂ, ವಿದ್ವಾಂಸರಲ್ಲಿ ತ್ಯಾಗವೂ, ಶತ್ರುಗಳಲ್ಲಿ ಪರಾಕ್ರಮವೂ. ಈ ಗುಣಗಳು ಯಾವ ಪುರುಷನಲ್ಲಿ ಇವೆಯೋ ಅವನೇ ಸಕಲ ಲೋಕ ವ್ಯಾಪಾರಗಳನ್ನು ತಿಳಿದು, ಜನರನ್ನು ಪರಿಪಾಲಿಸುವನು. ಮತ್ತು ಯಾವ ಅರಸಿಗಾದರೂ, ಯಾವ ಮನುಷ್ಯನಿಗಾದರೂ, ಮೊದಲು ಧರ್ಮದಲ್ಲಿ ಚಿಂತೆ ಇರ ಬೇಕು. ತನ್ನ ಆಪ್ತ ಪ್ರಧಾನರ ಸ್ವಭಾವ ಗುಣಗಳನ್ನು ತಿಳಿಯ ಬೇಕು. ಸಮಯಕ್ಕೆ ತಕ್ಕ ಹಾಗೆ ಕೋಪವನ್ನೂ ದಯೆಯನ್ನೂ ಮಾಡ ಬೇಕು. ಆತ್ಮ ಸಂರಕ್ಷಣೆಯಲ್ಲಿ ಅತಿ ಜಾಗ್ರತೆಯಾಗಿರ ಬೇಕು. ರಣಾಗ್ರದಲ್ಲಿ, ಈ ಶರೀರ ತನ್ನದಲ್ಲವೆಂಬ ಧೈರ್ಯವಿರ ಬೇಕು. ಇಂಥಾ ಗುಣಾತಿಶಯಗಳುಳ್ಳವನೇ ರಾಜ ಶ್ರೇಷ್ಠನೆನಿಸಿಕೊಳ್ಳುವನು. ಮತ್ತು ಸತ್ಪಾತ್ರವನ್ನು ತಿಳಿದು, ದಾನವನ್ನು ಮಾಡ ಬೇಕು. ಪರರ ಗುಣದೋಷಗಳನ್ನು ತಿಳಿದು, ಮತ್ಸರಿಸಲಾಗದು. ಸೇವಕರೇ ಮೊದಲಾದ ಸಮಸ್ತ ಪ್ರಾಣಿಗಳನ್ನೂ ತನ್ನ ಹಾಗೆಯೇ ನೋಡಿಕೊಳ್ಳ ಬೇಕು. ಪರರ ಮನೋಭಾವಗಳನ್ನು ತಿಳಿಯ ಬೇಕು. ರಣದಲ್ಲಿ ಜಯಿಸ ಬೇಕು.

ಹೀಗೆ ನೀತಿ ಇರುವದರಿಂದ ಆ ಸುದರ್ಶನನು ಸಮಸ್ತ ಗುಣ ಸಂಪನ್ನನಾಗಿ, ತಾರ ತಮ್ಯವನ್ನು ತಿಳಿದು, ರಾಜ್ಯವನ್ನಾಳುತ್ತಾ, ಬಹು ಕಾಲ ಮಕ್ಕಳಿಲ್ಲದೆ, ದೈವಾನುಗ್ರಹದಿಂದ ವಸುಶಕ್ತಿ, ರುದ್ರಶಕ್ತಿ, ಮೃದುಶಕ್ತಿ ಎಂಬ ಮೂರು ಮಂದಿ ಕುಮಾರರನ್ನು ಪಡೆದು, ಸುಖದಿಂದಿರಲು; ಆ ಮೂರು ಮಂದಿಯೂ ತಾಯಿ ತಂ

ದೆಗಳ ಮಾತನ್ನು ಕೇಳದೆ, ದುರ್ಜನರಾಗಿ, ಸಮಸ್ತರಿಗೂ ಉಪದ್ರಗಳನ್ನು ಮಾಡುತ್ತಾ ಇದ್ದರು. ಅವರ ದುರ್ಗುಣಗಳು ಯಾವವಂದರೆ—ಜೂಜಾಡುವದೂ, ಸುರಾಪಾನ ಮಾಡುವದೂ, ಚಾರವಾಕರ ಸಂಗಡ ಸ್ನೇಹವನ್ನು ಮಾಡುವದೂ, ಬೇಟೆ ಆಡುವದೂ, ಪರಸ್ತ್ರೀ ಸಮಾಗಮ ಮಾಡುವದೂ, ಕಳ್ಳತನ ಮಾಡುವದೂ, ನೀಚರ ಸೇವೆಯನ್ನು ಮಾಡುವದೂ. ಇವು ಏಳು ಸಪ್ತ ವ್ಯಸನಗಳೆನಿಸಿಕೊಳ್ಳುವವು ಎಂದು ನೀತಿ ಇರುವದರಿಂದ, ಆ ಕುಮಾರರು ಸಪ್ತ ವ್ಯಸನಗಳಿಂದ ಯುಕ್ತರಾಗಿದ್ದರು. ಮತ್ತು ಯೌವನವೂ, ಧನ ಸಂಪತ್ತಿಯೂ, ಪ್ರಭುತ್ವವೂ, ಅವಿವೇಕವೂ, ಇವು ಒಂದೊಂದೇ ಅನರ್ಥಕ್ಕೆ ಕಾರಣವಾದದ್ದು. ಆದರೆ ನಾಲ್ಕೂ ಇದ್ದರೆ, ಕೇಳ ತಕ್ಕದ್ದೇನು ಎಂದು ನೀತಿ ಉಂಟು. ಆ ಕುಮಾರರಲ್ಲಿ ಈ ನಾಲ್ಕು ಗುಣಗಳೂ ಇದ್ದವು. ಹೀಗೆ ಮದಾಂಧರಾಗಿ ದುರ್ನಡತೆಯಲ್ಲಿ ನಡೆಯುತ್ತಿರುವ ಕುಮಾರರನ್ನು ನೋಡಿ, ರಾಯನು ತನ್ನ ಮನಸ್ಸಿನಲ್ಲಿ ನೊಂದು ಕೊಂಡು, ಪ್ರಧಾನನೊಡನೆ ಹೀಗಂದನು—ಎಲೈ, ಮಂತ್ರಿಯೇ, ವಿದ್ವಾಂಸನಲ್ಲದೆಯೂ, ಧರ್ಮಿಷ್ಠನಲ್ಲದೆಯೂ ಇರುವ ಮಗನಿಂದಲೂ; ಹಾಲು ಕರೆಯದೆಯೂ, ಈಯದೆಯೂ, ಇರುವ ಹಸುವಿನಿಂದಲೂ, ಏನು ಪ್ರಯೋಜನವು? ಮತ್ತು ವಿದ್ಯಾ ಬುದ್ಧಿ ಸೌಜನ್ಯ ಮರ್ಯಾದೆಗಳಿಲ್ಲದ ಕುಮಾರರು ಹುಟ್ಟುವದಕ್ಕಿಂತ ಗರ್ಭವು ಇಳೀ ಬಿದ್ದು ಹೋಗುವದೇ ಮೇಲು. ಆ ಶಿಶುವು ಹುಟ್ಟಿದಾಗಲೇ ಮೃತವಾಗುವದೇ ಮೇಲು. ಹೆಣ್ಣಾಗಿ ಹುಟ್ಟುವದೇ ಮೇಲು. ಅಂಥ ಮಕ್ಕಳನ್ನು ಹೆತ್ತು, ಮೈ ನೋವು ಮಾಡಿ ಕೊಳ್ಳುವದಕ್ಕಿಂತ ಬಂಜೆಯಾಗಿರುವದೇ ಮೇಲು. ಮತ್ತೊಬ್ಬರಿಗೆ ಸಾಕುವದಕ್ಕೆ ಕೊಟ್ಟು ಬಿಡುವದೇ ಮೇಲು. ಮತ್ತು ಅರಣ್ಯದಲ್ಲಿ ದಟ್ಟವಾಗಿ ಬೆಳೆದು ಇರುವ ಬಿದರುಗಳು ಒಂದಕ್ಕೊಂದು ಉಜ್ಜಲು, ಆ ಕಾವಿನಿಂದ ಅಗ್ನಿಯು ಹುಟ್ಟಿ ಅದು ಆ ವನವೆಲ್ಲವನ್ನು ದಹಿಸುವ ರೀತಿಯಲ್ಲಿ, ದುರ್ಮಾರ್ಗರಾದ ಕುಮಾರರು ಹುಟ್ಟಿ, ಎರಡು ಕುಲವನ್ನೂ ಕೆಡಿಸುವರು ಎಂದು ಅನೇಕ ಪ್ರಕಾರದಿಂದ ಹೇಳಿ, ರಾಯನು ಬಿಸುಸುಯ್ಯಲು; ಪ್ರಧಾನನು ಹೀಗಂದನು;—

(ಪ್ರಧಾನನ ಗುಣಗಳ್ಯಾವವಂದರೆ, ಬುದ್ಧಿಯುಳ್ಳವನಾಗ ಬೇಕು. ಸ್ಥಿರವಾಗಿ ಮಾತಾಡ ಬೇಕು. ಗುಣಾವಗುಣ ಭಾವಗಳನ್ನು ತಿಳಿದಿರ ಬೇಕು. ಐಶ್ವರ್ಯವಂತನಾಗ ಬೇಕು. ಕೀರ್ತಿವಂತನಾಗ ಬೇಕು. ಪರರ ಇಂಗಿತವನ್ನು ತಿಳಿಯ ಬೇಕು. ಸಕಲ ಜನರಿಗೂ ಸಮ್ಮತನಾಗಿರ ಬೇಕು. ಪಂಡಿತನಾಗ ಬೇಕು. ಸಾತ್ವೀಕನಾಗ ಬೇಕು. ನಾನಾ ಭಾಷೆಗಳಲ್ಲಿಯೂ, ನವರಸಾಲಂಕಾರ ಯುಕ್ತ

ವಾಗಿ ಕವಿತ್ವವನ್ನು ಹೇಳುವ ಪ್ರಾಢಿಮೆ ಉಂಟಾಗಿರ ಬೇಕು. ರಸಜ್ಞನಾಗ ಬೇಕು.ಇಂಥ ಗುಣಗಳುಳ್ಳವನೇ ಮಂತ್ರಿ ಪದಕ್ಕೆ ಯೋಗ್ಯನೆಂದು ನೀತಿ ಉಂಟು.)

ಹೀಗೆ ಸಕಲ ಗುಣಯುಕ್ತನಾಗಿದ್ದ ಆ ಪ್ರಧಾನನು ರಾಯನನ್ನು ಕುರಿತು—ಎಲೈ, ರಾಯಾ, ಸಕಲ ಗುಣ ಸಂಪನ್ನನಾದ ಒಬ್ಬನೇ ಕುಮಾರನು ಸಾಕು. ದುರ್ಮಾರ್ಗರಾದ ಕುಮಾರರು ನೂರು ಮಂದಿ ಇದ್ದರೂ, ಏನು ಪ್ರಯೋಜನ? ಹ್ಯಾಗಂದರೆ, ಒಬ್ಬ ಚಂದ್ರನು ಉದಯವಾದರೆ, ಪಂಚಾಶತ್ಕೋಟಿ ಯೋಜನ ವಿಸ್ತಾರವಾದ ಈ ಭೂಮಂಡಲವೆಲ್ಲ ಪ್ರಕಾಶಮಾನವಾಗಿ ಇರುವದು. ಆ ಒಬ್ಬ ಚಂದ್ರನು ಇಲ್ಲದ ನಕ್ಷತ್ರಗಳು ಎಷ್ಟು ಇದ್ದಾಗ್ಯೂ ಏನು ಪ್ರಯೋಜನವು? ಮತ್ತು ಪ್ರಿಯಳಾದ ಹೆಂಡತಿ ದೊರಕುವದೂ, ವಿನಯವಂತರಾದ ಕುಮಾರರು ಹುಟ್ಟುವದೂ, ಸಾಜನ್ಯವುಳ್ಳ ಅಣ್ಣ ತಮ್ಮಂದಿರು ಇರುವದೂ, ಬಂಧುಗಳು ಮರ್ಯಾದೆ ಮಾಡುವದೂ, ಜಾಣನಾದ ಸ್ನೇಹಿತನು ದೊರಕುವದೂ, ಧರ್ಮಗುಣ ಉಂಟಾಗುವದೂ, ಇವೆಲ್ಲಾ ಪೂರ್ವ ಜನ್ಮದ ಪುಣ್ಯದಿಂದ ಲಭಿಸುವವು.

ಮತ್ತು ಸಾಲವನ್ನು ಮಾಡಿದ ತಂದೆಯೂ, ಹಾದರವನ್ನು ಮಾಡುವ ತಾಯಿಯೂ, ಸಾಂದರ್ಯವಂತಳಾದ ಸ್ತ್ರೀಯೂ, ಮೂರ್ಖನಾದ ಮಗನೂ, ಪರಮ ಶತ್ರುಗಳೆನಿಸಿ ಕೊಳ್ಳುವರು ಎಂದು ನೀತಿ ಇರುವದರಿಂದ, ಈ ಕುಮಾರರು ನಿನಗೆ ಶತ್ರುಗಳೇ ಸರಿ ಎಂದು ಹೇಳಿ, ದೀರ್ಘಾಲೋಚನೆಯನ್ನು ಮಾಡಿ—ಎಲೋ, ರಾಯಾ, ನಿನ್ನ ಮಕ್ಕಳನ್ನು ದೊಡ್ಡ ವಿದ್ವಾಂಸರಲ್ಲಿ ಸೇವೆಗೆ ನಿಲ್ಲಿಸಿ, ವಿದ್ಯಾಭ್ಯಾಸವನ್ನು ಮಾಡಿಸಿದರೆ, ಅವರ ಅನುಗ್ರಹ ಬಲದಿಂದ ಬುದ್ಧಿವಂತರಾದಾರು ಎನಲು; ಆ ರಾಯನು, ಪ್ರಧಾನಿಯ ಮಾತು ನಿಶ್ಚಯವೆಂದು, ತನ್ನ ದೇಶದಲ್ಲಿ ಇರುವ ವಿದ್ವಾಂಸರೆಲ್ಲರನ್ನು ಕರಿಸಿ, ವಂದನೆ ಉಪಚಾರಗಳನ್ನು ಮಾಡಿ, ಮುಕುಳಿತ ಹಸ್ತನಾಗಿ ನಿಂತು—ವಿದ್ಯವೆಂಬ ಮಹದೈಶ್ವರ್ಯ ಸಂಪನ್ನರಾದ ಪರಮ ಶ್ರೇಷ್ಠರಾದ ದೈವಜ್ಞ ಮೂರ್ತಿಗಳಿರಾ, ನನ್ನ ಕುಮಾರರನ್ನು ಬುದ್ಧಿವಂತರಾಗ ಮಾಡಿರೈಯಾ, ಅನ್ನಲಾಗಿ; ಆ ವಿದ್ವಾಂಸರೆಲ್ಲರು ಈ ಕುಮಾರರ ಲಕ್ಷಣಗಳನ್ನು ನೋಡಿ, ಕೇಳಿದವರಾದ ಕಾರಣ, ಏಕಮುಖವಾಗಿ ರಾಯನೊಡನೆ ಹೀಗಂದರು—ಎಲೋ, ರಾಯಾ, ನಿನ್ನ ಕುಮಾರರು ಅತಿ ಮೂರ್ಖರು; ಮಹಾ ಕಳ್ಳರು; ದುರಾಚಾರರು. ಇದಲ್ಲದೆ ವಿವೇಕಿಯನ್ನು ತಿದ್ದ ಬಹುದು; ಅವಿವೇಕಿಯನ್ನೂ ತಿದ್ದ ಬಹುದು; ತಿಳಿದೂ ತಿಳಿಯದ ಮೂರ್ಖರನ್ನು ಸೃಷ್ಟಿ ಕರ್ತನಾದ ನಾಲ್ಕು ಮುಖಗಳುಳ್ಳ ಬ್ರಹ್ಮನೂ ತಿದ್ದಲಾರನು. ಇದಲ್ಲದೆ ಬಹಳ ಪ್ರ

ಯೂಸ ಪಟ್ಟು, ಮರಳನಿಂದಲಾದರೂ ತೈಲವನ್ನು ತೆಗಿಯ ಬಹುದು. ಬಯಲು ದೊರೆಗಳಲ್ಲ್ಯಾದರೂ ದಾಹಗೊಂಡವನು ನೀರು ಕುಡಿಯ ಬಹುದು. ಬಹು ಕಾಲ ಸುತ್ತಿ, ಮೊಲದ ಕೊಂಬನ್ನಾದರೂ ಸಂಪಾದಿಸ ಬಹುದು. ಇಂಥ ಮೂರ್ಖರ ಮನಸ್ಸನ್ನು ಯಾರೂ ತಿದ್ದಲರಿಯರು. ಮತ್ತು ಬಲಾತ್ಕಾರದಿಂದ ಉಗ್ರವಾದ ನೆಗಳನ ಬಾಯಿಯಲ್ಲಿರುವ ರತ್ನವನ್ನು ಹೊರಗೆ ತೆಗಿಯ ಬಹುದು. ಚಲಿಸುತ್ತಲಿರುವ ತೆರೆಗಳಿಂದ ತುಂಬಿರುವ ಸಮುದ್ರವನ್ನಾದರೂ ಕಾಲಿನಿಂದ ದಾಟಿ ಹೋಗ ಬಹುದು. ಬಹಳ ಕೋಪಿಷ್ಠವಾದ ಸರ್ಪವನ್ನಾದರೂ ತಲೆಯ ಮೇಲೆ ಹೂವಿನ ಹಾಗೆ ಧರಿಸ ಬಹುದು. ಆದರೆ ಅವಿವೇಕರನ್ನು ತಿದ್ದುವದಕ್ಕೆ ಮಾತ್ರ ಯಾರಿಂದಲೂ ಕೂಡುವದಿಲ್ಲ ಎಂದು ಹೇಳಿ, ನಾವು ನಿನ್ನ ಕುಮಾರರನ್ನು ತಿದ್ದಲಾರೆವೆಂದು ಹೇಳಲು; ರಾಯನು ಮಹಾ ಕೋಪದಿಂದ ಘರ್ಜಿಸಿ—ಎಲೈ, ವಿದ್ವಾಂಸರುಗಳಿರಾ, ನೀವು ಮಹಾ ಸಮರ್ಥರೆಂದು ನಿಮ್ಮ ಸಂಗಡ ನಾನು ಹೇಳಿ ಕೊಂಡರೆ, ನಮ್ಮ ಕೈಲಾಗದೆಂದು ನೀವು ಹೇಳಿದ್ದರಿಂದ, ನೀವು ನನ್ನ ರಾಜ್ಯದಲ್ಲಿ ಯಥೇಷ್ಟವಾಗಿ ಉಂಬಳಿ ಉಡುಗೆರೆಗಳನ್ನು ಹೊಂದಿ, ವಾಸಾ ಮಾಡಿ ಕೊಂಡು ಇರುವದರಿಂದ ಏನು ಪ್ರಯೋಜನ? ಇನ್ನು ಮೇಲೆ ನಿಮಗೆ ನಡೆಯುತ್ತಿದ್ದ ವರ್ತನೆ ಮರ್ಯಾದೆ ಮುಂತಾದ್ದನ್ನು ನನ್ನ ಅರಮನೆಗೆ ಶೇರಿಸಿ ಕೊಳ್ಳುತ್ತೇನೆ. ನನ್ನ ಕುಮಾರರನ್ನು ತಿದ್ದಿ, ಬುದ್ಧಿವಂತರಾಗ ಮಾಡಲಾರದ ನಿಮ್ಮಿಂದ ನನಗೆ ಏನು ಪ್ರಯೋಜನ? ನಿಮ್ಮನ್ನು ಆದರಿಸಿದ್ದರಿಂದ ನನಗೆ ಏನು ಫಲ? ನೀವು ನನ್ನ ದೇಶದಲ್ಲಿಯೇ ಇರ ಕೂಡದೆಂದು ನಿಷ್ಠೂರವಾದ ಮಾತುಗಳನ್ನು ಹೇಳಲಾಗಿ, ಆ ವಿದ್ವಾಂಸರು ಒಬ್ಬರನ್ನೊಬ್ಬರು ನೋಡುತ್ತಾ, ಬಹಳ ಚಿಂತಾಕ್ರಾಂತರಾಗಿ, ಉತ್ತರವನ್ನು ಕೊಡಲರಿಯದೆ, ತಲೆಗಳನ್ನು ಬೊಗ್ಗಿಸಿ ಕೊಂಡು, ಸುಮ್ಮನಿರಲು; ಅವರೊಳಗೆ ವಿಷ್ಣುಶರ್ಮನೆಂಬ ಒಬ್ಬ ಬಡ ಬ್ರಾಹ್ಮಣನು ಥಿಗ್ಗನೆ ಎದ್ದು—ಎಲೋ, ರಾಜಕಂಠೀರವಾ, ರಾಜಮಾರ್ತಾಂಡ, ರಾಜಚೂಡಾಮಣಿ, ರಾಜಾಧಿರಾಜ, ರಾಜರಾಜೋತ್ತಮ, ಆರ್ತರಕ್ಷಾಮಣಿ, ದಾನ ಚಿಂತಾಮಣಿ, ಶ್ರೀಮದ್ವಿದ್ವಜ್ಜನ ಮನಃ ಕುಮುದ ರಾಕಾ, ಸುಧಾಕರೋಪಮಾನ ನಿಧಾನ, ಪದವಾಕ್ಯ ಪ್ರಮಾಣ, ಕರುಣಾ ಕಟಾಕ್ಷ ವೀಕ್ಷಣ, ಅತಿ ತೀಕ್ಷ್ಣನಾದ ಫಾಲಾಕ್ಷನಂತಿರುವ ನಿನ್ನನ್ನು ನಂಬಿ, ಸುಖಿಸುವಂಥ ಈ ವಿದ್ವಜ್ಜನರ ಮೇಲೆ ಕೋಪವು ಯಾತಕ್ಕೆ? ನಿನ್ನ ಕುಮಾರರು ಮೂರು ಮಂದಿಯನ್ನೂ ಆರು ತಿಂಗಳಲ್ಲಿ ವಿದ್ವಚ್ಛೂರರನ್ನು ಮಾಡುವೆನು; ನನ್ನ ಪ್ರತಾಪವನ್ನು ನೋಡೆಂದು ಶಪಥವನ್ನು ಮಾಡಿ ಕೊಳ್ಳಲು; ಆ ರಾಯನು ಕೋಪವ

ನ್ನು ಶಾಂತಿ ಪಡಿಸಿ, ಅಬ್ಬುರವಾದ ಹರ್ಷದಿಂದ ಉಬ್ಬಿ, ಆ ಬಡ ಬ್ರಾಹ್ಮಣನಾದ ವಿಷ್ಣುಶರ್ಮನಿಗೆ ಆಪ್ತಾಗಿರಿ ಮೊದಲಾದ ಸಪ್ತಾಂಗಗಳನ್ನು ಕೊಟ್ಟನು. ಸಪ್ತಾಂಗಗಳ್ಯಾವವಂದರೆ, ಪಂಚ ಲೋಹಗಳೆನ್ನಿಸಿ ಕೊಳ್ಳುವ ಹಿತ್ತಾಳೆ, ತಾಂಬ್ರ, ಕಬ್ಬಿಣ, ಸೀಸ, ಕಂಚುಗಳೂ; ಮುತ್ತು, ರತ್ನ, ಪಚ್ಚೆ, ನೀಲ, ಪುಷ್ಯರಾಗ, ವೈಢೂರ್ಯ, ವಜ್ರ, ಗೋಮೇಧಿಕ, ಹವಳಗಳೆಂಬ ನವರತ್ನಗಳೂ; ಆನೆ, ಕುದುರೆ, ಮೊದಲಾದ ಯಾನಗಳೂ; ಶಾಲು, ಸಕಲಾತಿ, ಮೊದಲಾದ ವಸ್ತ್ರಗಳೂ; ಗಂಧ, ಕಸ್ತೂರಿ, ಪುಣುಗು, ಜವ್ವಾದಿ, ಮೊದಲಾದ ಅನುಲೇಪನಗಳೂ; ತೊಟ್ಟಿ, ಪಡಸಾಲೆ, ಮಹಡಿಗಳುಳ್ಳ ಮನೆಗಳೂ; ಗದ್ದೆ, ಹೊಲ, ತೋಟ, ಮುಂತಾದ ಕ್ಷೇತ್ರಗಳೂ; ಇವು ಏಳೂ ಸಪ್ತಾಂಗವೆನಿಸಿ ಕೊಳ್ಳುವವು.

ಹೀಗೆ ಆ ರಾಯನು ವಿಷ್ಣುಶರ್ಮನಿಗೆ ಬಹಳ ಉಡುಗೆರೆಗಳನ್ನು ಕೊಟ್ಟು, ವಂದನೋಪಚಾರಗಳಿಂದ ಸತ್ಕರಿಸಿ, ತನ್ನ ಕುಮಾರರನ್ನು ಕರಿಸಿ, ಮೂವರನ್ನೂ ವೈಷ್ಣವ ಶಿಖಾಮಣಿಯಾದ, ಜಿಷ್ಣು ಭೋಗಿಯಾದ, ವಿಷ್ಣು ಭಕ್ತನಾದ, ಕುಲವರ್ಧಿಷ್ಣುವಾದ ವಿಷ್ಣುಶರ್ಮನ ವಶಕ್ಕೆ ಕೊಟ್ಟು ಕಳುಹಿಸಲು; ಆ ಬ್ರಾಹ್ಮಣನು ತನ್ನ ತೃಷ್ಣಾತುರವನ್ನು ಕೃಷ್ಣನ ಕಟಾಕ್ಷದಿಂದ ನೀಗಿದೆನೆಂದು, ರಾಜ ಕುಮಾರರನ್ನು ತನ್ನ ಮನೆಗೆ ಕರೆದು ಕೊಂಡು ಬಂದು, ಈ ವರ್ತಮಾನವನ್ನೆಲ್ಲಾ ತನ್ನ ಹೆಂಡತಿಯ ಸಂಗಡ ಹೇಳುತ್ತಿರುವ ಸಮಯದಲ್ಲಿ, ಆ ಸಭೆಯಲ್ಲಿದ್ದ ವಿದ್ವಾಂಸರೆಲ್ಲರೂ ರಾಯನನ್ನು ಆಶೀರ್ವದಿಸಿ, ಅವನ ಅಪ್ಪಣೆಯನ್ನು ತೆಗೆದು ಕೊಂಡು, ಹೊರಟು, ರಾಜ ದ್ವಾರಕ್ಕೆ ಬಂದು, ವಿಷ್ಣುಶರ್ಮನು ರಾಜಾಸ್ಥಾನದಲ್ಲಿ ನಮಗೆ ಅಪಮಾನ ಬರುವ ಹಾಗೆ ಮಾಡಿದನೆಂದು ಬಹಳ ಚಿಂತಾಕ್ರಾಂತರಾಗಿ, ಆ ಬ್ರಾಹ್ಮಣನ ಮನೆಯನ್ನು ಹುಡುಕಿ ಕೊಂಡು ಬಂದು, ಎಲ್ಲರೂ ಒಟ್ಟು ಗೂಡಿ—ಎಲೈ, ವಿಷ್ಣುಶರ್ಮನೇ, ಶಕ್ರ ಸಮನಾದ ಚಕ್ರೇಶ್ವರನ ಕುಮಾರರನ್ನು ತಿದ್ದುವೆನೆಂದು ನಿರ್ವಕ್ರವಾದ ಶಪಥವನ್ನು ಮಾಡಿ ಕೊಳ್ಳಬಹುದೇ? ನಮ್ಮೆಲ್ಲರಿಗಿಂತ ನೀನು ಘನ ವಿದ್ವಾಂಸನೇ? ಈ ದುಷ್ಟರಾದ ರಾಜಪುತ್ರರನ್ನು ತಿದ್ದುವದಕ್ಕೆ ನಿನ್ನ ಕೈಲಾಗುವದೇ? ರಾಜಾಸ್ಥಾನದಲ್ಲಿ ನಾವೆಲ್ಲರೂ ಸಮ್ಮತಿಸದೆ ಇದ್ದ ಕಾರ್ಯವನ್ನು ನೀನು ಮಾಡುತ್ತೇನೆಂದು ಗರ್ವೋಕ್ತಿಗಳನ್ನು ಹೇಳಿ, ನಮ್ಮನ್ನು ಅವಮಾನ ಪಡಿಸ ಬಹುದೇ? ಎಂದು ಅತ್ಯಂತ ಕೋಪದಿಂದ ಜರಿಯಲಾಗಿ, ಆ ವಿಷ್ಣುಶರ್ಮನು—ಚಕ್ರ ಪಾಣಿಯೇ, ತ್ರಿವಿಕ್ರಮ ಮೂರ್ತಿಯೇ, ಈ ವಕ್ರವನ್ನು ಪರಿಹರಿಸಿ, ರಕ್ಷಿಸೆಂದು, ಮನಸ್ಸಿನಲ್ಲಿ ತನ್ನ ಇಷ್ಟದೈವವನ್ನು ಧ್ಯಾನಿಸಿದವನಾಗಿ, ಸಮಸ್ತ ವಿದ್ವಾಂಸರಿಗೂ ಸಾಷ್ಟಾಂಗ ಪ್ರಣಾಮವ

ನ್ನು ಮಾಡಿ—ಸ್ವಾಮಿಾ, ನಾನು ನಿಮ್ಮೆಲ್ಲರಿಗೂ ಸೇವಕನು; ನನ್ನ ಸಾಮರ್ಥ್ಯ
ವೇನು? ನನ್ನ ವಿದ್ಯವೇನು? ಆ ಮಹಾ ರಾಯನು ಕೋಪವನ್ನು ಮಾಡಿ ಕೊಂ
ಡು, ಸಕಲ ವಿದ್ವಾಂಸರ ಅನ್ನ ಸ್ಥಿತಿಯು ಹೋಗುವ ವೇಳೆ ಬರಲು; ನಿಮ್ಮ
ಸಂದರ್ಶನಾನುಗ್ರಹ ಬಲದಿಂದ ನನಗೆ ಒಂದು ಯುಕ್ತಿಯು ತೋಚಿತು; ಏ
ನಂದರೆ, ಈ ಕ್ಷಣದಲ್ಲಿ ಹೋಗುವ ನಮ್ಮ ಅನ್ನಸ್ಥಿತಿಯು ಇನ್ನು ಆರು ಮಾಸ
ಗಳು ನಿಶ್ಚಿಂತೆಯಾಗಿರಲೆಂದು ಯೋಚಿಸಿ, ನಾನು ಹೀಗೆ ಹೇಳಿದ್ದರಿಂದ, ರಾಯನು
ಒಡಂಬಟ್ಟು, ನಮ್ಮೆಲ್ಲರನ್ನೂ ಮನ್ನಿಸಿ, ಕಳುಹಿಸಿದನು. ಆದಕಾರಣ ನೀವು ಇ
ದನ್ನೆಲ್ಲಾ ಯೋಚಿಸಿ, ನನ್ನ ಮೇಲೆ ಪೂರ್ಣಾನುಗ್ರಹವಿಟ್ಟು, ಉದ್ಧಾರವನ್ನು ಮಾ
ಡ ಬೇಕು ಎಂದು ಹೇಳಲು; ಆ ವಿದ್ವಾಂಸರೆಲ್ಲರು ಸಂತೋಷ ಪಟ್ಟು, ವಿಷ್ಣು
ಶರ್ಮನನ್ನು ಸಂತೈಸಿ, ತಮ್ಮ ತಮ್ಮ ಮನೆಗಳಿಗೆ ಹೋದರು.

ಇತ್ತಲಾ ರಾಜ ಕುಮಾರರು ಬಹಳ ದುಷ್ಟರಾದ್ದರಿಂದ ವಿಷ್ಣು ಶರ್ಮನು ಅವ
ರು ಹೇಳಿದ ಹಾಗೆ ಕೇಳಿ ಕೊಂಡು, ಕೆಲವು ದಿವಸ ಕಾಲಕ್ಷೇಪವನ್ನು ಮಾಡುತ್ತಾ
ಇರಲು; ಒಂದು ದಿನ ಆ ರಾಜ ಕುಮಾರರು ಅರಣ್ಯದಲ್ಲಿ ಬೇಟೆಯಾಡ ಬೇಕೆಂದು
ಪ್ರಯಾಣವಾಗಿ ಹೊರಡಲು; ಆಗ ವಿಷ್ಣು ಶರ್ಮನು ಕೈಯಲ್ಲಿ ಬುತ್ತಿಯನ್ನು ತೆಗೆ
ದು ಕೊಂಡು ಅವರ ಹಿಂದೆ ಹೋಗುತ್ತಿರಲು; ಅವರು ಘೋರವಾದ ಅರಣ್ಯವನ್ನು
ಪ್ರವೇಶಿಸಿ, ಮನಸ್ಸಿಗೆ ಬಂದ ಹಾಗೆ ಬೇಟೆಯನ್ನಾಡಿ, ಬಹಳ ದಣಿದು, ಈ ಬ್ರಾ
ಹ್ಮಣನು ತಂದು ಇದ್ದ ಬುತ್ತಿಯನ್ನು ನೋಡಿ—ಎಲೋ, ಬ್ರಾಹ್ಮಣಾ, ನಾವು
ಬೇಟೆಯಾಡಿ, ಬಹಳ ದಣಿದು ಇದ್ದೇವೆ; ಬುತ್ತಿಯ ಅನ್ನವನ್ನು ಕೊಡು ಎಂದು
ಕೇಳಲು; ವಿಷ್ಣುಶರ್ಮನು ಅವರಿಗೆ ಬುತ್ತಿಯನ್ನು ಕೊಡಲು; ಅವರು ಅದನ್ನು
ಉಂಡು, ತಿಳಿ ನೀರನ್ನು ಕುಡಿದು, ಒಂದು ಮರದ ಕೆಳಗೆ ತಣ್ಣಗೆ ಕುಳಿತು
ಕೊಂಡು, ಬಳಲಿದವರಾದ ಕಾರಣ, ಪವಡಿಸಿ, ಆ ವಿಷ್ಣು ಶರ್ಮನನ್ನು ನೋಡಿ—
ಎಲೈ, ಬ್ರಾಹ್ಮಣೋತ್ತಮನೇ, ನಮಗೆ ಹೊತ್ತು ಹೋಗುವ ಹಾಗೆ ಒಂದು ಕಥೆ
ಯನ್ನು ಹೇಳು ಎನಲು; ಆ ಬ್ರಾಹ್ಮಣನು ಬಹಳ ಸಂತುಷ್ಟನಾಗಿ, ಇವರನ್ನು ಬು
ದ್ಧಿವಂತರಾಗುವಂತೆ ಮಾಡುವದಕ್ಕೆ ಇದೇ ಸಮಯವೆಂದು ಎಣಿಸಿ, ಕೇಳುವದ
ಕ್ಕೆ ಚನ್ನಾಗಿಯೂ, ಸಕಲ ನೀತಿ ಯುಕ್ತವಾಗಿಯೂ ಇರುವ ಹಾಗೆ ಐದು ಕಥೆ
ಗಳನ್ನು ಕಲ್ಪಿಸಿ, ಅವುಗಳನ್ನು ಅವರಿಗೆ ಚನ್ನಾಗಿ ತಿಳಿಯ ಹೇಳಿ, ಆರು ತಿಂಗಳು
ಗಳೊಳಗೆ ಅವರನ್ನು ಸಕಲ ನೀತಿ ವಿಶಾರದರಾಗಿ ಮಾಡಿ, ಕೃತಾರ್ಥನಾದೆನೆಂ
ದು ಸಂತೋಷ ಪಟ್ಟು ಕೊಂಡು, ಆ ಕುಮಾರರನ್ನು ರಾಯನ ಬಳಿಗೆ ಕರ
ಕೊಂಡು ಹೋಗಿ, ಅವರ ವಿದ್ಯಾ ಪರಿಕ್ಷೆಯನ್ನು ತೋರಿಸಲು; ರಾಯನು ತನ್ನ

ಮಕ್ಕಳು ಬುದ್ಧಿವಂತರಾದದ್ದನ್ನು ನೋಡಿ, ಬಹಳ ಸಂತೋಷವನ್ನು ಹೊಂದಿ, ಆ ವಿಷ್ಣುಶರ್ಮಸಿಗೆ ಬಹಳ ಉಡುಗೆರೆಗಳನ್ನು ಕೊಟ್ಟು, ಜ್ಯೇಷ್ಠ ಮಗನಿಗೆ ಪಟ್ಟವನ್ನು ಕಟ್ಟಿ, ಸುಖದಿಂದಿದ್ದನು.

43. The Idol cheated by the Merchant.

೪೩. ಕೋಮಟಿಗನು ವಿನಾಯಕನನ್ನು ಮೋಸಾ ಮಾಡಿದ ಕಥೆ.

ಬೆಳವಾಡಿ ಎಂಬ ಗ್ರಾಮದಲ್ಲಿ ರಾಮಶೆಟ್ಟಿ ಎಂಬ ಒಬ್ಬ ಕೋಮಟಿಗನು ಇದ್ದನು. ಅವನು ಆ ಗ್ರಾಮಕ್ಕೆ ಸಮೀಪವಾದ ಸೋಮವಾರಸಂತೆ ಎಂಬ ಊರಿಗೆ ಪ್ರತಿ ಸೋಮವಾರವೂ ಸಂತೆಗೆ ಹೋಗಿ, ತೆಂಗಿನ ಕಾಯಿ, ಬಾಳೇ ಹಣ್ಣು, ಹುರಿಗಡಲೇ, ಕೊಬರಿ, ಬುರುಗು, ಅಡಿಕೆ, ಎಲೆ, ಮುಂತಾದ ಚಿಲ್ಲರೇ ಸಾಮಾನುಗಳನ್ನು ಲಾಭಕ್ಕೆ ಮಾರಿ, ಆ ಲಾಭದ ಹಣದಿಂದ ಕಷ್ಟ ಪಟ್ಟು ಜೀವನವನ್ನು ಮಾಡುತ್ತಾ ಇದ್ದನು. ಅವನ ನೆರೆಯವನಾದ ಸಂಜೀವಶೆಟ್ಟಿ ಎಂಬುವನು ಇವನ ಹಾಗೆಯೇ ಚಿಲ್ಲರೆ ವ್ಯಾಪಾರಗಳನ್ನು ಮಾಡುತ್ತಾ ಇದ್ದರೂ, ಬಹು ಲಾಭವನ್ನು ಸಂಪಾದಿಸಿ ಕೊಂಡು, ಸುಖವಾಗಿ ಇದ್ದನು. ರಾಮಶೆಟ್ಟಿಯು ಒಂದು ದಿವಸ ತನ್ನ ನೆರೆಯವನಾದ ಸಂಜೀವಶೆಟ್ಟಿಯ ಸಂಗಡ ತಮ್ಮ ವ್ಯಾಪಾರಗಳ ವಿಷಯವಾಗಿ ಮಾತಾಡುತ್ತಾ ಇದ್ದು, ಅವನನ್ನು ಕುರಿತು—ಎಲೈ, ಶೆಟ್ಟಿಯೇ, ನಾವಿಬ್ಬರೂ ಒಂದೇ ಸಮವಾದ ಬಂಡವಾಳವನ್ನು ಇಟ್ಟು ಕೊಂಡು, ಒಂದೇ ವ್ಯಾಪಾರವನ್ನು ಮಾಡುತ್ತೇವೆ. ಆದರೆ ನಿನಗೆ ಬಹಳ ಲಾಭ ಬರುತ್ತೆ; ನನಗೆ ಮಾತ್ರ ಸ್ವಲ್ಪ ಲಾಭ ಬರುತ್ತೆ. ಇದಕ್ಕೆ ಏನು ಕಾರಣವೆಂದು ಕೇಳಲು; ಆ ಸಂಜೀವಶೆಟ್ಟಿಯು—ಎಲೈ, ಶೆಟ್ಟಿಯೇ, ನಾವು ವ್ಯಾಪಾರಕ್ಕೆ ಹೋಗುವ ಸೋಮವಾರ ಸಂತೆಯ ಊರು ಬಾಗಲಿನ ಹತ್ರ ಒಂದು ವಿನಾಯಕನ ಗುಡಿಯು ಇದೆ. ಆ ವಿನಾಯಕನು ಬಹು ಸತ್ಯವುಳ್ಳ ದೇವರು. ನಾನು ಸಂತೆಗೆ ಹೋಗುವಾಗೆಲ್ಲಾ ಆ ದೇವರ ಗುಡಿಗೆ ಹೋಗಿ, ವಿನಾಯಕನಿಗೆ ನಮಸ್ಕರಿಸಿ—ಎಲೋ, ಗಣಪತಿಯೇ, ಈ ದಿವಸ ನನಗೆ ಬಹಳ ಲಾಭ ಬಂದರೆ, ನಾಲ್ಕರಲ್ಲಿ ಒಂದು ಪಾಲು ನಿನಗೆ ಒಪ್ಪಿಸುತ್ತೇನೆ ಎಂದು ಬೇಡಿ ಕೊಂಡು, ಹಾಗೆ ಬಂದ ಹೆಚ್ಚು ಲಾಭದಲ್ಲಿ ನಾಲ್ಕರಲ್ಲಿ ಒಂದು ಪಾಲು ಆ ಗಣಪತಿಗೆ ಒಪ್ಪಿಸುತ್ತೇನೆ. ಆದ್ದರಿಂದ ನನಗೆ ಬಹು ಲಾಭ ಬರುತ್ತೆ ಎಂದು ಹೇಳಲು; ರಾಮಶೆಟ್ಟಿಯು ತಾನೂ ಹಾಗೆಯೇ ಮಾಡ ಬೇಕೆಂದು ಯೋಚಿಸಿ, ಸಂತೆಗೆ ಹೋದಾಗ, ಆ ದೇವರ ಗುಡಿಗೆ ಹೋಗಿ, ವಿನಾಯಕನಿಗೆ ಅಡ್ಡ ಬಿದ್ದು—ಸ್ವಾಮಿ, ನಾನು ಈ ದಿವಸ ಸಂತೆಗೆ ವ್ಯಾಪಾರಕ್ಕೆ ಹೋಗುತ್ತೇನೆ. ನನಗೆ ಈ

ದಿವಸ ಹೆಚ್ಚು ಲಾಭ ಬಂದರೆ, ನಿನ್ನ ಪಾದಕ್ಕೆ ಒಂದು ಗೋಣೀ ಹಣ್ಣನ್ನೂ ಒಂದು ಗೋಣೀ ಕಾಯಿಯನ್ನೂ ಒಪ್ಪಿಸುತ್ತೇನೆಂದು, ಹರಿಕೇ ಮಾಡಿ ಕೊಂಡು, ಸಂತೆಗೆ ಹೋಗಿ, ವ್ಯಾಪಾರಾ ಮಾಡಿ, ಪೂರ್ವಕ್ಕಿಂತ ಹೆಚ್ಚಾಗಿ ಲಾಭ ಬಂದದರಿಂದ ಬಹಳ ಸಂತೋಷ ಪಟ್ಟು ಕೊಂಡು, ಸಾಯಂಕಾಲವಾದ ಮೇಲೆ ತನ್ನ ಊರಿಗೆ ತಿರಿಗಿ ಹೋಗ ಬೇಕೆಂದು ಹೊರಟು, ವಿನಾಯಕನ ಗುಡಿಯ ಬಳಿಗೆ ಬಂದು, ತಾನು ಮಾಡಿದ ಹರಿಕೆಯನ್ನು ಜ್ಞಾಪಕಾ ಮಾಡಿ ಕೊಂಡು—ಅನ್ಯಾಯವಾಗಿ ಈ ದೇವರಿಗೆ ಒಂದು ಗೋಣೀ ಕಾಯಿಯನ್ನೂ ಒಂದು ಗೋಣೀ ಹಣ್ಣನ್ನೂ ಕೊಡ ಬೇಕಲ್ಲಾ ಎಂದು ಯೋಚಿಸಿ, ಅಲ್ಲಿ ಸಾಲು ಮರಗಳಲ್ಲಿ ಒಂದು ಗೋಣೀ ಮರವನ್ನು ಕಂಡು, ಆ ಮರವನ್ನು ಹತ್ತಿ, ಒಂದು ಗೋಣೀ ಹಣ್ಣನ್ನೂ ಒಂದು ಗೋಣೀ ಕಾಯಿಯನ್ನೂ ಕಿತ್ತು ಕೊಂಡು, ವಿನಾಯಕನ ಗುಡಿಯ ಒಳಕ್ಕೆ ಹೋಗಿ, ದೇವರಿಗೆ ನಮಸ್ಕಾರಾ ಮಾಡಿ—ಸ್ವಾಮಿ, ನನ್ನ ಹರಿಕೆಯ ಪ್ರಕಾರ ಒಂದು ಗೋಣೀ ಹಣ್ಣನ್ನೂ ಒಂದು ಗೋಣೀ ಕಾಯಿಯನ್ನೂ ಒಪ್ಪಿಸಿದ್ದೇನೆ; ದಯ ಮಾಡಿ ತೆಗೆದು ಕೊಳ್ಳ ಬೇಕೆಂದು, ತಾನು ತಂದಿದ್ದ ಕಾಯಿ ಹಣ್ಣುಗಳನ್ನು ಆ ದೇವರ ಪಾದದ ಮೇಲೆ ಇಟ್ಟು, ತನ್ನ ಊರಿಗೆ ಹೊರಟು ಬಂದನು.

44. The Mussulman tricked by a Merchant.
೪೪. ಕೋಮಟಿಗನು ತುರುಕನನ್ನು ವಂಚಿಸಿದ ಕಥೆ.

ಸೋಮಪುರವೆಂಬ ಅಗ್ರಹಾರದಲ್ಲಿ ಚಂದ್ರಭಟ್ಟನೆಂಬ ಒಬ್ಬ ಬ್ರಾಹ್ಮಣನು ಇದ್ದನು. ಆತನು ಜಾತಿ ಮರ್ಯಾದೆಯನ್ನು ಅತಿಕ್ರಮಿಸಿ ನಡೆಯದೆ, ಯಾಚನೆಯಿಂದ ಜೀವನವನ್ನು ಮಾಡಿ ಕೊಂಡು ಇರುತ್ತಾ, ಒಂದು ದಿವಸ—ಧಾರಾ ಪಟ್ಟದ ಅರಸನು ಬಹು ದ್ರವ್ಯವನ್ನು ಬ್ರಾಹ್ಮಣರಿಗೆ ಕೊಡುತ್ತಾನೆಂದು ಕೇಳಿ, ಅವನ ಬಳಿಯಲ್ಲಿ ಏನಾದರೂ ಸಂಭಾವನೆಯನ್ನು ತೆಗೆದು ಕೊಂಡು ಬರ ಬೇಕೆಂದು ಆಲೋಚಿಸಿ, ಒಬ್ಬನೇ ಹೊರಟು ಪಯಣ ಗತಿಯಿಂದ ಆ ಧಾರಾ ಪಟ್ಟದ ಹೊರ ಉದ್ಯಾನವನವನ್ನು ಸೇರಿ, ಅಲ್ಲಿ ನಿರ್ಮಲೋದಕದಿಂದ ಶೋಭಿತವಾಗಿಯೂ, ನಾನಾ ವಿಧಗಳಾದ ಜಲ ಪಕ್ಷಿಗಳ ಮಧುರಾಲಾಪಗಳಿಂದ ಮನೋಹರವಾಗಿಯೂ, ವಿಕಾಸಮಾನಗಳಾದ ಕೆಂದಾವರೆ ಬಿಳಿದಾವರೆ ಕನ್ನೈದಿಲೆ ಮೊದಲಾದ ಪುಷ್ಪಗಳಿಂದ ರಮಣೀಯವಾಗಿಯೂ ಇರುವ ಒಂದು ಸರಸ್ಸನ್ನು ಕಂಡು, ತಾನು ಮಾರ್ಗಶ್ರಮದಿಂದ ಆಯಾಸಪಟ್ಟಿರುವದರಿಂದ ಈ ತಣ್ಣೀರಲ್ಲಿ ಸ್ನಾನವನ್ನು ಮಾಡಿ, ಬುತ್ತಿಯನ್ನುಂಡು, ಸ್ವಲ್ಪ ವಿಶ್ರಮಿಸಿ ಕೊಂಡಿದ್ದು, ಅನಂತರ ಪುರ ಪ್ರ

ವೇಶವನ್ನು ಮಾಡೋಣಾ ಎಂದು ಅಂದು ಕೊಂಡು, ಆ ಕೊಳದಲ್ಲಿ ಇಳಿದು ಮುಖ ಪ್ರಕ್ಷಾಳನವನ್ನು ಮಾಡಿ, ತದನಂತರ ಸ್ನಾನವನ್ನು ಮಾಡಿ, ದೇವರ ಪೂಜೆಗೆ ತುಲಸಿ ಇಲ್ಲವಲ್ಲಾ ಎಂದು ಅಲ್ಲಲ್ಲಿ ತುಲಸಿಯನ್ನು ಹುಡುಕುತ್ತಾ, ಆ ಉದ್ಯಾನ ವನದ ಸಮೀಪದಲ್ಲಿ ಇರುವ ಒಂದು ತುರುಕರ ಮಶೀತಿಯ ಹತ್ರದಲ್ಲಿ ಕೆಲವು ತುಲಸೀ ಗಿಡಗಳು ತಮ್ಮಷ್ಟಕ್ಕೆ ತಾವೇ ಹುಟ್ಟಿರಲು; ಆ ಗಿಡಗಳನ್ನು ನೋಡಿ, ತಾನು ತಂದಿದ್ದ ತಂಬಿಗೆಯ ನೀರನ್ನು ಆ ಗಿಡಗಳಿಗೆ ಹೊಯಿದು, ಅವುಗಳ ಬುಡದ ಮಣ್ಣಿನ ನೀರನ್ನು ತನ್ನ ತಲೆಯ ಮೇಲೆ ಹಾಕಿ ಕೊಂಡು, ಆ ತುಲಸಿ ಗಿಡಗಳಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಕೈ ಮುಗಿದು, ಅನಂತರ ದಳ ದಳವಾಗಿ ಕೊಯ್ಯುತ್ತಿರಲು; ಇದನ್ನೆಲ್ಲ ನೋಡುತ್ತಾ ಇದ್ದ ಆ ಮಶೀತಿಯ ತುರುಕನು ಒಬ್ಬನು ಈ ಬ್ರಾಹ್ಮಣನ ಬಳಿಗೆ ಬಂದು—ಎಲೋ, ಬ್ರಾಹ್ಮಣನೇ, ನೀನು ಹುಚ್ಚನೋ? ಇದೇನು ಈ ಗಿಡಕ್ಕೆ ನಮಸ್ಕಾರಾ ಮಾಡುತ್ತೀ? ಎಂದು ಕೇಳಲು; ಬ್ರಾಹ್ಮಣನು ಆ ಮ್ಲೇಂಛನನ್ನು ಕುರಿತು—ಎಲೈ, ಸಾಬರೇ, ಇದು ಸುಮ್ಮನೇ ಗಿಡವಲ್ಲ, ನಮ್ಮ ದೇವರು. ಆದ್ದರಿಂದ ಇದಕ್ಕೆ ವಂದನೇ ಮಾಡುತ್ತೇನೆ ಎನಲು; ಆ ತುರುಕನು—ಎಲೋ, ಹಾರುವಾ, ಇದು ನಿನ್ನ ದೇವರೋ? ಇದರ ಕೈಯಲ್ಲಿ ಏನು ಆದೀತು? ನನ್ನ ಮೈ ಕೂದಲನ್ನು ನಾಶಾ ಮಾಡುವದಕ್ಕೆ ಇದಕ್ಕೆ ಶಕ್ತಿ ಸಾಲದು ಎಂದು ಹೇಳಿ, ಆ ತುಲಸೀ ಗಿಡವನ್ನು ತನ್ನ ಕಾಲು ಜೋಡಿನಿಂದ ಹೊಡೆದು, ಬೇರು ಸಹಿತ ಕಿತ್ತು, ಅದನ್ನು ತನ್ನ ಮೈ ಮೇಲೆಲ್ಲಾ ಉಜ್ಜಿ, ಹೊಸಿಗಿ, ಕೆಳಕ್ಕೆ ಹಾಕಿ, ಆ ದ್ವಿಜನನ್ನು ಕುರಿತು—ನಿನ್ನ ದೇವರ ಶಕ್ತಿಯನ್ನು ನೋಡಿದಿಯಾ? ಎಂದು ಹಾಸ್ಯಾ ಮಾಡುತ್ತಾ, ಹೊರಟು ಹೋದನು. ಆಗ ಆ ಊರ ಸಮೀಪದ ಹಳ್ಳಿಗೆ ವ್ಯಾಪಾರಾ ಮಾಡುವದಕ್ಕೋಸ್ಕರ ಮಶೀತಿಯ ಹತ್ರ ಹೋಗುತ್ತಾ ಇದ್ದ ಒಬ್ಬ ಕೋಮಟಿ ಶೆಟ್ಟಿಯು ಆ ತುರುಕನು ಮಾಡಿದ ಕಾರ್ಯಗಳನ್ನೆಲ್ಲಾ ಚನ್ನಾಗಿ ನೋಡಿ, ಈ ಮ್ಲೇಂಛನನ್ನು ಮೋಸಗೊಳಿಸ ಬೇಕೆಂದು ಎಣಿಸಿ, ಅವನು ನೋಡುವ ಹಾಗೆಯೇ ತನ್ನ ಹೆಗಲಿನ ಮೇಲೆ ಇದ್ದ ಹಸಬೇ ಚೀಲವನ್ನು ಒಂದು ಮರದ ಬುಡದಲ್ಲಿ ಇಟ್ಟು, ಅಲ್ಲಿ ಪೊದೆಯಾಗಿ ಬೆಳದು ಇರುವ ಒಂದು ತುರುಚನ ಗಿಡಕ್ಕೆ ಸುಮ್ಮನೇ ಪ್ರದಕ್ಷಿಣೆಯನ್ನು ಮಾಡಿ, ನಮಸ್ಕಾರಾ ಮಾಡುತ್ತಾ ಇದ್ದನು. ಇದನ್ನು ನೋಡುತ್ತಾ ಇದ್ದ ಅದೇ ತುರುಕನು ಇವನಿಗೂ ಆ ಹಾರುವನಿಗೆ ಹಿಡಿದ ಹುಚ್ಚು ಹಿಡಿದು ಇಧೆ ಎಂದು ಅಂದು ಕೊಂಡು, ಆ ಶೆಟ್ಟಿಯ ಬಳಿಗೆ ಬಂದು—ಎಲೋ, ಕೋಮಟೀ, ಇದೇನು ಈ ಗಿಡಕ್ಕೆ ಪ್ರದಕ್ಷಿಣ ನಮ

ಸ್ಕಾರ ಮಾಡುತ್ತೀ? ಎಂದು ಕೇಳಲು; ಆ ವರ್ತಕನು—ಎಲೈ, ಸಾಹೇಬರೇ, ಇದು ನಮ್ಮ ಮನೇ ದೇವರು; ಬಹಳ ಕ್ರೂರವಾದದ್ದು. ಇದನ್ನು ಪೂರ್ಣ ಭಕ್ತಿಯಿಂದ ಪೂಜಿಸ ಬೇಕು ಎಂದು ಹೇಳಲು; ಆ ತುರುಕನು—ಛೀ! ಛೀ! ನೀವೆಲ್ಲರೂ ಬುದ್ಧಿಹೀನರು! ಈ ಎಲೆಯಲ್ಲಿ ಏನು ಸತ್ಯವಿಧೆ? ಎಂದು, ಆ ಕೋಮಟಿಯನ್ನು ಧಿಕ್ಕರಿಸಿ, ಗರ್ವದಿಂದ ಆ ಗಿಡವನ್ನು ಬೇರು ಸಹಿತ ಕಿತ್ತು, ಅದರ ಎಲೆಗಳನ್ನು ತನ್ನ ಕಾಲುಗಳಿಗೆ ಉಜ್ಜಿ ಕೊಂಡು, ಬಿಸಾಟು ಬಿಟ್ಟನು. ಆಗ ಅವನಿಗೆ ಬಹಳ ನವೆಯೂ, ಉರಿಯೂ ಉಂಟಾಗಿ, ಬಹಳ ಶ್ರಮ ಪಡುತ್ತಾ, ಆ ಕೋಮಟಿಯನ್ನು ನೋಡಿ—ಶೆಟ್ಟರೇ, ನಿಮ್ಮ ಮಾತು ಸತ್ಯ, ನಿಮ್ಮ ದೇವರು ಬಹಳ ಕ್ರೂರವಾದದ್ದು. ಈಗ ನನ್ನ ಮೈ ಎಲ್ಲಾ ನವೆಯಾಗುತ್ತದೆ, ಉರಿ ಬಲವಾಗಿ ಇಧೆ. ಏನು ಮಾಡ ಬೇಕೆಂದು ಬಹು ದೈನ್ಯದಿಂದ ಬೇಡಿ ಕೊಳ್ಳಲು; ಆ ಕೋಮಟಿಯು—ಸಾಹೇಬರೇ, ನಾನೇನು ಮಾಡಲಿ? ನೀವು ನಮ್ಮ ದೇವರಿಗೆ ಅಪರಾಧ ಮಾಡಿದ್ದರಿಂದ ನೀವೇ ಆ ದೇವರಿಗೆ—ನನ್ನಿಂದ ತಪ್ಪಾಯಿತೆಂದು ಬೇಡಿ ಕೊಂಡು, ಏನಾದರೂ ನಿನ್ನ ಪಾದಕ್ಕೆ ಒಪ್ಪಿಸುತ್ತೇನೆಂದು ತಪ್ಪು ಗಾಣಿಕೆಯನ್ನು ನನ್ನ ವಶಕ್ಕೆ ಕೊಟ್ಟರೆ, ನಾನು ದೇವರನ್ನು ಬೇಡಿ ಕೊಂಡು, ನಿನ್ನನ್ನು ವಾಶಿ ಮಾಡುತ್ತೇನೆಂದು ಹೇಳಲು, ಆ ತುರುಕನು—ಇಷ್ಟು ಆದರೆ ಸಾಕೆಂದು ತನ್ನ ಜೇಬಿನಲ್ಲಿ ಇದ್ದ ಹತ್ತು ವರಹಾಗಳನ್ನು, ಇದನ್ನು ತಪ್ಪು ಗಾಣಿಕೆಯಾಗಿ ತೆಗೆದು ಕೊಳ್ಳೀ ಎಂದು, ಕೋಮಟಿಗೆ ಕೊಡಲು; ಅವನು ಒಂದು ದುಡ್ಡಿಗೆ ಹರಳೆಣ್ಣೆಯನ್ನು ತಂದು, ಆ ತುರುಕನ ಮೈಗೆಲ್ಲಾ ಸವರಿ, ಚನ್ನಾಗಿ ನೀವಿದನು. ಸ್ವಲ್ಪ ಹೊತ್ತಿನ ಮೇಲೆ ನವೆಯೂ ಉರಿಯೂ ನಿಂತು ಹೋಯಿತು. ಆಗ ಅವರಿಬ್ಬರೂ ತಮ್ಮ ತಮ್ಮ ದಾರೀ ಹಿಡಿದು ಕೊಂಡು, ಹೊರಟು ಹೋದರು.

45. The Impoverished Ryot and the Idol.

೪೫. ಬಡತನ ಬಂದ ಶೂದ್ರನನ್ನೂ ವಿಗ್ರಹವನ್ನೂ ಕುರಿತದ್ದು.

ರಾಮನಾಥಪುರವೆಂಬ ಒಂದು ಗ್ರಾಮದಲ್ಲಿ ಹನುಮೇಗೌಡನೆಂಬ ಒಬ್ಬ ಒಕ್ಕಲಿಗನು ಇದ್ದನು. ಅವನು ಬಹು ಬಡವನಾಗಿದ್ದು, ಮೆಲ್ಲಗೆ ಎಲ್ಲಿಯೋ ಕಷ್ಟ ಪಟ್ಟು, ಒಂದಾರು ಎತ್ತನ್ನು ಹೊಂದಿಸಿ ಕೊಂಡು, ಆ ಊರ ಪಾರುಪತ್ಯಗಾರನ ಬಳಿಗೆ ಹೋಗಿ, ನಾಲ್ಕು ವರಹದ ಕಂದಾಯದ ಹೊಲವನ್ನು ಮಾಡಿ ಕೊಂಡು, ಆರೇಳು ಉಳ ಉತ್ತು, ರಾಗಿ ಚೆಲ್ಲಿ, ಹದ ಕಂಡು, ಹರತೆ ಬೇಸಾಯಗಳನ್ನು ಮಾಡಿ, ಕಳೆ ಮೊಳೆಗಳನ್ನು ಕಿತ್ತು, ಚನ್ನಾಗಿ ಕಷ್ಟ ಮಾ

ಡಿದನು. ದೇವರ ದಯದಿಂದ ಕಾಲ ಕಾಲಗಳಲ್ಲಿ ಹದ ಮಳೆಗಳು ನಡಿಸಿ, ಪೈ
ರು ಚನ್ನಾಗಿ ಬೆಳೆದು, ತೆನೆಗಳಾಗಿ, ಹಾಲುದುಂಬಿ, ಕಾಸಕ್ಕಿಯಾಗಿ, ಕುಯ್ಲಿ
ಗೆ ಬಂದದ್ದನ್ನು ಕುಯ್ದು, ಅರೀ ಹಾಕಿ, ಆರಿಸಿ, ಬಳ್ಳಗುಡ್ಡೆಗಳನ್ನು ಹಾಕಿ
ದ್ದು ತಿರಿಗಿ ಕಿತ್ತು, ದೊಡ್ಡ ಮೆದೆಯನ್ನು ಹಾಕಿ, ಬೇಸಿಗೇ ಕಾಲದಲ್ಲಿ ಕಣ
ವನ್ನು ಮಾಡಿ, ಮೇಟೀ ಮರವನ್ನು ನಿಲ್ಲಿಸಿ, ಅದರ ಸುತ್ತ ಮೆದೇ ಹುಲ್ಲು ಕಿ
ತ್ತು, ಒದರಿ, ಒಡ್ಡುಗೋಲಿನಿಂದ ಬಡಿದು, ಎತ್ತುಗಳಿಂದ ತುಳಿಸಿ, ಮೇರೆ ಕೋ
ಲನ್ನು ಕೊಂಡು, ಅದರಿಂದ ಒಕ್ಕಿದ ಹುಲ್ಲುಗಳನ್ನು ಒದರುತ್ತ, ಕಾಳು ಬೇರೆ
ಹುಲ್ಲು ಬೇರೆ ಮಾಡಿ, ಕಾಳಿನ ರಾಶಿಯನ್ನು ತೂರಿ, ಕೇರಿ, ಕಾಳು ಎಂದಿಗಿಂತ
ಹುಲಸಾದ್ದರಿಂದ ತನ್ನ ಮನೆ ಒಗತನಕ್ಕೆ ತಕ್ಕಷ್ಟು ಮೇಲೆ ಇಟ್ಟು ಕೊಂ
ಡು, ಮಿಕ್ಕ ಕಾಳುಗಳನ್ನು ಗುಳಿಗಳಲ್ಲಿ ತುಂಬಿದ್ದು ಮಾರು ಬಂದಾಗ ಮಾರಿ,
ದಿವಾಣದ ಕಂದಾಯವನ್ನು ಕಟ್ಟಿ, ಮಿಕ್ಕ ಹಣದಲ್ಲಿ ನಾಲ್ಕು ಏರು ಎತ್ತು
ಕೊಂಡು, ಇನ್ನೂ ನಾಲ್ಕು ಜೀತದಾಳು ಮಾಡಿ ಕೊಂಡು, ಮತ್ತು ಐವತ್ತು
ವರಹಾ ಕಂದಾಯದ ಹೊಲ ಗದ್ದೆಗಳನ್ನು ಮಾಡಿ ಕೊಂಡು, ದೊಡ್ಡ ರೈ
ತನಾಗಿ, ವರುಷೆ ವರುಷೆ ಆರಂಬವನ್ನು ಬಲ ಪಡಿಸುತ್ತಾ, ನೂರಾರು ಉಳುವ
ಎತ್ತುಗಳನ್ನೂ ನೂರಾರು ಹೇರಾಟದ ಎತ್ತುಗಳನ್ನೂ ಸಂಪಾದಿಸಿ, ಹತ್ತು ಇಪ್ಪ
ತ್ತು ವರುಷದ ತನಕ ಹೀಗೆ ದೇವರ ದಯದಿಂದ ಪ್ರಬಲವಾಗಿ, ಸುಖದಿಂದ ಇ
ದ್ದನು. ಆ ಮೇಲೆ ಆ ದೇಶಕ್ಕೆ ಮಳೆಯಾಗದೆ, ಬೆಳೆ ನಿಂತು ಹೋದ್ದರಿಂದ,
ದನಗಳಿಗೆ ಹುಲ್ಲು ಸೊಪ್ಪು ನೀರು ನಿಡಿ ಇಲ್ಲದೆ, ಕೆಲವು ರೋಗಗಳು ಬಂದು,
ಸತ್ತು ಹೋದವು. ಮಿಕ್ಕವು ಹೀಗೆ ಸಾಯುತ್ತವಲ್ಲಾ ಎಂಬ ದುಖ್ಖದಿಂದ
ಎಲ್ಲವನ್ನು ಮಾರಿ, ಸರಕಾರದ ಕಂದಾಯದ ಹಣಾ ಆ ವರುಷಕ್ಕೆ ಕಟ್ಟಿ ಬಿಟ್ಟು,
ಹೀಗೆ ಮೂರು ನಾಲ್ಕು ವರುಷದ ತನಕ ಮಳೆ ಬೆಳೆ ಚನ್ನಾಗಿ ಆಗದೆ, ಉಳು
ವದಕ್ಕೆ ಎತ್ತು ಆಳು ಇಲ್ಲದೆ, ಅರಮನೇ ಕಂದಾಯಕ್ಕೆ ಮನೆಯಲ್ಲಿದ್ದ ಒಡವೆ
ವಸ್ತುಗಳನ್ನೂ ಪಾತ್ರೆ ಪದಾರ್ಥಗಳನ್ನೂ ಬಟ್ಟೆ ಬರೆಗಳನ್ನೂ ದವಸ ಧಾನ್ಯಗಳ
ನ್ನೂ ಮಾರಿ, ಪಾಳು ಕಂದಾಯ ಕಟ್ಟಿ, ತಿನ್ನುವದಕ್ಕೆ ಹಿಟ್ಟು ಸಹ ಇಲ್ಲದೆ, ಬ
ಹಳ ಕಷ್ಟ ಪಟ್ಟು ಕೊಂಡು ಇದ್ದನು. ತಿರಿಗಿ ಮಾರನೇ ವರುಷದ ಕಂದಾಯಕ್ಕೆ
ಅರಮನೆಯ ಕುಳವಾಡಿಯು ಕೋಲು ಹಾಕಿ ಕೊಂಡು, ಇವನ ಮನೆಗೆ ಮು
ದ್ರೆ ಹಾಕಿ, ಬಹಳ ವರಾತ ಮಾಡಿದ್ದರಿಂದ, ರೈತನು ಕಂದಾಯ ಕೊಡುವದ
ಕ್ಕೆ ಗತಿ ಇಲ್ಲದೆ, ರಾತ್ರೆ ವೇಳೆ ಕದ್ದು, ಓಡಿ ಹೋಗುತ್ತಾ ಇದ್ದದ್ದನ್ನು ಅರ
ಮನೇ ಚಕ್ರನು ಕಂಡು, ಬೆನ್ನಟ್ಟಿ ಬರುತ್ತಾ ಇದ್ದನು. ಅದನ್ನು ಇವನು ಕಂ

ಡು, ಅವನಿಗೆ ಕಾಣಿಸಿ ಕೊಳ್ಳದ ಹಾಗೆ ಓಡಿ ಹೋಗುತ್ತಾ ಇದ್ದು, ದಾರಿಯಲ್ಲಿ ಒಂದು ಬಸ್ತೀ ಗುಡಿ ಇದ್ದದರಿಂದ, ಅದರೊಳಗೆ ಹೊಕ್ಕು, ಅಲ್ಲಿದ್ದ ವಿಗ್ರಹದ ಹಿಂದುಗಡೆಯಲ್ಲಿ ಔತು ಕೊಂಡನು. ಚಕ್ರನು ರೈತನನ್ನು ಕಾಣದೆ, ತಿರುಗಿ ಹೋದನು. ಆ ಮೇಲೆ ಬೆಳಕು ಹರಿಯುವದು ಮುಂದಕ್ಕೆ ಬಂದು, ಆ ವಿಗ್ರಹದ ಇರುವಿಕೆಯನ್ನು ನೋಡಿ, ಇದಿರೆ ನಿಂತು, ಬಿಕ್ಕಿ ಬಿಕ್ಕಿ ಅಳುತ್ತಾ ಇರುವಲ್ಲಿ, ಆ ವಿಗ್ರಹದ ಪೂಜಾರಿಯು ಬಂದು—ಯಾಕೆ ಅಳುತ್ತೀಯೋ? ಎಂದು ಕೇಳಿದ್ದಕ್ಕೆ,—ಮತ್ತ್ಯಾವದಕ್ಕೂ ಇಲ್ಲವಪ್ಪಾ. ನಾನು ಹತ್ತು ವರುಷ ಆರಂಬಾ ಮಾಡಿದ್ದಕ್ಕೆ ಸ್ವಲ್ಪ ಬಟ್ಟೆಯಾದರೂ ಉಳಿದಿದೆ. ಈ ಪಾಪಿಯು ಎಷ್ಟು ವರುಷ ಆರಂಬ ಮಾಡಿದನೋ? ಒಂದು ಬೊಂತೆಗೂ ಗತಿ ಇಲ್ಲದೆ ಬೆತ್ತಲೆ ನಿಂತಿದ್ಧಾನಲ್ಲಾ ಎಂದು ದಃಖ ಬಂತಪ್ಪಾ ಎಂದು ಹೇಳಿ, ಮತ್ತೊಂದು ದೇಶಕ್ಕೆ ಹೋಗಿ, ಕೂಲಿ ನಾಲೀ ಮಾಡಿ ಕೊಂಡು, ಜೀವಿಸಿ ಕೊಂಡಿದ್ದನು.

46. The Stingy Merchant made Liberal.

೪೬. ಲೋಭಿಯಾದ ವರ್ತಕನಿಗೆ ಉದಾರ ಗುಣ ಉಂಟಾದದ್ದು.

ರತ್ನಾವತಿ ಎಂಬ ಪಟ್ಟಣದಲ್ಲಿ ಮಾಣಿಕಶೆಟ್ಟಿ ಎಂಬ ಒಬ್ಬ ವರ್ತಕನು ಹಡಗಿನ ವ್ಯಾಪಾರಗಳನ್ನು ಬಹು ತರವಾಗಿ ಮಾಡಿ, ಅನೇಕ ದ್ರವ್ಯಗಳನ್ನು ಸಂಪಾದಿಸಿ, ಲೋಭತ್ತನದಿಂದ ಒಬ್ಬರಿಗಾದರೂ ಒಂದು ಕಾಸು ಕೊಡದೆ, ಬಲು ಜಿಪುಣನಾಗಿ ಇದ್ದನು. ಆಗ, ಇವನು ಮಹಾ ಧನಿಕನೆಂದು ತಿಳಿದು, ದೇಶಾಂತರದಿಂದ ಬಂದ ಒಬ್ಬ ಯಾಚಕಸ್ಥನು ಇವನನ್ನು ನಾಲ್ಕಾರು ವರುಷ ಆಶ್ರಯುವನ್ನು ಮಾಡಿದಾಗ್ಯೂ, ಒಂದು ಕಾಸೂ ಕೊಡದೆ ಹೋದ್ದರಿಂದ, ಮನಸ್ಸಿನಲ್ಲಿ—ಇವನನ್ನು ಕಾದದ್ದು ವ್ಯರ್ಥವಾಯಿತಲ್ಲಾ? ಎಂದು ಚಿಂತಿಸುತ್ತಾ ಇದ್ದನು. ಆಗ ವರುಷಾ ಕಾಲವು ಬಂದು, ಕಾಳ ಮೇಘಗಳು ಆಕಾಶವನ್ನು ತುಂಬಿದವು. ಆ ವೇಳೆಯಲ್ಲಿ ಭಿಕ್ಷಾ ಪಾತ್ರೆಯನ್ನು ಹಿಡು ಕೊಂಡು, ಕೆಲವು ಜನ ಭಿಕ್ಷುಕರು ಈ ವರ್ತಕನ ಬಳಿಗೆ ಬಂದು—ಕೊಡದೆ, ನಮ್ಮ ಹಾಗೆ ಆಗ ಬೇಡ. ಕೊಟ್ಟು, ನಿನ್ನ ಹಾಗೆ ನೀನು ಆಗು ಎಂದು ಹೇಳಿದರು. ಆಗ ಈ ವರ್ತಕನು ಅವರು ಹೇಳಿದ ಮಾತನ್ನು ಕೇಳಿ,—ತನ್ನ ಮನಸ್ಸಿನಲ್ಲಿ ಇವರ ಮಾತಿನ ಅಭಿಪ್ರಾಯವೇನಂದರೆ,ಯಾವವನು ದಾನಧರ್ಮಗಳನ್ನು ಮಾಡುತ್ತಾನೋ, ಅವನು ಮತ್ತೊಂದು ಜನ್ಮದಲ್ಲಿ ಐಶ್ವರ್ಯವಂತನಾಗುವನು. ಮಾಡದವನು ಭಿಕ್ಷುಕನಾಗಿ ಹುಟ್ಟುವನೆಂದಾಯಿತು. ಆದರೆ ಹಣವನ್ನು ಗಳಿಸಿದವನು ನಿತ್ಯವೂ ವೆಚ್ಚವನ್ನು ಮಾಡುತ್ತಾ ಬಂದರೆ, ಕೆಲವು ದಿವಸದಲ್ಲಿ ಹಣವೆಲ್ಲಾ ಮುಗಿದು,

ಬಡವನಾಗುವನು ಎಂದು ಯೋಚಿಸುತ್ತಿದ್ದನು. ಆಗ ಆ ಮೊದಲು ಕಾದಿದ್ದ ಬ್ರಾಹ್ಮಣನು ಅರಸಿನ ಭಾವವನ್ನು ತಿಳಿದು, ಆಕಾಶದಲ್ಲಿರುವ ಮೇಘವನ್ನು ಕುರಿತು—ಎಲೈ, ಮೇಘವೇ, ವರುಷದಾರಭ್ಯ ಬಾಯಾರಿಕೆಯಿಂದ ಕಂಗೆಟ್ಟಿರುವ ಈ ಚಾತಕ ಪಕ್ಷಿಯು ಮರಿಯ ಬಾಯಿಯಲ್ಲಿ ತಾತ್ಸಾರಾ ಮಾಡದೆ, ಬೇಗ ನಿನ್ನ ಮುಂಗಾರು ಹನಿಗಳನ್ನು ಕೆಡವು. ಯಾಕಂದರೆ ಘಾಳಿಯು ಮತ್ತೊಂದು ಪ್ರಕಾರ ತಿರುಗಿ, ಬೀಸಿದ್ದೇ ಆದರೆ, ಆವಾಗ ನೀನು ಎಲ್ಲಿ? ನಿನ್ನಲ್ಲಿ ನೀರುಗಳೆಲ್ಲಿ? ಚಾತಕ ಪಕ್ಷಿ ಬಂದು ಕಾಯುವದೆಲ್ಲಿ? ಎಂದು ಹೇಳಿದನು. ಆಗ ವರ್ತಕನು ಕೇಳಿ, ಈ ಮಾತಿನರ್ಥವು ದೇವರು ಕೊಟ್ಟಾಗಲೇ ದಾನ ಧರ್ಮಗಳ ಮಾಡ ಬೇಕು. ಈ ಐಶ್ವರ್ಯವು ದೇವರ ದಯ ತಪ್ಪಿದರೆ, ಹೋಗುವದು. ಆಗ ನಿನ್ನ ಬಳಿಗೆ ಒಬ್ಬ ಬೇಡುವವನಾದರೂ ಬಾರನೆಂದು ಆಯಿತು ಎಂದು ಯೋಚಿಸಿ, ತಾನು ಸಂಪಾದಿಸಿರುವ ದ್ರವ್ಯಗಳನ್ನು ನಾಲ್ಕು ಪಾಲು ಮಾಡಿ, ಒಂದು ಪಾಲು ಮಕ್ಕಳ ವಶಕ್ಕೆ ವ್ಯಾಪಾರಕ್ಕೆ ಕೊಟ್ಟು, ಒಂದು ಪಾಲು ಸಂಚಿತವಾಗಿ ಇಟ್ಟು, ಮತ್ತೊಂದು ಪಾಲು ಗೃಹಕೃತ್ಯದ ಖರ್ಚಿಗೆ ಇಟ್ಟು ಕೊಂಡು, ನಾಲ್ಕನೇ ಪಾಲನ್ನು ದಾನ ಧರ್ಮಗಳಿಗೆಂದು ತೆಗೆದು, ಬಂದ ಭಿಕ್ಷುಕರಿಗೂ ಕಾದು ಇದ್ದ ಬ್ರಾಹ್ಮಣನಿಗೂ ಉಚಿತವರಿತು ಕೊಟ್ಟು, ಮುಂದೆ ಬಂದವರಿಗೂ ಯೋಗ್ಯತೆ ಅರಿತು ಕೊಡುತ್ತಾ, ಕೀರ್ತಿಯನ್ನು ಹೊಂದಿ, ಸುಖವಾಗಿದ್ದನು.

47. Maryade Ramanna judges the case of a Brahman and a Merchant.

೪೭. ಮರ್ಯಾದೆ ರಾಮಣ್ಣನು ಬ್ರಾಹ್ಮಣ ವರ್ತಕರ ವ್ಯಾಜ್ಯವನ್ನು ತೀರಿಸಿದ ಕಥೆ.

ಉತ್ತರ ದೇಶದಲ್ಲಿ ಶೋಭಾವತಿ ಎಂಬ ಪಟ್ಣವಿರುವದು. ಆ ಪಟ್ಣದಲ್ಲಿ ಸುಶೀಲನೆಂಬ ಬ್ರಾಹ್ಮಣನು ಸರ್ವ ತಂತ್ರಗಳಲ್ಲಿಯೂ ಬಹು ನಿಪುಣನಾಗಿ ಇರುವನು. ಈತನಿಗೆ ಬಾಲ್ಯ ಸ್ನೇಹಿತನಾದ ಪ್ರಾಜ್ಞಶಾಲಿ ಎಂಬ ವೈಶ್ಯ ಸ್ನೇಹಿತನುಂಟು. ಈ ಉಭಯತ್ರರು ಬಾಲ್ಯದಾರಭ್ಯ ಬಹಳ ಮೈತ್ರಿಯಿಂದ ಸಕಲ ಕಾರ್ಯಗಳಲ್ಲಿಯೂ ಒಬ್ಬರಿಗೊಬ್ಬರು ಸಹಯೋಗಕ್ಷೇಮಿಗಳಾಗಿ ಇದ್ದರು. ಆದರೆ ಆ ಬ್ರಾಹ್ಮಣನ ಯೋಗ್ಯತೆಯನ್ನೂ ವರ್ತಕನ ವ್ಯಾಪಾರದ ಕುಶಲತೆಯನ್ನೂ ಅಲ್ಲಿ ವಿಚಾರಿಸುವವರಿಲ್ಲದೆ, ಈ ಉಭಯತ್ರರು ಬಹಳ ದರಿದ್ರರಾಗಿ ಜೀವನಕ್ಕೆ ಮಾರ್ಗವಿಲ್ಲದೆ ಆಲೋಚನೆ ಮಾಡಿದರು, ಏನಂದರೆ—ನಾವು ಈ ಸ್ಥಳದಲ್ಲಿ ಎಷ್ಟು ದಿವಸವಿದ್ದರೂ, ನಮ್ಮ ಕಷ್ಟ ಪರಿಹಾರವಾಗಿ ಸೌಖ್ಯ ಉಂಟಾಗುವದಿಲ್ಲ. ಸಾಯಲಾರದ ಬಡತನಕ್ಕೆ ಪಲಾಯನವೇ ನಿಕ್ಷೇಪ ಎಂಬ ಗಾಥೆ ಅಂತೆ ದೇ

ಶಾಂತರಕ್ಕೆ ಹೋಗಿ, ಪ್ರಬಲವಾದ ಆಶ್ರಯ ಮಾಡಿ, ಅದರಿಂದ ನಾವು ಮುಂದಕ್ಕೆ ಬರ ಬೇಕು. ನಮ್ಮ ಉಭಯತ್ರರಲ್ಲಿ ನನಗೆ ಕೂಡಿ ಬಂದರೆ, ನಾನು ನಿನಗೆ ಸಹಾಯ ಮಾಡ ಬೇಕು. ನಿನಗೆ ಕೂಡಿ ಬಂದು, ನನಗೆ ಯಾವದೂ ಅನುಕೂಲಿಸದೆ ಹೋದರೆ, ನೀನು ನನಗೆ ಪಾಲು ಕೊಟ್ಟು, ಸಹಾಯ ಮಾಡ ಬೇಕು ಎಂದು ನಿಶ್ಚಯ ಮಾಡಿ ಕೊಂಡು, ತಮ್ಮ ಸ್ಥಳವನ್ನು ಬಿಟ್ಟು, ದೂರ ದೇಶಕ್ಕೆ ಹೋಗಿ, ಆಯಾ ದೇಶಗಳ ಅರಸುಗಳನ್ನೆಲ್ಲಾ ಪರೀಕ್ಷೆ ಮಾಡಿ, ಎಲ್ಲಿಯೂ ತಕ್ಕ ಆಶ್ರಯ ಶಿಕ್ಕದೆ, ಕಡೆಗೆ ಒಂದು ಮಹಾ ಪಟ್ಣ ಕಂಡದ್ದರಿಂದ ಆ ಪಟ್ಣದಲ್ಲಿ ಒಬ್ಬ ಅಡುಗೂಲಜ್ಜಿಯ ಮನೆಯಲ್ಲಿ ಹೋಗಿ, ಇಳು ಕೊಂಡು, ಆ ಪಟ್ಣವನ್ನಾಳುವ ಮಹಾ ರಾಜ ಛತ್ರಪತಿ ಎಂಬವನ ಭೇಟೀ ಮಾಡಿ ಕೊಳ್ಳುವಲ್ಲಿ ಈ ಸುಶೀಲನೆಂಬವನ ವಿದ್ಯಾ ವೈದುಷ್ಯಕ್ಕೆ ಆ ರಾಯನು ಮೆಚ್ಚಿದವನಾಗಿ, ಭಾರೀ ಸಂಬಳ ಮಾಡಿಸಿ ಕೊಟ್ಟು, ತನ್ನ ಸಮುಖದಲ್ಲಿ ಇಟ್ಟು ಕೊಂಡನು. ಈತನ ಜೊತೆಯಲ್ಲಿ ಇದ್ದ ವರ್ತಕನಿಗೆ ವ್ಯಾಪಾರ ವಿಷಯದಲ್ಲಿ ಯತ್ನ ಸಾಗದೆ, ಸುಮ್ಮನೆ ಆ ಪಟ್ಣದಲ್ಲೇ ಇದ್ದು ಕೊಂಡು ಇದ್ದನು. ಪೂರ್ವದಲ್ಲಿ ಬ್ರಾಹ್ಮಣನು ವರ್ತಕನು ಸಹಾ ನಿಷ್ಕರ್ಷೆ ಮಾಡಿ ಕೊಂಡು ಇದ್ದ ಪ್ರಕಾರ, ಒಬ್ಬರಿಗೊಬ್ಬರು ಸಹಯೋಗಕ್ಷೇಮಿಗಳಾಗಿ, ಹತ್ತು ಹದಿನೈದು ವರುಷ ಆ ಪಟ್ಣದಲ್ಲೇ ಇದ್ದಾಗ, ಆ ಬ್ರಾಹ್ಮಣನು ದಿನೇ ದಿನೇ ಬಹಳ ಪ್ರಬಲವಾಗಿ, ಮಹದೈಶ್ವರ್ಯವಂತನಾಗಿ, ತಮ್ಮ ಸ್ಥಳದ ಚಿಂತೆ ಹತ್ತಿ—ನಾವು ಬಂದು ಬಹಳ ದಿವಸವಾಯಿತು. ಮನೆ ಬಾಗಲು ಏನಾಯಿತೋ? ಜನಗಳು ಏನಾದರೋ? ಹ್ಯಾಗೆ ಇದ್ಧಾರೋ? ನಾವು ಉಭಯತ್ರರು ಇಲ್ಲೇ ಇದ್ದು ಬಿಡುವದು ಯುಕ್ತವಲ್ಲ. ನೀನು ಹೋಗಿ, ಎಲ್ಲಾ ವಿಚಾರಿಸಿ ಕೊಂಡು ಬರ ಬೇಕೆಂದು, ತನ್ನ ಮಿತ್ರನಾದ ವರ್ತಕನ ಸಂಗಡ ಹೇಳಿದವನಾಗಿ, ವರ್ತಕನಿಗೆ ಹತ್ತು ಸಾವಿರ ವರಹಾವನ್ನೂ, ತನ್ನ ಮನೆಗೆ ಹತ್ತು ಸಾವಿರ ವರಹಾವನ್ನೂ ಭಾರೀ ಕ್ರಯವುಳ್ಳ ಒಂದು ದಿವ್ಯವಾದ ರತ್ನವನ್ನೂ ಕೊಟ್ಟು, ತನ್ನ ಸ್ಥಳಕ್ಕೆ ಕಳುಹಿಸಿ ಕೊಟ್ಟನು. ಅದೇ ಪ್ರಕಾರ ತನ್ನ ಸ್ನೇಹಿತನಾದ ಬ್ರಾಹ್ಮಣನಿಂದ ದ್ರವ್ಯ ರತ್ನ ಸಹಾ ತೆಗೆದು ಕೊಂಡು, ಅಪ್ಪಣೆ ಪಡದು, ತನ್ನ ಪಟ್ಣಕ್ಕೆ ಬಂದನು. ಆ ಬ್ರಾಹ್ಮಣನ ಹೆಂಡತಿಯು ಸಂಗತಿ ಏನಂದರೆ, ಮನೆಯೆಲ್ಲಾ ಫೋಲಾಗಿ ಒಂದೆರಡು ಅಂಕಣ ಮಾತ್ರ ಸ್ವಲ್ಪ ತಗಲಿ ಕೊಂಡು ಇದ್ದ ಸ್ಥಳದಲ್ಲಿ ಅನ್ನ ವಸ್ತ್ರಕ್ಕೆ ಮಾರ್ಗವಿಲ್ಲದೆ, ಬಹಳ ಕೃಶಳಾಗಿ, ನೆಲ ಹತ್ತಿ ಬಿದ್ದಿದ್ದಳು. ತನ್ನ ಗಂಡನ ಸಂಗಡ ಹೋದ ವರ್ತಕನು ಮಹಾ ಸಂಪತ್ತಿನಿಂದ ಬಂದದ್ದನ್ನೂ, ತನ್ನ

ಗಂಡನು ಬಾರದ್ದನ್ನೂ ಕೇಳಿ, ತನ್ನ ಗಂಡನು ಯಾಕೆ ಬರಲಿಲ್ಲವ್ವೋ? ಏನು ಗತಿಯಾದನೋ? ಎಂಬ ಭೀತಿಯಿಂದ ಈ ವರ್ತಕನ ಮನೆಯ ಬಳಿಗೆ ಬಂದು, ಬಾಗಲಲ್ಲಿ ನಿಂತು ಕೊಂಡು, ತಾನು ಬಂದು ಇದ್ದೇನೆಂದು ಹೇಳಿ ಕಳುಹಿಸಿದಳು. ಬಾಗಲು ಕಾಯುವ ಜನಗಳು ಹೋಗಿ, ಈ ಸಂಗತಿಯನ್ನು ಹೇಳಿದ್ದಕ್ಕೆ—ಅವಳು ಯಾರು? ನಮ್ಮಲ್ಲಿ ಏನು ಕೆಲಸ? ತಳ್ಳಿ ಬಿಡಿ ಎಂಬದಾಗಿ ಹೇಳಿದನು. ವರ್ತಕನ ಆಳುಗಳು ಅದೇ ಪ್ರಕಾರ ಆ ಹೆಂಗಸನ್ನು ನೂಕಿ ಬಿಟ್ಟರು. ಅಯ್ಯೋ! ದೇವರೇ! ಹೀಗಾಯಿತೇ? ಎಂಬದಾಗಿ ದುಃಖಿತಳಾಗಿ, ಮನೆಗೆ ಹೊರಟು ಹೋಗಿ, ಉಸ್ಸಂತ ತನ್ನ ಮನೆಯಲ್ಲಿ ಜೀವನಕ್ಕೆ ಮಾರ್ಗವಿಲ್ಲದೆ, ಬಿದ್ದು, ಕಷ್ಟ ಜೀವನಾ ಮಾಡಿ ಕೊಂಡು ಇರುತ್ತಾ ಇದ್ದಳು. ಈ ಮೇರೆಗೆ ಇರುವಲ್ಲಿ, ಮತ್ತೆ ಕೆಲವು ದಿವಸದ ಮೇಲೆ, ಆ ಬ್ರಾಹ್ಮಣನಿಗೆ ತನ್ನ ಸ್ಥಳ ಮನೆಯ ಮೇಲೆ ಮನಸ್ಸಾಗಿ, ಆ ಮಹಾರಾಜನಿಗೆ ತಿಳಿಸಿ, ಹೊರಟು, ಕೆಲವು ದಿವಸಗಳ ಮೇಲೆ ತನ್ನ ಸ್ವಂತ ಸ್ಥಳಕ್ಕೆ ಬಂದು, ಮನೆಯನ್ನು ನೋಡುವಾಗ್ಯೆ, ಬಹಳ ಪೋಲಾಗಿ ಎಲ್ಲಿಯೋ ಒಂದೆರಡು ಅಂಕಣ ತಗಲಿ ಕೊಂಡು ಇರುವದರಲ್ಲಿ ನೆಲ ಹತ್ತಿ ಬಿದ್ದಿರುವ ತನ್ನ ಹೆಂಡತಿಯನ್ನು ನೋಡಿ—ಇಂಥಾ ವರ್ತಕ ಇಲ್ಲಿಗೆ ಬಂದಾಗ್ಯೆ ನಿನಗೇನು ಕೊಡಲಿಲ್ಲವೇ? ಎಂಬದಾಗಿ ಕೇಳಿದ್ದಕ್ಕೆ—ಏನೂ ಕೊಡಲಿಲ್ಲ. ಕೊಟ್ಟು ಇದ್ದರೆ, ನಾನು ಇಂಥಾ ಶ್ರಮದಿಂದ ಇರುವೆನೇ? ಎಂದು ಹೇಳಿದಳು. ಇಷ್ಟರಲ್ಲಿ, ಆ ಬ್ರಾಹ್ಮಣನು ಬಂದ ಸಮಾಚಾರ ವರ್ತಕನು ಕೇಳಿದವನಾಗಿ, ಬಹಳ ಭಯ ಭಕ್ತಿಯಿಂದ ಬಂದು, ವಿಧೇಯನಾಗಿ ವಂದನೆಯನ್ನು ಮಾಡಿ, ನಿಂತು ಕೊಳ್ಳಲು; ಆ ಬ್ರಾಹ್ಮಣನು—ಏನೋ ಗೃಹಸ್ಥಾ! ನಾನು ಕೊಟ್ಟ ಹಣವನ್ನೂ ರತ್ನವನ್ನೂ ನಮ್ಮ ಮನೆಗೆ ಕೊಡದೆ ಇರ ಬಹುದೇ? ಎಂದು ಕೇಳಿದ್ದಕ್ಕೆ—ಅಯ್ಯೋ! ನಾನು ಎಂದಿಗಾದರೂ ಅಂಥಾ ದ್ರೋಹ ಕೆಲಸ ಮಾಡೇನೇ? ತಮ್ಮ ಒಡವೆ ತಮಗೆ ಕೊಡುವದಕ್ಕೆ ಅಡ್ಡಿ ಉಂಟೇ? ಎಂದು ಹೇಳಿದನು. ಅದಕ್ಕಾ ಬ್ರಾಹ್ಮಣನು ಹೆಂಡತಿಯನ್ನು—ಈ ಸಂಗತಿ ಏನು? ಎಂದು ಕೇಳಿದನು. ಹಾಗೆ ಅವನು ಕೊಟ್ಟು ಇದ್ದರೆ, ನಾನು ಹೀಗೆ ಯಾಕೆ ಇದ್ದೇನು? ಎಷ್ಟು ಮಾತ್ರವೂ ಅವನು ಕೊಡಲೂ ಇಲ್ಲ, ನಾನು ತೆಗೆದು ಕೊಳ್ಳಲೂ ಇಲ್ಲ ಎಂದು ಹೇಳಿದಳು. ಅದಕ್ಕೆ ಆ ಬ್ರಾಹ್ಮಣನು ಸಮೀಪದಲ್ಲಿ ಇದ್ದ ವರ್ತಕನನ್ನು ನೋಡಿ—ಆಕೆ ಏನು ಹೇಳುತ್ತಾಳೆ? ಕೇಳೆಂದು ಮೂದಲಿಸಿದನು. ಅಯ್ಯಾ, ಎಷ್ಟು ಮಾತ್ರವೂ ಸುಳ್ಳು ಹೇಳುವವನಲ್ಲ. ತಾವು ಕೊಟ್ಟ ಹಣವನ್ನೂ ರತ್ನವನ್ನೂ ನಾನು ಅಮ್ಮನವರಿಗೆ ಕೊಟ್ಟದ್ದಕ್ಕೆ ಈ ನಾಲ್ಕು ಜನಗಳು ತೆಗೆದು ಕೊಂಡು ಹೋಗಿ ಕೊಟ್ಟವರಿದ್ದಾರೆ.

ಇವರನ್ನು ಕೇಳ ಬಹುದೆಂದು, ಮೊದಲೇ ಹೇಳಿ ಕೊಟ್ಟು ಇದ್ದ ತನ್ನ ಸಂಬಳ
ಗಾರರನ್ನು ತೋರಿಸಿದನು. ಅವರನ್ನು ಕೇಳುವಾಗ್ಯೆ—ನಾವೇ ತೆಗೆದು ಕೊಂಡು
ಹೋಗಿ ಕೊಟ್ಟೆವು ಎಂದು ಹೇಳಿದರು. ಅನಂತರ ಈ ವರ್ತಕನು ಹೇಳಿದ್ದೇ
ನಂದರೆ—ಅಮ್ಮನವರು ಎಲ್ಲಾ ತವುರು ಮನೆಗೆ ಸಾಗಿಸಿ ಬಿಟ್ಟು, ತನ್ನನ್ನು ಈ
ಮೇರೆಗೆ ದುರ್ಜನಾ ಮಾಡುತ್ತಾರೆ. ನಾನು ಎಂದಿಗಾದರೂ ತಮಗೆ ದ್ರೋಹಾ
ಮಾಡೇನೇ? ಬಾಲ್ಯದಾರಭ್ಯ ನನ್ನ ನಡತೆ ತಮಗೆ ತಿಳಿದದೆ ಎಂದು ಹೇಳಿದನು.
ಈ ಬ್ರಾಹ್ಮಣನು—ವರ್ತಕನು ಬಹಳ ದಿವಸದಿಂದ ನನಗೆ ಸ್ನೇಹಿತ; ಎಂದಿಗೂ
ಇಂಥಾ ವಂಚನೆ ನಡಸಿದವನಲ್ಲ. ಇದು ಹೆಂಗಸಿನ ಮೋಸಗತಿಯೇ, ಹೌದು,
ಎಂದು, ಬಹಳ ಕೋಪದಿಂದ—ಈ ನ್ಯಾಯ ಇಲ್ಲಿ ಬಗೆ ಹರಿಯುವದಿಲ್ಲವೆಂದು
ಯೋಚಿಸಿ, ದೇಶದಲ್ಲೆಲಾ ಪ್ರಸಿದ್ಧಿಯಾಗಿ, ಅನೇಕ ನ್ಯಾಯಗಳನ್ನು ತೀರಿ
ಸುವ ನ್ಯಾಯಾಧಿಪತಿಯು ಬಳಿಗೆ ವರ್ತಕನನ್ನೂ ಅವನ ಕಡೇ ಸಾಕ್ಷಿಗಳಾ
ಗಿ ಇರುವ ಆಳುಗಳನ್ನೂ ಸಂಗಡ ಕರೆದು ಕೊಂಡು, ಇನ್ನೂ ಕೆಲವು ಬೇ
ಕಾದ ಸ್ನೇಹಿತರು, ತಾನು ಸಹಿತ, ಪಾಲಕ್ಕಿಯ ಮೇಲೆಯೂ, ಕುದುರೆಗಳ
ಮೇಲೆಯೂ, ರಥಗಳ ಮೇಲೆಯೂ, ಕೂತು ಕೊಂಡು, ಬಹಳ ಕೃಶಳಾಗಿ ಇ
ರುವ ತನ್ನ ಹೆಂಡತಿಯನ್ನು ಸಂಗಡ ತಳ್ಳಿಸಿ ಕೊಂಡು, ಆ ನ್ಯಾಯಾಧಿಪತಿಯ
ಬಳಿಗೆ ಹೋಗಿ, ತಮ್ಮ ವೃತ್ತಾಂತವೆಲ್ಲಾ ತಿಳಿಸಿದನು. ಅಲ್ಲಿ ದೇಶ ದೇಶ ವ್ಯಾ
ಜ್ಯಗಳೂ ಎಷ್ಟೋ ಬಂದು, ಜನಗಳು ಎಂಟು ಹತ್ತು ವರುಷದಿಂದ ಕಾದು
ಕೊಂಡು ಇರುವರು. ತಮ್ಮ ನ್ಯಾಯ ಜಾಗ್ರತೆಯಾಗಿ ಬಗೆ ಹರಿಸಿ ಕೊಡ ಬೇ
ಕೆಂದು ಆ ನ್ಯಾಯಾಧಿಪತಿಗೆ ಬಹಳವಾಗಿ ಹೇಳಿ ಕೊಂಡದ್ದರಿಂದ, ಆತ ಇದ
ನ್ನೆಲ್ಲಾ ವಿಚಾರಿಸಿ, ನಾಲ್ಕು ಮಂದಿ ಸಾಕ್ಷಿಗಳು ಎಂದಿಗೂ ಸುಳ್ಳು ಹೇಳಲಾರರೆಂ
ದು ಎಣಿಸಿ, ವರ್ತಕ ಹಣವನ್ನೂ ರತ್ನವನ್ನೂ ಹೆಂಗಸಿಗೆ ಕೊಟ್ಟದ್ದು ನಿಶ್ಚಯ
ವೆಂದು ತೀರಿಸಿದನು. ಆ ತರುವಾಯ ಬ್ರಾಹ್ಮಣನಿಗೆ ಮೊದಲೇ ಹೆಂಡತಿಯ ಮೇ
ಲೆ ಸಂಶಯವಿತ್ತು. ಅದಕ್ಕೆ ಅನುಸಾರವಾಗಿ ಈ ನ್ಯಾಯಾಧಿಪತಿ ಮಾಡಿದ ತೀ
ರ್ಪಿನಿಂದ ಮತ್ತಷ್ಟು ಆಗ್ರಹ ಉಂಟಾಗಿ, ತಾವೆಲ್ಲರು ಪಾಲಕ್ಕಿ ರಥ ಕುದುರೆ
ಗಳ ಮೇಲೆ ಕುಳಿತು ಕೊಂಡು, ಆ ಹೆಂಗಸನ್ನು ಆಳಿನ ಕಡೇ ಎಳಸಿ ಕೊಂಡು,
ಸ್ಥಳಕ್ಕೆ ಹೊರಟು ಬರುತ್ತಾ ಇರುವಲ್ಲಿ, ಮಧ್ಯ ಮಾರ್ಗದಲ್ಲಿ ಒಂದು ಮಹ
ತ್ತಾದ ಅರಣ್ಯದಲ್ಲಿ, ಇನ್ನೂರು ಮುನ್ನೂರು ಜನ ದನ ಕಾಯುವ ಹುಡುಗ
ರು ದನಾ ಕಾಯುತ್ತಾ ಇದ್ದು, ಅವರಲ್ಲಿ ರಾಮಣ್ಣನೆಂಬ ಒಬ್ಬನು ಅರಸೆಂತಲೂ,
ಕೆಲವರು ಮಂತ್ರಿ ಪ್ರಧಾನಿಗಳೆಂತಲೂ, ಕೆಲವರು ಸೇನಾಪತಿಗಳೆಂತಲೂ, ಕೆ

ಲವರು ಕಾಲ್ಬಲಗಳೆಂತಲೂ, ಈ ರೀತಿ ತಮಾಷೆಯಾಗಿ ಆಟ ಆಡಿ ಕೊಂಡು ಇರುವ ಕಾಲದಲ್ಲಿ, ಆ ಮಾರ್ಗವಾಗಿ ಬರುವ ಈ ಬ್ರಾಹ್ಮಣ ಮುಂತಾದವರನ್ನೂ ರೋದನಾ ಮಾಡಿ ಕೊಂಡು ಹೋಗುವ ಹೆಂಗಸನ್ನೂ ಆ ಅರಸಾಗಿ ಇರುವ ಹುಡುಗನು ನೋಡಿ—ಅವರೆಲ್ಲರನ್ನು ತಳ್ಳಿ ಕೊಂಡು ಬನ್ನಿ ಎಂಬದಾಗಿ ತನ್ನ ಕಡೆಯ ಪರಿವಾರಕ್ಕೆ ಹೇಳಲು, ಅದೇ ಪ್ರಕಾರ ಅವರು ತಂದು ನಿಲ್ಲಿಸಿದರು. ಆ ಜನಗಳನ್ನು ನೋಡಿ—ನೀವು ಯಾರು? ಎಲ್ಲಿಂದ ಬಂದಿರಿ? ಎಲ್ಲಿಗೆ ಹೋಗುತ್ತೀರಿ? ನಿಮ್ಮ ಸಂಗತಿ ಏನೆಂದು, ಕೇಳಿದನು. ಅದಕ್ಕಾ ಬ್ರಾಹ್ಮಣನು—ನೀವು ದನಾ ಕಾಯುವ ಹುಡುಗರು; ನಿಮಗೆ ನಮ್ಮ ಗೊಡವೆ ಯಾಕೆ? ನೀವು ಕೇಳಿ ಪ್ರಯೋಜನವೇನು? ನಾವು ಹೇಳಿ ಫಲವೇನೆಂದು ಹೇಳಿದನು. ಆಹಾ! ಹಾಗೋ? ನಾವು ದನಾ ಕಾಯುವ ಹುಡುಗರೇ ಆಗಲಿ. ಎಲಾ, ಯಾರೋ? ನೀವೆಲ್ಲಾ ಜನಕ್ಕೆ ಒಂದೊಂದು ದೊಣ್ಣೆ ತೆಗೆದು ಕೊಂಡು ಬನ್ನಿ ಎಂದು, ಆಜ್ಞೆ ಮಾಡಿದನು. ಅದಕ್ಕೆ ಅವರೆಲ್ಲಾ ದೊಣ್ಣೆಗಳನ್ನು ತೆಗೆದು ಕೊಂಡು ಬಂದು—ಸ್ವಾಮಿ, ಬುದ್ಧೀ! ಎಂದು, ಬಂದು ನಿಲ್ಲಲು; ಇವರೆಲ್ಲರನ್ನು ಸಾಲಿಗೆ ನಿಲ್ಲಿಸಿ, ತಲೇ ಹೊಡೆದು ಬಿಡಿ ಎಂದು ಅಪ್ಪಣೇ ಕೊಟ್ಟನು. ತಮ್ಮ ಜನವೆಲಾ ಒಟ್ಟು ನಲವತ್ತು ಐವತ್ತು ಮಂದಿ; ದನಾ ಕಾಯುವ ಹುಡುಗರು ಇನ್ನೂರು ಮುನ್ನೂರು ಜನ. ತಾವು ಅನ್ಯಾಯವಾಗಿ ಸಾಯುವ ಹೊತ್ತು ಬಂತು ಎಂದು ಬಹಳ ಭಯ ಪಟ್ಟು—ಅಪ್ಪಾ, ನಮ್ಮ ವೃತ್ತಾಂತವೆಲ್ಲಾ ಹೇಳುತ್ತೇವೆ. ನಮ್ಮನ್ನು ಪ್ರಾಣದಿಂದ ಬಿಟ್ಟರೆ ಸಾಕು ಎಂದು, ಆದಿಯಿಂದ ನಡೆದ ಸಂಗತಿಗಳೆಲ್ಲಾ ಹೇಳಿದರು. ಆ ಅರಸೂ ಮಂತ್ರಿ ಪ್ರಧಾನಿಗಳೂ ಆ ಸಂಗತಿಗಳೆಲ್ಲಾ ಕೇಳಿ, ಅವರೆಲ್ಲರನ್ನು ಬೇರೆ ಬೇರೆ ದೂರವಾಗಿ ಒಂದು ಮರದ ಬುಡದಲ್ಲಿ ಒಬ್ಬೊಬ್ಬರನ್ನು ನಿಲ್ಲಿಸಿ, ಒಂದು ತೆಂಗಿನ ಕಾಯಷ್ಟು ಎರೇ ಮಣ್ಣು ತಂದು, ತಮ್ಮಲ್ಲಿ ಮುಚ್ಚಿಟ್ಟು ಕೊಂಡು, ಮೊದಲು ಆ ಸುಶೀಲನೆಂಬ ಬ್ರಾಹ್ಮಣನನ್ನು ಕರಿಸಿ—ನೀನು ಕೊಟ್ಟ ರತ್ನ ಎಷ್ಟು ಗಾತ್ರವಿತ್ತು? ಈ ಮಣ್ಣಿನಿಂದ ಉಂಡೆ ಮಾಡಿ ಹಾಕು ಎಂದು, ಸ್ವಲ್ಪ ಮಣ್ಣು ಮುಂದೆ ಹಾಕಿದನು. ಅವನು ಸ್ವಲ್ಪ ವ್ಯತ್ಯಾಸವಿಲ್ಲದೆ ಆ ರತ್ನಕ್ಕೆ ಸರಿಯಾಗಿ ಉಂಡೆ ಮಾಡಿ ಹಾಕಿದನು. ಅನಂತರ ಅವನನ್ನು ದೂರವಾಗಿ ಕಳುಹಿಸಿ ಬಿಟ್ಟು, ವರ್ತಕನನ್ನು ಕರಿಸಿ, ಅವನನ್ನು—ಉಂಡೇ ಮಾಡಿ ಹಾಕು ಎಂದು ಹೇಳಿದ್ದಕ್ಕೆ, ಅವನು ಆ ರತ್ನ ನೋಡಿದವನಾದ್ದರಿಂದ ಅವನೂ ಅದೇ ಪ್ರಮಾಣವಾಗಿ ಮಾಡಿ ಹಾಕಿದನು. ಇವನನ್ನು ದೂರವಾಗಿ ಕಳುಹಿಸಿ, ಆ ಸಾಕ್ಷಿಗಳಲ್ಲಿ, ಮುಂದಾಗಿ ಒಬ್ಬನನ್ನು ಕರಿಸಿ—ನೀನು ನೋಡಿದ ರತ್ನ ಬಹಳ ಬೆಲೆಯುಳ್ಳದ್ದು ಎಂದು

ಹೇಳುತ್ತೀಯಲ್ಲಾ? ಅದು ಎಷ್ಟು ಗಾತ್ರವಿತ್ತು? ಎಂದು ಕೇಳಿ, ಥೌಬರೀ ಮಾಡಿದ್ದಕ್ಕೆ, ಅವನು ದೊಡ್ಡ ನಿಂಬೇಕಾಯಿಯ ಗಾತ್ರ ಉಂಡೇ ಮಾಡಿ ಇಟ್ಟನು. ಆ ತರುವಾಯ ಅವನನ್ನು ಬಹಳ ದೂರವಾಗಿ ಕಳುಹಿಸಿ ಬಿಟ್ಟು, ನಿಂತ ಮೂರು ಜನಗಳನ್ನು ಕರಿಸಿ, ಬೇರೆ ಬೇರೆ ಯುಕ್ತಿ ಚಮತ್ಕಾರಗಳಿಂದ ಕೇಳುವಾಗ್ಯೆ, ಒಬ್ಬೊಬ್ಬರು ಒಂದೊಂದು ವಿಧವಾಗಿಯೂ ಬಹಳ ಹೆಚ್ಚು ಕಡಿಮೆಯಾಗಿಯೂ ಉಂಡೆ ಮಾಡಿ ಹಾಕಿದರು. ಇವರೆಲ್ಲರನ್ನು ಕಳುಹಿಸಿ ಬಿಟ್ಟು, ಈ ಉಂಡೆಗಳೆಲ್ಲಾ ನೋಡಿ, ಬ್ರಾಹ್ಮಣ ವರ್ತಕ ಸಹ ಮಾಡಿದ ಉಂಡೆಗಳೆರಡು ಒಂದೇ ಸಮನಾಗಿಯೂ, ಸಾಕ್ಷಿಗಳು ಒಬ್ಬ ದೊಡ್ಡದಾಗಿಯೂ ಒಬ್ಬ ಚಿಕ್ಕದಾಗಿಯೂ ಈ ರೀತಿ ಮಾಡಿ ಇರುವಂಥಾದ್ದು ನೋಡಿ, ತಮ್ಮ ಮನಸ್ಸಿನಲ್ಲಿ ಆಲೋಚನೇ ಮಾಡಿ, ಸಾಕ್ಷಿಗಳು ನೋಡಿದ್ದೂ ಕೊಟ್ಟದ್ದೂ ಸುಳ್ಳು ಎಂಬದಾಗಿ ಎಣಿಸಿ, ಸಾಕ್ಷಿಗಳಲ್ಲಿ ಒಬ್ಬನನ್ನು ಕರಿಸಿ, ಅವನು ಬಂದ ಮಾತ್ರದಲ್ಲೇ—ಎಲಾ, ಅವನ್ಯಾರೋ? ಆ ದೊಣ್ಣೆಯಿಂದ ಇವನ ತಲೆ ಹೊಡೆದು ಹಾಕು ಎಂದು ಭಯ ಹುಟ್ಟಿಸಿ—ಬ್ರಾಹ್ಮಣ ವರ್ತಕ ಸಹ ಮಾಡಿದ ಉಂಡೆಗಳು ಎರಡು ಒಂದೇ ಸಮನಾಗಿ, ಲೇಶ ವ್ಯತ್ಯಾಸವಿಲ್ಲದೆ ಇವೆ. ನೀವು ಮಾಡಿದ ಉಂಡೆಗಳು ಒಂದಕ್ಕೊಂದು ಭೇದವಾಗಿ ಇವೆ. ಇದರಿಂದ ನಿಮ್ಮ ಮಾತು ಬಹಳ ಸುಳ್ಳು ಎಂದು ಹೇಳಲು; ಅವನು ಭಯದಿಂದ—ನಾನು ಹೇಳಿದ್ದೂ ಕಡಿಮೆ ನನ್ನ ಜೊತೆ ಸಾಕ್ಷಿಗಳು ಹೇಳಿದ್ದೂ ಸುಳ್ಳು. ವರ್ತಕನಲ್ಲಿ ನಾನು ಸಂಬಳಕ್ಕೆ ಇರುವದರಿಂದ ಅವನ ಹೇಳಿಕೆಯ ಮೇಲೆ ನಾನು ಸುಳ್ಳು ನುಡಿದಿರುವದುಂಟೆಂದು ಹೇಳಲು; ಕಡಿಮೆ ಜನಗಳನ್ನು ಕರಿಸಿ, ಪೂರಾ ಭಯ ಪಡಿಸಿ, ಕೇಳುವಾಗ್ಯೆ, ಅವರೂ ಅವನಂತೆಯೇ ಹೇಳಿ ಬಿಟ್ಟರು. ಆ ಮೇಲೆ ವರ್ತಕನನ್ನು ಕರಿಸಿ, ಮಣ್ಣಿನ ಉಂಡೆಗಳನ್ನೆಲ್ಲಾ ತೋರಿಸಿ, ಆ ವಿವರವನ್ನೆಲ್ಲಾ ಹೇಳಿ, ಸಾಕ್ಷಿಗಳನ್ನು ಸಮಕ್ಷಮ ನಿಲ್ಲಿಸಿ, ಹೇಳಿಸುವಾಗ್ಯೆ, ಅವನು ಒಪ್ಪಿ ಕೊಂಡು, ತನ್ನ ಟೊಂಕದಲ್ಲಿ ಇದ್ದ ರತ್ನವನ್ನು ಬಿಚ್ಚಿ, ಮುಂದಿಟ್ಟನು. ಅನಂತರ ಬ್ರಾಹ್ಮಣನನ್ನು ಕರಿಸಿ ಕೊಂಡು, ಇವರೆಲ್ಲರ ಎದುರಿಗೆ ಈ ಬ್ರಾಹ್ಮಣ ವರ್ತಕರಿಬ್ಬರು ಮಾಡಿರುವ ಉಂಡೆಗಳಿಗೆ ಸರಿಯಾಗಿರುವ ರತ್ನವನ್ನು ತೋರಿಸಿ, ವರ್ತಕನ ಮೇಲೆ ತಪ್ಪು ನಿಶ್ಚಯಿಸಿ, ಬ್ರಾಹ್ಮಣನ ಹೆಂಡತಿಯನ್ನು ಕರಿಸಿ, ಬ್ರಾಹ್ಮಣನ ವಶಾ ಮಾಡಿದನು. ಇವರೆಲ್ಲರು ಬಹಳ ಸಂತೋಷ ಪಟ್ಟವರಾಗಿ, ಈ ದನಾ ಕಾಯುವ ಹುಡುಗರ ಬುದ್ಧಿಗೆ ಆಶ್ಚರ್ಯ ಪಟ್ಟು ಕೊಂಡು ಹೋದರು. ಅಂದಿನಿಂದ ಆ ಹುಡುಗನು ಮರ್‍ಯಾದೆ ರಾಮಣ್ಣನೆಂಬ ಹೆಸರಿನಿಂದ ಪ್ರಸಿದ್ಧನಾದನು.

48. The Story of Pedda Bhatta.

೪೮. ಪೆದ್ದ ಭಟ್ಟನ ಕಥೆ.

ಉತ್ತರ ದೇಶದಲ್ಲಿ ದೇವಪುರವೆಂಬ ಅಗ್ರಹಾರದಲ್ಲಿ ದೇವಶರ್ಮನೆಂಬ ಬ್ರಾಹ್ಮಣನು ಸಕಲ ವೇದ ಶಾಸ್ತ್ರಾದಿಗಳ ಅಧ್ಯಯನವನ್ನು ಮಾಡಿ, ವಿದ್ಯಾವಂತನಾಗಿ, ಅರಸುಗಳ ಸಭೆಗೆ ಹೋಗಿ, ಪ್ರಸಂಗವನ್ನು ಮಾಡಿ, ಜಯ ಪತ್ರಿಕೆಯನ್ನು ಪಡೆದು, ಅರಸುಗಳಿಂದ ಬಹುಮಾನವಾಗಿ ಧನ ಕನಕ ವಸ್ತ್ರಾಭರಣಗಳನ್ನು ಹೊಂದಿ, ಧನಿಕನಾಗಿ, ತನ್ನ ಸಮಾನರಾದ ಬಂಧುಗಳಲ್ಲಿ ಕನ್ನಿಕೆಯನ್ನು ಮದುವೆಯಾಗಿ, ಗೃಹಸ್ತಾ ಶ್ರಮದಲ್ಲಿ ಬಂದ ಅತಿಥಿ ಅಭ್ಯಾಗತರಿಗೆ ಅನ್ನೋದಕಗಳನ್ನು ಕೊಟ್ಟು, ಮನ್ನಿಸುತ್ತಾ, ಘನ ವಿದ್ವಾಂಸನೆಂದು ಮಂದಿಗಳಲ್ಲಿ ಹೆಸರನ್ನು ಹೊಂದಿ, ಸುಖವಾಗಿದ್ದನು. ಹೀಗಿರುವಲ್ಲಿ, ದೇವರ ದಯದಿಂದ ಆ ಬ್ರಾಹ್ಮಣಿಯು ಬಸುರಾಗಿ, ಒಳ್ಳೇ ಶುಭ ಲಗ್ನ ಶುಭ ತಾರೆಯಲ್ಲಿ ಗಂಡು ಮಗನನ್ನು ಬೆಸನಾದಳು. ಆ ವೇದಶರ್ಮನು ಸಂತುಷ್ಟನಾಗಿ, ಹುಟ್ಟಿದ ಕೂಸಿಗೆ ಜಾತಕರ್ಮವನ್ನು ಮಾಡಿ, ಹನ್ನೆರಡನೇ ದಿವಸದಲ್ಲಿ ಮಲ್ಲಿನಾಥನೆಂದು ನಾಮಕರಣವನ್ನು ಮಾಡಿ, ಬೆಳದ ಹಾಗೆ ಆಯಾಯ ಕಾಲದಲ್ಲಿ ಚೌಲೋಪನಯನಾದಿ ಕರ್ಮಗಳನ್ನು ನೆರವೇರಿಸಿ, ಮತಕ್ಕೆ ವೇದ ಶಾಸ್ತ್ರಾಭ್ಯಾಸಕ್ಕೆ ಗುರುಗಳ ಬಳಿಗೆ ಕಳುಹಿಸಿದನು. ಆ ಮಲ್ಲಿನಾಥನೆಂಬ ಮಗನು ಗುರುಗಳು ಹೇಳಿದ ಹಾಗೆ ಓದಿ ಬರೆಯದೆ, ವೇದ ಶಾಸ್ತ್ರಗಳನ್ನು ಕಲಿಯದೆ, ಯಾವಾಗಲೂ ಕೆಟ್ಟ ಹುಡುಗರ ಸಂಗಡ ಚಂಡು ಬುಗರಿಗಳನ್ನಾಡುತ್ತಾ, ಶುದ್ಧ ಶುಂಠಕಾಯನಾದನು. ಅಂಥಾ ಹೆಡ್ಡ ಹುಡುಗನಿಗೂ ಕೂಡಾ, ದೊಡ್ಡ ವಿದ್ವಾಂಸನ ಮಗನೆಂದು, ಮತ್ತೊಬ್ಬ ದೊಡ್ಡ ವಿದ್ವಾಂಸನು ತನ್ನ ಮಗಳನ್ನು ಕೊಟ್ಟು, ಮದುವೆ ಮಾಡಿದನು. ಕೆಲವು ದಿವಸದ ಮೇಲೆ, ಆ ಹೆಣ್ಣು ಮಗಳು ದೊಡ್ಡವಳಾದ್ದರಿಂದ ಆ ಹುಡುಗಿಯ ತಂದೆಯು ಹುಡುಗನ ತಂದೆಯ ಹೆಸರಿಗೆ, ನಿಮ್ಮ ಮಗನನ್ನು ಕಳುಹಿಸಿದರೆ, ಶೋಭನ ಪ್ರಸ್ತವನ್ನು ಬೆಳಿಸಿ, ದಂಪತಿಗಳನ್ನು ತಮ್ಮ ಬಳಿಗೆ ಕಳುಹಿಸುತ್ತೇನೆಂದು, ಲಗ್ನ ಪತ್ರಿಕೆ ಬರೆದು, ಲಕ್ಕೋಟಿಗೆ ಅರಿಸಿನ ಕುಂಕುಮಗಳನ್ನು ಹಚ್ಚಿಸಿ, ಕಳುಹಿಸಿದನು. ಆಗ ಮಲ್ಲಿನಾಥನ ತಂದೆಯು ಬೀಗ ಬರೆದ ಲಗ್ನ ಪತ್ರಿಕೆಯನ್ನು ಓದಿ ಕೊಂಡು, ತನ್ನ ಮಗನ ಹೆಡ್ಡತನವನ್ನು ನೋಡಿ, ಬಹಳ ಚಿಂತಾಕ್ರಾಂತನಾಗಿ, ಮಗನನ್ನು ಹತ್ತಿರಕ್ಕೆ ಕರೆದು—ಅಪ್ಪಾ, ಮಗನೇ, ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿದೆ. ಒಳ್ಳೆ ವಿದ್ವಾಂಸರ ಮಗಳು ಮದುವೆಯಾಗಿದ್ದಾಳೆ. ನಿನ್ನ ಭಾವಮೈದಂದಿರು ಸಕಲ ಶಾಸ್ತ್ರದಲ್ಲಿಯೂ ನಿಪುಣರಾಗಿದ್ದಾರೆ.

ಈಗ ಶೋಭನ ಪ್ರಸ್ತಕ್ಕೆ ನಿನ್ನನ್ನು ನಿಮ್ಮ ಮಾವ ಕರಿಸಿದ್ದಾನೆ. ನೀನು ನಿರ ಕ್ಷರಕುಕ್ಷಿಯಾಗಿದ್ದೀ. ನೀನು ಮಾವನ ಮನೆಗೆ ಹೋದಲ್ಲಿ, ನಿನ್ನ ಭಾವಮೈ ದಂದಿರು ಏನಾದರೂ ಪುಸ್ತಕಗಳನ್ನು ತೋರಿಸಿದರೆ, ನೋಡುವವನ ಹಾಗೆ ಕೆ ಲವು ಓಲೆಗಳನ್ನು ಮಗುಚಿ ಹಾಕಿ, ನೋಡಿ—ಸಂಪೂರ್ಣವಾಗಿದೆಯೇ? ಎಂ ದು, ಇಷ್ಟು ಮಾತ್ರ ಕೇಳು. ಕಂಡಿಯಾ? ಎಂದು, ಚನ್ನಾಗಿ ಹೇಳಿ, ಮಾವನ ಮನೆಗೆ ಪ್ರಯಾಣ ಮಾಡಿ ಕಳುಹಿಸಿದನು. ಮಾವನೂ ಅತ್ತೆಯೂ ಹೆಂಡತಿ ಯೂ ಭಾವಮೈದಂದಿರೂ ರೂಪಿನಲ್ಲಿ ಚಲುವನಾಗಿ ಯೌವನಸ್ಥನಾಗಿರುವ ಅಳಿಯನನ್ನು ನೋಡಿ, ಬಹಳ ಸಂತೋಷ ಪಟ್ಟು, ಶುಭ ಮುಹೂರ್ತದಲ್ಲಿ ಶೋಭನ ಪ್ರಸ್ತವನ್ನು ಬೆಳಸಿ ಕೊಟ್ಟು, ಅಳಿಯನನ್ನು ಬಹಳ ಬಹುಮಾನದಿಂ ದ ಆದರಿಸಿ ಕೊಂಡು ಇದ್ದರು. ಒಂದು ದಿವಸ ಇವನ ಭಾವಮೈದಂದಿರು ತಮ್ಮ ಮನೆಯ ಪುಸ್ತಕಗಳನ್ನು ಬಿಸಲಿಗೆ ಹಾಕುತ್ತ, ಒಂದು ಪುಸ್ತಕವನ್ನು ತೆಗೆದು, ಅವನ ಕೈಗೆ ಕೊಡಲು; ಸ್ವಲ್ಪ ಹೊತ್ತು ನೋಡಿದವನ ಹಾಗೆ ಮಾ ಡಿ—ಸಂಪೂರ್ಣವಾಗಿದೆಯೇ? ಎಂದು ಕೇಳಿ, ಕೊಟ್ಟು ಬಿಟ್ಟನು. ಹೀಗೆಯೇ ಯಾವ ಪುಸ್ತಕ ಕೈಯಲ್ಲಿ ಕೊಟ್ಟರೂ—ಸಂಪೂರ್ಣವಾಗಿದೆಯೇ? ಎಂದು ಕೇಳಿ, ಕೊಡುತ್ತಾ ಬಂದ ಕಾರಣ, ಒಬ್ಬ ಕುಚೋದ್ಯಗಾರನಾದ ಹುಡುಗ ಮೈದುನ ನು ಒಂದು ಅಲೇಖವನ್ನು ತೆಗೆದು, ಇವನ ಕೈಯಲ್ಲಿ ಕೊಡಲು; ಅದನ್ನು ಕೆಲ ವು ಓಲೆಗಳ ಮಗುಚಿ ಹಾಕಿ, ನೋಡಿ—ಸಂಪೂರ್ಣವಾಗಿದೆಯೇ? ಎಂದು ಕೇ ಳಿದನು. ಆಗ ಭಾವಮೈದಂದಿರೆಲ್ಲಾ ಒಬ್ಬರ ಮುಖ ಒಬ್ಬರು ನೋಡಿ, ನ ಕ್ಕು—ಇವನು ಶುದ್ಧ ಬ್ರಹ್ಮನೆಂದು ನಿಶ್ಚೈಸಿ, ಇನ್ನು ಇವನಿಗೆ ಒನಿಕೆ ಚಿಗುರಿ ದಾಗ್ಯೆ ವಿದ್ಯ ಬರುವದು ಎಂದು, ಹಾಸ್ಯ ಮಾಡಿದರು. ಅದನ್ನು ಜಾಣೆಯಾ ದ ಇವನ ಹೆಂಡತಿಯು ನೋಡಿ, ಬಹಳ ನಾಚಿ ಕೊಂಡು, ಏಕಾಂತದಲ್ಲಿ ಗಂ ಡನೊಡನೆ—ಮಾವನ ಮನೆಯಲ್ಲಿ ಎಷ್ಟು ದಿವಸವಿರ ಬೇಕು? ನಮ್ಮೂರಿಗೆ ಹೋಗೋಣ, ಎಂದಳು. ಈ ಮಲ್ಲಿನಾಥನು ಅತ್ತೆ ಮಾವಂದಿರ ಅಪ್ಪಣೆಯ ನ್ನು ತೆಗೆದು ಕೊಂಡು, ಹೆಂಡತಿಯನ್ನು ಕರ ಕೊಂಡು, ತನ್ನ ಊರಿಗೆ ಬರುವ ದಾರಿಯಲ್ಲಿ ಕಾಡಿನೊಳಗೆ ಮುತ್ತುಗದ ಮರವು ಚನ್ನಾಗಿ ಹೂತಿದ್ದರಿಂದ—ಎ ಲೇ, ಎಲೇ, ನೋಡೇ! ಈ ಮುತ್ತುಗದ ಹೂವುಗಳು ಎಂಥಾ ಚಂದಾಗಿವೆ! ಎಂ ದು, ಹೆಂಡತಿಗೆ ತೋರಿಸಲು; ಆಕೆಯು—ನೀನು ಹ್ಯಾಗೆ ರೂಪ ಯೌವನ ಸಂಪ ನ್ನನಾಗಿ, ವಿದ್ಯಾ ಹೀನನಾಗಿರುವದರಿಂದ ಶೋಭಿಸುವದಿಲ್ಲವೋ, ಹಾಗೆಯೇ ಈ ಮುತ್ತುಗದ ಹೂವುಗಳು ಕಣ್ಣಿಗೆ ಬಲು ಸುಂದರಗಳಾಗಿದ್ದಾಗ್ಯೂ, ಸುವಾಸ

ನೆ ಇಲ್ಲದೆ ಇರುವದ್ದರಿಂದ ಶೋಭಿಸದೆ ಇರುವವು ಎಂದು, ಹೇಳಿದಳು. ಆಗ
ಮಲ್ಲಿನಾಥನು ಹೆಂಡತಿಯ ಮಾತನ್ನು ಕೇಳಿ, ಬಲು ನಾಚಿ ಕೊಂಡು—ಛೀ!
ಛೀ! ನನ್ನ ಜನ್ಮವು ವ್ಯರ್ಥವು! ಹ್ಯಾಗಾದರೂ ವಿದ್ಯಾ ಕಲಿಯ ಬೇಕೆಂದು,
ಮನಸ್ಸಿಗೆ ಛಲ ಹುಟ್ಟಿ, ತಿರಿಗಿ ಹೆಂಡತಿಯನ್ನು ಕರ ಕೊಂಡು, ಮಾವನ ಮನೆ
ಗೆ ಬಂದು, ಆಕೆಯನ್ನು ಅಲ್ಲಿ ಬಿಟ್ಟು, ತಾನು ವಿದ್ಯಾ ಕಲಿಯುವ ಉದ್ದಿಶ್ಯ ಕಾ
ಶೀ ಪಟ್ಟಣಕ್ಕೆ ಬಂದು, ಅಲ್ಲಿ ಒಬ್ಬ ವಿದ್ವಾಂಸನನ್ನು ಕಂಡು, ಅಡ್ಡ ಬಿದ್ದು—ಸ್ವಾ
ಮಿ, ಗುರುಗಳೇ, ನಾನು ಶುದ್ಧ ಮೂಢನು! ನನಗೆ ಒಂದಕ್ಷರವಾದರೂ ಬರು
ವದಿಲ್ಲ. ನನ್ನ ಮೇಲೆ ಕನಿಕರವಿಟ್ಟು, ಅಕ್ಷರಾಭ್ಯಾಸವು ಮೊದಲಾಗಿ ಕಲಿಸಿ
ಕೊಟ್ಟು, ನನ್ನನ್ನು ವಿದ್ವಾಂಸನಾಗಿ ಮಾಡ ಬೇಕೆಂದು, ವಿನಯದಿಂದ ಬೇಡಿ
ಕೊಂಡನು. ಆಗ ಗುರುವು—ಒಳ್ಳೇದೆಂದು ಹೇಳಿ, ಊರ ಬಾಗಲ ಬಳಿಯಲ್ಲಿ
ಅವನಿಗೆ ಗುಂಡೀ ಓನಾಮುವನ್ನು ಬರೆದು ಕೊಟ್ಟು—ಮನೆಯಲ್ಲಿ ಎರಡು
ಹೊತ್ತು ಉಂಡು ಕೊಂಡು, ಇದನ್ನು ತಿದ್ದಿ, ಕಲಿತುಕೋ ಎಂದು ಅಪ್ಪಣೆ
ಕೊಟ್ಟು, ತನ್ನ ಹೆಂಡತಿಯೊಡನೆ—ಆ ಶಿಷ್ಯನಿಗೆ ನಿತ್ಯದಲ್ಲಿ ಬೇವಿನೆಣ್ಣೆಯಲ್ಲಿ
ಅನ್ನಾ ಕಲಿಸಿ ಹಾಕು. ಯಾವ ದಿನ—ಕ್ರೈಯಾಗಿದೆ ಎಂದು ಹೇಳುತ್ತಾನೋ,
ಆಗ ನನಗೆ ಹೇಳು, ಅಂದನು. ಮಲ್ಲಿನಾಥನು ಊರ ಬಾಗಲ ಬಳಿಯಲ್ಲಿ ಆ
ಗುಂಡೀ ಓನಾಮುವನ್ನು ತದೇಕಧ್ಯಾನದಿಂದ ತಿದ್ದುತ್ತಾ ಇದ್ದನು. ಬರುವ
ಹೋಗುವ ಜನಗಳು—ಇವನಿಗೇನು ಹೊಡೆದ ಮಾರಿ? ಇಪ್ಪತ್ತು ವರುಷದ
ಕೊಂಟೆಕೋಣೆಯನಾಗಿದ್ಧಾನೆ. ಈಗ ಗುಂಡೀ ಓನಾಮು ತಿದ್ದುತ್ತಾನೆಂದು ಬೈ
ಕೊಂಡು ಹೋದಾಗ್ಯೂ, ಆ ಮಾತೊಂದೂ ಇವನಿಗೆ ಕೇಳಿಸದೆ, ಜನರನ್ನು ಕ
ಣ್ಣೆತ್ತಿ ನೋಡದೆ, ಗುರುವಿನ ಮನೆಯಲ್ಲಿ ಹಾಕಿದ ಬೇವಿನ ಎಣ್ಣೆ ಅನ್ನವನ್ನು
ಕ್ರೈ, ಶೀ, ಎಂದು ಹೇಳದೆ, ತಿಂದು ಕೊಂಡು, ರಾತ್ರಿ ಹಗಲು ತನ್ನ ವಿದ್ಯಾಭ್ಯಾಸದ
ಲ್ಲಿ ಆಸಕ್ತನಾಗಿದ್ದು, ಕೆಲವು ದಿವಸದಲ್ಲಿ ಅಕ್ಷರಗಳನ್ನೂ, ಆ ಮೇಲೆ ನಾಲ್ಕಾರು
ವರುಷದಲ್ಲಿ ವೇದವನ್ನೂ, ತರ್ಕ, ವ್ಯಾಕರಣ, ಮೀಮಾಂಸೆ, ವೇದಾಂತ, ಜೋ
ತಿಷ್ಯ ಮೊದಲಾದ ಸಕಲ ವಿದ್ಯವನ್ನೂ ಕಲಿತು, ಸಂಪೂರ್ಣ ವಿದ್ಯಾಜ್ಞಾನವುಳ್ಳ
ವನಾಗಿ, ಆ ದಿವಸ ಗುರು ಪತ್ನಿ ಇಕ್ಕಿದ ಅನ್ನವನ್ನು ಉಂಡು, ಆಕೆಯನ್ನು ಕು
ರಿತು—ಅಮ್ಮಾ, ನಿತ್ಯ ಗಟ್ಟೆಯ ಹಾಗಿಲ್ಲ. ಈ ದಿವಸ ಅನ್ನ ಏನೋ ಕ್ರೈಯಾಗಿದೆ
ಎಂದು ಹೇಳಲು; ಗುರು ಪತ್ನಿಯು—ಅಪ್ಪಾ, ಕ್ರೈಯಾಗಿದ್ದರೆ, ಆ ಅನ್ನವನ್ನು ಬಿ
ಡು ಎಂದು ಹೇಳಿ, ಬೇರೆ ಅನ್ನವನ್ನೂ ಸಾರು ತುಪ್ಪಾ ಮಜ್ಜಿಗೆ ಮುಂತಾದ್ದನ್ನೂ
ಬಡಿಸಿ, ಚನ್ನಾಗಿ ಊಟಾ ಮಾಡಿಸಿ, ಈ ವಿವರವನ್ನು ತನ್ನ ಗಂಡನಿಗೆ ಹೇಳಿದಳು.

ಆತನು ಈ ಮಲ್ಲಿನಾಥನನ್ನು ಕರೆದು—ಅಯ್ಯಾ, ನೀನು ಸಕಲ ವಿದ್ಯಾವಂತನಾ
ದೆ. ಇನ್ನು ಮೇಲೆ ನಿನ್ನ ತಂದೆ ತಾಯಿಗಳ ಬಳಿಗೆ ಹೋಗು ಎಂದು ಅಪ್ಪಣೆ
ಕೊಟ್ಟದ್ದರಿಂದ, ಗುರುವಿಗೂ ಗುರು ಪತ್ನಿಗೂ ವಂದಿಸಿ, ಅಲ್ಲಿಂದ ಹೊರಟು,
ಕಾಶೀ ರಾಜನ ಸಭೆಯಲ್ಲಿ ಪ್ರಸಂಗವನ್ನು ಮಾಡಿ, ಸರ್ವ ವಿದ್ವಾಂಸರನ್ನು ಜ
ಯಿಸಿದ್ದರಿಂದ, ಈತನಿಗೆ ಪೆದ್ದಭಟ್ಟನೆಂದು ಹೆಸರನ್ನು ಕೊಟ್ಟರು. ಕಾಶೀ ರಾ
ಜನು ಕನಕಾಭಿಷೇಕವನ್ನು ಮಾಡಿ, ಪಾಲಕಿಯಲ್ಲಿ ಕೂರಿಸಿ, ಬೇಕಾದಷ್ಟು
ಕನಕಾಭರಣ ವಸ್ತ್ರಾದಿಗಳನ್ನು ಕೊಟ್ಟು, ಬೆಂಗಾವಲಿಗೆ ಕೆಲವು ಸೇನೆಯನ್ನು
ಕೊಟ್ಟು ಕಳುಹಿಸಿದನು. ಪೆದ್ದ ಭಟ್ಟನು ಗುರುವಿನ ಬಳಿಗೆ ಬಂದು, ಗುರು ದ
ಕ್ಷಿಣೆಯನ್ನು ಕೊಟ್ಟು, ಅಲ್ಲಿಂದ ತನ್ನ ಮಾವನ ಮನೆಗೆ ಬಂದು, ಭಾವಮೈ
ದಂದಿರನ್ನೆಲ್ಲಾ ವಿದ್ಯಾ ಪ್ರಸಂಗದಲ್ಲಿ ಜಯಿಸಿ, ಹೆಂಡತಿಯನ್ನು ಕರೆದು ಕೊಂಡು,
ತನ್ನ ಊರಿಗೆ ಬಂದು, ತಂದೆ ತಾಯಿಗಳಿಗೆ ವಂದನೆಯನ್ನು ಮಾಡಿ, ನಡೆದ ವೃ
ತ್ತಾಂತವನ್ನು ಹೇಳಲಾಗಿ; ತಂದೆಯು—ಈ ದಿವಸ ನನಗೆ ಮಗ ಹುಟ್ಟಿದನೆಂದು,
ಮಗನನ್ನು ತಬ್ಬಿ ಕೊಂಡು, ಮುದ್ದಾಡಿ, ಸರ್ವರೂ ಸಂತೋಷವಾಗಿದ್ದರು.

49. A Prince wins a Princess by displays of skill.

೪೯. ರಾಜ ಕುಮಾರನು ವಿದ್ಯೆಗಳನ್ನು ತೋರಿಸಿ, ಅರಸನ ಮಗಳನ್ನು ಮದುವೆಯಾದದನ್ನು ಕುರಿತು.

ಅಮರಾವತಿ ಎಂಬ ಪಟ್ಟಣದಲ್ಲಿ ಅಮರಶೇಖರ ರಾಯನೆಂಬ ಅರಸು ಇರು
ವನು. ಅವನಿಗೆ ಸುಶೀಲೆ ಎಂಬ ಅರಸಿಯೂ, ಸುಬುದ್ಧಿ ಎಂಬ ಮಂತ್ರಿಯೂ
ಇರುವರು. ಇವರೊಡನೆ ಕೂಡಿ, ರಾಜ್ಯ ಭಾರವನ್ನು ಮಾಡಿ ಕೊಂಡು, ಹ
ಲವು ಕಾಲ ಸುಖವಾಗಿದ್ದನು. ಒಂದು ದಿವಸ ರಾತ್ರಿ ಅರಸಿಯು ರಾಯನೊ
ಡನೆ—ನಮ್ಮಿಬ್ಬರಿಗೂ ಮುಪ್ಪಿನ ಕಾಲವಾಗುತ್ತಾ ಬಂತು. ಪಟ್ಟಕ್ಕೆ ಮಕ್ಕಳಾ
ಗಲಿಲ್ಲ. ಮಕ್ಕಳಿಲ್ಲದ ರಾಜ್ಯ ಅನಾಯಕವಾಗಿ, ಕಂಡವರ ಪಾಲಾಗುವದಿಲ್ಲ
ವೇ? ಯಾಕೆ ಹೀಗೆ ಸುಮ್ಮಗಿದ್ದೀರಿ? ನಾನಂತೂ ಬಂಜೆಯು. ಇನ್ನು ಮೇಲೆ
ನನ್ನ ಕಟ್ಟಿ ಕೊಂಡು, ಏನು ಮಾಡೀರಿ? ಇನ್ನೊಬ್ಬಳನ್ನಾದರೂ ತಂದು, ಪಟ್ಟ
ಕ್ಕೆ ಮಕ್ಕಳು ಆಗುವಂತೆ ಮಾಡಿ, ಅಂದಳು. ರಾಯನು—ದೇವರು ಮಾಡಿದ್ದಾ
ಗಲಿ. ನಾನು ನಿನ್ನ ಮೇಲೆ ಮತ್ತೊಬ್ಬಳನ್ನು ತರುವದಿಲ್ಲ. ಇಬ್ಬರು ಹೆಂಡರ
ಕಾಟ ಇರಳು ತಿಗಣೇ ಕಾಟವೆಂಬ ಗಾದೆಯನ್ನು ನೀನು ಕೇಳರಿಯೆಯಾ? ಅಂ
ದನು. ರಾಣಿಯು—ಇಷ್ಟು ದಿವಸ ನಾನು ಸುಖವಾಗಿ ಇದ್ದೆನು. ಇನ್ನು ಮೇಲೆ
ನೀವು ಮತ್ತೊಬ್ಬಳನ್ನು ತಂದು, ಮಕ್ಕಳು ಮರಿಯಾಗಿ, ಬಾಳುವದನ್ನು ನೋ

ಡುವ ಸುಖವೇ ಸಾಕು. ನನ್ನ ತಂಟೆ ಲೇಶ ಮಾತ್ರವೂ ನಿಮಗೆ ಇರುವದಿಲ್ಲ. ಖಂಡಿತವಾಗಿ ಇನ್ನೊಂದು ಮದುವೆಯಾಗ ಬೇಕೆಂದು, ನಿರ್ಬಂಧವನ್ನು ಮಾಡಲು;—ಹಾಗಾಗಲಿ ಎಂದು, ಮತ್ತೊಬ್ಬಳನ್ನು ಅರಸು ಮದುವೆಯಾಗಿ, ಇಬ್ಬರೊಡನೆಯೂ ಕೆಲವು ಕಾಲ ಸುಖವಾಗಿ ಇದ್ದನು. ಹೀಗಿರುವಲ್ಲಿ ದೇವರ ಚಿತ್ತದಿಂದ ಹಿರೀ ಹೆಂಡತಿಯು ಗರ್ಭಿಣಿಯಾಗಲು; ಕಿರೀ ಹೆಂಡತಿಯು—ತಾನು ಬಸುರಾಗಲಿಲ್ಲವಲ್ಲ? ಬಂಜೆಯಾಗಿದ್ದವಳು ಆದಳಲ್ಲ? ಎಂದು, ಹೊಟ್ಟೇಕಿಚ್ಚು ಪಡುತ್ತಾ, ಅರಸಿಗೆ ಮದ್ದಿಕ್ಕಿ, ತನ್ನಂತೆ ಮಾಡಿ ಕೊಂಡು—ಹಿರೀ ಹೆಂಡತಿಯನ್ನು ಅರಮನೆ ಬಿಟ್ಟು ಹೊರಗೆ ದಾಟಿಸಿದ ಹೊರತು, ಅನ್ನೋದಕಗಳನ್ನು ತೆಗೆದು ಕೊಳ್ಳುವದಿಲ್ಲವೆಂದು, ಮುಷ್ಕರ ಹಿಡಿದಳು.

ಆಗ ಅರಸು ಮಂತ್ರಿಯನ್ನು ಕರಿಸಿ, ಏಕಾಂತದಲ್ಲಿ—ಹಿರಿಯವಳು ಮಾಡಿ ಕೊಂಡದ್ದು ತನ್ನ ಪ್ರಾಣಕ್ಕೆ ಬಂತು. ತುದಿ ಪೇಟೆಯಲ್ಲಿ ಒಂದು ಅರಮನೆಯನ್ನು ಕಟ್ಟಿಸಿ, ಅಲ್ಲಿ ಹಿರಿಯವಳನ್ನು ಇಡು; ಗರ್ಭಿಣಿಯಾಗಿದ್ದಾಳೆ. ಒಂದಕ್ಕೂ ಕೊರತೆ ಪಡದಂತೆ ಅವಳು ಬಯಸಿದ ಬಯಕೆಗಳನ್ನು ಸಲ್ಲಿಸುತ್ತಾ, ಚನ್ನಾಗಿ ನೀನೇ ಪರಾಂಬರಿಸಿಕೋ ಎಂದು, ಅಪ್ಪಣೆ ಕೊಟ್ಟು, ತನ್ನ ಸ್ವಂತ ಕತ್ತಿಯನ್ನೂ ಮುದ್ರೆ ಉಂಗರವನ್ನೂ ಕೊಟ್ಟು, ಕಳುಹಿಸಿದನು. ಪ್ರಧಾನಿಯು ಪಟ್ಟದ ರಾಣಿಯ ಬಳಿಗೆ ಬಂದು, ಅಳುತ್ತಾ, ಅರಸು ಹೇಳಿದ ಮಾತನ್ನು ಹೇಳಿ, ಆ ಕತ್ತಿಯನ್ನೂ ಮುದ್ರೆ ಉಂಗರವನ್ನೂ ಕೊಟ್ಟು, ಅರಮನೆಯಿಂದ ಕರ ಕೊಂಡು ಹೋಗಿ, ತುದಿ ಪೇಟೆಯಲ್ಲಿ ಅರಮನೆಯನ್ನು ಕಟ್ಟಿಸಿ ಇಟ್ಟು, ತುಸವಾದರೂ ಚಿಂತೆ ಪಡದಂತೆ ದಿನಗಟ್ಲೆ ತಾನೇ ಹೋಗಿ, ವಿಚಾರಿಸಿ ಕೊಳ್ಳುತ್ತಾ, ಸಕಲ ಸೌಖ್ಯಗಳಿಂದ ಮೊದಲಿಗಿಂತ ಹೆಚ್ಚಾಗಿ ಇಟ್ಟು ಕೊಂಡಿದ್ದನು. ಬಳಿಕ ಅರಸಿನ ಕತ್ತಿ ಉಂಗರಗಳನ್ನೇ ಆರನೆಯ ತಿಂಗಳಲ್ಲಿ ಹಸೆ ಮಣೆಯ ಮೇಲೆ, ಅವುಗಳೇ ಅರಸೆಂದು ಎಣಿಸಿ, ಇಟ್ಟು ಕೊಂಡು, ತಾನೂ ಕುಳಿತು, ಪಟ್ಟದ ರಾಣಿಯು ಪುಂಸವನ ಶೀಮಂತ ಕರ್ಮಗಳನ್ನು ರಾಜ ಪುರೋಹಿತನ ಕಡೆಯಿಂದ ಮಾಡಿಸಿ ಕೊಂಡು, ನವ ಮಾಸ ತುಂಬಿದ ಬಳಿಕ ಹತ್ತನೇ ತಿಂಗಳಲ್ಲಿ ಸಕಲ ರಾಜ ಲಕ್ಷಣಗಳಿಂದ ಕೂಡಿದ ಗಂಡು ಮಗುವನ್ನು ಹೆತ್ತಳು. ಆಗ ಮಂತ್ರಿಯು ಆ ಮಗುವಿಗೆ ಜಾತಕರ್ಮ ನಾಮಕರಣ ಚೌಲೋಪನಯನಾದಿಗಳನ್ನು ಆಯಾಯ ಕಾಲದಲ್ಲಿ ನೆರವೇರಿಸಿ, ನಾನಾ ವಿದ್ಯಾಭ್ಯಾಸಗಳನ್ನು, ಉಪಾಧ್ಯರುಗಳನ್ನು ಇಟ್ಟು, ಮಾಡಿಸಿದನು. ಆ ಬಳಿಕ ರಾಜ ಕುಮಾರನು ಹದಿನಾರು ವರುಷದ ಪ್ರಾಯದವನಾಗಿ, ಸಕಲ ವಿದ್ಯಾ ಪಾರಂಗತನಾದನು.

ಒಂದಾನೊಂದು ದಿವಸ ಈ ರಾಜ ಕುಮಾರನು ಗುಜ್ಜರೀ ಹೊತ್ತಿನಲ್ಲಿ ತೇಜಿಯನ್ನು ಏರಿ, ವೈಯಾಳಿಯನ್ನು ಮಾಡುತ್ತಿರುವಲ್ಲಿ, ಬಾಡಿದ ಮೊಗಗಳ, ಬಳಲಿದ ಮೈಗಳ, ಒಣಗಿದ ತುಟಿಗಳ, ತಲೆ ಮುಸುಕುಗಳ, ಹೊರಗಿಂದ ಕೋಟೇ ಒಳಗೆ ಬರುವ ತನ್ನ ಗುರುಗಳನ್ನು ಕೋಟೇ ಬಾಗಲಲ್ಲಿ ಕಂಡು, ಝುಕ್ಕನೆ ತೇಜಿಯನ್ನಿಳಿದು, ಅವರಡಿಗಳಿಗೆ ಅಡ್ಡ ಬಿದ್ದು, ಚಿಂತೆಯ ಕಾರಣವನ್ನು ಕೇಳಿದನು. ಅವರು—ನಾವು ಇಂದಿನ ವರಿಗೂ ವಿದ್ಯಾ ಪ್ರಸಂಗದಲ್ಲಿ ಯಾರಿಗೂ ಸೋತು ಬರಲಿಲ್ಲ. ಈಗ ಅಳಕಾವತೀ ಪಟ್ಟಣದ ಅಳಕಶೇಖರ ರಾಯನ ಮಗಳು, ವಿದ್ಯಾಮಂಜರಿ ಎಂಬವಳು, ತನಗೆ—ಅರುವತ್ತು ನಾಲ್ಕು ವಿದ್ಯದಲ್ಲಿಯೂ ಉತ್ತರ ಕೊಟ್ಟವನನ್ನೇ ಮದುವೆ ಆಗುವೆನೆಂದು, ಸ್ವಯಂವರ ಮಾಡಿರುವ ಸುದ್ದಿಯನ್ನು ಸುತಾನುಸುದ್ದಿಯಾಗಿ ಕೇಳಿ, ಹುಚ್ಚುತನದಿಂದ ಹೋಗಿ, ಐದಾರು ವಿದ್ಯಗಳಲ್ಲಿಯಾದರೂ ಅವಳಿಗೆ ಉತ್ತರವನ್ನು ಕೊಡಲಾರದೆ, ಪರಾಜಿತರಾಗಿ ಬಂದೆವು. ನಮ್ಮ ಪಾಡೇನು? ಛಪ್ಪನ್ನೈವತ್ತಾರು ದೇಶದ ಮಹಾ ಮಹಾ ವಿದ್ವಾಂಸರು ಕೂಡ ಬಂದು, ಸೋತು ಹೋದರು. ನಮ್ಮ ಬಾಳು ಏನು? ಕೆಟ್ಟ ಬಾಳು, ಎಂದು ಹೇಳಿದರು. ರಾಜ ಕುಮಾರನು—ಯಾಕೆ ಇಷ್ಟು ಚಿಂತೆ ಮಾಡುತ್ತೀರಿ? ನಿಮ್ಮ ಶಿಷ್ಯನಾದ ನಾನು ಅವಳನ್ನು ಜಯಿಸಿ, ನಿಮ್ಮನ್ನು ಕರಿಸಿ, ಅವಳಿಂದ ಬಹುಮಾನ ಕೊಡಿಸುವೆನೆಂದು, ಸಮಾಧಾನಗೊಳಿಸಿ, ಅವರನ್ನು ಕಳುಹಿಸಿ, ತಾನು ಮನೆಯನ್ನು ಹೊಗದೆ, ಹಾಗೆಯೇ ಹೊರಟು, ರಾತ್ರಿ ಹಗಲೆನ್ನದೆ, ದಾರಿಯನ್ನು ನಡೆದು, ಅಳಕಾವತೀ ಪಟ್ಟಣವನ್ನು ಶೇರಿ, ವಿದ್ಯಾಮಂಜರಿಯ ಅರಮನೇ ಬಾಗಲಿನಲ್ಲಿ ಇಳಿದು, ತೇಜಿಯನ್ನು ಬಾಗಲ ಕಂಭಕ್ಕೆ ಕಟ್ಟಿ, ಪ್ರಸಂಗ ಮಂಟಪವನ್ನು ಹೊಕ್ಕು, ಮಂಚದ ಮೇಲೆ ಕುಳಿತು ಕೊಂಡನು. ಆಗ ವಿದ್ಯಾಮಂಜರಿಯ ಸಖಿ, ಕಳಾವತಿ ಎಂಬವಳು, ಈ ರಾಜ ಕುಮಾರನ ತೇಜಸ್ಸನ್ನೂ ಗಾಂಭೀರ್ಯವನ್ನೂ ಠೀವಿಯನ್ನೂ ಠೆಡಕನ್ನೂ ರಾಜಲಕ್ಷಣಗಳನ್ನೂ ಸೌಂದರ್ಯವನ್ನೂ ನೋಡಿ, ವಿದ್ಯಾಮಂಜರಿಯ ಬಳಿಗೆ ಹೋಗಿ—ಅಕ್ಕಾ, ಈಗ ಬಂದಿರುವ ರಾಜ ಕುಮಾರನನ್ನು ನೋಡು, ಇವನು ನಿನಗೆ ತಕ್ಕ ವರನಾಗಿದ್ದಾನೆ. ಇವನನ್ನು ಕೂಡ—ವಿದ್ಯಾ ಪ್ರಸಂಗದಲ್ಲಿ ಉತ್ತರವನ್ನು ಹೇಳಲಿಲ್ಲವೆಂದು, ನಿರಾಕರಿಸಿ ಬಿಟ್ಟರೆ, ಇನ್ನು ಇಂಥಾ ವೀರನು ನಿನಗೆ ಶಿಕ್ಕಲರಿಯನು. ನೀನು ಕಾವೀ ಶೀರೆಯನ್ನುಟ್ಟು, ಸನ್ಯಾಸಿಯಾಗಿ ವನ ವನಕ್ಕೆ ಹೋಗ ಬೇಕು, ಎನಲು; ವಿದ್ಯಾಮಂಜರಿಯು ಪ್ರಸಂಗ ಮಂಟಪಕ್ಕೆ ಬಂದು, ತೆರೆಯ ಒಳಗೆ ಇರುವ ರತ್ನ ಮಂಚದ ಮೇಲೆ ಕುಳಿ

ತು ಕೊಂಡು, ಅರಸು ಮಗನನ್ನು ಒಂದೊಂದು ವಿದ್ಯವಾಗಿ ಕೇಳುತ್ತಾ ಬರಲು; ಇವನು ಎಲ್ಲಾ ವಿದ್ಯಗಳಿಗೂ ಉತ್ತರವನ್ನು ಹೇಳಿದನು. ಆಗ ವಿದ್ಯಾಮಂಜರಿಯು ಬಹಳ ಸಂತೋಷಪಟ್ಟು, ತೆರೆಯನ್ನು ಹಾರ ಬಡಿದು, ಕೊರಳಿಗೆ ಹೂವಿನ ಮಾಲಿಕೆಯನ್ನು ಹಾಕಿ, ತಬ್ಬಿ ಕೊಂಡು, ಕರ ಕೊಂಡು ಹೋಗಿ, ತನ್ನ ಮಂಚದ ಮೇಲೆ ಕೂರಿಸಿ ಕೊಂಡು—ನೀನು ಅರುವತ್ತೆರಡು ವಿದ್ಯದಲ್ಲಿಯೂ ನನಗೆ ಪರೀಕ್ಷೆಯನ್ನು ಕೊಟ್ಟದ್ದರಿಂದ ಉಳಿದ ಎರಡು ವಿದ್ಯೆ ಬಂದಿರಬಹುದೆಂದು, ನಿನ್ನನ್ನು ಪತಿಯಾಗಿ ವರಿಸಿದೆನು. ನೀನು ಗಂಧರ್ವ ವಿವಾಹದಿಂದ ಕೈ ಕೊಳ್ಳೆಂದಳು. ಆಗ ಅರಸು ಮಗನು ಉಳಿದ ಎರಡು ವಿದ್ಯ ಯಾವದು? ಎಂದು, ಕೇಳಲು; ಕಳ್ಳತನ ಒಂದು, ವ್ಯಭಿಚಾರ ಒಂದು ಎನಲು; ಅರಸು ಮಗನು—ಆ ಎರಡು ವಿದ್ಯದಲ್ಲಿಯೂ ನಿನಗೆ ಪರೀಕ್ಷೆಯನ್ನು ಕೊಟ್ಟನಂತರ ನಿನ್ನ ಕೂಡಿರುವೆನು. ನೀನೇ ಎನಗೆ ಪಟ್ಟದ ರಾಣಿಯು. ಇದು ಸತ್ಯವೆಂದು ನಂಬಿಗೆಯನ್ನಿತ್ತು, ಅಲ್ಲಿಂದ ಹೊರಟು, ನಗರ ಗ್ರಾಮಾದಿಗಳನ್ನು ಸುತ್ತುತ್ತಾ, ವಿಶಾಲ ನಗರವೆಂಬ ಪಟ್ಟಣವನ್ನು ಹೊಕ್ಕು, ವಿಚಾರಿಸುವಲ್ಲಿ, ಆ ಊರಿನಲ್ಲಿರುವ ಸುಬ್ಬಾಭಟ್ಟನೆಂಬ ಜೋಯಿಸನು ಚೋರ ವಿದ್ಯದಲ್ಲಿ ಸಮರ್ಥನೆಂದು ಆತನ ಅಂತರಂಗದ ಆಪ್ತನನ್ನು ಭೇದಿಸಿ, ತಿಳಿದು, ಆತನೆಡೆಗೆ ಹೋಗಿ, ಅವನ ಎರಡು ಕಾಲುಗಳನ್ನು ಹಿಡಿದು ಕೊಂಡು—ನಿನಗೆ ಬರುವ ವಿದ್ಯವನ್ನು ನನಗೆ ಕಲಿಸಿ, ಕೊಡುವೆನೆಂದು ಅಭಯುವನ್ನು ಕೊಡ ಬೇಕೆಂದು, ಬೇಡಿ ಕೊಳ್ಳಲು; ಆ ಜೋಯಿಸನು ಅಭಯುವನ್ನು ಕೊಟ್ಟು, ರಹಸ್ಯ ಸ್ಥಳದಲ್ಲಿ ಕೂರಿಸಿ ಕೊಂಡು, ಚೋರ ವಿದ್ಯಾ ಮಂತ್ರಗಳನ್ನು ಉಪದೇಶಿಸಿ—ನನಗೆ ಮಕ್ಕಳಿಲ್ಲ. ಮಗನಾಗಿಯೂ ಶಿಷ್ಯನಾಗಿಯೂ ನೀನೇ. ನಾನು ಚೋರನೆಂಬುವದು ಯಾರಿಗೂ ತಿಳಿಯದು. ಮುಂದೆ ನೀನು ತಿಳಿಸ ಕೂಡದು. ನಾನು ಸತ್ತರೆ, ನನಗೆ ಮಾಡ ತಕ್ಕ ಕ್ರಿಯೆಗಳನ್ನೆಲ್ಲಾ ನೀನೇ ಮಾಡ ಬೇಕೆಂದು ಪ್ರಮಾಣವನ್ನು ಮಾಡಿಸಿ ಕೊಂಡು ಇಬ್ಬರೂ ಸಾಯಂಕಾಲವಾಗುವದು ಭೋಜನವನ್ನು ಮಾಡಿ, ಒಬ್ಬರಿಗೂ ತಿಳಿಯದಂತೆ ಕನ್ನಗತ್ತಿಗಳನ್ನೂ ಮಂಕು ಬೂದಿಗಳನ್ನೂ ನೂಲೇಣಿಗಳನ್ನೂ ತೆಗೆದು ಕೊಂಡು, ಕಾಡು ಮಾರ್ಗವಾಗಿ ಬರುತ್ತಾ, ಗಂಧದ ಮರದಲ್ಲಿ ನಾಲ್ಕು ಮಂಚದ ಕಾಲುಗಳನ್ನು ಮಾಡಿ ಕೊಂಡು, ಮುಂದೆ ಹೋಗುತ್ತಿರುವಲ್ಲಿ, ಈ ಅರಸು ಮಗನು—ಕಳವನ್ನು ಮಾಡುವದಕ್ಕೆ ಎಲ್ಲಿಗೆ ಹೋಗುತ್ತೀರಿ? ಎಂದು ಕೇಳಿದನು. ಜೋಯಿಸನು—ಅಳಕಾವತೀ ಪಟ್ಟಣದ ಅಳಕಶೇಖರ ರಾಯನು ಕಳ್ಳರಿಗೆಲ್ಲಾ ಮಿಂಡ ಅನ್ನಿಸಿ ಕೊಂಡು, ಹೊಗಳಿಸಿ ಕೊಳ್ಳುತ್ತಾ ಇದ್ದಾನೆ. ಈ

ವರಿಗೂ ನಾನು ಏಕಾಂಗಿಯಾಗಿದ್ದದರಿಂದ ಅವನ ಪಟ್ಟಣಕ್ಕೆ ಹೋಗುವದು ಬಹು ದುರ್ಘಟವಾಗಿತ್ತು. ಈಗ ನೀನು ಸಹಾಯಕನಾಗಿ ಬಂದದ್ದರಿಂದ, ಆತನ ಪಟ್ಟಣಕ್ಕೆ ಹೋಗುವಾ, ಅಂದನು. ಆಗ ಅರಸು ಮಗನು—ರೋಗಿ ಬಯಸಿದ್ದೂ ಹಾಲೋಗರ, ವೈದ್ಯ ಹೇಳಿದ್ದೂ ಹಾಲೋಗರ, ಎಂಬ ಗಾದೆಗೆ ಸರಿಯಾಗಿ ನನ್ನ ಮನಸ್ಸಿನಲ್ಲಿ ಇದ್ದದ್ದನ್ನೇ ಜೋಯಿಸರು ಹೇಳಿದರೆಂದು, ಸಂತೋಷ ಪಟ್ಟು ಕೊಂಡು, ಅವರ ಜೊತೆಯಲ್ಲಿ ಹೋದನು.

ಆ ಬಳಿಕ ಆ ಸುಬ್ಬಾ ಜೋಯಿಸನು ಅಳಕಾವತಿ ಪಟ್ಟಣವನ್ನು ಸೇರಿ, ಆ ಪಟ್ಟಣಕ್ಕೆ ಇರುವ ಹದಿನಾಲ್ಕು ಸುತ್ತು ಕೋಟೆಯನ್ನು ನೂಲು ಏಣಿಗಳಿಂದ ಹತ್ತಿ, ಒಳಕ್ಕೆ ಇಳಿದು, ಕಾವಲುಗಾರರಿಗೆಲ್ಲಾ ಮಂಕು ಬೂದಿಯನ್ನು ತಳಿದು, ಅರಸಿನ ಅರಮನೆಯ ಬಳಿಗೆ ಹೋಗಿ, ಆ ಅರಮನೆಯ ಏಳು ಸುತ್ತಿನ ಪಾಗರವನ್ನು ನೂಲೇಣಿಯಿಂದ ಹತ್ತಿ, ಇಳಿದು, ಅರಸು ಮಲಗುವ ಚಿಕ್ಕ ಮನೆಗೆ ಕನ್ನಗತ್ರಿಯಿಂದ ಕನ್ನವನ್ನಿಕ್ಕಿ, ನಾಲ್ಕು ಗಂಧದ ಮಂಚದ ಕಾಲನ್ನು ತೆಗೆದು ಕೊಂಡು—ನೀನು ಹೊರಗೆ ಎಚ್ಚರವಾಗಿ, ನಾನು ಬರುವ ವರಿಗೂ ಕಾದಿರು. ಒಂದು ವೇಳೆ ನನಗೇನಾದರೂ ಆಸವೋಸ ಬಂದರೆ, ನನ್ನ ಗುರುತು ಸಿಕ್ಕದ ಹಾಗೆ, ನನ್ನ ತಲೆಯನ್ನು ತೆಗೆದು ಕೊಂಡು ಹೋಗಿ, ಮುಂಡದ ಕೂಡ ಹಾಕಿ, ಸುಡುವ ಹಾಗೆ ಮಾಡು, ಎಂದು ಅರಸು ಮಗನಿಗೆ ಹೇಳಿ, ಕನ್ನದಿಂದ ಒಳ ಹೊಕ್ಕು, ಪಟ್ಟದ ರಾಣಿಯೊಡನೆ ಧೊರೆಯು ಮಂಚದ ಮೇಲೆ ಮಲಗಿರಲು; ಅವರು ಅಲಗದಂತೆ ಮಲಗಿರುವ ಮಂಚವನ್ನು ತನ್ನ ಬೆನ್ನು ಕೊಟ್ಟು ಎತ್ತಿ, ಆ ಮಂಚದ ಹವಳದ ಕಾಲು ಒಂದನ್ನು ಕಳಚಿ, ಅದಕ್ಕೆ ಬದಲಾಗಿ ಗಂಧದ ಕಾಲನ್ನು ಜೋಡಿಸುತ್ತಾ, ನಾಲ್ಕನೆಯ ಕಾಲನ್ನು ಕಳಚಿ, ಗಂಧದ ಕಾಲನ್ನು ಜೋಡಿಸುವಲ್ಲಿ, ಅರಸು ಸ್ವಲ್ಪ ಅಲುಗಾಡಿದ್ದರಿಂದ, ಮಲಗಿ ಕೊಂಡು ಇದ್ದ ಹಾಗೆಯೇ ತಲೆದಿಂಬಿನಲ್ಲಿ ಇಟ್ಟು ಇದ್ದ ಬಿಚ್ಚ ಕತ್ತಿಯನ್ನು ತೆಗೆದು ಕೊಂಡು, ಒಂದು ವೇಳೆ ಸುತ್ತಾ ತಿರಿಗಿಸಿ, ತಲೆದಿಂಬಿನಲ್ಲಿ ಇಟ್ಟು, ಮಲಗಿ ಕೊಂಡನು. ಆ ತಿರಿಗಿಸಿದ ಕತ್ತಿಯು ಜೋಯಿಸನ ಕುತ್ತಿಗೆಗೆ ತಗಲಿ, ತಲೆ ಹರಿದು ಬಿದ್ದದರಿಂದ, ಬಹಳ ಹೊತ್ತಾದಾಗ್ಯೂ, ಹೊರಗೆ ಬಾರದ ಕಾರಣ, ಅರಸು ಮಗನು ತತ್ತರಿಸಿ, ಗಾಬರಿಯಾಗಿ, ಒಳ ಹೊಕ್ಕು, ತನ್ನ ಗುರುವಿನ ತಲೆಯನ್ನೂ, ಕಳಚಿ ಬಿದ್ದಿರುವ ನಾಲ್ಕು ಹವಳದ ಮಂಚದ ಕಾಲುಗಳನ್ನೂ, ಅಲ್ಲಿದ್ದ ರತ್ನ ಪಡೀ ನಗಗಳನ್ನೂ ತೆಗೆದು ಕೊಂಡು, ಹೊರಗೆ ಬಂದು, ತನ್ನ ಸಾಮಾನುಗಳನ್ನು ತೆಗೆದು ಕೊಂಡು, ಅರಮನೇ ಪಾಗರಗಳನ್ನು ದಾಟಿ, ಆ ಪಟ್ಣದ ಒಂದು

ಸಂದಿಯಲ್ಲಿ ಹುಲ್ಲು ಗುಡಿಸಲು ಮಾಡಿ ಕೊಂಡು, ಬಂದಂಥಾ ಕಳ್ಳಕಾಕರರಿಗೆ ಕೂಲಿಯನ್ನು ತಕ್ಕೊಂಡು, ಅಟ್ಟಿಕ್ಕುತ್ತಾ, ಜೀವನಾ ಮಾಡಿ ಕೊಂಡಿರುವ ಅಡುಗೂಲಜ್ಜಿಯು ಮನೆಗೆ ಹೋಗಿ, ಅವಳಿಗೆ ಸ್ವಲ್ಪ ಹಣವನ್ನು ಕೊಟ್ಟು—ನೀನು ಸಾಯುವ ಪರಿಯಂತರ ಅನ್ನ ಬಟ್ಟೆಯನ್ನು ಕೊಟ್ಟು, ನಿನ್ನನ್ನು ಕಾಪಾಡುತ್ತೇನೆಂದು, ಆಣೆ ಭಾಷೆ ಮಾಡಿ, ತನ್ನ ಸ್ವಾಧೀನವನ್ನು ಮಾಡಿ ಕೊಂಡು—ನಿತ್ಯ ಗಟ್ಲೆಯಲ್ಲಿಯೂ ಅರಮನೆಯಲ್ಲಿ, ಪಟ್ಟಣದಲ್ಲಿ ಸಹ, ಆಗುವ ವಿಶೇಷ ವರ್ತಮಾನವನ್ನು ತಿಳಿಸುತ್ತಾ, ನನಗೆ ಬೇಸಿ, ಹಾಕಿ ಕೊಂಡು, ಇರು ಎಂದು, ಹೇಳಿ, ಮಂಚದ ಕಾಲುಗಳನ್ನೂ ತಲೆಯನ್ನೂ ಸಾಮಾನುಗಳ ಸಹ ಒಂದು ಬಳಿಯಲ್ಲಿ ಹೂಳಿ ಇಟ್ಟು, ಮಲಗಿ ಕೊಂಡನು.

ಅಡುಗೂಲಜ್ಜಿಯು ಮುಂಗೋಳಿ ಕೂಗುವದು ಎದ್ದು, ಉಪಾದಾನದ ಮುದುಕಿಯಾಗಿ ಮನೆ ಮನೆಗೆ ತಿರಿಗಿ, ತನ್ನ ಗುಡಿಸಲಿಗೆ ಬಂದು, ರಾಜ ಕುಮಾರನನ್ನು ಎಬ್ಬಿಸಿ,—ಈ ದಿನದ ಅರಮನೇ ಸುದ್ದಿಯನ್ನು ಕೇಳು. ನೆನ್ನೆ ರಾತ್ರೆ ಧೊರೆಯು ಮಲಗುವ ಮನೆಗೆ ಕಳ್ಳರು ಬಿದ್ದು, ಹವಳದ ಮಂಚದ ಕಾಲುಗಳನ್ನೂ ಕೆಲವು ವಜ್ರ ಪಡೀ ನಗಗಳನ್ನೂ ಕದ್ದು ಕೊಂಡು, ಹೋದರಂತೆ. ಆ ಕಳ್ಳರೊಳಗೆ ಒಂದು ತಲೆ ಇಲ್ಲದ ಮುಂಡ ಮಾತ್ರ ಅಲ್ಲಿ ಬಿದ್ದು ಇಧೆ, ಅಂತೆ. ಅರಸು ತನ್ನ ಮೂಗು ಹೋಯಿತೆಂದು ಬಹಳ ವ್ಯಸನ ಪಡಲು; ಮಂತ್ರಿಯು, ಈ ಬಿದ್ದಿರುವ ಮುಂಡದ ಕೊರಳಲ್ಲಿ ಜನಿವಾರವಿರುವದರಿಂದ, ಕಳ್ಳನು ಬ್ರಾಹ್ಮಣನಾಗಿರುವನು. ಹೊರಗಳ್ಳನಿಗೆ ಈ ಪಟ್ಟಣಕ್ಕೆ ಬರುವ ಶಕ್ತಿ ಇಲ್ಲ. ಒಳಗಳ್ಳನಾಗಿದ್ಧಾನೆ. ಈ ಮುಂಡವನ್ನು ಕಂಡು, ಯಾರು ಬಾಯಿ ಬಡು ಕೊಳ್ಳುತ್ತಾರೋ, ಅವರನ್ನು ಹಿಡು ಕೊಂಡು, ಬರುವಂತೆ ಅಪ್ಪಣೆ ಕೊಡಿಸಿ, ಆ ಮುಂಡವನ್ನು ಬಂಡಿಯ ಮೇಲೆ ಹಾಕಿಸಿ, ಈ ಪಟ್ಟಣದಲ್ಲಿ ಎಲ್ಲಾ ಕಡೆಯಲ್ಲಿ ತಿರಿಗಿಸುವದಕ್ಕೆ ಕಳುಹಿಸ ಬೇಕೆಂದನಂತೆ. ಧೊರೆಯು ಹಾಗೆಯೇ ಅಪ್ಪಣೆ ಕೊಟ್ಟದರಿಂದ, ಆ ಹೆಣವನ್ನು ಬೀದಿ ಬೀದಿಗಳಲ್ಲಿ ತಿರಿಗಿಸಿ ಕೊಂಡು, ಬರುತ್ತಾರೆಂದು ಹೇಳಿದಳು. ಅರಸು ಮಗನು ಅಡುಗೂಲಜ್ಜಿಯು ಮಾಡ ತಕ್ಕ ಕೆಲಸಗಳನ್ನು ಹೇಳಿ ಕೊಟ್ಟು, ತಾನು ಆ ಗುಡಿಸಲಿನ ಮುಂದೆ ಇರುವ ನುಗ್ಗೇ ಮರವನ್ನು ಹತ್ತಿ ಕೊಂಡು, ನೋಡುತ್ತಾ ಇದ್ದು, ಸಮೀಪದಲ್ಲಿ ಬೀದಿಯಲ್ಲಿ ಮುಂಡದ ಬಂಡಿ ಬರುವದನ್ನು ಕಂಡು, ಆ ನುಗ್ಗೇ ಮರದ ಒಂದು ಕೊಂಬೆಯನ್ನು ಮುರಿದು ಹಾಕಿ, ತಾನು ಸಂಗಾತಲೇ ಬಿದ್ದು, ಉಸುರನ್ನು ಹಿಡು ಕೊಂಡು, ಮೂರ್ಛೆ ಹೋದವನ ಹಾಗಿದ್ದನು. ಆ ಸಮಯ

ದಲ್ಲಿ ಅಡುಗೂಲಜ್ಜಿಯು—ಇದ್ದ ಒಬ್ಬ ಮಗ ಸತ್ತನಲ್ಲಪ್ಪಾ! ನನಗೇನು ಗತಿ? ಎಂದು, ಬಾಯಿ ಬಡು ಕೊಳ್ಳುತ್ತಾ, ಅವನ ಮೇಲೆ ಬಿದ್ದು, ಕುಯ್ಯೋ! ಮರಿಯೋ, ಎಂದು, ಅಳುತ್ತಾ, ಆ ಬಂಡಿಯವರು ತನ್ನ ಬಳಿಗೆ ಬರುವದು ಇನ್ನೂ ಚನ್ನಾಗಿ ಬಡು ಕೊಳ್ಳಲು; ಅವರು—ಹುಚ್ಚು ಮುದುಕಿ! ಯಾಕೆ ದಿಗುಲು ಪಡುತ್ತೀ? ಮರದಿಂದ ಕೊನೆ ಮುರಿದು ಕೊಂಡು ಬಿದ್ದು, ಜ್ಞಾನ ತಪ್ಪಿ ಇಧೆ. ಎದೆಗೂ ಕಣ್ಣುಗಳಿಗೂ ನೀರನ್ನು ತಟ್ಟಿ, ಸ್ವಲ್ಪ ಹೊತ್ತು ಬೀಸು. ಎಚ್ಚತ್ತು ಕೊಳ್ಳುತ್ತಾನೆಂದು, ಹೇಳಿದರು. ಅವರು ಹೋಗುವದು, ಈ ಅರಸು ಮಗನು ಎದ್ದು, ಆ ಗುಡುಸಲನ್ನು ಕಿತ್ತು, ಮತ್ತೊಂದು ಅಭುಕ್ತ ಮೂಲೆಯಲ್ಲಿ ಒಡ್ಡಿ ಕೊಂಡು, ಅಲ್ಲಿ ಅಡುಗೂಲಜ್ಜಿ ಸಹಿತ ಇದ್ದನು. ಬಂಡಿಯವರು ಊರೆಲ್ಲಾ ತಿರಿಗಿಸಿ—ಸ್ವಾಮೀ, ಬುದ್ಧೀ, ಈ ಹೆಣ ಕಂಡು, ಯಾರೂ ಅಳಲಿಲ್ಲ. ಒಬ್ಬ ಮುದುಕಿಯು ಮಾತ್ರ ತನ್ನ ಮಗನು ಸುಗ್ಗೀ ಮರ ಮುರುಕೊಂಡು, ಬಿದ್ದು, ಜ್ಞಾನ ತಪ್ಪಿದ್ದರಿಂದ, ಮಗ ಸತ್ತನೆಂದು, ಬಡು ಕೊಂಡಳು. ಅವಳಿಗೆ ನಾವು ಸಮಾಧಾನ ಹೇಳಿ, ಬಂದೆವು. ಇಷ್ಟೇ ಸರಿ, ಬುದ್ಧೀ! ಎನ್ನಲು; ಆ ಮರದಿಂದ ಬಿದ್ದವನೇ ಕಳ್ಳನು. ಅವನ ಮೋಸಕ್ಕೆ ಮರುಳಾಗಿ, ಬಿಟ್ಟು ಬಂದಿರಿ ಎಂದು, ಹೇಳಿ, ಅವರನ್ನು ಕಳುಹಿಸಿ ಬಿಟ್ಟು, ವ್ಯಸನದಿಂದ ಒಳಗೆ ಹೋಗಿ, ಮಲಗಿ ಕೊಂಡನು.

ಮರು ದಿವಸ ಅಡುಗೂಲಜ್ಜಿಯು ಎಂದಿನಂತೆ ಯಾಯಿವಾರಕ್ಕೆ ಹೋಗಿ, ಬಂದು, ಅರಸು ಮಗನೊಡನೆ—ಅರಸು ಈ ದಿನ ಸಾಯಂಕಾಲದಲ್ಲಿ ತಲೆ ಇಲ್ಲದ ಮುಂಡವನ್ನು ಮಸಣದಲ್ಲಿ ಸುಡಿಸುತ್ತಾನೆ. ಅಲ್ಲಿಗೆ ಯಾರಾದರೂ ಬಂದು, ಆ ಚಿತೆಯಲ್ಲಿ ತಲೆಯನ್ನು ಹಾಕಿದರೆ, ಅವರನ್ನು ಹಿಡು ಕೊಂಡು, ಬರುವಂತೆ ಕಾವಲಿನವರಿಗೆ ಅಪ್ಪಣೆ ಕೊಟ್ಟು, ಕಳುಹಿಸಿದ್ಧಾನಂತೆ, ಎಂದು, ಹೇಳಲು; ರಾಜ ಕುಮಾರನು ಬೇಗ ಅಡಿಗೇ ಮಾಡಿಸಿ ಕೊಂಡು, ಉಂಡು, ಒಳ್ಳೇ ಕರೀ ಜರೀ ಕಂಬೀ ರುಮಾಲನ್ನು ಸುತ್ತಿ ಕೊಂಡು, ಪಟ್ಟೇ ತುಂಡು ಜೊಗೆಯನ್ನು ಇಟ್ಟು ಕೊಂಡು, ಚಿನ್ನದ ಕಂಬೀ ಬುಗುಡಿ ಅಂಚಿನ ಮಡಿಕೇ ಧೋತ್ರ ಮೂಲಗಚ್ಚೇ ಹಾಕಿ, ಉಟ್ಟು ಕೊಂಡು, ಪುರಾಣೀ ಹಚ್ಚಡ ಹೊದ್ದು, ಎದೆಯಲ್ಲಿ ಹಾವೇರಿ ಚೌಕದ ಸರಪಣಿಯನ್ನೂ ಕೊರಳಲ್ಲಿ ರುದ್ರಾಕ್ಷಿ ಮಾಲಿಕೆಯನ್ನೂ ಮುಖದಲ್ಲಿ ವಿಭೂತಿಯನ್ನೂ ಧರಿಸಿ, ದೇಶದ ಜೋಡನ್ನು ಮೆಟ್ಟಿ, ಕೈಯಲ್ಲಿ ಬೆತ್ತದ ಛಡಿಯನ್ನು ಹಿಡಿದು, ಕಲ್ಯಾಣ ಪುರದ ಕೋರಿಬಶಟ್ರ ಕಡೆಯ ಗುಮಾಸ್ತನೆಂದು ಹೇಳಿ ಕೊಂಡು, ಗಂದಿಗರ ಸಾವಕಾರನ ಬಳಿ

ಗೆ ಹೋಗಿ, ಐದು ಸಾವಿರ ರೂಪಾಯಿಗೆ ಒಂದು ರತ್ನವನ್ನು ಕೊಟ್ಟು, ಅದಕ್ಕೆ ಸರಿಯಾಗಿ ಪರಿಮಳದ ಎಣ್ಣೆಗಳನ್ನೂ ಆರತಿ ಕರ್ಪೂರ ಗಂಧಕ ಮುಂತಾದ ವಸ್ತುಗಳನ್ನೂ ಗೋಣಿಗಳಲ್ಲಿಯೂ ಬುದ್ದಲಿಗಳಲ್ಲಿಯೂ ತುಂಬಿಸಿ, ಸಾವಿರಾರು ಬಾಡಿಗೇ ಎತ್ತನ್ನು ಮಾಡಿ ಕೊಂಡು, ಅವುಗಳನ್ನೆಲ್ಲ ಹೇರಿಸಿ, ಬಾಡಿಗೆದಾರರನ್ನು ಕೂಡಿ ಕೊಂಡು, ಒಬ್ಬರೂ ಕಾಣದಂತೆ ಒಂದು ಗೋಣೀ ಮೂಲೆಗೆ ಆ ತಲೆಯನ್ನು ಹಾಕಿ ಕೊಂಡು, ಸಾಯಂಕಾಲವಾದ ಝಾವ ಹೊತ್ತಿಗೆ ಕಾಡು ಪುರದ ಬಳಿಗೆ ಹೋದನು. ಸಾವಿರಾರು ಎತ್ತುಗಳು ಕೊರಳುಗಳಿಗೆ ಕಟ್ಟಿದ್ದ ಘಂಟೆಗಳ ಘಣ ಘಣ ಶಬ್ದದಿಂದ ಕೂಡಿ, ಬರುತ್ತಿರಲು;—ಇವರ್ಯಾರು ಇಷ್ಟು ಹೊತ್ತಿನಲ್ಲಿ ಬರುವರು? ಇಲ್ಲಿ ಬರುವದಕ್ಕೆ ಅಪ್ಪಣೆ ಇಲ್ಲ. ದಾರಿ ಹಿಡು ಕೊಂಡು, ಹೋಗಿರಿ, ಎಂದು, ಮಸಣದ ಕಾವಲಿನವರು ಅಡ್ಡಿ ಮಾಡುವದು; ಅರಸು ಮಗನು,—ವಿದ್ಯಾಮಂಜರೀ ಮದುವೆಗೆ ಧೊರೆ ಅಪ್ಪಣೆ ಕೊಟ್ಟ ಪ್ರಕಾರ, ದ್ವೀಪಾಂತರಗಳಿಂದ ಸಾಮಾನುಗಳ ತಂದು, ಇದ್ದೇನೆ. ನಾನು ಧೊರೆಗೆ ಪ್ರಿಯನಾದ ಧನಪಾಲಶೆಟ್ಟಿ ಎಂಬುವದನ್ನು ಕಾಣಿರಾ? ಪರಸ್ಥಳದ ಬಾಡಿಗೆದಾರರು ದಾರಿಯನ್ನು ತಪ್ಪಿ, ಕಾಣದೆ ಬಂದರು. ಅಡ್ಡಿ ಮಾಡ ಬೇಡಿ ಎಂದು, ಎಷ್ಟು ಒಡಂಬಡಿಸಿದಾಗ್ಯೂ, ಕೇಳದೆ ಇದ್ದದರಿಂದ, ಕೋಪಿಸಿ ಕೊಂಡು,—ಬೆಳಗ್ಯೆ ಅರಸಿಗೆ ಹೇಳಿ, ತಕ್ಕ ಪ್ರಾಯಶ್ಚಿತ್ತ ಮಾಡಿಸುತ್ತೇನೆ. ಈ ಗೋಣಿ ಬುದ್ದಲಿಗಳೆಲ್ಲಾ ಈ ಬೆಂಕಿಗೆ ಹಾಕಿ ಬಿಡಿ ಎಂದು, ಬಾಡಿಗೆದಾರರಿಗೆ ಅಪ್ಪಣೆ ಕೊಡಲು; ಅವರು ಕೆಲವು ಎಣ್ಣೇ ಬುದ್ದಲಿಗಳನ್ನು ಬೆಂಕಿಗೆ ಹಾಕುವದು; ಅದರ ಉರಿಗೆ ಹತ್ತರ ನಿಲ್ಲಲಾರದೆ, ಕಾವಲಿನವರು ದೂರಾ ಓಡಿ ಹೋಗಿ, ನಿಂತು ಕೊಂಡು, ನೋಡುತ್ತಿದ್ದರು. ಇವನು ಉಳಿದ ಬುದ್ದಲಿಗಳು ಗೋಣಿಗಳೆಲ್ಲವನ್ನು ಬೆಂಕಿಗೆ ಹಾಕಿಸಿ, ಕಾವಲುಗಾರರನ್ನು ನೋಡಿ—ಒಳ್ಳೇದೆಲೇ, ಸೆರಗಿನಲ್ಲಿ ಗಂಟು ಹಾಕಿ ಕೊಂಡಿರಿ! ಬೆನ್ನಿಗೆ ಎಣ್ಣೆ ಸವರಿ ಕೊಂಡಿರಿ! ನಾಳೆ ನಿಮ್ಮ ಮನೆಗಳನ್ನೆಲ್ಲಾ ಮುಟ್ಟುಗೋಳ ಹಾಕಿಸಿ ಕೊಳ್ಳುತ್ತೇನೆ! ನಿಮ್ಮ ತಲೆಗೆ ಬಂತು! ಎಂದು ಹೇಳುತ್ತಾ, ಸ್ವಲ್ಪ ದೂರ ಹೋಗಿ, ಬಾಡಿಗೆದಾರರಿಗೆ ಬಾಡಿಗೇ ಹಣಗಳನ್ನೂ ಉಡುಗೆರೆಗಳನ್ನೂ ಕೊಟ್ಟು, ತಾನು ಅಡುಗೂಲಜ್ಜಿಯ ಮನೆಗೆ ಹೋಗಿ, ಉಂಡು, ಮಲಗಿ ಕೊಂಡನು.

ಬೆಳಗ್ಯೆ ಯಥಾ ಪ್ರಕಾರ ಅಡುಗೂಲಜ್ಜಿ ತಿರಿಗಿ ಕೊಂಡು, ಬಂದು,—ಅಪ್ಪಾ, ಕೇಳೋ, ಈ ಹೊತ್ತಿನ ಸುದ್ದಿ. ನಿನ್ನೆ ದಿವಸ ರಾತ್ರಿ ಸ್ಮಶಾನದಲ್ಲಿ ಕಾ

ವಲಿದ್ದವರು ಬೆಳಿಗ್ಯೆ ಅರಸಿನ ಬಳಿಗೆ ಬಂದು, ಅಡಿದಂಡ ಪಡಿದಂಡ ಬಿದ್ದು,—ಬುದ್ಧೀ, ಕೆಲವರು ದುರುಳರು ಧನಪಾಲಶೆಟ್ಟಿಗೆ ದಾರೀ ಕೊಡದೆ ಹೋದ್ದರಿಂದ, ಸಟ್ರು ಸಾವಿರಾರು ಹೇರುಗಳನ್ನು ಬೆಂಕಿಗೆ ಹಾಕಿಸಿ, ಸುಟ್ಟು ಬಿಟ್ಟರು. ಪಾದದ ಚಾಕರರು ನಾವ್ಯೊಬ್ಬರೂ ತಪ್ಪು ಮಾಡಲಿಲ್ಲ; ಮನ್ನಿಸಬೇಕೆಂದು ಬೇಡಿ ಕೊಂಡರಂತೆ. ಅರಸು ಅವರ ಮಾತಿಗೆ ನಕ್ಕು—ಪಕ್ಕಾ ಕಳ್ಳ! ಅವನು ಮುಂಡದ ರುಂಡವನ್ನು ಹೇರಿನಲ್ಲಿ ಹಾಕಿ ಇದ್ದು, ಕೂಡಿಸಿ ಬಿಟ್ಟನು. ಶಾಬಾಸು! ಎಂದು, ಕಳ್ಳನನ್ನು ಕೊಂಡಾಡಿ,—ಬೂದಿ ತೆಗೆದು ಕೊಂಡು, ಹೋಗುವದಕ್ಕೆ ಕಳ್ಳ ಕಾಡುಪುರಕ್ಕೆ ಈ ದಿವಸ ಬರುವನು. ಇನ್ನ್ಯಾರ ಕಾವಲಿಟ್ಟರೂ, ಅವರಿಗೆ ಎಂಗೀ ಹಾಕಿ, ತಗೆದು ಕೊಂಡು ಹೋಗುವನು. ನಾನೇ ಹೋಗಿ, ಕಳ್ಳನನ್ನು ಹಿಡಿಯುತ್ತೇನೆಂದು, ಕಾಡುಪುರದಲ್ಲಿ ಗುಡಾರವನ್ನು ಹಾಕಿಸಿ ಕೊಂಡು, ಸುತ್ತು ಮುತ್ತೂ ಪಹರೆ ಇಟ್ಟು ಕೊಂಡು, ಧೊರೆಯೇ ಹೋಗಿ, ಬೂದಿಯ ಬಳಿಯಲ್ಲಿ ಕೂತಿದ್ಧಾನಂತೆ, ಎಂದು ಹೇಳಿದಳು. ಅದನ್ನು ಕೇಳಿ, ಈ ಅರಸು ಮಗನು ಸಾಯಂಕಾಲದ ತನಕ ಮಲಗಿ, ನಿದ್ದೆ ಹೋಗಿ, ಎದ್ದು, ಉಂಡು, ಕನ್ನಗತ್ತರಿಯನ್ನು ತೆಗೆದು ಕೊಂಡು ಅರಸಿನ ನಿದ್ದೇ ಕೊಠಡಿಗೆ ಕನ್ನಾ ಇಕ್ಕಿ, ಒಳ ಹೊಕ್ಕು ನೋಡುವಲ್ಲಿ, ಅರಸಿತ್ತಿಯು ಬೇಸಿಗೇ ಕಾಲವಾದ್ದರಿಂದ, ತನ್ನ ಎಲ್ಲಾ ಒಡವೆಗಳನ್ನು ಕಳಚಿ, ಚಿನ್ನದ ಹರಿವಾಣದಲ್ಲಿಟ್ಟು, ತೊಟ್ಟ ಮಾಣಿಕ್ಯದ ಕುಪ್ಪಸವನ್ನೂ ಮುತ್ತಿನ ಶೀರೆಯನ್ನೂ ನೆರೀ ಕಟ್ಟು ಸಹಿತ ಗೂಟಕ್ಕೆ ತಗಲ ಹಾಕಿ, ಸಣ್ಣ ಶಲ್ಯ ಉಟ್ಟು ಕೊಂಡು, ಮಲಗಿ ಕೊಂಡು ಇದ್ದಳು. ಇವನು ಆ ಒಡವೆಗಳನ್ನೆಲ್ಲಾ ಇಟ್ಟು ಕೊಂಡು, ಮುತ್ತಿನ ಶೀರೇ ಉಟ್ಟು ಕೊಂಡು, ಮಾಣಿಕ್ಯದ ಕುಪ್ಪಸವನ್ನು ತೊಟ್ಟು ಕೊಂಡು, ಕಸ್ತೂರೀ ತಿಲಕವನ್ನು ಇಟ್ಟು, ಕಣ್ಣಿಗೆ ಕಾಡಿಗೆ ಹಚ್ಚಿಸಿ, ತಲೇ ಬಾಚಿ, ತುರುಬು ಹಾಕಿ ಕೊಂಡು, ಮೆಲ್ಲಗೆ ಕದವನ್ನು ತೆಗೆದು,—ಅವನ್ಯಾರೋ ಬಾಗಲಲ್ಲಿ ಗೊಲ್ಲರವನು? ಎಂದು ಕೂಗಲು; ಗೊಲ್ಲರ ಗೊತ್ತುಗಾರನು ಓಡಿ ಬಂದು, ಅಡ್ಡ ಬಿದ್ದು,—ಬುದ್ಧೀ, ಏನನ್ಮೈಯ್ಯಾ ಎಂದು, ಭಯದಿಂದ ಕೇಳಲು;—ಧೊರೆಗಳು ಕಳ್ಳನ ಕೈಗೆ ಶಿಕ್ಕಿ ಭಂಗ ಪಡುವದಾಗಿ, ಕನಸ ಕಂಡೆವು. ಎದೆ ಝುಗ್ಗನ್ನುತ್ತದೆ, ತಾಳಲಾರೆವು. ಬೇಗ ಪಾಲಕಿಯನ್ನು ತರಿಸು ಎಂದು, ಹೇಳಿ, ತರಿಸಿ ಕೊಂಡು, ಗೌಸು ಹಾಕಿಸಿ, ಕಾಡುಪುರಕ್ಕೆ ಬರಲು; ಮುಂಚಿತವಾಗಿಯೇ ಗೊಲ್ಲರ ಗೊತ್ತುಗಾರನು ವರದೀ ಹೇಳಿದ್ದರಿಂದ, ಅರಸು ಕೋಪದಿಂದ ಉರಿದು ಬೀಳುತ್ತಾ ಇದ್ದನು. ಅಷ್ಟ

ರಲ್ಲಿಯೇ ಪಾಲಕಿಯನ್ನು ಹೊತ್ತು ಇದ್ದ ಬೆಸ್ತರು ಗುಡಾರದ ಒಳಗೆ ಪಾಲಕೀ ಇರಿಸಿ, ಹೊರಗೆ ಹೋದರು. ಈ ಅರಸು ಮಗನು ಗೌಸನ್ನು ತೆಗೆದು, ಹೊರಗೆ ಬಂದು, ಅರಸಿನ ಬಳಿಯಲ್ಲಿ ನಿಂತನು. ಅರಸು ಕೋಪದಿಂದ ಕಣ್ಣೆತ್ತಿ ನೋಡದೆ,—ನಿನಗೇನು ಹುಚ್ಚು ಹಿಡಿಯಿತೇ? ಈ ನಿಶೀ ಹೊತ್ತಿನಲ್ಲಿ ಮಸಾಣಕ್ಕೆ ಬರ ಬಹುದೇ? ಎಂದು, ತಳ್ಳಲು; ಅಷ್ಟಕ್ಕೆ ಕೆಳಗೆ ಬಿದ್ದು, ಕತ್ತಿನ ಮುತ್ತಿನ ಸರವನ್ನು ಕಿತ್ತು, ಅಗಲಕ್ಕೆ ಚೆಲ್ಲಿ—ಶಿಖೀ ಸರ ಹರಿದು, ಚೆಲ್ಲಿತೆಂದು ಅಳುತ್ತಾ, ಒಂದೊಂದು ಮುತ್ತಾಗಿ ಹುಡುಕಿ, ಆಯುತ್ತಾ ಇರಲು; ಅರಸು ಆ ಶಿಖೀ ಸರವು ಅವರ ಕುಲ ಕ್ರಮವಾಗಿ ಬಂದಂಥಾದ್ದಾದ್ದರಿಂದ—ಮನೆಗೆ ಹೋಗಿ, ಆಯಿಸಿಕೋ ಎಂದು, ಚೆಲ್ಲಿದಷ್ಟು ಅಗಲಕ್ಕೂ ಮುತ್ತೂ ಉಂಗುರಗಳೂ ಬೂದಿ ಸಹ ಬಾಚಿ, ಪಾಲಕಿಯಲ್ಲಿ ತುಂಬಿ ಕೊಟ್ಟು, ಕಳುಹಿಸಿ ಬಿಟ್ಟನು. ಇವನು ತಿರಿಗಿ ಅರಮನೆಗೆ ಬಂದು, ಪಾಲಕೀ ಇಳಿದು, ಎಂದಿನಂತೆ ಚಿಕ್ಕ ಮನೆಗೆ ಬಂದು, ಈ ಅರಸಿಯನ್ನು ನನ್ನ ತಾಯಿಯಂತೆ ಕಂಡಿದ್ದೇನೆಂದು, ಒಂದು ಚೀಟಿಯನ್ನು ಆಕೆಯ ತೋಳಿಗೆ ಕಟ್ಟಿ, ಪಾಲಕಿಯಲ್ಲಿದ್ದ ಬೂದಿಯನ್ನು ಪೆಟ್ಟಿಗೆಗೆ ತುಂಬಿ, ತಕ್ಕೊಂಡು, ತನ್ನ ಕನ್ನಗತ್ತರಿಯನ್ನು ತೆಗೆದು ಕೊಂಡು, ಮೊದಲು ಕೊರದಿದ್ದ ಕನ್ನದಲ್ಲಿಯೇ ಈಚೆಗೆ ಹೊರಟು ಬಂದು, ಅಡುಗೂಲಜ್ಜಿಯ ಮನೆಯನ್ನು ಶೇರಿ, ಶೀರೆ ರವಿಕೆ ಒಡವೆಗಳನ್ನು ಕಳೆದು, ಬೂದಿ ಸಹ ಒಂದು ಕಡೆಯಲ್ಲಿ ಬಚ್ಚಿಟ್ಟು, ಸ್ವಸ್ಥವಾಗಿ ಮಲಗಿ ಕೊಂಡನು.

ಮತ್ತೆ ಮುಂಜಾನೆ ಅಡುಗೂಲಜ್ಜಿ ತಿರಿಗಿ ಬಂದು, ನಗುತ್ತಾ—ತಮ್ಮಾ, ಈ ದಿನದ ವಾರ್ತೆಯನ್ನು ಕೇಳಪ್ಪಾ! ನೆನ್ನೇ ರಾತ್ರಿ ಕಳ್ಳನು ಅರಸಿಗೂ ಕೂಡ ಮಂಕು ಬೂದೀ ತಳಿದು, ಬೂದೀ ತಕ್ಕೊಂಡು ಬಂದನಂತೆ. ಅರಸು ರಾತ್ರಿ ಎಲ್ಲಾ ಪಿತೃ ವನದಲ್ಲಿ—ದೈವವೇ, ಎಂದು ನಿದ್ದೆಗೆಟ್ಟದ್ದು, ಮುಂಜಾನೆ ಬಂದು, ಮಲಗುವ ಮನೆಗೆ ಹೋಗಿ, ಹೆಂಡತಿಯು ಉಟ್ಟು ತೊಟ್ಟದ್ದನ್ನೆಲ್ಲಾ ಕಳ ಕೊಂಡು, ಅಳುತ್ತಾ ಇರುವದನ್ನೂ ತೋಳಿನ ಚೀಟಿನ್ನೂ ಕಳ್ಳ ಕೊರದ ಕನ್ನವನ್ನೂ ನೋಡಿ, ಛೀ! ಛೀ! ನನ್ನ ಬಾಳು ಎಂಥಾದ್ದು? ಹೀಗೆ ಲೋಕದಲ್ಲಿ ಎಲ್ಲಾ ಅಪಹಾಸ್ಯವಾಗಿ ಬದುಕುವದಕ್ಕಿಂತ ಸಾಯುವದು ಲೇಸು! ಎಂದು, ಚಿಂತಾಕ್ರಾಂತನಾಗಿ ಮಂಚದ ಮೇಲೆ ಮೊಗಮಡಿಯಾಗಿ ಬಿದ್ದು ಕೊಂಡನಂತೆ. ಇದನ್ನು ಪ್ರಧಾನಿಯು ಕೇಳಿ, ಅರಸಿನ ಬಳಿಗೆ ಬಂದು—ನೀವು ಸಟಕವಿದ್ದು, ಕೈ ಯಾಕೆ ಸುಟ್ಟು ಕೊಳ್ಳುತ್ತೀರಿ? ಪಾದದ ಚಾಕರನಾದ ನಾನು ಯಾವ ತೆರದಲ್ಲಿಯಾದರೂ ಆ ಕಳ್ಳನನ್ನು ಹಿಡಿದು ಕೊಡುತ್ತೇನೆಂದು, ಅರಸನ್ನು ಧೈರ್ಯ ಗೊಳಿಸಿ,

ಹೊರಗೆ ಬಂದು, ಆ ಕಳ್ಳನು ನೆನ್ನೆ ತೆಗೆದು ಕೊಂಡು ಹೋದ ಬೂದಿಯನ್ನು ನೀರಿನಲ್ಲಿ ಕದಡುವ ಸಂಚಿಯಾನವೆಂಬ ಕರ್ಮವನ್ನು ಮಾಡದ ಹಾಗೆ, ಬೆಸ್ತರ ಕರಿಸಿ—ಎಲ್ಲಾ ಜಲತಾಣಗಳಲ್ಲಿ ಕಾವಲು ಇದ್ದು ಕೊಂಡು, ಯಾರಾದರೂ ಬೂದಿ ಕದಡುವದಕ್ಕೆ ಬಂದರೆ, ಹಿಡು ಕೊಂಡು, ಬರುವ ಹಾಗೆ ನೇಮಿಸಿ, ಕಳುಹಿಸಿದ್ಧಾನಂತೆ ಎಂದು, ಹೇಳಲು; ಈ ರಾಜ ಕುಮಾರನು ಉಂಡು, ಹೊರಟು, ಚಂದ್ರಗಾವೀ ರುಮಾಲು ಸುತ್ತಿ, ಕುತ್ನಿ ಚೆಲ್ಲಣ ಇಟ್ಟು ಕೊಂಡು, ಬಿಳೀ ಶಲ್ಯದ ಅಂಗೀ ತೊಟ್ಟು ಕೊಂಡು, ಒಂದು ಅಡ್ಡೆಯನ್ನು ತಕ್ಕೊಂಡು, ಒಂದು ಕಡೆಯಲ್ಲಿ ನಾಲ್ಕೈದು ಪುಟ್ಟಿಗಳನ್ನು ಇಟ್ಟು, ಮತ್ತೊಂದು ಕಡೆಯಲ್ಲಿ ಒಂದು ಸಣ್ಣ ಕರೀ ಕಂಬಳಿಯನ್ನೂ ಹಾಳು ಜಮಖಾನವನ್ನೂ ಒಂದು ಹಸಬೇ ಚೀಲದಲ್ಲಿ ತಂಬಿಗೆ, ಗಂಗಳ, ರೊಟ್ಟಿ, ಬುತ್ತಿ ಸಹ ಇಟ್ಟು, ಆ ಚೀಲವನ್ನೂ ಇರಿಸಿ, ಆ ಪುಟ್ಟಿಗಳಲ್ಲಿ ಕೆಳಗಿರುವ ಪುಟ್ಟಿಗೆ ನೆನ್ನೆ ತಂದ ಬೂದಿಯನ್ನು, ಮುತ್ತು ಉಂಗರಗಳನ್ನು ಬೇರೆ ತೆಗೆದು, ತುಂಬಿ, ಹೆಗಲ ಮೇಲೆ ಹೊತ್ತು ಕೊಂಡು, ಬೀಸು ಬಲೇ, ಕೋಲು ಸಹ, ತಕ್ಕೊಂಡು, ಜಗ್ಗು ಹಾಕುತ್ತಾ, ಹೊಳೆಯ ಧಡಕ್ಕೆ ಬರಲು; ಅಲ್ಲಿ ಕಾವಲು ಇದ್ದ ಬೆಸ್ತರು ಇವನ ಠೀವಿಗೆ ಬೆರಗಾಗಿ—ಯಾವೂರಪ್ಪಾ ನೀವು? ಹೊಸಬರಾಗಿ ಕಾಣಿಸುತ್ತೀರಿ, ಎಂದು ಕೇಳಿದರು. ಇವನು—ಏನೆಲೇ, ಕಣ್ಣು ಕಾಂಬುವದಿಲ್ಲವೋ? ಅರಸು ಮಗಳಾದ ವಿದ್ಯಾಮಂಜರಿಯ ಅಡಿಗೇ ಮನೆಗೆ ನಿತ್ಯ ಮೀನು ತಂದು ಕೊಡುವ ಗಿರಿಜೆಹನುಮಾಬೋಯಿ ಎಂಬುವದು ತಿಳಿಯದೇ? ಎಂದು ಹೇಳಿ, ಬಲೆಯನ್ನು ಹೊಳೆಯಲ್ಲಿ ಬೀಸಿ, ಮೀನನ್ನು ಹಿಡಿದು, ಮಳಲಿನ ಮೇಲೆ ಸುರಿಯುವದು; ಕಾವಲು ಬೆಸ್ತರ ಹುಡುಗರು ಕೆಲವು ಮೀನು ತೆಗೆದು ಕೊಂಡದ್ದರಿಂದ, ಕೋಪಾ ಮಾಡಿ ಕೊಂಡು, ಪುಟ್ಟಿಗಳು, ಬಲೆ, ಊಟದ ಸಾಮಾನು, ಹಾಸಿಗೆ ಸಾಮಾನು, ಅಡ್ಡೆ ಸಹ ಹೊಳೆಯಲ್ಲಿ ದೂರ ಒಗೆದು—ನಿಮಗೆ ತಕ್ಕದ್ದು ಮಾಡಿಸುತ್ತೇನೆಂದು ಹೇಳಿ, ಅಡುಗೂಲಜ್ಜಿಯ ಗುಡಸಲಿಗೆ ಬಂದು, ಮಲಗಿ ಕೊಂಡನು.

ಮುಂಜಾನೆ ಮತ್ತೆ ಅಡುಗೂಲಜ್ಜಿ ಬಂದು—ನೆನ್ನೆ ಕಳ್ಳನು ಬೆಸ್ತರಿಗೆ ಮೋಸಾ ಮಾಡಿ, ಬೂದೀ ಕದಡುವ ಸಂಚಿಯಾನವೆಂಬ ಕರ್ಮವನ್ನು ನೆರವೇರಿಸಿದ್ದಾಗಿ ಮಂತ್ರಿಯು ಕೇಳಿ—ಈ ದಿನ ಯಾರಾದರೂ ಪಿಂಡ ಬೀಸಿ ಹಾಕಿದರೆ, ಅವರನ್ನು ಹಿಡು ಕೊಂಡು ಬನ್ನೀ ಎಂದು, ಕಟ್ಟು ಮಾಡಿ, ಹಾರುವವರನ್ನೇ ಹೊಳೆಯ ಧಡದಲ್ಲೆಲ್ಲಾ ಕಾವಲು ಇರಿಸಿದ್ಧಾನಂತೆ, ಎಂದು ತಿಳಿಸಿದಳು. ಆಗ ಅರಸು ಮಗನು ಬಂದು ಹಳೆ ಹರುಕು ಪಂಚೇ ಉಟ್ಟು ಕೊಂಡು, ಮ

ತ್ತೊಂದು ಪಂಚೆ ಹೆಗಲ ಮೇಲೆ ಹಾಕಿ ಕೊಂಡು, ಒಂದು ಹಳೇ ಅರುವೆಯಲ್ಲಿ ಒಂದು ಸೇರು ಅಕ್ಕಿಗೆ ಪಾವು ಸೇರು ಹೆಸರು, ಸ್ವಲ್ಪ ಒಳ್ಳೆಳ್ಳು, ತುಸ ಬೆಲ್ಲ, ತುಪ್ಪ ಸಹ ಬೆರಿಸಿ, ಗಂಟು ಕಟ್ಟಿ, ಒಂದು ಆಳು ತಪ್ಪಲೆಯಲ್ಲಿ ತುರುಕಿ ಕೊಂಡು, ಚೆಂಬು, ಅಷ್ಟು ಬೆರಣಿ ಸಹ ತೆಗೆದು ಕೊಂಡು, ಅಡುಗೂಲಜ್ಜಿ ಹೇಳುವ ಮಾತನ್ನು ಅವಳಿಗೆ ಹೇಳಿ ಕೊಟ್ಟು, ಅವಳು ಹಿಂದೆ ಓಡಿ ಬರುವಂತೆ ಹೇಳಿ, ತಾನು ಮುಂದೆ ಮುಂದೆ ಹೊಳೆಯ ಬಳಿಗೆ ಓಡಿ ಬಂದನು. ಆಗ ಹಿಂದೆ ಓಡಿ ಬರುತ್ತಾ ಇದ್ದ ಅಡುಗೂಲಜ್ಜಿಯು ಕಾವಲಿರುವ ಬ್ರಾಹ್ಮಣರನ್ನು ನೋಡಿ—ಅಪ್ಪಾ, ಅಪ್ಪಾ, ನೋಡಿದಿರಾ? ಈ ಮಗನನ್ನು ತಪಿಸಿ, ಹೆತ್ತೆನು. ಮೂರು ದಿವಸದಿಂದ ಹೊಟ್ಟೆಗೆ ಅನ್ನಾ ಕೊಡದೆ ಕೊಲ್ಲುತ್ತಾನೆ. ಈ ಹೊತ್ತು ಓಡಿ ಹೋಗಿ, ನಡಿಯಲಾರದ ಮುದಿಕಿ ನಾನು ಹೋಗುವ ಹೊತ್ತಿಗೆ ತಾನು ಬೇಸಿ ಕೊಂಡು, ತಿಂದು—ನೀನು ಬರಲಿಲ್ಲ; ನಾನು ಏನು ಮಾಡಲಿ? ಎಂದು, ಅಂದು ಬಿಡುತ್ತಾನೆಂದು ಅಂಗಲಾಚಿ, ಹೇಳಿ ಕೊಂಡಳು. ಅವರು ಕರುಣ ಹುಟ್ಟಿ—ಎಲಾ, ಅಪ್ಪಾ, ಹೆತ್ತ ತಾಯಿಯನ್ನೂ ಹೀಗೆ ಗೋಳಾಡಿಸ ಬಾರದು, ಪಾಪ! ಇಲ್ಲಿಯೇ ಅಡಿಗೇ ಮಾಡಿ, ಅವಳಿಗೂ ಇಕ್ಕಿ, ನೀನು ಉಂಡು, ಹೋಗು. ನಿನ್ನ ಸಂಗಡ ನಡದಾಳೇ? ಅಂದರು. ಆಗ ಅರಸು ಮಗನು ಹೊಳೆಯಲ್ಲಿ ಮುಳುಗಿ, ಒದ್ದೇ ಉಟ್ಟು ಕೊಂಡು, ತಪ್ಪಲೆ ಚೆಂಬು ಬೆಳಗಿ ಕೊಂಡು, ಹಣೆಗೆ ವಿಭೂತೀ ಹಚ್ಚಿ, ಬೆರಣೀ ತಾಳೀ ಒಟ್ಟಿ, ಚಕುಮುಕ್ಕಿಯಲ್ಲಿ ಬೆಂಕಿ ಹಚ್ಚಿ, ಬೇಸಿ, ಅನ್ನವನ್ನು ಮಾಡಿ, ಒಂದು ದೊಡ್ಡ ಉಂಡೆಯನ್ನೂ ಎರಡು ಚಿಕ್ಕ ಉಂಡೆಗಳನ್ನೂ ಮಾಡಿ—ಬಾರೇ, ಅಮ್ಮಾ, ಎಂದು ಕೂಗಿದನು. ಅಡುಗೂಲಜ್ಜಿಯು ನೋಡಿ—ಏನಪ್ಪಾ, ಈ ಅನ್ಯಾಯ ಉಂಟೇ? ಒಂದು ದೊಡ್ಡ ಉಂಡೆಯನ್ನೂ ಒಂದು ಚಿಕ್ಕ ಉಂಡೆಯನ್ನೂ ತಾನು ತಿನ್ನುತ್ತಾನೆ. ನನಗೆ ಒಂದು ಚಿಕ್ಕ ಉಂಡೇ ಬಡಿಸುತ್ತಾನೆ. ಮೂರು ದಿನದಿಂದ ಉಪವಾಸಾ ಇದ್ದವಳಿಗೆ ಹೊಟ್ಟೆ ತುಂಬೀತೆ? ಅಂದಳು. ಆಗ ಅವರು ಸರಿಯಾಗಿ ಎರಡು ಉಂಡೇ ಮಾಡಿ, ಆಕೆಗೆ ಒಂದು ಕೊಟ್ಟು—ನೀನು ಒಂದನ್ನು ಉಣ್ಣು, ಅಂದರು. ಅರಸು ಮಗನು—ಈ ಹಾಳು ತಾಯಿಯ ಕಾಟ ನನಗೆ ಎಂದಿಗೆ ತಪ್ಪೀತೋ, ದೇವರೇ? ಎಂದು ಹೇಳುತ್ತಾ, ಕೋಪಾ ಮಾಡಿ ಕೊಂಡು—ಇವಳಿಗೂ ಬೇಡ, ನನಗೂ ಬೇಡ ಎಂದು, ಆ ಉಂಡೆಗಳು ತಪ್ಪಲೆ ಚೆಂಬು ಸಹ ಹೊಳೆಗೆ ಎಸೆದು ಬಿಟ್ಟು, ಹಿಂತಿರಿಗಿ ಗುಡಸಲಿಗೆ ಬಂದು, ಶೇರಿ ಕೊಂಡನು. ಅಡುಗೂಲಜ್ಜಿಯು ಸ್ವಲ್ಪ ದೂರ ಮೆಲ್ಲಗೆ ನಡೆಯುತ್ತಾ, ಆ ಮೇಲೆ ಬೇಗ ಬಂದು, ಮನೇ ಶೇರಿ ಕೊಂಡಳು.

ತಿರಿಗಿ ಮುಂಜಾನೇ ಅಡುಗೂಲಜ್ಜಿಯು—ಅಪ್ಪಾ, ಈ ದಿವಸದ ಸುದ್ದಿ ಏನಂದರೆ, ನೆನ್ನೆ ನಾವು ಬ್ರಾಹ್ಮಣರನ್ನು ಮೋಸಗೊಳಿಸಿ, ಜಲಪಿಂಡವನ್ನು ಹಾಕಿದ್ದನ್ನು ಮಂತ್ರಿ ಕೇಳಿ—ಕಳ್ಳನು ಬಹು ಘಟ್ಟಿಗನು. ಬ್ರಾಹ್ಮಣ ಕರ್ಮಗಳನ್ನೆಲ್ಲಾ, ನಮಗೆ ಸಾವೂ ಇಕ್ಕ, ನೆರವೇರಿಸಿ ಬಿಟ್ಟನು. ಇನ್ನು ಅವನ ಹಿಡಿಯುವ ಬಗೆ ಹ್ಯಾಗೆ? ಎಂದು, ಚಿಂತೆ ಪಡುತ್ತಿರುವಲ್ಲಿ; ಈ ಊರ ತಳವಾರರಿಗೆಲ್ಲಾ ಗೊತ್ತುಗಾರನಾದ ಭರ್ಮಾಜಿನಾಯಕನೆಂಬವನು ತಾನು ಈ ರಾತ್ರೆ ಕಳ್ಳನ ಹಿಡಿದು ಕೊಡುತ್ತೇನೆಂದು ಬಾಸೇ ಮಾಡಿ ಕೊಟ್ಟು, ಮಂತ್ರಿಯ ಸಂಗಡ ಎಲೆ ಅಡಿಕೆ ಉಡುಗೆರೆಗಳನ್ನು ತೆಗೆದು ಕೊಂಡು ಹೋದನಂತೆ. ಇದಕ್ಕೇನು ತಂತ್ರ ಮಾಡುತ್ತೀಯೋ, ಕಾಣಪ್ಪಾ! ಅಂದಳು. ಅರಸು ಮಗನು—ನೀನು ಆ ತಳವಾರನ ಮನೆಗೆ ಹೋಗಿ, ಏನಾದರೂ ಒಂದು ಉಪಾಯ ಮಾಡಿ, ಅವಳ ತೌರ್ಮನೆ ಗಂಡನ ಮನೆಯ ಪೂರ್ವೋತ್ತರಗಳನ್ನು ತಿಳಿದು, ತಟ್ಟನೆ ಬಾ ಎಂದು, ಅಡುಗೂಲಜ್ಜಿಯನ್ನು ಕಳುಹಿಸಲು; ಅವಳು ಹೋಗಿ, ತಿಳು ಕೊಂಡು, ಬಂದು—ಕೇಳ್ಳೈಯ್ಯಾ, ಅವಳ ಮನೇ ಸುದ್ದಿ ಮತ್ತೇನೂ ಹೆಚ್ಚಿಲ್ಲ. ಅವಳಿಗೆ ಒಬ್ಬನೇ ತಮ್ಮನಿದ್ದನಂತೆ. ಐದನೇ ವರುಷದಲ್ಲಿ ಎಲ್ಲಿಯೋ ತಪ್ಪಿಸಿ ಕೊಂಡು ಹೋಗಿ, ಈಗ ಹನ್ನೆರಡು ವರುಷವಾಯಿತಂತೆ. ಇವಳಿಗಿಂತ ಏಳು ವರುಷದ ಚಿಕ್ಕವನಂತೆ. ಇವಳಿಗೆ ಹತ್ತು ವರುಷದ ಒಬ್ಬ ಮಗಳೂ, ಐದು ವರುಷದ ಒಬ್ಬ ಹುಡುಗನೂ ಇದ್ದಾರೆ; ಇಷ್ಟೇ, ಎಂದು ಹೇಳಲು; ರಾಜ ಕುಮಾರನು ಸಾಯಂಕಾಲಕ್ಕೆ ಉಂಡು, ಸಾಧಾರಣವಾದ ಹೊದಿಕೆಗಳ ಮಾಡಿ ಕೊಂಡು, ಒಂದು ಹೂವಿನ ಶೀರೆ, ಒಂದು ಪಟ್ಟೆ ಕಿರಿಗೆ, ಒಂದು ಹೂವಿನ ಹಚ್ಚಡ, ಒಂದು ಹೂವಿನ ಒಲ್ಲಿ, ಹುರಿಗಡಲೆ, ಅರಿಸಿನ, ಕೊಪ್ಪರೀ ಗಿಟಕು, ಬೆಲ್ಲ, ತನ್ನ ಅಡಿಗೆ ಊಟಕ್ಕೆ ತಕ್ಕ ಪಾತ್ರೆ ಪದಾರ್ಥಗಳು ಸಹ ತಕ್ಕೊಂಡು, ಇವನ್ನೆಲ್ಲಾ ಒಂದು ಹಸಬೇ ಚೀಲದಲ್ಲಿ ಹಾಕಿ ಕೊಂಡು, ಒಂದು ದೇಶದ ತಟ್ಟುವಿನ ಮೇಲೆ ಹೇರಿ ಕೊಂಡು, ಸಾಯಂಕಾಲವಾದ ಝಾವ ಹೊತ್ತಿಗೆ ಆ ತಳವಾರನ ಮನೆಗೆ ಹೋಗಿ, ಬಾಗಲಲ್ಲಿ ನಿಂತು—ಅಕ್ಕಾ, ಅಕ್ಕಾ, ಎಂದು, ಕೂಗಲು; ತಳವಾರನ ಹೆಂಡತಿಯು ಒಳಗೆ ಕೇಳಿ—ಇದೇನು ಪುಣ್ಯ? ಅಕ್ಕಾ ಎಂಬೋ ಸೊಲ್ಲು ಕಿವಿಗೆ ಬಿತ್ತು. ತಮ್ಮ ಏನಾದರೂ ಬಂದನೋ? ಎಂದು, ಹೆಚ್ಚಳದಿಂದ ಬಾಗಿಲಿಗೆ ಬಂದು, ಕದಾ ತೆಗಿಯಲು; ಇವನು ಕುದುರೇ ಇಳಿದು, ಆಕೆಗೆ ಕಾಲು ಮುಟ್ಟಿ, ನಮಸ್ಕಾರ ಮಾಡಿ, ಹಾಗೆ ಒಳ ಹೊಕ್ಕು—ಭಾವ ಎಲ್ಲಿ? ಎಂದು, ಕೇಳುತ್ತಾ, ತಳವಾರನ ಬಳಿಗೆ ಹೋಗಿ, ಅವನಿಗೂ ನಮಸ್ಕರಿಸಿ, ತಟ್ಟುವನ್ನು

ಬಾಗಲಲ್ಲಿ ಕಟ್ಟಿ, ಹಸಬೇ ಚೀಲವನ್ನು ಒಳಗೆ ತಕ್ಕೊಂಡು ಬಂದನು. ಆಗ ಅಕ್ಕ ತನ್ನ ಮಕ್ಕಳನ್ನು ಅಡ್ಡ ಬೀಳಿಸಿ,—ಇಗೊಳ್ಳಪ್ಪಾ, ಇವಳು ನಿನ್ನ ಸೋದರ ಸೊಸೆ, ಇವನು ನಿನ್ನ ಸೋದರಳಿಯನೆಂದು, ಹೇಳುವದು, ಇಬ್ಬರನ್ನು ಬಾಚಿ, ತಬ್ಬಿ ಕೊಂಡು, ಮುತ್ತು ಕೊಟ್ಟು, ಮುದ್ದಾಡಿ, ತೊಡೇ ಮೇಲೆ ಕೂರಿಸಿ ಕೊಂಡು—ಇವರು ಹುಟ್ಟಿರುವದನ್ನು ಈ ಊರಲ್ಲಿ ವಿಚಾರಿಸಿ, ತಿಳಿದೆ, ಎಂದು ಹೇಳಿ, ತಾನು ತಂದು ಇದ್ದ ಕಡ್ಲೆ ಕೊಪ್ಪರಿ ಮುಂತಾದ್ದನ್ನು ಕೊಟ್ಟು, ಸೊಸೆಗೆ ಪಟ್ಟೆ ಕಿರಿಗೆಯನ್ನೂ, ಅಳಿಯನಿಗೆ ಹೂವಿನ ಒಲ್ಲಿಯನ್ನೂ, ಅಕ್ಕನಿಗೆ ಹೂವಿನ ಶೀರೆಯನ್ನೂ ಕೊಟ್ಟು, ಭಾವನಿಗೆ ಹೂವಿನ ಹಚ್ಚಡವನ್ನು ಹೊದ್ದಿಸಿ, ಅವರ ಕಿವಿಗೆ ಇಂಪಾಗುವಂತೆ ತಾನು ತಿರಿಗಿದ ದೇಶದ ನಡತೆಗಳೆಲ್ಲಾ ಹೇಳಿದನು. ಆ ಬಳಿಕ ಅಕ್ಕನು—ಉಣ್ಣೋಳಪ್ಪಾ. ಕಾಲಿಗೆ ನೀರು ಕೋ, ಅನ್ನುವದು; ನೀರು ತಕ್ಕೊಂಡು, ಕಾಲು ತೊಳ ಕೊಂಡು—ಮುಚ್ಚಂದಿಯಲ್ಲಿ ಉಂಡೆನು, ಹಸಿವಿಲ್ಲ, ಅಂದನು. ಆಗ ಅವಳು—ಉಪವಾಸ ಮಲಗ ಬೇಡ, ಎಂದು, ಹಾಲು ಹಣ್ಣು ತುಪ್ಪ ಸಹ ಕೊಟ್ಟದ್ದರಿಂದ, ಫಲಾಹಾರ ಮಾಡಿ, ಎಲೆ ಅಡಿಕೆಯನ್ನು ಹಾಕಿ ಕೊಂಡು, ಹಾಸಿಗೇ ಮೇಲೆ ಕೂತು ಕೊಂಡು ಇದ್ದನು. ಆಗ ತಳವಾರನು ಕರೀ ಕಂಬಳೀ ಮುಸುಕು ಹಾಕಿ, ಕೈಯಲ್ಲಿ ದೊಣ್ಣೆ ಹಿಡು ಕೊಂಡು, ಇವನನ್ನು ಕುರಿತು—ನೀನು ದಣಿದು ಬಂದಿದ್ದೀ; ಸ್ವಸ್ಥವಾಗಿ ಮಲಗಿಕೋ. ಈ ಊರ ಅರಸನನ್ನು ಒಬ್ಬ ಕಳ್ಳ ಪೀಚಾಡಿಸುತ್ತಾನೆ. ಅವನನ್ನು ಈ ದಿವಸ ನಾನು ಹಿಡಿಯುತ್ತೇನೆಂದು ಹೇಳಿದ್ದೇನೆ. ನಾನು ಹೋಗುತ್ತೇನೆ, ಅನ್ನಲು;—ಇದು ಎಂಥಾ ಮಾತು? ನೀನು ಒಬ್ಬನೇ ಯಾಕೆ ಹೋಗ ಬೇಕು? ನಾನು ಬರುತ್ತೇನೆಂದು, ಅವನ ಸಂಗಡಲೇ ಹೊರಟು, ಕೋಟೇ ಅಲಂಗದ ಮೇಲೆ ಹತ್ತಿ, ತಿರುಗುತ್ತಾ ಇರುವಲ್ಲಿ, ತಳವಾರನ ಹಿತ್ತಲ ಬಳಿ ಅಲಂಗದ ಮೇಲೆ ಒಂದು ಕೈ ಕೋಳ ಇದ್ದದ್ದರಿಂದ, ಅರಸು ಮಗನು ನೋಡಿ,—ಭಾವ, ಭಾವ, ಇದೇನು? ನಾನು ಎಲ್ಲಿಯೂ ನೋಡಲಿಲ್ಲ, ಅನ್ನಲು; ತಳವಾರನು—ಇದು ತಪ್ಪು ಮಾಡಿದವರಿಗೆ ಹಾಕುವ ಕೈ ಕೋಳವೆಂದನು. ಇವನು—ಇಲ್ಲಿ ಕೈ ಹಾಕುವದೋ? ಎಂದು, ತನ್ನ ಕೈಯನ್ನು ಹಾಕಿ—ಎಲ್ಲಿ, ಭಾವ? ಹ್ಯಾಗಾಗುತ್ತೆ? ನೋಡೋಣ; ಕೀಲು ಜಡಿ, ಅನ್ನಲು; ತಳವಾರನು ಕೀಲನ್ನು ಹಾಕಿ, ಸುಮಾರಾಗಿ ಜಡಿಯಲು—ಹಾ ಹಾ! ಸರಿ, ಸರಿ! ಇದು ಒಳ್ಳೆ ಶೀಕ್ಷೆ ಎಂದು ಹೇಳಿ, ಕೀಲ ಕೀಳಿಸಿ ಕೊಂಡು, ತನ್ನ ಕೈ ತೆಗೆದು—ಎಲ್ಲಿ, ಭಾವ? ನೀನು ಕೈ ಹಾಕು; ನನಗೆ ಕೀಲು ಜಡಿಯುವದಕೆ ಬರುತ್ತದೋ? ನೋಡೋಣ, ಎಂದು, ಅವ

ನ ಕೈ ಹಾಕಿಸಿ, ಕೀಲನ್ನು ಘಟ್ಟಿಯಾಗಿ ಬಡಿದು, ತೆಗೆಯುವದಕ್ಕೆ ಅಲ್ಲಾಡಿಸಿ—ಬರದಲ್ಲೋ, ಭಾವ! ಅನ್ನಲು;—ಇಲ್ಲಿಯೇ ಇಳಿದು, ಮನೆಯಲ್ಲಿ ಕೇಳಿ, ಕೈ ಬಾಚಿ ತಕ್ಕೊಂಡು ಬಾ, ಅಂದನು. ಇವನು ಇಳಿದು, ಒಳಗೆ ಬಂದು, ಅಕ್ಕನ ಕರೆದು, ಕಿವಿಯಲ್ಲಿ—ಅಕ್ಕಾ, ಕಳ್ಳರು ಭಾವನನ್ನು ಕೊಂದು ಹಾಕ ಬೇಕು ಎಂದು, ಯತ್ನಾ ಮಾಡುವದು—ಭಾವನು, ನನ್ನ ವಿತ್ತಾಪಾರವೆಲ್ಲ ಕೊಡುತ್ತೇನೆ; ನನ್ನ ಬಿಟ್ಟು ಬಿಡಿ, ಎಂದು ಹೇಳಿದ್ದಕ್ಕೆ ಅವರು—ತರಿಸು, ಅನ್ನಲು; ನನ್ನ ಕಳುಹಿಸಿದನು. ಕಳ್ಳರು ಬಹು ಘಟ್ಟಿಗರು. ಈ ಹೊತ್ತಿಗೆ ನಿನ್ನ ತಾಳಿ ಒಂದು ಉಳಿದರೆ ಸಾಕು. ಭಾವನ ಜೀವ ಒಂದು ಇದ್ದರೆ, ಇಂಥಾದ್ದು ಬೇಕಾದಷ್ಟು ಸಂಪಾದಿಸಿ ಕೊಳ್ಳ ಬಹುದು. ಇದ್ದ ಬದ್ದದ್ದನ್ನೆಲ್ಲಾ ಬೇಗ ತಾ, ಅಂದನು. ಅವಳು ತಟ್ಟನೆ ಮನೆಯಲ್ಲಿ ಇದ್ದ ಒಡವೆ ವಸ್ತುಗಳನ್ನು ಸೊಪ್ಪು ಸುತ್ತಿ, ಎಲ್ಲಾ ಗಂಟು ಕಟ್ಟಿ, ಕೊಟ್ಟಳು. ಅದನ್ನೆಲ್ಲಾ ತಕ್ಕೊಂಡು, ಬೀದೀ ಬಾಗಲಲ್ಲಿ ಹೊರಟು, ನೆಟ್ಟಗೆ ಅಡುಗೂಲಜ್ಜಿಯ ಗುಡಸಲಿಗೆ ಬಂದು, ಮಲಗಿ ಕೊಂಡನು.

ಬೆಳಿಗ್ಯೆ ಪುನಹ ಅಡುಗೂಲಜ್ಜಿ ಸುತ್ತಿ ಬಂದು—ಅಪ್ಪಾ, ಮಂತ್ರಿಯು ತಳವಾರನು ಕೈ ಕೋಳ ಬಿದ್ದಿರುವದನ್ನು ತಿಳಿದು, ಅವನ ಕೈ ಕೋಳಾ ತೆಗಿಸಿ, ಕರಿಸಿ, ನೀನು ಅವನಿಗೆ ಮಾಡಿದ ಮೋಸವನ್ನೆಲ್ಲಾ ಕೇಳಿ, ವ್ಯಸನ ಪಡುವಾಗ, ಸೇನಾಧಿಪನು ಬಂದು,—ಆ ಕಳ್ಳನು ಭಲೇ, ಘಟ್ಟಿಗ! ಅವ ಯಾರಿಗೂ ಶಿಕ್ಕುವದಿಲ್ಲ. ನಾನು ಈ ದಿನ ಅವನನ್ನು ಹಿಡಿದು ಕೊಡುತ್ತೇನೆ. ನನ್ನ ಸಾಮರ್ಥ್ಯ ನೋಡಿ, ಎಂದು ಹೇಳಿ, ತಾಂಬೂಲ ತೆಗೆದು ಕೊಂಡು ಇದ್ದಾನಂತೆ ಎಂದು, ಹೇಳಿದ್ದನ್ನು ಕೇಳಿ, ಅರಸು ಮಗನು ಸಾಯಂಕಾಲಕ್ಕೆ ತನ್ನ ಊಟ ಉಪಚಾರವನ್ನು ತೀರಿಸಿ ಕೊಂಡು, ಕಚ್ಚೆ ಅರಿವೇ ಕಟ್ಟಿ ಕೊಂಡು, ತಲೆಗೆ ಒಂದು ಪಾವಡೆ ಸುತ್ತಿ, ಕೆಲವು ಮಡಿ ಮಾಡಿದ ಬಟ್ಟೆಗಳನ್ನೂ ಕೆಲವು ಮೈಲಿಗೆ ಬಟ್ಟೆಗಳನ್ನೂ ಕ್ರಯಕ್ಕೆ ತೆಗೆದು ಕೊಂಡು, ನಾಲ್ಕೈದು ಕತ್ತೇ ಮೇಲೆ ಹೇರಿ ಕೊಂಡು, ಹತ್ತು ಹದಿನೈದು ಕೈಸೋರೆ ಬುರುಡೆಗಳಿಗೆ ನಾನಾ ಬಣ್ಣದ ರುಮಾಲುಗಳ ಸುತ್ತಿ, ಅವುಗಳನ್ನು ತೆಗೆದು ಕೊಂಡು, ಪಟ್ಣಕ್ಕೆ ಕೊಂಬಿನ ಕೂಗು ಅಳತೆಯಲ್ಲಿರುವ ಸುಡುಗಾಡಿನ ಬಳಿಯ ಕೆರೆಯಲ್ಲಿ ಏರಿಯ ಮೇಲೆ ಮಡಿ ಬಟ್ಟೆಗಳನ್ನೆಲ್ಲಾ ಮಡಿಸಿ, ಗಳಿಗೇ ಮಾಡಿ, ಇಟ್ಟು, ಮೈಲಿಗೆ ನೀರಿನ ಧಡದಲ್ಲಿಟ್ಟು, ಕತ್ತೆಗಳನ್ನೆಲ್ಲಾ ಕಾಲ ಕಟ್ಟಿ, ಕೆರೆಯ ಹುಲ್ಲಿಗೆ ಅಟ್ಟಿ, ಅರಿವೆಗಳನ್ನು ಒಗೆಯುತ್ತಾ ಇದ್ದನು. ರಾತ್ರಿ ಹತ್ತು ಘಳಿಗೆಯಲ್ಲಿ ದಳವಾಯಿಯು ನಿರಾಜಿ ಪಾಗು ಸುತ್ತಿ ಕೊಂಡು, ಕಿನ್ಖಾಪಿನ ಕಾಲು ಕುಪ್ಪಸ ತೊಟ್ಟು, ದಮಾಸ್

ಚೊಗೆಯನ್ನು ಇಟ್ಟು, ನಡುಕಟ್ಟಿನಲ್ಲಿ ಕತ್ತೀ ಶಿಕ್ಕಿಸಿ, ಕರೀ ಶಾಲು ಜೋಡಿಯನ್ನು ಮುಸುಕು ಹಾಕಿ ಕೊಂಡು, ಜೋಡು ಮೆಟ್ಟಿ ಕೊಂಡು, ತನ್ನ ಕಡೆಯ ಐವತ್ತು ಓಲೇಕಾರರನ್ನು ಆಯುಧ ಸಹಿತವಾಗಿ ಊರ ಹೊರಗೆ ಉಕ್ಕಡದ ಬಳಿಯಲ್ಲಿ ನಿಲ್ಲಿಸಿ, ಕಳ್ಳರು ಸಂಚಾರ ಮಾಡುವ ಜಾಗಗಳನ್ನು ನೋಡುತ್ತಾ, ಈ ಅರಸು ಮಗ ಮಲೀರ್ಣ ತೊಳೆಯುವ ಕೆರೆಯ ಬಳಗೆ ಬಂದು—ಅವನ್ಯಾರಲಾ ಸಮರಾತ್ರೀ ಹೊತ್ತಿನಲ್ಲಿ ಒಗೆಯುವನು? ಎಂದು ಕೇಳಲು;—ಬುದ್ಧೀ, ನಾನು ಅಗಸರ ತಿಮ್ಮ, ಕಳ್ಳಕಾಕರ ಬಟ್ಟೇ ಒಗೆದು ಕೊಂಡು, ಹೊಟ್ಟೇ ಪಾಡು ಮಾಡಿ ಕೊಂಡಿದ್ದೇನೆ. ಕಳ್ಳರು ಹಗಲೊತ್ತು ತಿರುಗುವದಿಲ್ಲವೆಂದು, ಪಾದಕ್ಕೆ ಅರಿಕೆ ಇಥೆ ಅಷ್ಟೆ. ಇಲ್ಲಿಗೆ ಸಮರಾತ್ರೀ ಹೊತ್ತಿನಲ್ಲಿ ಬಂದು, ಮಡಿ ಬಟ್ಟೆಗಳ ತೆಗೆದು ಕೊಂಡು, ಕೊಳಕು ಬಟ್ಟೆಗಳ ಹಾಕಿ, ಹೋಗುತ್ತಾರೆ, ಅಂದನು. ದಳವಾಯಿಯು—ನಿನಗೆ ಸಂಬಳ ಮಾಡಿಸಿ ಕೊಡುತ್ತೇನೆ. ಆ ಕಳ್ಳರ ಹಿಡಿದು ಕೊಟ್ಟೇಯಾ? ಎಂದು ಕೇಳಿದನು. ಅಗಸನು—ಬುದ್ಧೀ, ಈ ಹಾಳು ಹೊಡಬಾಳು ತಪ್ಪಿ, ಸಂಬಳವಾದರೆ, ಬದುಕಿ ಕೊಂಡೇನು. ತಾವು ನಾಲ್ಕು ಘಳಿಗೆ ಬಿಟ್ಟು ಕೊಂಡು, ಒಬ್ಬರೇ ದಯ ಮಾಡಿದರೆ, ಕಳ್ಳರನ್ನು ತೋರಿಸಿ ಕೊಡುತ್ತೇನೆ, ಅನ್ನಲು; ದಳವಾಯಿಯು ಹೊರಟು ಹೋದನು. ಬಳಿಕ ಇವನು ಕೈ ಸೋರೇ ಬುರುಡೆಗಳನ್ನೆಲ್ಲಾ ತೆಗೆದು ಕೊಂಡು, ಕೆರೇ ಒಳಗೆ ಹೋಗಿ, ಆ ಬುರುಡೆಗಳನ್ನೆಲ್ಲಾ ಅಲ್ಲಿ ತೇಲ ಬಿಟ್ಟು, ಇದ್ದ ಬಳಿಗೆ ಬಂದು, ಒಗೆಯುತ್ತಾ ಇದ್ದನು. ತಿರಿಗಿ ದಳವಾಯಿಯು ಬರುವದು;—ಅಗೋ, ಬುದ್ಧೀ, ಎಲ್ಲರು ಕೆರೇ ಒಳಗೆ ಈಜಿ ಬರುತ್ತಾರೆ, ನೋಡಿ, ಎನ್ನಲು; ದಳವಾಯಿಯು—ಎಲಾ, ಅಗಸಾ, ನೀನೊಂದು ಕೆಲಸಾ ಮಾಡು. ನಿನ್ನ ಬಟ್ಟೆಗಳನ್ನು ನನಗೆ ಕೊಟ್ಟು, ನನ್ನ ಬಟ್ಟೆಗಳನ್ನೆಲ್ಲಾ ನೀನು ತೊಟ್ಟು ಕೊಂಡು, ನನ್ನ ಕತ್ತಿಯನ್ನು ತಕ್ಕೊಂಡು, ಓಡಿ ಹೋಗಿ, ಹೊರ ಉಕ್ಕಡದ ಬಳಿಯಲ್ಲಿ ನಮ್ಮ ಕಡೆಯ ಓಲೇಕಾರರು ಇದ್ದಾರೆ. ಅವರನ್ನು ತಟ್ಟನೆ ಕರ ಕೊಂಡು ಬಾ. ಆ ವರಿಗೂ ನಿನ್ನರಿವೆ ನಾನು ಉಟ್ಟು ಕೊಂಡು, ಒಗೆಯುತ್ತಾ, ಬಂದ ಕಳ್ಳರ ಸಮುದಾಯಿಸಿ ಕೊಂಡು, ನಿಲ್ಲಿಸಿ ಕೊಂಡಿದ್ದೇನೆ, ಎನ್ನಲು;—ಇದು ಸರಿ, ಬುದ್ಧೀ. ಒಳ್ಳೇ ಉಪಾಯ ತೆಗದಿರಿ! ಕಳ್ಳರು ಶಿಕ್ಕಿದರು, ಬಿಡಿ! ಎಂದು ಹೇಳಿ, ತನ್ನ ಬಟ್ಟೆಗಳನ್ನು ದಳವಾಯಿಗೆ ಕೊಟ್ಟು, ಅವನ ಬಟ್ಟೆಗಳನ್ನು ತಾನು ಹೊದ್ದು ಕೊಂಡು, ಆತನ ಕತ್ತಿಯನ್ನು ತೆಗೆದು ಕೊಂಡು, ಓಡುತ್ತಾ, ಹೊರ ಉಕ್ಕಡದ ಬಳಿಗೆ ಬಂದು, ಓಲೇಕಾರರ ಹೋಬಳಿದಾರನನ್ನು ಕರೆದು—ಇಗೋ, ಸುಡುಗಾಡಿನ ಬಳೀ ಕೆರೆಯ

ಲ್ಲಿ ಕಳ್ಳನು ಅಗಸನ ಹಾಗೆ ಒಗೆಯುತ್ತಾನೆ. ನೀನು ಆಳ ಕಟ್ಟಿ ಕೊಂಡು, ಅ
ಲ್ಲಿಗೆ ಹೋಗಿ, ಅವನು ಏನು ಹೇಳಿ ಕೊಂಡಾಗ್ಯೂ, ನಂಬದೆ, ಹೋದ ಭರಕ್ಕೆ
ಹಿಂಗಟ್ಟುಮುರೀ ಕಟ್ಟಿ, ಜತನದಿಂದ ಕರ ಕೊಂಡು ಬಂದು, ಶೆರೆಮನೆಯಲ್ಲಿ
ಒಂದು ಕೊಠಡಿಯಲ್ಲಿ ಕೂಡಿ, ಹೊರ ಬೀಗಾ ಹಾಕಿ ಕೊಂಡು, ಅಲ್ಲಿಯೇ ನೀ
ವೆಲ್ಲಾ ಕಾದು ಇರಿ. ಬೆಳಗ್ಯೆ ಬಂದು, ವಿಚಾರಿಸುತ್ತೇನೆಂದು, ಅಪ್ಪಣೆ ಕೊಡ
ಲು;—ಬುದ್ಧೀ, ಅಪ್ಪಣೆಯು ಪ್ರಕಾರ, ಎಂದು, ಹೋದರು. ಇವನು ಅಡುಗೂ
ಲಜ್ಜಿಯ ಮನೆಗೆ ಬಂದು, ಮಲಗಿ ಕೊಂಡನು.

ಮುಂಜಾನೆ ಅಡುಗೂಲಜ್ಜಿಯು ತಿರಿಗಿ ಬಂದು,—ಅರಸು ಮಗನೇ, ಕೇಳು.
ನೆನ್ನೆ ರಾತ್ರೆ ಸೇನಾಪತಿಯು ಕಳ್ಳನ ಹಿಡ ತರಿಸಿ, ಶೆರೆಮನೆಯಲ್ಲಿ ಹಾಕಿಸಿದ್ಧಾನೆಂ
ದು, ಮಂತ್ರಿಯು ಕೇಳಿ, ಸಾವಾದೀಕರು ಸಹಿತವಾಗಿ ಶೆರೆಮನೇ ಬಳಿಗೆ ಬಂ
ದು, ಕುಳಿತು ಕೊಂಡು, ಬೀಗ ತೆಗಿಸಿ, ಕಳ್ಳನ ಹಿಡ ತರಿಸಿ, ನೋಡಿ,—ಕಳ್ಳನು
ದಳವಾಯಿಯನ್ನು ಈ ಅವಸ್ಥೆಗೆ ತಂದನೇ? ಎಂದು, ಬಹಳ ವ್ಯಸನ ಪಟ್ಟು,
ದಳವಾಯಿಯನ್ನು ಮನ್ನಿಸಿ, ಸಮಾಧಾನ ಗೊಳಿಸಿ, ಮನೆಗೆ ಕಳುಹಿಸಿ ಬಿಟ್ಟು,
ಈ ದಿನ ಕಳ್ಳನ ಹಿಡಿಯ ತಕ್ಕ ಬಗ್ಯೆ, ಮಂತ್ರಿಯು ತಾನೇ ಹೊರಡುತ್ತಾನಂತೆ
ಎಂದು, ಹೇಳಿದಳು. ಅರಸು ಮಗನು ಆ ದಿವಸ ಸಾಯಂಕಾಲವಾಗುವದು,
ಬಂದು, ಕೋಟೆಯ ಬುಡದ ಮೂಲೆಯಲ್ಲಿ ಒಂದು ಗುಡಸಲು ಮಾಡಿ ಕೊಂ
ಡು, ಬಿದುರು ಚೆಬ್ಬಲುಗಳಲ್ಲಿ ಒಂದಷ್ಟು ಭಂಗಿಸೊಪ್ಪು ಹೊಗೆಸೊಪ್ಪು ಎಲೆ ಅ
ಡಿಕೆ ಹುರಿಗಡ್ಲೆ ಉಪ್ಪುಗಡ್ಲೆ ಅವಲಕ್ಕಿ ಬೆಲ್ಲ ಸಹ ಇಟ್ಟು ಕೊಂಡು, ಮಿಣಮಿ
ಣನೆ ಉರಿಯುವ ಒಂದು ದೀಪ ಇಟ್ಟು ಕೊಂಡು, ಹರಕಂಗಿಯನ್ನು ತೊಟ್ಟು
ಕೊಂಡು, ಜೂಲು ರುಮಾಲು ಸುತ್ತಿ ಕೊಂಡು, ತೇಪೇ ಪಂಚೆ ಉಟ್ಟು ಕೊಂ
ಡು, ಕಂತೆ ಬೊಂತೆ ಬೈರವಾಸ ಹೊದ್ದು ಕೊಂಡು, ಮೇಲ್ಕಂಡ ಸಾಮಾನುಗ
ಳನ್ನು ಇಡುವದಕ್ಕೆ ಒಂದು ಪೆಟ್ಟಿಗೆಯನ್ನು ಇಟ್ಟು ಕೊಂಡು, ಬಡ ಕೋಮ
ಟಿಗನಂತೆ ಮಾರುವವನೋಪಾದಿಯಲ್ಲಿ ಕೂತು ಇದ್ದನು. ಆ ದಿವಸ ಝಾಮ
ರಾತ್ರಿಯಲ್ಲಿ ಸಕಲಾತಿ ಗೋಟು ಮುಸುಕು ಹಾಕಿ ಕೊಂಡು, ಪ್ರಧಾನಿಯೊಬ್ಬ
ನೇ ಇವನ ಗುಡಸಲಿನ ಬಳಿಗೆ ಬರುತ್ತಾ ಇರುವಲ್ಲಿ, ಇವನು ದೂರದಲ್ಲಿಯೇ
ಕಂಡು, ಒಂದು ತಟ್ಟೆಯಲ್ಲಿ, ಚಿಗರೆಲೆ, ಅಡಿಕೆ, ಲವಂಗ, ಜಾಜಿಕಾಯಿ, ದ್ರಾ
ಕ್ಷಿ, ಬಿಳೀ ಕಲ್ಲುಸಕ್ಕರೆ, ನಿಂಬೆ ಹಣ್ಣು ಸಹ ಇಟ್ಟು ಕೊಂಡು, ನಡುವನ್ನು
ಬೊಗ್ಗಿಸಿ ಕೊಂಡು, ತಲೆಯನ್ನು ನಡುಗಿಸುತ್ತಾ, ಎದಿರಿಗೆ ಬಂದು, ಕೈಗಾಣಿಕೆ
ಯನ್ನು ಕೊಟ್ಟು, ಅಡ್ಡ ಬಿದ್ದು,—ನಾನು ಪರಸ್ಥಳದ ಬಡ ಕೋಮಟಿಗನು.

ಈ ಊರಿಗೆ ಬಂದು, ಎರಡು ತಿಂಗಳಾಯಿತು. ಎರಡು ತಿಂಗಳಿಂದ ಈ ಊರ ಶೆಟ್ರು ಪಟ್ಣಶೆಟ್ರು ಯಜಮಾನರಿಗೆ ಸಹ–ಒಂದು ಅಂಗಡಿ ಮಾಡಿಸಿ ಕೊಡಿ ಎಂದು, ಹೇಳಿ ಕೊಂಡಾಗ್ಯೂ, ಬಡವನ ಮಾತು ಗಣನೆಗೆ ತರಲಿಲ್ಲ. ಒಂದು ವೇಳೆ ಸ್ವಾಮಿಯವರ ಅಪ್ಪಣೆ ಆಗ ಬೇಕೆಂದು, ಬೇಡಿ ಕೊಳ್ಳಲು;–ಒಳ್ಳೇದು, ಎಂದು, ಪ್ರಧಾನಿಯು ಹೇಳಿ, ಮುಂದಕ್ಕೆ ಹೋದನು. ಇವನು ಹಿಂದಕ್ಕೆ ಬಂದವನ ಹಾಗೆ ಸ್ವಲ್ಪ ದೂರ ಬಂದು, ತಿರಿಗಿ ಪ್ರಧಾನಿಯು ಬಳಿಗೆ ಹೋಗಿ, ಬಟ್ಟೆಯಲ್ಲಿ ಬಾಯಿ ಮುಚ್ಚಿ ಕೊಂಡು, ಮೆಲ್ಲಗೆ–ಕಳ್ಳನ ಹಿಡಿಯ ತಕ್ಕ ಬಗ್ಯೆ ದಯ ಮಾಡಿದ್ದಾಗಿ ಕೇಳುತ್ತೇನೆ. ಈಗ ಹದಿನೈದು ದಿವಸದಿಂದ ಅರ್ಧ ರಾತ್ರಿಯಲ್ಲಿ ಒಬ್ಬ ಬಂದು, ಭಂಗಿಸೊಪ್ಪು ಮುಂತಾದ್ದು ತೆಗೆದು ಕೊಂಡು ಹೋಗುತ್ತಾನೆ. ಅವನ ಚಾಳೀ ನೋಡಿದರೆ, ಕಳ್ಳನಂತೆ ಕಾಣಿಸುತ್ತಾನೆ. ಒಂದು ಪಾವಡೆಯಲ್ಲಿ ನಾಲ್ಕು ಹವಳದ ಮಂಚದ ಕಾಲನ್ನು ಕಟ್ಟಿ, ಸದಾ ಹೆಗಲಿಗೆ ತಗಲ ಹಾಕಿ ಕೊಂಡಿದ್ಧಾನೆ, ಅಂದನು. ಅವನನ್ನು ಹಿಡಿದು ಕೊಟ್ಟೇಯಾ? ಎಂದು, ಪ್ರಧಾನಿಯು ಕೇಳಲು; ಇವನು–ಅದಕ್ಕೊಂದುಪಾಯ ಮಾಡಬೇಕು. ದಯ ಮಾಡಿ ಎಂದು, ತನ್ನಗುಡಿಸಲಿನ ಬಳಿಗೆ ಕರ ಕೊಂಡು ಹೋಗಿ, ತಾವು ಈ ಪೆಟ್ಟಿಗೆಯಲ್ಲಿ ಮಲಗಿ ಕೊಂಡಿರಿ. ಆ ಕಳ್ಳ ಬಂದು, ಏನಾದರೂ ವ್ಯಾಪಾರವನ್ನು ಕೇಳುವಾಗ–ಆ ಪೆಟ್ಟಿಗೆಯಲ್ಲಿ ಅದೆ; ತಕ್ಕೋ, ಅನ್ನುತ್ತೇನೆ. ಅವನು ಬಂದು, ಮುಚ್ಚಳ ತೆಗಿಯುವಾಗ, ಸ್ವಾಮಿಯವರು ಅವನ ಜುಟ್ಟು ಹಿಡು ಕೊಂಡರೆ, ಹವಳದ ಮಂಚದ ಕಾಲು ಸಹಿತ ಶಿಕ್ಕುತ್ತಾನೆ, ಅನ್ನಲು; ಅವನು ಪೆಟ್ಟಿಗೆಯೊಳಗೆ ಮಲಗಿ ಕೊಂಡನು. ಇವನು ಎರಡು ಘಳಿಗೆಯ ಮೇಲೆ ಆ ಪೆಟ್ಟಿಗೆಯ ಬೀಗಾ ಹಾಕಿ, ಬೀಗಕ್ಕೆ ಮುದ್ರೆ ಹಾಕಿ, ಅಲುಗದಂತೆ ತಲೆಯ ಮೇಲೆ ಹೊತ್ತು ಕೊಂಡು, ಕೋಟೆಯ ಮೇಲೆ ಹತ್ತಿ, ಅಗಳಿಗೆ ಎತ್ತಿ ಹಾಕಿ ಬಿಟ್ಟು, ಅಡುಗೂಲಜ್ಜಿಯ ಮನೆಗೆ ಶೇರಿದನು.

ಪ್ರಾತಃಕಾಲದಲ್ಲಿ ಸುತ್ತಿ, ಅಡುಗೂಲಜ್ಜಿಯು–ಕೇಳಪ್ಪ, ಧೊರೆಯ ಮಗನೇ, ಬೆಳಗ್ಯೆ ಮಂತ್ರಿಯು ಚಾವಡಿಗೆ ಬಾರದ್ದರಿಂದ, ಕಳ್ಳ ಏನು ಮಾಡಿದನೋ ಎಂದು, ಅರಸು ಚಿಂತೆ ಪಟ್ಟು, ಎಲ್ಲಿ ಹುಡುಕಿಸಿದಾಗ್ಯೂ, ಶಿಕ್ಕಲಿಲ್ಲವಂತೆ. ಅಗಳಲ್ಲಿ ಏನೋ ಒಂದು ಪೆಠಾರಿ ತೇಲುವ ಸುದ್ದಿಯನ್ನು ಕೇಳಿ, ಅದನ್ನು ಚಾವಡಿಗೆ ತರಿಸಿ, ನೋಡುವಲ್ಲಿ, ಅದರಲ್ಲಿ ಮಲಗಿ ಇದ್ದನಂತೆ. ಆಗ ಅರಸು ನೊಂದು ಕೊಂಡು, ಮಂತ್ರಿಯನ್ನು ಮನೆಗೆ ಕಳುಹಿಸಿ, ತಾನು ಬಹಳ ಚಿಂತೆಯಿಂದ ಅನ್ನ ನೀರನ್ನು ಬಿಟ್ಟು, ಮಲಗಿ ಕೊಂಡನಂತೆ. ಈ ಸುದ್ದಿಯನ್ನು ಅರಸಿನ ಮಗಳು

ವಿದ್ಯಾಮಂಜರಿಯು ಮೊದಲಿಂದ ವಿಸ್ತರವಾಗಿ ಕೇಳಿ, ಇವೆಲ್ಲಾ ತನ್ನ ಮ
ನೋ ನಿಶ್ಚಿತ ಪತಿಯಾದ ರಾಜ ಕುಮಾರನ ಕೆಲಸವೆಂದು ನಿಶ್ಚೈಸಿ, ತಂದೆ
ಯ ಬಳಿಗೆ ಬಂದು—ಅಪ್ಪಾಜಿಯವರೇ, ಇದಕ್ಕೆ ಯಾಕೆ ಚಿಂತೆ ಪಡುತ್ತೀರಿ?
ಆ ಕಳ್ಳ ಇಂಥವ ಎಂಬುವದು ನನಗೆ ತಿಳಿಯುವದು. ಈ ಹೊತ್ತಿಗೆ ನಾಲ್ಕು
ದಿವಸದಲ್ಲಿ ಹಿಡಿದು ಕೊಡುತ್ತೇನೆ. ಹವಳದ ಮಂಚದ ಕಾಲನ್ನು ಯಾವನು
ತಂದು ಕೊಡುತ್ತಾನೋ, ಅವನನ್ನು ನನ್ನ ಮಗಳು ಗಂಡನಾಗಿ ಮಾಡಿ ಕೊಳ್ಳು
ತ್ತಾಳೆಂದು, ಈ ಪಟ್ಟಣದೊಳಗೆಲ್ಲಾ ಸಾರಿಸು, ಅಂದಳಂತೆ. ಇಗೋ, ದಂ
ಡೋರಾ ಹಾಕಿ, ಸಾರಿ ಕೊಂಡು ಬರುತ್ತಾರೆ, ಅಂದಳು. ಅದನ್ನು ಕೇಳಿ,
ಅರಸು ಮಗನು ಆಯುಷ್ಕರ್ಮವನ್ನು ಮಾಡಿ ಕೊಂಡು, ಸ್ನಾನಾ ಮಾಡಿ, ದಿ
ವ್ಯಾಂಗರಾಗಗಳನ್ನು ಪೂಸಿ ಕೊಂಡು, ದಿವ್ಯ ವಸ್ತ್ರಗಳನ್ನುಟ್ಟು, ದಿವ್ಯಾಭರಣ
ಗಳನ್ನು ತೊಟ್ಟು, ತಾಂಬೂಲವನ್ನು ಹಾಕಿ ಕೊಂಡು, ಮದುವೆಗೆ ತೆರಳುವ
ಹೊಸ ಮದವಣಿಗನ ಹಾಗೆ ಬಂದು, ಹವಳದ ಮಂಚದ ಕಾಲನ್ನು ತೆಗೆದು
ಕೊಂಡು, ವಿದ್ಯಾಮಂಜರಿಯ ಅರಮನೆಗೆ ಹೋಗಲು; ಆಕೆ ಎದ್ದು, ಕಾಲ
ನ್ನು ತೊಳೆದು, ತನ್ನ ಶೀರೆಯ ಸೆರಗಿಸಿಂದ ಒತ್ತಿ, ಕೈ ಹಿಡಿದು ಕೊಂಡು, ಹೋ
ಗಿ, ಮಂಚದ ಮೇಲೆ ಕೂರಿಸಿ, ಪುಷ್ಪ ಮಾಲಿಕೆಯನ್ನು ಕೊರಳಿಗೆ ಹಾಕಿ,
ಆತ ಕೊಟ್ಟ ಹವಳದ ಮಂಚದ ಕಾಲನ್ನು ತೆಗೆದು, ಇಟ್ಟು, ಇಬ್ಬರು ಕೂಡಾ
ಉಂಡು, ರಾತ್ರೆ ಮಲಗಿ ಇದ್ದು, ಕೋಳಿ ಕೂಗುವ ಹೊತ್ತಿನಲ್ಲಿ ಎದ್ದು, ಹೊ
ರಟು, ಅರಸು ಮಗನನ್ನು ತಲೆ ಬಾಗಲಿನ ತನಕ ಕಳುಹಿಸಿ, ಆಲಿಂಗಿಸಿ,—ನೀನೆ
ನಗೆ ಗಂಡನಾದ್ದರಿಂದ, ಪ್ರತಿ ರಾತ್ರಿ ಹೀಗೆ ದಯ ಮಾಡ ಬೇಕೆಂದು ಹೇಳಿ,
ಕಳುಹಿಸಿ ಕೊಟ್ಟಳು. ಅರಸು ಮಗನು ಇದೇ ರೀತಿಯಲ್ಲಿ ಮೂರು ದಿವಸ
ಮೂರು ಹವಳದ ಮಂಚದ ಕಾಲನ್ನು ಕೊಟ್ಟು, ಮಲಗಿದ್ದು, ಬಂದು, ನಾಲ್ಕನೇ
ದಿವಸ ಮಂಚದ ಕಾಲನ್ನು ತೆಗೆದು ಕೊಂಡು, ಹೋಗುವಾಗ್ಯೆ, ಪೇಟೆಯಲ್ಲಿ ಬಾ
ಗಲು ಹಾಕಿ ಕೊಂಡು, ಬಂದವರಿಗೆ ಕಿಟಕಿಯಲ್ಲಿ ವ್ಯಾಪಾರ ಕೊಡುವ ಒಬ್ಬ
ಮುದಿ ಕೋಮಟಿಗನ ಅಂಗಡಿಗೆ—ಒಂದು ಕಾಸಿಗೆ ಎಲೆ ಕೊಡು, ಎಂದು ಕೇಳಿ
ದ್ದಕ್ಕೆ ಅವನು ಕಿಟಕಿಯಲ್ಲಿ ಕೈ ನೀಡಿ ಕೊಡಲು; ಅವನ ಹಸ್ತವನ್ನು ಕಡ ಕೊಂ
ಡು, ವಿದ್ಯಾಮಂಜರಿಯ ಮನೆಗೆ ಹೋಗಿ, ನಾಲ್ಕನೇ ಮಂಚದ ಕಾಲನ್ನು ಕೊ
ಟ್ಟು, ಆ ದಿವಸ ಸ್ವಲ್ಪ ಹೊತ್ತು ಹೆಚ್ಚಾಗಿ ಅವಳ ಕಡೆಯಿಂದ ವೀಣಾಗಾನವನ್ನು
ಕೇಳುತ್ತಾ, ಆ ಮೇಲೆ ಮಲಗಿ ಕೊಂಡನು. ಆಗ ಅವಳು ಇವನ ಕೈಯ ನಡು
ಬೆರಳನ್ನು ಹಿಡಿದು ಕೊಂಡು, ಮಲಗಿದಳು. ಇವನು ಆಕೆಗೆ ಅತಿ ನಿದ್ದೆಯಾ

ದ ಸಮಯದಲ್ಲಿ, ತನ್ನ ಬೆರಳನ್ನು ಸೆಳ ಕೊಂಡು, ತಂದಿದ್ದ ಕೋಮಟಿಗನ ಹಸ್ತದ ಮಧ್ಯಮಾಂಗುಲಿಯನ್ನು ಆಕೆ ಹಿಡು ಕೊಳ್ಳುವದಕ್ಕೆ ಕೊಟ್ಟು, ಅವಳಿಗೆ ನಿದ್ರೆ ಬರುವ ತನಕ ಆ ಹಸ್ತವನ್ನು ತನ್ನ ಕೈಯಲ್ಲಿ ಹಿಡು ಕೊಂಡಿದ್ದು, ಅವಳಿಗೆ ನಿದ್ರೆ ಬರುವದು, ಆ ಹಸ್ತವನ್ನು ಬಿಟ್ಟು, ಮೆಲ್ಲಗೆ ಎದ್ದು, ತಾನು ಕೊಟ್ಟು ಇದ್ದ ಮಂಚದ ಕಾಲನ್ನೂ ಇನ್ನು ಅಲ್ಲಿದ್ದ ಒಡವೆ ವಸ್ತುಗಳನ್ನೂ ತೆಗೆದು ಕೊಂಡು, ಬಾಗಲು ಬಿಟ್ಟು, ಪಾಗರದಿಂದ ಇಳೀ ಬಿದ್ದು, ಹೊರಗೆ ಬಂದು, ಅಡುಗೂಲಜ್ಜಿಯ ಗುಡುಸಲು ಸೇರಿ ಕೊಂಡನು.

ಮುಂಜಾನೆ ಮೊದಲಿನಂತೆ ಅಡುಗೂಲಜ್ಜಿ ತಿರಿಗಿ ಬಂದು, ನಗುತ್ತಾ—ಕೇಳು, ರಾಜ ಕುಮಾರಾ! ಈ ದಿನ ಬೆಳಗ್ಯೆ ರತ್ನಮಂಜರಿಯು ತಂದೆಯ ಬಳಿಗೆ ಬಂದು, ಕಳ್ಳನು ನಾಲ್ಕು ದಿನದಿಂದ ಮಾಡಿದ ಸಂಗತಿಯೆಲ್ಲಾ ಹೇಳಿ,—ಈ ಪಟ್ಣದಲ್ಲಿ ಹೊಸತ್ತಾಗಿ ಕಡದಿರುವ ಹಸ್ತವುಳ್ಳವನು ಯಾವನೋ, ಅವನೇ ಕಳ್ಳನೆಂದು ಹೇಳಿದಳಂತೆ. ಅರಸು ಗೊತ್ತು ಮಾಡಿಸಿ, ಕರಿಸಿ, ವಿಚಾರಿಸುವಲ್ಲಿ, ಆ ಮುದಿ ಕೋಮಟಿಗನು ತನ್ನ ಕಡದ ಹಸ್ತದ ಸಂಗತಿಯನ್ನು ಹೇಳುವದು, ಇವನು ಕಳ್ಳನಲ್ಲ ಎಂದು ಬಿಟ್ಟು ಬಿಟ್ಟು, ಅನ್ನಾ ಬಿಟ್ಟು, ಪ್ರಾಣಾ ಕಳ ಕೊಳ್ಳುತ್ತೇನೆಂದು ಬಿದ್ದು ಇದ್ದಾನಂತೆ ಎಂದು ಹೇಳುವದು; ರಾಜ ಕುಮಾರನು ಅರಸಿನ ಅರಮನೆಯ ಮುಂದೆ ಒಂದು ಗುಡಾರವನ್ನು ಹಾಕಿಸಿ ಕೊಂಡು, ತಾನು ಆ ಪಟ್ಟಣದಲ್ಲಿ ಕದ್ದ ಪದಾರ್ಥಗಳ ಯಾವತ್ತನ್ನು ಹರವಿ ಕೊಂಡು, ಸರ್ವಾಲಂಕಾರ ಭೂಷಿತನಾಗಿ ದಿಂಬು ಒರಗಿ ಕೊಂಡು, ಘನ ವರ್ತಕನಂತೆ ಕೂತು ಕೊಂಡು ಇದ್ದನು. ಇದನ್ನು ಕೇಳಿ, ಅರಸು ಅತ್ಯಾಶ್ಚರ್ಯ ಗೊಂಡು, ಮಂತ್ರಿ ಮೊದಲಾದ ಸಾಮಾದಿಕರು ಕೂಡಿ, ಆ ಬಳಿಗೆ ಬರಲು; ಈ ರಾಜ ಕುಮಾರನು ಎದುರಾಗಿ ಎದ್ದು, ಬಂದು, ಮಾವನಾದ ಅರಸಿನ ಪಾದಗಳಿಗೆ ಸಾಷ್ಟಾಂಗವೆರಗಲು, ಅರಸು—ಇವನೇ ಅಳಿಯನು. ಮಗಳಿಗೆ ಸಕಲ ವಿದ್ಯಗಳಲ್ಲಿ ಪರೀಕ್ಷೆಯನ್ನು ಕೊಡುವ ನಿಮಿತ್ಯ ಹೀಗೆ ಮಾಡಿದನೆಂದು ತಿಳಿದು, ಅಳಿಯನನ್ನು ಆಲಿಂಗಿಸಿ ಕೊಂಡು, ಇವನ ಗುಡಾರದಲ್ಲಿ ಇದ್ದದ್ದನ್ನು ಬೊಕ್ಕಸದಲ್ಲಿ ಇಡಿಸಿ, ಮನೆಗೆ ಕರ ಕೊಂಡು ಹೋಗಿ, ಭೋಜನಾದಿಗಳನ್ನು ಮಾಡಿಸಿ, ಇವನ ತಂದೆಯಾದ ಅಮರಾವತಿ ಪಟ್ಟಣದ ಅಮರಶೇಖರ ರಾಯನಿಗೆ ಲಗ್ನ ಪತ್ರಿಕೆ ಬರಿಸಿ, ಎಲ್ಲರನ್ನು ಕರಿಸಿ ಕೊಂಡು, ಶುಭ ಮುಹೂರ್ತದಲ್ಲಿ ಶಾಸ್ತ್ರೋಕ್ತ ಪ್ರಕಾರ ವಿದ್ಯಾಮಂಜರಿಗೆ ಮದುವೆಯನ್ನು ಮಾಡಿಸಿದನು. ಆ ಬಳಿಕ ಮಾವ ತಂದೆ ಸಹ ಅಳಕಾವತೀ ದೇಶಕ್ಕೂ ಅಮರಾವತೀ ದೇಶಕ್ಕೂ ರಾಜ ಕುಮಾರನಿಗೆ ಪಟ್ಟಾಭಿಷೇಕ

ವನ್ನು ಮಾಡಿ, ಬೀಗರೀಬ್ಬರೂ ತಮ್ಮ ತಮ್ಮ ಪತ್ನಿ ಸಮೇತರಾಗಿ ನೈಮಿಶಾತಣ್ಯಕ್ಕೆ ತಪಸ್ಸಿಗೆ ಹೋದರು.

50. The Story of Chanda Parakrami and Haridatta.

೫೦. ಚಂಡಪರಾಕ್ರಮಿ ಹರಿದತ್ತರ ಕಥೆ.

ರಾಜೀವಪುರವೆಂಬ ಅಗ್ರಹಾರದಲ್ಲಿ ದೇವದಾಸನೆಂಬ ಒಬ್ಬ ಬ್ರಾಹ್ಮಣನಿದ್ದನು. ಆತನ ಹೆಂಡತಿ ದೇವದಾಸಿ ಎಂಬವಳು ಮಹಾ ಪತಿವ್ರತೆಯಾಗಿ, ಒಂದು ವೇಳೆಯಲ್ಲಿಯಾದರೂ ಗಂಡನಾಜ್ಞೆಯನ್ನು ಮೀರದೆ, ಆತನ ಶುಶ್ರೂಷೆಯನ್ನು ಮಾಡಿ ಕೊಂಡಿದ್ದಳು. ಆ ಬ್ರಾಹ್ಮಣನು ಪ್ರತಿ ದಿನದಲ್ಲಿಯೂ ಬಂದಂಥಾ ಅತಿಥಿ ಅಭ್ಯಾಗತರಿಗೆ ಅಕ್ಕರದಿಂದ ವಿತ್ತಶಾಠ್ಯವನ್ನು ಮಾಡದೆ, ತನ್ನಲ್ಲಿ ಇದ್ದದ್ದನ್ನು ವಂಚಿಸದೆ, ಊಟ ಉಪಚಾರಗಳನ್ನು ಮಾಡಿಸುತ್ತಾ ಇದ್ದನು. ಹೀಗಿರುವಲ್ಲಿ, ಒಂದು ದಿವಸ ರಾತ್ರಿಯಲ್ಲಿ ಹೆಂಡತಿಯು ಗಂಡನೊಡನೆ—ಸ್ವಾಮೀ, ಪತಿಯೇ, ಮಕ್ಕಳಿಲ್ಲದವರಿಗೆ ಗತಿ ಇಲ್ಲವೆಂದು, ಸಕಲ ವೇದ ಶಾಸ್ತ್ರಗಳು ಹೇಳುತ್ತಲಿವೆ ಎಂದು, ದೊಡ್ಡವರು ಹೇಳುತ್ತಾರೆ. ನನಗೆ ದೇವರು ಮಕ್ಕಳನ್ನು ಕೊಡಲಿಲ್ಲವಲ್ಲಾ! ಮುಂದೆ ಏನು ಗತಿ? ಎಂದು ಕೇಳಿ ಕೊಂಡಳು. ಗಂಡನು—ನೀನು ಹೇಳಿದ್ದು ನಿಜ. ಆದರೆ ಮಕ್ಕಳಿಂದ ದುಃಖವೇ ಹೊರತು, ಸುಖ ಬೇರೆ ಕಾಣುವದಿಲ್ಲ. ಹಿಂದೆ ಮಕ್ಕಳನ್ನು ಹೆತ್ತು, ದಶರಥ ಮುಂತಾದವರು ಬಹಳ ದುಃಖ ಪಟ್ಟದ್ದು ನೀನು ಕೇಳಿ ಅರಿಯಾ? ಆ ವ್ಯಸನವನ್ನು ಬಿಟ್ಟು, ಮನೆಗೆ ಬಂದವರಿಗೆ ಗಂಗೋದಕಾನ್ನಾದಿಗಳಿಂದ ಆದರಗೈಯುತ್ತಾ, ದೇವರ ಧ್ಯಾನವನ್ನು ಮಾಡಿ ಕೊಂಡು ಇದ್ದರೆ, ದೇವರು ತನ್ನ ಭಕ್ತರೆಂದು ತನ್ನ ಪಾದಾರವಿಂದವನ್ನು ಶೇರಿಸಿ ಕೊಳ್ಳುತ್ತಾನೆ. ಭಯ ಪಡ ಬೇಡ. ಮಕ್ಕಳಿಲ್ಲದವರಿಗೆ ಗತಿ ಇಲ್ಲವೆಂದು ಒರಳುವ ವೇದ ಶಾಸ್ತ್ರಗಳು ಕರ್ಮ ನಿಷ್ಠರಿಗೆ ಹೇಳಿದವೇ ಹೊರತು ಜ್ಞಾನನಿಷ್ಠರಿಗೆ ಅಲ್ಲ. ಜ್ಞಾನನಿಷ್ಠರಿಗೆ, ದೇವರನ್ನು ನಂಬಿ ಕೊಂಡು, ದೇವರ ಧ್ಯಾನವನ್ನು ಮಾಡಿ ಕೊಂಡಿರುವದೇ ಮೋಕ್ಷಕ್ಕೆ ಸಾಧನವೆಂದು ನಿಶ್ಚಯವು, ಎಂದು ಹೇಳಿದನು. ಆ ಹೆಂಡತಿಯು—ಸ್ವಾಮೀ, ನೆರೆ ಹೊರೆಯವರೆಲ್ಲಾ ನನ್ನನ್ನು—ಇವಳು ಬಂಜೆಯು; ಇವಳ ಕೈಯಲ್ಲಿ ನೀರು ಮುಟ್ಟ ಬಾರದೆಂದು ಹೀಹಾಳಿಸುತ್ತಾರಲ್ಲ? ನನಗೆ ನಾಚಿಕೆ ಆಗುತ್ತದಲ್ಲ? ದೇವರ ಧ್ಯಾನವನ್ನೇ ಚನ್ನಾಗಿ ಮಾಡಿ, ನನ್ನ ಬಂಜೆತನವನ್ನು ಪರಿಹರಿಸಿ ಕೊಡ ಬೇಕೆಂದು, ಬಹು ತರವಾಗಿ ಗಂಡನನ್ನು ಬೇಡಿ ಕೊಂಡಳು. ಆಗ ಗಂಡನು ಆಕೆಯ ದುಃಖವನ್ನು ನೋಡಿ, ಕನಿಕರದಿಂದ ನಿತ್ಯದಲ್ಲಿಯೂ ದೇವರನ್ನು ಸ್ತುತಿಸುತ್ತಾ, ಮಕ್ಕಳಪೇಕ್ಷೆ

ಯುಳ್ಳ ಈ ನನ್ನ ಹೆಂಡತಿಗೆ ಮಕ್ಕಳನ್ನು ದಯಪಾಲಿಸ ಬೇಕೆಂದು ಬೇಡಿ ಕೊಳ್ಳುತ್ತಾ ಇದ್ದನು.

ಹೀಗಿರುವಲ್ಲಿ, ಒಂದಾನೊಂದು ದಿವಸ ಮುಂಜಾನೆ, ಹೆಂಡತಿಯು ಎದ್ದು, ಬಂದು, ಗಂಡನಿಗೆ ನಮಸ್ಕಾರವನ್ನು ಮಾಡಿ—ಸ್ವಾಮಿ, ಪತಿಯೇ, ನೆನ್ನೆ ರಾತ್ರೆ ದೇವರು ಕನಸಿನಲ್ಲಿ ಬಂದು, ನನ್ನ ಕೈಯಲ್ಲಿ ಒಂದು ಬಿರಿದಿರುವ ದಾಳಿಂಬದ ಹಣ್ಣನ್ನು ಕೊಟ್ಟು, ಹೋದನು. ಅದನ್ನು ನಾನು ತಿನ್ನ ಬೇಕೆಂದು, ಕೈಯಲ್ಲಿಟ್ಟು ಕೊಂಡು, ನೋಡುತ್ತಿರುವಷ್ಟರಲ್ಲಿಯೇ, ಆ ಹಣ್ಣು ಮಾಯವಾಯಿತು. ಹಾಗೆ ಕೋಳಿ ಕೂಗುವದು ನಾನು ಎದ್ದು, ಬಂದೆನು ಎಂದು ಹೇಳಿದಳು. ಅದಕ್ಕೆ ಗಂಡನು—ನಿನಗೆ ಮಗನನ್ನು ದೇವರು ಕೊಡುವನೆಂದು ಸಂತೋಷ ಪಡಿಸಿ, ಕಳುಹಿಸಿದನು. ಕೆಲವು ದಿವಸದ ಮೇಲೆ ಆಕೆಯು ಬಸುರಾಗಿ, ಗಂಡು ಮೊಗುವನ್ನು ಹೆತ್ತಳು. ಆ ಮೊಗುವು ಹುಟ್ಟಿದ ಏಳನೇ ದಿವಸದಲ್ಲಿ ತಂದೆಯಾದ ದೇವದಾಸನು ಸತ್ತು ಹೋದ್ದರಿಂದ, ದೇವದಾಸಿಯು—ಮೊದಲೇ ಮಗನ ಹಾರೈಸ ಬೇಡವೆಂದು ಹೇಳಿದನು. ನಾನು ಕೇಳದೆ, ಗಂಡನನ್ನು ಕೊಂದು, ಮುಂಡೆಯಾದೆನು. ಮುಂದೇನು ಗತಿ? ಚನ್ನಾಗಿ ಬದುಕಿದ್ದ ಊರಿನಲ್ಲಿ ತಿರಿದು, ಉಣ್ಣುವದು ಉಚಿತವಲ್ಲವೆಂದು ಯೋಚಿಸುತ್ತ, ಕೂಸಿಗೆ ಮೂರು ತಿಂಗಳಾಗುವ ವರಿಗೂ ಮನೆಯಲ್ಲಿ ಇದ್ದ ಬದ್ದದ್ದನ್ನೆಲ್ಲಾ ಮಾರಿ, ತಿಂದು, ಆ ಮೇಲೆ ಕೂಸನ್ನು ಎತ್ತಿ ಕೊಂಡು, ದೇಶಾಂತರಕ್ಕೆ ಹೊರಟು ಬರುವ ದಾರಿಯಲ್ಲಿ ಬಿಸಿಲಿನಿಂದ ಕಂಗೆಟ್ಟು, ಬಾಯಾರಿ, ಬಸವಳಿದು, ನೀರ್ಗುಡಿವೆನೆಂದು ಕೂಸಿಗೆ ಮೊಲೆಯನ್ನೂಡಿ, ಒಂದು ಮರದ ನೆಳಲಿನಲ್ಲಿ ಚಿಗುರನ್ನು ಹಾಸಿ, ತಟ್ಟಿ, ಮಲಗಿಸಿ, ನೀರನ್ನು ಅರಸಿ ಕೊಂಡು, ಸಮೀಪದಲ್ಲಿ ನೀರನ್ನು ಕಾಣದೆ, ದೂರ ಹೋಗಿ, ಒಂದು ಕೊಳವನ್ನು ಕಂಡು, ಅದರೊಳಗೆ ಮಿಂದು, ನೀರು ಕುಡಿದು, ನೀರಡಿಕೆಯನ್ನು ತಗ್ಗಿಸಿ ಕೊಂಡು ಬರುವಷ್ಟರಲ್ಲಿಯೇ, ಆ ಕಾಡಿಗೆ ಬೇಟೆಗೆ ಬಂದಿದ್ದ ಒಬ್ಬ ಬೇಡನು ಮರದ ಅಡಿಯಲ್ಲಿ ಚಿಗುರ ಹಾಸಿಗೆಯಲ್ಲಿ ತಳಿರ್ಗದಿರನಂತೆ ಮಲಗಿ, ಕಳಕಳಿಸುತ್ತಿರುವ ಮೊಗುವನ್ನು ಎತ್ತಿ ಕೊಂಡು ಬರುತ್ತಿರುವಲ್ಲಿ—ಎಲೈ, ಬೇಡನೇ, ಕೂಸು ಬ್ರಾಹ್ಮಣರ ಹೊಟ್ಟೆಯಲ್ಲಿ ಹುಟ್ಟಿದ್ದು; ನೀನಿಟ್ಟು ಕೊಳ್ಳ ಬೇಡ, ನಿನಗೆ ಬಹಳ ಮಕ್ಕಳಿರುವವು. ನಿಮ್ಮ ಕುಶಲಾವತೀ ಪಟ್ಟಣದ ಕುಶಲಬುದ್ಧಿ ಎಂಬ ಮಂತ್ರಿಗೆ ಮಕ್ಕಳಿಲ್ಲ. ಈ ಕೂಸನ್ನು ನೀನು ತೆಗೆದು ಕೊಂಡು ಹೋಗಿ, ಏಕಾಂತದಲ್ಲಿ ಕಂಡು, ಆತನಿಗೆ ಕೊಟ್ಟರೆ, ನಿನಗೆ ಆ ಪಟ್ಟಣದ ಸೇನಾಧಿಪತ್ಯವನ್ನು ಕೊಟ್ಟು, ಸನ್ಮಾನದಿಂದ ಇಟ್ಟು ಕೊಳ್ಳುವನೆಂದು, ಆಕಾಶವಾಣಿ ನುಡಿಯು

ಲು; ವ್ಯಾಧನು ಬಹಳ ಸಂತೋಷ ಪಟ್ಟು, ಪಟ್ಟಣಕ್ಕೆ ಹೋಗಿ, ಮಂತ್ರಿಯನ್ನು ಕಂಡು, ಅಂತರಂಗದಲ್ಲಿ ಆಕಾಶವಾಣಿ ನುಡಿದದ್ದನ್ನು ಹೇಳಿಕೊಡಲು; ಸಚಿವನು ಸಂತೋಷ ಪಟ್ಟು, ಅರಸಿನ ಚಾವಡಿಗೆ ಹೋಗಿ, ಸಭೆಯವರ ಮುಂದೆ ಈ ಬ್ಯಾಡನನ್ನೂ ಕೂಸನ್ನೂ ಕರ ಕೊಂಡು ಹೋಗಿ, ತೋರಿಸಿ, ಯಾವ ಯಾವದ್ವೃತ್ತಾಂತವನ್ನು ಬೇಡನ ಮುಖದಿಂದ ಬಿನ್ನಹವನ್ನು ಗೈಯಲು; ಅರಸು, ಸಭೆಯವರು ಸಹ, ಸಂತೋಷ ಪಟ್ಟು—ಮಕ್ಕಳಿಲ್ಲದ ನಿನಗೆ ಮಹಾ ದೇವನು ಮಗುವನ್ನು ಕೊಟ್ಟನು. ಚನ್ನಾಗಿ ಸಾಕು ಎಂದು ಹೇಳಿ, ಆ ವ್ಯಾಧನಿಗೆ ಅರಸು ತನ್ನ ಸೇನಾಧಿಪತ್ಯವನ್ನು ಕೊಟ್ಟು, ಇರಿಸಿ ಕೊಂಡನು.

ಇತ್ತಲಾ ದೇವದಾಸಿಯು ಮರದ ಬುಡಕ್ಕೆ ಬಂದು, ನೋಡಿ, ಮಗುವನ್ನು ಕಾಣದೆ—ಅಯ್ಯೋ, ದೇವರೇ! ನನ್ನ ಮೇಲೆ ನಿನಗಿಷ್ಟು ನಿಷ್ಕರುಣವ್ಯಾಕೆ? ನಾನೇನು, ನಿನಗೆ ಹಗೆಯೇ? ಜಗದೊಳಗೆ ಅನೇಕ ಜನರನ್ನು ಕಾಪಾಡುವ ನೀನು ನನ್ನನ್ನು ಈ ರೀತಿಯಲ್ಲಿ ಮೊದಲು ಮಗುವನ್ನು ಕೊಟ್ಟು, ಗಂಡನನ್ನು ಕೊಂದು, ಮಗುವನ್ನು ಮಾಯಾ ಮಾಡಿ, ಕಂಗೆಡಿಸಿದೆ. ನಾನು ಮಾಡಿದ ಪಾಪದಿಂದ ನನಗೆ ಇಷ್ಟು ಸಂಕಟವನ್ನು ತೋರಿಸಿದೆ. ಇನ್ನು ಮೇಲೆ ಗಂಡನನ್ನೂ ಮಗನನ್ನೂ ತಿಂದು ಕೊಂಡು, ಬಾಳುವ ನನ್ನ ಬಾಳು ಹೇಸಿಕೆಯಲ್ಲವೇ? ನಿನ್ನ ಪಾದಕ್ಕೆ ಈ ಕೆಟ್ಟ ದೇಹವನ್ನು ಬಲಿಯಾಗಿ ಒಪ್ಪಿಸುವೆನೆಂದು ಒಣಗಿದ ಸೌದೆಗಳನ್ನು ಒಟ್ಟಿ, ಚಿತೆಯನ್ನು ಮಾಡಿ, ಬೆಂಕಿಯನ್ನು ಹಚ್ಚಿಸಿ—ದೇವರೇ, ನನ್ನನ್ನು ನಿನ್ನ ಪಾದಾರವಿಂದದಲ್ಲಿ ಶೇರಿಸಿಕೋ ಎಂದು ಪ್ರಾರ್ಥನೆ ಮಾಡಿ, ಆ ಚಿತಿಯಲ್ಲಿ ಬೀಳುವದಕ್ಕೆ ಪ್ರದಕ್ಷಿಣವನ್ನು ಮಾಡುತ್ತಿರಲು; ಆಗ ದೇವರು ಕನಿಕರದಿಂದ ಸತ್ತು ಹೋಗಿದ್ದ ಈ ಗಂಡನ ಆತ್ಮನಿಗೆ ಬದಲು ದೇಹವನ್ನು ಪೂರ್ವದಲ್ಲಿದ್ದಂತೆ ಗೈದು, ಹೊಗಿಸಿ, ಆಕೆಯ ಮುಂದೆ ನಿಲ್ಲಿಸಿ—ಇಗೋ, ನಿನ್ನ ಗಂಡನು! ನಿನ್ನ ದುಖ್ಖಕ್ಕೆ ಮರುಗಿ, ಕೊಟ್ಟದ್ಧೇನೆ. ಇನ್ನು ಮೇಲೆ ಈ ಗಂಡನನ್ನು ಕೂಡಿ ಕೊಂಡು, ಈ ಕುಶಲಾವತಿ ಪಟ್ಟಣಕ್ಕೆ ಹೋಗಿ, ಸುಖವಾಗಿರು ಎಂದು ಹೇಳಿ, ಅದೃಶ್ಯನಾದನು. ಆಗ ದೇವದಾಸಿಯು ಆಶ್ಚರ್ಯ ಪಟ್ಟು, ಇದೆಲ್ಲಾ ದೇವರ ಚಿತ್ತವೆಂದು ತಿಳಿದು, ದೇವದಾಸನಿಗೆ ನಮುಸ್ಕರಿಸಿದಳು. ದೇವದಾಸನು ಹೆಂಡತಿಯನ್ನು ಮನ್ನಿಸಿ—ಈಗ ನಿನ್ನ ಬಂಜೆತನ ಹೋಯಿತೇ? ಮಕ್ಕಳಿಂದ ದುಃಖವೆಂದು ನಾನು ಹೇಳಿದ್ದು ತಾರ್ಕಣೆ ಬಂತೇ? ಇನ್ನು ಮೇಲಾದರೂ ಯಾವದನ್ನು ಅಪೇಕ್ಷಿಸದೆ, ದೇವರಿಗೆ ತೊಂದರೆಯನ್ನು ಕೊಡದೆ, ದೇವರು ಕೊಟ್ಟಷ್ಟರಲ್ಲಿ ಸಂತೋಷ ಪಟ್ಟು ಕೊಂಡು, ದೇ

ವರನ್ನು ನಿರಂತರವೂ ಪ್ರಾರ್ಥಿಸಿ ಕೊಂಡಿರುವೆಯಾ? ಎಂದು ಕೇಳಿದನು. ಆಗ ದೇವದಾಸಿಯು ತಮ್ಮಪ್ಪಣೆಯ ಮೇರೆಯೇ ನಡೆದು ಕೊಂಡು ಇರುವೆನೆಂದು ಹೇಳಿ, ಗಂಡನಿಗೆ ಸಾಷ್ಟಾಂಗವಾಗಿ ನಮಸ್ಕರಿಸಿದಳು. ತರುವಾಯ ದೇವದಾಸನು ಮಡದಿಯನೊಡಗೊಂಡು, ಕುಶಲಾವತಿ ಎಂಬ ಪಟ್ಟಣವನ್ನು ಶೇರಿ, ಒಂದು ಮನೆಯನ್ನು ಮಾಡಿ ಕೊಂಡು, ಉಂಛವೃತ್ತಿಯಿಂದ ಕಾಲಕ್ಷೇಪವನ್ನು ಮಾಡುತ್ತಾ, ದೇವರನ್ನು ಪ್ರಾರ್ಥಿಸಿ ಕೊಂಡಿದ್ದನು.

ಇತ್ತಲಾ ಕೂಸಿಗೆ ಕುಶಲಬುದ್ಧಿ ಎಂಬ ಮಂತ್ರಿಯು ಹರಿದತ್ತನೆಂಬ ಹೆಸರನ್ನಿಟ್ಟು, ಅತಿಶಯದಿಂದ ಕಾಪಾಡುತ್ತಿರಲಾಗಿ, ಆ ಶಿಶುವು ಬಿದಿಗೆಯ ಚಂದ್ರನಂತೆ ದಿನ ದಿನವು ಅಭಿವೃದ್ಧಿಯಾಗಿ ಬೆಳೆಯುತ್ತಾ, ತಂದೆ ತಾಯಿಗಳಿಗೆ ಬಾಲಲೀಲೆಯನ್ನು ತೋರಿಸುತ್ತಾ, ಸಂತೋಷ ಪಡಿಸುತ್ತಾ, ಅಂಬೆಗಾಲನ್ನು ಇಡುತ್ತಾ, ದಟ್ಟಡಿಯನ್ನು ಹಾಕುತ್ತಾ, ಜೊಲ್ಲನ್ನು ಸುರಿಸುತ್ತಾ, ತೊದಲು ನುಡಿಯನ್ನು ನುಡಿಯುತ್ತಾ, ನಿಷ್ಕಾರಣವಾಗಿ ನಗುತ್ತಾ, ಮೊಲೆ ಕೊಡೆಂದು ತಾಯಿಯನ್ನು ಕಾಡುತ್ತಾ, ಕೇಳಿದ್ದನ್ನು ಕೊಡದಿದ್ದರೆ ಅಳುತ್ತಾ, ಅಸಾಧ್ಯವಾದವುಗಳನ್ನು ಬೇಡುತ್ತಾ, ಅಸಂಗತವಾಗಿ ಅರ್ಧ ಮಾತುಗಳನ್ನು ಆಡುತ್ತಾ ಇರುವ ಮೊಗುವಿಗೆ ಐದು ವರುಷ ತುಂಬಲು; ಕುಶಲಬುದ್ಧಿಯು ಚೌಲಕರ್ಮವನ್ನು ಮಾಡಿ, ಓನಾಮ ಪೂಜೆಯನ್ನು ಗೈಸಿ, ಉಪಾಧ್ಯರ ಮಠಕ್ಕೆ ಹಾಕಲು; ಉಪಾಧ್ಯರ ಕಟ್ಟಲೆಯನ್ನು ಮೀರದೆ, ಕೆಟ್ಟ ಹುಡುಗರ ಜೊತೆಯಲ್ಲಿ ಆಡದೆ, ಕ್ಷಣವಾದರೂ ವ್ಯರ್ಥ ಕಾಲಕ್ಷೇಪವನ್ನು ಮಾಡದೆ, ಪ್ರಾಕೃತ ವಿದ್ಯೆಗಳನ್ನು ಕಲಿತು, ಛಪ್ಪನ್ನ ದೇಶಗಳ ಮಾತುಗಳನ್ನೂ ಬರಹಗಳನ್ನೂ ಕಲಿತ ಹುಡಗನಿಗೆ ಏಳು ವರುಷವಾಗಲು; ತಂದೆಯು ಗರ್ಭಾಷ್ಟಮದಲ್ಲಿ ಉಪನಯನವನ್ನು ಮಾಡಿ, ವೇದ ಶಾಸ್ತ್ರಗಳ ಅಭ್ಯಾಸಕ್ಕೆ ಸಕಲ ವಿದ್ಯಾ ಪಾರಂಗತರಾದ ಗುರುಗಳ ವಶಕ್ಕೆ ಒಪ್ಪಿಸಿದನು. ಈ ಹರಿದತ್ತನು ಮುಂಜಾನೆ ಎದ್ದು, ಕೆರೆ ತೊರೆ ಕಟ್ಟೆ ಕುಂಟೆ ಕೊಳ ಭಾವಿ ಮುಂತಾದ ಜಲ ತಾಣಗಳಲ್ಲಿ ಮಿಂದು, ಮಡಿಯನ್ನುಟ್ಟು, ದೇವರ ಧ್ಯಾನವನ್ನು ಮಾಡಿ, ಆಚಾರ್ಯರ ಸನ್ನಿಧಿಗೆ ಹೋಗಿ, ವೇದಾಧ್ಯಯನವನ್ನು ಮಾಡುತ್ತಾ, ಮಧ್ಯಾಹ್ನವಾಗುವದು ಗುರುಗಳಪ್ಪಣೆಯನ್ನು ತೆಗೆದು ಕೊಂಡು, ಭಿಕ್ಷಾಚರಣೆಯನ್ನು ಮಾಡಿ, ಆ ಭಿಕ್ಷಾನ್ನವನ್ನು ದೇವರ ಪ್ರಾರ್ಥನೆಯನ್ನು ಮಾಡಿ ಉಂಡು, ತಿರಿಗಿ ಪ್ರದೋಷಕಾಲದ ವರಿಗೂ ಅಧ್ಯಯನವನ್ನು ಮಾಡುತ್ತಾ, ಅನಾಧ್ಯಾಯ ದಿವಸಗಳಲ್ಲಿ ಕಾವ್ಯ ನಾಟಕಾದಿ ಅಲಂಕಾರ ಶಾಸ್ತ್ರಗಳನ್ನು ಕಲಿಯುತ್ತಾ, ಗುರುವಿಗೆ ಅಚ್ಚುಮೆಚ್ಚಾಗಿ ಹನ್ನೆರಡು ವರುಷ ಗುರು ಕುಲವಾ

ಸವನ್ನು ಮಾಡಿ, ಸಂಹಿತೆ ಪದ ಕ್ರಮ ಜಟೆ ಘನ ಮುಂತಾಗಿ ವೇದವನ್ನು ಕಲಿತಂಥಾ ಶಿಷ್ಯನನ್ನು ಗುರುವು ನೋಡಿ, ಸಂತೋಷದಿಂದ ಹರಿದತ್ತನನ್ನು ಕರಕೊಂಡು, ಮಂತ್ರಿಯ ಮನೆಗೆ ಬಂದು—ನಿನ್ನ ಮಗನು ಸಾಂಗವಾಗಿ ವೇದವನ್ನು ಕಲಿತು, ಘನ ಪಾಠಿ ಅನ್ನಿಸಿ ಕೊಂಡನು. ಶಾಸ್ತ್ರೋಕ್ತ ಪ್ರಕಾರ ಹನ್ನೆರಡು ವರುಷ ಗುರುಕುಲ ವಾಸವನ್ನೂ ಭಿಕ್ಷಾಚರಣೆಯನ್ನೂ ಮಾಡಿ, ಲೇಶವಾದರೂ ವ್ಯತ್ಯಾಸವಾಗಿ ನಡೆಯದೆ, ಬ್ರಹ್ಮಚರ್ಯ ವ್ರತದಲ್ಲಿ ಇದ್ದನು. ಇನ್ನು ಮೇಲೆ ವ್ರತಸಮಾವರ್ತನೆಯನ್ನು ಮಾಡಿಸೆಂದು ಹೇಳಿದನು. ಕುಶಲಬುದ್ಧಿಯು ಹರಿದತ್ತನ ಕಡೆಯಿಂದ ಗುರುದಕ್ಷಿಣೆಯನ್ನು ಕೊಡಿಸಿ, ಮಗನಿಗೆ ವ್ರತಸಮಾವರ್ತನೆಯನ್ನು ಮಾಡಿಸಿದನು.

ಆ ಬಳಿಕ ಹರಿದತ್ತನು ತಂದೆ ತಾಯಿಗಳಿಗೆ ನಮಸ್ಕಾರವನ್ನು ಮಾಡಿ, ಹೇಳಿದ್ದೇನಂದರೆ—ಸ್ವಾಮಿ, ತಂದೆಯೇ, ಲೋಕದಲ್ಲಿ ಯಾವ ಮನುಜನು ದೇಶಾಟನವನ್ನು ಮಾಡದೆ, ಪಂಡಿತರೊಡನೆ ಸಂಭಾಷಣೆ ಮಾಡದೆ ಇರುವನೋ, ಅವನ ಬುದ್ಧಿಯು ತಣ್ಣೀರ ಕೊಪ್ಪರಿಗೆಯಲ್ಲಿಟ್ಟ ತುಪ್ಪದಂತೆ ಸಂಕುಚಿತವಾಗುವದು. ಯಾವನು ನಾನಾ ದೇಶಗಳನ್ನು ಸಂಚರಿಸುತ್ತಾ, ವಿದ್ವಾಂಸರೊಡನೆ ಸಂಭಾಷಣೆಯನ್ನು ಮಾಡುವನೋ, ಅವನ ಬುದ್ಧಿಯು ಬಿಸಿ ನೀರಿನ ಕಡಾರದೊಳಗಿಟ್ಟ ಕೈ ಎಣ್ಣೆಯ ತೊಟ್ಟನಂತೆ ವಿಸ್ತರಿಸುವದೆಂದು ವಿಜ್ಞಾಪಿಸಿ, ತಂದೆ ತಾಯಿಗಳನ್ನು ಬೀಳ್ಕೊಂಡು, ಹೊರಟು, ದೇಶ ದೇಶಗಳನ್ನು ತಿರುಗುತ್ತಾ, ಅಲ್ಲಿರುವ ವಿದ್ವಾಂಸರನ್ನು ಸೇವಿಸುತ್ತಾ, ಅವರಲ್ಲಿರುವ ತರ್ಕ ವ್ಯಾಕರಣ ಮೀಮಾಂಸೆ ವೇದಾಂತ ಜ್ಯೋತಿಷ್ಯ ವೈದ್ಯ ಮಂತ್ರ ಶಾಸ್ತ್ರ ಶಿಲ್ಪವಿದ್ಯ ಸಂಗೀತ ಮುಂತಾದ ವಿಶೇಷ ವಿದ್ಯಗಳನ್ನು ಗ್ರಹಿಸುತ್ತಾ, ಅಲ್ಲಲ್ಲಿ ವಿದ್ವಾಂಸರೊಡನೆ ವಿವಾದವನ್ನು ಮಾಡುತ್ತಾ, ಸಕಲ ವಿದ್ಯಾ ಪಾರಂಗತನಾಗಿ, ಸರ್ವವನ್ನು ಶೋಧಿಸಿ, ನೋಡಿ, ಧರ್ಮಾರ್ಥ ಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಆತ್ಮೋಜ್ಜೀವಕರವಾದ ಮೋಕ್ಷವೇ ನಿತ್ಯ ಸಂತೋಷವನ್ನು ಕೊಡುವದೆಂದು ನಿಶ್ಚೈಸಿ, ಆ ಮೋಕ್ಷ ಸಾಧನೆಗೆ ಏಕೋ ದೇವನ ಜ್ಞಾನವೆಂದು ತಿಳಿದು, ಆ ದೇವನು ಸಕಲ ಲೋಕವನ್ನು ಉಂಟು ಮಾಡಿ, ಕಾಪಾಡಿ, ಶಿಕ್ಷೆ ರಕ್ಷೆಯನ್ನು ಮಾಡುವಂಥಾವನೇ ಎಂದು, ನಿಜ ಮನದಲ್ಲಿ ನಿಷ್ಕರ್ಷಿಸಿ, ಆತನನ್ನು ನಿಶ್ಚಲವಾದ ಭಕ್ತಿಯಿಂದ ನಂಬಿ, ದಿನವಹಿ ತ್ರಿಕಾಲದಲ್ಲಿಯೂ—ಈ ದೇಹದಲ್ಲಿ ಹರಣವಿರುವ ತನಕ ನಿನ್ನ ಚಿತ್ತ ಬಂದಂತೆ ನನ್ನ ಪ್ರಾರಬ್ಧಾನುಸಾರವಾಗಿ ಕಾಪಾಡೆಂದು ಪ್ರಾರ್ಥನೆಯನ್ನು ಮಾಡುತ್ತಾ, ದೇವರು ಕೊಟ್ಟದ್ದರಲ್ಲಿ ಸಂತೋಷ ಪಟ್ಟು, ಸಂಸಾರ ಸಹಿತ

ಉಂಡು, ಉಟ್ಟು, ಬೇಡುವ ದೀನರಿಗೆ ವಿತ್ತಶಾಠ್ಯವನ್ನು ಮಾಡದೆ ಕೊಟ್ಟು ಕೊಂಡು ಇರ ಬೇಕೆಂದು ತಿಳಿದು, ತಿರಿಗಿ ಕುಶಲಾವತಿಗೆ ಬರ ಬೇಕೆಂದು ಬರುವ ಮಾರ್ಗದಲ್ಲಿದ್ದ ಸುಗುಣಾರಾಮವೆಂಬ ಅಗ್ರಹಾರದ ಬಳಿಗೆ ಬರುವ ವರಿಗೆ ಸಾಯಂಕಾಲವಾದ್ದರಿಂದ, ಆ ಅಗ್ರಹಾರವನ್ನು ಹೊಕ್ಕು, ಅಲ್ಲಿರುವ ಸುಜ್ಞಾನ ಭಟ್ಟನೆಂಬ ಬ್ರಾಹ್ಮಣನ ಮನೆಯಲ್ಲಿ ಬಂದು, ಇಳಿದು ಕೊಂಡನು.

ಆ ಸುಜ್ಞಾನ ಭಟ್ಟನೂ ಆತನ ಹೆಂಡತಿಯಾದ ಸುಶೀಲೆಯೂ ಈತನನ್ನು ಕಂಡು, ಬಹು ಸಂತೋಷದಿಂದ ಆದರಿಸಿ, ಊಟ ಉಪಚಾರಗಳನ್ನು ಮಾಡಿಸಿ, ಮಲಗಿ ಕೊಳ್ಳುವದಕ್ಕೆ ಒಂದು ಮಂದಲಿಗೆಯನ್ನು ಕೊಟ್ಟದ್ದರಿಂದ, ದೇವರ ಧ್ಯಾನವನ್ನು ಮಾಡಿ, ಆ ಮಂದಲಿಗೆಯ ಮೇಲೆ ಮಲಗಿ ಕೊಂಡನು. ತರುವಾಯ ಬ್ರಾಹ್ಮೀ ಮುಹೂರ್ತದಲ್ಲಿ ಮನೇ ಯಜಮಾನನಾದ ಸುಜ್ಞಾನ ಭಟ್ಟನು ಹಾಸಿಗೆಯ ಮೇಲೆ ಕುಳಿತು, ದೇವರ ಪ್ರಾರ್ಥನೆಯನ್ನು ಮಾಡುತ್ತಿರುವ ಹರಿದತ್ತನ ಬಳಿಗೆ ಹೋಗಿ, ಹೇಳಿದ್ದೇನಂದರೆ—ಎಲೈ, ಭಗವಂತನಿಗೆ ಏಕಾಂತ ಭಕ್ತನಾದ ಹರಿದತ್ತನೇ, ನಾವು ದಂಪತಿಗಳು ಮಕ್ಕಳಿಲ್ಲದೆ ಸರ್ವ ಲೋಕ ಕರ್ತನಾದ ಹರಿಯನ್ನು ನಿತ್ಯದಲ್ಲೂ ಧ್ಯಾನಿಸುತ್ತಾ ಇರುವಲ್ಲಿ, ಒಂದು ದಿವಸ ನೆರೆಯಿಂದ ಬಿಳುಪಾದ ಕೂದಲುಗಳುಳ್ಳ ತಲೆಯನ್ನು ನಡುಗಿಸುತ್ತಾ, ಒಂದು ಹಲ್ಲಾದರೂ ಇಲ್ಲದ ಬಾಯಿಯಲ್ಲಿ ಯಾವಾಗಲೂ ಏನೋ ತಿನ್ನುವವಳ ಹಾಗೆ ಇರುತ್ತಾ, ಕುಗ್ಗಿದ ನಡುವುಳ್ಳ ಸುಕ್ಕಿದ ಚರ್ಮಗಳುಳ್ಳ ಮೈಯಲ್ಲಿ ಎಲುವು ತೊಗಲೇ ಹೊರತು, ತುಸವಾದರೂ ಮಾಂಸವು ಇಲ್ಲದವಳಾದ ಮುತ್ತೈದೆಯಾದಂಥಾ ಒಬ್ಬ ಅಜ್ಜಗುಜ್ಜಿ ಮುದುಕಿಯು ನಮ್ಮ ಮನೆಯ ಬಾಗಿಲಿಗೆ ಕೋಲೂರಿ ಕೊಂಡು, ಒಂದು ಮೂರು ವರುಷದ ಸಣ್ಣ ಹುಡಿಗಿಯನ್ನು ಕರ ಕೊಂಡು ಬಂದು, ಬಾಗಿಲ ಮೆಟ್ಟನ್ನು ಹತ್ತಲಾರದೆ, ನಡುಗುವ ಧ್ವನಿಯಿಂದ—ಯಾರೊಳಗೆ? ಎಂದು ಕೂಗಲು; ನನ್ನ ಹೆಂಡತಿಯು ಓಡಿ ಬಂದು, ಆ ವೃದ್ಧ ಸುಮಂಗಲಿಯನ್ನು ನೋಡಿ, ಅಡ್ಡ ಬಿದ್ದು, ಕಾಲನ್ನು ತೊಳೆದು, ಕೈ ಕೊಟ್ಟು, ಮೆಲ್ಲಗೆ ಹತ್ತಿಸಿ ಕೊಂಡು, ಕೂಸು ಸಹಿತ ಒಳಗೆ ಕರ ಕೊಂಡು ಬಂದು, ಕಾಲುಮಣೆಯ ಮೇಲೆ ಕುಳ್ಳಿರಿಸಿ, ಅರಿಸಿನ, ಕುಂಕುಮ, ಹೂವು, ಎಲೆ ಅಡಿಕೆಗಳನ್ನು ಕೊಟ್ಟು, ಪೂಜಿಸಿ, ಅನ್ನೋದಕಗಳಿಂದ ತೃಪ್ತಿ ಮಾಡಿದಳು. ಬಳಿಕ ಆ ಮುತ್ತೈದೆಯು ನನ್ನ ಹೆಂಡತಿಯನ್ನು ಕರೆದು—ಎಲೈ, ಸತಿಯೇ, ನೀನು ಮಹಾ ಪತಿವ್ರತೆಯು. ನಾನು ಕಾಶಿಯಲ್ಲಿರುವ ಗಂಗಾಧರಭಟ್ಟನೆಂಬ ಪಾರ್ವನ ಹೆಂಡತಿಯು. ತನ್ನ ಗಂಡನು ಸನ್ಯಾಸಿಯಾಗಿ ಹುಲಿ ಚರ್ಮವನ್ನು ಹೊದ್ದು ಕೊಂ

ಡು, ಸಂಸಾರ ವಿರಕ್ತನಾಗಿ, ಸ್ಮಶಾನದಲ್ಲಿ ವಾಸ ಮಾಡಿ ಕೊಂಡಿದ್ದಾನೆ. ಇವಳು ನನ್ನ ಕೂಸು. ಇವಳನ್ನು ಭೂತ ಪ್ರೇತ ಪಿಶಾಚಿಗಳಿಂದ ಕೂಡಿರುವ ಮಸಣಕ್ಕೆ ಕರ ಕೊಂಡು ಹೋಗುವದಕ್ಕೆ ಅಂಜಿ, ಇಲ್ಲಿಗೆ ಕರ ತಂದೆನು. ಇವಳನ್ನು ನಿನ್ನ ಮಗಳಾಗಿ ಸಾಕಿಕೋ ಎಂದು ಕೊಟ್ಟು; ತನ್ನನ್ನು ಜನರು ಸರ್ವಮಂಗಳೆ ಎಂಬ ಹೆಸರಿನಿಂದ ಕರೆಯುವರು; ನಾನು ನನ್ನ ಗಂಡನಂತೆ ಸನ್ಯಾಸಿಯಾಗಿ ಸ್ಮಶಾನ ವಾಸಕ್ಕೆ ಹೋಗುವೆನೆಂದು ಹೇಳಿ, ಅಲ್ಲಿಯೇ ಅದೃಶ್ಯಳಾದಳಂತೆ. ಗ್ರಾಮಾಂತರಕ್ಕೆ ಹೋಗಿದ್ದ ನಾನು ಬರುವದು ಈ ಸುದ್ದಿಗಳನ್ನೆಲ್ಲಾ ಹೇಳಿ, ನನ್ನ ಕೈಯಲ್ಲಿ ಆ ಕೂಸನ್ನು ಕೊಟ್ಟದ್ದರಿಂದ ಸರ್ವಾಂಗ ಸುಂದರಿಯಾದ ಮಗುವನ್ನು ನೋಡಿ, ಆಕೆಗೆ ಶಿವದತ್ತೆ ಎಂದು ಹೆಸರನ್ನಿಟ್ಟು, ಆರೈಕೆ ಮಾಡಿ ಕೊಂಡು ಬಂದೆನು. ಈಗ ಆ ಕನ್ನಿಕೆಗೆ ಏಳು ತುಂಬಿ, ಎಂಟನೇ ವರುಷವಾದ್ದರಿಂದ, ಸತ್ಪಾತ್ರದಲ್ಲಿ ಕನ್ಯಾದಾನವನ್ನು ಮಾಡ ಬೇಕೆಂದು ಎಣಿಸಿ ಕೊಂಡಿದ್ದೆನು. ಈ ದಿವಸ ಬೆಳಗಿನ ಝಾವದಲ್ಲಿ ಆ ನನ್ನ ಮಗಳು ಎದ್ದು, ನನ್ನ ಬಳಿಗೆ ಬಂದು—ಎಲೈ, ತಂದೆಯೇ, ಈಗ ನನ್ನ ಕನಸಿನಲ್ಲಿ ಒಬ್ಬ ಮುತ್ತೈದೆ ಬಂದು—ನಿಮ್ಮ ಮನೆಯಲ್ಲಿ ಇಳಿದಿರುವ ಹರಿದತ್ತನೆಂಬ ಬ್ರಹ್ಮಚಾರಿ ಬ್ರಾಹ್ಮಣನನ್ನು ವರಿಸಿ, ಮದುವೆಯಾಗೆಂದು ಹೇಳಿ, ಅದೃಶ್ಯಳಾದಳು. ಆದಕಾರಣ ನನ್ನನ್ನು ಆತನಿಗೆ ಮದುವೆಯನ್ನು ಮಾಡು ಎಂದು ಹೇಳಿದಳು. ಇಗೋ, ಇವಳೇ ಆ ಕನ್ನಿಕೆಯು ಎಂದು ತೋರಿಸಿ, ಇವಳನ್ನು ಪರಿಗ್ರಹಿಸ ಬೇಕೆಂದು ಬೇಡಿ ಕೊಂಡನು. ಅದನ್ನು ಕೇಳಿ; ಹರಿದತ್ತನು—ಭಗವತ್ಸಂಕಲ್ಪವಾದಂತೆ ನಡೆಯುವದೇ ಸುಜನರಿಗೆ ಮುಖ್ಯವಾದ್ದರಿಂದ, ತಮ್ಮ ಅನುಗ್ರಹವಾದಂತಾಗಲಿ ಎಂದು ಒಪ್ಪಿ ಕೊಂಡನು. ಬಳಿಕ ಸುಜ್ಞಾನಭಟ್ಟನು ಸುಮಾಸ, ಸುದಿನ, ಸುವಾರ, ಸುನಕ್ಷತ್ರ, ಸುಯೋಗ, ಸುಕರಣ, ಸುಲಗ್ನದಲ್ಲಿ ಸುಪುತ್ರಿಯನ್ನು ಸುಶೀಲೆಯಾದ ಸುಸತಿಯೊಡನೆ ಕೂಡಿ, ಸುಪುತ್ರನಾದ ಹರಿದತ್ತನಿಗೆ ಸುಜನ ಸಮೂಹದ ಮುಂದೆ ಸುರಾಸ್ಯಸಾಕ್ಷಿಯಿಂದ, ಸುರಪಾಲನಿಗರ್ಪಿತವೆಂದು, ಸುತುಲಸೀದಳ ಸಮೇತ ಸುಗಂಗೋದಕ ಧಾರಾಪೂರ್ವಕ ಮದುವೆಯನ್ನು ಮಾಡಿ ಕೊಟ್ಟನು. ಆ ತರುವಾಯ ಪೂರ್ವರ ಪದ್ಧತಿಯ ಮೇರೆಗೆ ವೈದಿಕ ಲೌಕಿಕ ಕರ್ಮಗಳನ್ನು ನೆರವೇರಿಸಿದನು. ಅನಂತರದಲ್ಲಿ, ಹರಿದತ್ತನು ಅತ್ತೆ ಮಾವಂದಿರ ಅಪ್ಪಣೆಯನ್ನು ಕೊಂಡು, ಮಡದಿಯ ಕೂಡಾ ಕುಶಲಾವತಿಗೆ ಬಂದು, ತನ್ನ ತಾಯಿ ತಂದೆಗಳಿಗೆ ನಮಸ್ಕರಿಸಿ, ಹೆಂಡತಿಯನ್ನು ಅಡ್ಡ ಬೀಳಿಸಿ, ದೇಶಾಟನಕ್ಕೆ ಅಲ್ಲಿಂದ ಹೊರಟಾರಭ್ಯ

ತಿರಿಗಿ ಅಲ್ಲಿಗೆ ಸೇರುವ ವರಿಗೆ ತಾನು ನಡೆದ ಯಾವದ್ವೃತ್ತಾಂತವನ್ನು ವಿಜ್ಞಾಪಿಸಲಾಗಿ, ತಾಯಿ ತಂದೆಗಳು ಸಂತೋಷ ಪಟ್ಟರು.

ಹೀಗೆ ಕೆಲವು ಕಾಲ ಕಳೆಯುತ್ತಿರಲು; ದಿಗ್ವಿಜಯಾರ್ಥವಾಗಿ ಹೋಗಿದ್ದ ಆ ಕುಶಲಾವತಿಯು ನಗರದ ಕುಶಲಶೇಖರ ರಾಯನ ಮಗನಾದ ಚಂಡಪರಾಕ್ರಮಿ ಎಂಬ ಯುವರಾಜನು ಸಮಸ್ತ ದೇಶಗಳ ಧೊರೆಗಳನ್ನು ಜಯಿಸಿ, ಅವರಿತ್ತ ಕಪ್ಪದ ವಸ್ತುಗಳು ಸಹಿತವಾಗಿ, ತಂದೆಗೆ ಬಿನ್ನವತ್ತಲೆಯನ್ನು ಬರೆದು ಕಳುಹಿಸಿದ್ದನ್ನು, ಅರಸು ಚಾವಡಿಯಲ್ಲಿ ಕುಳಿತು, ಒಡ್ಡೋಲಗ ಕೊಡುತ್ತಿರುವಲ್ಲಿ, ನಿಯೋಗಿಯು ತೆಗೆದು ಕೊಂಡು ಬಂದು, ಅರಸಿಗೆ ನಮಸ್ಕರಿಸಿ, ಕೊಟ್ಟನು. ಅದನ್ನು ಅರಸು ಓದುವಂತೆ ರಾಯಸದವನ ಕೈಯಲ್ಲಿ ಕೊಡಲು; ಅದರಲ್ಲಿ ಇದ್ದ ಒಕ್ಕಣೆ ಏನಂದರೆ—ಶ್ರೀಮದ್ರಾಜಾಧಿರಾಜರಾದ ಕುಶಲಾವತೀ ನಗರದರಸುಗಳಾದ ನನ್ನ ತಂದೆಯ ಅಡಿ ದಾವರೆಗಳಿಗೆ ನಿಮ್ಮ ಮಗನಾದ ಚಂಡಪರಾಕ್ರಮಿಯು ಸಾಷ್ಟಾಂಗವಾಗಿ ನಮಸ್ಕರಿಸಿ, ಬಿನ್ನವಿಸುವದೇನಂದರೆ—ತಮ್ಮ ಚರಣಾನುಗ್ರಹದಿಂದ ಸಕಲ ದೇಶದ ಧೊರೆಗಳು ಸ್ವಾಧೀನರಾಗಿ ಕಪ್ಪವನ್ನು ಕೊಟ್ಟರು. ಸಿಂಹಳ ದ್ವೀಪಾಧಿಪತಿಯು ಸ್ವಾಧೀನವಾಗದೆ ಇರುವದರಿಂದ, ನಮ್ಮ ಸ್ವಾಧೀನದಲ್ಲಿರುವ ಜಂಬು ದ್ವೀಪದ ಅರಸುಗಳ ಚತುರಂಗ ಬಲ ಸಹಿತ ಕೂಡಿ ಕೊಂಡು, ಸಿಂಹಳ ದ್ವೀಪಕ್ಕೆ ದಂಡಯಾತ್ರೆಗೆ ಹೊರಡ ಬೇಕೆಂದು ನಿಶ್ಚೈಸಿದ್ದೇನೆ. ನಮ್ಮ ಮಂತ್ರಿ ಶಿಖಾಮಣಿಗಳಾದ ಕುಶಲಬುದ್ಧಿಯವರ ಮಕ್ಕಳಾದ ಹರಿದತ್ತರು ದೇಶಾಟನವನ್ನು ಮಾಡಿ ಕೊಂಡು ಬಂದು ಇದ್ದರೆ, ಜಾಗ್ರತೆಯಿಂದ ನನ್ನೆಡೆಗೆ ಕಳುಹಿಸ ಬೇಕು. ಈಗ ನಾನು ಪ್ರಯತ್ನಿಸಿರುವ ಕಾರ್ಯವು ಅತಿ ದುರ್ಘಟವಾದ್ದರಿಂದ, ಮಂತ್ರಾಳೋಚನೆಗೆ ಬುದ್ಧಿಯಲ್ಲಿ ಬೃಹಸ್ಪತಿಗೂ ಕ್ಷೇಮ ಚಿಂತೆಯಲ್ಲಿ ಜನನಿಗೂ ಸಮನಾದವರು ಬೇಕಾದ್ದರಿಂದ, ಅವರನ್ನು ನನ್ನೆಡೆಗೆ ಕಳುಹಿಸಿದ ಹೊರತು, ನಾನು ಮುಂದಕ್ಕೆ ಹೆಜ್ಜೆ ಇಡುವದಿಲ್ಲವೆಂದು, ಬರೆದಿದ್ದ ಒಕ್ಕಣೆಯನ್ನು ಕೇಳಿ, ಕುಶಲಶೇಖರರಾಯನೂ ಕುಶಲಬುದ್ಧಿಯೂ ಹರಿದತ್ತನನ್ನು ಕರಿಸಿ, ಆ ಓಲೆಯನ್ನು ಓದಿಸಿ ಕೊಟ್ಟರು. ಹರಿದತ್ತನು ಅದನ್ನು ಕೇಳಿದ ಕ್ಷಣವೇ—ಅಪ್ಪಣೆ ಆದರೆ, ಯುವರಾಜರ ಬಳಿಗೆ ತೆರಳುತ್ತೇನೆಂದು ಹೊರಡಲು; ಆತನೊಡನೆ ಚತುರಂಗ ಬಲ ಸಮೇತವಾಗಿ ಬೇಡ ಸೇನಾಧಿಪತಿಯನ್ನು ಕೊಟ್ಟು ಕಳುಹಿಸಿದರು. ಆಗ ಹರಿದತ್ತನು ಬೇಡ ಸೇನಾಧಿಪತಿಯನ್ನು ಒಡಗೊಂಡು, ದಾರಿಯಲ್ಲಿ ತಳುವು ಮಾಡದೆ, ಬಂದು, ಯುವರಾಜನಾದ ಚಂಡಪರಾಕ್ರಮಿಯು

ನ್ನು ಕಾಣಿಸಿ ಕೊಂಡನು. ಈತನು ಎದ್ದು, ಹರಿದತ್ತನಿಗೆ ನಮಸ್ಕರಿಸಿ, ಬೇಡ
ಸೇನಾಧಿಪತಿಯನ್ನು ಮನ್ನಿಸಿ, ಸಿಂಹಳದ್ವೀಪ ದಿಗ್ವಿಜಯಾರ್ಥವಾಗಿ ಹೊರಡ
ಲೆಣಿಸಿ–ನಮ್ಮ ಛಪ್ಪನ್ನ ದೇಶದ ಧೊರೆಗಳಿಗೆ ಸೇನೆಗಳು ಸಮುದ್ರದ ಮೇಲೆ
ತೆರಳುವದಕ್ಕೆ ಒಬ್ಬೊಬ್ಬ ದೇಶಾಧಿಪತಿಯು ಒಂದೊಂದು ಹಡಗನ್ನು ಸಿದ್ಧ
ಮಾಡಿಸ ಬೇಕೆಂದು ಅಪ್ಪಣೆ ಕೊಡ ಹೇಳಲು; ಹಾಗೆಯೇ ಐವತ್ತಾರು ಹಡಗು
ಗಳು ಕಡಲ ತಡಿಯಲ್ಲಿ ಸಿದ್ಧವಾಗಿರುವದನ್ನು ನೋಡಿ, ನೀವು ಮುಂದೆ ಏನೆನ್ನು
ತ್ತೀರಿ? ಎಂದು ಕೇಳಿದನು. ಆಗ–ಒಡೆಯನ ಹೇಳಾಟ ಬಡಗಿಯ ಮಾಡಾಟ
ವೆಂದು ಗಾಥೆ ಉಂಟಷ್ಟೆ. ರಾಜಾಜ್ಞೆಯಾದಂತೆ ನಡೆಯುವದೇ ಸೇವಕರಿಗೆ
ಮುಖ್ಯ ಧರ್ಮವಾದಾಗ್ಯೂ, ನನ್ನ ಬುದ್ಧಿಗೆ ತೋರಿದ್ದನ್ನು ನಿಮ್ಮಡಿಯಲ್ಲಿ ಅರಿ
ಕೆ ಮಾಡುವೆನು. ಕೇಳಿ, ಅಪ್ಪಣೆ ಕೊಟ್ಟಂತೆ ನಡೆಯುತ್ತೇನೆ. ಲೋಕದಲ್ಲಿ
ಕಲಿಯಾದವನಿಗೆ ಯಾವ ಕೆಲಸವು ಅಗಾಧವು? ಪ್ರಯತ್ನಶಾಲಿಗೆ ಯಾವ ದೇ
ಶ ದೂರವು? ವಿದ್ಯಾವಂತನಿಗೆ ಯಾವದು ಪರ ದೇಶವು? ಪ್ರಿಯವಾದಿಗೆ
ಹಗೆ ಯಾರೆಂದು ಪಂಡಿತೋಕ್ತಿ ಇರುವದ್ದರಿಂದಲೂ, ಸಾಮ, ದಾನ, ಭೇದ, ದಂ
ಡಗಳೆಂಬ ಚತುರೋಪಾಯದಲ್ಲಿ ಸಾಮವೇ ಮುಖ್ಯೋಪಾಯವಾದ್ದರಿಂದ
ಮುಂದೆ ಅದೇ ಗಣಿಸಲ್ಪಟ್ಟಿತೆಂದು ಅರಿತವರು ಅನ್ನುವದರಿಂದಲೂ, ಮುಂಚಿತ
ವಾಗಿ ಸಿಂಹಳ ದ್ವೀಪದ ಅರಸುಗಳಿಗೆ ಸಂಧಿ ಪತ್ರಿಕೆಯನ್ನು ಬರಿಸಿ, ದೂತರ
ಕೈಯಲ್ಲಿ ಕಳುಹಿಸಿ, ಅವರ ಭಾವವನ್ನು ತಿಳಿದು ಕೊಂಡು, ಅನಂತರ ಮುಂ
ದಾಗುವ ಕಾರ್ಯವನ್ನು ಮಾಡೋಣ ಎಂಬದಾಗಿ ತೋರುತ್ತದೆ ಎಂದು ಅರಿಕೆ
ಮಾಡಲು; ಆ ಮಾತಿಗೆ ಜಂಬುದ್ವೀಪದ ಮಂಡಲಾಧಿಪರೂ ಮಂತ್ರಿಗಳೂ ದ
ಳವಾಯಿಗಳೂ ಮುಂತಾದ ಸರ್ವ ಪರಿವಾರಗಳು ಸಮ್ಮತಿ ಪಟ್ಟದ್ದರಿಂದ, ಚಂ
ಡಪರಾಕ್ರಮಿಯು ಒಡಂಬಟ್ಟು, ಅದೇ ಪ್ರಕಾರ ಮಾಡಿಸಿರೆಂದು ಉತ್ತರ
ಕೊಡಲು; ಹರಿದತ್ತನು ರಾಯಸದವರ ಕಡೆಯಿಂದ ಲೇಖನವನ್ನು ಬರಿಸಿ, ದೂ
ತರ ಕೈಯಲ್ಲಿ ಕೊಟ್ಟು ಕಳುಹಿಸಿದನು.

ಆ ದೂತರು ಅತಿ ತ್ವರೆಯಿಂದ ಸಾಗರದೆಡೆಗೆ ಬಂದು, ಹಡಗಿನ ಮೇಲೇರಿ,
ಸಿಂಹಳದ್ವೀಪದ ಎಲ್ಲೆಯನ್ನು ಹೊಗಲು; ಆ ದ್ವೀಪದ ಮೊದಲುಕ್ಕಡದ ಅಧಿ
ಕಾರಿಯ ಆಳುಗಳು ಇವರನ್ನು ಕಂಡು, ತಮ್ಮೊಡೆಯನ ಬಳಿಗೆ ಕರ ಕೊಂಡು
ಹೋಗಿ, ಕಾಣಿಸಲು; ಆ ದೂತರು ಈ ಉಕ್ಕಡದ ಅಧಿಕಾರಿಯ ಐಶ್ವರ್ಯವೂ
ಸೇನೆಯೂ ನಮ್ಮ ಜಂಬು ದ್ವೀಪದ ಸಾರ್ವಭೌಮನಾದ ಚಂಡಪರಾಕ್ರಮಿ
ಯ ಐಶ್ವರ್ಯ ಸೇನೆಗಳಿಗಿಂತ ಇಮ್ಮಡಿಯಾಗಿರುವದು. ಕಡೇ ಉಕ್ಕಡದ ತಳ

ವಾರನೇ ಇಷ್ಟು ಸಮುಕಟ್ಟಿನಿಂದ ಇರುವಲ್ಲಿ, ಇನ್ನು ಸಿಂಹಳದ್ವೀಪದ ಸಾರ್ವಭೌಮುನನ್ನು ನಮ್ಮ ದ್ವೀಪದ ಸಾರ್ವಭೌಮುನು ಜಯಿಸುವದು ಬುದ್ಧಿಗೆ ತೋಚುವದಿಲ್ಲ. ದೇವರ ಚಿತ್ತ ಹ್ಯಾಗಿರುವದೋ? ಎಂದು ಯೋಚಿಸುತ್ತಾ ನಿಂತಿರುವಲ್ಲಿ, ಉಕ್ಕಡದ ತಳವಾರನು ಇವರು ಬಂದ ವಿದ್ಯಮಾನವನ್ನು ಕೇಳಿ, ತನ್ನೊಡೆಯನಾದ ಎರಡನೇ ಉಕ್ಕಡದ ತಳವಾರನ ಬಳಿಗೆ ಕಳುಹಿಸಲು; ಅವನ ಐಶ್ವರ್ಯವು ಮೊದಲುಕ್ಕಡದ ತಳವಾರನಿಗಿಂತ ಎರಡಷ್ಟು ಆಗಿದ್ದರಿಂದ, ಈ ದೂತರು ಅತ್ಯಾಶರ್ಯ ಗೊಂಡು, ಆತನ ಅಪ್ಪಣೆಯಿಂದ ಹೊರಟು, ಹೀಗೆ ಒಬ್ಬರಿಗೊಬ್ಬರು ಇಮ್ಮಡಿಯಾಗಿರುವ ಹದಿನಾರು ಉಕ್ಕಡದ ತಳವಾರರನ್ನು ಬೀಳ್ಕೊಂಡು, ಸಿಂಹಳ ದ್ವೀಪದ ಸಾರ್ವಭೌಮುನ ಅರಿದುರ್ಘಟವೆಂಬ ಪಟ್ಟಣವನ್ನು ಹೊಕ್ಕು, ಸಿಂಹವಿಕ್ರಮುನೆಂಬ ಅರಸಿನ ಸಭೆಗೆ ಹೋಗಿ, ಸುಧರ್ಮೆ ಎಂಬ ದೇವ ಸಭೆಯಲ್ಲಿ ಅಷ್ಟ ದಿಕ್ಪಾಲಕರೊಡನೆಯೂ ಅಷ್ಟ ವಸುಗಳೂ ಸಪ್ತ ಮರುತ್ತುಗಳೂ ಏಕಾದಶ ರುದ್ರರೂ ದ್ವಾದಶಾದಿತ್ಯರೂ ಸಪ್ತ ಋಷಿಗಳೂ ಮೊದಲಾದವರೊಡನೆಯೂ ಒಡ್ಡೋಲಗವನ್ನು ಕೊಡುತ್ತಿರುವ ದೇವೇಂದ್ರನಂತೆ ಪ್ರಧಾನಿಗಳಿಂದಲೂ ರಾಯಸದವರಿಂದಲೂ ಕರಣಿಕರುಗಳಿಂದಲೂ ದಳವಾಯಿಗಳಿಂದಲೂ ನಿಯೋಗಿಗಳಿಂದಲೂ ನ್ಯಾಯಾಧಿಪತಿಗಳಿಂದಲೂ ಬೊಕ್ಕಸದ ಅಧಿಕಾರಿಗಳಿಂದಲೂ ಕೂಡಿ, ಒಡ್ಡೋಲಗವನ್ನು ಕೊಡುತ್ತಿರುವ ಸಿಂಹವಿಕ್ರಮರಾಯನನ್ನು ಕಂಡು, ತಲೆಬಾಗಿ, ತಂದ ಲೇಖನವನ್ನೊಪ್ಪಿಸಿ, ಕೈಕಟ್ಟಿ ಕೊಂಡು, ನಿಂತಿರಲು; ಸಿಂಹವಿಕ್ರಮನು ಆ ಲೇಖನವನ್ನು ತೆಗೆದು, ರಾಯಸದವನ ಕೈಯಲ್ಲಿ ಕೊಡಲು; ಆತನು ಓದುತ್ತಿದ್ದನು; ಏನಂದರೆ—ಸ್ವಸ್ತಿ.। ಶ್ರೀಮದಖಂಡ ಸಿಂಹಳದ್ವೀಪ ಸಾರ್ವಭೌಮರಾದ ಸಂಧಿವಿಗ್ರಹಯಾನ ಆಸನ ದ್ವೈಧೀಭಾವ ಸಮಾಶ್ರಯಣಗಳೆಂಬ ಆರು ವಿಧವಾದ ರಾಜ ಕಾರ್ಯದೊಳ್ದುರೀಣರಾದ ಸಿಂಹವಿಕ್ರಮ ರಾಯರಿಗೆ, ಜಂಬು ದ್ವೀಪದ ಸಾರ್ವಭೌಮರಾದ ಕುಶಲಾವತಿಯ ಕುಶಲಶೇಖರ ರಾಯರ ಸುಕುಮಾರ ಚಂಡಪರಾಕ್ರಮಿ ಎಂಬ ಯುವರಾಜನು ಬಿನ್ನವಿಸುವದೇನಂದರೆ—ಸಮಸ್ತ ದಿಗ್ವಿಜಯಾರ್ಥವಾಗಿ ತಂದೆಗಳ ಉತ್ತರವನ್ನು ಹೊಂದಿ, ಸೇನಾ ಸಮೇತರಾಗಿ ಹೊರಡುವದು, ಈ ಜಂಬುದ್ವೀಪದ ಮಂಡಲಾಧಿಪತಿಗಳೆಲ್ಲರು ನಮ್ಮ ಪ್ರತಾಪವನ್ನು ಕಂಡು, ಅಂಜಿ, ಕೊಳುಗುಳಕ್ಕೆ ನಿಲ್ಲದೆ, ಕಪ್ಪವನ್ನು ನಿಗದೀ ಮಾಡಿ ಕೊಂಡು, ನಮ್ಮೊಡನೆ ಸ್ನೇಹವನ್ನು ಬಳಸಿ, ತಮ್ಮ ತಮ್ಮ ಸೇನಾಸಮೇತರಾಗಿ ನಮಗೆ ಸಹಾಯ ಮಾಡುವದಕ್ಕೆ ಬಂದಿದ್ದಾರೆ. ತಮಗೂ ನಮ್ಮ ಪ್ರತಾಪಾದಿಗಳು ಪರಸ್ಪರ ವೇದ್ಯವಾಗಿರ ಬಹುದು. ಆದ್ದರಿಂದ ತಮ್ಮಾಪ್ತ

ಮಂತ್ರಿಗಳೊಡನೆ ಚೆನ್ನಾಗಿ ಮಂತ್ರಾಲೋಚನೆಯನ್ನು ಮಾಡಿ, ನಮ್ಮೊಡನೆ ಸ್ನೇಹಿಸಿ, ಕಪ್ಪವನ್ನು ಕೊಡುವದಕ್ಕಾಗಲಿ, ಕಣದಲ್ಲಿ ಕೊಳುಗುಳವನ್ನು ಈಯುವದಕ್ಕಾಗಲಿ, ಪ್ರತ್ಯುತ್ತರವೀವುದೆಂಬ ಲೇಖನದ ಬಳ್ಳಣೆಯನ್ನು ಕೇಳಿ, ಪ್ರಳಯ ಕಾಲದ ಮುಕ್ಕಣ್ಣನಂತೆ ಕಣ್ಣುಗಳಿಂದ ಕಿಡಿಗಳನ್ನು ಉದರಿಸುತ್ತಾ, ಮೀಸೆಯನ್ನು ಕುಣಿಸುತ್ತಾ, ಕೋಪದಿಂದ ಪರವಶನಾಗಿ, ಹಿಂದು ಮುಂದು ಕಾಣದೆ, ದೂತರನ್ನು ಕುತ್ತಿಗೆ ಹಿಡಿದು, ದೊಬ್ಬಿಸಲು; ಅವರು ಹಿಂತಿರಿಗಿ ಬಂದು, ತಮ್ಮೊಡೆಯನಿಗೆ ಪೊಡಮಟ್ಟು, ನಡೆದ ವಿವರವನ್ನು ಬಿನ್ನವಿಸಿದರು. ಅದನ್ನು ಕೇಳಿ, ಚಂಡಪರಾಕ್ರಮಿಯು ಹರಿದತ್ತನನ್ನು ನೋಡಿ, ಮದಾಂಧರಾದವರಿಗೆ ಮತಿಯುತರ ಮತ ಮನಕ್ಕೊಡಂಬಡದು; ಮರದ ಡೊಂಕು ಬೆಂಕಿ ತಿದ್ದುವದೆಂಬ ನಾಣ್ನುಡಿ ತಪ್ಪುವದೇ? ದಂಡು ಮುಂದೆ ನಡೆಯಲೆಂದು ಅಪ್ಪಣೆ ಕೊಟ್ಟು, ಆ ದಿನ ಒಂದು ಗಾವುದ ಬಂದು, ತೃಣ ಜಲ ಕಾಷ್ಟ ಸಮೃದ್ಧಿಯಾದ ಒಂದು ತಾಣದಲ್ಲಿ ಪಾಳಯವನ್ನಿಳಿಸಿ, ಪಚ್ಚೆಯ ಗುಡಾರದಲ್ಲಿ ಬೆಂಡಿನ ಕಂಭವನ್ನೊರಗಿ ಕೊಂಡು, ಓಲಗವನ್ನು ಕೊಡುತ್ತಲಿದ್ದನು.

ಇತ್ತಲಾ ಸಿಂಹಳದ್ವೀಪದಲ್ಲಿ ಸಿಂಹವಿಕ್ರಮರಾಯಗೆ ಮುನಿಸು ಇಳಿದದ್ದನ್ನು ಕಂಡು, ಮುಖ್ಯ ಮಂತ್ರಿಯಾದ ಸುಮನೀಷನೆಂಬವನೆದ್ದು, ಕೈ ಮುಗಿದು—ಸ್ವಾಮಿ, ಒಡೆಯನೇ, ಪರರಾಯರು ಬರೆದ ಪತ್ರಿಕೆಗೆ ಪ್ರತಿ ಪತ್ರಿಕೆಯನ್ನೀಯದೆ, ಈ ರೀತಿಯಿಂದ ಕೋಪಿಸುವದು ರಾಜ ನೀತಿಗೆ ಬಹಳ ವಿರೋಧವಾಗಿರುವದು. ದೂತರನ್ನು ದೂಡಿಸುವದು ಒಂದು ದೊಡ್ಡ ಕೆಲಸವೇ; ನಡೆದು ಹೋದ ಮಾತಿಗೆ ನುಡಿದು ಫಲವಿಲ್ಲ. ಇನ್ನು ಮೇಲಾದರೂ ಸೇವಕನ ಬಿನ್ನಹವನ್ನು ಮನ್ನಿಸಿ, ಜಂಬುದ್ವೀಪದ ಯುವರಾಜನು ಬರೆದ ಕಾಗದಕ್ಕೆ ಬದಲು ಕಾಗದವನ್ನು ಬರಿಸಿ, ಚಾರರ ಕೈಯಲ್ಲಿ ಕಳುಹಿಸ ಬೇಕೆಂದನು. ಸಿಂಹವಿಕ್ರಮನು ಕ್ಷಣ ಮಾತ್ರ ಯೋಚಿಸಿ, ಪಶ್ಚಾದ್ವಿವೇಕ ಹುಟ್ಟಿ, ಪ್ರತಿ ಪತ್ರವನ್ನು ಬರಿಸಿ, ದೂತರ ಕೈಯಲ್ಲಿ ಕೊಟ್ಟು ಕಳುಹಿಸಿದನು. ಅವರು ಬಂದು, ಚಂಡಪರಾಕ್ರಮಿಯನ್ನು ಕಂಡು, ಲೇಖನವನ್ನು ಕೊಟ್ಟು, ಈ ಚಂಡಪರಾಕ್ರಮಿಯ ಪಾದಾದಿಕೇಶ ಪರಿಯಂತ್ರದಲ್ಲಿರುವ ರಾಜಲಕ್ಷಣಗಳನ್ನೂ ಲಾವಣ್ಯವನ್ನೂ ತೇಜಸ್ಸನ್ನೂ ನೋಡಿ, ಈತನು ಮನುಜ ಮಾತ್ರನಲ್ಲಾ, ಅವತಾರ ಪುರುಷನೆಂದು, ಇವನ ಅಮಾನುಷ ವೈಭವಕ್ಕೆ ಮೆಚ್ಚಿ, ಬೆಚ್ಚಿ, ಬೆರಗಾಗಿ, ನೋಡುತ್ತಿದ್ದರು. ಚಂಡಪರಾಕ್ರಮಿಯು ಅವರಿತ್ತ ಲೇಖನವನ್ನು ರಾಯಸದವರ ಕಡೆಯಿಂದ ಓದಿಸಲು; ಅದರಲ್ಲಿದ್ದ ಅಭಿಪ್ರಾಯವೇನಂದರೆ—ಸ್ವಸ್ತಿ. ಸಮಸ್ತ ಸಾಮಂತ ರಿಪುಚ

ಶ್ರ ಮುಕುಟ ತಟ ಘಟಿತ ಮಾಣಿಕ್ಯ ರತ್ನ ಪ್ರಭಾ ನೀರಾಜಿತ ಪಾದಪೀಠರಾದ ಪ್ರತಾಪಾನಲಪ್ರದ್ಯೋತಿತಪೃಥ್ವೀಮಂಡಲರಾದ ಕುಶಲಮತಿಯುತ ಕುಶಲಾವತಿಯ ಕುಶಲಶೇಖರ ಸಾರ್ವಭೌಮ ಸುಕುಮಾರ ಯುವರಾಜ ಚಂಡಪರಾಕ್ರಮಿಗಳಿಗೆ ಸಿಂಹಳದ್ವೀಪ ಸಾರ್ವಭೌಮ ಸಿಂಹವಿಕ್ರಮರಾಯರು ಶ್ರುತ ಪಡಿಸುವದೇನಂದರೆ—ನೀವು ಬರೆದ ಲೇಖನಾಭಿಪ್ರಾಯವು ನಮಗೆ ಮನವರಿಕೆಯಾಗಿ, ದ್ವೀಪಾಂತರ ಚಕ್ರವರ್ತಿ ಕಳಭ ಕಂಠೀರವರೆಂಬ ಬಿರುದಿನ ಪೆಂಡೆಯುವಂನೆಡಗಾಲೊಳು ಧರಿಸಿರ್ಪಿಂಮವಿಕ್ರಮವನ್ನು ನೀವರಿದು, ನಮ್ಮೊಡನೆ ಕಪ್ಪವನ್ನು ಕೊಳ್ಳುವದಕ್ಕೂ ಕೋಳುಗುಳದಲ್ಲಿ ಕೈ ಮಾಡುವದಕ್ಕೂ ಬಯಸಿದ ನಿಮ್ಮ ಕಲ್ಲೆದೆಯ ಕಡು ಧೈರ್ಯಕ್ಕೆ ಮೆಚ್ಚಿ, ಪ್ರತ್ಯುತ್ತರವನ್ನು ಕೊಡುವದೇನಂದರೆ;—ಕಪ್ಪವನ್ನು ಕೊಡದೆ, ನಿಮ್ಮೊಡನೆ ಕೆಳೆಯಿಂದಿರುವದಕ್ಕೆ ನಮಗೆ ಪರಮ ಕುತೂಹಲ ಉಂಟು. ಅದು ನಿಮಗೆ ಒಡಂಬಡದೆ ಇದ್ದರೆ, ಅಗತ್ಯವಾಗಿ ಯುದ್ಧಕ್ಕೆ ದಯ ಮಾಡ ಬಹುದು. ನಾವು ಸಂನದ್ಧರಾಗಿರುವೆವು ಎಂದು, ಬರೆದಿರುವ ಅಭಿಪ್ರಾಯಾರ್ಥವನ್ನು ತಿಳಿದು, ಹರಿದತ್ತರ ಕಡೆಯಿಂದ ಬದಲು ಕಾಗದವನ್ನು ಬರಿಸಿ, ವೀಳ್ಯ ಸಹಿತವಾಗಿ ದೂತರ ಕೈಯಲ್ಲಿ ಕೊಟ್ಟು ಕಳುಹಿಸಲು; ಆ ದೂತರು ಅತಿ ಜಾಣರಾದ್ದರಿಂದ, ಆ ಯುವರಾಜನ ಭಾವಚಿತ್ರವನ್ನು ಬರೆದು ಕೊಂಡು, ತಮ್ಮೊಡೆಯನ ಒಡ್ಡೋಲಗಕ್ಕೆ ಬಂದು, ಚಿತ್ರ ಪಠ ಸಹಿತವಾಗಿ ಕಾಗದವನ್ನು ಕೊಟ್ಟು, ಪೊಡಮಟ್ಟರು. ಆಗ ಸಿಂಹವಿಕ್ರಮರಾಯನು ಪತ್ರಿಕೆಯನ್ನು ಓದಿಸಿ, ಕೇಳಿ, ಅದರೊಳಗಿದ್ದ ಮುಖ್ಯಾರ್ಥವೇನಂದರೆ—ಲೋಕ ಕರ್ತನಾದ ದೇವರು ಒಬ್ಬರನ್ನೂ ಕೂಡ ಯಾವಜ್ಜೀವವು ಏಕ ಪ್ರಕಾರವಾಗಿ ಇರಿಸುವದಿಲ್ಲ. ಇಲಿಯನ್ನು ಹುಲಿಯಾಗಿ ಮಾಡುವನು. ಹುಲಿಯನ್ನು ಇಲಿಯಾಗಿ ಮಾಡುವನು. ಮತ್ತು ಯುದ್ಧದಲ್ಲಿ ಜಯ ಪರಾಜಯವು ದೈವಾಧೀನವು. ಮತ್ತು ಶರೀರವು ಅಸ್ಥಿರವು. ಕ್ಷತ್ರಿಯರೊಳಗೆ ಹುಟ್ಟಿದವನು ರಣದಲ್ಲಿ ಶತ್ರುಗಳನ್ನು ಜಯಿಸಿದರೆ, ರಾಜ್ಯ ಲಾಭವಾಗುವದು. ಹಗೆಗಳಿಂದ ಮಡಿದರೆ, ವೀರ ಸ್ವರ್ಗ ಉಂಟಾಗುವದು ಎಂಬವುಗಳನ್ನು ಅರಿತು, ಜಾಣರಾದವರು ಗರ್ವದಿಂದ ಬೆರತಿರರು. ಸಕಲವನ್ನು ತಿಳಿದವರಿಗೆ ವಿಶೇಷವಾಗಿ ಬರೆಯ ತಕ್ಕ ಪ್ರಕೃತವಿಲ್ಲವೆಂದು, ಬರೆದಿರುವ ಗಂಭೀರಾಭಿಪ್ರಾಯವನ್ನು ಪರ್ಯಾಳೋಚಿಸಿ, ಚಿತ್ರ ಪಠವ ನೋಡಿ, ಈ ರೂಪು ಲಕ್ಷಣಗಳುಳ್ಳವನು ಚಕ್ರವರ್ತಿಯಾಗುವನೆಂದೆಣಿಸಿ, ಆ ಪಠವನ್ನು ತೆಗೆದು ಕೊಂಡು, ಸಂತೋಷದಿಂದ ರಾಣೀ ವಾಸಕ್ಕೆ ಹೋಗಿ, ಅದನ್ನು ತನ್ನ ಪಟ್ಟದ ರಾಣಿಗೂ, ಮದುವೆಯಾಗದ

ಪ್ರಾಢೆಯಾಗಿರುವ ಆನಂದವಲ್ಲಿ ಎಂಬ ತನ್ನ ಮಗಳಿಗೂ ತೋರಿಸಿ, ತನ್ನ
ಮೇಲೆ ಈತನು ಯುದ್ಧಕ್ಕೆ ಹೊರಟು ಬಂದಿರುವನು. ಈತನು ಆನಂದವಲ್ಲಿ
ಗೆ ಪತಿಯಾದರೆ ನಮ್ಮ ಭಾಗ್ಯಕ್ಕೆ ಎಣೆ ಇಲ್ಲವೆಂದು ಹೇಳಿದನು. ರಾಣಿಯು—
ಹಾಗೆ ಸರಿ ಎಂದು ಒಪ್ಪಿ ಕೊಂಡಳು. ಆನಂದವಲ್ಲಿಯು—ನಾನು ಈ ಚಿತ್ರ ಪ
ಠವನ್ನು ನೋಡಿದ ಕ್ಷಣದಲ್ಲಿ, ಇವನೇ ನನ್ನ ಪತಿ ಎಂದು ಮನಸ್ಸಿನಲ್ಲಿ ನಿಶ್ಚೈ
ಸಿರುವೆನು. ಆದರೆ ನಿಮ್ಮ ಮೇಲೆ ಹಗೆತನವನ್ನಿಟ್ಟು, ಹೊಯಿಗೆ ಬರುವವನಿ
ಗೆ ಪುತ್ರಿಯನ್ನು ಕೊಡುವೆನೆಂದು ನೀವು ಹೇಳಿ ಕಳುಹಿಸುವದು ಹೀಹಾಳಿಕೆ
ಯಲ್ಲವೇ? ಎಂದು ಕೇಳಿದಳು. ಅದಕ್ಕೆ ಸಿಂಹವಿಕ್ರಮರಾಯನು—ನನಗೆ ಆ
ಯೋಚನೆ ಇಲ್ಲ. ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ತಕ್ಕ ವರಕ್ಕೆ ದಾನವ
ನ್ನು ಮಾಡಿದರೆ, ಅದಕ್ಕಿಂತಲೂ ಹೆಚ್ಚಾದ ಸಂತೋಷವು ಹೆತ್ತವನಿಗೆ ಮತ್ತ್ಯಾ
ವದುಂಟೆಂದು ಹೇಳಿ, ಆಸ್ಥಾನಕ್ಕೆ ಬಂದು, ಜೋಯಿಸರನ್ನು ಕರಿಸಿ, ಲಗ್ನಪತ್ರಿ
ಕೆಯನ್ನು ಬರಿಸಿ, ನಿಯೋಗಿಯ ಕೈಯಲ್ಲಿ ಕೊಟ್ಟು, ಚಂಡಪರಾಕ್ರಮಿಯ ಬ
ಳಿಗೆ ಕಳುಹಿಸಲು; ಆ ನಿಯೋಗಿಯು ಬಂದು, ಉಚಿತವಾಗಿ ಕಂಡು, ಲಗ್ನ ಪ
ತ್ರಿಕೆಯನ್ನು ಕೊಟ್ಟನು. ಚಂಡಪರಾಕ್ರಮಿಯು ನೋಡಿ—ವಿಹಿತವೇ ಸರಿ! ಆದ
ರೆ ತಮ್ಮ ಸಂಗಡ ಯುದ್ಧವನ್ನು ಮಾಡಿ, ಬದುಕಿದ ಮೇಲಷ್ಟೆ ವಿವಾಹದ ಯೋ
ಚನೆ ಎಂದು ಹೇಳಿ, ಬಹುಮಾನವನ್ನು ಮಾಡಿ, ಕಳುಹಿಸಲು; ನಿಯೋಗಿಯು
ಹಿಂತಿರುಗಿ ಬಂದು, ಈ ವಿವರವನ್ನು ತಿಳಿಸಿದನು. ಆಗ ಸಿಂಹವಿಕ್ರಮ ರಾಯ
ನು ಕೋಪಿಸಿ ಕೊಂಡು, ತನ್ನ ಕಡೆಯ ಉಕ್ಕಡದ ತಳವಾರನಿಗೆ—ಜಂಬು
ದ್ವೀಪದ ಯುವರಾಜ ಚಂಡಪರಾಕ್ರಮಿಯನ್ನು ನಿನ್ನ ಉಕ್ಕಡದಿಂದ ಮುಂದಕ್ಕೆ
ಬಿಟ್ಟರೆ, ನಿನ್ನನ್ನು ಶಿಗಿಸಿ, ತೋರಣವನ್ನು ಕಟ್ಟಿಸುವೆನೆಂದು, ಅಪ್ಪಣೆಯನ್ನು
ಕೊಟ್ಟು, ಯುದ್ಧಕ್ಕೆ ಸನ್ನದ್ಧನಾಗಿದ್ದನು.

ಇತ್ತಲಾ ಚಂಡಪರಾಕ್ರಮಿಯು ಸಕಲ ದಳ ಸಮೇತನಾಗಿ ಬಂದು, ಸಮುದ್ರ
ತೀರದಲ್ಲಿ ಒಂದು ಆನೆಯು ತನ್ನ ಮುಖವನ್ನೊಳಸರಿಸಿ ಕೊಂಡು, ಥಡದಲ್ಲಿ ಬಿ
ಸಲ ಕಾಸಿ ಕೊಂಡಿರಲು; ಅದನ್ನು ದೈವಗತಿಯಿಂದ ಆನೆ ಎಂದರಿಯದೆ, ಕ
ರೀ ಅರೇ ಕಲ್ಲೆಂದು ಎಣಿಸಿ, ದಂಡನ್ನು ಅದರ ಮೇಲೆ ಇಳಿಸಿದನು. ಕೆಲವು
ಹೊತ್ತಿನ ಮೇಲೆ ಆನೆಯು ದಂಡಿನವರು ಅಡಿಗೆ ಮಾಡುವ ಬೆಂಕಿಯ ಕಾವಿ
ನಿಂದಲೂ ಬಿಸಿಲಿನ ತಾಪದಿಂದಲೂ ಕಡಲಿಗೆ ನೆಗೆಯಲು; ದಂಡೆಲ್ಲಾ ಸಮುದ್ರದ
ಲ್ಲಿ ಬಿದ್ದು, ಮುಳುಗಿ ಹೋಯಿತು. ಹರಿದತ್ತನೂ ಬೇಡ ಸೇನಾಧಿಪತಿಯೂ
ಚಂಡಪರಾಕ್ರಮಿಯು ಸಹ, ಬೆಂಡು ಮರದ ಚೌಕಿಯಲ್ಲಿ ಕುಳಿತಿದ್ದದರಿಂದ,

ತೇಲುತ್ತಾ, ಅಲೆಗಳಿಂದ ಬಡಿಸಿ ಕೊಳ್ಳುತ್ತಾ, ಒಬ್ಬರೊಬ್ಬರೊಂದೊಂದು ಕಡೆಗಾಗಿ ಅಲೆಯ ಹೊಯಿಲಿಂದ ಅಂಗಗಳೆಲ್ಲಾ ಜರ್ಝರೀ ಭೂತವಾಗಿ ಸಿಂಹಳ ದ್ವೀಪದ ತಡಿಯನ್ನು ಶೇರಿ, ಮೂರ್ಛಿತರಾಗಿ ಬಿದ್ದರು. ಇತ್ತಲಾ ಕಡೆಯು ಉಕ್ಕಡದ ತಳವಾರನು ಬಂದು ಇಳಿದಿದ್ದ ದಂಡನ್ನು ಕಾಣದೆ, ಸಿಂಹವಿಕ್ರಮ ರಾಯನಿಗೆ ಸುದ್ದಿಯನ್ನು ಕೊಡಲು; ಆತನು ಮಹಾ ಸಂತೋಷದಿಂದ ಧ್ವಜ ಸ್ತಂಭವನ್ನೇರಿ, ಕತ್ತಿನಲ್ಲಿ ಇದ್ದ ಶಿಖೀ ಸರವನ್ನು ಆ ಕಂಭಕ್ಕೆ ತಗಲ ಹಾಕಿ, ದೃಷ್ಟೀ ಕೊಳವೆಯನ್ನಿಟ್ಟು ಕೊಂಡು ನೋಡಿ, ಸಂತೋಷ ಸಮುದ್ರದಲ್ಲಿ ಮುಳುಗಿ, ಸರವನ್ನು ಮರೆತು, ಕೆಳಗೆ ಬಂದನು. ಆ ಸರವನ್ನು ಒಂದು ಕಾಗೆಯು ಕಚ್ಚಿ ಕೊಂಡು, ಹಾರಿ ಬಂದು, ಕಡಲ ಧಡದಲ್ಲಿ ಮೂರ್ಛಿತನಾಗಿ, ಕೈ ಕಾಲು ಅಲುಗದೆ ಬಿದ್ದಿರುವ ಚಂಡಪರಾಕ್ರಮಿಯನ್ನು ಕಂಡು, ಹೆಣವೆಂದು ತಿಳಿದು, ಅವನ ಮೇಲೆ ಬಂದು ಕುಳಿತು ಕೊಂಡು, ತನ್ನ ಕೊಕ್ಕಿನಿಂದ ಕುಕ್ಕಲು; ಅವನು ಸ್ವಲ್ಪ ಅಲುಗಾಡಲಾಗಿ, ಹೆಣವಲ್ಲವೆಂದು ಬೆದರಿ, ಸರವನ್ನು ಅವನ ಮೈ ಮೇಲೆಯೇ ಬಿಟ್ಟು, ಹಾರಿ ಹೋಯಿತು. ಇತ್ತಲಾ ಸಿಂಹವಿಕ್ರಮ ರಾಯನು ಸರವನ್ನು ನೆನಸಿ ಕೊಂಡು, ಧ್ವಜ ಸ್ತಂಭವನ್ನು ನೋಡಿಸಲಾಗಿ; ಅಲ್ಲಿ ಇಲ್ಲದೆ ಇದ್ದದರಿಂದ, ತಳವಾರರ ಗೊತ್ತುಗಾರನನ್ನು ಕರಿಸಿ, ಈ ಸರವನ್ನು ಕದ್ದೊಯ್ದವನ್ಯಾರೋ, ಅವನನ್ನು ಗೊತ್ತು ಮಾಡಿ, ಹಿಡಿದು, ಅವನ ಮೊಣಕಾಲುಗಳೆರಡನ್ನೂ ತುಂಡು ಮಾಡಿ, ನಾಲ್ಕು ಬೀದಿಯು ಕೂಡಿದ ಜಾಗದಲ್ಲಿ ಕೆಡವಿ, ಆ ಸರವನ್ನು ತೆಗೆದು ಕೊಂಡು ಬರುವದೆಂದು, ಅಪ್ಪಣೆಯನ್ನಿತ್ತನು. ಅವರು ಹುಡುಕುತ್ತಾ ಬಂದು, ಸಮುದ್ರ ತೀರದಲ್ಲಿ ಜ್ಞಾನವಿಲ್ಲದೆ ಬಿದ್ದಿರುವ ಚಂಡಪರಾಕ್ರಮಿಯನ್ನೂ ಅವನ ಮೇಲಿರುವ ಶಿಖೀ ಸರವನ್ನೂ ಕಂಡು, ಇವನೇ ಕಳ್ಳನೆಂದು ಬಗೆದು, ಅವನ ಎರಡು ಮೊಣಕಾಲುಗಳನ್ನು ಕತ್ತರಿಸಿ, ಅವನ ಎರಡು ತೊಡೆಗಳನ್ನು ಕಾಸಿದ ಎಣ್ಣೆಯಲ್ಲಿ ಅದ್ದಿ, ಅವನನ್ನು ನಾಲ್ಕು ಬೀದಿ ಕೂಡಿದ ದಾರಿಯಲ್ಲಿ ಕೆಡವಿ, ಸರವನ್ನು ತಂದು, ಧೊರೆಗೆ ಒಪ್ಪಿಸಿದರು. ಬಳಿಕ ಆ ಊರಲ್ಲಿ ಇರುವ ಒಬ್ಬ ಅಡುಗೂಲಜ್ಜಿಯು ದಾರಿಯಲ್ಲಿ ಹೋಗುತ್ತಾ, ಈ ಚಂಡ ಪರಾಕ್ರಮಿಯನ್ನು ಕಂಡು, ಇಂಥಾ ರಾಜ ಕುಮಾರನಿಗೆ ಇಂಥಾ ದುರ್ದಶೆಯು ಬಂತಲ್ಲಾ? ಎಂದು, ಕನಿಕರದಿಂದ ಇವನನ್ನು ಕೂಲಿ ಆಳುಗಳ ಕಡೆಯಿಂದ ಮನೆಗೆ ಹೊರಿಸಿ ಕೊಂಡು ಹೋಗಿ, ಶೀತೋಪಚಾರಗಳನ್ನು ಮಾಡುವದು; ಸ್ವಲ್ಪ ಚೇತರಿಸಿ ಕೊಂಡನು. ಆ ಬಳಿಕ ಅನ್ನೋದಕಗಳನ್ನೂ ಉಡುವದಕ್ಕೆ ಬಟ್ಟೆ ಬರೆಗಳನ್ನೂ ಕೊಟ್ಟು ಕೊಂಡು, ಆರೈಕೆ ಮಾಡಿ ಕೊಂಡು, ತನ್ನ

ಮನೆಯಲ್ಲಿ ಇರಿಸಿ ಕೊಂಡಿದ್ದಳು. ಇತ್ತಲಾ ಬೇಡ ಸೇನಾಧಿಪತಿಯು ಮರ
ವೆ ತಿಳಿದು, ಮಹಾ ವ್ಯಸನಗೊಂಡು, ಹರಿದತ್ತನೂ ಚಂಡಪರಾಕ್ರಮಿಯೂ
ಏನಾದರೋ? ಎಂದು ದುಖ್ಖ ಪಡುತ್ತಾ, ಅವರನ್ನು ಹುಡುಕುತ್ತಾ, ಆ ಸಿಂಹಳ
ದ್ವೀಪದಲ್ಲಿ ತಿರುಗುತ್ತಿರುವಲ್ಲಿ; ಒಂದು ಪರ್ವತದ ಬಳಿಯಲ್ಲಿ ಇರುವ ತೋಟದ
ಕೊಳದ ಮೆಟ್ಟಿಗೆಯ ಮೇಲೆ ಕುಳಿತು ಕೊಂಡು, ದೇವರ ಧ್ಯಾನವನ್ನು ಮಾ
ಡುತ್ತಿದ್ದ ಹರಿದತ್ತನನ್ನು ಕಂಡು, ಮಹಾ ಸಂತೋಷದಿಂದ ಅವನೆಡೆಗೆ ಬಂದು,
ತಬ್ಬಿ ಕೊಂಡು—ಈ ಮಹಾ ಪ್ರಳಯದಲ್ಲಿ ಜೀವದಿಂದ ಉಳು ಕೊಂಡು ಇ
ದ್ದೀಯಾ? ಎಂದು, ಕಣ್ಣಿನಲ್ಲಿ ನೀರ ಬಿಟ್ಟು, ಕೇಳಿದನು. ಅದಕ್ಕೆ ಹರಿದತ್ತನು—
ಯಾಕೆ ಅಳುತ್ತೀಯೋ? ನಾವು ಮಾಡಿ ಇದ್ದ ಪಾಪಕ್ಕೆ ದೇವರು ನಮಗೆ ಶಿಕ್ಷೆ
ಯನ್ನು ಕೊಟ್ಟನು. ಇದಕ್ಕೆ ನಾವು ಕಂಗೆಡದೆ, ದೇವರನ್ನು ನಂಬಿ, ಪ್ರಾರ್ಥಿ
ಸಿ ಕೊಂಡಿದ್ದರೆ, ಕಾಪಾಡುವನು ಎಂದು ಹೇಳಲು; ಬೇಡ ಸೇನಾಧಿಪತಿಯು—
ಯುವರಾಜನಾದ ಚಂಡಪರಾಕ್ರಮಿಯು ಏನಾದನೋ? ತಿಳಿಯದು ಎಂದು
ಹೇಳಿದನು. ಅದಕ್ಕೆ ಹರಿದತ್ತನು—ನಿನಗೂ ನನಗೂ ಕೂಡಿಸಿದ ದೇವರು
ಅವನನ್ನು ಕೂಡಿಸುತ್ತಾನೆ ಎಂದು ಈರ್ವರು ಕಾಡಿನಲ್ಲಿ ಗೆಡ್ಡೆ ಗೆಣಸು ಹ
ಣ್ಣು ಹಂಪಲುಗಳನ್ನು ತಂದು ತಿನ್ನುತ್ತಾ, ದೇವರ ಧ್ಯಾನವನ್ನು ಮಾಡಿ ಕೊಂ
ಡು ಇದ್ದರು.

ಇತ್ತಲಾ ಸಿಂಹವಿಕ್ರಮನ ಮಗಳಾದ ಆನಂದವಲ್ಲಿಯು, ಚಂಡಪರಾಕ್ರಮಿ
ಯ ವಿಚಾರವನ್ನು ಕೇಳಿ, ಬಂದು, ತಂದೆಯ ಅಡಿಗೆ ಕಂಬನಿ ತುಳುಕುತ್ತಾ,
ಅಡ್ಡ ಬಿದ್ದು—ಐಯ್ಯಾ, ತಂದೆಯೇ, ನನ್ನ ಮನದಲ್ಲಿ ಮದುವೆಯಾದ ನನ್ನ ಮ
ನೋವಲ್ಲಭನಾದ ಚಂಡಪರಾಕ್ರಮಿಯು, ದಂಡು ಸಹಿತ, ಸಮುದ್ರದಲ್ಲಿ ಮು
ಳುಗಿ ಹೋದನಂತೆ. ವಿಧವೆಯಾಗಿ ಬದುಕುವ ಈ ನನ್ನ ಬಾಳಿನಿಂದ ಏನು
ಪ್ರಯೋಜನ? ಈ ಒಡಲಲ್ಲಿ ಹರಣವಿರುವ ತನಕ ಅರಣ್ಯದಲ್ಲಿ ಹಣ್ಣು ಹಂಪ
ಲು ತಿಂದು ಕೊಂಡು, ದೇವರ ಧ್ಯಾನವನ್ನು ಮಾಡಿ ಕೊಂಡು ಇರುವೆನು ಎಂ
ದು ಹೇಳಿ, ಅಪ್ಪಣೆ ಕೊಡ ಬೇಕೆಂದು ಕೇಳಿದಳು. ಅದಕ್ಕೆ ಸಿಂಹವಿಕ್ರಮ
ನು—ಅಮ್ಮಣ್ಣೀ, ಆನಂದವಲ್ಲಿಯೇ, ನಿನ್ನ ಪ್ರಿಯನಾದ ಚಂಡಪರಾಕ್ರಮಿಯು ಸ
ತ್ತು ಹೋದನೆಂದು ಹ್ಯಾಗೆ ನಿಶ್ಚೈಸ ಬೇಕು? ಅರಣ್ಯದಲ್ಲಿ ಮಾಡುವ ದೇವ
ರ ಧ್ಯಾನವನ್ನು ಇಲ್ಲಿ ಅರಮನೆಯಲ್ಲಿ ಇದ್ದು ಕೊಂಡು, ಮಾಡು. ದೇವರು
ನಿನ್ನ ಮನೋಭಿಲಾಷೆಯನ್ನು ನೆರವೇರಿಸುವನು. ನಾನು ಸಮಸ್ತ ದೇಶದ
ಅರಸುಗಳಿಗೆ ನಿನ್ನ ಸ್ವಯಂವರಕ್ಕೋಸ್ಕರ ನಿರೂಪವನ್ನು ಬರಿಸಿ ಕರಿಸುವೆ

ನು. ನಿನ್ನ ಮನೋವಲ್ಲಭನು ಜೀವಂತನಾಗಿದ್ದರೆ, ಆತನೂ ಬರುವನು. ಆವಾಗ ನೀನು ಆತನನ್ನು ವರಿಸ ಬಹುದು ಎಂದು, ಸಮಾಧಾನಗೊಳಿಸಿ, ಸಕಲ ದೇಶದ ಅರಸುಗಳಿಗೂ ಸ್ವಯಂವರ ಪತ್ರಿಕೆಯನ್ನು ಬರಿಸಿ ಕಳುಹಿಸಿದ್ದರಿಂದ, ಎಲ್ಲರು ಸಿಂಹವಿಕ್ರಮನ ಪಟ್ಟಣಕ್ಕೆ ಬರುತ್ತಿದ್ದರು. ಕುಶಲಾವತಿ ನಗರದ ಕುಶಲಶೇಖರ ರಾಯನು, ತನ್ನ ಮಗನಾದ ಚಂಡಪರಾಕ್ರಮಿಯು, ಸಮಸ್ತ ಪರಿವಾರ ಸಹಿತ, ಸಮುದ್ರದಲ್ಲಿ ಮುಳುಗಿ ಹೋದನೆಂಬ ಸುದ್ದಿಯನ್ನು ಕೇಳಿ, ಮಹಾ ವ್ಯಾಕುಲದಿಂದ ಮಂತ್ರಿ ಸಹಿತ ಸಕಲ ಸೇನಾ ಸಮೇತನಾಗಿ ಸಿಂಹವಿಕ್ರಮನ ಪಟ್ಟಣವನ್ನು ಕುರಿತು ಹೊರಟು ಬರುವ ಮಾರ್ಗದಲ್ಲಿ, ಒಂದು ಹೊಳೆಯ ಧಡದಲ್ಲಿ ದಂಡನ್ನು ಬಿಡಿಸಿ, ಇಳಿದು ಕೊಂಡು ಇದ್ದರು. ಅಲ್ಲಿಗೆ ದೇವದಾಸನು ಪತ್ನಿಯಾದ ದೇವದಾಸಿಯೊಡನೆ ದೇಶ ಸಂಚಾರವನ್ನು ಮಾಡುವದಕ್ಕೋಸ್ಕರ ಹೋಗಿದ್ದವರು ಆ ದಂಡಿಳಿದಿರುವ ಬಳಿಯಲ್ಲಿ ಬರುತ್ತಿರಲು; ಆ ದಂಪತಿಗಳನ್ನು ಅರಸೂ ಮಂತ್ರಿಯೂ ಕಂಡು, ಎದುರಾಗಿ ಹೋಗಿ, ನಮಸ್ಕಾರವನ್ನು ಮಾಡಿ—ನಿಮ್ಮನ್ನು ಕಂಡರೆ, ಬಹಳ ಸಾತ್ವೀಕರಾಗಿ ಕಾಣುತ್ತೀರಿ. ಎಲ್ಲಿಂದ ಬಂದಿರಿ? ನೀವು ಸಂಚಾರ ಮಾಡಿದ ಸ್ಥಳಗಳಲ್ಲಿ ವಿಶೇಷ ಸಮಾಚಾರ ವೇನು? ಅಪ್ಪಣೆ ಕೊಡ ಬೇಕೆಂದು ಕೇಳಲು; ದೇವದಾಸನು—ನನಗೆ ಒಂದು ಸಮಾಚಾರವೂ ತಿಳಿಯದು. ಆದರೆ ಜಗದ ಜನರು ದೇವರನ್ನು ನಂಬದೆ, ಸುಖ ಬಂದಾಗ ಸಂತೋಷದಿಂದ ಉಬ್ಬಿ, ತಮಗೆ ಯಾರೂ ಸರಿ ಇಲ್ಲವೆಂದು ಗರ್ವದಿಂದ ನಲಿಯುತ್ತಾ; ದುಃಖ ಬಂದಾಗ ಕಂಗೆಟ್ಟು, ಬೆಂದು, ಬೆಂಡಾಗಿ, ನರಳುತ್ತಾ ಇರುವದೊಂದು ವಿಚಾರ ಮಾತ್ರ ನನಗೆ ಚನ್ನಾಗಿ ತಿಳಿಯುವದು ಎಂದು ಹೇಳಿದನು. ಆಗ ಅರಸೂ ಮಂತ್ರಿಗಳೀರ್ವರೂ ಆ ದಂಪತಿಗಳನ್ನು ಕುರಿತು—ನೀವು ಮಹಾ ಪುರುಷರು, ದೇವರ ಭಕ್ತರು. ನೀವು ನಮ್ಮ ಮೇಲೆ ದಯವಿಟ್ಟು, ನಮ್ಮಲ್ಲಿ ಇದ್ದು ಕೊಂಡು ಇದ್ದು, ನಮಗೆ ಶ್ರೇಯಸ್ಸು ಉಂಟಾಗುವಂತೆ ಮಾಡ ಬೇಕೆಂದು ಬಹಳ ನಿರ್ಬಂಧ ಪಡಿಸಿದ್ದರಿಂದ, ಅವರ ಸಂಗಡಲೇ ಹೊರಟು ಬಂದು, ಸಿಂಹಳದ್ವೀಪವನ್ನು ಸೇರಿ, ಸಿಂಹವಿಕ್ರಮನಿಂದ ಮಾಡಿಸಿ ಕೊಡಲ್ಪಟ್ಟ ಬಿಡಾರದಲ್ಲಿ ಅರಸು ಮಂತ್ರಿಗಳೊಡನೆ ಇದ್ದು ಕೊಂಡು ಇದ್ದರು.

ಹೀಗಿರುವಲ್ಲಿ, ಸಮಸ್ತ ದೇಶದ ಅರಸುಗಳು ಬಂದದ್ದನ್ನು ತಿಳಿದು, ಸ್ವಯಂವರ ಮಂಟಪವನ್ನು ರಚಿಸಿ, ಉಚಿತಾಸನದಲ್ಲಿ ಕುಳ್ಳಿರಿಸಿ, ರಾಜ ಕನ್ನಿಕೆಯಾದ ಆನಂದವಲ್ಲಿಯನ್ನು ಕರೆದು—ಅಮ್ಮಣ್ಣೀ, ಸಕಲ ದೇಶದ ಧೊರೆ

ಗಳು ಬಂದು, ಸ್ವಯಂವರ ಮಂಟಪದಲ್ಲಿ ಕುಳಿತಿದ್ದಾರೆ. ನೀನು ಬಂದು, ನಿನ್ನ ಮನ ಬಂದವನಿಗೆ ಮಾಲಿಕೆಯನ್ನು ಹಾಕು ಎಂದು ಹೇಳಿದನು. ಒಳ್ಳೇದು! ಎಂದು, ಶೃಂಗಾರವಾಗುತ್ತಾ ಇದ್ದಳು. ಅಷ್ಟರಲ್ಲಿ ಅಡುಗೂಲಜ್ಜಿಯ ಮನೆಯಲ್ಲಿರುವ ಚಂಡಪರಾಕ್ರಮಿಯ ಬುದ್ಧ್ಯಭಿಮಾನಿಯಾದ ದೇವತೆಗೂ, ಕರ್ಮಾಭಿಮಾನಿಯಾದ ದೇವತೆಗೂ—ನಾನು ದೊಡ್ಡವಳು, ತಾನು ದೊಡ್ಡವಳು ಎಂಬದರಲ್ಲಿ ಜಗಳ ಬಂದು, ಇದರ ನಿಷ್ಕರ್ಷೆಯು ಬಗ್ಯೆ ದೇವರ ಬಳಿಗೆ ಹೋಗಿ ಕೇಳ ಬೇಕೆಂದು ಹೊರಟು ಬರುವ ಮಾರ್ಗದಲ್ಲಿ ಹರಿದತ್ತನನ್ನು ಕಂಡು—ನೀನು ಯಾರು? ಮಹಾ ದೇವರ ಭಕ್ತನಾಗಿ ಕಾಣುತ್ತೀಯೇ. ನಾವು ಚಂಡಪರಾಕ್ರಮಿ ಎಂಬ ರಾಜ ಕುಮಾರನ ಬುದ್ಧಿಕರ್ಮಾಭಿಮಾನ ದೇವತೆಗಳು. ನಮ್ಮ ಈರ್ವರಲ್ಲಿ ಯಾರು ದೊಡ್ಡವಳೆಂದು ನಿನಗೆ ತಿಳಿದರೆ, ಹೇಳ ಬಹುದೆಂದು ಕೇಳಿದರು. ಅದಕ್ಕೆ—ನಿಮಗೆ ಆಶ್ರಯೀಭೂತನಾದ ಚಂಡಪರಾಕ್ರಮಿಯನ್ನು ನನ್ನೆಡೆಗೆ ಕರತಂದರೆ, ನಿಮ್ಮ ಜಗಳವನ್ನು ತೀರಿಸುವೆನೆಂದು ಹೇಳಿದನು. ಆಗ ಇಬ್ಬರು ಅಭಿಮಾನ ದೇವತೆಗಳು ಅಡುಗೂಲಜ್ಜಿಯ ಮನೆಗೆ ಹೋಗಿ, ಚಂಡಪರಾಕ್ರಮಿಯನ್ನು ಹೊತ್ತು ಕೊಂಡು ಬಂದು, ಹರಿದತ್ತನ ಮುಂದೆ ಇಳಿಸಿದರು. ಆಗ ಪರಸ್ಪರಾಲೋಕನದಿಂದ ಸಂತೋಷ ಪಟ್ಟು, ಕುಳಿತು ಕೊಂಡಿರುವಲ್ಲಿ—ನಮ್ಮ ಚಂಡಪರಾಕ್ರಮಿಗೆ ಕಡದಿರುವ ಕಾಲುಗಳನ್ನು ಉಂಟು ಮಾಡಿ, ಸಮುದ್ರದಲ್ಲಿ ಮುಳುಗಿ ಹೋದ ನಮ್ಮ ಚತುರಂಗ ಬಲದಲ್ಲಿ ಒಂದು ಉಳಿಯದಂತೆ ಎದ್ದು, ಸಿಂಹವಿಕ್ರಮನ ಪಟ್ಟಣಕ್ಕೆ ಪ್ರವೇಶಿಸಿ, ಆತನನ್ನು ಕೈಶೆರೆ ಹಿಡಿದು, ನೀವು ನಮ್ಮಲ್ಲಿ ತಂದು ಕೊಡುವಂತೆ ವರವನ್ನು ಕೊಟ್ಟರೆ, ನಿಮ್ಮ ವ್ಯವಹಾರವನ್ನು ತೀರಿಸಿ ಕೊಡುವೆನೆಂದು, ಹರಿದತ್ತನು ಹೇಳಿದ್ದರಿಂದ—ಹಾಗೆ ಆಗಲಿ ಎಂದು ವರವನ್ನು ಕೊಟ್ಟು, ಕೇಳಲು; ಹರಿದತ್ತನು ಬುದ್ಧಿಃ ಕರ್ಮಾನುಸಾರಿಣೀ ಎಂದು ದೇವರ ವಾಕ್ಯವಿರುವದರಿಂದ ಕರ್ಮಾಭಿಮಾನ ದೇವತೆಯು ಯಜಮಾನಿಯು; ಬುದ್ಧ್ಯಭಿಮಾನ ದೇವತೆಯು ಆಕೆಯ ಅನುಚರಿಯು. ಇದು ಸತ್ಯವು. ಆದ್ದರಿಂದ ಇನ್ನು ಮೇಲೆ ಇಂಥಾ ವ್ಯರ್ಥ ಜಗಳವನ್ನು ಮಾಡದೆ, ಸುಖವಾಗಿ ಈ ಚಂಡಪರಾಕ್ರಮಿಯಲ್ಲಿ ವಾಸಾ ಮಾಡಿ ಕೊಂಡಿರಿ, ಎಂದು ಹೇಳಿದ ಕ್ಷಣದಲ್ಲಿಯೇ, ಚಂಡಪರಾಕ್ರಮಿಯ ಕಾಲುಗಳು ಪೂರ್ವದಂತೆ ಹುಟ್ಟಲು; ಚಂಡಪರಾಕ್ರಮಿ, ಹರಿದತ್ತ, ಜೀವಿತಸೇನಾಧಿಪತಿ ಸಹ, ಸಾಷ್ಟಾಂಗವಾಗಿ ಪ್ರಣಾಮವನ್ನು ಮಾಡಲು; ಅಭಿಮಾನ ದೇವತೆಗಳು—ನಿಮ್ಮ ಇಷ್ಟಾರ್ಥ ಕೈ ಕೂಡಲೆಂದು ಹ

ರಸಿ ಅದೃಶ್ಯರಾಗಿ, ಚಂಡಪರಾಕ್ರಮಿಯ ಶರೀರವನ್ನು ಹೊಕ್ಕು, ತಮ್ಮ ತಮ್ಮ ಸ್ಥಾನದಲ್ಲಿ ನೆಲೆಗೊಂಡರು.

ಇತ್ತಲಾಗಿ ದೇವರ ದಯದಿಂದ ಸಮುದ್ರದಲ್ಲಿ ಮುಳುಗಿ ಹೋದ ಇವರ ಚತುರಂಗ ಬಲವು ಎದ್ದು, ಸಿಂಹವಿಕ್ರಮನ ಅರಿದುರ್ಘಟವೆಂಬ ಪಟ್ಟಣವನ್ನು ಮುತ್ತಿ, ಸ್ವಯಂವರ ಮಂಟಪವನ್ನು ಹೊಕ್ಕು, ಸಿಂಹವಿಕ್ರಮನನ್ನು ಹಿಡಿದು, ಕೆಲವರು ಆತನ ಸೇನೆಯೊಡನೆ ಯುದ್ಧಕ್ಕೆ ನಿಂತು, ಕೆಲವರು ಸಿಂಹವಿಕ್ರಮನನ್ನು ಮದ್ದಾನೆಯ ಮೇಲೆ ಅಂಬಾರಿಯಲ್ಲಿ ಕೂರಿಸಿ ಕೊಂಡು, ಚಂಡಪರಾಕ್ರಮಿ ಇರುವ ಸ್ಥಳಕ್ಕೆ ಕರೆದು ಕೊಂಡು ಬರುತ್ತಾ ಇರುವಲ್ಲಿ, ಚಂಡಪರಾಕ್ರಮಿಯು ದೂರದಿಂದ ಕಂಡು, ಹರಿದತ್ತನನ್ನೂ ಬೇಡಸೇನಾಧಿಪತಿಯನ್ನೂ ಕರೆದು ಕೊಂಡು, ಆತನೆಡೆಗೆ ಹೋಗಿ, ಭೂಮಿಯಲ್ಲಿ ಸಾಷ್ಟಾಂಗ ಪ್ರಣಾಮವನ್ನು ಮಾಡಿ, ಕೈ ಮುಗಿದು, ನಿಂತು ಕೊಂಡು—ಸ್ವಾಮಿ, ಸಿಂಹಳ ದ್ವೀಪದ ಸಾರ್ವಭೌಮರಾದ ಸಿಂಹವಿಕ್ರಮ ಮಾವಾಜಿಯವರೇ, ಚಂಡಪರಾಕ್ರಮಿ ಎಂಬ ನಿಮ್ಮ ಅಳಿಯನು ನಾನೇ. ದೇವರು ಮಾಡಿದಂಥಾ ಕೆಲಸಕ್ಕೆ ನಾವು ಸರ್ವರೂ ಸಂತೋಷ ಪಟ್ಟು ಕೊಂಡು ಇರ ಬೇಕೇ ಹೊರ್ತು, ವ್ಯಸನ ಪಡ ಕೂಡದು. ನಿಮ್ಮ ಚಿರಂಜೀವಿಯಾದ ನನ್ನ ಅಪರಾಧಗಳನ್ನು ಚಿತ್ತದಲ್ಲಿ ತಾರದೆ, ಬಾಲಕನನ್ನು ಮನ್ನಿಸ ಬೇಕೆಂದು ತಿರಿಗಿ ಪೊಡಮಡಲು; ಸಿಂಹವಿಕ್ರಮನು ಆನೆಯಿಂದ ಇಳಿದು, ಆಲಿಂಗಿಸಿ ಕೊಂಡು, ಈ ಮೂವರು, ತಾನು ಸಹ, ಗಜಾರೋಹರಾಗಿ ಪಟ್ಟಣಕ್ಕೆ ಬಂದು, ಅರಮನೆಯಲ್ಲಿ ಇಳಿದು, ಕುಶಲಶೇಖರ ರಾಯನ ಬಿಡಾರಕ್ಕೆ ಸರ್ವರು ಬಂದು, ಕಾಣಿಸಿ ಕೊಳ್ಳಲು; ದೇವದಾಸನು ಸರ್ವರ ಮುಂದೆ ಆದಿಯಿಂದ ನಡೆದ ವೃತ್ತಾಂತವನ್ನು ಯಾವತ್ತೂ ತಿಳಿಸಲು; ಸರ್ವರು—ಇವರು ಹರಿದಾಸನ ಜನಕರಾದ ತಾಯಿ ತಂದೆಗಳೆಂದು ತಿಳಿದು, ಅತ್ಯಾಶ್ಚರ್ಯ ಗೊಂಡು, ಚಂಡಪರಾಕ್ರಮಿಗೂ ಆನಂದವಲ್ಲಿಗೂ ಮದುವೇ ಪ್ರಸ್ತವನ್ನು ಬೆಳಸಿ, ಸಿಂಹವಿಕ್ರಮನು ತನ್ನ ದ್ವೀಪದಲ್ಲಿ ನಾಲ್ಕು ಭಾಗದಲ್ಲಿ ಒಂದು ಭಾಗವನ್ನು ಅಳಿಯನಿಗೆ ಧಾರೆ ಎರೆದು ಕೊಟ್ಟು, ಕುಶಲಾವತೀ ನಗರಕ್ಕೆ ಅಪ್ಪಣೇ ಕೊಟ್ಟು ಕಳುಹಿಸಿದನು. ಬಳಿಕ ಕುಶಲಶೇಖರ ರಾಯನು ಸರ್ವ ಪರಿವಾರ ಸಮೇತನಾಗಿ ಪಟ್ಟಣಕ್ಕೆ ಬಂದು, ದೇವದಾಸನನ್ನೂ ದೇವದಾಸಿಯನ್ನೂ ಪೂಜಿಸುತ್ತಾ, ದೇವರ ಧ್ಯಾನವನ್ನು ಮಾಡಿ ಕೊಂಡು, ಸುಖದಲ್ಲಿದ್ದನು.

———:o:———

ವ
ವ

ಟ್ಟ
ಹ್ಮ
ರು
ತಂ
ಣ
ನೊ
ಳ್ಳ
ವ
ವ
ಸ್ವ
ನು
ಹೆ
ಸ್ತ್ರೀ
ಗ
ಗ
ಇ
ಹು

PART II.

:o:

Extracts from the Shiba Purana.

:o:

51. The Reward of worshipping Shiva—The Devout Fisherman of Negapatam.

೫೧. ನಿಯಮದಿಂದ ಶಿವಪೂಜೇ ಮಾಡುವ ಫಲ—ನಾಗಪಟ್ಟಣದ ಬೆಸ್ತನ ಕಥೆ.

ಲೋಕದಲ್ಲಿ ನಿಯಮದಿಂದ ಪರಮೇಶ್ವರ ಸ್ವಾಮಿಯವರಿಗೆ ಸೇವೆಯನ್ನು ಮಾಡುವವರು ಸಂಸಾರ ಬಂಧನಗಳನ್ನು ಪರಿಹರಿಸಿ ಕೊಂಡು, ಮುಕ್ತರಾಗುವರು. ಈ ಅರ್ಥದಲ್ಲಿ ಒಂದು ಕಥೆಯನ್ನು ಹೇಳುತ್ತೇನೆ; ಕೇಳು.

ಚೋಳ ದೇಶದಲ್ಲಿ, ಸಮುದ್ರದ ಸಮೀಪದಲ್ಲಿ, ನಾಗಪಟ್ಟಣವೆಂಬ ಒಂದು ಪಟ್ಟಣ ಉಂಟು. ಆ ಪಟ್ಟಣವು ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಗಿ, ಬ್ರಾಹ್ಮಣರಿಂದ ತುಂಬಿ ಇರುವಂಥಾದ್ದಾಗಿ, ಕುಬೇರನ ಪಟ್ಟಣಕ್ಕೆ ಸಮಾನವಾಗಿ ಇರುವದು. ಮತ್ತು ಆ ಪಟ್ಟಣದಲ್ಲಿ ವರ್ತಕರು ಮನೆಗಳಲ್ಲಿ ದ್ವೀಪಾಂತರಗಳಿಂದ ತಂದ ನವರತ್ನಗಳನ್ನು ರಾಶಿಗಳಾಗಿ ತುಂಬಿ ಇಟ್ಟು ಕೊಂಡು, ಬಿಸಲುಗಳಲ್ಲಿ ಒಣಗಿಸಿ, ಕೊಳಗಗಳಿಂದ ಅಳೆದು, ತಿರಿಗಿ ರಾಶಿಗಳಾಗಿ ತುಂಬುತ್ತಿರುವರು. ಎಲ್ಲಿ ನೋಡಿದರೂ ನವರತ್ನ ಮಯಗಳಾದ ಮನೆಗಳೂ, ವಿಸ್ತಾರವಾದ ಬೀದಿಗಳೂ, ಉನ್ನತವಾದ ಉಪ್ಪರಿಗೆಗಳೂ, ಅಗಲವಾದ ಹಜಾರಗಳೂ ಒಪ್ಪುತ್ತಿರುವವು. ಮತ್ತು ಹಡಗುಗಳಿಂದ ವ್ಯಾಪಾರವನ್ನು ಮಾಡುವಂಥ ಅನೇಕ ಮಂದಿ ವರ್ತಕರು ಬಹು ಧನವನ್ನು ಸಂಪಾದಿಸಿ, ಧರ್ಮಾತ್ಮಕರಾಗಿ ಸಕಲ ದಾನಗಳನ್ನು ಮಾಡುತ್ತಿರುವರು. ಅಂಥ ನಾಗಪಟ್ಟಣದಲ್ಲಿ ಮೀನದತ್ತನೆಂಬ ಒಬ್ಬ ಬೆಸ್ತನು ಸಮುದ್ರದಲ್ಲಿ ಇರುವ ಮತ್ಸ್ಯಗಳನ್ನು ಹಿಡಿದು, ವ್ಯಾಪಾರವನ್ನು ಮಾಡಿ, ಹೆಚ್ಚಾಗಿ ಹಣವನ್ನು ಸಂಪಾದಿಸಿ, ತನ್ನ ಕುಲದಲ್ಲಿ ಹುಟ್ಟಿದ ಮಾಲಿನಿ ಎಂಬ ಸ್ತ್ರೀಯನ್ನು ಮದುವೆ ಮಾಡಿ ಕೊಂಡು, ಅವಳೊಡನೆ ಕೂಡಿ, ಸಕಲ ಭೋಗಗಳನ್ನು ಅನುಭವಿಸುತ್ತಾ, ಒಂದು ದಿವಸ ಕಾವೇರೀ ಸಂಗಮದಲ್ಲಿ ಮತ್ಸ್ಯಗಳನ್ನು ಹಿಡಿದು, ಧಡದಲ್ಲಿ ಗುಡ್ಡೇ ಹಾಕಿ ಕೊಂಡು, ವ್ಯಾಪಾರ ಮಾಡುತ್ತಾ, ಇರಲು; ಆ ಕಾವೇರೀ ತೀರದಲ್ಲಿ ಇರುವಂಥ ಬ್ರಾಹ್ಮಣರೆಲ್ಲರು ಆಷಾಢ ಬಹುಳ ಅಮಾವಾಸ್ಯೆಯಲ್ಲಿ ಸಂಗಮದಲ್ಲಿ ಸ್ನಾನವನ್ನು ಮಾಡುವದಕ್ಕೋಸ್ಕರ

ಸಮುದ್ರ ಧಡದಲ್ಲಿ ನಿಂತು, ಸ್ನಾನವನ್ನು ಮಾಡಿ, ಧಡದಲ್ಲಿ ಕುಳಿತು ಕೊಂಡು, ಕೆಲವರು ಜಪಾ ಮಾಡುತ್ತಿದ್ದರು; ಕೆಲವರು ಪುರಾಣಗಳನ್ನು ಹೇಳುತ್ತಿದ್ದರು; ಕೆಲವರು ದಾನಧರ್ಮಗಳನ್ನು ಮಾಡುತ್ತಿದ್ದರು. ಆ ಮೀನದತ್ತನು ಸ್ನಾನವನ್ನು ಮಾಡುವಂಥ ಬ್ರಾಹ್ಮಣರನ್ನೂ ಕ್ಷತ್ರಿಯರನ್ನೂ ವೈಶ್ಯರನ್ನೂ ಶೂದ್ರರನ್ನೂ, ದಾನಗಳನ್ನು ಮಾಡುವಂಥ ಪುಣ್ಯ ಪುರುಷರನ್ನೂ, ಪುರಾಣವನ್ನು ಹೇಳುವಂಥ ವೃದ್ಧರನ್ನೂ ನೋಡಿ, ಆಶ್ಚರ್ಯಪಟ್ಟು, ಪುರಾಣವನ್ನು ಹೇಳುವಂಥ ಬ್ರಾಹ್ಮಣರ ಸಮೀಪದಲ್ಲಿ ನಿಂತು, ಪರಮೇಶ್ವರರ ಪಾದಗಳಲ್ಲಿ ಭಕ್ತಿಯುಳ್ಳಂಥವರು ಸಕಲ ಪಾಪಗಳನ್ನು ಪರಿಹರಿಸಿ ಕೊಂಡು, ಮುಕ್ತರಾಗುವರು; ಮತ್ತು ಪರಮೇಶ್ವರ ಸ್ವಾಮಿಯವರಿಗೆ ಭಕ್ತಿಯಿಂದ ತನ್ನ ಶಕ್ತಿಗೆ ತಕ್ಕ ಹಾಗೆ ಹಣವನ್ನಾದರೂ, ಪತ್ರ ಪುಷ್ಪ ಫಲಗಳನ್ನಾದರೂ, ಒಂದು ಮಾನ ಅಕ್ಕಿಯನ್ನಾದರೂ, ಅಡಿಕೆ ಎಲೆಗಳನ್ನಾದರೂ ತಂದು ಸಮರ್ಪಿಸಿದಂಥವರಿಗೆ ಪರಮೇಶ್ವರರು ಪ್ರಸನ್ನರಾಗಿ, ಬೇಕಾದ ವರಗಳನ್ನು ಕೊಡುವರು ಎಂಬ ಅರ್ಥವನ್ನು ಕೇಳಿ, ಪುರಾಣ ಹೇಳುವಂಥ ಬ್ರಾಹ್ಮಣನಿಗೆ ನಮಸ್ಕಾರವನ್ನು ಮಾಡಿ, ಆ ಹೊತ್ತು ಮೊದಲ್ಗೊಂಡು ಪರಮೇಶ್ವರರಲ್ಲಿ ಭಕ್ತಿಯುಳ್ಳವನಾಗಿ, ನಿತ್ಯವು ಮತ್ಸ್ಯಗಳ ವ್ಯಾಪಾರದಲ್ಲಿ ಬಂದ ಹಣದಲ್ಲಿ ನಾಲ್ಕನೇ ಪಾಲು ತೆಗೆದು, ಪರಮೇಶ್ವರ ಸ್ವಾಮಿಯವರಿಗೆ ಮೀಸಲಾಗಿ ಇರಿಸಿ, ಮಿಕ್ಕಾದ ಹಣವನ್ನು ತಾನು ವೆಚ್ಚವನ್ನು ಮಾಡಿ ಕೊಳ್ಳುತ್ತಾ, ನಿತ್ಯವು ಪರಮೇಶ್ವರ ಸ್ವಾಮಿಯವರನ್ನೇ ಮನಸ್ಸಿನಲ್ಲಿ ಸ್ಮರಿಸುತ್ತಾ, ತಿಂಗಳಿಗೆ ಒಂದು ಸಾರಿ ಕೂಡಿದ ಹಣವೆಲ್ಲವನ್ನು ತ್ಯಾಗರಾಯ ಸ್ವಾಮಿಯವರಿಗೆ ಸಮರ್ಪಿಸುತ್ತಾ, ಈ ಪ್ರಕಾರದಿಂದ ಅರುವತ್ತು ವರುಷದ ಪರ್ಯಂತರವು ನಿಯಮವನ್ನು ತಪ್ಪದೆ, ತ್ಯಾಗರಾಜಸ್ವಾಮಿಯವರಿಗೆ ಸೇವೆಯನ್ನು ಮಾಡುತ್ತಿರಲು; ಆ ಪರಮೇಶ್ವರ ಸ್ವಾಮಿಯವರ ಪ್ರಸಾದದಿಂದ ಒಬ್ಬ ದಿವ್ಯ ಪುರುಷನು ಮೀನದತ್ತನಿಗೆ ಪ್ರಸನ್ನನಾಗಿ, ಆತನ ಮನೆಯಲ್ಲಿ ಬೆಳೆಯುತ್ತಿರಲು; ಮೀನದತ್ತನು ಆ ಬಾಲಕನನ್ನು ನೋಡಿ, ಸಂತೋಷ ಪಟ್ಟು, ಪರಮೇಶ್ವರ ಸ್ವಾಮಿಯವರೇ ಈ ರೂಪದಿಂದ ಬಂದು ಇದ್ಧಾರೆ ಎಂದು ಎಣಿಸಿ, ಬಹು ಮಾನದಿಂದ ಕಾಪಾಡುತ್ತಾ, ಷ್ಯವನೆಂಬ ಹೆಸರಿನಿಂದ ಕರೆಯುತ್ತಾ, ಅಧಿಕವಾದ ಸಂತೋಷವುಳ್ಳವನಾಗಿ ಬಹು ದಿವಸ ಇದ್ದು, ಕೈಲಾಸವನ್ನೈದಿದನು; ಆ ಷ್ಯವನು ತನ್ನ ಕುಲಾಚಾರವನ್ನು ಬಿಡದೆ, ಮತ್ಸ್ಯಗಳನ್ನು ಹಿಡಿದು, ವ್ಯಾಪಾರವನ್ನು ಮಾಡುತ್ತಾ, ಬುದ್ಧಿವಂತನಾಗಿ, ದಯಾಪರನಾಗಿ ಇರುತ್ತಿರಲು; ಒಂದು ದಿವಸ ಫಾಲ್ಗುಣ ಮಾಸದಲ್ಲಿ ತ್ಯಾಗರಾಜ

ಸ್ವಾಮಿಯವರಿಗೆ ರಥೋತ್ಸವವಾಗುತ್ತಿರಲು; ಆ ನಾಗಪಟ್ಣದಲ್ಲಿ ಇರುವ ಜನರೆಲ್ಲರು ರಥೋತ್ಸವವನ್ನು ನೋಡುವದಕ್ಕೋಸ್ಕರ ಹೋಗುತ್ತಿರಲು; ಆ ಪ್ಯವನು ಅವರ ಸಂಗಡ ತಿರುವಾಲೂರಿಗೆ ಹೋಗಿ, ರಥೋತ್ಸವವನ್ನು ನೋಡಿ, ತ್ಯಾಗರಾಜಸ್ವಾಮಿಯವರನ್ನು ಮನಸ್ಸಿನಲ್ಲಿ ಧ್ಯಾನಾ ಮಾಡುತ್ತಾ, ಸಾಯಂಕಾಲ ಸಮಯದಲ್ಲಿ ಕಮಲಾಲಯದಲ್ಲಿ ಸೋಪಾನದಲ್ಲಿ ಕುಳಿತು ಕೊಂಡು, ವಿನೋದಗಳನ್ನು ನೋಡುತ್ತಿರಲು; ಆ ಹೊತ್ತು ಸಾಯಂಕಾಲದಲ್ಲಿ ಒಬ್ಬ ಬ್ರಾಹ್ಮಣನು ಸ್ನಾನವನ್ನು ಮಾಡಿ, ಮಡೀ ಉಟ್ಟು, ಸೋಪಾನದಲ್ಲಿ ಕುಳಿತು ಕೊಂಡು, ವಿಭೂತೀ ರುದ್ರಾಕ್ಷಿಗಳನ್ನು ಧರಿಸಿ, ಶಿವ ಪೂಜೆಯನ್ನು ಮಾಡಿ, ನಿರ್ಮಾಲ್ಯದ ಪತ್ರ ಪುಷ್ಪಗಳನ್ನೂ ತಿಲಾಕ್ಷತೆಗಳನ್ನೂ ಉದುಕದಲ್ಲಿ ಹಾಕಲು; ಒಂದು ಮತ್ಸ್ಯವು ಅಲ್ಲಿಗೆ ಬಂದು, ಆ ತಿಲಾಕ್ಷತೆಗಳನ್ನು ಭಕ್ಷಿಸುತ್ತಿರಲು; ಆ ಪ್ಯವನು ಅದನ್ನು ನೋಡಿ, ಹಿಡಿದು, ಸಂಹರಿಸುವದಕ್ಕೆ ಯತ್ನಾ ಮಾಡಲು; ಆ ಬ್ರಾಹ್ಮಣನು ಅದನ್ನು ನೋಡಿ, ಆತನ ಸಮೀಪಕ್ಕೆ ಬಂದು, ಆ ಮೀನನ್ನು ಬಿಟ್ಟು ಬಿಡ ಹೇಳಲು; ಆ ಪ್ಯವನು ಬ್ರಾಹ್ಮಣನ ವಾಕ್ಯವನ್ನು ಕೇಳಿ, ಆ ಮತ್ಸ್ಯವನ್ನು ಬಿಟ್ಟು, ಎದ್ದು, ಕೈಮುಗಿದು—ಸ್ವಾಮೀ, ಬ್ರಾಹ್ಮಣ ಶ್ರೇಷ್ಠರುಗಳಿರಾ, ಈ ಮತ್ಸ್ಯವನ್ನು ಬಿಟ್ಟದ್ದರಿಂದ ಫಲವೇನೆಂದು ಕೇಳಲು; ಬ್ರಾಹ್ಮಣನು ಆತನನ್ನು ನೋಡಿ—ಎಲೈ, ಪರಮ ಭಕ್ತನೇ, ನಿನ್ನ ಜಾತಿ ಯಾವದೆಂದು ಕೇಳಲು; ಆತನು ತನ್ನ ಜಾತಿಯನ್ನು ಆತನಿಗೆ ತಿಳಿಸಲು; ಆ ಬ್ರಾಹ್ಮಣನು ಅವನನ್ನು ನೋಡಿ—ಎಲೈ, ಪರಮ ಭಕ್ತರುಗಳಿರಾ, ಮೀನುಗಳನ್ನು ಕೊಲ್ಲುವದು ನಿಮ್ಮ ಜಾತಿ ಧರ್ಮವು; ಆದರೂ ನನ್ನ ಮಾತನ್ನು ಕೇಳಿ, ಈ ಮತ್ಸ್ಯವನ್ನು ಬಿಟ್ಟವರಾದ್ದರಿಂದ ನೀವು ಪರಮ ಭಕ್ತರಾಗಿ, ಪುಣ್ಯವಂತರಾಗುತ್ತೀರಿ. ನಿಮ್ಮಲ್ಲಿ ಪರಮೇಶ್ವರರು ಅನುಗ್ರಹವನ್ನು ಮಾಡುತ್ತಾರೆ. ಇದಕ್ಕೆ ಸಂಶಯವಿಲ್ಲ. ಇನ್ನು ಮೇಲೆ ಪರಮೇಶ್ವರರಲ್ಲಿ ಭಕ್ತಿಯನ್ನು ಮಾಡಿ ಎಂದು ಹೇಳಿ, ತನ್ನ ಕೈಯಲ್ಲಿ ಇದ್ದ ವಿಭೂತಿಯನ್ನು ಕೊಟ್ಟು, ನಿಮಗೆ ಶಿವಾನುಗ್ರಹವು ಉಂಟಾಗಲಿ ಎಂದು ಆಶೀರ್ವಾದವನ್ನು ಮಾಡಿ, ನೀವು ಅಧಿಕ ಭಕ್ತಿಯನ್ನು ಮಾಡಿದವರಾದ್ದರಿಂದ, ಅತಿಭಕ್ತರೆಂದು ಪ್ರಸಿದ್ಧರಾಗುತ್ತಲಿದ್ದೀರಿ ಎಂದು ನುಡಿದು, ತನ್ನ ಮನೆಗೆ ಹೋಗಲು; ಅಲ್ಲಿ ಇದ್ದ ಜನರೆಲ್ಲರು ಆತನ ಭಕ್ತಿಯನ್ನು ನೋಡಿ, ಅತಿಭಕ್ತರೆಂದು ಕರೆಯುತ್ತಿದ್ದರು.

ಆ ಅತಿಭಕ್ತರು ಆ ಹೊತ್ತು ಮೊದಲ್ಗೊಂಡು ಪರಮೇಶ್ವರರಲ್ಲಿ ಭಕ್ತಿಯುಕ್ತರಾಗಿ, ಅಲ್ಲಿಂದ ಹೊರಟು, ತಮ್ಮ ಊರಿಗೆ ಬಂದು, ಪರಮೇಶ್ವರರನ್ನು

ಸ್ಮರಿಸುತ್ತಾ, ಮತ್ಸ್ಯಗಳನ್ನು ಹಿಡಿಯುವಾಗ, ಮೊದಲು ಶಿಕ್ಕಿದ ಮತ್ಸ್ಯವನ್ನು ಪರಮೇಶ್ವರರಿಗೆ ಸಮರ್ಪಿಸಿ, ಜೀವ ಸಹಿತವಾಗಿ ಬಿಟ್ಟು ಬಿಡುತ್ತಾ, ನಿತ್ಯವು ಪರಮೇಶ್ವರರಲ್ಲಿ ಭಕ್ತಿಯನ್ನು ಮಾಡುತ್ತಾ, ಐವತ್ತು ವರುಷದ ಪರ್ಯಂತರ ನಿಯಮವನ್ನು ತಪ್ಪದೆ ನಡಿಸುತ್ತಾ ಬರುತ್ತಿರಲು; ಅಲ್ಲಿರುವ ನೆಂಟರೆಲ್ಲರು ಅತಿಭಕ್ತರನ್ನು ನೋಡಿ, ಹಾಸ್ಯ ಮಾಡುತ್ತಿರಲು; ಆ ಅತಿಭಕ್ತರು ಈಶ್ವರಾನುಗ್ರಹದಿಂದ ಮತ್ಸ್ಯಗಳನ್ನು ಹಿಡಿದು, ವ್ಯಾಪಾರಗಳನ್ನು ಮಾಡಿ, ಯಾಚಿಸಿದಂಥವರಿಗೆ ಬೇಕಾದ ಹಣವನ್ನೂ ಮತ್ಸ್ಯಗಳನ್ನೂ ಕೊಡುತ್ತಿರಲು; ಒಂದು ದಿವಸದಲ್ಲಿ ಪರಮೇಶ್ವರರು ಅವರ ಭಕ್ತಿಯನ್ನು ನೋಡುವದಕ್ಕೋಸ್ಕರ ಒಂದೇ ಮತ್ಸ್ಯವು ಶಿಕ್ಕುವ ಹಾಗೆ ಮಾಡಲು; ಅತಿಭಕ್ತರು ಆ ಒಂದು ಮತ್ಸ್ಯವನ್ನೂ ಪರಮೇಶ್ವರರಿಗೋಸ್ಕರ ಬಿಟ್ಟು ಬಿಡುತ್ತಿರಲು; ಮತ್ತೊಂದು ದಿವಸದಲ್ಲಿ ಅತಿಭಕ್ತರು ಮತ್ಸ್ಯಗಳನ್ನು ಹಿಡಿಯುವದಕ್ಕೋಸ್ಕರ ಬಲೆಯನ್ನು ನೀರಿನಲ್ಲಿ ಬಿಟ್ಟು, ಸಾಯಂಕಾಲದ ವರಿಗೂ ಇದ್ದು, ಕಡೆಯಲ್ಲಿ ಶಿಕ್ಕಿದ ಒಂದೇ ಮತ್ಸ್ಯವನ್ನು ಪರಮೇಶ್ವರ ಸ್ವಾಮಿಯವರಿಗೆ ಸಮರ್ಪಿಸಿ, ಬಿಟ್ಟು ಬಿಟ್ಟು, ಮನೆಗೆ ಬಂದು, ರಾತ್ರಿಯನ್ನು ಕಳೆದು, ಮಾರನೇ ದಿವಸ ಪ್ರಾತಃಕಾಲದಲ್ಲಿ ಎದ್ದು, ಸಮುದ್ರದಲ್ಲಿ ಬಲೆಯನ್ನು ಹಾಕಿ, ಎಳೆಯುವ ಸಮಯದಲ್ಲಿ ಪರಮೇಶ್ವರ ಸ್ವಾಮಿಯವರ ಅನುಗ್ರಹದಿಂದ ಒಂದು ಚಿನ್ನದ ಮತ್ಸ್ಯವು ಕೋಟಿ ಮತ್ಸ್ಯಗಳಿಗೆ ಸಮಾನವಾಗಿ ಬಲತು ಮಹೋನ್ನತವಾಗಿ ಸಮುದ್ರ ಮಧ್ಯದಲ್ಲಿ ಶಿಕ್ಕಿ, ಬಲೆಯನ್ನು ಎಳೆದು ಕೊಂಡು ಹೋಗುತ್ತಿರಲು; ಅತಿಭಕ್ತರು ಆ ಮತ್ಸ್ಯವನ್ನು ಎಳೆಯಲಾರದೆ, ತನ್ನ ಸಮೀಪದಲ್ಲಿ ಇರುವ ನೆಂಟರನ್ನು ಕರೆದು—ಎಲೈ, ಮಹಾತ್ಮರುಗಳಿರಾ, ಬಲೆಯನ್ನು ಎಳೆಯ ಬನ್ನಿ ಎನಲು; ಅವರೆಲ್ಲರು—ಈ ಬಲೆಯಲ್ಲಿ ಶಿಕ್ಕಿರುವ ಮತ್ಸ್ಯದಲ್ಲಿ ಅರ್ಧವನ್ನು ಕೊಟ್ಟರೆ, ಬರುತ್ತೇವೆ ಎಂದು ಹೇಳಲು; ಅತಿಭಕ್ತರು, ಹಾಗೆ ಆಗಲೆಂದು ಒಪ್ಪಲು; ಅವರೆಲ್ಲರು ಕೂಡಿ, ಬಲೆಯನ್ನು ಎಳೆದು, ಮತ್ಸ್ಯವನ್ನು ಹಿಡಿದು, ಅದನ್ನು ಧಡದಲ್ಲಿ ಇರಿಸಲು; ಅತಿಭಕ್ತರು ಕೋಟಿ ಮತ್ಸ್ಯಗಳಿಗೆ ಸಮಾನವಾಗಿ ಬಲತು, ಮಿಂಚಿನ ಹಾಗೆ ಹೊಳೆಯುತ್ತಲಿರುವ ಚಿನ್ನದ ಮತ್ಸ್ಯವನ್ನು ನೋಡಿ, ಆಶ್ಚರ್ಯ ಪಟ್ಟು, ಇದನ್ನು ಪರಮೇಶ್ವರರಿಗೆ ಸಮರ್ಪಿಸುತ್ತೇನೆ ಎಂದು ನುಡಿದು, ಬಲೆಯಿಂದ ಆ ಮೀನನ್ನು ತೆಗೆದು, ನೀರಿನಲ್ಲಿ ಬಿಟ್ಟು ಬಿಡಲು; ಅಲ್ಲಿರುವ ನೆಂಟರೆಲ್ಲರು ಕೂಡಿ, ಈ ಮತ್ಸ್ಯವನ್ನು ಬಿಟ್ಟು ಬಿಡುವದಕ್ಕೆ ಕಾರಣವೇನು? ಇದು ಚಿನ್ನದ ಮತ್ಸ್ಯವು. ಚಿನ್ನವೆಲ್ಲವನ್ನು ಮಾರಿದರೆ, ಒಬ್ಬನಿಗೆ ಸಾವಿರ ವರಹಾಗಳ ಮೇರೆಗೆ ಬರುವವು.

ನಮ್ಮ ಮತ್ಸ್ಯವನ್ನು ನಮಗೆ ಕೊಡು; ಇಲ್ಲವಾದರೆ, ನಿನ್ನ ಮನೆಯಲ್ಲಿ ಇರು ವ ಹಣವೆಲ್ಲವನ್ನು ನಮಗೆ ಹಂಚಿ ಕೊಡು ಎಂದು ತಡೆದು ಕೊಂಡು, ಬಿಡದೆ, ಬಾಧಿಸುತ್ತಿರಲು; ಅತಿಭಕ್ತರು ತನ್ನ ಮನೆಯಲ್ಲಿರುವ ಹಣವೆಲ್ಲವನ್ನು ಅವರಿ ಗೆ ಕೊಟ್ಟು, ಸಮಾಧಾನಾ ಮಾಡಲು; ನೆಂಟರೆಲ್ಲರು ಅದನ್ನು ತೆಗೆದು ಕೊಂ ಡು, ಸಂತೋಷ ಪಟ್ಟು, ಅವನನ್ನು ಹೊಗಳುತ್ತಿರಲು; ಪರಮೇಶ್ವರರು ಅತಿಭ ಕ್ತರ ಭಕ್ತಿಗೆ ಮೆಚ್ಚಿ, ವೃಷಭಾರೂಢರಾಗಿ, ಪಾರ್ವತೀ ಸಮೇತರಾಗಿ, ಪ್ರಮ ಥ ಗಣಗಳೊಡನೆ ಕೂಡಿ, ಪ್ರಸನ್ನರಾಗಿ ಬಂದು, ಆತನ ಮುಂದೆ ನಿಂತು—ಎಲೈ, ಅತಿಭಕ್ತನೇ, ನಿನ್ನ ಭಕ್ತಿಯಿಂದ ನನಗೆ ಸಂತೋಷವಾಯಿತು. ನಿನಗೆ ಮುಕ್ತಿ ಯನ್ನು ಕೊಡುತ್ತಲಿದ್ದೇನೆ. ಕೈಲಾಸಕ್ಕೆ ಬಾ ಎಂದು ನುಡಿದು, ಪ್ರಮಥ ಗ ಣಗಳೊಡನೆ ಕೂಡಿ ಮಾಯವಾಗಿ ಹೋಗಲು; ಅಲ್ಲಿರುವ ಅಂಬಿಗರೆಲ್ಲರು ಆ ಶ್ಚರ್ಯದಿಂದ ನೋಡುತ್ತಿರಲು; ಅತಿಭಕ್ತರು ಪ್ರತ್ಯಕ್ಷವಾಗಿ ಬಂದ ಪರಮೇಶ್ವರ ರಿಗೆ ನಮಸ್ಕಾರವನ್ನು ಮಾಡಿ, ಸ್ತುತಿಸಿ, ಅವರ ಅಪ್ಪಣೆಯಿಂದ ಬಂದ ದಿವ್ಯ ವಿಮಾನವನ್ನು ಏರಿ, ಕೈಲಾಸಕ್ಕೆ ಹೋದರು.

52. The Reward of worshipping the followers of Shiva—The Story of Kirtikathamrita.

೫೨. ಶಿವಭಕ್ತರ ಪೂಜಾ ಫಲ—ಕೀರ್ತಿಕಥಾಮೃತನ ಕಥೆ.

ಉತ್ತಮವಾದ ಶಿವಭಕ್ತಿಯಿಂದ ಬ್ರಾಹ್ಮಣರನ್ನೂ ಶಿವಭಕ್ತರನ್ನೂ ಯಾ ಚಕರನ್ನೂ ಪೂಜಿಸಿದಂಥವರು ಪರಮೇಶ್ವರ ಸ್ವಾಮಿಯವರ ಅನುಗ್ರಹದಿಂ ದ ಮುಕ್ತಿಯನ್ನು ಹೊಂದುವರು. ಈ ಅರ್ಥದಲ್ಲಿ ಒಂದು ಕಥೆಯನ್ನು ಹೇ ಳುತ್ತೇನೆ.

ದಕ್ಷಿಣ ದೇಶದಲ್ಲಿ ಕಾಂಪಿಲ್ಯವೆಂಬ ಪಟ್ಟಣದಲ್ಲಿ ಪುಣ್ಯಶೀಲನೆಂಬ ಒಬ್ಬ ಜಾ ಡನು ತನ್ನ ಜಾತಿ ಧರ್ಮವನ್ನು ಬಿಡದೆ, ವಸ್ತ್ರಗಳನ್ನು ನೇಯುವದರಲ್ಲಿ ಬಹು ಸಮರ್ಥನಾಗಿ, ಬುದ್ಧಿವಂತನಾಗಿ, ಆ ದೇಶದಲ್ಲಿರುವ ಜಾಡರಿಗೆಲ್ಲವೂ ತಾನೇ ಧೊರೆಯಾಗಿ, ಹೆಚ್ಚಾಗಿ ಹಣವನ್ನು ಸಂಪಾದಿಸಿ, ತನ್ನ ಕುಲದಲ್ಲಿ ಹು ಟ್ಟಿದ ಸುಮುಖೀ ಎಂಬ ಹೆಸರುಳ್ಳ ಹೆಣ್ಣನ್ನು ಮದುವೇ ಮಾಡಿ ಕೊಂಡು, ಅವಳೊಡನೆ ಕೂಡಿ, ಸಕಲ ಭೋಗಗಳನ್ನು ಅನುಭವಿಸುತ್ತಾ, ಐವತ್ತು ವರು ಷ ಪರ್ಯಂತರವು ಸುಖವಾಗಿ ಇದ್ದು, ಆ ಬಳಿಕ ಒಂದು ದಿವಸದಲ್ಲಿ ತನಗೆ ಮ ಗನಿಲ್ಲದೆ ಇರುವದರಿಂದ ತನ್ನ ಹೆಂಡತಿಯನ್ನು ಕರೆದು—ಎಲೈ, ಸುಮುಖಿಯೇ, ನಾನು ಹೆಚ್ಚಾಗಿ ಹಣವನ್ನು ಸಂಪಾದಿಸಿದೆನು. ಇನ್ನು ಮೇಲೆ ಮುಪ್ಪಿನ ಕಾ

ಲದಲ್ಲಿ ನಮ್ಮನ್ನು ಕಾಪಾಡುವಂಥವರು ಒಬ್ಬರೂ ಇಲ್ಲ. ಅದರಿಂದ ನಮ್ಮ ಮನೆಯಲ್ಲಿ ಇರುವ ಹಣವೆಲ್ಲವನ್ನು ದಾನಾ ಮಾಡೋಣ ಎಂದು ನುಡಿದು, ಹೆಂಡತಿಯನ್ನು ಒಡಂಬಡಿಸಿ, ನಿತ್ಯವೂ ಬಂದಂಥ ಬ್ರಾಹ್ಮಣರಿಗೆ ವಸ್ತ್ರಗಳನ್ನೂ ಹಣವನ್ನೂ ಅಕ್ಕಿ ಬೇಳೆ ಮೊದಲಾದ ಮುಸ್ತೈದುಗಳನ್ನೂ ಕೊಟ್ಟು, ಅಧಿಕವಾದ ಭಕ್ತಿಯಿಂದ ಪೂಜಿಸಿ, ಅವರಿಗೆ ಅಡ್ಡ ಬಿದ್ದು, ಅವರ ಸಂಗಡ ಕೆಲವು ದೂರ ಹೋಗಿ, ಒಳ್ಳೇ ಮಾತುಗಳನ್ನು ನುಡಿದು, ಅವರನ್ನು ಕಳುಹಿಸುತ್ತಾ, ನಿತ್ಯವೂ ಪ್ರಾತಃಕಾಲದಲ್ಲಿ ಎದ್ದು, ಸ್ನಾನವನ್ನು ಮಾಡಿ, ಮಡೀ ಉಟ್ಟು, ಪತ್ರ ಪುಷ್ಪಗಳನ್ನೂ ಹಣ್ಣು ಕಾಯಿಗಳನ್ನೂ ತೆಗೆದು ಕೊಂಡು, ಶಿವಾಲಯಕ್ಕೆ ಹೋಗಿ, ಪ್ರದಕ್ಷಿಣ ನಮಸ್ಕಾರವನ್ನು ಮಾಡಿ, ಸನ್ನಿಧಿಯಲ್ಲಿ ನಿಂತು—ಸ್ವಾಮೀ, ಪರಮೇಶ್ವರರೇ, ನನಗೆ ಮಗನನ್ನು ಕೊಡ ಬೇಕೆಂದು ಬೇಡಿಕೊಂಡು, ಮನೆಗೆ ಬಂದು, ಮಧ್ಯಾಹ್ನವಾಗುವ ಪರ್ಯಂತರವೂ ಪರಮೇಶ್ವರ ಸ್ವಾಮಿಯವರಿಗೆ ಸಮರ್ಪಿಸುವದಕ್ಕೋಸ್ಕರ ಒಂದು ವಸ್ತ್ರವನ್ನು ನೇಯುತ್ತಲಿದ್ದು, ಮಧ್ಯಾಹ್ನವಾದ ಬಳಿಕ ಬಂದ ಶಿವಭಕ್ತರಿಗೆ ಅನ್ನವನ್ನು ಕೊಟ್ಟು, ಆ ಬಳಿಕ ತಾನೂ ಊಟಾ ಮಾಡಿ, ಶಿವಭಕ್ತರಿಗೆ ಬೇಕಾದ ವಸ್ತ್ರವನ್ನು ಕೊಟ್ಟು, ಒಳ್ಳೇ ಮಾತುಗಳನ್ನು ಮಾತನಾಡಿ, ಅವರನ್ನು ಕಳುಹಿಸಿ, ಸಾಯಂಕಾಲ ಪರ್ಯಂತರವೂ ಬ್ರಾಹ್ಮಣರಿಗೂ ಶಿವಭಕ್ತರಿಗೂ ಯಾಚಕರಿಗೂ ದರಿದ್ರರಿಗೂ ಹಣವನ್ನೂ ವಸ್ತ್ರವನ್ನೂ ಕೊಡುತ್ತಾ, ಹಳೇದಾಗಿರುವ ಶಿವಾಲಯಗಳನ್ನು ಹೊಸದಾಗಿ ಕಟ್ಟಿಸುತ್ತಾ, ತಿಂಗಳಿಗೊಂದು ಸಾರಿ ಒಂದು ವಸ್ತ್ರವನ್ನು ಪರಮೇಶ್ವರ ಸ್ವಾಮಿಯವರಿಗೆ ಸಮರ್ಪಿಸುತ್ತಾ, ಈ ಪ್ರಕಾರದಿಂದ ಐದು ವರುಷದ ಪರ್ಯಂತರವೂ ಪರಮೇಶ್ವರ ಸ್ವಾಮಿಯವರಿಗೆ ಕೈಂಕರ್ಯವನ್ನು ಮಾಡುತ್ತಿರಲು; ಪರಮೇಶ್ವರರು ಒಂದು ದಿವಸ ಆ ಪುಣ್ಯಶೀಲನಿಗೆ ಪುತ್ರನನ್ನು ಕೊಡ ಬೇಕೆಂದು ನಿಶ್ಚಯಿಸಿ, ಸ್ತ್ರೀ ರೂಪವನ್ನು ಧರಿಸಿ, ಬಿಳೀ ಶೀರೆಯನ್ನು ಉಟ್ಟು, ಸಕಲವಾದ ಒಡವೆಗಳನ್ನು ಧರಿಸಿ, ಚಂದ್ರಬಿಂಬದೋಪಾದಿಯಲ್ಲಿ ಬಿಳುಪಾದ ತಾವರೆ ಹೂವನ್ನು ಹಿಡಿದು, ಪುಣ್ಯಶೀಲನ ಸ್ವಪ್ನದಲ್ಲಿ ಆತನನ್ನು ಕುರಿತು—ಎಲೈ, ಪುಣ್ಯಶೀಲನೇ, ಈ ತಾವರೆ ಹೂವನ್ನು ತೆಗೆದು ಕೊಂಡರೆ, ನಿನಗೆ ಶುಭವಾಗುತ್ತದೆ ಎಂದು ನುಡಿದು, ಆ ತಾವರೆ ಹೂವನ್ನು ಪುಣ್ಯಶೀಲನಿಗೆ ಕೊಟ್ಟು, ಹಾಗೆಯೇ ಮಾಯವಾಗಿ ಹೋಗಲು; ಪುಣ್ಯಶೀಲನು ಆ ಸ್ವಪ್ನದಲ್ಲೇ ತಾವರೆ ಹೂವನ್ನು ತೆಗೆದು ಕೊಂಡು, ತನ್ನ ಹೆಂಡತಿಯನ್ನು ಕರೆದು, ಕೊಟ್ಟನು.

ಅನಂತರ ಆ ಪುಣ್ಯಶೀಲನು ಬೆಳಗಾದ ಬಳಿಕ ಎದ್ದು, ಸ್ವಪ್ನವನ್ನು ನೆನೆದು, ಆಶ್ಚರ್ಯ ಪಡುತ್ತಾ, ಸ್ನಾನವನ್ನು ಮಾಡಿ, ಮಡೀ ಉಟ್ಟು, ವೇದ ಶಾಸ್ತ್ರಗಳನ್ನು ಓದಿದಂಥ ಬ್ರಾಹ್ಮಣರನ್ನು ಕರಿಸಿ, ತನ್ನ ಸ್ವಪ್ನವನ್ನು ಅವರಿಗೆ ತಿಳಿಸಿ, ಅವರಿಗೆ ಹೇಳಿದ್ದೇನಂದರೆ—ಸ್ವಾಮಿಾ, ಮಹಾನುಭಾವರುಗಳಿರಾ, ಈ ಸ್ವಪ್ನಕ್ಕೆ ಫಲವೇನು? ಅದನ್ನು ನನಗೆ ತಿಳಿಸ ಬೇಕೆಂದು ಬೇಡಿ ಕೊಳ್ಳಲು; ಆ ಬ್ರಾಹ್ಮಣರು ಆತನನ್ನು ನೋಡಿ—ಎಲೈ, ಪುಣ್ಯಶೀಲನೇ, ಸ್ವಪ್ನದಲ್ಲಿ ಮುತ್ತೈದೆಯಾದ ಸ್ತ್ರೀಯನ್ನು ಕಂಡದ್ದರಿಂದಲೂ, ಬಳಿಕ ತಾವರೆ ಹೂವನ್ನು ತೆಗೆದುಕೊಂಡು, ಹೆಂಡತಿಗೆ ಕೊಟ್ಟದ್ದರಿಂದಲೂ, ನಿನಗೆ ಶೀಘ್ರದಲ್ಲೇ ಪರಮೇಶ್ವರ ಸ್ವಾಮಿಯವರಿಗೆ ಸಮಾನನಾದ ಮಗನು ಹುಟ್ಟುತ್ತಲಿದ್ಧಾನೆ ಎಂದು ನುಡಿಯಲು; ಪುಣ್ಯಶೀಲನು ಅವರ ವಾಕ್ಯವನ್ನು ಕೇಳಿ, ಸಂತೋಷ ಪಟ್ಟು, ಅವರಿಗೆ ಬಹುಮಾನವನ್ನು ಮಾಡಿ, ಕಳುಹಿಸಿ, ಆ ಹೊತ್ತು ಮೊದಲ್ಗೊಂಡು ಅಧಿಕವಾದ ಭಕ್ತಿಯಿಂದ ಪರಮೇಶ್ವರ ಸ್ವಾಮಿಯವರಿಗೆ ಕೈಂಕರ್ಯವನ್ನು ಮಾಡುತ್ತಿರಲು; ಒಂದು ದಿವಸ ಪರಮೇಶ್ವರ ಸ್ವಾಮಿಯವರ ಅನುಗ್ರಹದಿಂದ ಕೀರ್ತಿಕಥಾಮೃತನು ಪ್ರಸನ್ನನಾಗಿ, ದಿನ ದಿನಕ್ಕೂ ಪ್ರವರ್ಧಮಾನನಾಗುತ್ತಿರಲು; ಪುಣ್ಯಶೀಲನು ಆ ಕುಮಾರಕನನ್ನು ನೋಡಿ, ಸಂತೋಷ ಪಟ್ಟು, ಒಳ್ಳೇ ಕೀರ್ತಿಯನ್ನು ಸಂಪಾದಿಸಿದವನಾದ್ದರಿಂದಲೂ, ಅಮೃತೋಪಮಾನಗಳಾದ ಕಥೆಗಳುಳ್ಳವನಾದ್ದರಿಂದಲೂ, ಕೀರ್ತಿಕಥಾಮೃತನೆಂದು ನಾಮಕರಣವನ್ನು ಮಾಡಿ, ಬಹುಮಾನದಿಂದ ಕಾಪಾಡುತ್ತಾ, ಹದಿನಾರನೇ ವರುಷದಲ್ಲಿ ಮದುವೆಯನ್ನು ಮಾಡಿ, ತಾನು ಪರಮೇಶ್ವರ ಸ್ವಾಮಿಯವರಿಗೆ ಕೈಂಕರ್ಯವನ್ನು ಮಾಡುತ್ತಿರಲು; ಕೀರ್ತಿಕಥಾಮೃತನು ಪ್ರವರ್ಧಮಾನನಾಗಿ, ಸಕಲ ವಿದ್ಯೆಗಳನ್ನು ಕಲಿತು, ತಮ್ಮ ಜಾತಿ ಧರ್ಮವನ್ನು ಬಿಡದೆ, ಒಳ್ಳೇ ವಸ್ತ್ರಗಳನ್ನು ನೇಯುತ್ತಾ, ಪರಮೇಶ್ವರರಲ್ಲಿ ಭಕ್ತಿಯುಳ್ಳವನಾಗಿ, ಶಿವಭಕ್ತರನ್ನು ಕಂಡರೆ, ಭಕ್ತಿಯಿಂದ ಪೂಜಿಸುತ್ತಾ, ನಿತ್ಯವೂ ಅಗಲ ಮೊಳವುಳ್ಳಂಥಾದ್ದಾಗಿ, ಸಣ್ಣದಾಗಿ, ಮೃದುವಾಗಿ, ವಿಚಿತ್ರವಾಗಿ, ಮನೋಹರವಾಗಿ ಇರುವ ಒಂದು ವಸ್ತ್ರವನ್ನು ಭಕ್ತಿಪೂರ್ವಕವಾಗಿ ನೇಯಿದು, ಪರಮೇಶ್ವರರಿಗೆ ಸಮರ್ಪಿಸುತ್ತಾ, ನಿತ್ಯವೂ ಬಂದಂಥ ಬ್ರಾಹ್ಮಣರಿಗೂ ಶಿವಭಕ್ತರಿಗೂ ಯಾಚಕರಿಗೂ ಬೇಕಾದ ವಸ್ತ್ರಗಳನ್ನೂ ಕಂಥೆಗಳನ್ನೂ ಕೌಪೀನವನ್ನೂ ಭಕ್ತಿಯಿಂದ ಕೊಡುತ್ತಾ, ಒಳ್ಳೇ ಮಾತುಗಳಿಂದ ಉಪಚರಿಸಿ, ಕಳುಹಿಸುತ್ತಾ, ಶಿವಭಕ್ತರಿಗೆ ಅನ್ನವನ್ನು ಕೊಟ್ಟ ಬಳಿಕ ತಾನೂ ಉಂಡು, ಈ ಪ್ರಕಾರ ಸುಖದಲ್ಲಿ ಇದ್ದು ಕೊಂಡು, ಒಂದು ದಿ

ವಸ ಪರಮ ಭಕ್ತಿಯಿಂದ ಪರಮೇಶ್ವರರಿಗೆ ಸಮರ್ಪಿಸುವದಕ್ಕೋಸ್ಕರ ಒಂದು ವಸ್ತ್ರವನ್ನು ನೇಯಿದು, ವಿಂಗಡವಾಗಿ ಒಂದು ತಾವಿನಲ್ಲಿ ಅದನ್ನು ಮಡಗಿ, ಎಚ್ಚರವಾಗಿ ನೋಡುತ್ತಿರಲು; ಪರಮೇಶ್ವರರು ಅವರ ಭಕ್ತಿಯನ್ನು ನೋಡುವದಕ್ಕೋಸ್ಕರ ಬ್ರಾಹ್ಮಣ ರೂಪನ್ನು ಧರಿಸಿ, ಮುದುಕನಾಗಿ, ಕೋಲನ್ನು ಊರಿ ಕೊಂಡು ನಡುಗುತ್ತಾ, ನೂರು ಮಂದಿ ಶಿವಭಕ್ತರನ್ನೂ ಕರೆದು ಕೊಂಡು, ಕೀರ್ತಿಕಥಾಮೃತರ ಮನೆಗೆ ಬಂದು, ಆ ಶಿವಭಕ್ತರನ್ನು ಅವರ ಬಳಿಗೆ ಕಳುಹಿಸಿ, ತಾನು ಒಂದು ತಾವಿನಲ್ಲಿ ಮರೆಯಾಗಿ ಔತು ಕೊಂಡು ಇರಲು; ಕೀರ್ತಿಕಥಾಮೃತನು ಬಂದ ಶಿವಭಕ್ತರನ್ನು ನೋಡಿ, ಸಂತೋಷ ಪಟ್ಟು, ಒಂದೊಂದು ವಸ್ತ್ರವನ್ನು ಕೊಟ್ಟು, ಕಳುಹಿಸಲು; ಪುಣ್ಯಶೀಲನ ಮನೆಯಲ್ಲಿದ್ದ ವಸ್ತ್ರಗಳೆಲ್ಲಾ ವೆಚ್ಚವಾಗಿ ಹೋಗಲು; ಆ ಬಳಿಕ ಪರಮೇಶ್ವರರು ಮುದುಕರಾಗಿ, ಕೌಪೀನವನ್ನು ಕಟ್ಟಿ ಕೊಂಡು, ಆ ಭಕ್ತನು ಇರುವ ತಾವಿಗೆ ಬರಲು; ಕೀರ್ತಿಕಥಾಮೃತನು ಬ್ರಾಹ್ಮಣನನ್ನು ನೋಡಿ, ಸಂತೋಷ ಪಟ್ಟು, ಎದ್ದು, ಎದುರಾಗಿ ಹೋಗಿ, ಆತನ ಪಾದಗಳಿಗೆ ನಮಸ್ಕರಿಸಿ, ಒಳಗೆ ಕರೆದು ಕೊಂಡು ಬಂದು, ಮಣೆಯನ್ನು ಕೊಟ್ಟು, ಕುಳ್ಳಿರಿಸಿ, ಕೈ ಕಟ್ಟಿ ನಿಂತು ಕೊಂಡು—ಸ್ವಾಮೀ, ಮಹಾನುಭಾವರಾ, ನಿಮ್ಮ ದರ್ಶನದಿಂದ ನಾನು ಧನ್ಯನಾದೆನು. ಅಪ್ಪಣೆಯನ್ನು ಪಾಲಿಸ ಬಹುದೆಂದು ಬೇಡಿ ಕೊಳ್ಳಲು; ಆ ಬ್ರಾಹ್ಮಣನು—ಎಲೈ, ಭಕ್ತನೇ, ನಾನು ಮುದುಕನಾದ್ದರಿಂದ ದಾರಿಯಲ್ಲಿ ನಡೆದು ಬರುವಾಗ ನನ್ನ ವಸ್ತ್ರವು ಘಾಳಿಯಿಂದ ಹಾರಿ ಹೋಯಿತು. ಅದು ಶಿಕ್ಕಲಿಲ್ಲ. ನೀನು ಧರ್ಮಾತ್ಮನಾದ್ದರಿಂದ ನಿನ್ನ ಬಳಿಗೆ ಬಂದೆನು ಎನ್ನಲು; ಕೀರ್ತಿಕಥಾಮೃತನು ಆ ವಾಕ್ಯವನ್ನು ಕೇಳಿ, ಸಂತೋಷ ಪಟ್ಟು, ಮನೆಯಲ್ಲಿರುವ ವಸ್ತ್ರಗಳೆಲ್ಲಾ ವೆಚ್ಚವಾಗಿ ಹೋದ್ದರಿಂದ ಪರಮೇಶ್ವರರಿಗೆ ಸಮರ್ಪಿಸುವದಕ್ಕೋಸ್ಕರ ಮೀಸಲಾಗಿ ತೆಗೆದು ಇರಿಸಿದ್ದ ವಸ್ತ್ರವನ್ನು ತೆಗೆದು ಕೊಂಡು ಬಂದು, ಪರಮೇಶ್ವರರೇ ಈ ಬ್ರಾಹ್ಮಣ ರೂಪಿನಿಂದ ಬಂದಿದ್ಧಾರೆ; ಈ ವಸ್ತ್ರವನ್ನು ಇವರಿಗೆ ಕೊಟ್ಟರೆ, ಪರಮೇಶ್ವರರು ಸಂತೋಷ ಪಡುವರು ಎಂದು ಮನಸ್ಸಿನಲ್ಲಿ ನಿಶ್ಚಯಿಸಿ, ಬ್ರಾಹ್ಮಣನ ಸಮೀಪಕ್ಕೆ ಬಂದು—ಸ್ವಾಮೀ, ಮಹಾನುಭಾವರೇ, ಈ ವಸ್ತ್ರವನ್ನು ಸ್ವಾಮಿಯವರು ಧರಿಸಿದರೆ, ನಾನು ಮಾಡಿದ ಸೇವೆಯು ಸಾರ್ಥಕವಾಗುತ್ತದೆ. ಅದರಿಂದ ಇದನ್ನು ತೆಗೆದು ಕೊಳ್ಳ ಬೇಕೆಂದು ಬೇಡಿ ಕೊಳ್ಳಲು; ಆ ಬ್ರಾಹ್ಮಣನು ಆ ವಸ್ತ್ರವನ್ನು ತೆಗೆದು ಕೊಂಡು, ಅಲ್ಲೇ ಮಾಯವಾಗಲು; ಕೀರ್ತಿಕಥಾಮೃತನು ಆ ಬ್ರಾಹ್ಮಣನನ್ನು ಕಾಣದೆ, ಆಶ್ಚರ್ಯ ಪಡುತ್ತಿ

ರಲು; ಪರಮೇಶ್ವರರು ಆತನ ಭಕ್ತಿಗೆ ಮೆಚ್ಚಿ, ವೃಷಭಾರೂಢರಾಗಿ ಪ್ರಮಥ ಗಣಗಳೊಡನೆ ಕೂಡಿ, ಪ್ರತ್ಯಕ್ಷವಾಗಿ ಬಂದು, ಆತನ ಮುಂದೆ ನಿಲ್ಲಲು; ಕೀರ್ತಿಕಥಾಮೃತನು ಪರಮೇಶ್ವರ ಸ್ವಾಮಿಯವರನ್ನು ನೋಡಿ, ಪರಮ ಭಕ್ತಿಯಿಂದ ಎದ್ದು, ಸಾಷ್ಟಾಂಗವಾಗಿ ನಮಸ್ಕಾರವನ್ನು ಮಾಡಿ, ಕೈಗಳನ್ನು ಕಟ್ಟಿಕೊಂಡು ನಿಂತು, ಸ್ತುತಿಸಲು; ಪರಮೇಶ್ವರರು ಆತನನ್ನು ಕರೆದು—ಎಲೈ, ಪರಮ ಭಕ್ತನೇ, ನಿನ್ನ ಭಕ್ತಿಯಿಂದ ನನಗೆ ಸಂತೋಷವಾಯಿತು. ನೀನು ಕೊಟ್ಟ ವಸ್ತ್ರವನ್ನು ಧರಿಸಿ ಇದ್ದೇನೆ ಎಂದು ನುಡಿದು, ಅದನ್ನು ತೋರಿಸಿ, ನಿನಗೆ ಮುಕ್ತಿಯನ್ನು ಕೊಡುತ್ತೇನೆ; ಕೈಲಾಸಕ್ಕೆ ಬಾ ಎಂದು ನುಡಿದು, ಪ್ರಮಥ ಗಣಗಳೊಡನೆ ಕೂಡಿ ಮಾಯವಾಗಿ ಹೋಗಲು; ಆ ಕೀರ್ತಿಕಥಾಮೃತನು ಪರಮೇಶ್ವರ ಸ್ವಾಮಿಯವರ ಅನುಗ್ರಹದಿಂದ ಬಂದ ದಿವ್ಯ ವಿಮಾನವನ್ನು ಏರಿ, ಕೈಲಾಸಕ್ಕೆ ಹೋದನು.

53. The Reward of giving up life to atone for offences against the followers of Shiva—The Story of Dharmaketana.

೫೩. ಕಾಣದೆ ಶಿವಭಕ್ತರಿಗೆ ದ್ರೋಹ ಮಾಡಿದವನು ತನ್ನ ಪ್ರಾಣವನ್ನು ಬಿಟ್ಟ ಫಲ—ಧರ್ಮಕೇತನನ ಕಥೆ.

ಲೋಕದಲ್ಲಿ ಯಾವ ಪುರುಷನು ತಾನು ಶಿವ ಭಕ್ತನಾದರೂ ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ ಬಂದಂಥ ಶಿವ ಭಕ್ತರಿಗೆ ಅಪರಾಧವನ್ನು ಮಾಡದೆ ಇದ್ದುಕೊಂಡು, ಒಂದು ವೇಳೆ ಅರಿಯದೆ ಅಪರಾಧವನ್ನು ಮಾಡಿದರೆ ಪ್ರಾಣಗಳನ್ನು ಬಿಡುವನೋ, ಆತನು ಪರಮೇಶ್ವರ ಸ್ವಾಮಿಯವರ ಅನುಗ್ರಹದಿಂದ ಮುಕ್ತನಾಗುವನು. ಈ ಅರ್ಥದಲ್ಲಿ ಒಂದು ಕಥೆಯನ್ನು ಹೇಳುತ್ತೇನೆ.

ಚೋಳ ದೇಶದಲ್ಲಿ ಅಮೋದವೆಂಬ ಪಟ್ಟಣದಲ್ಲಿ ಧರ್ಮವರ್ಧನನೆಂಬ ಅರಸು ಅತಿ ಐಶ್ವರ್ಯ ಸಂಪನ್ನನಾಗಿ, ಭೋಗಗಳಲ್ಲಿ ಇಂದ್ರನಿಗೆ ಸಮಾನನಾಗಿ—ತ್ಯಾಗದಲ್ಲಿ ಕುಬೇರನಿಗೆ ಸಮಾನನಾಗಿ—ಯಾಗಗಳಲ್ಲಿ ಕಪಿಲ ಮುನೀಂದ್ರನಿಗೆ ಸಮಾನನಾಗಿ—ಪರಾಕ್ರಮದಿಂದ ಸಕಲ ಶತ್ರುಗಳನ್ನು ಜಯಿಸಿ, ಬಹು ಧನವನ್ನು ಸಂಪಾದಿಸಿ, ಏಕ ವೀರನಾಗಿ, ಸುಲೋಚನಿ ಎಂಬ ಹೆಸರುಳ್ಳ ಹೆಂಡತಿಯೊಡನೆ ಕೂಡಿ, ಯಾಗಾ ಮಾಡ ಬೇಕೆಂದು ಬ್ರಾಹ್ಮಣರನ್ನು ಕರತರಿಸಿ, ವಿಶ್ವಜಿತ್ತೆಂಬ ಯಾಗವನ್ನು ಮಾಡಲು; ಆ ಯಾಗದಿಂದ ಪರಮೇಶ್ವರರು ಸಂತೋಷ ಪಟ್ಟು, ಆತನ ಹೆಂಡತಿಯ ಸ್ವಪ್ನದಲ್ಲಿ ಬಂದು, ಅವಳನ್ನು ಕುರಿತು—ಎಲೈ, ಚಿತ್ರಾಂಗಿಯೇ, ನಿನ್ನ ಗಂಡನು ಮಾಡಿದ ಯಜ್ಞದಿಂದ ನನಗೆ ಸಂತೋ

ಷವಾಯಿತು. ನಾನು ಪರಮೇಶ್ವರನು. ನಿನಗೆ ಬೇಕಾದ ವರಗಳನ್ನು ಕೊಡುತ್ತೇನೆ; ಕೇಳೆಂದು ನುಡಿದು, ಮಾಯವಾಗಿ ಹೋಗಲು; ಆ ಚಿತ್ರಾಂಗಿಯು ಮಾರನೇ ದಿವಸ ಪ್ರಾತಃಕಾಲದಲ್ಲಿ ಎದ್ದು, ಸ್ವಪ್ನವನ್ನು ತನ್ನ ಗಂಡನಿಗೆ ತಿಳಿಸಿ—ಎಲೈ, ಮಹಾನುಭಾವರುಗಳಿರಾ, ನನ್ನ ಮಾತನ್ನು ಕೇಳ ಬೇಕು. ನನ್ನ ಸ್ವಪ್ನವು ಅದ್ಭುತವಾಗಿ ಇಧೆ. ಅದರಿಂದ ಪರಮೇಶ್ವರರನ್ನು ಸ್ತುತಿಸಿ, ಮಗನನ್ನು ಕೊಡ ಬೇಕೆಂದು ಬೇಡಿ ಕೊಳ್ಳ ಬೇಕೆಂದು ನುಡಿಯಲು; ಅರಸು ಆ ಮಾತನ್ನು ಕೇಳಿ, ಅವಳನ್ನು ಕುರಿತು—ಎಲೈ, ಶುಭಾಂಗಿಯೇ, ನನ್ನ ಮಾತನ್ನು ಕೇಳು. ನಿನಗೆ ಪರಮೇಶ್ವರರಲ್ಲಿ ಭಕ್ತಿಯು ದೃಢವಾಗಿ ಇಧೆ. ಅದರಿಂದ ನೀನೇ ಪರಮೇಶ್ವರರನ್ನು ಪೂಜಿಸಿ, ಮಗನನ್ನು ಕೊಡ ಬೇಕೆಂದು ಬೇಡಿ ಕೊಂಡರೆ, ನಿನಗೆ ಕೊಡುತ್ತಾರೆ ಎಂದು ನುಡಿದು, ಪುರೋಹಿತನನ್ನು ಕರಿಸಿ, ಇವಳ ಕೈಯಿಂದ ಶಿವ ಪೂಜೆಯನ್ನು ಮಾಡಿಸು ಎಂದು ಆ ಬ್ರಾಹ್ಮಣೋತ್ತಮನಿಗೆ ಕಟ್ಟು ಮಾಡಲು; ಆ ಬ್ರಾಹ್ಮಣನು, ಹಾಗೆಯೇ ಆಗಲಿ ಎಂದು ಒಪ್ಪಿ, ಚಿತ್ರಾಂಗಿಯ ಸಮೀಪಕ್ಕೆ ಹೋಗಿ, ಶಿವ ಪೂಜಾ ವಿಧಾನವನ್ನು ತಿಳಿಸಲು; ಆ ರಾಜ ಭಾರ್ಯೆಯು ಸಕಲಶಸ್ಥಾಪನವನ್ನು ಮಾಡಿ, ಪುರೋಹಿತನು ಹೇಳಿದ ರೀತಿಯಲ್ಲಿ ಕಲಶದಲ್ಲಿ ಪರಮೇಶ್ವರರನ್ನು ಆವಾಹನೇ ಮಾಡಿ, ಶ್ರೀ ಗೋಸ್ಥಳ ನಿವಾಸರಾದ ಪರಮೇಶ್ವರರನ್ನು ಪೂಜಿಸಿ, ಪೂಜೆಯು ಮುಗಿದ ಬಳಿಕ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಮನಸ್ಸಿನಲ್ಲಿ ಧ್ಯಾನಾ ಮಾಡುತ್ತಾ, ಈ ಪ್ರಕಾರದಿಂದ ಒಂದು ತಿಂಗಳ ಪರ್ಯಂತರವೂ ನಿಯಮದಿಂದ ಪೂಜಿಸುತ್ತಿರಲು; ಒಂದು ದಿವಸ ಪರಮೇಶ್ವರರು ಪ್ರಸನ್ನರಾಗಿ ರಾಜ ಪತ್ನಿಯನ್ನು ನೋಡಿ—ಎಲೈ, ಚಿತ್ರಾಂಗಿಯೇ, ನಿನಗೆ ಅಯೋನಿಜನಾದ ಕುಮಾರಕನು ಉಂಟಾಗುತ್ತಲಿದ್ಧಾನೆ ಎಂದು ನುಡಿದು, ಮಾಯವಾಗಿ ಹೋಗಲು; ಆ ಸಮಯದಲ್ಲಿ ಪರಮೇಶ್ವರ ಸ್ವಾಮಿಯವರ ಮಹಿಮೆಯಿಂದ ಒಬ್ಬ ಬಾಲಕನು ಸರ್ವ ಲಕ್ಷಣ ಸಂಪನ್ನನಾಗಿ—ಶೂರನಾಗಿ—ತನ್ನ ತೇಜಸ್ಸಿನಿಂದ ದಿಕ್ಕುಗಳನ್ನು ಬೆಳಗಿಸುತ್ತಾ, ದಿವ್ಯ ಸೌಂದರ್ಯವುಳ್ಳವನಾಗಿ—ಚೈತ್ರ ಮಾಸದ ಶುಕ್ಲ ಪಕ್ಷದಲ್ಲಿ ಹಸ್ತ ನಕ್ಷತ್ರ ಯುಕ್ತವಾದ ಶುಭ ಲಗ್ನದಲ್ಲಿ ಆ ಚಿನ್ನದ ಕಲಶದಿಂದ ಹುಟ್ಟಿ, ಚಿತ್ರಾಂಗಿಯ ತೊಡೆಯ ಮೇಲೆ ಬಂದು ಕುಳಿತು ಕೊಳ್ಳಲು; ಆಕೆಯು ಐದು ವರುಷದ ವಯಸ್ಸುಳ್ಳಂಥ ಆ ಬಾಲಕನನ್ನು ನೋಡಿ, ಆಶ್ಚರ್ಯ ಪಟ್ಟು, ಆತನೇ ತನ್ನ ಮಗನೆಂದು ಎಣಿಸಿ, ಪರಮೇಶ್ವರರನ್ನು ಕುಲ ದೇವರೆಂದು ಭಕ್ತಿಯಿಂದ ಪೂಜಿಸಿ, ಬಾಲಕನನ್ನು ಕರೆದು ಕೊಂಡು, ಗಂಡನ ಸಮೀಪಕ್ಕೆ ಬಂದು, ತಾನು

ಮಾಡಿದ ಕಾರ್ಯವೆಲ್ಲವನ್ನು ಆತನಿಗೆ ತಿಳಿಸಲು; ಅರಸು ಅದನ್ನು ಕೇಳಿ, ಸಂತೋಷ ಪಟ್ಟು, ಪುರೋಹಿತನನ್ನು ಕರ ತರಿಸಿ, ಆ ಬಾಲಕನಿಗೆ ಜಾತಕರ್ಮವನ್ನು ತೀರಿಸಿ, ಧರ್ಮಕೇತನನೆಂದು ನಾಮಕರಣವನ್ನು ಮಾಡಿ, ಹದಿನಾರು ವರುಷ ಪರ್ಯಂತರವೂ ಭಕ್ತಿಯಿಂದ ಕಾಪಾಡಿ, ಮದುವೆಯನ್ನು ಮಾಡಿ, ತನ್ನ ರಾಜ್ಯವನ್ನು ಆತನ ವಶಕ್ಕೆ ಒಪ್ಪಿಸಿ, ವನಕ್ಕೆ ಹೋಗಿ, ತಪಸ್ಸನ್ನು ಮಾಡುತ್ತಾ, ಕೆಲವು ದಿವಸವಿದ್ದು, ಆ ಬಳಿಕ ಶಿವ ಲೋಕವನ್ನೈದಿದನು.

ಆ ಮೇಲೆ ಧರ್ಮಕೇತನನು ತಾಯಿ ತಂದೆಗಳಿಗೆ ಪರಲೋಕ ಕ್ರಿಯೆಗಳನ್ನು ಮಾಡಿ, ಗುರುವಿನ ಬಳಿಯಲ್ಲಿ ಸಕಲ ವಿದ್ಯಗಳನ್ನು ಕಲಿತು, ಸಕಲ ಶಾಸ್ತ್ರಗಳನ್ನು ವಿಚಾರಿಸಿ, ಧರ್ಮದಿಂದ ರಾಜ್ಯಪಾಲನೆಯನ್ನು ಮಾಡುತ್ತಾ, ಪರಮೇಶ್ವರರೇ ಪರಮ ತತ್ವವೆಂದು ತಿಳಿದು, ಭಕ್ತಿಯಿಂದ ಪೂಜಿಸುತ್ತಾ, ಅಲ್ಲಿ ಇರುವ ಜನರಿಂದ ತನ್ನ ಜನನದ ವಿವರವನ್ನು ತಿಳಿದು, ಪರಮೇಶ್ವರರಲ್ಲಿ ಭಕ್ತಿಯುಳ್ಳವನಾಗಿ, ತನ್ನ ತಾಯಿಗೆ ಕುಲ ದೇವತೆಯಾಗಿ, ಗೋ ಸ್ಥಳದಲ್ಲಿ ವಾಸಾ ಮಾಡಿ ಕೊಂಡಿರುವಂಥ ಪರಮೇಶ್ವರರನ್ನೇ ಪೂಜಿಸುತ್ತಾ, ಶಿವ ಕೈಂಕರ್ಯವನ್ನೇ ಮಾಡುತ್ತಾ, ಶಿವ ಭಕ್ತರನ್ನು ಪಾಲಿಸುತ್ತಾ, ಅನೇಕ ಗಜ ಘಟೆಗಳನ್ನು ಸಂಪಾದಿಸಿ, ಕುದುರೆಗಳನ್ನೂ ರಥಗಳನ್ನೂ ಅತ್ಯಂತವಾಗಿ ಶೇರಿಸಿ, ಸಕಲ ಶತ್ರುಗಳನ್ನು ಜಯಿಸಿ, ರಾಜ್ಯವನ್ನಾಳುತ್ತಾ ಇರಲು; ಬ್ರಾಹ್ಮಣರು ವೇದಗಳನ್ನೋದಿ, ವೇದ ಮಾರ್ಗವನ್ನು ಬಿಡದೆ ನಡೆದು ಕೊಳ್ಳುತ್ತಿದ್ದರು. ಭಟರೆಲ್ಲರು ಆಯುಧಗಳನ್ನು ಹಿಡಿದು, ಸ್ವಾಮಿ ಕಾರ್ಯವೇ ಮುಖ್ಯವೆಂದು ನಡೆದು ಕೊಳ್ಳುತ್ತಿದ್ದರು. ಭೂಮಿಯು ಸಮೃದ್ಧವಾದ ಪೈರುಗಳೊಡನೆ ಕೂಡಿ ಇತ್ತು. ಈ ಪ್ರಕಾರದಿಂದ ಅರಸು ಧರ್ಮದಿಂದ ರಾಜ್ಯವನ್ನಾಳುತ್ತಿರಲು; ಒಂದು ದಿವಸ ಮಧ್ಯಾಹ್ನ ಕಾಲದಲ್ಲಿ ನೀರನ್ನು ತೋರಿಸುವದಕ್ಕೋಸ್ಕರ ಒಬ್ಬ ಮಾವುತನು ಆನೆಯ ಮೇಲೆ ಏರಿ ಕೊಂಡು, ಕೆರೆಗೆ ಹೋಗುತ್ತಿರಲು; ಶಿವದಾಸನೆಂಬ ಒಬ್ಬ ಬ್ರಾಹ್ಮಣನು ಸ್ನಾನ ಸಂಧ್ಯಾವಂದನೆಗಳನ್ನು ತೀರಿಸಿ ಕೊಂಡು, ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ, ಶಿವ ಪೂಜೆಯನ್ನು ಮಾಡುವದಕ್ಕೋಸ್ಕರ ಚೆಂಬಿನಲ್ಲಿ ಉದಕವನ್ನು ತುಂಬಿ ಕೊಂಡು, ನಂದನ ವನದಲ್ಲಿ ಬಾಳೆ ಎಲೆಯನ್ನು ಕುಯಿದು, ಮಲ್ಲಿಗೆ ಮೊದಲಾದ ಪುಷ್ಪಗಳನ್ನು ಅದರಲ್ಲಿ ಪೊಟ್ಟಣಾ ಕಟ್ಟಿ ಕೊಂಡು, ಕೈಯಲ್ಲಿ ಹಿಡಿದು ಕೊಂಡು, ಮನೆಗೆ ಹೋಗುತ್ತಾ ಇರುವ ಸಮಯದಲ್ಲಿ, ಆ ಮದ್ದಾನೆಯು ಮಾವುತನಿಂದ ತಡೆಯಲ್ಪಟ್ಟದ್ದಾದರೂ, ಮದದಿಂದ ಆ ಬ್ರಾಹ್ಮಣ

ನ ಸಮೀಪಕ್ಕೆ ಹೋಗಿ, ಪೊಟ್ಲವನ್ನು ತನ್ನ ಸೊಂಡಿಲಿನಿಂದ ತೆಗೆದು ಕೊಂಡು, ಪುಷ್ಪಗಳನ್ನೆಲ್ಲಾ ನೆಲದ ಮೇಲೆ ಚೆಲ್ಲಿ ಬಿಡಲು; ಬ್ರಾಹ್ಮಣನು ಭಯ ಪಟ್ಟು, ಶಿವ ಶಿವಾ! ಎಂದು ಕೂಗುತ್ತಾ, ಓಡಿ ಹೋಗಲು; ಅರಸು ಉಪ್ಪರಿಗೆಯಲ್ಲಿ ಇದ್ದು ಕೊಂಡು, ಇದೆಲ್ಲವನ್ನು ನೋಡಿ—ಶಿವ, ಶಿವಾ! ಶಿವ ದ್ರೋಹ ಬಂತಲ್ಲಾ; ಇದಕ್ಕೆ ಪ್ರಾಯಶ್ಚಿತ್ತವೇನು? ಎಂದು ಯೋಚಿಸಿ, ಪ್ರಾಣತ್ಯಾಗವೇ ಪ್ರಾಯಶ್ಚಿತ್ತವೆಂದು ನಿಶ್ಚಯಿಸಿ, ಕತ್ತಿಯಿಂದ ತಲೆಯನ್ನು ಕಡಿದು ಕೊಳ್ಳುವದಕ್ಕೆ ಪ್ರಯತ್ನ ಮಾಡಲು; ಆ ಸಮಯದಲ್ಲಿ ಆಕಾಶದಲ್ಲಿ—ಎಲೈ, ಭೂಪಾಲಕನೇ, ನೀನು ಸಾಹಸವನ್ನು ಮಾಡ ಬೇಡ. ಆ ಪುಷ್ಪಗಳೆಲ್ಲವು ಪರಮೇಶ್ವರ ಸ್ವಾಮಿಯವರ ಶಿರಸ್ಸಿನಲ್ಲಿ ಕಾಣಲ್ಪಡುತ್ತವೆ. ಹೋಗಿ, ನೋಡೆಂದು ನುಡಿಯಲು, ಅರಸು ಆ ಅಶರೀರ ವಾಕ್ಯವನ್ನು ಕೇಳಿ, ಸಂತೋಷಪಟ್ಟು, ಶೀಘ್ರವಾಗಿ ಶಿವಾಲಯಕ್ಕೆ ಹೋಗಿ, ಪರಮೇಶ್ವರ ಸ್ವಾಮಿಯವರ ಶಿರಸ್ಸಿನಲ್ಲಿ ಆ ಪುಷ್ಪಗಳನ್ನು ನೋಡಿ, ಆ ಬ್ರಾಹ್ಮಣನೇ ಪರಮೇಶ್ವರರು ಎಂದು ಎಣಿಸಿ, ಬ್ರಾಹ್ಮಣನನ್ನು ಕರ ತರಿಸಿ, ಚಿನ್ನದಿಂದ ಸಾವಿರ ತಾವರೆ ಹೂವುಗಳನ್ನು ಮಾಡಿಸಿ, ಬ್ರಾಹ್ಮಣನಿಗೆ ಕೊಟ್ಟು, ಮತ್ತು ಒಂದು ಗ್ರಾಮವನ್ನೂ ಒಂದು ಮನೆಯನ್ನೂ ಕೆಲವು ಗೋವುಗಳನ್ನೂ ಕೊಟ್ಟು, ಆತನಿಗೆ ಶುಶ್ರೂಷೆಯನ್ನು ಮಾಡಿ, ಪರಮೇಶ್ವರ ಸ್ವಾಮಿಯವರಿಗೆ ಅಭಿಷೇಕಾರ್ಥವಾಗಿ ಒಂದು ಚಿನ್ನದ ಕಲಶವನ್ನೂ ಆ ಮದ್ದಾನೆಯನ್ನೂ ಸಮರ್ಪಿಸಿ, ಭಕ್ತಿ ಯುತನಾಗಿರುತ್ತಿರಲು, ಅಲ್ಲಿ ಇರುವ ಜನರೆಲ್ಲರು ಈ ಭೂಪಾಲಕನು ನಂದೀಶ್ವರನಿಗೆ ಸಮಾನನೆಂದು ಎಣಿಸಿ, ಪೂಜಿಸುತ್ತಿದ್ದರು.

ಆ ಅರಸು ಧರ್ಮಾತ್ಮಕನಾಗಿ, ಮಹಾ ವೀರನಾಗಿ, ದಯಾವಂತನಾಗಿ, ಧರ್ಮದಿಂದ ರಾಜ್ಯವನ್ನಾಳುತ್ತಾ, ಬಹು ಕಾಲ ವಿದ್ದು, ಒಂದು ದಿವಸದಲ್ಲಿ ಮಂತ್ರಿಯನ್ನು ಕರೆದು, ಶತ್ರುಗಳನ್ನು ಜೈಸಿ ಕೊಂಡು ಬರ ಹೇಳಿ ಕಳುಹಿಸಲು; ಆ ಮಂತ್ರಿಯು ಪರಾಕ್ರಮದಿಂದ ಸಕಲ ಶತ್ರುಗಳನ್ನು ಜಯಿಸಿ, ಶತ್ರು ಭೂಪಾಲಕರ ಶಿರಸ್ಸುಗಳನ್ನು ತೆಗೆದು ಕೊಂಡು ಬರುವಾಗ, ಪರಮೇಶ್ವರರು ಅರಸಿನ ಭಕ್ತಿಯನ್ನು ನೋಡುವದಕ್ಕೋಸ್ಕರ ಆ ತಲೆಗಳಲ್ಲಿ ಒಂದರಲ್ಲಿ ಜಡೆಗಳನ್ನು ಕಲ್ಪಿಸಲು; ಆ ಬಳಿಕ ಮಂತ್ರಿಯು ಅದನ್ನು ತಿಳಿಯದೆ, ತಲೆಗಳೆಲ್ಲವನ್ನು ತೆಗೆದು ಕೊಂಡು, ಅರಸಿನ ಬಳಿಗೆ ಬರಲು; ಅರಸು ಆ ತಲೆಗಳನ್ನು ನೋಡುವಾಗ, ಜಡೆಗಳೊಡನೆ ಕೂಡಿದ ತಲೆಯನ್ನು ನೋಡಿ, ಮಂತ್ರಿಯನ್ನು ಕುರಿತು—ಎಲೈ, ಮಂತ್ರಿಯೇ, ನೀನು ಇಂಥ ಪಾಪವನ್ನು ಮಾಡ ಬಹುದೇ? ಶಿವ ಭ

ಕ್ತನ ತಲೆಯನ್ನು ತೆಗೆದು ಕೊಂಡು ಬಂದಂಥ ನಿನಗೆ ಪ್ರಾಯಶ್ಚಿತ್ತವಿಲ್ಲ. ನೀನು ಶಿವ ದ್ರೋಹವನ್ನು ಮಾಡಿದಂಥವನು; ನಿನ್ನ ಮುಖವನ್ನು ನೋಡುವದಿಲ್ಲ ಎಂದು ನುಡಿದು, ಇಂಥ ಶಿವ ದ್ರೋಹಿಯ ಮುಖವನ್ನು ನೋಡಿದ್ದಕ್ಕೆ ತನ್ನ ಶಿರಸ್ಸನ್ನು ತೆಗೆದು, ಪರಮೇಶ್ವರರಿಗೆ ಸಮರ್ಪಿಸಿದರೆ, ಪ್ರಾಯಶ್ಚಿತ್ತವಾಗುತ್ತದೆ ಎಂದು ನುಡಿದು, ಹಣವೆಲ್ಲವನ್ನು ಬ್ರಾಹ್ಮಣರಿಗೆ ದಾನಾ ಮಾಡಿ, ರಾಜ್ಯವನ್ನು ಮಗನಿಗೆ ಕೊಟ್ಟು, ಅಗ್ನಿಯನ್ನು ಮಾಡಿಸಿ, ಅದರಲ್ಲಿ ಬಿದ್ದು, ಪ್ರಾಣ ತ್ಯಾಗಾ ಮಾಡ ಬೇಕೆಂದು ನಿಶ್ಚೈಸಿ, ಆ ಜಡೆಗಳೊಡನೆ ಕೂಡಿದ ತಲೆಯನ್ನು ತನ್ನ ಶಿರಸ್ಸಿನಲ್ಲಿ ಇರಿಸಿ ಕೊಂಡು, ಆ ಅಗ್ನಿ ಹೋತ್ರದ ಸಮೀಪಕ್ಕೆ ಹೋಗಿ, ಮೂರು ಪ್ರದಕ್ಷಿಣಗಳನ್ನು ಮಾಡಿ, ಅಗ್ನಿಯಲ್ಲಿ ಬೀಳುವ ಸಮಯದಲ್ಲಿ, ಆ ಜಡೆಗಳೊಡನೆ ಕೂಡಿದ ಶಿರಸ್ಸು ಮಾಯವಾಗಿ ಹೋಗಲು; ಅರಸು ಅದನ್ನು ನೋಡಿ, ಆಶ್ಚರ್ಯ ಪಡುತ್ತಿರಲು; ಆ ಸಮಯದಲ್ಲಿ ಪರಮೇಶ್ವರರು ಆತನ ಭಕ್ತಿಗೆ ಮೆಚ್ಚಿ, ವೃಷಭಾರೂಢರಾಗಿ ಪ್ರತ್ಯಕ್ಷರಾಗಿ, ಆತನ ಎದುರಿಗೆ ಬಂದು, ನಿಲ್ಲಲು; ಅರಸು ಪರಮೇಶ್ವರರನ್ನು ನೋಡಿ, ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಅಧಿಕವಾದ ಭಕ್ತಿಯಿಂದ ಸ್ತುತಿಸಲು; ಪರಮೇಶ್ವರರು ಸಂತೋಷ ಪಟ್ಟು, ಧರ್ಮಕೇತನನಿಗೆ ಮುಕ್ತಿಯನ್ನು ಕೊಟ್ಟು, ಕೈಲಾಸಕ್ಕೆ ಚಿತ್ತೈಸಿದರು. ಆ ಬಳಿಕ ಧರ್ಮಕೇತನನ್ನು ಪರಮೇಶ್ವರರ ಅನುಗ್ರಹದಿಂದ ಬಂದ ದಿವ್ಯ ವಿಮಾನವನ್ನು ಏರಿ, ಕೈಲಾಸಕ್ಕೆ ಹೋದನು.

54. The Merit of giving food—The Story of Putavati.

೫೪. ಅನ್ನದಾನದ ಪುಣ್ಯ—ಪೂತವತಿಯ ಕಥೆ.

ಮಧ್ಯಾಹ್ನ ಕಾಲದಲ್ಲಿ ತನ್ನ ಮನೆಗೆ ಬಂದು, ಅನ್ನವನ್ನು ಕೇಳಿದಂಥ ಶಿವ ಭಕ್ತರಿಗೆ ಅನ್ನವನ್ನಾದರೂ ಉದಕವನ್ನಾದರೂ ಹಣ್ಣುಗಳನ್ನಾದರೂ ಕೊಟ್ಟು, ಸಂತೋಷ ಪಡಿಸುವಂಥವರು ಪರಮೇಶ್ವರ ಸ್ವಾಮಿಯವರ ಅಪ್ಪಣೆಯಿಂದ ಮುಕ್ತರಾಗುವರು. ಈ ಅರ್ಥದಲ್ಲಿ ಒಂದು ಕಥೆಯನ್ನು ಹೇಳುತ್ತೇನೆ.

ಪೂರ್ವದಲ್ಲಿ ಕಾವೇರೀ ತೀರದಲ್ಲಿ ಶಾರ್ಜರಿವನವೆಂಬ ಪಟ್ಟಣವು ಬಹು ಮಂದಿ ಬ್ರಾಹ್ಮಣರಿಂದಲೂ ಕ್ಷತ್ರಿಯರಿಂದಲೂ ವೈಶ್ಯರಿಂದಲೂ ಶೂದ್ರರಿಂದಲೂ ತುಂಬಿ ಇರುವದು. ಆ ಪಟ್ಟಣದಲ್ಲಿ ಎಲ್ಲಿ ನೋಡಿದರೂ ವರ್ತಕರು ನವರತ್ನಗಳನ್ನು ಬೀದಿಗಳಲ್ಲಿ ರಾಶಿಯಾಗಿ ಹಾಕಿ ಕೊಂಡು, ವ್ಯಾಪಾರಗಳನ್ನು ಮಾಡುತ್ತಿರುವರು. ಅಲ್ಲಿ ಇರುವಂಥ ವರ್ತಕರು ಧನವಂತರಾಗಿ, ಕುಬೇರನಿಗೆ ಸಮಾ

ನರಾಗಿ ಇರುವರು. ಇಂಥ ಪಟ್ಟಣದಲ್ಲಿ ಧನದತ್ತನೆಂಬ ಒಬ್ಬ ವೈಶ್ಯನು ಶೀವತಿ ಎಂಬ ಹೆಂಡತಿಯೊಡನೆ ಕೂಡಿ, ಸಕಲ ಭೋಗಗಳನ್ನು ಅನುಭವಿಸುತ್ತಾ, ಅಲ್ಲಿರುವ ವೈಶ್ಯರೊಳಗೆ ಶ್ರೇಷ್ಠನಾಗಿ, ತನ್ನ ವ್ಯಾಪಾರಗಳಿಂದ ಹೆಚ್ಚಾಗಿ ಹಣವನ್ನು ಸಂಪಾದಿಸಿ, ಬ್ರಾಹ್ಮಣರಲ್ಲಿ ಭಕ್ತಿಯುಳ್ಳವನಾಗಿ, ನಿತ್ಯವು ಬ್ರಾಹ್ಮಣರನ್ನು ಪೂಜಿಸುತ್ತಾ, ಸಕಲ ದಾನಗಳನ್ನು ಮಾಡುತ್ತಾ, ಬ್ರಾಹ್ಮಣರಿಗೆ ಬೇಕಾದ ಹಣವನ್ನು ಕೊಟ್ಟು, ವರುಷಾಶನಗಳನ್ನು ಕೊಡುತ್ತಾ, ವೇದವನ್ನು ಓದುವಂಥ ಬ್ರಾಹ್ಮಣರಿಗೆ ಅನ್ನ ವಸ್ತ್ರಗಳನ್ನು ನಡಿಸುತ್ತಾ, ಪರಮೇಶ್ವರರಲ್ಲಿ ಪರಮ ಭಕ್ತಿಯುಳ್ಳವನಾಗಿ, ನಿತ್ಯವು ಶಿವಾರ್ಚನೆಗಳನ್ನು ಮಾಡುತ್ತಾ, ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ ಬಂದಂಥ ಶಿವ ಭಕ್ತರನ್ನು ಪೂಜಿಸುತ್ತಾ, ಮಧ್ಯಾಹ್ನದಲ್ಲಿ ಅನ್ನವನ್ನು ಬೇಡಿದಂಥವರಿಗೆ ಕೊಡುತ್ತಾ, ಈ ಪ್ರಕಾರದಿಂದ ಬಹು ಕಾಲವಿದ್ದು, ಒಂದು ದಿವಸ, ಮಕ್ಕಳಿಲ್ಲದೆ ಇರುವದರಿಂದ ತನ್ನ ಮನಸ್ಸಿನಲ್ಲಿ ಯೋಚಿಸಿ, ಮಕ್ಕಳಿಲ್ಲದೆ ಇದ್ದರೆ ಕುಲವೆಲ್ಲವು ಅಪವಿತ್ರವಾಗಿರುವದು ಎಂದು ತಿಳಿದು, ಹತ್ತು ವರುಷ ಪರ್ಯಂತರವು ಸಕಲವಾದ ವ್ರತಗಳನ್ನು ಮಾಡಿ, ಪರಮೇಶ್ವರರನ್ನು ಸಂತೋಷ ಪಡಿಸಲು; ಪರಮೇಶ್ವರರು ಸಂತೋಷ ಪಟ್ಟು, ಧನದತ್ತನ ಸ್ವಪ್ನದಲ್ಲಿ ಆತನನ್ನು ಕುರಿತು—ಎಲೈ, ಧನದತ್ತನೇ, ನನ್ನ ಮಾತನ್ನು ಕೇಳು. ನಿನಗೆ ಒಂದು ಮಗಳನ್ನು ಕೊಡುತ್ತೇನೆ. ಪಾರ್ವತೀ ದೇವಿಯ ಸಮೀಪದಲ್ಲಿ ಪರಿಚಾರಿಕೆಯನ್ನು ಮಾಡುವಂಥ ಶಾರಿಕೆ ಎಂಬ ದಾಸಿಯು ಭೂಲೋಕದಲ್ಲಿ ಹೆಣ್ಣಾಗಿ ಹುಟ್ಟಿ, ಸಕಲ ಭೋಗಗಳನ್ನು ಅನುಭವಿಸ ಬೇಕೆಂದು ಯೋಚಿಸಿ, ಪಾರ್ವತೀ ದೇವಿಯ ಅಪ್ಪಣೆಯಿಂದ ಭೂಲೋಕದಲ್ಲಿ ಹೆಣ್ಣು ರೂಪವನ್ನು ಧರಿಸಿ, ನನ್ನ ಆಲಯದಲ್ಲಿ ಇದ್ದಾಳೆ. ಅವಳನ್ನು ನೀನು ಕರೆದು ಕೊಂಡು ಹೋಗು. ಆ ಹೆಣ್ಣು ನಿನ್ನ ಕುಲವೆಲ್ಲವನ್ನು ಪವಿತ್ರ ಮಾಡುತ್ತಾಳೆ. ನಿನ್ನ ವಂಶವನ್ನು ಪವಿತ್ರ ಮಾಡುವವಳಾದ್ದರಿಂದ, ಈ ಹೆಣ್ಣು ಪೂತವತಿ ಎಂಬ ಹೆಸರಿನಿಂದ ಪ್ರಸಿದ್ಧವಾಗುತ್ತಾಳೆ ಎಂದು ನುಡಿದು, ಮಾಯವಾಗಿ ಹೋಗಲು; ಧನದತ್ತನು ಮಾರನೇ ದಿವಸದಲ್ಲಿ ಎದ್ದು, ಸ್ನಾನವನ್ನು ಮಾಡಿ, ಮಡೀ ಉಟ್ಟು, ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ, ಸಕಲ ನಿಯಮಗಳನ್ನು ತೀರಿಸಿಕೊಂಡು, ತನ್ನ ನೆಂಟರನ್ನು ಕರೆದು, ಸ್ವಪ್ನ ವೃತ್ತಾಂತವನ್ನು ತಿಳಿಸಲು; ಆ ನೆಂಟರೆಲ್ಲರು ಧನದತ್ತನನ್ನು ನೋಡಿ—ಎಲೈ, ಧನದತ್ತನೇ, ನೀನು ಪೂರ್ವ ಜನ್ಮದಲ್ಲಿ ಹೆಚ್ಚಾಗಿ ಪುಣ್ಯವನ್ನು ಮಾಡಿದೆ; ನೀನು ಪುಣ್ಯಾತ್ಮಕನು; ನಿನ್ನನ್ನು ನೋಡಿದ್ದರಿಂದ ನಾವೆಲ್ಲರು ಪುಣ್ಯವಂತರಾದೆವು. ನೀನೇ ಧನ್ಯನು.

ಅಲ್ಲದಿದ್ದರೆ, ಈ ಪ್ರಕಾರ ಪರಮೇಶ್ವರರು ನಿನಗೆ ಮಗಳನ್ನು ಕೊಡುವರೇ? ದೇವತಾ ರೂಪವಾಗಿರುವಂಥ ಮಗಳನ್ನು ಪರಮೇಶ್ವರರು ನಿನಗೆ ಕೊಟ್ಟದ್ದ ರಿಂದ ನೀನು ಪುಣ್ಯವಂತನೇ ಸರಿ. ಆ ಮಗಳನ್ನು ನೀನು ಕರೆದು ಕೊಂಡು ಬಾ ಎಂದು ನುಡಿದು, ಧನದತ್ತನಿಗೆ ಬಹುಮಾನಾ ಮಾಡಿ, ನೆಂಟರೆಲ್ಲರು ಹೊರ ಟು ಹೋಗಲು; ಆ ಧನದತ್ತನು ಹೆಂಡತಿಯೊಡನೆ ಕೂಡಿ, ಸಂತೋಷ ಪಡು ತ್ತಾ, ಪರಮೇಶ್ವರರನ್ನು ಮನಸ್ಸಿನಲ್ಲಿ ಧ್ಯಾನಾ ಮಾಡಿ, ಶಿವಾಲಯವನ್ನು ಹೊ ಕ್ಕು, ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಸನ್ನಿಧಿಯಲ್ಲಿ ನಿಂತು, ಕೈ ಮುಗಿ ದು, ಪರಮೇಶ್ವರರನ್ನು ಸ್ತುತಿಸುತ್ತಿರಲು; ಆ ಸಮಯದಲ್ಲಿ ಪರಮೇಶ್ವರ ಸ್ವಾ ಮಿಯವರ ಅನುಗ್ರಹದಿಂದ ಒಂದು ದೇವತೆಯು ಒಂದು ವರುಷದ ಹೆಣ್ಣಿನ ರೂಪವನ್ನು ಧರಿಸಿ, ಆತನ ಮುಂದೆ ಪ್ರಸನ್ನವಾಗಲು; ಧನದತ್ತನು ಶಿವ ಪ್ರಸಾ ದದಿಂದ ಪ್ರಸನ್ನಳಾದಂಥ ಮಗಳನ್ನು ನೋಡಿ, ಸಂತೋಷ ಪಟ್ಟು, ಮನೆಗೆ ಕ ರೆದು ಕೊಂಡು ಬಂದು, ಅವಳ ರೂಪವನ್ನೂ ಯೌವನವನ್ನೂ ಸೌಂದರ್ಯವ ನ್ನೂ ಕಾಂತಿಯನ್ನೂ ನೋಡಿ, ಆಶ್ಚರ್ಯ ಪಡುತ್ತಾ, ತನ್ನ ಕುಲವೆಲ್ಲವು ಈ ದಿ ವಸ ಪವಿತ್ರವಾಯಿತು ಎಂದೆಣಿಸಿ, ತನ್ನ ಕುಲವೆಲ್ಲವನ್ನು ಪವಿತ್ರಾ ಮಾಡಿದವ ಳಾದ್ದರಿಂದ ಪೂತವತಿ ಎಂಬ ಹೆಸರಿನಿಂದ ನಾಮಕರಣವನ್ನು ಮಾಡಿ, ಬ್ರಾಹ್ಮ ಣರಿಗೆ ಬಹು ಧನವನ್ನು ಕೊಟ್ಟು, ನೆಂಟರಿಗೆ ಬಹುಮಾನಗಳನ್ನು ಮಾಡಿ, ಆ ಹೊತ್ತು ಮೊದಲ್ಗೊಂಡು ಪರಮೇಶ್ವರರಿಗೆ ಹೆಚ್ಚಾಗಿ ಸೇವೆಯನ್ನು ಮಾಡುತ್ತಾ, ಮಗಳಿಗೆ ನವರತ್ನ ಮಯಗಳಾದ ಒಡವೆಗಳನ್ನಿಟ್ಟು, ಮೂರು ಲೋಕಗಳೂ ಮೋಹಿಸುವ ಹಾಗೆ ಮಾಡುತ್ತಾ, ಬಹುಮಾನದಿಂದ ಕಾಪಾಡುತ್ತಾ, ಮಗಳಿಗೆ ಆಯುಸ್ಸು ಅಭಿವೃದ್ಧಿಯಾಗುವದಕ್ಕೋಸ್ಕರ ಶಿವ ಭಕ್ತರಾದ ಬ್ರಾಹ್ಮಣರ ಕೈ ಯಿಂದ ವಿಭೂತಿಯನ್ನು ಕೊಡಿಸುತ್ತಾ, ಈ ಪ್ರಕಾರ ಕಾಪಾಡುತ್ತಾ, ಒಂದು ದಿವಸದಲ್ಲಿ ಮದುವೆಯನ್ನು ಮಾಡುವದಕ್ಕೋಸ್ಕರ ನಾಗಪಟ್ಣದಲ್ಲಿ ಇರುವಂಥ ಪರಮದತ್ತನೆಂಬ ಹೆಸರುಳ್ಳ ವೈಶ್ಯ ಪುತ್ರನನ್ನು ಕರತರಿಸಿ, ಆತನಿಗೆ ತನ್ನ ಮ ಗಳನ್ನು ಕೊಟ್ಟು, ಮದುವೆಯನ್ನು ಮಾಡಿ, ಸಂತೋಷದಿಂದ ನೋಡುತ್ತಾ, ತ ನ್ನ ಮನೆಯ ಸಮೀಪದಲ್ಲಿ ಒಂದು ಮನೆಯನ್ನು ಕಟ್ಟಿಸಿ, ಪರಮದತ್ತನ ತಾ ಯಿ ತಂದೆಗಳ ಅಪ್ಪಣೆಯಿಂದ ಅವನನ್ನೂ ತನ್ನ ಮಗಳನ್ನೂ ಅಲ್ಲಿ ಸೌಖ್ಯದಿಂ ದ ಇರಿಸಿ, ಕಾಪಾಡುತ್ತಾ ಬರಲು; ಆ ಪರಮದತ್ತನು ಧನದತ್ತನ ಮಗಳೊಡ ನೆ ಕೂಡಿ, ಸಕಲ ಭೋಗಗಳನ್ನು ಅನುಭವಿಸುತ್ತಾ, ಪರಮೇಶ್ವರರಲ್ಲಿ ಭಕ್ತಿ ಯುಳ್ಳವನಾಗಿ, ಬ್ರಾಹ್ಮಣರಿಗೆ ಸಕಲ ದಾನಗಳನ್ನು ಕೊಡುತ್ತಾ, ಅವರಿಂದ ಆ

ಶೀರ್ಮಾದವನ್ನು ಹೊಂದುತ್ತಾ, ಬಯಸಿ ತನ್ನ ಮನೆಗೆ ಬಂದಂಥ ಶಿವ ಭಕ್ತರಿಗೆ ಅನ್ನವನ್ನು ಕೊಡುತ್ತಾ, ನಿತ್ಯವು ಬಂದಂಥವರಿಗೆ ಹಾಲು ತುಪ್ಪ ಮೊಸರು ಮೇಲೋಗರಗಳು, ಐದು ಬಗೆ ಕಜ್ಜಾಯಗಳು ಸಹ ಕೊಡುತ್ತಾ, ಇಲ್ಲ ಎಂದು ನುಡಿಯದೆ, ಅನ್ನವನ್ನು ಕೊಡೆಂದು ತನ್ನ ಹೆಂಡತಿಗೆ ಕಟ್ಟು ಮಾಡಲು; ಅವಳು ಹಾಗೆ ಆಗಲೆಂದು ಒಪ್ಪಿ, ಅನ್ನ ದಾನವನ್ನು ಮಾಡುತ್ತಾ, ಬಾಲ್ಯ ಮೊದಲ್ಗೊಂಡು ಶಿವ ಭಕ್ತಿಯುಳ್ಳವಳಾಗಿ, ಬಂದಂಥ ಶಿವ ಭಕ್ತರಿಗೆ ಅನ್ನವನ್ನು ಕೊಡುತ್ತಾ, ಶರೀರದೊಡನೆ ಕೂಡಿ ಇರುವ ಶಿವ ಭಕ್ತಿಯೋ ಎಂಬ ಹಾಗೆ ಅಧಿಕವಾಗಿ ಪರಮೇಶ್ವರರಲ್ಲಿ ಭಕ್ತಿಯನ್ನು ಮಾಡುತ್ತಾ, ಒಂದು ದಿವಸವನ್ನೂ ವ್ಯರ್ಥ ಮಾಡದೆ, ಅನ್ನ ದಾನವನ್ನು ಮಾಡುತ್ತಿರಲು;–

ಒಂದು ದಿವಸದಲ್ಲಿ ಒಬ್ಬ ಶಿವ ಭಕ್ತನು ಒಂದು ತೋಟ್ಟನಲ್ಲಿರುವ ಎರಡು ಮಾವಿನ ಹಣ್ಣುಗಳನ್ನು ತಂದು, ಪರಮದತ್ತನಿಗೆ ಕೊಡಲು; ಪರಮದತ್ತನು ಆ ಎರಡು ಹಣ್ಣುಗಳನ್ನು ಮನೆಗೆ ತಂದು, ಹೆಂಡತಿಯನ್ನು ಕರೆದು, ಅವಳ ಕೈಗೆ ಕೊಡಲು; ಆ ಪೂತವತಿಯು ಆ ಎರಡು ಹಣ್ಣುಗಳನ್ನು ತೆಗೆದು ಕೊಂಡು, ಎಚ್ಚರದಿಂದ ಬಚ್ಚಿಟ್ಟು, ಶಿವ ಭಕ್ತರ ಪೂಜೆಯನ್ನು ಮಾಡುತ್ತಿರಲು; ಮಾರನೇ ದಿವಸ ಪ್ರಾತಃಕಾಲದಲ್ಲಿ ಪರಮೇಶ್ವರರು ಪೂತವತಿಯ ಭಕ್ತಿಯನ್ನು ನೋಡುವದಕ್ಕೋಸ್ಕರ ಶಿವ ಭಕ್ತನ ವೇಷವನ್ನು ಧರಿಸಿ, ಅಲ್ಲಿಗೆ ಬಂದು, ಅನ್ನವನ್ನು ಕೇಳಲು; ಪೂತವತಿಯು ಶೀಘ್ರವಾಗಿ ಎದ್ದು, ಎದುರಾಗಿ ಹೋಗಿ, ಕರೆದು ಕೊಂಡು ಬಂದು, ಪಾದಗಳಿಗೆ ಉದಕವನ್ನು ಕೊಟ್ಟು, ಮಣೆಯಲ್ಲಿ ಕುಳ್ಳರಿಸಿ, ಆತನನ್ನು ಕುರಿತು–ಸ್ವಾಮಿ, ಮಹಾನುಭಾವರುಗಳಿರಾ, ಇನ್ನು ಮೇಲೆ ಅಡಿಗೇ ಮಾಡ ಬೇಕು; ಅದರಿಂದ ಈಗ ಸ್ವಲ್ಪವಾಗಿ ಫಲಹಾರವನ್ನು ಮಾಡಿ ಕೊಳ್ಳ ಬಹುದು ಎಂದು ನುಡಿದು, ಒಂದು ಮಾವಿನ ಹಣ್ಣನ್ನು ತಂದು ಕೊಡಲು; ಆ ಪರಮೇಶ್ವರರು ಮಾವಿನ ಹಣ್ಣನ್ನು ಮೆದ್ದು, ಹಾಲು ಕುಡಿದು, ಸಂತೋಷ ಪಟ್ಟು, ಹಾಗೆಯೇ ಮಾಯವಾಗಿ ಹೋಗಲು; ಪೂತವತಿಯು ಶಿವ ಭಕ್ತರು ಮಾಯವಾದದ್ದನ್ನು ನೋಡಿ, ಆಶ್ಚರ್ಯ ಪಟ್ಟು, ತನ್ನ ಮನಸ್ಸಿನಲ್ಲಿ ಸಿದ್ಧ ಪುರುಷರ ಮಹಿಮೆಯನ್ನು ತಿಳಿಯ ಕೂಡದು ಎಂದು ಎಣಿಸಿ, ಸಂತೋಷದಿಂದ ಅನ್ನ ದಾನವನ್ನು ಮಾಡುತ್ತಿರಲು; ಪರಮದತ್ತನು ಶಿವ ಭಕ್ತರೆಲ್ಲರು ಊಟಾ ಮಾಡಿದ ಬಳಿಕ, ಅವರನ್ನು ಕಳುಹಿಸಿ, ಸಾಯಂಕಾಲದಲ್ಲಿ ತಾನು ಊಟಾ ಮಾಡುವದಕ್ಕೆ ಕುಳಿತು ಕೊಳ್ಳಲು; ಪೂತವತಿಯು ಗಂಡನಿಗೆ ಅನ್ನವನ್ನೂ ಕಜ್ಜಾಯಗಳನ್ನೂ ಹಾಲು ತುಪ್ಪ ಮೊಸರುಗಳನ್ನೂ ಬಡಿಸಲು; ಪರ

ಮದತ್ತನು ಅದೆಲ್ಲವನ್ನು ಊಟಾ ಮಾಡಿ, ಹೆಂಡತಿಯನ್ನು ಕರೆದು, ಮಾವಿನ ಹಣ್ಣನ್ನು ತಂದು ಬಡಿಸೆಂದು ನುಡಿಯಲು; ಪೂತವತಿಯು ಒಂದು ಮಾವಿನ ಹಣ್ಣನ್ನು ತಂದು ಬಡಿಸಲು; ಪರಮದತ್ತನು ಅದನ್ನು ಮೆದ್ದು,—ಇನ್ನೊಂದು ತಂದು ಬಡಿಸೆಂದು ನುಡಿಯಲು; ಪೂತವತಿಯು ಪರಮದತ್ತನ ಮಾತನ್ನು ಕೇಳಿ, ತಾನು ಮಾಡಿದ ಕಾರ್ಯವನ್ನು ಗಂಡನಿಗೆ ತಿಳುಹಿಸಲಾರದೆ, ಮೌನದಿಂದ ಅಡಿಗೇ ಮನೆಗೆ ಹೋಗಿ, ಪರಮೇಶ್ವರರನ್ನು ಮನಸ್ಸಿನಲ್ಲಿ ಧ್ಯಾನಾ ಮಾಡುತ್ತಾ—ಸ್ವಾಮಿಾ, ಪರಮೇಶ್ವರರೇ, ಗಂಡನಿಗೆ ಉತ್ತರವನ್ನು ಏನೆಂದು ಹೇಳಲಿ? ಸ್ವಾಮಿಾ, ನನ್ನನ್ನು ರಕ್ಷಿಸು ಎಂದು ಬೇಡಿ ಕೊಳ್ಳಲು; ಪರಮೇಶ್ವರರು ಸಂತೋಷ ಪಟ್ಟು, ತನ್ನ ಮಾಯೆಯಿಂದ ಒಂದು ಮಾವಿನ ಹಣ್ಣನ್ನು ಕಲ್ಪಿಸಿ, ಅವಳ ಮುಂದೆ ಬೀಳುವ ಹಾಗೆ ಮಾಡಲು; ಪೂತವತಿಯು ಆ ಮಾವಿನ ಹಣ್ಣನ್ನು ತೆಗೆದು ಕೊಂಡು, ಸಂತೋಷ ಪಟ್ಟು, ಗಂಡನಿಗೆ ಕೊಡಲು; ಪರಮದತ್ತನು ಆ ಹಣ್ಣನ್ನು ಮೆದ್ದು, ಮೊದಲು ಮೆದ್ದ ಹಣ್ಣಿಗಿಂತ ಹೆಚ್ಚಾಗಿ ಶೀಯಾಗಿರುವದರಿಂದ—ಈ ಹಣ್ಣು ಎಲ್ಲಿಂದ ಬಂತು? ಎಂದು ಕೇಳಲು; ಪೂತವತಿಯು ಗಂಡನ ಮಾತನ್ನು ಕೇಳಿ, ಆತನನ್ನು ಕುರಿತು—ಶಿವಪ್ರಸಾದದಿಂದ ಬಂತು ಎಂದು ಹೇಳಲು; ಪರಮದತ್ತನು ಹೆಂಡತಿಯನ್ನು ನೋಡಿ—ಎಲೈ, ಪೂತವತಿಯೇ, ನಿನಗೆ ಪರಮೇಶ್ವರರು ಹಣ್ಣನ್ನು ಕೊಟ್ಟದ್ದು ನಿಜವಾದರೆ, ಇನ್ನೊಂದು ಹಣ್ಣನ್ನು ತೆಗೆದು ಕೊಂಡು ಬಾ ಎಂದು ನುಡಿಯಲು; ಪೂತವತಿಯು ಒಳಗೆ ಹೋಗಿ, ಪರಮೇಶ್ವರರನ್ನು ಧ್ಯಾನಾ ಮಾಡಲು; ಪರಮೇಶ್ವರರು ಪೂತವತಿಗೆ ಮತ್ತೊಂದು ಹಣ್ಣು ಕೊಡಲು; ಪೂತವತಿಯು ಆ ಹಣ್ಣನ್ನು ತೆಗೆದು ಕೊಂಡು, ಸಂತೋಷದಿಂದ ಗಂಡನಿಗೆ ಕೊಡಲು; ಪರಮದತ್ತನು ಹಣ್ಣನ್ನು ನೋಡಿ, ಅಧಿಕವಾದ ಭಯದಿಂದ—ಈ ಪೂತವತಿಯು ಪರಮೇಶ್ವರರನ್ನು ತನ್ನ ಆಧೀನಾ ಮಾಡಿ ಕೊಂಡಳು. ಇವಳು ಪಾರ್ವತೀ ದೇವಿಯೇ ಸರಿ; ಅಲ್ಲದಿದ್ದರೆ, ಪರಮೇಶ್ವರರು ಪೂತವತಿಗೆ ಹಣ್ಣನ್ನು ಕೊಡುವರೇ? ಅದರಿಂದ ಇವಳನ್ನು ಮುಟ್ಟ ಬಾರದು. ಇವಳನ್ನು ಬಿಟ್ಟು ಬಿಟ್ಟರೆ ಅಪರಾಧ ಬರುತ್ತೆ. ಬಿಡದೆ ಇದ್ದರೆ, ಶಿವದ್ರೋಹ ಬರುತ್ತೆ. ಹೀಗಿರುವಲ್ಲಿ, ಏನು ಮಾಡಲಿ? ಎಂದು, ಮನಸ್ಸಿನಲ್ಲಿ ಯೋಚಿಸುತ್ತಾ, ಒಂದು ಉಪಾಯವನ್ನು ತಿಳಿದು, ವ್ಯಾಪಾರವನ್ನು ಮಾಡುವದಕ್ಕೋಸ್ಕರ ಹೋಗುತ್ತೇನೆ ಎಂದು ಕಪಟದಿಂದ ಹೇಳಿ, ಮತ್ತೊಂದು ದೇಶಕ್ಕೆ ಹೋಗಿ, ಹಡಗುಗಳಲ್ಲಿ ವ್ಯಾಪಾರಗಳನ್ನು ಮಾಡುವದಕ್ಕೋಸ್ಕರ ವಸ್ತ್ರಗಳನ್ನೂ ಹಸುಗಳನ್ನೂ ಬೇಕಾದ ವಸ್ತುಗಳೆಲ್ಲವನ್ನೂ ತುಂ

ಬಿ ಕೊಂಡು, ಸಮುದ್ರವನ್ನು ದಾಟಿ, ದ್ವೀಪಾಂತರದಲ್ಲಿ ವ್ಯಾಪಾರಾ ಮಾಡಿ, ಹೆಚ್ಚಾಗಿ ಹಣವನ್ನು ಸಂಪಾದಿಸಿ ಕೊಂಡು, ಅಲ್ಲಿಂದ ಹೊರಟು, ಮತ್ತೊಂದು ದೇಶವನ್ನು ಕುರಿತು ಹೋಗಿ, ಅಲ್ಲಿಂದ ಮೆಲ್ಲಗೆ ಮಧುರಾ ಪಟ್ಣವನ್ನು ಶೇರಿ, ಅಲ್ಲಿ ಅರಸಿನ ಅಪ್ಪಣೆಯಿಂದ ಮನೆಯನ್ನು ಕಟ್ಟಿ ಕೊಂಡು, ತಮ್ಮ ಕುಲದಲ್ಲಿ ಹುಟ್ಟಿದಂಥ ಮತ್ತೊಂದು ಹೆಣ್ಣನ್ನು ಮದುವೆ ಮಾಡಿ ಕೊಂಡು, ಅವಳೊಡನೆ ಕೂಡಿ, ಸಕಲ ಭೋಗಗಳನ್ನು ಅನುಭವಿಸುತ್ತಾ, ಒಬ್ಬ ಮಗಳನ್ನು ಪಡೆದು, ಮೊದಲು ತನ್ನ ಹೆಂಡತಿಯನ್ನು ಬಿಟ್ಟಂಥ ಅಪರಾಧ ಪರಿಹಾರವಾಗ ಬೇಕೆಂದು ಆ ಮಗಳನ್ನು ಪೂತವತಿ ಎಂದು ಕರೆಯುತ್ತಾ, ಸುಖವಾಗಿ ಇರಲು; ಧನದತ್ತನು ಬೇವಿನವರನ್ನು ಕಳುಹಿಸಿ, ಅವರ ಮೂಲಕದಿಂದ ತನ್ನ ಅಳಿಯನು ಮಧುರಾ ಪಟ್ಣದಲ್ಲಿ ಇದ್ದಾನೆ ಎಂದು ತಿಳಿದು, ತನ್ನ ಮಗಳನ್ನು ಅಳಿಯನ ಬಳಿಗೆ ಕಳುಹಿಸಿ ಬಿಡಲು; ಆ ಪೂತವತಿಯು ಧನದತ್ತನ ಮಾತನ್ನು ಕೇಳಿ, ಬೇಕಾದ ಹಣವನ್ನೂ ಒಡವೆಗಳನ್ನೂ ವಸ್ತ್ರಗಳನ್ನೂ ತೆಗೆದು ಕೊಂಡು, ಪಲ್ಲಕ್ಕಿಯನ್ನು ಏರಿ, ಸ್ನೇಹಿತರಾದ ನೆಂಟರನ್ನು ತನ್ನ ಸಂಗಡ ಕರೆದು ಕೊಂಡು, ಪರಮದತ್ತನ ಬಳಿಗೆ ಹೋಗಲು; ಆ ಪರಮದತ್ತನು ತನ್ನ ಬಳಿಗೆ ಬಂದ ಪೂತವತಿಯನ್ನು ನೋಡಿ, ಎದುರಾಗಿ ಹೋಗಿ, ತನ್ನ ಹೆಂಡತಿ ಮಗಳು ಸಹಿತವಾಗಿ ಅವಳಿಗೆ ನಮಸ್ಕಾರವನ್ನು ಮಾಡಿ, ಹೇಳಿದ್ದೇನಂದರೆ—ಕೇಳು, ಪೂತವತಿಯೇ, ನೀನು ಪಾರ್ವತೀ ದೇವಿಗೆ ಸಮಾನಳಾಗಿ ಇರುವದರಿಂದ ನಿನ್ನನ್ನು ಬಿಟ್ಟು, ಇಲ್ಲಿಗೆ ಬಂದೆನು. ನಿನ್ನನ್ನು ಬಿಟ್ಟಂಥ ಅಪರಾಧವನ್ನು ಪರಿಹರಿಸಿ ಕೊಳ್ಳುವದಕ್ಕೋಸ್ಕರ ನನ್ನ ಮಗಳನ್ನು ನಿನ್ನ ಹೆಸರಿನಿಂದ ಕರೆದಿದ್ದೇನೆ. ನಿನ್ನನ್ನು ದೇವತೆ ಎಂದು ಎಣಿಸಿ, ನಿನ್ನನ್ನು ಶರಣವನ್ನು ಹೊಂದುತ್ತೇನೆ. ನೀನು ಇಲ್ಲಿಗೆ ಬಂದದರಿಂದ ನಾನು ಇನ್ನೊಂದು ತಾವಿಗೆ ಹೋಗುತ್ತೇನೆ ಎಂದು ನುಡಿಯಲು; ಪೂತವತಿಯು ಗಂಡನ ಮಾತನ್ನು ಕೇಳಿ—ಸ್ವಾಮಿ, ಮಹಾನುಭಾವರುಗಳಿರಾ, ಇಷ್ಟು ಪರ್ಯಂತರವು ನಿಮಗೋಸ್ಕರ ಈ ಶರೀರವನ್ನು ಕಾಪಾಡಿ ಕೊಂಡಿದ್ದೆನು. ಇನ್ನು ಮೇಲೆ ನನ್ನನ್ನು ನೀವು ಬಿಟ್ಟರೆ, ಈ ಶರೀರವನ್ನು ಬಿಟ್ಟು, ಶಿವಲೋಕಕ್ಕೆ ಹೋಗುತ್ತೇನೆ ಎಂದು ನುಡಿದು, ಅಲ್ಲಿರುವಂಥ ಬ್ರಾಹ್ಮಣರನ್ನು ಕರೆದು, ತಾನು ತಂದ ಹಣವೆಲ್ಲವನ್ನು ಅವರಿಗೆ ದಾನವಾಗಿ ಕೊಟ್ಟು, ಅವರ ಅಪ್ಪಣೆಯಿಂದ ಪರಮೇಶ್ವರರನ್ನು ಧ್ಯಾನಾ ಮಾಡಲು; ಪರಮೇಶ್ವರರು ವೃಷಭಾರೂಢರಾಗಿ ಪಾರ್ವತಿಯೊಡನೆ ಕೂಡಿ, ಪ್ರತ್ಯಕ್ಷವಾಗಿ ಬಂದು, ನಿಲ್ಲಲು; ಪೂತವತಿಯು ಪ್ರಸನ್ನರಾದಂಥ ಪರಮೇಶ್ವರರಿಗೆ ಪ್ರದಕ್ಷಿಣ ನಮಸ್ಕಾರವನ್ನು

ಮಾಡಿ, ಸ್ತುತಿಸಲು; ಪರಮೇಶ್ವರರು ಪೂತವತಿಯು ಮಾಡಿದ ಸ್ತೋತ್ರದಿಂದ ಸಂತೋಷ ಪಟ್ಟು, ಅವಳನ್ನು ಕುರಿತು—ಎಲೈ, ಪೂತವತಿಯೇ, ನಿನಗೆ ಬೇಕಾದ ವರವನ್ನು ಬೇಡಿಕೋ ಎನಲು; ಅವಳು—ಸ್ವಾಮಿ, ಪರಮೇಶ್ವರರೇ, ನಿಮ್ಮ ಆನಂದ ನಾಟ್ಯವನ್ನು ನೋಡ ಕೈಲಾಸಕ್ಕೆ ಬರ ಬೇಕು ಎಂದು ಬೇಡಿ ಕೊಳ್ಳಲು; ಪರಮೇಶ್ವರರು—ಎಲೈ, ಪೂತವತಿಯೇ, ವಟಾರಣ್ಯದಲ್ಲಿ ನಾಟ್ಯವನ್ನು ತೋರಿಸುತ್ತೇನೆ. ಅಲ್ಲಿಗೆ ಬಾ ಎಂದು ನುಡಿಯಲು; ಪೂತವತಿಯು ಪರಮೇಶ್ವರರನ್ನು ಕುರಿತು—ಸ್ವಾಮಿ, ಪರಮೇಶ್ವರರೇ, ನಾನು ಮುದುಕಿಯಾದ್ದರಿಂದ ನಡಿಯಲಾರೆನು ಎಂದು, ಆತನ ಪಾದಗಳನ್ನು ಹಿಡಿದು ಕೊಳ್ಳಲು; ಪರಮೇಶ್ವರರು ವಿಘ್ನೇಶ್ವರನನ್ನು ಕರೆದು, ಈ ಪೂತವತಿಯನ್ನು ವಟಾರಣ್ಯಕ್ಕೆ ಕರೆದು ಕೊಂಡು ಹೋಗಿ, ಬಿಡೆಂದು ಕಟ್ಟು ಮಾಡಲು; ವಿಘ್ನೇಶ್ವರನು ಅವರ ಅಪ್ಪಣೆಯ ಪ್ರಕಾರ ಪೂತವತಿಯನ್ನು ತನ್ನ ಸೊಂಡಿಲಿನಿಂದ ಎತ್ತಿ ಕೊಂಡು ಹೋಗಿ, ಒಂದು ಕ್ಷಣದಲ್ಲಿಯೇ ವಟಾರಣ್ಯಕ್ಕೆ ಕರೆದು ಕೊಂಡು ಹೋಗಿ ಬಿಡಲು; ಪೂತವತಿಯು ಒಂದು ಕ್ಷಣ ಮಾತ್ರದಲ್ಲಿ ವಟಾರಣ್ಯವನ್ನು ಶೇರಿ, ಅಲ್ಲಿ ನವರತ್ನ ಮಯವಾದ ಸಭಾ ಮಂಟಪದಲ್ಲಿ ಬೆತ್ತವನ್ನು ಕೈಯಲ್ಲಿ ಹಿಡಿದು ತಿರುಗುತ್ತಲಿರುವ ನಂದೀಶ್ವರನನ್ನೂ, ವೀಣಾಗಾನವನ್ನು ಮಾಡುತ್ತಲಿರುವ ಸರಸ್ವತೀ ದೇವಿಯನ್ನೂ, ವೇಣು ಗಾನಾ ಮಾಡುವ ಲಕ್ಷ್ಮೀ ದೇವಿಯನ್ನೂ, ಮದ್ದಲೇ ಬಾರಿಸುವಂಥ ವಿಷ್ಣುವನ್ನೂ, ತಾಳಾ ಬಾರಿಸುವಂಥ ಬ್ರಹ್ಮ ದೇವನನ್ನೂ, ದೀಪಗಳಾಗಿ ಬೆಳಗುತ್ತಿರುವ ನಾಲ್ಕು ವೇದಗಳನ್ನೂ, ವಿನೋದಗಳನ್ನು ನೋಡುತ್ತಲಿರುವ ಸಕಲ ಮುನಿಗಳನ್ನೂ, ಗಾಯತ್ರೀ ಮಯವಾದ ಮಂಟಪವನ್ನೂ, ಮೇಲ್ಕಟ್ಟುಗಳಾಗಿ ಬೆಳಗುತ್ತಲಿರುವ ಸಕಲ ಸಿದ್ಧಾಂತಗಳನ್ನೂ, ಪುಷ್ಪಗಳಾಗಿ ಒಪ್ಪುತ್ತಲಿರುವ ಸಪ್ತ ಕೋಟಿ ಮಹಾ ಮಂತ್ರಗಳನ್ನೂ, ಪಂಚಾಕ್ಷರೀ ಮಯವಾದ ಭದ್ರ ಪೀಠವನ್ನೂ, ಸಾಕ್ಷಿಗಳಾಗಿ ನೋಡುತ್ತಲಿರುವ ಚಂದ್ರ ಸೂರ್ಯರನ್ನೂ, ಸರ್ವಸಾಕ್ಷಿಯಾದ ಪರ ದೇವತೆಯನ್ನೂ, ಭದ್ರ ಪೀಠದಲ್ಲಿ ಕುಳಿತು ಕೊಂಡು ಇರುವ ಪರಮೇಶ್ವರರನ್ನೂ ನೋಡಿ, ಅಧಿಕವಾಗಿ ಆಶ್ಚರ್ಯ ಪಟ್ಟು, ಆತನನ್ನು ಮನಸ್ಸಿನಲ್ಲಿ ಧ್ಯಾನಾ ಮಾಡುತ್ತಿರಲು; ಪರಮೇಶ್ವರರು ಪೂತವತಿಗೆ ಆನಂದ ಮಯವಾದ ನಾಟ್ಯವನ್ನು ತೋರಿಸಿದನು.

ಪೂತವತಿಯು ಆ ನಾಟ್ಯವನ್ನು ನೋಡಿ, ಸಂತೋಷ ಪಟ್ಟು, ಪರಮೇಶ್ವರರನ್ನು ಸ್ತುತಿಸುತ್ತಿರಲು; ಪರಮೇಶ್ವರರು ಪೂತವತಿಯನ್ನು ನೋಡಿ—ಎಲೈ, ಪೂತವತಿಯೇ, ನಿನ್ನ ಭಕ್ತಿಯಿಂದ ನನಗೆ ಸಂತೋಷವಾಯಿತು. ನಿನಗೆ ಮುಕ್ತಿ

ಯನ್ನು ಕೊಡುತ್ತೇನೆ; ಕೈಲಾಸಕ್ಕೆ ಬಾ ಎಂದು ನುಡಿದು, ಮಾಯವಾಗಿ ಹೋಗಲು; ಪೂತವತಿಯು ಪರಮೇಶ್ವರರಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಸ್ತುತಿಸಿ, ಯೋಗ ಮಾರ್ಗದಿಂದ ತನ್ನ ಶರೀರವನ್ನು ಬಿಟ್ಟು, ಶಿವಾನುಗ್ರಹದಿಂದ ದಿವ್ಯ ಶರೀರವನ್ನು ಹೊಂದಿ, ಪರಮೇಶ್ವರ ಸ್ವಾಮಿಯವರ ಅಪ್ಪಣೆಯಿಂದ ಬಂದಂಥ ದಿವ್ಯ ವಿಮಾನವನ್ನು ಏರಿ, ಅಲ್ಲಿ ಇರುವ ಜನರೆಲ್ಲರು ಆಶ್ಚರ್ಯ ಪಡುವ ಹಾಗೆ ಕೈಲಾಸ ಪರ್ವತವನ್ನು ಶೇರಿ, ದೂರದಲ್ಲಿ ವಿಮಾನದಿಂದ ಇಳಿದು, ಪಾದಗಳಿಂದ ಕೈಲಾಸವನ್ನು ಮುಟ್ಟ ಬಾರದೆಂಬ ಭಕ್ತಿಯಿಂದ ತಲೆ ಕೆಳಗಾಗಿ ನಿಂತು, ಕೈಗಳನ್ನು ಊರಿ ಕೊಂಡು, ಪರಮೇಶ್ವರ ಸ್ವಾಮಿಯವರ ಸನ್ನಿಧಿಗೆ ಹೋಗಲು; ಅಮ್ಮನವರು ತಲೆಯಿಂದ ನಡೆದು ಬರುವಂಥ ಪೂತವತಿಯನ್ನು ಕಂಡು, ಆಶ್ಚರ್ಯದಿಂದ ಪರಮೇಶ್ವರರನ್ನು ನೋಡಿ—ಸ್ವಾಮಿ, ದೇವ ದೇವರೇ, ತಲೆಯಿಂದ ನಡೆದು ಬರುವಂಥ ಈ ಸ್ತ್ರೀ ಯಾರು? ಇವಳ ರೂಪವು ವಿಕಾರವಾಗಿದೆ. ಇವಳ ಮಹಿಮೆಯಾದರೆ ಅಧಿಕವಾಗಿದೆ. ಎಪ್ಪತ್ತು ನಾಲ್ಕು ಸಾವಿರ ಯೋಜನಗಳಿಂದ ಅಧಿಕವಾದ ಭಕ್ತಿಯುಳ್ಳವಳಾಗಿ ನಡೆದು ಬರುತ್ತಿದ್ದಾಳೆ. ಇವಳ ಸ್ವರೂಪವನ್ನು ತಿಳುಹಿಸ ಬೇಕೆನಲು; ಪರಮೇಶ್ವರರು ಅಮ್ಮನವರನ್ನು ನೋಡಿ—ಎಲೈ, ಪಾರ್ವತಿಯೇ, ಈ ಪೂತವತಿಯು ನನ್ನ ಭಕ್ತರನ್ನು ಕಾಪಾಡಿದವಳು. ನನಗೆ ತಾಯಿಯಾಗ ಬೇಕು. ಇವಳನ್ನು ನಾನು ಪೂಜಿಸ ಬೇಕೆಂದು ನುಡಿದು, ಪಾರ್ವತೀ ದೇವಿಯೊಡನೆ ಕೂಡಿ, ಎದುರಾಗಿ ಹೋಗಿ, ಅವಳನ್ನು ನೋಡಿ—ಎಲೈ, ಪೂತವತಿಯೇ, ಸುಖವಾಗಿ ಬಂದೆಯಾ? ಎಂದು ನುಡಿಯಲು; ಆ ಪೂತವತಿಯು ಸಕಲವಾದ ಪ್ರಪಂಚಕ್ಕೂ ಒಡೆಯರಾದ ಪರಮೇಶ್ವರರಿಗೆ ನಮಸ್ಕಾರವನ್ನು ಮಾಡಿ, ಅವರ ಅಪ್ಪಣೆಯಿಂದ ಅಪ್ರಾಕೃತವಾದ ದಿವ್ಯ ಶರೀರವನ್ನು ಧರಿಸಿ, ಆ ಕೈಲಾಸ ಮಧ್ಯದಲ್ಲಿ ಅಮ್ಮನವರ ಸನ್ನಿಧಿಯಲ್ಲಿ ಆನಂದವನ್ನೈದಿ, ಸುಖವಾಗಿ ಇದ್ದಳು.

———:o:———

PART III.

—:o:—

Extracts from the Maha Bharata.

—:o:—

55. The Churning of the Milk Sea.

೫೫. ಸಮುದ್ರ ಮಥನದ ಕಥೆ.

ಪೂರ್ವದಲ್ಲಿ, ಒಂದಾನೊಂದು ಸಮಯದಲ್ಲಿ ಇಂದ್ರನೇ ಮೊದಲಾದ ಸಮಸ್ತ ದೇವತೆಗಳು, ಸೂರ್ಯ ಕಾಂತಿಯನ್ನು ನಿರಾಕರಿಸುತ್ತಲಿರುವ ಚಿನ್ನದ ಶಿಖರಗಳಿಂದ ಕೂಡಿ ಕೊಂಡಿರುವಂಥಾ—ಸಕಲ ಭೂಷಣಗಳನ್ನು ಧರಿಸಿರುವ ದೇವ ದಾನವರಿಂದ ಸೇವಿಸಲ್ಪಟ್ಟಂಥಾ—ದುಷ್ಕರ್ಮಗಳನ್ನು ಮಾಡಿದ ಜನರಿಗೆ ದುರವಗಾಹವಾದಂಥಾ—ಅತಿ ಭಯಂಕರವಾದ ದುಷ್ಟ ಸರ್ಪ ಸಮೂಹದಿಂದ ಯುಕ್ತವಾದಂಥಾ—ಸಕಲ ಮೂಲಿಕೆಗಳಿಗೆ ಆಶ್ರಯವಾದಂಥಾ—ಆಕಾಶವನ್ನು ಮುಟ್ಟುವಂಥಾ—ಅನೇಕ ನದಿಗಳಿಂದ ಕೂಡಿರುವಂಥಾ—ಫಲ ಪುಷ್ಪ ಶೋಭಿತಗಳಾದ ಅನೇಕ ವನಗಳಿಂದ ಕೂಡಿರುವಂಥಾ—ಗಿಣಿ, ಗೊರವಂಕ, ಪಾರಿವಾಳ, ನವಿಲು, ಇವೇ ಮೊದಲಾದ ನಾನಾ ಪಕ್ಷಿಗಳ ಧ್ವನಿಗಳಿಂದ ಅತಿ ರಮಣೀಯವಾದಂಥ ಮಹಾ ಮೇರು ಪರ್ವತಕ್ಕೆ ಹೋಗಿ, ಅಲ್ಲಿ ಓಲಗದ ಚಾವಡಿಯಲ್ಲಿ ಕುಳಿತು ಕೊಂಡು, ಅಮೃತವನ್ನು ಹೊಂದುವದಕ್ಕೋಸ್ಕರ ಆಲೋಚನೆಯನ್ನು ಮಾಡುತ್ತಿರಲು; ಭಕ್ತ ಜನ ಪರಿಪಾಲಕನಾದ ಮಹಾವಿಷ್ಣುವು ಬ್ರಹ್ಮ ದೇವನನ್ನು ಕುರಿತು—ಎಲೈ, ಬ್ರಹ್ಮನೇ, ಈ ದೇವತೆಗಳೂ, ರಾಕ್ಷಸರೂ ಕ್ಷೀರ ಸಮುದ್ರಕ್ಕೆ ಹೋಗಿ, ಸಕಲ ಮೂಲಿಕೆಗಳನ್ನೂ, ರತ್ನಗಳನ್ನೂ, ಅದರೊಳಗೆ ಹಾಕಿ, ಮಥಿಸಿದರೆ, ಅದರಲ್ಲಿ ಅಮೃತ ಹುಟ್ಟುತ್ತದೆ. ಆ ಅಮೃತ ಪಾನದಿಂದ ದೇವತೆಗಳು ಸುಖದಲ್ಲಿರುವರು ಎಂದು, ಕಟ್ಟು ಮಾಡಲು; ಬ್ರಹ್ಮನು ಹಾಗೆಯೇ ದೇವಾಸುರರಿಗೆ ಕಟ್ಟು ಮಾಡಿದನು.

ಆಗಲಾ ದೇವಾಸುರರು ಬ್ರಹ್ಮ ದೇವನ ಅಪ್ಪಣೆಯನ್ನು ಶಿರಸಾವಹಿಸಿ, ಶರತ್ಕಾಲದ ಮೇಘಗಳೋಪಾದಿಯಲ್ಲಿ ಬಿಳುಪಾಗಿರುವ ಶಿಖರಗಳಿಂದ ಅಲಂಕೃತವಾಗಿ—ಗರುಡ, ಗಂಧರ್ವ, ಕಿನ್ನರ, ಕಿಂಪುರುಷ, ದೇವತಾ ಸಮೂಹದಿಂದ ಸೇವಿಸಲ್ಪಟ್ಟಂಥಾ—ನಾನಾ ಪಕ್ಷಿಗಳ ಧ್ವನಿಗಳಿಂದ ಶೋಭಿಸುವಂಥಾ—ಸಿಂಹ, ಶಾರ್ದೂಲ, ಶರಭ, ಮೊದಲಾದ ಮೃಗಗಳಿಂದ ಅತಿ ಭಯಂಕರವಾದಂ

ಥಾ—ಭೂಮಿಯೊಳಗೆ ಹನ್ನೊಂದು ಸಾವಿರ ಯೋಜನ ಇಳಿದಿರುವಂಥಾ—
ಭೂಮಿಯ ಮೇಲೆ ಹನ್ನೊಂದು ಸಾವಿರ ಯೋಜನ ಉದ್ದವಾದ ಮಂದರ
ಪರ್ವತವನ್ನು ಕಂಡು, ಅದನ್ನು ಬಹು ಪ್ರಯತ್ನದಿಂದ ಎತ್ತಿದರೂ ಅಲ್ಲಾಡದೆ
ಇದ್ದದರಿಂದ, ತಿರಿಗಿ ಬ್ರಹ್ಮ ದೇವನೊಡನೆ ಕೂಡಿ ಕೊಂಡಿರುವ ವಿಷ್ಣುವಿನ
ಬಳಿಗೆ ಬಂದು, ನಮಸ್ಕರಿಸಿ, ಮಂದರ ಪರ್ವತವನ್ನು ತರುವದಕ್ಕೆ ಉಪಾ
ಯವೇನೆಂದು, ದೇವತೆಗಳು ಕೇಳಲು; ಆ ಮಹಾ ವಿಷ್ಣುವು ಅನಂತನೆಂಬ
ಮಹಾ ಸರ್ಪನನ್ನು ಕರೆದು—ನೀನು ಮಂದರ ಪರ್ವತವನ್ನು ಭೂಮಿಯಿಂದ
ಕಿತ್ತು ಬಿಡೆಂದು, ಕಳುಹಿಸಲು; ಆತನು ಮಹಾ ಬಲಶಾಲಿಯಾದ್ದರಿಂದ, ಆ
ಪರ್ವತವನ್ನು ಕ್ಷಣ ಮಾತ್ರದಲ್ಲಿ ಕಿತ್ತು ಬಿಡಲು; ಆ ದೇವಾಸುರರು ಅನಂತ
ನೊಡನೆ ಕೂಡಿ, ಆ ಮಂದರ ಪರ್ವತವನ್ನು ತಂದು, ಸಮುದ್ರದಲ್ಲಿ ಹಾಕಿ,
ಆ ಸಮುದ್ರನನ್ನು ಕುರಿತು—ಎಲೈ, ಸಮುದ್ರನೇ, ನಾವು ನಿನ್ನ ಉದಕವ
ನ್ನು ಮಥಿಸುತ್ತಲಿದ್ಧೇವೆ. ನೀನು ಸೈರಿಸ ಬೇಕೆಂದು ಪ್ರಾರ್ಥಿಸಲು; ಆತನು—
ಎಲೈ, ದೇವತೆಗಳಿರಾ, ಆ ಅಮೃತದಲ್ಲಿ ನನಗೊಂದು ಭಾಗವನ್ನು ಕೊಟ್ಟ
ರೆ, ಈ ಆಯಾಸವನ್ನು ಸಹಿಸುತ್ತೇನೆಂದು ಹೇಳಲು; ಅದಕ್ಕೆ ದೇವಾಸು
ರರು ಒಪ್ಪಿ ಕೊಂಡು, ಸಮುದ್ರ ಮಧ್ಯದಲ್ಲಿರುವ ಮಹಾ ಕೂರ್ಮನನ್ನು
ಕಂಡು—ಎಲೈ, ಕೂರ್ಮನೇ, ಈ ಅಮೃತ ಮಥನಕ್ಕೋಸ್ಕರ ಸಮುದ್ರ ಮ
ಧ್ಯದಲ್ಲಿ ಹಾಕಲ್ಪಡುವ ಮಂದರ ಪರ್ವತಕ್ಕೆ ಆಧಾರವಾಗಿ ನೀನಿರ ಬೇಕೆಂದು
ಪ್ರಾರ್ಥಿಸಲು; ಆ ಕೂರ್ಮನು—ಹಾಗೆ ಆಗಲೆಂದು ಸಮ್ಮತಿಸಿ, ತನ್ನ ಬೆನ್ನಿನ
ಚಿಪ್ಪಿನಿಂದ ಆ ಮಹಾ ಪರ್ವತವನ್ನು ಆನಲು; ಇಂದ್ರನು ತನ್ನ ವಜ್ರಾಯುಧ
ದಿಂದ ಆ ಪರ್ವತದ ಮೇಲ್ಭಾಗವನ್ನು ಅಮುಕಿ ಕೊಂಡಿರಲು; ಆ ದೇವತೆಗ
ಳು ಮಂದರ ಪರ್ವತವೆಂಬ ಕಡೆಗೋಲಿಗೆ ವಾಸುಕಿಯನ್ನು ಹಗ್ಗವಾಗಿ ಮಾ
ಡಿ, ಸಮುದ್ರ ಮಥನಕ್ಕೆ ಎತ್ನಾ ಮಾಡಿ, ದೈತ್ಯ ದಾನವರು ವಾಸುಕಿಯ ಮು
ಖ ಭಾಗವನ್ನೂ, ದೇವತೆಗಳು ಬಾಲದ ಕಡೆಯನ್ನೂ ಹಿಡಿದು ಕೊಂಡು, ಸ
ರ್ಪ ಶ್ರೇಷ್ಠನಾದ ಅನಂತನೊಡನೆ ಕೂಡಿ ಕೊಂಡಿರುವ ನಾರಾಯಣನ ಸಂಗ
ಡ ನಿಂತು, ಕಡೆಯುತ್ತಿರಲು; ಆ ವಾಸುಕಿಯ ಮುಖದಿಂದ ಹೊರಡುವ
ವಿಷ ಜ್ವಾಲೆಗಳು ಸಮುದ್ರದ ನೀರಿನೊಡನೆ ಕೂಡಲು; ಆ ಮಥನ ಸಮಯ
ದಲ್ಲಿ ಹಾಲಾಹಲವೆಂಬ ಮಹಾ ವಿಷವು ವಾಸುಕಿಯ ವಿಷ ಜ್ವಾಲೆಗಳೊಡನೆ
ಕೂಡಿ, ಆ ಸಮುದ್ರದಲ್ಲಿ ಹುಟ್ಟಿ, ದೇವ ದಾನವರನ್ನು ಕೊಲ್ಲುವದಕ್ಕೆ
ಯತ್ನಾ ಮಾಡಲು; ಅವರು ಆ ವಿಷ ಜ್ವಾಲೆಯನ್ನು ಸಹಿಸಲಾರದೆ, ಬ್ರಹ್ಮ

ದೇವನ ಸನ್ನಿಧಿಗೆ ಹೋಗಿ,—ಸ್ವಾಮಿ, ಬ್ರಹ್ಮನೇ, ನಾವು ಅಮೃತವನ್ನು ಬಯಸಿ, ಸಮುದ್ರವನ್ನು ಮಥಿಸುವ ಸಮಯದಲ್ಲಿ ಕಾಲಾಗ್ನಿಯೋಪಾದಿಯಲ್ಲಿರುವ ಒಂದು ಹಾಲಾಹಲವೆಂಬ ವಿಷ ಹುಟ್ಟಿ, ಲೋಕಗಳೆಲ್ಲವನ್ನು ದಹಿಸಿ ಬಿಡುತ್ತಲಿದೆ. ಇದಕ್ಕೆ ಈಗಲೇ ಪ್ರತಿ ಕ್ರಿಯೆಯನ್ನು ಮಾಡ ಬೇಕೆಂದು ಪ್ರಾರ್ಥಿಸಲು; ಆಗ ಬ್ರಹ್ಮ ದೇವನು ಶೂಲಪಾಣಿಯಾಗಿ—ತ್ರಿನೇತ್ರ ಧರನಾಗಿ—ಸಕಲ ಲೋಕಾಧಿಪತಿಯಾಗಿ—ಸಕಲ ದೇವತೆಗಳಿಗೆ ಶ್ರೇಷ್ಠನಾಗಿರುವ ಪರಮೇಶ್ವರನನ್ನು ಮನಸ್ಸಿನಲ್ಲಿ ಧ್ಯಾನಿಸಲು; ಆಗ ಭಕ್ತಾನುಗ್ರಹವುಳ್ಳ ಪರಮೇಶ್ವರನು ಪ್ರತ್ಯಕ್ಷವಾಗಿ ನಿಂತು, ಬ್ರಹ್ಮನ ಮುಖ ವಚನದಿಂದ ವಿಷ ಹುಟ್ಟಿದ ರೀತಿಯನ್ನು ತಿಳಿದು, ಲೋಕ ಹಿತಾರ್ಥವಾಗಿ ಆ ವಿಷವನ್ನು ಪಾನಾ ಮಾಡಿ, ಕಂಠದಲ್ಲಿ ನಿಲ್ಲಿಸಿ ಕೊಂಡು, ಲೋಕದಲ್ಲಿ ವಿಷಕಂಠನೆಂಬ ಹೆಸರನ್ನು ಪಡೆದನು. ಹೀಗೆ ಆ ಪರಮೇಶ್ವರನು ವಿಷ ಬಾಧೆಯನ್ನು ಪರಿಹರಿಸಲು; ದೇವತೆಗಳೆಲ್ಲಾ ಸಂತುಷ್ಟರಾಗಿ, ಯಥಾ ಪ್ರಕಾರ ಸಮುದ್ರವನ್ನು ಮಥಿಸ ತೊಡಗಿದರು.

ಆ ಕಾಲದಲ್ಲಿ ಹೊಗೆಗಳಿಂದಲೂ ಉರಿಗಳಿಂದಲೂ ಕೂಡಿ, ಮಹತ್ತಾದ ಘಾಳಿ ಬೀಸಿತು. ಆ ಹೊಗೆ ಉರಿಗಳು ಆಕಾಶದಲ್ಲಿ ಮಿಂಚುಗಳೊಡನೆ ಕೂಡಿದ ಮೇಘಗಳಾಗಿ, ದೇವತೆಗಳ ಶ್ರಮವನ್ನು ಪರಿಹರಿಸುವ ಹಾಗೆ ಉದಕದ ಹನಿಗಳನ್ನು ವರ್ಷಿಸುತ್ತಿದ್ದವು. ಮತ್ತು ಆ ಮಂದರ ಪರ್ವತದಲ್ಲಿರುವ ಮರಗಳು ತಮ್ಮ ಪುಷ್ಪ ವರ್ಷಗಳಿಂದ ಸಕಲ ದೇವತೆಗಳ ಶ್ರಮವನ್ನು ಪರಿಹರಿಸುತ್ತಿದ್ದವು. ಈ ಪ್ರಕಾರ ದೇವಾಸುರರು ಪ್ರಯಾಸದಿಂದ ಮಥಿಸುತ್ತಿರುವ ಸಮುದ್ರ ಮಧ್ಯದಿಂದ ಮೇಘ ಧ್ವನಿಯ ಹಾಗೆ ದೊಡ್ಡ ಧ್ವನಿ ಹುಟ್ಟಿತು. ಮತ್ತು ಸಮುದ್ರವನ್ನು ಪರ್ವತದಿಂದ ಕಡೆಯುವದರಿಂದ ನಾನಾ ಜಲಚರಗಳೂ, ಅನೇಕ ಪರ್ವತಗಳೂ, ತುಮುರು ತುಮುರಾಗಿ ಹೋದವು. ಮತ್ತು ಆ ಪರ್ವತದಲ್ಲಿರುವ ಮರಗಳು ಒಂದಕ್ಕೊಂದು ಬಡಿದಾಡಿ, ಮುರಿದು, ಪಕ್ಷಿ ಸಮೇತಗಳಾಗಿ ಆ ಸಮುದ್ರದಲ್ಲಿ ಬಿದ್ದವು. ಆ ಮರಗಳು ಒಂದಕ್ಕೊಂದು ಉಜ್ಜುವದರಿಂದ ಎಲ್ಲಿ ನೋಡಿದರೂ ಕಾಡ್ಗಿಚ್ಚು ಹೆಚ್ಚಿ, ಮಿಂಚು ಬಳ್ಳಿಗಳು ಮೇಘಗಳನ್ನು ಆವರಿಸುವ ಹಾಗೆ ಆ ಮಹಾ ಪರ್ವತವನ್ನು ಸುತ್ತಿ ಕೊಂಡು, ಅಲ್ಲಿರುವ ಸಿಂಹ, ಶಾರ್ದೂಲ, ಶರಭ, ಗಂಡಭೇರುಂಡಾದಿ ಮೃಗಗಳನ್ನೂ, ಪಕ್ಷಿಗಳನ್ನೂ ಸುಡುತ್ತಿರಲು; ದೇವೇಂದ್ರನು ಅದನ್ನು ನೋಡಿ, ಮೇಘ ವರ್ಷಗಳಿಂದ ಆ ಕಾಡ್ಗಿಚ್ಚನ್ನು ಕೆಡಿಸುತ್ತಿರಲು; ಆ ಮಂದರ ಪರ್ವತದಲ್ಲಿರುವ ವೃಕ್ಷಗಳ ಬೇರುಗಳಿಂದ ನಾನಾ ಪ್ರಕಾರವಾದ ಮೂಲಿಕಾ ರಸಗಳು ನದೀ ರೂಪವಾಗಿ ಹರಿಯುತ್ತಿದ್ದ

ವು. ಆ ಅಮೃತ ಸಮಾನವಾದ ದಿವ್ಯ ರಸ ಸಂಪರ್ಕದಿಂದ ದೇವತೆಗಳಿಗೆ ಬಲ ಹೆಚ್ಚುತ್ತಾ ಬಂತು. ಹೀಗೆ ಅತಿ ಪ್ರಯತ್ನದಿಂದ ದೇವ ದಾನವರು ಬಹು ಕಾಲ ಮಥಿಸಿದರೂ, ಅಮೃತ ಹುಟ್ಟಲಿಲ್ಲ. ಆಗ ದೇವತೆಗಳು ಬ್ರಹ್ಮನ ಬಳಿಗೆ ಹೋಗಿ—ಎಲೈ, ಬ್ರಹ್ಮನೇ, ನಾವು ಎಷ್ಟು ಕಷ್ಟ ಪಟ್ಟರೂ, ಸಕಲ ಲೋಕ ರಕ್ಷಕನಾದ ನಾರಾಯಣನ ಅನುಗ್ರಹವಿಲ್ಲದೆ ಹೋದರೆ, ಅಮೃತ ಹೊಂದುವದಕ್ಕಾಗುವದಿಲ್ಲ ಎಂದು ಬಿನ್ನೈಸಲು; ಹಾಗೆಯೇ ಬ್ರಹ್ಮನು ಮಹಾ ವಿಷ್ಣುವಿಗೆ ಅರಿಕೆ ಮಾಡಿ ಕೊಳ್ಳಲು; ಆ ವಿಷ್ಣುವು,—ನಾನು ದೇವ ದಾನವರಿಗೆ ಹೆಚ್ಚಾದ ಬಲವನ್ನು ಕೊಡುತ್ತೇನೆ. ಅವರು ಯಥಾ ಪ್ರಕಾರ ಮಥಿಸಲಿ ಎಂದು ಅಪ್ಪಣೆ ಕೊಡಲು; ಆಗ ಆ ವಿಷ್ಣುವಿನ ಅನುಗ್ರಹದಿಂದ ದೇವ ದಾನವರು ಮಹಾ ಬಲಶಾಲಿಗಳಾಗಿ, ಎಲ್ಲರು ಒಟ್ಟಾಗಿ ಕೂಡಿ, ಸಾವಿರ ವರುಷಗಳ ಪರ್ಯಂತರ ಮಥಿಸುತ್ತಿರಲು; ಸರ್ವಾಭರಣ ಭೂಷಿತೆಯಾಗಿ, ಕಪ್ಪು ವರ್ಣವುಳ್ಳ ಜೇಷ್ಠಾದೇವಿ ಹುಟ್ಟಿದಳು. ಅನಂತರ, ನೂರು ಸೂರ್ಯರ ಕಾಂತಿಗಳನ್ನು ಚೆಲ್ಲುತ್ತಾ, ತಂಪಾದ ಕಿರಣಗಳುಳ್ಳವನಾಗಿ, ಚಂದ್ರನು ಹುಟ್ಟಿದನು. ಅನಂತರದಲ್ಲಿ ಬಿಳೀ ವಸ್ತ್ರಗಳನ್ನು ಧರಿಸಿ ಕೊಂಡು, ಮಹಾ ಲಕ್ಷ್ಮಿ ಹುಟ್ಟಿದಳು. ಆ ಮೇಲೆ ಮದ್ಯವೂ, ಉಚ್ಚೈಶ್ರವಸ್ಸೆಂಬ ಕುದುರೆಯೂ, ಕೌಂಸ್ತುಭವೆಂಬ ದಿವ್ಯ ರತ್ನವೂ ಹುಟ್ಟಿದವು. ಆ ಕೌಂಸ್ತುಭ ಮಣಿಯು ನಾರಾಯಣನಿಗೆ ಪದಕವಾಯಿತು. ಆ ಮೇಲೆ, ಪಾರಿಜಾತವೂ, ಕಾಮಧೇನುವೂ, ಕಲ್ಪವೃಕ್ಷಗಳೂ, ನಾಲ್ಕು ಕೊಂಬುಗಳಿಂದ ಒಪ್ಪುತ್ತಿರುವ ಐರಾವತವೆಂಬ ಆನೆಯೂ ಜನಿಸಿದವು. ~~ವಿಷವೂ~~, ಜೇಷ್ಠಾದೇವಿಯೂ, ಚಂದ್ರನೂ, ಲಕ್ಷ್ಮಿಯೂ, ಸುರೆಯೂ, ಉಚ್ಚೈಶ್ರವಸ್ಸೆಂಬ ಕುದುರೆಯೂ, ಕಾಮಧೇನುವೂ, ಕಲ್ಪವೃಕ್ಷವೂ, ಐರಾವತವೂ, ಇವೆಲ್ಲಾ ದೇವತೆಗಳ ಪಾಲಿಗೆ ಬಂದವು.

ಅನಂತರದಲ್ಲಿ, ಧನ್ವಂತರಿ ಎಂಬ ಒಬ್ಬ ದಿವ್ಯ ಪುರುಷನು ಅಮೃತ ಪೂರಿತವಾದ ಬಿಳೀ ಕಲಶವನ್ನು ಕೈಯಲ್ಲಿ ಹಿಡಿದು ಕೊಂಡು, ಸಮುದ್ರ ಮಧ್ಯದಿಂದ ಹೊರಟು ಬರಲು; ಆ ದಿವ್ಯ ಪುರುಷನನ್ನು ಕಂಡು, ಆಶ್ಚರ್ಯ ಪಟ್ಟು, ದೈತ್ಯ ದಾನವರು ಆ ಅಮೃತಕ್ಕೋಸ್ಕರ ಕಲಹಮಾಡಿ, ಆ ಅಮೃತವನ್ನು ತೆಗೆದು ಕೊಳ್ಳಲು; ನಾರಾಯಣನು ಯೋಗ ಮಾಯಾ ಪ್ರಭಾವದಿಂದ ಮೋಹಿನೀ ರೂಪವನ್ನು ತಾಳಿ, ಆ ದೈತ್ಯ ದಾನವರಿಗೆ ಎದುರಾಗಿ ನಿಲ್ಲಲು; ಅವರು ಮೋಹಿನಿಯನ್ನು ಕಂಡು, ಮೂಢ ಹೃದಯರಾಗಿ, ಆಕೆಯಲ್ಲಿ ಮೋಹದಿಂದ ಪರವಶರಾಗಿ, ಆ ಅಮೃತವನ್ನು ಮೋಹಿನಿಗೆ ಒಪ್ಪಿಸಲು; ಆ ಮೋಹಿನಿಯು ಅಮೃತ ಕಲಶ

ವನ್ನು ಕೈಯಲ್ಲಿ ಧರಿಸಿ, ದೇವತೆಗಳನ್ನೂ ದಾನವರನ್ನೂ ಪ್ರತ್ಯೇಕವಾಗಿ ತನ್ನ
ಎರಡು ಪಾರ್ಶ್ವಗಳಲ್ಲಿ ಪಙ್ತಿಯಾಗಿ ಕುಳ್ಳಿರಿಸಿ, ಪಕ್ಷಪಾತದಿಂದ ದೇವತೆಗಳಿಗೆ
ಮೊದಲು ಅಮೃತವನ್ನು ಬಡಿಸಲು; ದಾನವರು ಕೋಪಿಸಿ ಕೊಂಡು, ನಾನಾ ಆ
ಯುಧಗಳನ್ನು ತೆಗೆದು ಕೊಂಡು, ದಿವ್ಯವಾದ ಕವಚಗಳನ್ನು ತೊಟ್ಟು, ಆ ದೇ
ವತೆಗಳ ಕೂಡೆ ಯುದ್ಧವನ್ನು ಮಾಡಲು; ಆಗ ಇಂದ್ರನಿಗೆ ಸಹಾಯವಾಗಿ ನಾ
ರಾಯಣನು ತಾನೇ ಕಾಣಿಸಿ ಕೊಂಡು, ಅದ್ಭುತ ಪರಾಕ್ರಮದಿಂದ ಯುದ್ಧದ
ಲ್ಲಿ ದಾನವ ಶ್ರೇಷ್ಠರನ್ನು ಪೆಟ್ಟಿನಿಂದ ಓಡಿಸಿ, ಆ ಅಮೃತವನ್ನು ದೇವತೆಗಳಿಗೆ
ಹಂಚುತ್ತಿರಲು; ಅವರು ಪಙ್ತಿಯಾಗಿ ಕುಳಿತು ಕೊಂಡು, ಅಮೃತವನ್ನು ಪಾ
ನಾ ಮಾಡುತ್ತಿರುವ ಸಮಯದಲ್ಲಿ ರಾಹುವೆಂಬ ದಾನವನು ದೇವತಾ ವೇಷದಿಂ
ದ ದೇವತೆಗಳೊಡನೆ ಬೆರಿಸಿ, ಅಮೃತ ಪಾನಾ ಮಾಡುವ ಸಮಯದಲ್ಲಿ, ಆ ಅ
ಮೃತವು ಆತನ ಕೊರಳಲ್ಲಿ ಇಳಿಯುವಷ್ಟರೊಳಗೆ, ದೇವತೆಗಳಿಗೆ ಹಿತವನ್ನು ಬ
ಯಸಿ, ಚಂದ್ರ ಸೂರ್ಯರಿಬ್ಬರು ಸರ್ವಜ್ಞನಾದ ವಿಷ್ಣುವಿಗೆ ಸನ್ನೆಯಿಂದ ತಿಳಿಸಲು;
ಚಕ್ರಾಯುಧನು ತನ್ನ ಕೈಯಲ್ಲಿರುವ ಚಕ್ರದಿಂದ ಆ ರಾಹುವಿನ ಕೊರಳನ್ನು
ಕತ್ತರಿಸಲು; ಅವನ ತಲೆಯು ಪರ್ವತ ಶಿಖರದೋಪಾದಿಯಲ್ಲಿ ಭೂಮಿಯಲ್ಲಿ ಬೀ
ಳಲು; ಅದರ ಭಾರದಿಂದ ಭೂಮಿಯು ಗಡಗಡನೆ ನಡುಗಲು; ಆ ರಾಹುವು
ಈ ದ್ವೇಷವನ್ನು ಮನಸ್ಸಿನಲ್ಲಿಟ್ಟು ಕೊಂಡು, ಅದು ಮೊದಲು ಆ ಚಂದ್ರ ಸೂ
ರ್ಯರನ್ನು ಪರ್ವ ಕಾಲಗಳಲ್ಲಿ ಪೀಡಿಸುತ್ತಲಿದ್ದನು. ಈ ರೀತಿಯಲ್ಲಿ ದೇವತೆಗಳು
ಮಹಾ ವಿಷ್ಣುವಿನ ದಯದಿಂದ ಅಮೃತ ಪಾನವನ್ನು ಮಾಡಿ, ದೈತ್ಯ ದಾನವರ
ಮೇಲೆ ಜಯವನ್ನು ಹೊಂದಿ, ಮಂದರ ಪರ್ವತವನ್ನು ಯಥಾ ಸ್ಥಾನದಲ್ಲಿ ನಿಲ್ಲಿ
ಸಿ, ಇಂದ್ರನ ಸನ್ನಿಧಿಗೆ ಬಂದು—ಈ ಅಮೃತವನ್ನೂ ನಮ್ಮನ್ನೂ ರಕ್ಷಿಸುವ
ಭಾರ ನಿನ್ನದೇ ಎಂದು ಹೇಳಿ, ಆ ಅಮೃತ ಕಲಶವನ್ನು ಇಂದ್ರನ ವಶಕ್ಕೆ ಒ
ಪ್ಪಿಸಿ ಬಿಟ್ಟರು.

56. Garuda conquers the gods and carries off the Ambrosia.

೫೬. ಗರುಡನು ದೇವತೆಗಳನ್ನು ಜಯಿಸಿ, ಅಮೃತ ಕಲಶವನ್ನು ತಂದದ್ದು.

ಒಂದಾನೊಂದು ದಿವಸ ಕದ್ರು ದೇವಿಯು, ಸಕಲ ಶುಭ ಲಕ್ಷಣ ಲಕ್ಷಿತವಾ
ಗಿ, ಅತ್ಯಂತ ವೇಗ ಯುಕ್ತವಾಗಿರುವ ಒಂದು ಅಶ್ವ ರತ್ನವನ್ನು ಕಂಡು, ವಿನತೆ
ಯನ್ನು ಕರೆದು—ಈ ಕುದುರೆ ಯಾವ ವರ್ಣವುಳ್ಳದ್ದಾಗಿದೆ? ಬೇಗ ಹೇಳೆನಲು;
ಆ ವಿನತೆಯು,—ಅದು ಬಿಳೀ ವರ್ಣವುಳ್ಳದ್ದಾಗಿ ತೋರುತ್ತದೆ. ಆದರೆ ನಿನಗೆ
ಹ್ಯಾಗೆ ತೋರುತ್ತೆ? ಹೇಳೆನಲು; ಆ ಕದ್ರು ದೇವಿಯು—ಈ ಕುದುರೇ ಬಾಲ

ಕಪ್ಪಾಗಿ ತೋರುತ್ತಿದೆ. ಈ ವಿಷಯದಲ್ಲಿ ಸೋತವರು ಗೆದ್ದವರಿಗೆ ದಾಸ್ಯವನ್ನು ಮಾಡಲುಳ್ಳವರು ಎಂದು ಜೂದವಿಸಿ, ನಾಳೆ ನಿಗದಿ ಮಾಡೋಣ ಎಂದು ಹೇಳಿ, ಅವರಿಬ್ಬರು ತಮ್ಮ ತಮ್ಮ ಮನೆಗಳಿಗೆ ಹೋಗಲು; ಆ ಕದ್ರುವು ತನ್ನ ಸಾವಿರ ಮಂದಿ ಮಕ್ಕಳಾದ ಸರ್ಪಗಳನ್ನು ಕರೆದು—ಎಲೈ, ಮಕ್ಕಳಿರಾ, ನಾನು ವಿನತೆಯ ಕೂಡೆ ಜೂಜಾಡಿ ಇದ್ದೇನೆ. ಆದ್ದರಿಂದ ನಾನು ಈ ಅರ್ಥದಲ್ಲಿ ಸೋಲದಂತೆ ನೀವಷ್ಟು ಕಪ್ಪು ಕೂದಲುಗಳ ಹಾಗೆ ಆ ಕುದುರೆಯ ಬಾಲದಲ್ಲಿ ಕಾಣಿಸ ಬೇಕೆಂದು ಪ್ರಾರ್ಥಿಸಲು; ಆ ಕುಮಾರಕರು ಆ ವಾಕ್ಯವನ್ನು ಕೇಳಿ, ಪರಿಹಾಸದಿಂದ ಆ ಅರ್ಥವನ್ನು ಅಂಗೀಕರಿಸದೆ ಹೋಗಲು; ಆ ಕದ್ರು ದೇವಿಯು ಕೋಪಿಸಿ ಕೊಂಡು—ನನ್ನ ಮಾತನ್ನು ಮೀರಿದ್ದರಿಂದ ಜನಮೇಜಯರಾಯನ ಸರ್ಪ ಯಾಗದಲ್ಲಿ ಈ ಸರ್ಪ ಕುಲವಷ್ಟನ್ನು ಅಗ್ನಿ ದಹಿಸಲಿ ಎಂದು ಶಪಿಸಲು; ತಾಯಿಯ ಶಾಪಕ್ಕೆ ತಲ್ಲಣಿಸಿ, ಕರ್ಕೋಟಕನೆಂಬ ಸರ್ಪನು ಭಕ್ತಿ ವಿಶ್ವಾಸಗಳಿಂದ ತಾಯಿಯ ಅಡಿಗಳಿಗೆ ಎರಗಿ—ಎಲೈ, ತಾಯೇ, ನೀನು ಹೇಳಿದ ಪ್ರಕಾರ ಕುದುರೆಯ ಬಾಲದಲ್ಲಿ ಸೇರಿ, ಕಪ್ಪು ಕೂದಲುಗಳೋಪಾದಿಯಲ್ಲಿ ಕಾಣಿಸುತ್ತೇವೆ. ನಿನ್ನ ಮನಸ್ಸಿನಲ್ಲಿರುವ ಪರಿತಾಪವನ್ನು ಬಿಡೆಂದು ಪ್ರಾರ್ಥಿಸಲು; ಕದ್ರು ದೇವಿಯು—ನೀವು ಹಾಗೆ ಮಾಡಿದರೆ, ನಿಮಗೆ ಶ್ರೇಯಸ್ಸಾಗುತ್ತದೆ ಎಂದು ಹೇಳಿ, ಸಂತೋಷ ಪಟ್ಟಳು.

ಆ ರಾತ್ರಿಯನ್ನು ಕಳೆದು, ಸೂರ್ಯೋದಯವಾಗಲು; ಅಕ್ಕ ತಂಗಿಯರಾದ ಕದ್ರು ವಿನತೆಯರು ಓರ್ವರೋರ್ವರಿಗೆ ಮತ್ಸರಿಸಿ, ತಮ್ಮ ತಮ್ಮ ಪಂಥವು ಗೆಲ್ಲ ಬೇಕೆಂದು ನಿಶ್ಚಯಿಸಿ, ಉಚ್ಚೈಶ್ರವಸ್ಸೆಂಬ ಕುದುರೆಯನ್ನು ಹುಡುಕುತ್ತಾ, ಅದನ್ನು ಮೊದಲು ಕಂಡ ಸ್ಥಳಕ್ಕೆ ಬಂದು, ಆ ಪ್ರದೇಶದಲ್ಲಿ ಮಹತ್ತಾದ ಜಲಗಳಿಗೆ ಆಧಾರವಾಗಿ—ಹೆಚ್ಚಾಗಿರುವ ಧ್ವನಿಯಿಂದ ಭಯಂಕರವಾಗಿ—ತಿಮಿ ತಿಮಿಂಗಲಗಳು ಮೊದಲಾದ ಜಲ ಜಂತುಗಳಿಂದ ಕೂಡಿ—ಅಖಿಲ ರತ್ನಗಳಿಗೂ ಆಕರವಾಗಿ—ವರುಣನಿಗೆ ಅರಮನೆಯಾಗಿ—ಸಕಲ ಲೋಕ ಭಯಂಕರವಾಗಿ—ಅಮೃತಕ್ಕೆ ಉತ್ಪತ್ತಿ ಸ್ಥಾನವಾಗಿ—ಅಪ್ರಮೇಯವಾಗಿ—ಅಚಿಂತ್ಯವಾಗಿ—ಘೋಳಿಯಿಂದ ತೆರಳಿ ಬರುವ ತೆರೆಗಳೆಂಬ ಹಸ್ತಗಳಿಂದ ನಟಿಸುವಂಥಾದ್ದಾಗಿ—ಚಂದ್ರನ ವೃದ್ಧಿ ಕ್ಷಯಗಳನ್ನು ಆಚರಿಸುತ್ತಾ, ಆಕಾಶದೋಪಾದಿಯಲ್ಲಿ ಇರುವ ಸಮುದ್ರವನ್ನು ಕಂಡು, ಅದನ್ನು ದಾಟಿ, ಬಹು ದೂರವಾಗಿ ಹೋಗಿ, ಒಂದು ಪ್ರದೇಶದಲ್ಲಿ ಉಚ್ಚೈಶ್ರವಸ್ಸೆಂಬ ಕುದುರೆಯನ್ನು ಕಂಡು, ಅದರ ಬಾಲ ಕಪ್ಪಾಗಿರುವದರಿಂದ ಮನಸ್ಸಿನಲ್ಲಿ ಖೇದ ಯುಕ್ತಳಾ

ಗಿರುವ ವಿನತೆಯನ್ನು ಕಂಡು, ತನ್ನ ದಾಸತ್ವಕ್ಕೆ ಕದ್ರು ದೇವಿಯು ನೇಮಿಸಲು; ಅದಕ್ಕೆ ಮನ ಒಡಂಬಡದೆ, ಹಂಬಲಿಸುತ್ತಾ ಇರುತ್ತಿದ್ದಳು. ಹೀಗಿರುತ್ತಿರುವಲ್ಲಿ, ಆಕೆಯ ಗರ್ಭದಿಂದ ಜನಿಸಿದ ಮೊಟ್ಟೆ ಒಡೆದು ಹುಟ್ಟಿದ ಗರುಡನು ಮಹಾ ಬಲ ಸಂಪನ್ನನಾಗಿ—ಸೂರ್ಯನನ್ನು ಅತಿಕ್ರಮಿಸಿರುವ ತೇಜೋ ವಿಶೇಷದಿಂದ ಯುಕ್ತನಾಗಿ—ಸ್ವೇಚ್ಛಾ ವಿಹಾರಿಯಾಗಿ—ಸಮುದ್ರ ತೀರದಲ್ಲಿದ್ದ ತನ್ನ ತಾಯಿಯ ಬಳಿಗೆ ಬಂದನು.

ಆ ವೇಳೆಯಲ್ಲಿ ಒಂದಾನೊಂದು ದಿವಸ, ಆ ಕದ್ರುವು ತನ್ನ ಕುಮಾರರ ಎದುರಿಗೆ ಆ ವಿನತಾ ದೇವಿಯನ್ನು ಕರೆದು—ಎಲೈ, ಸಕಲ ಸರ್ಪಗಳಿಗೆ ಆಶ್ರಯವಾಗಿ, ಸಮುದ್ರ ಮಧ್ಯದಲ್ಲಿರುವ ರಮಣಕ ದ್ವೀಪಕ್ಕೆ ನನ್ನನ್ನೂ ನನ್ನ ಕುಮಾರರನ್ನೂ ಕರೆದು ಕೊಂಡು, ಹೋಗೆನಲು; ಹಾಗೆ ಆಗಲೆಂದು, ವಿನತಾ ದೇವಿಯು ಆ ಕದ್ರು ದೇವಿಯನ್ನು ತನ್ನ ಬೆನ್ನಿನ ಮೇಲೆ ಏರಿಸಿ ಕೊಂಡು, ಆ ಸರ್ಪಗಳನ್ನು ಬೆನ್ನಿನ ಮೇಲೆ ಹೊತ್ತು ಕೊಂಡು ಬರುವಂತೆ ತನ್ನ ಮಗನಾದ ಗರುಡನಿಗೆ ಆಜ್ಞಾಪಿಸಲು; ಅವನು ತನ್ನ ತಾಯಿಯ ಅಪ್ಪಣೆಯ ಪ್ರಕಾರ ಆ ಸರ್ಪಗಳನ್ನು ತನ್ನ ಬೆನ್ನಿನ ಮೇಲೆ ಇರಿಸಿ ಕೊಂಡು, ಅಂತರಿಕ್ಷದಲ್ಲಿ ಸೂರ್ಯನಿಗೆದುರಾಗಿ ಹಾರಲು; ಅವರಿಬ್ಬರು ನಡೆಯುತ್ತಿರುವ ಸಮಯದಲ್ಲಿ, ಸೂರ್ಯ ಕಿರಣ ಸಂತಾಪದಿಂದ ಸರ್ಪಗಳೆಲ್ಲಾ ಮೂರ್ಛಿಸಲು; ಆ ಕದ್ರುವು ದೇವೇಂದ್ರನನ್ನು ನಾನಾ ಪ್ರಕಾರವಾದ ಸ್ತೋತ್ರಗಳಿಂದ ಸ್ತುತಿಸಲು; ಇಂದ್ರನು ಸಂತುಷ್ಟನಾಗಿ ಮೇಘಗಳನ್ನೆಲ್ಲಾ ಕರೆದು—ನೀವು ಆಕಾಶವನ್ನೆಲ್ಲಾ ಆವರಿಸಿ ಕೊಂಡು, ವರ್ಷಿಸಿರಿ ಎಂದು ಕಟ್ಟು ಮಾಡಲು; ಅವುಗಳು ಅದೇ ಪ್ರಕಾರ ವರ್ಷಿಸಲು; ಆ ವರ್ಷದಿಂದ ತಂಪು ಹೊಂದಿ, ಸರ್ಪಗಳೆಲ್ಲಾ ಯಥಾ ಪ್ರಕಾರ ಮೂರ್ಛೆ ತಿಳಿದು ಎದ್ದು, ತಿರಿಗಿ ಗರುಡನ ಮೇಲೆ ಏರಿ ಕೊಂಡು, ಸಮುದ್ರ ಮಧ್ಯದಲ್ಲಿ ಹೋಗುತ್ತಾ, ವಿಚಿತ್ರ ಫಲ ಪುಷ್ಪ ಭರಿತಗಳಾದ ಉದ್ಯಾನ ವನಗಳಿಂದಲೂ, ಕನಕ ರತ್ನ ಖಚಿತಗಳಾದ ಮನೆಗಳಿಂದಲೂ, ಸ್ವಚ್ಛೋದಕಗಳುಳ್ಳ ಸರಸ್ಸುಗಳಿಂದಲೂ, ಪರಿಮಳಿಸುತ್ತಲಿರುವ ಹೊನ್ನೆ, ಸುರಹೊನ್ನೆ, ಮಾವು, ಶೀಮಾವು, ನಿಂಬೆ, ದಾಡಿಂಬೆ, ಹಲಸು, ಕಿತ್ತಳೆ, ನೇರಿಲು ಮೊದಲಾದ ವೃಕ್ಷ ಸಮೂಹದಿಂದಲೂ, ಮಕರಂದ ಪಾನದಿಂದ ಮದಿಸಿ ಝೇಂಕರಿಸುತ್ತಲಿರುವ ತುಂಬಿಗಳ ತಂಡಗಳಿಂದಲೂ, ಯುಕ್ತವಾಗಿ ಶೋಭಿಸುವ ರಮಣಕ ದ್ವೀಪವನ್ನು ಕಂಡು, ಅಲ್ಲಿ ಇಳಿದು, ತಮ್ಮ ಮನಸ್ಸು ಬಂದ ಕಡೆಯಲ್ಲೆಲ್ಲಾ ಸಂಚರಿಸಿ, ತಿರಿಗಿ ಆ ಸರ್ಪಗಳು ಗರುಡನನ್ನು ಕುರಿತು—ಎಲೈ, ಈ ದ್ವೀಪವ

ಲ್ಲದೆ ಇನ್ನು ಅನೇಕ ಸ್ಥಳಗಳಿವೆ; ಅವುಗಳನ್ನೆಲ್ಲಾ ತೋರಿಸು ಎಂಧೇಳಲು;
ಗರುಡನು ಆ ಮಾತನ್ನು ಕೇಳಿ, ಚಿಂತಾಕ್ರಾಂತನಾಗಿ, ತನ್ನ ತಾಯಿಯ ಮು
ಖವನ್ನು ನೋಡಿ—ಎಲೈ, ತಾಯೇ, ನಾವು ಇವರ ಮಾತು ಕೇಳಿ, ಚಾಕರಿ
ಮಾಡುವದಕ್ಕೆ ಕಾರಣವೇನೆಂದು ಕೇಳಲು; ಆ ವಿನತೆಯು ತನ್ನನ್ನು ಕ
ದ್ರುವು ಮೋಸದಿಂದ ಜೂಜಿನಲ್ಲಿ ಗೆದ್ದದ್ದನ್ನು ವಿಸ್ತಾರವಾಗಿ ತಿಳಿಸಲು; ಅದ
ನ್ನು ಕೇಳಿ, ಗರುಡನು ಮನಸ್ಸಿನಲ್ಲಿ ಬಹಳ ವ್ಯಸನ ಪಟ್ಟು, ಈ ದಾಸ್ಯವನ್ನು ತ
ಪ್ಪಿಸುವದಕ್ಕೆ ಏನು ಉಪಾಯವನ್ನು ಮಾಡ ಬೇಕೆಂದು ಯೋಚಿಸುತ್ತಾ, ಆ
ಕದ್ರುವಿನ ಮಕ್ಕಳನ್ನು ಕರೆದು—ಎಲೈ, ಮಹಾತ್ಮರುಗಳಿರಾ, ನಮ್ಮ ದಾಸ್ಯ
ವನ್ನು ತಪ್ಪಿಸಿ ಕೊಳ್ಳುವ ಹಾಗೆ ನಾನು ನಿಮಗೆ ಏನು ತಂದು ಕೊಡ ಬೇಕು?
ಯಾವ ವೃತ್ತಾಂತವನ್ನು ತಿಳಿದು ಹೇಳ ಬೇಕು? ಎಂಥಾ ಸಾಹಸ ಕಾರ್ಯವನ್ನು
ಮಾಡ ಬೇಕು? ನಿಶ್ಚಯವಾಗಿ ಹೇಳಿರೆಂದು ಕೇಳಲು; ಆ ಸರ್ಪಗಳೆಲ್ಲಾ ಒಟ್ಟು
ಕೂಡಿ, ಆಲೋಚನೆ ಮಾಡಿ ಕೊಂಡು—ಎಲೈ, ಗರುಡನೇ, ನೀನು ಅಮೃತವ
ನ್ನು ತಂದು ಕೊಟ್ಟರೆ, ನಿಮ್ಮ ದಾಸ್ಯವು ಹೋಗುವದೆಂದು ಗರುಡನಿಗೆ ಹೇಳ
ಲು; ಅವನು ಅದಕ್ಕೆ ಒಪ್ಪಿ ಕೊಂಡು, ತನ್ನ ತಾಯಿಯ ಸಂಗಡ—ಎಲೈ, ತಾ
ಯೇ, ನಾನು ಅವಶ್ಯವಾಗಿ ಈ ಸರ್ಪಗಳಿಗೋಸ್ಕರ ಅಮೃತವನ್ನು ತರುವದ
ಕ್ಕೆ ಹೋಗುತ್ತಲಿದ್ಧೇನೆ; ನನಗೆ ಆಹಾರವನ್ನು ಕೊಡೆಂದು ಕೇಳಲು; ಅವಳು—
ಎಲೈ, ಮಗನೇ, ಸಮುದ್ರ ಮಧ್ಯದ ಒಂದು ದ್ವೀಪದಲ್ಲಿ ಬೇಡರ ಹಳ್ಳಿಗಳುಂ
ಟು. ಅಲ್ಲಿ ಬೇಡರು ಹೆಚ್ಚಾಗಿ ಉಂಟು. ನೀನಲ್ಲಿಗೆ ಹೋಗಿ, ಅವರನ್ನು ಭಕ್ಷಿ
ಸು. ಅಲ್ಲಿ ಬ್ರಾಹ್ಮಣರು ಇದ್ದರೆ, ಅವರನ್ನು ಬಿಟ್ಟು ಬಿಡೆನಲು; ಗರುಡನು
ಆ ವಾಕ್ಯವನ್ನು ಕೇಳಿ—ಅಷ್ಟು ಮಂದಿ ಬೇಡರಲ್ಲಿ ಬ್ರಾಹ್ಮಣನು ಶಿಕ್ಕಿದ್ದು
ಹ್ಯಾಗೆ ತಿಳಿಯ ಬೇಕೆಂದು ಕೇಳಲು; ವಿನತೆಯು ಮಗನನ್ನು ಕರೆದು—ನೀನು
ಬೇಡರನ್ನು ಭಕ್ಷಿಸುವ ಸಮಯದಲ್ಲಿ ಕೊರಳಲ್ಲಿ ಶಿಕ್ಕಿ, ಅಗ್ನಿಯೋಪಾದಿಯಲ್ಲಿ
ಯೂ, ಗಾಣದೋಪಾದಿಯಲ್ಲಿಯೂ, ಯಾವವನು ಪೀಡಿಸುವನೋ, ಅವನು
ಬ್ರಾಹ್ಮಣನು ಎಂದು ಗುರುತನ್ನು ಹೇಳಿ, ಆಶೀರ್ವಾದಗಳನ್ನು ಮಾಡಿ, ಕಳು
ಹಿಸಲು; ತಾಯಿಯ ಅಪ್ಪಣೆಯನ್ನು ಶಿರಸಾವಹಿಸಿ, ಗರುಡನು ಗರಿಗಳನ್ನು ಬಿ
ಚ್ಚಿ, ಗಗನ ಮಂಡಲಕ್ಕೆ ಹಾರಿ, ಅಧಿಕವಾದ ಹಶಿವು ಬಾಯಾರಿಕೆಗಳಿಂದ
ಕಂಗೆಟ್ಟು, ಎರಡನೇ ಯಮುನೋಪಾದಿಯಲ್ಲಿ ಆ ಬೇಡರ ಗ್ರಾಮವನ್ನು ಕುರಿ
ತು ಹೋಗುವಾಗ, ಗರಿಗಳ ಘಾಳಿಗೆ ಭೂಮಿಯಿಂದ ಎದ್ದ ಧೂಳಿಯು ಆಕಾಶ
ಮಂಡಲಕ್ಕೆ ಹಾರಲು; ಸಮುದ್ರ ಮಧ್ಯದಲ್ಲಿ ಇರುವ ಜಲವಷ್ಟು ಕಲಕಲು; ಸ

ಮಿಾಪದಲ್ಲಿರುವ ಪರ್ವತಗಳು ಅಲ್ಲಾಡಲು; ಭಯಂಕರವಾದ ಬಾಹು ಬಲದಿಂದ ವಿಜೃಂಭಿಸಿ, ಬೇಡರನ್ನು ನುಂಗುವದಕ್ಕೋಸ್ಕರ ಬಾಯಿ ತೆರೆಯಲು; ಆ ಬೇಡರು ಅತಿ ತ್ವರೆಯಿಂದ ಮಹಾ ಘೋಷದಿಂದ ಕದಲುತ್ತಿರುವ ವನದಲ್ಲಿ ಧೂಳಿಗಳ ಪೆಟ್ಟಿನಿಂದ ದಿಕ್ಕುಗೆಟ್ಟು, ಬೆದರಿದ ಪಕ್ಷಿ ಸಮೂಹವು ಆಕಾಶವನ್ನು ಪ್ರವೇಶಿಸುವ ಹಾಗೆ, ಆ ಗರುಡನ ಬಾಯಿಯನ್ನು ಪ್ರವೇಶಿಸಲು; ಅವರಷ್ಟನ್ನೂ ಭಕ್ಷಿಸಿದರೂ, ಸಾಲದೆ, ಸಮುದ್ರದಲ್ಲಿರುವ ಬಹು ವಿಧ ಮತ್ಸ್ಯಗಳನ್ನು ಭಕ್ಷಿಸಿದನು.

ಆ ಸಮಯದಲ್ಲಿ ಗರುಡನ ಕೊರಳಲ್ಲಿ ಅಗ್ನಿ ಜ್ವಾಲೆಯ ಹಾಗೆ ಉರಿಯುತ್ತಾ, ನುಂಗ ಕೂಡದೆ ಇರುವ ಒಬ್ಬ ಬ್ರಾಹ್ಮಣನು ಅಡ್ಡಲಾಗಲು; ಆ ಬ್ರಾಹ್ಮಣನನ್ನು ಬಿಟ್ಟು ಬಿಟ್ಟು, ಆ ಕಿರಾತರನ್ನೆಲ್ಲಾ ತಿಂದರೂ, ಹಶಿವು ಅಡಗದೆ ಹೋದ್ದರಿಂದ ತನ್ನ ತಂದೆಯಾದ ಕಶ್ಯಪನೆಡೆಗೆ ಹೋಗಿ—ಅಪ್ಪಾ, ನಾನು ತಾಯಿಯ ದಾಸ್ಯವನ್ನು ಪರಿಹಾರಾ ಮಾಡುವ ನಿಮಿತ್ತ ಅಮೃತವನ್ನು ತರುವದಕ್ಕೆ ಹೋಗುತ್ತಲಿದ್ದೇನೆ; ನನಗೊಂದು ಆಹಾರದಿಂದ ತೃಪ್ತಿ ಆಗಲಿಲ್ಲ; ನೀನಿನ್ನೊಂದು ಊಟವನ್ನು ನೇಮಿಸೆಂದು ಬೇಡಿ ಕೊಳ್ಳಲು; ಅವನು—ಎಲೈ, ಮಗನೇ, ಪೂರ್ವದಲ್ಲಿ ಸುಪ್ರತೀಕ ವಿಭಾವಸುಗಳೆಂಬ ಇಬ್ಬರು ಅಣ್ಣಾ ತಮ್ಮಂದಿರು ಪಿತರಾರ್ಜಿತ ಧನ ವಿಭಾಗದ ನಿಮಿತ್ಯ ಪರಸ್ಪರ ಶಾಪಗ್ರಸ್ತರಾಗಿ, ಆನೆ ಆಮೆಗಳಾಗಿ ಒಂದು ನದಿಯಲ್ಲಿ ಜಗಳವಾಡುತ್ತಿದ್ದಾರೆ. ನೀನು ಅವುಗಳನ್ನು ಭಕ್ಷಿಸು; ಹೋಗೆಂದು ಕಳುಹಿಸಲು; ಗರುಡನು ಅದೇ ಮೇರೆ ಅವುಗಳನ್ನು ಭಕ್ಷಿಸಿ, ತೃಪ್ತನಾಗಿ, ಅಮೃತವನ್ನು ತರುವದಕ್ಕೋಸ್ಕರ ಅಂತರಿಕ್ಷಕ್ಕೆ ಹಾರಲು; ಆಗ ದೇವಲೋಕದಲ್ಲಿ ಅಶುಭ ಸೂಚಕಗಳಾದ ಉತ್ಪಾತಗಳು ಉಂಟಾದವು. ಹ್ಯಾಗಂದರೆ—ಇಂದ್ರನ ವಜ್ರಾಯುಧವು ತನ್ನಷ್ಟಕ್ಕೆ ತಾನೇ ಉರಿಯಿತು. ಹೊಗೆಯಿಂದಲೂ ಉರಿಯಿಂದಲೂ ಕೂಡಿದ ಒಂದು ಕೊಳ್ಳಿಯು ಇಂದ್ರನ ಮುಂದೆ ಬಿತ್ತು. ಆಕಾಶದಲ್ಲಿ ಮೇಘಗಳಿಲ್ಲದೆ ಗುಡುಗಿತು. ಮೇಘಗಳೆಲ್ಲಾ ರಕ್ತವನ್ನು ವರ್ಷಿಸಿದವು. ದೇವತೆಗಳು ಧರಿಸಿರುವ ಪುಷ್ಪ ಮಾಲೆಗಳು ಬಾಡಿದವು. ದೇವತೆಗಳ ಮುಖ ಕಾಂತಿ ತಪ್ಪಿತು. ಇವೇ ಮೊದಲಾದ ಉತ್ಪಾತಗಳನ್ನು ಕಂಡು, ದೇವೇಂದ್ರನು ಭಯ ಪಟ್ಟು, ಬೃಹಸ್ಪತ್ಯಾಚಾರ್ಯನನ್ನು ಕರಿಸಿ—ಈ ಅವಶಕುನ ಯಾವ ನಿಮಿತ್ಯ ಉಂಟಾಯಿತು? ಹೇಳಿರೆಂದು ಕೇಳಲು; ಆ ಗುರುವು—ಎಲೈ, ಇಂದ್ರನೇ, ನೀನು ಪೂರ್ವದಲ್ಲಿ ವಾಲಖಿಲ್ಯರನ್ನು ಪರಿಹಾಸ್ಯಾ ಮಾಡಿದ್ದರಿಂದ, ಅವರ ತಪೋ ಪ್ರಭಾವದಿಂದ ಹುಟ್ಟಿದ ಗರುಡನೆಂಬವನು ಅಮೃತವನ್ನು ತೆಗೆದು ಕೊಂಡು ಹೋಗ ಬರುತ್ತಿದ್ದಾನೆ. ಇದು ನಿಶ್ಚಯವೆಂದು ಹೇಳ

ಲು; ಇಂದ್ರನು ಆ ಅಮೃತ ಕಲಶಕ್ಕೆ ಕಾವಲಾಗಿರುವ ದೇವತೆಗಳನ್ನು ಕರಿಸಿ, ಈ ವೃತ್ತಾಂತವನ್ನು ತಿಳಿಸಿ, ನೀವು ನಿಮ್ಮ ಆಯುಧಗಳನ್ನು ಹಿಡಿದು, ಮೋಸ ಬಾರದ ರೀತಿಗೆ ಸನ್ನದ್ಧರಾಗಿರ್ರಿ ಎಂದು, ಕಟ್ಟು ಮಾಡಲು; ಅವರು ಅದೇ ಪ್ರಕಾರ ಎಚ್ಚರದಿಂದ ಕಾದು ಕೊಂಡಿದ್ದರು. ಇತರ ದೇವತೆಗಳು ಕನಕ ವೈಢೂರ್ಯ ವಿಚಿತ್ರಗಳಾದ ತಮ್ಮ ತಮ್ಮ ಕವಚಗಳನ್ನು ತೊಟ್ಟು, ಕೆಲವರು ಶಸ್ತ್ರಗಳನ್ನು, ಕೆಲವರು ಚಕ್ರಗಳನ್ನು, ಕೆಲವರು ದೊಣ್ಣೆಗಳನ್ನು, ಕೆಲವರು ಶೂಲಗಳನ್ನು, ಕೆಲವರು ಕೊಡಲಿಗಳನ್ನು ಇನ್ನು ಕೆಲವರು ಈಟಿಗಳನ್ನು, ಹಿಡಿದು ಕೊಂಡು, ಯುದ್ಧ ಸನ್ನದ್ಧರಾಗಿ ನಿಂತು ಕೊಂಡು ಇದ್ದರು.

ಇತ್ತಲಾ ಗರುಡನು ದೇವ ಲೋಕವನ್ನು ಪ್ರವೇಶಿಸಲು; ಆತನನ್ನು ಕಂಡು, ದೇವತಾ ಸೈನ್ಯವೆಲ್ಲಾ ತಲ್ಲಣಿಸುತ್ತಾ ಇರಲು; ಆ ಅಮೃತ ಕಲಶಕ್ಕೆ ಕಾವಲಾಗಿದ್ದ ಭೌಮನು ಮುಹೂರ್ತ ಮಾತ್ರ ಕಾದಿ, ಆ ಪಕ್ಷಿರಾಜನ ಗರಿಗಳಿಂದಲೂ ಕೊಕ್ಕಿನಿಂದಲೂ ಘಾಯ ಪಡೆದು, ಓಡಿ ಹೋಗಲು; ಆ ಗರುಡನು ತನ್ನ ಗರಿಗಳ ವೇಗದಿಂದ ಘಾಳಿಯನ್ನು ಕಲ್ಪಿಸಲು; ಆ ಘಾಳಿಯಿಂದುಂಟಾದ ಧೂಳು ದೇವತಾ ಸೈನ್ಯಗಳ ಮೇಲೆ ಕವಿಯುತ್ತಾ, ಅವರ ಕಣ್ಣುಗಳನ್ನೆಲ್ಲಾ ಮುಚ್ಚುತ್ತಿರಲು; ಅವರು ಕುರುಡರಾಗಿ, ಇವನನ್ನು ನೋಡುವದಕ್ಕಾಗದೆ, ಸುಮ್ಮನೆ ತಿರುಗುತ್ತಿರಲು; ಗರುಡನು ಆ ಸೈನ್ಯವನ್ನೆಲ್ಲಾ ಗರಿಗಳಿಂದಲೂ ಕೊಕ್ಕಿನಿಂದಲೂ ಹೊಡೆದು, ಚುಚ್ಚುತ್ತಾ, ನೆಲಕ್ಕೆ ಕೆಡಹಲು; ದೇವೇಂದ್ರನು ಆ ಧೂಳಿಯನ್ನು ಹೋಗಲಾಡಿಸುವದಕ್ಕೆ ವಾಯು ದೇವನನ್ನು ಕಳುಹಿಸಲು; ಆ ವಾಯುವು ಆ ಧೂಳಿಯನ್ನು ಪರಿಹರಿಸಿ, ದಿಕ್ಕುಗಳನ್ನು ಬೆಳಗಿಸಲು; ದೇವತೆಗಳು ಒಮ್ಮಡಿಯಾಗಿ ಕಾಣಿಸಿ ಕೊಂಡು, ತಮ್ಮ ತಮ್ಮ ಆಯುಧಗಳಿಂದ ಗರುಡನನ್ನು ತಿವಿಯಲು; ಗರುಡನು ಕೋಪಿಸಿ ಕೊಂಡು, ಸಿಂಹನಾದವನ್ನು ಮಾಡಿ, ನಾಲ್ಕು ದಿಕ್ಕುಗಳಲ್ಲಿ ಕಾಣಿಸಿ ಕೊಂಡು, ನಾನಾ ಪ್ರಕಾರವಾಗಿ ಆಯುಧಗಳಿಂದ ತಿವಿಯುವ ದೇವತೆಗಳಿಗೆ ಭಯ ಹುಟ್ಟುವ ಹಾಗೆ ಆಕಾಶಕ್ಕೆ ಹಾರಲು; ಆ ದೇವತೆಗಳು ಕಬ್ಬಿಣದ ಕೋಲುಗಳನ್ನೂ, ಶೂಲಗಳನ್ನೂ, ದೊಣ್ಣೆಗಳನ್ನೂ, ಪಟ್ಟಾ ಕತ್ತಿಗಳನ್ನೂ, ಚೂರಿಗಳನ್ನೂ, ಸಾಣಾ ಕತ್ತಿಗಳನ್ನೂ, ಇನ್ನು ನಾನಾ ವಿಧಗಳಾದ ಆಯುಧಗಳನ್ನೂ ಆ ಗರುಡನ ಮೇಲೆ ಪ್ರಯೋಗಿಸಿದರೂ, ಲಕ್ಷಿಸದೆ, ನಿಮಿಷ ಮಾತ್ರದಲ್ಲಿ ಆ ಗರುಡನು ತನ್ನ ಗರಿಗಳಿಂದಲೂ ಉಗುರುಗಳಿಂದಲೂ ದೇವತೆಗಳನ್ನು ಪೆಟ್ಟಿಕ್ಕಲು; ಅವನ ಉಗುರುಗಳ ಪೆಟ್ಟು ತಡ ಕೊಳ್ಳಲಾರದೆ, ಆ ದೇವತೆಗಳೆಲ್ಲಾ ದಿಕ್ಕು ದಿಕ್ಕಿಗೆ ಓಡಿ ಹೋದರು.

ಈ ಪ್ರಕಾರವಾಗಿ ಸಕಲ ದೇವತಾ ಸಮೂಹಗಳು ಅನೇಕ ಮುಖವಾಗಿ ತನ್ನೊಡನೆ ಕಾಳಗವಾಡುತ್ತಿರುವ ಗರುಡನ ಪರಾಕ್ರಮಕ್ಕೆ ನಿಲ್ಲಲಾರದೆ, ತಿರಿ ತಿರಿಗಿ ನೋಡುತ್ತಾ, ಭಯದಿಂದ ಪಲಾಯನವಾದರು. ಅಶ್ವಕ್ರಂದನನು, ರೇಣುಕನು, ಕ್ರುರರನು, ತಪನನು, ಉಲೂಕನು, ಚವಮಾನನು, ನಿಮಿಷನು, ಪ್ರರುಜನು, ಪ್ರತಿಹನು ಎಂಬ ದೇವತೆಗಳೊಡನೆ ತಾಕಿ, ಯುದ್ಧಕ್ಕೆ ತಲಪಟ್ಟು, ಕೊಕ್ಕಿನಿಂದ ತಿವಿದು, ರೆಕ್ಕೆಗಳಿಂದ ಬಡೆದು, ಹದವಾದ ಉಗುರುಗಳಿಂದ ಶೀಳಿ, ಧುಮುಕಿ, ಕಕ್ಕಸಗಾರನಾಗಿ, ತೋರುವ ಪ್ರಳಯ ಕಾಲದ ರುದ್ರನೋಪಾದಿಯಲ್ಲಿ ರೌದ್ರ ರೂಪಿನಿಂದ ಇರಲು; ಮಹಾ ಬಲ ಪರಾಕ್ರಮ ಸಂಪನ್ನನಾಗಿರುವ ಆ ಅಮರ ಶ್ರೇಷ್ಠರು ರಕ್ತಗಳನ್ನು ವರ್ಷಿಸುವ ಮಹಾ ಮೇಘಗಳ ರೀತಿಗೆ ನಿಂತಿರಲು; ಅವರನ್ನು ನಿಶ್ಶೇಷವಾಗಿ ಕೊಂದು, ಅಮೃತ ವಿದ್ದ ತಾವಿಗೆ ಹೋಗುವ ಸಮಯದಲ್ಲಿ ಅಮೃತ ಸ್ಥಾನವನ್ನು ಸುತ್ತಿ ಕೊಂಡು, ಜ್ವಾಲೆಗಳಿಂದ ದಹಿಸುತ್ತಲಿರುವ ಅಗ್ನಿ ಸ್ವರೂಪವಾದ ಸುತ್ತಿನ ಕೋಟೆಯನ್ನು ಕಂಡು, ಎಂಟು ಸಾವಿರದ ನೂರು ಮುಖಗಳನ್ನು ಧರಿಸಿ, ಮನೋವೇಗದಿಂದ ಹೋಗಿ, ಸಕಲ ನದೀ ಜಲಗಳನ್ನೆಲ್ಲಾ ಕುಡಿದು ಬಂದು, ಅಗ್ನಿ ಜ್ವಾಲೆಯನ್ನು ತಡೆದು ಅಮೃತ ಸ್ಥಾನವನ್ನು ಹೊಕ್ಕು, ಅದರ ಸಮೀಪದಲ್ಲಿ ತೀಕ್ಷ್ಣವಾದ ಅಚ್ಚುಗಳಿಂದಲೂ, ಅಗ್ನಿ ಸೂರ್ಯ ಕಾಂತಿಯಿಂದಲೂ, ಕೂಡಿಕೊಂಡು, ಯಾವಾಗಲೂ ಸುತ್ತುತ್ತಾ, ಅಮೃತವನ್ನು ಅಪಹರಿಸಿ ಕೊಂಡು ಹೋಗುವವರಿಗೆ ವಿಘ್ನವಾಗುವ ರೀತಿಗೆ ದೇವತೆಗಳು ಮಾಡಿದ ಶಸ್ತ್ರ ಯಂತ್ರವನ್ನು ನೋಡಿ, ಅದರಲ್ಲಿ ಹೊಗುವದಕ್ಕೆ ಅವಕಾಶವನ್ನು ಕಾಣದೆ, ಆ ಯಂತ್ರದ ಸುತ್ತಲು ತಿರಿಗಿ, ಅದರ ಅಚ್ಚಿನ ಸಂದಿನಲ್ಲಿ ಸ್ವಲ್ಪ ಸ್ಥಳವನ್ನು ಕಂಡು, ಸೂಕ್ಷ್ಮ ರೂಪವನ್ನು ವಹಿಸಿ, ನಿಮಿಷ ಮಾತ್ರದಲ್ಲಿ ಅದರೊಳಗೆ ಹೊಕ್ಕು; ಆ ಚಕ್ರದ ಕೆಳಗೆ ಮಿಂಚು ಬಳ್ಳಿಗಳಂದದಿಂದ ನಾಲಿಗೆಗಳನ್ನು ನೀಡುತ್ತಾ, ಗಗನವನ್ನು ಸೋಕುವ ಉರಿಗಳೊಡನೆ ಕೂಡಿರುವ ಕಾಡು ಗಿಚ್ಚಿನೋಪಾದಿಯಲ್ಲಿ ಮಹಾ ಶರೀರ ಯುಕ್ತಗಳಾಗಿ—ಕಣ್ಣುಗಳಿಂದ ವಿಷವನ್ನು ಕಾರುವಂಥಾ, ಯವೆ ಇಲ್ಲದೆ ಇರುವ ದೃಷ್ಟಿಗಳುಳ್ಳಂಥಾ, ಯಾವಾಗಲೂ ಕೋಪದಿಂದಲೇ ಕೂಡಿ, ನೋಡಿದ ಮಾತ್ರದಿಂದಲೇ ದಹಿಸುವ ಎರಡು ಸರ್ಪಗಳನ್ನು ಕಂಡು, ತನ್ನ ಗರಿಗಳ ಘಾಳಿಗಳಿಂದ ಹುಟ್ಟಿದ ಧೂಳಿಗಳಿಂದ ಆ ಕ್ರೂರ ಸರ್ಪಗಳ ಕಣ್ಣುಗಳನ್ನು ಮುಚ್ಚಿ, ಅವುಗಳು ಕಾಣದಂತೆ ಆ ಸರ್ಪಗಳನ್ನು ಹಿಡಿದು, ತುಮುರು ತುಮುರಾಗಿ ಮಾಡಿ, ಆ ಅಮೃತ ಕಲಶವನ್ನು

ತೆಗೆದು ಕೊಂಡು, ಅಮೃತ ಪಾನವನ್ನು ಅಪೇಕ್ಷಿಸದೆ, ಹೊರಗೆ ಬಂದು, ತನ್ನ ಎರಡು ಗರಿಗಳಿಂದ ಸೂರ್ಯ ಕಾಂತಿಯನ್ನು ಮುಚ್ಚುತ್ತಾ ಬರುವ ಸಮಯದಲ್ಲಿ, ಆತನ ಸಾಹಸಕ್ಕೆ ಸಂತೋಷ ಪಟ್ಟು, ಮಹಾ ವಿಷ್ಣುವು ಆತನಿಗೆ ಪ್ರತ್ಯಕ್ಷನಾಗಿ—ಎಲೈ, ಪಕ್ಷಿರಾಜನೇ, ನಿನ್ನ ಪರಾಕ್ರಮಕ್ಕೆ ಮೆಚ್ಚಿದೆನು; ನಿನಗಿಷ್ಟವಾದ ವರವನ್ನು ಬೇಡೆನಲು;—ಎಲೈ, ವಿಷ್ಣುವೇ, ಸನಗೆ ಅಮೃತ ಪಾನವಿಲ್ಲದಿದ್ದರೂ, ಜರಾ ಮರಣಗಳಿಲ್ಲದಂತೆ ದಯ ಮಾಡ ಬೇಕೆನಲು;—ಹಾಗೆ ಆಗಲೆಂದು ಹೇಳಿದ ವಿಷ್ಣುವು ಆತನನ್ನು ತನಗೆ ವಾಹನವಾಗಿಯೂ ಧ್ವಜವಾಗಿಯೂ ಇರಬೇಕೆಂದು ಪ್ರಾರ್ಥಿಸಲು; ಗರುಡನು ಅದಕ್ಕೆ ಒಪ್ಪಿ ಕೊಂಡು, ಗಗನ ಮಾರ್ಗದಲ್ಲಿ ಬರುತ್ತಿರಲು; ಇಂದ್ರನು ಅಮೃತವನ್ನು ತೆಗೆದು ಕೊಂಡು ಹೋದನೆಂಬ ಕೋಪದಿಂದ ಆ ಗರುಡನನ್ನು ಬೆನ್ನಟ್ಟಿ ಕೊಂಡು ಬಂದು, ತನ್ನ ವಜ್ರಾಯುಧದಿಂದ ತಿವಿಯಲು; ಅವನು ಇಂದ್ರನನ್ನು ಕುರಿತು ನಸು ನಗುತ್ತಾ—ಎಲೈ, ಇಂದ್ರನೇ, ನಿನ್ನ ವಜ್ರಾಯುಧವು ನನಗೆ ಬಂದಿಷ್ಟಾದರೂ ನೋಯಿಸದೆ ಹೋಯಿತು. ಆದರೆ ಈ ಆಯುಧೋತ್ಪತ್ತಿ ಕಾರಣನಾದ ದಧೀಚಿಯನ್ನೂ, ನಿನ್ನನ್ನೂ, ಈ ಆಯುಧವನ್ನೂ, ಸಕಲರು ಬಹುಮಾನ ಪಡಿಸುವ ಹಾಗೆ, ಈ ಪಕ್ಷದಲ್ಲಿರುವ ಒಂದು ಗರಿಯನ್ನು ಸಡಿಲಿಸಿ ಬಿಡುತ್ತಲಿದ್ಧೇನೆ ಎಂದು, ಒಂದು ಗರಿಯನ್ನು ಬಿಟ್ಟನು. ಇಂದ್ರನು ಆತನ ಅದ್ಭುತ ಪರಾಕ್ರಮವನ್ನೂ ಸಾಹಸವನ್ನೂ ಕಂಡು, ಆತನನ್ನು ಕರೆದು—ನಿನ್ನ ಬಲವೆಷ್ಟು ಎಂದು ತಿಳಿಯ ಬೇಕು. ನಿನ್ನ ಕೂಡೆ ಸರ್ವಥಾ ಸ್ನೇಹವನ್ನು ಬಯಸಿದ್ಧೇನೆ ಎನಲು; ಗರುಡನು—ಎಲೈ, ದೇವೇಂದ್ರನೇ, ನೀನು ಹೇಳಿದ ಪ್ರಕಾರಕ್ಕೆ ತನ್ನ ಸ್ನೇಹ ನಿನಗೆ ಆಗ ತಕ್ಕದ್ದೇ ಸರಿ; ನನ್ನ ಮಹಾ ಬಲವನ್ನು ತಿಳಿಯ ಬೇಕೆಂದು ಕೇಳಿದಿಯಲ್ಲ? ಲೋಕದಲ್ಲಿ ಆತ್ಮ ಸ್ತುತಿ ಮಾಡ ಬಾರದು ಎಂದು, ದೊಡ್ಡವರು ಹೇಳುವರು. ಆದರೂ ಮಿತ್ರಭಾವದಿಂದ ಕೇಳಿದ ಕಾರಣ, ವಿವರಿಸುತ್ತೇನೆ; ಕೇಳು; ಪರ್ವತಗಳೂ, ವನಗಳೂ, ಧನಗಳೂ, ನಿಧಿಗಳೂ, ಸಮುದ್ರಗಳುಳ್ಳ ಈ ಮಹೀಮಂಡಲವೂ, ನಿನ್ನೊಡನೆ ಕೂಡಿದ ಸ್ಥಾವರ ಜಂಗಮಾತ್ಮಕವಾದ ಸಮಸ್ತ ಲೋಕಗಳನ್ನು ಒಂದು ರೆಕ್ಕೆಯಲ್ಲಿ ಆಯಾಸವಿಲ್ಲದೆ ವಹಿಸುವೆನು. ಇದೀಗ ನನ್ನ ಬಲವೆಂದು ತಿಳಿಸಲು; ದೇವೇಂದ್ರನು ಆತನನ್ನು ಕಂಡು—ನೀನು ಅಷ್ಟು ಬಲವುಳ್ಳವನೇ ಸರಿ; ಅದಕ್ಕೆ ಸಂಶಯವಿಲ್ಲ. ಈ ಹೊತ್ತು ಮೊದಲುಗೊಂಡು ನನ್ನಲ್ಲಿ ನಿಲಕಡೆಯಾದ ಸ್ನೇಹವನ್ನು ಪರಿಪಾಲಿಸು. ಈ ಅಮೃತವನ್ನು ತೆಕ್ಕೊಂಡು ಹೋಗಿ, ಮತ್ತೊಬ್ಬರಿಗೆ ಕೊ

ಟ್ಟರೆ, ಅವರು ನಮ್ಮ ಕೂಡೆ ಪ್ರತಿಘಟಿಸಿ, ನಮ್ಮನ್ನು ಬಾಧಿಸುವರು. ಇದರಿಂದ ನಿನಗೆ ಪ್ರಯೋಜನವೇನು? ಆದದರಿಂದ ಈ ಅಮೃತವನ್ನು ಮಗುಚಿ ನನಗೆ ಕೊಡ ಬೇಕೆನಲು; ಆ ಗರುಡನು—ಒಂದು ನಿಮಿತ್ತದಿಂದ ಈ ಅಮೃತವನ್ನು ತೆಕೊಂಡು ಹೋಗುವದೇ ಹೊರ್ತಾಗಿ, ಒಬ್ಬರಿಗೆ ಪಾನವನ್ನು ಮಾಡಿಸ ಬೇಕೆಂದು ಇಚ್ಛೆ ಇಲ್ಲ. ಇದನ್ನು ಒಂದು ಪ್ರದೇಶದಲ್ಲಿ ಇರಿಸಿದ ಮೇಲೆ ನೀನು ಎತ್ತಿ ಕೊಂಡು ಹೋಗುವದು ನಿನಗೆ ಸಮ್ಮತವೇ? ಎನಲು; ದೇವೇಂದ್ರನು ಸಂತೋಷ ಪಟ್ಟು, ನೀನು ಅಮೃತವನ್ನು ಕೆಳಗೆ ಇರಿಸಿದಲ್ಲಿ ನಾನು ಅದನ್ನು ಎತ್ತಿ ಕೊಂಡು ಹೋಗಲುಳ್ಳವನು ಎಂದು ನುಡಿದು, ಗರುಡನ ಸಂಗಡ ಬರಲು; ಗರುಡನು ಅತಿ ತ್ವರೆಯಿಂದ ತನ್ನ ತಾಯಿಯ ಸನ್ನಿಧಿಗೆ ಬಂದು,—ಅಮ್ಮಾ, ಅಮೃತವನ್ನು ತಂದೆನು. ಇನ್ನೇನು ಮಾಡ ಬೇಕೆನಲು; ಅವಳು ಪರಮ ಸಂತೋಷ ಯುಕ್ತಳಾಗಿ—ಇದನ್ನು ಆ ಸರ್ಪಗಳಿಗೆ ಒಪ್ಪಿಸೆನಲು; ಅವನು ಸರ್ಪಗಳ ಬಳಿಗೆ ಬಂದು—ಎಲೈ, ಸರ್ಪಗಳಿರಾ, ಅಮೃತವನ್ನು ತಂದಿದ್ದೇನೆ. ಅದನ್ನು ದರ್ಭೆಯ ಮೇಲಿರಿಸುತ್ತೇನೆ. ನೀವು ಸ್ನಾನವನ್ನು ಮಾಡಿ, ಅದನ್ನು ಭಕ್ಷಿಸ ಬಹುದೆನಲು; ಆ ಸರ್ಪಗಳು ಅತಿ ಸಂತೋಷದಿಂದ,—ಎಲೈ, ಗರುಡನೇ, ನಿನ್ನ ತಾಯಿಯ ದಾಸ್ಯವು ಇಂದಿಗೆ ತೀರಿತು. ಸ್ವಸ್ಥನಾಗಿ ಹೋಗೆಂದು ಹೇಳಿ, ಸ್ನಾನಕ್ಕೆ ಹೋಗಲು; ಆ ಸಮಯವನ್ನು ನಿರೀಕ್ಷಿಸಿ ಕೊಂಡಿದ್ದ ಇಂದ್ರನು ಆ ಅಮೃತ ಕಲಶವನ್ನು ತೆಗೆದು ಕೊಂಡು, ಅಮರಾವತಿಗೆ ಹೋದನು. ಇತ್ತಲಾ ಸರ್ಪಗಳು ಸ್ನಾನವನ್ನು ಮಾಡಿ, ಬಂದು, ಅಮೃತ ಕಲಶವನ್ನು ಕಾಣದೆ, ಗರುಡನು ಮೋಸ ಮಾಡಿದನೆಂದು ಖೇದಗೊಂಡು, ಆ ಕಲಶವನ್ನ ಇಟ್ಟಿದ್ದ ದರ್ಭೆಗಳನ್ನು ನೆಕ್ಕಲು; ಆ ದರ್ಭೆಗಳ ಅರುಗುಗಳು ಅವುಗಳ ನಾಲಿಗೆಯನ್ನು ಇಬ್ಭಾಗಾ ಮಾಡಿದವು. ಅಂದಿನಿಂದ ಸರ್ಪಗಳಿಗೆ ದ್ವಿಜಿಹ್ವೆಗಳೆಂದು ಹೆಸರಾಯಿತು. ಅನಂತರದಲ್ಲಿ ಗರುಡನು ಪಕ್ಷಿರಾಜನಾಗಿ, ಸರ್ಪಗಳನ್ನು ಭಕ್ಷಿಸುತ್ತಾ, ಆ ಪವಿತ್ರವಾದ ಅರಣ್ಯದಲ್ಲಿ ಮಾತೃ ಶುಶ್ರೂಷೆಯನ್ನು ಮಾಡಿ ಕೊಂಡಿರುತ್ತಿದ್ದನು.

57. The Story of Dushyanta.

೫೭. ದುಶ್ಯಂತೋಪಾಖ್ಯಾನ.

ಪೌರ ವಂಶೋದ್ಧಾರಕನಾದ ದುಶ್ಯಂತ ಮಹಾರಾಯನು ಅಸಮಾನ ಶೌರ್ಯವುಳ್ಳವನಾಗಿ, ಚತುಸ್ಸಮುದ್ರ ಮುದ್ರಿತವಾದ ಭೂಮಂಡಲವಷ್ಟನ್ನು ತನ್ನ ಸ್ವಾಧೀನಾ ಮಾಡಿ ಕೊಂಡು, ನಾಲ್ಕನೇ ಭಾಗವನ್ನು ತಾನು ಅನುಭವಿಸುತ್ತಾ,

ಸಮುದ್ರ ತೀರದ ದೇಶಗಳನ್ನೂ, ಮ್ಲೇಂಛ ದೇಶಗಳನ್ನೂ, ಇವೇ ಮೊದಲಾದ ಸಮಸ್ತ ದೇಶಗಳನ್ನೂ, ಆ ದೇಶಗಳ ಪ್ರಜೆಗಳನ್ನೂ ಎಚ್ಚರವಾಗಿ ಪಾಲಿಸುತ್ತಾ ಇರುವಾಗ, ಸಮಸ್ತ ಜನರು ವರ್ಣ ಸಂಕರಾದಿ ಪಾಪ ಕೃತ್ಯಗಳನ್ನು ಮಾಡದೆ, ಧರ್ಮದಲ್ಲಿಯೇ ನಿರತರಾಗಿದ್ದರು. ಮತ್ತು ಆತನ ದೇಶದಲ್ಲಿ ಚೋರ ವ್ಯಾಘ್ರಾದಿಗಳ ಭಯವೂ, ಹಸಿವು, ಬಾಯಾರಿಕೆ ಮೊದಲಾದ ಉಪದ್ರಗಳೂ ಇರಲಿಲ್ಲ. ಪರ್ಜನ್ಯನು ತಿಂಗಳಿಗೆ ಮೂರು ಸಾರಿ ವರ್ಷಿಸುವದರಿಂದ, ಆತನ ದೇಶಗಳಲ್ಲಿ ಸಕಲವಾದ ಪೈರುಗಳು ಬೆಳೆದು, ಧಾನ್ಯಗಳೆಲ್ಲಾ ಅಘ್ಘವಾಗಿ ಇದ್ದವು. ಆ ರಾಜಕುಮಾರನು ಯೌವನದಲ್ಲಿ ಗರಡೀ ಸಾಧಕವನ್ನು ಮಾಡಿ, ಮಂದರ ಪರ್ವತವನ್ನಾದರೂ ಎತ್ತುವಷ್ಟು ಭುಜ ಬಲವನ್ನು ಸಂಪಾದಿಸಿ, ಧನುರ್ಯುದ್ಧದಲ್ಲಿಯೂ, ಗದಾ ಯುದ್ಧದಲ್ಲಿಯೂ, ಮುಷ್ಟಿ ಯುದ್ಧದಲ್ಲಿಯೂ, ಇನ್ನು ನಾನಾ ವಿಧಗಳಾದ ಆಯುಧ ಯುದ್ಧಗಳಲ್ಲಿಯೂ, ಸಮರ್ಥನಾಗಿ—ಆನೆ, ಕುದುರೆ, ರಥ, ಇವುಗಳನ್ನೇರುವದರಲ್ಲಿ ಚತುರನಾಗಿ—ಬಲದಲ್ಲಿ ವಿಷ್ಣುವಿಗೂ, ಪರಾಕ್ರಮದಲ್ಲಿ ಸೂರ್ಯನಿಗೂ, ಗಾಂಭೀರ್ಯದಲ್ಲಿ ಸಮುದ್ರನಿಗೂ, ಕ್ಷಮೆಯಲ್ಲಿ ಭೂಮಿಗೂ, ಸಮಾನನಾಗಿ—ಯಶೋವಂತನಾಗಿ ಇರುತ್ತಿದ್ದನು.

ಹೀಗಿರುವಲ್ಲಿ, ಒಂದಾನೊಂದು ದಿವಸ ಆ ದುಶ್ಯಂತ ಮಹಾರಾಯನು ವನದಲ್ಲಿರುವ ನಾನಾ ಮೃಗಗಳನ್ನು ಬೇಟೆಯಾಡ ಬೇಕೆಂದೆಣಿಸಿ, ಶತಘ್ನಿ, ಕತ್ತಿ, ಪಟ್ಟಾಕತ್ತಿ, ತೊಡಪು, ಜಮದಾಡಿ, ಬಾಕು, ಸುರಾಯಿ, ಕಬ್ಬಿಣ ಕೋಲು, ಭಿಂಡಿವಾಳ, ಭರಜಿ, ಭಲ್ಲೆ, ಈಟಿ, ಶಿಂಗಾಡಿ, ಮೊದಲಾದ ಆಯುಧಗಳನ್ನು ಹಿಡಿದು, ಜೇರೆ, ಶಿರೇ, ಭಕ್ತರು ಮೊದಲಾದ ಕವಚಗಳನ್ನು ತೊಟ್ಟು, ತೇರುಗಳನ್ನೂ ಆನೆಗಳನ್ನೂ ಕುದುರೆಗಳನ್ನೂ ಏರಿದ ರಾಹುತರೂ, ಕಾಲಾಳುಗಳೂ, ಉಭಯ ಪಾರ್ಶ್ವದಲ್ಲಿ ನಡೆದು ಬರುತ್ತಾ ಇರಲು; ಪಟ್ಣದಿಂದ ಹೊರಟು, ಭಟರ ಸಿಂಹನಾದಗಳಿಂದಲೂ, ಭುಜಗಳ ಚಪ್ಪಾಳೆಗಳಿಂದಲೂ, ರಥ ಚಕ್ರ ಧ್ವನಿಗಳಿಂದಲೂ, ಮದ್ದಾನೆಗಳ ಘೀಂಕಾರಗಳಿಂದಲೂ, ಕುದುರೆಗಳ ಹೇಷಾ ರವಗಳಿಂದಲೂ, ಭೇರಿ ಮೃದಂಗ ದುಂದುಭಿ ಕಹಳಾದಿ ವಾದ್ಯ ರವಗಳಿಂದಲೂ, ದಿಕ್ಕುಗಳು ಒಂದೇ ಪ್ರಕಾರ ಭೋರೆಂದು ಮೊರೆಯುತ್ತಿರಲು; ಆಗ ಹೊರಟು ಬೀದಿಯಲ್ಲಿ ಬರುತ್ತಿರುವ ಆ ರಾಯನನ್ನು ನೋಡ ಬೇಕೆಂದು, ಸಂತೋಷದಿಂದ ಆ ಪಟ್ಣದಲ್ಲಿ ಇರುವ ಸ್ತ್ರೀಯರು ಅತ್ಯುನ್ನತಗಳಾದ ಉಪ್ಪರಿಗೆಗಳನ್ನು ಏರಿ, ಅಂದದಿಂದ ಒಪ್ಪಿ, ದೇವೇಂ

ದ್ರನಿಗೆ ಸಮಾನನಾಗಿರುವ ರಾಯನನ್ನು ಕಂಡು—ಈತನ ಪರಾಕ್ರಮವು ಲೋಕಾದ್ಭುತವಾದದ್ದು ಎಂದು ಸ್ತುತಿಸಿ, ಆತನಲ್ಲಿ ಪ್ರೇಮಾತಿಶಯದಿಂದ ಪುಷ್ಪ ವರ್ಷಗಳನ್ನು ಕರೆಯುತ್ತಿದ್ದರು.

ಆ ಬಳಿಕ ದುಶ್ಯಂತ ರಾಯನು ಬ್ರಾಹ್ಮಣರಿಂದ ಸ್ತುತಿಸಲ್ಪಟ್ಟವನಾಗಿ, ವನಕ್ಕೆ ಹೊರಟು, ಸುವರ್ಣ ಮಯವಾದ ರಥಾರೂಢನಾಗಿ ಹೋಗುತ್ತಾ, ಕೆಲವು ಪ್ರದೇಶಗಳನ್ನು ಕಳೆದು, ಸ್ವಲ್ಪ ದೂರದಲ್ಲಿ ಆಲ, ಬೇಲ, ಕೆಮ್ಮತ್ತಿ, ಕಗ್ಗಲಿ, ಅತ್ತಿ, ಅರಟಾಳ, ಅರಳಿ, ಅಮಟೆ, ಕಕ್ಕೆ, ಎಕ್ಕ, ಬೆಲ್ಲವತ್ತ, ಮಾವು, ಶೀಮಾವು, ಮೊದಲಾದ ಮರಗಳಿಂದ ಶೋಭಿತವಾಗಿ—ಹಳ್ಳ ತಿಟ್ಟುಗಳಿಂದಲೂ, ಕಲ್ಲುಗಳಿಂದಲೂ, ವಿಷಮ ಸ್ಥಳಗಳಿಂದಲೂ, ನಿರ್ಜಲ ಪ್ರದೇಶಗಳಿಂದಲೂ, ಹುಲಿ ಕರಡಿ ಕಾಡ್ಗೋಣ ಕಡವೆ ಮೊದಲಾದ ದುಷ್ಟ ಮೃಗಗಳಿಂದಲೂ ಕೂಡಿರುವ ಒಂದು ಮಹಾರಣ್ಯವನ್ನೋಡಿ, ಚತುರಂಗ ಬಲ ಸಮೇತನಾಗಿ ಆ ವನವನ್ನು ಹೊಕ್ಕು, ಅನೇಕವಾದ ದುಷ್ಟ ಮೃಗಗಳನ್ನು ಕೆಣಕಿ, ಬೇಟೆ ಆಡುತ್ತಾ, ಬಾಣಗಳಿಂದ ಶಾರ್ದೂಲಗಳನ್ನು ಮಥಿಸಿ, ತನ್ನ ಸಮೀಪಕ್ಕೆ ಬರುತ್ತಲಿರುವ ದುಷ್ಟ ಮೃಗಗಳನ್ನು ಕತ್ತಿಯಿಂದ ಕಡಿದು, ಕೆಡಹುತ್ತಾ; ಕೈಗೆ ಶಿಕ್ಕದೆ ಓಡಿ ಹೋಗುತ್ತಲಿರುವ ಮೃಗಗಳನ್ನು ಅಟ್ಟಿ ಕೊಂಡು ಹೋಗಿ, ಕೊಲ್ಲುತ್ತಾ; ಮೃಗಗಳ ಮರ್ಮಗಳನ್ನು ತಿಳಿದು, ಅವುಗಳನ್ನು ಭೇದಿಸುತ್ತಾ, ತೊಡಪು, ಕಬ್ಬಿಣದ ದೊಣ್ಣೆ, ಪಟ್ಟಾ ಕತ್ತಿ, ಒನಿಕೆ, ಭರ್ಜಿ, ಮೊದಲಾದ ನಾನಾ ಆಯುಧಗಳನ್ನು ತೆಗೆದುಕೊಂಡು, ಮದ್ದಾನೆಗಳನ್ನು ಕೊಲ್ಲುತ್ತಾ, ಮಹಾರಣ್ಯದಲ್ಲಿ ಸಂಚರಿಸಲು; ಈ ಪ್ರಕಾರ ರಾಯನು ಕೆಣಕಿದ್ದರಿಂದ ಗುಂಪಿನಿಂದ ಚೆದರಿ ಹೋಗಿ, ಹಿಂಡಿನಲ್ಲಿ ನಿಲ್ಲದೆ, ಮಹಾ ಭಯದಿಂದ ಹಂಬಲಿಸುತ್ತ, ಹಸಿವು ಬಾಯಾರಿಕೆಗಳಿಂದ ಮೈಮರೆತು, ನೀರಿಲ್ಲದೆ ಇರುವ ತೊರೆಗಳನ್ನು ಕಂಡು, ಮೂರ್ಛೆಯಿಂದ ಬೀಳುತ್ತ, ಬೆನ್ನಟ್ಟಿ ಬರುವ ರಾಜ ಭಟರ ಕೈಗೆ ಶಿಕ್ಕಿ, ಅವರಿಂದ ಕೊಲ್ಲಲ್ಪಟ್ಟು, ಅಡವಿಯಲ್ಲಿರುವ ಬೇಡರೂ ಸೋಲಿಗರೂ ಇವರಿಂದ ಭಕ್ಷಣಾರ್ಥವಾಗಿ ಬೆಂಕಿಯಿಂದ ಸುಡಲ್ಪಟ್ಟು, ಇನ್ನು ನಾನಾ ಪ್ರಕಾರದಿಂದ ಕಾಡಿನ ಮೃಗಗಳೆಲ್ಲಾ ನಾಶವಾಗುತ್ತಾ ಬಂದವು. ಮತ್ತು ಆನೇ ಗುಂಪುಗಳು ಭಟರ ಶಸ್ತ್ರಗಳ ಪೆಟ್ಟಿಗೆ ಬಹಳ ಕಂಗೆಟ್ಟು, ಸುಂಡಿಲುಗಳನ್ನು ಸುತ್ತಿ ಕೊಂಡು, ಲದ್ದಿಯನ್ನು ಹಾಕುತ್ತಾ, ಉಚ್ಚೆ ಹುಯ್ದು ಕೊಳ್ಳುತ್ತಾ, ಘಾಯಗಳಿಂದ ನೆತ್ತರುಗಳನ್ನು ಸುರಿಸುತ್ತಾ, ತತ್ತರದಿಂದ ವನದಲ್ಲಿರುವ ಹುಲ್ಲೆ ಮೊದಲಾದ ಮೃಗಗಳನ್ನು ತುಳಿಯುತ್ತಾ, ಘೀಳಿಡುತ್ತಾ, ದಿಕ್ಕು ದಿಕ್ಕಿಗೆ ಓಡಿದವು. ಆ ಬಳಿಕ ದುಶ್ಯಂತ ರಾಯನ ಸೈನ್ಯವೆಂ

ಬ ಮೇಘದಿಂದ ಬಿಡಲ್ಪಟ್ಟ ನಾನಾ ಪ್ರಕಾರಗಳಾದ ಬಾಣ ವರ್ಷಗಳಿಂದ ಮು ಚ್ಚಲ್ಪಟ್ಟ ಕಾಡ್ಗೋಣಗಳು ಸಕಲ ದಿಕ್ಕುಗಳಲ್ಲಿ ತಿರುಗುತ್ತಿರಲು; ಆ ವನವು ವರ್ಷಕಾಲದೋಪಾದಿಯಲ್ಲಿ ಒಪ್ಪುತ್ತಿತ್ತು.

ಆ ಬಳಿಕ ದುಶ್ಯಂತ ರಾಯನು ದುಷ್ಟ ಮೃಗಗಳನ್ನು ಬೇಟೆ ಆಡುತ್ತಾ, ಚ ತುರಂಗ ಬಲ ಸಮೇತನಾಗಿ ವನದ ದೆಸೆಯಿಂದ ಹೊರಟು, ಪಟ್ಟಣಕ್ಕೆ ಎರಡು ಗಾವುದ ದೂರದಲ್ಲಿ ಸಿದ್ಧ ಚಾರಣರಿಂದ ಸೇವಿತವಾಗಿರುವ ಒಂದು ವನವನ್ನು ಕಂಡು, ಅದರೊಳಗೆ ಹೊಕ್ಕು, ಅಲ್ಲಿರುವ ನಾನಾ ಮೃಗಗಳನ್ನು ಬೇಟೆ ಆಡು ವದಕ್ಕೋಸ್ಕರ ಕುದುರೇ ರಾಹುತರನ್ನೂ, ಕೆಲವು ಪಾಯಿದಳವನ್ನೂ ಕರೆದು ಕೊಂಡು, ಬಹಳ ದೂರ ಹೋಗಿ, ಶ್ರಮದಿಂದ ಕಂಗೆಟ್ಟು, ಹಸಿವು ಬಾಯಾರಿ ಕೆಗಳಿಂದ ಪೀಡಿತನಾಗಿ, ಆ ವನವನ್ನು ದಾಟಿ, ಒಬ್ಬನೇ ಹೋಗುತ್ತಾ, ಒಂದು ಚೌಳು ಭೂಮಿಯನ್ನು ಕಂಡು, ಅದನ್ನು ಅತಿಕ್ರಮಿಸಿ, ಆ ಬಳಿಕ ಉತ್ತಮ ರಾದ ತಾಪಸರಿಗೆ ವಾಸಸ್ಥಾನವಾಗಿಯೂ—ಮನಸ್ಸಿಗೆ ಸಂತೋಷಕರವಾಗಿಯೂ—ಸಕಲ ಜನ ಮನೋಹರವಾಗಿಯೂ—ಮಂದ ಮಾರುತ ಸಮೇತವಾಗಿಯೂ—ಪುಷ್ಪಿಸಿ, ಫಲಿಸಿ, ಜಗ್ಗುತ್ತಲಿರುವ ವೃಕ್ಷಗಳಿಂದ ಕೂಡಿರುವಂಥಾದ್ದಾಗಿಯೂ—ಮೃದುವಾದ ಹಸುರಾದ ಹುಲ್ಲುಗಳಿಂದ ರಮಣೀಯವಾಗಿರುವ ಪ್ರದೇಶಗಳು ಳ್ಳಂಥಾದ್ದಾಗಿಯೂ—ಕಿವಿಗಳಿಗೆ ಇಂಪಾಗುವ ಹಾಗೆ ಧ್ವನಿ ಮಾಡುವ ಗಿಣಿ, ಗೊರವನ ಹಕ್ಕಿ, ಪಾರಿವಾಳ, ನವಿಲು, ಮೊದಲಾದ ಹಕ್ಕಿಗಳಿಂದ ಕೂಡಿ ಕೊಂಡಿರುವಂಥಾದ್ದಾಗಿಯೂ—ತಂಪಾದ ನೆರಳುಳ್ಳ ಮಹಾ ವೃಕ್ಷಗಳಿಂದ ತುಂ ಬಿರುವಂಥಾದ್ದಾಗಿಯೂ—ತುಂಬಿಗಳ ಝೇಂಕಾರದಿಂದ ಮನೋಹರವಾಗಿ ಯೂ—ಇರುವ ಒಂದು ವನವನ್ನು ಕಂಡು, ಸಂತೋಷ ಪಡುತ್ತಾ, ಅದರೊಳ ಗೆ ಹೊಕ್ಕು, ನೋಡಲಾಗಿ; ಅಲ್ಲಿರುವ ಸಮಸ್ತ ವೃಕ್ಷಗಳು ಮಂದ ಮಾರುತ ದಿಂದ ಆತನ ಮೇಲೆ ಪುಷ್ಪಗಳನ್ನು ಉದುರಿಸುತ್ತಾ, ಹೂವು, ಹೀಚು, ಕಾಯಿ, ಹಣ್ಣು, ಇವುಗಳ ಭಾರದಿಂದ ಬೊಗ್ಗಿ, ಜಗ್ಗುತ್ತಾ, ಕೆಲವು ಕೊನೆಗ ಳಿಂದ ಆಕಾಶವನ್ನು ಮುಟ್ಟುತ್ತಾ, ತಮ್ಮ ಮೇಲೆ ಧ್ವನಿ ಗೈಯುತ್ತಾ, ವಾಸಾ ಮಾಡುತ್ತಲಿರುವ ಶುಕ ಶಾರಿಕಾ ನಿಕರಗಳ ಸಲ್ಲಾಪಗಳೆಂಬ ಮೃದು ಭಾಷಿತಗ ಳಿಂದ ಬಂದ ಪಥಿಕರ ಯೋಗ ಕ್ಷೇಮವನ್ನು ವಿಚಾರಿಸುತ್ತವೆಯೋ? ಎಂಬ ಹಾಗೆ ಇದ್ದವು. ಮತ್ತು ಬಿಳೀ ಹೂವುಗಳಿಂದ ತುಂಬಿರುವ ಬಳ್ಳಿಗಳು ಆ ಮ ರಗಳ ಸುತ್ತಲು ಸುತ್ತಿ ಕೊಂಡು ಹಬ್ಬಿ ಇರುವದರಿಂದ, ಬಿಳೀ ವಸ್ತ್ರಗಳನ್ನು ಉಟ್ಟು ಕೊಂಡಿರುವ ಹಾಗೆ ಕಾಣಿಸುತ್ತಾ ಇದ್ದವು.

ಇಂಥ ವನದಲ್ಲಿ ಒಂದು ನದೀ ತೀರದಲ್ಲಿ ಅನೇಕವಾದ ಮೃಗ ಗಣಗಳಿಂದ ಕೂಡಿ ಕೊಂಡು, ಬಹು ವಿಧ ವಿಹಗ ಕೋಲಾಹಲ ಭರಿತವಾಗಿ ಪ್ರಜ್ವಲಿಸುತ್ತಲಿರುವ ಯಜ್ಞೇಶ್ವರನುಳ್ಳದ್ದಾಗಿ—ವಾಲಖಿಲ್ಯರೇ ಮೊದಲಾದ ಮಹಾ ಋಷಿಗಳ ವಾಸಕ್ಕೆ ಯೋಗ್ಯವಾಗಿ—ಅಗ್ನಿಹೋತ್ರ ಗೃಹಗಳಿಂದಲೂ, ಪುಷ್ಪ ಶಯ್ಯೆಗಳಿಂದಲೂ, ಮನೋಹರವಾಗಿ ಇರುವ ಒಂದು ದಿವ್ಯಾಶ್ರಮವನ್ನು ಕಂಡು, ಆ ಆಶ್ರಮ ಸಮೀಪದಲ್ಲಿ ಹಂಸ ಚಕ್ರವಾಕ ಮೊದಲಾದ ನಾನಾ ವಿಧ ಜಲಪಕ್ಷಿಗಳೊಡನೆ ಕೂಡಿ, ಸಕಲ ಮೃಗಗಳ ಸಂಚಾರಕ್ಕೆ ಯೋಗ್ಯಗಳಾದ ತಡಿಗಳುಳ್ಳಂಥಾದ್ದಾಗಿ—ದೇವಲೋಕಕ್ಕೆ ಸಮಾನವಾದ ಪುಣ್ಯಾಶ್ರಮಕ್ಕೆ ಭೂಷಣವಾಗಿ—ಸಕಲ ಪ್ರಾಣಿ ಸಮೂಹಕ್ಕೆ ತಾಯೋಪಾದಿಯಲ್ಲಿ ಇರುವಂಥಾದ್ದಾಗಿ—ಚಕ್ರವಾಕ ಪಕ್ಷಿಗಳು ಸಂಚರಿಸುತ್ತಲಿರುವ ಪುಳಿನ ರಾಶಿಗಳಿಂದ ಶೋಭಿತವಾಗಿ—ನೊರೆಯಿಂದ ಕೂಡಿದಂಥಾದ್ದಾಗಿ—ಸ್ನಾನಗೈದು, ವೇದವನ್ನು ಪಠಿಸುತ್ತಲಿರುವ ಧೃತ ವ್ರತರಾದ ಮುನಿ ಕುಮಾರರ ಗಂಭೀರ ಘೋಷದಿಂದ ರಂಜಿತವಾಗಿ—ಪ್ರವಹಿಸುತ್ತಲಿರುವ ಮಾಲಿನೀ ಎಂಬ ಪುಣ್ಯ ನದಿಯನ್ನು ಕಂಡು, ಅದರ ತೀರದಲ್ಲಿ ಸಕಲ ಮುನಿ ಜನ ಸೇವ್ಯವಾಗಿರುವ ಕಾಶ್ಯಪಾಶ್ರಮದ ಸಮೀಪದಲ್ಲಿರುವ ಪ್ರದೇಶಗಳಲ್ಲೆಲ್ಲಾ ಸಂಚರಿಸಿ, ಆ ರಾಯನು ಆ ಆಶ್ರಮವನ್ನು ಪ್ರವೇಶಿಸಿ, ಆ ಮಹರ್ಷಿಯನ್ನು ಸೇವಿಸುವದಕ್ಕೋಸ್ಕರ ಇಚ್ಛೈಸಿ, ರಥ ಗಜ ತುರಗ ಪದಾತಿಗಳೆಲ್ಲಾ ಸಂಗಡ ಬಂದು ನಿಲ್ಲಲು; ಆ ಸೈನ್ಯವನ್ನೆಲ್ಲಾ ಆ ಆಶ್ರಮದ ಹೊರಗಿನ ಬಯಲಲ್ಲಿ ನಿಲ್ಲಿಸಿಬಿಟ್ಟು, ಛತ್ರ ಚಾಮರಾದಿ ರಾಜ ಚಿನ್ಹೆಗಳನ್ನೆಲ್ಲಾ ಬಿಟ್ಟು ಬಿಟ್ಟು, ಮಂತ್ರಿಗಳೊಡನೆ ಕೂಡಿ ಕೊಂಡು, ಸೇನಾಪತಿಯನ್ನು ಕರೆದು—ಎಲೈ, ಸೇನಾಧಿಪನೇ, ನಾವು ತಪೋಧನರಾದ ಮುನೀಶ್ವರರ ಆಶ್ರಮಕ್ಕೆ ಹೋಗಿ, ಅವರ ದರ್ಶನವನ್ನು ಮಾಡಿ ಕೊಂಡು, ತಿರಿಗಿ ಬರುವ ಪರ್ಯಂತರಕ್ಕೂ ಸಕಲ ಸೇನೆಯನ್ನು ಇಲ್ಲೇ ಇರಿಸಿ ಕೊಂಡು ಇರು ಎಂದು ಹೇಳಿ, ಬ್ರಹ್ಮ ಲೋಕಕ್ಕೆ ಸಮಾನವಾದ ಆ ಆಶ್ರಮವನ್ನು ಪ್ರವೇಶಿಸಿ, ಅದರ ಮಹತ್ವವನ್ನು ನೋಡಿ, ಬಹಳ ಸಂತೋಷ ಪಡುತ್ತಾ ಇದ್ದನು. ಹ್ಯಾಗಂದರೆ—

ಆ ಆಶ್ರಮದಲ್ಲಿ ವೇದ ವೇದಾಂಗ ಪಾರಂಗತರಾಗಿ, ನ್ಯಾಯ ತತ್ವಾರ್ಥ ವಿಜ್ಞಾನ ಸಂಪನ್ನರಾದ ಕೆಲವು ಬ್ರಾಹ್ಮಣ ಶ್ರೇಷ್ಠರು, ಪದ ಕ್ರಮ ಸಮೇತವಾಗಿ, ವೇದ ಪಠಿಸುವ ಘೋಷವು ಆ ರಾಯನ ಕಿವಿಗಳಿಗೆ ಇಂಪಾಗಿತ್ತು. ಕೆಲವು ಕಡೆಯಲ್ಲಿ ಯಜುರ್ವೇದ ಪಠನವೂ; ಕೆಲವು ಕಡೆಯಲ್ಲಿ ಸಾಮ ವೇದ ಗಾನ

ವೂ; ಇನ್ನು ಕೆಲವು ಸ್ಥಳದಲ್ಲಿ ಅಥರ್ವಣ ವೇದ ಪಾಠವೂ; ಮತ್ತು ಕೆಲವು ಬಳಿಯಲ್ಲಿ ಶಬ್ದ ಶಾಸ್ತ್ರೋಪನ್ಯಾಸಾ ಮಾಡುವ ರೀತಿಯೂ; ಕೊಂಚ ಕಡೆಯಲ್ಲಿ ಯಾಗ ಪ್ರಯೋಗವನ್ನು ತಿಳುಹಿಸುವಂಥ ಅಂದವೂ; ಇವೇ ಮೊದಲಾದ ನೇತ್ರಾನಂದಕರಗಳಾದ ಪವಿತ್ರ ಸ್ಥಳಗಳನ್ನು ನೋಡುತ್ತಾ, ವಿಶದವಾಗಿ, ವಿಜನವಾಗಿ, ಪವಿತ್ರವಾಗಿರುವ ಕಾಶ್ಯಪನ ಪರ್ಣಶಾಲೆಯನ್ನು ಹೊಕ್ಕು, ಮಂತ್ರಿ ಪುರೋಹಿತರನ್ನು ಬಾಗಿಲಲ್ಲಿಯೇ ನಿಲ್ಲಿಸಿ ಬಿಟ್ಟು, ಒಳಗೆ ಹೋಗಿ, ನೋಡಿ, ಅಲ್ಲಿ ಒಬ್ಬರನ್ನೂ ಕಾಣದೆ—ಈ ಆಶ್ರಮದಲ್ಲಿರುವವರು ಯಾರು ಎಂದು, ವನದಲ್ಲಿ ಪ್ರತಿಧ್ವನಿ ಹುಟ್ಟುವ ಹಾಗೆ ಘಟ್ಟಿಯಾಗಿ ಕೂಗಿ ಎಚ್ಚರಿಸಲು; ಆ ಧ್ವನಿಯನ್ನು ಕೇಳಿ, ಕಾರ್ಮುಗಿಲ ದೆಶೆಯಿಂದ ಹೊರಟು ಬರುವ ಮಿಂಚು ಬಳ್ಳಿಯೋಪಾದಿಯಲ್ಲಿ ಹೊಳೆಯುತ್ತಲಿರುವಂಥ—ಪ್ರತ್ಯಕ್ಷವಾಗಿ ಬಂದ ಮಹಾ ಲಕ್ಷ್ಮಿಯೋಪಾದಿಯಲ್ಲಿ ರೂಪು ಲಾವಣ್ಯ ಸಂಪನ್ನೆಯಾಗಿರುವಂಥ ಒಬ್ಬ ಕನ್ನಿಕೆಯು ಆ ಆಶ್ರಮದ ಒಳಗಿನಿಂದ ಹೊರಟು ಬಂದು, ಅಭ್ಯಾಗತನಾದ ಆ ಮಹಾ ರಾಯನನ್ನು ಕಂಡು, ಆಶ್ಚರ್ಯ ಪಡುತ್ತಾ, ತಾವರೇ ಎಸಳುಗಳೋಪಾದಿಯಲ್ಲಿ ನೀಟವಾದ ನೇತ್ರ ಯುಗ್ಮವನ್ನೂ, ವಿಶಾಲವಾದ ವಕ್ಷ ಸ್ಥಳವನ್ನೂ, ಸಿಂಹ ಸ್ಕಂಧ ಸಮಾನವಾದ ಭುಜ ಮೂಲವನ್ನೂ, ಆಜಾನು ದೀರ್ಘಗಳಾದ ಬಾಹುಗಳನ್ನೂ, ಇವೇ ಮೊದಲಾದ ರಾಜ ಲಕ್ಷಣಗಳನ್ನು ನೋಡಿ, ಮೃದು ಮಧುರ ಭಾಷಣೆಗಳಿಂದ ಕುಶಲ ಪ್ರಶ್ನೆಯನ್ನು ಮಾಡಿ, ಸಮುಚಿತವಾದ ಪೀಠದಲ್ಲಿ ಕುಳ್ಳಿರಿಸಿ, ಅರ್ಘ್ಯ ಪಾದ್ಯಾಚಮನಗಳನ್ನು ಕೊಟ್ಟು, ನಾಚಿಕೆಯಿಂದ ಕೊಂಚವಾಗಿ ಮುಖವನ್ನು ಬಾಗಿಸಿ, ಸಮ್ಮಾನದಿಂದ ತುಷ್ಟನಾದ ಆ ರಾಯನ ಎದುರಿಗೆ ನಿಂತು ಕೊಂಡು, ತನ್ನ ಮುಖದ ಮುಗುಳು ನಗೆಯ ಸೊಬಗಿನಿಂದ ದಿಕ್ಕುಗಳನ್ನು ಬೆಳಗಿಸುತ್ತಾ,—ಎಲೈ, ಮಹಾನುಭಾವನೇ, ನೀನು ಯಾರು? ಯಾವ ನಿಮಿತ್ತದಿಂದ ಈ ಆಶ್ರಮಕ್ಕೆ ಬಂದೆ? ನಾವು ಮಾಡ ತಕ್ಕಂಥ ಕಾರ್ಯವೇನು? ಇದಷ್ಟನ್ನು ತಿಳುಹಿಸಬೇಕೆನಲು; ಆ ರಾಜನು ಸಕಲ ಶುಭ ಲಕ್ಷಣಗಳಿಂದ ಕೂಡಿ, ಸದಾಚಾರ ಸಂಪನ್ನೆಯಾಗಿ, ಮಹಾ ಲಕ್ಷ್ಮಿಯೋಪಾದಿಯಲ್ಲಿ ಒಪ್ಪುತ್ತಾ, ಮಂಜು ಭಾಷಿಣಿಯಾದ ಆ ಕನ್ನಿಕೆಯನ್ನು ಕುರಿತು ಇಂತೆಂದನು—ಎಲೈ, ರಾಜೀವ ಲೋಚನೆಯೇ, ನಾನು ಮಹಾತ್ಮನಾದ ಇಲಲನ ಮಗನಾದ ದುಶ್ಯಂತ ರಾಯನು, ಎನಲು; ಆ ಶಕುಂತಳೆಯು—ಸಕಲ ರಾಜ ಪೂಜಿತನಾದ ನಿನ್ನಂಥ ಅರಸಿಗೆ ನಾವು ಉಪಚರಿಸ ತಕ್ಕದ್ದೇನು ಇಧೆ? ನಾವು ಕೊಡುವ ಕಂದ ಮೂ

ಲ ಫಲಗಳನ್ನು ಪರಿಗ್ರಹಿಸಿ, ನಮ್ಮಿಂದ ಆಗ ತಕ್ಕ ಕಾರ್ಯವನ್ನು ನಿರೂಪಿಸ ಬೇಕೆನಲು; ದುಶ್ಯಂತನು,—ಎಲೈ, ರಾಜೀವ ಲೋಚನೆಯೇ, ನಾನು ಮಹಾ ನುಭಾವರಾದ ಕಣ್ವ ಮುನೀಶ್ವರರನ್ನು ಸೇವಿಸುವದಕ್ಕೆ ಇಲ್ಲಿಗೆ ಬಂದೆನು. ಆ ಮಹಾತ್ಮನೆಲ್ಲಿದ್ಧಾನೆ? ಎನಲು; ಆ ಕನ್ನಿಕೆಯು, ಕಣ್ವನು ಕಂದ ಮೂಲ ಫಲಗಳನ್ನು ತರುವದಕ್ಕೆ ಆಶ್ರಮದಿಂದ ಹೊರಟು, ವನಕ್ಕೆ ಹೋಗಿದ್ಧಾನೆ. ಒಂದು ಮುಹೂರ್ತ ಮಾತ್ರ ಇಲ್ಲಿ ಇದ್ದರೆ, ಅವರ ದರ್ಶನ ಮಾಡಿ ಕೊಂಡು ಹೋಗ ಬಹುದೆನಲು;—

ಆ ದುಶ್ಯಂತನು ಆ ಮಹಾ ಮುನೀಶ್ವರನು ಆಶ್ರಮದಲ್ಲಿ ಇಲ್ಲದೆ ಇರುವದ ರಿಂದ ಶಕುಂತಳೆ ಉಪಚರಿಸುವ ಮಾತುಗಳಿಗೆ ಸಂತೋಷ ಪಟ್ಟು, ರೂಪು, ಯೌವನ ಸಂಪನ್ನೆಯಾದ, ವಿನಯಾನ್ವಿತೆಯಾದ ಅವಳನ್ನು ನೋಡಿ,—ನೀನು ಯಾರು? ಯಾರ ಮಗಳು? ನೀನು ಈ ತಪೋ ವನಕ್ಕೆ ಬಂದು ಇರುವದಕ್ಕೆ ಕಾರಣವೇನು? ನಿನ್ನನ್ನು ನೋಡಿದ ಮಾತ್ರದಿಂದಲೇ ನನ್ನ ಮನಸ್ಸು ಮನ್ಮಥ ಬಾಣದಿಂದ ಪೀಡಿತವಾಗಿದೆ. ನಾನು ಒಂದು ರಹಸ್ಯವನ್ನು ಕೇಳುತ್ತೇನೆ; ಮ ರೆ ಮಾಜದೆ ಹೇಳ ಬೇಕು. ನಾನು ರಾಜರ್ಷಿಯಾದ ಪುರು ವಂಶದಲ್ಲಿ ಹು ಟ್ಟಿದವನು. ನನ್ನ ಮನಸ್ಸು ರಾಜ ಕನ್ನಿಕೆಯಲ್ಲಿ ತಗಲುವದೇ ಹೊರತಾಗಿ, ಮತ್ತೊಂದು ಕನ್ನಿಕೆಯಲ್ಲಿ ತಗಲುವದು ಇಲ್ಲ. ಆದರೆ ನಿನ್ನಲ್ಲಿ ತಗಲಿ ಇರುವ ದರಿಂದ ನೀನು ನಿಶ್ಚಯವಾಗಿ ಕ್ಷತ್ರಿಯ ಕನ್ನಿಕೆಯಾಗಿ ತೋರುತ್ತೀ. ಇದಲ್ಲದೆ ನಿನ್ನನ್ನು ಮದುವೆ ಆಗುವದಕ್ಕೆ ನನ್ನ ಮನಸ್ಸು ಬಯಸುತ್ತದೆ. ನೀನು ನನ್ನ ನ್ನು ಮದುವೆ ಆಗ ಬೇಕು. ಹಾಗೆ ಮದುವೆಯಾದರೆ, ಚತುಸ್ಸಮುದ್ರ ಸುತ್ತು ವ ಭೂಮಂಡಲವಷ್ಟೂ ನಿನ್ನ ವಶವಾಗುತ್ತದೆ. ನಿನ್ನ ಮನಸ್ಸಿನಲ್ಲಿ ಮತ್ತೊಂದ ನ್ನು ಎಣಿಸದೆ, ಅವಶ್ಯವಾಗಿ ನನ್ನನ್ನು ಮದುವೆಯಾಗ ಬೇಕೆನಲು; ಆ ಕ ನ್ಯಾ ರತ್ನವು ಮಧುರ ಭಾಷೆಗಳಿಂದ ಆತನನ್ನು ಕುರಿತು ಇಂತೆಂದಿತು—ಕೇಳೈ, ರಾಯನೇ, ನೀನು ಸಕಲ ಧರ್ಮಗಳನ್ನು ತಿಳಿದಿರುವಂಥವನು. ನಾನು ಕಣ್ವ ಮುನೀಶ್ವರನ ಮಗಳಾದ್ದರಿಂದ, ನನ್ನ ತಂದೆ ಇರುವಾಗಲೇ, ನನ್ನ ಸ್ವತಂತ್ರದಿಂ ದ ಹೀಗೆ ಮಾಡ ಬಾರದಲ್ಲ! ನನ್ನ ತಂದೆಯನ್ನು ಕೇಳಿ, ಅವರ ಅಪ್ಪಣೆ ಆದ ಮೇಲೆ ಮದುವೆಯಾಗುವದೇ ಹೊರತಾಗಿ, ಹೀಗೆ ಕಾಮಾತುರತ್ವದಿಂದ ಪದ ರಾಡುವದು ಉಚಿತವಲ್ಲ, ಎನಲು; ದುಶ್ಯಂತನು—ಎಲೈ, ಶಕುಂತಳೆಯೇ, ನನ್ನ ಮನಸ್ಸಿನಲ್ಲಿ ಒಂದು ಸಂಶಯ ಉಂಟು; ಏನಂದರೆ, ಲೋಕ ಪೂಜಿತನಾಗಿ ಮ ಹಾನುಭಾವನಾದ ಕಣ್ವ ಮಹಾ ಮುನೀಶ್ವರನು ಜಿತೇಂದ್ರಿಯನಾದ್ದರಿಂದ,

ಆತನ ಮನೋಽ ಧರ್ಮವು ಚಲಿಸಿದರೂ, ದೃಢ ವ್ರತನಾದ ಆತನು ಚಲಿಸನು. ಆತನಿಗೆ ನೀನು ಯಾವ ರೀತಿಯಿಂದ ಮಗಳಾದೆ? ನನಗೆ ತಿಳುಹಿಸ ಬೇಕೆನಲು; ಶಕುಂತಳೆ ಇಂತೆಂದಳು—ಎಲೈ, ರಾಯನೇ, ಕೇಳು. ಲೋಕದಲ್ಲಿ ಯಾರಾದರೂ ತಮ್ಮ ರೀತಿ ಒಂದು ಪ್ರಕಾರ ಹೇಳಿ ಕೊಳ್ಳುವದು ಬೇರೊಂದು ಪ್ರಕಾರವಾದರೆ, ಆತ್ಮವಧಾ ದೋಷ ಸಂಘಟಿಸುತ್ತದೆ. ಆದ್ದರಿಂದ ನನ್ನ ಸ್ಥಿತಿ ಯಥಾರ್ಥವಾಗಿ ಹೇಳುತ್ತೇನೆ.

ಒಂದು ದಿವಸ ಒಬ್ಬ ಮುನೀಶ್ವರನು ಬಂದು, ಕಣ್ವನಿಂದ ಪೂಜಿತನಾಗಿ, ಆತನನ್ನು ಕುರಿತು ನೀನು ಕೇಳಿದ ರೀತಿಯಲ್ಲಿ ಪ್ರಶ್ನೆ ಮಾಡಲು; ನನ್ನ ತಂದೆಯು ನಾನು ಕೇಳುವ ಹಾಗೆ ಆತನನ್ನು ಕುರಿತು ಇಂತೆಂದನು—ಎಲೈ, ಭಾರ್ಗವ ಮುನಿಯೇ, ನನಗೆ ಪರಮ ಮಿತ್ರನಾದ ವಿಶ್ವಾಮಿತ್ರನು ಘೋರವಾದ ತಪಸ್ಸನ್ನು ಮಾಡುತ್ತಿರಲು; ಆ ತಪಸ್ಸಿಗೆ ಇಂದ್ರನು ಭಯ ಪಟ್ಟು, ಆತನ ತಪೋ ಬಲವನ್ನು ಕೆಡಿಸ ಬೇಕೆಂದು, ಮೇನಕಿ ಎಂಬ ಅಪ್ಸರ ಸ್ತ್ರೀಯನ್ನು ಕರೆದು—ನೀನು ಸಕಲ ರೂಪು ಸೌಂದರ್ಯ ಯುಕ್ತಳಾದ್ದರಿಂದ, ನನ್ನ ಅಪ್ಪಣೆಯ ಮೇರೆಗೆ ವಿಶ್ವಾಮಿತ್ರನ ತಪಸ್ಸನ್ನೂ ಬ್ರಹ್ಮಚರ್ಯ ವ್ರತವನ್ನೂ ಕೆಡಿಸಿ, ನನಗೆ ಹಿತವನ್ನುಂಟು ಮಾಡ ಬೇಕೆನಲು; ಆ ಮೇನಕಿಯು ಇಂದ್ರನನ್ನು ನೋಡಿ—ಎಲೈ, ಇಂದ್ರನೇ, ಆ ವಿಶ್ವಾಮಿತ್ರನ ಕೋಪಕ್ಕೆ ನೀವೇ ಭಯ ಪಡುವಾಗ, ಅಂಥಾ ಜಿತೇಂದ್ರಿಯನ ಎದುರಿಗೆ ನಿಲ್ಲುವದಕ್ಕೆ ನಾನೆಷ್ಟು ಮಾತ್ರದವಳು? ಆತನು ಸಾಮಾನ್ಯ ಪುರುಷನಲ್ಲ. ಆತನು ಬ್ರಹ್ಮ ಸೃಷ್ಟಿಗೆ ಬದಲಾಗಿ ತನ್ನ ಮನಸ್ಸಿಗೆ ಬಂದದ್ದೆಲ್ಲಾ ಸೃಷ್ಟಿಸ ಬಲ್ಲನು. ಇಂಥ ಅದ್ಭುತ ಮಹಿಮೆಯುಳ್ಳ ಆತನ ಎದುರಿಗೆ ನಿಂತು, ಹ್ಯಾಗೆ ಜೀವಿಸಲಿ? ಆದರೂ ನಿನ್ನ ಮಾತು ಮೀರ ಕೂಡದ್ದಾದ ಕಾರಣ, ನಾನು ಹೋಗಿ, ಸೌಖ್ಯದಿಂದ ಹಿಂತಿರಿಗಿ ಬರುವ ಹಾಗೆ ನನ್ನ ಸಹಾಯಕ್ಕೆ ಮನ್ಮಥನನ್ನೂ ಮಂದ ಮಾರುತನನ್ನೂ ಕಳುಹಿಸ ಬೇಕೆನಲು; ಆ ಇಂದ್ರನು ಹಾಗೆ ಅವರನ್ನು ಸಂಗಡ ಕಳುಹಿಸಲು; ಆ ಮೇನಕಿಯು ಅವರಿಬ್ಬರ ಸಹಾಯದಿಂದ ವಿಶ್ವಾಮಿತ್ರನ ಆಶ್ರಮದ ಬಳಿಗೆ ಬಂದು, ತಪಸ್ಸಿನಿಂದ ಕೃಶನಾಗಿರುವ ಆತನನ್ನು ಕಂಡು, ನಮಸ್ಕರಿಸಿ, ನಾನಾ ವಿಧ ಶೃಂಗಾರ ಚೇಷ್ಟೆಗಳನ್ನು ತೋರಿಸುತ್ತಾ, ಉಪಚರಿಸುತ್ತಿರಲು; ಆ ವಿಶ್ವಾಮಿತ್ರನು ಇವಳ ರೂಪು ಲಾವಣ್ಯಗಳನ್ನು ನೋಡಿ, ಮೋಹಿತನಾದನು. ಹೀಗೆ ಮೇನಕಿಯು ಗರ್ಭ ಧರಿಸಿ, ಈ ಶಕುಂತಳೆಯನ್ನು ಹೆತ್ತು, ತನ್ನ ಒಡೆಯನ ಕೆಲಸ ಕೈ ಶೇರಿತೆಂದು ತಿಳಿದು, ಆ ಶಿಶುವನ್ನು ಹಿಮವತ್ಪರ್ವತದ ಸಮೀಪದಲ್ಲಿ ಹರಿಯುವ ಮಾಲಿನೀ ನದೀ

ತೀರದಲ್ಲಿರಿಸಿ, ಶುಭವಾಗಲಿ ಎಂದು ಹೇಳಿ, ಅಮರಾವತಿ ಪಟ್ಟಣಕ್ಕೆ ಹೊರಟು ಹೋದಳು. ಆಗ ನಾನು ಒಂದಾನೊಂದು ದಿವಸ ಸ್ನಾನಾರ್ಥವಾಗಿ ಆ ಮಾಲಿನೀ ನದಿಗೆ ಹೋಗಲು; ಅಲ್ಲಿ ಅಳುತ್ತಿರುವ ಶಿಶುವನ್ನು ನೋಡಿ, ನನ್ನ ದಿವ್ಯ ದೃಷ್ಟಿಯಿಂದ ಅದರ ವೃತ್ತಾಂತವನ್ನು ತಿಳಿದು, ನನ್ನಾಶ್ರಮಕ್ಕೆ ಎತ್ತಿ ಕೊಂಡು ಬಂದು, ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವಿನಂತೆಯೇ ಸಾಕುತ್ತಾ, ಮೊದಲು ಕಾಡಿನಲ್ಲಿ ಶಕುಂತಗಳು ಆ ಶಿಶುವನ್ನು ಪೋಷಿಸಿದ ಕಾರಣ, ಇವಳಿಗೆ ಶಕುಂತಳೆ ಎಂದು ಹೆಸರಿಟ್ಟೆನು ಎಂದು ಹೇಳಲು; ಆ ಋಷಿಯು ಕಣ್ವನ ಅಪ್ಪಣೆಯನ್ನು ಹೊಂದಿ, ತನ್ನಾಶ್ರಮಕ್ಕೆ ಹೊರಟು ಹೋದನು.

ಎಲೈ, ರಾಯನೇ, ಇದೀಗ ನನ್ನ ಜನ್ಮದ ರೀತಿಯು ಎಂದು ಹೇಳಿದ ಶಕುಂತಳೆಯ ಮಾತನ್ನು ಕೇಳಿ, ದುಶ್ಯಂತ ಮಹಾ ರಾಯನು ಬಹಳ ಸಂತುಷ್ಟನಾಗಿ—ಎಲೈ, ಕನ್ನಿಕೆಯೇ, ನೀನು ಕ್ಷತ್ರಿಯನ ಮಗಳಾದದ್ದು ನಿಶ್ಚಯವಾಯಿತು. ಇನ್ನು ನನಗೆ ಹೆಂಡತಿಯಾಗಿ, ನನ್ನ ಮನೋರಥವನ್ನು ಸಲ್ಲಿಸ ಬೇಕೆನಲು; ಶಕುಂತಳೆಯು—ಎಲೈ, ರಾಯನೇ, ನನ್ನ ತಂದೆ ವನದಿಂದ ಬರುವ ವರಿಗೂ ನೀನಿಲ್ಲಿದ್ದರೆ, ಆತನೇ ನನ್ನನ್ನು ನಿನಗೆ ಮದುವೆ ಮಾಡಿ ಕೊಡುತ್ತಾನೆ. ಕನ್ನಿಕೆಗೆ ತಂದೆಯೇ ಗುರುವಾದ್ದರಿಂದ, ಆತನು ಅವಳನ್ನು ಯಾರಿಗೆ ಕೊಡುತ್ತಾನೋ ಅವನೇ ಅವಳಿಗೆ ಗಂಡನು. ಸ್ತ್ರೀಯರಿಗೆ ಬಾಲ್ಯದಲ್ಲಿ ತಂದೆಯೂ, ಯೌವನದಲ್ಲಿ ಗಂಡನೂ, ಮುಪ್ಪಿನಲ್ಲಿ ಮಗನೂ ರಕ್ಷಕರಾದ್ದರಿಂದ, ಅವರಿಗೆ ಸ್ವಾತಂತ್ರ್ಯವಿಲ್ಲ. ಹೀಗಿರುವಲ್ಲಿ ತಂದೆಯ ಅನುಮತಿ ಇಲ್ಲದೆ ಧರ್ಮಜ್ಞನಾದ ನಿನ್ನನ್ನು ಧರ್ಮವಿರುದ್ಧವಾಗಿ ಹ್ಯಾಗೆ ಮದುವೆಯಾಗಲಿ? ಎಂದು ಹೇಳಿದ ಶಕುಂತಳೆಯನ್ನು ಕುರಿತು ರಾಯನು—ಎಲೈ, ಶಕುಂತಳೆಯೇ, ಈ ಕಾರ್ಯಕ್ಕೆ ನಿನ್ನ ತಂದೆ ಕೋಪಿಸನು. ತನ್ನ ಶರೀರಕ್ಕೆ ತಾನೇ ಬಾಧ್ಯಳಾದ್ದರಿಂದ, ತನ್ನನ್ನು ತಾನೇ ದಾನಾ ಮಾಡುವದು ಧರ್ಮ ವಿಹಿತವು. ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಅಸುರ, ಗಾಂಧರ್ವ, ರಾಕ್ಷಸ, ಪೈಶಾಚಗಳೆಂದು ವಿವಾಹಗಳು ಎಂಟು ತೆರನಾಗಿರುವವು. ಈ ವಿವಾಹಗಳಲ್ಲಿ ಮೊದಲು ಹೇಳಿದ ನಾಲ್ಕು ಬ್ರಾಹ್ಮಣರಿಗೆ ಪ್ರಶಸ್ತವಾಗಿವೆ. ಕ್ಷತ್ರಿಯರಿಗೆ ಮೊದಲು ಹೇಳಿದ ಆರು, ವೈಶ್ಯ ಶೂದ್ರರಿಗೆ ಅಸುರವು ಯುಕ್ತವು. ಬ್ರಾಹ್ಮ ದೈವ ಆರ್ಷ ಪ್ರಾಜಾಪತ್ಯಗಳೆಂಬ ಬ್ರಾಹ್ಮರಿಗೆ ಉಚಿತವಾದ ನಾಲ್ಕು ವಿವಾಹಗಳೊಳಗೆ ಯಾವದಾದರೂ ಒಂದು, ಗಾಂಧರ್ವ ರಾಕ್ಷಸ ವಿವಾಹಗಳೆರಡು, ಅಂತೂ ಈ ಆರು ವಿವಾಹಗಳು ಕ್ಷತ್ರಿಯರಿಗೆ ಯೋಗ್ಯವಾಗಿರುವವು. ಒಂದು

ವೇಳೆ ಕ್ಷತ್ರಿಯನು ರಾಕ್ಷಸ ವಿವಾಹವನ್ನು ಸಹಾ ಮಾಡಿ ಕೊಳ್ಳ ಬಹುದೆಂದು, ಸ್ವಾಯಂಭೂ ಎಂಬ ಮನುವು ಹೇಳಿದ್ದಾನೆ. ಆದ್ದರಿಂದ ನಿನ್ನಲ್ಲೇ ತಗಲಿರುವ ನನ್ನನ್ನು ಗಾಂಧರ್ವ ವಿವಾಹದಿಂದ ಮದುವೆಯಾಗು, ಎನಲು; ಆ ಶಕುಂತಳೆಯು—ಎಲೈ, ರಾಯನೇ, ತಂದೆಯ ಅಪ್ಪಣೆ ಇಲ್ಲದೆ ಮದುವೆಯಾಗುವದು ಧರ್ಮವಿರುದ್ಧವಲ್ಲವೆಂದು ನಿನಗೆ ತೋರಿದರೆ, ನಾನೊಂದು ಸಂಕೇತವನ್ನು ಮಾಡುತ್ತೇನೆ; ಏನಂದರೆ, ನಿನ್ನ ರಾಜ್ಯಾಭಿಷೇಕವನ್ನು ನನ್ನ ಹೊಟ್ಟೆಯಲ್ಲಿ ಹುಟ್ಟುವ ಮಗನಿಗೆ ನೀನು ಮಾಡ ಬೇಕು. ಇದು ನಿನಗೆ ಸಮ್ಮತಿಯಾದರೆ, ನೀನು ಹೇಳಿದ ಹಾಗಾಗ ಬಹುದು, ಎನಲು; ರಾಯನು—ಹಾಗೆ ಆಗಲೆಂದು ಪ್ರತಿಜ್ಞೆಯನ್ನು ಮಾಡಿ ಕೊಟ್ಟು, ಅವಳು ಕೋರಿದ ಮೇರೆಗೆ ತನ್ನ ಪುರೋಹಿತನನ್ನು ಕರಿಸಿ, ಸಾಂಗವಾಗಿ ಗಾಂಧರ್ವ ವಿವಾಹದಿಂದ ಆ ಶಕುಂತಳೆಯನ್ನು ವರಿಸಿ, ಅವಳೊಡನೆ ಅಭೀಷ್ಟ ಭೋಗಗಳನ್ನು ಪಡೆದು, ತಿರಿಗಿ ತನ್ನ ಪಟ್ಣಕ್ಕೆ ಹೋಗ ಬೇಕೆಂದು ಆಲೋಚಿಸಿ, ಆ ಶಕುಂತಳೆಯನ್ನು ಕುರಿತು—ಎಲೈ, ಪ್ರಿಯಳೇ, ನಾನು ಪಟ್ಣಕ್ಕೆ ಹೋಗಿ, ಆನೆ, ಕುದುರೆ, ರಥ, ಪದಾತಿಗಳನ್ನೂ, ನನ್ನ ಬಿರುದಾವಳಿಗಳನ್ನೂ, ಓಲಗ, ತಮಟೆ, ಭೇರಿ, ಮೃದಂಗ, ಕಹಳೆ ಇವೇ ಮೊದಲಾದ ವಾದ್ಯಗಳನ್ನೂ, ಗಾಯಕ ನರ್ತಕಿಯರನ್ನೂ, ದಾಸ ದಾಸೀ ಜನರನ್ನೂ, ಆಂದೋಳಿಕಗಳನ್ನೂ, ಇವೇ ಮುಂತಾದ ಸಂಭ್ರಮದೊಡನೆ ನಿನ್ನನ್ನು ಕರೇ ಕಳುಹಿಸಿ ಕೊಳ್ಳುತ್ತೇನೆ; ಅಷ್ಟು ಪರ್ಯಂತರವೂ ನೀನು ಈ ವನದಲ್ಲೇ ಇರು. ಸತ್ಯವಾಗಿ ಹೇಳುತ್ತೇನೆ; ಸಂಶಯ ಪಡ ಬೇಡ, ಎನಲು; ಶಕುಂತಳೆಯು ಆತನನ್ನು ಪ್ರೇಮದಿಂದ ತಬ್ಬಿ ಕೊಂಡು, ಆತನಿಗೆ ಪ್ರದಕ್ಷಿಣವನ್ನು ಮಾಡಿ, ಮುಗುಳುನಗೆಯಿಂದ ಮುಖವು ಪ್ರಕಾಶಿಸುವ ಹಾಗೆ ಎದುರಾಗಿ ನಿಂತು, ಮುಖವನ್ನು ನೋಡಿ, ಪಾದಗಳಿಗೆ ಅಡ್ಡ ಬಿದ್ದು, ಎದ್ದು, ಕಣ್ಣೀರು ತುಂಬಿ ನಿಲ್ಲಲು; ಆ ದುಶ್ಯಂತರಾಯನು ತಬ್ಬಿ ಕೊಂಡು, ಗಲ್ಲವನ್ನು ಹಿಡಿದು—ಇಷ್ಟು ಯಾತಕ್ಕೆ ಮನಸ್ಸಿನಲ್ಲಿ ಚಿಂತಿಸ ಬೇಕು? ನನ್ನ ಪುಣ್ಯ ಸಾಕ್ಷಿಯಾಗಿ ನಿನ್ನನ್ನು ಪಟ್ಣಕ್ಕೆ ಕರಿಸುತ್ತೇನೆ ಎಂದು ಸಂತೈಸಿ, ಅವಳನ್ನು ಅಲ್ಲೇ ಇರಿಸಿ,—ಉಗ್ರ ತಪಸ್ವಿಯಾದ ಕಣ್ವ ಮಹಾ ಮುನೀಶ್ವರನು ಈ ವೃತ್ತಾಂತವನ್ನು ಕೇಳಿ ಏನು ಮಾಡುವನೋ, ಎಂದು ಚಿಂತಿಸುತ್ತಾ, ಪಟ್ಣಕ್ಕೆ ಹೋದನು.

ಬಳಿಕ ಶಕುಂತಳೆಯು—ದುಶ್ಯಂತ ಮಹಾ ರಾಯನು ತಾನು ಹೇಳಿದ ಪ್ರಕಾರಕ್ಕೆ ಚತುರಂಗ ಬಲ ಸಮೇತನಾಗಿ—ಬ್ರಾಹ್ಮಣರನ್ನೂ ಸ್ತ್ರೀಜನರನ್ನೂ

ಕೂಡಿ ಕೊಂಡು, ಈ ಹೊತ್ತು ನಾಳೆ ನಾಳಿದ್ದು ಯಾವಾಗಲಾದರೂ ಅವಶ್ಯವು ಬರುವನು ಎಂದು, ಎದುರಾಗಿ ದಾರೀ ನೋಡುತ್ತಾ, ದಿನ ವರುಷ ಮಾಸ ರುತು ಅಯನಗಳನ್ನು ನೋಡಿ, ಬೇಸರ ಪಟ್ಟು, ಸ್ನಾನ ಭೋಜನ ನಿದ್ರೆಗಳನ್ನು ಬಿಟ್ಟು, ಮೂರು ವರುಷಗಳಾಗಲು; ಅವಳು ದಿವ್ಯ ತೇಜೋವಿರಾಜಮಾನನಾಗಿ, ರೂಪು ಲಾವಣ್ಯಗಳುಳ್ಳ ಮಗನನ್ನು ಪಡೆದಳು. ಆ ಕುಮಾರನು ಹುಟ್ಟಿದ ಸಮಯದಲ್ಲಿ ಅಂತರಿಕ್ಷದಿಂದ ಪುಷ್ಪ ವೃಷ್ಟಿ ಆಯಿತು. ಅನೇಕ ಪ್ರಕಾರವಾದ ದೇವದುಂದುಭಿಗಳು ಮೊಳಗಿದವು. ಸಕಲ ಲೋಕ ಮನೋಹರವಾಗಿ ಗಂಧರ್ವರು ಗಾನವನ್ನು ಮಾಡಿದರು. ಕಣ್ವ ಋಷೀಶ್ವರನು ಅತಿ ಸಂತೋಷ ಪಟ್ಟು, ಅಲ್ಲಿ ಇರುವ ಮಹಾ ಋಷಿಗಳನ್ನು ಕರಿಸಿ, ಆ ಕುಮಾರಕನಿಗೆ ಜಾತ ಕರ್ಮ ಮೊದಲಾದ ಉತ್ಸವಗಳನ್ನು ಶಾಸ್ತ್ರೋಕ್ತ ಪ್ರಕಾರವಾಗಿ ನೆರವೇರಿಸಿದನು. ಆ ಕುಮಾರಕನು ದೇವ ಕುಮಾರ ಸಮಾನನಾಗಿ ಆ ಆಶ್ರಮದಲ್ಲಿ ದಿನ ದಿನ ಬೆಳೆದು, ಸಮೀಪದಲ್ಲಿ ಜನರನ್ನು ಪೀಡಿಸುತ್ತಲಿರುವ ಸಿಂಹ, ಹುಲಿ, ಕರಡಿ, ಕಾಡು ಹಂದಿ, ಕಾಡ್ಗೋಣ ಮೊದಲಾದ ಕ್ರೂರ ಜಂತುಗಳನ್ನು ತನ್ನ ಭುಜಬಲದಿಂದ ಹಿಡಿದು, ಕಟ್ಟಿ ಹಾಕಿ, ಏರಿ, ಓಡಿಸುತ್ತಾ, ಆಶ್ರಮಕ್ಕೆ ಉಪದ್ರವನ್ನು ಮಾಡುತ್ತಲಿರುವ ಪಿಶಾಚ ಸಮೂಹಗಳನ್ನೂ ರಾಕ್ಷಸರನ್ನೂ ತನ್ನ ಮುಷ್ಟಿಯ ಪೆಟ್ಟಿನಿಂದ ಕೆಡಹಿ, ಆಶ್ರಮವನ್ನು ನಿಷ್ಕಂಟಕವಾಗಿ ಮಾಡಿದ್ದರಿಂದ, ಕಣ್ವ ಮೊದಲಾದ ಋಷಿಗಳು ಆತನಿಗೆ ಸರ್ವದಮನನೆಂದು ಹೆಸರಿಕ್ಕಿದರು.

ಆ ಬಳಿಕ ದುಶ್ಯಂತನು, ತಾನು ಮಾಡಿದ ಕಾರ್ಯಕ್ಕೆ ಕಣ್ವ ಮುನೀಶ್ವರನು ಕೋಪಿಸಿ ಕೊಂಡು, ಶಪಿಸುವನೆಂದು ಎಣಿಸಿ, ಶಕುಂತಳೆಯಲ್ಲಿ ಅನುರಾಗ ವಿದ್ದರೂ, ತನ್ನ ಪಟ್ಟಣಕ್ಕೆ ಕರಿಸುವದಕ್ಕೆ ಭಯ ಪಟ್ಟಿದ್ದನು. ಆ ಬಳಿಕ ಕೆಲವು ಕಾಲವಾಗಲು; ಬಹುಕಾರ್ಯಾಸಕ್ತನಾದ್ದರಿಂದ ಆ ವೃತ್ತಾಂತವನ್ನು ಮರೆತು, ರಾಜ್ಯವನ್ನಾಳುತ್ತಿದ್ದನು.

ಇತ್ತಲು ಶಕುಂತಳೆಯು, ತನ್ನ ಗಂಡನಾದ ದುಶ್ಯಂತ ರಾಯನು ಮಗನು ಸಹಿತವಾಗಿ ತನ್ನನ್ನು ಕರಿಸಿ ಕೊಳ್ಳದೆ ಇರುವದರಿಂದ, ವಿರಹವೇದನೆಯಿಂದ ಬಿಳುಪೇರಿದ ಶರೀರವುಳ್ಳವಳಾಗಿ, ಹಣೆಯಲ್ಲಿ ಜೋಲುತ್ತಿರುವ ಮುಂಗುರುಳುಗಳುಳ್ಳವಳಾಗಿ, ದಿನ ದಿನಕ್ಕೆ ಕೃಶವಾಗಿ, ಮಲಿನವಾದ ವಸ್ತ್ರಗಳನ್ನು ಧರಿಸಿ, ಮುಖ ಕಾಂತಿ ತಪ್ಪಿ, ದೈನ್ಯ ಹೆಚ್ಚಿ, ಚಿಂತಿಸುತ್ತಿರಲು; ಆ ಸರ್ವದಮನನು ಹನ್ನೆರಡು ವರುಷದ ಪ್ರಾಯದವನಾಗಿ, ಮಾನುಷ ಚರಿತ್ರೆಯನ್ನು ಅತಿಕ್ರಮಿಸಿ,

ಯುವ ರಾಜ ಪಟ್ಟಕ್ಕೆ ಯೋಗ್ಯನಾಗಿರುವದನ್ನು ಕಂಡು, ಕಣ್ವ ಮುನೀಶ್ವರನು ಶಕುಂತಳೆಯನ್ನು ನೋಡಿ—ಕೇಳೈ, ಶಕುಂತಳೆಯೇ, ನಿನ್ನ ಗಂಡನಾದ ದುಶ್ಯಂತರಾಯನ ಸಮೀಪಕ್ಕೆ ಹೋಗಿ, ಆತನನ್ನು ಪೂಜಿಸುವದೇ ನಿನಗೆ ಉಚಿತವು. ಆತನು ಇಷ್ಟೊತ್ತಿಗೆ ನಿನ್ನನ್ನು ಕರಿಸಲಿಲ್ಲವೆಂದು ಮನಸ್ಸಿನಲ್ಲಿ ಎಣಿಸ ಬೇಡ. ಆತನು ನಿನ್ನಿಂದ ಸಂತೋಷ ಪಟ್ಟು, ನಿನ್ನ ಮಗನಿಗೆ ಯುವ ರಾಜ್ಯವನ್ನು ಕೊಡುತ್ತಾನೆ. ಈ ಮಗನನ್ನು ಕರ ಕೊಂಡು, ಗಂಡನ ಸಮೀಪಕ್ಕೆ ಹೋಗು ಎಂಧೇಳಿ, ತನ್ನ ಶಿಷ್ಯರನ್ನು ಕರೆದು—ಸರ್ವ ಲಕ್ಷಣೆಯಾದ ಈ ಶಕುಂತಳೆಯನ್ನು ಮಗನೊಡನೆ ಆ ರಾಯನ ಪಟ್ಣಕ್ಕೆ ಕರ ಕೊಂಡು ಹೋಗಿ, ಬಿಟ್ಟು ಬಿಡಿ; ಸ್ತ್ರೀಯರು ಬಹು ಕಾಲ ತಂದೆಯ ಮನೆಯಲ್ಲಿ ಇದ್ದರೆ, ಕೀರ್ತಿ ಚರಿತ್ರ ಧರ್ಮಗಳು ತಪ್ಪುವದರಿಂದ, ತಡವು ಮಾಡದೆ, ಕರ ಕೊಂಡು ಹೋಗಿ, ಎನಲು; ಶಕುಂತಳೆಯು ತಂದೆಯಾದ ಕಣ್ವ ಮುನೀಶ್ವರನಿಗೆ ನಮಸ್ಕಾರವನ್ನು ಮಾಡಿ, ಕೈ ಮುಗಿದು—ಎಲೈ, ಮಹಾನುಭಾವನೇ, ತಂದೆ ಎಂಬ ಸಲಿಗೆಯಿಂದ ಕಲಿತು ಕಲಿಯದೆ ಮಾಡಿದ ಕಾರ್ಯಗಳನ್ನೂ, ಅರಿತು ಅರಿಯದೆ ಆಡಿದ ಮಾತುಗಳನ್ನೂ ನನ್ನಲ್ಲಿ ಪುತ್ರ ವಾತ್ಸಲ್ಯದಿಂದ ಕ್ಷಮಿಸ ಬೇಕೆನಲು; ಆ ಮಗಳಲ್ಲಿರುವ ಕೃಪಾವಿಶೇಷದಿಂದ ಬದಲು ಮಾತನಾಡುವದಕ್ಕೆ ತೀರದೆ, ತಲೆಯನ್ನು ಬೊಗ್ಗಿಸಿ ಕೊಂಡು, ಲೌಕಿಕ ಮನುಷ್ಯನ ಹಾಗೆ ಕಣ್ಣೀರು ತುಂಬಿ, ಕೆಲವು ಹೊತ್ತಿನ ಮೇಲೆ ಧೈರ್ಯವನ್ನು ತಂದು ಕೊಂಡು, ಉದಕಪಾನಗಳಿಂದ ದಿನಗಳನ್ನು ತಳ್ಳುತ್ತಲಿರುವವರು—ವಾಯು ಭಕ್ಷಣೆಯಿಂದ ಕೆಲವು ದಿವಸಗಳು ಕಾಲಕ್ಷೇಪವನ್ನು ಮಾಡುವಂಥಾವರು—ಹಣ್ಣೆಲೆಗಳನ್ನು ಭಕ್ಷಿಸುವಂಥಾವರು—ಕಂದ ಮೂಲಗಳಿಂದ ತೃಪ್ತಿ ಆಗುವಂಥಾವರು—ನಾರು ಶೀರೆಗಳನ್ನು ಉಟ್ಟು, ಕೃಷ್ಣಾಜಿನವನ್ನು ಉತ್ತರೀಯವಾಗಿ ಮಾಡಿ ಕೊಂಡಿರುವಂಥಾವರು—ತಪಸ್ಸಿನಿಂದ ಕೃಶವಾಗಿ, ನರಗಳು ಹೊರಟು ಇರುವಂಥಾವರು—ವ್ರತನಿಷ್ಠರಾಗಿರುವಂಥಾವರು—ಜಟಾಧಾರಿಗಳಾಗಿರುವಂಥಾವರು—ಜುಟ್ಟಿಲ್ಲದೆ ಇರುವಂಥಾವರು—ಇವರು ಮೊದಲಾದ ಮಹಾ ಮುನೀಶ್ವರರನ್ನು ಕರೆದು—ಎಲೈ, ಮಹಾನುಭಾವರುಗಳಿರಾ, ನಮ್ಮ ಶಕುಂತಳೆಯು ಇಲ್ಲೇ ಹುಟ್ಟಿ, ಇಲ್ಲೇ ಬೆಳೆದು, ಯಾವಾಗಲೂ ನಾನೇ ಸಂರಕ್ಷಿಸಿದ್ದರಿಂದ ಮತ್ತೊಂದೇನೂ ಅರಿತವಳಲ್ಲದೆ ಇರುವದರಿಂದ, ಮಾರ್ಗದಲ್ಲಿ ಶ್ರಮವು ತೋರದೆ ಇರುವ ಹಾಗೆ, ಇಲ್ಲಿಗೆ ಎರಡು ಗಾವುದ ದಾರಿಯಿಂದ ಆಚೆಗೆ ಇರುವ ಪ್ರತಿಷ್ಠಾ ನಗರಕ್ಕೆ ಚಿಕ್ಕ ಚಿಕ್ಕ ಪಯಣಗಳಿಂದ ಕರ ಕೊಂಡು ಹೋಗ ಬೇಕು. ನೀರು ನೆಳಲು ಉಳ್ಳಂಥ, ಧನ ಧಾ

ನ್ಯಗಳಿಂದ ತುಂಬಿರುವ, ಗಂಗಾ ಯಮುನಾ ಸಂಗಮದಲ್ಲಿ ತೋರುವ ಪ್ರತಿಷ್ಠಾ ಪಟ್ಟಣದಲ್ಲಿ ಸರ್ವದಮನನಿಗೆ ಮುತ್ತಪ್ಪನಾದ ಪುರೂರವನ ಅರಮನೆಯ ಪರ್ಯಂತರಕ್ಕೂ ಹೋಗಿ, ಅಲ್ಲಿ ಸ್ನಾನವನ್ನು ಮಾಡಿ, ಮಂಗಳಗಳಾಚರಿಸಿ, ಕಂದ ಮೂಲ ಫಲಗಳನ್ನು ಭಕ್ಷಿಸಿ, ಅಲ್ಲಿಂದ ಹೊರಟು ಬನ್ನಿ. ಚುರುಕಾಗಿ ಪಯಣವನ್ನು ನಡೆಯ ಬೇಡಿ; ಮಾರ್ಗದಲ್ಲಿ ಶ್ರಮ ತಟ್ಟೀತು, ಎಂದು ನುಡಿಯಲು; ಆ ಋಷಿಗಳು, ಹಾಗೆ ಆಗಲಿ ಎಂದು, ಶಕುಂತಳೆಯನ್ನು ಮಗನು ಸಹಿತವಾಗಿ ಕರ ಕೊಂಡು, ದುಶ್ಯಂತನ ಪಟ್ಟಣವನ್ನು ಕುರಿತು ನಡೆಯುವ ಸಮಯದಲ್ಲಿ ವನಗಳನ್ನೂ ನದಿಗಳನ್ನೂ ಪರ್ವತಗಳನ್ನೂ ತೊರೆಗಳನ್ನೂ ಗುಹೆಗಳನ್ನೂ ಪುಣ್ಯಾಶ್ರಮಗಳನ್ನೂ ನೋಡುತ್ತಾ, ಅಲ್ಲಲ್ಲಿ ನಿಂತು, ಶ್ರಮವನ್ನು ಪರಿಹರಿಸಿ ಕೊಂಡು, ಮೆಲ್ಲ ಮೆಲ್ಲನೆ ಮಧ್ಯಾನ್ಹದ ಸಮಯದಲ್ಲಿ ಪ್ರತಿಷ್ಠಾ ನಗರಕ್ಕೆ ಬಂದು, ಪೂರ್ವದಲ್ಲಿ ದೇವೇಂದ್ರನು ಪುರೂರವ ಮಹಾರಾಯನಿಗೋಸ್ಕರ ನಿರ್ಮಿಸಿದ್ದರಿಂದ, ಸಕಲ ಸೌಭಾಗ್ಯದಿಂದ ಕೂಡಿ, ಅತ್ಯುನ್ನತವಾದ ಅಲಂಗಗಳೂ, ಯಾವಾಗಲೂ ಆಳವು ಕಾಣಿಸದೆ ಇರುವ ಅಗಳುಗಳೂ, ವಿಚಿತ್ರವಾದ ಕೊತ್ತಲಗಳೂ, ಫಿರಂಗಿಗಳೂ, ಬಚ್ಚುಗಳೂ, ಜವರು ಜುಂಗಿಗಳೂ, ಜಂಜಾಲುಗಳೂ, ಮಕರದಿಬ್ಬಿ ಮೊದಲಾದ ಯಂತ್ರ ವಿಶೇಷಗಳೂ, ಉಳ್ಳ ಕೋಟೆಗಳೂ—ಉಪ್ಪರಿಗೆಗಳೂ, ಸೆಜ್ಜೇ ಮನೆಗಳೂ, ಪಣ್ಯ ವೀಧಿಗಳೂ, ಜಗಲಿಗಳೂ, ಹಜಾರಗಳೂ, ಮಂಟಪಗಳೂ, ಅರವಟ್ಟಿಗೆಗಳೂ, ಸಕಲ ಜನ ಮನೋಹರವಾಗಿ ಅತಿ ವಿಶಾಲವಾದ ರಾಜ ಮಾರ್ಗಗಳೂ, ಕೈಲಾಸ ಶಿಖರಗಳೋಪಾದಿಯಲ್ಲಿ ಅತಿ ಶುಭ್ರವಾಗಿ ಅತ್ಯುನ್ನತವಾದ ಪಟ್ಟಣದ ಬಾಗಿಲುಗಳೂ, ಹುಲಿ ಮುಖಗಳೂ, ಮೇಲು ಮಿದ್ದೆಗಳೂ, ಹೆಬ್ಬಾಗಿಲುಗಳೂ ಉಳ್ಳಂಥಾದ್ದಾಗಿ, ಸ್ವರ್ಗದಂತಿರುವ ಪಟ್ಟಣವನ್ನೂ, ಆ ಪಟ್ಟಣದ ಸಮೀಪದಲ್ಲಿರುವ ಉದ್ಯಾನ ವನಗಳನ್ನೂ, ಪದ್ಮಶೋಭಿತಗಳಾದ ತಟಾಕಗಳನ್ನೂ, ತಮ್ಮ ತಮ್ಮ ಧರ್ಮಗಳನ್ನು ತಪ್ಪದೆ ಅಗ್ನಿಹೋತ್ರಗಳನ್ನೂ ಯಾಗಗಳನ್ನೂ ಮಾಡುತ್ತಾ, ಧನ ಧಾನ್ಯ ಸಂಪನ್ನರಾಗಿ—ರತ್ನಾಲಂಕಾರ ಭೂಷಿತರಾಗಿ—ದಾನ ಶೀಲರಾಗಿ—ದಯಾಪರರಾಗಿ—ಅಕಾರ್ಯಕ್ಕೆ ಹೋಗದೆ, ಪಾಪಗಳಿಗೆ ಭಯ ಪಟ್ಟು, ಪುಣ್ಯಲೋಕಗಳು ಬೇಕೆಂಬ ಮನಸ್ಸಿನಿಂದ ಸದಾಚಾರ ಸಂಪನ್ನರಾಗಿರುವ ನಾನಾ ಜನಗಳನ್ನು ಕಾಣುತ್ತಾ, ಸಂತೋಷ ಪಟ್ಟರು.

ಆ ಸಮಯದಲ್ಲಿ ದುಶ್ಯಂತ ಮಹಾರಾಯನು ಇಂದ್ರಲೋಕದಂತಿರುವ ಪ್ರತಿಷ್ಠಾ ನಗರ ಮಧ್ಯ ಪ್ರದೇಶದಲ್ಲಿ ದಿವ್ಯ ರತ್ನಮಯವಾದ ದೇವೇಂದ್ರನ ಮನೆ

ಯ ಹಾಗೆ ಒಪ್ಪುತ್ತಲಿರುವ ಅರಮನೆಯಲ್ಲಿ ಮಣಿಗಣ ಖಚಿತವಾದ ಒಂದು ಓಲಗದ ಹಜಾರದಲ್ಲಿ ಉನ್ನತವಾದ ಸಿಂಹಾಸನದಲ್ಲಿ ಕುಳಿತು ಕೊಂಡು, ಸರ್ವಾಲಂಕಾರ ಭೂಷಿತನಾಗಿ, ಬ್ರಾಹ್ಮಣರು ಮೊದಲಾದ ಸಕಲ ವರ್ಣದವರೂ ಮಂತ್ರಿ ಜನಗಳೂ ಮಿಕ್ಕಾದವರೂ ಓಲಗಿಸಲು; ಸೂತ ಮಾಗಧರು ಜಯ ಜಯ ಧ್ವನಿಗಳಿಂದ ಹೊಗಳಲು; ಕಾರ್ಯಾರ್ಥಿಗಳಾಗಿ ಬಂದ ದೇಶ ದೇಶದ ನಿಯೋಗಿಗಳ ಕಾರ್ಯಗಳನ್ನು ವಿಚಾರಿಸುತ್ತಾ, ಒಡ್ಡೋಲಗದಲ್ಲಿ ಇದ್ದು, ಬೇರೆ ಬೇರೆಯಾಗಿ ಅವರವರು ತಮಗೆ ಅಪ್ಪಣೆಯನ್ನು ತೆಗೆದು ಕೊಂಡು, ಮನೆಗಳಿಗೆ ಹೋಗಲು; ಮಿತ ಜನಗಳೊಡನೆ ಇಷ್ಟಾಲಾಪಗಳನ್ನು ಮಾಡುತ್ತಿದ್ದನು.

ಅತ್ತಲಾ ಮುನೀಂದ್ರರು ಶಕುಂತಳೆಯನ್ನು ನೋಡಿ—ಒಳ್ಳೇ ಶಕುನಗಳು ಆಗುತ್ತವೆ; ಈ ಹೊತ್ತು ನೀನು ಮಹಾರಾಯನಿಗೆ ಪಟ್ಟದ ರಾಣಿಯಾಗುತ್ತೀ; ನಿನ್ನ ಮಗನಿಗೆ ಯುವರಾಜ ಪಟ್ಟಾಭಿಷೇಕವಾಗುತ್ತದೆ ಎಂದು ಹೇಳುತ್ತಾ, ಅವಳನ್ನು ಕರ ಕೊಂಡು, ನಾನಾ ಪ್ರಕಾರವಾದ ಧ್ವನಿಗಳಿಂದ ಒಪ್ಪುತ್ತಿರುವ ಆ ಪಟ್ಣವನ್ನು ಹೊಕ್ಕು ಬರುವ ಸಮಯದಲ್ಲಿ, ಆ ಕುಮಾರನ ರೂಪು ರೇಖಾತಿಶಯಗಳನ್ನು ಕಂಡು, ಪೌರ ಜನರು ಆಶ್ಚರ್ಯ ಪಟ್ಟು, ಒಬ್ಬೊಬ್ಬರನ್ನು ಕರೆಯುತ್ತಾ, ಅವರ ಸಮೀಪಕ್ಕೆ ಬಂದು—ಎರಡನೇ ಮಹಾ ಲಕ್ಷ್ಮಿಯ ಹಾಗೆ ಜಯಂತನು ಸಹಿತವಾಗಿ ಬರುವ ಶಚೀ ದೇವಿಯ ತೆರದಿಂದ ಇವರ ಮುಂದೆ ಬರುವ ಈ ಅಂಗನಾಮಣಿ ಯಾರೋ ತಿಳಿಯದು ಎಂದು, ಮಹಾ ಋಷಿಗಳ ಸಮೀಪಕ್ಕೆ ಬಂದು—ಎಲೈ, ಮಹಾ ಋಷಿಗಳಿರಾ, ನಿಮಗೆ ನಮಸ್ಕಾರ ಮಾಡುತ್ತೇವೆ. ಇಂಥಾ ಪರಮ ಪವಿತ್ರರಾದ ನಿಮ್ಮನ್ನು ಕಂಡದ್ದರಿಂದ ನಮ್ಮ ಜನ್ಮಗಳು ಸಫಲವಾದವು ಎಂದು ಸ್ತುತಿಸಿ, ಅಲ್ಲಿ ಕೆಲವರು ಆ ಋಷಿಗಳ ಸಂಗಡಲೇ ಹೋಗಿ, ಕುಮಾರಸ್ವಾಮಿಯ ಹಾಗೆ ಇರುವ ಆ ಕುಮಾರನನ್ನು ಕಂಡು, ಸಂತೋಷ ಪಟ್ಟರು. ಆ ಸರ್ವದಮನನು ಮೊದಲು ಎಂದೂ ಕಾಣದಿರುವ ಆ ಪಟ್ಣದ ಸೌಭಾಗ್ಯಾತಿಶಯವನ್ನು ನೋಡಿ, ತಾನು ದೇವೇಂದ್ರನ ಪಟ್ಣಕ್ಕೆ ಬಂದೆನೋ ಎಂದು, ಸಂತೋಷ ಪಟ್ಟನು. ಮತ್ತು ಆ ಪಟ್ಣದಲ್ಲಿರುವ ಕೆಲವರು ಮೂಢರು, ಕೃಷ್ಣಾಜಿನಗಳನ್ನು ಧರಿಸಿ, ಹಸಿವು ಬಾಯಾರಿಕೆಗಳಿಂದ ಪೀಡಿತರಾಗಿ, ತಪಸ್ಸಿನಿಂದ ಶರೀರವು ಕೃಶವಾಗಿ, ಕಾಣಿಸುತ್ತಿರುವ ನರಗಳೊಡನೆ ಕೂಡಿರುವ ದೇಹಗಳಲ್ಲಿ ಹೊಂಬಣ್ಣವುಳ್ಳ ನೇತ್ರಗಳನ್ನೂ ಜಡೆಗಳನ್ನೂ ಉದ್ದವಾದ ಹಲ್ಲುಗಳನ್ನೂ ಬೆನ್ನು ಹತ್ತಿರುವ ಹೊಟ್ಟೆಗಳನ್ನೂ ಬಿಟ್ಟ ಮುಂಡೆಗಳನ್ನೂ ಎತ್ತಿದ ಕೈಗಳನ್ನೂ ಧರಿಸಿ, ವಿಕಾರವಾದ ವೇಷಗಳೊಡನೆ ಕೂಡಿ ಇ

ರುವ ಆ ಮುನೀಶ್ವರರನ್ನು ಕಂಡು—ಸಾಯಂಕಾಲವಾಗದೆ ಪಿಶಾಚಗಳು ಪಟ್ಣಕ್ಕೆ ಬಂದವು, ಕಂಡಿರೇ? ಎಂದು ಹಾಸ್ಯ ಮಾಡಿದರು. ಅಂಥಾ ದುರ್ಜನರ ಮಾತುಗಳನ್ನು ಕೇಳಿ, ಮುನಿಜನಗಳು—ಸಕಲವನ್ನು ಬಿಟ್ಟ ನಾವು ಯಾತಕ್ಕೆ ಪಟ್ಣಕ್ಕೆ ಹೋಗ ಬೇಕು? ಎಂದು ಹೇಳಿ, ಪಟ್ಣವನ್ನು ಪ್ರವೇಶಿಸದೆ, ಗಂಗಾ ಯಮುನಾ ಸಂಗಮ ಸ್ಥಳಕ್ಕೆ ತಿರಿಗಿ ಬಂದರು.

ಆ ಮೇಲೆ ಶಕುಂತಳೆಯು, ಮಗನು ಸಹಿತವಾಗಿ, ಪಟ್ಣದ ಬೀದಿಯಲ್ಲಿ ಹೋಗುತ್ತಿರುವಾಗ, ಆ ಪಟ್ಣದ ಜನಗಳು ಅವರನ್ನು ಕಂಡು—ಈ ಸ್ತ್ರೀ ರತ್ನವು ಯಾರೋ, ತಿಳಿಯ ಕೂಡದು. ಹಂಸೆಯ ಹಾಗೆ ನಡೆಯೂ, ಕೋಗಿಲೆಯ ಹಾಗೆ ಧ್ವನಿಯೂ, ಚಂದ್ರನ ಹಾಗೆ ಮುಖವೂ, ಮಹಾ ಲಕ್ಷ್ಮಿಗೆ ಸಮಾನವಾದ ಶರೀರ ಕಾಂತಿಯೂ, ಮೊಲ್ಲೇ ಮೊಗ್ಗಿಗೆ ಸಮಾನವಾದ ಮುಗುಳು ನಗೆಯ ಕಾಂತಿಯೂ, ತಾವರೇ ಹೂವಿನ ಒಳಗಿರುವ ಎಸಳುಗಳ ಹಾಗೆ ಮೃದುವಾಗಿರುವ ಚರ್ಮವೂ, ಕಮಲ ದಳದ ಹಾಗೆ ಇರುವ ನೇತ್ರಗಳೂ, ಪುಟಕ್ಕೆ ಹಾಕಿದ ಕುಂದಣದ ಹಾಗಿರುವ ಶರೀರದ ಹೊಂಬಣ್ಣವೂ, ಹಿಡಿಯಲ್ಲಿ ಅಡಕವಾಗುವ ನಡುವೂ, ವಕ್ರವಾಗಿ ಕಪ್ಪಾಗಿ ಹಿಮ್ಮಡಿಯಲ್ಲಿ ಬೀಳುವ ಕುರುಳುಗಳೂ, ಚಿಗುರಿನ ಹಾಗೆ ಮೃದುವಾದ ಪಾದಗಳೂ, ಇವು ಮೊದಲಾದ ಸಕಲ ಶರೀರ ಲಕ್ಷಣಗಳುಳ್ಳವಳಾಗಿ, ಕೈಯಲ್ಲಿ ಕಮಲ ಮಾತ್ರವಿಲ್ಲದೆ ಇರುವ ಮಹಾ ಲಕ್ಷ್ಮಿಯ ಹಾಗೆ ತೋರುವಂಥವಳಾಗಿ, ಸ್ವರ್ಗವನ್ನು ಬಿಟ್ಟು ಏನೋ ಒಂದು ಕಾರಣದಿಂದ ಭೂಲೋಕಕ್ಕೆ ಬಂದ ದೇವ ಕನ್ನಿಕೆಯಾಗಿರ ಬೇಕೆಂದು ಎಣಿಸಿ, ಒಬ್ಬೊಬ್ಬರು ಹೇಳಿ ಕೊಂಡರು. ಮತ್ತು ಆ ಕುಮಾರನನ್ನು ಕಂಡು, ಸಿಂಹದ ಹಾಗೆ ಸೊಂಟವೂ, ಕೋರೆ ಹಲ್ಲುಗಳೂ, ಮುಡುಹುಗಳೂ, ಎದೆಯೂ, ಬಲವೂ, ಗಮನವೂ ಉಳ್ಳ—ಸ್ವಭಾವ ರಕ್ತವಾದ ಚೆಂದುಟಿಯೂ, ದುಂದುಭಿ ಧ್ವನಿಯಂತೆ ಧ್ವನಿಯೂ, ಇವೇ ಮೊದಲಾದ ರಾಜ ಲಕ್ಷಣಗಳುಳ್ಳ ಈ ಕುಮಾರಕನಲ್ಲಿ ರಾಜ ಲಕ್ಷ್ಮಿಯು ತೋರುತ್ತಲಿದೆ. ಈ ಬಾಲಕನು ರೂಪು ಆಕಾರ ಶರೀರ ಕಾಂತಿ ವಿಶೇಷಗಳಿಂದ ತಮ್ಮ ದುಶ್ಯಂತ ರಾಯನನ್ನು ಹೋಲುತ್ತಿದ್ದಾನೆ. ಈತನು ಯಾರ ಕುಮಾರನೋ? ಎಂದು ತಮ್ಮೊಳಗೆ ಹೇಳಿ ಕೊಳ್ಳುತ್ತಿದ್ದರು.

ಹೀಗೆ ಪ್ರೇಮದಿಂದ ನುಡಿಯುವ ಪಟ್ಣದ ಜನರ ಪ್ರಿಯ ವಾಕ್ಯಗಳನ್ನು ಕೇಳುತ್ತ, ಶಕುಂತಳೆಯು ಪುತ್ರ ಸಮೇತಳಾಗಿ ಅರಮನೆಯ ಬಾಗಿಲೆಡೆಗೆ ಹೋಗಿ, ಕಾರ್ಯ ಗೌರವದಿಂದ ಮನಸ್ಸಿನಲ್ಲಿ ಚಿಂತೆ ಹೆಚ್ಚಲು; ನಾಚಿಕೆಯಿಂದ

ಮುಖವನ್ನು ಬೊಗ್ಗಿಸಿ ಕೊಂಡು, ತಾನು ದಯೆ ಇಲ್ಲದ ಅರಸಿನ ಬಳಿಗೆ
ಹೋಗಿ, ನಿರ್ನಿಮಿತ್ತವಾಗಿ ಏನು ಹೇಳ ಬೇಕೆಂದು ಚಿಂತಿಸುತ್ತಾ, ಹಜಾರದ
ಲ್ಲಿ ನಿಂತು, ತಾನು ಬಂದಿರುವದನ್ನು ಅರಿಕೆ ಮಾಡಿಸಿ, ಅರಸಿನ ಅಪ್ಪಣೆಯಿಂ
ದ ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ ಕುಮಾರನೊಡನೆ ಅರಸನ ಸನ್ನಿ
ಧಿಗೆ ಹೋಗಿ, ಎರಡನೇ ದೇವೇಂದ್ರನೋಪಾದಿಯಲ್ಲಿ ಸಿಂಹಾಸನದ ಮೇಲೆ
ಕುಳಿತಿರುವ ರಾಯನನ್ನು ಕಂಡು, ಇಷ್ಟು ಕಾಲಕ್ಕೆ ಈ ರಾಯನ ದರ್ಶನ
ವಾಯಿತು ಎಂದು ಸಂತೋಷ ಪಡುತ್ತಾ, ತನ್ನ ಮಗನನ್ನು ಕುರಿತು—ಎಲೈ,
ದೃಢವ್ರತನಾದ ನಿನ್ನ ತಂದೆಗೆ ನಮುಸ್ಕರಿಸು ಎಂದು ಕಟ್ಟು ಮಾಡಿ, ನಾಚಿಕೆ
ಯಿಂದ ತಲೆಯನ್ನು ಬೊಗ್ಗಿಸಿ ಕೊಂಡು, ಒಂದು ಕಂಭದ ಮರೆಯಲ್ಲಿ ನಿಂ
ತಿರಲು; ಆ ಬಾಲಕನು ತನ್ನ ತಂದೆಯಾದ ಮಹಾ ರಾಯನಿಗೆ ನಮಸ್ಕಾರ
ವನ್ನು ಮಾಡಿ, ಕೈ ಕಟ್ಟಿ ಕೊಂಡು ನಿಂತಿರಲು; ದುಶ್ಯಂತ ರಾಯನು ಶಕುಂ
ತಳೆಯನ್ನು ನೋಡಿ—ಮಗನೊಡನೆ ನೀನು ಇಲ್ಲಿಗೆ ಬಂದ ಕಾರ್ಯವೇನು?
ಹೇಳಿದರೆ, ಆ ಕಾರ್ಯವನ್ನು ನಾನು ಮಾಡಿ ಕೊಟ್ಟೇನು, ಎನಲು; ಶಕುಂತ
ಳೆಯು—ಎಲೈ, ಮಹಾರಾಯನೇ, ಪೂರ್ವದಲ್ಲಿ ನೀನು ಬೇಟೇ ವಿನೋದದಿಂದ
ವನದಲ್ಲಿ ತಿರುಗುತ್ತಾ, ಕಣ್ವಾಶ್ರಮಕ್ಕೆ ಬಂದ ಸಮಯದಲ್ಲಿ ತನ್ನಲ್ಲಿ ಅನು
ಗ್ರಹದಿಂದ ಮದುವೆ ಮಾಡಿ ಕೊಳ್ಳುವಾಗ ಏನು ಸಂಕೇತವನ್ನು ಮಾಡಿ
ದ್ದಿಯೋ, ಆ ಪ್ರತಿಜ್ಞೆಯನ್ನು ಸ್ಮರಿಸಿ, ಈ ಪ್ರಕಾರ ಮಾಡು. ಈತನು ನಿ
ನ್ನಿಂದ ನನ್ನಲ್ಲಿ ಆದ ಮಗನು. ಈತನಿಗೆ ಯುವರಾಜ ಪಟ್ಟವನ್ನು ಕಟ್ಟ
ಬೇಕೆನಲು; ದುಶ್ಯಂತನು ಆ ಮಾತನ್ನು ಕೇಳಿ, ಸಂತೋಷ ಪಟ್ಟರೂ, ತಾ
ನು ಅರಿಯದವನ ಹಾಗೆ ಶಕುಂತಳೆಯನ್ನು ನೋಡಿ—ನಾನು ನಿನ್ನನ್ನು ಎಂ
ದೂ ನೋಡಲಿಲ್ಲ, ಮದುವೆಯಾಗಲೂ ಇಲ್ಲ. ಹೀಗೆ ಧರ್ಮವನ್ನು ತಪ್ಪಿ, ಪರಿ
ಗ್ರಹಿಸುವಂಥವನಲ್ಲ. ಇಂಥಾ ವ್ಯರ್ಥವಾದ ಮಾತುಗಳನ್ನು ನುಡಿಯ ಬೇಡ.
ಸುಮ್ಮನೇ ಇರ ಬೇಕಾದರೆ, ಇರು; ಹೋಗ ಬೇಕಾದರೆ, ಹೋಗು, ಎನಲು;
ಶಕುಂತಳೆಯು ಆ ರಾಯನ ಮಾತುಗಳನ್ನು ಕೇಳಿ, ಅಧಿಕವಾದ ಲಜ್ಜೆಯಿಂ
ದಲೂ, ದುಃಖದಿಂದಲೂ ಒಂದು ಘಳಿಗೆ ಮೈಮರದು, ತಿರಿಗಿ ಧೈರ್ಯ ಹಿಡಿದು,
ಶ್ಲ ಕೋಪಾವೇಷ್ಟದಿಂದ ಕೆಂಪಾದ ಕಣ್ಣುಗಳುಳ್ಳವಳಾಗಿ, ತುಟಗಳನ್ನಲ್ಲಾಡಿಸು
ತ್ತಾ, ಆ ರಾಯನನ್ನು ವಕ್ರ ದೃಷ್ಟಿಗಳಿಂದ ಬಿರ ಬಿರನೆ ನೋಡುತ್ತಾ, ಕೋ
ಪದಿಂದ ಹುಟ್ಟಿರುವ ತೇಜೋ ವಿಶೇಷವನ್ನು ತನ್ನ ಧೈರ್ಯದಿಂದ ತಡೆದು, ಘ
ಳಿಗೆ ಮಾತ್ರ ಆಲೋಚಿಸಿ, ತಿರಿಗಿ ರಾಯನನ್ನು ನೋಡಿ—ಎಲೈ, ರಾಯನೇ,

ನೀನು ತಿಳಿದರೂ ತಿಳಿಯದವನ ಹಾಗೆ ಯಾಕೆ ಹೀಗೆ ಮಾತಾಡುತ್ತಿದ್ದೀ? ಇದಕ್ಕೆ ಸಾಕ್ಷಿಯಾದ ನಿನ್ನ ಮನಸ್ಸನ್ನು ಯಾಕೆ ತಿರಸ್ಕರಿಸುತ್ತೀ? ಸಕಲ ಧರ್ಮಗಳನ್ನು ತಿಳಿದಿರುವಂಥಾ ನೀನು ಯಾತಕ್ಕೆ ಮೊದಲು ಹೇಳಿ, ಈಗ ಸಟೆ ಆಡುತ್ತೀ? ಮತ್ತು ಪತಿವ್ರತೆಯಾದ ನನ್ನನ್ನು—ಕಾಮುಕಿಯಾಗಿ ತನಗೆ ತಾನೇ ಬಯಸಿ ಬಂದಳು ಎಂದು ಉಪೇಕ್ಷೆ ಮಾಡ ಬೇಡ. ಬಹುಮಾನ ಪೂರ್ವಕವಾಗಿ ರಕ್ಷಿಸ ತಕ್ಕಂಥಾ ನನ್ನನ್ನು ಬಹುಮಾನವನ್ನು ಮಾಡದೆ, ಉಪೇಕ್ಷೆಯನ್ನು ಮಾಡಲಾಗದು. ನೀನು ತುಚ್ಛ ಮನುಷ್ಯನ ಹಾಗೆ ಈ ತುಂಬಿದ ಸಭೆಯಲ್ಲಿ ಇಂಥಾ ನೀಚ ಮಾತುಗಳನ್ನು ಆಡುವದು ಉಚಿತವಲ್ಲ. ವಿವೇಕಿಗಳಾದ ಮನುಷ್ಯರು, ಕೋಪ ಬಂದರೂ, ತಮ್ಮ ಹೆಂಡತಿಗಳನ್ನು ಧಿಕ್ಕರಿಸಬಾರದು. ತಮ್ಮ ಹೆಂಡತಿಗಳನ್ನೂ ಮಕ್ಕಳನ್ನೂ ತಬ್ಬಿ ಕೊಂಡು, ಅತ್ಯಂತ ಸಂತೋಷ ಪಡ ಬೇಕು. ಎಂಥಾವರಾಗಲಿ, ಮಹಾ ಬ್ರಹ್ಮಜ್ಞಾನಿಗಳಾದರೂ, ಸ್ತ್ರೀಯರಲ್ಲಿಯೇ ಹುಟ್ಟ ಬೇಕು. ಆದ್ದರಿಂದ ಸ್ತ್ರೀಯರು ಪ್ರಸಿದ್ಧರಾಗಿರುವರು. ಲೋಕದಲ್ಲಿ ಮಗನಾಗಿರುವವನು ಧೂಳಿಗಳಲ್ಲಿ ಓಡ್ಯಾಡಿ, ಮುದ್ದು ಮುದ್ದಾಗಿ ಬಂದು, ತಂದೆಯ ಶರೀರವನ್ನು ತಬ್ಬಿ ಕೊಂಡರೆ, ಅದರಿಂದ ಬಂದ ಸುಖಕ್ಕೆ ಸ್ವರ್ಗ ಲೋಕದ ಸುಖವಾದರೂ ಸಮಾನವಾಗಲಾರದು. ಹಾಗೆ ಇರುವಲ್ಲಿ ನಿನ್ನಂಥಾ ಮಹಾ ಪುರುಷನು ತಂದೆ ಎಂದು ನೆರೆ ನಂಬಿ, ತನಗೆ ತಾನೇ ಬಂದ ದಿವ್ಯ ಕುಮಾರಕನನ್ನು ಆದರಿಸದೆ ಇರ ಬಹುದೇ? ಇರುವೆ ಮೊದಲಾದ ತಿರ್ಯಗ್ಜಾತಿ ಜಂತುಗಳು ತಮ್ಮ ತಮ್ಮ ಮೊಟ್ಟೆಗಳನ್ನು ಬಿಡದೆ ರಕ್ಷಿಸುತ್ತವೆ. ಕಾಗೆಗಳು ಕೋಗಿಲೆಯ ಮೊಟ್ಟೆಗಳನ್ನು ತಮ್ಮ ಮೊಟ್ಟೆಗಳೆಂದು ಪ್ರೀತಿಯಿಂದ ಕಾಪಾಡುತ್ತವೆ. ಹೀಗಿರುವಲ್ಲಿ ನಿನ್ನಂಥಾ ಪುರುಷನು ಹೊಟ್ಟೆಯಲ್ಲಿ ಹುಟ್ಟಿ, ಸರ್ವಜ್ಞನಾಗಿರುವ ಪುತ್ರ ರತ್ನವನ್ನು ಉಪೇಕ್ಷೆ ಮಾಡ ಬಹುದೇ? ಇದಲ್ಲದೆ ನೀನು ಮದುವೆಯಾದ ನನ್ನಲ್ಲಿ ಏನು ಅಪರಾಧ ಕಂಡು ಬಿಡುತ್ತಿದ್ದೀ? ಚಿಕ್ಕವಳಾಗಿರುವಾಗ ತಾಯಿ ತಂದೆಗಳನ್ನು ತೊರೆದು ಬಂದೆನು. ಈಗ ನೀನು ತೊರೆದರೆ, ನನಗೆ ಗತಿ ಯಾವದು? ನಾನಾದರೂ ನನ್ನ ತಂದೆಯ ಆಶ್ರಮಕ್ಕೆ ಹೋದೇನು. ಈ ಬಾಲಕನಾದ ಮಗನನ್ನು ಬಿಡುವದು ಹ್ಯಾಗೆ? ಎಂದು ನುಡಿಯಲು; ದುಶ್ಯಂತನು ಆ ವಾಕ್ಯಗಳನ್ನು ಕೇಳಿ, ಹೀಗಂದನು—ಕೇಳೈ, ಶಕುಂತಳೆಯೇ, ನಿನ್ನನ್ನೂ ನಿನ್ನ ಮಗನನ್ನೂ ನಾನು ಗುರುತರಿಯೆ. ಸಟೆ ಮಾತುಗಳನ್ನಾಡುವ ಸ್ತ್ರೀಯರನ್ನು ಯಾರು ನಂಬುವರು? ಇಂಥ ಸುಳ್ಳು ಮಾತುಗಳನ್ನು ನಾಚಿಕೆ ಇಲ್ಲದೆ ಈ ರಾಜ ಸಭೆ

ಯಲ್ಲಿ ಏನಂತ ಆಡಿದೆ? ಎಲೈ, ದುಷ್ಟ ಸ್ತ್ರೀಯೇ, ಇಂಥ ಅಸತ್ಯವಾದ ಮಾತುಗಳನ್ನು ಈ ಸಭೆಯಲ್ಲಿರುವ ಜನರು, ನಾನು ಸಹ, ಕೇಳಲಾರೆವು. ಎಲ್ಲಿಗಾದರೂ ಹೋಗು. ಇಲ್ಲದಿದ್ದರೆ, ಚಿನ್ನ, ಬೆಳ್ಳಿ, ವಸ್ತ್ರಗಳು, ಆಭರಣಗಳು, ಮುತ್ತಿನ ಹಾರಗಳು, ಹವಳಗಳು, ಇವು ಮೊದಲಾದ ವಸ್ತುಗಳಲ್ಲಿ ಬೇಕಾದದ್ದನ್ನು ತೆಕ್ಕೊಂಡು, ತಡವು ಮಾಡದೆ ನಡೆ! ನಿನ್ನನ್ನು ನೋಡಲಾರೆನು! ಬೇಗ ಎದ್ದು ಹೋಗು! ಎಂದು ನುಡಿಯಲು; ಶಕುಂತಳೆಯು—ಎಲೈ, ಮಹಾರಾಯನೇ, ನಿನಗೂ ನನಗೂ, ಸಾಸಿವೆ ಕಾಳಿಗೂ ಮೇರು ಪರ್ವತಕ್ಕೂ ಇರುವಷ್ಟು ಹೆಚ್ಚು ಕಡಿಮೆ ಉಂಟು. ಹ್ಯಾಗಂದರೆ, ನಾನು ದೇವ ಕನ್ನಿಕೆಯು; ನೀನು ಮನುಷ್ಯನು. ಮತ್ತು ಸತ್ಯಕ್ಕೂ ಅಸತ್ಯಕ್ಕೂ ನಿನ್ನ ಮನಸ್ಸೇ ಕಾರಣವು. ನಾನು ಎಷ್ಟು ಹೇಳಿದರೂ, ನನ್ನ ವಾಕ್ಯವು ಸಟೆ ಎಂದು ದೃಢವಾಗಿ ನಂಬಿರುವ ತುಚ್ಛ ಮನುಷ್ಯನಾದ ನಿನ್ನಿಂದ ನನಗೇನಾಗ ಬೇಕು? ಇಂಥ ಸಭೆಯಲ್ಲಿ ನನ್ನನ್ನು ಅವಮಾನ ಮಾಡಿದ್ದರಿಂದ ನಾನು ನಿನ್ನ ಬಳಿಯಲ್ಲಿ ಅರೆ ಘಳಿಗೆ ನಿಲ್ಲಲಾರೆನು. ನಾನಾದರೆ ಹೋಗುತ್ತೇನೆ. ಇವನು ಖಂಡಿತವಾಗಿಯೂ ನಿನ್ನ ಮಗನು. ಲೋಕದಲ್ಲಿ ನಡೆ, ನುಡಿ, ಧ್ವನಿ, ಬುದ್ಧಿ, ಬಲ, ಆಚಾರ, ವಿದ್ಯ, ಪರಾಕ್ರಮ, ಧೈರ್ಯ, ಆಕಾರ, ಮನಸ್ಸು, ಸುಳಿಗಳು, ಮೊದಲಾದ ಲಕ್ಷಣಗಳು ಇಬ್ಬರಿಗೂ ಒಂದೇ ಪ್ರಕಾರವಾಗಿ ಇದ್ದರೆ, ಅವರೇ ತಂದೆ ಮಕ್ಕಳೆನಿಸಿ ಕೊಳ್ಳುವರು. ಆದ್ದರಿಂದ ಈ ಬಾಲಕನು ಸಕಲ ಲಕ್ಷಣಗಳಲ್ಲಿಯೂ ನಿನ್ನನ್ನೇ ಹೋಲುತ್ತಾನೆ. ತಂದೆಯೇ ಎಂದು ಮಾತಾಡಿಸುತ್ತಾ, ನಿಂತು ಕೊಂಡು ಇದ್ದಾನೆ. ಇಂಥವನನ್ನು ಅಂಗೀಕರಿಸದೆ ಇರ ಬೇಡ. ಇನ್ನು ಮೇಲಾದರೂ ದುರ್ಬುದ್ಧಿಯನ್ನು ಬಿಟ್ಟು, ಇವನನ್ನು ಮನ್ನಿಸು; ಇಲ್ಲದಿದ್ದರೆ ನಿನ್ನ ತಲೆ ಸಹಸ್ರ ಹೋಳಾಗುತ್ತಲಿದೆ ಎಂದು, ಕಣ್ಣುಗಳನ್ನು ಕೆಂಪಗೆ ಮಾಡಿ ಕೊಂಡು, ಆಸ್ಥಾನವನ್ನು ಬಿಟ್ಟು, ವನಕ್ಕೆ ಅಭಿಮುಖಳಾದಳು.

ಆ ಸಮಯದಲ್ಲಿ ಋತ್ವಿಕ್ಪುರೋಹಿತಾಚಾರ್ಯ ಮಂತ್ರಿ ಸಮೇತನಾದ ದುಶ್ಯಂತ ಮಹಾರಾಯನನ್ನು ಕುರಿತು ಅಶರೀರ ವಾಣಿಯು—ಎಲೈ, ರಾಯನೇ, ನಿನಗೆ ಈ ಬಾಲಕನು ಪುತ್ರನಹುದು. ಆ ಶಕುಂತಳೆಯು ಹೇಳಿದವುಗಳೆಲ್ಲಾ ಸತ್ಯವು. ಆಕೆಯು ಮಹಾ ಪತಿವ್ರತೆಯು. ಸಾವಿರ ಮಾತುಗಳಿಂದ ಪ್ರಯೋಜನವೇನು? ಈ ಬಾಲಕನನ್ನು ಮನಃಪೂರ್ವಕವಾಗಿ ಅಂಗೀಕರಿಸು. ಶಕುಂತಳೆಯನ್ನು ಕರಿಸಿ, ಮನ್ನಿಸು. ನಿನ್ನ ಈ ಮಗನು ಭರತನೆಂಬ ನಾಮದಿಂದ ಪ್ರಸಿದ್ಧನಾಗಿ, ಚಕ್ರವರ್ತಿ ಅನ್ನಿಸಿ ಕೊಂಡು, ನಿನ್ನ

ಕುಲವನ್ನು ಉದ್ಧರಿಸುವನು ಎಂದು ನುಡಿಯಲು; ರಾಯನು ಸಂತುಷ್ಟ ಚಿತ್ತನಾಗಿ, ಸಿಂಹಾಸನದಿಂದಿಳದು, ಸಭಾಜನರನ್ನು ಕುರಿತು—ಎಲೈ, ಸಾಮಾದೀಕರೇ, ಕೇಳಿ! ಈ ಶಕುಂತಳೆಯು ನನ್ನ ಪತ್ನಿ ಎಂದೂ, ಈ ಬಾಲಕನು ನನ್ನ ಮಗನೆಂದೂ, ನಾನು ತಿಳಿದಿದ್ದರೂ, ಲೋಕಾಪವಾದಕ್ಕೋಸ್ಕರ ಭಯ ಪಟ್ಟು, ನನಗೆ ತಿಳಿಯದು ಎಂದು ಹೇಳಿದೆನೇ ಹೊರ್ತು, ಮತ್ತೆ ಬೇರೆ ಇಲ್ಲ ಎಂದು ನುಡಿದು, ಸಕಲ ಜನ ಸಮ್ಮತಿಯಿಂದ ಮಗನನ್ನು ತಬ್ಬಿ ಕೊಂಡು, ಶಿರಸ್ಸನ್ನು ಆಘ್ರಾಣಿಸಿ, ಕುಮಾರನ ಅಂಗ ಸಂಗದಿಂದ ಉಂಟಾದ ಸುಖವನ್ನನುಭವಿಸಿ, ಶಕುಂತಳೆಯನ್ನು ಕರಿಸಿ, ಬಹುಮಾನವನ್ನು ಮಾಡಿ, ಸಕಲ ಜನ ಸಮ್ಮತವಾಗಿ ರಾಜ್ಯ ಪರಿಪಾಲನೆಯನ್ನು ಮಾಡಿ ಕೊಂಡು, ಪತ್ನೀ ಪುತ್ರರೊಡನೆ ಸುಖದಲ್ಲಿದ್ದನು.

58. Kalinga's Policy.

೫೮. ಕಳಿಂಗನ ನೀತಿ.

ಧೃತರಾಷ್ಟ್ರ ರಾಯನು ತಾನೂ ತನ್ನ ಮಕ್ಕಳೂ ಹ್ಯಾಗೆ ಬದುಕ ತಕ್ಕದ್ದು ಎಂದು ಯೋಚಿಸುತ್ತಾ, ಶಕುನಿಯ ಮಂತ್ರಿಯಾದ ಕಳಿಂಗನೆಂಬ ಬ್ರಾಹ್ಮಣನನ್ನು ಕರತರಿಸಿ, ಏಕಾಂತದಲ್ಲಿ ಆತನನ್ನು ಕುರಿತು—ಎಲೈ, ಭೂಸುರೋತ್ತಮನೇ, ಈ ಪಾಂಡು ಕುಮಾರಕರು ಬಲ ಪರಾಕ್ರಮಗಳಿಂದ ಪ್ರತಿ ದಿನದಲ್ಲಿಯೂ ಹೆಚ್ಚಿ ಬರುತ್ತಲಿದ್ದಾರೆ. ಅವರ ಅತಿಶಯವನ್ನು ನಾನು ಸಹಿಸಲಾರೆನು. ನೂರು ಮಂದಿ ಮಕ್ಕಳೊಡನೆ ಕೂಡಿರುವ ನನಗೆ ಹ್ಯಾಗೆ ನಡೆದರೆ ಕ್ಷೇಮ ಬರುತ್ತದೋ, ಆ ಅರ್ಥವನ್ನು ತಿಳುಹಿಸ ಬೇಕೆನಲು; ಆ ಕಳಿಂಗನು ತೀಕ್ಷ್ಣವಾದ ನೀತಿ ಶಾಸ್ತ್ರವನ್ನು ಅವಲಂಬಿಸಿ, ಇಂತೆಂದನು;—ಎಲೈ, ಧೃತರಾಷ್ಟ್ರ ರಾಯನೇ, ಕೇಳು. ಲೋಕದಲ್ಲಿ ಅರಸುಗಳಿಗೆ ಬ್ರಾಹ್ಮಣರನ್ನು ಪೂಜಿಸುವದೂ, ದುಷ್ಟರನ್ನು ಶಿಕ್ಷಿಸುವದೂ, ಅಪರಾಧವನ್ನು ಮಾಡಿದವರಿಗೆ ಶಾಸ್ತ್ರೋಕ್ತವಾಗಿ ದಂಡನೆ ಮಾಡುವದೂ ನಿತ್ಯ ಕರ್ತವ್ಯವಾಗಿ ಇರುವದು. ಹೀಗೆ ಮಾಡಿದರೆ, ಇಹ ಪರಗಳಲ್ಲಿ ಸೌಖ್ಯ ಲಭಿಸುವದು.

ಆನೆಯು ತನ್ನ ಅಂಗಗಳನ್ನು ತಾನು ಶಿಳಿಸದ ಹಾಗೆ, ಅರಸು ತನ್ನ ಮರ್ಮವನ್ನು ತಿಳಿಸದೆ, ಪರರ ಮರ್ಮಗಳನ್ನು ತಾನು ತಿಳಿದು ಕೊಂಡು, ತಪ್ಪು ಮಾಡಿದವರನ್ನು ಪಾಲುಮಾರದೆ ಶಿಕ್ಷಿಸುತ್ತಾ ಇದ್ದರೆ, ಅವನಿಗೆ ಸಮಸ್ತ ಜನಗಳು ಭಯ ಪಟ್ಟು, ವಿನೀತರಾಗಿ ನಡೆಯುತ್ತಾ ಇರುವರು. ಅಪರಾಧಾ ಮಾಡಿದವರನ್ನು ಶಿಕ್ಷಿಸದೆ ಬಿಟ್ಟರೆ, ಅವರದೆಶೆಯಿಂದ ಅವಮಾನವನ್ನು ಹೊಂದಿ,

ಇಹ ಪರಗಳಲ್ಲಿ ಸೌಖ್ಯ ಹೊಂದದೆ ಇರುವನು. ಐಶ್ವರ್ಯಾತಿಶಯದಿಂದ ತನ್ನ ನ್ನು ಎಣಿಸದೆ ಇರುವಂಥವರನ್ನು ಹಿಡ ತರಿಸಿ, ನಿಗ್ರಹಿಸಿ, ಅವರ ಧನವನ್ನು ಅನ್ಯರಿಗೆ ಕೊಡಿಸ ಬೇಕು. ಒಂದು ಉದ್ಯೋಗವನ್ನು ನಡಿಸ ಬೇಕಾದರೆ, ತನಗೆ ಆಪ್ತರಾಗಿಯೂ ಕಾರ್ಯ ಸಾಧನಾ ನಿಪುಣರಾಗಿಯೂ ಇರುವಂಥವರ ನ್ನು ಬಿಟ್ಟು, ಅನ್ಯರನ್ನು ಆ ಕೆಲಸದಲ್ಲಿ ನಿಯೋಗಿಸಿದರೆ, ಅವರಿಂದ ಆ ಕೆಲಸ ಸಾಧನೆಯಾಗಲಾರದು. ಗ್ರಾಮಗಳಲ್ಲಿಯೂ ಪಟ್ಣಗಳಲ್ಲಿಯೂ ದೇಶಗಳಲ್ಲಿಯೂ ನೇಮಿಸಿ ಇರಿಸಿದ ಜನಗಳು ಧರ್ಮಗಳನ್ನು ಬಿಡದೆ ಜನರಿಗೆ ತೊಂದರೆ ಕೊಡ ದೆ ಇರುವ ರೀತಿಯನ್ನು ಗೋಪ್ಯವಾಗಿ ಚಾರರ ಮುಖಾಂತ್ರ ತಿಳಿದು, ಅವರೊಂ ದು ವೇಳೆ ದುರ್ಮಾರ್ಗ ಪ್ರವರ್ತಕರಾದರೆ, ಅವರನ್ನಾಕ್ಷಣವೇ ಆ ಅಧಿಕಾರದಿಂ ದ ತಪ್ಪಿಸಿ, ನಿಗ್ರಹಿಸ ಬೇಕು. ಅನ್ಯರ ಛಿದ್ರಗಳನ್ನು ನೋಡುವದೇ ಹೊರ್ತು ಆಮೆಯ ಹಾಗೆ ತನ್ನ ಛಿದ್ರಗಳನ್ನು ಒಬ್ಬರಿಗೂ ತಿಳಿಸ ಕೂಡದು.

ಒಬ್ಬನನ್ನು ನಿಗ್ರಹಿಸ ಬೇಕಾದರೆ, ಸಮೂಲವಾಗಿ ನಿಗ್ರಹಿಸ ಬೇಕು. ಸ್ವ ಲ್ಪ ನಿಗ್ರಹಿಸಿ, ಬಿಟ್ಟು ಬಿಟ್ಟರೆ, ಅರ್ಧ ಮುರಿದ ಮುಳ್ಳಿನೋಪಾದಿಯಲ್ಲಿ ಬಾರಿ ಬಾರಿಗೂ ಬಾಧಿಸುತ್ತಾ ಇರುವನು. ಶತ್ರುವನ್ನು ಪ್ರಾಣಾಂತವಾಗಿ ನಿಗ್ರಹಿಸಿದರೆ, ಸುಖವಾಗಿ ನಿದ್ದೆ ಹೋಗ ಬಹುದು. ಪೂರ್ವದಲ್ಲಿ ಅಪರಾಧಾ ಮಾಡಿದವರು ಒಬ್ಬಿಬ್ಬರು ಮೂರು ಮಂದಿ, ಹತ್ತು ಮಂದಿ ಶಿಕ್ಕಿದರೂ—ಎಲ್ಲರು ಶಿಕ್ಕಲಿ ಎಂ ದು ಸುಮ್ಮನಿರದೆ, ಶಿಕ್ಕಿದವರನ್ನು ಆ ಕ್ಷಣವೇ ಸಂಹರಿಸ ಬೇಕು. ಸಾವಕಾ ಶದಿಂದ ಅವರ ಸ್ನೇಹಿತರು ಮೊದಲಾದವರನ್ನು ನಿಗ್ರಹಿಸಿ ಕೊಳ್ಳ ಬಹುದು. ಬೇರು ಕಡಿದ ವೃಕ್ಷದ ಕೊನೆ ಕೊಂಬುಗಳು ತಮಗೆ ತಾವೇ ಒಣಗಿ ಹೋ ಗುವ ರೀತಿಗೆ ಪರಪಕ್ಷ ಬಲ ದಿನ ದಿನಕ್ಕೂ ತಾನೇ ಸವೆದು ಹೋಗುವದು. ಅಣಿ ತಪ್ಪಿದ ವೇಳೆಯಲ್ಲಿ ಆಲೋಚನೆ ಮಾಡದೆ, ಸಾಹಸವನ್ನಾಗಲಿ ಸಂಧಿಯ ನ್ನಾಗಲಿ ಪಲಾಯನವನ್ನಾಗಲಿ, ನಾಚಿಕೆಯ ಕೆಲಸವೆಂದು ಹೇಳದೆ, ನಡಿಸ ಬೇ ಕು. ಸಮಸ್ತ ಜನಗಳಿಂದ ಹೊಗಳಿಸಿಕೊಳ್ಳುವ ನಿಮಿತ್ಯ ದಾನೋಪಾಯದಿಂದ ಶತ್ರುಗಳನ್ನೂ ಇತರರನ್ನೂ ಸ್ವಾಧೀನಾ ಮಾಡುವದಕ್ಕೋಸ್ಕರ ಧನ ವ್ರಯ ವನ್ನು ಮಾಡದೆ, ಸಾಹಸದಿಂದಲೇ ಸಾಧಿಸಿ ಕೊಳ್ಳ ಬೇಕು. ಶತ್ರುವಾದವನು ಪರಾಜಿತನಾಗಿ ಓಡಿ ಹೋಗಿ, ಇನ್ಯಾರನ್ನಾದರೂ ಆಶ್ರಯಿಸಿ, ಸಮಯವನ್ನು ಸಾಧಿಸುತ್ತಾ ಇರುವದನ್ನು ತಿಳಿದು, ಎಂಥಾ ಬಲಿಷ್ಠನಾದರೂ ಮೈ ಮರತಿರ ಬಾರದು. ತಾನೊಂದು ವೇಳೆ ಪರಾಜಿತನಾದರೆ, ತನಗೆ ಸಮಯ ಶಿಕ್ಕುವ ಪರ್ಯಂತರ ಯಜ್ಞಾ ಮಾಡುವವನ ಹಾಗೂ, ಜಟಾಜಿನ ವಲ್ಕಲಗಳನ್ನು ಧರಿಸಿ

ಕೊಂಡು, ಸರ್ವಸಂಗ ಪರಿತ್ಯಾಗಾ ಮಾಡಿದವನ ಹಾಗೂ, ಜನರನ್ನು ವಂಚಿಸುತ್ತಾ, ಸಮಯವನ್ನು ಸಾಧಿಸ ಬೇಕು. ಹೀಗೆ ಜನರನ್ನು ವಂಚಿಸುತ್ತಾ, ಸಮಯ ಶಿಕ್ಕಿದಾಗ, ತೋಳನು ಕುರೀ ಮಂದೆಯಲ್ಲಿ ಹೊಂಚಿ ಬೀಳುವ ಹಾಗೆ ತನ್ನ ಶತ್ರುವಿನ ಮೇಲೆ ಬಿದ್ದು, ಸಾಹಸವನ್ನು ಮಾಡ ಬೇಕು.

ಜನರು ಹಣ್ಣು ಕಾಯಿಗಳು ತುಂಬಿರುವ ಮರದ ಕೊನೆಯನ್ನು ಕೊಕ್ಕೆಯಿಂದ ಬೊಗ್ಗಿಸಿ, ಪಕ್ವಾಪಕ್ವವಾದವುಗಳನ್ನು ವಿಚಾರಿಸುವ ತೆರದಿಂದ ಶತ್ರುಗಳ ಒಳ ಹೊಕ್ಕು, ಬಲಾಬಲಗಳನ್ನು ವಿಚಾರಿಸಿ, ಅಬಲನಾಗಿ ಇರುವಾಗ, ಆತನನ್ನು ಕೊಲ್ಲ ಬೇಕು. ಉಪೇಕ್ಷೆಯನ್ನು ಮಾಡ ಕೂಡದು. ಮತ್ತು ತನಗೆ ಶತ್ರುವಾದವನು ತನಗೆ ಅಣಿಯಾಗದಿದ್ದರೆ, ಆತನನ್ನು ಅನುಸರಿಸಿ ಕೊಂಡು, ಸಮಯ ಬಂದಾಗ ತುಂಬಿದ ಗಡಿಗೆಯನ್ನು ಎತ್ತಿ ಹಾಕಿ ಚೂರು ಚೂರಾಗಿ ಒಡೆದು ಹಾಕುವ ಹಾಗೆ, ಶತ್ರುವನ್ನು ನಿಶ್ಶೇಷನಾಗಿ ಕೊಂದು ಹಾಕ ಬೇಕು. ಶತ್ರುವು ತನ್ನ ಕೈಗೆ ಶಿಕ್ಕಿದಾಗ, ಅವನು ಎಷ್ಟು ಪ್ರಿಯ ವಚನಗಳನ್ನು ಆಡಿದಾಗ್ಯೂ, ದಯ ತೋರಿಸದೆ, ಕೊಂದು ಹಾಕ ಬೇಕು.

ಸಾಮದಿಂದಾಗಲಿ, ದಂಡದಿಂದಾಗಲಿ, ದಾನದಿಂದಾಗಲಿ, ಭೇದದಿಂದಾಗಲಿ, ವಿಷ ಪ್ರಯೋಗಾದಿ ಕಪಟ ಕೃತ್ಯಗಳಿಂದಾಗಲಿ, ತನಗೆ ದಾಯಾದಿಗಳಾದವರನ್ನು ಕೊಂದು ಹಾಕ ಬೇಕೇ ಹೊರತಾಗಿ, ಅವರನ್ನು ನಿಲ್ಲಿಸ ಕೂಡದು ಎಂದು, ಹೇಳಿದ ಕಳಿಂಗನ ಮಾತನ್ನು ಕೇಳಿ—ಧೃತರಾಷ್ಟ್ರನು ಈ ಚತುರೋಪಾಯಗಳಿಂದ ಶತ್ರುಗಳನ್ನು ಜಯಿಸುವದು ಹ್ಯಾಗೆ? ಅದರ ರೀತಿಯನ್ನು ವಿಶದವಾಗಿ ತಿಳಿಯ ಪಡಿಸ ಬೇಕೆಂದು, ಕೇಳಿ ಕೊಳ್ಳಲು; ಆ ಕಳಿಂಗನು ಮತ್ತು ಹೇಳಿದನು—

ಎಲೈ, ಧೃತರಾಷ್ಟ್ರನೇ, ಈ ಅರ್ಥಕ್ಕೆ ಅನುಕೂಲವಾದ ಒಂದು ಇತಿಹಾಸ ಉಂಟು. ಅದನ್ನು ತಿಳಿಸುತ್ತಲಿದ್ದೇನೆ. ಒಂದು ವನದಲ್ಲಿ ಒಂದು ನರಿಯು ವಾಸಾ ಮಾಡಿ ಕೊಂಡು ಇರುವದು. ಒಂದು ಹುಲಿಯೂ, ಒಂದು ತೋಳವೂ, ಒಂದು ಕೀರವೂ, ಒಂದು ಹೆಗ್ಗಣವೂ, ಆ ನರಿಯೊಡನೆ ಸ್ನೇಹವನ್ನು ಮಾಡಿ ಕೊಂಡು ಇರುವವು. ಈ ಐದು ಜಂತುಗಳು ಒಂದು ದಿವಸದಲ್ಲಿ ಒಂದು ಸ್ಥೂಲ ಕಾಯವಾದ ಮೃಗವನ್ನು ನೋಡಿ, ಅದನ್ನು ಹಿಡಿದು ಕೊಲ್ಲ ಯತ್ನಾ ಮಾಡಿದರೂ, ಶಕ್ಯವಾಗದ್ದರಿಂದ ಆಲೋಚನೆಯನ್ನು ಮಾಡುತ್ತಿರಲು; ನರಿಯು ಹುಲಿ ಮೊದಲಾದ ಜಂತುಗಳನ್ನು ನೋಡಿ—ಈ ವನದಲ್ಲಿರುವ ಮೃಗವು ಯೌವನವೂ, ವೇಗವೂ, ಬಲವೂ, ಸೂಕ್ಷ್ಮತ್ವವೂ ಉಳ್ಳದ್ದಾದ ಕಾರಣ, ನಾವು ಎಷ್ಟು ಪ್ರಯತ್ನಾ ಮಾಡಿದರೂ, ನಮ್ಮ ಕೈಗೆ ಶಿಕ್ಕದೆ ಓಡುತ್ತದೆ. ಇದು

ಒಂದು ಪ್ರದೇಶದಲ್ಲಿ ನಿದ್ದೆ ಹೋಗುವ ಸಮಯದಲ್ಲಿ, ಹೆಗ್ಗಣವು ಅದರ ಕಾಲುಗಳನ್ನು ತನ್ನ ಹಲ್ಲುಗಳಿಂದ ಕಡಿಯ ಬೇಕು. ಕಾಲುಗಳನ್ನು ಕಡಿದ ಮೇಲೆ, ಹೆಬ್ಬುಲಿಯು ಕೊಲ್ಲ ಬೇಕು. ಕೊಂದ ಮೇಲೆ ಅದಷ್ಟನ್ನೂ ನಾವೆಲ್ಲರು ಕೂಡಿ ಭಕ್ಷಿಸ ಬೇಕು ಎನಲು; ಹಾಗೆ ಆಗಲಿ ಎಂದು, ಹೆಗ್ಗಣವು ಆ ಮೃಗವು ನಿದ್ದೆ ಹೋಗುವ ಸಮಯದಲ್ಲಿ ಅದರ ಕಾಲುಗಳನ್ನು ಕಡಿಯಲು; ಹೆಬ್ಬುಲಿಯು ಅದನ್ನು ಕೊಲ್ಲಲು; ಆ ನರಿಯು ವ್ಯಾಘ್ರಾದಿಗಳನ್ನು ಕುರಿತು—ನೀವು ಸ್ನಾನವನ್ನು ಮಾಡಿ ಬನ್ನಿ; ಅಷ್ಟು ಪರ್ಯಂತರವು ನಾನು ಈ ಮೃಗವನ್ನು ಸಂರಕ್ಷಿಸಿ ಕೊಂಡಿರುತ್ತೇನೆ ಎನಲು; ಆ ಹುಲಿ ಮೊದಲಾದ ಜಂತುಗಳು, ಹಾಗೆ ಆಗಲೆಂದು, ನದೀ ತೀರಕ್ಕೆ ಹೋಗಲು; ಹುಲಿಯು ಮುಂಚಿತವಾಗಿ ಸ್ನಾನಾ ಮಾಡಿ ಬರಲು; ನರಿಯು ಮನಸ್ಸಿನಲ್ಲಿ ಖೇದವನ್ನು ತಂದು ಕೊಂಡು, ಚಿಂತಿಸುತ್ತಲಿರಲು; ಆ ಹುಲಿಯು ನರಿಯನ್ನು ನೋಡಿ—ಎಲೈ, ನರಿಯೇ, ನೀನು ಬುದ್ಧಿ ಸಂಪನ್ನನಾಗಿದ್ದರೂ, ಇಷ್ಟೇತಕ್ಕೆ ಚಿಂತಿಸುತ್ತಲಿದ್ದೀ? ನಾವೀ ಮೃಗವನ್ನು ಭಕ್ಷಿಸಿ ಕೊಂಡು, ಸುಖವಾಗಿರುವ ಎನಲು; ಆ ನರಿಯು—ಎಲೈ, ಹುಲಿರಾಯನೇ, ಹೆಗ್ಗಣವು ನಿನ್ನನ್ನು ದೂಷಿಸಿದ ವಿವರವನ್ನು ಹೇಳುತ್ತೇನೆ; ಕೇಳು. ಏನಂದರೆ—ನಾನು ಆ ಮೃಗದ ಕಾಲುಗಳನ್ನು ಕಡಿಯಲು, ಅದು ಸತ್ತು ಹೋಗಿ ಹೆಬ್ಬುಲಿಗೆ ಜೀವನವಾಯಿತಲ್ಲದೆ, ಈ ಹುಲಿಯ ಸಾಮರ್ಥ್ಯವೇನು? ಬರೀ ಹೆಮ್ಮೆ ಯಾತಕ್ಕೆ? ಎಂದು, ಇನ್ನು ಬಹು ಪ್ರಕಾರವಾಗಿ ದೂಷಿಸಿತು. ನಾನು, ನಿನ್ನನ್ನು ದೂಷಿಸಿದ್ದೇ ನನ್ನನ್ನು ದೂಷಿಸಿದ ಹಾಗೆ ಎಣಿಸಿ, ಈ ಮಾಂಸವನ್ನು ಮುಟ್ಟಲೊಲ್ಲೆನು, ಎನಲು; ಹುಲಿಯು—ಎಲೈ, ನರಿಯೇ, ನೀನು ಪರಮ ಮಿತ್ರನಾದ್ದರಿಂದ ನಾನು ಈ ಮಾಂಸವನ್ನು ಭಕ್ಷಿಸುವದಕ್ಕೆ ಮೊದಲೇ ಇದನ್ನು ನನಗೆ ತಿಳುಹಿಸಿದೆ; ಒಳ್ಳೇದಾಯಿತು. ನಾನು ಬೇಕೆಂದರೆ ವನದಲ್ಲಿ ಎಷ್ಟು ಮೃಗಗಳಿಲ್ಲ? ಅವನ್ನು ಕೊಂದು, ಭಕ್ಷಿಸುವೆನೇ ಹೊರತಾಗಿ, ಇದನ್ನು ನಾನು ಮುಟ್ಟುವದಿಲ್ಲ ಎಂದು ಹೇಳಿ, ಯಥೇಚ್ಛವಾಗಿ ಹೊರಟು ಹೋಯಿತು. ಅನಂತರ ಹೆಗ್ಗಣವು ಬರಲು; ನರಿಯು ಅದನ್ನು ನೋಡಿ—ಎಲೈ, ಹೆಗ್ಗಣವೇ, ಆ ಕೀರವು ನನ್ನ ಸಂಗಡ—ಈ ಮೃಗ ಮಾಂಸವು ಕಠಿಣವಾದ್ದರಿಂದ ನನಗೆ ರುಚಿಸದು. ಆದರೆ ಹೆಗ್ಗಣದ ಮಾಂಸವು ಮೃದುವಾದ್ದರಿಂದ ನೀನು ಸಮ್ಮತಿಸಿದರೆ, ಅದನ್ನು ಭಕ್ಷಿಸುತ್ತೇನೆ ಎಂದು ಹೇಳಿತು, ಎನಲು; ಹೆಗ್ಗಣವು ಆ ಮಾತನ್ನು ಕೇಳಿ, ಭಯ ಪಟ್ಟು, ಬಿಲವನ್ನು ಹೊಕ್ಕೊಂಡಿತು. ತೋಳವು ಬಂದ ಮೇಲೆ, ನರಿಯು ಅದನ್ನು ಕುರಿತು—ಎಲೈ, ತೋಳ

ನೇ, ಹೆಬ್ಬುಲಿಯು ಕುಟುಂಬ ಸಮೇತವಾಗಿ ಬರುತ್ತದೆ; ನಮಗೆ ಸೌಖ್ಯವನ್ನು ಮಾಡುವ ರೀತಿ ತೋರುವದಿಲ್ಲ. ನಿನಗೆ ತೋರಿದ ರೀತಿಗೆ ನಡೆದುಕೋ ಎನಲು; ತೋಳವು ಭಯ ಪಟ್ಟು, ಯಥೇಚ್ಛವಾಗಿ ಹೋಗಲು; ಆ ನರಿಯು ಕೀರ ಬಂದ ಮೇಲೆ–ಎಲೈ, ಕೀರನೇ, ನನ್ನ ಬಾಹುಬಲದಿಂದ ಹುಲಿ ಮೊದಲಾದ ಸಮಸ್ತ ಜಂತುಗಳು ಓಡಿ ಹೋದವು. ನೀನು ಸಮರ್ಥನಾದರೆ ನನ್ನೊಡನೆ ಯುದ್ಧವನ್ನು ಮಾಡಿ, ಜಯಿಸಿ, ಈ ಮಾಂಸವನ್ನು ಭಕ್ಷಿಸು ಎನಲು; ಆ ಕೀರವು–ಹುಲಿಯೂ ತೋಳವೂ ಬುದ್ಧಿಯುಳ್ಳ ಹೆಗ್ಗಣವೂ ನಿನಗೆ ಭಯ ಪಟ್ಟು, ಓಡಿ ಹೋದ್ದರಿಂದ ನೀನು ವೀರಾಗ್ರೇಸರನು; ನಿನ್ನೊಡನೆ ಹೋರುವದಕ್ಕೆ ನಾನು ಸಮರ್ಥನಲ್ಲ ಎಂದು ಹೇಳಿ, ಓಡಿ ಹೋಯಿತು. ಈ ಪ್ರಕಾರ ತನ್ನ ಉಪಾಯ ಬಲದಿಂದ ಆ ಮೃಗಗಳನ್ನೆಲ್ಲಾ ದಾಟಿಸಿ, ನರಿಯು ತಾನೊಂದೇ ಆ ಮೃಗ ಮಾಂಸವನ್ನು ಭಕ್ಷಿಸಿತು.

ಅರಸಾದವನು ಭಯಗ್ರಸ್ತನಾದವನಿಗೆ ಭಯವನ್ನು ತೋರಿಸುತ್ತಾ, ಶೂರನಾದವನಿಗೆ ಕೈ ಮುಗಿಯುತ್ತಾ, ಲುಬ್ಧನಾದವನಿಗೆ–ಹಣ ಕೊಡುತ್ತೇನೆಂದು ಆಶೆ ತೋರಿಸುತ್ತಾ, ಸಮಾನ ಬಲಶಾಲಿಯೊಡನೆ ಸ್ನೇಹವನ್ನು ಬಳಸುತ್ತಾ, ತನ್ನ ಅರ್ಥಕ್ಕೆ ದ್ರೋಹವನ್ನು ಎಣಿಸಿದವನು ಮಗನಾದರೂ, ಸ್ನೇಹಿತನಾದರೂ, ಅಣ್ಣನಾದರೂ, ತಮ್ಮನಾದರೂ, ತಂದೆಯಾದರೂ, ಗುರುವಾದರೂ, ಅವನನ್ನು ಮೊಖಾ ನೋಡದೆ, ಸಂಹರಿಸ ಬೇಕು.

ಶತ್ರುವಿನೊಡನೆ ಸಂಧಿ ಮಾಡುವಾಗ, ಆಣೆಯನ್ನು ಇಟ್ಟು ಕೊಂಡಾದರೂ ನಂಬಿಗೆಯನ್ನು ಕೊಟ್ಟಾದರೂ, ಆತನನ್ನು ಕೊಂದು ಹಾಕ ಬೇಕು. ಅದರಿಂದ ದೋಷವಿಲ್ಲ ಎಂದು, ಭಾರ್ಗವನು ಹೇಳಿ ಇದ್ದಾನೆ. ತನಗೆ ಭಯ ಉಂಟಾಗುವ ಪರ್ಯಂತರವೂ ಭಯ ಪಟ್ಟಿರುವವನೋಪಾದಿಯಲ್ಲಿ ಇದ್ದು ಕೊಂಡು, ಭಯ ಬಂದಾಗ ನಿರ್ಭೀತನ ಹಾಗೆ ಕಾಣಿಸ ಬೇಕು. ಶತ್ರುವಿಗೆ ಆಪತ್ತು ಬಂದಾಗ ದಯೆಯಿಂದ ಬಿಟ್ಟು ಬಿಟ್ಟರೆ, ಆತನು ಮೃತ್ಯು ಪ್ರಾಯನಾಗುವನು.

ಮನಸ್ಸಿನಲ್ಲಿ ಕೋಪವಿದ್ದರೂ, ಸ್ನೇಹಿತನೋಪಾದಿಯಲ್ಲಿ ನಗುತ್ತಾ, ನಗುತ್ತಾ, ಮಾತಾಡುತ್ತಾ, ತನ್ನ ಕೋಪವು ಪರರಿಗೆ ತಿಳಿಯದ ಹಾಗೆ ಇರ ಬೇಕು. ಕೊಲ್ಲುವದಕ್ಕೆ ಎಣಿಸುವಾಗಲೂ, ಕೊಲ್ಲುವಾಗಲೂ, ಕೊಂದ ಮೇಲೆಯೂ, ಕ್ಲೇಶದಿಂದ ತಪಿಸುವವನೋಪಾದಿಯಲ್ಲಿ ಪ್ರಿಯವಾಗಿಯೇ ಮಾತಾಡುತ್ತಿರ ಬೇಕು. ಶತ್ರುವಾದವನಿಗೆ ಒಳ್ಳೇ ಮಾತುಗಳನ್ನಾಡಿ, ಬೇಕಾದ ವಸ್ತುಗಳನ್ನು ಕೊಟ್ಟು, ಉಪಚಾರಗಳನ್ನು ಮಾಡಿ, ನಂಬಿಗೆಯನ್ನು ಕೊಟ್ಟು, ಸ್ವಲ್ಪ ಅಣಿ

ತಪ್ಪಿದ ವೇಳೆಯಲ್ಲಿ ಅವನನ್ನು ಕೊಂದು ಹಾಕ ಬೇಕು. ಎಷ್ಟು ದ್ವೇಷ ಮನಸ್ಸಿನಲ್ಲಿದ್ದರೂ ಧರ್ಮ ಮಾರ್ಗವನ್ನೇ ಅನುಸರಿಸಿ, ನಟಿಸುತ್ತಾ ಇದ್ದರೆ, ಕಪ್ಪು ಮೇಘಗಳನ್ನು ಮರಿಸಿ, ಪ್ರಕಾಶಿಸುವ ಸೂರ್ಯನೋಪಾದಿಯಲ್ಲಿ ಆತನ ದೋಷಗಳು ಮರೆಯಾಗಿ ಹೋಗುವವು. ಕೊಲ್ಲ ತಕ್ಕಂಥ ಶತ್ರುವು ಏನಾದರೂ ಒಂದು ವಿಧದಿಂದ ತಪ್ಪಿಸಿ ಕೊಂಡರೆ, ಅವನ ಮನೆಗೆ ಬೆಂಕಿಯನ್ನು ಹಾಕಿಯಾದರೂ, ಯಾರಾದರೂ ಭಿಕ್ಷುಕರ ಮುಖಾಂತ್ರದಿಂದ ವಿಷವನ್ನು ಹಾಕಿಸಿಯಾದರೂ, ಅಗತ್ಯವಾಗಿ ಕೊಂದು ಹಾಕ ಬೇಕು. ಶತ್ರುವು ಏನಾದರೂ ಒಂದು ದುರಾಲೋಚನೆಯಿಂದ ತನ್ನ ಬಳಿಗೆ ಬಂದರೆ, ಅವನಿಗೆ ಪ್ರತ್ಯುತ್ಥಾನಾಭಿವಂದನೆಗಳನ್ನು ಮಾಡಿ, ಬೇಕಾದ ವಸ್ತುಗಳನ್ನು ಕೊಟ್ಟು, ಸ್ನೇಹ ಭಾವದ ನಂಬಿಕೆಯನ್ನು ಉಂಟು ಮಾಡಿ, ಸಮಯವರಿತು ಕೊಂದು ಹಾಕ ಬೇಕು.

ವಿಶ್ವಾಸಯೋಗ್ಯನಾಗಿರುವಂಥವನಲ್ಲಿಯೂ ತಾನು ಪೂರ್ಣ ವಿಶ್ವಾಸವಿಡಕೂಡದು. ವಿಶ್ವಾಸ ಯೋಗ್ಯನಲ್ಲದವನನ್ನು ಹತ್ರಕ್ಕೆ ಸೇರಿಸ ಕೂಡದು. ಯಾವ ರಹಸ್ಯವಾದರೂ ತಾನೊಬ್ಬನೇ ವಿಚಾರಿಸಿ ನಡಿಸ ಬೇಕೇ ಹೊರ್ತು, ಮತ್ತೊಬ್ಬರನ್ನು ಸೇರಿಸ ಕೂಡದು. ಒಬ್ಬರಲ್ಲಿಯೂ ವಿಶ್ವಾಸವಿಡದೆ ಹೋದರೆ, ತನ್ನ ಕಾರ್ಯ ಕೈ ಕೂಡುವದು. ಹ್ಯಾಗಂದರೆ, ಸ್ವರಾಷ್ಟ್ರದಲ್ಲಾದರೂ, ಪರರಾಷ್ಟ್ರದಲ್ಲಾದರೂ, ಬದಲು ವೇಷವನ್ನು ಧರಿಸಿ ಕೊಂಡು, ಜೋಗಿ, ಜಂಗಮ, ದಾಸೈಯ್ಯ, ಇವರ ಹಾಗೆ ತೋರ್ಪಡಿಸುವ ಬುದ್ಧಿವಂತರಾದ ಗೂಢಚಾರರನ್ನು ನೇಮಿಸಿ, ಉದ್ಯಾನ ವನಗಳಲ್ಲಿಯೂ, ಜಗತೀ ಕಟ್ಟೆಗಳಲ್ಲಿಯೂ, ದೇವಾಲಯಗಳಲ್ಲಿಯೂ, ಅರವಟ್ಟಿಗೆಗಳಲ್ಲಿಯೂ, ಬಾಹ್ಯ ಪ್ರದೇಶಗಳಲ್ಲಿಯೂ, ಹಜಾರಗಳಲ್ಲಿಯೂ, ಬ್ರಾಹ್ಮಣರ ಮನೆಗಳಲ್ಲಿಯೂ, ಜೂಜಾಡುವ ಸ್ಥಳಗಳಲ್ಲಿಯೂ, ಪರ್ವತ ವನ ಪ್ರದೇಶಗಳಲ್ಲಿಯೂ, ಜಾತ್ರೆಗಳಲ್ಲಿಯೂ, ಪುಣ್ಯ ನದೀ ತೀರಗಳಲ್ಲಿಯೂ, ಮಂತ್ರಿಗಳಲ್ಲಿಯೂ, ಪುರೋಹಿತರಲ್ಲಿಯೂ, ಸರ್ವಾಧಿಕಾರಿಗಳಲ್ಲಿಯೂ, ದಳಪತಿಗಳಲ್ಲಿಯೂ, ಬಾಗಲು ಕಾಯುವವರಲ್ಲಿಯೂ, ಅಂತಃಪುರ ಸಂಚಾರಿಗಳಲ್ಲಿಯೂ, ಸೆರೇ ಮನೇ ಅಧಿಕಾರಿಗಳಲ್ಲಿಯೂ, ಬೊಕ್ಕಸದ ಗುರಿಕಾರರಲ್ಲಿಯೂ, ಧರ್ಮಾನುಸಾರವಾಗಿ ನಡೆಯುವ ವಿದ್ವಾಂಸರ ಸಮೂಹದಲ್ಲಿಯೂ ಅವಸರದವರಲ್ಲಿಯೂ, ಚಾವಡಿ ಅಧಿಕಾರಿಗಳಲ್ಲಿಯೂ, ತಳವಾರರಲ್ಲಿಯೂ, ದುರ್ಗದ ಠಾಣೇದವರಲ್ಲಿಯೂ, ಉಕ್ಕಡದವರಲ್ಲಿಯೂ, ಇನ್ನು ಇವೇ ಮುಂತಾದ ಸ್ಥಳಗಳಲ್ಲಿ ನಡೆಯುವ ಸ್ವರಾಷ್ಟ್ರ ಪರರಾಷ್ಟ್ರ ವಿಚಾರಗಳನ್ನು ತಿಳಿಯುತ್ತಾ, ತನಗಿಂತ ಬಲಿಷ್ಠನಾದವನು ತನ್ನಿಂದ ಧನವನ್ನೇ

ನಾದರೂ ಅಪೇಕ್ಷಿಸಿದರೆ, ವೃಕ್ಷವು ಪುಷ್ಪಿಸಿ, ಫಲಾಶೆಯನ್ನು ತೋರಿಸುತ್ತಾ,
ಫಲಿಸದೆ ಇರುವ ಹಾಗೂ–ಫಲಿಸಿದರೂ ಹತ್ತುವದಕ್ಕಾಗದೆ ಇರುವ ಹಾಗೂ–
ಹತ್ತಿದರೂ ಕಾಯಾಗಿರುವ ಹಾಗೂ–ಒಂದು ವೇಳೆ ಹಣ್ಣಾಗಿದ್ದರೂ, ಭಕ್ಷಿ
ಸಿದರೆ ಜೀರ್ಣಕ್ಕೆ ಬಾರದೆ ಇರುವ ಹಾಗೂ–ಆ ಶತ್ರುವಿಗೆ ಕೈ ಮುಗಿದು,
ವಿನಯವನ್ನು ನಟಿಸುತ್ತಾ, ಆತನನ್ನು ಕೊಲ್ಲುವ ಸಮಯ ಬರುವ ಪರ್ಯಂತರ
ವೂ, ಹಣಾ ಕೊಡುತ್ತೇನೆಂದು ಭಾಷೆಯನ್ನು ಮಾಡಿ ಕೊಟ್ಟು, ಒಂದು ವೇ
ಳೆ ಹಣವಿಲ್ಲದೆ ಹೋದರೆ, ಇದ್ದಷ್ಟು ಕೊಡುವವನ ಹಾಗೆ ಒಳ್ಳೆ ಮಾತುಗಳನ್ನಾ
ಡುತ್ತಾ, ತನಗೆ ಹಣ ಕೈ ಸೇರಿದ ಮೇಲೆ, ಪ್ರಭುತ್ವದ ಮೋಡಿಯಿಂದ ಆತ
ನು ಒಂದು ಕೇಳುವದಕ್ಕೆ ಸಮಯ ಕೊಡದೆ, ಸಮಯವನ್ನು ಸಾಧಿಸಿ, ಕೇ
ಳಿದರೆ, ಕೊಟ್ಟು ಬಿಡುವವನ ಹಾಗೆ ಅಭಿನೈಸಿ, ಕೊಡದೆ, ಕಾಲಹರಣಾ
ಮಾಡುತ್ತಾ, ಆತನನ್ನು ಕಡೆಗೂ ವಂಚಿಸ ಬೇಕು.

ಧರ್ಮಾರ್ಥ ಕಾಮಗಳಲ್ಲಿ ಒಂದೊಂದೇ ಆಚರಿಸಿದರೆ, ಪರಸ್ಪರ ವಿರೋಧ
ಬರುವದರಿಂದ ಮೂರು ಸಮವಾಗಿಯೇ ಆಚರಿಸ ಬೇಕು. ಪುರುಷಾರ್ಥವ
ನ್ನು ಬಯಸುವಂಥ ಅರಸು ಗರ್ವವನ್ನು ಬಿಟ್ಟು, ಈರ್ಷ್ಯಾಸೂಯೆಗಳಿಲ್ಲದೆ ಪ್ರಿ
ಯ ವಚನಗಳನ್ನೇ ಆಡುತ್ತಾ, ಶುದ್ಧಾಂತಃಕರಣನಾಗಿ, ಬ್ರಾಹ್ಮಣರೊಡನೆ ಆ
ಲೋಚನೆಯನ್ನು ಮಾಡಿ, ಪುಣ್ಯ ಕರ್ಮವಾಗಲಿ ಪಾಪ ಕರ್ಮವಾಗಲಿ ಮಾಡಿ, ಐ
ಶ್ವರ್ಯವನ್ನು ಹೊಂದಿ, ಆ ಮೇಲೆ ಪಾಪ ನಿವಾರಣಾರ್ಥವಾಗಿ ಧರ್ಮವನ್ನು ಮಾ
ಡ ಬೇಕು. ಯಾರಿಗಾದರೂ ಅಶ್ರೇಯಸ್ಸನ್ನು ತನ್ನ ಕಾರ್ಯಕ್ಕೋಸ್ಕರ ಮಾ
ಡಿದರೆ, ಆ ಮೇಲೆ ಅವರ ಬಳಿಗೆ ಹೋಗಿ, ಬಹಳ ಪಶ್ಚಾತ್ತಾಪ ಪಟ್ಟು–ಕ್ಷ
ಮಿಸ ಬೇಕೆಂದು, ಸಮಾಧಾನಾ ಮಾಡ ಬೇಕು. ಮೂಢನಾದವನಿಗೆ ಆಶೆ
ಯನ್ನು ಹುಟ್ಟಿಸಿ, ತನ್ನ ಸ್ವಾಧೀನಾ ಮಾಡಿ ಕೊಳ್ಳ ಬೇಕು. ಬುದ್ಧಿವಂತನಾ
ದವನನ್ನು ಸಮಯೋಚಿತ ದಾನಗಳಿಂದ ವಶಾ ಮಾಡಿ ಕೊಳ್ಳ ಬೇಕು. ಶತ್ರು
ವಿನೊಡನೆ ಸಮಾಧಾನಾ ಮಾಡಿ ಕೊಂಡೆನಲ್ಲಾ ಎಂದು ವೈಮರತಿರುವ ಪು
ರುಷನು ವೃಕ್ಷದ ಕೊನೆಯನ್ನು ಹಿಡಿದು ಕೊಂಡು, ನಿದ್ರೆ ಮಾಡುವವನ ಹಾ
ಗೆ ನಷ್ಟವಾಗುವನು.

ಮತ್ತು ಮಂತ್ರಾಲೋಚನೆಯನ್ನು ಮಾಡುವಂಥವನು ಸೌಧಾಗ್ರದಲ್ಲಾದ
ರೂ, ಮೇಲ್ಮಚ್ಚಿನ ಮೇಲಾದರೂ, ನಿರ್ಜನವಾದ ವನದಲ್ಲಾದರೂ, ಪರ್ವತಾಗ್ರದ
ಲ್ಲಾದರೂ, ತನ್ನ ಮುಖ್ಯರಾದ ಆಪ್ತರೊಡನೆ ಕೂಡಿ ಕೊಂಡು, ಆ ಸ್ಥಳಗ
ಳಲ್ಲಿ ಚಿಕ್ಕ ಮಕ್ಕಳು, ಮೂಗರು, ಗಿಣಿ, ಗೊರಗ, ಇವು ಮೊದಲಾದವನ್ನೆ

ಲ್ಲಾ ಹೊರಡಿಸಿ ಬಿಟ್ಟು, ನಾಲ್ಕು ದಿಕ್ಕುಗಳನ್ನು ನೋಡಿ, ಆಲೋಚನೆಯನ್ನು ಮಾಡ ಬೇಕು. ಆಲೋಚನೆಗೆ ಇಬ್ಬರೇ ಹೊರತು, ಆರು ಕಿವಿಯಾದರೆ ಕಾರ್ಯ ಕೆಡುವದು. ಶತ್ರುಗಳ ಬಲವು ಬರದಿಂದ ಬಡವಾಗಿರುವ ಕಾಲದಲ್ಲಿಯೂ, ವ್ಯಾಧಿಯಿಂದ ಪೀಡಿತವಾಗಿರುವ ಸಮಯದಲ್ಲಿಯೂ, ಗ್ರಹಾದಿಗಳಿಂದ ತೊಂದರೆ ಪಡುತ್ತಿರುವ ವೇಳೆಯಲ್ಲಿಯೂ, ದೂರ ಪ್ರಯಾಣದಿಂದ ಕಂಗೆಟ್ಟಿರುವ ವೇಳೆಯಲ್ಲಿಯೂ, ಆ ಶತ್ರುವನ್ನೂ ಆತನ ಬಲವನ್ನೂ ಹೋಗಿ ಸಂಹರಿಸ ಬೇಕು. ಶೀಘ್ರವಾಗಿ ಆಗ ತಕ್ಕಂಥ ಕಾರ್ಯವನ್ನು ತನ್ನ ಬುದ್ಧಿಯಿಂದಲೇ ಗ್ರಹಿಸಿ ನಡಿಸ ಬೇಕು. ವಿಳಂಬವಾಗಿ ಆಗುವಂಥ ಕಾರ್ಯಕ್ಕೆ ಭಯ ಬಂದು ತಟ್ಟಿದರೆ, ತಾನು ಭಯ ಪಡದವನೋಪಾದಿಯಲ್ಲಿ ಪ್ರತಿ ಕ್ರಿಯೆಯನ್ನು ಮಾಡ ಬೇಕು. ಭಯ ಬಂದಾಗ ಧೀರನಾಗಿ ನಿರ್ವಹಿಸ ಬೇಕು. ಬುದ್ಧಿಮೋಸದಿಂದ ಮೀರಿ ಹೋದ ಕಾರ್ಯಕ್ಕೆ ಯೋಚಿಸದೆ, ಮುಂದೆ ಬರುವಂಥ ಕಾರ್ಯವನ್ನು ಮೋಸ ಬೀಳದ ಹಾಗೆ ನಡಿಸ ಬೇಕು. ಅಜ್ಞಾನದಿಂದ ಶತ್ರುವನ್ನು ಉಪೇಕ್ಷಿಸಿ, ನಿಗ್ರಹಿಸದಿದ್ದರೆ, ಕಾಡಿನಲ್ಲಿ ಬಿದ್ದ ಸಣ್ಣ ಕಿಡಿಯೋಪಾದಿಯಲ್ಲಿ ಆ ಶತ್ರು ಪ್ರಬಲನಾಗಿ, ಬಹು ಅನರ್ಥಕ್ಕೆ ಹೇತುವಾಗುವನು.

ತನಗಿಂತ ಅಧಿಕನಾಗಿರುವ ಶತ್ರುವಿನೊಡನೆ ಸಂಧಿ ಮಾಡಿ ಕೊಳ್ಳುವಾಗ, ಆತನಿಗೆ—ಬೇಕಾದಷ್ಟು ದ್ರವ್ಯವನ್ನು ಕೊಡುತ್ತೇನೆಂದು ಆಶೆಯನ್ನು ತೋರಿಸಿ, ಅದು ಕೊಡುವದಕ್ಕೆ ಬಹು ಕಾಲ ಗಡುಬ ಕಟ್ಟಿ ಕೊಳ್ಳ ಬೇಕು. ಆ ಗಡುಬ ಸಮೀಪಿಸಿದರೆ, ಅದಕ್ಕೊಂದು ವಿಘ್ನವನ್ನು ಕಲ್ಪಿಸ ಬೇಕು. ಆ ವಿಘ್ನಕ್ಕೆ ಒಂದು ನಿಮಿತ್ತವನ್ನು ಕಲ್ಪಿಸ ಬೇಕು. ಆ ನಿಮಿತ್ತಕ್ಕೆ ಒಂದು ಆವಶ್ಯಕತ್ವವನ್ನು ಉಂಟು ಮಾಡ ಬೇಕು. ಉಕ್ಕಿನಿಂದ ಮಾಡಲ್ಪಟ್ಟದ್ದಾಗಿಯೂ, ಸಾಣೆಯಿಂದ ಹರತವಾಗಿಯೂ, ಒರೆಯಲ್ಲಿ ಮರೆಯಾಗಿಯೂ, ಇರುವ ಕತ್ತಿಯು ಸರ್ವಾಂಗ ರೋಮಗಳನ್ನು ಹ್ಯಾಗೆ ಕತ್ತರಿಸುತ್ತಲಿದೆಯೋ, ಹಾಗೆಯೇ ಶತ್ರುವಿನ ಸಮಯವನ್ನು ಸಾಧಿಸಿ ಕೊಂಡು, ಕರ್ಕಶ ಹೃದಯನಾಗಿ, ದಯಾ ರಹಿತನಾಗಿ, ಒಬ್ಬರಿಗೂ ತನ್ನ ಹೃದಯವನ್ನು ತಿಳಿಸದೆ ಇರುತ್ತಾ, ಹೊಂಚಿ ಕೊಂಡಿದ್ದು, ಕೊಂದು ಹಾಕ ಬೇಕು. ಆದ್ದರಿಂದ, ಎಲೈ, ಧೃತರಾಷ್ಟ್ರರಾಯನೇ, ಪಾಂಡವರು ಬಲಪರಾಕ್ರಮ ಶಾಲಿಗಳಾಗಿಯೂ, ದಾಯಾದಿಗಳಾಗಿಯೂ ಇರುವದರಿಂದ ಅವರ ಭಯ ತಪ್ಪಿಸಿ ಕೊಳ್ಳುವಂಥ ಕೃತ್ಯವನ್ನು ಮಾಡಿದರೆ, ನೀನು ಸುಖಿಯಾಗಿ ನಿನ್ನ ಮಕ್ಕಳೊಡನೆ ಸುಖವಾಗಿ ಬದುಕುತ್ತೀ ಎಂದು ಹೇಳಿ, ಕಳಿಂಗನು ತನ್ನ ಮನೆಗೆ ಹೊರಟು ಹೋದನು.

59. Duryodhana attempts the destruction of the Pandus by burning them in a lac built house. They escape.

೫೯. ದುರ್ಯೋಧನನು ಅರಗಿನ ಮನೆಯಲ್ಲಿ ಪಾಂಡವರನ್ನು ಸುಡ ಪ್ರಯತ್ನ ಮಾಡಲು, ಅವರು ತಪ್ಪಿಸಿ ಕೊಂಡು ಹೋದ ಕಥೆ.

ಆ ಬಳಿಕ ಕರ್ಣನೂ, ದುಶ್ಶಾಸನನೂ, ಶಕುನಿಯೂ, ಕೌರವನೂ, ಇವರೆಲ್ಲರು ಕಳಿಂಗನ ನೀತಿಯನ್ನು ವಿಸ್ತಾರವಾಗಿ ಕೇಳಿದ, ಧೃತರಾಷ್ಟ್ರನ ಬಳಿಗೆ ಬಂದು,—ಎಲೈ, ರಾಯನೇ, ಈ ಪಾಂಡವರು ಅತ್ಯಂತ ಬಲಶಾಲಿಗಳಾದ್ದರಿಂದ ಇವರನ್ನು ಏನಾದರೂ ಒಂದು ಉಪಾಯದಿಂದ ಕೊಲ್ಲ ಬೇಕೆನಲು; ಆ ರಾಯನು,—ಎಲೈ, ಕೌರವಾದಿಗಳಿರಾ, ಆ ಪಾಂಡವರು ನಿಮಗೆ ಏನು ಅಪಕಾರ ಮಾಡಿದ್ದಾರೆ? ಅವರ ತಂದೆಯಾದ ಪಾಂಡು ರಾಯನು ತಾನು ಮಹಾ ಬಲಪರಾಕ್ರಮಶಾಲಿಯಾದರೂ, ಜಾತ್ಯಂಧನಾದ ನನಗೆ ಪಟ್ಟವನ್ನು ಕಟ್ಟಿ, ತಾನು ನನಗೆ ಸಹಾಯ ಮಾಡಿ ಕೊಂಡಿದ್ದು, ಪರಲೋಕ ಗತನಾದನು. ಆತ ಮಾಡಿದ ಉಪಕಾರವನ್ನು ನಾನೆಂದಿಗೆ ಮರತೇನು? ನಾನು ಪಾಂಡವರಲ್ಲಿ ಲೇಶವೂ ದ್ವೇಷ ಎಣಿಸ ತಕ್ಕವನಲ್ಲ. ನಿಮ್ಮ ಮನ ಬಂದಂತೆ ನಡಿಸ ಬಹುದು ಎನಲು; ಅದಕ್ಕವರು,—ಎಲೈ, ರಾಯನೇ, ಈಗ ವಾರಣಾವತ ಪಟ್ಟಣದಲ್ಲಿ ಮಹಾ ದೇವನ ಉತ್ಸವ ನಡೆಯುತ್ತದೆ. ಆ ಉತ್ಸವದ ಸೇವೆಗೆಂದು ಆ ಪಾಂಡವರನ್ನು ಅಲ್ಲಿಗೆ ಕಳುಹಿಸಿದರೆ, ಅವರು ಹಾಗೆ ಹೊರಟು ಹೋದರೆ, ನಮ್ಮ ಕೆಲಸ ಕೈಗೂಡುವದೆಂದು ಹೇಳಲು; ಆ ರಾಯನು ಪಾಂಡವರನ್ನು ಕರೇ ಕಳುಹಿಸಿ,—ಎಲೈ, ಮಕ್ಕಳಿರಾ, ಈಗ ನೀವು ಸಕಲ ಶಾಸ್ತ್ರಜ್ಞರಾಗಿಯೂ, ಅಸ್ತ್ರ ವಿದ್ಯಾ ಪ್ರವೀಣರಾಗಿಯೂ, ಕಾರ್ಯ ನಿರ್ವಾಹಕರಾಗಿಯೂ ಇದ್ದೀರಿ. ಈಗ ವಾರಣಾವತ ಪಟ್ಟಣದಲ್ಲಿ ಮಹಾ ದೇವೋತ್ಸವ ಅತಿ ಸಂಭ್ರಮದಿಂದ ನಡೆಯ ಬೇಕಾಗಿ ಇದೆ. ಆದ್ದರಿಂದ ನೀವೆಲ್ಲರು ಅಲ್ಲಿಗೆ ಹೋಗಿ, ಆ ಪುರ ಜನಗಳನ್ನು ದಾನ ಮಾನಾದಿಗಳಿಂದ ತೃಪ್ತಿ ಪಡಿಸಿ, ಖ್ಯಾತಿಯನ್ನು ಪಡೆದು, ನಿಮ್ಮ ಇಷ್ಟವಿದ್ದರೆ, ಅಲ್ಲಿ ಕೆಲವು ದಿವಸಗಳು ಇರ ಬಹುದು. ಇಷ್ಟರ ಮೇಲೆ ನಿಮ್ಮ ಮನಸ್ಸು ಬಂದಂತೆ ಮಾಡ ಬಹುದು ಎನಲು; ಆ ಅಂಧ ನೃಪತಿಯ ಅಭಿಪ್ರಾಯವನ್ನು ತಿಳಿದು, ಧರ್ಮರಾಯನು ತನಗಿನ್ನಾರೂ ಸಹಾಯಕರಿಲ್ಲದ ಕಾರಣ, ಹಸ್ತಿನಾವತೀ ಪಟ್ಟಣವನ್ನು ಬಿಟ್ಟು ಹೋಗುವದಕ್ಕೆ ಸಮ್ಮತಿಸಿ, ಭೀಷ್ಮಾದಿಗಳೆಡೆಗೆ ಹೋಗಿ,—ನಾವು ತಂದೆಯ ಅಪ್ಪಣೆಯ ಪ್ರಕಾರ ವಾರಣಾವತ ಪಟ್ಟಣಕ್ಕೆ ಹೋಗುತ್ತೇವೆ. ನಮ್ಮನ್ನು ಹರಸಿ ಕಳುಹಿಸ ಬೇಕೆಂದು, ನಮಸ್ಕಾರಾ ಮಾಡಲು;

ಅವರೆಲ್ಲರು ಪಾಂಡವರನ್ನು ಬಿಟ್ಟಿರುವದಕ್ಕೆ ಮನಸ್ಸು ಒಡಂಬಡದೆ, ಕಂಬನಿಗಳನ್ನು ತುಂಬುತ್ತಾ, ಅವರನ್ನು ದಾರಿ ಕಳುಹಿಸುವದಕ್ಕೆ ಅವರ ಸಂಗಡಲೇ ಹೊರಟರು. ಮತ್ತು ಪಾರಜನಗಳೆಲ್ಲಾ ಪಾಂಡವರ ಮೇಲಣ ಪ್ರೀತಿಯಿಂದ ಅವರ ಹಿಂದೆ ಹೊರಟರು. ಹೀಗೆ ಪಾಂಡವರು ಹಸ್ತಿನಾವತೀ ಪಟ್ಟಣವನ್ನು ಬಿಟ್ಟು, ತಮ್ಮ ಹಿಂದೆ ಬರುವ ಪಾರಜನಗಳನ್ನೆಲ್ಲಾ ಹಿಂತಿರಿಗಿ ಹೋಗುವಂತೆ ಬೇಡಿ ಕೊಳ್ಳುತ್ತಿದ್ದರು.

ಇತ್ತಲಾ ಕ್ರೂರ ಕರ್ಮಿಗಳಾದ ಕೌರವರು ಕುಂತೀ ಸಮೇತರಾದ ಪಾಂಡವರನ್ನು ದಹಿಸ ಬೇಕೆಂದು ಆಲೋಚನೆಯನ್ನು ಮಾಡಿ, ಪುರೋಚನನೆಂಬ ತನ್ನ ಆಪ್ತ ಮಂತ್ರಿಯನ್ನು ಕರ ತರಿಸಿ, ಕೌರವನು ಅವನ ಹಸ್ತವನ್ನು ತನ್ನ ದಕ್ಷಿಣ ಹಸ್ತದಿಂದ ಹಿಡಿದು ಕೊಂಡು,—ಎಲೈ, ಆಪ್ತನೇ, ಸಕಲ ರತ್ನ ಸಮೃದ್ಧವಾದ ಈ ಭೂಮಂಡಲವಷ್ಟೂ ನನ್ನ ಸ್ವಾಧೀನವಾಗುವ ಹಾಗೆ ನೀನು ಮಾಡ ಬೇಕು. ನನಗೆ ನಿನಗಿಂತ ಮತ್ತೊಬ್ಬ ಆಪ್ತನಿಲ್ಲ. ಆದ್ದರಿಂದ ಪಾಂಡವರ ನಾಶಾರ್ಥವಾಗಿ ಒಂದು ಉಪಾಯವನ್ನು ಹೇಳುತ್ತೇನೆ; ಏನಂದರೆ, ಈಗ ಪಾಂಡವರು ವಾರಣಾವತ ಪಟ್ಟಣಕ್ಕೆ ಹೊರಟದ್ದಾರೆ. ನೀನು ಹೇಸರ ಕತ್ತೆಗಳನ್ನು ಕಟ್ಟಿರುವ ರಥವನ್ನು ಏರಿ ಕೊಂಡು, ಅವರಿಗಿಂತ ಮುಂಚಿತವಾಗಿ ಅಲ್ಲಿಗೆ ಹೋಗಿ, ಅವರು ಅಲ್ಲಿ ವಾಸ ಮಾಡುವದಕ್ಕೆ ಅಣಿಯಾಗಿರುವ ಹಾಗೆ, ಗರಡಿಗಳಿಂದಲೂ, ಆಯುಧಶಾಲೆಗಳಿಂದಲೂ ಚತುಶ್ಶಾಲೆಗಳಿಂದಲೂ ಒಪ್ಪುತ್ತಾ, ಚೌಕವಾಗಿರುವ ಒಂದು ಅರಮನೆಯನ್ನು ಕಟ್ಟಿಸಿ, ಸಿದ್ಧಾ ಮಾಡಿ ಕೊಂಡಿರು. ಆ ಅರಮನೆಯ ಗೋಡೆಗಳಿಗೆಲ್ಲಾ ಸಣಬು, ಸಜ್ಜರಸ, ಮುಂಜೇಹುಲ್ಲು, ತಂಡೇಹುಲ್ಲು, ಮೇಣ, ತುಪ್ಪ, ಅರಗು, ಎಣ್ಣೆ ಮೊದಲಾದ ದ್ರವ್ಯಗಳನ್ನು ಮಣ್ಣಿನ ಜೊತೆಯಲ್ಲಿ ಕಲಸಿ, ಮಣ್ಣುಗಾಜು ಮಾಡಿಸ ಬೇಕು. ಸಣಬೂ, ಬಿದಿರಿನ ಚಾಪೆಗಳೂ, ಮರದ ದಬ್ಬೆಗಳೂ, ಇವುಗಳಿಂದ ಯಂತ್ರಗಳನ್ನು ಮಾಡಿಸಿ, ಬಹಳ ಕಡೆಗಳಲ್ಲಿ ಇಡಿಸು. ಆ ಪಾಂಡವರು ಮೆಚ್ಚುವ ಹಾಗೆ, ಓಲಗದ ಚಾವಡಿಯನ್ನೂ, ಹಜಾರವನ್ನೂ, ಮೇಲ್ಮಾಳಿಗೆಯನ್ನೂ, ಸ್ನಾನ ಗೃಹವನ್ನೂ, ಭೋಜನ ಶಾಲೆಯನ್ನೂ, ಕೂರುವ ಕೊಠಡಿಯನ್ನೂ, ನರ್ತನ ಗೃಹವನ್ನೂ, ಶಯ್ಯಾಗೃಹವನ್ನೂ, ಕನ್ನಡಿಗಳಿಂದ ಮಾಡಿಸು. ಹೀಗೆ ಮಾಡಿಸಿ, ಕಾದು ಕೊಂಡಿದ್ದು, ಆ ಪಾಂಡವರು ಅಲ್ಲಿಗೆ ಬಂದ ಮೇಲೆ, ಅವರಿಗೇನೂ ಕೊರತೆ ಆಗದಂತೆ ಉಪಚರಿಸುತ್ತಾ ಇದ್ದು, ನಾನು ಹೇಳುವ ಸಂಕೇತ ದಿವಸದಲ್ಲಿ, ಅವರು ರಾತ್ರೆ ಭೋಜನಾ ಮಾಡಿ, ಸುಖ ನಿದ್ರೆ ಮಾಡುತ್ತಾ ಇರುವದನ್ನು ನೋಡಿ ಕೊಂಡಿ

ದ್ದು, ಅರ್ಧ ರಾತ್ರಿಯ ವೇಳೆಯಲ್ಲಿ ಆ ಮನೆಗೆ ಬೆಂಕಿಯನ್ನು ಹಚ್ಚಿಸ ಬೇಕು. ಅವರು ಆ ಮನೆಯಲ್ಲಿ ಬೆಂದು ಹೋದರೆ, ದೈವ ವಶದಿಂದ ಬೆಂದು ಹೋದರೆಂದು ಜನರೆಲ್ಲರು ಹೇಳಿ ಕೊಳ್ಳುತ್ತಾರೇ ಹೊರ್ತು, ನಮ್ಮನ್ನು ಒಬ್ಬರೂ ದೂಷಿಸರು. ಆದ್ದರಿಂದ ನೀನೀಕಾರ್ಯವನ್ನು ಒಂದು ಪಿಳ್ಳೆಗೂ ಗೋಚರವಾಗದಂತೆ ನಡಿಸು; ಹೋಗೆಂದು, ವೀಳೆಯವನ್ನು ಕೊಟ್ಟು ಕಳುಹಿಸಲು; ಆ ಪುರೋಚನನು ಅದೇ ಮೇರೆಗೆ ಮಾಡಿ, ಕಾದು ಕೊಂಡಿದ್ದನು.

ಇತ್ತಲೀ ಪಾಂಡವರು ತಮ್ಮ ಹಿಂದೆ ಬರುವ ಭೀಷ್ಮಾದಿಗಳನ್ನೂ ಪುರಜನರನ್ನೂ ಹಿಂತಿರಿಗಿ ಹೋಗುವ ಹಾಗೆ ಬೇಡಿ ಕೊಳ್ಳುತ್ತಿರಲು; ಅವರೆಲ್ಲರು ಬಹು ವ್ಯಸನಾಕ್ರಾಂತರಾಗಿ, ಕಂಬನಿಗಳನ್ನು ತುಂಬುತ್ತಾ, ಆ ಪಾಂಡವರನ್ನು ಹರಸಿ, ಹಿಂತಿರಿಗಿ, ಹಸ್ತಿನಾವತೀ ಪಟ್ಟಣಕ್ಕೆ ಹೋದರು. ಆದರೆ ಈ ಕೌರವಾದಿಗಳು ಮಾಡಿದ ದುರಾಲೋಚನೆಯನ್ನು ತಿಳಿದ ವಿದುರನು ಆ ಪಾಂಡವರ ಮೇಲಣ ಮೋಹದಿಂದ ಅವರಿಗೆ ಉಂಟಾಗುವ ಆಪತ್ತು ನಾಶವಾಗಿ ಹೋಗುವ ಹಾಗೆ ತಕ್ಕ ತೋಡನ್ನು ಮಾಡಿ, ಈ ವಿವರವನ್ನು ಧರ್ಮರಾಯನಿಗೆ ತಿಳಿಸ ಬೇಕೆಂದು ಇನ್ನು ಸ್ವಲ್ಪ ದೂರ ಅವರ ಸಂಗಡ ಬಂದು, ಅಲ್ಲಿ ಮತ್ತೊಬ್ಬರಿಗೂ ತಿಳಿಯದ ಹಾಗೆ ಧರ್ಮರಾಯನನ್ನು ಕುರಿತು ಮ್ಲೇಂಛ ಭಾಷೆಯಲ್ಲಿ ಗೂಢಾರ್ಥವಾಗಿ ಹೇಳಿದನು; ಏನಂದರೆ—ಎಲೈ, ಧರ್ಮರಾಯನೇ, ನೀನು ಸಕಲ ಭಾಷೆಗಳನ್ನು ತಿಳಿದಂಥವನು. ಲೋಕದಲ್ಲಿ ಪೂರ್ವೋತ್ತರ ವೃತ್ತಾಂತಗಳನ್ನು ವಿಚಾರಿಸಿ, ಬುದ್ಧೀ ಬಲದಿಂದ ನಡೆಯುತ್ತಲಿರುವಂಥ ಪುರುಷನು ಸ್ವಸಂರಕ್ಷಣ ರೂಪ ಧರ್ಮವನ್ನೂ, ಬಂಧು ಜನ ವಿರೋಧವನ್ನೂ ತಿಳಿದು, ತನಗೆ ಶತ್ರುಗಳಿಂದ ಬರುವ ಆಪತ್ತುಗಳನ್ನು ತಪ್ಪಿಸಿ ಕೊಳ್ಳುವದನ್ನೇ ಹುಡುಕುತ್ತಾ ಇರ ಬೇಕು. ಕಬ್ಬಿಣ ಉಕ್ಕುಗಳಿಂದ ಮಾಡಲ್ಪಡದೆ ಇರುವಂಥಾವಾಗಿದ್ದರೂ, ಅತಿ ತೀಕ್ಷ್ಣವಾಗಿ ಶರೀರವನ್ನು ಖಂಡ ಖಂಡಗಳಾಗಿ ಕೊಯ್ಯುವಂಥ ಶಸ್ತ್ರಾಸ್ತ್ರವು ಇಂಥಾದ್ದೆಂದು ತಿಳಿದಿರುವಂಥವನನ್ನು ಶತ್ರುಗಳು ಸಂಹರಿಸಲಾರರು. ಹೊದೆಗಳನ್ನು ಕೆಡಿಸುವಂಥಾದ್ದಾಗಿ—ಶೈತ್ಯವನ್ನು ಹೋಗಲಾಡಿಸುವಂಥಾದ್ದಾಗಿ—ಒಬ್ಬರಿಗೂ ತಿಳಿಯದಂತೆ ಗೋಪ್ಯವಾಗಿ—ಒಂದು ಮರದ ಪೊಟ್ರೆಯಲ್ಲಿ ಇರುವ ವಸ್ತುವು ತನಗೆ ಬಾಧಕವನ್ನು ಉಂಟು ಮಾಡದ ಹಾಗೆ ಎಚ್ಚರವಾಗಿ ನಡೆದು ಕೊಳ್ಳುವವನು ಬಹು ಕಾಲ ಬದುಕುವನು. ಕಣ್ಣು ಇಲ್ಲದೆ ಇರುವಂಥವನು ಮಾರ್ಗವನ್ನೂ ದಿಕ್ಕುಗಳನ್ನೂ ತಿಳಿಯಲಾರನು. ಧೈರ್ಯವಿಲ್ಲದ ಪುರುಷನು ಒಂದು ಕಾರ್ಯವನ್ನೂ ಮಾಡಲಾರದೆ, ಐಶ್ವರ್ಯವಂತನಾಗನು. ಈ ಅರ್ಥವನ್ನು ನೀನು

ತಿಳಿದಿರು. ಮತ್ತು ಪ್ರಾಜ್ಞರಾಗಿರುವಂಥವರು ಲೋಹಾದಿಗಳಿಂದ ನಿರ್ಮಿತವಾದ ಅಸ್ತ್ರವನ್ನು ಶತ್ರುವಿನಿಂದ ಹೊಂದುವದೇ ಇಲ್ಲ. ಒಂದು ವೇಳೆ ಹೊಂದಿದರೂ, ಮುಳ್ಳು ಹಂದಿಯು ಅಗ್ನಿಯಿಂದ ಒಂದು ಮಾರ್ಗಕ್ಕೆ ಭಯ ತಟ್ಟಿದರೆ, ಮತ್ತೊಂದು ಮಾರ್ಗದಿಂದ ತಪ್ಪಿಸಿ ಕೊಂಡು ಹೋಗುವ ಹಾಗೆ ಆ ಶಸ್ತ್ರದಿಂದುಂಟಾಗುವ ಅಪಾಯವನ್ನು ತಪ್ಪಿಸಿ ಕೊಳ್ಳುವರು. ಹಗಲಿನಲ್ಲಿ ಸಂಚಾರದಿಂದಲೂ, ರಾತ್ರಿಯಲ್ಲಿ ನಕ್ಷತ್ರಗಳಿಂದಲೂ, ಮಾರ್ಗವನ್ನು ತಿಳಿಯ ಬೇಕು. ತನ್ನ ನಿಮಿತ್ತವಾಗಿ ಪಂಚೇಂದ್ರಿಯಗಳನ್ನು ನಿಗ್ರಹಿಸಿದರೇ ಹೊರ್ತು, ಸ್ವಸಂರಕ್ಷಣೆ ಆಗುವದಿಲ್ಲವೆಂದು ಹೇಳಿದ ವಿದುರನ ಮಾತನ್ನು ಕೇಳಿ, ಧರ್ಮರಾಯನು—ನೀನು ಹೇಳಿದ್ದಕ್ಕೆಲ್ಲಾ ಅರ್ಥವಾಯಿತು ಎನಲು; ವಿದುರನು ಅವರೆಲ್ಲರನ್ನು ಹರಸಿ, ತಾನು ಹಿಂತಿರುಗಿ, ಪಟ್ಣಕ್ಕೆ ಬಂದನು.

ಇತ್ತಲಾ ಧರ್ಮರಾಯಾದಿಗಳು ವಾರಣಾವತ ಪಟ್ಣವನ್ನು ಕುರಿತು ತೆರಳುತ್ತಿರಲು; ಕುಂತಿಯು—ಎಲೈ, ಧರ್ಮಜನೇ, ವಿದುರನು ಹೇಳಿದ ಸಂಕೇತವು ನಾವು ಕೇಳತಕ್ಕದ್ದಾಗಿದ್ದರೆ, ನಮಗೆ ತಿಳಿಸು, ಎನಲು; ಆತನು—ಎಲೈ, ತಾಯೇ, ವಾರಣಾವತ ಪಟ್ಣದಲ್ಲಿ ಕೌರವಾದಿಗಳು ಮಾಡಿಸಿದ ಅರಗಿನ ಮನೆಯಲ್ಲಿ ಅರ್ಧರಾತ್ರಿಯಲ್ಲಿ ಉಂಟಾಗುವ ಬೆಂಕಿಯಿಂದ ನಾವೆಲ್ಲರು ದಹಿಸಲ್ಪಡದ ಹಾಗೆ ಎಚ್ಚರವಾಗಿರ ಬೇಕೆಂತಲೂ; ಆ ಮನೆಗೆ ಬೆಂಕಿ ಹಾಕುವ ಪುರೋಚನನು ನಮ್ಮ ಆಶ್ರಿತನಾಗಿಯೇ ಇರುತ್ತಾನೆಂತಲೂ; ನಾವು ಹಿಂತಿರಿಗಿ ಹೋಗದೆ, ಆ ಮನೆಯಲ್ಲಿಯೇ ಇದ್ದು ಕೊಂಡು, ಒಂದು ಸುರಂಗವನ್ನು ಮಾಡಿಸಿ ಕೊಂಡು, ಅದರ ಮೂಲಕವಾಗಿ ಅಗ್ನಿ ಭಯವನ್ನು ತಪ್ಪಿಸಿ ಕೊಳ್ಳ ಬೇಕೆಂತಲೂ; ಉದಯ ಕಾಲದಲ್ಲಿ ಬೇಟೆಯ ನೆವದಿಂದಲೂ, ರಾತ್ರಿ ಕಾಲದಲ್ಲಿ ನಕ್ಷತ್ರ ಮೂಲವಾಗಿಯೂ, ಮಾರ್ಗವನ್ನು ತಿಳಿದು ಕೊಂಡು, ದೇಶಾಂತರಕ್ಕೆ ಹೋಗ ಬೇಕೇ ಹೊರ್ತಾಗಿ, ಹಿಂತಿರಿಗಿ ಪಟ್ಣಕ್ಕೆ ಬರ ಕೂಡದೆಂತಲೂ; ಭಯ ಪಡದೆ, ಧೈರ್ಯವಾಗಿರ ಬೇಕೆಂತಲೂ; ಅಲ್ಲಿ ಸುರಂಗ ಮಾಡುವದಕ್ಕೆ ನಾನೇ ಒಬ್ಬ ಆಪ್ತನನ್ನು ಕಳುಹಿಸುತ್ತೇನೆಂತಲೂ; ಹೀಗಾದರೆ ನಿಮ್ಮೈವರಿಗೂ ಕೇಡು ಬರಲಾರದೆಂದು ವಿದುರನು ಹೇಳಿ ಹೋದನು, ಎಂದು ಹೇಳಲು; ಕುಂತಿ ಯೋಚನಾಪರಳಾಗಿ—ನಿಮ್ಮ ಮನ ಬಂದಂತೆ ನಡಿಸಿ ಎಂದು ಹೇಳಿದಳು. ಆಗ ಪಾಂಡವರು ಪಯಣಗತಿಯಿಂದ ವಾರಣಾವತಕ್ಕೆ ಬಂದು ಸೇರಿ, ಆ ಪಟ್ಣದ ಮುಖ್ಯಾಧಿಕಾರಿಗಳೇ ಮೊದಲಾದ ಪುರಜನಗಳಿಂದ ಸನ್ಮಾನ ಹೊಂದಿ, ಅಚ್ಛಿನ್ನಭಕ್ತನಂತೆ ನಟಿಸುತ್ತಲಿರುವ ಪುರೋಚನನು ತೋರಿಸಿದ ಅರಮನೆಯನ್ನು ಪ್ರವೇಶಿಸಿ, ಅಲ್ಲಿ ಸಿದ್ಧ

ವಾಗಿರುವ ಷಡ್ರಸೋಪೇತಾನ್ನವನ್ನುಂಡು, ಬೇಕಾದ ಪಾನೀಯವನ್ನು ಕುಡಿದು, ವಿಶ್ರಮಿಸಿ ಕೊಳ್ಳುತ್ತಾ ಇರುವಾಗ; ಧರ್ಮಜನು ತನ್ನ ತಮ್ಮಂದಿರಿಗೆ ವಿದುರನು ಹೇಳಿದ ಸಂಕೇತಾರ್ಥವನ್ನು ತಿಳಿಸಿ, ಕೆಲವು ಕಾಲ ಸುಖದಿಂದಿರುತ್ತಿರಲು; ಒಂದು ದಿವಸ ವಿದುರನು ಕಳುಹಿಸಿದ ಒಬ್ಬ ಕಾಮಾಟದವನು ಅಂತರಂಗವಾಗಿ ಧರ್ಮರಾಯನನ್ನು ಕಂಡು—ಎಲೈ, ಯಮಜಾತನೇ, ನಾನು ವಿದುರನು ಕಳುಹಿಸಿದ ಕಾಮಾಟದವನು; ಆತನು ಮಧ್ಯ ದಾರಿಯಲ್ಲಿ ಮ್ಲೇಂಛ ಭಾಷೆಯಲ್ಲಿ ಉಸುರಿದ್ದನ್ನೇ ಗುರುತಾಗಿ ಹೇಳಿ, ನೀವು ತಪ್ಪಿಸಿ ಕೊಂಡು ಹೋಗುವಂತೆ ಒಂದು ಸುರಂಗವನ್ನು ಮಾಡಿ ಬರ ಹೇಳಿದನು, ಎನಲು; ಧರ್ಮರಾಯನು ಆತನಿಗೆ ಬಹುಮಾನವನ್ನು ಕೊಡಲು; ಆ ಕಾಮಾಟದವನು ರಹಸ್ಯವಾಗಿ ಮೇಲ್ಭಾಗದಲ್ಲಿ ಒಬ್ಬನು ಪ್ರವೇಶಿಸುವ ಹಾಗೆ ಬಾಯಿ ಇಟ್ಟು, ಒಳಗೆ ವಿಸ್ತಾರವಾಗಿ ಹಳ್ಳವನ್ನು ಮಾಡಿ, ಮೇಲು ಬಾಗಲು ಮುಚ್ಚಿ, ಒಬ್ಬರಿಗೂ ಕಾಣಿಸದ ಹಾಗೆ ಮಾಡಿ, ಪುರೋಚನನು ಬೆಂಕಿಯನ್ನು ಹಚ್ಚುವ ದಿವಸವನ್ನು ಆತನಿಗೆ ತಿಳುಹಿಸಿ, ವಿದುರನ ಬಳಿಗೆ ಹೊರಟು ಹೋದನು. ಈ ಪಾಂಡವರು ಈ ಅರ್ಥವನ್ನು ಒಬ್ಬರಿಗೂ ತಿಳಿಸದೆ, ವಂಚಕನಾದ ಪುರೋಚನನನ್ನು ವಂಚಿಸ ಬೇಕೆಂದು ಸಮಯವನ್ನು ನಿರೀಕ್ಷಿಸುತ್ತಾ ಇರುತ್ತಿದ್ದರು. ಇದಲ್ಲದೆ ಆ ಪುರೋಚನನು ಒಬ್ಬ ವ್ಯಾಧ ಸ್ತ್ರೀಯನ್ನು ಆ ಅರಮನೆಯಲ್ಲಿ, ಅಲ್ಲಿ ನಡೆದ ಸಂಗತಿಯನ್ನೆಲ್ಲಾ ತನಗೆ ತಿಳಿಸುವ ಹಾಗೆ ನೇಮಿಸಿ, ಇಟ್ಟಿದ್ದನು.

ಹೀಗೆ ಕೆಲವು ದಿವಸ ಕಳೆದ ಮೇಲೆ, ವಿದುರನು ಹೇಳಿದ್ದ ಸಂಕೇತ ದಿವಸವು ಬರಲು; ಪಾಂಡವರು ಆ ರಾತ್ರಿಯಲ್ಲಿ ಆ ಅರಮನೆಗೆ ಪುರೋಚನ ಸಮೇತವಾಗಿ ಬೆಂಕಿಯನ್ನು ಹಾಕಿ, ತಾವು ಸುರಂಗ ಮಾರ್ಗವಾಗಿ ತಪ್ಪಿಸಿ ಕೊಂಡು ಹೋಗುವದಕ್ಕೆ ಸಿದ್ಧವಾಗಿದ್ದರು. ಆ ರಾತ್ರಿಯಲ್ಲಿ ಕುಂತೀ ದೇವಿಯು ಒಂದು ವ್ರತದ ನಿಮಿತ್ತವಾಗಿ ಆ ಪುರ ಜನಗಳಿಗೆಲ್ಲಾ ಸಮಾರಾಧನೆಯನ್ನು ಮಾಡಿಸಿ, ಭೋಜನಾನಂತರ ದಕ್ಷಿಣೆ ತಾಂಬೂಲಗಳನ್ನು ಕೊಟ್ಟು, ಅವರನ್ನು ಕಳುಹಿಸಿ, ತಾನು ಪುತ್ರ ಸಮೇತಳಾಗಿ ಭೋಜನ ಮಾಡಿ, ಸುಖ ನಿದ್ರೆ ಗೈಯುತ್ತಿದ್ದಳು. ಇದಲ್ಲದೆ ಪುರೋಚನನು ನೇಮಿಸಿದ ಆ ಶಬರ ಸ್ತ್ರೀಯು ಅದೇ ದಿವಸ ರಾತ್ರಿ ಕಾಲ ಪ್ರೇರಿತಳಾಗಿ ತನ್ನ ಐದು ಮಂದಿ ಮಕ್ಕಳನ್ನು ಕರೆದು ಕೊಂಡು, ಜೇನು ಮೊದಲಾದ ಬಲೀಯ ಪದಾರ್ಥಗಳನ್ನು ತಿಂದು, ಮದ್ಯ ಪಾನವನ್ನು ಮಾಡಿ, ಮತ್ತಳಾಗಿ, ಅಲ್ಲಿಯೇ ಗಾಢ ನಿದ್ರೆಯನ್ನು ಮಾಡುತ್ತಿದ್ದಳು. ಇತ್ತಲಾ ಭೀಮನು ಅರ್ಧ ರಾತ್ರಿಯಲ್ಲಿ ಎಲ್ಲರು ಗಾಢ ನಿದ್ರೆಯಲ್ಲಿರುವಾಗ, ಕುಂತಿ

ಮೊದಲಾದ ಐವರನ್ನು ಮೊದಲು ಸುರಂಗ ಮಾರ್ಗದಿಂದ ಕಳುಹಿಸಿ, ತಾನು ದೊಡ್ಡ ಸುಂಟರ ಘಾಳಿ ಬಂದ ವೇಳೆಯಲ್ಲಿ ಮೊದಲು ಪುರೋಚನನು ಮಲಗಿದ್ದ ಮನೆಗೆ ಯಜ್ಞೇಶ್ವರನನ್ನು ತೋರಿಸಿ, ಆ ಮೇಲೆ ತಾವಿದ್ದ ಮನೆಗೆ ಬೆಂಕಿ ಹಚ್ಚಿ, ಸುರಂಗ ಮಾರ್ಗದಿಂದ ತಾಯಿ ಅಣ್ಣ ತಮ್ಮಂದಿರೊಡನೆ ಕಾಡು ಮಾರ್ಗವಾಗಿ ಹೋಗಿ, ನಡೆಯಲಾರದೆ, ಶ್ರಮ ಪಡುವ ಧರ್ಮರಾಯಾದಿಗಳನ್ನು ಭುಜದ ಮೇಲೂ ಕಂಕುಳಲ್ಲಿಯೂ ಇಟ್ಟು ಕೊಂಡು, ವೇಗದಿಂದ ನಡೆಯುತ್ತಾ, ಗಂಗಾ ನದಿಯ ತಡಿಗೆ ಹೋಗಿ, ಅಲ್ಲಿ ವಿದುರನು ಆಜ್ಞಾಪಿಸಿದ ದಾಶರಾಯನಿಂದ ಓಡದಿಂದ ಆ ಗಂಗೆಯನ್ನು ದಾಟಿ, ಇನ್ನೂ ಕೆಲವು ಗಾವುದ ದೂರ ಹೋಗಿ, ಗೊಂಡಾರಣ್ಯದಲ್ಲಿ ಒಂದು ದೊಡ್ಡ ಮರದ ಕೆಳಗೆ ಅವರೆಲ್ಲರನ್ನು ಇಳಿಸಿ, ಅಲ್ಲಿ ನಿದ್ರೆ ಮಾಡುತ್ತಿರುವ ಧರ್ಮರಾಯಾದಿಗಳನ್ನು ಒಬ್ಬನೇ ಧೈರ್ಯವಾಗಿ ಕಾದು ಕೊಂಡು ಇರುತ್ತಿದ್ದನು.

ಅನಂತರದಲ್ಲಿ ಆ ಭೀಮನು ಎಚ್ಚತ್ತಿರುವ ಧರ್ಮರಾಯನನ್ನು ಅಲ್ಲಿ ಎಚ್ಚರವಾಗಿರುವಂತೆ ಹೇಳಿ, ತಾನು ದಾಹ ತೀರ್ಥವನ್ನು ತೆಗೆದು ಕೊಂಡು ಬರ ಬೇಕೆಂದು ಜಲ ಪಕ್ಷಿಗಳ ಸ್ವರವನ್ನೇ ಆಲಿಸಿ ಕೊಂಡು, ನಡೆದು ಹೋಗುತ್ತಿದ್ದನು. ಆಗ ಭೀಮನು ನಡೆದು ಹೋಗುತ್ತಿರಲು; ಅವನು ಹೆಜ್ಜೆ ಇಟ್ಟ ಸ್ಥಳದಲ್ಲಿರುವ ಮಹಾ ವೃಕ್ಷಗಳೆಲ್ಲಾ ಅವನ ತೊಡೆಗಳಿಗೆ ಸೋಂಕಿ, ಸಹ ಮೂಲವಾಗಿ ಮುರಿದು ಬೀಳುತ್ತಿದ್ದವು. ಮತ್ತು ಆತನ ಭುಜ ಬಲದಿಂದ ಹುಟ್ಟಿದ ಚಂಡಮಾರುತವು ದಿಕ್ಕುಗಳಲ್ಲಿ ಕಿಕ್ಕಿರಿಸಿ, ಅತಿ ಭಯಂಕರವಾದ ಧ್ವನಿ ಮಾಡುತ್ತಾ, ಬೀಸುವದಕ್ಕೆ ತೊಡಗಿತು. ಹೀಗೆ ಒಂದು ಸರೋವರದ ಬಳಿಗೆ ಹೋಗಿ, ಅಲ್ಲಿ ಸ್ನಾನ ಪಾನಗಳನ್ನು ಮಾಡಿ, ತನ್ನ ಉತ್ತರೀಯದಲ್ಲಿಯೂ ತಾವರೇ ಎಲೆಗಳಲ್ಲಿಯೂ ಉದಕವನ್ನು ಕಟ್ಟಿ ಕೊಂಡು, ಎರಡು ಹರುದಾರಿ ದೂರದಲ್ಲಿರುವ ವಟವೃಕ್ಷದ ತಡಿಗೆ ಬಂದು, ಕುಂತಿ ಮೊದಲಾದವರನ್ನೆಬ್ಬಿಸಿ, ಅವರಿಗೆ ಪಾನೀಯವನ್ನು ಕೊಡಲು; ಅವರು ಆ ತಣ್ಣೀರನ್ನು ಕುಡಿದ ಮಾತ್ರದಲ್ಲಿಯೇ ಮಾರ್ಗ ಶ್ರಮ ಪರಿಹಾರವಾಗಿ, ಆ ಮರದ ಬುಡದಲ್ಲಿಯೇ ಗೊರಕೆ ಹಾಕುತ್ತಾ, ನಿದ್ರೆ ಮಾಡುತ್ತಿದ್ದರು. ಆಗ ಭೀಮನು ಅವರನ್ನು ನೋಡಿ, ಶೋಕ ಸಂತಪ್ತ ಹೃದಯನಾಗಿ—ಹಸ್ತಿನಾವತೀ ಪಟ್ಣದಲ್ಲಿಯೂ ವಾರಣಾವತೀ ಪಟ್ಣದಲ್ಲಿಯೂ, ದಿವ್ಯ ಶಯನಗಳ ಮೇಲೆ ಮಲಗುತ್ತಿದ್ದ ಇವರಿಗೆ ಈ ಮಣ್ಣಿನ ಮೇಲೆ ಹ್ಯಾಗೆ ನಿದ್ರೆ ಬಂತೋ? ವಸುದೇವನಿಗೆ ತಂಗಿಯಾಗಿ—ಕುಂತಿಭೋಜನಿಗೆ ಮಗಳಾಗಿ—ವಿಚಿತ್ರವೀರ್ಯನಿಗೆ ಸೊಸೆಯಾಗಿ—ಪಾಂಡುರಾಯನಿಗೆ ಧರ್ಮ ಪತ್ನಿಯಾಗಿ—ಸರ್ವ ಲಕ್ಷಣ ಸಂಪನ್ನೆ

ಯಾಗಿ–ಪದ್ಮಗರ್ಭ ಸದೃಶ ಕಾಂತಿ ವಿರಾಜಮಾನೆಯಾಗಿ–ಕೋಮಲಾಂಗಿಯಾ
ಗಿ–ದಿವ್ಯ ಪರ್ಯಂಕದ ಮೇಲೆ ಮಲಗುವದಕ್ಕೆ ಯೋಗ್ಯಳಾಗಿರುವ ಈ ಕುಂತೀ
ದೇವಿಯು ದೇವಾಂಶ ಸಂಭವರಾದ ನಮ್ಮಂಥ ಕುಮಾರರನ್ನು ಪಡೆದವಳಾದ
ರೂ ಈ ಅರಣ್ಯದಲ್ಲಿ ದಿಕ್ಕಿಲ್ಲದವಳಂತೆ ನಿದ್ದೆ ಹೋಗುವದನ್ನು ನೋಡ ಬೇ
ಕಾಯಿತು! ಧರ್ಮಪರನಾಗಿಯೂ–ಮಹಾ ಪರಾಕ್ರಮಶಾಲಿಯಾಗಿಯೂ–ತ್ರಿ
ಲೋಕಾಧಿಪತ್ಯಕ್ಕೆ ಯೋಗ್ಯನಾಗಿಯೂ ಇರುವ ಈ ಯಮಜಾತನು ಈ
ಭೂಮಿಯ ಮೇಲೆ ಬಿದ್ದು ಇದ್ದಾನೆ! ನೀಲ ಮೇಘ ಸಮಾನ ಕಾಂತಿವಂತನಾ
ಗಿ–ಅಸಮಾನ ಶೌರ್ಯ ಧುರಂಧರನಾದ ಈ ಧನಂಜಯನು ಹೀಗೆ ಭೂಮಿಯ
ಮೇಲೆ ಬಿದ್ದು ಇದ್ದಾನೆ! ಕನ್ನೈದಿಲೇ ಪುಷ್ಪದೋಪಾದಿಯಲ್ಲಿ ಕಪ್ಪಾದ ಕಾಂ
ತಿಯುಳ್ಳವರಾಗಿ–ರೂಪು ಸಂಪತ್ತಿನಲ್ಲಿ ಅಶ್ವಿನೀ ದೇವತೆಗಳನ್ನೇ ಅನುಸರಿಸಿರು
ವಂಥ ಈ ನಕುಲ ಸಹದೇವರು ಈ ನೆಲದ ಮೇಲೆ ಒರಗಿರುವದನ್ನು ನೋ
ಡುವದಕ್ಕಿಂತ ಮತ್ತೊಂದು ದುಃಖ ಉಂಟೇ? ಎಂದು ಕೊರಗುತ್ತಾ, ನಿರ್ಭೀತ
ನಾಗಿ ಕಾದು ಕೊಂಡಿರುತ್ತಿದ್ದನು.

60. The Demon Hidimba slain by Bhima.
೬೦. ಹಿಡಿಂಬ ವಧೆ.

ಅನಂತರದಲ್ಲಿ, ಪಾಂಡವರು ಮಲಗಿರುವ ಮರಕ್ಕೆ ಸ್ವಲ್ಪ ದೂರದಲ್ಲಿ ಒಂ
ದು ಮತ್ತೀಮರವನ್ನು ಆಶ್ರೈಸಿ ಕೊಂಡು, ಹಸಿವು ಬಾಯಾರಿಕೆಗಳಿಂದ ಪೀಡಿತ
ನಾಗಿರುವಂಥ–ಮಹಾ ಬಲಶಾಲಿಯಾಗಿರುವಂಥ–ಕ್ರೂರಾತ್ಮನಾದಂಥ–ವಿಕಾರ
ರೂಪುಳ್ಳಂಥ–ಕರಾಳವ-ದನನಾಗಿರುವಂಥ–ಕೊತ್ತಿಗಣ್ಣುಗಳುಳ್ಳಂಥ–ಹಿಡಿಂಬ
ನೆಂಬ ರಾಕ್ಷಸನು ಒಂದು ಸಾರಿ ಆಕಳಿಸಿ, ಮೈ ಮುರಿದು ಕೊಂಡು, ಬಿರುಸಾಗಿ
ರುವ ತಲೇ ಕೂದಲನ್ನು ಕೆದರಿ ಕೊಂಡು, ಮನುಷ್ಯ ಗಂಧವನ್ನು ಆಘ್ರಾಣಿಸಿ,
ಮಾಂಸದ ಮೇಲಣ ಆಶೆಯಿಂದ ತನ್ನ ತಂಗಿಯಾದ ಹಿಡಿಂಬಿಯನ್ನು ನೋಡಿ–
ಎಲೈ, ಹಿಡಿಂಬಿಯೇ, ಬಹು ಕಾಲಕ್ಕೆ ಮನಸ್ಸಿಗೆ ಪ್ರಿಯವಾದ ಮನುಷ್ಯ ಮಾಂ
ಸದ ಗಂಧವು ಘಾಳಿಯಿಂದ ತಿಳಿಯ ಬಂದು, ನನ್ನ ಬಾಯಿ ನೀರನ್ನು ಕರಿಸುತ್ತದೆ.
ಈಗ ಅತಿ ತೀಕ್ಷ್ಣವಾದ ನನ್ನ ಎಂಟು ಕೋರೆ ದಾಡಿಗಳಿಂದ, ತುಪ್ಪವನ್ನು ಸು
ರಿಯುವಂಥಾದ್ದಾಗಿಯೂ ಅತಿ ಮೃದುವಾಗಿಯೂ ಇರುವ ಮನುಷ್ಯನ ಖಂಡ
ವನ್ನು ಕಚ್ಚಿ, ಹೊಸ ರಕ್ತವನ್ನು ನೊರೆ ಕಟ್ಟುವ ಹಾಗೆ ಹೀರ ಬೇಕು. ಆ
ದ್ದರಿಂದ ನೀನು ಶೀಘ್ರವಾಗಿ ಹೋಗಿ, ಆ ಮನುಷ್ಯರನ್ನು ಹುಡುಕಿ, ಸಂಹರಿಸಿ,
ನನ್ನ ಬಳಿಗೆ ತೆಗೆದು ಕೊಂಡು ಬಾ. ನಾವಿಬ್ಬರು ಆ ಮಾಂಸವನ್ನು ಹೊಟ್ಟೇ

ತುಂಬಾ ಉಂಡು, ತೃಪ್ತಿ ಪಟ್ಟು, ಸಂತೋಷದಿಂದ ಕೈ ತಪ್ಪಳೆಗಳನ್ನು ಹಾಕಿ
ಕೊಂಡು, ಸಂಗೀತವನ್ನು ಹಾಡಿ, ನಾಟ್ಯವಾಡೋಣ ಎಂದು ಹೇಳಿ, ಕಳುಹಿಸ
ಲು; ಆ ಹಿಡಿಂಬಿಯು ಪಾಂಡವರಿದ್ದ ತಾವಿಗೆ ವೃಕ್ಷಗಳ ಮೇಲೆ ನಡೆಯುತ್ತಾ
ಬಂದು, ಸುಕುಮಾರ ಶರೀರಿಗಳಾಗಿ—ರೂಪು ಸಂಪನ್ನರಾಗಿ—ನೆಲದ ಮೇಲೆ ಮ
ಲಗಿರುವ ಧರ್ಮರಾಯಾದಿಗಳನ್ನೂ ಅವರ ಬಳಿಯಲ್ಲಿ ಯೌವನ ಸಂಪನ್ನನಾಗಿ
ಯೂ—ಆಜಾನು ಬಾಹುವಾಗಿಯೂ—ವಿಶಾಲವಾದ ಎದೆಯುಳ್ಳವನಾಗಿಯೂ—ಅ
ಸಮಾನ ಸೌಂದರ್ಯ ಶಾಲಿಯಾಗಿಯೂ—ಉನ್ನತಾಕಾರವುಳ್ಳವನಾಗಿಯೂ—ಸಿಂ
ಹ ಸ್ಕಂಧನಾಗಿಯೂ—ದಿವ್ಯ ಕಾಂತಿ ಸಂಪನ್ನನಾಗಿಯೂ—ಕಂಬು ಗ್ರೀವನಾಗಿ
ಯೂ—ಕಮಲ ಪತ್ರಾಕ್ಷನಾಗಿಯೂ—ಇರುವ, ಎಚ್ಚರವಾಗಿರುವ ಭೀಮನನ್ನು
ನೋಡಿ, ಕಾಮ ಬಾಣ ಪೀಡಿತೆಯಾಗಿ, ಆತನನ್ನು ಮದುವೆ ಆಗ ಬೇಕೆಂದು
ಮನಸ್ಸಿನಲ್ಲಿ ಆಲೋಚನೆ ಮಾಡಿ, ಅವಳು ಕಾಮರೂಪಿಯಾದ್ದರಿಂದ ತನ್ನ ರೌ
ದ್ರವಾದ ರಾಕ್ಷಸಾಕಾರವನ್ನು ಬಿಟ್ಟು, ಅತಿ ರಮಣೀಯವಾದ ಮನುಷ್ಯ
ಸ್ತ್ರೀರೂಪವನ್ನು ಧರಿಸಿ, ಸರ್ವಾಲಂಕಾರ ಶೋಭಿತೆಯಾಗಿ, ಮಂದ ಗಮನದಿಂ
ದ ಆತನ ಇಂಗಿತಗಳನ್ನೇ ದೃಷ್ಟಿಸಿ ನೋಡುತ್ತಾ, ಆತನ ಸಮೀಪಕ್ಕೆ ಬಂದು
ಸೇರಲು; ಭೀಮನು, ಅತಿ ಲಲಿತಾಕೃತಿಯುಳ್ಳವಳಾಗಿ—ಚಂದ್ರಮುಖ ಶೋಭಿತೆ
ಯಾಗಿ—ಕಮಲ ಲೋಚನೆಯಾಗಿ—ಕುಟಿಲವಾದ ಮುಂಗುರುಳುಗಳುಳ್ಳವಳಾ
ಗಿ—ನಸುನಗುತ್ತಾ ತನ್ನ ಸಮೀಪದಲ್ಲಿ ನಿಂತಿರುವವಳನ್ನು ನೋಡಿ, ಆಶ್ಚರ್ಯ
ಪಡುತ್ತಿದ್ದನು.

ಆ ಬಳಿಕ ಅವಳು ಉಚಿತ ಪ್ರಕಾರದಿಂದ ಆತನಿಗೆ ತನ್ನ ವಿಲಾಸಗಳನ್ನು
ತೋರಿಸಿ, ನಾಚಿಕೆಯಿಂದ ತಲೆಯನ್ನು ಬೊಗ್ಗಿಸಿ, ಮುಖದಲ್ಲಿ ಮುಗುಳು ನಗೆ
ಯನ್ನು ತೋರಿಸುತ್ತಾ, ಇಂತೆಂದಳು—ಎಲೈ, ಮಹಾ ಪುರುಷನೇ, ನೀನ್ಯಾರು?
ಎಲ್ಲಿಂದ ಬಂದೆ? ದೇವ ಕುಮಾರಕರೋಪಾದಿಯಲ್ಲಿ ಮಲಗಿರುವ ಈ ಕುಮಾ
ರಕರ್ಯಾರು? ಸ್ವಂತ ಮನೆಯಲ್ಲಿ ಸುಖದಿಂದ ಮಲಗಿರುವ ಹಾಗೆ ಈ ವಿಷಮ
ವಾದ ವನದಲ್ಲಿ ನಿರ್ಭೀತಳಾಗಿ ಮಲಗಿರುವ ಈ ಮುದುಕಿಯು ನಿನಗೇನಾಗ ಬೇ
ಕು? ಈ ಮಹಾರಣ್ಯವು ರಾಕ್ಷಸ ಭೂಯಿಷ್ಟವಾದದ್ದೆಂದು ತಿಳಿದು, ಇಲ್ಲಿ ಹ್ಯಾ
ಗಿದ್ದೀರಿ? ಈ ಅರಣ್ಯದಲ್ಲಿ ಹಿಡಿಂಬಕನೆಂಬ ಒಬ್ಬ ರಾಕ್ಷಸನು ಪಾಪಾತ್ಮನಾಗಿ, ದು
ಷ್ಟ ಸ್ವಭಾವದಿಂದ ಮನುಷ್ಯ ಮಾಂಸವನ್ನು ಬಯಸಿ, ನಿಮ್ಮನ್ನು ಕೊಂದು
ತರುವ ಹಾಗೆ ನನ್ನನ್ನು ಇಲ್ಲಿಗೆ ಕಳುಹಿಸಿದನು. ಆದರೆ ನಾನು ನಿನ್ನ ರೂಪಾತಿ
ಶಯಕ್ಕೆ ಮೋಹಿಸಿ, ನಿನ್ನನ್ನು ಗಂಡನಾಗ ವರಿಸಿದ್ದೇನೆ. ಇದು ಸತ್ಯವು.

ನೀನು ನನ್ನ ಮನೋಭೀಷ್ಟವನ್ನು ಸಲ್ಲಿಸಿದರೆ, ನಿಮಗೆ ರಾಕ್ಷಸರಿಂದುಂಟಾಗುವ
ಭಯವನ್ನು ತಪ್ಪಿಸುತ್ತೇನೆ. ನೀನೆನ್ನ ವರಿಸುವದಕ್ಕೆ ಸಮ್ಮತಿ ಪಡದಿದ್ದರೆ,
ನನ್ನ ಪ್ರಾಣವು ನಿಲ್ಲಲಾರದು, ಎನಲು; ಭೀಮನು,–ಎಲ್ಯೆ, ಕೋಮಲಾಂಗಿಯೇ,
ನೀನು ಹೇಳುವದು ಯುಕ್ತವೇ ಸರಿ. ಆದರೂ ನನಗೆ ಜ್ಯೇಷ್ಠ ಭ್ರಾತೃ
ವಾಗಿರುವ ಈ ಯುಧಿಷ್ಠಿರನು ಕನ್ಯಾ ಪರಿಗ್ರಹ ಮಾಡುವದಕ್ಕಿಂತ ಮುಂಚೆ
ನಾನು ಹ್ಯಾಗೆ ನಿನ್ನನ್ನು ವರಿಸಲಿ? ಮತ್ತು ನನಗೆ ಈ ರಾಕ್ಷಸಾದಿಗಳಿಂದ ಲೇ
ಶ ತೊಂದರೆ ಉಂಟಾಗಲಾರದು. ನನ್ನ ಎದುರಿಗೆ ನಿಲ್ಲುವದಕ್ಕೆ ದೇವೇಂದ್ರಾದಿ
ದೇವತೆಗಳೇ ಭಯ ಪಡುವಾಗ ಈ ರಾಕ್ಷಸರೆಷ್ಟು ಮಾತ್ರದವರು? ನೀನು ಅ
ಗತ್ಯವಾಗಿ ನಿನ್ನ ಅಣ್ಣನನ್ನು ಕಳುಹಿಸ ಬಹುದು ಎಂದು ಹೇಳಲು; ಆಕೆಯು
ಅವನನ್ನು ಬಿಟ್ಟು ಹೋಗಲಾರದೆ, ಅಲ್ಲಿಯೇ ನಿಂತಿದ್ದಳು.

ಹೀಗಿರುವಷ್ಟರಲ್ಲೇ, ರೋಷಾರುಣ ನೇತ್ರಗಳುಳ್ಳವನಾಗಿ–ಮಹಾ ರೌದ್ರಾ
ಕಾರ ಧರನಾಗಿ–ಊರ್ಧ್ವ ಕೇಶವುಳ್ಳವನಾಗಿ–ಕಪ್ಪಾದ ಶರೀರವುಳ್ಳವನಾಗಿ–
ದಂಷ್ಟ್ರಾಕರಾಳ ಮುಖವುಳ್ಳವನಾಗಿ–ಸಿಂಹದಂತೆ ರೌದ್ರಕರವಾದ ಘರ್ಜನೆಯು
ಳ್ಳವನಾಗಿ–ಮಹಾ ಬಲಶಾಲಿಯಾಗಿರುವ ಹಿಡಿಂಬನು, ತನ್ನ ತಂಗಿಯಾದ ಹಿಡಿಂ
ಬಿಯು ತಡ ಮಾಡಿದ್ದರಿಂದ, ಅತಿ ಕೋಪಿಷ್ಠನಾಗಿ, ಹಲ್ಲುಗಳನ್ನು ಕಡಿಯು
ತ್ತಾ, ಔಡುಗಳನ್ನು ಕಚ್ಚುತ್ತಾ, ಕಣ್ಣುಗಳಲ್ಲಿ ಕೆಂಡವನ್ನು ಕಾರುತ್ತಾ, ಭುಜ
ಯುಗ್ಮವನ್ನು ಅಪ್ಪಳಿಸುತ್ತಾ, ಕಾಲುಗಳಿಂದ ನೆಲವನ್ನು ಬಡಿಯುತ್ತಾ, ಮೇ
ಘದಂತೆ ಘರ್ಜಿಸುತ್ತಾ, ಕೋರೆದಾಡೆಗಳನ್ನು ಮಸೆದು ಕೊಳ್ಳುತ್ತಾ, ಹಸಿವು ಬಾ
ಯಾರಿಕೆಗಳಿಂದ ಪೀಡಿತನಾಗಿ–ನನಗೆ ಆಹಾರ ವಿಘ್ನವನ್ನು ಮಾಡಿದ ದುರಾತ್ಮ
ರ್‍ಯಾರು? ನನ್ನ ದುರಾಗ್ರಹವನ್ನು ತಿಳಿದಿದ್ದರೂ, ಹಿಡಿಂಬಿಯು ಹಿಂತಿರಿಗಿ ಬಾ
ರದೆ, ತಡವು ಮಾಡುವದಕ್ಕೆ ಕಾರಣವೇನು? ಎಂದು, ಆ ಹಿಡಿಂಬನು ತಾನು ಕೂ
ತಿದ್ದ ಮರದ ಮೇಲಿನಿಂದ ಕೆಳಕ್ಕೆ ಧುಮುಕಿ, ಯುಧಿಷ್ಠಿರಾದಿಗಳು ಇದ್ದೆಡೆಗೆ
ಬರುತ್ತಿರಲು; ಅತಿ ಭಯಂಕರನಾಗಿರುವಂಥ ಆತನ ಬರವನ್ನು ನೋಡಿ, ಹಿಡಿಂ
ಬಿಯು ಭೀತಳಾಗಿ, ಭೀಮನನ್ನು ನೋಡಿ–ಎಲ್ಯೆ, ದುಷ್ಟನಾದ ಹಿಡಿಂಬನು
ಬರುತ್ತಾನೆ. ನೀನು ಇವರನ್ನು ಎಬ್ಬಿಸಿದರೆ, ನಾನು ಕಾಮರೂಪಿಯಾದ ಕಾರ
ಣ ಎಲ್ಲ್ಯಾದರೂ ಹೊತ್ತು ಕೊಂಡು ಹೋಗುತ್ತೇನೆನಲು; ಭೀಮನು,–ಎಲ್ಯೆ,
ರಾಕ್ಷಸಿಯೇ, ಈ ಹುಲು ರಕ್ಕಸನ ಬರವಿಗೆ ಭಯ ಪಟ್ಟು, ಶತ್ರು ಭೀಮನಾ
ದ ನಾನು ಇವರ ನಿದ್ರಾ ಭಂಗವನ್ನು ಮಾಡುವದಿಲ್ಲ. ನಾನು ಮನುಷ್ಯ ಮಾ
ತ್ರದವನೆಂದು ತಿಳಿಯ ಬೇಡ. ಈ ನಿಶಾಚರನು ಜೀವದ ಆಶೆಯನ್ನು ತ್ಯಜಿಸಿ,

ನನ್ನನ್ನು ಕೆಣಕ ಬರುತ್ತಾನೆ. ನೀನು ಹೆದರದೆ, ನಿಶ್ಚಿಂತಳಾಗಿರು, ಎನಲು; ಅಷ್ಟರಲ್ಲೇ ಹಿಡಿಂಬನು ಬಂದು,ದೊಡ್ಡ ತುರುಬಿನಲ್ಲಿ ಮುಡಿದಿರುವ ಹೂಸರವನ್ನೂ ಅತಿ ಸೂಕ್ಷ್ಮವಾಗಿ ನೆರಿ ಹಿಡಿದು ಉಟ್ಟಿರುವ ದಿವ್ಯಾಂಬರವನ್ನೂ, ತೊಟ್ಟಿರುವ ಅಂದಿಗೆ, ಪಾಡಗ, ಪಾದಸರ, ಕಿರಿಗಂಟೆ, ಒಡ್ಯಾಣ, ಕೈಸರ, ಕಡಗ, ಚಳಕೆ, ತಾಳೀಪದಕ, ಮುತ್ತಿನಸರ, ಚಿನ್ನದಸರ, ಹರಳೋಲೆ, ಮೂಗುತಿ, ಬಾವುಲಿ, ಮೊದಲಾದ ಆಭರಣಗಳನ್ನೂ, ಪೂರ್ಣ ಚಂದ್ರ ಸಮಾನವಾದ ಮುಖವನ್ನೂ, ಅಂದವಾಗಿರುವ ಹುಬ್ಬುಗಳನ್ನೂ, ಸಂಪಿಗೇ ಮೊಗ್ಗಿನೋಪಾದಿಯಲ್ಲಿರುವ ಮೂಗನ್ನೂ, ಕಂನ್ನೈದಿಲೆ ಪುಷ್ಪದ ಎಸಳಿನೋಪಾದಿಯಲ್ಲಿರುವ ನೇತ್ರಗಳನ್ನೂ, ಚಿನ್ನದ ವರ್ಣಕ್ಕೆ ಸಮಾನವಾದ ಶರೀರವನ್ನೂ ಹೊಂದಿ, ಭೀಮನ ಬಳಿಯಲ್ಲಿ ನಲವಿನಿಂದ ನಿಂತಿರುವ ತನ್ನ ತಂಗಿಯನ್ನು ನೋಡಿ, ಇವಳು ಪುರುಷಾಭಿಲಾಷೆಯಿಂದ ಹೀಗೆ ಮಾಡಿದಳೆಂದು ಕೋಪಿಸಿ ಕೊಂಡು—ಎಲೈ, ಹಿಡಿಂಬಿಯೇ, ನನ್ನ ಭೋಜನಕ್ಕೆ ಯಾವವನು ವಿಘ್ನವನ್ನು ಮಾಡಿದನು? ನಾನು ಹಶಿವಿನಿಂದ ಬಾಧೆ ಪಡುವದನ್ನು ಎಣಿಸದೆ, ನೀನು ಯಾರ ಬಲದಿಂದ ಇಲ್ಲಿ ನಿಂತೆ? ರಾಕ್ಷಸ ಕುಲಕ್ಕೆ ಹೀಗೆ ಅಪಕೀರ್ತ್ತಿಯನ್ನುಂಟು ಮಾಡಿದ ನಿನ್ನನ್ನು ಈಗಲೇ ವಧಿಸುತ್ತೇನೆಂದು, ಕೋರೆದಾಡೆಗಳು ಅದರುವ ಹಾಗೆ ದಂತಗಳನ್ನು ನರಿನರಿನೆ ಕಡಿಯುತ್ತಾ, ಅಟ್ಟಹಾಸವನ್ನು ಮಾಡಿ ಕೊಂಡು, ಸಮೀಪಕ್ಕೆ ಬರುವ ರಾಕ್ಷಸನನ್ನು ನೋಡಿ, ಭೀಮನು ತನ್ನ ಅಣ್ಣ ತಮ್ಮಂದಿರಿಗೂ ತಾಯಿಗೂ ನಿದ್ರಾ ಭಂಗವಾಗ ಕೂಡದೆಂದೆಣಿಸಿ,—ಎಲೈ, ರಾಕ್ಷಸಾಧಮನೇ, ನಿಲ್ಲು, ನಿಲ್ಲು, ಎಂದು ಹೇಳಿ, ಆತನ ಎದುರಿಗೆ ಹೋಗಿ, ನಿಂತು,—ಎಲೋ, ಹೇಡಿಯೇ, ತಂಗಿಯನ್ನು ಕೊಲ್ಲುವದಕ್ಕೆ ಅಪೇಕ್ಷಿಸಿದ ನಿನ್ನ ದಿಟ್ಟತನವನ್ನು ಸುಡ ಬೇಕು! ಲೋಕದಲ್ಲಿ ಸ್ತ್ರೀಯರು ಮದನಾಧೀನರಾಗಿ ಪುರುಷರನ್ನು ಬಯುಸುವದು ಸಹಜವೇ. ನೀನು ಹೆಂಗಸಿನ ಮೇಲೆ ಕೈ ಮಾಡುವದು ಉಚಿತವಲ್ಲ. ನಿನ್ನಲ್ಲಿ ಬಲವಿದ್ದರೆ, ನನ್ನ ಸಂಗಡ ಯುದ್ಧಾ ಮಾಡು. ನಾನೊಬ್ಬನೇ ನಿನ್ನನ್ನು ಯಮ ಸನ್ನಿಧಾನಕ್ಕೆ ಕಳಹಿಸುತ್ತೇನೆ. ಮತ್ತು ನಿನ್ನ ಕರ ಚರಣಾದ್ಯವಯವಗಳೆಲ್ಲವನ್ನು ನಾಯಿ, ನರಿ, ಹದ್ದು ಮುಂತಾದವುಗಳಿಗೆ ಹಂಚಿ ಕೊಟ್ಟು, ಈ ವನವನ್ನು ಅರಾಕ್ಷಸವಾಗಿ ಮಾಡಿ, ಸರ್ವರಿಗೂ ಸಂತೋಷವನ್ನುಂಟುಮಾಡುತ್ತೇನೆಂದು ಹೇಳಲು;—

ಹಿಡಿಂಬನು,—ಎಲೈ, ನರಾಧಮನೇ, ನಿನ್ನನ್ನು ನೀನೇ ಯಾಕೆ ಹೊಗಳಿ ಕೊಳ್ಳುತ್ತೀ? ಸಾಮರ್ಥ್ಯವಿದ್ದರೆ, ನಿನ್ನ ಭುಜ ಬಲವನ್ನು ತೋರಿಸು. ಮುಂದೆ

ನಿನ್ನನ್ನು ಕೊಂದು, ನಿನ್ನ ರಕ್ತವನ್ನು ಹೀರಿ, ಆ ಮೇಲೆ ಇಲ್ಲಿ ಮಲಗಿರುವವರ ಮಾಂಸವನ್ನು ತಿಂದು, ಅನಂತರ ಈ ದುಷ್ಟಳನ್ನು ಸಂಹರಿಸುತ್ತೇನೆಂದು ಹೇಳಿ, ಯುದ್ಧ ಸನ್ನದ್ಧನಾಗಿ ಕಾಣಿಸಿ ಕೊಳ್ಳಲು; ಭೀಮ ಪರಾಕ್ರಮಶಾಲಿಯಾದ ಭೀಮಸೇನನು ಮುಖದಲ್ಲಿ ಮುಗುಳು ನಗೆಯನ್ನು ತೋರಿಸುತ್ತಾ, ಚಾಚಿರುವ ಆ ಹಿಡಿಂಬನ ತೋಳುಗಳನ್ನು ತನ್ನ ಬಾಹು ದಂಡಗಳಿಂದ ಸಿಂಹವು ಕ್ಷುದ್ರ ಮೃಗಗಳನ್ನು ಹಿಡಿದು ಕೊಳ್ಳುವಂತೆ ಘಟ್ಟಿಯಾಗಿ ಹಿಡಿದು ಕೊಳ್ಳಲು; ಆ ರಾಕ್ಷಸನು ಭೀಮನ ಭುಜ ಬಲಕ್ಕೆ ಆಶ್ಚರ್ಯ ಪಟ್ಟು, ರೋಷದಿಂದ ಆತನನ್ನು ಬಿಗಿದಪ್ಪಿ ಕೊಂಡು, ಅಟ್ಟಹಾಸವನ್ನು ಮಾಡಲು; ಭೀಮನು ಇನ್ನು ಕೋಪಿಸಿ ಕೊಂಡು—ರಾಕ್ಷಸನ ಸಿಂಹನಾದದಿಂದ ಇವರಿಗೆ ಎಚ್ಚರವಾದೀತು ಎಂದು ಎಣಿಸಿ, ಆ ರಾಕ್ಷಸನನ್ನು ಆಚೆಗೆ ಎಳೆಕೊಂಡು ಹೋಗಿ, ಮತ್ತೀ, ಮಾವು, ತಾಳೆ, ಹೊಂಗೆ, ಮುಂತಾದ ಮರಗಳಿಂದಲೂ, ಪರ್ವತ ಶಿಖರಗಳಿಂದಲೂ, ಗುಂಡು ಕಲ್ಲುಗಳಿಂದಲೂ, ಅವನೊಡನೆ ಹೆಣಗಾಡುತ್ತಿರಲು; ಈ ಸಾಮು ಸರಿಯಿಲ್ಲವೆಂದೆಣಿಸಿ, ಬಾಹು ಯುದ್ಧವನ್ನು ಮಾಡ ತೊಡಗಿ, ಇಬ್ಬರು ಮದ್ದಾನೆಗಳೋಪಾದಿಯಲ್ಲಿ ರೋಷ ಭೀಷಣಾಕಾರಗಳಿಂದ ಕೂಡಿದವರಾಗಿ, ಸರಿಮಿಗಿಲಾಗಿ ಹತ್ತಿ ಕೊಂಡು, ಮಗುಚಿ, ವಿಂಗಡಿಸುತ್ತಾ, ಭುಜಗಳಿಗೆ ಭುಜಗಳನ್ನು ಆನಿಸಿ, ತಳ್ಳುತ್ತಾ, ಒಳ ಹೊಕ್ಕು, ಒಬ್ಬರನ್ನೊಬ್ಬರು ಎತ್ತಿ ಹಾಕುತ್ತಾ, ಶಿಕ್ಕಿದರೆ ತಿರಿಗಿ ಹಾಕುತ್ತಾ, ಕರ ಕೌಶಲಗಳನ್ನು ತೋರಿಸುತ್ತಾ, ಲಾಗಗಳನ್ನು ಹಾಕಿ, ಪಟ್ಟು ತಪ್ಪಿಸಿ ಕೊಂಡು, ಎಡಗೈಯಿಂದ ಕೊರಳನ್ನು ಒತ್ತಿ, ಹಿಡಿದು, ಮಂಡಿಗೆ ಮಂಡಿಯನ್ನು ತಾಕಿಸಿ, ತಾಡಿಸಿ, ತಲೆ ಕೆಳಗಾಗಿ ತಳ್ಳುತ್ತಾ, ವಾರೆಪಾಟನಲ್ಲಿ ಅಮುಕಿ ಕೊಂಡು, ಹೊಕ್ಕು, ಲಂಘಿಸಿ, ತಳ್ಳುತ್ತಾ, ಚಕ್ರದೋಪಾದಿಯಲ್ಲಿ ಗರಿಗರಿನೆ ತಿರುಗುತ್ತಾ, ತಮ್ಮ ಪಾದಗಳ ಪೆಟ್ಟಿನಿಂದ ಹೊದೆಗಳನ್ನೂ ಮರಗಳನ್ನೂ ಬಳ್ಳಿಗಳನ್ನೂ ಧ್ವಂಸಾ ಮಾಡುತ್ತಾ, ಬಾರಿಬಾರಿಗೂ ಉಲ್ಲಾಸದಿಂದ ಕೈಗಳನ್ನು ಅಪ್ಪಳಿಸುತ್ತಾ, ಕಲ್ಲುಗಳಂತಿರುವ ಮುಷ್ಟಿಗಳಿಂದ ಒಬ್ಬರನ್ನೊಬ್ಬರು ತಿವಿಯುತ್ತಾ, ಅಟ್ಟಹಾಸಗಳಿಂದ ದಿಗಂತರವನ್ನು ಮುಚ್ಚುತ್ತಾ, ಒಬ್ಬರೊಬ್ಬರ ಮೇಲೆ ರೋಷಯುಕ್ತರಾಗಿ ಸೆಣಸಾಡುತ್ತಿರುವ ಸಮಯದಲ್ಲಿ ಮರದ ಕೆಳಗೆ ನಿದ್ರೆ ಹೋಗುತ್ತಾ ಇದ್ದ ಕುಂತಿ, ಧರ್ಮಜಾದಿಗಳು ಎಚ್ಚತ್ತು, ಎದುರಿನಲ್ಲಿ ನಿಂತಿರುವ ಹಿಡಿಂಬಿಯಿಂದ ಸಕಲ ವೃತ್ತಾಂತವನ್ನು ತಿಳಿದು, ಭೀಮನಿಗೆ ಇಂಥ ಕಷ್ಟ ಬಂತೇ? ಎಂದು ಕ್ಲೇಶ ಪಡುತ್ತಿದ್ದರು.

ಆಗ ಅರ್ಜುನನು ಭೀಮನ ಸಮೀಪಕ್ಕೆ ಹೋಗಿ—ಎಲೈ, ಮಹಾತ್ಮನೇ, ನಾವು

ನಿದ್ರೆಯಿಂದ ಈ ವೃತ್ತಾಂತವನ್ನು ತಿಳಿಯದೆ ಹೋದೆವು. ಈಗ ಕುಂತಿ ಧರ್ಮ
ಜರನ್ನು ನಕುಲ ಸಹದೇವರು ನೋಡಿ ಕೊಳ್ಳುತ್ತಿದ್ದಾರೆ. ನಾನು ನಿನಗೆ ಸಹಾ
ಯ ಮಾಡ ಬಂದೆನು. ನೀನು ಸ್ವಲ್ಪ ಹೊತ್ತು ಸುಮ್ಮನಿರು, ಎನಲು; ಭೀಮ
ನು,—ಎಲೈ, ತಮ್ಮನೇ, ನನ್ನ ಬಾಹು ಮಧ್ಯದಲ್ಲಿ ಶಿಕ್ಕಿರುವ ಈ ಕಳ್ಳನು ಎಲ್ಲಿ
ಗೆ ಪ್ರಾಣ ಸಹಿತ ಹೋದಾನು? ನೀನು ಭಯ ಪಡ ಬೇಡ. ಸುಮ್ಮನೆ ನೋ
ಡುತ್ತಿರು, ಎನಲು; ಅರ್ಜುನನು,—ಎಲೈ, ಭೀಮನೇ, ನೀನು ನಿನ್ನೆ ರಾತ್ರಿಯಿಂದ
ಇನ್ನೂ ಯುದ್ಧ ಪೂರೈಸಲಿಲ್ಲ. ಪ್ರಾತಃಕಾಲವಾಗುತ್ತಾ ಬಂತು. ಇವನನ್ನು
ಕೊಲ್ಲುವದಕ್ಕೆ ಯಾಕೆ ತಡ ಮಾಡುತ್ತೀ? ಇನ್ನು ಮೇಲೆ ಸಂಧ್ಯಾ ಸಮಯ
ಬರುತ್ತಲಿದೆ. ರೌದ್ರವೆಂಬ ಹೆಸರುಳ್ಳ ಸಮಯದಲ್ಲಿ ರಾಕ್ಷಸರಿಗೆ ಬಲ ಹೆಚ್ಚು
ವದೆಂದು, ಲೋಕ ರೂಢಿಯಾಗಿರುವದರಿಂದ, ಈತನ ಸಂಗಡ ವಿನೋದಗಳ
ನ್ನು ಮಾಡದೆ, ಶೀಘ್ರವಾಗಿ ಕೊಲ್ಲು, ಎನಲು; ಆ ಕ್ಷಣವೇ ಭೀಮನು ತನ್ನ ಭು
ಜ ಬಲವನ್ನು ತೋರಿಸುತ್ತಾ, ಆ ರಾಕ್ಷಸನ ತೋಳುಗಳನ್ನು ತನ್ನ ಹಸ್ತದಿಂದ
ಹಿಡಿದು, ನೂರು ಸಾರಿ ಗರಿಗರಿನೆ ತಿರುಗಿಸಿ, ಅವನನ್ನು ಕುರಿತು—ಎಲೈ, ರಾಕ್ಷ
ಸಾಧಮನೇ, ಇಷ್ಟು ಕಾಲವು ಮನುಷ್ಯರಿಗೆ ಹಿಂಸೆಯನ್ನು ಮಾಡುತ್ತಾ, ಮಾಂ
ಸಗಳನ್ನು ಮೆದ್ದು, ಪುಷ್ಟನಾಗಿ, ಭೂಮಿಗೆ ಹೊರೆಯಾಗಿ ಬದುಕಿದ್ದೆ. ಇನ್ನು
ಮೇಲೆ ಸುಮ್ಮನೆ ಸತ್ತು ಹೋಗು. ಈ ವನವು ಈ ಹೊತ್ತು ಮೊದಲ್ಗೊಂಡು
ನಿಷ್ಕಂಟಕವಾಗಿ, ಸಕಲ ಜನ ಸಂಚಾರ ಯೋಗ್ಯವಾಗಿರಲಿ ಎಂದು ಹೇಳಿ, ಅವ
ನನ್ನು ಭೂಮಿಗೆ ಬಡಿದು, ತನ್ನ ಪಾದಗಳಿಂದ ಅವನನ್ನು ಉಜ್ಜುತ್ತಾ, ಕುತ್ತಿ
ಗೆಯನ್ನು ಹಿಡಿದು, ನುಲಿಯಲು; ಆ ಹಿಡಿಂಬನು ಮಳೆಯಲ್ಲಿ ನೆನೆದಿರುವ ಭೇರಿ
ಯ ಶಬ್ದದಂತೆ ವಿಕಾರ ಧ್ವನಿಯನ್ನು ಮಾಡುತ್ತಾ, ಮರಣವನ್ನೈದಿದನು. ಆಗ
ಕುಂತಿ ಧರ್ಮಜಾದಿಗಳೂ ದೇವತೆಗಳೂ ಅತ್ಯಂತ ಹರ್ಷಿತರಾದರು.

ಆ ತರುವಾಯ ಅರ್ಜುನನು—ಈ ವನ ಸಮೀಪದಲ್ಲಿ ಒಂದು ಪಟ್ಟಣವಿರುವಂ
ತೆ ಕಾಣಿಸುತ್ತೆ. ಈ ಗದ್ದಲವನ್ನು ಆ ಪಟ್ಟಣದವರು ತಿಳಿದರೆ, ನಮ್ಮ ವೃತ್ತಾಂ
ತ ಕೌರವರಿಗೆ ಹ್ಯಾಗಾದರೂ ತಿಳಿಯ ಬರುತ್ತೆ. ಇಲ್ಲಿಂದ ಶೀಘ್ರವಾಗಿ ಹೋಗ
ಬೇಕೆನಲು; ಎಲ್ಲರು ಆ ವನವನ್ನು ಬಿಟ್ಟು, ಮುಂದಕ್ಕೆ ಹೊರಟರು. ಹಿಡಿಂ
ಬಿಯೂ ಅವರ ಹಿಂಗಡೆಯಲ್ಲಿ ನಡೆದಳು. ಹೀಗೆ ಸ್ವಲ್ಪ ದೂರ ಹೋದ ಮೇಲೆ,
ಆ ಹಿಡಿಂಬಿಯೂ ಕುಂತಿ ಧರ್ಮರಾಯರಿಗೆ ನಮಸ್ಕರಿಸಿ, ಕೈ ಕಟ್ಟಿ ನಿಂತು ಕೊಂ
ಡು—ಎಲೈ, ತಾಯೇ, ನಾನು ಭೀಮನನ್ನು ನೋಡಿದ್ದು ಮೊದಲು, ಆತನನ್ನೇ
ವರಿಸಿ ಇದ್ದೇನೆ. ಆತನೆನಗೆ ಪತಿಯಾಗದೆ ಹೋದರೆ, ನನ್ನ ಪ್ರಾಣಗಳು ನಿಲ್ಲ

ಲಾರವು. ಆದ್ದರಿಂದ ನೀವಾತನನ್ನು ಒಡಂಬಡಿಸಿ, ನನಗೆ ಪ್ರಾಣದಾನವನ್ನು ಮಾಡ ಬೇಕು. ನಾನು ದುಷ್ಟ ಸ್ತ್ರೀ ಎಂದು ಎಣಿಸ ಬೇಡಿರಿ! ನಾನು ಸಾಲ ಕಟಂಕಟಾ ಎಂಬ ಅಪ್ಸರ ಸ್ತ್ರೀಯು; ನಾನು ತ್ರಿಕಾಲಜ್ಞಳು. ನಿಮ್ಮನ್ನು ಧೃತರಾಷ್ಟ್ರನು ವಾರಣಾವತಕ್ಕೆ ಕಳುಹಿಸಿದ್ದನ್ನೂ, ಅರಗಿನ ಮನೆಯಿಂದ ನೀವು ವಿದುರನ ಸಹಾಯದಿಂದ ತಪ್ಪಿಸಿ ಕೊಂಡದ್ದನ್ನೂ, ಇಲ್ಲಿಂದ ಮುಂದೆ ಹೋದರೆ, ಶಾಲಿಹೋತ್ರಾಶ್ರಮದಲ್ಲಿ ನಿಮಗೆ ವೇದವ್ಯಾಸರ ಸಂದರ್ಶನ ಉಂಟಾಗುವದನ್ನೂ, ಅವರ ಅನುಗ್ರಹದಿಂದ ಮುಂದೆ ನಿಮಗಾಗ ತಕ್ಕ ಶುಭವನ್ನೂ ಬಲ್ಲೆನು, ಎಂದು ಹೇಳಲು; ಆ ಕುಂತಿಯು ಧರ್ಮಜನೊಡನೆ—ಇವಳು ದುಷ್ಟ ಸ್ತ್ರೀಯಲ್ಲ. ಭೀಮನು ಪರಿಗ್ರಹಿಸ ಬಹುದೆಂದು ಹೇಳಲು; ಅನಂತರದಲ್ಲಿ ಧರ್ಮಜನು ಭೀಮನನ್ನು ಕರೆದು—ನೀನು ನಮ್ಮಿಬ್ಬರ ಅಪ್ಪಣೆಯ ಪ್ರಕಾರ ಈಕೆಯನ್ನು ಪರಿಗ್ರಹಿಸು ಎಂದು ಆಜ್ಞಾಪಿಸಲು; ಭೀಮನು ಸಮ್ಮತಿಸಿ, ಅವಳನ್ನು ವರಿಸಿದನು. ಹೀಗೆ ಇವರು ಬಹು ದೂರ ನಡೆದು, ಶಾಲಿಹೋತ್ರಾಶ್ರಮಕ್ಕೆ ಬಂದು ಶೇರಿದರು.

61. Bhima slays the Demon Baka.

೬೧. ಬಕಾಸುರ ಸಂಹಾರ.

ಆ ಬಳಿಕ ಪಾಂಡವರು ಶಾಲಿಹೋತ್ರಾಶ್ರಮದಲ್ಲಿ ಆ ಮಹಾನುಭಾವನ ದೆಶೆಯಿಂದ ಪೂಜಿತರಾಗಿ, ಜಟೆಗಳನ್ನು ಧರಿಸಿ, ನಾರು ಶೀರೆಗಳನ್ನುಟ್ಟು, ಕೃಷ್ಣಾಜಿನವನ್ನು ಹೊದ್ದು ಕೊಂಡು, ತಾಪಸ ವೇಷವನ್ನು ಧರಿಸಿ ಕೊಂಡು, ಬ್ರಾಹ್ಮಣರೋಪಾದಿಯಲ್ಲಿ ವೇದ ವೇದಾಂಗಗಳನ್ನು ಓದುತ್ತಾ, ಉಪನಿಷತ್ಪಾರಾಯಣವನ್ನು ಮಾಡುತ್ತಾ, ನೀತಿಶಾಸ್ತ್ರ ಧರ್ಮಶಾಸ್ತ್ರಗಳನ್ನು ಪಠಿಸುತ್ತಾ, ಶಾಲಿಹೋತ್ರನ ಅಪ್ಪಣೆಯನ್ನು ತೆಗೆದು ಕೊಂಡು, ಆ ವನದಿಂದ ಹೊರಟು ಬರುವ ಮಾರ್ಗದಲ್ಲಿ ದುಷ್ಟ ಮೃಗಗಳನ್ನು ಕೊಲ್ಲುತ್ತಾ, ಅತಿ ತ್ವರಿತದಿಂದ ಮತ್ಸ್ಯ, ತ್ರಿಗರ್ತ, ಪಾಂಚಾಲ ದೇಶಗಳನ್ನೂ ನಾನಾ ಬಿದುರಿನ ಅರಣ್ಯಗಳನ್ನೂ ರಮಣೀಯ ವನ ಪ್ರದೇಶಗಳನ್ನೂ ವಿಮಲೋದಕಗಳುಳ್ಳ ಸರೋವರಗಳನ್ನೂ ದಾಟುತ್ತಾ, ಮಾರ್ಗದಲ್ಲಿ ನಡೆಯಲಾರದ ತಮ್ಮ ತಾಯಿಯನ್ನು ಉಪಚರಿಸುತ್ತಾ, ಕೆಲವು ಪ್ರದೇಶಗಳಲ್ಲಿ ಪ್ರಚ್ಛನ್ನರಾಗಿ ಹೋಗುತ್ತಾ, ಮಾರ್ಗದಲ್ಲಿ ತಮ್ಮ ಮುತ್ತಪ್ಪನಾದ ವ್ಯಾಸ ಮುನೀಶ್ವರನನ್ನು ಕಂಡು, ಆತನ ಪಾದಗಳಿಗೆ ಕುಂತೀ ಸಮೇತರಾಗಿ ನಮಸ್ಕರಿಸಿ, ವಿನಯದಿಂದ ನಿಂತಿರಲು; ಆ ವ್ಯಾಸನು,—ಎಲೈ, ಮಹಾತ್ಮರಾ, ಹಿಡಂಬವಧೆ ಬಹು ಜನಾನಂದಕರವಾಯಿತು. ಇಲ್ಲಿಗೆ ಸಮೀಪದಲ್ಲಿ ಏಕಚಕ್ರಪುರವೆಂಬೊಂದು ಪಟ್ಟಣವಿಧೆ. ಆ ಪಟ್ಟಣವು ರಮಣೀಯವಾಗಿ ನಿಮ

ಗೆ ವಾಸ ಯೋಗ್ಯವಾಗಿ ಇರುವದು. ಆ ಪಟ್ಟಣಕ್ಕೆ ನಾನು ಒಂದು ವೇಳೆ ಬರುತ್ತೇನೆ. ನೀವು ಪ್ರಚ್ಛನ್ನ ರೂಪದಿಂದ ಇರಿ ಎಂದು, ಹೇಳಿ ಹೋಗಲು; ಆ ಪಾಂಡವರು ಏಕಚಕ್ರನಗರಕ್ಕೆ ಬಂದು, ಅಲ್ಲಿ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಇಳಿದು ಕೊಂಡು, ಅಲ್ಲಿ ನಾನಾ ಪ್ರಕಾರವಾದ ವನಗಳನ್ನೂ ರಮಣೀಯವಾದ ಭೂ ಪ್ರದೇಶಗಳನ್ನೂ ವಿಮಲೋದಕವುಳ್ಳ ಸರಸ್ಸುಗಳನ್ನೂ ನೋಡುತ್ತಾ, ಕಾಲಹರಣ ಮಾಡುತ್ತಿದ್ದರು. ಮತ್ತು ಭೀಮಾರ್ಜ್ಜುನ ನಕುಲ ಸಹದೇವರು ಭಿಕ್ಷೆಯನ್ನು ಮಾಡಿ ಕೊಂಡು ಬಂದು, ಆ ಅನ್ನದಿಂದ ಕುಂತಿ ಧರ್ಮ್ಮರಾಯರನ್ನು ಪೋಷಿಸುತ್ತಾ, ಶಮ ದಮಾದಿ ಸದ್ಗುಣಗಳಿಂದ ಅಲ್ಲಿದ್ದ ಜನರ ಮನೋರಂಜನವನ್ನು ಮಾಡುತ್ತಾ, ಕಾಲಕ್ಷೇಪ ಮಾಡಿ ಕೊಂಡಿದ್ದರು.

ಆ ಪಟ್ಟಣದ ಜನರು ಈ ಪಾಂಡವರನ್ನು ನೋಡಿ,—ನೋಡ ತಕ್ಕ ಆಕಾರವುಳ್ಳವರಾಗಿಯೂ, ವಿಶುದ್ಧ ಸ್ವಭಾವರಾಗಿಯೂ, ದೇವ ಕುಮಾರ ಸಮಾನರಾಗಿಯೂ, ಸರ್ವ್ವ ಲಕ್ಷಣ ಸಂಪನ್ನರಾಗಿಯೂ ಇರುವ ಈ ಕುಮಾರರು ರಾಜ್ಯಾರ್ಹರೇ ಹೊರತಾಗಿ ಭಿಕ್ಷಾ ಯೋಗ್ಯರಲ್ಲ. ಸುಕುಮಾರ ಶರೀರಿಗಳಾದ ಇವರನ್ನು ನೋಡಿದರೆ, ಏನೋ ಒಂದು ನಿಮಿತ್ತದಿಂದ ಪ್ರಚ್ಛನ್ನರಾಗಿ ಈ ರೀತಿಯಲ್ಲಿದ್ದಾರೆಂದು, ಒಬ್ಬರ ಸಂಗಡಲೊಬ್ಬರು ಹೇಳಿ ಕೊಳ್ಳುತ್ತಾ, ಅವರಿಗೆ ಹೆಚ್ಚಾಗಿ ಭಿಕ್ಷೆಯನ್ನಿಕ್ಕುತ್ತಾ, ಆದರಿಸುತ್ತಿದ್ದರು. ಹೀಗೆ ಭೀಮಾದಿಗಳು ಭಿಕ್ಷೆಯನ್ನು ತಂದು, ತಾಯಿಯ ವಶಕ್ಕೆ ಒಪ್ಪಿಸಲು; ಅವಳು ತಂದ ಅನ್ನದಲ್ಲಿ ಅರ್ಧ ಸರಿಯಾಗಿ ಭೀಮನಿಗೆ ಕೊಟ್ಟು, ಉಳಿದ ಅರ್ಧವನ್ನು ತಾವೈದು ಜನವು ಭುಜಿಸುತ್ತಿದ್ದರು. ಆದರೆ ಭೀಮನು ಮೊದಲು ರಾಜ ಯೋಗ್ಯವಾಗಿ ಷಡ್ರಸೋಪೇತಗಳಾಗಿ ಇರುವ ಅನ್ನವನ್ನು ಅಪರಿಮಿತವಾಗಿ ಭಕ್ಷಿಸಿದವನಾದ್ದರಿಂದ, ಆ ಭಿಕ್ಷಾಶನದಿಂದ ತೃಪ್ತಿಯನ್ನು ಹೊಂದದೆ, ದಿನ ದಿನಕ್ಕೂ ಶರೀರದಲ್ಲಿ ಇರುವ ಕಾಂತಿಯು ತಪ್ಪಿ, ಬಡವಾಗುತ್ತಾ ಬಂದನು. ಅವರೆಲ್ಲರು ತಂದ ಭಿಕ್ಷಾನ್ನದಲ್ಲಿ ಅರ್ಧವು ಉರಿಯುತ್ತಲಿರುವ ಬೆಂಕಿಯಲ್ಲಿ ತುಪ್ಪದ ಹನಿಯೋಪಾದಿಯಲ್ಲಿ ಆತನಿಗೆ ಏನೂ ಆಗದೆ ಇತ್ತು. ಈ ಪ್ರಕಾರದಲ್ಲಿ ಆ ಮಹಾನುಭಾವರು ಕೆಲವು ದಿವಸ ಕಾಲಕ್ಷೇಪ ಮಾಡುತ್ತಿರಲು; ಆ ಭೀಮನು ಒಬ್ಬ ಕುಂಬಾರನಿಗೆ ನೂರು ಸಾರಿ ತರುವ ಮಣ್ಣನ್ನು ಒಂದೇ ಸಾರಿ ತಂದು ಹಾಕಲು; ಆತನು ಇವನಿಗೆ ಒಂದು ದೊಡ್ಡ ಗುಡಾಣವನ್ನು ಮಾಡಿ ಕೊಡಲು; ಭೀಮನು ಅದನ್ನು ಬಲ ಅಂಗೈಯಲ್ಲಿ ಇಟ್ಟು ಕೊಂಡು, ತಾನೊಬ್ಬನೇ ಭಿಕ್ಷಾರ್ಥವಾಗಿ ಹೋಗಲು; ಜನರು ಅವನನ್ನು ನೋಡಿ, ನಗುತ್ತಾ, ಬೇಕಾದ ಭಕ್ಷ್ಯ ಭೋ

ಜ್ಯಗಳನ್ನು ಭಿಕ್ಷೆಯಾಗಿ ಆ ಗುಡಾಣಕ್ಕೆ ತಂದು ಹಾಕುತ್ತಾ ಇದ್ದರು. ಭೀಮನು ಆ ಗುಡಾಣದ ತುಂಬಾ ಭಿಕ್ಷೆಯನ್ನು ತಂದು, ಅದೆಲ್ಲಾ ತಾನೊಬ್ಬನೇ ತಿಂದು—ಈ ಅನ್ನವು ಲೇಶವಾದರೂ ನನ್ನ ಹಶಿವಿಗೆ ಸಾಲದೆಂದು, ನಿತ್ಯವು ತಾಯಿಯ ಸಂಗಡ ಗುಣುಗುಟ್ಟುತ್ತಾ ಇರುತ್ತಿದ್ದನು.

ಹೀಗೆ ಕೆಲವು ದಿವಸಗಳು ಕಳೆದ ತರುವಾಯ, ಒಂದಾನೊಂದು ದಿವಸ ಅವರು ಇಳಿದು ಇದ್ದ ಬ್ರಾಹ್ಮಣನ ಮನೆಯೊಳಗೆ ರೋದನ ಧ್ವನಿ ಕೇಳಿಸಿತು. ಆಗ ಕುಂತೀ ದೇವಿಯು ಆ ಧ್ವನಿಯನ್ನು ಕೇಳಿ, ಕಾರುಣ್ಯ ಭಾವದಿಂದ ಹೃದಯದಲ್ಲಿ ಪಶ್ಚಾತ್ತಾಪ ಪಡುತ್ತಾ, ತನ್ನ ಸಮೀಪದಲ್ಲಿ ಇದ್ದ ಭೀಮಸೇನನನ್ನು ನೋಡಿ—ಎಲೈ, ಕುಮಾರನೇ, ನಾವು ಈ ಬ್ರಾಹ್ಮಣನ ಮನೆಯಲ್ಲಿ ಧೃತರಾಷ್ಟ್ರಾದಿಗಳಿಗೆ ತಿಳಿಯದೆ ಇರುವ ರೀತಿಗೆ, ಕೆಲವು ದಿವಸಗಳು ಇದ್ದೆವು. ಇವರಿಗೆ ಏನು ಉಪಕಾರವನ್ನು ಮಾಡೋಣ ಎಂದು ಯಾವಾಗಲೂ ಚಿಂತಿಸುತ್ತಿದ್ದೇನೆ. ಉಪಕಾರವನ್ನು ಮಾಡಿದವರಿಗೆ ಪ್ರತ್ಯುಪಕಾರವನ್ನು ಮಾಡ ಬೇಕೆಂದು ಎಣಿಸಿದವನು ಪುರುಷ ಮುಖ್ಯನೆನಿಸಿ ಕೊಳ್ಳುವನು. ಈ ಮನೆಯ ಬ್ರಾಹ್ಮಣನಿಗೆ ಏನೋ ಪ್ರಾಣಾಪತ್ತು ಉಂಟಾಗಿರುವ ಹಾಗೆ ತೋರುತ್ತೆ. ನಾನೇನು ಮಾಡಲಿ? ಎಂದು ಮರುಗುತ್ತಿರಲು; ಭೀಮನು ತಾಯಿಯನ್ನು ಕುರಿತು—ಎಲೈ, ತಾಯೇ, ಇವರಿಗೆ ದುಃಖ ಬರುವದಕ್ಕೆ ಕಾರಣವೇನು? ಅದನ್ನು ಕೇಳಿ, ತಿಳಿದು ಕೊಂಡು ಬಾ. ಎಂಥಾ ದುಷ್ಕರವಾದ ಕಾರ್ಯವಾದರೂ ನಾನು ನಡಿಸುತ್ತೇನೆ, ಎನಲು; ಅಷ್ಟರಲ್ಲೇ ರೋದನ ಧ್ವನಿ ಹೆಚ್ಚುತ್ತಾ ಬರಲು; ಕುಂತಿಯು ಕಟ್ಟಿ ಹಾಕಿದ ಕರುವಿನ ಸಮೀಪಕ್ಕೆ ಬರುವ ಹಸುವಿನ ಹಾಗೆ ವಾತ್ಸಲ್ಯದಿಂದ ಆತನ ಮನೆಯ ಒಳಗೆ ಹೋಗಿ, ಅಲ್ಲಿ ಹೆಂಡತಿ, ಮಗಳು, ಮಗನು, ಇವರ ಸಹಿತ ಪ್ರಲಾಪಿಸುತ್ತಿರುವ ಬ್ರಾಹ್ಮಣನ ಸಮೀಪದಲ್ಲಿ ಕೂತು ಕೊಳ್ಳಲು; ಆ ಬ್ರಾಹ್ಮಣನು—ಅಕಟಕಟಾ! ನಿಸ್ಸಾರವಾಗಿ, ನಿರರ್ಥಕವಾಗಿ, ಸಕಲ ದುಃಖಗಳಿಗೆ ಮೂಲವಾಗಿ, ನಿತ್ಯಪರಾಧೀನವಾಗಿರುವ ನನ್ನ ಬದುಕಿನೋಪಾದಿಯಲ್ಲಿರುವ ಬದುಕು ಯಾರಿಗಾದರೂ ಉಂಟೇ? ಶರೀರ ದುಃಖಗಳನ್ನೂ ಮನೋದುಃಖಗಳನ್ನೂ ಛಳಿ ಬಿಸಲು ಮೊದಲಾದ ದ್ವಂದ್ವ ದುಃಖಗಳನ್ನೂ ನಾನು ಜೀವಂತನಾಗಿರುವದರಿಂದಲ್ಲವೇ ಅನುಭವಿಸ ಬೇಕಾಯಿತು? ಏಕಾಕಿಯಾಗಿ ಇರುವ ಪುರುಷನಿಗೆ ಧರ್ಮಾರ್ಥ ಕಾಮಗಳು ಯಾವಾಗಲೂ ಆಗಲಾರವು. ಅದು ಹಾಗಿರಲಿ; ಹಣದ ಸಂಪಾದನೆಗೆ ಸಾಧನವು ಹಣದ ಆಶೆಯು. ದೈವಾಧೀನದಿಂದ ಹಣವು ಲಭಿಸಿದರೆ, ಅದು ಮತ್ತು ಕ್ಲೇಶ ಕಾರಣವಾಗಿರುವದು. ಹಾಗೆ ಲಬ್ಧವಾದ

ಹಣದಲ್ಲಿ ಮೋಹವು ಹುಟ್ಟಿದರೆ, ಆ ಹಣ ಹೋಗುವ ಕಾಲದಲ್ಲಿ ಆಗುವಂಥ ದುಃಖವು ಅಪರಿಮಿತವಾಗಿರುವದು. ಇಷ್ಟ ವಸ್ತುಗಳಲ್ಲಿ ಯಾರಿಗೆ ಎಷ್ಟು ಪ್ರೀತಿ ಹೆಚ್ಚುವದೋ, ಆತನು ಆ ಪ್ರೀತಿಗೆ ತನ್ನ ಶೋಕವೆಂಬ ದಶಿಯನ್ನು ಎದೆಯಲ್ಲಿ ನೆಟ್ಟು ಕೊಳ್ಳುವನು. ಹೀಗೆ ಸ್ವಲ್ಪ ಸುಖಕ್ಕಾಗಿ ದುಃಖ ಬಹಳವಾದ ಸಂಸಾರವನ್ನು ಐದಿ, ಹೆಂಡತಿಯನ್ನು ಕಟ್ಟಿ ಕೊಂಡು, ಏಕ ಪುತ್ರನುಳ್ಳ ನನಗೆ ಪುತ್ರ ಪರಿತ್ಯಾಗ ರೂಪ ವ್ಯಸನ ಪ್ರಾಪ್ತವಾಯಿತು. ಏನು ಮಾಡಲಿ? ಎಲ್ಲಿಗೆ ಹೋಗಲಿ? ಯಾರಿಗೆ ಹೇಳಲಿ? ಈ ಆಪತ್ತು ಪರಿಹರವಾಗುವ ಉಪಾಯು ಯಾವದೂ ತೋಚುವದಿಲ್ಲ. ನಾನು—ಪುತ್ರ ದಾರಾ ಸಮೇತನಾಗಿ ಈ ದೇಶವನ್ನು ಬಿಟ್ಟು, ನಿರುಪದ್ರವಾದ ಮತ್ತೊಂದು ದೇಶಕ್ಕೆ ಹೋಗೋಣ ಎಂದು ಎಷ್ಟು ಹೇಳಿದರೂ, ನನ್ನ ಮಾತನ್ನು ಕೇಳದೆ,—ಈ ದೇಶದಲ್ಲಿ ಹುಟ್ಟಿ, ಬೆಳೆದು, ನಾನು ನನ್ನ ತಂದೆ ತಾಯಿಗಳನ್ನು ಬಿಟ್ಟು, ದೇಶಾಂತರಕ್ಕೆ ಹ್ಯಾಗೆ ಬಂದೇನು? ಎಂದು ಹೇಳಿದೆಯಲ್ಲ? ಅಂಥ ತಾಯಿ ತಂದೆಗಳು ಪರಲೋಕಕ್ಕೆ ಹೋದರೂ ಈ ದೇಶದಲ್ಲಿ ಇದ್ದದ್ದಕ್ಕೆ ಏನು ಪ್ರಯೋಜನ? ಭೋಜನವೂ ದೇಶವೂ ಸ್ತ್ರೀ ಜನವೂ ಬಂಧು ಜನವೂ ಪ್ರತಿಕೂಲವಾದರೆ, ಪ್ರಾಜ್ಞನಾದವನು ಕಾರ್ಯ ಗೌರವದಿಂದ ಗರುಡ ಹಂಸಗಳೋಪಾದಿಯಲ್ಲಿ ಹಾರಿ ಹೋಗ ಬೇಕು. ಈ ಶಾಸ್ತ್ರವನ್ನು ಎಣಿಸದೆ, ನಾನು ಎಷ್ಟು ಹೇಳಿದರೂ, ಕೇಳದೆ, ಇಲ್ಲಿ ಇದ್ದದರಿಂದ ನಮಗೆ ಈ ದುರ್ದಶೆ ಪ್ರಾಪ್ತವಾಯಿತು. ಈ ದುಃಖವಷ್ಟನ್ನು ನೀನು ಭವಿಸೆನಲು;

ಆ ಬ್ರಾಹ್ಮಣ ಸ್ತ್ರೀಯು—ನೀವು ಯಾಕೆ ಕ್ಲೇಶ ಪಡುತ್ತಿದ್ದೀರಿ? ನನ್ನನ್ನು ಆ ಬಕನಿಗೆ ಆಹಾರವಾಗಿ ಕೊಟ್ಟು ಬಿಡಿ, ಎನಲು; ಆ ಬ್ರಾಹ್ಮಣನು ಇಂಥ ಅವಲಕ್ಷಣ ದೇಶದಲ್ಲಿ ಇದ್ದದರಿಂದ ನಮ್ಮ ನಾಲ್ಕು ಮಂದಿಗಳೊಳಗೆ ಒಬ್ಬರಿಗೆ ನಾಶವು ಪ್ರಾಪ್ತವಾಗಿಧೆ. ಆದರೆ ನನ್ನ ಕೂಡ ಉಚಿತವಾದ ಕರ್ಮಗಳನ್ನು ಆಚರಿಸುತ್ತಾ, ಸಾತ್ವಿಕ ಗುಣಗಳೊಡನೆ ಕೂಡಿ, ನನ್ನನ್ನು ರಕ್ಷಿಸಿ ಕೊಂಡು, ದೈವ ವಶದಿಂದ ದೊರಕಿದ ಅರ್ಥದಿಂದ ಸಂಸಾರವನ್ನು ತಳ್ಳಿ ಕೊಂಡು, ತಾಯಿ ತಂದೆಗಳು ಬಾಲ್ಯದಲ್ಲಿಯೇ ಮದುವೇ ಮಾಡಿದ್ದರಿಂದ ಅಧಿಕವಾದ ಅನುರಾಗದೊಡನೆ ಕೂಡಿ, ಮಂತ್ರ ಪೂರ್ವಕವಾಗಿ ಕೈಹಿಡಿದು, ಸತ್ಕುಲದಲ್ಲಿಹುಟ್ಟಿ, ಮಕ್ಕಳನ್ನು ಪಡೆದು, ಮತ್ತೊಬ್ಬರನ್ನು ಅರಿಯದೆ, ನನಗೆ ಅನುಕೂಲಳಾಗಿ ಸದಾಚಾರ ಸಂಪನ್ನಳಾಗಿ ಇರುವ ಈ ಧರ್ಮ ಪತ್ನಿಯನ್ನು ಹ್ಯಾಗೆ ಬಿಡಲಿ? ಅಪ್ರಾಪ್ತ ಯೌವನನಾಗಿ ಬಾಲನಾಗಿ, ಗಡ್ಡ ಮೀಸೆಗಳು ಬಾರದೆ ಇರುವಂಥಾವ

ನಾಗಿ, ಇಹಪರ ಸೌಖ್ಯ ಪರನಾಗಿ, ಸಕಲ ಜನೋಪಲಾಲನೀಯನಾಗಿ, ಪಿತೃ ರುಣ ವಿಮೋಚಕನಾಗಿ, ವಂಶಾಭಿವೃದ್ಧಿಕರನಾಗಿ, ನನ್ನನಂತರ ನನಗೆ ಪಿಂಡೋದಕ ಪ್ರದಾನಗಳಿಂದ ಪರಲೋಕವನ್ನು ಕಲ್ಪಿಸುವಂಥ ಈ ಪುತ್ರನನ್ನು ಹ್ಯಾಗೆ ಬಿಡಲಿ? ಒಬ್ಬ ಬ್ರಹ್ಮಚಾರಿಯ ನಿಮಿತ್ತವಾಗಿ ಬ್ರಹ್ಮ ಸಂಕಲ್ಪದಿಂದ ಹುಟ್ಟಿರುವಂಥವಳಾಗಿ, ನನಗೆ ದೋಹಿತ್ರ ಲೋಕಗಳನ್ನು ಕಲ್ಪಿಸುವಂಥವಳಾಗಿ, ನನ್ನ ಗರ್ಭದಲ್ಲಿ ಹುಟ್ಟಿರುವ ಈ ಕನ್ಯಾರತ್ನವನ್ನು ಹ್ಯಾಗೆ ಬಿಟ್ಟು ಬಿಡುವೆನು? ಲೋಕದಲ್ಲಿ ಕೆಲವರು,—ತಂದೆಗೆ ಮಗನಲ್ಲಿಯೂ, ತಾಯಿಗೆ ಮಗಳಲ್ಲಿಯೂ ಪ್ರೀತಿ ಉಂಟಾಗಿರುವದು ಎಂದು ಹೇಳುವರು. ನನಗಾದರೋ, ಇಬ್ಬರಲ್ಲಿಯೂ ಸಮನಾದ ಪ್ರೀತಿ ಇದೆ. ಮತ್ತು ಹೆಣ್ಣಿನದೆಸೆಯಿಂದ ನನಗೆ ಪುಣ್ಯಲೋಕಗಳೂ ವಂಶಾಭಿವೃದ್ಧಿಯೂ ಸೌಖ್ಯವೂ ಆಗುವದರಿಂದ, ಬುದ್ಧಿ ಸಂಪನ್ನೆಯಾಗಿ, ದೋಷರಹಿತೆಯಾಗಿ, ಮದುವೆಯಾದ ಮೇಲೆ ಮಾವನ ಮನೆಗೆ ಹೋಗಿ, ಗಂಡನಿಗೆ ಅನುಕೂಲವಾಗಿ ನಡೆದು ಕೊಂಡು, ಆತನಿಂದ ಸಕಲ ಸೌಖ್ಯಗಳನ್ನು ಪಡೆಯ ಬೇಕೆಂದು ಎಣಿಸಿ, ಗರ್ವವನ್ನು ಬಿಟ್ಟು, ವಿನಯವಾಗಿ ನಡೆದು ಕೊಳ್ಳುವ ಈ ಹೆಣ್ಣು ಮಗಳನ್ನು ಹ್ಯಾಗೆ ಬಿಟ್ಟು ಬಿಡುವೆನು? ಈ ಮಕ್ಕಳನ್ನು ಬಿಟ್ಟರೆ, ಪರಲೋಕದಲ್ಲಿ ನನ್ನ ದುಃಖವು ತೀರದು. ಈ ಮಕ್ಕಳು ಚಿಕ್ಕವರಾದ್ದರಿಂದ ನನ್ನನ್ನು ಬಿಟ್ಟು, ನಿಮಿಷವು ನಿರ್ವಹಿಸಲಾರವು. ಆದದರಿಂದ ಈ ಮೂರು ಮಂದಿಯೊಳಗೆ ಒಬ್ಬರನ್ನೂ ಬಿಡುವದಕ್ಕಾಗುವದಿಲ್ಲ. ಯಾವ ಪ್ರಯತ್ನದಿಂದಲಾದರೂ ಈ ಆಪತ್ತನ್ನು ಪರಿಹರಿಸುವದಕ್ಕೆ ಉಪಾಯವನ್ನು ಕಾಣದೆ ಇರುವದರಿಂದ, ತಾಯಿಯೂ, ಮಗಳೂ, ತಾನೂ ಏಕ ಕಾಲದಲ್ಲಿ ಸಾಯುವದೇ ಉಚಿತವೆಂದು ನಿಶ್ಚೈಸಿದನು.

ಎಲ್ಲರು ಏಕ ಕಾಲದಲ್ಲಿ ಸತ್ತು ಹೋಗ ಬೇಕೆಂದು, ಹಂಬಲಿಸುತ್ತಿರುವ ಪತಿಯನ್ನು ಕುರಿತು ಹೆಂಡತಿಯು ಇಂತೆಂದಳು—ಎಲೈ, ನಾಯಕನೇ, ಮೂಢ ಮನುಷ್ಯನೋಪಾದಿಯಲ್ಲಿ ನೀನು ಯಾತಕ್ಕೆ ಕ್ಲೇಶ ಪಡುತ್ತಿದ್ದೀ? ವಿಶೇಷವಾಗಿ ಸಂತಾಪಕ್ಕೆ ಇದು ಕಾಲವಲ್ಲ. ಪುರುಷರು ಧೈರ್ಯಗೆಡುವರೇ? ಹುಟ್ಟಿದಾಗಲೇ ಮನುಷ್ಯನಿಗೆ ಮರಣವು ನಿಶ್ಚಯವಾಗಿರುವದು. ಅವಶ್ಯವಾಗಿ ಮಾಡ ತಕ್ಕಂಥ ಕಾರ್ಯಕ್ಕೆ ಕ್ಲೇಶ ಪಟ್ಟು, ಪ್ರಯೋಜನವೇನು? ಪುತ್ರ ಮಿತ್ರ ಕಳತ್ರಾದಿಗಳು ನಿನ್ನ ನಿಮಿತ್ತವಾದ್ದರಿಂದ, ನೀನು ಸುಖವಾಗಿದ್ದು, ನನ್ನನ್ನು ಕಳುಹಿಸಿ ಬಿಡು. ಪತಿಯ ನಿಮಿತ್ತವಾಗಿ ಪ್ರಾಣಗಳನ್ನು ಪರಿತ್ಯಜಿಸುವದಕ್ಕಿಂತ ಸ್ತ್ರೀಯರಿಗೆ ಮತ್ತೊಂದು ಧರ್ಮ ಉಂಟೇ? ನಿನ್ನ ನಿಮಿತ್ತ ನಾನು ಶರೀರ ತ್ಯಾಗಾ

ಮಾಡಿದರೆ, ಈ ಲೋಕದಲ್ಲಿ ನಿನಗೆ ಸೌಖ್ಯವೂ, ಪರಲೋಕದಲ್ಲಿ ನನಗೆ ಗತಿ
ಯೂ ಉಂಟಾಗುವದು. ಲೋಕದಲ್ಲಿ ಮದುವೆಯಾಗುವದು ಸಂತಾನಾರ್ಥವಾ
ದ್ದರಿಂದ, ಅಂಥ ಸಂತಾನವು ಕನ್ಯಾ ಕುಮಾರ ರೂಪದಿಂದ ಆಯಿತು. ನಾನು
ನಿನ್ನ ಋಣವನ್ನು ತೀರಿಸಿ ಕೊಂಡಿದ್ದೇನೆ. ನೀನಿದ್ದರೆ, ಈ ಚಿಕ್ಕವರಿಗೆ ಸೌ
ಖ್ಯ ಉಂಟು. ನಾನು ಅಬಲೆಯಾದ್ದರಿಂದ ಇವರನ್ನು ರಕ್ಷಿಸಲಾರೆನು. ನೀ
ನಿಲ್ಲದೆ ಹೋದರೆ, ಅನಾಥಳಾದ ನಾನು ಜಾತಿ ಹೀನರಾದವರು ಅಹಂಕಾರ ಗ್ರ
ಸ್ತರಾಗಿ, ನಮ್ಮ ಸ್ವರೂಪವನ್ನು ತಿಳಿಯದೆ, ಈ ಕನ್ಯೆಯನ್ನು ಕೇಳುವದಕ್ಕೆ
ಬಂದರೆ, ಹ್ಯಾಗೆ ಅವರನ್ನು ನಿರಾಕರಿಸಲಿ? ಭೂಮಿಯಲ್ಲಿ ಬಿದ್ದಿರುವ ಮಾಂಸ
ಖಂಡವನ್ನು ಪಕ್ಷಿಗಳು ಅಪೇಕ್ಷಿಸುವ ಹಾಗೆ, ಪತಿ ರಹಿತಳಾದ ಸ್ತ್ರೀಯನ್ನು ಯಾ
ರಾದರೂ ಅಪೇಕ್ಷಿಸುವರು? ಅದರಿಂದ ಇಂಥ ದುರಾತ್ಮರು ಬಹು ಪ್ರಕಾರದಿಂ
ದ ಬಾಧಿಸಿದರೆ, ನನಗೆ ಪಾತಿವ್ರತ್ಯ ಧರ್ಮವು ದಕ್ಕಲಾರದು. ಲೋಕದಲ್ಲಿ ದು
ಷ್ಟ ಜನರು ಹೆಚ್ಚಿದ್ದರಿಂದ, ಸ್ತ್ರೀ ಜನ್ಮವು ನಿಂದಿತವಾದದ್ದೆಂದು ಎಣಿಸುತ್ತಲಿ
ದ್ದೇನೆ. ಅದರಿಂದಲೇ ಬಾಲ್ಯದಲ್ಲಿ ತಾಯಿ ತಂದೆಗಳಿಗೂ, ಯೌವನದಲ್ಲಿ ಗಂಡ
ನಿಗೂ, ವಾರ್ಧಿಕ್ಯದಲ್ಲಿ ಮಕ್ಕಳಿಗೂ, ಆಧೀನವಾಗಿ ಇರ ಬೇಕೇ ಹೊರತಾಗಿ,
ಸ್ವಾಧೀನವಾಗಿರ ಬಾರದು. ಸ್ವತಂತ್ರವಾಗಿದ್ದರೆ, ತುಪ್ಪದಿಂದ ನೆನೆದ ವಸ್ತ್ರ
ಖಂಡವನ್ನು ನಾಯಿಗಳು ಎಳೆಯುವ ಹಾಗೆ, ದುರ್ಜನರು ಸ್ತ್ರೀ ಜನರನ್ನು ಬಾ
ಧಿಸದೆ ಇರರು. ಉಪನಯನವಿಲ್ಲದೆ ಇದ್ದಂಥ ಈ ಬಾಲಕನಿಗೆ ಉಪನಯ
ನಾದಿ ಕೃತ್ಯಗಳನ್ನು ಮಾಡಿ, ವೇದ ಶಾಸ್ತ್ರಗಳನ್ನು ಓದಿಸುವಂಥವರ್ಯಾರು?
ನಿನ್ನನ್ನು ಬಿಟ್ಟು, ಅನಾಥೆಯಾಗಿರುವ ನನ್ನನ್ನು ಎಣಿಸದೆ, ಈ ಕನ್ನಿಕೆಯನ್ನು
ಶೂದ್ರನು ಶ್ರುತಿಯನ್ನು ಬಯಸುವ ಪ್ರಕಾರವೂ, ಕಾಕವು ಮಂತ್ರ ಪೂತವಾದ
ಹವಿಸ್ಸನ್ನು ಇಚ್ಛೈಸುವಂತೆಯೂ, ಯಾರಾದರೂ ದುಷ್ಟರು ಇಚ್ಛೈಸಿ, ಕೇಳಿ
ದರೆ, ಒಡಂಬಟ್ಟು ಕೊಡದಿದ್ದರೆ, ಬಲಾತ್ಕಾರದಿಂದ ಅಪಹರಿಸುವರು. ಅದ
ನ್ನು ನೋಡಿ, ಸಹಿಸಲಾರದೆ, ನಾನು ಶರೀರವನ್ನು ಬಿಡುವೆನು. ಆ ಮೇಲೆ ಇ
ವರಿಬ್ಬರು ನೀರಿನಿಂದ ಹೊರಟು ಬಂದ ಮೀನುಗಳ ಹಾಗೆ ಕೆಟ್ಟು ಹೋಗುವ
ರು. ಅದರಿಂದ ನಿನ್ನನ್ನು ಬಿಟ್ಟರೆ, ಹ್ಯಾಗೆ ನೋಡಿದರೂ, ಈ ಮೂರು ಮಂದಿ
ಗೂ ಪ್ರಾಣ ಸಂಶಯವಾಗುವದರಿಂದ, ಇದಷ್ಟನ್ನು ನಿನ್ನ ಮನಸ್ಸಿನಲ್ಲಿ ನಿಶ್ಚೈಸಿ,
ನನ್ನನ್ನು ಅವಶ್ಯವಾಗಿ ಕಳುಹಿಸಿ ಬಿಡು. ಪತಿವ್ರತಾ ಜನಗಳಿಗೆ ಪತಿಗಳಿಗಿಂತ ಮೊ
ದಲೇ, ಅರಸಿನ, ಕಣ್ಣು ಕಪ್ಪು, ಪುಷ್ಪ, ಮಂಗಳ ಸೂತ್ರ, ಇವುಗಳನ್ನು ಬಿಡ
ದೆ ಪರಲೋಕಕ್ಕೆ ಹೋಗಿ, ತನ್ನ ಗಂಡನು ಕೊಟ್ಟ ತರ್ಪಣಾದಿಗಳಿಂದ ತೃಪ್ತಿ

ಯನ್ನು ಪಡೆಯುವದು ಉತ್ತಮವೇ ಹೊರ್ತು, ವೈಧವ್ಯವನ್ನು ಅನುಭವಿಸುತ್ತಾ, ಮಕ್ಕಳು ಕೊಟ್ಟ ಅನ್ನದಿಂದ ಕಾಲಹನ್ನು ಕಳೆಯುವದು ಧರ್ಮವಲ್ಲ. ಗಂಡನ ಪಾದಗಳನ್ನು ತನ್ನ ಮನಸ್ಸಿನಲ್ಲಿ ಧ್ಯಾನಿಸುತ್ತಾ, ಪತಿಗಿಂತ ಮೊದಲೇ ಶರೀರವನ್ನು ಬಿಡುವಂಥ ಸ್ತ್ರೀಯು ಪಾರ್ವತೀ ದೇವಿಗೆ ಕೆಳದಿಯಾಗಿ, ಆ ಮಹಾದೇವಿಯೊಡನೆ ಚತುರಂಗವನ್ನು ಆಡುತ್ತಿರುವಳು. ಅದಲ್ಲದೆ ತಾಯಿ ತಂದೆಗಳೂ ಒಡ ಹುಟ್ಟಿದವರೂ ಮಕ್ಕಳೂ ಇವರಷ್ಟು ಮಂದಿಯು ಮಿತವಾದ ಸೌಖ್ಯವನ್ನು ಕೊಡುವರೇ ಹೊರ್ತು, ಗಂಡನೋಪಾದಿಯಲ್ಲಿ ಅಮಿತ ಸೌಖ್ಯವನ್ನು ಕೊಡಲಾರರು. ಅದರಿಂದ ಇಂಥ ಗಂಡನನ್ನು ಉಪಚರಿಸದೆ ಇರುವಂಥವಳು ಲೋಕದಲ್ಲಿ ಉಂಟೇ? ಈ ಮಗನನ್ನೂ ಮಗಳನ್ನೂ ಬಿಟ್ಟು, ಮತ್ತೂ ಬಂಧು ಜನಗಳನ್ನೆಲ್ಲಾ ತೊರೆದು, ನಿನಗೆ ಸುಖವಾಗುವ ರೀತಿಗೆ ನನ್ನ ಪ್ರಾಣಗಳನ್ನು ಒಪ್ಪಿಸುತ್ತೇನೆ. ಸ್ತ್ರೀ ಜನಗಳಿಗೆ ಯಜ್ಞ ದಾನ ತಪೋ ನಿಯಮಗಳಿಗಿಂತಲೂ ಪತಿಗೆ ಹಿತಾ ಮಾಡುವದೇ, ಪರಮ ಧರ್ಮವೆನಿಸುವದು. ಈಗ ನಾನು ಹೇಳಿದ ಮಾತುಗಳಷ್ಟು ನಿಮಗೂ ನಿಮ್ಮ ಕುಲಕ್ಕೂ ಹಿತವಾಗಿರುವದು. ಲೋಕದಲ್ಲಿ ಪುರುಷನಿಗೆ ಕುಮಾರಕರೂ ಧನವೂ ಮಿತ್ರವರ್ಗವೂ ಹೆಂಡತಿಯೂ ಆಪತ್ತಿನ ಸಮಯಕ್ಕೆ ಒದಗದಿದ್ದರೆ, ವ್ಯರ್ಥವೆನಿಸಿ ಕೊಂಬುವರು. ತನ್ನ ಕುಲವಷ್ಟು ಆತ್ಮ ಸಂರಕ್ಷಣ ಧರ್ಮಕ್ಕೆ ಸಮಾನವಾಗಿ ಇರಲಾರದು. ಅದರಿಂದ ನನ್ನದೆಶೆಯಿಂದ ಈ ಆಪತ್ತನ್ನು ತಪ್ಪಿಸಿ ಕೊಳ್ಳಿ. ನೀವು ನಿಂತು, ಈ ಮಕ್ಕಳನ್ನು ರಕ್ಷಿಸಿ ಕೊಳ್ಳಿ. ಲೋಕದಲ್ಲಿ ಸ್ತ್ರೀ ವಧವು ಅಧರ್ಮವೆಂದು ಧರ್ಮ ಶಾಸ್ತ್ರಜ್ಞರು ಹೇಳುವದರಿಂದ, ಆ ರಾಕ್ಷಸನು ಒಂದು ವೇಳೆ ನನ್ನನ್ನು ಕರುಣಿಸಿ, ಬಿಟ್ಟು ಬಿಟ್ಟಾನು. ಆದ್ದರಿಂದ ನೀವು ನಿಂತು, ನನ್ನನ್ನು ಕಳುಹಿಸಿ ಬಿಡುವದು ಯುಕ್ತವು. ಯಾಕಂದರೆ ನಾನು ನಿನ್ನ ದೆಸೆಯಿಂದ ಸಕಲ ಸೌಖ್ಯಗಳನ್ನು ಅನುಭವಿಸಿ, ಪ್ರಿಯವಾದವುಗಳನ್ನು ಪಡೆದು, ಧರ್ಮಗಳನ್ನು ಆಚರಿಸಿ, ಸಂತಾನವನ್ನು ಪಡೆದು, ನಿಮಗೆ ಶುಶ್ರೂಷೆಯನ್ನು ಮಾಡಿ, ಪಾತಿವ್ರತ್ಯ ಧರ್ಮದಿಂದ ಕೀರ್ತಿಯನ್ನು ಹೊಂದಿ, ಯೌವನವನ್ನು ಮೀರಿದೆನು. ಇನ್ನು ಮೇಲೆ ನಿಮಗೆ ಪ್ರಿಯವನ್ನೇ ಮಾಡ ಬೇಕೆಂಬ ಬಯಕೆ ಇದೆಯೋ ಹೊರ್ತಾಗಿ ಮತ್ತೊಂದು ಬಯಕೆ ಇಲ್ಲ. ನೀವು ಇನ್ನೊಂದು ಮದುವೆಯಾಗಿ ಧರ್ಮಲೋಪವಿಲ್ಲದಂತೆ ನಡೆದು ಕೊಳ್ಳಿ. ಸ್ತ್ರೀ ಜನಗಳಿಗೆ ಗಂಡನನ್ನು ಬಿಟ್ಟು, ಮತ್ತೊಬ್ಬ ಪುರುಷನನ್ನು ಪರಿಗ್ರಹಿಸುವದು ದೋಷವೇ ಹೊರ್ತಾಗಿ, ಪುರುಷರಿಗೆ ಬಹು ಪತ್ನಿ ಪರಿಗ್ರಹವು ದೋಷವಲ್ಲ. ಈ ಧರ್ಮವನ್ನು ನಿಮ್ಮ ಮನಸ್ಸಿ

ನಲ್ಲಿ ವಿಚಾರಿಸಿ, ಆತ್ಮ ತ್ಯಾಗವು ದೋಷವೆಂದು ತಿಳಿದು, ನನ್ನಿಂದ ನಿಮ್ಮನ್ನೂ ನಿಮ್ಮ ಮಕ್ಕಳನ್ನೂ ನಿಮ್ಮ ಕುಲವನ್ನೂ ಊರ್ಜಿತವಾಗಿ ರಕ್ಷಿಸಿ ಕೊಳ್ಳಿ, ಎನಲು; ಆ ಬ್ರಾಹ್ಮಣನು ಅತಿ ದುಃಖದಿಂದ ಅವಳನ್ನು ಅಪ್ಪಿ ಕೊಂಡು, ಕಣ್ಣೀರು ತುಂಬಿ—ನೀನು ಸುಖವಾಗಿರುವದೇ ನನಗೆ ಪರಮ ಸುಖವು. ಆದ್ದರಿಂದ ಹೀಗೆ ನುಡಿಯ ಬೇಡ. ಪ್ರಾಜ್ಞನಾದ ಪುರುಷನು ಪುತ್ರ ಮಿತ್ರ ಕಳತ್ರಾದಿಗಳನ್ನು ಯಾಕೆ ಬಿಡುವನು? ವಿಶೇಷವಾಗಿ ಸ್ತ್ರೀ ಜನಗಳನ್ನು ರಕ್ಷಿಸಲಾರದೆ ಇರುವ ಪುರುಷನು ಚತುರ್ವಿಧ ಪುರುಷಾರ್ಥಗಳಿಗೂ ದೂರಸ್ಥನಾಗುವನು ಎಂದು ಹೇಳಲು;—

ಈ ಪ್ರಕಾರ ತಾಯಿ ತಂದೆಗಳು ಕ್ಲೇಶ ಪಡುವದನ್ನು ನೋಡಿ, ಆ ಬ್ರಾಹ್ಮಣನ ಮಗಳು ತಾನು ಕ್ಲೇಶ ಪಟ್ಟು, ಧೈರ್ಯವನ್ನು ಹೊಂದಿ, ತಾಯಿ ತಂದೆಗಳನ್ನು ನೋಡಿ—ಎಲೈ, ನೀವು ಅನಾಥರೋಪಾದಿಯಲ್ಲಿ ಹಂಬಲಿಸುವದ್ಯಾಕೆ? ನನಗೆ ತೋರಿದಷ್ಟಂದ ಹೇಳುತ್ತೇನೆ. ನಿಮಗೆ ಸಮ್ಮತವಾದರೆ ಹಾಗೆ ನಡೆದು ಕೊಳ್ಳಿ. ನಿಮ್ಮಿಬ್ಬರಿಗೂ ನಾನು ಮಗಳಾದ್ದರಿಂದ ನನ್ನನ್ನು ಅವಶ್ಯಕವಾಗಿ ಕಳುಹಿಸ ಬೇಕು. ನನ್ನನ್ನು ಕಳುಹಿಸಿ, ನಿಮ್ಮನ್ನು ಸಂರಕ್ಷಿಸಿಕೊಂಬುವದು ಯುಕ್ತವು. ಲೋಕದಲ್ಲಿ ತಾವು ಆಪತ್ತುಗಳನ್ನು ಪರಿಹರಿಸಿ ಕೊಳ್ಳ ಬೇಕೆಂದಲ್ಲವೇ, ಮಕ್ಕಳನ್ನು ಬಯಸುವದು? ಇಂಥ ಆಪತ್ಕಾಲದಲ್ಲಿ ನನ್ನಿಂದ ಈ ಆಪತ್ತನ್ನು ಪರಿಹರಿಸಿಕೊಂಬುವದು ಯುಕ್ತವು. ಇಹಲೋಕ ಪರಲೋಕಗಳಲ್ಲಿ ದುಃಖವನ್ನು ಪರಿಹರಿಸುವಂಥವನೇ ಪುತ್ರನೆನಿಸಿಕೊಂಬುವನು. ಆದ್ದರಿಂದ ಅಂಥ ದುಃಖವನ್ನು ಈ ಲೋಕದಲ್ಲಿ ಪರಿಹರಿಸುತ್ತೇನೆ. ದೌಹಿತ್ರನದೆಸೆಯಿಂದ ಅತಿಶಯ ಬರ ಬೇಕೆಂದು ಪ್ರಾರ್ಥಿಸುವಂಥ ನಿಮಗೆ ನಾನೇ ಪ್ರಾಣ ದಾನವನ್ನು ಮಾಡುತ್ತೇನೆ. ನನ್ನ ತಮ್ಮನು ಬಾಲಕನಾದ್ದರಿಂದ ನಿಮ್ಮನ್ನು ಬಿಟ್ಟು ಬದುಕಲಾರನು. ಮತ್ತು ನೀನೂ, ಈ ನನ್ನ ತಮ್ಮನೂ, ಇಬ್ಬರು ಇಲ್ಲದೆ ಹೋದರೆ, ಪಿತೃ ದೇವತೆಗಳಿಗೆ ಪಿಂಡೋದಕ ಪ್ರದಾನಗಳು ನಿಂತು ಹೋಗುವವು. ಆದ್ದರಿಂದ ನೀವು ಹೋಗುವದು ಪಿತೃ ದೇವತೆಗಳಿಗೆ ಸಮ್ಮತವಲ್ಲ. ತಾಯಿ ತಂದೆಗಳೂ ತಮ್ಮನೂ ನನ್ನನ್ನು ಬಿಟ್ಟರೆ, ನಾನು ದುಃಖದ ಮೇಲೆ ದುಃಖವನ್ನು ಹೊಂದಿ, ಶರೀರವನ್ನು ಬಿಟ್ಟು ಹೋಗ ಬೇಕು. ನೀವು ನಿಂತರೆ, ಪಿತೃ ದೇವತೆಗಳಿಗೆ ಪಿಂಡೋದಕ ಕ್ರಿಯೆಗಳು ಊರ್ಜಿತವಾಗಿ ನಿಂತು, ನನ್ನ ತಾಯಿಯ ಮತ್ತು ನಿನ್ನ ವಂಶಗಳು ಅಭಿವೃದ್ಧಿಯಾಗುವವು. ಮಗನು ತಾನೇ ಆಗಿರುವದರಿಂದಲೂ, ಹೆಂಡತಿಯು ಸಕಲ ಕಾರ್ಯಗಳಲ್ಲಿಯೂ ಸಹಾಯಕಳಾಗಿ

ಸತಿ ಎನಿಸಿ ಕೊಂಡಿರುವದರಿಂದಲೂ, ಮಗನನ್ನೂ ಹೆಂಡತಿಯನ್ನೂ ಬಿಡ ಬಾರದು. ಕನ್ಯಾಜನವು ತಾಯಿ ತಂದೆಗಳಿಗೆ ದುಃಖವನ್ನು ಉಂಟು ಮಾಡುವವರಾದ್ದರಿಂದ, ನನ್ನನ್ನು ಕಳುಹಿಸಿ, ಸದ್ಯಃ ಬಂದ ದುಃಖವನ್ನು ಪರಿಹರಿಸಿ ಕೊಳ್ಳಿ. ನಾನು ಇಂಥ ಧರ್ಮದಿಂದ ಪುಣ್ಯ ಲೋಕಗಳನ್ನು ಹೊಂದುತ್ತೇನೆ. ನಾನು ಚಿಕ್ಕವಳಾಗಿ ಅಬಲೆಯಾಗಿರುವದರಿಂದ, ಅನಾಥೆಯಾಗಿ ದೈನ್ಯದಿಂದ ಭೂಮಿಯಲ್ಲಿ ಬಿದ್ದು, ಹೊರಳ್ಯಾಡುತ್ತಿರ ಬೇಕು. ಈಗ ನೀನು ನನ್ನನ್ನು ಕಳುಹಿಸಿದರೆ, ನಾನು ನನ್ನ ಶರೀರವನ್ನು ರಾಕ್ಷಸನಿಗೆ ಕೊಟ್ಟು, ಕುಲ ಸಂರಕ್ಷಣೆಯನ್ನು ಮಾಡಿ, ಅಪರಿಮಿತವಾದ ಪುಣ್ಯ ಲೋಕಗಳನ್ನೈದುವೆನು. ಅದರಿಂದ ಬಿಡ ತಕ್ಕವಳಾಗಿರುವ ನನ್ನನ್ನು ಕಳುಹಿಸಿ, ವಂಶಾಭಿವೃದ್ಧಿಗೆ ಕಾರಣನಾದ ನಿನ್ನನ್ನು ರಕ್ಷಿಸಿ ಕೊಳ್ಳ ಬೇಕು. ಇದು ಧರ್ಮವು. ನಾನು ನೀನು ಕೊಡುವಂಥ ತರ್ಪಣೋದಕದದೆಸೆಯಿಂದ ಪರಲೋಕ ಸುಖವನ್ನು ಹೊಂದುತ್ತೇನೆ. ಹಾಗಲ್ಲ ಎಂದು, ನೀನು ನನ್ನನ್ನು ಬಿಟ್ಟು, ಪರಲೋಕಕ್ಕೆ ಹೋದರೆ, ನಾನು ನಾಯಿಯಂತೆ ಮನೆ ಮನೆಗೂ ತಿರುಗಿ, ಅನ್ನವನ್ನು ಬೇಡಿ, ಬೇಸರ ಬೇಕು. ಇದಕ್ಕಿಂತ ಇನ್ನು ಬೇರೆ ದುಃಖ ಉಂಟೇ? ನೀನು ಸಮಸ್ತ ಬಂಧು ಜನಗಳೊಡನೆ ಸುಖವಾಗಿದ್ದರೆ, ನಾನು ಪರಲೋಕದಲ್ಲಿ ಸುಖ ಪಡುವದಕ್ಕಿಂತ ಬೇರೆ ಸುಖ ಉಂಟೇ? ನೀನು ಇವ್ವೆರಡನ್ನು ವಿಚಾರಿಸಿ, ನಿನಗೂ ನನ್ನ ತಾಯಿ ತಮ್ಮಂದಿರಿಗೂ ಸುಖವಾಗುವ ಹಾಗೆ ನಡಿಸು. ನೀವು ಚನ್ನಾಗಿದ್ದರೆ, ನಿಮಗೆ ಇನ್ನು ಗುಣವಂತರಾದ ಹೆಣ್ಣು ಗಂಡು ಮಕ್ಕಳು ಹುಟ್ಟುವರೇ ಹೊರತು, ಮಕ್ಕಳಿಗೆ ತಾಯಿ ತಂದೆಗಳು ತಿರಿಗಿ ಹುಟ್ಟಲಾರರು. ಅದರಿಂದ ನಿಮಗೆ ಪ್ರಿಯವಾಗುವದಕ್ಕೋಸ್ಕರ ನನ್ನ ಪ್ರಾಣಗಳನ್ನು ಅರ್ಪಿಸುತ್ತೇನೆ ಎನಲು; ಹೀಗೆ ತಾಯಿ ತಂದೆಗಳು ಮಗಳು ಸಹ ರೋದನವನ್ನು ಮಾಡುತ್ತಿರಲು;—

ಆ ಕುಮಾರಕನು ಅವರ ಸಮೀಪಕ್ಕೆ ಹೋಗಿ, ತೊದಲು ನುಡಿಗಳಿಂದ—ಅಳಬೇಡಿರೆಂದು ಪ್ರತ್ಯೇಕ ಪ್ರತ್ಯೇಕವಾಗಿ ತಾಯಿ ತಂದೆ ಅಕ್ಕಂದಿರಿಗೆ ಸಮಾಧಾನವನ್ನು ಹೇಳುತ್ತಾ, ನಗುತ್ತಾ, ಒಬ್ಬೊಬ್ಬರ ಸಮೀಪಕ್ಕೆ ಹೋಗಿ, ಅವರ ಮೇಲೆ ಬಿದ್ದು, ಸಂತೋಷ ಪಡುತ್ತಾ, ಹುಲ್ಲನ್ನು ತೆಗೆದು ಕೊಂಡು, ಇದರಿಂದ ಆ ಮನುಷ್ಯರನ್ನು ಕೊಲ್ಲುವ ರಾಕ್ಷಸನನ್ನು ಕೊಂದು ಹಾಕುತ್ತೇನೆ ಎಂದು ಹೇಳಲು; ಅವರು ಅತಿ ದುಃಖಿತರಾಗಿದ್ದರೂ, ಆ ಚಿಕ್ಕವನ ಮಾತನ್ನು ಕೇಳಿ, ಸಂತೋಷ ಪಟ್ಟು, ನಗುತ್ತಿರಲು; ಇದೇ ಸಮಯವೆಂದು ಕುಂತಿಯು ಅವರ ಸಮೀಪಕ್ಕೆ ಹೋಗಿ, ಆ ಬ್ರಾಹ್ಮಣನನ್ನು ಕುರಿತು ಮಧುರ ವಚನದಿಂದ ಇಂ

ತೆಂದಳು;—ಎಲೈ, ಬ್ರಾಹ್ಮಣ ಶ್ರೇಷ್ಠನೇ, ನೀವು ಹೀಗೆ ಕ್ಲೇಶ ಪಡುವದಕ್ಕೆ ಕಾರಣವೇನು? ಹೇಳು. ಅದು ನಮ್ಮ ಕೈಲಾಗುವ ಕಾರ್ಯವಾದರೆ, ತೀರಿಸುತ್ತೇವೆ ಎನಲು; ಆ ಬ್ರಾಹ್ಮಣನು—ಪರರ ದುಖ್ಖಗಳನ್ನು ಹೋಗಲಾಡಿಸುವದಕ್ಕೆ ಉಜ್ಜುಗಿಸುವದು ಸಜ್ಜನರಿಗೆ ಸ್ವಭಾವವಾದ್ದರಿಂದ, ನೀನು ಹೀಗೆ ಕೇಳುವದು ಉಚಿತವೇ ಸರಿ. ಆದರೆ ಈ ದುಖ್ಖವು ದೇವತೆಗಳಿಂದಲೇ ಹೊರ್ತಾಗಿ, ಮನುಷ್ಯರಿಂದ ತೀರಿಸುವದಕ್ಕೆ ಶಕ್ಯವಲ್ಲ. ಆದರೂ ನೀನು ಕೇಳಿದ್ದರಿಂದ ವಿವರಿಸುತ್ತೇನೆ.

ಈ ಪಟ್ಣಕ್ಕೆ ಎರಡು ಹರುದಾರಿಯು ದೂರದಲ್ಲಿ ಯಮುನಾ ನದೀ ತೀರದ ಗುಹಾಂತರದಲ್ಲಿ ಮಹಾ ಬಲಶಾಲಿಯಾಗಿ—ಈ ದೇಶಕ್ಕಧಿಪತಿಯಾಗಿ—ಮನುಷ್ಯ ಮಾಂಸ ಭಕ್ಷಕನಾಗಿ—ಕಾಮರೂಪಿಯಾಗಿ ಇರುವ ಬಕನೆಂಬ ಒಬ್ಬ ರಾಕ್ಷಸನಿರುವನು. ಅವನು ಈ ದೇಶಕ್ಕೆ ಬಂದು, ಹದಿಮೂರು ಸಂವತ್ಸರಗಳ ಪರ್ಯಂತರವೂ ಸಕಲ ಜನರಿಗೂ ಉಪದ್ರವನ್ನು ಮಾಡುತ್ತಾ, ಒಂದೊಂದು ಮನೆಯನ್ನು ಹೊಕ್ಕು, ಅದರಲ್ಲಿರುವ ಜನರೆಲ್ಲರನ್ನು ಒಂದೇ ದಿವಸದಲ್ಲಿ ಭಕ್ಷಿಸುತ್ತಾ, ಇತರರ ಭಯವಿಲ್ಲದೆ ಇರುತ್ತಿದ್ದನು. ಹೀಗೆ ನಮಗೆ ಇತರರು ಗತಿ ಇಲ್ಲದೆ ಇದ್ದದರಿಂದಲೂ, ಸ್ತ್ರೀ ಬಾಲ ವೃದ್ಧರಿಗೆ ಅವನ ಭಯ ಹೆಚ್ಚಾಗುತ್ತಾ ಬಂದದರಿಂದಲೂ, ಎಲ್ಲಾ ಬ್ರಾಹ್ಮಣರು ಮಂತ್ರ ಹೋಮ ಜಪ ಭೋಜನಗಳದೆಶೆಯಿಂದ ಆ ದುರಾತ್ಮನಿಗೆ ಸಂತೋಷವನ್ನು ಮಾಡಿಸಿ—ಎಲೈ, ರಾಕ್ಷಸೋತ್ತಮನೇ, ನೀನು ಈ ಪ್ರಕಾರ ಪ್ರತಿ ದಿನವು ಜನರಿಗೆ ಬಾಧೆಯನ್ನು ಮಾಡ ಬೇಡ. ನಿನಗೆ ಮಾಂಸಾಶನಗಳನ್ನೂ, ಅನ್ನ ಪಾನಗಳನ್ನೂ, ಪಿಂಡಿ, ಸೊಪ್ಪು, ಮೊದಲಾದ ಶಾಖಗಳನ್ನೂ, ತುಪ್ಪವನ್ನೂ, ಅರಳು, ಅಪೂಪ, ಸೂಪಗಳನ್ನೂ, ಪಾನಕದ ಗುಡಾಣಗಳನ್ನೂ, ಮೊಸರಿನ ಗಡಿಗೆಗಳನ್ನೂ, ತಂಬಿಟ್ಟು, ಚಿಗಳಿ ರಾಶಿಗಳನ್ನೂ, ಎರಡೆತ್ತುಗಳನ್ನು ಕಟ್ಟಿದ ಒಂದು ಭಂಡಿಯಲ್ಲಿ ಜೊತೆ ಮಾಡಿರಿಸಿ, ಒಂದೊಂದು ಮನೆಗೆ ಒಬ್ಬೊಬ್ಬ ಮನುಷ್ಯನ ಮೇರೆಗೆ ಪ್ರತಿ ದಿನವು ಕಳುಹಿಸುತ್ತೇವೆ. ನೀನು ಇದನ್ನು ಅಂಗೀಕರಿಸಿ, ನಮಗೆ ಉಪದ್ರವನ್ನು ಮಾಡದೆ ಇರ ಬೇಕು ಎನಲು; ಆ ಪುರುಷಾಧಮನು,—ಹಾಗೆ ಆಗಲಿ ಎಂದು, ಆ ಅರ್ಥಕ್ಕೆ ಒಡಂಬಟ್ಟು, ಪ್ರತಿ ದಿನವು ಆ ಮೇರೆಗೆ ಬಲಿಯನ್ನು ತೆಗೆದುಕೊಂಡು, ಈ ದೇಶವನ್ನು ಶತ್ರು ಚೋರ ಭಯವಿಲ್ಲದಂತೆ ಪರಿಪಾಲಿಸುತ್ತಿದ್ಧಾನೆ. ಆತನ ಬಲಿಗೋಸ್ಕರ ಒಬ್ಬೊಬ್ಬರ ಮನೆಗೆ ಅನೇಕ ವರುಷಗಳಿಗೆ ಒಂದು ಸಾರಿ ಸರದಿ ಬರುವದು. ಆ ಕಾಲದಲ್ಲೇನಾದರೂ ಊರನ್ನು ಬಿಟ್ಟು ಹೋಗುವದಕ್ಕೆ ಯತ್ನಾ ಮಾಡಿದರೆ, ಆ ರಾಕ್ಷಸನು ಕುಟುಂಬ ಸಮೇತನಾಗಿ ಆತ

ನನ್ನು ಕೊಂದು ಹಾಕುವನು. ವೇತ್ರಕಿಯನೆಂಬ ಈ ಪಟ್ಟಣದಲ್ಲಿರುವ ಅರಸು ರಾಜನೀತಿ ಪರನಲ್ಲದೆ ಇರುವದರಿಂದ, ಈ ಪಟ್ಟಣದ ಜನರಿಗೆ ಉಂಟಾದ ಉಪದ್ರವನ್ನು ಪರಿಹರಿಸಿ, ಶಾಶ್ವತವಾದ ಸುಖವನ್ನು ಕಲ್ಪಿಸಲಾರನು. ನಿಷ್ಕಂಟಕಗಳಾದ ದೇಶಗಳು ಎಷ್ಟು ಇದ್ದಾಗ್ಯೂ, ನಾವು ದುರ್ಬಲಾಶ್ರಯವಾದ ಇಂಥ ಪ್ರದೇಶದಲ್ಲಿ ಬಿದ್ದು ಇದ್ದೇವೆ. ಬ್ರಾಹ್ಮಣನಿಗೆ ಪರಸ್ಪರಾನುಕೂಲ್ಯವಿಲ್ಲದಿದ್ದರೆ, ಸ್ವೇಚ್ಛಾ ಗಮನದಿಂದ ಎಲ್ಲಿಗಾದರೂ ಪಕ್ಷಿಗಳೋಪಾದಿಯಲ್ಲಿ ಹೋಗ ಬಹುದು. ಗೃಹಸ್ಥನಿಗೆ ಮೊದಲು ಧಾರ್ಮಿಕನಾದ ಅರಸಿನ ಆಶ್ರಯವಿರ ಬೇಕು; ಹೆಂಡತಿ ಅನುಕೂಲೆಯಾಗಿರ ಬೇಕು; ಧನವು ಯಥೇಷ್ಟವಾಗಿರ ಬೇಕು. ಈ ಮೂರು ಇದ್ದರೆ, ಆತನು ತನ್ನ ಜ್ಞಾತಿ ಪುತ್ರಾದಿಗಳನ್ನು ರಕ್ಷಿಸುವನು. ಈ ಮೂರು ಅರ್ಥಗಳಲ್ಲಿ ಒಂದಾದರೂ ನನಗೆ ಇಲ್ಲದ್ದರಿಂದ, ನಾನು ಹೀಗೆ ಕ್ಲೇಶ ಪಡುತಿದ್ದೇನೆ. ಈ ದಿವಸ ಮನೆಯ ಸರದಿಯ ಮೇರೆಗೆ ಕುಲನಾಶಕವಾದ ವಾರವು ಪ್ರಾಪ್ತವಾಯಿತು. ಭೋಜನವನ್ನೂ ಪುರುಷ ಬಲಿಯನ್ನೂ ಸಂಪಾದಿಸ ಬೇಕು. ಒಬ್ಬ ಪುರುಷನನ್ನು ಕ್ರಯಕ್ಕಾದರೂ ಕೊಂಡು ಕೊಟ್ಟೇವು ಎಂದರೆ, ಹಣವಿಲ್ಲ. ಇವರೊಬ್ಬರನ್ನೂ ಕೊಡುವದಕ್ಕೆ ಮನಸ್ಸು ಒಡಂಬಡುವದಿಲ್ಲ. ಇಂಥ ರಾಕ್ಷಸನ ಭಯವನ್ನು ಹೋಗಲಾಡಿಸಿ ಕೊಳ್ಳುವದಕ್ಕೆ ಮತ್ತೊಂದು ಉಪಾಯವು ತೋಚುವದಿಲ್ಲ. ಆದ್ದರಿಂದ ನಾವೆಲ್ಲರು ಆತನ ಬಾಯಿಯಲ್ಲಿ ಬೀಳ ಬೇಕೆಂದು ಯೋಚಿಸಿದ್ದೇವೆ. ನೀನು ಕೇಳಿದ್ದರಿಂದ ಈ ದುಃಖದ ಕಾರಣವನ್ನು ವಿವರವಾಗಿ ಹೇಳಿದೆನು ಎನಲು;—

ಕುಂತಿ ದೇವಿಯು ಆ ಬ್ರಾಹ್ಮಣನನ್ನು ನೋಡಿ,—ಎಲೈ, ಬ್ರಾಹ್ಮಣೋತ್ತಮನೇ, ಈ ಭಯದಿಂದ ನೀನು ಭಯ ಪಡ ಬೇಡ. ಇದಕ್ಕೆ ನಾನೊಂದು ಉಪಾಯವನ್ನು ಹೇಳುತ್ತೇನೆ. ನೀವಷ್ಟು ಮಂದಿಯು ಏಕ ಕಾಲದಲ್ಲಿ ಹೋಗುವದು ಯುಕ್ತವಲ್ಲ. ನಿನಗೆ ಒಬ್ಬನೇ ಮಗನೂ ಒಬ್ಬಳೇ ಮಗಳೂ ಇರುವದ್ದರಿಂದ, ಅವರನ್ನೂ, ಅವರನ್ನು ಕಾಪಾಡುವ ತಾಯಿಯನ್ನೂ ಕಳುಹಿಸುವದು ಸರಿಯಲ್ಲ. ನನಗೆ ಐದು ಮಂದಿ ಮಕ್ಕಳಿದ್ದಾರೆ. ಅವರೊಳಗೊಬ್ಬನನ್ನು ನಿಮಗೆ ಕೊಡುತ್ತೇನೆ. ಆತನು ನೀವು ಕೊಡುವ ಅನ್ನ ಪಾನಗಳನ್ನು ಜೊತೆ ಮಾಡಿಕೊಂಡು, ರಾಕ್ಷಸನ ಸಮೀಪಕ್ಕೆ ಹೋಗುತ್ತಾನೆ ಎನಲು; ಆ ಬ್ರಾಹ್ಮಣನು—ನಾನು ನನ್ನ ಜೀವನಾರ್ಥವಾಗಿ ಇಂಥ ಅಕೃತ್ಯಕ್ಕೆ ಒಡಂಬಡುವವನಲ್ಲ. ಬ್ರಾಹ್ಮಣನಾಗಿ ಅತಿಥಿಯಾಗಿರುವ ನಿನ್ನ ಕುಮಾರನನ್ನು ರಾಕ್ಷಸನಿಗೆ ಹ್ಯಾಗೆ ಒಪ್ಪಿಸೇನು? ಮಹಾ ಕುಲ ಪ್ರಸೂತರಾದ ನಿಮ್ಮಂಥವರಿಗೆ ಇಂಥ ಪರೋಪಕಾ

ರವು ಅದ್ಭುತವಲ್ಲ. ಬ್ರಾಹ್ಮಣ ನಿಮಿತ್ತವಾಗಿ ಸ್ವಪುತ್ರನನ್ನಾದರೂ ಒಪ್ಪಿಸುವದು ನಿಮಗೆ ಯುಕ್ತವು. ಆದರೆ ನಾನು ಶ್ರೇಯಸ್ಸಾಗುವ ಮೇರೆಗೆ ವಿಚಾರಿಸ ಬೇಡವೇ? ಬ್ರಾಹ್ಮಣ ವಧಕ್ಕೂ ಆತ್ಮ ವಧಕ್ಕೂ ಅಂತರವನ್ನು ವಿಚಾರಿಸಿದಲ್ಲಿ, ಆತ್ಮವಧಕ್ಕಿಂತಲೂ ಬ್ರಹ್ಮ ವಧೆಯು ಅಧಿಕವಾದ್ದರಿಂದ, ಅದಕ್ಕೆ ಪ್ರಾಯಶ್ಚಿತ್ತವು ವಿಧಿಸಲ್ಪಟ್ಟಿರುವದು. ಬ್ರಾಹ್ಮಣ ವಧೆಯನ್ನು ಅಜ್ಞಾನದಿಂದ ಮಾಡಿದರೂ ದುಷ್ಕರವಾದ್ದರಿಂದ, ಬುದ್ಧಿ ಪೂರ್ವಕವಾಗಿ ಮಾಡಿದರೆ, ಹ್ಯಾಗೆ ಪರಿಹರಿಸ ತಕ್ಕದ್ದು? ತನಗೆ ಅಭಿಮತವಲ್ಲದೆ ಮತ್ತೊಬ್ಬರ ನಿರ್ಬಂಧದ ದೆಶೆಯಿಂದ ಬರುವ ಆತ್ಮ ವಧಕ್ಕೆ ದೋಷವಿಲ್ಲ. ನಿನ್ನ ಕುಮಾರಕನನ್ನು ಕಳುಹಿಸುವದು ಬುದ್ಧಿ ಪೂರ್ವಕವಾದ ಬ್ರಾಹ್ಮಣ ವಧೆಯಾದ್ದರಿಂದ, ಅತಿ ಕ್ರೂರವಾಗಿರುವದು. ವಿಶೇಷವಾಗಿ ತನ್ನ ಮನೆಗೆ ಬಂದಂಥವನನ್ನೂ ಯಾಚಕಕ್ಕೆ ಬಂದವನನ್ನೂ ಶರಣಾಗತನಾದವನನ್ನೂ ವಧಿಸುವದು ಅತಿ ನಿಂದಿತವೆಂತಲೂ, ಅದನ್ನು ಒಂದು ವೇಳೆಯಾದರೂ ಮಾಡ ಬಾರದೆಂತಲೂ, ಪ್ರಾಜ್ಞರು ಹೇಳುವರು. ನಾನು ಒಬ್ಬರನ್ನು ಬಿಟ್ಟರೆ, ದುಖ್ಖವಾಗುತ್ತದೆ ಎಂದು, ಅಷ್ಟು ಮಂದಿಯು ಹೋಗ ಬೇಕೆಂದು ಎಣಿಸಿ ಇದ್ದೇನೆ. ನಿನ್ನ ಕುಮಾರನನ್ನು ಕಳುಹಿಸುವವಕ್ಕೆ ಒಡಂಬಡೆನು ಎನಲು;—

ಆ ಕುಂತಿ ದೇವಿಯು—ಎಲೈ, ದ್ವಿಜನೇ, ಬ್ರಾಹ್ಮಣನನ್ನು ಸಂರಕ್ಷಣೆ ಮಾಡ ಬೇಕೆಂತಲೂ, ಬ್ರಾಹ್ಮಣ ವಧೆಯು ನಿಂದಿತವೆಂತಲೂ, ನಾನು ಬಲ್ಲೆನು. ತಾಯಿಗೆ ನೂರು ಮಂದಿ ಕುಮಾರಕರಿದ್ದರೂ, ಅವರಲ್ಲೊಬ್ಬನೂ ಅಪ್ರಿಯನಾಗಿ ಹೋಗುವದಿಲ್ಲ. ಆದ್ದರಿಂದ ನನಗೆ ಈ ಕುಮಾರಕನು ಅಪ್ರಿಯನೆಂದು ಕಳುಹಿಸುವದಿಲ್ಲ. ಆದರೆ ಈತನು ಬಲ ಪರಾಕ್ರಮಶಾಲಿಯಾಗಿ, ಮಂತ್ರಸಿದ್ಧಿಯುಳ್ಳವನಾಗಿ, ಅಧಿಕ ತಪೋಬಲ ಯುಕ್ತನಾಗಿ ಇರುವದರಿಂದ, ಆತನು ನೀವು ಕೊಟ್ಟ ಅನ್ನ ಪಾನಗಳನ್ನು ಆ ರಾಕ್ಷಸನಿಗೆ ಕೊಟ್ಟು, ತನ್ನನ್ನು ರಕ್ಷಿಸಿ ಕೊಂಡು, ತಿರಿಗಿ ಬರುವನೇ ಹೊರತಾಗಿ, ಅವನಿಂದ ಪೆಟ್ಟು ತಿಂದು ಬರುವಂಥವನಲ್ಲ. ಮೊದಲು ಈ ಬಾಲಕನಿಂದ ಮಹಾ ಬಲಶಾಲಿಗಳಾಗಿ ಮಹಾ ಶರೀರವುಳ್ಳ ರಾಕ್ಷಸರು ಅನೇಕ ಮಂದಿ ಹತರಾದರು. ಈ ರಹಸ್ಯವನ್ನು ಯಾರಿಗೂ ಹೇಳಬೇಡ. ಈತನಲ್ಲಿರುವ ವಿದ್ಯೆಯನ್ನು ಬಹು ಮಂದಿ ವಿದ್ಯಾರ್ಥಿಗಳು ಕಲಿಯ ಅಪೇಕ್ಷಿಸಿ, ಆತನನ್ನು ನಿರ್ಬಂಧ ಪಡಿಸುವರು. ಆದರೆ ಈ ಬಾಲಕನಿಗೆ ವಿದ್ಯೆಯನ್ನು ಹೇಳಿದಾತನು—ತನ್ನ ಅಪ್ಪಣೆ ಇಲ್ಲದೆ ಇನ್ನ್ಯಾರಿಗಾದರೂ ಈ ವಿದ್ಯೆಯನ್ನು ಹೇಳಿದರೆ, ನಿನಗೆ ಫಲಿಸಲಾರದು ಎಂದು, ಕಟ್ಟು ಮಾಡಿ ಇದ್ದಾನೆ ಎಂ

ದು, ಹೇಳಲು; ಆ ಬ್ರಾಹ್ಮಣೋತ್ತಮನೂ ಆತನ ಹೆಂಡತಿಯೂ ಅಮೃತ ರಸದ ಚಂದದಿಂದ ಒಪ್ಪುತ್ತಿರುವ ಆ ಕುಂತಿಯ ವಾಕ್ಯವನ್ನು ಕೇಳಿ, ಬಹು ಸಂತೋಷ ಪಟ್ಟು, ಅವಳನ್ನು ಬಹು ಪ್ರಕಾರವಾಗಿ ಪೂಜಿಸಿದರು. ಅನಂತರದಲ್ಲಿ ಕುಂತೀ ದೇವಿಯು ಭೀಮನಿಗೆ ಈ ವೃತ್ತಾಂತವನ್ನು ತಿಳುಹಿಸಲು; ಆತನು, ಹಾಗೆಯೇ ಮಾಡುತ್ತೇನೆ ಎಂದು ಒಡಂಬಟ್ಟನು.

ಇತ್ತಲಾ ಧರ್ಮರಾಯನೇ ಮೊದಲಾದ ನಾಲ್ಕು ಮಂದಿಯು ಭಿಕ್ಷಾನ್ನವನ್ನು ತೆಗೆದು ಕೊಂಡು, ಮನೆಗೆ ಬಂದ ಸಮಯದಲ್ಲಿ ಉತ್ಸಾಹದೊಡನೆ ಕೂಡಿರುವ ಭೀಮಸೇನನನ್ನು ನೋಡಿ, ಅವರಲ್ಲಿ ಧರ್ಮರಾಯನು ಆತನ ಇಂಗಿತವನ್ನು ನೋಡಿ, ಸಂತೋಷ ಯುಕ್ತನಾಗಿ ಇದ್ದಾನೆಂದು ತಿಳಿದು, ಇದಕ್ಕೆ ಏನೋ ನಿಮಿತ್ತವಿದೆ ಎಂದು ಚಿಂತಿಸುತ್ತಾ, ಏಕಾಂತದಲ್ಲಿ ತನ್ನ ತಾಯಿಯನ್ನು ನೋಡಿ—ವಾಯು ಪುತ್ರನು ನಿನ್ನ ಅಪ್ಪಣೆಯಿಂದ ಒಂದು ಮಹಾ ಕಾರ್ಯವನ್ನು ನಿರ್ವಹಿಸುವದಕ್ಕೆ ಎಣಿಸಿದ್ದಾನೆಂದು, ಆತನ ಮುಖೋಲ್ಲಾಸದಿಂದ ತಿಳಿದೆನು. ಅದನ್ನು ವಿವರವಾಗಿ ತಿಳಿಯ ಹೇಳೆನಲು; ಕುಂತೀ ದೇವಿಯು—ಎಲೈ, ಕುಮಾರಕನೇ, ವಾಯು ಪುತ್ರನು ನನ್ನ ಅಪ್ಪಣೆಯಿಂದ ಒಬ್ಬ ಬ್ರಾಹ್ಮಣನನ್ನು ರಕ್ಷಿಸುವದಕ್ಕೋಸ್ಕರವೂ ಪಟ್ಣದ ಆಪತ್ತನ್ನು ಪರಿಹರಿಸುವದಕ್ಕೋಸ್ಕರವೂ ಒಬ್ಬ ರಾಕ್ಷಸನ ಬಲಿ ರೂಪಕವಾದಂಥ ಮಹಾ ಕಾರ್ಯವನ್ನು ನಡಿಸಲಿಚ್ಛೈಸಿದ್ದಾನೆ ಎನಲು; ಧರ್ಮಜನು ತಾಯಿಯನ್ನು ನೋಡಿ,—ಎಲೈ, ತಾಯೇ, ಇಂಥ ಸಾಹಸ ಕಾರ್ಯವನ್ನು ಮಾಡ ಬಹುದೇ? ಸತ್ಪುರುಷರಾದವರು—ಪುತ್ರ ತ್ಯಾಗವು ಮಹಾ ಅನರ್ಥಕ್ಕೆ ಕಾರಣವೆಂದು ಹೇಳುವರು. ಮತ್ತೊಬ್ಬರ ಮಗನನ್ನು ರಕ್ಷಿಸುವದಕ್ಕೋಸ್ಕರ ತನ್ನ ಮಗನನ್ನು ಬಿಡ ಬಹುದೇ? ಇಂಥ ಲೋಕವಿರುದ್ಧವಾದ ಪುತ್ರತ್ಯಾಗ ರೂಪವಾದ ಕಾರ್ಯವನ್ನು ನೀನು ಮಾಡ ಬಹುದೇ? ನಾವೆಲ್ಲರು ಭೀಮಸೇನನ ಭುಜ ಬಲವನ್ನು ನಂಬಿ, ದಾಯಾದಿಗಳು ಅಪಹರಿಸಿ ಕೊಂಡಿರುವಂಥ ರಾಜ್ಯವನ್ನು ತಿರಿಗಿ ಸಾಧಿಸ ಬೇಕೆಂದು ಬಯಸಿ ಇದ್ದೇವೆ. ಈ ದುರ್ಯೋಧನ ದುಶ್ಯಾಸನ ಕರ್ಣ ಶಕುನಿ ಮೊದಲಾದವರು ಮಹಾ ಬಲ ಪರಾಕ್ರಮ ಶಾಲಿಯಾದ ಭೀಮಸೇನನ ಪರಾಕ್ರಮವನ್ನು ಸ್ಮರಿಸಿ, ಈಗಲೂ ಬೆಚ್ಚಿ ಬೆಚ್ಚಿ ಬೀಳುತ್ತಿದ್ದಾರೆ. ಇದಲ್ಲದೆ ಭೀಮಸೇನನ ಭುಜ ಬಲದಿಂದಲ್ಲವೇ, ಪಾಪಾತ್ಮರಾದ ಪುರೋಚನಾದಿಗಳನ್ನು ಕೊಂದು, ಅರಗಿನ ಬಾಧೆಯನ್ನು ತಪ್ಪಿಸಿ ಕೊಂಡು, ನಾವೆಲ್ಲರು ಪ್ರಾಣ ಸಹಿತವಾಗಿ ನಿಂತದ್ದು? ಇದನ್ನು ಅರಿಯಾ? ಬುದ್ಧಿಶಾಲಿಯಾಗಿ ಮಹಾ ಬಲ ಪರಾಕ್ರಮಶಾಲಿಯಾದ ಇಂಥ ಮಗನನ್ನು ಕೊಡುವದಕ್ಕೆ ಯೋಚಿಸಿದ ನಿನ್ನ ಬುದ್ಧಿಗೆ ಏನನ್ನ ಬೇಕೆನಲು; ಕುಂತಿಯು ಇಂತೆಂದಳು,—ಕೇಳು, ಧರ್ಮರಾ

ಯನೇ, ಭೀಮನ ವಿಷಯದಲ್ಲಿ ಹೀಗೆ ಎಣಿಸ ಬೇಡ. ನಾನು ಬುದ್ಧಿ ಮೋಸದಿಂದ ಈ ಕಾರ್ಯವನ್ನು ಮಾಡಿದವಳಲ್ಲ. ಕ್ಲೇಶದಿಂದ ನನ್ನ ಬುದ್ಧಿ ಮಂದವಾಗಲಿಲ್ಲ. ನಾವು ಈ ಬ್ರಾಹ್ಮಣನ ಮನೆಯಲ್ಲಿ ಸುಖವಾಗಿ ಇದ್ಧೇವಾದ ಕಾರಣ, ಆತನಿಗೆ ಒಂದು ಉಪಕಾರವನ್ನು ಮಾಡ ಬೇಕೆಂದು ಎಣಿಸಿದೆನು. ಲೋಕದಲ್ಲಿ ಉಪಕಾರವನ್ನು ಮಾಡಿದವನು ಕೆಟ್ಟು ಹೋಗುವದಿಲ್ಲ. ಇದಲ್ಲದೆ ಬ್ರಾಹ್ಮಣನಿಗೆ ಉಪಕಾರವನ್ನು ಮಾಡಿದರೆ, ಮಹತ್ತಾದ ಧರ್ಮವು ಬರುವದೆಂದು ಯೋಚಿಸಿದೆನು. ಅದಲ್ಲದೆ ಭೀಮನು ಅರಗಿನ ಮನೆಯಲ್ಲಿ ಮಾಡಿದ ಸಾಹಸವನ್ನೂ ಹಿಡಿಂಬನನ್ನು ಕೊಂದದ್ದನ್ನೂ ನೋಡಿ, ಇವನು ಆ ರಾಕ್ಷಸನಿಗೆ ದಕ್ಕುವದಿಲ್ಲ ಎಂದು ವಿಶ್ವಾಸದಿಂದ ಈ ಅರ್ಥಕ್ಕೆ ಒಡಂಬಟ್ಟೆನು. ಇಷ್ಟು ಮಾತ್ರವೇ ಅಲ್ಲ; ಭೀಮನ ಭುಜಬಲವು ಹತ್ತು ಸಾವಿರ ಆನೆಗಳ ಬಲಕ್ಕೆ ಸಮನಾಗಿರುವದು. ಈ ಭೀಮನಿಗೆ ಸಮಾನನಾದ ಪರಾಕ್ರಮಶಾಲಿಯು ಹುಟ್ಟಿದವರೊಳಗೆ ಒಬ್ಬನೂ ಇಲ್ಲ. ಮತ್ತು ಈ ಭೀಮಸೇನನು, ಒಂದು ವೇಳೆ ಇಂದ್ರನು ಯುದ್ಧದಲ್ಲಿ ಎದುರಿಸಿದರೂ, ಅವನನ್ನು ಜೈಸುವನು. ಇದಲ್ಲದೆ ನಾನು ಈತನನ್ನು ಬಾಲ್ಯದಲ್ಲಿ ಶತಶೃಂಗ ಪರ್ವತದ ಮೇಲೆ ಎತ್ತಿ ಕೊಂಡು ಹೋಗುತ್ತಿರುವಾಗ, ನನ್ನ ಕಂಕುಳಿಂದ ಜಾರಿ ಬಿದ್ದು, ತನ್ನ ಶರೀರ ಕಾಠಿಣ್ಯದಿಂದ ಆ ಪರ್ವತದ ಮಹಾ ಶಿಲೆಯನ್ನು ಪುಡಿಪುಡಿ ಮಾಡಿದನು. ಇದಷ್ಟು ನನ್ನ ಮನಸ್ಸಿನಲ್ಲಿ ಮರೆಯದೆ ಇದ್ದದರಿಂದ, ಆ ಬ್ರಾಹ್ಮಣನಿಗೆ ಹಿತವನ್ನು ಎಣಿಸಿ, ಭೀಮನಿಗೆ ಈ ಕಾರ್ಯವನ್ನು ಕಟ್ಟು ಮಾಡಿದೆನೇ ಹೊರತು, ಅಜ್ಞಾನದಿಂದಲೂ ಅರ್ಥ ಲೋಭದಿಂದಲೂ ಬುದ್ಧಿಭ್ರಮೆಯಿಂದಲೂ ಈ ಕೆಲಸವನ್ನು ಕಟ್ಟು ಮಾಡಿದವಳಲ್ಲ. ಅದರಿಂದ ಇದು ಬುದ್ಧಿ ಪೂರ್ವಕವಾಗಿ ಮಾಡಿದಂಥ ಕಾರ್ಯವೆಂದು ತಿಳಿ. ನಾವು ಈ ಕಾರ್ಯವನ್ನು ನಿರ್ವಹಿಸಿದರೆ, ಧರ್ಮವೂ ಕೃತಜ್ಞತೆಯೂ ಬರುತ್ತದೆ. ಬ್ರಾಹ್ಮಣನಿಗೆ ಸಹಾಯವನ್ನು ಮಾಡಿದಂಥ ಕ್ಷತ್ರಿಯನು ಶಾಶ್ವತವಾದ ಪುಣ್ಯ ಲೋಕವನ್ನು ಪಡೆಯುವನೆಂದು ಕೇಳಿ ಉಂಟು. ಕ್ಷತ್ರಿಯನಿಗೆ ಪ್ರಾಣ ದಾನವನ್ನು ಮಾಡಿದರೆ, ಇಹಪರಗಳಲ್ಲಿ ಕೀರ್ತಿ ಸುಕೃತಗಳನ್ನು ಪಡೆಯುವನು. ವೈಶ್ಯನಿಗೆ ಸಹಾಯವನ್ನು ಮಾಡಿದರೆ, ಲೋಕ ರಂಜಕನಾಗುವನು. ಶರಣಾಗತನಾದ ಶೂದ್ರನ ಭಯವನ್ನು ಪರಿಹರಿಸಿದರೆ, ಆ ಸುಕೃತ ವಿಶೇಷದಿಂದ ಈ ಲೋಕದಲ್ಲಿ ಸಕಲ ರಾಜಪೂಜಿತವಾದ ಕುಲದಲ್ಲಿ ಹುಟ್ಟುವನು ಎಂದು, ಕೃಷ್ಣ ದ್ವೈಪಾಯನನು ಹೇಳಿರುವದರಿಂದ, ಈ ಕಾರ್ಯವನ್ನು ಭೀಮಸೇನನಿಗೆ ಕಟ್ಟು ಮಾಡಿದೆನು ಎನಲು; ಆ ಅಜಾತ ಶತ್ರುವು—ಎಲೈ, ತಾಯೇ, ನೀನು ಈಗ ಬುದ್ಧಿ ಪೂರ್ವಕ

ವಾಗಿ ಆಚರಿಸಿದಂಥ ಕಾರ್ಯವು ಉಚಿತವೇ ಸರಿ, ಆರ್ತನಾದ ಬ್ರಾಹ್ಮಣನಲ್ಲಿ ಕೃಪಾ ವಿಶೇಷದಿಂದ ನೀನು ಭೀಮನನ್ನು ಕಳುಹಿಸಿದ್ದರಿಂದ, ಆತನು ಮನುಷ್ಯ ಭಕ್ಷಕನಾದ ಆ ರಾಕ್ಷಸನನ್ನು ಈ ಕ್ಷಣದಲ್ಲಿಯೇ ಜಯಿಸಿ, ಪಟ್ಟಣದಲ್ಲಿರುವವರಿಗೆಲ್ಲ ಅಭಯ ದಾನವನ್ನು ಮಾಡುವದು ಯಥಾರ್ಥವು. ಹಾಗಾದರೂ ಇಲ್ಲಿ ಇರುವಂಥ ನಮ್ಮನ್ನು ಯಾರೂ ಅರಿಯದೆ ಇರುವ ಹಾಗೆ, ಈ ಬ್ರಾಹ್ಮಣನೊಡನೆ ಪ್ರಯತ್ನದಿಂದ ಹೇಳು ಎನಲು; ಕುಂತೀ ದೇವಿಯು ತಿರಿಗಿ ಬ್ರಾಹ್ಮಣನ ಮನೆಗೆ ಹೋಗಿ, ಅವರೆಲ್ಲರಿಗೂ ಉಚಿತ ಪ್ರಕಾರದಿಂದ ಸಮಾಧಾನವನ್ನು ಹೇಳಿದಳು.

ಆ ಮೂರನೇ ದಿವಸ ಪ್ರಾತಃಕಾಲದಲ್ಲಿ ಮಹಾ ಬಲಶಾಲಿಯಾದ ಭೀಮಸೇನನು ಆ ಬ್ರಾಹ್ಮಣನ ಸಮೀಪಕ್ಕೆ ಹೋಗಿ—ಎಲೈ, ಬ್ರಾಹ್ಮಣೋತ್ತಮನೇ, ನಿನ್ನನ್ನು ಸಕುಟುಂಬನಾಗಿ ಈ ಆಪತ್ತಿನದೆಸೆಯಿಂದ ರಕ್ಷಿಸುತ್ತೇನೆ. ಭಯಪಡ ಬೇಡ. ರಾಕ್ಷಸನ ಸಮೀಪಕ್ಕೆ ನಾನೇ ಹೋಗುತ್ತೇನೆ. ನಿನ್ನ ಮನೆಯಲ್ಲಿ ನನಗೆ ಬೇಕಾದ ಅನ್ನವನ್ನು ಮೊದಲೇ ಇಕ್ಕಿದರೆ, ನಾನು ಊಟಾ ಮಾಡಿದ ಮೇಲೆ ರಾಕ್ಷಸನಿಗೆ ಬಲಿಯಾಗುತ್ತೇನೆ ಎನಲು; ಆ ಬ್ರಾಹ್ಮಣನು ಈ ವೃತ್ತಾಂತವನ್ನು ತನ್ನ ಬಂಧುಗಳಿಗೆಲ್ಲ ಹೇಳಿ, ಭೀಮಸೇನನಿಗೆ ಮೃಷ್ಟಾನ್ನವನ್ನಿಕ್ಕಲು; ಮತ್ತು ಪೌರಜನರು ಮಾಂಸ ತುಪ್ಪ ಇವುಗಳಿಂದ ಕೂಡಿರುವ ನಾನಾ ಪ್ರಕಾರವಾದ ಸೂಪಗಳಿಂದಲೂ ಅಪೂಪಗಳಿಂದಲೂ ಉಪ್ಪಿನಕಾಯಿ ಮೊದಲಾದ ವಸ್ತುಗಳಿಂದಲೂ ಕೂಡಿರುವ ಅನ್ನವನ್ನೂ, ಚಿಗಳಿ ತಂಬಿಟ್ಟುಗಳನ್ನೂ, ಕಡುಬುಗಳನ್ನೂ, ಕಲಸೋಗರಗಳನ್ನೂ ತಂದು ಕೊಡಲು; ಭೀಮನು ಅದಷ್ಟನ್ನು ಭಕ್ಷಿಸಿ, ಗುಡಾಣಗಳಲ್ಲಿ ತುಂಬಿದ್ದ ತುಪ್ಪ ಹಾಲು ಮೊಸರುಗಳನ್ನು ಕುಡಿದು, ತೃಪ್ತಿಯನ್ನು ಹೊಂದಿದನು. ಆ ಬಳಿಕ ಪುರಜನರು ಯಥಾ ಪ್ರಕಾರವಾಗಿ ಆ ಮಹಾ ರಾಕ್ಷಸನಿಗೆ ಅಪರಿಮಿತಗಳಾದ ಭಕ್ಷ್ಯ ಭೋಜ್ಯಗಳನ್ನು ಜೊತೆಗೊಳಿಸಿ, ಒಂದು ಭಂಡಿಯಲ್ಲಿರಿಸಿ, ನಾನಾ ಪ್ರಕಾರವಾದ ವಾದ್ಯ ಧ್ವನಿಗಳಿಂದ ಆ ಭಂಡಿಯನ್ನು ಸುತ್ತಿ ಕೊಂಡು ಹೋಗುತ್ತಿದ್ದರು. ಆ ಭೀಮನು ಭಂಡಿಯನ್ನು ಏರಿ, ಪುರಜನಗಳು—ಭೋಜನ ಪ್ರಿಯನಾಗಿ, ರೂಪಸಂಪನ್ನನಾಗಿ, ಯೌವನಸ್ಥನಾಗಿರುವ ಈತನು ನಿರ್ನಿಮಿತ್ತವಾಗಿ ಈ ರಾಕ್ಷಸನಿಗೆ ಯಾತಕ್ಕೆ ಪ್ರಾಣಗಳನ್ನು ಕೊಡುತ್ತಲಿದ್ದಾನೆ? ಎಂದು ಹೇಳುವಂಥ ಮಾತುಗಳನ್ನು ಕೇಳುತ್ತಾ, ಕಪ್ಪಾಗಿರುವ ವೃಷಭಗಳನ್ನು ಹೊಡೆಯುತ್ತಾ, ದಕ್ಷಿಣಾಭಿಮುಖವಾಗಿ ಭಂಡಿಯನ್ನು ನಡಿಸಲು; ಆ ಪೌರಜನರು ಕಟ್ಟಳೇ ಪ್ರಕಾರ ಸಂಕೇತ ಸ್ಥಾನ ಪರ್ಯಂ

ತರವು ಹೋಗಿ, ಅಲ್ಲಿಯೇ ನಿಂತು, ನೋಡುತ್ತಿರಲು; ಆ ವಾಯುಪುತ್ರನು ಅಲ್ಲಿರುವ ಒಂದು ದೊಡ್ಡ ಮರದ ಸಮೀಪಕ್ಕೆ ಹೋಗಿ, ಎಲುಬುಗಳೂ ಕೂದಲುಗಳೂ ಮೆದಡುಗಳೂ ಕೊಬ್ಬುಗಳೂ ಕಾಲುಗಳೂ ಕೈಗಳೂ ಭುಜಗಳೂ, ತೊಡೆಗಳೂ, ತುಮುರು ತುಮುರುಗಳಾಗಿ, ಕೆಲವು ಒಣಗಿಯೂ ಕೆಲವು ಹಸೀವಾಗಿಯೂ ಕಾಣಿಸುತ್ತಿರಲು; ಎಲ್ಲಿ ನೋಡಿದರೂ, ಹದ್ದು, ರಣಹದ್ದು, ಕಾಗೆ, ನರಿ, ನಾಯಿ, ಇವುಗಳು ವಿಕಾರ ಧ್ವನಿಗಳಿಂದ ಕೂಗುತ್ತಾ, ಓಡ್ಯಾಡುತ್ತಿರಲು; ದುರ್ಗಂಧ ಯುಕ್ತವಾಗಿ, ನೋಡುವದಕ್ಕೆ ಅಶಕ್ಯವಾಗಿ, ಸ್ಮಶಾನದೋಪಾದಿಯಲ್ಲಿ ಭಯಂಕರವಾಗಿರುವ ಆ ಮಹಾ ವೃಕ್ಷದ ಬುಡವನ್ನು ಸೇರಿ, ತನ್ನ ಮನಸ್ಸಿನಲ್ಲಿ—ಪರ್ವತಕ್ಕೆ ಸಮಾನಗಳಾದ ಭಕ್ಷ್ಯ ಭೋಜ್ಯ ರಾಶಿಗಳಿಂದಲೂ ಅನ್ನರಾಶಿಗಳಿಂದಲೂ ತುಂಬಿದ ಈ ಭಂಡಿಯನ್ನು ರಾಕ್ಷಸನು ಬಂದು ನೋಡುವದಕ್ಕೆ ಮೊದಲೇ ಇದಷ್ಟನ್ನು ತಾನೇ ಭಕ್ಷಿಸ ಬೇಕು; ಬಲ ಗರ್ವಿತನಾದ ದುರಾತ್ಮನಾದ ಆ ರಾಕ್ಷಸನು ವಿಜೃಂಭಿಸಿ, ಯುದ್ಧವನ್ನು ಮಾಡುವಾಗ, ಅವನು ನನ್ನನ್ನು ತಳ್ಳಿದರೆ, ಬಲದಿಂದ ನಿಂತಿರ ಬೇಕು; ಘಟ್ಟ್ಯಾಗಿ ನಿಂತರೆ, ಆತನನ್ನು ಕೊಲ್ಲ ಬಹುದು; ಈ ಅನ್ನವನ್ನು ಈಗಲೇ ಭಕ್ಷಿಸದೆ ಹೋದರೆ, ಇನ್ನು ಮೇಲೆ ನನಗೆ ದಕ್ಕುವದಿಲ್ಲ ಎಂದು ನಿಶ್ಚೈಸಿ, ನಾಲ್ಕು ದಿಕ್ಕುಗಳನ್ನು ನೋಡಿ, ಭಂಡಿಯಲ್ಲಿ ಚಂದವಾಗಿ ಕೂತು ಕೊಂಡು, ಶಾಕ ಸೂಪಗಳಿಂದ ಕೂಡಿರುವ ಅನ್ನವನ್ನು ಕ್ರಮವಾಗಿ ಭಕ್ಷಿಸುತ್ತಿರಲು; ಸಂಕೇತಸ್ಥಾನದಲ್ಲಿ ನಿಂತಿದ್ದ ಪಾರಜನಗಳು ಉದ್ದವಾದ ದೊಡ್ಡ ಮರಗಳನ್ನು ಏರಿ, ಭೀಷಣಾಕಾರದಿಂದ ಅನ್ನವನ್ನು ಭಕ್ಷಿಸುತ್ತಿರುವ ಭೀಮನನ್ನು ನೋಡಿ—ಬಕನು ರಾಕ್ಷಸಾಕಾರದಿಂದ ಬಂದು ಅನ್ನವನ್ನು ಭಕ್ಷಿಸದೆ, ಬ್ರಾಹ್ಮಣ ರೂಪದಿಂದ ಬಂದು ಭಕ್ಷಿಸುತ್ತಿದ್ದಾನೆ ಎಂದು ನುಡಿಯುತ್ತಿರಲು; ಅಮಿತ ಪರಾಕ್ರಮಶಾಲಿಯಾಗಿ ಮಹಾ ಬಲಧುರೀಣನಾಗಿರುವ ಭೀಮನು ಮಂದಗಮನದಿಂದ ನಡೆಯುತ್ತಾ, ಅನ್ನವನ್ನು ಭಕ್ಷಿಸುತ್ತಾ, ಬಕನಿದ್ದ ತಾವಿಗೆ ಹೋಗಿ, ಅವನನ್ನು ಒಂದು ತೃಣಕ್ಕೆ ಸರಿಯಾಗಿ ಎಣಿಸಿ—ಎಲೈ, ದುರಾತ್ಮಕನಾದ ರಾಕ್ಷಸನೇ, ಶೀಘ್ರವಾಗಿ ಬಾ, ಎಂದು ಘಟ್ಟಿಯಾಗಿ ಕೂಗಿ ಕರೆಯಲು; ಆ ರಾಕ್ಷಸನು ಆಗ್ರಹ ವ್ಯಗ್ರನಾಗಿ ಭೀಮನ ಸಮೀಪಕ್ಕೆ ಹೋಗಿ, ತನ್ನ ಪಾದ ಘಟ್ಟನದಿಂದ ಭೂಮಿಯು ಎರಡು ಹೋಳಾಗುವ ಹಾಗೆ ತುಳಿಯುತ್ತಾ, ಅವನಿಗೆ ಎದುರಾಗಿ ನಿಂತು, ತನಗೋಸ್ಕರ ತಂದ ಅನ್ನವನ್ನು ನಿರ್ಭಯವಾಗಿ ಭಕ್ಷಿಸುತ್ತಲಿರುವ ಭೀಮನನ್ನು ನೋಡಿ,—ನನಗೋಸ್ಕರ ಜೊತೆ ಮಾಡಿ ತಂದ ಅನ್ನವನ್ನು ಸ್ವಲ್ಪವಾದರೂ ನನ್ನನ್ನು ಸಡ್ಡೆ

ಮಾಡದೆ ಭಕ್ಷಿಸುತ್ತಲಿರುವ ಈ ಮನುಷ್ಯಾಧಮನನ್ನು ಮುಂದೆ ಯಮನ ಮನೆಗೆ ಕಳುಹಿಸಿ, ಆ ಮೇಲೆ ಈ ಅನ್ನವನ್ನು ಭಕ್ಷಿಸುತ್ತೇನೆ ಎಂದು, ಹುಬ್ಬುಗಳನ್ನು ಗಂಟು ಹಾಕಿ ಕೊಂಡು, ಹಲ್ಲು ಮುಡೀ ಕಚ್ಚುತ್ತಾ, ಕರೀ ಆಲಿಗಳನ್ನು ಗರಿಗರಿನೆ ತಿರಿಗಿಸುತ್ತಾ, ನಡೆಯುತ್ತಿರಲು; ಭೀಮನು ಅವನ ವಾಕ್ಯವನ್ನು ಕಿವಿಗೆ ಹಾಕಿ ಕೊಳ್ಳದೆ, ಯಾವ ದಿಕ್ಕನ್ನೂ ನೋಡದೆ, ಅನ್ನವನ್ನು ಭಕ್ಷಿಸುತ್ತಿರಲು; ಪುರುಷ ಭಕ್ಷಕನಾದ ಆ ಬಕನು ಭೀಮನನ್ನು ಕೊಲ್ಲ ಬೇಕೆಂದೆಣಿಸಿ, ಹಸ್ತಗಳನ್ನು ಉನ್ನತವಾಗಿ ಎತ್ತಿ ಕೊಂಡು, ಅಟ್ಟಹಾಸವನ್ನು ಮಾಡುತ್ತಾ, ಅವನ ಮೇಲೆ ಕಾಣಿಸಿ ಕೊಳ್ಳಲು; ಶತ್ರು ಜನ ಭೀಕರನಾದ ಭೀಮಸೇನನು ಯಥಾ ಪ್ರಕಾರ ಭುಂಜಿಸುತ್ತಿರಲು; ಅದನ್ನು ನೋಡಿ, ಆ ಬಕನು ಕೋಪಾಟೋಪದಿಂದ ಬಂದು, ಆ ಭೀಮಸೇನನ ಬೆನ್ನಿನ ಮೇಲೆ ಎರಡು ಕೈಗಳಿಂದ ಅಪ್ಪಳಿಸಲು; ಆ ರಾಕ್ಷಸನ ಅಂಗೈ ಪೆಟ್ಟುಗಳು ಭೀಮಸೇನನ ಹೊಟ್ಟೆಯಲ್ಲಿ ಅಲ್ಲಲ್ಲಿರುವ ಕವಳಗಳನ್ನು ಒಂದೇ ತಾವಿನಲ್ಲಿ ಶೇರಿಸಿ, ಮತ್ತು ಭೋಜನ ಮಾಡುವದಕ್ಕೆ ಸೌಕರ್ಯವನ್ನುಂಟು ಮಾಡಲು; ಆಗಲಾದರೂ ಭೀಮನು ಆತನನ್ನು ಸಡ್ಡೆ ಮಾಡದೆ, ಯಥಾ ಪ್ರಕಾರ ಅನ್ನವನ್ನೇ ಭಕ್ಷಿಸುತ್ತಿರಲು; ಆ ರಾಕ್ಷಸನು ಸಮೀಪದಲ್ಲಿರುವ ಒಂದು ದೊಡ್ಡ ಮರವನ್ನು ಕಿತ್ತು, ಭೀಮನನ್ನು ಕೊಲ್ಲ ಬೇಕೆಂದು ಯತ್ನಾ ಮಾಡಲು; ಆ ವಾಯುಪುತ್ರನು ತನ್ನ ಎಡದ ಕೈಯಿಂದ ಆತನನ್ನು ಮರ ಸಹಿತವಾಗಿ ಹಿಡಿದು ಕೊಂಡು, ಎಲ್ಲಿಗೂ ಬಿಡದೆ, ಯಥಾ ಪ್ರಕಾರ ಮೆಲ್ಲ ಮೆಲ್ಲಗೆ ಅನ್ನವನ್ನು ಭಕ್ಷಿಸಿ, ಮುಗುಳು ನಗೆಯಿಂದ ಆ ರಾಕ್ಷಸನನ್ನು ಆಚೆಗೆ ಬಿಸಾಟು, ನೂರು ಗುಡಾಣಗಳಲ್ಲಿ ಇರುವ ತುಪ್ಪವನ್ನೂ ನೂರು ಗುಡಾಣಗಳಲ್ಲಿರುವ ಮೊಸರನ್ನೂ ಕುಡಿದು, ಕೈಗಳನ್ನು ತೊಳ ಕೊಂಡು, ಆಚಮನವನ್ನು ಮಾಡಿ, ಪರ್ವತದೋಪಾದಿಯಲ್ಲಿ ಧೈರ್ಯವನ್ನು ಬಿಡದೆ, ಮುಹೂರ್ತ ಮಾತ್ರವು ವೀರಾಸನದಲ್ಲಿ ಕೂತು ಕೊಂಡು, ಮಹಾ ವೃಕ್ಷವನ್ನು ಕೈಯಲ್ಲಿಯೇ ಹಿಡಿದು ಕೊಂಡು, ಗರಿಗರಿನೆ ತಿರಿಗಿಸುತ್ತಾ, ಶೀಘ್ರವಾಗಿ ಮೇಲೆ ಬೀಳುವದಕ್ಕೆ ಬರುವ ಆ ರಾಕ್ಷಸನನ್ನು ನೋಡಿ, ಬೇಗ ಎದ್ದು, ಸಿಂಹನಾದವನ್ನು ಮಾಡಿ, ಭುಜಗಳನ್ನು ತಟ್ಟಿ ಕೊಂಡು, ಆ ರಾಕ್ಷಸನನ್ನು ಕುರಿತು,—ಎಲೈ, ದುರಾತ್ಮನೇ, ಬಹು ಕಾಲ ಮನುಷ್ಯ ಮಾಂಸಗಳಿಂದ ಖಂಡಗಳನ್ನು ಬೆಳಿಸಿ ಕೊಂಡು, ಮದಿಸಿ ಇದ್ದೀ. ಇನ್ನು ಮೇಲೆ ನನ್ನ ಭುಜ ಬಲದಿಂದ ಪ್ರಾಣಗಳೊಡನೆ ನೀನು ಹಿಂತಿರಿಗಿ ಹೋಗಲಾರೆ. ಏಕಚಕ್ರನಗರದಲ್ಲಿರುವ ಸಮಸ್ತ ಜನಗಳು, ತಮಗೆ ಕಂಟಕನಾದ ನಿನ್ನನ್ನು ನಾನು ಕೊಂದು ಹಾಕುವ

ದರಿಂದ, ಈ ದಿವಸ ಮೊದಲ್ಗೊಂಡು ಭಯವನ್ನು ಬಿಟ್ಟು, ಸುಖವಾಗಿ ನಿದ್ದೆ ಮಾಡಲಿ. ನನ್ನಿಂದ ಹತನಾದ ನಿನ್ನ ಶರೀರವನ್ನು ಹದ್ದು, ರಣಹದ್ದು, ನರಿ, ನಾಯಿ, ಕಾಗೆ, ಮೊದಲಾದ ಮೃಗ ಪಕ್ಷಿಗಳು ಎಲ್ಲಿ ನೋಡಿದರೂ ಎಳದೆಳದು, ಭಕ್ಷಿಸುತ್ತಿರಲಿ, ಎಂದು ನುಡಿದು, ಕೋಪಾಟೋಪದಿಂದ ಬಕನ ಮೇಲೆ ಬೀಳಲು; ಆ ರಾಕ್ಷಸನು ಮಹಾ ಬಲ ಪರಾಕ್ರಮ ಧುರೀಣನಾಗಿ, ತನ್ನ ಪಾದ ಘಟ್ಟನದಿಂದ ಭೂಮಿಯನ್ನು ನಡುಗಿಸುತ್ತಾ, ವಿಕಾರವಾದ ಶರೀರದಿಂದ ವಿಜೃಂಭಿಸಿ, ವಾಯುಪುತ್ರನನ್ನು ಪಚಾರಿಸಿ, ಹುಬ್ಬುಗಳನ್ನುಗಂಟು ಹಾಕಿ ಕೊಂಡು, ಔಡುಗಳನ್ನು ಕಚ್ಚುತ್ತಾ, ಅವನ ಮೇಲೆ ಆ ದೊಡ್ಡ ಮರವನ್ನು ಹಾಕಲು; ಆ ಭೀಮನು ನಸು ನಗೆಯಿಂದ ಎಡದ ಕೈಯಿಂದ ಆ ವೃಕ್ಷವನ್ನು ಹಿಡಿದು ಕೊಂಡು, ಅದನ್ನು ಮುರಿದು ಹಾಕಲು; ಆ ರಾಕ್ಷಸನು ಇನ್ನು ಅನೇಕ ವೃಕ್ಷಗಳನ್ನು ಪ್ರಯೋಗಿಸಲು; ಹಾಗೆಯೇ ಅವರಿಬ್ಬರಿಗೂ ಮರಗಳ ಯುದ್ಧವೇ ಪ್ರವರ್ತಿಸುತ್ತಿತ್ತು.

ಆ ಬಳಿಕ ಬಕನು ತನ್ನ ಬಿರುದನ್ನು ಒಕ್ಕಣಿಸಿ, ಮಹಾ ಬಲ ಶಾಲಿಯಾದ ಮಾರುತ ಪುತ್ರನನ್ನು ಎರಡು ಭುಜಗಳಿಂದ ಬಿಗಿಯಲು; ಮಹಾ ಭುಜನಾದ ಆ ಕುಂತೀ ನಂದನನು ಆ ಪಟ್ಟನ್ನು ಬಿಡಿಸಿ ಕೊಂಡು, ದಿಟ್ಟತನದಿಂದ ಮೆರೆದು, ಈಚೆಗೆ ಆಚೆಗೆ ಅಲ್ಲಾಡದ ಹಾಗೆ ಆತನನ್ನು ಘಟ್ಟ್ಯಾಗಿ ಹಿಡಿದು, ಮಧ್ಯದಲ್ಲಿ ತಿರಿಗಿ ಅನ್ನವನ್ನು ಭಕ್ಷಿಸುತ್ತಾ, ಬಾರಿ ಬಾರಿಗೂ ತಿವಿಯುತ್ತಾ, ಎಳೆಯುತ್ತಾ ಇರಲು; ಆ ರಾಕ್ಷಸನು ಭೀಮನ ಬಾಹುಗಳ ಹಿಡಿತಕ್ಕೆ ಶಿಕ್ಕಿ, ಎಳೆಯಲ್ಪಟ್ಟವನಾಗಿ, ಶ್ರಮದಿಂದ ಕಂಗೆಟ್ಟದ್ದರೂ, ಬಾರಿ ಬಾರಿಗೂ ಎಳೆದು ಭೀಮನನ್ನು ಕಂಗೆಡಿಸಿದನು. ಅವರಿಬ್ಬರ ಪಾದ ಘಟ್ಟನದಿಂದ ಭೂಮಿಯು ಗಡಗಡನೆ ನಡುಗಿತು. ಈ ಪ್ರಕಾರ ಇಬ್ಬರು ವಿಚಿತ್ರ ಗಮನಗಳಿಂದ ಬಾಹು ಯುದ್ಧವನ್ನು ಮಾಡುತ್ತಿರಲು; ಅವರ ಸಮೀಪದಲ್ಲಿದ್ದ ಮಹೋನ್ನತಗಳಾದ ವೃಕ್ಷಗಳು ತುಮುರುತುಮುರಾಗಿ ಭೂಮಿಯಲ್ಲಿ ಬಿದ್ದವು. ಆ ಸಮಯದಲ್ಲಿ ಪಾಂಡುಕುಮಾರಕನು ಆ ರಾಕ್ಷಸನನ್ನು ತನ್ನ ಬಾಹು ಬಲದಿಂದ ಭೂಮಿಯಲ್ಲಿ ಕೆಡಹಿ—ಎಲೈ, ರಾಕ್ಷಸನೇ, ಸ್ವಲ್ಪ ವಿಶ್ರಮಿಸಿ ಕೊಂಡು, ಮೆಲ್ಲಗೆ ಏಳು ಎಂದು ಬೆನ್ನನ್ನು ತಟ್ಟಿ, ಬಿಟ್ಟು ಬಿಡಲು; ಅವನು ಪುಟ ಚೆಂಡಿನೋಪಾದಿಯಲ್ಲಿ ನೆಗಿದು, ನಿಂತು ಕೊಂಡು, ಭೀಮಾಕಾರದಿಂದ ಬೆದರಿಸಲು; ಭೀಮಸೇನನು ಅಟ್ಟಹಾಸವನ್ನು ಮಾಡಿ, ಅವನನ್ನು ಘಟ್ಟ್ಯಾಗಿ ಹಿಡಿದು, ಅಪ್ಪಿ ಕೊಂಡು, ಅವನ ರಸವಾಳಿಯನ್ನು ಅಮುಕಲು; ಆ ರಾಕ್ಷಸನು ಅದರಿಂದ ಮೈ ಮರತು, ಸ್ವಲ್ಪ ಹೊ

ತ್ತು ಸುಮ್ಮನಿದ್ದು, ಆ ಮೇಲೆ ಕೋಪೋದ್ದೀಪಿತನಾಗಿ ಭೀಷಣಾಕಾರವನ್ನು ಧರಿಸಿ, ಭೀಮುನನ್ನು ಬೆದರಿಸಲು; ಆ ಭೀಮನು ನಸುನಗೆಯಿಂದ ಆತನ ಕಂಠವನ್ನು ತನ್ನ ಭುಜದಿಂದ ಬಿಗಿದು ಹಿಡಿದು, ಮೊಗಮಡಿಯಾಗಿ ತಳ್ಳಿ, ಮೊಣಕಾಲಿನಿಂದ ಬೆನ್ನನ್ನು ತಿವಿದು, ನೋಯಿಸಿ, ಆ ಮೇಲೆ ಅವನ ಭುಜಗಳೆರಡನ್ನು ಹಿಡಿದು ಕೊಂಡು, ಮೇಲಕ್ಕೆ ಎತ್ತಿ, ಭೂಮಿಯಲ್ಲಿ ಹಾಕಿ, ತನ್ನ ಎಡಗಾಲಿನಿಂದ ಆತನ ಎದೆಯನ್ನು ಒದೆಯಲು; ಆ ರಾಕ್ಷಸನು ಅತಿ ಕೋಪಿಷ್ಠನಾಗಿ, ಬಾಯಿಯನ್ನು ತೆರೆದು, ಉರಿಯುತ್ತಿರುವ ನಾಲಿಗೆಯುಳ್ಳವನಾಗಿ, ತನ್ನ ಬಲಗೈಯಿಂದ ಭೀಮನ ನೆತ್ತಿಯನ್ನು ಗುದ್ದಿ, ಆತನ ಎಡದ ಪಾರ್ಶ್ವವನ್ನು ಮತ್ತೊಂದು ಮುಷ್ಟಿಯಿಂದ ತಿವಿದು, ಮೊಣಕಾಲಿನಿಂದ ಎದೆಯನ್ನು ತಿವಿದು, ನೋಯಿಸಲು; ಆ ವಾಯುಪುತ್ರನು ಕೋಪಿಸಿ ಕೊಂಡು, ಆ ರಾಕ್ಷಸನನ್ನು ಹಿಡಿದು ಕೊಳ್ಳಲು; ಹೀಗೆ ಮಹಾ ಬಲಶಾಲಿಗಳಾದ ಭೀಮ ಬಕರು ಮದ್ದಾನೆಗಳೋಪಾದಿಯಲ್ಲಿ ಒಬ್ಬರನ್ನೊಬ್ಬರು ಹಿಡಿಯುತ್ತಾ, ತಿವಿಯುತ್ತಾ, ತೊಡರಿ ಕೊಳ್ಳುತ್ತಾ, ಭುಜಗಳನ್ನು ತಟ್ಟಿ ಕೊಂಡು, ಸಿಂಹನಾದವನ್ನು ಮಾಡುತ್ತಿದ್ದರು. ಆ ಸಮಯದಲ್ಲಿ ಅವರ ಬಾಹು ಯುದ್ಧ ಸಂರಂಭದಿಂದ ಆ ಪಟ್ಟಣದಲ್ಲಿರುವ ಜನರೆಲ್ಲರು ಭಯ ಪಡುತ್ತಿದ್ದರು. ಹಾಗೆಯೇ ಅವರಿಬ್ಬರು ಪಾದ ಘಾತಗಳಿಂದ ಭೂಮಿಯನ್ನು ನಡುಗಿಸುತ್ತಾ, ಮರಗಳನ್ನೂ ಬಳ್ಳಿಗಳನ್ನೂ ಹೊದೆಗಳನ್ನೂ ಚೂರ್ಣವಾಗುವ ಹಾಗೆ ಮಾಡುತ್ತಾ, ಪರಸ್ಪರ ಜಯಾಭಿಲಾಷೆಯಿಂದ ಹೋರುತ್ತಿರಲು; ಮೂರು ಗಾವುದ ವಿಸ್ತಾರವುಳ್ಳ ಆ ವನ ಪ್ರದೇಶವು ವೃಕ್ಷ ಗುಲ್ಮ ಲತೆ ಪಾಷಾಣ ರಹಿತವಾಗಿ, ಆಮೆಯ ಬೆನ್ನಿನೋಪಾದಿಯಲ್ಲಿ ಕಾಣಿಸಿತು. ಆ ಬಳಿಕ ಭೀಮನು ಆತನ ಒಳ ಹೊಕ್ಕು, ತನ್ನ ಭುಜಗಳಿಂದ ಆತನನ್ನು ಬಿಗಿದು ಹಿಡಿದು, ನಡುವನ್ನೂ ತೊಡೆಗಳ ಸಂದನ್ನೂ ಬಿಗಿಯಾಗಿ ತಿವಿದು ನೋಯಿಸಲು; ಆ ರಾಕ್ಷಸನು ಬಹಳವಾಗಿ ಕಂಗೆಟ್ಟನು. ಅದನ್ನು ತಿಳಿದು, ಭೀಮಸೇನನು ಅವನನ್ನು ಭೂಮಿಯ ಮೇಲೆ ಎತ್ತಿ ಹಾಕಿ, ತನ್ನ ಕಾಲುಗಳಿಂದ ತಿಕ್ಕಿ, ಒದ್ದು, ನೋಯಿಸಿ, ಆತನ ಬೆನ್ನು ಮೂಳೆ ಮುರಿಯುವ ಹಾಗೆ ಮೊಣಕಾಲುಗಳಿಂದ ತಿವಿದು, ಬಲಗೈಯಿಂದ ಕತ್ತನ್ನು ಎತ್ತಿ, ಹಿಡಿದು, ಎಡಗೈಯಿಂದ ನಡುಕಟ್ಟನ್ನು ಹಿಡಿದು, ವಿಕಾರ ಧ್ವನಿಯನ್ನು ಮಾಡುತ್ತಿರುವಂಥ ಆ ರಾಕ್ಷಸನನ್ನು ನೆಲಕ್ಕೆ ಹಾಕಿ, ಕುಕ್ಕಿ, ಮೊಣಕಾಲಿನಿಂನ್ದ ತಿವಿಯಲು; ಆ ಬಕಾಸುರನು ತನ್ನ ಬಾಯಿಯಿಂದ ರಕ್ತವನ್ನು ಕಾರುತ್ತಾ, ಪ್ರಾಣವನ್ನು ಬಿಟ್ಟನು. ಆತನು ಸತ್ತ ಧ್ವನಿಯನ್ನು ಕೇಳಿ, ಸಕಲ ಜನರು ಭಯ ಪಟ್ಟರು.

ಬಕನು ಸತ್ತನೆಂದು ನೋಡಿ, ವನಗಳಲ್ಲಿಯೂ, ಉದ್ಯಾನವನಗಳಲ್ಲಿಯೂ, ಜಗತಿಗಳಲ್ಲಿಯೂ, ಕ್ಷುದ್ರ ದೇವಾಲಯಗಳಲ್ಲಿಯೂ ತಿರುಗುತ್ತಲಿರುವ ಆತನ ಪರಿಚಾರಕರು ಪರಾಕ್ರಮಶಾಲಿಯಾದ ಭೀಮನಿಗೆ ಶರಣಾಗತರಾಗಲು; ಆ ಭೀಮಸೇನನು ಅವರನ್ನು ನೋಡಿ, ಅಭಯವನ್ನು ಕೊಟ್ಟು,—ಈ ಹೊತ್ತು ಮೊದಲುಗೊಂಡು ನೀವು ಮನುಷ್ಯರನ್ನು ಬಾಧಿಸಿದರೆ, ಬಕನು ಹೋದ ದಾರಿಯನ್ನು ಹಿಡಿದು ಹೋಗಲುಳ್ಳವರು ಎನಲು;—ಮಹಾ ಪ್ರಸಾದವೆಂದು ಒಡಂಬಟ್ಟು, ಮೊದಲಿದ್ದ ಠಾವುಗಳನ್ನು ಬಿಟ್ಟು, ತಾಳೇ ಮರಗಳಲ್ಲಿಯೂ, ಬಸರೀ ಮರಗಳಲ್ಲಿಯೂ, ಹೂರದ ಮರಗಳಲ್ಲಿಯೂ, ಎಕ್ಕದ ಗಿಡಗಳಲ್ಲಿಯೂ, ಸಕುಟುಂಬವಾಗಿ ಇರುತ್ತಿದ್ದರು. ಮತ್ತು ಬಕನ ತಮ್ಮನು ಭೀಮಸೇನನಿಗೆ ಶರಣಾಗತನಾಗಿ, ಆತನ ಅಪ್ಪಣೆಯಿಂದ ಯಮುನಾ ತೀರವನ್ನು ಬಿಟ್ಟು, ಶ್ಮಶಾನಗಳಲ್ಲಿ ಇರುತ್ತಿದ್ದನು. ಆ ಬಳಿಕ ಕುಂತೀಕುಮಾರನು ಪ್ರಾಣಗಳನ್ನು ಬಿಟ್ಟಿರುವ ಆ ಮಹಾ ರಾಕ್ಷಸನ ಕಿವಿ, ಕಣ್ಣು, ನಾಲಿಗೆ ಇಲ್ಲದೆ ಇರುವಂಥಾ ಶರೀರವನ್ನು ಪಟ್ಣದ ಬಾಗಲಲ್ಲಿ ಕೆಡಹಲು; ಆ ಮಾರನೇ ದಿವಸ ಪ್ರಾತಃಕಾಲದಲ್ಲಿ ಆ ಪಟ್ಣದ ಜನರು, ನೆತ್ತರಿಂದ ನೆನೆದು ಪರ್ವತದ ಶಿಖರದಂತೆ ಅತಿ ಭಯಂಕರವಾಗಿ ಬಿದ್ದಿರುವ ಬಕನ ಶವವನ್ನು ಕಂಡು, ಆಶ್ಚರ್ಯ ಪಡುತ್ತಾ, ಮೂಗಿನ ಮೇಲೆ ಬೆರಳಿಕ್ಕಿ—ಈ ಹೊತ್ತು ದೈವವು ನಮ್ಮ ಪಾಲಿಗೆ ಉಂಟಾಯಿತು ಎಂದು ಆನಂದ ಪಟ್ಟು, ತಮ್ಮ ತಮ್ಮ ಮನೆಗಳಿಗೆ ಹೋಗಿ, ಸುಖವಾಗಿದ್ದರು.

62. The Marriage of Droupadi to the Five Pandu Princes.

೬೨. ದ್ರೌಪದಿಯ ಸ್ವಯಂವರ.

ಪಾಂಡವರು ಏಕಚಕ್ರನಗರದಲ್ಲಿ ಬ್ರಾಹ್ಮಣನ ಮನೆಯಲ್ಲಿ ವಾಸಾ ಮಾಡುತ್ತಿರುವಾಗ, ಒಬ್ಬ ಬ್ರಾಹ್ಮಣನು ಬಂದು, ಅವರ ತಾಯಿಯಾದ ಕುಂತಿಯೊಡನೆ ಪಾಂಚಾಲ ದೇಶದ ಅರಸನಾದ ದೃಪದ ರಾಯನು ತನ್ನ ಮಗಳಾದ ದ್ರೌಪದಿಯನ್ನು ಅರ್ಜುನನಿಗೆ ಕೊಡ ಬೇಕೆಂದು ನಿಶ್ಚೈಸಿ ಇರುವಲ್ಲಿ, ಪಾಂಡವರೆಲ್ಲರು ಅರಗಿನ ಮನೆಯಲ್ಲಿ ಸುಟ್ಟು ಹೋದರು ಎಂದು ಸುದ್ದಿಯನ್ನು ಕೇಳಿ, ಬಹಳ ಚಿಂತೆ ಪಡುತ್ತಿರುವಾಗ, ಆತನ ಪುರೋಹಿತನು—ಎಲೈ, ಅರಸೇ, ದೊಡ್ಡವರ ಮಾತಿನ ಪ್ರಕಾರ ಧರ್ಮದಿಂದ ನಡೆಯುವಂಥ ಆ ಪಾಂಡವರಿಗೆ ಹಾನಿಯು ಬರಲಾರದು. ನೀನು ವ್ಯಸನ ಪಡದೆ, ನಿನ್ನ ಮಗಳಿಗೆ ಸ್ವಯಂವಶವನ್ನು ಸಾರಿಸಿದರೆ, ಆ ಪಾಂಡವರು ಎಲ್ಲಿದ್ದರೂ ಇಲ್ಲಿಗೆ ಬರುತ್ತಾರೆಂದು ಹೇಳಿದ್ದರಿಂದ, ಆ ಪುರೋಹಿತನ ಮಾತನ್ನು ಕೇಳಿ, ದೃಪದ ರಾಯನು ಪುಷ್ಯ ಮಾ

ಸದ ಶುಕ್ಲ ಪಕ್ಷದ ರೋಹಿಣೀ ನಕ್ಷತ್ರ ಯುಕ್ತವಾದ ಶುಭ ದಿವಸದಲ್ಲಿ ತನ್ನ ಮಗಳಿಗೆ ಸ್ವಯಂವರವೆಂದು ಪಟ್ಟಣದಲ್ಲಿ ಸಾರಿಸಿದನು. ಈ ದಿವಸಕ್ಕೆ ಇಪ್ಪತ್ತೈದನೇ ದಿವಸದಲ್ಲಿ ಸ್ವಯಂವರ ಮಹೋತ್ಸವವು ಆಗುತ್ತದೆ. ಆ ಮಹೋತ್ಸವವನ್ನು ನೋಡುವದಕ್ಕೆ ದೇವ ಗಂಧರ್ವ ಯಕ್ಷರು, ಬ್ರಹ್ಮ ಋಷಿಗಳು ಹೋಗುತ್ತಿದ್ದಾರೆ. ಮಹಾನುಭಾವರಾದ ನಿನ್ನ ಕುಮಾರಕರು ರೂಪವಂತರು. ಇವರನ್ನು ನೋಡಿ, ದ್ರೌಪದಿಯು ಒಬ್ಬನನ್ನು ವರಿಸ್ಯಾಳು. ಯಾರ ಭಾಗ್ಯವು ಹ್ಯಾಗಿದೆಯೋ? ಕಂಡವರಾರು? ಅದರಿಂದ ನೀನು ಮಕ್ಕಳನ್ನು ಕರಕೊಂಡು, ಆ ಪಾಂಚಾಲ ದೇಶಕ್ಕೆ ಬಾ ಎಂದು ಹೇಳಲು; ಕುಂತೀ ದೇವಿಯು ತನ್ನ ಮಕ್ಕಳನ್ನು ಕರೆದು ಕೊಂಡು, ಹೊರಟಳು.

ಹೀಗೆ ಹೋಗುತ್ತಿರುವಲ್ಲಿ ದಾರಿಯಲ್ಲಿ ಗುಂಪಾಗಿ ಹೋಗುವ ಬ್ರಾಹ್ಮಣರು ಬ್ರಹ್ಮಚರ್ಯ ವ್ರತ ಸಂಪನ್ನರಾದ ಈ ಐದು ಮಂದಿಯನ್ನು ನೋಡಿ,—ನೀವು ಯಾರು? ಎಲ್ಲಿಂದ ಎಲ್ಲಿಗೆ ಹೋಗುತ್ತೀರಿ? ಎಂದು ಕೇಳಿದ್ದಕ್ಕೆ ಯುಧಿಷ್ಠಿರನು—ಎಲೈ, ಮಹಾತ್ಮರುಗಳಿರಾ, ನಾವು ಏಕಚಕ್ರಪುರದ್ದೆಶೆಯಿಂದ ಹೋಗುತ್ತಲಿದ್ದೇವೆ. ಇವರು ನನ್ನ ತಮ್ಮಂದಿರು. ಈ ಮುದುಕಿಯು ನಮ್ಮ ತಾಯಿಯು, ಎನಲು; ಬ್ರಾಹ್ಮಣರು—ಹಾಗಾದರೆ ಬನ್ನಿ! ಈ ಹೊತ್ತು ಪಾಂಚಾಲನಗರಕ್ಕೆ ಹೋಗ ಬೇಕು. ಅಲ್ಲಿ ದ್ರೌಪದೀ ದೇವಿಗೆ ಸ್ವಯಂವರ ಮಹೋತ್ಸವವು ನಡೆಯುತ್ತದೆ. ಈ ಅದ್ಭುತವನ್ನು ನೋಡುವದಕ್ಕಲ್ಲವೇ, ನಾವು ಗುಂಪು ಕೂಡಿ ಹೋಗುವದು? ನೀವು ನಮ್ಮ ಸಂಗಡಲೇ ಬಂದು, ಅಲ್ಲಿ ಕೂಡಿ ಇರುವ ನಾನಾ ದೇಶಗಳಿಂದ ಬಂದಿರುವ ಅರಸುಗಳದೆಸೆಯಿಂದ ಅನೇಕ ಧನ ಕನಕ ವಸ್ತು ವಾಹನಾದಿಗಳ ದಾನಗಳನ್ನೂ, ಭಕ್ಷ್ಯಭೋಜ್ಯ ಮೊದಲಾದ ಅನ್ನಗಳನ್ನೂ, ಪರಿಗ್ರಹಿಸಿ, ಆ ಉತ್ಸವವನ್ನು ನೋಡಿ, ತಿರಿಗಿ ಬರ ಬಹುದು. ನೀವಷ್ಟು ಮನೋಹರಾಕಾರರಾದ್ದರಿಂದ, ಆ ದ್ರುಪದ ರಾಯನ ಮಗಳು ನಿಮ್ಮವರೊಳಗೆ ಒಬ್ಬನನ್ನು ವರಿಸ್ಯಾಳು, ಎನಲು; ಯುಧಿಷ್ಠಿರನು—ಹಾಗೆ ಆಗಲಿ. ನಿಮ್ಮ ಸಂಗಡಲೇ ಆ ಉತ್ಸವವನ್ನು ನೋಡುವದಕ್ಕೆ ನಾವು ದ್ರುಪದನ ನಗರಕ್ಕೆ ಬರುತ್ತೇವೆ ಎಂದು ಹೇಳಿ, ಆ ಬ್ರಾಹ್ಮಣರೊಡನೆ ಪಾಂಚಾಲ ದೇಶಕ್ಕೆ ಹೋಗುತ್ತಾ, ಮಧ್ಯ ಮಾರ್ಗದಲ್ಲಿ ವ್ಯಾಸ ಋಷಿಯನ್ನು ನೋಡಿ, ಪೂಜಿಸಿ, ಆತನ ಅಪ್ಪಣೆಯನ್ನು ತೆಗೆದು ಕೊಂಡು, ಕ್ರಮದಿಂದ ಪಾಂಚಾಲ ನಗರಕ್ಕೆ ಹೋಗಿ, ಅದರ ಸಮೀಪದಲ್ಲಿ ನಾನಾ ದೇಶಗಳದೆಶೆಯಿಂದ ಬಂದಿರುವ ಅರಸುಗಳ ಪಾಳ್ಯಗಳನ್ನು ನೋಡುತ್ತಾ, ಒಬ್ಬ ಕುಂಬಾರನ ಮನೆಯಲ್ಲಿ ಇಳಿದು

ಕೊಂಡು, ಯಥಾ ಪ್ರಕಾರವಾಗಿ ಭಿಕ್ಷಾಚರಣವನ್ನು ಮಾಡುತ್ತಿರಲು; ಅವರು ಪಾಂಡವರು ಎಂದು ಯಾರೂ ತಿಳಿಯಲಾರದೆ ಹೋದರು. ಪಾಂಚಾಲ ರಾಯನಾದ ಯಜ್ಞಸೇನನು—ಅಳಿಯನ ಬಲದಿಂದ ಕೃತಕೃತ್ಯನಾದೇನು ಎಂದು, ತನ್ನ ಮನಸ್ಸಿನಲ್ಲಿ, ಪಾಂಡು ಕುಮಾರನಾದ ಧನಂಜಯನಿಗೆ ತನ್ನ ಮಗಳನ್ನು ಕೊಡ ಬೇಕೆಂದು ಇರುವವನಾಗಿ, ಅರ್ಜುನನನ್ನು ತಿಳಿಯುವದಕ್ಕೆ ಲಕ್ಷ್ಯ ಭೇದನವು ಅಸಾಧ್ಯವಾಗುವ ಹಾಗೆ ಮಾಡ ಬೇಕೆಂದು ನಿಶ್ಚೈಸಿ, ಹೆದೆಯನ್ನು ಏರಿಸುವದಕ್ಕೆ ಅಶಕ್ಯವಾದ ಧನುಶ್ಶ್ರೇಷ್ಠವನ್ನು ಹುಡುಕಿ, ವ್ಯಾಘ್ರಪಾದನ ಮಗನಾದ ಸೃಂಜಯ ರಾಯನಿಗೆ ದೇವತೆಗಳು ಕೊಟ್ಟ ಕಬ್ಬಿಣಮಯವಾದ ಹೆದೆಯಿಂದ ಅಲಂಕೃತವಾಗಿ, ಕಿಂಧುರವೆಂಬ ಹೆಸರುಳ್ಳಂಥಾದ್ದಾಗಿ, ಅತಿ ದೃಢವಾದ ಧನುಸ್ಸನ್ನು ತರಿಸಿ, ಆಕಾಶ ಮಾರ್ಗದಲ್ಲಿ ಸುವರ್ಣಮಯವಾದ ಒಂದು ಯಂತ್ರವನ್ನು ಮಾಡಿಸಿ,—ಈ ಧನುಸ್ಸಿಗೆ ಹೆದೆಯನ್ನು ಏರಿಸಿ, ಈ ಯಂತ್ರದ ಕನ್ನದಿಂದ ಗುರಿಯ ಹಾಕಿದವನು ತನ್ನ ಮಗಳನ್ನು ಮದುವೆಯಾಗಲುಳ್ಳವನು ಎಂದು ಸಾರಿಸಲು; ಆ ವೃತ್ತಾಂತವನ್ನು ಕೇಳಿ, ನಾನಾ ದೇಶಾಧಿಪತಿಗಳಾದ ಅರಸುಗಳೂ, ಮಹಾತ್ಮರಾದ ಋಷಿಗಳೂ, ದುರ್ಯೋಧನ ಕರ್ನ ಸಹಿತವ್ವಾದ ಕೌರವರೂ, ವಾಸುದೇವ ಸಹಿತವಾದ ಯಾದವರೂ, ಮತ್ತು ಬ್ರಾಹ್ಮಣರೂ ಪಟ್ಟಣಕ್ಕೆ ಬಂದು, ದೃಪದ ರಾಯನಿಂದ ಪೂಜಿತರಾಗಿ, ಆ ಪಟ್ಟಣ ಸಮೀಪದಲ್ಲಿ ಇರುವ ಶಿಂಶುಮಾರ ಪರ್ವತದ ಹತ್ರದಲ್ಲಿ ಪಾಳ್ಯಗಳನ್ನು ಹಾಕಿಸಿದರು.

ಆ ಬಳಿಕ ಆ ಪಟ್ಟಣದ ಈಶಾನ್ಯ ಭಾಗದ ಸಮಪ್ರದೇಶದಲ್ಲಿ ಅನೇಕವಾದ ಅರಮನೆಗಳೊಡನೆ ಕೂಡಿ, ಕೋಟೆ ಕೊತ್ತಲುಗಳಿಂದ ಅಲಂಕೃತವಾಗಿ, ಬಾಗಿಲುಗಳಲ್ಲಿ ತೋರಣಗಳಿಂದ ಒಪ್ಪಿ, ವಿಚಿತ್ರವಾದ ಮೇಲುಕಟ್ಟುಗಳಿಂದ ಶೋಭಿತವಾಗಿ, ಬಹಳವಾದ ವಾದ್ಯ ಧ್ವನಿಗಳಿಂದ ಕೂಡಿ, ಚಂದನ ಅಗರು ಧೂಪಗಳಿಂದ ಪರಿಮಳಿಸಿ, ಗಂಧೋದಕಗಳಿಂದ ನೆನಸಲ್ಪಟ್ಟ ಪುಷ್ಪ ಮಾಲಿಕೆಗಳಿಂದ ಅಲಂಕೃತವಾಗಿ, ಕೈಲಾಸ ಶಿಖರದೋಪಾದಿಯಲ್ಲಿ ಪ್ರಕಾಶವಾಗಿ, ಸುವರ್ನಮಯವಾದ ಜಾಲಾಂದರಗಳಿಂದಲೂ, ಮಣಿಗಳಿಂದ ಕಟ್ಟಲ್ಪಟ್ಟ ಭೂಮಿಗಳಿಂದಲೂ, ಏರುವದಕ್ಕೆ ಯೋಗ್ಯಗಳಾದ ಸೋಪಾನಗಳಿಂದಲೂ, ಅನೇಕ ಪ್ರಕಾರವಾದ ಸಿಂಹಾಸನಗಳಿಂದಲೂ, ದಿವ್ಯವಾದ ಮೇಲುಚಪ್ಪರಗಳಿಂದಲೂ ಕೂಡಿ, ಹಂಸದೋಪಾದಿಯಲ್ಲಿ ವರ್ನವುಳ್ಳಂಥಾದ್ದಾಗಿ, ಗಾವುದ ಪರಿಯಂತರವು ವ್ಯಾಪಿಸಿ ಇರುವ ಪರಿಮಳಗಳಿಂದಲೂ, ವಿಸ್ತಾರವಾದ ರಾಜ ಮಾರ್ಗಗ

ಳಿಂದಲೂ, ಬಾಗಿಲುಗಳಿಂದಲೂ ಒಪ್ಪಿ, ನಾನಾ ಪ್ರಕಾರವಾದ ಧಾತುಗಳಿಂದ ವಿಚಿತ್ರವಾದ ಹಿಮವತ್ಪರ್ವತದ ಶಿಖರಗಳನ್ನು ಅನುಸರಿಸಿ ಇರುವ ಉಪ್ಪರಿಗೆಗಳಿಂದ ಒಪ್ಪುತ್ತಲಿರುವ ಸ್ವಯಂವರ ಮಹೋತ್ಸವದ ಮಂಟಪಕ್ಕೆ ಸುತ್ತಲಿರುವ ದಿವ್ಯ ಭವನಗಳಲ್ಲಿ ಸಕಲ ಭೂಷಣ ಭೂಷಿತರಾಗಿ, ಮಹಾ ಬಲಶಾಲಿಗಳಾಗಿ, ದಿವ್ಯ ಮಾಲ್ಯಾಂಬರಗಳನ್ನು ಧರಿಸಿ, ಬ್ರಾಹ್ಮಣ ಪ್ರಿಯರಾಗಿ, ಸ್ವದೇಶ ರಕ್ಷಕರಾಗಿ, ಸಕಲ ಶುಭ ಕರ್ಮ ಧುರೀಣರಾಗಿರುವ ರಾಜ ಶ್ರೇಷ್ಠರು ಪರಸ್ಪರ ಸ್ಪರ್ಧೆಗಳಿಂದ ಸಿಂಹಾಸನದಲ್ಲಿ ಕುಳಿತು ಇರುವದನ್ನು ಗ್ರಾಮಗಳ ದೆಶೆಯಿಂದ ಬಂದಂಥಾ ಜನಗಳು ಆಶ್ಚರ್ಯ ಪಡುತ್ತ, ನೋಡುತ್ತಿದ್ದರು. ಪಾಂಡವರೈದು ಮಂದಿಯು, ನಾನಾ ದೇಶಗಳದೆಶೆಯಿಂದ ಬಂದ ಬ್ರಾಹ್ಮಣರೊಡನೆ ಕೂಡಿ, ಒಂದು ಕಡೆಯಲ್ಲಿ ಇದ್ದು ಕೊಂಡು, ದ್ರುಪದ ರಾಯನ ಐಶ್ವರ್ಯಕ್ಕೆ ಆಶ್ಚರ್ಯ ಪಟ್ಟು, ನೋಡುತ್ತಿದ್ದರು.

ಆ ಬಳಿಕ ರಂಗ ಮಂಟಪದ ನಿರ್ಮಾಣದ ದಿವಸಕ್ಕೆ ಹದಿನಾರನೇ ದಿವಸದಲ್ಲಿ, ದ್ರುಪದ ರಾಯನ ಮಗಳು ಗಂಧೋದಕಗಳಿಂದ ಸ್ನಾನವನ್ನು ಮಾಡಿ, ಬಿಳೀ ವಸ್ತ್ರಗಳನ್ನುಟ್ಟು, ಸರ್ವಾಭರಣ ಭೂಷಿತೆಯಾಗಿ, ಸುವರ್ಣಮಯವಾದ ವರಣ ಮಾಲಿಕೆಯನ್ನು ಕೈಯಲ್ಲಿ ಹಿಡಿದು, ಮಂದಗಮನದಿಂದ ರಂಗಮಂಟಪ ಮಧ್ಯಕ್ಕೆ ಬರಲು; ಪಾಂಚಾಲ ಪುರೋಹಿತನಾದ ಬ್ರಾಹ್ಮಣನು ಸ್ನಾನವನ್ನು ಮಾಡಿ, ಅಲಂಕೃತನಾಗಿ, ಅಗ್ನಿ ಮುಖದಲ್ಲಿ ಆಜ್ಯಾಹುತಿಗಳಿಂದ ತೃಪ್ತಿ ಪಡಿಸಿ, ಪುಣ್ಯಾಹವಾಚನಾನಂತರದಲ್ಲಿ ಸಕಲ ಭೇರಿ ಮೃದಂಗಾದಿ ವಾದ್ಯ ಧ್ವನಿಗಳನ್ನು ನಿಲ್ಲಿಸಲು; ದ್ರುಪದ ರಾಯನ ಮಗನಾದ ದೃಷ್ಟದ್ಯುಮ್ನನು ಸಭಾ ಮಧ್ಯದಲ್ಲಿ ನಿಂತು, ಗಂಭೀರ ಧ್ವನಿಯಿಂದ–ಎಲೈ, ಅರಸುಗಳಿರಾ, ಕೇಳಿ! ಯಾರು ಭುಜ ಬಲ ಶಾಲಿಯೋ, ಆತನು ಈ ಧನುಸ್ಸಿನಲ್ಲಿ ಹೆದೆಯನ್ನು ಏರಿಸಿ, ಈ ಯಂತ್ರದ ರಂಧ್ರದ್ದೆಶೆಯಿಂದ ಐದು ಬಾಣಗಳನ್ನು ಹೊಡೆದು, ಆಚೆಯಲ್ಲಿರುವ ಲಕ್ಷ್ಯವನ್ನು ಭೇದಿಸಿದವನಾದರೆ, ನನ್ನ ತಂಗಿಯಾದ ದ್ರೌಪದಿಗೆ ಗಂಡನಾಗುವನು. ನನ್ನ ಮಾತು ಸತ್ಯವಲ್ಲದೆ ಸಟೆಯಾಗಲಾರದು ಎಂದು ಹೇಳಿ, ತನ್ನ ತಂಗಿಯನ್ನು ನೋಡಿ–ಎಲೈ, ದ್ರೌಪದಿಯೇ, ಇಲ್ಲಿ ಸ್ವಯಂವರಕ್ಕೆ ಬಂದಿರುವ ಅರಸುಗಳನ್ನು ನೋಡು! ಇವರ ಹೆಸರುಗಳನ್ನು ಕೇಳು! ವಿವರಿಸುತ್ತೇನೆ. ಮಣಿಮಂತನು, ಸಮುದ್ರಸೇನನ ಮಗನಾದ ಚಾಂದ್ರಸೇನನು, ಕುಮಾರ ಸಮ್ಮತನಾದ ಜರಾಸಂಧನು, ಸುದಂಡನು, ದಂಡನು, ಪಾಂಡ್ರಕವಾಸುದೇವನು, ಭಗದತ್ತನು, ಕಳಿಂಗನು, ತಾಂಬ್ರಲಿಪ್ತನು, ಮದ್ರದೇಶಾಧಿಪತಿಯಾದ ಶಲ್ಯನು, ಆತ

ನ ಕುಮಾರಕರಾದ ರುಕ್ಮಾಂಗದ ರುಕ್ಮರಥರು, ಕೌರವ ವಂಶ ವರ್ಧನನಾದ
ಸೋಮದತ್ತನು, ಆತನ ಮಕ್ಕಳಾದ ಭೂರಿಯೂ, ಭೂರಿಶ್ರವನೂ, ಶಲ್ಯನೂ
ಎಂಬ ಮೂರು ಮಂದಿಯು, ಕಾಂಭೋಜಾಧ್ಯಕ್ಷನಾದ ಸುದಕ್ಷನು, ಕುರು
ವಲ್ಲಭನಾದ ದೃಢಧನ್ವನು, ಬೃಹದ್ಬಲನು, ಸುಷೇಣನು, ಉಶೀನರನ ಕುಮಾ
ರನಾದ ಶಿಬಿಯು, ಮೂರಗ್ನಿಗಳೋಪಾದಿಯಲ್ಲಿ ಪ್ರಕಾಶಿಸುತ್ತಲಿರುವ ಪಾಂಡ್ಯ
ಕೇರಳ ಚೋಳ ದೇಶಾಧಿಪತಿಗಳು, ದಕ್ಷಿಣದಿಗ್ಭಾಗದಲ್ಲಿ ನಿನ್ನನ್ನು ನೋಡುವ
ದಕ್ಕೋಸ್ಕರ ಸಿಂಹಾಸನಗಳಲ್ಲಿ ಕುಳಿತು ಕೊಂಡು ಇದ್ಧಾರೆ. ರೋಹಿಣಿಯ
ಮಗನಾದ ಬಲಭದ್ರನು, ವಾಸುದೇವನು, ಪ್ರದ್ಯುಮ್ನನು, ಸಾಂಬನು, ಚಾರು
ದೇಷ್ಣನು, ಸಾರಣನು, ಗದನು, ಅಕ್ರೂರನು, ಸತ್ಯಕನು, ಸಾತ್ಯಕಿಯು, ಕೃ
ತವರ್ಮನು, ಯುಯುಧಾನನು, ಹಾರ್ದಿಕನು, ಪೃಥುವು, ವಿಪೃಥುವು, ಕಹನು,
ಸಮೀಕನು, ಅರಿಮೋಜಯನು, ದಾನಪತಿಯು, ಝುಲ್ಲಿಯು, ಪಿಂಡಾರಕನು,
ಇವರು ಯಾದವ ವಂಶದವರು. ಮತ್ತು ಭಗೀರಥನು, ಬೃಹಕ್ಷತ್ರನು, ಸಿಂ
ಧು ದೇಶಾಧಿಪತಿಯಾದ ಜಯದ್ರಥನು, ಬಾಹ್ಲೀಕ ದೇಶಾಧೀಶ್ವರನಾದ ಬೃಹ
ದ್ರಥನು, ಶಕುನಿ ಪುತ್ರನಾದ ಉಲೂಕನು, ಚಿತ್ರಾಂಗದನು, ಶುಭಾಂಗದನು,
ಪರಾಕ್ರಮ ಧುರೀಣನಾದ ವತ್ಸರಾಜನು, ಕೋಸಲ ದೇಶಾಧಿಪತಿಯು, ಕರ್ಣ
ನು, ಕರ್ಣ ಪುತ್ರನಾದ ವೃಷಸೇನನು, ಬಲಶಾಲಿಯಾದ ಬೃಹತ್ಸೇನನು, ದುರ್ಜ
ಯನು, ದಮಘೋಷನ ಮಗನಾದ, ಚೇದಿ ದೇಶಾಧಿಪತಿಯಾಗಿ, ಯುದ್ಧದಲ್ಲಿ
ಯಮನಿಗೆ ಸಮಾನನಾದ ಶಿಶುಪಾಲನು, ಮತ್ತು ಇಲ್ಲಿರುವ ನಾನಾ ದೇಶಾಧೀ
ಶ್ವರರು ನಿನ್ನನ್ನು ಮದುವೆಯಾಗ ಬೇಕೆಂದು ಬಂದು ಇದ್ಧಾರೆ. ಆಕಾಶ ಮಾ
ರ್ಗದಲ್ಲಿ ತೋರುವ ಯಂತ್ರ ಮತ್ಸ್ಯವನ್ನು ಇವರಲ್ಲಿ ಯಾರು ಧನುರ್ವಿದ್ಯಾ
ಕೌಶಲದಿಂದ ಭೇದಿಸುವನೋ, ಆತನನ್ನು ವರಿಸು ಎಂದು ಹೇಳಿದನು.

ಆ ಬಳಿಕ ರಾಜಕುಮಾರಕರು ಕಡಗ, ಕಿರೀಟ, ತೋಳು ಬಂದಿ, ಚೌಕಳಿ,
ಮೊದಲಾದ ದಿವ್ಯಾಭರಣಗಳಿಂದ ಅಲಂಕೃತರಾಗಿ, ರೂಪು ಬಲ ಕುಲ ಶೀಲ
ಯೌವ್ವನ ಧರ್ಮ ವಿಜೃಂಭಮಾನರಾಗಿ, ಸಕಲ ಶಾಸ್ತ್ರ ಬಲವು ತಮ್ಮಲ್ಲಿಯೇ
ಉಂಟು ಎಂದು ಗರ್ವಿತರಾಗಿ, ಮನ್ಮಥ ಬಾಣ ಪೀಡಿತರಾಗಿ, ಹಿಮವತ್ಪರ್ವತದ
ಲ್ಲಿ ಹುಟ್ಟಿದ ಮದ್ದಾನೆಗಳೋಪಾದಿಯಲ್ಲಿ ಮದಿಸಿ, ದ್ರೌಪದೀ ದೇವಿಯು ತಮ
ತಮಗೆ ಆಗ ಬೇಕೆಂದು ತವಕ ಪಡುತ್ತಾ, ಧನುಸ್ಸನ್ನು ಎತ್ತುವದಕ್ಕೆ ಹೊರಟ
ರು. ಆ ಸ್ವಯಂವರವನ್ನು ನೋಡುವದಕ್ಕೆ ದಿವ್ಯವಿಮಾನಗಳನ್ನು ಏರಿ, ಏಕಾದ
ಶ ರುದ್ರರು, ದ್ವಾದಶಾದಿತ್ಯರು, ಅಷ್ಟ ವಸುಗಳು, ಅಶ್ವಿನೀ ದೇವತೆಗಳು, ಸಾಧ್ಯರು,

ಮರುದ್ಗಣಗಳು, ಯಮ, ಕುಬೇರ ಮೊದಲಾದ ಅಷ್ಟದಿಕ್ಪಾಲಕರು ಬಂದರು. ಮತ್ತು ದೈತ್ಯರು, ಗರುಡರು, ದೇವರುಷಿಗಳು, ಪನ್ನಗರು, ಯಕ್ಷರು, ಚಾರಣರು, ವಿಶ್ವಾವಸುವು, ನಾರದನು, ಪರ್ವತನು ಮೊದಲಾದ ಗಂಧರ್ವರು, ಅಪ್ಸರೋಜನಗಳು ಬಂದರು. ಆ ಸಮಯದಲ್ಲಿ ಬಲರಾಮ ವೃಷ್ಣಿಅಂಧಕರು ಮೊದಲಾದ ಯಾದವರು ಮಾತ್ರ ಕೃಷ್ಣನ ಅಪ್ಪಣೆಯಿಂದ ಆ ಯಂತ್ರ ಲಕ್ಷ್ಯವನ್ನು ಭೇಧಿಸುವದಕ್ಕೆ ಹೋಗದೆ ನೋಡುತ್ತಿದ್ದರು. ಆಗ ವಾಸುದೇವನು, ಮದವಿಜೃಂಭಣದಿಂದ ಸಮರ ಸನ್ನದ್ಧರಾಗಿ, ಪಾಂಡವರು ಐದು ಮಂದಿಯು ಮದ್ದಾನೆಗಳೋಪಾದಿಯಲ್ಲಿ ಕಾಣಿಸುತ್ತ, ಬೂದಿ ಮುಚ್ಚಿದ ಕೆಂಡಗಳಂತಿರುವ ಇವರನ್ನು ನೋಡಿ, ಕ್ಷಣ ಮಾತ್ರವು ತನ್ನ ಮನಸ್ಸಿನಲ್ಲಿ ಆಲೋಚನೆಯನ್ನು ಮಾಡಿ, ನಿಶ್ಚೈಸಿ, ಅಣ್ಣನಾದ ಬಲಭದ್ರನನ್ನು ನೋಡಿ—ಎಲೈ, ಮಹಾನುಭಾವನೇ, ಬ್ರಾಹ್ಮಣರ ಮಧ್ಯದಲ್ಲಿ ಬ್ರಾಹ್ಮಣ ವೇಷದಿಂದಿರುವ ಈ ಪಾಂಡವರನ್ನು ನೋಡು. ಈತನು ಧರ್ಮರಾಯನು; ಈತನು ಭೀಮಸೇನನು; ಈತನು ಅರ್ಜುನನು; ಇವರಿಬ್ಬರು ನಕುಲ ಸಹದೇವರು; ಎಂದು ತಿಳಿಸಲು; ಆ ಬಲರಾಮನು ಮೆಲ್ಲ ಮೆಲ್ಲಗೆ ಅವರ ರೂಪು ರೇಖಾಲಕ್ಷಣಗಳನ್ನು ನೋಡಿ—ಇವರು ಪಾಂಡು ಕುಮಾರಕರು ಹೌದು ಎಂದು ನಿಶ್ಚೈಸಿ, ಸಂತೋಷ ಪಟ್ಟನು.

ಆಗ ಲಕ್ಷ್ಯಭೇದನಕ್ಕೆ ಹೊರಟಿದ್ದ ರಾಜಕುಮಾರಕರೆಲ್ಲರು ದ್ರೌಪದಿಯಲ್ಲಿ ನೆಟ್ಟಕಣ್ಣುಳ್ಳಂಥಾವರಾಗಿ, ದ್ರೌಪದಿಯು ತಮ್ಮನ್ನು ವರಿಸ ಬೇಕೆಂಬ ಅಭಿಲಾಷೆಯಿಂದ ಒಬ್ಬರೊಬ್ಬರಾಗಿ ತಮ್ಮ ವಿಕ್ರಮಗಳನ್ನು ತೋರಿಸಿ, ಧನುಸ್ಸಿನಲ್ಲಿ ಹೆದೆಯನ್ನು ಏರಿಸುವದಕ್ಕೆ ಕೈಲಾಗದೆ, ಗರ್ವವನ್ನು ಬಿಟ್ಟು, ಹಿಂದು ಮುಂದು ತೋರದೆ, ಶಿಕ್ಕಿ ಕೊಂಡು, ಧನುರ್ವೇಗದಿಂದ ಪೆಟ್ಟು ಬಿದ್ದು, ಭೂಮಿಯಲ್ಲಿ ಹೊರಳುತ್ತಾ, ತೊಟ್ಟ ಭೂಷಣಗಳಷ್ಟೂ ತುಮುರಾಗಲು; ಉಟ್ಟ ವಸ್ತ್ರಗಳಷ್ಟೂ ಜಾರಿ ಬೀಳಲು; ಸುತ್ತಿದ ಹೂಮಾಲೆಗಳೆಲ್ಲಾ ಕೆದರಿ, ಸುರಿಯಲು; ದ್ರೌಪದಿಯಲ್ಲಿರುವ ಆಶೆಯನ್ನು ಬಿಟ್ಟು, ನಾಚಿಕೆಯಿಂದ ದುಃಖ ಪಡುತ್ತಿದ್ದರು. ಆ ಸಮಯದಲ್ಲಿ ಶಿಶುಪಾಲನು ಮಹಾ ಧನುಸ್ಸಿನ ಸಮೀಪಕ್ಕೆ ಬಂದು, ಆ ಧನುಸ್ಸನ್ನು ತೆಕ್ಕೊಂಡು, ಹೆದೆಯನ್ನು ಏರಿಸುವಾಗ, ಉದ್ದಿನ ಕಾಳು ಮಾತ್ರ ಪ್ರಮಾಣವು ತಗ್ಗಾಗುವ ಹಾಗೆ ಏರಿಸಲು; ಆ ಧನುಸ್ಸಿನ ವೇಗದಿಂದ ಪೆಟ್ಟು ಬಿದ್ದು, ಭೂಮಿಯಲ್ಲಿ ಮೊಳಕಾಲುಗಳಿಂದ ನಿಂತು, ಸಾಧಕದ ಬಲುಮೆಯಿಂದ ಬೀಳದೆ, ಆಚೆಗೆ ತೊಲಗಿದನು. ಆ ಬಳಿಕ ಮಹಾ ಪರಾಕ್ರಮಶಾಲಿಯಾಗಿ ಮದ್ದಾನೆಯಂತೆ ನಡೆಯುಳ್ಳವನಾಗಿ, ಕಂಬುಗ್ರೀವನಾಗಿ, ಕೆಂಪಾದ ಕಣ್ಣುಗಳುಳ್ಳವನಾ

ಗಿ, ಮಹಾ ವೇಗವಂತನಾದ ಜರಾಸಂಧನು ಧನುಸ್ಸಿನ ಸಮೀಪಕ್ಕೆ ಬಂದು, ಹೆಸರಿನ ಕಾಳಷ್ಟು ಮಾತ್ರ ಪ್ರಮಾಣವು ತಪ್ಪುವ ಹಾಗೆ ಹೆದೆಯನ್ನು ಏರಿಸಲು; ಆ ಧನುಸ್ಸು ಅವನನ್ನು ಬೀಸಿ, ಹೊಡೆದ್ದರಿಂದ ಆತನು ಭೂಮಿಯಲ್ಲಿ ಬೀಳುವಾಗ, ಕೈಗಳನ್ನು ಆನಿಸಿ ಕೊಂಡು, ನಿಂತು, ನಾಚಿಕೆ ಪಟ್ಟು, ರಂಗಸ್ಥಳದ್ದೆಶೆಯಿಂದ ಆಚೆಗೆ ಹೋದನು. ಆ ಮೇಲೆ ಮದ್ರ ದೇಶಾಧಿಪತಿಯಾದ ಶಲ್ಯನು ಧನುಸ್ಸಿನ ಸಮೀಪಕ್ಕೆ ಬಂದು, ಸಾಸಿವೆಕಾಳು ಪ್ರಮಾಣವು ತಗ್ಗಾಗುವ ಹಾಗೆ ಹೆದೆಯನ್ನು ಏರಿಸಲು; ಆ ಧನುಸ್ಸಿನಿಂದ ಪೆಟ್ಟು ಬಿದ್ದು, ಆತನು ಪರಾಭವವನ್ನು ಹೊಂದಿದನು. ಅನಂತರದಲ್ಲಿ ಸೂರ್ಯನ ಮಗನಾದ ಕರ್ನನು ಧನುಸ್ಸಿನ ಸಮೀಪಕ್ಕೆ ಬಂದು, ಕೂದಲು ಮಾತ್ರ ಪ್ರಮಾಣವು ತಗ್ಗಾಗುವ ಹಾಗೆ ಹೆದೆಯನ್ನು ಏರಿಸಲು; ಆ ಧನುಸ್ಸಿನ ಪೆಟ್ಟಿನಿಂದ ಪರಾಜಯವನ್ನು ಹೊಂದಿ, ತೊಲಗಿ ಹೋದನು. ಈ ಪ್ರಕಾರದಲ್ಲಿ ಸಕಲವಾದ ಅರಸುಗಳು ಆ ಧನುಸ್ಸಿನ ಪೆಟ್ಟಿನಿಂದ ಪರಾಭವವನ್ನು ಹೊಂದಿದರು.

ಆ ತರುವಾಯ ಬ್ರಾಹ್ಮಣರ ಮಧ್ಯದಲ್ಲಿರುವ ಅರ್ಜುನನು ಧೈರ್ಯದಿಂದ ಶೀಘ್ರವಾಗಿ ಬರುತ್ತಿರಲು; ಇಂದ್ರ ಧ್ವಜದೋಪಾದಿಯಲ್ಲಿ ಬರುವ ಇಂದ್ರನ ಮಗನನ್ನು ನೋಡಿ, ಅಲ್ಲಿರುವ ಬ್ರಾಹ್ಮಣರೂ ಬ್ರಹ್ಮಚಾರಿಗಳೂ ಕೃಷ್ಣಾಜಿನೋತ್ತರೀಯಗಳನ್ನು ಹಾರಿಸುತ್ತಾ, ಸಂತೋಷದಿಂದ ಕೋಲಾಹಲವನ್ನು ಮಾಡಿದರು. ಕರ್ನಶಲ್ಯರು ಮೊದಲಾಗಿ; ಚಾಪವಿದ್ಯಾ ವಿಶಾರದರಾಗಿ, ಮಹಾ ಬಲಪರಾಕ್ರಮಶಾಲಿಗಳಾದ ಮಹಾ ವೀರರಿಗೂ ಹೆದೆಯನ್ನು ಏರಿಸುವದಕ್ಕೆ ಅಶಕ್ಯವಾದ ಈ ಧನುಸ್ಸಿಗೆ ಅಸ್ತ್ರವಿದ್ಯಾವಿಹೀನನಾಗಿ, ಸ್ವಭಾವದಿಂದ ದುರ್ಬಲನಾಗಿರುವ ಈ ಬ್ರಹ್ಮಚಾರಿಯಿಂದ ಹ್ಯಾಗೆ ಹೆದೆಯನ್ನು ಏರಿಸುವದಕ್ಕೆ ಶಕ್ಯವಾಗುವದು? ಒಂದು ವೇಳೆ ಇವನು ಸಾಹಸದಿಂದ ಏರಿಸಿದರೆ, ಈ ಸಭೆಯಲ್ಲಿರುವ ಅರಸುಗಳಿಗೆ ನಾವಷ್ಟು ಮಂದಿಯು ವಿರೋಧಿಗಳಾಗುತ್ತೇವೆ. ಈತನು ಗರ್ವಾತಿಶಯದಿಂದಲೂ ಸಂತೋಷದಿಂದಲೂ ಬ್ರಾಹ್ಮಣ ಚಾಪಲ್ಯದಿಂದಲೂ ಮುಂದೆ ಬರುವ ಕಾರ್ಯವನ್ನು ನೋಡದೆ, ಈ ಧನುಸ್ಸನ್ನು ಎತ್ತುವದಕ್ಕೆ ತೊಡಗಿ ಇದ್ದಾನೆ. ಇದನ್ನು ನಾವು ವಿಚಾರಿಸಿ, ನಿಲ್ಲಿಸದೆ ಹೋದರೆ, ಪರಿಹಾಸಯೋಗ್ಯರಾಗಿಯೂ ಅಪ್ರಯೋಜಕರಾಗಿಯೂ ಹೋಗುತ್ತಲಿದ್ದೇವೆ ಎಂದು ಗುಜುಗುಜನೆ ಮಾತಾಡುತ್ತಿದ್ದರು. ಮತ್ತು ಕೆಲವರು ಬ್ರಾಹ್ಮಣರು; ತೇಜೋವಿರಾಜಮಾನನಾಗಿ, ಯವ್ವನ ವಿಜೃಂಭಿತನಾಗಿ, ಆನೇ ಸೊಂಡಿಲುಗಳೋಪಾದಿಯಲ್ಲಿರುವ ಭುಜಗಳುಳ್ಳವನಾಗಿ, ಬಲುತಿರುವ ಮುಡುಹುಗಳುಳ್ಳವನಾಗಿ,

ಧೈರ್ಯದಲ್ಲಿ ಹಿಮವತ್ಪರ್ವತದ ಹಾಗಿರುವ ಆತನ ಉತ್ಸಾಹ ಶಕ್ತಿಯನ್ನು ನೋಡುವದರಲ್ಲಿ,—ಈತನು ಕಾರ್ಯವನ್ನು ಸಾಧಿಸ್ಯಾನು ಎಂದು ತೋರುತ್ತದೆ. ಅಶಕ್ತನಾದರೆ, ಇಂಥಾ ಕಾರ್ಯಕ್ಕೆ ಹೋಗುವನೇ? ಸ್ಥಾವರ ಜಂಗಮಾತ್ಮಕವಾದ ಲೋಕದಲ್ಲಿ ಬ್ರಾಹ್ಮಣರಿಗೆ ಅಸಾಧ್ಯವಾದದ್ದು ಒಂದುಂಟೇ? ಉದಕಾಹಾರಿಗಳಾಗಿ, ವಾಯುಭಕ್ಷಕರಾಗಿ, ಫಲಾಹಾರಿಗಳಾಗಿ, ವ್ರತಶೀಲರಾದ್ದರಿಂದ, ಶರೀರಗಳಿಂದ ಬಲಹೀನರಾದರೂ, ಬ್ರಹ್ಮತೇಜೋ ಬಲದಿಂದ ಬಲವಂತರಾಗಿರುವರೆಂದು ಪ್ರಸಿದ್ಧವಾಗಿರುವದು. ಈತನದೆಶೆಯಿಂದ ಅವಮಾನವೂ ಜನಾಪಹಾಸವೂ ಬಹು ಜನ ದ್ವೇಷವೂ ಯಾಕೆ ಬಂದೀತು? ಯಾವ ಕಾರ್ಯವನ್ನು ಬ್ರಾಹ್ಮಣನು ಮಾಡಿದರೂ ತಡಿಯುವರುಂಟೇ? ಎಂದು ಹೇಳುತ್ತಿದ್ದರು.

ಆ ಕಾಲದಲ್ಲಿ ಇವನ ಬೆಡಗನ್ನು ನೋಡಿ, ಮನಸ್ಸಿನಲ್ಲಿ ಚಿಂತಿಸುತ್ತ, ರಾಜ ಕುಮಾರರೆಲ್ಲಾ ಒಬ್ಬರ ಮುಖವನ್ನು ಒಬ್ಬರು ನೋಡುತ್ತಿದ್ದರು. ಆಗ ಅರ್ಜುನನು ದೃಷ್ಟದ್ಯುಮ್ನನನ್ನು ನೋಡಿ—ಬ್ರಾಹ್ಮಣನು ಈ ಧನುಸ್ಸಿನಲ್ಲಿ ಹೆದೆಯನ್ನು ಏರಿಸ ಬಹುದೇ? ಎಂದು ಕೇಳಲು; ದೃಷ್ಟದ್ಯುಮ್ನನನು ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೊಳಗೆ ಯಾರಾದರೂ ಈ ಧನುಸ್ಸಿನ ಹೆದೆಯನ್ನು ಏರಿಸಿದರೆ, ಆತನಿಗೆ ತನ್ನ ತಂಗಿಯನ್ನು ಕೊಡುತ್ತೇನೆ, ಅಂದನು. ಆ ಮೇಲೆ ಅರ್ಜುನನು ಧನುಸ್ಸಿನ ಸಮೀಪಕ್ಕೆ ಬಂದು, ಪರ್ವತದೋಪಾದಿಯಲ್ಲಿ ಸ್ಥಿರವಾಗಿ ನಿಂತು, ಆ ಧನುಸ್ಸಿಗೆ ಪ್ರದಕ್ಷಿಣ ನಮುಸ್ಕಾರವನ್ನು ಮಾಡಿ, ಹಸ್ತದಿಂದ ಎತ್ತಿ, ನಿಮಿಷ ಮಾತ್ರದಲ್ಲಿ ಹೆದೆಯನ್ನು ಏರಿಸಿ, ಐದು ಬಾಣಗಳನ್ನು ಪ್ರಯೋಗಿಸಲು; ಆ ಬಾಣಗಳು ಯಂತ್ರದ ರಂಧ್ರ ಮಾರ್ಗದಿಂದ ಹೋಗಿ, ಭೂಮಿಗೆ ಬೀಳುವಂತೆ ಆ ಲಕ್ಷ್ಯಗಳನ್ನು ಕೆಡಹಿದವು. ಆಗ ಅಂತರಿಕ್ಷದಲ್ಲಿ ಜಯ ಜಯ ಧ್ವನಿಯು ಕೇಳಿಸಿತು. ಆಗ ರಂಗ ಮಧ್ಯದಲ್ಲಿ ಸಮಸ್ತ ಜನಗಳು ಸಂತೋಷದಿಂದ ಕೋಲಾಹಲ ಧ್ವನಿಗಳನ್ನು ಮಾಡಿದರು. ದೇವತೆಗಳು ಪುಷ್ಪ ವೃಷ್ಟಿಯನ್ನು ಕರೆದರು. ಬ್ರಾಹ್ಮಣರು ಉತ್ತರೀಯಗಳನ್ನು ಮೇಲಕ್ಕೆ ಹಾರಿಸಿ, ಕುಣಿದಾಡಿದರು. ಸಕಲ ವಾದ್ಯಗಳು ಮೊಳಗಿದವು. ಸೂತ ಮಾಗಧ ವಂದಿ ವೈತಾಳಿಕರು ಅರ್ಜುನನನ್ನು ಸಾವಿರ ಪ್ರಕಾರವಾಗಿ ಸ್ತುತಿಸಿದರು. ಈ ಪ್ರಕಾರದಿಂದ ಸಮಸ್ತ ಜನ ಕೋಲಾಹಲವು ವಿಜೃಂಭಿಸಲು; ಧರ್ಮರಾಯನು ನಕುಲ ಸಹದೇವರೊಡನೆ ಕೂಡಿ, ತಾವಿದ್ದ ಬಳಿಗೆ ಹೊರಟು ಹೋದನು. ಪಾಂಚಾಲ ರಾಯನ ಮಗಳು ಲಕ್ಷ್ಯವನ್ನು ಕೆಡಹಿದ ಇಂದ್ರ ಸಮಾನನಾದ ಇಂದ್ರ ಪುತ್ರನನ್ನು ನೋಡಿ, ಯಾವಾಗಲೂ ಎಡೆ ಬಿಡದೆ ಇರುವ ಸಹಚರ್ಯವನ್ನು ಮಾ

ಡುವಂಥಾವಳಂತೆ, ತನ್ನ ಪ್ರೀತಿಯಿಂದ ನಗದೆ ನಗುವ ಹಾಗೆ ಅಭಿನಯಿಸುತ್ತ,
ಕಡೆಗಣ್ಣಿನ ನೋಟದಿಂದಲೇ ನೋಡುತ್ತಾ, ಬಿಳುಪಾದ ಪುಷ್ಪ ಮಾಲಿಕೆಯನ್ನು
ಕೈ ಕೊಂಡು, ನಸುನಗೆಯೊಡನೆ ಕೂಡಿ, ಆತನ ಸಮೀಪಕ್ಕೆ ಹೋಗಿ, ವಿಸ್ತಾರ
ವಾದ ವಕ್ಷದಲ್ಲಿ ಅಮೂಲ್ಯವಾದ ಪುಷ್ಪ ಮಾಲಿಕೆಯನ್ನು ಹಾಕಿ, ಶಚೀ ದೇವಿ
ಯು ದೇವೇಂದ್ರನನ್ನು, ಸ್ವಾಹಾ ದೇವಿಯು ಅಗ್ನಿಯನ್ನು, ಲಕ್ಷ್ಮಿ ದೇವಿಯು
ಮಹಾ ವಿಷ್ಣುವನ್ನು, ಸುವರ್ಚಲೆಯು ಸೂರ್ಯನನ್ನು, ರತಿ ದೇವಿಯು ಮನ್ಮಥ
ನನ್ನು, ಪಾರ್ವತಿಯು ಪರಮೇಶ್ವರನನ್ನು ವರಿಸಿದ ಹಾಗೆ ವರಿಸಿದಳು. ದೃಪ
ದ ರಾಯನು ಆ ಅತಿಶಯವನ್ನು ನೋಡಿ, ಸಂತೋಷ ಪಡುತ್ತಾ, ತನ್ನ ಸೇನೆ
ಯೊಡನೆ ಕೂಡಿ, ಆತನಿಗೆ ಸಹಾಯವನ್ನು ಮಾಡ ಬೇಕೆಂದೆಣಿಸಿ, ರಂಗ ಮಧ್ಯ
ದಲ್ಲಿ ದ್ರೌಪದಿಯನ್ನು ಕೈ ಕೊಂಡು, ಬ್ರಾಹ್ಮಣರಿಂದ ಪೂಜ್ಯನಾಗಿ ಇರು
ವ ಅರ್ಜುನನ ಸಂಗಡಲೇ ಹೊರಟು ಹೋದನು.

ತರುವಾಯ ಈ ಪ್ರಕಾರದಲ್ಲಿ ದೃಪದ ರಾಯನು ಆ ಮಹಾನುಭಾವನಾ
ದ ಬ್ರಾಹ್ಮಣನಿಗೆ ಕನ್ನಿಕೆಯ ಕೊಟ್ಟದ್ದನ್ನು ತಿಳಿದು, ಸಕಲವಾದ ಅರಸುಗಳು
ಒಬ್ಬರೊಬ್ಬರು ಮುಖಗಳನ್ನು ನೋಡಿ ಕೊಳ್ಳುತ್ತಾ,–ಕಟಕಟಾ! ಈ ನೃಪಾ
ಧಮನು ನಮ್ಮಿಷ್ಟರನ್ನು ಕರತರಿಸಿ, ಔತನವನ್ನು ಮಾಡಿಸಿ, ನಮ್ಮನ್ನು ತೃಣೀಕ
ರಿಸಿ, ಈ ಕನ್ಯಾ ರತ್ನವನ್ನು ಬ್ರಾಹ್ಮಣನ ಪಾಲು ಮಾಡ ಬೇಕೆಂಬ ಎಣಿಕೆಯ
ಲ್ಲಿ ಇದ್ಧಾನೆ. ಈತನು ವೃದ್ಧನು, ಗುಣವಂತನು, ಪೂಜ್ಯನು ಎಂದು ನಾವು
ನಂಬ ಬಾರದು. ಸಕಲ ರಾಜ ವಿರೋಧಿಯಾಗಿ, ದುರಾತ್ಮನಾದ ಈತನನ್ನು,
ಮಗನು ಸಹಿತವಾಗಿ, ಕೊಂದರೂ, ದೋಷವಿಲ್ಲ. ದೇವ ಕುಮಾರಕರ ಹಾಗಿ
ರುವ ರಾಜ ಕುಮಾರಕರು ನೆರೆದಿರುವದರಲ್ಲಿ ಈತನ ಮಗಳಿಗೆ ಯೋಗ್ಯನಾ
ದ ಒಬ್ಬ ವರನೂ ಇಲ್ಲದೆ ಹೋದನೇ? ಸ್ವಯಂವರವು ಕ್ಷತ್ರಿಯರಿಗಲ್ಲದೆ ಬ್ರಾ
ಹ್ಮಣರಿಗೆ ಸಲ್ಲದು. ನಮಗೆ ಬ್ರಾಹ್ಮಣರ ಗೊಡವೆ ಯಾತಕ್ಕೆ? ಅವರು ಅ
ಜ್ಞಾನದಿಂದ ಇಂಥಾ ರಾಜ ವಿರೋಧವನ್ನು ಮಾಡಿದರೂ, ಅವರನ್ನು ನಿಗ್ರಹಿಸು
ವದು ನಮಗೆ ಧರ್ಮವಲ್ಲ. ನಮಗಿರುವ ಪುತ್ರ ಮಿತ್ರ ಧನಗಳು ರಾಜ್ಯವು
ಪ್ರಾಣಗಳು ಬ್ರಾಹ್ಮಣರ ಪೂಜಾ ನಿಮಿತ್ತವಾದ್ದರಿಂದ ಅವರಿಗೆ ಹಿಂಸೆಯನ್ನು
ಮಾಡ ಬಾರದು. ನಮಗೆ ಅವಮಾನಕ್ಕೆ ಕಾರಣವಾದ ಈ ಕನ್ನಿಕೆಯನ್ನು
ಎಳ್ಳು ಎಳ್ಳಷ್ಟಾಗಿ ಛೇದಿಸಿ, ಈ ಹೊತ್ತು ಮೊದಲು ಗೊಂಡು ಅರಸುಗಳಿಗೆ ಅ
ವಮಾನ ಕಾರಣಗಳಾದ ಕಾರ್ಯಗಳನ್ನು ಅಜ್ಞಾನದಿಂದಲಾದರೂ, ಮಾಡದೆ ಇ
ರುವ ಹಾಗೆ ಮಾಡ ಬೇಕು ಎಂದು, ತಮ್ಮ ತಮ್ಮೊಳಗೆ ನಿಶ್ಚೈಸಿ, ದೃಪದ ರಾ

ಯನನ್ನು ಸಂಹರಿಸ ಬೇಕೆಂದು, ಹಿಡಿಯುವದಕ್ಕೆ ಹೋಗಲು; ದ್ರುಪದನು,—ಭ ಯದಿಂದ—ಕಾರ್ಪಣ್ಯದಿಂದಲಾದರೂ ಪ್ರಾಣ ರಕ್ಷಣೆಯನ್ನು ಮಾಡಿ ಕೊಂಡು, ಕಲಹವಿಲ್ಲದೆ ಇರ ಬೇಕೆಂದು ಯೋಚಿಸಿರಲು; ಭೀಮಾರ್ಜುನರಿಬ್ಬರು ಮದ್ದಾ ನೆಗಳೋಪಾದಿಯಲ್ಲಿ ನಿಂತು, ನಾನಾ ಪ್ರಕಾರವಾದ ಆಯುಧಗಳನ್ನೂ ಕೈ ಕೊಡಪುಗಳನ್ನೂ ಕವಚಗಳನ್ನೂ ಧರಿಸಿ, ತಮ್ಮ ಮೇಲೆ ಬೀಳುವಂಥ ರಾಜ ಕುಮಾರಕರ ಮೇಲೆ ಕಾಣಿಸಿ ಕೊಂಡರು. ಭೀಮಸೇನನು ವಿಚಿತ್ರವಾದ ಸಾಹಸದಿಂದ ತನ್ನ ಭುಜ ಬಲವನ್ನು ಮೆರೆಯಿಸುತ್ತಾ, ವೇಗದಿಂದ ಒಂದು ಮಹಾ ವೃಕ್ಷವನ್ನು ಕಿತ್ತು ಕೊಂಡು, ಮದ್ದಾನೆಯಂತೆಯೂ, ಯಮನಂತೆ ಯೂ ಬಂದು, ಅರ್ಜುನನ ಸಮೀಪದಲ್ಲಿ ನಿಂತನು.

ಆ ಸಮಯದಲ್ಲಿ ಅಲ್ಲಿರುವ ಬ್ರಾಹ್ಮಣೋತ್ತಮರು ಕೃಷ್ಣಾಜಿನಗಳನ್ನು ಹಾ ರಿಸುತ್ತಾ, ಕೈಯಲ್ಲಿರುವ ಜಲಪಾತ್ರೆಗಳನ್ನು ಎತ್ತಿ ಎತ್ತಿ ಹಾಕುತ್ತಾ, ಅರ್ಜುನನಿ ಗೆ—ಎಲೈ, ಬ್ರಾಹ್ಮಣ ಕುಮಾರನೇ, ನೀನು ಮನಸ್ಸಿನಲ್ಲಿರುವ ಭಯವನ್ನು ಬಿಡು! ಸಮಯ ಬಂದಾಗ ನಾವು ನಿನಗೆ ಸಹಾಯವಾಗಿ ಬಂದು, ಶತ್ರುಗಳನ್ನು ಜಯಿ ಸುತ್ತೇವೆ ಎನಲು; ಅರ್ಜುನನು ನಸು ನಗುತ್ತಾ—ನೀವು ಯುದ್ಧಕ್ಕೆ ಬರ ಬೇ ಡಿ! ಪಾರ್ಶ್ವಗಳಲ್ಲಿ ಇದ್ದು ಕೊಂಡು, ನೋಡುತ್ತಿರಿ! ನನ್ನ ಶರ ಪರಂಪರೆಗಳಿಂ ದ ಈ ಶತ್ರುಗಳ ಸಮೂಹವನ್ನು, ಗರುಡ ಮಂತ್ರಗಳಿಂದ ಪರ್ವತಗಳನ್ನು ತಡೆ ಯುವ ಮೇರೆಗೆ, ನಾನೊಬ್ಬನೇ ತಡೆಯುತ್ತೇನೆ ಎಂದು ಹೇಳಿ, ಆ ಲಕ್ಷ್ಯವನ್ನು ಕೆಡಹುವದಕ್ಕೆ ತಂದಿದ್ದ ಮಹಾ ಧನುಸ್ಸನ್ನೇ ಕೈಗೆ ತೆಕ್ಕೊಂಡು, ಹೆದೆಯನ್ನು ಏರಿಸಿ, ಭೀಮನೊಡನೆ ಕೂಡಿ, ಧೈರ್ಯ ಗೊಂಡು, ಪರ್ವತದ ಹಾಗೆ ಚಲಿಸದೆ, ನಿಂತು, ಕೋಪಾವೇಶದಿಂದ ಯುದ್ಧಕ್ಕೆ ಬಂದಿರುವ ಕರ್ನನು ಮೊದಲಾದ ಮಹಾ ಯೋಧಿಗಳ ಮೇಲೆ ಬಂದು ಬಿದ್ದನು. ಆ ರಾಜಕುಮಾರಕರು, ಯು ದ್ಧ ಮುಖದಲ್ಲಿ ಜೈಸ ಬೇಕೆಂದು ಕಾಣಿಸಿ ಕೊಂಡವನು ಬ್ರಾಹ್ಮಣನಾದರೂ, ಕೊಲ್ಲ ತಕ್ಕದ್ದು ಯುಕ್ತವೆಂದು ನಿಶ್ಚೈಸಿ, ಯುದ್ಧ ಸನ್ನದ್ಧರಾಗಿ ಬಂದು, ಸೂ ರ್ಯನ ಮಗನಾದ ಕರ್ನನು, ಹೆಣ್ಣಾನೆಯ ನಿಮಿತ್ತವಾಗಿ ಮತ್ತೊಂದಾನೆಯೊಡನೆ ಹೋರುವ ಮದ್ದಾನೆಯ ಚಂದದಿಂದ, ಅರ್ಜುನನೊಡನೆ ಹೋರಿದನು. ಮದ್ರ ದೇಶಾಧಿಪತಿಯಾಗಿ, ಮಹಾ ಬಲಶಾಲಿಯಾದ ಶಲ್ಯನು ಭೀಮನೊಡನೆ ಯುದ್ಧ ವನ್ನು ಮಾಡುತ್ತಿದ್ದನು. ದುರ್ಯೋಧನನು ಮೊದಲಾದ ಅರಸುಗಳು ಮಿಕ್ಕಾ ದ ಬ್ರಾಹ್ಮಣರೊಡನೆ ಕೂಡಿ, ಮೆಲ್ಲ ಮೆಲ್ಲನೆ ವಿರೋಧದಿಂದ ಮೃದುವಾದ ಬಾಣಗಳನ್ನು ಪ್ರಯೋಗಿಸುತ್ತಿದ್ದರು. ಅರ್ಜುನನು ತನ್ನ ಮೇಲೆ ಕಾಣಿಸಿ

ಕೊಂಡೆ ಕರ್ಣನ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಲು; ಅತಿ ತೀಕ್ಷ್ಣವಾದ ಆತನ ಬಾಣಗಳ ಪೆಟ್ಟುಗಳಿಂದ ಕರ್ಣನು ಮೂರ್ಛೆ ಹೊಂದಿ, ಅತಿ ಪ್ರಯತ್ನದಿಂದ ಎಚ್ಚೆತ್ತು, ತಿರಿಗಿ ಆತನ ಮೇಲೆ ಕಾಣಿಸಿ ಕೊಂಡನು.

ಹೀಗೆ ಮಹಾ ವೀರರಿಬ್ಬರು ಅಪರಿಮಿತ ಪರಾಕ್ರಮ ವಿಜೃಂಭಣದಿಂದ ಪರಸ್ಪರ ಜಯಾಭಿಲಾಷಿಗಳಾಗಿ—ನೀನು ಮಾಡುವಂಥಾ ಪರಾಕ್ರಮಕ್ಕೆ ನಾನು ಮಾಡುವಂಥಾ ಪರಾಕ್ರಮವನ್ನು ನೋಡು ಎಂದು, ಶೂರರಾಡುವ ಮಾತನ್ನು ಆಡುತ್ತಾ, ಹೋರುತ್ತಿರುವ ಸಮಯದಲ್ಲಿ, ಅರ್ಜುನನ ಅಸದೃಶ ಭುಜಬಲವನ್ನು ನೋಡಿ, ಕೋಪಾಟೋಪ ವಿಜೃಂಭಿತನಾಗಿ, ಕರ್ಣನು ವೇಗವುಳ್ಳಂಥ ಆತನ ಬಾಣಗಳಿಗೆ ಸ್ವಲ್ಪವಾದರೂ ಭಯ ಪಡದೆ, ಸೈನ್ಯವು ಸಂತೋಷ ಪಡುವಂತೆ ಸಿಂಹನಾದವನ್ನು ಮಾಡಿ—ಎಲೈ, ಬ್ರಾಹ್ಮಣೋತ್ತಮನೇ, ನಿನ್ನ ಭುಜ ಬಲಕ್ಕೂ ಧೈರ್ಯಕ್ಕೂ ನಿನ್ನ ಶಸ್ತ್ರಾಸ್ತ್ರ ಕೌಶಲಕ್ಕೂ ಮೆಚ್ಚಿದೆನು. ನೀನು ಪ್ರತ್ಯಕ್ಷವಾದ ಧನುರ್ವೇದವೋ? ಪರಶುರಾಮನೋ? ಇಂದ್ರನೋ? ಉಪೇಂದ್ರನೋ? ತಿಳಿಯಲಿಲ್ಲ. ಇವರೊಳಗೆ ಯಾರೋ ಒಬ್ಬನು ತನ್ನ ದಿವ್ಯ ರೂಪವನ್ನು ಮರೆ ಮಾಡಿ ಕೊಂಡು, ಬ್ರಾಹ್ಮಣ ರೂಪದಿಂದ ಬಂದಿರುವನಾಗಿ, ನಿಶ್ಚೈಸಿದ್ಧೇನೆ. ನಾನು ಕೋಪಿಸಿ ಕೊಂಡು, ಯುದ್ಧದಲ್ಲಿ ನಿಂತರೆ, ದೇವೇಂದ್ರನೂ ಆತನ ಮಗನಾದ ಅರ್ಜುನನು ಹೊರತಾಗಿ, ಮತ್ತೊಬ್ಬರೂ ನನ್ನ ಎದುರಿಗೆ ನಿಲ್ಲಲಾರರು. ಪಾಂಡವರು ಆ ಹೊತ್ತೇ ಅರಗಿನ ಮನೆಯಲ್ಲಿ ಬೆಂದು ಹೋದರು. ನೀನಾರು? ಪಿನಾಕಪಾಣಿಯಾದ ಪರಮೇಶ್ವರನೋ? ತಿಳಿಸು. ನಾನು ಸಕಲ ಧನುರ್ಧರರೊಳಗೆ ಶ್ರೇಷ್ಠನಾದ ಕರ್ಣನು. ಧನುರ್ವೇದದಲ್ಲಿ ಬ್ರಹ್ಮಾಸ್ತ್ರದಲ್ಲಿ ಸಹ ಗುರು ಉಪದೇಶ ಪ್ರಭಾವದಿಂದ ಶಿಕ್ಷಿತನಾಗಿದ್ದರೂ, ಬಾಹು ಬಲ ವಿಜೃಂಭಿತನಾದ ನಿನ್ನಲ್ಲಿ ತನ್ನ ಬಾಹು ಬಲವನ್ನು ಕಾಣಿಸುವದಿಲ್ಲ ಎಂದು, ಅರ್ಜುನನನ್ನು ಕೆಣಕಲಾರದೆ, ನುಡಿಯಲು; ಅರ್ಜುನನು ಕರ್ಣನನ್ನು ನೋಡಿ—ಎಲೈ, ಸೂತ ನಂದನನೇ, ನಾನು ಧನರ್ವೇದವೂ, ಪ್ರತಾಪಶಾಲಿಯಾದ ಪರಶುರಾಮನೂ, ಮಹೇಶ್ವರನೂ, ಇಂದ್ರನೂ ಅಲ್ಲ. ಗುರು ಉಪದೇಶದಿಂದ ಬ್ರಹ್ಮಾಸ್ತ್ರದಿಂದ ಸಮರ್ಥನಾದ ದ್ವಿಜನು; ಈ ಮಹಾ ಯುದ್ಧದಲ್ಲಿ ನಿನ್ನನ್ನು ಜೈಸುವದಕ್ಕೆ ಎಣಿಸಿ ಇದ್ಧೇನೆ. ನೀನು ಪ್ರಾಣಗಳನ್ನು ತಪ್ಪಿಸಿ ಕೊಂಡು, ಎಲ್ಲಿಗಾದರೂ ಹೊರಟು ಹೋಗು! ನಾನು ಜೇವ ಸಹಿತವಾಗಿ ನಿನ್ನನ್ನು ಬಿಡುವದಿಲ್ಲ. ಇಲ್ಲದಿದ್ದರೆ—ನಾನು ಪರಾಜಿತನಾದೆನು ಎಂದು ಹೇಳಿ, ಸುಖವಾಗಿ ಹೋಗು ಎಂದು ನುಡಿದು, ಕರ್ಣನ ಧನುಸ್ಸನ್ನು ಖಂಡಿಸಿದನು. ಆ ಬಳಿಕ ಕರ್ಣನು ಮತ್ತೊಂ

ದೂ ಧನುಸ್ಸನ್ನು ತೆಕ್ಕೊಂಡು, ಯುದ್ಧಕ್ಕೆ ಬರಲು; ಬಾಣ ಸಹಿತವಾದ ಆ ಧನುಸ್ಸನ್ನು ತಿರಿಗೂ ಖಂಡಿಸಿ, ಬಹು ಬಾಣಗಳನ್ನು ಆತನ ಮೇಲೆ ಪ್ರಯೋಗಿಸಲು; ಕರ್ನನು ಆ ಬಾಣಗಳಿಂದ ಪೆಟ್ಟು ಬಿದ್ದು, ಓಡಿ ಹೋಗಿ, ಮುಹೂರ್ತ ಮಾತ್ರವಲ್ಲಿದ್ದು, ತಿರಿಗೂ ಧನುಸ್ಸನ್ನೂ ಬಾಣಗಳನ್ನೂ ತೆಕ್ಕೊಂಡು, ಅರ್ಜುನನ ಸಮೀಪಕ್ಕೆ ಬಂದು, ಅನೇಕವಾದ ಬಾಣಗಳನ್ನು ಸುರಿಯಲು; ಪುನಹ ಅರ್ಜುನನು ಮತ್ತೊಂದು ಬಾಣದಿಂದ ಆತನ ಧನುಸ್ಸನ್ನು ಖಂಡಿಸಲು; ಆತನು ಬ್ರಹ್ಮ ತೇಜಸ್ಸನ್ನು ಗೆಲ್ಲುವದಕ್ಕೆ ಎಂಥಾವನಿಗೂ ಶಕ್ಯವಲ್ಲ ಎಂದು, ಯುದ್ಧವನ್ನು ಬಿಟ್ಟು, ಓಡಿ ಹೋದನು.

ಇತ್ತಲಾ ಶಲ್ಯನೂ ಭೀಮಸೇನನೂ ಅನ್ಯೋನ್ಯವಾಗಿ ಕಾಣಿಸಿ ಕೊಂಡು, ಮದ್ದಾನೆಗಳ ಹಾಗೆ ಹೋರುತ್ತಾ, ಒಬ್ಬನ ಮೇಲೆ ಒಬ್ಬನು ಬಿದ್ದು, ಮುಷ್ಟೀ ಪ್ರಹಾರಗಳಿಂದಲೂ, ಮೊಳಕಾಲುಗಳ ಪೆಟ್ಟುಗಳಿಂದಲೂ ನೋಯಿಸುತ್ತಾ, ಹೋರುವ ಸಮಯದಲ್ಲಿ, ಭೀಮಸೇನನು ತನ್ನ ಎರಡು ಭುಜಗಳಿಂದ ಶಲ್ಯನನ್ನು ಬಿಗಿದು, ಎತ್ತಿ, ಮೇಲಕ್ಕೆ ಹಾರಿಸಿ, ಭೂಮಿಯಲ್ಲಿ ಕೆಡಹಿದನು. ಆಗ ಅಲ್ಲಿ ಇರುವ ಬ್ರಾಹ್ಮಣರು ಅಟ್ಟಹಾಸಗಳನ್ನು ಮಾಡಿದರು. ಅರ್ಜುನನಿಂದ ಕರ್ನನೂ, ಭೀಮನಿಂದ ಶಲ್ಯನೂ ಪರಾಜಿತರಾಗಿ, ಪಲಾಯನವಾಗಲು; ಸಕಲವಾದ ಅರಸುಗಳು ಅದನ್ನು ನೋಡಿ,—ಈ ಬ್ರಾಹ್ಮಣ ಕುಮಾರಕರು ಇಬ್ಬರು ಯಾರೋ? ಎಲ್ಲಿ ಹುಟ್ಟಿದರೋ? ತಿಳಿಯ ಬೇಕು. ಲೋಕದಲ್ಲಿ ಪರಶುರಾಮನೂ, ದ್ರೋಣಾಚಾರ್ಯನೂ, ಕೃಪಾಚಾರ್ಯನೂ, ದೇವಕಿಯ ಮಗನಾದ ಕೃಷ್ಣನೂ, ಕುಂತಿಯ ಮಗನಾದ ಅರ್ಜುನನೂ ಹೊರತಾಗಿ, ಕರ್ನನ ಮುಂದೆ ನಿಲ್ಲುವಂಥಾವರು ಯಾರಾದರೂ ಉಂಟೇ? ಮದ್ರದೇಶಾಧಿಪತಿಯಾದ ಶಲ್ಯನನ್ನು ಬಲರಾಮ ಭೀಮಸೇನನು ಹೊರತಾಗಿ, ಮತ್ತೊಬ್ಬನು ಜಯಿಸುವದಕ್ಕೆ ಸಮರ್ಥನೇ? ಅದರಿಂದ ಇವರ ಸ್ವರೂಪವನ್ನು ತಿಳಿದ ಮೇಲೆ ಯುದ್ಧಾ ಮಾಡುವಾ ಎಂದು, ಒಬ್ಬರೊಬ್ಬರು ಮಾತಾಡಿ ಕೊಳ್ಳುತ್ತಿರುವ ಸಮಯದಲ್ಲಿ, ವಾಸುದೇವನು—ಧರ್ಮ ಮಾರ್ಗವನ್ನು ತಪ್ಪದೆ, ಕನ್ಯಾ ಪರಿಗ್ರಹವನ್ನು ಮಾಡಿದ ಇವರ ಕೂಡೆ ನಿಮಗೆ ಕಲಹವು ಯಾಕೆಂದು, ನಿಲ್ಲಿಸಿ ಬಿಡಲು; ಅವರು ತಮ್ಮ ತಮ್ಮ ಸ್ಥಾನಗಳಿಗೆ ಹೊರಟು ಹೋದರು.

ನೋಡುವದಕ್ಕೆ ಬಂದಿದ್ದ ಜನರು—ಸ್ವಯಂವರದ ರಂಗ ಸ್ಥಳದಲ್ಲಿ ಎಲ್ಲಿ ನೋಡಿದರೂ, ಬ್ರಾಹ್ಮಣರೇ ಹೆಚ್ಚಿದರು ಎಂತಲೂ, ಪಾಂಚಾಲ ರಾಯನ ಮಗಳು ಬ್ರಾಹ್ಮಣ ಕುಮಾರಕನನ್ನೇ ವರಿಸಿದಳು ಎಂತಲೂ, ನಾನಾ ಪ್ರಕಾರವಾಗಿ ನು

ಡಿಯುತ್ತಾ, ತಮ್ಮ ತಮ್ಮ ಮನೆಗಳಿಗೆ ಹೋದರು. ಆ ಬಳಿಕ ಭೀಮಾರ್ಜುನರು ಕೃಷ್ಣಾಜಿನೋತ್ತರೀಯಗಳೊಡನೆ ಬ್ರಾಹ್ಮಣ ಶ್ರೇಷ್ಠರು ತಮ್ಮನ್ನು ಸುತ್ತಿ ಕೊಂಡು ಬರಲು; ಜನ ಸಮೂಹದದೆಶೆಯಿಂದ ಹೊರಟು, ಘಾಯ ಪಡದ ಶರೀರವುಳ್ಳವರಾಗಿ, ಆ ದೃಪದ ರಾಯನ ಮಗಳನ್ನು ಕರ ಕೊಂಡು, ಕುಂಬಾರನ ಮನೆಗೆ ಬರುತ್ತಿದ್ದರು. ಅಲ್ಲಿ ಕುಂತೀ ದೇವಿಯು ಭಿಕ್ಷಾ ಸಮಯಕ್ಕೆ ತನ್ನ ಮಕ್ಕಳು ಬಾರದೆ ಇರುವದರಿಂದ, ವೈರಾನುಬಂಧದಿಂದ ಕೂಡಿರುವ ಧೃತರಾಷ್ಟ್ರನ ಮಕ್ಕಳದೆಶೆಯಿಂದ ಪ್ರೇರಿತರಾದ, ಮಾಯಾ ಬಲ ಸಮೇತರಾದ ರಾಕ್ಷಸರದೆಶೆಯಿಂದ ಏನಾಪತ್ತನ್ನು ಹೊಂದಿದರೋ? ಎಂದು ಪುತ್ರವಾತ್ಸಲ್ಯದಿಂದ ಎಣಿಸುತ್ತಲಿರುವ ಸಮಯದಲ್ಲಿ, ಮೂರನೇ ಝಾವದಲ್ಲಿ ಮೇಘಮಂಡಲದಿಂದ ಸುತ್ತಲ್ಪಟ್ಟ ಸೂರ್ಯನೋಪಾದಿಯಲ್ಲಿ ಬ್ರಾಹ್ಮಣರಿಂದ ಕೂಡಿದವನಾಗಿ, ಅರ್ಜುನನು ಭೀಮನೊಡನೆ ಕೂಡಿ, ಭಾರ್ಗವನೆಂಬ ಕುಂಬಾರನ ಮನೆಗೆ ಬಂದು,—ನಮ್ಮ ಸಾಮರ್ಥ್ಯದಿಂದ ಇದೊಂದು ಭಿಕ್ಷವನ್ನು ತಂದೆವು ಎಂದು ತಿಳಿಸಲು; ಆ ಕುಂತಿಯು ದ್ರೌಪದಿ ಸಹಿತವಾದ ಆ ಕುಮಾರಕರನ್ನು ನೋಡುವದಕ್ಕಿಂತ ಮುಂಚೆ—ಎಲೈ, ಮಕ್ಕಳಿರಾ, ನೀವಷ್ಟು ಅನುಭವಿಸಿ ಎಂದು, ಪ್ರಮಾದ ವಶದಿಂದ ನುಡಿದು, ಆ ಬಳಿಕ ಕನ್ಯಾ ರತ್ನವನ್ನೂ ಕುಮಾರಕರನ್ನೂ ನೋಡಿ—ಕಟಕಟಾ! ಅನುಚಿತವಾಗಿ ನುಡಿದೆನು! ಎಂದು, ಧರ್ಮ ಭಂಗಕ್ಕೆ ಭಯ ಪಡುತ್ತಾ, ನಾಚಿಕೆಯಿಂದ ತಲೆಯನ್ನು ಬೊಗ್ಗಿಸಿ ಕೊಂಡಿರುವ ದ್ರೌಪದಿಯ ಹಸ್ತವನ್ನು ಹಿಡಿದು, ಯುಧಿಷ್ಠಿರನ ಸಮೀಪಕ್ಕೆ ಕರ ಕೊಂಡು ಹೋಗಿ—ಈ ದೃಪದ ರಾಯನ ಮಗಳನ್ನು ಕರ ತಂದು, ನಿನ್ನ ಒಡ ಹುಟ್ಟಿದ ಭೀಮಾರ್ಜುನರು—ಭಿಕ್ಷೆಯನ್ನು ತಂದೆವು ಎಂದು ನನ್ನ ಕೂಡೆ ಹೇಳಿದರು. ನಾನು—ನೀವಷ್ಟು ಅನುಭವಿಸಿ ಎಂದು, ಪ್ರಮಾದ ವಶದಿಂದ ನುಡಿದೆನು. ಈ ರಾಯನ ಮಗಳಿಗೆ ಅಧರ್ಮ ಬಾರದೆ ಇರುವ ಹಾಗೂ, ನನ್ನ ವಾಕ್ಯವು ಸಟೆಯಾಗದೆ ಇರುವ ಹಾಗೂ ಉಪಾಯವನ್ನು ತಿಳಿಸೆನಲು; ಧರ್ಮರಾಯನು ಮುಹೂರ್ತ ಮಾತ್ರವೂ ಯೋಚಿಸಿ, ಕುಂತೀ ದೇವಿಗೆ ಸಮಾಧಾನವನ್ನು ಮಾಡಿ, ಅರ್ಜುನನನ್ನು ನೋಡಿ—ನೀನು ಭುಜ ಬಲದಿಂದ ಈ ರಾಜ ಕನ್ನಿಕೆಯನ್ನು ಗೆದ್ದು ತಂದೆಯಾದ್ದರಿಂದ ಯಜ್ಞೇಶ್ವರನ ಸಮೀಪದಲ್ಲಿ ಶಾಸ್ತ್ರೋಕ್ತ ಪ್ರಕಾರವಾಗಿ ಇವಳನ್ನು ಮದುವೆಯಾಗೆನಲು; ಅರ್ಜುನನು—ಎಲೈ, ಮಹಾನುಭಾವನೇ, ನನ್ನನ್ನು ಅಪ್ರಯೋಜಕನಾಗಿ ಮಾಡ ಬೇಡ. ಈ ಕಾರ್ಯವು ಯಾರಿಗೂ ಸಮ್ಮತವಾಗಲಾರದು. ಮೊದಲು ನೀನು, ಆ ಬಳಿಕ ಭೀಮನು, ಆ ಮೇಲೆ

ನಾನು, ಅನಂತರದಲ್ಲಿ ನಕುಲ ಸಹದೇವರು, ಮದುವೆಯಾಗುವದು ಯುಕ್ತವು. ಭೀಮಸೂ ನಾನೂ ನಕುಲ ಸಹದೇವರೂ ಪಾಂಚಾಲ ರಾಯನ ಮಗಳೂ, ನಾವಷ್ಟು ನಿನ್ನಾಧೀನವಾದ್ದರಿಂದ, ಧರ್ಮ ಯುಕ್ತವಾಗಿ, ಕೀರ್ತಿ ಕರವಾಗಿ, ದ್ರುಪದ ರಾಯನಿಗೆ ಸಮ್ಮತವಾದ ಕಾರ್ಯವನ್ನು ಕಟ್ಟು ಮಾಡ ಬೇಕು ಎಂದು ನುಡಿಯಲು; ಯುಧಿಷ್ಠಿರನು ತನ್ನ ಮನಸ್ಸಿನಲ್ಲಿ—ನಾನು ಮೊದಲಾದ ಪಂಚ ಪಾಂಡವರಲ್ಲಿಯೂ ಪಾಂಚಾಲ ರಾಯನಿಗೆ ಅನುರಾಗವು ಹುಟ್ಟಿರುವದರಿಂದಲೂ, ಸಕಲ ಲೋಕಾಶ್ಚರ್ಯಕರವಾಗಿ ಬ್ರಹ್ಮ ದೇವನಿಂದ ನಿರ್ಮಿತವಾಗಿರುವ ಈ ಪಾಂಚಾಲ ರಾಯನ ಮಗಳ ರೂಪಾತಿಶಯಕ್ಕೆ ತಮ್ಮಷ್ಟು ಮಂದಿಯ ಮನಸ್ಸುಗಳು ಕರಗಿರುವದರಿಂದಲೂ, ವ್ಯಾಸನ ವಚನವನ್ನು ಸ್ಮರಿಸಿ, ತಮ್ಮಂದಿರಿಗೆ ಪರಸ್ಪರ ದ್ವೇಷಗಳು ಹುಟ್ಟ ಬಾರದೆಂದು ಎಣಿಸಿ, ಭೀಮಸೇನಾದಿಗಳನ್ನು ನೋಡಿ—ನಮ್ಮ ಐದು ಮಂದಿಗೂ ಈ ದ್ರೌಪದಿಯು ಪತ್ನಿಯಾಗಲುಳ್ಳವಳು, ಅಂದನು.

ಆ ವಾಕ್ಯವನ್ನು ಕೇಳಿ, ತಮ್ಮಂದಿರಷ್ಟು ಆ ಅರ್ಥವನ್ನು ತಮ್ಮ ಮನಸ್ಸಿನಲ್ಲಿ ಆಲೋಚನೆಯನ್ನು ಮಾಡುತ್ತಿರುವಾಗ, ಯದು ಶ್ರೇಷ್ಠನಾದ ವಾಸುದೇವನು, ಬಲರಾಮನು ಸಹಿತವಾಗಿ, ಆ ಕುಂಬಾರನ ಮನೆಗೆ ಬಂದು, ಆಜಾನುಬಾಹುವಾಗಿ ತಮ್ಮಂದಿರೊಡನೆ ಕೂಡಿರುವ ಧರ್ಮರಾಯನ ಸಮೀಪಕ್ಕೆ ಹೋಗಿ—ನಾನು ವಾಸುದೇವನು ಎಂದು ತಿಳಿಸಿ, ಆತನ ಪಾದಗಳಿಗೆ ನಮಸ್ಕಾರವನ್ನು ಮಾಡಿದನು. ಆ ಬಳಿಕ ಬಲರಾಮನು ಹಾಗೇ ನಮಸ್ಕರಿಸಿದನು. ತರುವಾಯ ಸೋದರತ್ತೆಯಾದ ಕುಂತೀ ದೇವಿಯ ಪಾದಗಳಿಗೆ ರಾಮ ಕೃಷ್ಣರಿಬ್ಬರು ನಮಸ್ಕರಿಸಿದರು. ಧರ್ಮರಾಯನು ಕೃಷ್ಣಸ್ವಾಮಿಯನ್ನು ನೋಡಿ, ಕುಶಲ ಪ್ರಶ್ನೆಯನ್ನು ಮಾಡಿ—ಎಲೈ, ಕೃಷ್ಣಸ್ವಾಮಿಯೇ, ನಾವು ಹೀಗೆ ಗೋಪ್ಯವಾಗಿರುವಾಗ, ನಿನಗೆ ಹ್ಯಾಗೆ ತಿಳಿಯಿತು? ಎನಲು; ಕೃಷ್ಣಸ್ವಾಮಿಯು ನಸು ನಗುತ್ತಾ—ಯಜ್ಞೇಶ್ವರನು ಎಷ್ಟು ಮರೆಯಾಗಿದ್ದರೂ, ತೇಜೋ ವಿಶೇಷದಿಂದ ಯಾತಕ್ಕೆ ಕಾಣಲ್ಪಡದೆ ಹೋಗುವನು? ಆ ಲಕ್ಷ್ಯವನ್ನು ಭೇದಿಸುವದಕ್ಕೆ ನಿಮಗೆ ಹೊರತಾಗಿ ಮಿಕ್ಕಾದ ಜನರಿಗೆ ಶಕ್ಯವೇ? ದೈವ ವಶದಿಂದ ಶತ್ರು ಸಂಹಾರಕರಾದ ನೀವು ಅರಗಿನ ಮನೆಯ ದಾಹದ್ದೆಶೆಯಿಂದ ತಪ್ಪಿಸಿ ಕೊಂಡು ಬಂದಿರಿ. ಪುತ್ರಾಮಾತ್ಯ ಸಹಿತವಾಗಿ ಧೃತರಾಷ್ಟ್ರನು ತನ್ನ ಮನೋರಥವನ್ನು ಪಡೆಯಲಾರದೆ ಹೋದನು. ನಮ್ಮ ಮನಸ್ಸಿನಲ್ಲಿ ಎಣಿಸಿದ ಪ್ರಕಾರ ನಿಮಗೆ ಶುಭಗಳು ಆಗುತ್ತವೆ. ಪ್ರವೃದ್ಧನಾದ ಯಜ್ಞೇಶ್ವರನೋಪಾದಿಯಲ್ಲಿ ವೃದ್ಧಿ

ಯನ್ನು ಹೊಂದುತ್ತಿದ್ದೀರಿ. ಇಲ್ಲಿ ಇರುವ ಅರಸುಗಳು ನಿಮ್ಮನ್ನು ಅರಿಯದೆ
ಇರುವ ರೀತಿಗೆ ನಮ್ಮ ಪಾಳ್ಯಕ್ಕೆ ಹೋಗಿ ಬರುತ್ತೇವೆ ಎಂದು, ಅವರ ಅಪ್ಪ
ಣೆಯನ್ನು ತೆಕ್ಕೊಂಡು, ತಮ್ಮ ಪಾಳ್ಯಕ್ಕೆ ಹೊರಟು ಹೋದರು.

ಪಾಂಚಾಲ ರಾಯನ ಮಗನಾದ ದೃಷ್ಟದ್ಯುಮ್ನನು, ಇವರ ನಿಶ್ಚಯವನ್ನು
ತಿಳಿಯ ಬೇಕೆಂದು, ಇವರಿಳಿದಿರುವ ಕುಂಬಾರನ ಮನೆಯ ಸುತ್ತಲು ಬೇಹಿನ
ವರನ್ನು, ಪಾಂಡವರು ಅರಿಯದೆ ಇರುವ ಹಾಗೆ, ಇಟ್ಟು, ತಾನೂ ಸಮೀಪದಲ್ಲಿ
ಇದ್ದನು. ಆ ವೇಳೆಯಲ್ಲಿ ಭೀಮಸೇನ ಮೊದಲಾದ ನಾಲ್ವರು ಭಿಕ್ಷಾನ್ನವನ್ನು
ಬೇಡಿ, ತಂದು, ಯುಧಿಷ್ಠಿರನ ಮುಂದೆ ಇರಿಸಿದರು. ಆಗ ಕುಂತೀ ದೇವಿಯು
ದ್ರೌಪದಿಯನ್ನು ನೋಡಿ—ಅದರಲ್ಲಿ ಮೊದಲು ಭಾಗವನ್ನು ವೈಶ್ವದೇವ ಬಲಿಹ
ರಣಕ್ಕೆ ಕೊಡು. ಆ ಮೇಲೆ ಒಂದು ಭಾಗವನ್ನು ಬ್ರಾಹ್ಮಣನಿಗೆ ಕೊಡು. ಮ
ತ್ತೊಂದು ಭಾಗವನ್ನು ಭಿಕ್ಷಾರ್ಥವಾಗಿ ಬಂದವರಿಗೆ ಕೊಡು. ಮಿಕ್ಕ ಅನ್ನ
ವನ್ನು ಎರಡು ಭಾಗನ ಮಾಡಿ, ಅದರಲ್ಲಿ ಒಂದು ಭಾಗವನ್ನು ಆರು ಭಾಗಗ
ಳಾಗಿ ಮಾಡಿ, ನಮಗಿಬ್ಬರಿಗೂ ಎರಡು ಭಾಗಗಳನ್ನು ಇರಿಸು. ನಾಲ್ಕು ಭಾಗ
ಗಳನ್ನು ನಾಲ್ಕು ಮಂದಿಗೂ ಕೊಡು. ಮಿಕ್ಕ ಅರ್ಧ ಭಾಗವನ್ನು ಭೀಮನಿಗೆ
ಕೊಡು. ಯಾಕಂದರೆ ಈತನು ವೃಷಭ ಸಿಂಹ ಗಂಭೀರ ಗಮನನು, ನವ
ಯವ್ವನ ವಿಜೃಂಭಿತನು, ಮಹಾ ವೀರನು, ಸ್ಥೂಲ ಶರೀರನು, ಅಧಿಕ ಭೋ
ಜನ ಪ್ರಿಯನಾಗಿರುವನು ಎಂದು ತಿಳಿಸಲು; ಆ ರಾಜ ಪುತ್ರಿಯು ಸ್ವಲ್ಪವಾ
ದರೂ ತನ್ನ ಮನಸ್ಸಿನಲ್ಲಿ ಭಯ ಪಡದೆ, ತನ್ನ ಅತ್ತೆ ಹೇಳಿದ ಪ್ರಕಾರ ಅನ್ನ
ವನ್ನು ಪಾಲು ಮಾಡಿ ಕೊಡಲು; ಅವರೆಲ್ಲಾ ಸಮುಚಿತ ಪ್ರಕಾರದಿಂದ ಭೋ
ಜನಗಳನ್ನು ಮಾಡಿದರು. ಆ ಬಳಿಕ ಸಹದೇವನು ಅವರಿಗೆ ಹುಲ್ಲಿನಿಂದ ಹಾಸಿ
ಕೆಯನ್ನು ಮಾಡಿ, ಹಾಸಲು; ಅವರು ಅದರ ಮೇಲೆ ಕೃಷ್ಣಾಜಿನಗಳನ್ನು ಹಾಸಿ
ಕೊಂಡು, ದಕ್ಷಿಣ ಶಿರಸ್ಸಾಗಿ ಮಲಗಿದ್ದರು. ಕುಂತೀ ದೇವಿಯು ಅವರಿಗೆ
ಮೂಡಣ ಭಾಗದಲ್ಲಿ ಮಲಗಿ ಇದ್ದಳು. ದ್ರೌಪದಿಯು ಅವರ ಕಾಲ ದೆಶೆಯ
ಲ್ಲಿ ವಿಕಾರ ರಹಿತಳಾಗಿ ದರ್ಭೆಯನ್ನು ಹಾಸಿ ಕೊಂಡು, ಮಲಗಿ—ಇವರು ಭಿ
ಕ್ಷಾ ಬೇಡುವಂಥಾ ಬ್ರಾಹ್ಮಣರು ಎಂದು, ಸ್ವಲ್ಪವಾದರೂ ತನ್ನ ಮನಸ್ಸಿನಲ್ಲಿ
ವಿಕಲ್ಪವಿಲ್ಲದೆ ಇದ್ದಳು. ಮಹಾ ಶೂರರಾದ ಇವರು ದಿವ್ಯಾಸ್ತ್ರಗಳ ತೆರವ
ನ್ನೂ, ಆನೆಗಳ ಪ್ರಕಾರವನ್ನೂ, ರಥಗಳ ಚಂದವನ್ನೂ, ಖಡ್ಗಗಳ ಸೊಬಗ
ನ್ನೂ, ಗದಾವಿಶೇಷಗಳ ಸೊಗಸನ್ನೂ, ಕೊಡಲಿಗಳ ಸ್ಥಿತಿಯನ್ನೂ ನಾನಾ ಪ್ರ
ಕಾರವಾಗಿ ಒಬ್ಬರಿಗೊಬ್ಬರು ಹೇಳಿ ಕೊಳ್ಳುತ್ತ, ಹೊತ್ತು ಕಳೆಯುತ್ತಿರುವ

ಸಮಯದಲ್ಲಿ, ಹೊಂಚ್ಚು ಕೇಳುತ್ತಲಿದ್ದ ದೃಷ್ಟದ್ಯುಮ್ನನು, ಬೇವಿನವರು ಸಹಿತ, ನೋಡಿ, ಕೇಳಿ, ಅದನ್ನೆಲ್ಲಾ ತಿಳಿಸುವದಕ್ಕೆ ತಂದೆಯ ಸಮೀಪಕ್ಕೆ ಬಂದು ಶೇರಿದನು.

ಪಾಂಚಾಲ ರಾಯನು ಮುಖದಲ್ಲಿ ದೈನ್ಯವನ್ನು ತೋರಿಸುತ್ತಾ, ಪಾಂಡವರು ಎಂದು ತಿಳಿಯದೆ ಇರುವದರಿಂದ, ತನ್ನ ಮಗನನ್ನು ನೋಡಿ—ಎನ್ನೈಯ್ಯಾ, ಮಗನೇ, ನಮ್ಮ ದ್ರೌಪದಿ ದೇವಿಯು ಪುಷ್ಪ ಮಾಲಿಕೆ ಸ್ಮಶಾನದಲ್ಲಿ ಬಿದ್ದ ಹಾಗೆ ಹೀನ ಜಾತಿಗಳಲ್ಲಿ ಒಬ್ಬರನ್ನಾದರೂ ವರಿಸದೆ ಇರುವಂಥಾವಳು. ಈಗ ಎಲ್ಲಿ ಇದ್ದಾಳೆ? ಆ ಕನ್ಯಾ ರತ್ನವನ್ನು ಅರ್ಜುನನ ವಶಕ್ಕೆ ಒಪ್ಪಿಸಿ, ನಾನು ಸುಖವಾಗಿ ನಿದ್ದೆ ಗೈದೇನೇ? ನಾನು ಮಾಡಿದ ಯಂತ್ರ ಲಕ್ಷ್ಯವನ್ನು ಭೇದಿಸಿ, ಆ ದ್ರೌಪದಿಯನ್ನು ಕರೆದು ಕೊಂಡು ಹೋದಂಥಾವನನ್ನು ಯಾರಿಂದ ತಿಳಿದೆ? ವಿಚಿತ್ರವೀರ್ಯನ ಮೊಮ್ಮಕ್ಕಳಾದ ಪಾಂಡವರು ದೈವ ಸಂಕಲ್ಪದಿಂದ ಬದುಕಿ ಇದ್ದಾರೆಯೇ? ನಾನು ಮಾಡಿದ ಯಜ್ಞದ ಅತಿಶಯದಿಂದಲೂ, ದ್ರೌಪದಿಯ ಭಾಗ್ಯ ವಿಶೇಷದಿಂದಲೂ, ಈ ಲಕ್ಷ್ಯವನ್ನು ಭೇದಿಸಿದಂಥಾವನು ಅರ್ಜುನನು ಎಂದು ತಿಳಿಯ ಬಹುದೇ? ಎನುತ್ತಾ, ಕೇಳಿದಂಥಾ ದ್ರುಪದ ರಾಯನನ್ನು ನೋಡಿ, ದೃಷ್ಟದ್ಯುಮ್ನನು ಸಂತೋಷ ಪಟ್ಟು—ತಾನು ಕಂಡು ಕೇಳಿದ್ದನ್ನೆಲ್ಲಾ ತಂದೆಗೆ ತಿಳಿಸಿ—ಅವರು ಪಾಂಡವರೇ ಸರಿ ಎಂದು, ನಿಶ್ಚೈಸಿದ್ದೇನೆ ಅಂದನು.

ಈ ಮಾತನ್ನು ದ್ರುಪದ ರಾಯನು ಕೇಳಿ, ಸಂತೋಷ ಪಟ್ಟು, ತನ್ನ ಪುರೋಹಿತನನ್ನು ಕರೆದು,—ನೀನು ಅವರ ಸಮೀಪಕ್ಕೆ ಹೋಗಿ, ನೀವಾರು? ಪಾಂಡು ಕುಮಾರರೇ? ಎಂದು ಕೇಳಿ ಬಾ, ಎನಲು; ಆತನು ಅವರ ಬಳಿಗೆ ಹೋಗಿ, ಅವರನ್ನು ನೋಡಿ—ಪಾಂಚಾಲ ರಾಯನಾದ ದ್ರುಪದನು ನಿಮ್ಮ ಸ್ವರೂಪವನ್ನು ತಿಳಿಯ ಬೇಕೆಂದು ಇದ್ದಾನೆ. ಈ ಲಕ್ಷ್ಯವನ್ನು ಕೆಡಹಿದಂಥಾವನನ್ನು ನೋಡಿ, ಆತನ ಸಂತೋಷವನ್ನೂ ಅಪ್ಪಿಷ್ಟಲ್ಲ. ನೀವು ಯಾವ ಕಾರ್ಯಕ್ಕೂ ಭಯ ಪಡಬೇಡಿ. ನಿಮ್ಮ ಜಾತಿ ಕುಲಾಚಾರಗಳನ್ನು ವಿಶದವಾಗಿ ಹೇಳ ಬೇಕು. ನಿಮಗೆ ವಿರೋಧಿಗಳಾದವರ ಶಿರಸ್ಸಿನಲ್ಲಿ ಪಾದವನ್ನು ಇರಿಸಿ, ಮಗನ ಸಹಿತನಾದ ನಮ್ಮರಸಿಗೆ ಸಂತೋಷವನ್ನು ಕಲ್ಪಿಸಿ, ಪಾಂಡು ರಾಯನಿಗೆ ಪಾಂಚಾಲ ರಾಯನು ಪರಮ ಮಿತ್ರನಾದ್ದರಿಂದ, ತನ್ನ ಮಗಳು ದ್ರೌಪದಿಯು ಆತನಿಗೆ ಸೊಸೆಯಾಗ ಬೇಕೆಂತಲೂ, ಆಜಾನು ಬಾಹುವಾದ ಅರ್ಜುನನು ತನಗೆ ಅಳಿಯನಾಗ ಬೇಕೆಂತಲೂ ಅಭಿಲಾಷೆಯು ಅಧಿಕವಾಗಿ ಇದೆ ಎನಲು; ಯುಧಿಷ್ಠಿರನು ಆ ವಾಕ್ಯವನ್ನು ಕೇಳಿ, ಸಮೀಪದಲ್ಲಿರುವ ಭೀಮನನ್ನು ನೋಡಿ—ಈ ದ್ರುಪ

ದ ರಾಜ ಪುರೋಹಿತನನ್ನು ಉಚಿತ ಪ್ರಕಾರವಾಗಿ ಅರ್ಘ್ಯಪಾದ್ಯಾದಿಗಳಿಂದ
ಪೂಜಿಸು ಎನಲು; ಆತನು ಹಾಗೆ ಮಾಡಿದನು. ಸುಖಾಸನದಲ್ಲಿ ಕುಳಿತಿರುವ
ಆ ಬ್ರಾಹ್ಮಣನನ್ನು ನೋಡಿ, ಯುಧಿಷ್ಠಿರನು,—ಪಾಂಚಾಲ ರಾಯನು ತನ್ನ ಮಗ
ಳಾದ ದ್ರೌಪದಿಗೆ ಸ್ವಧರ್ಮೋಚಿತವಾದ ಮಾರ್ಗದಿಂದ ಪರಾಕ್ರಮವೇ ಓಲಿಯಾ
ಗುವ ಹಾಗೆ ಕಲ್ಪಿಸಲು; ಆತನು ಮಾಡಿದ ಪ್ರತಿಜ್ಞೆಯನ್ನು ನೆರವೇರಿಸಿ, ಈ
ಕುಮಾರಕನು ಕನ್ಯಾ ರತ್ನವನ್ನು ಕೈಕೊಂಡನು. ನೀವು ಸಂಕೇತಾ ಮಾ
ಡುವಾಗ, ಬ್ರಾಹ್ಮಣಾದಿ ವರ್ಣವೂ, ಜೀವನೋಪಾಯವೂ, ವಿದ್ಯಾ ವಿಶೇಷವೂ,
ಕುಲವೂ ಗೋತ್ರವೂ ಹೀಗಿರ ಬೇಕೆಂದು ನಿಶ್ಚಯವಿಲ್ಲವಲ್ಲ! ಧನುಸ್ಸಿನಲ್ಲಿ ಹೆದೆ
ಯನ್ನು ಏರಿಸಿ, ಲಕ್ಷ್ಯವನ್ನು ಕೆಡಹಿದಂಥಾವನು ಈ ಕನ್ನಿಕೆಗೆ ವರನಾಗಲು
ಳ್ಳವನು ಎಂದು ಹೇಳಿದವನಾದ್ದರಿಂದ, ಈತನು ಹಾಗೆ ಮಾಡಿ, ರಾಜ ಪುತ್ರಿಯ
ನ್ನು ಕೈ ಕೊಂಡನು. ಇನ್ನು ಆದ ಕಾರ್ಯಕ್ಕೆ ನಿಮ್ಮ ರಾಯನು ಪಶ್ಚಾತ್ತಾಪ
ಪಟ್ಟು, ಪ್ರಯೋಜನವೇನು? ಆದರೂ ಆತನ ಮನೋರಥವು ಸಫಲವಾದೀತು.
ಈ ರಾಜ ಪುತ್ರಿಯು ಉಚಿತವಾದ ವರನನ್ನು ಹೊಂದಿದ್ಧಾಳೆ. ಈ ಧನುಸ್ಸಿನಲ್ಲಿ
ಹೆದೆಯನ್ನು ಏರಿಸಿ, ಲಕ್ಷ್ಯವನ್ನು ಭೇದಿಸುವದಕ್ಕೆ ಸಾಧಾರಣ ಮನುಷ್ಯರಿಗೆ
ಶಕ್ಯವಲ್ಲದೆ ಇದ್ದದರಿಂದ, ನಿಮ್ಮ ರಾಯನು ಈ ಕನ್ಯಾ ವಿಷಯವಾಗಿ ಚಿಂತಿ
ಸುವದಕ್ಕೆ ಕಾರಣವಿಲ್ಲವೆಂದು ಹೇಳಿ ಕಳುಹಿಸಲು; ಪುರೋಹಿತನು ದೃಪದ
ರಾಯನ ಬಳಿಗೆ ಬಂದು, ಧರ್ಮರಾಯನು ಹೇಳಿದ ಮಾತನ್ನು ಹೇಳಲಾಗಿ; ಆ
ಮಾತಿನ ಭಾವದಿಂದ—ಇವರು ಪಾಂಡವರೇ ಸರಿ ಎಂದು ನಿಶ್ಚೈಸಿ ಕೊಂಡು,
ಇವರನ್ನು ಪ್ರಸ್ತದ ಭೋಜನಕ್ಕೆ ಕರಿಸಿ, ಭೋಜನಾದಿಗಳಿಂದ ಸತ್ಕರಿಸಿ, ಧಾರಾ
ಮಂಟಪವನ್ನು ಮಾಡಿಸಿ, ಧರ್ಮರಾಯನನ್ನು ನೋಡಿ—ಈ ಹೊತ್ತು ಶುಭ
ದಿವಸವಾದ್ದರಿಂದ ಮಹಾನುಭಾವನಾದ ಧನಂಜಯನು ಈ ಕನ್ನಿಕೆಯನ್ನು ಪಾ
ಣಿಗ್ರಹಣ ಮಾಡುವದಕ್ಕೆ ಅನುಗ್ರಹ ಮಾಡೆನಲು; ಧರ್ಮರಾಯನು—ನಮ್ಮ
ತಾಯಿಯ ಅಪ್ಪಣೆಯ ಪ್ರಕಾರ ಈ ಕನ್ಯಾ ರತ್ನವನ್ನು ನಾವು ಐದು ಜನವು
ಅಗ್ನಿ ಸಾಕ್ಷಿಕವಾಗಿ ಪರಿಗ್ರಹಿಸ ಬೇಕು, ಅಂದನು.

ಆಗ ದೃಪದ ರಾಯನು—ಒಬ್ಬ ಕನ್ನಿಕೆಯನ್ನು ಐದು ಜನ ಮದುವೆಯಾ
ಗುವಂಥಾದ್ದು ಹ್ಯಾಗೆ? ಎಂದು ಯೋಚಿಸುತ್ತಿರುವಲ್ಲಿ, ವ್ಯಾಸ ಮುನೀಶ್ವರನು
ದೃಪದ ರಾಯನಲ್ಲಿಗೆ ಬಂದು, ಆತನಿಂದ ಪೂಜಿತನಾಗಿ, ಅವನನ್ನು ಕುರಿತು—ಎ
ಲೈ, ಅರಸೇ, ನಿನ್ನ ಮನಸ್ಸಿನಲ್ಲಿರುವ ಸಂಶಯವನ್ನು ಬಿಡು! ಗೌತಮ ವಂಶದ
ಲ್ಲಿ ಹುಟ್ಟಿದ ಜಟಿಲನೆಂಬ ಮಹಾತ್ಮನ ಮಗಳು ತಪೋಧನರಾಗಿ, ಆತ್ಮ ತತ್ವ

ಜ್ಞರಾದ ಏಳು ಮಂದಿ ಮುನಿ ಕುಮಾರಕರನ್ನು ವರಿಸಿದಳು. ಅದಲ್ಲದೆ ಪ್ರಚೇತಸರೆಂಬ ಹನ್ನೆರಡು ಮಂದಿ ಅಣ್ಣ ತಮ್ಮಂದಿರು ಒಬ್ಬ ಕನ್ನಿಕೆಯನ್ನು ವರಿಸಿದರು. ಇದಲ್ಲದೆ ಇವಳ ತಾಯಿಯಾದ ನಿನ್ನ ಪಟ್ಟ ಮಹಿಷಿಯು, ತನ್ನ ಮಗಳಿಗೆ ಐದು ಮಂದಿ ಗಂಡರಾಗ ಬೇಕೆಂದು ಪೂರ್ವ ಜನ್ಮದಲ್ಲಿ ಬಯಸಿದ ಪ್ರಕಾರ, ಯಾಜೋಪಯಾಜರೆಂಬವರು ಅದೇ ರೀತಿಯಲ್ಲಿ ಅನುಗ್ರಹಿಸಿರುವ ಕಾರಣ, ಈ ಐದು ಮಂದಿಯು ಗಂಡರಾಗುವದು ಧರ್ಮವು ಎಂದು, ನೀಲಾಯನಿಯ ಕಥೆಯನ್ನು ಹೇಳಲು; ದ್ರುಪದ ರಾಯನು ಕೃಷ್ಣದ್ವೈಪಾಯನನನ್ನು ನೋಡಿ–ನಿಮ್ಮ ಮಾತುಗಳನ್ನು ಕೇಳಿದ ಬಳಿಕ, ನನ್ನ ಮನಸ್ಸಿನಲ್ಲಿರುವ ಸಂಶಯಗಳೆಷ್ಟು ಹೋಯಿತು. ದೈವ ಸಂಕಲ್ಪವು ಯಾರಿಗೂ ತಪ್ಪಿಸುವದಕ್ಕೆ ಶಕ್ಯವಲ್ಲ. ಈ ಅರ್ಥಕ್ಕೆ ಸಮ್ಮತಿಸಿದೆನು, ಅಂದನು.

ಆ ಬಳಿಕ ವ್ಯಾಸನು ಯುಧಿಷ್ಠಿರನನ್ನು ನೋಡಿ, ಚಂದ್ರನು ರೋಹಿಣಿ ಸಹಿತನಾಗಿ ಇರುವದರಿಂದ, ಈ ಶುಭ ದಿವಸದಲ್ಲಿ ವಿಹಿತ ಪ್ರಕಾರದಿಂದ ನೀವು ಐದು ಮಂದಿಯು ಕ್ರಮವಾಗಿ ಪಾಣಿಗ್ರಹಣವನ್ನು ಮಾಡಿ ಎಂದು, ಕಟ್ಟು ಮಾಡಿದನು. ಆ ಬಳಿಕ ಯಜ್ಞಸೇನನು ಮಗನಾದ ದೃಷ್ಟದ್ಯುಮ್ನನೊಡನೆ ಕೂಡಿ, ಮದುವೆಗೆ ತಕ್ಕ ಮುಸ್ತೈದೆಗಳನ್ನು ಜೊತೆಗೊಳಿಸಿ, ದ್ರೌಪದೀ ದೇವಿಯನ್ನು ಮಂಗಳ ಮಜ್ಜನಾನಂತರದಲ್ಲಿ ಬಹು ವಿಧ ರತ್ನಾಭರಣಗಳಿಂದ ಅಲಂಕರಿಸಿದನು. ಆತನ ನಂಟರು, ಇಷ್ಟರು, ಮಿತ್ರಾಮಾತ್ಯರುಗಳು, ಆ ಪಟ್ಣದಲ್ಲಿರುವ ಪ್ರಜೆಗಳು, ವೇದ ವೇದಾಂಗ ಪಾರಂಗತರಾದ ಬ್ರಾಹ್ಮಣರುಗಳು, ನಾನಾ ದೇಶಗಳದೆಶೆಯಿಂದ ಬಂದ ಯಾಚಕರುಗಳು, ಆ ವಿವಾಹ ಮಂಟಪದಲ್ಲಿ ನೆರೆದು, ಕುಳಿತಿದ್ದರು. ಆ ಬಳಿಕ ಕುಂತೀ ದೇವಿಯ ಮಕ್ಕಳು ಮಂಗಳ ಸ್ನಾನವನ್ನು ಮಾಡಿ, ಕಂಕಣಗಳನ್ನು ಕಟ್ಟಿ ಕೊಂಡು, ದಿವ್ಯ ಚಂದನಗಳನ್ನೂ ದಿವ್ಯ ಮಾಲ್ಯಗಳನ್ನೂ ದಿವ್ಯಾಂಬರಗಳನ್ನೂ ನವರತ್ನ ಖಚಿತಗಳಾದ ಕುಂಡಲಗಳನ್ನೂ ಧರಿಸಿ, ಯಜ್ಞೇಶ್ವರನಿಗೆ ಸಮಾನವಾದ ತೇಜಸ್ಸುಳ್ಳ ತಮ್ಮ ಪುರೋಹಿತ ಧೌಮ್ಯನನ್ನು ಮುಂದಿಟ್ಟು ಕೊಂಡು, ಜೇಷ್ಠಾನು ಕ್ರಮವಾಗಿ ಗೂಳಿಗಳು ಗೊಲ್ಲರ ಹಟ್ಟಿಯನ್ನು ಹೊಗುವ ಹಾಗೆ ಹೊಕ್ಕರು. ಆಗ ಪುರೋಹಿತನು ಯಜ್ಞೇಶ್ವರನಲ್ಲಿ ಹೋಮವನ್ನು ಮಾಡಿ, ಮೊದಲು ಧರ್ಮರಾಯನನ್ನು ದ್ರೌಪದೀ ಸಮೇತನಾಗಿ ಹಸೇ ಮಣೆಯಲ್ಲಿ ಕುಳ್ಳಿರಿಸಿ, ಯಥಾ ಶಾಸ್ತ್ರವಾಗಿ ಹೋಮ ಕ್ರಿಯೆಗಳನ್ನು ಮಾಡಿಸಿ, ಅಗ್ನಿ ಪ್ರದಕ್ಷಿಣವನ್ನು ಮಾಡಿಸಿದನು. ಆಗ ಧರ್ಮರಾಯನು ಅನೇಕ ಧನ, ಕನಕ, ಗೋ, ವಸ್ತ್ರ, ವಾಹನಾದಿಗಳಿಂದ ಜನರನ್ನು

ದಣಿಸಿ, ದ್ರುಪದ ರಾಯನ ಅಪ್ಪಣೆಯಿಂದ ಧೌಮ್ಯ ಸಹಿತನಾಗಿ, ಅವನ ಮನೆ
ಯಿಂದ ಹೊರಟು ಹೋದನು. ಆ ಬಳಿಕ ಭೀಮಾರ್ಜುನ, ನಕುಲ, ಸಹದೇ
ವರು, ಕ್ರಮವಾಗಿ ಒಂದೊಂದು ದಿವಸದಲ್ಲಿ ಒಬ್ಬೊಬ್ಬರು ಆ ದ್ರೌಪದೀ ದೇವಿ
ಯ ಪಾಣಿಗ್ರಹಣವನ್ನು ಮಾಡಿದರು. ಆ ಬಳಿಕ ಪಾಂಚಾಲ ರಾಯನು ಮ
ಹಾ ರಥರಾದ ಪಾಂಡವರಿಗೆ ಸುವರ್ಣ ಭೂಷಿತಗಳಾಗಿ, ನಾಲ್ಕು ಕುದುರೆಗಳ
ನ್ನು ಕಟ್ಟಿರುವಂಥಾವುಗಳಾಗಿ, ಕನಕ ಮಾಲಿಕೆಗಳಿಂದ ಅಲಂಕೃತಗಳಾಗಿರುವ
ನೂರು ರಥಗಳನ್ನೂ, ಪದ್ಮ ಕುಲದಲ್ಲಿ ಹುಟ್ಟಿ, ಚಿನ್ನದ ಕಟ್ಟುಗಳಿಂದ ಕೂಡಿ
ರುವ ಕೊಂಬುಗಳುಳ್ಳವುಗಳಾಗಿ, ಪರ್ವತಗಳೋಪಾದಿಯಲ್ಲಿ ಇರುವ ನೂರು
ಆನೆಗಳನ್ನೂ, ಚಿನ್ನದ ಹಲ್ಲಣಗಳೊಡನೆ ಕೂಡಿ, ನವರತ್ನ ಮಾಲಿಕಾಲಂಕೃತ
ಗಳಾಗಿ, ಮನೋವೇಗವುಳ್ಳ ಹನ್ನೆರಡು ವರುಷ ಪ್ರಾಯದ ಸಾವಿರ ಉತ್ತಮಾ
ಶ್ವಗಳನ್ನೂ, ದಿವ್ಯಾಂಬರಾಭರಣ ಕುಸುಮ ಮಾಲಿಕಾಲಂಕೃತರಾಗಿ, ಯವ್ವನ
ದಿಂದ ಕೂಡಿರುವ ನೂರು ಮಂದಿ ದಾಸಿಗಳನ್ನೂ, ಮತ್ತು ಚಿನ್ನದ ಪಾತ್ರೆಗಳ
ನ್ನೂ, ಚಿನ್ನದ ಹಾಸಿಕೆಗಳನ್ನೂ, ಚಿನ್ನದ ಮಣೆಗಳನ್ನೂ, ಕಣ್ಣಿಗೆ ಪ್ರಿಯವಾ
ದ ಅನೇಕ ವಸ್ತು ವಿಶೇಷಗಳನ್ನೂ, ಅನೇಕ ಗೋ ಧನಗಳನ್ನೂ, ದಿವ್ಯಾಂಬರ
ಗಳನ್ನೂ, ದಿವ್ಯ ಭೂಷಣಗಳನ್ನೂ, ಒಂದೊಂದು ಲಕ್ಷ ಮೋಹರಗಳನ್ನೂ,
ಪ್ರತ್ಯೇಕ ಪ್ರತ್ಯೇಕವಾಗಿ, ಪ್ರೀತಿ ಪೂರ್ವಕವಾಗಿ, ಕೊಟ್ಟನು. ಆ ಪಾಂಡವ
ರು ಅಂಥಾ ಐಶ್ವರ್ಯವನ್ನು ಹೊಂದಿ, ಇಂದ್ರನಿಗೆ ಸರಿಯಾದ ಸಂಪತ್ತುಳ್ಳವರಾ
ಗಿ, ಆತನ ಪಟ್ಟಣದಲ್ಲಿಯೇ ಇಷ್ಟವಾದ ಭೋಗಗಳನ್ನು ಅನುಭವಿಸುತ್ತ, ದ್ರೌ
ಪದಿಯ ಕುಲ ಶೀಲ ವಿನಯಾಚಾರ ನಡತೆಗಳಿಗೆ ಸಂತೋಷ ಪಡುತ್ತಾ ಇ
ದ್ದರು.

ಆಗ ದ್ರುಪದ ರಾಯನ ಪಟ್ಟದ ಹೆಂಡರು ಕುಂತೀ ದೇವಿಗೆ ತಮ್ಮ ತಮ್ಮ
ಹೆಸರುಗಳನ್ನು ಹೇಳಿ ಕೊಂಡು, ನಮಸ್ಕಾರಗಳನ್ನು ಮಾಡಿದರು. ದ್ರೌಪದೀ
ದೇವಿಯು ಕೈಯಲ್ಲಿ ಕಟ್ಟಿದ ಕಂಕಣವುಳ್ಳವಳಾಗಿ, ಕುಂತಿಗೆ ನಮಸ್ಕರಿಸಿ,
ಕೈ ಕಟ್ಟಿ ಕೊಂಡು, ನಿಂತಿರಲು; ಕುಂತೀ ದೇವಿಯು ಬಹಳ ಸಂತೋಷದಿಂ
ದ—ವಾಸುದೇವನಿಗೆ ಲಕ್ಷ್ಮಿ ದೇವಿಯೋಪಾದಿಯಲ್ಲಿ ನೀನು ಪಾಂಡು ಕುಮಾರ
ಕರಿಗೆ ಪ್ರಿಯವನ್ನು ಮಾಡುತ್ತ, ಆಯುಷ್ಮಂತರಾಗಿ ಬಹು ಪರಾಕ್ರಮಿಗಳಾದ
ಮಕ್ಕಳನ್ನು ಪಡೆದು, ಕುರು ಜಾಂಗಲ ಮೊದಲಾದ ದೇಶಗಳ ಪಟ್ಟಣಗಳಲ್ಲಿ
ಪತಿಗಳೊಡನೆ ಪಟ್ಟಾಭಿಷಿಕ್ತೆಯಾಗಿ, ಅಶ್ವಮೇಧಾದಿ ಯಾಗಗಳನ್ನು ಮಾಡುವ
ನಿನ್ನ ಪತಿಯಾದ ಯುಧಿಷ್ಠಿರನಿಗೆ ಯಜ್ಞ ಪತ್ನಿಯಾಗಿ, ಸಕಲ ಸುಖ ಸಾಂಬ್ರಾ

ಜ್ಯವನ್ನು ಅನುಭವಿಸು ಎಂದು ಹರಸಿದಳು. ಆ ಬಳಿಕ ವಾಸುದೇವನು ಪಾಂಡವರಿಗೆ ಮುತ್ತುಗಳು ವಜ್ರಗಳು ಮೊದಲಾದ ನವರತ್ನ ಖಚಿತವಾದ ಚಿನ್ನದ ಒಡವೆಗಳನ್ನೂ, ನಾನಾ ದೇಶಗಳಲ್ಲಿ ಹುಟ್ಟಿ, ಅಮೂಲ್ಯವಾದ, ಮೃದುವಾಗಿ, ವಿಚಿತ್ರವಾಗಿರುವ ವಸ್ತ್ರಗಳನ್ನೂ, ಕಂಬಳಿಗಳನ್ನೂ, ಮಣೆಗಳನ್ನೂ, ಪಾತ್ರೆಗಳನ್ನೂ, ರೂಪು ಯವ್ವನ ದಾಕ್ಷಿಣ್ಯಗಳಿಂದ ಕೂಡಿ, ನಾನಾ ದೇಶಗಳಲ್ಲಿ ಹುಟ್ಟಿದ ದಾಸೀ ಜನಗಳನ್ನೂ, ಮಾವುತರು ತಿದ್ದಿದ ಭದ್ರಗಜಗಳನ್ನೂ, ಅನೇಕ ಭೂಷಣಾಲಂಕೃತಗಳಾದ ಉತ್ತಮಾಶ್ವಗಳನ್ನೂ, ದಂತಗಳಿಂದಲೂ ಚಿನ್ನಗಳಿಂದಲೂ ಮಾಡಿದ, ಒಳ್ಳೇ ಕುದುರೆಗಳಿಂದ ಕೂಡಿರುವ ತೇರುಗಳನ್ನೂ, ಮೋಹರಗಳನ್ನೂ, ಚಿನ್ನದ ರಾಶಿಗಳನ್ನೂ, ಪ್ರೀತಿಯಿಂದ ಕಳುಹಿಸಲು; ಪಾಂಡವರು ಗೌರವದಿಂದ ಅದಷ್ಟನ್ನು ಅಂಗೀಕರಿಸಿ, ವಾಸುದೇವನ ಮನಸ್ಸಿಗೆ ಸಂತೋಷವನ್ನು ಮಾಡಿ, ದೃಪದ ರಾಯನ ಪಟ್ಟಣದಲ್ಲಿದ್ದರು.

63. Dharmaraya's Rajasuya Sacrifice.

೬೩. ಧರ್ಮರಾಯನು ರಾಜಸೂಯ ಯಾಗ ಮಾಡಿದ ಕಥೆ.

ವೈಶಂಪಾಯನ ಮುನೀಂದ್ರನು ಜನಮೇಜಯರಾಯನನ್ನು ನೋಡಿ—ಕೇಳೈಯ್ಯಾ, ರಾಜೇಂದ್ರನೇ, ಲೋಕೈಕವೀರನಾದ ಅರ್ಜುನನು ಕೃಷ್ಣನ ಅಪ್ಪಣೆಯಿಂದ ಕಾಂಡವ ವನ ದಹನದಲ್ಲಿ ಕಾಪಾಡಿದ ರಕ್ಕಸರ ಬಡಗಿಯಾದ ಮಯನು, ಇಂದ್ರ ಯಮ ವರುಣ ಕುಬೇರರ ಓಲಗದ ಚಾವಡಿಗಿಂತ ನಾಲ್ಕು ಮಡಿ ಚಂದವಾದ ಒಂದು ಓಲಗದ ಚಾವಡಿಯನ್ನೂ, ಜಗಳದಲ್ಲಿ ಯಾವ ಹಗೆಗಳಿಂದಲೂ ಮುರಿಯಲಾಗದೆ ಇರುವ ಒಂದು ತೋರವಾದ ಗದೆಯನ್ನೂ, ಹಗೆಗಳ ಎದೆಯು ಧ್ವನಿಯ ಕೇಳಿದ ಮಾತ್ರದಲ್ಲಿಯೇ ಶೀಳುವ ದೇವದತ್ತವೆಂಬ ಶಂಖವನ್ನೂ, ಧರ್ಮರಾಯನಿಗೂ ಭೀಮನಿಗೂ ಅರ್ಜುನನಿಗೂ ಕ್ರಮವಾಗಿ ಕೊಟ್ಟು, ಅವರು ಕೊಟ್ಟ ಉಡುಗೆರೆಗಳನ್ನು ತೆಕ್ಕೊಂಡು, ಹೊರಟು ಹೋದನು.

ಆ ಬಳಿಕ ಧರ್ಮರಾಯನು ಒಳ್ಳೇ ಲಗ್ನದಲ್ಲಿ ಕೃಷ್ಣನನ್ನು ಮುಂದಿಟ್ಟು ಕೊಂಡು, ತಮ್ಮಂದಿರನ್ನು ಒಡಗೊಂಡು, ಬ್ರಾಹ್ಮಣರೊಡನೆ ಓಲಗದ ಚಾವಡಿಯನ್ನು ಹೊಕ್ಕು, ಎರಡನೇ ದೇವೇಂದ್ರನೋಪಾದಿಯಲ್ಲಿ ಒಡ್ಡೋಲಗವನ್ನು ಕೊಡುತ್ತಾ, ಧರ್ಮದಿಂದ ರಾಜ್ಯ ಪರಿಪಾಲನೆಯನ್ನು ಮಾಡುತ್ತಾ ಇದ್ದನು. ಹೀಗಿರುವಲ್ಲಿ, ಕೃಷ್ಣನು ಧರ್ಮರಾಯನ ಅಪ್ಪಣೆಯನ್ನು ತೆಗೆದು ಕೊಂಡು, ದ್ವಾರಕಾ ಪಟ್ಟಣಕ್ಕೆ ತೆರಳಿದನು. ಆ ಮೇಲೆ ಒಂದಾನೊಂದು ದಿವಸದಲ್ಲಿ—ಸೂರ್ಯನೇ ಭೂಲೋಕಕ್ಕೆ ನಡೆದು ಬರುತ್ತಾನೋ? ಎಂಬಂತೆ, ಬರುವ ನಾರದರ

ನ್ನು ಕಂಡು, ಝುಗ್ಗನೆ ಎದ್ದು, ಧರ್ಮರಾಯನು ತಮ್ಮಂದಿರೊಡನೆ ಎದುರುಗೊಂಡು, ಅಡ್ಡ ಬಿದ್ದು, ಕೈಯನ್ನು ಹಿಡಿದು, ಚಾವಡಿಗೆ ಕರ ಕೊಂಡು ಬಂದು, ಚಿನ್ನದ ಕಾಲು ಮಣೆಯ ಮೇಲೆ ಕುಳ್ಳಿರಿಸಿ, ಕಾಲುಗಳನ್ನು ತೊಳೆದು, ಪೂಜಿಸಿ, ಕೈದಾವರೆಯನ್ನು ಜೋಡಿಸಿ, ನಿಂತು ಕೊಂಡಿದ್ದನು. ಆಗ ನಾರದ ಮಹಾ ಮುನಿಯು ಮೊದಲು ಧರ್ಮರಾಯನ ಕ್ಷೇಮವನ್ನು ಕೇಳಿ, ಕುಳಿತು ಕೊಳ್ಳುವಂತೆ ಅಪ್ಪಣೆ ಕೊಟ್ಟು, ಆ ಪ್ರಕಾರ ಕುಳಿತು ಕೊಂಡ ಧರ್ಮರಾಯನನ್ನು ನೋಡಿ—ಎಲೈ, ರಾಜೇಂದ್ರನೇ, ನಿನ್ನ ಕುಲದ ಅರಸುಗಳು ಧರ್ಮದ ದಾರಿಯನ್ನು ಬಿಡದೆ, ಪ್ರಜೆಗಳನ್ನು ಕಾಪಾಡಿದ ಹಾಗೆ ನೀನು ಕಾಪಾಡುತ್ತೀಯಾ? ಜನರ ಬುದ್ಧಿಯನ್ನೂ ಸಾಹಸವನ್ನೂ ಶಕ್ತಿಯನ್ನೂ ಜಾಣತನವನ್ನೂ ಪರೀಕ್ಷಿಸಿ ನೋಡಿ, ಅವರವರಿಗೆ ತಕ್ಕ ಉದ್ಯೋಗಗಳನ್ನು ಮಾಡಿಸಿ ಕೊಟ್ಟು, ಅವರವರಿಗೆ ಯೋಗ್ಯವಾದ ಮರ್ಯಾದೆಗಳನ್ನು ಮಾಡುತ್ತಾ, ಅವರು ಮಾಡುವ ಕೆಲಸಗಳನ್ನು ಆಪ್ತ ಜನರಿಂದ ತಿಳಿದು ಕೊಳ್ಳುತ್ತಾ ಇದ್ದೀಯಾ? ಮತ್ತು ನಿನಗೂ ದೇಶದ ಜನಗಳಿಗೂ ಪರಿವಾರದವರಿಗೂ ಹಿತನಾಗಿ, ಪಕ್ಷಪಾತಗಳು ಇಲ್ಲದೆ ನ್ಯಾಯಾನ್ಯಾಯಗಳನ್ನು ವಿಚಾರಿಸಿ, ತಪ್ಪು ಮಾಡಿದವನು ತನ್ನ ಮಗನಾದಾಗ್ಯೂ ಶೀಕ್ಷಿಸುವವನಾಗಿ, ಸಕಲ ವೇದ ಶಾಸ್ತ್ರವನ್ನೂ ರಾಜನೀತಿಗಳನ್ನೂ ಓದಿ, ಐವತ್ತಾರು ದೇಶದ ಮಾತುಗಳನ್ನೂ ಬರಹಗಳನ್ನೂ ಕಲಿತು, ನಿರಾಲಸ್ಯನಾಗಿ, ಕೋಪವಿಲ್ಲದೆ, ಸಾಮ, ದಾನ, ಭೇದ, ದಂಡಗಳೆಂಬ ಚತುರೋಪಾಯಗಳನ್ನು ಬಲ್ಲವನಾಗಿರುವ, ತಲೆಯಾಂತರದಿಂದ ಬಂದ ನಿಮ್ಮ ಮಂತ್ರಿ ಕುಲದಲ್ಲಿ ಹುಟ್ಟಿದ ಬ್ರಾಹ್ಮಣನನ್ನು ಮಂತ್ರಿಯಾಗಿ ಮಾಡಿ ಕೊಂಡು, ಆತನೊಡನೆ ಏಕಾಂತದಲ್ಲಿ ಆರು ಕಿವಿಗಳಿಗೆ ಕೇಳದಂತೆ ಮಂತ್ರಾಲೋಚನೆಯನ್ನು ಮಾಡಿ, ಯೋಚನೆಯನ್ನು ಮಾಡಿ, ಮೊದಲು ನಿರ್ನೈಸಿ, ಆ ಹಿಂದೆ ಯಾವ ರಾಜ ಕಾರ್ಯವನ್ನಾದರೂ ಮಾಡುತ್ತೀಯಾ? ಮತ್ತು ನಾನಾ ವಿಧ ಶಸ್ತ್ರ ವಿದ್ಯಗಳಲ್ಲಿ ಜಾಣರಾಗಿಯೂ, ಅಸಮಾನವಾದ ಬಲವುಳ್ಳವರಾಗಿಯೂ, ಒಡೆಯನ ಕೆಲಸಕ್ಕೆ ಪ್ರಾಣವನ್ನು ಹುಲ್ಲಿಗಿಂತ ಕಡೆ ಎಂದು ಸೇನೆಯನ್ನು ನಡಿಸುವ, ಇಳಿಸುವ, ಒಡ್ಡುವ, ಜಗಳವಾಡಿಸುವ ಕೆಲಸಗಳನ್ನು ತಿಳಿದವರಾಗಿ ಇರುವ ದಳವಾಯಿಗಳನ್ನು ಇಟ್ಟು ಕೊಂಡು, ಶೂರರಿಗೆ ಅವಮಾನವನ್ನು ಮಾಡದೆ, ಹೇಡಿಗಳಿಗೆ ಬಹುಮಾನವನ್ನು ಮಾಡದೆ ಇದ್ದೀಯಾ? ಮತ್ತು ವೈದ್ಯ ಶಾಸ್ತ್ರದಲ್ಲಿ ಘಟ್ಟಿಗರಾಗಿ, ವಂಚಕರಲ್ಲದೆ, ಹಣದ ಆಶೆಗಳಿಲ್ಲದೆ, ಎಲ್ಲರಲ್ಲಿಯೂ ಒಂದೇ ಪ್ರಕಾರವಾಗಿ ಪಶ್ಚಾತ್ತಾಪವೂ ದಯೆಯೂ ಉಳ್ಳ ವೈದ್ಯರನ್ನು ಇಟ್ಟು ಕೊಂಡು ಇದ್ದೀಯಾ?

ನಿನ್ನ ಸೇನಾ ಜನರಿಗೆ ನಿಬಂಧನೇ ಮಾಡಿರುವ ಸಂಬಳಗಳನ್ನು ತಡೆಯದೆ, ತಿಂಗಳು ಗಟ್ಲೆಯಲ್ಲಿಯೂ ಸಲ್ಲಿಸುತ್ತಾ, ಜಗಳದಲ್ಲಿ ನಿನಗಾಗಿ ಸತ್ತ ಭಟರ ಕುಟುಂಬವನ್ನು, ಅವರವರ ಯೋಗ್ಯತಾನುಸಾರವಾಗಿ, ರಕ್ತ ಕೊಡಗಿಗಳನ್ನೂ ಸಂಬಳಗಳನ್ನೂ ಕೊಟ್ಟು, ಕಾಪಾಡುತ್ತೀಯಾ? ಮತ್ತು ನಿನ್ನ ಆಜ್ಞೆಗಳು ಪಟ್ಟಣದಲ್ಲಿ ತಡೆ ಇಲ್ಲದೆ ನಡೆಯುತ್ತಾ ಇವೆಯೇ? ಎಂದು, ಇವು ಮೊದಲಾದ ರಾಜ ನೀತಿಗಳ ಪ್ರಶ್ನೆಯನ್ನು ಮಾಡಿದನು.

ಅದಕ್ಕೆ ಧರ್ಮರಾಯನು—ಜೀಯಾ, ಮುನೀಂದ್ರನೇ, ತಮ್ಮಿಂದ ಕೇಳಿದ ರಾಜ ಕಾರ್ಯಗಳಲ್ಲಿ ನನ್ನ ಯಥಾ ಶಕ್ತಿ ನಿಮ್ಮಂಥ ದೊಡ್ಡವರ ಅನುಗ್ರಹದಿಂದ ನಡೆಯುತ್ತೇನೆ. ನೀವು ಎಲ್ಲಾ ಲೋಕಗಳಲ್ಲಿಯೂ ನೋಡದೆ ಇರುವದು ಒಂದೂ ಇಲ್ಲ. ಆದರೆ ಎಲ್ಲಿಯಾದರೂ ಇಂಥಾ ಓಲಗದ ಚಾವಡಿಯನ್ನು ನೋಡಿ ಇದ್ದರೆ, ಅಪ್ಪಣೇ ಕೊಡಿಸ ಬೇಕೆಂದು, ಕೇಳಿದನು. ನಾರದನು ಅದರ ಅಂದ ಚಂದಕ್ಕೆ ಆಶ್ಚರ್ಯ ಪಟ್ಟು—ಇಂಥಾ ಸಭೆಯು ಮನುಷ್ಯ ಲೋಕದಲ್ಲಿ ಎಲ್ಲಿಯೂ ನೋಡಲಿಲ್ಲ. ಆದರೆ ಇಂದ್ರ, ಯಮ, ವರುಣ, ಕುಬೇರರ ಒಡ್ಡೋಲಗಕ್ಕೆ ನಾನು ಹೋಗಿರುವದುಂಟು. ಆ ಸಭೆಗಳು ಇಷ್ಟು ಚಲುವಾಗಿಲ್ಲ. ಇದು ಭೂಲೋಕದಲ್ಲಿ ಇರುವ ಬ್ರಹ್ಮನ ಸಭೆಯಂತೆ ಹೊಳೆಯುತ್ತದೆ. ಇಂಥ ಸಭೆಯಲ್ಲಿ ದಿವ್ಯ ಸಿಂಹಾಸನದಲ್ಲಿ ಕುಳಿತು, ಧರ್ಮದಿಂದ ರಾಜ್ಯಗಳನ್ನು ಪರಿಪಾಲಿಸುತ್ತಾ, ಸಕಲ ದೇಶದ ಅರಸುಗಳಲ್ಲಿಯೂ ಕಪ್ಪ ಕಾಣಿಕೆಗಳನ್ನು ತೆಗೆದು ಕೊಳ್ಳುತ್ತಾ, ನೀನು ಇರುವದನ್ನೂ, ನಿನ್ನ ತಮ್ಮಂದಿರು ಭಿನ್ನ ಭೇದವಿಲ್ಲದೆ ಲೋಕೈಕ ವೀರರಾಗಿ ಒಂದೇ ಮನಸ್ಸಿನಿಂದ ನಡೆಯುವದನ್ನೂ, ಯಮ ಲೋಕದಲ್ಲಿ ಇರುವ ನಿಮ್ಮ ತಂದೆಯಾದ ಪಾಂಡು ಮಹಾರಾಯನು ಕೇಳಿ, ನಾನು ಸ್ವಲ್ಪ ದಿವಸದಲ್ಲಿ ಅಲ್ಲಿಗೆ ಹೋಗಿದ್ದದರಿಂದ ನನ್ನನ್ನು ಕಂಡು, ಕಣ್ಣೀರನ್ನು ಬಿಡುತ್ತಾ, ಅಂಗಲಾಚಿ ಕೊಂಡು,—ಹರಿಶ್ಚಂದ್ರ ರಾಯನು ರಾಜಸೂಯವೆಂಬ ಮಹಾ ಯಜ್ಞವನ್ನು ಮಾಡಿದ್ದರಿಂದ, ಇಂದ್ರನ ಸಭೆಯಲ್ಲಿ ಆತನ ಅರ್ಧಾಸನದಲ್ಲಿ ಕುಳಿತು, ಸಕಲ ಭೋಗಗಳನ್ನು ಅನುಭವಿಸುತ್ತಾನೆ. ನಾನು ಅಂಥಾ ಭಾಗ್ಯಕ್ಕೆ ಪಾತ್ರನಾಗಲಿಲ್ಲ. ನನ್ನ ಮಕ್ಕಳು ಐದು ಜನವು ದೇವತೆಗಳ ಅಂಶದಿಂದ ಹುಟ್ಟಿದವರಾದ್ದರಿಂದ, ಲೋಕೈಕ ವೀರರಾಗಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಅದು ಅಲ್ಲದೆ, ಭೂಮಿಯ ಭಾರವನ್ನು ಇಳಿಸುವದಕ್ಕೆ ಬ್ರಹ್ಮ ಮೊದಲಾದ ದೇವತೆಗಳಿಂದ ಯದು ಕುಲದಲ್ಲಿ ಕೃಷ್ಣನೆಂಬ ಹೆಸರಿನಿಂದ ಹುಟ್ಟಿರುವ ಮಹಾ ವಿಷ್ಣುವು ನನ್ನ ಮಕ್ಕಳಿಗೆ ನಂಟನಾಗಿಯೂ

ಸ್ನೇಹಿತನಾಗಿಯೂ ಪಾಲಕನಾಗಿಯೂ ಮಂತ್ರಿಯಾಗಿಯೂ ದೂತನಾಗಿಯೂ ಇದ್ಧಾನೆ. ಅವರಿಗೆ ಯಾವ ಕಾರ್ಯವೂ ಅಸಾಧ್ಯವಲ್ಲ. ಆದ್ದರಿಂದ ನೀವು ನನ್ನ ಮೇಲೆ ಕನಿಕರವಿಟ್ಟು, ನನ್ನ ಮಗನಾದ ಧರ್ಮರಾಯನಿಗೆ ರಾಜಸೂಯ ಯಾಗವನ್ನು ಮಾಡುವಂತೆ ತಿಳಿಸಿರಿ. ಆತನು ಮಾಡಿದ್ದೇ ಆದರೆ, ನಾನು, ತಂದೆ, ಅಜ್ಜ, ಮುತ್ತಜ್ಜರ ಗುಂಪುಗಳೊಡನೆ ಸ್ವರ್ಗ ಲೋಕದಲ್ಲಿ ನಿತ್ಯ ಸುಖದಿಂದ ಇರುವೆನೆಂದು, ಬೇಡಿ ಕೊಂಡನು. ಆತನ ಮಾತುಗಳನ್ನು ನಿನಗೆ ಹೇಳುವದಕ್ಕೆ ಬಂದೆನು. ನಿನ್ನ ತಂದೆ, ತಾತ, ಮುತ್ತಾತಂದಿರು ದಿಗ್ವಿಜಯದಿಂದ ಸಂಪಾದಿಸಿದ ದ್ರವ್ಯಗಳಿಂದ ನಾಲ್ಕು ವರ್ಣದವರನ್ನು ಕಾಪಾಡಿ, ಬಹಳ ಯಾಗಗಳನ್ನು ಮಾಡಿ, ಇಂದ್ರನ ಸಭೆಯಲ್ಲಿ ಇರುವರು. ಅವರ ಹಾಗೆ ನೀನು ಈ ರಾಜಸೂಯ ಯಾಗವನ್ನು ಮಾಡು. ಈ ಯಜ್ಞವು ಬಹಳ ಕಷ್ಟವು. ಇದರಿಂದ ನಿನಗೆ ಬಹಳ ಅರಸುಗಳೊಡನೆ ಜಗಳ ಉಂಟಾಗಿ, ಅವರನ್ನು ಜೈಸಿದರೆ, ನಿನಗೆ ಬಹು ಕೀರ್ತ್ತಿಯು ಬರುವದೆಂದು ಹೇಳಿ, ದೇವಲೋಕಕ್ಕೆ ಹೋದನು.

ತರುವಾಯ ಯುಧಿಷ್ಠಿರನು, ಕೃಷ್ಣದ್ವೈಪಾಯನ ಮುನಿಯೂ ಧೌಮ್ಯನೂ ನಂಟ ಇಷ್ಟರೂ ಮಂತ್ರಿ ಜನಗಳೂ ಇವರ ಮುಂದೆ ತನ್ನ ತಮ್ಮಂದಿರೊಡನೆ ಹೀಗಂದನು—ಪ್ರಪಂಚದಲ್ಲಿ ಜನರು ಮಕ್ಕಳನ್ನು ಪಡೆದು, ಅವರಿಂದ ತಮಗೆ ಸಂತೋಷ ಉಂಟಾಗುವದು ಎಂದು, ನಿಜವಾಗಿ ತಿಳಿದಿರುವರು ಆದಕಾರಣ ಒಳ್ಳೆ ಮಗನು ತನ್ನ ತಂದೆಯ ಸಂಕಲ್ಪವನ್ನು ಈಡೇರಿಸುವದು ಅಗತ್ಯವಾದ ಕೆಲಸವಾಗಿಯೂ ನೀತಿಯಾಗಿಯೂ ಇರುವದು. ಪರಲೋಕದಲ್ಲಿ ಇರುವ ನಮ್ಮ ತಂದೆಗೆ ಈ ಯಾಗವು ಹಿತವಾಗಿರುವದು. ತಂದೆಯ ಹಿತಕ್ಕಾಗಿ ಈ ಯಾಗವನ್ನು ಮಾಡ ಬೇಕೆಂದು ಬುದ್ಧಿಯು ಉಂಟು. ಇದರಿಂದ ಎಲ್ಲಾ ಅರಸುಗಳೊಡನೆ ಜಗಳ ಉಂಟಾಗುವದು ಎಂದು ಭಯವೂ ಉಂಟು. ಇದಕ್ಕೆ ಹ್ಯಾಗೆ ಮಾಡ ಬೇಕೆಂದು ಕೇಳಿದನು. ಆ ಮಾತನ್ನು ಕೇಳಿ, ಧೌಮ್ಯ ಮೊದಲಾದವರು—ಎಲೈ, ಧರ್ಮರಾಯನೇ, ಈ ಯಾಗದಿಂದ ಎಲ್ಲಾ ಪಾಪಗಳು ಹರಿದು ಹೋಗುವವು; ಎಲ್ಲಾ ಅರಸುಗಳ ಐಶ್ವರ್ಯವು ನಿನ್ನನ್ನು ಹೊಂದುವದು; ಮೂರು ಲೋಕಗಳಲ್ಲಿಯೂ ನಿನ್ನ ಕೀರ್ತಿಯು ಪ್ರಸಿದ್ಧಿಯಾಗುವದು. ನಿನಗೆ ದೈವ ಸಹಾಯವು ಇರುವ ಕಾರಣ, ಈ ಕೆಲಸದಲ್ಲಿ ಸಂದೇಹ ಪಡದೆ, ರಾಜಸೂಯ ಯಾಗವನ್ನು ಮಾಡೆಂದು ಹೇಳಿದರು. ಧರ್ಮರಾಯನು ಅವರ ಮಾತುಗಳನ್ನು ಒಪ್ಪಿ ಕೊಂಡು—ಈ ಯಜ್ಞವು ತಡೆ

ಇಲ್ಲದೆ ನಡಿಸುವದಕ್ಕೆ ಕೃಷ್ಣನೊಬ್ಬನೇ ಯೋಗ್ಯನೇ ಹೊರ್ತು, ಮತ್ತೊಬ್ಬರಿಗೆ ಸಾಮರ್ಥ್ಯವಿಲ್ಲವೆಂದು ಎಣಿಸಿ, ಮಂತ್ರಿಗಳನ್ನು ಕರೆದು,—ನಿಮ್ಮಲ್ಲಿ ಯಾರಾದರೂ ಒಬ್ಬನು ಚುರುಕಾಗಿ ನಡೆಯುವ ಕುದುರೆಗಳನ್ನು ಹೂಡಿರುವ ತೇರನ್ನು ಏರಿ, ಬೇಗ ಹೋಗಿ, ಕೃಷ್ಣನನ್ನು ಕರೆದು ಕೊಂಡು ಬನ್ನಿ, ಎಂದು ಅಪ್ಪಣೆಯನ್ನು ಕೊಟ್ಟು ಕಳುಹಿಸಿ, ಕೃಷ್ಣನ ಬರುವಿಕೆಯನ್ನು ಕಾದು ಕೊಂಡು ಇದ್ದನು.

ಇತ್ತ, ಕಳುಹಿಸಿದ ಮಂತ್ರಿಯು ದ್ವಾರಕಾವತಿಗೆ ಹೋಗಿ, ಕೃಷ್ಣನಿಗೆ ಧರ್ಮರಾಯನ ಮಾತುಗಳನ್ನು ಅರಿಕೆ ಮಾಡಿದ್ದರಿಂದ, ಆತನು ಸಂತೋಷ ಪಟ್ಟು, ದ್ವಾರಕಾ ಪಟ್ಟಣದಿಂದ ಹೊರಟು, ದಾರಿಯಲ್ಲಿ ಒಂದು ದಿನವಾದರೂ ನಿಲ್ಲದೆ, ಪ್ರಯಾಣದ ಮೇಲೆ ಪ್ರಯಾಣದಿಂದ ಬಂದು, ಇಂದ್ರಪ್ರಸ್ಥ ಪಟ್ಟಣವನ್ನು ಹೊಕ್ಕು, ಸೋದರತ್ತೆಯಾದ ಕುಂತೀ ದೇವಿಗೂ ಭಾವನಾದ ಧರ್ಮರಾಯನಿಗೂ ವಂದನೆಯನ್ನು ಮಾಡಿ, ತನ್ನ ಜೊತೇ ಪ್ರಾಯದವನಾದ ಭೀಮನನ್ನು ತಬ್ಬಿ ಕೊಂಡು, ತನಗೆ ಕಿರಿಯವರಾದ ಅರ್ಜುನ ನಕುಲ ಸಹದೇವರು ಬಂದು, ನಮಸ್ಕರಿಸಲು; ಅವರಿಗೆ ಆಶೀರ್ವಾದವನ್ನು ಮಾಡಿ, ಆ ತರುವಾಯ ಧರ್ಮರಾಯನು ತೋರಿಸಿದ ದಿವ್ಯ ಸಿಂಹಾಸನದಲ್ಲಿ ಕುಳಿತು ಕೊಂಡನು. ಆಗ ಯುಧಿಷ್ಠಿರನು ಅಶೇಷ ಲೋಕಗಳಿಗೆ ಗುರುವಾದ ಕೃಷ್ಣನನ್ನು ದೇವೋಪಚಾರಗಳಿಂದ ಪೂಜಿಸಿ, ಎಲ್ಲಾ ಲೋಕಗಳ ಯೋಗ ಕ್ಷೇಮವನ್ನು ಯಾವಾಗಲೂ ಪರಾಂಬರಿಸುತ್ತಿರುವ ಅಂಥಾ ಕೃಷ್ಣ ದೇವರ ಯೋಗ ಕ್ಷೇಮವನ್ನು ತಾನು ಕೇಳಿ, ಸಂತೋಷದಿಂದ ತುಂಬಿದ ಕೃಷ್ಣನನ್ನು ಕುರಿತು—ಎಲೈ, ಮಹಾನುಭಾವನೇ, ನೀನು ಸಕಲ ಪ್ರಾಣಿಗಳ ಹೃದಯಗಳಲ್ಲಿ ನಿತ್ಯವು ಇರುವದರಿಂದ, ಸಕಲ ಪ್ರಾಣಿಗಳ ಅಂತಸ್ಥವಾದ ವಿಚಾರಗಳಲ್ಲಿ ನಿನಗೆ ತಿಳಿಯದೆ ಇರುವದು ಒಂದೂ ಇಲ್ಲ. ಆದಾಗ್ಯೂ, ಬಿನ್ನವಿಸುತ್ತೇನೆ; ಲಾಲಿಸು. ಯಮ ಲೋಕದಲ್ಲಿ ಇರುವ ನನ್ನ ತಂದೆಯಾದ ಪಾಂಡು ರಾಯನು ಕಳುಹಿಸಿದ ಕಾರಣ, ನನ್ನ ಬಳಿಗೆ ನಾರದ ಮುನೀಂದ್ರನು ಬಂದು, ಈ ಓಲಗದ ಚಾವಡಿಯಲ್ಲಿ ಎಲ್ಲರ ಮುಂದೆಯೂ—ರಾಜಸೂಯ ಯಾಗವನ್ನು ಮಾಡಿ, ನಿಮ್ಮ ತಂದೆಗೆ ಸಂತೋಷ ಮಾಡೆಂದು ಹೇಳಿದನು. ನನಗೆ ಅಂಥಾ ಶಕ್ತಿಯು ಇರುವದೆಂದು ತಿಳಿದು ಹೇಳಿದನೋ? ತಿಳಿಯದೆ ಹೇಳಿದನೋ? ನಾನು ಅರಿಯೆನು. ಸತ್ಯ ಸಂಕಲ್ಪನಾದ ನೀನು ನನ್ನ ಹೃದಯದಲ್ಲಿ ಇದ್ದು, ಪ್ರೇರಿಸಿದ್ದರಿಂದ, ನಾನು ಆ ಕ್ರತುವನ್ನು ಮಾಡುತ್ತೇನೆಂದು ಒಪ್ಪಿ ಕೊಂಡೆನು. ಅದಕ್ಕೋಸ್ಕರ ನಿನ್ನನ್ನು ಬೇಗ ಕರಿಸಿ

ದೆನು. ಈಗ ಅದಕ್ಕೆ ನನಗೆ ಏನು ಅಪ್ಪಣೆಯನ್ನು ಕೊಡುತ್ತೀ? ಎಂದು ಕೇಳಿದನು.

ಆಗ ಕೃಷ್ಣನು ಧರ್ಮರಾಯನನ್ನು ಕುರಿತು—ಹಗೆಗಳನ್ನು ಮರ್ದಿಸುವ ನಿನ್ನ ತಮ್ಮಂದಿರ ಸಹಾಯದಿಂದಲೂ ನಿನ್ನ ಸತ್ಯದಿಂದಲೂ ಘನವಾದ ರಾಜಸೂಯ ಯಾಗವನ್ನು ಮಾಡುವದಕ್ಕೆ ನೀನೇ ತಕ್ಕವನಲ್ಲದೆ ಮತ್ತೊಬ್ಬನೂ ಇಲ್ಲ. ಆದರೆ ಮೊದಲು ಪರಶುರಾಮನಿಂದ ಈ ಭೂಮಿಯು ಕ್ಷತ್ರಿಯರೆಲ್ಲಾ ಹಾಳಾದ ಕಾಲದಲ್ಲಿ, ಯದು ವಂಶವೂ ಇಕ್ಷ್ವಾಕು ವಂಶವೂ ಈ ಎರಡೇ ಉಳಿದವು. ಇವುಗಳಲ್ಲಿ ನೂರೊಂದು ಕುಲಗಳು ಹೆಚ್ಚಾದವು. ಮತ್ತು ಯಯಾತಿಯು ಮಕ್ಕಳಾದ ಯದು ಭೋಜರ ವಂಶಗಳಲ್ಲಿ ಹನ್ನೊಂದು ಕುಲಗಳು ಆದವು. ಈ ಕ್ಷತ್ರಿಯ ಕುಲದವರನ್ನೆಲ್ಲಾ ಜೈಸಿದಂಥ ಜರಾಸಂಧನೆಂಬ ಒಬ್ಬ ಅರಸು ಇದ್ಧಾನೆ. ಅವನ ಸಾಮರ್ಥ್ಯವನ್ನು ಹೇಳುತ್ತೇನೆ, ಕೇಳು. ಆತನಿಗೆ ಬಹಳ ಗರ್ವಿಷ್ಠನಾದ, ಬಹಳ ಬಲಿಷ್ಠನಾದ ಚೇದಿ ದೇಶಾಧಿಪತಿಯಾದ ಶಿಶುಪಾಲನೆಂಬ ಮಹಾ ವೀರನು ದಳಪತಿಯಾಗಿ, ಎಡೆ ಬಿಡದೆ ಆತನನ್ನು ಓಲಗಿಸುತ್ತಿರುವನು. ಮತ್ತು ಆಯುಧಗಳಿಂದ ಹತರಾಗದಂಥ ರಾಕ್ಷಸರ ಮಾಯೆಯುಳ್ಳಂಥ ಹಂಸನೂ, ಡಿಬಿಕನೂ ಪರಮ ಸ್ನೇಹಿತರಾಗಿ, ಮಂತ್ರಿಗಳಾಗಿ, ಅವನನ್ನು ಸೇವಿಸುವರು. ಮತ್ತು ಕೌಶಿಕ, ಚಿತ್ರಸೇನನು ಎಂಬ ಇಬ್ಬರು ಅರಸುಗಳು ಮಹಾ ಸೇನೆಗಳಿಂದ ಕೂಡಿಕೊಂಡು, ಆತನಿಗೆ ಎಡ ಬಲದ ತೋಳುಗಳ ಹಾಗೆ ಇರುವರು. ಮತ್ತು ಮಹಾ ಬಲಪರಾಕ್ರಮಿಯಾದಂಥ ಪ್ರಾಗ್ಜ್ಯೋತಿಷ ನಗರದ ಒಡೆಯನಾದ ನಿನ್ನ ತಂದೆಗೆ ಸ್ನೇಹಿತನಾಗಿಯೂ ನಿನಗೆ ಬೇಕಾದವನಾಗಿಯೂ ಇರುವ ಭಗದತ್ತನು ಕೂಡ ಭಯದಿಂದ ಆತನನ್ನು ಓಲೈಸುತ್ತಿರುವನು. ಅಂಗ, ವಂಗ, ಮಹೇಂದ್ರ, ಕಿರಾತ ಪತಿಗಳು, ಪೌಂಡ್ರಕ, ವಾಸುದೇವನು, ದಕ್ಷಿಣ ದೇಶಾಧಿಪತಿಗಳಾದ ಪುರಜಿತ್ತನು, ಕರೂಶನು, ಕಲಭನು, ನಕುಲನು, ಕರುಷಣನು, ಸೂಪಹಿತನು, ಮಣಿದತ್ತನು, ಚಕ್ರನು, ಶಾಲೇಯನು, ಸರ್ವಪಾಂಚಾಲರು, ಶೂರಸೇನ, ಪುಷ್ಕರ, ಪುಳಿಂದ, ಕಳಿಂಗ, ಕುಂತಳ, ಮತ್ಸ್ಯ, ಆಂಧ್ರದೇಶಗಳ ಅರಸರು, ಇವರೆಲ್ಲಾ ಆತನ ಭಯದಿಂದ ತಮ್ಮ ತಮ್ಮ ದೇಶಗಳನ್ನು ಬಿಟ್ಟು, ಓಲಗಿಸುತ್ತಿರುವರು.

ಇನ್ನೊಂದು ವಿಶೇಷವನ್ನು ಕೇಳು. ದುಷ್ಟನಾದ ನನ್ನ ಸೋದರ ಮಾವನಾದ ಕಂಸನು ತನ್ನ ತಂದೆಯಾದ ಉಗ್ರಸೇನನಿಗೂ ತನ್ನ ತಾಯಿಯಾದ ದೇವಕಿಗೂ, ನನ್ನ ತಂದೆಯಾದ ವಸುದೇವನಿಗೂ, ನಿರ್ಬಂಧದಲ್ಲಿ ಇಟ್ಟು, ಬಹಳ

ತೊಂದರೆಯನ್ನು ಪಡಿಸುತ್ತಾ, ಲೋಕಕ್ಕೆ ಒಂದು ಮುಳ್ಳಾಗಿದ್ದದರಿಂದ, ಅವನನ್ನು ನಾನು ಕೊಂದು ಹಾಕಿದೆನು. ಅವನು ಆ ಜರಾಸಂಧನಿಗೆ ಅಳಿಯನಾದ್ದರಿಂದ, ತನ್ನ ಹೆಣ್ಣು ಮಕ್ಕಳ ದುಃಖವನ್ನು ಕೇಳಿ, ರೌದ್ರಾಕಾರನಾಗಿ, ನನಗೆ ಬಹಳ ಉಪದ್ರಗಳನ್ನು ಮಾಡಲಾರಂಭಿಸಿ, ಹಂಸ, ಡಿಬಿಕರು, ಮೊದಲಾದ ಶೂರರೊಡನೆ ಕೂಡಿ, ಲೆಖ್ಖವಿಲ್ಲದ ಸೇನೆಯನ್ನು ಕರಕೊಂಡು, ನನ್ನ ಪಟ್ಟಣವಾದ ಮಥುರೆಗೆ ಬಂದು, ಮುತ್ತಿಗೆ ಹಾಕಿದನು. ನಾವುನ್ನೂ ಮಹಾ ವೀರರಾದ ಯದು, ವೃಷ್ಣಿ, ಭೋಜ, ಅಂಧಕ ಸೈನ್ಯದೊಡನೆ ಹೊರಟು, ಜಗಳವನ್ನು ಮಾಡುತ್ತಾ, ಆ ಜರಾಸಂಧನು ನನ್ನಿಂದ ಸಾಯುವವನಲ್ಲವೆಂದು ತಿಳಿದು, ಸಹಾಯ ಹೀನನಾಗ ಮಾಡ ಬೇಕೆಂದು ನೆನೆದು, ಉಪಾಯದಿಂದ ಹುಯ್ಲಲ್ಲಿ ಹಂಸನು ಹತನಾದನೆಂದು ಡಿಬಿಕನಿಗೆ ತಿಳಿಯ ಮಾಡಿಸಿದೆನು. ಆ ಮಾತು ಕೇಳಿ, ಅವನು ದುಃಖ ಪಟ್ಟು—ಹಂಸನಿಲ್ಲದೆ ನಾನು ಇರ ಬಾರದೆಂದು, ಕಡಲಲ್ಲಿ ಬಿದ್ದು, ಕಾಲನ ಮನೆಗೆ ಹೋದನು. ಆ ಸುದ್ದಿಯನ್ನು ಹಂಸನು ಕೇಳಿ, ಹೆಚ್ಚಾದ ತಮ್ಮನ ಮೇಲಣ ಸ್ನೇಹದಿಂದ ವಿಷವನ್ನು ಕುಡಿದು, ಸತ್ತನು. ಆ ಮೇಲೆ ಜರಾಸಂಧನು ಸಹಾಯ ಹೀನನಾಗಿ, ಮುತ್ತಿಗೆಯನ್ನು ತೆಗೆದು, ತನ್ನ ಪಟ್ಟಣಕ್ಕೆ ಹೋದನು. ನಾವು ಆತನ ಭಯದಿಂದ ಮಥುರಾ ಪಟ್ಟಣವನ್ನು ಬಿಟ್ಟು, ಕಡಲ ನಡುವೆ ದ್ವಾರಕೆ ಎಂಬ ದುರ್ಗವನ್ನು ಮಾಡಿ ಕೊಂಡು, ಅಲ್ಲಿ ಇರುತ್ತೇವೆ.

ಮತ್ತು ಆ ಜರಾಸಂಧನ ಕೆಟ್ಟ ನಡತೆಗಳೇನಂದರೆ—ಮಹಾ ಪಾಪಾತ್ಮನಾಗಿ, ಅನೇಕರಾದ ಅರಸು ಮಕ್ಕಳನ್ನು ಹಿಡಿದು ಕೊಂಡು ಬಂದು, ಗಿರಿವ್ರಜವೆಂಬ ಪುರದಲ್ಲಿ ಶೆರೇ ಹಾಕಿ, ಪಾಪಕ್ಕೆ ಹೆದರದೆ, ತಾನು ಭೈರವ ಪೂಜೆಯನ್ನು ಮಾಡುತ್ತಾ, ದಿನ ಚರಿ ಒಂದೊಂದು ನರ ಬಲಿಯನ್ನು ಕೊಡುತ್ತಾ ಇದ್ದಾನೆ. ಅಂಥಾ ಕ್ರೂರ ಕೆಲಸವನ್ನು ಮಾಡುವ ಆ ಕೆಟ್ಟ ಜರಾಸಂಧನೊಬ್ಬನನ್ನು ಮಾತ್ರ ನೀನು ಯುದ್ಧದಲ್ಲಿ ಕೊಂದು ಹಾಕಿದರೆ, ಸಮಸ್ತ ಸಾಂಬ್ರಾಜ್ಯವು ನಿನ್ನನ್ನು ಶೇರುವದು; ರಾಜಸೂಯ ಯಾಗವನ್ನು ನೀನು ತಡೆ ಇಲ್ಲದ ಹಾಗೆ ಮಾಡ ಕೂಡುವದು. ಆದರೆ ಆ ಮಗಧೇಶನಾದ ಜರಾಸಂಧನನ್ನು ಯುದ್ಧದಲ್ಲಿ ಆಯುಧಗಳಿಂದ ಜೈಸದ ಹಾಗೆ ಆತನಿಗೆ ಈಶ್ವರನ ವರ ಉಂಟು. ಆದಾಗ್ಯೂ ಬಲಿಷ್ಠನಾದ ನಿನ್ನ ತಮ್ಮನಾದ ಈ ಭೀಮಸೇನನು ಮಲ್ಲ ಯುದ್ಧವನ್ನು ಮಾಡಿ, ಆಯಾಸವಿಲ್ಲದೆ ಅವನನ್ನು ಕೊಂದು ಹಾಕುವನು. ರಕ್ಷಣೆಯಿಂದ ಭಗೀರಥನೂ, ಸಹಾಯ ಸಂಪತ್ತಿನಿಂದ ಯುವನಾಶ್ವನೂ, ಬಲದಿಂದ ಭರತನೂ, ತಪಸ್ಸಿನಿಂದ ಕಾರ್ತವೀರ್ಯನೂ, ಬುದ್ಧಿಯಿಂದ ಮರುತ್ತನೂ, ಮೊ

ದಲು ಸಕಲ ಸಾಂಬ್ರಾಜ್ಯವನ್ನು ಪಡೆದರು. ಈಗ ಅವಷ್ಟು ನಿನಗಿರುವದರಿಂದ, ಆ ದುರಾತ್ಮನು ಎಷ್ಟು ಬಲಿಷ್ಠನಾದರೂ, ಎಂಥಾ ಶ್ರೇಷ್ಠನಾದರೂ, ಅವನ ಪಾಪಕರ್ಮಗಳಿಂದ ಅವನ ಐಶ್ವರ್ಯವೆಲ್ಲಾ ಮಿಂಚಿನ ಹಾಗೆ ಹಾರಿ ಹೋಗುವದು. ಅವನನ್ನು ಜೈಸುವದು ನಿನಗೆ ಸುಲಭವಾಗಿರುವದೆಂದು, ಹೇಳಿದನು.

ಆ ಸಮಯದಲ್ಲಿ ಆ ಮಾತನ್ನು ಕೇಳಿ, ಭೀಮಸೇನನು ಧರ್ಮರಾಯನೊಡನೆ ಹೀಗಂದನು—ಪ್ರಪಂಚದಲ್ಲಿ ಎಷ್ಟು ಅಧಿಕನಾದರೂ ಒಂದು ಕೆಲಸಕ್ಕೆ ಉದ್ಯೋಗಿಸಿ, ಮಾಡದೆ ಬಿಟ್ಟರೆ, ಅವನು ಐಶ್ವರ್ಯ ಕೀರ್ತಿಗಳನ್ನು ಪಡೆಯಲಾರನು. ಹೀನನಾದರೂ ಪ್ರಾರಂಭಿಸಿದ ಕೆಲಸವನ್ನು, ಎಷ್ಟು ತಡೆ ಬಂದಾಗ್ಯೂ, ಚಪಲ ಬುದ್ಧಿಯಿಂದ ಬಿಡದೆ, ಪೂರೈಸಿ ಮಾಡಿದರೆ, ಎಂಥಾ ಬಲಿಷ್ಠರನ್ನೂ ಜೈಸುವನು. ಅಧಿಕ ಪರಾಕ್ರಮಿಯ ಸಂಗಡ ಜಗಳವನ್ನು ಮಾಡಿ ಸೋತರೂ, ಹೊಗಳುಂಟು. ಕೀಳನನ್ನು ಜೈಸಿದಾಗ್ಯೂ ಹೊಗಳಿಲ್ಲ. ಆದ್ದರಿಂದ ಈ ಕೃಷ್ಣನ ಕರುಣೆಯಿಂದಲೂ, ಅರ್ಜುನನ ಸಹಾಯದಿಂದಲೂ, ನಿನ್ನ ಆಶೀರ್ವಾದದಿಂದಲೂ, ಜಗದ್ರೋಹಿಯಾದ ಜರಾಸಂಧನನ್ನು ಜಗಳದಲ್ಲಿ ಜೈಸಲಾಪೆನು. ಮತ್ತು ಆಹವನೀಯ, ಗಾರ್ಹಪತ್ಯ, ದಾಕ್ಷಿಣಾತ್ಯಗಳೆಂಬ ಮೂರು ಅಗ್ನಿಗಳೋಪಾದಿಯಲ್ಲಿ ನಾವು ಮೂರು ಜನವು ನಿನ್ನ ಮಹಾ ಯಜ್ಞದ ಕೆಲಸವನ್ನು ವಿಘ್ನವಿಲ್ಲದ ಹಾಗೆ ನಡಿಸುವೆವು. ಈ ಜರಾಸಂಧನೆಂಬ ಪಶುವನ್ನು ನನ್ನ ಭುಜ ಬಲವೆಂಬ ಬೆಂಕಿಗೆ ಆಹುತಿ ಮಾಡುವೆನು, ಎಂದು ಹೇಳಿದನು.

ಆ ಬಳಿಕ ಅರ್ಜುನನು—ಓ ರಾಜೇಂದ್ರನೇ, ನೀನು ಎಲ್ಲಾ ಅರಸುಗಳನ್ನು ಜೈಸು! ನಿನ್ನ ಹೆಸರು ಪ್ರಸಿದ್ಧಿ ಆಗುವ ಹಾಗೆ ರಾಜ ಸೂಯವನ್ನು ಮಾಡು! ನನ್ನ ಭುಜ ವೀರ್ಯಕ್ಕೆ ತಕ್ಕ ಹಾಗೆ ಉಂಟಾಗಿರುವ ಈ ಗಾಂಡೀವವೆಂಬ ಬಿಲ್ಲೂ, ಅಕ್ಷಯ ಬಾಣವುಳ್ಳ ಬತ್ತಳಿಕೆಯೂ, ದಿವ್ಯ ಬಾಣಗಳೂ, ದುರ್ಜಯವಾದ ರಥಾಶ್ವಗಳೂ, ಈ ಓಲಗದ ಚಾವಡಿಯೂ ಸಾರ್ಥಕವಾಗಲಿ! ಮತ್ತು ಪರಾಕ್ರಮಿಯಾದವನಿಗೆ ಒಳ್ಳೇ ಕುಲವೂ ರೂಪೂ ಗುಣವೂ ದ್ರವ್ಯವೂ ಉಂಟಾದರೆ, ಪ್ರಕಾಶಿಸುವದು. ಹೇಡಿಗೆ ಏನು ದೊರಕಿದರೂ ವ್ಯರ್ಥವಾಗುವದು. ಈ ರಾಜಸೂಯ ನಿಮಿತ್ತವಾಗಿ ಪರಾಕ್ರಮದಿಂದ ಮಗಧನನ್ನು ಮರ್ದಿಸಿ, ಶೆರೆಯಲ್ಲಿರುವ ಅರಸು ಮಕ್ಕಳನ್ನು ಕಾಪಾಡಿದರೆ, ಅದಕ್ಕಿಂತ ಹೆಚ್ಚಾದ ಹೊಗಳೂ ಧರ್ಮವೂ ಏನಿರುವದು? ಎಂದು ಹೇಳಿದನು.

ಹೀಗೆ ಶೌರ್ಯ ವಚನಗಳನ್ನು ನುಡಿದ ನರ ವೃಕೋದರರ ನುಡಿಗೆ ನಾರಾಯಣನು ಸಂತೋಷ ಪಟ್ಟು—ಅಯ್ಯಾ, ಪ್ರಪಂಚದಲ್ಲಿ ಮನುಷ್ಯನಿಗೆ ಬುದ್ಧಿಯೂ

ಧೈರ್ಯವೂ ಇದ್ದರೆ, ಪರೋಪಕಾರದಲ್ಲಿ ಮನವನ್ನಿಟ್ಟು, ಪರಾಕ್ರಮವನ್ನು ಮಾಡಿದರೆ, ಅದಕ್ಕೆ ದೈವವು ಸಹಾಯವಾಗುವದು. ಆದ್ದರಿಂದ ನಾವು ಮೂರು ಮಂದಿಯೂ ವಿನಯದಿಂದಲೂ ಪರಾಕ್ರಮದಿಂದಲೂ ಸಾಹಸದಿಂದಲೂ ಜರಾಸಂಧನನ್ನು ತಗಲಿ, ಹೊಳೆಯು ತನ್ನ ವೇಗದಿಂದ ಮರವನ್ನು ಬೇರು ಸಹಿತ ಕೀಳುವ ಹಾಗೆ ಅವನನ್ನು ನಿರ್ಮೂಲನ ಮಾಡುವೆವು, ಅಂದನು. ಆಗ ಧರ್ಮರಾಯನು,—ಎಲೈ, ದನುಜ ಮರ್ದನನೇ, ನಿನಗೆ ಹಗೆಯಾದರೂ, ನಿನ್ನೊಡನೆ ಜಗಳವನ್ನು ಮಾಡಿ, ಬೆಂಕಿಯಲ್ಲಿ ಬಿದ್ದ ಮಿಡತೆಯ ಹಾಗೆ ಸುಟ್ಟು ಹೋಗದೆ ಬದುಕಿ ಸುಖದಿಂದ ಇರುವದಕ್ಕೆ, ಅಂಥಾ ಭುಜ ವಿಕ್ರಮವನ್ನು ಜರಾಸಂಧನು ಹ್ಯಾಗೆ ಪಡೆದನು? ಅವನ ಹುಟ್ಟುವಿಕೆ ಹ್ಯಾಗೆ? ನನಗೆ ಹೇಳ ಬೇಕೆಂದು ಕೇಳಲು; ಮುರಾರಿಯು,—ಕೇಳಯ್ಯಾ, ಯುಧಿಷ್ಠಿರನೇ, ಬೃಹದ್ರಥನೆಂಬ ಅವನ ತಂದೆಯು ಮಗಧ ದೇಶಕ್ಕೆ ಒಡೆಯನಾಗಿಯೂ, ಬಹು ಘಟ್ಟಿಗನಾಗಿಯೂ, ಮೂರಕ್ಷೋಹಿಣೀ ಬಲವುಳ್ಳವನಾಗಿಯೂ, ಶೀಮೆಯನ್ನು ಕಾಪಾಡುತ್ತಿದ್ದು, ಕಾಶೀ ರಾಜನ ಕುವರಿಗಳಾದ ಇಬ್ಬರು ಮಕ್ಕಳನ್ನು ಮದುವೆಯಾಗಿ, ಅತ್ಯಂತ ಸೌಖ್ಯವನ್ನು ಅನುಭವಿಸುತ್ತಾ, ಮಕ್ಕಳಿಲ್ಲದೆ, ಪುತ್ರಕಾಮೇಷ್ಟಿಯನ್ನು ಮಾಡಿಯೂ ಪಡೆಯದೆ, ಸಂತತಿ ಇಲ್ಲದ ಸಂಪತ್ತು ಹೆಣಕ್ಕೆ ತೊಡಿಸಿದ ಚಿನ್ನದ ಒಡವೆಯಂತೆ ವ್ಯರ್ಥವೆಂದು ಎಣಿಸಿ, ಸಕಲ ಸಂಪತ್ತುಗಳನ್ನು ಬಿಟ್ಟು ಬಿಟ್ಟು, ಇಬ್ಬರು ಹೆಂಡರೊಡನೆ ಕೂಡಿ, ಕಾಡಿಗೆ ಹೋಗಿ, ಅಲ್ಲಿ ಮೋಕ್ಷದ ಅಪೇಕ್ಷೆಯಿಂದ, ಒಂದು ಮರದ ಕೆಳಗೆ ಉರಿಯುವ ಬೆಂಕಿಯಂತೆ ತೇಜೋವಂತನಾಗಿ, ತಪಸ್ಸು ಮಾಡುತ್ತಿರುವ ಗೌತಮ ಕುಲದಲ್ಲಿ ಹುಟ್ಟಿದ ಚಂಡಕೌಶಿಕನೆಂಬ ಮುನಿಯನ್ನು ನೋಡಿ, ಸಂತೋಷ ಪಟ್ಟು, ಬಹಳ ಭಯ ಭಕ್ತಿಯಿಂದ ಆತನನ್ನು ಅನೇಕ ದಿವಸಗಳ ಮಟ್ಟಿಗೂ, ಆಶ್ರೈಸಿ, ಸೇವೆಯನ್ನು ಮಾಡುತ್ತಾ ಬಂದನು. ಆ ಮುನೀಂದ್ರನು ರಾಯನ ಭಕ್ತಿಗೆ ಮೆಚ್ಚಿ,—ನಿನಗೆ ಬೇಕಾದದ್ದನ್ನ ಬೇಡಿಕೋ, ಕೊಡುವೆನೆಂದು ಹೇಳಲು; ಬೃಹದ್ರಥರಾಯನು ಸಾಷ್ಟಾಂಗ ವಂದನೆಯನ್ನು ಮಾಡಿ—ಜೀಯಾ, ಮುನೀಂದ್ರನೇ, ನನಗೆ ಸಮಸ್ತ ಸಂಪತ್ತುಗಳು ಉಂಟಾಗಿ, ಸಂತಾನದ ಸಮೃದ್ಧಿಯು ಇಲ್ಲದ್ದರಿಂದ ಎಲ್ಲಾ ವ್ಯರ್ಥವೆಂದು ತಿಳಿದು, ತಪಸ್ಸು ಮಾಡ ಬೇಕೆಂದು ಇಲ್ಲಿಗೆ ಬಂದೆನು. ನೀವು ನನಗೆ ಕನಿಕರದಿಂದ ಮಕ್ಕಳಾಗುವಂತೆ ಅನುಗ್ರಹಿಸಿದರೆ, ಕೃತಾರ್ಥನು ಆಗುವೆನೆಂದು, ಬೇಡಿ ಕೊಂಡನು.

ಆಗ ಮುನೀಂದ್ರನ ವರದಿಂದ ಅವನಿಗೆ ಒಬ್ಬ ಮಗನು ಹುಟ್ಟಲು; ಅವ

ನಿಗೆ ಜರಾಸಂಧನೆಂಬ ಹೆಸರಿಕ್ಕಿ, ಅವನನ್ನು ಬಹು ಪ್ರೀತಿಯಿಂದ ಕಾಪಾಡು ತ್ತಾ ಬಂದನು. ಅವನು ಬಿದಿಗೇ ಚಂದ್ರನಂತೆ ದಿನ ದಿನಕ್ಕೆ ಹೆಚ್ಚಾಗಿ ಬೆಳೆ ಯುತ್ತಾ, ಬೇಸಿಗೆಯ ನಡು ಹಗಲ ಸೂರ್ಯನಂತೆ ತೇಜಃ ಪುಂಜನಾಗಿರಲು; ಚಂಡಕೌಶಿಕ ಮುನಿಯು ಆ ಪಟ್ಟಣಕ್ಕೆ ಬಂದು, ರಾಯನಿಂದ ಪೂಜಿತನಾ ಗಿ, ರಾಕ್ಷಸಿಯು ನಿನಗೆ ಮಾಡಿದ ಉಪಕಾರವನ್ನು ಜ್ಞಾನ ದೃಷ್ಟಿಯಿಂದ ತಿಳಿ ದೆನು. ಈ ಕುಮಾರನು ಶಿವನನ್ನು ಪ್ರತ್ಯಕ್ಷ ಮಾಡಿ ಕೊಂಡು, ಅಸ್ತ್ರ ಶಸ್ತ್ರ ಗಳಿಂದ ಹತನಾಗದಂತೆ, ವರವನ್ನು ಹೊಂದುವನು. ಇವನೊಡನೆ ಜಗಳಕ್ಕೆ ಬಂದ ಹಗೆಗಳು ಬೆಂಕಿಯಲ್ಲಿ ಬಿದ್ದ ಮಿಡತೆಗಳ ಹಾಗೆ ನಾಶವಾಗುವರು. ಗರುಡನ ಗತಿಯನ್ನು ಮಿಕ್ಕ ಹಕ್ಕಿಗಳು ಜೈಸದ ಹಾಗೆ, ದೇಶದ ಅರಸುಗ ಳೆಲ್ಲಾ ಇವನ ಶೌರ್ಯವನ್ನು ಗೆಲ್ಲಲಾರರು. ತೇಜೋವಂತರಲ್ಲಿ ಸೂರ್ಯನು ಹ್ಯಾ ಗೆ ಹೆಚ್ಚುವನೋ, ಹಾಗೆ ಅರಸುಗಳಲ್ಲಿ ಇವನು ಹೆಚ್ಚಾಗುವನು. ಕೀಳು ಹೊ ಳೆಗಳು ಬೆಟ್ಟಗಳನ್ನು ಹ್ಯಾಗೆ ಭೇದಿಸಲಾರವೋ, ಹಾಗೆ ಎಲ್ಲಾ ದಿವ್ಯಾಯುಧ ಗಳು ಇವನ ಒಡಲನ್ನು ಭೇದಿಸಲಾರವು. ಎಲ್ಲಾ ಹೊಳೆಗಳು ಕಡಲಿನಲ್ಲಿ ಶೇ ರುವ ಹಾಗೆ, ಪರ ರಾಯರ ಸಂಪತ್ತುಗಳೆಲ್ಲಾ ಇವನಲ್ಲಿ ಶೇರುವವು ಎಂಬ ದಾಗಿ, ಮುಂದೆ ಬರುವ ಜರಾಸಂಧನ ಅಭಿವೃದ್ಧಿಯನ್ನು ಹೇಳಿ, ಹೊರಟು ಹೋದನು. ತರುವಾಯ ಬೃಹದ್ರಥರಾಯನು ಕೆಲವು ಕಾಲ ರಾಜ್ಯ ಭಾರ ವನ್ನು ಮಾಡಿ, ಪ್ರಾಯದವನಾದ ಮಗನಿಗೆ ಪಟ್ಟಾಭಿಷೇಕವನ್ನು ಮಾಡಿ, ತಾ ನು ರಾಣಿಗಳೊಡನೆ ತಪೋ ವನಕ್ಕೆ ಹೋದನು.

ಜರಾಸಂಧನು, ಮುನಿ ಅಪ್ಪಣೆ ಕೊಟ್ಟ ಹಾಗೆ, ಶಿವನನ್ನು ಪೂಜಿಸಿ, ಮೆ ಚ್ಚಿಸಿ, ವರಗಳನ್ನು ಪಡೆದು, ಪರ ಚಕ್ರವರ್ತಿಗಳನ್ನೆಲ್ಲಾ ಜೈಸಿ, ಮಹಾ ದು ಷ್ಟನಾಗಿದ್ಧಾನೆ. ಇವನಿಗೆ ಸಹಾಯರಾಗಿದ್ದ ಹಂಸ ಡಿಬಿಕರನ್ನು ನಾನು ಭಿನ್ನ ತಂತ್ರದಿಂದ ಕೊಂದು ಹಾಕಿದ ಕಾರಣ, ಈಗ ಆ ದುಷ್ಟನು ರೆಕ್ಕೆಗಳಿಲ್ಲದ ಹ ಕ್ಕಿಯ ಹಾಗಿದ್ಧಾನೆ. ಅವನು ಮಹಾ ಪಾಪಾತ್ಮನಾಗಿರುವದರಿಂದ, ಸತ್ಯವಂತ ನಾದ ನಿನಗೆ ಅವನನ್ನು ಜೈಸುವದು ಅಗಾಧವಲ್ಲ. ಈ ಅರ್ಜುನನ ಅಸ್ತ್ರ ಬಲ ವೂ ಭೀಮನ ಭುಜ ಬಲವೂ ನನ್ನ ನೀತಿಯ ಬಲವೂ ನಿನಗಿರುವಲ್ಲಿ, ಯಾವ ಕಾರ್ಯ ತಾನೇ ಅಸಾಧ್ಯವಾಗುವದು? ನನ್ನ ಮಾತಿನಲ್ಲಿ ನಂಬಿಕೆಯೂ ನನ್ನ ಭರವಸವೂ ನಿನಗೆ ಇದ್ದರೆ, ನನ್ನೊಡನೆ ಭೀಮಾರ್ಜುನರನ್ನು ಕಳುಹಿಸು, ಎಂದು ಹೇಳಿದನು. ಆಗ ಧರ್ಮರಾಯನು—ಎಲೈ, ಕೃಷ್ಣನೇ, ನನಗೆ ಭೀ ಮಾರ್ಜುನರಿಬ್ಬರು ಎರಡು ಕಣ್ಣುಗಳು; ನೀನು ನನ್ನ ಹೃದಯವು. ಈ

ಮೂರು ಮಂದಿಯನ್ನು ಬಿಟ್ಟು ಹ್ಯಾಗಿರಲಿ? ಎಂದು, ಇದೊಂದು ಆಲೋಚನೆಯೇ ಹೊರ್ತು, ಇನ್ನೊಂದು ಯೋಚನೆಯೂ ಇಲ್ಲ. ನೀನು ಸಹಾಯವಾಗಿರುವಲ್ಲಿ ಭೀಮಸೇನನು ಆ ಜರಾಸಂಧನನ್ನು ಜೈಸುವದು ಅತಿಶಯವೇನು? ಎಂದು ಹೇಳಿ, ಭೀಮಾರ್ಜುನರನ್ನು ಕರೆದು, ಕೃಷ್ಣನ ಕೈಯಲ್ಲಿ ಕೊಟ್ಟನು. ಆಗ ಇವರು ಮೂರು ಮಂದಿಯು ಯುಧಿಷ್ಠಿರನಿಗೆ ಅಡ್ಡ ಬಿದ್ದು, ಆತನ ಹರಕೆಯನ್ನು ಕೈ ಕೊಂಡು, ಹೊರಟು, ಬಹಳವಾದ ಬೆಟ್ಟ ಗುಡ್ಡಗಳನ್ನೂ, ಎಡೆ ಬಿಡದೆ ವಟ್ಟವಾಗಿ ಬೆಳೆದಿರುವ ಕಾಡುಗಳನ್ನೂ, ಹರಿಯುವ ಹೊಳೆ ಹಳ್ಳ ಕೊಳ್ಳಗಳನ್ನೂ ದಾಟಿ, ಸರಯೂ ನದಿಯನ್ನು ಹಾದು, ಪೂರ್ವ ಕೋಸಲ ಮಿಥಿಲಾ ದೇಶಗಳನ್ನು ಕಳೆದು, ಗಂಗಾ ನದಿಯನ್ನು ಅತಿಕ್ರಮಿಸಿ, ನಿತ್ಯ ಪ್ರಯಾಣಗಳಿಂದ ಮಗಧ ದೇಶವನ್ನು ಹೊಕ್ಕು, ಗೋರಥವೆಂಬ ಬೆಟ್ಟವನ್ನು ಏರಿ, ಗಿರಿವ್ರಜ ಪರ್ವತವನ್ನು ನೋಡಿ, ಅದರ ಅಪೂರ್ವವಾದ ಚಂದಕ್ಕೂ ಸಮೃದ್ಧಿಗೂ ಆಶ್ಚರ್ಯ ಪಟ್ಟು, ಭೀಮಾರ್ಜುನರೊಡನೆ ಕೃಷ್ಣನು—ಗೋರಥವೂ ಋಷಭವೂ ನೈಹಾರವೂ ಋಷಿಗಿರಿಯೂ ಚೈತ್ರಕಾದ್ರಿಯೂ ಎಂಬ ಐದು ಪರ್ವತಗಳು ಭಟರ ಹಾಗೆ ಈ ಪರ್ವತಕ್ಕೆ ಸುತ್ತಲು ಇರುವದರಿಂದ, ಈ ಪಟ್ಟಣಕ್ಕೆ ಗಿರಿವ್ರಜವೆಂದು ಹೆಸರಾಯಿತು. ಮೊದಲು ಈ ಸ್ಥಳದಲ್ಲಿ ಗೌತಮ ಮಹಾ ಮುನಿಯು ತನ್ನ ತಪೋ ಮಹಿಮೆಯಿಂದ ಹದಿನಾರು ಮಂದಿ ಋಷಿಗಳನ್ನು ಸೃಷ್ಟೀ ಮಾಡಿದನು. ಅವರ ಅನುಗ್ರಹದಿಂದಲೂ ಈ ದುರ್ಗದ ಬಲದಿಂದಲೂ, ಇಲ್ಲಿನ ಅರಸುಗಳನ್ನು ಯಾರು ಗೆಲ್ಲಲಾರರು ಎಂದು ಹೇಳುತ್ತ, ಬಾಗಿಲುಗಳಲ್ಲಿ ಹೊಗದೆ, ಚೈತ್ರ ಗಿರಿಯ ಶಿಖರವನ್ನು ಏರಿ, ಅಲ್ಲಿ ಇದ್ದ ಮೂರು ಭೇರಿಗಳನ್ನು ಕಂಡು—ಮೊದಲು ಮಾಗಧರು ಮಾನುಷಾದವೆಂಬ ಎತ್ತನ್ನು ಕೊಂದು, ಅದರ ಚರ್ಮದಿಂದ ಇವುಗಳನ್ನು ಮಾಡಿ ಇದ್ದಾರೆ. ಇವು ಋಷಿಗಳ ಮಹಿಮೆಯಿಂದ, ಈ ಪಟ್ಟಣಕ್ಕೆ ಹಗೆಗಳಾದವರು ಹೊಕ್ಕರೆ, ತಮ್ಮಿಂದ ತಾವೇ ಶಬ್ದಗಳನ್ನು ಮಾಡುವವು ಎಂದು ತಿಳಿಸಿ, ತರುವಾಯ ಮೂರು ಮಂದಿಯು ತಮ್ಮ ಘಟ್ಟಿಯಾದ ಮುಷ್ಟಿಗಳಿಂದ ಅವುಗಳನ್ನು ಒಡೆದು, ಅಲ್ಲಿನ ಬಾಗಿಲಲ್ಲಿ ಊರೊಳಗೆ ಬಂದು, ಹೂವಾಡಿಗನ ಮನೆಗೂ ಗಂಧಿಗನ ಮನೆಗೂ ನುಗ್ಗಿ, ಬಲಾತ್ಕಾರದಿಂದ ಹೂವಿನ ಮಾಲಿಕೆಗಳನ್ನೂ ಪರಿಮಳ ದ್ರವ್ಯಗಳನ್ನೂ ತೆಗೆದು ಕೊಂಡು, ಅಲಂಕರಿಸಿ ಕೊಂಡು, ರಾಜ ಬೀದಿಯಲ್ಲಿ ಬಂದು, ಯಾವಾಗಲೂ ಬ್ರಾಹ್ಮಣರು ಹೋಗುವದಕ್ಕೆ ಸುಲಭವಾದ ಜರಾಸಂಧನ ಮಂದಿರವೆಂಬ ಗೋವಾಸವನ್ನು, ಸಿಂಹಗಳು ಹಿಮವತ್ಪರ್ವತದ ಗುಹೆಯನ್ನು ಹೊಗುವ ಹಾಗೆ, ಬ್ರಾಹ್ಮಣ ವೇಷಗಳಿಂದ ಹೊಕ್ಕರು.

ಆಗ ಅರ್ಧ ರಾತ್ರಿಯಲ್ಲಿಯಾದರು ಅಭ್ಯಾಗತರಾಗಿ ಬ್ರಾಹ್ಮಣರು ಬಂದರೆ, ಆ ಕ್ಷಣದಲ್ಲಿಯೇ ಎದುರ್ಗೊಂಡು ಹೋಗಿ, ಪೂಜೆಯನ್ನು ಮಾಡುವಂಥ ಪದ್ಧತಿಯನ್ನು ಮಾಡಿರುವ ಜರಾಸಂಧನು ಈ ಮೂರು ಮಂದಿಯನ್ನು ಬ್ರಾಹ್ಮಣರೆಂದೇ ತಿಳಿದು, ಎದುರಾಗಿ ಬಂದು, ಸಂತೋಷದಿಂದ ಪೂಜೆಗಳನ್ನು ಮಾಡಲು; ಅವುಗಳನ್ನು ಕೈ ಕೊಳ್ಳದೆ, ಗರ್ವದಿಂದ ನಿಂತಿರುವವರನ್ನು ನೋಡಿ, ಕಪಟಿಗಳೆಂದು ತಿಳಿದು, ಇವರನ್ನು ಕುರಿತು—ಐಯ್ಯಾ, ನೀವು ಸ್ನಾತಕರಾಗಿದ್ದರೆ, ಬಲ್ಮೆಯಿಂದ ಹೂಗಂಧಗಳನ್ನು ತೆಗೆದು ಕೊಂಡು, ಹೊಗುವದ
೮ ಕ್ಕೆ ಅಟಂಕವಾದ ಬಾಗಿಲಲ್ಲಿ ಬಂದು, ನನಗೆ ಅಪಕಾರವನ್ನು ಮಾಡಿದ್ದಲ್ಲದೆ, ನಾನು ಮಾಡುವ ಪೂಜೆಯನ್ನು ಕೈ ಕೊಳ್ಳದೆ ಇರುವದೇನು? ನೀವು ವೇಷಧಾರಿಗಳಾಗಿರುವಿರಿ. ನಿಮ್ಮಲ್ಲಿ ವೇಷದಿಂದ ಬ್ರಾಹ್ಮಣತ್ವವೂ, ಉದ್ದವಾಗಿಯೂ ದಪ್ಪವಾಗಿಯೂ ಇರುವ ತೋಳುಗಳೂ, ಅಗಲವಾದ ಎದೆಗಳೂ, ರಾಜ ಲಕ್ಷಣಗಳೂ ಉಳ್ಳದ್ದರಿಂದ, ಕ್ಷತ್ರಿಯತ್ವವು ಇರುವ ಹಾಗೆ ತೋರುತ್ತದೆ ಎಂದು ಹೇಳಿದನು. ಅದಕ್ಕೆ ಕೃಷ್ಣನು,—ಎಲೈ, ಅರಸೇ, ನಾವು ಕ್ಷತ್ರಿಯ ಜಾತಿಯ ಸ್ನಾತಕರಾಗಿರುವೆವು. ಮತ್ತು ಆಟಂಕವಾದ ಬಾಗಿಲಲ್ಲಿ ಹೊಗುವದು ಹಗೆಗಳ ಮನೆಗೆ ಬರುವ ಬಾಹು ವೀರ್ಯ ಸಂಪನ್ನರಾದ ಕ್ಷತ್ರಿಯರಿಗೆ ಧರ್ಮವು. ಹೂಗಂಧಗಳಲ್ಲಿ ಲಕ್ಷ್ಮಿ ಇರುವ ಕಾರಣ, ಅವುಗಳನ್ನು ಬಲ್ಮೆಯಿಂದ ತೆಗೆದು ಕೊಂಡೆವು. ನಿನ್ನಲ್ಲಿ ನಮಗೆ ಬೇರೆ ಕೆಲಸವಿರುವದರಿಂದ, ಈಗ ನೀನು ಮಾಡುವ ಪೂಜೆಗಳನ್ನು ಕೈ ಕೊಳ್ಳದೆ ಬಿಟ್ಟೆವು, ಎಂದು ಹೇಳಿದನು.

ಅದನ್ನು ಕೇಳಿ, ಜರಾಸಂಧನು—ನೀವು ನನಗೂ ನಾನು ನಿಮಗೂ, ಎಂದಿಗೂ ದ್ರೋಹಾ ಮಾಡಿದ್ದಿಲ್ಲ. ಸುಮ್ಮನೆ ನಿಮಗೂ ನನಗೂ ಹಗೆತನವು ಹ್ಯಾಗೆ ಆಯಿತು? ಮತ್ತು ನಾನು ದೇವತೆಗಳಿಗೂ ಮುನಿಗಳಿಗೂ ಬ್ರಾಹ್ಮಣರಿಗೂ ಭಕ್ತನಾಗಿ, ಉತ್ತಮವಾದ ಕ್ಷತ್ರಿಯ ಕುಲಾಚಾರ್ಯ[ದವ]ನಾಗಿ ಇದ್ದೇನೆ, ಎಂದು ಹೇಳಿದನು. ಅದಕ್ಕೆ ಕೃಷ್ಣನು—ಐಯ್ಯಾ, ನಾವು ಈಗ, ತನ್ನ ಹೆಚ್ಚಾಗಿ ಬಾಳುವಿಕೆಗೆ ಎಲ್ಲಾ ನೃಪ ಕುಲದವರನ್ನು ಪಾಪ ಬುದ್ಧಿಯಿಂದ ದಿನಚರಿಯಲ್ಲಿಯೂ ಕೊಲ್ಲುವ ದುಷ್ಟನನ್ನು ಕೊಲ್ಲುವದಕ್ಕೆ ಬಂದೆವು. ನೀನು ಬಹಳ ಉತ್ತಮ ಕ್ಷತ್ರಿಯನೆಂದು, ಹೇಳಿ ಕೊಂಡೆಯಲ್ಲ! ನಿನ್ನ ಪ್ರಯೋಜನಕ್ಕೋಸ್ಕರ ಉತ್ತಮರಾದ ಅರಸು ಮಕ್ಕಳನ್ನು ಹಿಡಿದು, ಶೆರೆಯಲ್ಲಿ ಹಾಕಿ, ದಿನವಹಿ ಭೈರವನಿಗೆ ನರ ಬಲಿಯನ್ನು ಕೊಡುವ ನಿನ್ನ ಹಾಗೆ ಹಿಂದೆ ಯಾರಾದರೂ ಅರಸುಗಳು

ಮಾಡಿದರೇ? ಇದಕ್ಕಿಂತಲೂ ಹೆಚ್ಚಾದ ಪಾಪ ಉಂಟೇ? ಈ ಪ್ರಕಾರ ಪಾಪಾಚರಣೆಯಿಂದ ಭೈರವ ಪೂಜೆಯನ್ನು ಮಾಡಿದರೆ, ಸದ್ಗತಿಯನ್ನು ಹೊಂದಲಾರಿ. ಆದಕಾರಣ ನಿನಗೆ ಬುದ್ಧಿ ಇದ್ದರೆ, ನನ್ನ ಮಾತಿನ ಪ್ರಕಾರ ಬೇಗ ಶೆರೆಯಲ್ಲಿ ನೀನು ಇಟ್ಟಿರುವ ಅರಸು ಮಕ್ಕಳನ್ನು ಬಿಟ್ಟು, ಕಳುಹಿಸು. ನಾನು ಕೃಷ್ಣನು. ಇವನು ಭೀಮನು. ಈತನು ಅರ್ಜುನನು. ಇದರ ಮೇಲೂ ನೀನು ಮೂರ್ಖನಾಗಿ ಅರಸುಗಳನ್ನು ಬಿಡದೆ ಇದ್ದರೆ, ಈ ಕ್ಷಣದಲ್ಲಿಯೇ ಈ ಪಾಂಡವರು ನಿನ್ನನ್ನು ಕೊಂದು, ಅವರನ್ನು ಬಿಡಿಸುವರು, ಎಂದು ಹೇಳಿದನು.

ಆ ಮಾತನ್ನು ಕೇಳಿ, ಜರಾಸಂಧನು ಹಸಿದ ಹುಲಿಯಂತೆ ರೌದ್ರಾಕಾರನಾಗಿ—ಎಲೈ, ಕೃಷ್ಣನೇ, ನನ್ನನ್ನು ನೀನು ಮೊದಲು ಕಂಡು ಇಲ್ಲವು. ಕ್ಷತ್ರಿಯನಾಗಿ ಹುಟ್ಟಿದವನಿಗೆ, ಸಕಲ ಅರಸುಗಳನ್ನು ಗೆದ್ದು ಪ್ರಸಿದ್ಧನಾಗುವದು ಧರ್ಮವೇ. ದೇವತಾ ನಿಮಿತ್ಯವಾಗಿ ನಾನು ಹಿಡತಂದು ಇರುವ ಅರಸುಗಳನ್ನು ನಾನು ಬಿಡುವದಿಲ್ಲ. ಸನ್ನದ್ಧರಾಗಿ ನಿಮ್ಮ ಸೇನೆಯೂ ನಮ್ಮ ಸೇನೆಯೂ ಕೂಡಿ, ಜಗಳವನ್ನು ಮಾಡ ಬೇಕೋ? ಇಲ್ಲವೆ ನೀವು ಮೂವರ ಸಂಗಡಾಗಲಿ, ಒಬ್ಬನ ಸಂಗಡಲಾಗಲಿ, ಯುದ್ಧವನ್ನು ಮಾಡ ಬೇಕೋ? ನಿಮಗೆ ಪ್ರೀತಿ ಇದ್ದ ಮೇರೆ ಯುದ್ಧಕ್ಕೆ ಬರುವೆನು, ಎಂದು ಹೇಳಲು; ಕೃಷ್ಣನು ನಕ್ಕು, ಒಬ್ಬನೊಡನೆ ಮೂರು ಮಂದಿಯು ಕಾದುವದು ನ್ಯಾಯವಲ್ಲ. ನಾವು ಮೂವರಲ್ಲಿ ನೀನು ಒಬ್ಬನನ್ನು ಅಪೇಕ್ಷಿಸಿದರೆ, ಅವನು ಮಲ್ಲಯುದ್ಧವನ್ನು ಮಾಡಿ, ನಿನ್ನನ್ನು ಗೆಲ್ಲುವನೆಂದು ಹೇಳಿದನು. ಜರಾಸಂಧನು ಗರ್ವದಿಂದ—ಭೀಮಸೇನನೊಡನೆ ಮಲ್ಲಯುದ್ಧವನ್ನು ಮಾಡುವೆನು ಎಂದು ಹೇಳಿ, ತನ್ನ ಮಗನಾದ ಸಹದೇವನಿಗೆ ತನ್ನ ರಾಜ್ಯದ ಪಟ್ಟಾಭಿಷೇಕವನ್ನು ಮಾಡಿ, ಯುದ್ಧ ರಂಗ ಸ್ಥಳದಲ್ಲಿ ಬಂದು ನಿಂತನು. ಆಗ ಭೀಮಸೇನನು ಬಂದು, ಎದುರಾಗಿ ನಿಂತನು. ಆಗ ಇಬ್ಬರು ತೋಳುಗಳನ್ನು ತಟ್ಟಿ ಕೊಂಡು, ಒಬ್ಬರೊಬ್ಬರು ತಗಲಿ, ಹದಿನೈದು ದಿವಸ ಜಗಳವನ್ನು ಮಾಡುತ್ತಿರುವಲ್ಲಿ, ಭೀಮಸೇನನು ತನ್ನ ತಂದೆಯಾದ ವಾಯುವನ್ನು ನೆನೆದು, ಕೃಷ್ಣನ ಅನುಗ್ರಹದಿಂದ ಬಹು ಸಾಹಸವನ್ನು ಮಾಡಿ, ಜರಾಸಂಧನನ್ನು ಹಿಡಿದು ಕೊಂಡು, ಮೇಲಕ್ಕೆ ಎತ್ತಿ, ಮೂಗಿನಲ್ಲಿಯೂ ಬಾಯಿಯಲ್ಲಿಯೂ ಕಿವಿಗಳ ಕನ್ನಗಳಲ್ಲಿಯೂ ರಕ್ತ ಧಾರೆಗಳು ಸುರಿಯುವ ಹಾಗೆ ಚಕ್ರಾಕಾರವಾಗಿ ತಿರುವಿ, ಭೂಮಿಯಲ್ಲಿ ಬಡಿದು, ಅಂಗಾಂಗಗಳನ್ನು ಮುರಿದು, ಕಾಲುಗಳಿಂದ ಭೂಮಿಯಲ್ಲಿ ಅರೆದು, ಕೊಂದು ಹಾಕಿದನು.

ಆಗ ಕೃಷ್ಣನು ಆತನ ಮಗನಾದ ಸಹದೇವನಿಗೆ ಅಭಯ ದಾನವನ್ನು ಮಾ

ಡಿ, ಜರಾಸಂಧನು ಸೆರೆಯಲ್ಲಿ ಹಾಕಿದ್ದ ಆ ಧೊರೆಗಳನ್ನೆಲ್ಲಾ ಬಿಡಿಸಿ–ನೀವು ಚಕ್ರವರ್ತಿಯಾದ ಧರ್ಮರಾಯನ ರಾಜಸೂಯ ಯಾಗಕ್ಕೆ ನಿಮ್ಮಲ್ಲಿರುವ ವಸ್ತುಗಳನ್ನು ತೆಗೆದು ಕೊಂಡು ಬರುವದೆಂದು ಕಟ್ಟು ಮಾಡಿ, ನಿಮ್ಮ ನಿಮ್ಮ ಪಟ್ಟಣಕ್ಕೆ ಹೋಗಿರಿ ಎಂದು, ಅಪ್ಪಣೆ ಕೊಟ್ಟು, ಕಳುಹಿಸಿದನು. ಆ ಮೇಲೆ ಜರಾಸಂಧನ ಮಗನಾದ ಸಹದೇವನು ಕೊಟ್ಟ ಕೈ ಗಾಣಿಕೆಗಳನ್ನು ತೆಗೆದು ಕೊಂಡು, ಆತನಿಗೂ ಧರ್ಮರಾಯನ ಯಜ್ಞಕ್ಕೆ ಬರುವಂತೆ ಅಪ್ಪಣೆ ಕೊಟ್ಟು, ಆ ಜರಾಸಂಧನ ರಥವನ್ನು ತೆಗೆದು ಕೊಂಡು, ಗರುಡನನ್ನು ನೆನಸಿ, ಕರತರಿಸಿ, ಅವನನ್ನು ಸಾರಥ್ಯದಲ್ಲಿ ನಿಯೋಗಿಸಿ, ಭೀಮಾರ್ಜುನರು ಸಹಿತವಾಗಿ ಇಂದ್ರಪ್ರಸ್ಥಕ್ಕೆ ಬಂದು, ಧರ್ಮರಾಯನನ್ನು ಕಂಡು, ಕೃಷ್ಣನು ಮೂರು ದಿವಸ ಅಲ್ಲಿ ಇದ್ದು, ಧರ್ಮರಾಯನ ಅಪ್ಪಣೆಯನ್ನು ತೆಗೆದು ಕೊಂಡು, ಅಲ್ಲಿಂದ ಹೊರಟು, ದ್ವಾರಕಾ ಪಟ್ಟಣಕ್ಕೆ ಬಂದು, ಜರಾಸಂಧನನ್ನು ಕೊಂದು ಹಾಕಿದ ಸುದ್ದಿಯನ್ನು ತನ್ನವರಿಗೆಲ್ಲಾ ಹೇಳಲು; ಅವರೆಲ್ಲರು ಸಂತೋಷ ಪಟ್ಟರು.

ಇತ್ತಲಾ ಧರ್ಮರಾಯನು ಮೂಡಣ ದಿಕ್ಕಿಗೆ ಭೀಮಸೇನನನ್ನೂ, ಬಡಗಣ ದಿಕ್ಕಿಗೆ ಅರ್ಜುನನನ್ನೂ, ಪಡುವಣ ದಿಕ್ಕಿಗೆ ನಕುಲನನ್ನೂ, ತೆಂಕಣ ದಿಕ್ಕಿಗೆ ಸಹದೇವನನ್ನೂ, ಕಳುಹಿಸಲು; ಆ ನಾಲ್ಕು ಮಂದಿಯೂ ಸಕಲ ಸೇನಾ ಸಮೇತರಾಗಿ, ತಮಗೆ ಕಟ್ಟು ಮಾಡಿದ ದಿಕ್ಕುಗಳಿಗೆ ಹೋಗಿ, ಆಯಾಯ ದಿಕ್ಕಿನ ಅರಸುಗಳನ್ನು ಗೆದ್ದು, ಅನೇಕ ದ್ರವ್ಯ ವಸ್ತು ವಾಹನ ಮೊದಲಾದವುಗಳನ್ನು ಅವರುಗಳಿಂದ ಕಪ್ಪವಾಗಿ ತೆಗೆದು ಕೊಂಡು, ತಿರಿಗಿ ಇಂದ್ರಪ್ರಸ್ಥಕ್ಕೆ ಬಂದು, ತಾವು ತಾವು ತಂದ ಮಿತಿ ಇಲ್ಲದ ಧನ ಕನಕಾದಿ ಸಮಸ್ತ ಪದಾರ್ಥಗಳನ್ನು ಒಪ್ಪಿಸಲು; ಆ ಬಳಿಕ ಕಪ್ಪದ ಪದಾರ್ಥಗಳಿಂದ ಇಂದ್ರಪ್ರಸ್ಥ ಪಟ್ಟಣವೆಲ್ಲಾ ತುಂಬಿ ಹೋಯಿತು.

ಆಗ ದ್ವಾರಕಾ ಪಟ್ಟಣದಿಂದ ಶ್ರೀ ಕೃಷ್ಣನು ವಸುದೇವ ಬಲರಾಮ ಅಕ್ರೂರ ಸಾತ್ಯಕಿ ಮೊದಲಾದ ಬಂಧುಗಳೊಡನೆಯೂ, ದೇವಕಿ ರೋಹಿಣಿ ರುಕ್ಮಿಣಿ ಸತ್ಯಭಾಮೆ ಮೊದಲಾದ ರಾಣೀ ವಾಸಿಗಳೊಡನೆಯೂ ಬಂದು, ಬಹಳ ಧನ ಕನಕ ರತ್ನ ವಸ್ತು ವಾಹನಾದಿಗಳನ್ನು ಧರ್ಮರಾಯನಿಗೆ ಒಪ್ಪಿಸಿ, ಆತನಿಂದ ಪೂಜಿತನಾದನು. ಹಾಗೆಯೇ ಸಕಲ ದೇಶದ ಅರಸುಗಳು ಬಂದು, ಅಪರಿಮಿತವಾದ ಕಪ್ಪ ಕಾಣಿಕೆಗಳನ್ನು ಧರ್ಮರಾಯನಿಗೆ ಒಪ್ಪಿಸಿ, ಆತನಿಂದ ಪೂಜಿತರಾಗಿ, ಆತನು ಮಾಡಿಸಿ ಕೊಟ್ಟ ಬಿಡಾರಗಳಲ್ಲಿ ಇಳದು ಕೊಂಡರು. ಆ ಮೇಲೆ ಧರ್ಮರಾಯನು ಕೃಷ್ಣನ ಸಮೀಪಕ್ಕೆ ಬಂದು,–ನಿನ್ನ ಕಟಾಕ್ಷ

ದಿಂದ ನನ್ನ ತಮ್ಮಂದಿರು ಸಕಲ ದೇಶಗಳನ್ನು ಜೈಸಿ, ಕಪ್ಪಗಳನ್ನು ತೆಗೆದು ಕೊಂಡು ಬಂದರು. ಇನ್ನು ನನಗೆ ರಾಜಸೂಯ ಯಾಗವನ್ನು ಮಾಡುವದಕ್ಕೆ ಅಪ್ಪಣೆ ಕೊಡು ಎಂದು ಬಿನ್ನವಿಸಿ, ಆತನ ಅಪ್ಪಣೇ ಪ್ರಕಾರ ಯಜ್ಞವನ್ನು ಮಾಡಲಾರಂಭಿಸಿ, ಸಹದೇವನನ್ನು ಕರೆದು,—ನೀನು ನಮ್ಮ ಪುರೋಹಿತರಾದ ಧೌಮ್ಯರು ಹೇಳಿದ ಪ್ರಕಾರ ಯಜ್ಞ ಸಾಧನಗಳಾದ ಸಾಮಗ್ರಿಗಳನ್ನೂ, ಶಿಲ್ಪಗಳನ್ನೂ, ಇನ್ನು ಇವಲ್ಲದೆ ಅವರು ಹೇಳಿದ್ದ ಕೆಲಸಗಳನ್ನೆಲ್ಲಾ ಸಿದ್ಧ ಪಡಿಸಿ ಕೊಡುವ ಹಾಗೆ, ಇಂದ್ರಸೇನ ಮೊದಲಾದವರನ್ನೂ ಅರ್ಜುನನ ಸಾರಥಿಯಾದ ರುಕ್ಮನನ್ನೂ ನಿಯೋಗಿಸು. ಯಜ್ಞಶಾಲೆಯ ಸುತ್ತಲು, ನಾನಾ ದೇಶದಿಂದ ಬಂದಿರುವ ಅರಸುಗಳಿಗೆ ಮನೆಗಳನ್ನು ಸಿದ್ಧಾ ಮಾಡಿಸು. ಸಕಲ ಭೂಮಂಡಲಗಳಲ್ಲಿರುವ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರಾದಿ ಸಕಲ ಜಾತಿಯವರನ್ನು ಕರಿಸೆಂದು, ಅಪ್ಪಣೆ ಕೊಡಿಸಿದನು. ಸಹದೇವನು ಆ ಪ್ರಕಾರ ಇಂದ್ರಸೇನಾದಿಗಳನ್ನೂ ಅನೇಕ ಶಿಲ್ಪಿಗಳನ್ನೂ ನಿಯೋಗಿಸಿದನು. ಅವರು ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಎಲ್ಲರ ಕಣ್ಣಿಗೂ ಚೆಲುವಾಗಿರುವಂತೆ ಯಜ್ಞ ಶಾಲೆಯನ್ನು ನಿರ್ಮಿಸಿ, ಅದರೊಳಗೆ ಎಲ್ಲಾ ಯಜ್ಞದ ಸಾಮಗ್ರಿಗಳನ್ನು ತಂದು, ಒಟ್ಟಿ, ಆ ಶಾಲೆಯ ಸುತ್ತಲು ಬಹಳ ಮನೆಗಳನ್ನು ಚೆಲುವಾಗಿ ಕಲ್ಪಿಸಿ, ಅವುಗಳಲ್ಲಿ ಎಲ್ಲಾ ಸಂಭಾರಗಳನ್ನು ತುಂಬಿ, ಮತ್ತು ಇಂದ್ರಪ್ರಸ್ಥ ಪುರದ ಸುತ್ತು ಮುತ್ತಲು ಬಹು ವಿಧವಾದ ನೋಟದ ಮನೆಗಳನ್ನೂ ಹೂದೋಟಗಳನ್ನೂ ಭಾವಿಗಳನ್ನೂ ಕೊಳಗಳನ್ನೂ ಕಲ್ಪಿಸಿದರು. ಮತ್ತು ಹೆಂಡತಿ ಮಕ್ಕಳೂ, ಅಣ್ಣ ತಮ್ಮಂದಿರೂ, ನಂಟ ಇಷ್ಟರೂ, ಪರಿವಾರ ಜನರೂ ಮೊದಲಾದವರನ್ನು ಕೂಡಿ ಬಂದಿರುವ, ನಾನಾ ದೇಶಗಳ ಅರಸುಗಳೂ, ಸಮುದ್ರದ ದ್ವೀಪದಲ್ಲಿ ಇರುವ ಅರಸುಗಳೂ, ಹಿಮವತ್ಪರ್ವತದಲ್ಲಿರುವ ಹದಿನಾರು ಮಂದಿ ಅರಸುಗಳೂ ಮೊದಲ್ಗೊಂಡು ನಾಲ್ಕು ಸಮುದ್ರಗಳಿಂದ ಕೂಡಿರುವ ಭೂಮಂಡಲದ ಭೂಪತಿಗಳೆಲ್ಲರೂ, ಎಲ್ಲಾ ವೇದ ವೇದಾಂಗ ಪಾರಂಗತರಾದ ಬ್ರಾಹ್ಮಣರೂ, ಕೋಮಟಿಗರೂ, ಶೂದ್ರರೂ ಮೊದಲಾದ ಸರ್ವರಿಗೂ ಮನೆಗಳನ್ನು ಕಲ್ಪಿಸಿ, ಆಯಾಯ ಮನೆಗಳಲ್ಲಿ ಸಕಲ ಸಾಮಗ್ರಿಗಳನ್ನು ತುಂಬಿಸಿ, ಹೇಳಿದ ಕೆಲಸವನ್ನು ಮಾಡುವದಕ್ಕೆ ದಾಸ ದಾಸೀ ಜನಗಳನ್ನು ನೇಮಿಸಿ ಇಟ್ಟು, ಅವರವರ ಯೋಗ್ಯತಾನುಸಾರವಾಗಿ ಆಯಾಯ ಮನೆಗಳಲ್ಲಿ ಇರಿಸಿ, ಪರಾಂಬರಿಕೆ ತೆಗೆದು ಕೊಳ್ಳುತ್ತಾ ಬಂದನು.

ಆ ಬಳಿಕ ಧರ್ಮರಾಯನು ಭೀಷ್ಮಾದಿ ತನ್ನ ಬಂಧು ಜನಗಳನ್ನು ಕರೆದು

ಕೊಂಡು ಬರುವದಕ್ಕೆ ನಕುಲನನ್ನು ಕಳುಹಿಸಿದನು. ಆಗ ರಾಜಸೂಯ
ಯಾಗವನ್ನು ನೋಡ ಬೇಕೆಂಬ ಆಶೆಯಿಂದ ಬೇಕಾದಷ್ಟು ಧನಗಳನ್ನು ತೆಗೆ
ದು ಕೊಂಡು, ಹಸ್ತಿನಾವತಿಯಿಂದ ಇಂದ್ರಪ್ರಸ್ಥ ಪಟ್ಟಣಕ್ಕೆ ಬಂದ, ಭೀಷ್ಮ,
ಧೃತರಾಷ್ಟ್ರ, ವಿದುರ, ದ್ರೋಣ, ಕೃಪ, ಅಶ್ವತ್ಥಾಮ, ಬಾಹ್ಲೀಕ, ಸೋಮದತ್ತ,
ಭೂರೀಶ್ರವ, ಶಕುನಿ, ಸೈಂಧವ, ದುರ್ಯೋಧನ, ದುಶ್ಯಾಸನ, ಮೊದಲಾದವರನ್ನು
ಧರ್ಮರಾಯನು ಬಹಳ ಪ್ರೀತಿ ಮರ್ಯಾದೆಗಳಿಂದ ಪೂಜಿಸಿ—ನಿಮ್ಮ ಸಹಾಯ
ದಿಂದ ಈ ಮಹಾ ಯಜ್ಞವನ್ನು ಮಾಡಲಾರಂಭಿಸಿದ್ಧೇನೆ. ನೀವೆಲ್ಲರು ಈ
ಭಾರವನ್ನು ಹೊತ್ತು, ಕೊಂಚವಾದರೂ ನ್ಯೂನತೆ ಇಲ್ಲದ ಹಾಗೆ ತಡೆ ಇಲ್ಲ
ದೆ ಈ ಕೆಲಸವನ್ನು ನೆರವೇರಿಸ ಬೇಕೆಂದು, ಬೇಡಿ ಕೊಂಡು, ಆ ಮೇಲೆ ಕೃ
ಷ್ಣನ ಅನುಮತಿಯಿಂದ ಚಿನ್ನ ಬೆಳ್ಳಿ ರತ್ನಗಳ ಕೊಡುವ ಕೆಲಸದಲ್ಲಿ ಕೃಪಾ
ಚಾರ್ಯ ಕೃತವರ್ಮರನ್ನೂ,—ಇದು ಆಯಿತು, ಇದು ಆಗಲಿಲ್ಲವೆಂದು ವಿಚಾರಿಸಿ
ಕೊಳ್ಳುವ ಕೆಲಸದಲ್ಲಿ ಭೀಷ್ಮ ದ್ರೋಣರನ್ನೂ,—ನವಧಾನ್ಯಗಳ ಒದಗಿ
ಸುವದೂ ಉಚಿತವಾಗಿ ವೆಚ್ಚ ಮಾಡುವದೂ, ಈ ಕೆಲಸದಲ್ಲಿ ವಿದುರನನ್ನೂ—
ನಾನಾ ದೇಶದಿಂದ ಬಂದ ಅರಸುಗಳು ತಂದ ಧನ ಕನಕ ವಸ್ತು ವಾಹನ
ಗಳನ್ನು ಉಚಿತವಾದ ಸ್ಥಳಗಳಲ್ಲಿ ಶೇರಿಸಿ, ಇಡಿಸಿ, ಪ್ರಕೃತವಿದ್ದ ಹಾಗೆ ವೆಚ್ಚ
ಮಾಡುವ ಕಾರ್ಯದಲ್ಲಿ ಕೌರವನನ್ನೂ,—ಭಕ್ಷ ಭೋಜ್ಯ ವಿನಿಯೋಗ ಮಾಡಿಸ
ದುಶ್ಯಾಸನನನ್ನೂ ನಿಯೋಗಿಸಿ, ಯಜ್ಞಕ್ಕೆ ದೀಕ್ಷಿತನಾಗಿ, ಬ್ರಾಹ್ಮಣ ಜ್ಞಾತಿ
ಗಳ ಗುಂಪಿನೊಡನೆ ಮಹದೈಶ್ವರ್ಯದಿಂದ ಯಜ್ಞಶಾಲೆಯನ್ನು ಹೊಕ್ಕನು.

ಆ ಯಜ್ಞ ಶಾಲೆಯಲ್ಲಿ ವೇದ ಘೋಷಗಳಿಂದಲೂ ಬ್ರಾಹ್ಮಣರ ಆಶೀ
ರ್ವಾದ ಧ್ವನಿಗಳಿಂದಲೂ, ಅನೇಕವಾದ ವಾದ್ಯಗಳ ನಾದಗಳಿಂದಲೂ, ಒ
ಬ್ಬರ ಮಾತು ಮತ್ತೊಬ್ಬರಿಗೆ ತಿಳಿಯದ ಹಾಗೆ ಇತ್ತು. ಆ ಸಮಯದಲ್ಲಿ
ವೇದ ಮೂರ್ತಿಗಳಾದ ಪೈಲ ಧೌಮ್ಯರು ಹೊರತಾಗಿ, ಯಾಜ್ಞವಲ್ಕ್ಯ ಋಷಿ
ಯು ಅಧ್ವರ್ಯನಾಗಿಯೂ, ದ್ವೈಪಾಯನನು ಬ್ರಹ್ಮನಾಗಿಯೂ, ಸುನಾಮನು
ಉದ್ಗಾತೃವಾಗಿಯೂ, ಮಿಕ್ಕ ಮಹಾ ಮುನಿಗಳೆಲ್ಲಾ ಬ್ರಾಹ್ಮಣ್ಯರಾಗಿಯೂ,
ನಾರದಾದಿ ಮಹಾ ಮುನೀಂದ್ರರು ಸದಸ್ಯರಾಗಿಯೂ, ಭೀಷ್ಮಾದಿ ರಾಜ
ಋಷಿಗಳು ಸಭಾಸದರಾಗಿಯೂ, ಕುಳಿತು ಕೊಂಡು, ಆ ಮಹಾ ಯಜ್ಞವು
ಮಂತ್ರಲೋಪ ಕ್ರಿಯಾಲೋಪ ಮೊದಲಾದವುಗಳು ಸ್ವಲ್ಪವಾದರೂ ಉಂ
ಟಾಗದೆ, ಸಕಲ ಜನ ಸಮ್ಮತಿಯಿಂದ ನಿರ್ವಿಘ್ನವಾಗಿ ಬೆಳೆಯಿತು.

ಆಗ ಯಜ್ಞದಲ್ಲಿ, ಅಗ್ನಿ ಮುಖದಲ್ಲಿ ವಿಸ್ತಾರವಾದ ಮಂತ್ರಾಹುತಿಗಳಿಂದ

ಸಕಲ ದೇವತೆಗಳೂ, ಸಂಪೂರ್ಣವಾದ ದಕ್ಷಿಣೆಗಳ ಕೊಡುವಿಕೆಯಿಂದ ಬ್ರಾಹ್ಮಣರೂ, ಯೋಗ್ಯವಾದ ಮನ್ನಣೆಗಳಿಂದ ಎಲ್ಲಾ ಅರಸುಗಳೂ, ಇಷ್ಟವಾದ ಭೋಜನ ವಸ್ತ್ರಾಭರಣಗಳು ಮೊದಲಾದವುಗಳಿಂದ ಭೂಮಿಯ ಪ್ರಜೆಗಳೂ, ಬೇಡಿದ ವಸ್ತುಗಳ ಕೊಡುವಿಕೆಯಿಂದ ಸಕಲ ಯಾಚಕರೂ ದಣಿದರು. ಮತ್ತು ಧರ್ಮರಾಯನು, ಯಜ್ಞವನ್ನು ಮಾಡಿಸುವದಕ್ಕೆ ನೇಮಕರಾಗಿದ್ದ ಅಧ್ವರಿಯು, ಬ್ರಹ್ಮ, ಉದ್ಗಾತೃ, ಬ್ರಾಹ್ಮಣ್ಯರು, ಸದಸ್ಯರು, ಮೊದಲಾದ ಬ್ರಾಹ್ಮಣ ಸಮೂಹಕ್ಕೆ ಬಹಳವಾಗಿ ಕೊಟ್ಟ ಧನ ಕನಕಾದಿ ವಸ್ತುಗಳನ್ನು ಹೊರೆಗಳ ಕಟ್ಟಿ ಕೊಂಡು, ಕೆಲರು ಹೆಗಲಲ್ಲಿಯೂ, ಕೆಲರು ಶಿಷ್ಯರ ನೆತ್ತಿಗಳಲ್ಲಿಯೂ, ಹೊರಿಸಿ ಕೊಂಡು, ಧರ್ಮರಾಯನಿಗೆ ಆಶೀರ್ವಾದವನ್ನು ಮಾಡಿ, ಹೊರಟು ಹೋದರು. ಆ ಬಳಿಕ ಸಕಲವನ್ನು ತಿಳಿದಂಥ ಕೌರವ ಪಾಂಡವರೆರಡು ಕುಲಕ್ಕೆ ಅಜ್ಜನಾದ ಭೀಷ್ಮಾಚಾರ್ಯರ ಬಳಿಗೆ ಬಂದು, ನಮಸ್ಕರಿಸಿ, ಧರ್ಮರಾಯನು ಆತನನ್ನು ಕುರಿತು—ಎಲೈ, ಪ್ರಾಜ್ಞನೇ, ಈ ರಾಜ ಸಭೆಯಲ್ಲಿ ಶಿವನಿಗೆ ಸಮಾನರಾಗಿರುವ ಅನೇಕ ಭೂಪಾಲರು ನೆರೆದಿರುವರು. ಇವರಲ್ಲಿ ಮೊದಲು ಯಾರಿಗೆ ಪೂಜೆ ಮಾಡ ಬೇಕು? ಎಂದು ಕೇಳಲು; ಭೀಷ್ಮನು ಧರ್ಮರಾಯನನ್ನು ಕುರಿತು—ಕೇಳೈಯಾ, ಯುಧಿಷ್ಠಿರನೇ, ನಕ್ಷತ್ರಗಳೂ ನವಗ್ರಹಗಳೂ ಇವುಗಳಲ್ಲಿ ಸೂರ್ಯನನ್ನು ಬಿಟ್ಟರೆ, ಮತ್ತ್ಯಾರು? ದೇವತೆಗಳಲ್ಲಿ ಶಿವನನ್ನು ಬಿಟ್ಟರೆ, ಬೇರೆ ಯಾರು? ದಿಕ್ಪಾಲರಲ್ಲಿ ದೇವೇಂದ್ರನನ್ನು ಬಿಟ್ಟರೆ, ಮತ್ತೆ ಪೂಜ್ಯರ್ಯಾರು? ಪರ್ವತಗಳಲ್ಲಿ ಮೇರುವಿನಂತೆಯೂ, ಸಮುದ್ರಗಳಲ್ಲಿ ಕ್ಷೀರ ಸಮುದ್ರದಂತೆಯೂ, ದೇವಾಸುರ ನರೋರಗ ಸಮೂಹದಲ್ಲಿ ಕೃಷ್ಣನೇ ದೊಡ್ಡವನಾದ್ದರಿಂದ, ಆತನನ್ನು ಬಿಟ್ಟು, ಮತ್ತೊಬ್ಬರು ಈ ಸಭೆಯಲ್ಲಿ ಅಗ್ರ ಪೂಜೆಗೆ ಯೋಗ್ಯರು ಯಾರಿದ್ದಾರೆ? ವ್ಯಾಸರು ನಾರದರು ರೋಮಶಾದಿ ಸಕಲ ಮುನೀಂದ್ರರು ಇದ್ದಾರೆ. ಕೃಷ್ಣನು ಅಗ್ರ ಪೂಜೆಗೆ ಯೋಗ್ಯನೋ, ಅಲ್ಲವೋ? ಬೇಕಾದರೆ ಕೇಳು, ಎನಲು; ಅವರೆಲ್ಲರು ಭೀಷ್ಮ ಹೇಳಿದ ಮಾತಿಗೆ ಒಡಂಬಡಲು; ಆಗ ಸಹದೇವನು ಚಿನ್ನದ ಮಂಚದ ಮೇಲಕ್ಕೆ ಕೃಷ್ಣನಿಗೆ ಕೈಗೊಟ್ಟು, ಕರೆದು ಕೊಂಡು ಬಂದು, ದಿವ್ಯ ಸಿಂಹಾಸನದಲ್ಲಿ ಕುಳ್ಳಿರಿಸಿ, ಹರಿವಾಣದಲ್ಲಿ ಗಂಗೆಯ ನೀರನ್ನು ತಂದು, ಕೃಷ್ಣನ ಕಾಲುಗಳನ್ನು ತೊಳೆದು, ಹದಿನಾರು ವಿಧವಾದ ಪೂಜೆಗಳಿಂದ ಪೂಜಿಸಿದನು. ಆಗ ದೇವ ಮುನಿಗಳೂ ಬ್ರಹ್ಮ ಋಷಿಗಳೂ—ಜಯ, ಜಯ! ಎಂದು ಹೊಗಳಿದರು. ದೇವದುಂದುಭಿಗಳು ಮೊಳಗಿದವು.

ಆಗ ಅದನ್ನು ನೋಡಿ, ಅರಸುಗಳೆಲ್ಲಾ ಒಬ್ಬರ ಮುಖಗಳನ್ನು ಒಬ್ಬರು ನೋಡುತ್ತಾ, ಕೆಲರು ಪಾಂಡವರ ಸ್ನೇಹದಲ್ಲಿ, ಕೆಲರು ಕೃಷ್ಣನ ಬಲ್ಮೆಯಲ್ಲಿ, ಕೆಲರು ಭಯದಲ್ಲಿ, ಕೆಲರು—ನಮಗೇಕೆ? ಹ್ಯಾಗಾದರೂ ಆಗಲಿ ಎಂದು, ಉದಾಸೀನದಲ್ಲಿ ಸುಮ್ಮನಿದ್ದರು. ಅವರೊಳಗೆ ಖಳ ಶಿರೋಮಣಿಯಾದ ಶಿಶುಪಾಲನು ಮಹಾ ಕೋಪಿಷ್ಠನಾಗಿ, ಸಹದೇವನನ್ನು ಕುರಿತು—ಏನೆಲಾ, ಸಹದೇವ, ವಸುಧೆಯ ಮಾನ ನಿಧಿಗಳ ಮುಂದೆ ಗೊಲ್ಲರ ಹುಡುಗನಿಗೆ ಸಿಂಹಾಸನದ ಮೇಲೆ ಕೂರಿಸಿ, ಮೊದಲು ಪೂಜೆಯೇ? ನೀನು ಅರಿಯದವನು. ನಿಮ್ಮ ಯಾಗಕ್ಕೆ ಹಾನಿಯಲ್ಲವೇ? ನಿಮ್ಮ ಹಿರಿಯರು ಇದೇನ ಹೇಳಿದರು? ಪಾಂಡುವಿನ ಮಕ್ಕಳು ಬುದ್ಧಿ ಇಲ್ಲದವರೆಂದು ಚನ್ನಾಗಿ ತಿಳಿಯಿತು. ಒಂದು ವೇಳೆ ಈ ಕೃಷ್ಣನು ಯದು ವಂಶದಲ್ಲಿಯೇ ಹುಟ್ಟಿದವನಾದಾಗ್ಯೂ, ಯದುಕುಲದವರು ಸಿಂಹಾಸನಕ್ಕೆ ಹೊರಗು ಎಂದು ಜಗವೆಲ್ಲ ತಿಳಿದಿರುವದಲ್ಲ! ಹೀಗೆಂದು ಪಾಂಡವರನ್ನು ನಿಂದಿಸಿ, ಭೀಷ್ಮನನ್ನು ಕುರಿತು—ನೀನು ಮುದುಕನೂ ಜ್ಞಾನ ವೃದ್ಧನೂ ಆಗಿ, ಈ ಹಸು ಕರುಗಳ ಕಾಯ್ದ ಗೊಲ್ಲನಿಗೆ ಮೊದಲು ಪೂಜೆಯನ್ನು ಈ ಪ್ರಕಾರ ಹ್ಯಾಗೆ ಮಾಡಿಸಿದೆ? ನೀನು ಸಕಲ ವೇದ ಪುರಾಣ ಇತಿಹಾಸಗಳನ್ನು ಓದಿದ್ದು, ನೀರಿನಲ್ಲಿ ಹೋಮ ಮಾಡಿದ ಹಾಗಾಯಿತು. ಆದ್ದರಿಂದ ನಿನ್ನನ್ನು ಶುದ್ಧ ಮೂಢನೆಂದು ತಿಳಿಯ ಬೇಕು. ಒಂದುವೇಳೆ ಹಿರಿಯನೆಂದು ಪೂಜಿಸ ಬೇಕಾದರೆ, ಇವನಪ್ಪನಾದ ವಸುದೇವನಿರಲಿಲ್ಲವೇ? ಲೋಕದಲ್ಲಿ ಹೆತ್ತವನೂ ಹೆಣ್ಣು ಕೊಟ್ಟವನೂ ಇಬ್ಬರು ತಂದೆಗಳಾದ್ದರಿಂದ, ಪಾಂಡವರಿಗೆ ಹೆಣ್ಣು ಕೊಟ್ಟು ಮಾವನಾದ ದೃಪದರಾಯನಿಗಾದರೂ ಪೂಜೆಯನ್ನು ಮಾಡಿದಿರಾ? ಆಚಾರ್ಯನೆಂದು ಪೂಜಿಸ ಬೇಕಾದರೆ, ಇವರಿಗೆ ಧನುರ್ವಿದ್ಯೆಯನ್ನು ಹೇಳಿದ ದ್ರೋಣಾಚಾರ್ಯನನ್ನಾದರೂ ಪೂಜಿಸಿದಿರಾ? ಇನ್ನು ವೇದವ್ಯಾಸ ಮುನಿ ಶ್ರೇಷ್ಠನೂ ಅಶ್ವತ್ಥಾಮನೂ ಕೃಪಾಚಾರ್ಯನೂ ನಿಮಗೆ ಸೋದರ ಮಾವನಾದ ಶಲ್ಯನೂ ಇನ್ನು ಸಕಲ ದೇಶಾಧೀಶ್ವರರು ಇರುವಲ್ಲಿ, ಇವರಿಗೆಲ್ಲಾ ಅವಮಾನವನ್ನು ಮಾಡಿ, ಜಾರ ಚೋರರಿಗೆಲ್ಲಾ ಗುರುವಾದ ಈ ಕೃಷ್ಣನಿಗೆ ಅಗ್ರ ಪೂಜೆಯನ್ನು ಮಾಡಿದ್ದು ಬಹು ಚನ್ನಾಯಿತು! ಹೀಗೆ ಅಯೋಗ್ಯವಾದ ಕೆಲಸವನ್ನು ಮಾಡಿದ್ದರಿಂದ ಎಲ್ಲಾ ಅರಸುಗಳು ಕೂಡಿ, ನಿಮ್ಮ ಐವರನ್ನೂ ನಿಮಗೆ ಬುದ್ಧಿ ಹೇಳಿದ ಭೀಷ್ಮನನ್ನೂ ಪೂಜೆಯನ್ನು ಮಾಡಿಸಿ ಕೊಂಡ ಈ ಖೂಳ ಗೊಲ್ಲನನ್ನೂ ಕಡಿದು, ಭೂತ ಗಣಗಳಿಗೆ ತಿನ್ನಿಸ ಬೇಕು ಎಂದು, ನಾನಾ ಪ್ರಕಾರವಾಗಿ ದುರ್ಭಾ

ಷೆಗಳನ್ನು ಆಡುತ್ತಾ, ಇರಲು; ಅದನ್ನು ಕೇಳಿ, ಶಿಶುಪಾಲನೊಡನೆ ಸಕಲ ದೇಶದ ದುಷ್ಟ ಅರಸುಗಳೆಲ್ಲಾ ಯುದ್ಧಕ್ಕೆ ಸನ್ನದ್ಧರಾದರು.

ಇತ್ತ ಸಾತ್ಯಕಿ, ಅರ್ಜುನ, ಭೀಮ, ನಕುಲ, ದೃಷ್ಟದ್ಯುಮ್ನ, ಮೊದಲಾದವರು ಯುದ್ಧ ಸನ್ನದ್ಧರಾದರು. ಅದನ್ನು ಕಂಡು, ಧರ್ಮರಾಯನು ಮೂಗಿನಲ್ಲಿ ಬೆರಳಿಟ್ಟು, ತಲೆಯನ್ನು ಅಲ್ಲಾಡಿಸುತ್ತಾ, ಭೀಷ್ಮನ ಬಳಿಗೆ ಬಂದು,—ಸಮುದ್ರವು ಸುತ್ತಿದ ಭೂಮಿಯ ಅರಸುಗಳೆಲ್ಲರು ಯುದ್ಧಕ್ಕೆ ಬರುತ್ತಾರಲ್ಲ! ಇನ್ನೇನು ಗತಿ? ಈ ವರಿಗೂ ಯಜ್ಞವು ತಡೆ ಇಲ್ಲದೆ ನಡೆಯಿತು. ಅವಭೃತ ಸ್ನಾನವಾಗುವಷ್ಟರಲ್ಲಿಯೇ ಇಂಥ ವಿಪತ್ತು ಬಂದೊದಗಿತಲ್ಲ! ಎಂದು, ಚಿಂತೆ ಪಡುವದನ್ನು ಸಹದೇವನು ಕೇಳಿ,—ಈ ಬಣಗು ಅರಸುಗಳ ಗುಂಪಿಗೆ ಬೆದರಿ, ಯಾಕೆ ಕಳವಳ ಪಡುತ್ತೀಯೇ? ಒಂದು ನಿಮಿಷ ಮಾತ್ರ ಸುಮ್ಮನೆ ಇರು ಎಂದು, ಧರ್ಮರಾಯನಿಗ ಹೇಳಲು; ಭೀಷ್ಮನು ಸಹದೇವ ಹೇಳಿದಂತೆ ಧರ್ಮರಾಯನಿಗೆ ಸಮಾಧಾನಾ ಮಾಡುತ್ತಿರುವಷ್ಟರಲ್ಲಿಯೇ ಕೃಷ್ಣನ ಚಕ್ರವು ಬಂದು, ಶಿಶುಪಾಲನ ತಲೆಯನ್ನು ಕಡಿದು ಹಾಕಲು; ಕೂಡಿದ ಅರಸುಗಳೆಲ್ಲರು ಸುಮ್ಮಗಾಗಿ ಧರ್ಮರಾಯನಿಗೆ ವಿಧೇಯರಾದರು. ಧರ್ಮರಾಯನು ದೇಶದ ಅರಸುಗಳಿಗೆಲ್ಲಾ ಸತ್ಕಾರವನ್ನು ಮಾಡಿ, ಅವರನ್ನೆಲ್ಲಾ ಕಳುಹಿಸಿ ಕೊಟ್ಟು, ಕೃಷ್ಣನೇ ಮೊದಲಾದ ಯಾದವರೊಡನೆಯೂ, ಭೀಷ್ಮನು ಮೊದಲಾದ ಕೌರವರೊಡನೆಯೂ, ಬಹಳ ಸಂತೋಷದಿಂದ ಅವಭೃತ ಸ್ನಾನವನ್ನು ಮಾಡಿ, ಪಟ್ಟಣವನ್ನು ಬಹು ಸಂಭ್ರಮದಿಂದ ಸೇರಿದನು.

64. The Romance of Nala and Damayanti.

೬೪. ನಳ ದಮಯಂತಿಯರ ಕಥೆ.

ಮಹಮ್ಮೇರು ಪರ್ವತದ ತೆಂಕಣ ದಿಕ್ಕಿನಲ್ಲಿರುವ ಜಂಬೂ ದ್ವೀಪದಲ್ಲಿ ಐವತ್ತಾರು ದೇಶಗಳುಂಟು. ಅವುಗಳೊಳಗೆ, ಹೊಳೆ, ತೊರೆಗಳಿಂದಲೂ, ಕೆರೆ, ಕಟ್ಟೆ, ಕಾಲುವೆಗಳಿಂದಲೂ ಕೂಡಿ, ಭತ್ತ ಮೊದಲಾದ ಎಲ್ಲಾ ಪೈರುಗಳಿಂದ ಕೂಡಿರುವ ಗದ್ದೆ ಹೊಲಗಳಿಂದಲೂ; ಅಡಿಕೆ, ತೆಂಗು, ಬಾಳೆ ಮೊದಲಾದ ಫಲಗಳಿಂದ ಕೂಡಿ ಬೆಳೆದಿರುವ ಮರಗಳುಳ್ಳ ತೋಟಗಳಿಂದಲೂ; ಒಂದು ಬಳಿಯಲ್ಲಿಯಾದರು ಪಾಳುಗಳಿಲ್ಲದೆ ಒಕ್ಕಲುಗಳಿಂದ ತುಂಬಿರುವ ಹಳ್ಳಿ, ಊರು, ಪಟ್ಟಣಗಳಿಂದಲೂ, ಚಂದವಾದ ನಿಷಧವೆಂಬ ಒಂದು ದೇಶವಿರುವದು. ಆ ದೇಶದಲ್ಲಿ ವೀರಸೇನನೆಂಬ ಒಬ್ಬ ಅರಸು ಧರ್ಮದಿಂದ ಧೊರೆತನವನ್ನು ಮಾಡಿಕೊಂಡು, ತನ್ನ ದೇಶದ ಜನರನ್ನೂ ತನ್ನ ಪರಿವಾರಗಳನ್ನೂ ಮಕ್ಕಳಿಗಿಂತ

ಹೆಚ್ಚಾಗಿ ಕಾಪಾಡುತ್ತಿದ್ದನು. ಆತನ ಪಟ್ಟದ ಹೆಂಡತಿಯಲ್ಲಿ ಬಹಳ ಚೆಲುವನಾದ ಒಬ್ಬ ಗಂಡು ಮಗನು ಹುಟ್ಟಿ, ಬಿದಿಗೇ ಚಂದ್ರನಂತೆ ದಿನ ದಿನಕ್ಕೆ ಬೆಳೆಯುತ್ತಾ ಇದ್ದನು. ಆತನಿಗೆ ತಂದೆಯು ಜಾತಕರ್ಮವನ್ನು ಮಾಡಿ, ನಳನೆಂದು ಹೆಸರಿಟ್ಟು, ಚೌಲ ಉಪನಯನಗಳನ್ನು ಮಾಡಿ, ಎಲ್ಲಾ ಓದನ್ನು ತಿಳಿದು ಬಹಳ ಜಾಣನಾಗಿರುವ ಉಪಾಧ್ಯನ ಬಳಿಯಲ್ಲಿ ಓದು ಕಲಿಯುವದಕ್ಕೆ ಮಠಕ್ಕೆ ಹಾಕಿದನು. ಆಗ ಆ ನಳನು ಬಹು ಬೇಗ ಅರುವತ್ತುನಾಲ್ಕು ವಿದ್ಯಗಳನ್ನು ಕಲಿತು, ಧನುರ್ವೇದವನ್ನು ಓದಿ, ಕುದುರೆಗಳ ಲಕ್ಷಣಗಳನ್ನು ತಿಳಿದು, ಬಲವಂತನಾಗಿ, ಘಟ್ಟಿಗನಾಗಿ, ಸತ್ಯವಂತನಾಗಿ, ಅಡಿಗೆ ಮಾಡುವ ವಿದ್ಯೆಯನ್ನು ಚೆನ್ನಾಗಿ ಕಲಿತವನಾಗಿ, ತಂದೆಯ ಮುಂದೆ ತಾನು ಕಲಿತ ವಿದ್ಯಗಳನ್ನು ಪರೀಕ್ಷೆ ಕೊಟ್ಟು, ಆತನ ಅಪ್ಪಣೆಯನ್ನು ತೆಗೆದು ಕೊಂಡು, ಒಂದು ಅಕ್ಷೋಹಿಣಿ ಬಲವನ್ನು ಕೂಡಿ, ದಿಕ್ಕುಗಳನ್ನು ಜೈಸುವದಕ್ಕೆ ಹೊರಟು, ತನ್ನನ್ನು ಬಂದು ಕಾಣಿಸಿ ಕೊಂಡು, ಕಪ್ಪವನ್ನು ಕೊಟ್ಟ ದೇಶದ ಧೊರೆಗಳನ್ನು ಮನ್ನಿಸಿ, ತನಗೆ ಎದುರು ಬಿದ್ದ ಧೊರೆಗಳನ್ನು ಜೈಸಿ, ಅವರಿಂದ ಕಾಣಿಕೆ ಕಪ್ಪಗಳನ್ನು ತೆಗೆದು ಕೊಂಡು, ತಿರಿಗಿ ತನ್ನ ಪಟ್ಟಣಕ್ಕೆ ಬಂದು, ತಂದೆಗೆ ನಮಸ್ಕರಿಸಿ, ದೇಶದ ಅರಸುಗಳು ಕೊಟ್ಟ ಕಪ್ಪಕಾಣಿಕೆಗಳನ್ನು ಒಪ್ಪಿಸಿದನು. ಆಗ ವೀರಸೇನ ರಾಯನು ಮಗನ ಪರಾಕ್ರಮಕ್ಕೂ ವಿನಯಕ್ಕೂ ಬುದ್ಧಿಗೂ ಸತ್ಯಕ್ಕೂ ಮೆಚ್ಚಿ, ಸಂತೋಷದಿಂದ ಆತನಿಗೆ ಯುವರಾಜ ಪಟ್ಟವನ್ನು ಕಟ್ಟಿದನು. ಆ ಮೇಲೆ ಈ ಯುವರಾಜನಾದ ನಳಚಕ್ರವರ್ತಿಯು ರಾಜ್ಯವನ್ನು ಪಾಲಿಸುತ್ತಾ ಇದ್ದನು.

ಹೀಗಿರುವಲ್ಲಿ ವಿದರ್ಭ ದೇಶದಲ್ಲಿ ಕುಂಡಿನವೆಂಬ ಹೆಸರುಳ್ಳ ಪಟ್ಟಣವನ್ನು ಆಳುತ್ತಲಿರುವ ಭೀಮರಾಯನು—ತನಗೆ ಮಕ್ಕಳಿಲ್ಲವಲ್ಲಾ ಎಂದು ಚಿಂತೆ ಪಡುತ್ತಿರುವ ವೇಳೆಯಲ್ಲಿ ಬ್ರಹ್ಮ ಋಷಿ ಶ್ರೇಷ್ಠನಾದ ದಮನೆಂಬ ಒಬ್ಬ ಮುನಿಯು ಆತನ ಬಳಿಗೆ ಬರಲು; ಆತನು ಹೆಂಡತಿಯೊಡನೆ ಕೂಡಿ ಬಂದು, ಮುನೀಶ್ವರನನ್ನು ಬಹಳವಾಗಿ ಪೂಜಿಸಿದನು. ಆ ಮುನಿಯು ಆತನ ಪೂಜೆಗೆ ಪ್ರೀತಿ ಪಟ್ಟು, ಮಕ್ಕಳ ಬಯಕೆಯಿಂದಿರುವ ಅವನಿಗೆ—ದಮಯಂತಿ ಎಂಬ ಒಬ್ಬ ಮಗಳೂ, ದಮನು, ದಾಂತನು, ದಮನನು ಎಂಬ ಮೂರು ಮಂದಿ ಗಂಡು ಮಕ್ಕಳೂ ಆಗುವರು ಎಂದು ವರವನ್ನು ಕೊಟ್ಟು, ತನ್ನ ಆಶ್ರಮಕ್ಕೆ ಹೋದನು. ಆ ಬಳಿಕ ಆತನ ವರದಿಂದ ಆ ಭೀಮರಾಯನ ಪಟ್ಟದ ರಾಣಿಯು ಬಸುರಾಗಿ, ಮೊದಲು ದಮಯಂತಿ ಎಂಬ ಹೆಣ್ಣು ಮಗಳನ್ನು ಹೆತ್ತು, ಆ ಹಿಂದೆ ಕ್ರಮವಾಗಿ ಮೂರು ಮಂದಿ ಗಂಡು ಮಕ್ಕಳನ್ನು ಹೆತ್ತಳು. ಆ ದಮಯಂತಿಯು ದಿನ

ದಿನಕ್ಕೆ ಬೆಳೆದು, ಪ್ರಾಯುದವಳಾಗಿ, ಚೆಲುವಿನಿಂದಲೂ ಲಕ್ಷಣಗಳಿಂದಲೂ ಆಕಾರದಿಂದಲೂ ರತಿದೇವಿಗೆ ಸರಿಯಾಗಿ, ಮುತ್ತು, ಹವಳ, ವಜ್ರ, ವೈಢೂರ್‍ಯ ಮೊದಲಾದ ರತ್ನಗಳನ್ನು ಕೆತ್ತಿರುವ ಒಡವೆಗಳನ್ನು ಇಟ್ಟು ಕೊಂಡು, ಒಳ್ಳೇ ಹೊಂಬಣ್ಣವಾದ ಶೀರೆಯನ್ನು ಉಟ್ಟು ಕೊಂಡು, ನಿರಾಜಿ ರವಿಕೆಯನ್ನು ತೊಟ್ಟು, ಲಕ್ಷ್ಮೀದೇವಿಯ ಹಾಗೆ ಒಪ್ಪುತ್ತಿದ್ದಳು. ದೇವತೆಗಳು, ಗಂಧರ್ವರು, ಯಕ್ಷರು, ನಾಗರು, ಮನುಷ್ಯರು, ಇವರೊಳಗೆ ಅವಳಂತೆ ಚಂದವುಳ್ಳ ಹೆಂಗಸರು ಯಾರೂ ಇಲ್ಲದ್ದರಿಂದ, ಇವಳನ್ನು ನೋಡಿದ ಜನರುಗಳು ಬಹಳ ಆಶ್ಚರ್‍ಯ ಪಡುತ್ತಾ ಇದ್ದರು. ಈ ದಮಯಂತಿಯ ಸಂಗಾತಿಗಳು ಆಕೆಯೊಡನೆ—ನೀನು ಮದುವೆಯಾಗುವದಕ್ಕೆ ನಿನ್ನ ಚೆಲುವಿಗೆ ಸರಿಯಾದ ಪುರುಷನು ಜಗತ್ತಿನಲ್ಲಿ ಯಾರೂ ಇಲ್ಲ. ನಿಷಧ ದೇಶದ ವೀರಸೇನ ರಾಯನ ಮಗನಾದ ನಳನು ಚೆಲುವಿನಿಂದ ಮನ್ಮಥನಿಗೆ ಎಂಟು ಮಡಿ ಹೆಚ್ಚಾಗಿ ಇರುವನು ಎಂದು, ಕೇಳಿರುವದರಿಂದ, ಅವನನ್ನೇ ನೀನು ಮದುವೆಯಾಗ ಬೇಕು ಎಂದು, ಅವನ ರೂಪುರೇಖೆ ಜಾಣತನ ಶಕ್ತಿ ಪರಾಕ್ರಮಗಳನ್ನು ವಿವರಿಸುತ್ತಾ ಬಂದದರಿಂದ, ಆ ದಮಯಂತಿಗೆ ನಳನ ಮೇಲೆ ಮನಸ್ಸಾಗಿತ್ತು.

ಇತ್ತ ನಳಚಕ್ರವರ್ತಿಗೆ ಬೇಹಿನವರು ಬಂದು, ಈ ದಮಯಂತಿಯ ರೂಪು ಲಾವಣ್ಯಗಳನ್ನು ತಿಳಿಸಿದ್ದರಿಂದ, ಈತನು ಆಕೆಯನ್ನೇ ಮದುವೆಯಾಗ ಬೇಕೆಂದು ಎಣಿಸಿ ಕೊಂಡು ಇದ್ದನು. ಹೀಗೆ ಒಬ್ಬರೊಬ್ಬರಿಗೆ ಮೋಹವು ಹುಟ್ಟಿ ಇರುವಾಗ, ನಳನಿಗೆ ದಮಯಂತಿಯಲ್ಲಿ ಮನಸ್ಸಿನ ಪ್ರೀತಿಯು ಹೆಚ್ಚುತ್ತಿರುವಲ್ಲಿ ನಳನು ಆಕೆಯ ವಿರಹವನ್ನು ತಡೆಯಲಾರದೆ, ಕಾಲವನ್ನು ಕಳೆಯುವದಕ್ಕೆ ಹೂವಿನ ತೋಟಕ್ಕೆ ಹೋಗಿ, ತಿರುಗುತ್ತಿರುವಲ್ಲಿ, ಚಿನ್ನ ರೆಕ್ಕೆಗಳಿಂದ ಒಪ್ಪುತ್ತಲಿರುವ ಕೆಲವು ಹಂಸ ಪಕ್ಷಿಗಳನ್ನು ನೋಡಿ, ಮೆಲ್ಲ ಮೆಲ್ಲನೆ ಆ ಪಕ್ಷಿಗಳ ಬಳಿಗೆ ಹೋಗಿ, ಅವುಗಳೊಳಗೆ ಒಂದು ರಾಜ ಹಂಸವನ್ನು ಹಿಡಿದು ಕೊಳ್ಳಲು; ಅದು ಮನುಷ್ಯರ ಹಾಗೆ ಆತನನ್ನು ಕುರಿತು—ಎಲೈ, ಅರಸೇ, ನನ್ನನ್ನು ಯಾತಕ್ಕೆ ಹಿಂಸೆ ಮಾಡುತ್ತೀಯೇ? ನಾನು ದಮಯಂತಿಯ ಬಳಿಗೆ ಹೋಗಿ, ನಿನ್ನ ಅಂದ ಚಂದಗಳನ್ನೂ ನಿನ್ನ ಒಳ್ಳೇ ಗುಣಗಳನ್ನೂ ಆಕೆಗೆ ತಿಳಿಸಿ, ಲೋಕದಲ್ಲಿರುವ ಅಷ್ಟು ಮಂದಿ ಅರಸು ಮಕ್ಕಳನ್ನು ಬಿಟ್ಟು, ನಿನ್ನನ್ನೇ ಮದುವೆಯಾಗುವ ಹಾಗೆ ಮಾಡಿ, ನಿನಗೆ ಬಹಳ ಹಿತವನ್ನು ಮಾಡುತ್ತೇನೆಂದು ಹೇಳಿತು. ನಳನು ಅದರ ಮಾತುಗಳಿಗೆ ಆಶ್ಚರ್‍ಯವನ್ನು ಪಟ್ಟು—ಹಾಗೆ ಮಾಡು ಎಂದು, ಬಿಟ್ಟು ಬಿಟ್ಟನು.

ಆ ರಾಜ ಹಂಸವು ತನ್ನ ಕುಲದ ಹಕ್ಕಿಗಳೊಡನೆ ಕೂಡಿ, ಆಕಾಶ ಮಾರ್ಗಕ್ಕೆ ಹಾರಿ, ಬಹಳ ರಾಷ್ಟ್ರಗಳನ್ನು ದಾಟಿ, ವಿದರ್ಭ ದೇಶದ ಕುಂಡಿನ ಪಟ್ಟಣಕ್ಕೆ ಹೋಗಿ, ಆಕಾಶದಲ್ಲಿ ನಿಂತು, ರಾಣೀ ವಾಸದ ಹೂವಿನ ತೋಟದಲ್ಲಿ ಸಂಗಾತಿಗಳ ಜೊತೆಯಲ್ಲಿ ಆಡುತ್ತಲಿರುವ ದಮಯಂತಿಯನ್ನು ಕಂಡು, ಆ ತೋಟದ ಒಳಗೆ ತನ್ನ ಹಕ್ಕಿಗಳ ಗುಂಪಿನೊಡನೆ ಕೂಡಿ, ಇಳಿಯಿತು. ದಮಯಂತಿಯೂ ಆಕೆಯ ಸಖಿಗಳೂ ಚಿನ್ನದ ಗರಿಗಳಿಂದ ಕೂಡಿರುವ ಈ ಹಂಸ ಪಕ್ಷಿಗಳ ಚೆಲುವನ್ನು ನೋಡಿ, ಇವುಗಳನ್ನು ಹಿಡಿದು ಕೊಳ್ಳ ಬೇಕೆಂದು ಎಣಿಸಿ, ಸಖಿಗಳೆಲ್ಲಾ ಹಕ್ಕಿ ಗುಂಪುಗಳನ್ನು ಬೆನ್ನು ಹತ್ತಿ ಹೋದರು. ದಮಯಂತಿಯು ಮುಖ್ಯವಾದ ರಾಜ ಹಂಸೆಯನ್ನು ಹತ್ತಿ ಹೋಗಲು; ಅದು ತನ್ನನ್ನು ಹಿಂಬಾಲಿಸಿ ಬರುವ ಅರಸಿನ ಮಗಳನ್ನು ನೋಡಿ, ಹತ್ತರಕ್ಕೆ ಬರುತ್ತಾ, ಹಿಡಿಯುವದಕ್ಕೆ ಬಂದರೆ, ಬಳ್ಳಿಗಳ ಪೊದೆಗಳನ್ನು ಹೊಗುತ್ತಾ, ತಿರಿಗಿ, ಇನ್ನೇನು? ಶಿಕ್ಕಿತು! ಎಂಬುವಂತೆ ಅವಳ ಮನಸ್ಸಿಗೆ ತೋರ ಪಡಿಸುವ ಹಾಗೆ ಸಮಿಾಪಕ್ಕೆ ಬರುತ್ತಾ, ಹಿಡಿಯುವದಕ್ಕೆ ಬಂದರೆ, ಸ್ವಲ್ಪ ದೂರಕ್ಕೆ ಹಾರುತ್ತಾ, ಹೀಗೆ ಆಕೆಯನ್ನು ಬಹಳ ದೂರ ಎಳ ಕೊಂಡು ಹೋಗಿ, ಮನುಷ್ಯರ ಪ್ರಕಾರ ಆಕೆಯನ್ನು ನೋಡಿ—ಎಲೈ, ಅರಸು ಮಗಳೇ, ನೀನು ಚಿಕ್ಕತನದಿಂದ ಬುದ್ಧಿ ಇಲ್ಲದವಳ ಹಾಗೆ ಕಾಣಿಸುತ್ತೀ. ಯಾಕಂದರೆ ನಾನು ಆಕಾಶದಲ್ಲಿಯೂ ಭೂಮಿಯಲ್ಲಿಯೂ ತಿರುಗುವ ಹಕ್ಕಿಯು; ನೀನು ಭೂಮಿಯಲ್ಲಿ ಮಾತ್ರ ತಿರುಗುವಂಥಾವಳು. ನಿನಗೆ ನನ್ನನ್ನು ಹಿಡಿಯ ಬೇಕೆಂದು ಆಶೆ ಹುಟ್ಟುವದು ಹುಚ್ಚುತನವಲ್ಲವೋ? ನಾನು ಸಾಧಾರಣವಾದ ಹಂಸ ಪಕ್ಷಿಯಲ್ಲ; ಎಲ್ಲಾ ಲೋಕಗಳನ್ನು ಉಂಟು ಮಾಡಿದ ಬ್ರಹ್ಮ ದೇವನ ವಾಹನವಾದ ಹಂಸದ ಕುಲದ ಹಕ್ಕಿಯು ನಾನು. ಭೂಲೋಕವನ್ನು ತಿರುಗುವದಕ್ಕೆ ಬ್ರಹ್ಮ ದೇವನ ಅಪ್ಪಣೆಯನ್ನು ತೆಗೆದು ಕೊಂಡು, ಎಲ್ಲಾ ಲೋಕಗಳನ್ನು ತಿರಿಗಿ, ನೋಡಿ, ಇಲ್ಲಿಗೆ ಬಂದೆನು. ಇಂಥಾ ನಾನು ನಿನ್ನ ಕೈಗೆ ಶಿಕ್ಕುವೆನೇ? ಆದರೆ ನೀನು ನನಗಾಗಿ ಬಹಳ ಆಯಾಸ ಪಟ್ಟೆ. ಆದ್ದರಿಂದ ನಿನಗೊಂದು ಹಿತವಾದ ಬುದ್ಧಿಯನ್ನು ಹೇಳುತ್ತೇನೆ; ಕೇಳು. ನಾನು ತಿರುಗದ ಲೋಕವಿಲ್ಲ. ಎಲ್ಲಾ ಲೋಕಗಳಲ್ಲಿಯೂ ನಿನ್ನ ರೂಪು ರೇಖೆ ಸೌಂದರ್ಯ ಮುಂತಾದ್ದಕ್ಕೆ ಸರಿಯಾದ ಒಬ್ಬ ಹೆಣ್ಣು ಮಗಳನ್ನು ನೋಡಲಿಲ್ಲ. ಹೀಗೆಯೇ ನಿಷಧ ದೇಶದ ಯುವರಾಜನಾದ ನಳಚಕ್ರವರ್ತಿಗೆ ಸರಿಯಾದ ಸೊಬಗುಳ್ಳ ಪುರುಷನನ್ನು ನೋಡಲಿಲ್ಲ. ಆದ್ದರಿಂದ ನಮ್ಮೊಡೆಯನಾದ ಸೃಷ್ಟಿ ಕರ್ತನಾದ

ಬ್ರಹ್ಮನು ನಿನಗೆ ಆ ನಳನೇ ಗಂಡನಾಗಿಯೂ, ಆತನಿಗೆ ನೀನೇ ಹೆಂಡತಿಯಾಗಿಯೂ ಆಗ ಬೇಕೆಂದು ಎಣಿಸಿ, ನಿಮ್ಮಿಬ್ಬರನ್ನು ಸೃಷ್ಟಿಸಿ ಇದ್ದಾನೆಂದು, ನನ್ನ ಮನಸ್ಸಿನಲ್ಲಿ ಎಣಿಸಿ ಇದ್ದೇನೆ. ನೀನು ಆ ಮಹಾ ರಾಯನನ್ನು ಮದುವೆಯಾದರೆ, ನಿನ್ನ ಚೆಲುವು ಜನ್ಮವು ಸಫಲವಾಗುವದು. ಅವನು ಗಂಡಸರಲ್ಲಿ ಸೊಬಗುಳ್ಳವನಾಗಿಯೂ, ನೀನು ಹೆಂಗಸರಲ್ಲಿ ಚೆಲುವುಳ್ಳವಳಾಗಿಯೂ ಇರುವದರಿಂದ, ನೀವಿಬ್ಬರು ಗಂಡ ಹೆಂಡರಾಗಿ ಕೂಡಿದರೆ, ಇದಕ್ಕಿಂತಲು ಹೆಚ್ಚಾದ ಸಂತೋಷವು ನಿಮ್ಮಿಬ್ಬರಿಗೂ ಇಲ್ಲ. ನೀನು ಒಪ್ಪಿದರೆ, ಆ ಅರಸು ಮಗನ ಬಳಿಗೆ ಹೋಗಿ, ನನ್ನ ಬುದ್ಧಿ ಚಮತ್ಕಾರದಿಂದ ಆತನು ನಿನ್ನನ್ನು ಮದುವೆಯಾಗುವ ಹಾಗೆ ಮಾಡುವೆನು ಎಂದು ಹೇಳಿತು. ಆಗ ದಮಯಂತಿಯು— ಎಲೈ, ಪಕ್ಷಿಕುಲೋತ್ತಮನೇ, ನಿನ್ನ ಮಾತನ್ನು ಕೇಳಿ, ನನಗೆ ಬಹಳ ಹೆಚ್ಚಳವಾಯಿತು. ನೀನು ಬಹು ಜಾಣನಾಗಿ ಕಾಣಿಸುತ್ತೀಯೇ. ನಾನು ನಿನ್ನ ಮಗಳು ಎಂದು ಎಣಿಸಿ, ನನ್ನ ಮೇಲಣ ಕನಿಕರದಿಂದ ಆತನ ಬಳಿಯಲ್ಲಿ ಹ್ಯಾಗೆ ಹೇಳ ಬೇಕೋ, ಹಾಗೆ ಹೇಳಿ, ನನ್ನ ಮೇಲೆ ಆ ರಾಯನಿಗೆ ಮನಸ್ಸು ಉಂಟಾಗುವಂತೆ ಮಾಡ ಬೇಕು ಎಂದು ಕೈ ಮುಗಿದು, ಬೇಡಿ ಕೊಂಡಳು. ಹಂಸ ಪಕ್ಷಿಯು ದಮಯಂತಿಗೆ ಸಮಾಧಾನವನ್ನು ಮಾಡಿ—ಹಾಗೆ ಮಾಡುವೆನೆಂದು ನಂಬಿಕೆ ಕೊಟ್ಟು, ಆಕಾಶಕ್ಕೆ ಹಾರಿ, ನಿಷಧ ಪಟ್ಟಣಕ್ಕೆ ಬಂದು, ನಳನೊಡನೆ ತಾನು ಮಾಡಿದ ಕಾರ್ಯವನ್ನೂ ದಮಯಂತಿಯ ಮನೋ ಭಾವವನ್ನೂ ತಿಳಿಸಿತು.

ಇಲ್ಲಿ ದಮಯಂತಿಯು ಹಂಸದ ಮಾತನ್ನು ಕೇಳಿದ್ದು ಮೊದಲು ಗೊಂಡು ನಳನಲ್ಲಿ ಶಿಕ್ಕಿರುವ ಮನಸ್ಸು ಉಳ್ಳವಳಾಗಿ, ಯಾವಾಗಲೂ ನಳನನ್ನೇ ಹಂಬಲಿಸುತ್ತಾ, ಊಟ ಉಪಚಾರಗಳನ್ನು ಬಿಟ್ಟು, ನಿಟ್ಟುಸುರುಗಳನ್ನು ಬಿಡುತ್ತಾ, ಕಂದಿದ ಮೊಗವುಳ್ಳವಳಾಗಿ, ಬಡವಾದ ಮೈಯುಳ್ಳವಳಾಗಿ, ರಾತ್ರೆ ಹಗಲು ಚಿಂತೆ ಪಡುತ್ತಾ, ಬಾರಿ ಬಾರಿಗೂ ಹಾ ಎಂದು ಬಾಯಿ ಬಿಟ್ಟು, ನಿದ್ರೆ ಇಲ್ಲದೆ, ಒಂದು ವೇಳೆ ಏನಾದರೂ ಸ್ವಲ್ಪ ನಿದ್ರೆ ಹೋದರೆ, ಕನಸಿನಲ್ಲಿ ಆ ನಳನನ್ನು ಕಂಡು, ಫಕ್ಕನೆ ಎದ್ದು, ತಾನು ಕನಸಿನಲ್ಲಿ ಕಂಡ ನಳನ ಭಾವ ಚಿತ್ರವನ್ನು ಪಠದಲ್ಲಿ ಬರೆದು, ಅದನ್ನೇ ಯಾವಾಗಲೂ ನೋಡುತ್ತಾ, ಮುದ್ದಿಡುತ್ತಾ, ಹೀಗೆ ನಳನ ವಿರಹ ವೇದನೆಯನ್ನು ತಾಳಲಾರದೆ ಇರಲು; ಈಕೆಯ ಸಂಗಾತಿಗಳು ಭೀಮರಾಯನಲ್ಲಿಗೆ ಹೋಗಿ, ಈ ವಿವರವನ್ನು ಅರಿಕೆ ಮಾಡಲು; ಆತನು ತನ್ನ ಮನಸ್ಸಿನಲ್ಲಿ ಬಹು ಪ್ರಕಾರವಾಗಿ ವಿಚಾರಿಸಿ, ಪ್ರಾಯದ

ವಳಾದ ನನ್ನ ಮಗಳಿಗೆ ಬೇಗ ಸ್ವಯಂವರವನ್ನು ಸಾರಿಸ ಬೇಕೆಂದು ಎಣಿಸಿ,—ದಮಯಂತಿಯ ಸ್ವಯಂವರಕ್ಕೆ ಬನ್ನೀ ಎಂದು ಎಲ್ಲಾ ಅರಸುಗಳನ್ನು ಕರಿಸಲು; ಅವರೆಲ್ಲಾ ಆನೆ, ಕುದುರೆ, ತೇರು, ಕಾಲಾಳುಗಳು ಮೊದಲಾದ ಸೇನೆಯನ್ನು ಕೂಡಿ ಕೊಂಡು, ಕುಂಡಿನ ನಗರಕ್ಕೆ ಬಂದು, ಭೀಮರಾಯನಿಂದ ಮಾನಿತರಾಗಿ, ಆತನು ಮಾಡಿಸಿ ಕೊಟ್ಟ ಬಿಡಾರಗಳಲ್ಲಿ ಇಳಿದು ಕೊಂಡರು.

ಹೀಗಿರುವಲ್ಲಿ ಮೂರು ಲೋಕಗಳಲ್ಲಿಯೂ ತಿರುಗುವ ನಾರದನು ಸ್ವರ್ಗಕ್ಕೆ ಹೋಗಿ, ದೇವೇಂದ್ರನನ್ನು ಕಾಣಿಸಿ ಕೊಳ್ಳಲು; ಆತನು ಈತನಿಗೆ ಪೂಜೆಯನ್ನು ಮಾಡಿ, ಆತನ ಕ್ಷೇಮವನ್ನು ಕೇಳಿ—ಭೂಮಿಯಲ್ಲಿರುವ ಅರಸುಗಳು ಜಗಳದಲ್ಲಿ ಬೆನ್ನು ಕೊಡದೆ, ಪ್ರಾಣಗಳಲ್ಲಿ ಆಶೆಯನ್ನು ಇಡದೆ, ಹಗೆಗಳೊಡನೆ ಹೋರಿ, ಶಸ್ತ್ರಾಸ್ತ್ರಗಳಿಂದ ಕೊಲ್ಲಲ್ಪಟ್ಟು, ಇಲ್ಲಿಗೆ ಬಂದರೆ, ನನ್ನ ಅಮರಾವತೀ ಪಟ್ಟಣವು ತುಂಬಿ, ನನಗೆ ಸಂತೋಷವಾಗಿರುವದು. ಈಗ ಅಂಥಾ ಅರಸು ಒಬ್ಬರೂ ತನ್ನ ಪಟ್ಟಣಕ್ಕೆ ಬರುವದಿಲ್ಲ. ಇದಕ್ಕೆ ಕಾರಣವೇನೆಂದು ಕೇಳಿದನು. ನಾರದನು—ಎಲೈ, ಇಂದ್ರನೇ, ಕೇಳು! ಭೂಲೋಕದಲ್ಲಿ ವಿದರ್ಭ ದೇಶಕ್ಕೆ ಅರಸಾದ ಭೀಮ ಭೂಪಾಲಕನಿಗೆ ಮಗಳಾಗಿರುವ ದಮಯಂತಿ ಎಂಬ ಒಂದು ಕನ್ಯಾ ರತ್ನ ಉಂಟು. ಅವಳು ತನ್ನ ಸೊಬಗಿನ ಅತಿಶಯದಿಂದ ಎಲ್ಲಾ ಹೆಂಗಸರುಗಳಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಾಳೆ. ಅವಳಿಗೆ ಸರಿಯಾದ ರೂಪವಂತಿಯು ಹದಿನಾಲ್ಕು ಲೋಕಗಳಲ್ಲಿಯೂ ಇಲ್ಲ. ಈಗ ಆಕೆಗೆ ಸ್ವಯಂವರವು ಸಾರಿ ಇರುವದರಿಂದ, ಎಲ್ಲಾ ದೇಶಗಳ ಅರಸು ಮಕ್ಕಳು ಅವಳನ್ನು ಮದುವೆಯಾಗ ಬೇಕೆಂಬ ಆಶೆಯಿಂದ ಜಗಳಗಳನ್ನು ಬಿಟ್ಟು, ಆ ಭೀಮರಾಯನ ಪಟ್ಟಣಕ್ಕೆ ಹೋಗಿ ಇದ್ದಾರೆ, ಎಂದು ಹೇಳಿದನು.

ಆ ಮಾತನ್ನು ಇಂದ್ರ, ಯಮ, ವರುಣ, ಯಜ್ಞೇಶ್ವರರು ಕೇಳಿ, ನಾವಷ್ಟಮಂದಿಯು ಸ್ವಯಂವರಕ್ಕೆ ಹೋಗುವಾ ಎಂದು ನಿಶ್ಚೈಸಿ ಕೊಂಡು, ತಮ್ಮ ತಮ್ಮ ವಾಹನಗಳನ್ನು ಏರಿ ಬರುವ ದಾರಿಯಲ್ಲಿ ಅದೇ ಸ್ವಯಂವರಕ್ಕೆ ಬರುತ್ತಲಿರುವ ನಳನನ್ನು ನೋಡಿ, ಈ ನಾಲ್ಕು ಜನ ದಿಕ್ಪಾಲಕರು—ಇವನ್ಯಾರು? ಮೈಯಿಂದ ಕೂಡಿರುವ ಮನ್ಮಥನ ಹಾಗೆಯೂ, ನೆತ್ತಿಯಲ್ಲಿ ಕಣ್ಣು ಇಲ್ಲದ ಶಿವನ ಹಾಗೆಯೂ, ನಾಲ್ಕು ತೋಳುಗಳಿಲ್ಲದ ನಾರಾಯಣನ ಹಾಗೆಯೂ, ಸುಡುವಿಕೆ ಇಲ್ಲದ ಸೂರ್ಯನ ಹಾಗೆಯೂ, ಪ್ರಾಯದವನಾಗಿಯೂ, ಇರುವನು. ಇವನು ಸ್ವಯಂವರಕ್ಕೆ ಹೋದಲ್ಲಿ, ಇವನ ರೂಪು ರೇಖೆ ಅಂದ ಚಂದಗಳನ್ನು

ನೋಡಿ, ಆ ಕನ್ನಿಕೆಯು ಇವನನ್ನೇ ವರಿಸುವಳು. ನಮ್ಮ ಮನೋರಥವು ವ್ಯರ್ಥವಾಗುವದು ಎಂದು, ಕೆಲವು ಹೊತ್ತು ಚಿಂತಿಸಿ, ಎಲ್ಲರು ಕೂಡಿ, ಒಂದು ಗುಡ್ಡಾಳೋಚನೆಯನ್ನು ಮಾಡಿ ಕೊಂಡು, ಆಕಾಶದಿಂದ ಭೂಲೋಕಕ್ಕೆ ಇಳಿದು, ನಳಚಕ್ರವರ್ತಿಯನ್ನು ಕುರಿತು—ಎಲೈ, ನರೇಂದ್ರನೇ, ನೀನು ಕನಸಿನೊಳಗಾದರೂ ಸಳ್ಳಾಡದೆ ಇರುವಂಥಾವನು, ನಮಗೆ ದೌತ್ಯವನ್ನು ಮಾಡಿ, ಸ್ವಯಂವರದಲ್ಲಿ ದಮಯಂತಿಯು ನಮ್ಮನ್ನು ವರಿಸುವ ಹಾಗೆ ನೀನು ಪ್ರಯತ್ನವನ್ನು ಮಾಡ ಬೇಕು, ಅಂದರು. ಅದಕ್ಕೆ ನಳಚಕ್ರೇಶ್ವರನು—ಎಲೈ, ಮಹಾತ್ಮರುಗಳಿರಾ, ಈ ಕೆಲಸವನ್ನು ನಾನು ಅವಶ್ಯವಾಗಿ ಮಾಡುತ್ತೇನೆ. ನೀವು ಯಾರು? ನನಗೆ ತಿಳಿಸ ಬೇಕೆಂದು ಕೇಳಲು; ದೇವೇಂದ್ರನು ಆತನನ್ನು ಕುರಿತು—ನಾವು ದಮಯಂತಿಯ ನಿಮಿತ್ತವಾಗಿ ಬಂದ ದಿಕ್ಪಾಲಕರು ಎಂದು ತಿಳಿ. ನಾನು ಇಂದ್ರನು; ಈತನು ಎಲ್ಲಾ ಪ್ರಾಣಿಗಳಿಗೂ ಸಾವನ್ನು ಉಂಟು ಮಾಡುವ ಯಮನು; ಇವನು ವರುಣನು; ಇವನು ಅಗ್ನಿಯು, ಎಂದು ತಿಳಿಸಲು; ಆಗ ನಳಚಕ್ರವರ್ತಿಯು ಕೈ ಮುಗಿದು—ಎಲೈ, ಮಹೇಂದ್ರನೇ, ನೀವು ಬಂದ ಹಾಗೆಯೇ ನಾನು ದಮಯಂತಿಯ ಸ್ವಯಂವರಕ್ಕೆ ಬಂದು ಇದ್ದೇನೆ. ನನ್ನನ್ನು ದೌತ್ಯ ಕೆಲಸಕ್ಕೆ ಕಳುಹಿಸುವದು ಯುಕ್ತವಲ್ಲ. ನನ್ನಲ್ಲಿ ಪ್ರೀತಿಯುಳ್ಳ ಅರಸಿನ ಮಗಳನ್ನು ನಾನೇ, ಮತ್ತೊಬ್ಬನನ್ನು ವರಿಸೆಂದು ನುಡಿಯುವದು ಹ್ಯಾಗೆ? ಎನಲು; ದೇವೇಂದ್ರನು ನಳನನ್ನು ಕುರಿತು—ನೀನು ಮೊದಲು—ನೀವು ಬಯಸಿದ ಕಾರ್ಯವನ್ನು ಅಗತ್ಯವಾಗಿ ನೆರವೇರಿಸುವೆನು ಎಂದು ಹೇಳಿ, ಈಗ ಹೀಗೆ ಹೇಳುವದು ತಕ್ಕದ್ದಲ್ಲ. ತಾಮಸಾ ಮಾಡದೆ, ಹೋಗಿ, ನಾವು ಬಂದಿರುವದನ್ನು ದಮಯಂತಿಗೆ ಅರಿಕೆ ಮಾಡು. ದೇವತೆಗಳ ಕೆಲಸವನ್ನು ಮಾಡಿದರೆ, ನಿನಗೆ ಎಲ್ಲಾ ಅಭೀಷ್ಟವು ಆಗುತ್ತದೆ, ಅಂದನು. ಆಗ ನಳನು—ಬಹಳ ಜನರು ಕಾವಲಾಗಿರುವ ಅರಸಿನ ಮಗಳ ರಾಣೀವಾಸಕ್ಕೆ ನಾನು ಯಾವ ಪ್ರಕಾರದಿಂದ ಹೋಗುವೆನು? ಎನಲು; ದೇವೇಂದ್ರನು—ನಮ್ಮ ವರದಿಂದ ಅಲ್ಲಿಗೆ ಹೋಗುವದಕ್ಕೆ ನಿನಗೆ ಸಾಮರ್ಥ್ಯವು ಉಂಟಾಗುತ್ತದೆ. ಶೀಘ್ರದಲ್ಲಿ ಹೋಗೆಂದನು.

ಆಗ ಸತ್ಯ ಸಂಧನಾದ ನಳನು ಬದಲು ಮಾತಾಡದೆ, ವಿದರ್ಭ ಪಟ್ಟಣಕ್ಕೆ ಹೋಗಿ, ಬಹಳ ತೊಟ್ಟಿಗಳನ್ನು ಕಳೆದು, ಕನ್ಯಾಂತಃಪುರಕ್ಕೆ ಹೋಗಿ, ಸಂಗಾತಿಗಳಿಂದ ಕೂಡಿರುವ ಕೋಮಲಾಂಗಿಯಾಗಿ, ಪ್ರಾಯದವಳಾಗಿ, ಚಕೋರಗಳ ಹಾಗೆ ಕಣ್ಣುಗಳುಳ್ಳವಳಾಗಿ, ಬಡ ನಡುವಿನಿಂದ ಬಳುಕುತ್ತಿರುವವಳಾಗಿ,

ಮುಗುಳು ನಗೆಯುಳ್ಳವಳಾಗಿ, ಮೊಗದಾವರೆಯುಳ್ಳವಳಾಗಿ, ಕಾಂತಾ ಶಿರೋಮಣಿಯಾದ ದಮಯಂತಿಯನ್ನು ನೋಡಿ, ಮನಗೆಟ್ಟು, ಮದನನ ಬಾಣಗಳಿಂದ ಪೀಡಿತನಾದರೂ, ಧೀರೋದಾತ್ತನಾಯಕನಾದ್ದರಿಂದಲೂ, ಸತ್ಯ ಸಂಧನಾದ್ದರಿಂದಲೂ, ತಿರಿಗಿ ಧೈರ್ಯವನ್ನು ಧರಿಸಿ, ನಿಂತಿರಲು; ದಮಯಂತಿಯ ಸಂಗಾತಿಗಳು ಈತನನ್ನು ಕಂಡು, ಶೀಘ್ರದಲ್ಲಿ ಎದ್ದು, ಆತನ ತೇಜಸ್ಸನ್ನು ನೋಡಿ, ಈ ದಿವ್ಯ ಪುರುಷನು ದೇವತೆಗಳೂ, ಯಕ್ಷರೂ, ಗಂಧರ್ವರೂ, ಉರಗರೂ, ಮೊದಲಾದವರೊಳಗೆ ಯಾರೋ? ತಿಳಿಯ ಕೂಡದು ಎಂದು, ತಮ್ಮ ತಮ್ಮ ಮನಸ್ಸುಗಳಲ್ಲಿ ಎಣಿಸುತ್ತಾ, ಮಾತನಾಡಿಸುವದಕ್ಕೂ ಶಕ್ತಿ ಸಾಲದೆ, ನಾಚಿಕೆಯಿಂದ ಬೊಗ್ಗಿಸಿ ಕೊಂಡಿರುವ ತಲೆಯುಳ್ಳವರಾಗಿ ಇರಲು; ದಮಯಂತಿಯು, ತನ್ನ ಅಂದ ಚಂದಗಳನ್ನು ನೋಡಿ, ಬೆರಗಾಗಿ ನಿಂತಿರುವ ಆತನ ರೂಪುಲಾವಣ್ಯಕ್ಕೆ ಆಶ್ಚರ್ಯ ಪಡುತ್ತಾ, ಮುಖದಲ್ಲಿ ಮುಗುಳು ನಗೆಯನ್ನು ತೋರಿಸುತ್ತಾ, ಕಡೆಗಣ್ಣ ನೋಟಗಳಿಂದ ಎವೆ ಹಾಕದೆ, ನೋಡಿ—ಎಲೈ, ಮಹಾ ಪುರುಷನೇ, ಮೈಯುಳ್ಳ ಮನ್ಮಥನೋಪಾದಿಯಲ್ಲಿ ಮೆರೆಯುವ ನಿನ್ನನ್ನು ನೋಡಿದ ಮಾತ್ರದಿಂದಲೇ ನನ್ನ ಮನಸ್ಸು ಕಲಕಾಗಿ ಇದೆ. ಅನೇಕ ಮಂದಿ ಕಾವಲುಗಾರರು ಕಾದಿರುವಲ್ಲಿ, ಈ ಅರಸುಗಳ ಹೆಂಡರಿರುವ ಅರಮನೆಗೆ ಹ್ಯಾಗೆ ಹೊಕ್ಕೆ? ನಿನ್ನನ್ನು ಯಾರೂ ಕಾಣದೆ ಇರುವದಕ್ಕೆ ಕಾರಣವೇನು? ನಮ್ಮ ತಂದೆಯಾದ ಭೀಮರಾಯನು ಉಗ್ರವಾದ ಆಜ್ಞೆಯುಳ್ಳವನು. ನೀನು ಬಂದ ಕೆಲಸವೇನು? ಬೇಗ ತಿಳಿಸಿ, ಬಂದ ಹಾಗೆ ಹೋಗು, ಅಂದಳು.

ಆಗ ಆತನು—ಎಲೈ, ಅರಸಿನ ಮಗಳೇ, ನಾನು ನಳನು. ದೇವತೆಗಳ ಕೆಲಸಕ್ಕಾಗಿ ನಿನ್ನ ಬಳಿಗೆ ದೂತನಾಗಿ ಬಂದು ಇದ್ದೇನೆ. ಇಂದ್ರ, ಯಮ, ವರುಣ, ಅಗ್ನಿ, ಈ ನಾಲ್ವರು ನಿನ್ನನ್ನು ವರಿಸುವದಕ್ಕೆ ಬಯಸಿ, ಬಂದು ಇದ್ದಾರೆ. ಇವರೊಳಗೆ ಯಾರಾದರೂ ಒಬ್ಬನನ್ನು ವರಿಸು. ಅವರ ವರದಿಂದ ನಾನು ನಿನ್ನ ಅಂತಃಪುರವನ್ನು ಹೊಗುವಾಗ, ಒಬ್ಬನಾದರೂ—ನೀನು ಯಾರೆಂದೂ, ಎಲ್ಲಿ ಹೋಗುತ್ತೀ ಎಂದೂ, ಕೇಳಿದವನಿಲ್ಲ. ಇಗೋ, ನಾನು ಬಂದ ಕೆಲಸವು ಇದು. ಇನ್ನು ನಿನ್ನ ಮನಸ್ಸಿಗೆ ತೋರಿದ ರೀತಿಗೆ ನಡಕೋ ಎಂದು ಹೇಳಿದನು. ಆ ಮಾತನ್ನು ಕೇಳಿ, ದಮಯಂತಿಯು ಆ ದೇವತೆಗಳನ್ನು ನೆನೆದು, ನಮಸ್ಕರಿಸಿ, ಆತನನ್ನು ನೋಡಿ, ನಸುನಗೆಯನ್ನು ಬೀರುತ್ತಾ—ಎಲೈ, ಪ್ರಾಣವಲ್ಲಭನೇ, ನೀನೇ ಹೀಗೆ ಹೇಳಿದರೆ, ನಾನು ಏನು ಹೇಳ ಬೇಕು? ನನ್ನ ಮನೋರಥಕ್ಕೆ ಸರಿಯಾಗಿ ನೀನು ನಡೆಯ ಬೇಕಲ್ಲವೇ? ಮೊದಲು ಹಂಸೆಯು ಬಂ

ದು, ನಿನ್ನ ಮಹತ್ವವನ್ನು ಹೇಳಿದ್ದು ಮೊದಲು ಗೊಂಡು ನನ್ನ ಒಡವೆ ವಸ್ತುಗಳನ್ನೂ, ನನ್ನ ಒಡಲನ್ನೂ, ನನ್ನ ಪ್ರಾಣಗಳನ್ನೂ, ನಿನ್ನ ವಶಾ ಮಾಡಿ, ನೀನೇ ಪ್ರಾಣೇಶ್ವರನೆಂದು ನೆರೆ ನಂಬಿ, ನಿನ್ನ ವಿರಹದಿಂದ ಉಂಟಾದ ನೋವಿನಿಂದ ಹೊರಳುತ್ತಲಿದ್ಧೇನೆ. ನಿನ್ನನ್ನು ಕರ ತರಿಸುವದಕ್ಕಲ್ಲವೇ ಸ್ವಯಂವರವೆಂಬ ನೆವದಿಂದ ಎಲ್ಲಾ ಅರಸುಗಳನ್ನು ಕರತರಿಸಿದ್ದು? ಹೀಗೆ ಇರುವ ನನ್ನನ್ನು ನೀನು ಕಡೆಗಣ್ಣಿನಿಂದ ನೋಡಿದರೆ, ವಿಷದಿಂದಲಾಗಲಿ, ಬೆಂಕಿಯಿಂದಲಾಗಲಿ, ನೀರಿನಿಂದಲಾಗಲಿ, ನೇಣಿನಿಂದಲಾಗಲಿ, ನಿನಗಾಗಿ ಈ ಒಡಲನ್ನು ಬಿಡುತ್ತೇನೆ ಎಂದು ನುಡಿಯಲು; ನಳನು—ಎಲೈ, ಕಾಂತಾ ಮಣಿಯೇ, ದಿಕ್ಪಾಲರೇ ನಿನ್ನನ್ನು ಬಯಸುವಾಗ ಅಲ್ಪ ಮನುಷ್ಯನಾದ ನನ್ನನ್ನು ಬಯಸುವದು ಉಚಿತವೇ? ಲೋಕ ಪಾಲಕರಾಗಿ, ಮಹಾತ್ಮರಾಗಿರುವ ಇಂದ್ರನೇ ಮೊದಲಾದ ದೇವತೆಗಳ ಕಾಲ ಧೂಳಿಗಾದರೂ ಸರಿ ಹೋಗಲಾರದೆ ಇರುವ ನನ್ನನ್ನು ಯಾತಕ್ಕೆ ಬಯಸುತ್ತಿದ್ಧೀಯೇ? ದೇವತೆಗಳನ್ನೇ ವರಿಸುವದು ನಿನಗೆ ಬಹಳ ಒಳ್ಳೇದಾಗಿ ತೋರುತ್ತದೆ. ಇದಲ್ಲದೆ, ದೇವತೆಗಳ ಕೆಲಸಕ್ಕೆ ಯಾವನು ಅಡ್ಡೀ ಮಾಡುವನೋ, ಆತನು ಎಲ್ಲಾ ಸುಖಗಳನ್ನು ಕಳ ಕೊಂಡು, ಸತ್ತು ಹೋಗುವನು. ಅದರಿಂದ ಆ ನಾಲ್ವರೊಳಗೆ ಒಬ್ಬನನ್ನು ಒಪ್ಪಿ, ವರಿಸಿ, ನನ್ನನ್ನು ಕಾಪಾಡು. ದೇವತೆಗಳನ್ನು ವರಿಸಿದರೆ, ಬಹಳ ರಮ್ಯವಾದ ನುಣುಪಾದ ವಸ್ತ್ರಗಳೂ, ನವರತ್ನಗಳು ಕೆತ್ತಿದ ಒಡವೆಗಳೂ, ದಿವ್ಯಗಂಧ ಮಾಲಿಕೆಗಳೂ, ಇವಷ್ಟನ್ನು ಅನುಭವಿಸ ಬಹುದು. ಇಂಥಾ ದೇವತೆಗಳನ್ನು ಒಲ್ಲೆ ಎಂದು ನುಡಿಯುವ ನಿನ್ನಂಥಾ ಅವಿವೇಕಿಯು ಯಾರಾದರೂ ಉಂಟೇ? ಯಾವನ ದಂಡನೆಗೆ ಬೆದರಿ, ಎಲ್ಲಾ ಪ್ರಾಣಿಗಳು ನ್ಯಾಯದಿಂದ ನಡೆಯುತ್ತಾರೋ, ಅಂಥಾ ಯಮನನ್ನು ವರಿಸದೆ ಇರುವ ಹೆಂಗಸು ಉಂಟೇ? ಮೂರು ಲೋಕಗಳಿಗೂ ಒಡೆಯನಾಗಿ ಇರುವ ದೇವೇಂದ್ರನನ್ನು ವರಿಸುವದಕ್ಕಿಂತ ಇನ್ನೊಂದು ಭಾಗ್ಯವು ಏನದೆ? ರತ್ನಾಕರಗಳಿಗೆ ಅರಸಾಗಿ, ಸಕಲ ರತ್ನಗಳನ್ನು ಮನೆಯಲ್ಲಿ ತುಂಬಿ ಕೊಂಡಿರುವ ವರುಣನನ್ನಾದರೂ ಮದುವೆಯಾಗು. ಆತನನ್ನು ಒಲ್ಲದಿದ್ದರೆ, ತೇಜೋವಂತನಾದ ಅಗ್ನಿಯನ್ನಾದರೂ ಗಂಡನಾಗಿ ಮಾಡಿಕೋ. ನನ್ನ ನುಡಿಯನ್ನು ನಿರಾಕರಿಸ ಬೇಡ. ನಾನು ಸತ್ಯವಾಗಿ ಹೇಳುತ್ತೇನೆ, ಅಂದನು.

ದಮಯಂತಿಯು ಆತನ ಮಾತುಗಳನ್ನು ಕೇಳಿ, ಎದೆಯಲ್ಲಿ ಅಲಗು ನೆಟ್ಟಂತೆ ಧಾರಾಳವಾಗಿ ಸಂಕಲ್ಪ ಪಡುತ್ತಾ, ನಿಟ್ಟುಸುರುಗಳನ್ನು ಬಿಡುತ್ತಾ, ನಳನನ್ನು ಕುರಿತು—ಎಲ್ಲಾ ದೇವತೆಗಳಿಗೂ ನಮಸ್ಕಾರವು! ನೀನು ಎಷ್ಟು ಹೇಳಿದ

ರೂ, ನಿನ್ನ ಮಾತು ನನ್ನ ಕಿವಿಗೆ ಬೀಳುವದಿಲ್ಲ, ನನ್ನ ಮನಸ್ಸು ಒಡಂಬಡುವದಿಲ್ಲ. ನೀನೇ ನನ್ನ ಗಂಡನು, ನನ್ನ ಪ್ರಾಣಕ್ಕೆ ಒಡೆಯನು. ನಿನ್ನನ್ನೇ ವರಿಸಿ ಇದ್ದೇನೆ. ಈ ಮಾತು ಸುಳ್ಳಲ್ಲ. ನಿನ್ನಲ್ಲಿ ನೆಟ್ಟಿರುವ ನನ್ನ ಮನಸ್ಸು ಎಂದಿಗೂ ಅಲುಗಲಾರದು ಎಂದು ನುಡಿದು, ಕೈ ಮುಗಿದು, ಕಣ್ಣೀರುಗಳ ಕೋಡಿಯನ್ನು ಹರಿಸುತ್ತಾ, ಗಡಗಡನೆ ನಡುಗುತ್ತಾ ಇರುವ ಆ ಕನ್ನಿಕೆಯನ್ನು ನೋಡಿ,—ದೂತನಾಗಿ ಬಂದ ನಾನು ಸ್ವಕಾರ್ಯದಲ್ಲಿ ಪ್ರವರ್ತಿಸುವದು ಯುಕ್ತವಲ್ಲವಷ್ಟೆ! ಅವಶ್ಯವಾಗಿ ನಿಮ್ಮ ಕಾರ್ಯವನ್ನು ಮಾಡುತ್ತೇನೆಂದು, ದೇವತೆಗಳೊಡನೆ ಪ್ರತಿಜ್ಞೆಯನ್ನು ಮಾಡಿ, ನಿನ್ನ ಬಳಿಗೆ ಬಂದು, ಇಂಥಾ ಕೆಟ್ಟ ಕೆಲಸವನ್ನು ಮಾಡುವದು ನನಗೆ ತಕ್ಕದ್ದಲ್ಲ. ಆದ್ದರಿಂದ ನನ್ನಲ್ಲಿ ದಯ ಮಾಡಿ, ಅವರಲ್ಲಿ ಯಾರನ್ನಾದರೂ ಒಬ್ಬನನ್ನು ಅಗತ್ಯವಾಗಿ ವರಿಸ ಬೇಕು ಎಂದು ಕೈ ಮುಗಿದು, ಬೇಡಿ ಕೊಂಡನು. ಆಗ ದಮಯಂತಿಯು ಕಣ್ಣೀರನ್ನು ಶರಗಿನಿಂದ ಒರಸಿ ಕೊಳ್ಳುತ್ತಾ, ಕಣ್ಣೀರಿನಿಂದ ತುಂಬಿದ ಕಣ್ಣುಗಳಿಂದ ನೋಡುತ್ತಾ—ಎಲೈ, ನರೇಂದ್ರನೇ, ನಿನಗಿಷ್ಟು ಭಯವೇತಕ್ಕೆ? ನಿನ್ನಲ್ಲಿ ತಪ್ಪು ಇಲ್ಲದೆ ಇರುವ ರೀತಿಗೆ ಒಂದು ಉಪಾಯವನ್ನು ಹೇಳುತ್ತೇನೆ, ಕೇಳು. ನೀನೂ ಇಂದ್ರನು ಮೊದಲಾದ ಲೋಕ ಪಾಲಕರೂ ಸ್ವಯಂವರಕ್ಕೆ ಬಂದ ಸಮಯದಲ್ಲಿ, ಎಲ್ಲಾ ದೇವತೆಗಳು ನೋಡುತ್ತಿರಲು, ಅವರ ಅನುಗ್ರಹದಿಂದ ನಿನ್ನನ್ನೇ ವರಿಸುತ್ತೇನೆ. ಹೊರಟು ಹೋಗು, ಅಂದಳು.

ಆಗ ನಳನು ತಿರಿಗಿ ಇಂದ್ರನೇ ಮೊದಲಾದವರ ಬಳಿಗೆ ಬಂದು, ಬಾಡಿರುವ ಮುಖದಿಂದ ಕೈ ಮುಗಿದು, ನಿಂತಿರಲು; ದೇವೇಂದ್ರನು—ಎಲೈ, ಅರಸು ಮಗನೇ, ದಮಯಂತಿಯು ಬಳಿಗೆ ಹೋಗಿದ್ದಿಯಾ? ಅವಳಲ್ಲಿ ನಮ್ಮ ಬಯಕೆಯನ್ನು ತಿಳಿಸಿದಿಯಾ? ಅದಕ್ಕೆ ಅವಳು ಬದಲು ಏನು ಹೇಳಿದಳು? ಎಂದು ಕೇಳಲು; ನಳನು—ಎಲೈ, ಮಹಾತ್ಮನೇ, ನಾನು ನಿಮ್ಮ ಅಪ್ಪಣೆಯಿಂದ ಆ ಕನ್ನಿಕೆಯೂ ಆಕೆಯ ಸಂಗಾತಿಗಳೂ ಅಲ್ಲದೆ ಮಿಕ್ಕ ಕಾವಲುಗಾರರೊಬ್ಬರೂ ನನ್ನ ಅರಿಯದೆ ಹೋದ್ದರಿಂದ, ಆಕೆಯ ಬಳಿಗೆ ಹೋಗಿ, ನಿಜವಾಗಿ ನಿಮ್ಮ ನಾಲ್ವರಲ್ಲಿ ಒಬ್ಬರನ್ನು ವರಿಸು ಎಂದು ಎಷ್ಟು ಬಗೆಯಲ್ಲಿ ಕೈ ಮುಗಿದು, ಬೇಡಿ ಕೊಂಡಾಗ್ಯೂ, ಒಪ್ಪದೆ, ಅವಳು—ನಿನ್ನನ್ನೇ ಹೊರತಾಗಿ ಮತ್ತೊಬ್ಬರನ್ನು ವರಿಸುವದಿಲ್ಲ. ಸ್ವಯಂವರದಲ್ಲಿ ಆ ದೇವತೆಗಳ ಮುಂದೆಯೇ ಅವರ ಕಟಾಕ್ಷದಿಂದ ನಿನ್ನನ್ನೇ ವರಿಸುತ್ತೇನೆ. ಹಾಗಾದರೆ, ನಿನ್ನ ಮೇಲೆ ತಪ್ಪಿರುವದಿಲ್ಲ; ಹೋಗು ಎಂದು, ಖಂಡಿತವಾಗಿ ಹೇಳಿ, ಕಳುಹಿಸಿದಳು. ನಾನು ನಡೆದ ವಿವರವನ್ನು ನಿ

ಮಗೆ ನಿಜವಾಗಿ ತಿಳಿಸಿದ್ದೇನೆ. ನೀವು ಮಹಾತ್ಮರಾದ್ದರಿಂದಲೂ, ಎಲ್ಲಾ ಜನರ ಮನೋಭಾವಗಳನ್ನು ತಿಳಿಯುವಂಥಾವರಾದ್ದರಿಂದಲೂ, ನಾನು ನಿಜಗಾರನೋ, ಸುಳ್ಳುಗಾರನೋ, ಎಂಬುವದನ್ನು ನಿಮ್ಮ ಮನಸ್ಸಿನಲ್ಲಿ ನೀವೇ ತಿಳು ಕೊಂಡು, ನಿಮ್ಮ ಬುದ್ಧಿಗೆ ತೋರಿದ ಹಾಗೆ ನಡೆಯ ಬಹುದು ಎಂದು ಹೇಳಿದನು. ಆಗ ಲೋಕಪಾಲಕರು ತಮ್ಮ ಮನಸ್ಸಿನಲ್ಲಿ, ಇವನಲ್ಲಿ ವಂಚನೆ ಇಲ್ಲ ಎಂದು ಎಣಿಸಿ, ಈತಗೆ ಅಪ್ಪಣೆಯನ್ನು ಕೊಟ್ಟು, ಕಳುಹಿಸಿದರು.

ಆ ಬಳಿಕ ಒಂದು ಶುಭ ದಿವಸದಲ್ಲಿ ಭೀಮ ಭೂಪಾಲಕನು ದಮಯಂತಿಯ ಸ್ವಯಂವರ ಮಂಟಪವನ್ನು ಶೃಂಗರಿಸಿ, ಎಲ್ಲಾ ಅರಸು ಮಕ್ಕಳನ್ನು ಸ್ವಯಂವರ ಮಂಟಪಕ್ಕೆ ಬರ ಹೇಳಿ ಕಳುಹಿಸಲು; ಅವರೆಲ್ಲರು ದಮಯಂತಿಯಲ್ಲಿ ಶಿಕ್ಕಿರುವ ಮನಸ್ಸುಳ್ಳವರಾಗಿ, ಉಡಿಗೆ ತೊಡಿಗೆಗಳನ್ನು ಉಟ್ಟು, ತೊಟ್ಟು, ತಮ್ಮ ತಮ್ಮ ಪರಿವಾರ ಜನಗಳೊಡನೆ ಕೂಡಿ, ಚಿನ್ನದ ಕಂಭಗಳಿಂದಲೂ, ಮಕರ ತೋರಣಗಳಿಂದಲೂ ಅಲಂಕರಿಸಿ ಇರುವ ಸ್ವಯಂವರ ಮಂಟಪವನ್ನು, ಸಿಂಹಗಳು ಪರ್ವತದ ಗುಹೆಗಳನ್ನು ಹ್ಯಾಗೋ, ಹಾಗೆ ಹೊಕ್ಕು, ಚಿನ್ನದ ಸಿಂಹಾಸನಗಳಲ್ಲಿ ಕುಳಿತು ಕೊಂಡು ಇರಲು; ಆ ರಂಗ ಮಂಟಪವು ನಾಗೇಂದ್ರರಿಂದ ಹೊಳೆಯುತ್ತಲಿರುವ ಭೋಗವತೀ ಪುರದ ಹಾಗೆಯೂ, ಹುಲಿಗಳಿಂದ ನಿಬಿಡವಾಗಿರುವ ಗಿರಿ ಗುಹೆಗಳ ಚಂದದಿಂದಲೂ ಹೊಳೆಯುತ್ತಿತ್ತು. ಆ ಸ್ವಯಂವರ ಮಂಟಪದಲ್ಲಿ ದೇವೇಂದ್ರನು ಮೊದಲಾದ ಲೋಕಪಾಲಕರು ಒಂದು ಸ್ಥಳದಲ್ಲಿ ಬಂದು ಕುಳಿತಿದ್ದರು. ಆಗ ಪೂರ್ಣ ಚಂದ್ರಮುಖಿಯಾದ ದಮಯಂತಿಯು ತನ್ನ ಅಂದ ಚಂದಗಳಿಂದ ಎಲ್ಲಾ ಅರಸು ಮಕ್ಕಳ ಹೃದಯಗಳಿಗೂ ಸಂತೋಷವನ್ನು ಸುರಿಯುತ್ತಾ, ಸಖೀ ಜನಗಳೊಡನೆ ಕೂಡಿ, ಸ್ವಯಂವರ ಮಂಟಪವನ್ನು ಹೊಕ್ಕು, ಬರುತ್ತಿರಲು; ಆ ರಾಜ ಕುಮಾರಕರ ಕಡೆಗಣ್ಣ ನೋಟಗಳು ಚೆಲುವೆಯಾದ ದಮಯಂತಿಯ ಅಂಗಾಂಗಗಳಲ್ಲಿ ಮೊದಲು ನೋಡಿದ ತಾವನ್ನು ಬಿಟ್ಟು, ಆಚೆಗೆ ಹೋಗದೆ ಹೋಯಿತು.

ಆ ಸಮಯದಲ್ಲಿ ಕಟ್ಟಿಗೆಯವರೇ ಮೊದಲಾದವರು ದಮಯಂತಿಯ ಸಮೀಪಕ್ಕೆ ಬಂದು, ಎಲ್ಲಾ ಅರಸು ಮಕ್ಕಳ ಕುಲಗಳನ್ನೂ ಹೆಸರುಗಳನ್ನೂ ಕೀರ್ತಿಗಳನ್ನೂ ಪ್ರತಾಪಗಳನ್ನೂ ವಿಂಗಡಸಿ, ವಿಂಗಡಿಸಿ ಹೇಳಿ, ತೋರಿಸುತ್ತಿರಲು; ಆ ದಮಯಂತಿಯು ಅವರೆಲ್ಲರನ್ನು ಕಡೆಗಣ್ಣಿನಲ್ಲಾದರೂ ನೋಡದೆ, ಅರಸು ಮಕ್ಕಳ ನಡುವೆ ನಳಾಕೃತಿಯನ್ನು ಧರಿಸಿ ಕೊಂಡಿರುವ ನಾಲ್ವರು ಲೋಕಪಾಲಕರ ಕೂಡ ನಳನು ಕುಳಿತಿರುವಲ್ಲಿಗೆ ಬಂದು, ಈ ಐವರು ಅಭೇ

ದವಾಗಿ ವಯೋ ರೂಪುಗಳಿಂದ ಒಂದೇ ಪ್ರಕಾರವಾಗಿ ಇರುವದರಿಂದಲೂ, ದೊಡ್ಡವರು ಹೇಳುವಂಥ ದೇವತೆಗಳ ಗುರುತುಗಳೊಳಗೆ ಒಂದು ಗುರುತಾದರೂ ಕಾಣಿಸದೆ ಇರುವದರಿಂದಲೂ, ಈ ಐದು ಮಂದಿಯೊಳಗೆ ನಳನು ಯಾರೆಂದು ತಿಳಿಯುವೆನು? ಇದಕ್ಕೇನು ಮಾಡಲಿ? ಎಂದು, ಬಹಳ ಚಿಂತೆಯಿಂದ ತನ್ನ ಮನಸ್ಸಿನಲ್ಲಿ—ನಾನು ಈ ದೇವತೆಗಳನ್ನೇ ಶರಣವನ್ನು ಹೊಂದಿ ಬೇಡಿ ಕೊಳ್ಳುವದೇ ಉಚಿತವೆಂದು ಎಣಿಸಿ, ಅವರಿಗೆ ನಮಸ್ಕಾರವನ್ನು ಮಾಡಿ, ಕೈ ಮುಗಿದು, ಭಯದಿಂದ ನಡನಡುಗುತ್ತಾ—ಎಲೈ, ಮಹಾತ್ಮರುಗಳಿರಾ, ನಿಮ್ಮಿಂದಲೇ ಲೋಕದ ಜನರೆಲ್ಲಾ ಧರ್ಮಿಷ್ಠರಾಗಿಯೂ ಸತ್ಯವಂತರಾಗಿಯೂ ನಡೆಯುವರು. ಪಾಪಿಷ್ಠರಾಗಿಯೂ ಅಸತ್ಯವಂತರಾಗಿಯೂ ನಡೆಯುವಂಥಾ ಜನಗಳು ನಿಮ್ಮಿಂದಲೇ ಶಿಕ್ಷೆಯನ್ನು ಹೊಂದುವರು. ಇಂಥಾ ಧರ್ಮದೇವತೆಗಳು ನೀವಾದ್ದರಿಂದ, ನಿಮ್ಮ ಪಾದವನ್ನು ಶರಣವನ್ನಾಗಿ ಹೊಂದಿದ್ಧೇನೆ. ನಿಮ್ಮ ದಾಸಿಯಾದ ನನ್ನನ್ನು ದಯದಿಂದ ಕಾಪಾಡ ಬೇಕು. ರಾಜ ಹಂಸವು ನನ್ನ ಸಮೀಪಕ್ಕೆ ಬಂದು, ನಳನ ರೂಪು ರೇಖೆಗಳನ್ನೂ ಸದ್ಗುಣಗಳನ್ನೂ ಹೇಳಿದ ಮೊದಲು ಗೊಂಡು—ಆತನೇ ನನಗೆ ಪ್ರಾಣಕಾಂತನೆಂದು, ನನ್ನ ತ್ರಿಕರಣ ಶುದ್ಧವಾಗಿ ನಿಶ್ಚೈಸಿ ಇದ್ಧೇನೆ. ಆತನನ್ನು ಬಿಟ್ಟು, ಮತ್ತೊಬ್ಬನನ್ನು ಮದುವೆಯಾಗುವದಕ್ಕೆ ನನ್ನ ಮನಸ್ಸು ಬರುವದಿಲ್ಲ. ಸತ್ಯವಾಗಿ ನುಡಿಯುತ್ತೇನೆ. ನನಗೆ ನಳನೇ ಪ್ರಾಣನಾಯಕನೆಂದು ಮೊದಲೇ ನೀವು ನಿಯಮಿಸಿ ಇದ್ದದ್ದರಿಂದ ನನಗೂ ಹಾಗೆ ಅಪೇಕ್ಷೆ ಹುಟ್ಟಿತು. ನನ್ನ ಪಾತಿವ್ರತ್ಯವು ಕೆಡದ ಹಾಗೂ, ನನ್ನ ಅಭೀಷ್ಟವು ನೆರವೇರುವ ಹಾಗೂ, ನಿಮ್ಮ ಸಂಕಲ್ಪವು ಸತ್ಯವಾಗುವ ಹಾಗೂ, ನನ್ನ ಮೇಲೆ ದಯದಿಂದ ನಿಜವಾದ ನಳನ ರೂಪೇ ನನಗೆ ತೋರುವ ಹಾಗೆ ಅನುಗ್ರಹಿಸಿ ಎಂದು, ದೈನ್ಯದಿಂದ ಬೇಡಿ ಕೊಂಡಳು.

ಆ ಮಾತನ್ನು ಇಂದ್ರಾದಿ ಲೋಕಪಾಲಕರು ಕೇಳಿ, ಇದಷ್ಟೂ ನಿಜವೆಂದು ತಿಳಿದು, ಆಕೆಗೆ ನಳನ ಆಕಾರವು ತಿಳಿಯುವ ಹಾಗೆ ಅನುಗ್ರಹಿಸಿದರು. ಆಗ ದಮಯಂತಿಯು ಬೆವರಿಲ್ಲದ ಮೈಯುಳ್ಳವರಾಗಿ, ಎವೆಯನ್ನು ಹಾಕದೆ, ಬಾಡದೆ ಇರುವ ಹೂವಿನ ಮಾಲಿಕೆಗಳನ್ನು ಧರಿಸಿ, ಭೂಮಿಯಲ್ಲಿ ಇದ್ದರೂ, ಭೂಮಿಯನ್ನು ಮುಟ್ಟದೆ ಇರುವ ಗುರುತುಗಳನ್ನು ನೋಡಿ, ಇವರು ಲೋಕ ಪಾಲಕರೆಂದು ತಿಳಿದು, ತಲೆ ಬಾಗಿ, ಕೈ ಮುಗಿದು, ಆ ಬಳಿಕ ಬಾಡಿರುವ ಹೂ ಸರವನ್ನು ಮುಡಿದು, ಎವೆಯ ಹಾಕುವ ಕಣ್ಣುಗಳುಳ್ಳವನಾಗಿ, ಭೂಮಿಯನ್ನೊತ್ತಿ ಕುಳಿತಿರುವ ನಳನನ್ನು ನೋಡಿ—ಇವನೇ ನನ್ನ ಗಂಡನೆಂದು ವರಿಸಿ,

ತನ್ನ ಕೈಯಲ್ಲಿ ಇದ್ದ ಹೂವಿನ ಸರವನ್ನು ದೇವತೆಗಳ ಮುಂದೆಯೇ ಆತನ ಕುತ್ತಿಗೆಯಲ್ಲಿ ಹಾಕಿದಳು. ಆಗ ಇಂದ್ರನೇ ಮೊದಲಾದ ದೇವತೆಗಳು ಸಂತೋಷ ಪಟ್ಟು, ಆತನ ಯಜ್ಞ ಸಮಯದಲ್ಲಿ ಹವಿರ್ಭಾಗಗಳನ್ನು ಪ್ರತ್ಯಕ್ಷವಾಗಿ ಬಂದು ತೆಗೆದು ಕೊಳ್ಳುವ ಹಾಗೂ, ಆತನಿಗೆ ಪುಣ್ಯ ಲೋಕವು ಆಗುವ ಹಾಗೂ, ಎರಡು ವರಗಳನ್ನು ಇಂದ್ರನು ಕೊಟ್ಟನು. ಯಜ್ಞೇಶ್ವರನು, ನಳನು ನೆನದಾಗಲೇ ತಾನು ಪ್ರತ್ಯಕ್ಷನಾಗುವ ಹಾಗೂ, ಆತನಿಗೆ ತನ್ನ ಲೋಕಗಳು ಉಂಟಾಗುವ ಹಾಗೂ, ಎರಡು ವರಗಳನ್ನು ಕೊಟ್ಟನು. ಯಮನು, ನಳನು ಅಟ್ಟ ಅನ್ನ ಮೊದಲಾದವುಗಳಿಗೆ ರುಚಿ ಹುಟ್ಟುವ ಹಾಗೂ, ಆತನ ಹೃದಯವು ಧರ್ಮದಲ್ಲಿಯೇ ಆಸಕ್ತವಾಗಿರುವ ಹಾಗೂ, ಎರಡು ವರಗಳನ್ನು ಕೊಟ್ಟನು. ವರುಣನು, ಆತನು ನೆನಸಿದ ತಾವಿನಲ್ಲಿ ನೀರುಗಳುಂಟಾಗುವ ಹಾಗೂ, ಆತನು ಹಾಕಿ ಕೊಂಡಿರುವ ಹೂವಿನ ಹಾರಗಳು ಬಾಡದೆ, ಪರಿಮಳಿಸುತ್ತಾ ಇರುವ ಹಾಗೂ, ಎರಡು ವರಗಳನ್ನು ಕೊಟ್ಟನು. ಈ ಪ್ರಕಾರ ನಾಲ್ಕು ಮಂದಿ ಲೋಕ ಪಾಲಕರು ಎಂಟು ವರಗಳನ್ನು ಕೊಟ್ಟು, ತಮ್ಮ ತಮ್ಮ ಸ್ಥಾನಗಳಿಗೆ ಹೋದರು. ಆ ಸಮಯದಲ್ಲಿ ಅಲ್ಲಿ ನಡೆದ ವೃತ್ತಾಂತವಷ್ಟು ನಳನಿಗೂ ದಮಯಂತಿಗೂ ಎಲ್ಲಾ ಅರಸುಗಳಿಗೂ ಕನಸಾಗಿ ತೋರಿತು. ಆ ಬಳಿಕ ಭೀಮ ಭೂಪಾಲನು ಮಹಾ ವೈಭವದಿಂದ ನಳ ಚಕ್ರೇಶ್ವರನಿಗೂ ದಮಯಂತಿಗೂ ನೆರೆದ ಅರಸುಗಳ ಮುಂದೆ ಮದುವೆಯನ್ನು ಮಾಡಿಸಿದನು. ಆ ಸಂತೋಷವನ್ನು ನೋಡಿ, ಎಲ್ಲರು ತಮ್ಮ ತಮ್ಮ ದೇಶಗಳಿಗೆ ಹೊರಟು ಹೋದರು. ಆ ಮೇಲೆ ನಳನು ನಾರೀ ರತ್ನವಾದ ದಮಯಂತಿಯೊಡನೆ ಕೂಡಿ, ಶಚೀ ದೇವಿಯೊಡನೆ ಕೂಡಿದ ಇಂದ್ರನೋಪಾದಿಯಲ್ಲಿ ಭೀಮರಾಯನ ಅಪ್ಪಣೆಯನ್ನು ತೆಗೆದು ಕೊಂಡು, ತನ್ನ ಪಟ್ಟಣಕ್ಕೆ ಹೋಗಿ, ಸಕಲ ಭೂಮಂಡಲವನ್ನು ಪಾಲಿಸುತ್ತಾ, ಸೂರ್ಯನ ಹಾಗೆ ತೇಜಸ್ಸುಳ್ಳವನಾಗಿ, ನಹುಷನ ಮಗನಾದ ಯಯಾತಿ ರಾಯನ ಹಾಗೆ ಅಶ್ವಮೇಧ ಮೊದಲಾದ ಬಹಳ ಯಜ್ಞಗಳನ್ನು ಮಾಡುತ್ತಾ, ಹೂದೋಟಗಳಲ್ಲಿರುವ ಕೊಳಗಳಲ್ಲಿ ದಮಯಂತಿಯೊಡನೆ ಲೀಲಾ ವಿಲಾಸಗಳಿಂದ ಹೊತ್ತನ್ನು ಕಳೆಯುತ್ತಾ, ಸಮಸ್ತ ವಸ್ತುಗಳಿಂದ ತುಂಬಿರುವ ಭೂಮಂಡಲದಲ್ಲಿ ಎರಡನೇ ದೇವೇಂದ್ರನೋಪಾದಿಯಲ್ಲಿ ಸುಖವಾಗಿದ್ದನು.

ಇತ್ತಲು ದೇವೇಂದ್ರನು ಮೊದಲಾದ ಲೋಕಪಾಲಕರು ತಮ್ಮ ತಮ್ಮ ಸ್ಥಾನಗಳಿಗೆ ಹೋಗುವ ದಾರಿಯಲ್ಲಿ, ದ್ವಾಪರನೊಡನೆ ಕೂಡಿ ಹೋಗುತ್ತಲಿ

ರುವ ಕಲಿಯನ್ನು ನೋಡಿ, ದೇವೇಂದ್ರನು–ನೀವಿಬ್ಬರು ಎಲ್ಲಿಗೆ ಹೋಗುತ್ತೀರಿ? ಎಂದು ಕೇಳಲು; ಕಲಿ ಪುರುಷನು–ದಮಯಂತಿಯನ್ನು ವರಿಸ ಬೇಕೆಂದು, ಆಕೆಯ ಸ್ವಯಂವರಕ್ಕೆ ಹೋಗುತ್ತೇನೆ, ಅಂದನು. ಇಂದ್ರನು ನಸುನಕ್ಕು, ಕಲಿ ಪುರುಷನನ್ನು ಕುರಿತು–ವೀರಸೇನನ ಮಗನಾದ ನಳಚಕ್ರೇಶ್ವರನು ಅವಳನ್ನು ಮದುವೆಯಾದನು. ಇನ್ನು ಯಾಕೆ ಹೋಗುತ್ತೀ? ಅಂದನು. ಕಲಿಯು ಕೋಪಿಸಿ ಕೊಂಡು–ನಿಮ್ಮಂಥ ಲೋಕಪಾಲಕರನ್ನೆಲ್ಲಾ ನಿರಾಕರಿಸಿ, ಒಬ್ಬ ಮನುಷ್ಯ ಮಾತ್ರನಾದ ನಳನನ್ನು ವರಿಸಿದ ಆ ದಮಯಂತಿಯನ್ನು ಶಿಕ್ಷಿಸ ಬೇಕು, ಎನಲು; ದೇವೇಂದ್ರನು–ಯಾಕೆ ನೀನು ಇಷ್ಟು ಕೋಪಾ ಮಾಡುತ್ತೀ? ದಮಯಂತಿಯು ದೇವತೆಗಳ ಅಪ್ಪಣೆಯನ್ನು ಪಡೆದು, ನಳನನ್ನು ಮದುವೆಯಾಗಿ ಇದ್ಧಾಳೆ. ಸಕಲ ಧರ್ಮ ಶಾಸ್ತ್ರಗಳನ್ನೂ ವೇದಗಳನ್ನೂ ಇತಿಹಾಸ ಪುರಾಣಗಳನ್ನೂ ತಿಳಿದು, ಸಕಲ ಗುಣಗಳೊಡನೆ ಕೂಡಿ, ಅನೇಕ ಯಜ್ಞಗಳನ್ನು ಮಾಡಿ, ದಯಾಶಾಲಿಯಾಗಿ, ದಾನಶೀಲನಾಗಿ, ಧೀರನಾಗಿ, ಸತ್ಯವ್ರತನಾಗಿ, ತಪೋನಿಷ್ಠನಾಗಿ, ಕ್ಷಮಾವಂತನಾಗಿ, ಲೋಕಪಾಲಕರಿಗೆ ಸರಿಯಾದ ಆ ನಳ ಭೂಪಾಲಕನಲ್ಲಿ ಯಾವವನು ದ್ರೋಹವನ್ನು ಮಾಡಲು ಎಣಿಸುವನೋ, ಅವನು ನರಕದಲ್ಲಿ ಮುಳುಗುವನು, ಎಂದು ನುಡಿದನು. ಆ ಬಳಿಕ ದಿಕ್ಪಾಲಕರು ತಮ್ಮ ತಮ್ಮ ಸ್ಥಾನಗಳಿಗೆ ಹೋದರು.

ಕಲಿ ಪುರುಷನು ದ್ವಾಪರನನ್ನು ನೋಡಿ–ನನಗೆ ನಳನಲ್ಲಿ ಅತಿ ಕೋಪ ಉಂಟಾಗಿರುವದರಿಂದ, ಯಾವ ರೀತಿಯಿಂದಲಾದರೂ ಆತನಿಗೆ ರಾಜ್ಯವನ್ನು ತಪ್ಪಿಸಿ, ಆತನು ದಮಯಂತಿಯನ್ನು ಅಗಲಿ ಹೋಗುವ ಹಾಗೆ ಮಾಡುತ್ತೇನೆ. ನೀನು ದಾಳಗಳಲ್ಲಿ ಹೊಕ್ಕು, ನನಗೆ ಸಹಾಯುವನ್ನು ಮಾಡ ಬೇಕು ಎಂದು ಹೇಳಿ, ಅವನನ್ನು ಒಡಗೊಂಡು, ನಿಷಧ ಪಟ್ಟಣಕ್ಕೆ ಹೋಗಿ, ತಾನು ನಳನ ಸೇರುವದಕ್ಕೆ ಹನ್ನೆರಡು ವರುಷಗಳ ಪರಿಯಂತರವು ಹೊಂಚಿ ಕೊಂಡು ಇರಲು; ಒಂದು ದಿವಸ ನಳನು ಶುಚಿ ಮಾಡಿ ಕೊಳ್ಳದೆ, ಸಂಧ್ಯಾವಂದನೆಯನ್ನು ಮಾಡಿದ್ದರಿಂದ–ಇದೇ ಸಮಯವೆಂದು, ಅವನಲ್ಲಿ ಹೊಕ್ಕು, ಆತನ ಒಡಹುಟ್ಟಿದ ಪುಷ್ಕರನ ಬಳಿಗೆ ಹೋಗಿ,–ನೀನು ನನ್ನ ಸಹಾಯದಿಂದ ನಳನನ್ನು ಜೈಸಿ, ಆತನ ಎಲ್ಲಾ ರಾಜ್ಯವನ್ನು ಕಳೆದುಕೋ ಎಂದು ನುಡಿದು, ತಾನು ಒಂದು ಎತ್ತಿನ ರೂಪವನ್ನು ಧರಿಸಿ, ಆತನ ಸಂಗಡಲೇ ಬಂದನು. ಪುಷ್ಕರನು ಮಹಾನುಭಾವನಾದ ನಳನ ಬಳಿಗೆ ಬಂದು–ನಾನು ಒಂದು ಎತ್ತನ್ನು ತಂದಿದ್ಧೇನೆ. ಇದಕ್ಕೆ ಪಂಥವನ್ನು ಹಾಕಿ, ಜೂಜಾಡುವ ಬಾ, ಎಂದ

ಕರೆಯಲು; ದಮಯಂತಿ ನೋಡುವ ಹಾಗೆಯೇ ದೈವಗತಿಯಿಂದ ಚಿನ್ನ, ಬೆಳ್ಳಿ, ಆನೆ, ಕುದುರೆ, ಮೊದಲಾದ ವಾಹನಗಳನ್ನೂ ನವರತ್ನಗಳ ಒಡವೆಗಳನ್ನೂ ಪಂಥಕ್ಕೆ ಒಡ್ಡಿ, ನಳನು ತನ್ನ ತಮ್ಮ ಪುಷ್ಕರನೊಡನೆ ಜೂಜಾಡಿ, ಎಲ್ಲವನ್ನು ಸೋತನು. ಆ ಬಳಿಕ ಮಂತ್ರಿಗಳೂ ಪಟ್ಟಣದಲ್ಲಿರುವ ಜನಗಳೂ ಆ ಜೂಜನ್ನು ನಿಲ್ಲಿಸ ಬೇಕೆಂದು ಎಣಿಸಿ, ಅರಮನೆಯ ಬಾಗಿಲಿಗೆ ಬರಲು; ಕಾವಲುಗಾರರು ತಡೆಯಲಾಗಿ,—ನಾವು ಬಂದಿರುವದನ್ನು ದಮಯಂತಿಗೆ ತಿಳಿಸಿರಿ ಎಂದು ಹೇಳಿ ಕಳುಹಿಸಿದರು. ಆಗ ನಳನ ಸಾರಥಿಯು ಆಕೆಯ ಬಳಿಗೆ ಹೋಗಿ, ಅವರು ಬಂದಿರುವದನ್ನು ತಿಳಿಸಲು; ದಮಯಂತಿಯು ಕಣ್ಣೀರನ್ನು ತುಂಬಿ, ನಳನ ಸನ್ನಿಧಾನಕ್ಕೆ ಹೋಗಿ,—ಎಲೈ, ಭೂಪಾಲಕನೇ, ಮಂತ್ರಿಗಳೂ ಬ್ರಾಹ್ಮಣರೂ ಕ್ಷತ್ರಿಯರೂ ವೈಶ್ಯರೂ ಶೂದ್ರರೂ ಮೊದಲಾದ ಜನಗಳು ನಿನ್ನನ್ನು ನೋಡ ಬೇಕೆಂದು, ನಿನ್ನ ಸಮಯವನ್ನು ನೋಡುತ್ತಾ, ಹಜಾರದಲ್ಲಿ ಕಾದು ಕೊಂಡಿದ್ಧಾರೆ. ಅವರಿಗೆ ಏನು ಅಪ್ಪಣೆ? ಎಂದು ಕೇಳಲು; ನಳನು ಕಲಿಪುರುಷನ ಮಹಿಮೆಯಿಂದ ಉದಾಸೀನವನ್ನು ಮಾಡಿ, ದಮಯಂತಿಯ ಮಾತನ್ನು ಕಿವಿಗೆ ಹಾಕಿ ಕೊಳ್ಳದೆ, ಪ್ರತ್ಯುತ್ತರವನ್ನು ಕೊಡದೆ ಇರಲು; ಅದಷ್ಟನ್ನು ತಿಳಿದು, ಅವರೆಲ್ಲಾ ನಳನಲ್ಲಿ ಆಶೆಯನ್ನು ಬಿಟ್ಟು, ತಮ್ಮ ತಮ್ಮ ಮನೆಗಳಿಗೆ ಹೋದರು.

ಆ ಮೇಲೆ ದಮಯಂತಿಯು—ಅಕ್ಷವಿದ್ಯಾ ಸಮರ್ಥನಾದ ಈ ಪುಷ್ಕರನು ಗಂಡನ ರಾಜ್ಯವನ್ನೆಲ್ಲಾ ಕಳೆದು ಕೊಂಡು, ದೇಶಾಂತರಕ್ಕೆ ಅಟ್ಟುವನು ಎಂದು ನಿಶ್ಚೈಸಿ, ನಳನ ಸಾರಥಿಯಾದ ವಾರ್ಷ್ಣೇಯನೆಂಬವನನ್ನು ಏಕಾಂತದಲ್ಲಿ ಕರೆಸಿ,—ನಳನ ಬುದ್ಧಿಯು ವಿಪರೀತವಾಗಿದೆ; ನಮಗೆ ಆಪತ್ತು ಬರುವದು ಸಿದ್ಧವು. ಇಂಥ ಸಮಯದಲ್ಲಿ ನೀನು ನಮಗೆ ಒಂದು ಉಪಕಾರವನ್ನು ಮಾಡಬೇಕು. ಅದೇನಂದರೆ, ನಳನ ಇಂದ್ರಸೇನನೆಂಬ ಮಗನನ್ನೂ ಇಂದ್ರಸೇನೆ ಎಂಬ ಮಗಳನ್ನೂ ನಳನಿಗೆ ಅತ್ಯಂತ ಪ್ರಿಯಗಳಾದ ಕುದುರೆಗಳೊಡನೆ ಕೂಡಿರುವ ಆತನ ರಥದ ಮೇಲೆ ಕೂರಿಸಿ ಕೊಂಡು, ಕುಂಡಿನ ಪಟ್ಟಣಕ್ಕೆ ಹೋಗಿ, ನನ್ನ ತಂದೆಯಾದ ಭೀಮ ಭೂಪಾಲನಿಗೆ ಒಪ್ಪಿಸಿ, ಆ ಮೇಲೆ ನಿನ್ನ ಮನಸ್ಸು ಬಂದ ಕಡೆಗೆ ಹೋಗು ಎಂದು ಹೇಳಲು; ಆ ವಾರ್ಷ್ಣೇಯನು ಆ ಮಾತನ್ನು ಮಂತ್ರಿಗಳಿಗೆ ತಿಳಿಸಿದನು. ಅವರೆಲ್ಲರು ಏಕಾಲೋಚನೆಯನ್ನು ಮಾಡಿ, ನಿಶ್ಚೈಸಿ—ಹಾಗೆ ಮಾಡು ಎಂದು, ನುಡಿದರು. ತರುವಾಯ ವಾರ್ಷ್ಣೇಯನು ಆ ಶಿಶುಗಳನ್ನು ರಥದ ಮೇಲೆ ಇರಿಸಿ ಕೊಂಡು, ಕುಂಡಿನ ಪಟ್ಟಣಕ್ಕೆ ಹೋಗಿ,

ಭೀಮ ಭೂಪಾಲನಿಗೆ ಒಪ್ಪಿಸಿ, ಆತನ ಅಪ್ಪಣೆಯನ್ನು ತೆಕೊಂಡು, ನಳನಿಗೆ ಬಂದ ಅನರ್ಥವನ್ನು ಎಣಿಸಿ, ಸಂಕಟ ಪಡುತ್ತಾ, ನಳನಲ್ಲಿ ಆಶೆಯನ್ನು ತೊರೆದು, ಇನ್ನು ಎಲ್ಲಿಗೆ ಹೋಗ ಬೇಕೆಂದು ಯೋಚಿಸುತ್ತಾ, ಅಯೋಧ್ಯಾ ಪಟ್ಟಣಕ್ಕೆ ಹೋಗಲು; ಅಲ್ಲಿಗೆ ಅರಸಾದ ಋತುಪರ್ಣ ರಾಯನು ಆತನ ಸಾರಥಿತನದ ಜಾಣತನವನ್ನು ನೋಡಿ, ಮೆಚ್ಚಿ, ಬೇಕಾದ ವಸ್ತುಗಳನ್ನು ಕೊಟ್ಟು, ಬಹುಮಾನದಿಂದ ತನ್ನ ಸಾರಥ್ಯದ ಕೆಲಸದಲ್ಲಿ ಇಟ್ಟು ಕೊಂಡನು.

ಇತ್ತಲಾ ಪುಷ್ಕರನು ನಳನನ್ನು ನೋಡಿ—ನಿನ್ನ ಬೊಕ್ಕಸ ಭಂಡಾರವನ್ನೂ ರಾಜ್ಯವನ್ನೂ ಜೂಜಿನಲ್ಲಿ ಗೆದ್ದೆನು. ಇನ್ನೇನಾವರೂ ಪಂಥವನ್ನು ಒಡ್ಡುವದಕ್ಕೆ ಮತ್ತೇನೂ ನಿನಗಿಲ್ಲ. ನಿನ್ನ ಹೆಂಡತಿಯಾದ ದಮಯಂತಿ ಒಬ್ಬಳು ಇದ್ಧಾಳೆ. ಅವಳನ್ನು ಪಂಥಕ್ಕೆ ಒಡ್ಡುವದಕ್ಕೆ ನಿನಗೆ ಮನಸ್ಸಾದರೆ, ಒಡ್ಡಿ ಆಡುವಾ, ಅಂದನು. ಆ ಮಾತುಗಳು ನಳನ ಎದೆಯನ್ನು ಶೀಳಲು; ಕೆಲವು ಹೊತ್ತು ಸುಮ್ಮನೇ ಇದ್ದು, ಆ ಮೇಲೆ ಆತನನ್ನು ಕೋಪದಿಂದ ಚುರುಚುರನೆ ನೋಡಿ—ಎಲೈ, ನರಾಧಮನೇ, ನನಗೆ ಇನ್ನೂ ಬೇಕಾದಷ್ಟು ಧನಗಳಿವೆ ಎಂದು ನುಡಿದು, ಒಂದು ಮಾಂಗಲ್ಯಸೂತ್ರ ಹೊರತಾಗಿ ಮಿಕ್ಕ ದಮಯಂತಿಯು ಧರಿಸಿ ಇದ್ದ ಒಡವೆಗಳನ್ನೂ ತಾನು ಹೊದ್ದ ಬಟ್ಟೆಯನ್ನೂ ಪಂಥಕ್ಕೆ ಒಡ್ಡಿ, ಸೋತು, ಉಟ್ಟ ಬಟ್ಟೆಯಲ್ಲಿ ಪಟ್ಟಣವನ್ನು ಬಿಟ್ಟು ಹೋಗುವಲ್ಲಿ, ದಮಯಂತಿಯು ಸಂಗಡಲೇ ಬರಲು; ಅವರಿಬ್ಬರು ಹೋಗಿ, ಪಟ್ಟಣದ ಸಮೀಪದಲ್ಲಿ ಆ ರಾತ್ರಿ ಇರಲು;—ದುಷ್ಟನಾದ ಪುಷ್ಕರನು ಯಾರಾದರು ನಳನಿಗೆ ಅನ್ನೋದಕಗಳಿಂದ ಉಪಕಾರವನ್ನು ಮಾಡಿದರೆ, ಅವರನ್ನು ಕೊಲ್ಲಿಸುತ್ತೇನೆ ಎಂದು ಸಾರಿಸಿದ್ದರಿಂದ, ಒಬ್ಬರೂ ನಳನಿಗೆ ಊಟ ಉಪಚಾರಗಳನ್ನು ಮಾಡಿಸದೆ ಹೋದರು.

ಆಗ ದಮಯಂತಿಯೂ ನಳನೂ ಜಲಪಾನವನ್ನು ಮಾಡಿ, ಹಸಿವಿನಿಂದ ಪೀಡಿತರಾಗಿ, ಮುಂದೆ ಬರುತ್ತಿರುವಲ್ಲಿ, ಚಿನ್ನದ ರೆಕ್ಕೆಗಳಿಂದ ಕೂಡಿರುವ ಕೆಲವು ಹಕ್ಕಿಗಳು ನಳನ ಸಮೀಪಕ್ಕೆ ಹಾರಿ ಬರಲು; ಅವುಗಳನ್ನು ನೋಡಿ, ಈ ಹಕ್ಕಿಗಳನ್ನು ಹಿಡಿದು ಕೊಂಡರೆ, ಹೊಟ್ಟೆ ತುಂಬಾ ಅನ್ನವೂ, ಚಿನ್ನವೂ ಉಂಟಾಗುತ್ತದೆ ಎಂದು ಎಣಿಸಿ, ತಾನು ಉಟ್ಟಿರುವ ಬಟ್ಟೆಯನ್ನು ಕಳೆದು, ಅವುಗಳನ್ನು ಹಿಡಿಯುವದಕ್ಕೆ ಹಾಕಲು; ಆ ಹಕ್ಕಿಗಳು ಆ ಬಟ್ಟೆಯನ್ನು ಎತ್ತಿ ಕೊಂಡು, ಆಕಾಶಕ್ಕೆ ಹಾರಿ ಹೋದವು. ಆಗ ನಳನು ಬೆತ್ತಲೆ ನಿಂತು, ನಾಚಿಕೆಯಿಂದ ಮೊಗವನ್ನು ಬೊಗ್ಗಿಸಿ ಕೊಂಡಿರುವದನ್ನು ನೋಡಿ, ಆ ಹಕ್ಕಿಗಳು—

ಎಲೈ, ನರೇಂದ್ರನೇ, ನಮ್ಮನ್ನು ದಾಳಗಳು ಎಂದು ತಿಳುಕೋ ಎಂಬದಾಗಿ ಹೇಳಿ, ಮಾಯವಾದವು. ಆ ಮೇಲೆ ನಳನು ದಮಯಂತಿಯನ್ನು ನೋಡಿ—ನಾನು ಬೆತ್ತಲೆ ಬರುವದಕ್ಕೆ ನಾಚಿ ಕೊಳ್ಳುತ್ತೇನೆ. ನಿಮ್ಮ ತಂದೆಯ ಕುಂಡಿನ ನಗರವು, ಇಗೋ, ಕಾಣುತ್ತದೆ; ಹೋಗು ಎಂದು ಹೇಳಲು; ದಮಯಂತಿಯು ಆ ವಾಕ್ಯವನ್ನು ಕೇಳಿ, ಶೋಕಾರ್ತೆಯಾಗಿ, ಕಣ್ಣೀರುಗಳನ್ನು ಸುರಿಸುತ್ತಾ, ಗದ್ಗದ ಕಂಠೆಯಾಗಿ, ತನ್ನ ವಲ್ಲಭನನ್ನು ಕುರಿತು—ನೀನು ಮನಸ್ಸಿನಲ್ಲಿ ನೆನಸಿರುವದನ್ನು ನೋಡಿದರೆ, ನನ್ನ ಅಂಗಾಂಗಗಳೆಲ್ಲಾ ಛಿನ್ನಾಭಿನ್ನವಾಗುತ್ತವೆ; ಹೃದಯವು ತಲ್ಲಣಿಸುತ್ತಿದೆ. ರಾಜ್ಯವನ್ನು ಬಿಟ್ಟು, ಉಡಲು ಬಟ್ಟೆ ಇಲ್ಲದೆ, ದುಃಖಿತನಾಗಿರುವ ನಿನ್ನನ್ನು ಜನ ರಹಿತವಾದ ಕಾಡಿನಲ್ಲಿ ಬಿಟ್ಟು ಹೋದೇನೇ? ಹಸಿವಿನಿಂದ ದುಃಖಿಸುತ್ತಲಿರುವ ನಿನ್ನ ಸಮೀಪದಲ್ಲಿ ಇದ್ದು ಕೊಂಡು, ನಿನ್ನ ಮನಸ್ಸಿನ ಕ್ಲೇಶವನ್ನು ಹೋಗಲಾಡಿಸುವೆನು. ಲೋಕದಲ್ಲಿ ಗಂಡಂದಿರ ಕಷ್ಟವನ್ನು ಪರಿಹರಿಸುವದಕ್ಕೆ ಹೆಂಡತಿಗಿಂತಲು ಮತ್ತೊಬ್ಬರು ಹಿತವರಿಲ್ಲ, ಎಂದು ನೀನೇ ಕೇಳಿದ್ಧೀಯಷ್ಟೆ! ಎಂದು ನುಡಿಯಲು; ನಳನು ಆಕೆಯ ಮಾತನ್ನು ಕೇಳಿ,—ನಿಜವಾಗಿ ಹೇಳಿದಿ. ನಾನು ನಿನ್ನನ್ನು ಪರಿಹರಿಸುವದಕ್ಕೆ ಎಣಿಸಿದವನಲ್ಲ. ನನ್ನಲ್ಲಿ ಆ ಸಂಶಯವನ್ನು ಮಾಡ ಬೇಡ. ನನ್ನ ಪ್ರಾಣಗಳನ್ನಾದರೂ ಬಿಡುವೆನೇ ಹೊರತಾಗಿ, ನಿನ್ನನ್ನು ಅಗಲಿ ಇರುವೆನೇ? ಅಂದನು.

ಆ ಮಾತಿಗೆ ದಮಯಂತಿಯು—ಅದನ್ನು ಬಲ್ಲೆನು ವಿದರ್ಭ ದೇಶದ ಮಾರ್ಗವನ್ನು ತೋರಿಸಿದ್ದರಿಂದ ನನ್ನ ಹೃದಯವು ತಲ್ಲಣಿಸುತ್ತಲಿದೆ. ಆದರೆ ನಾವಿಬ್ಬರು ವಿದರ್ಭ ದೇಶಕ್ಕೆ ಹೋದರೆ, ನನ್ನ ತಂದೆಯಾದ ಭೀಮ ಭೂಪಾಲಕನು ನಮ್ಮನ್ನು ಪ್ರೀತಿ ಪಡಿಸಿ, ಸಕಲ ವಸ್ತುಗಳನ್ನು ಕೊಡುತ್ತಾನೆ. ಅದರಿಂದ ಸುಖವಾಗಿ ಇರ ಬಹುದು. ಇದು ನಿನ್ನ ಚಿತ್ತಕ್ಕೆ ಸಮ್ಮತವಾದರೆ, ಆ ಪ್ರಕಾರ ಮಾಡ ಬಹುದು, ಎಸಲು; ನಳನು—ಅದು ಯುಕ್ತವೇ ಸರಿ! ಆದರೆ ನಾನು ಮೊದಲು ಸ್ವಯಂವರಕ್ಕೆ ಸಕಲ ವೈಭವದಿಂದ ಹೋಗಿ ಇದ್ದೆನು. ಈಗ ಇಂಥಾ ಬಡತನದಿಂದ ಕೂಡಿ, ನಿನಗೆ ಬಹಳ ದುಃಖವಾಗುವ ಹಾಗೆ ಅಲ್ಲಿಗೆ ಹೋಗುವದು ತಕ್ಕದ್ದಲ್ಲ ಎಂದು, ದಮಯಂತಿಯನ್ನು ಸಮಾಧಾನಾ ಮಾಡಿದನು. ಆಗ ಇಬ್ಬರು ಕೂಡಿ ಹಸಿವು ನೀರಡಿಕೆಯಿಂದ ಸಂಕಟ ಪಡುತ್ತಾ, ಒಂದು ಸ್ಥಳಕ್ಕೆ ಹೋಗಿ, ನಳನು ಮಲಿನಾಂಗನಾಗಿ, ಧೂಳಿಗಳಿಂದ ವ್ಯಾಪ್ತನಾಗಿ, ನೆಲದಲ್ಲಿ ಬಿದ್ದು ಕೊಳ್ಳಲು; ದಮಯಂತಿಯು ಆತನನ್ನು ತಬ್ಬಿ ಕೊಂಡು, ಅವನ ಬಳಿಯಲ್ಲಿಯೇ ಮಲಗಿದಳು. ಆಗ ನಳನು—ಈ ಕೋಮಲೆಯು ಹೀಗೆ

ಕಷ್ಟ ಪಡುವದನ್ನು ನೋಡುವ ನನ್ನ ಎರಡು ಕಣ್ಣುಗಳು ಒಡೆದು ಹೋಗುವದಿಲ್ಲವಲ್ಲ! ಈಕೆಯು ಕಷ್ಟವನ್ನು ನೋಡುತ್ತಾ ಬದುಕುವದಕ್ಕಿಂತ ಪ್ರಾಣಗಳನ್ನು ಬಿಡುವದು ಲೇಸು. ಇವಳು ನನ್ನ ಜೊತೆಯಲ್ಲಿ ಇರುವ ವರಿಗೂ ಇವಳಿಗೆ ಈ ಸಂಕಟವು ತಪ್ಪುವದಿಲ್ಲ. ನಾನು ಇವಳನ್ನು ಅಗಲಿ ಹೋದರೆ, ಇವಳು ತನ್ನ ತಂದೆಯ ಸಮೀಪಕ್ಕೆ ಹೋಗಿ, ಸುಖದಿಂದ ಇರುವಳು ಎಂದು ಎಣಿಸಿ, ಅವಳು ಉಟ್ಟಿದ್ದ ಬಟ್ಟೆಯಲ್ಲಿ ಅರ್ಧವನ್ನು ಹರಿದು ಕೊಂಡು, ಅವಳಿಗೆ ನಿದ್ದೆ ತಿಳಿಯದಂತೆ ಮೆಲ್ಲಗೆ ಎದ್ದು, ದುಃಖದಿಂದ ಕಣ್ಣುಗಳೊಳಗೆ ನೀರು ಸುರಿಸುತ್ತಾ,—ಅಯ್ಯೋ, ವಿಧಿಯೇ! ಇಂಥ ಕಷ್ಟವನ್ನು ಕೊಟ್ಟೆಯಾ? ನಾನೇ ಗತಿ ಎಂದು ನಂಬಿರುವ ಪ್ರಿತಿಯನ್ನು ಕಾಡಿನಲ್ಲಿ ಮಲಗಿರುವ ಕಾಲದಲ್ಲಿ ವಂಚಿಸಿ ಬಿಟ್ಟು ಹೋಗುವ ನನ್ನಂಥಾ ಪಾಪಿಯು ಉಂಟೇ? ಎಂದು ಹೇತ ಕೊಳ್ಳುತ್ತಾ, ಸ್ವಲ್ಪ ದೂರ ಹೋಗಿ, ಪುನಹ ಹಿಂತಿರುಗಿ ಬಂದು, ಮುಂದಕ್ಕೆ ಹೋಗುವದಕ್ಕೆ ಕೆಲವು ಹೊತ್ತು ನಿಂತು ಇದ್ದು, ಕಲಿ ಪ್ರೇರಣೆಯಿಂದ ತಿರಿಗಿ ಹೋಗ ಬಗೆದು—ಈ ಪುಣ್ಯ ಶೀಲೆಯಾದ ಪತಿವ್ರತೆಯನ್ನು ಭೂಮಿ ದೇವಿಯೂ ವನದೇವತೆಗಳೂ ಸೂರ್ಯ ಚಂದ್ರರೂ ಧರ್ಮ ದೇವತೆಯೂ ಅಷ್ಟ ದಿಕ್ಪಾಲಕರೂ ಕಾಪಾಡಲಿ ಎಂದು ನುಡಿದು, ಹುಚ್ಚನಂತೆ ಮುಂದೆ ತೋರದೆ, ಕಲಿಯಿಂದ ಎಳಸಿ ಕೊಂಡವನಾಗಿ ಮುಂದಕ್ಕೆ ಹೊರಟು ಹೋದನು.

ಆಗ ಕೆಲವು ಹೊತ್ತಿನ ಮೇಲೆ ದಮಯಂತಿಯು ಎಚ್ಚತ್ತವಳಾಗಿ, ನಳನನ್ನು ಕಾಣದೆ, ಕಲ್ಮರಗಳು ಕರಗುವಂತೆ ದುಃಖ ಪಡುತ್ತಾ, ನಿರಪರಾಧಿಯಾದ ನನ್ನನ್ನು ಬಿಟ್ಟು ಹೋಗುವದು ನಿನಗೆ ಧರ್ಮವೇ? ಎಂದು ಕೂಗಿ, ಅಳುತ್ತಾ, ದಿಕ್ಕು ದಿಕ್ಕಿಗೆ ಬಾಯಿ ಬಿಡುತ್ತಾ, ಬಾಯಾರಿ, ಗಂಟಲು ಒಣಗಿ, ಹಸಿವಿನಿಂದ ಕಂಗೆಟ್ಟು, ಕಾಡಿನಲ್ಲಿ ಬರುತ್ತಿರಲು; ದಾರಿಯಲ್ಲಿ ಬಿದ್ದಿರುವ ಒಂದು ಹೆಬ್ಬಾವು ಅವಳನ್ನು ನುಂಗಿತು. ಆಗ ಹೆಬ್ಬಾವಿನಿಂದ ನುಂಗಲ್ಪಟ್ಟರೂ, ನಳನನ್ನು ನೆನೆದು—ಎಲೈ, ಪ್ರಾಣನಾಥನೇ, ಈ ಹಾವು ನಿನ್ನ ಹೆಂಡತಿಯನ್ನು ನುಂಗುತ್ತಿರುವಲ್ಲಿ ನೀನು ಬೇಗ ಬಂದು, ನನ್ನನ್ನು ಯಾಕೆ ಬಿಡಿಸುವದಿಲ್ಲ? ನಾನು ಸತ್ತು ಹೋದ ಮೇಲೆ ನಿನಗೆ ಬಂದಿರುವ ಈ ಕಷ್ಟವು ಪರಿಹಾರವಾಗಿ, ಸಕಲ ಐಶ್ವರ್ಯಗಳನ್ನು ಪಡೆದು, ನನ್ನನ್ನು ನೆನಸಿ ಕೊಂಡು, ಆ ದುಃಖವನ್ನು ಹ್ಯಾಗೆ ಸಹಿಸುವಿ? ಎಂದು ಮೊರೆ ಇಡುತ್ತಿರಲು; ಆ ಕಾಡಿನಲ್ಲಿ ತಿರುಗುವ ಒಬ್ಬ ಬೇಡನು ಇವಷ್ಟನ್ನು ಕೇಳಿ, ಬೇಗ ಅಲ್ಲಿಗೆ ಬಂದು, ತನ್ನ ಕೈಯಲ್ಲಿ ಇದ್ದ ಕತ್ತಿಯಿಂದ ಆ ಹಾವಿನ ಬಾಯಿಯನ್ನು ಶೀಳಿ, ದಮಯಂತಿಯನ್ನು ಬಿಡಿಸಿ, ನೀರಿನಿಂದ ಮೊ

ಖವನ್ನು ತೊಳಸಿ, ಗೆಡ್ಡೆ ಗೆಣಸುಗಳಿಂದಲೂ ಹಣ್ಣುಗಳಿಂದಲೂ ಊಟವನ್ನು ಮಾಡಿಸಿ,—ನೀನು ಯಾರು? ಒಬ್ಬಳೇ ಈ ಕಾಡಿಗೆ ಯಾಕೆ ಬಂದೆ? ಇಂಥಾ ಕಷ್ಟವು ನಿನಗೆ ಬರುವದಕ್ಕೆ ಕಾರಣವೇನು? ಎನಲು; ತನ್ನ ಎಲ್ಲಾ ಸುದ್ದಿಯನ್ನು ನಿಜವಾಗಿ ಆ ಬೇಡನಿಗೆ ದಮಯಂತಿ ಹೇಳಿದಳು. ಆ ಬಳಿಕ ಬೇಡನು ಇವಳ ಚೆಲುವನ್ನು ನೋಡಿ, ಮನ್ಮಥ ವಿಕಾರವುಳ್ಳವನಾಗಿ, ಬಲಾತ್ಕಾರದಿಂದ ಹಿಡಿಯ ಹತ್ತರಕ್ಕೆ ಬರಲು; ದಮಯಂತಿಯು ಮಹಾ ಕೋಪದಿಂದ—ನಾನು ನಳನೊಬ್ಬನನ್ನೇ ಹೊರತಾಗಿ ಮತ್ತೊಬ್ಬ ಗಂಡಸನ್ನು ಕನಸಿನಲ್ಲಾದರೂ ಎಣಿಸದೆ ಇದ್ದವಳಾದರೆ, ಈ ದುರಾತ್ಮನು ಈಗಲೇ ಸಾಯಲಿ ಎಂದು ಶಪಿಸಿದ ಕ್ಷಣದಲ್ಲಿಯೇ ಅವನು ಕಾಡುಗಿಚ್ಚಿನಿಂದ ಉರಿಯಲ್ಪಟ್ಟ ಮರದಂತೆ ಇವಳ ಶಾಪಾಗ್ನಿಯಿಂದ ಸುಟ್ಟು, ಬೂದಿಯಾದನು. ಆ ಬಳಿಕ ದಮಯಂತಿಯು ಅಲ್ಲಿಂದ ಹೊರಟು, ಹುಲಿ, ಕರಡಿ, ಸಿಂಹ, ಶರಭ ಮುಂತಾದ ದುಷ್ಟ ಮೃಗಗಳಿಂದಲೂ ಕಳ್ಳರೂ ಬೇಡರೂ ಮೊದಲಾದ ದುಷ್ಟ ಜನಗಳಿಂದಲೂ ಕೂಡಿರುವ ನಾನಾ ವಿಧವಾದ ಧಾತುಗಳಿಂದ ಪ್ರಕಾಶಮಾನವಾಗಿ, ಬಹಳ ಉದ್ದಗಳಾದ ಶಿಖರಗಳೊಡನೆ ಕೂಡಿರುವ ದೊಡ್ಡ ದೊಡ್ಡ ಬೆಟ್ಟಗಳುಳ್ಳ ಮಹಾ ಕಾಡಿನಲ್ಲಿ ತನ್ನ ಗಂಡನನ್ನು ಹುಡುಕುತ್ತಾ, ಹಂಬಲಿಸುತ್ತಾ, ತುಸವಾದರೂ ಹೆದರದೆ, ಬಂದು, ಒಂದು ದೊಡ್ಡ ಕೋಡುಗಲ್ಲಿನ ಮೇಲೆ ಕುಳಿತು—ಎಲೈ, ಪ್ರಾಣ ಪ್ರಿಯನೇ, ನಳಚಕ್ರವರ್ತಿಯೇ, ಇಂಥಾ ನಿರ್ಜನವಾದ ಅತಿ ಘೋರಾರಣ್ಯದಲ್ಲಿ ನಿನ್ನನ್ನೇ ಹಂಬಲಿಸುತ್ತಿರುವ ನನ್ನನ್ನು ಹೀಗೆ ಯಾಕೆ ಉಪೇಕ್ಷೆ ಮಾಡುತ್ತೀ? ಅತಿ ಕ್ರೂರವಾದ ಹುಲಿಯು ನನ್ನ ಬಳಿಗೆ ಬಂದು, ಕೋರದಾಡೆಗಳಿಂದ ಕೂಡಿರುವ ಭಯಂಕರವಾದ ಬಾಯಿಯನ್ನು ಬಿಟ್ಟು, ನನ್ನನ್ನು ಹೆದರಿಸುತ್ತಿದೆ. ಈ ಸಮಯದಲ್ಲಿ ಯಾದರೂ ನನ್ನ ಕಾಪಾಡ ಬೇಡವೇ? ಮೊದಲು—ನಿನಗಿಂತ ಪ್ರಿಯಳು ನನಗಿಲ್ಲವೆಂದು ಹೇಳುತ್ತಿದ್ದೆಯಲ್ಲ! ಆ ಮಾತುಗಳೆಲ್ಲಾ ಈಗ ಸಟೆಯಾಗ ಬಹುದೇ? ಎಂದು, ಅರ್ಧ ವಸ್ತ್ರವನ್ನು ಉಟ್ಟು ಕೊಂಡು, ನಳನನ್ನೇ ಹಂಬಲಿಸುತ್ತಾ, ಗುಂಪನ್ನು ಅಗಲಿರುವ ಜಿಂಕೆಯ ಹಾಗೆ ಮೊರೆ ಇಡುತ್ತಾ, ಶೋಕದಿಂದ ಕರಗುತ್ತಾ, ಈ ಪ್ರಕಾರ ಮೂರು ದಿವಸಗಳ ಕಳೆದು, ಒಂದು ಪುಣ್ಯಾಶ್ರಮವನ್ನು ನೋಡಿ, ಅದಕ್ಕೆ ಹೋಗಿ, ಭೃಗು, ವಸಿಷ್ಠ, ಅತ್ರಿ ಮುನಿಗಳಿಗೆ ಸಮಾನರಾಗಿ, ಊಟವನ್ನು ಬಿಟ್ಟು, ನೀರನ್ನೂ ಘಾಳಿಯನ್ನೂ ತರಗೆಲೆಗಳನ್ನೂ ತಿಂದು ಕೊಂಡು, ನಾರ ಶೀರೆಗಳನ್ನು ಉಟ್ಟು, ಕೃಷ್ಣಾಜಿನವನ್ನು ಧರಿಸಿರುವ ಮುನೀಂದ್ರರಿಗೆ ನಮಸ್ಕಾರವನ್ನು ಮಾಡಿ, ಕೈ ಮುಗಿದು, ನಿಂತು ಕೊಂಡಿರಲು;

ಆ ಮುನಿಗಳು ಇವಳನ್ನು ನೋಡಿ, ಇವಳ ಸೌಂದರ್ಯಕ್ಕೂ ಸುಗುಣಕ್ಕೂ ಸುಲಕ್ಷಣಗಳಿಗೂ ಬಹಳ ಆಶ್ಚರ್ಯ ಪಟ್ಟು—ನೀನು ಯಾರವಮ್ಮಾ? ಇಲ್ಲಿಗೆ ಏನು ನಿಮಿತ್ತ್ಯ ಬಂದೆ? ನಮ್ಮಿಂದ ನಿನಗೆ ಆಗ ತಕ್ಕ ಕೆಲಸವೇನು? ಎಂದು ಕೇಳಲು; ತಾನು ಹುಟ್ಟಿದ್ದು ಮೊದಲು ಗೊಂಡು ಈ ವರಿಗೂ ತನ್ನ ವೃತ್ತಾಂತಗಳನ್ನು ಬಿನ್ನವಿಸಿದಳು. ಆ ಮಹಾತ್ಮರು ಈಕೆಯನ್ನು ನೋಡಿ—ಎಲೈ, ತಾಯೇ, ನೀನು ಸ್ವಲ್ಪ ದಿವಸದಲ್ಲಿ ನಿನ್ನ ಗಂಡನನ್ನು ಕಾಣುತ್ತಲಿದ್ದೀಯೇ. ನಿನಗೆ ಇನ್ನು ಮೇಲೆ ಸಕಲ ಶ್ರೇಯಸ್ಸುಗಳು ಉಂಟಾಗುತ್ತವೆ. ನಿನ್ನ ಗಂಡನು ಹಗೆಗಳನ್ನು ಜೈಸಿ, ತಿರಿಗಿ ರಾಜ್ಯವನ್ನು ತೆಕ್ಕೊಂಡು, ನಿನ್ನೊಡನೆ ಸುಖವಾಗಿರುವನು ಎಂದು ಹೇಳಿ, ಅಂತರ್ಧಾನವನ್ನು ಹೊಂದಿದರು.

ಆ ಮೇಲೆ ಅಲ್ಲಿಂದ ಹೊರಟು ಬರುತ್ತಾ, ಹಲಿನೀ ಎಂಬ ಒಂದು ನದಿಯನ್ನು ದಾಟುತ್ತಲಿರುವ ಆನೆ ಕುದುರೆಗಳಿಂದ ಕೂಡಿರುವ ಜನಗಳನ್ನು ನೋಡಿ, ಆ ಗುಂಪನ್ನು ಶೇರಲು; ಅವರಲ್ಲಿ ಧರ್ಮಿಷ್ಠರಾದ ಕೆಲವರು—ಎಲೈ, ತಾಯೇ, ನೀನು ಯಾರು? ನಿನ್ನ ವಿಚಾರವನ್ನು ನಿಜವಾಗಿ ಹೇಳು, ಎನಲು; ದಮಯಂತಿಯು—ನಾನು ವಿದರ್ಭ ದೇಶದ ಭೀಮರಾಯನ ಮಗಳು. ನನ್ನ ಹೆಸರು ದಮಯಂತಿಯು. ನನ್ನ ಗಂಡನಾದ ನಳನೆಂಬ ರಾಜ ಕಂಠೀರವನು ದೈವ ಸಂಕಲ್ಪದಿಂದ ಅಗಲಿದ್ದಾನೆ. ಅವನನ್ನು ಹುಡುಕುತ್ತಲಿದ್ದೇನೆ ಎಂದು ಹೇಳಿ, ನೀವೇನಾದರೂ ಆ ಮಹಾ ಪುರುಷನನ್ನು ಎಲ್ಲಿಯಾದರೂ ಕಂಡಿದ್ದೀರಾ? ಎಂದು ಕೇಳಲು;—ತಾಯೇ, ನಾವು ಎಲ್ಲಿಯೂ ಕಾಣಲಿಲ್ಲ, ಅಂದರು. ಆಗ ದಮಯಂತಿಯು—ನೀವೆಲ್ಲಾ ಎಲ್ಲಿಗೆ ಹೋಗುತ್ತಲಿದ್ದೀರಿ? ನನಗೆ ತಿಳಿಸಿ ಎಂದು ಕೇಳಿದ್ದಕ್ಕೆ—ನಾವು ಸುಬಾಹು ರಾಯನಿಂದ ರಕ್ಷಿತವಾದ ಚೇದಿ ರಾಜ್ಯಕ್ಕೆ ಲಾಭಾರ್ಥವಾಗಿ ವ್ಯಾಪಾರಕ್ಕೆ ಹೋಗುತ್ತಲಿದ್ದೇವೆ ಎಂದು ಹೇಳಲು; ದಮಯಂತಿಯು ಅವರ ಕೂಡಾ ಹೋಗುವಾಗ, ಒಂದು ಕಾಡಿನಲ್ಲಿ ಒಂದು ಕೊಳದ ಸಮೀಪದಲ್ಲಿ ತಮ್ಮ ಬೀಡಿಕೆಯನ್ನು ಬಿಡಿಸಿ, ಶ್ರಮದಿಂದ ಸಕಲವಾದವರು ಮಲಗಿರುವ ಕಾಲದಲ್ಲಿ, ಸಮೀಪದಲ್ಲಿರುವ ಬೆಟ್ಟದ ಕಿಬ್ಬಿಯಿಂದ ಕಾಡಾನೆಗಳು ಗುಂಪು ಕೂಡಿ, ಆ ಕೊಳದಲ್ಲಿ ನೀರು ಕುಡಿಯುವದಕ್ಕೆ ಬರುತ್ತಾ, ದಾರಿಯಲ್ಲಿ ಅಡ್ಡಲಾಗಿ ಬಿದ್ದಿರುವ ವರ್ತಕರೆಲ್ಲರನ್ನು ಕಾಲುಗಳಿಂದ ತುಳಿದು ಕೊಂಡು ಬರಲು; ಆ ವರ್ತಕರೆಲ್ಲರು ನಿದ್ದೆಯಿಂದ ಎದ್ದು, ಕಾಡಾನೆಗಳ ಗುಂಪನ್ನು ನೋಡಿ, ಕೆಲವರು ಬೆದರಿ, ಬೆಚ್ಚಿ, ಬೆಂಡಾಗಿ, ಹೊದೆಗಳನ್ನು ಹೊಕ್ಕರು. ಮತ್ತೆ ಕೆಲವರು ಕೊಂಬಿನ ಘಾಯಗಳಿಂದಲೂ ಸೊಂಡಿಲ ಪೆಟ್ಟುಗಳಿಂ

ದಲೂ ಹತರಾದರು. ಮತ್ತು ಆ ವರ್ತಕರು ತಂದು ಇದ್ದ ಎತ್ತು, ಕುದುರೆ, ಕತ್ತೆ, ಒಂಟೆಗಳು ಸಾಲು ದಾವಣಿಗಳನ್ನು ಕಿತ್ತು ಕೊಂಡು, ಬೆದರಿ, ನಾನಾ ದಿಕ್ಕಿಗೆ ಓಡಿ ಹೋದವು. ಈ ಪ್ರಕಾರದಿಂದ ಆನೆಗಳು ವರ್ತಕರನ್ನು ಹತ ಮಾಡಲು; ಮಾರನೇ ದಿವಸ ಹತ ಶೇಷರಾದ ವರ್ತಕರೂ ಅವರ ಜೊತೆಯಲ್ಲಿ ಇದ್ದ ಬ್ರಾಹ್ಮಣರೂ ದುಃಖ ಪಡುತ್ತಾ, ಅಲ್ಲಿಂದ ಹೊರಟರು.

ಅವರೊಡನೆ ದಮಯಂತಿಯು ಹೊರಟು ಬಂದು, ಕೆಲವು ಪ್ರಯಾಣಗಳು ಕಳೆದು ಹೋದ ಮೇಲೆ, ಚೇದಿ ದೇಶಾಧಿಪತಿಯಾಗಿರುವ ಸುಬಾಹು ರಾಯನ ಪಟ್ಟಣಕ್ಕೆ ಹೋಗಿ, ಒಂದು ದಿವಸ ಸಾಯಂಕಾಲದಲ್ಲಿ ಪಟ್ಟಣದ ಬಾಗಿಲನ್ನು ಹೊಕ್ಕು, ರಾಜ ಬೀದಿಯಲ್ಲಿ ಹೋಗುವಾಗ, ಅರವಾಶಿ ಬಟ್ಟೆಯನ್ನು ಉಟ್ಟು, ಕಂದಿ, ಕುಂದಿ, ಬಳಲಿ, ಬಾಯಾರಿ, ಬಡವಾಗಿ, ದೀನೆಯಾಗಿ, ಕೆದರಿದ ಕೂದಲುಗಳುಳ್ಳವಳಾಗಿ ಬರುವ ದಮಯಂತಿಯನ್ನು ಸೆಜ್ಜೆಯ ಮೇಲೆ ಇರುವ ಸುಬಾಹು ರಾಯನ ತಾಯಿಯು ನೋಡಿ,—ಇವಳನ್ನು ಕರಕೊಂಡು ಬನ್ನಿ ಎಂದು ಗವುಡಿಗಳನ್ನು ಕಳುಹಿಸಲು; ಅವರು ದಮಯಂತಿಯನ್ನು ಕರ ಕೊಂಡು ಹೋಗಿ, ಅರಸಿನ ತಾಯಿಯು ಬಳಿಯಲ್ಲಿ ನಿಲ್ಲಿಸಲು; ಆಕೆಯು—ನೀನ್ಯಾರಮ್ಮಾ? ಎಂದು ಕೇಳಿದ್ದಕ್ಕೆ—ನಾನು ಮನುಷ್ಯ ಸ್ತ್ರೀಯು; ಸೈರೇಂಧ್ರಿಯ ಜಾತಿಯಲ್ಲಿ ಹುಟ್ಟಿದವಳು. ನನ್ನ ಗಂಡನು ಅಗಲಿದ್ದರಿಂದ ನಾನು ಅರಣ್ಯಗಳಲ್ಲಿ ಹಣ್ಣು, ಗೆಡ್ಡೆ, ಗೆಣಸುಗಳನ್ನು ತಿನ್ನುತ್ತಾ, ಎಲ್ಲಿ ಸಾಯಂಕಾಲವಾದರೂ ಅಲ್ಲಿಯೇ ಮಲಗುತ್ತಾ, ಗಂಡನನ್ನು ಹೀಗೆ ಹುಡುಕುತ್ತಾ ಬಂದೆನು. ಎಲ್ಲಿಯೂ ಗೊತ್ತು ಹತ್ತಲಿಲ್ಲ. ಆತನ ನೆಳಲಿನಂತೆ ಒಂದು ಕ್ಷಣವಾದರೂ ಅವನನ್ನು ಎಡೆ ಬಿಡದೆ ಇದ್ದ ನಾನು ಈಗ ಅವನನ್ನು ಕಾಣದೆ, ಇಂಥಾ ದುಃಖಕ್ಕೆ ಒಳಗಾದೆನು, ಎಂದು ಪಳಪಳನೆ ಕಣ್ಣುಗಳಲ್ಲಿ ನೀರುಗಳನ್ನು ಸುರಿಸುತ್ತಾ ಅಳಲು; ಆ ಅರಸಿನ ತಾಯಿಯು ಬಹಳ ದುಃಖ ಪಟ್ಟು—ಎಲೇ, ತಾಯೇ, ಏನು ನಿಮಿತ್ತವೋ, ಕಾಣೆ, ನಿನ್ನಲ್ಲಿ ನನಗೆ ಬಹಳ ಪ್ರೀತಿ ಉಂಟಾಗಿದೆ. ನೀನು ನನ್ನ ಬಳಿಯಲ್ಲಿಯೇ ಇರು. ಬೇಹಿನವರನ್ನು ಕಳುಹಿಸಿ, ನಿನ್ನ ಪತಿಯನ್ನು ನಾಲ್ಕು ದಿಕ್ಕುಗಳಲ್ಲಿಯೂ ಹುಡುಕಿಸುತ್ತೇನೆ. ಒಂದು ವೇಳೆ ನಿನ್ನ ಗಂಡನು ಎಲ್ಲಾ ದೇಶಗಳಲ್ಲಿ ತಿರುಗಿ, ತನಗೆ ತಾನೇ ಬಂದರೆ, ಮತ್ತೂ ಲೇಸು ಎಂದು ಹೇಳಲು; ಅದಕ್ಕೆ ದಮಯಂತಿಯು—ಎಲೇ, ದೇವೀ, ನಿನ್ನ ಸಮೀಪದಲ್ಲಿ ಇರು ಎಂದು ನುಡಿದೆಯಲ್ಲಾ! ನನ್ನ ಅಭಿಪ್ರಾಯವನ್ನು ಕೇಳು. ತಿಂದು ಮಿಕ್ಕದ್ದನ್ನು ತಿನ್ನುವದೂ, ಒಬ್ಬನ ಕಾಲು ತೊಳೆಯುವದೂ, ಇವು ಮೊದಲಾದ ಕೀ

ಳು ಕೆಲಸಗಳನ್ನು ಮಾಡುವವಳಲ್ಲ. ನನ್ನ ಗಂಡನ ಹುಡುಕುವದಕ್ಕೆ ಹೋಗುವ ಬ್ರಾಹ್ಮಣರೊಡನೆ ಮಾತ್ರ ಮಾತಾಡುವದೇ ಹೊರತು, ಮತ್ತೊಬ್ಬರ ಕೂಡೆ ಮಾತಾಡುವದಿಲ್ಲ. ಯಾರಾದರೂ ನನ್ನ ಮೇಲೆ ಕಣ್ಣಿಟ್ಟರೆ, ನೀನು ಅವರನ್ನು ದಂಡಿಸ ಬೇಕು. ಹೀಗಾದರೆ ನಿನ್ನ ಬಳಿಯಲ್ಲಿಯೇ ಇರುವೆನು; ಇಲ್ಲದಿದ್ದರೆ, ಇರಲಾರೆನು ಎನಲು; ಅದನ್ನು ಆ ಅರಸಿನ ತಾಯಿ ಕೇಳಿ, ಬಹಳ ಸಂತೋಷ ಪಟ್ಟು—ಎಲೇ, ಭಾಮಾ ಮಣಿಯೇ, ನೀನು ಪತಿವ್ರತೆಗಳ ಶಿಖಾಮಣಿಯಾಗಿದ್ದೀ. ನಿನ್ನ ಮನಸ್ಸಿನಲ್ಲಿ ಇದ್ದ ರೀತಿಯಲ್ಲಿಯೇ ನಡಿಸುತ್ತೇನೆ. ನೀನು ಯೋಚನೆ ಮಾಡ ಬೇಡ, ಎಂದು ಹೇಳಿ, ಸಮಾಧಾನ ಪಡಿಸಿ, ತನ್ನ ಮಗಳಾದ ಸುನಂದೆಯನ್ನು ಕರೆದು,—ಲೋಕ ಸುಂದರಿಯಾದ ಈ ಸೈಳೇಂದ್ರಿಯೂ ನೀನೂ ಒಂದೇ ಪ್ರಾಯದವರಾದ್ದರಿಂದ ಸ್ವಲ್ಪವಾದರೂ ಭೇದವಿಲ್ಲದೆ ಸಂಗಾತಿಗಳಾಗಿರಿ ಎಂದು ಕಟ್ಟು ಮಾಡಿ, ಕಳುಹಿಸಲು; ದಮಯಂತಿಯು ಆ ರಾಜಪುತ್ರಿಯಾದ ಸುನಂದೆಯೊಡನೆ ಕೂಡಿ, ಯಾವಾಗಲೂ ತನ್ನ ಗಂಡನ ಚರಿತ್ರೆಗಳನ್ನು ಕಥೆಗಳಾಗಿ ಅವಳೊಡನೆ ಹೇಳಿ ಕೊಳ್ಳುತ್ತಾ, ಇದ್ದಳು.

ಇತ್ತಲಾ ನಳನು ದಮಯಂತಿಯನ್ನು ಬಿಟ್ಟು, ಆಚೆಗೆ ನಡೆಯುವ ಸಮಯದಲ್ಲಿ, ಕಾಡು ಮಾರ್ಗದಲ್ಲಿ ನಿಬಿಡವಾದ ಕಾಡುಗಿಚ್ಚು ಸುತ್ತಿ ಕೊಂಡು, ಕಾಡನ್ನು ಸುಡುತ್ತಿರುವಲ್ಲಿ, ಅದರ ನಟ್ಟ ನಡುವೆ—ಓ ಪುಣ್ಯ ಶ್ಲೋಕನಾದ ನಳ ಮಹಾ ರಾಯನೇ, ನಳ ಮಹಾ ರಾಯನೇ, ಎಂದು ತನ್ನ ಹೆಸರನ್ನು ಹಿಡಿದು ಕೂಗುತ್ತಾ,—ಬೇಗನೆ ಇಲ್ಲಿಗೆ ಬಾ ಎಂದು ಕೂಗಿ ಕರೆಯುವ ಧ್ವನಿಯನ್ನು ಕೇಳಿ, ದಯಾರ್ದ್ರ ಹೃದಯನಾಗಿ,—ಹೆದರ ಬೇಡ! ಹೆದರ ಬೇಡ! ಇಗೋ! ಇಗೋ! ಬಂದೆನು ಎಂದು ನುಡಿಯುತ್ತಾ, ಆ ಕಾಡು ಗಿಚ್ಚಿನ ನಡುವೆ ಹೊಕ್ಕು, ಸುತ್ತಿ ಕೊಂಡು, ಬಿದ್ದಿರುವ ಒಂದು ಘಟ ಸರ್ಪವನ್ನು ನೋಡಲು; ಅದು ಭಯದಿಂದ ಮೈಯನ್ನು ನಡುಗಿಸುತ್ತಾ—ಎಲೈ, ರಾಜೇಂದ್ರನೇ, ನಾನು ಕಾರ್ಕೋಟಕನೆಂಬ ಮಹಾ ನಾಗೇಂದ್ರನು. ಮೊದಲು ತಪೋನಿಧಿಯಾಗಿ, ನಿರಪರಾಧಿಯಾಗಿರುವ ಒಬ್ಬ ಬ್ರಾಹ್ಮಣನಿಗೆ ನಾನು ಅಪಕಾರ ಮಾಡಿದ್ದರಿಂದ, ಆತನು ಕೋಪಿಸಿ ಕೊಂಡು—ಆಚೆಗೆ ಹೋಗುವದಕ್ಕೆ ಸಾಮರ್ಥ್ಯವಿಲ್ಲದೆ, ನಿನ್ನನ್ನು ನಳನು ನೋಡುವ ಪರಿಯಂತರವು ಕಲ್ಲಿನ ಹಾಗೆ ಇಲ್ಲಿಯೇ ಬಿದ್ದು ಇರು ಎಂದು ಶಪಿಸಿದನು. ಅದರಿಂದ ಇಲ್ಲಿಂದ ನಾನು ಏಳಲಾರೆನು. ನೀನು ಈ ಕಾಡು ಗಿಚ್ಚಿನಿಂದ ಆಚೆಗೆ ತೆಗೆದು, ಕಾಪಾಡಿದರೆ, ನಿನಗೆ ಹಿತವನ್ನು ಮಾಡುವೆನು. ನಾನು ಹಾವುಗಳೊಳಗೆ ಬಲ್ಲಿದನು. ನನ್ನ ಬೆಟ್ಟದಂಥಾ ಮೈಯ

ನ್ನು ಕೊಂಚವಾಗಿ ಮಾಡಿ ಕೊಂಡು, ನಿನಗೆ ತೋರಿಸಿ ಇದ್ಧೇನೆ. ನನ್ನನ್ನು
ಬೆಂಕಿಯಿಂದ ಆಚೆಗೆ ಎತ್ತಿ ಹಾಕು ಎಂದು, ಹೆಬ್ಬೆಟ್ಟಿನ ಗಾತ್ರವಾಗಿ ಇರಲು;
ನಳನು ಆ ಕಾರ್ಕೋಟಕನನ್ನು ಕೈಯಲ್ಲಿ ಇಟ್ಟು ಕೊಂಡು, ಕಾಡು ಗಿಜ್ಜ
ನ್ನು ದಾಟಿ, ಒಂದು ಪ್ರದೇಶದಲ್ಲಿ ಇರಿಸುವದಕ್ಕೆ ಹೋದನು.

ಆ ಕಾರ್ಕೋಟಕನು ನಳನನ್ನು ನೋಡಿ,–ಎಲೈ, ಮಹಾತ್ಮನೇ, ಇನ್ನು
ಕೆಲವು ದೂರ ಎತ್ತಿ ಕೊಂಡು, ಹತ್ತು ಹೆಜ್ಜೆಗಳನ್ನು ಎಣಿಸಿ, ಅಲ್ಲಿ ನನ್ನನ್ನು
ನಿಲ್ಲಿಸಿದರೆ, ನಿನಗೆ ಶ್ರೇಯಸ್ಸು ಉಂಟಾಗುತ್ತದೆ ಎನಲು; ನಳನು ಅದೇ ಪ್ರಕಾ
ರವಾಗಿ ಇರಿಸಿದ ಕಾಲದಲ್ಲಿ ಆ ಕಾರ್ಕೋಟಕನು ನಳನನ್ನು ಕಚ್ಚಲು; ಆಗ
ನಳನ ಸೌಂದರ್ಯವಷ್ಟು ಕೆಟ್ಟು ಹೋಗಿ, ವಿಕಾರವಾದ ಮೈಯುಳ್ಳವನಾಗಲು;
ಆಶ್ಚರ್ಯ ಪಟ್ಟು, ನಿಜ ರೂಪದಿಂದ ಹೊಳೆಯುತ್ತಲಿರುವ ಕಾರ್ಕೋಟಕನನ್ನು
ನೋಡಿ, ಮಾಡ ತಕ್ಕ ಕಾರ್ಯವು ತೋರದೆ, ನಿಂತು ಇದ್ದನು. ಆಗ ಆ ಕಾ
ರ್ಕೋಟಕನು ನಳನಿಗೆ ಸಮಾಧಾನವನ್ನು ಮಾಡಿ–ಎಲೈ, ರಾಜ ಶ್ರೇಷ್ಠನೇ,
ಹೆಚ್ಚಾದ ನಿನ್ನ ಚೆಲುವನ್ನು ಲೋಕದ ಜನರು ಕಾಣದೆ ಇರುವ ಹಾಗೆ ಮರೆ
ಮಾಡಿದೆನು. ನನ್ನ ನಂಜು ಎಷ್ಟು ದಿನ ನಿನ್ನ ಮೈಯೊಳಗೆ ಇರುವದೋ, ಅ
ಷ್ಟು ದಿನ ಪರಿಯಂತರವು ಕಷ್ಟವನ್ನು ಅನುಭವಿಸಿ, ನನ್ನ ನಂಜು ಹೋದ ಬಳಿ
ಕ ಸುಖದಲ್ಲಿ ಇರುತ್ತೀ. ಮತ್ತು ಹಾವು, ಚೇಳು, ಮೊದಲಾದ ಜಂತುಗಳ ನಂ
ಜಿನದೆಶೆಯಿಂದ ನಿನಗೆ ತೊಂದರೆ ಇಲ್ಲದೆ ಇರುವ ಹಾಗೆ ನನ್ನ ನಂಜನ್ನು ನಿ
ನ್ನ ಶರೀರದಲ್ಲಿ ಇರಿಸಿ, ನಿನ್ನನ್ನು ಕಾಪಾಡಿದ್ಧೇನೆ. ನಿನಗೆ ಹಗೆಗಳದೆಶೆಯಿಂದ
ಭಯವಿಲ್ಲ. ನನ್ನ ಮಹತ್ವದಿಂದ ನಿನಗೆ ಬ್ರಹ್ಮ ಜ್ಞಾನವು ಬರುತ್ತದೆ. ಯು
ದ್ಧದಲ್ಲಿ ಎಲ್ಲಾ ಹಗೆಗಳನ್ನು ಕೊಂದು, ಜಯಿಸುತ್ತೀ. ಈ ಹೊತ್ತು ಮೊದಲು
ಗೊಂಡು ನೀನು ಸೂತ ವಂಶದಲ್ಲಿ ಹುಟ್ಟಿದವನು, ಬಾಹುಕನು ಎಂಬ ಹೆಸರು
ಳ್ಳವನು ಎಂದು ಹೇಳಿ ಕೊಳ್ಳುತ್ತಾ, ಅಯೋಧ್ಯಾಧಿಪತಿಯಾದ ಮಹಾನುಭಾ
ವನಾದ ಅಕ್ಷಹೃದಯವನ್ನು ತಿಳಿದು ಇರುವ ರುತುಪರ್ನ ರಾಯನ ಬಳಿಗೆ
ಹೋಗು. ನೀನು ಆತನಿಗೆ ಅಶ್ವಹೃದಯ ವಿದ್ಯವನ್ನು ಹೇಳಿ, ಆತನಿಂದ ಅಕ್ಷ
ಹೃದಯವನ್ನು ತಿಳಿದುಕೋ! ಆ ರಾಯನು ನಿನ್ನಲ್ಲಿ ಪ್ರೀತಿಯನ್ನು ಮಾಡಿ, ನಿ
ನಗೆ ಸಂಗಡಿಗನಾಗಿರುವನು. ನೀನು ಅಕ್ಷಹೃದಯವನ್ನು ಯಾವಾಗ ತಿಳಿಯು
ತ್ತಿದ್ಧೀಯೋ, ಆಗಲೇ ನಿನ್ನ ಕ್ಲೇಶಗಳಷ್ಟು ಹೋಗಿ, ಶ್ರೇಯಸ್ಸನ್ನು ಪಡೆದು,
ರಾಜ್ಯಾಭಿಷಿಕ್ತನಾಗಿ ಹೆಂಡತಿ ಮಕ್ಕಳೊಡನೆ ಕೂಡಿ, ಸುಖವಾಗಿರುವಿ. ಇದೆ
ಲ್ಲಾ ನಿಜವೆಂದು ನಂಬು. ಇಗೋ, ಈಗ ನಿನಗೆ ಎರಡು ಬಟ್ಟೆಗಳನ್ನು ಕೊ

ಡುತ್ತೇನೆ. ಇವನ್ನು ತೆಕ್ಕೊಂಡು, ನಿನ್ನ ನಿಜಾಕಾರವು ಯಾವಾಗ ಬರ ಬೇಕೆಂದು ಎಣಿಸುತ್ತೀಯೋ, ಆಗ ನನ್ನನ್ನು ನೆನೆದು, ಇವುಗಳನ್ನು ಹೊದ್ದುಕೊಂಡರೆ, ಮೊದಲಿನಂತೆ ಅತಿ ಚೆಲುವನಾಗುತ್ತೀ ಎಂದು ನುಡಿದು, ದಿವ್ಯ ವಸ್ತ್ರಗಳನ್ನು ಕೊಟ್ಟು, ಅಂತರ್ಧಾನವಾಯಿತು.

ಆ ಬಳಿಕ ನಳನು ಅಲ್ಲಿಂದ ಹೊರಟು, ಹತ್ತನೇ ದಿವಸಕ್ಕೆ ಅಯೋಧ್ಯಾಪತಿಯಾದ ಅರಸಿನ ಸಮೀಪಕ್ಕೆ ಬಂದು,—ಎಲೈ, ಅರಸೇ, ನಾನು ಬಾಹುಕನೆಂಬ ಹೆಸರುಳ್ಳವನು; ಕುದುರೆಗಳನ್ನು ತಿದ್ದುವದರಲ್ಲಿ ನನಗೆ ಸರಿಯಾದವನು ಮೂರು ಲೋಕಗಳಲ್ಲಿಯೂ ಇಲ್ಲ. ಇದಲ್ಲದೆ ಒಂದೊಂದು ಕೆಲಸದಲ್ಲಿ ನನ್ನ ಆಲೋಚನೆಯನ್ನು ಕೇಳಿದರೆ, ನಿಗದಿಯಾಗಿ ಹೇಳುವೆನು. ಇನ್ನು ಅನ್ನದಲ್ಲಿ ಹೆಚ್ಚಾಗಿ ಶೀ ಹುಟ್ಟುವ ಹಾಗೆ ಅಡಿಗೆ ಮಾಡುವದಕ್ಕೆ ಬಲ್ಲೆನು. ಮತ್ತು ಲೋಕದಲ್ಲಿ ಜನರಿಗೆ ಮಾಡ ಕೂಡದ ಕೆಲಸಗಳನ್ನೆಲ್ಲಾ ಸುಲಭವಾಗಿ ಮಾಡುವದಕ್ಕೆ ನನಗೆ ಸಾಮರ್ಥ್ಯ ಉಂಟು ಎಂದು ಹೇಳಿದನು. ಋತುಪರ್ಣ ರಾಯನು ಆತನ ಮಾತನ್ನು ಕೇಳಿ, ಸಂತೋಷ ಪಟ್ಟು—ಎಲೈ, ಬಾಹುಕನೇ, ನಿನಗೆ ಬೇಕಾದವುಗಳನ್ನು ಕೊಡುತ್ತೇನೆ; ನನ್ನ ಸಮ್ಮುಖದಲ್ಲಿ ಇದ್ದು ಕೊಂಡು, ಇಷ್ಟು ಕೆಲಸಗಳನ್ನು ಮಾಡು. ಕುದುರೆಗಳು ಬೇಗ ನಡೆಯ ಬೇಕೆಂಬ ಬುದ್ಧಿಯು ನನಗೆ ಹೆಚ್ಚಾಗಿರುವದರಿಂದ, ನೀನು ನನ್ನ ಕುದುರೆಗಳಿಗೆಲ್ಲಾ ಒಡೆಯನಾಗಿ ಇರು. ನಿನಗೆ ತಿಂಗಳು ಒಂದಕ್ಕೆ ಹತ್ತು ಸಾವಿರ ಮೋಹರಗಳನ್ನು ಸಂಬಳವಾಗಿ ಕೊಡುತ್ತೇನೆ. ಈ ವಾರ್ಷ್ಣೇಯನೂ ಈ ಜೀವಲನೂ ನನ್ನ ಅಶ್ವಾಧ್ಯಕ್ಷರು. ಇವರು ನೀನು ಹೇಳಿದ ಪ್ರಕಾರ ನಡೆದು ಕೊಳ್ಳುವ ಹಾಗೆ ಕಟ್ಟು ಮಾಡುತ್ತೇನೆ. ಇವರಿಬ್ಬರನ್ನು ನಿನ್ನಾಧೀನ ಮಾಡಿ ಕೊಂಡು, ಸುಖದಿಂದ ಇರು, ಅಂದನು.

ನಳನು ಆ ಋತುಪರ್ಣನ ಮಾತುಗಳನ್ನು ಕೈ ಕೊಂಡು, ಅಯೋಧ್ಯಾ ಪಟ್ಟಣದಲ್ಲಿ ವಾರ್ಷ್ಣೇಯನೂ ಜೀವಲನೂ ತನ್ನ ಹಿಂದುಗಡೆಯಲ್ಲಿ ಬರುತ್ತಿರಲು; ಕುದುರೆಗಳನ್ನು ತಿದ್ದುತ್ತಾ, ಪ್ರತಿ ದಿವಸದ ರಾತ್ರಿಯಲ್ಲಿಯೂ ಚೆಲುವೆಯಾಗಿ ಪತಿವ್ರತಾ ಶಿರೋಮಣಿಯಾಗಿರುವ ದಮಯಂತಿಯನ್ನು ನೆನೆದು, ಸಂಸ್ಕೃತ ಶ್ಲೋಕ ರೂಪದಿಂದ—ಹಸಿವು ಬಾಯಾರಿಕೆಗಳಿಂದ ಕಂಗೆಟ್ಟು, ಆ ವನಿತಾ ಶಿರೋಮಣಿಯು ಮಂದ ಭಾಗ್ಯನನ್ನು ನೆನಸುತ್ತಾ, ಎಲ್ಲಿ ಮಲಗಿ ಇದ್ದಾಳೋ? ಎಂಬ ಈ ಅರ್ಥವುಳ್ಳ ಶ್ಲೋಕವನ್ನು ಪ್ರತಿ ದಿವಸವೂ ಹೇಳುತ್ತಿರಲು; ಒಂದು ದಿವಸ ಜೀವಲನು ಅದನ್ನು ಕೇಳಿ, ಎಲೈ, ಬಾಹುಕನೇ,

ದಿನ ದಿನವು ಈ ಶ್ಲೋಕವನ್ನೇ ಹೇಳುತ್ತಾ, ಯಾರನ್ನು ನೆನಸಿ ಕೊಂಡು, ದುಃಖ ಪಡುತ್ತೀ ಎಂದು ಕೇಳಲು;—ಎಲೈ, ಜೀವಲನೇ, ಹೆಡ್ಡನಾದ ಒಬ್ಬ ಮನುಷ್ಯನು ಉಂಟು. ಆತನಿಗೆ ಅನುರಾಗವುಳ್ಳ ಒಬ್ಬಳು ಹೆಂಡತಿ ಉಂಟು. ಅವನಿಗೆ ಅವಳಲ್ಲಿ ಬಹು ಪ್ರೀತಿ ಉಂಟು. ಆ ಪುರುಷನು ಒಂದು ಕಾರಣ ದಿಂದ ಮಂದ ಬುದ್ಧಿಯಾಗಿ ಅವಳನ್ನು ಬಿಟ್ಟು, ರಾತ್ರೆ ಹಗಲು ಶೋಕಾ ಗ್ನಿಯಿಂದ ಸುಡಲ್ಪಟ್ಟು, ರಾತ್ರೆ ಕಾಲದಲ್ಲಿ ಅವಳನ್ನು ನೆನೆದು, ಹೆಚ್ಚಾದ ದುಃಖವನ್ನು ಅನುಭವಿಸುತ್ತಾನೆ. ಅವನನ್ನು ನೆನೆದು, ನಾನು ವ್ಯಸನ ಪಡು ತ್ತೇನೆ. ಅವನು ನನಗೆ ಸಂಗಡಿಗನು ಎಂದು, ಈ ಪ್ರಕಾರದಿಂದ ಮರೆಯಾಗಿ ಹೇಳಿ, ತನ್ನನ್ನು ಒಬ್ಬರೂ ಅರಿಯದ ಹಾಗೆ ಗುಟ್ಟಾಗಿ ದಮಯಂತಿಯನ್ನು ನೆನೆದು, ದುಃಖ ಪಡುತ್ತಾ, ಅಯೋಧ್ಯಾ ಪಟ್ಟಣದಲ್ಲಿ ಇದ್ದನು.

ಇತ್ತಲಾ ನಳನು ಜೂಜಿನಿಂದ ತನ್ನ ರಾಜ್ಯವನ್ನೂ ಸಕಲ ವಸ್ತುಗಳನ್ನೂ ಕಳ ಕೊಂಡು, ಹೆಂಡತಿಯೊಡನೆ ಕೂಡಿ, ವನಕ್ಕೆ ಹೋಗಿ, ಇಂತಾ ತಾವಿ ನಲ್ಲಿ ಇದ್ದಾನೆ ಎಂದು ಕೇಳದೆ ಇರುವದರಿಂದ, ಭೀಮ ಭೂಪಾಲಕನು ತನ್ನ ಮಗಳಾದ ದಮಯಂತಿಯನ್ನೂ ಅಳಿಯನಾದ ನಳನನ್ನೂ ಹುಡುಕುವದಕ್ಕೆ ಬ್ರಾಹ್ಮಣರನ್ನು ಕರ ತರಿಸಿ, ಅವರಿಗೆ ಅನೇಕ ದ್ರವ್ಯಗಳನ್ನು ಕೊಟ್ಟು,—ನೀವು ಎಲ್ಲಾ ದೇಶಗಳಿಗೂ ಹೋಗಿ, ನಳನನ್ನೂ ದಮಯಂತಿಯನ್ನೂ ಹುಡುಕಿ, ಇಲ್ಲಿಗೆ ಕರ ಕೊಂಡು ಬನ್ನಿ. ಕರ ಕೊಂಡು ಬಂದಂಥಾವರಿಗೆ ಪಟ್ಟಣಗಳಿಗೆ ಸರಿಯಾದ ಗ್ರಾಮಗಳ ಸರ್ವಮಾನ್ಯವನ್ನೂ ಸಾವಿರ ಆಕಳುಗಳನ್ನೂ ಬಹಳ ಹಣಗಳನ್ನೂ ಕೊಡುವೆನು. ಹಾಗೆ ಹುಡುಕುವಾಗ ನಳನನ್ನಾದರೂ ದಮ ಯಂತಿಯನ್ನಾದರೂ ನೋಡಿ, ಕರೆದಾಗ್ಯೂ, ಅವರು ಇಲ್ಲಿಗೆ ಬಾರದೆ ಹೋ ದರೆ, ಅವರ ಯೋಗ ಕ್ಷೇಮವನ್ನು ತಿಳಿದು, ಹೇಳಿದಂಥಾವರಿಗೆ ಸಾವಿರ ಹ ಸುಗಳನ್ನೂ ಕೆಲವು ಮೋಹರಗಳನ್ನೂ ಕೊಡುತ್ತೇನೆ ಎಂದು ಹೇಳಲು; ಬ್ರಾಹ್ಮಣರು ಸಂತೋಷ ಪಟ್ಟು, ಅವರಿಬ್ಬರನ್ನು ಹುಡುಕುವದಕ್ಕೆ ದಿಕ್ಕು ದಿಕ್ಕಿಗೆ ಹೋಗಿ, ಹುಡುಕುತ್ತಾ ಇದ್ದರು. ಅವರಲ್ಲಿ ವಸುದೇವನೆಂಬ ಬ್ರಾಹ್ಮ ಣನು ಅಲ್ಲಿ ಅಲ್ಲಿ ಹುಡುಕುತ್ತಾ, ಪ್ರತಿ ದಿನವು ಪ್ರಯಾಣಗಳನ್ನು ಮಾಡುತ್ತಾ ಬಂದು, ಸುಬಾಹು ರಾಯನ ಪಟ್ಟಣವನ್ನು ಹೊಕ್ಕು, ಅರಮನೆಯಲ್ಲಿ ಪು ಣ್ಯಾಹವಾಚನೆ ಮಾಡುವದಕ್ಕೆ ಹೋಗುವ ಪುರೋಹಿತರ ಸಂಗಡ ತಾನೂ ಅಂತಃಪುರಕ್ಕೆ ಹೋಗಿ, ಬಡವಾದ ಗಂಡನ ಚಿಂತೆಯಿಂದ ಕರಗುತ್ತಾ, ತಾವ ರೆಯಂತೆ ಕಣ್ಣುಗಳುಳ್ಳವಳಾಗಿ, ಸುನಂದೆಯೊಡನೆ ಕೂಡಿರುವ ದಮಯಂತಿ

ಯನ್ನು ನೋಡಿ, ಹೊಗೆಯ ತಂಡದಿಂದ ಮುಚ್ಚಲ್ಪಟ್ಟ ಬೆಂಕಿಯ ಉರಿಯ
ಹಾಗೆ ಇರುವ ಮಲಿನವಾದ ಮೈಯುಳ್ಳ ಆ ಹೆಂಗಸನ್ನು ಗುರುತುಗಳಿಂದ
ದಮಯಂತಿ ಎಂದು ನಿಶ್ಚೈಸಿ, ಜಗನ್ಮೋಹನಾಕಾರೆಯಾಗಿ, ದೊಡ್ಡದಾದ
ಮೊಲೆಗಳುಳ್ಳವಳಾಗಿ, ತಾವರೇ ಎಸಳಿನ ಹಾಗೆ ಇರುವ ಕಣ್ಣುಗಳುಳ್ಳವ
ಳಾಗಿ, ಮನ್ಮಥನ ಹೆಂಡತಿಯಾದ ರತಿಯ ಹಾಗೆ ಚೆಲುವೆಯಾಗಿ, ಚಂದ್ರಕ
ಳೆಯೋಪಾದಿಯಲ್ಲಿ ಹೊಳೆಯುತ್ತಲಿದ್ದ ಈಕೆಯು ಈಗ ಗಂಡನ ವಿಯೋ
ಗದಿಂದ ಕಂದಿ, ಕುಂದಿದವಳಾಗಿ, ರಾಹು ಹಿಡಿದ ಚಂದ್ರಮಂಡಲವುಳ್ಳ ಪೌ
ರ್ಣಿಮಿಯ ರಾತ್ರಿಯನ್ನು ಹೋಲುತ್ತಾಳೆ. ಭೀಮ ಭೂಪಾಲನೆಂಬ ಕೊಳ
ದಲ್ಲಿ ಹುಟ್ಟಿ, ದೈವವು ಕಿತ್ತು ಹಾಕಲು, ಕೆಸರಿನಿಂದ ಕೂಡಿ ಬಾಡಿರುವ
ತಾವರೆ ದಂಟಗೆ ಸರಿಯಾಗಿ ಇದ್ಧಾಳೆ. ಮತ್ತು ಅಲ್ಪವಾದ ಶೆಳವು ಉಳ್ಳ
ಹೊಳೆಗೂ, ಛಳಿಗಾಲದಲ್ಲಿ ಉದುರಿ ಹೋಗಿರುವ ಕಮಲಿನಿಗೂ, ಆನೆಗಳಿಂದ
ಕಲಕಲ್ಪಟ್ಟ ಕೊಳಗಳಿಗೂ ಸಮಾನಳಾಗಿದ್ಧಾಳೆ. ಸಕಲಾಭರಣಗಳನ್ನು ತೊ
ಟ್ಟಿದ್ದಂಥಾವಳು ಈಗ ಆಭರಣ ಹೀನಳಾಗಿದ್ಧಾಳೆ. ಪಟ್ಟೆ ಪೀತಾಂಬರಗಳನ್ನು
ಉಟ್ಟಿದ್ದಂಥಾವಳು ಈಗ ಮಾಸಿದ ಬಟ್ಟೆಯನ್ನು ಉಟ್ಟಿದ್ಧಾಳೆ. ಗಂಡನನ್ನು
ಅಗಲಿ, ತಿರಿಗಿ ನೋಡೇನು ಎಂಬ ಅಭಿಲಾಷೆಯಿಂದ ಶರೀರವನ್ನು ಧರಿಸಿ ಇ
ದ್ಧಾಳೆ. ಇಂಥಾ ದಮಯಂತಿಯನ್ನು ಬಿಟ್ಟು, ನಳನು ದುಃಖದಿಂದ ಬದುಕಿ
ಇದ್ಧಾನೋ, ಇಲ್ಲವೋ, ತಿಳಿಯದು. ಇವಳನ್ನು ನೋಡಿದರೆ, ನನ್ನಂಥಾವ
ನಿಗೂ ಹೃದಯವು ತಪಿಸುತ್ತದೆ. ರೋಹಿಣಿಯು ಚಂದ್ರನೊಡನೆ ಕೂಡಿದ
ತೆರದಿಂದ ಈಕೆಯು ನಳನೊಡನೆ ಯಾವಾಗ ಕೂಡಿ, ಇಂಥಾ ದುಃಖದ ಕ
ಡಲನ್ನು ದಾಟುವಳೋ, ತಿಳಿಯದು. ನಳನು ಈಕೆಯೊಡನೆ ಕೂಡಿದರೆ,
ಹಗೆಗಳಿಂದ ಅಪಹೃತವಾದ ರಾಜ್ಯವು ತಿರಿಗಿ ಲಭಿಸಿದಂತೆ ಸಂತೋಷ ಪಡು
ವನು ಎಂದು, ಈ ಪ್ರಕಾರ ಆಲೋಚಿಸಿ, ದಮಯಂತಿಯ ಬಳಿಗೆ ಹೋಗಿ—
ತಾಯಿಯಾ, ನಾನು ವಸುದೇವನೆಂಬ ಬ್ರಾಹ್ಮಣನು; ನಿನ್ನ ತಂದೆಯಾದ ಭೀಮ
ಭೂಪಾಲನಿಗೆ ಮಿತ್ರನು. ಆತನು ನನ್ನನ್ನು ನಿನ್ನ ಹುಡುಕುವದಕ್ಕೆ ಕಳು
ಹಿಸಲು, ನಾನು ಇಲ್ಲಿಗೆ ಬಂದೆನು. ನಿನ್ನ ತಾಯಿ ತಂದೆಗಳೂ ಒಡಹುಟ್ಟು
ಗಳೂ ನಿನ್ನ ಮಗನೂ ನಿನ್ನ ಮಗಳೂ ಸುಖವಾಗಿ ಇದ್ಧಾರೆ. ನಿನ್ನ ನಂಟ
ರಿಷ್ಟರೆಲ್ಲಾ ನಿನ್ನನ್ನು ನೋಡದೆ ಇರುವದರಿಂದ ಪ್ರಾಣವಿಲ್ಲದವರ ಹಾಗೆ ಇ
ದ್ಧಾರೆ. ನಿನ್ನನ್ನು ಹುಡುಕುವದಕ್ಕೆ ಸಾವಿರಾರು ಸಂಖ್ಯೆಯುಳ್ಳ ಬ್ರಾಹ್ಮಣರ
ನ್ನು ಕಳುಹಿಸಿ ಇದ್ಧಾರೆ ಎಂದು ಹೇಳಿದನು.

ಆಗ ದಮಯಂತಿಯು, ಈತನು ವಸುದೇವನು ಹೌದು ಎಂದು ತಿಳಿದು, ತನ್ನವರ ಕ್ಷೇಮಗಳನ್ನು ಬೇರೆ ಬೇರೆಯಾಗಿ ಕೇಳಿ, ತಿಳು ಕೊಂಡು, ಆ ಮೇಲೆ ಇಷ್ಟಷ್ಟು ಎಂದು ಹೇಳ ಕೂಡದ ದುಖ್ಖದಿಂದ ಕೂಗಿ ಅಳಲು; ಅವಷ್ಟನ್ನು ಸುನಂದಾ ದೇವಿಯು ತಿಳಿದು, ತನ್ನ ತಾಯಿಗೆ ತಿಳಿಸಿದಳು. ಆ ಅರಸಿನ ತಾಯಿಯು ಬಹು ಬೇಗ ಅಲ್ಲಿಗೆ ಬಂದು, ಆ ವಸುದೇವನೆಂಬ ಬ್ರಾಹ್ಮಣನನ್ನು ನೋಡಿ,—ಇವಳ್ಯಾರು? ಇಲ್ಲಿಗೆ ನೀನು ಯಾಕೆ ಬಂದೆ? ಇದೆಲ್ಲಾ ನನಗೆ ತಿಳಿಸು ಎಂದು ಕೇಳಿದಳು. ಆಗ ವಸುದೇವನು—ಎಲೈ, ರಾಜ ಮಾತೆಯೇ, ಇವಳು ವಿದರ್ಭ ದೇಶಾಧಿಪತಿಯಾದ ಭೀಮರಾಯನ ಮಗಳು; ಇವಳ ಹೆಸರು ದಮಯಂತಿಯು. ಮಹಾನುಭಾವನಾದ ನಳಚಕ್ರವರ್ತಿಯು ಈಕೆಯ ಗಂಡನು. ಆತನು ದಾಯಾದಿಗಳೊಡನೆ ಜೂಜಾಡಿ, ರಾಜ್ಯಕೋಶಗಳು ಮೊದಲಾದ ಸಕಲೈಶ್ವರ್ಯವನ್ನು ಕಳ ಕೊಂಡು, ಈ ಹೆಂಡತಿಯೊಡನೆ ಪಟ್ಟಣವನ್ನು ಬಿಟ್ಟು, ಅರಣ್ಯವನ್ನು ಹೊಕ್ಕನು. ಆತನು ಇಂಥಾ ಸ್ಥಳದಲ್ಲಿ ಇದ್ಧಾನೆಂದು ಗೊತ್ತು ತಿಳಿಯದು. ಇವರನ್ನು ಹುಡುಕುವದಕ್ಕೆ ಭೀಮ ರಾಯನು ಸಕಲ ದೇಶಗಳಿಗೆ ಬ್ರಾಹ್ಮಣರನ್ನು ಕಳುಹಿಸಿದ್ದರಿಂದ ಅವರು ದೇಶ ದೇಶಗಳಲ್ಲಿ ಹುಡುಕುತ್ತಿದ್ಧಾರೆ, ನಾನು ಒಬ್ಬನೇ ಈ ಪಟ್ಟಣಕ್ಕೆ ಬಂದು, ಈಕೆಯನ್ನು ಕಂಡು, ಸಕಲ ಐಶ್ವರ್ಯವು ಇವಳಿಗೆ ಉಂಟು ಎಂಬುವದಕ್ಕೆ ಬ್ರಹ್ಮನಿಂದ ಸೂಚನೆಯಾಗಿ ಈ ದಮಯಂತಿಯ ಭ್ರೂಮಧ್ಯದಲ್ಲಿ ಪದ್ಮಾಕಾರವಾದ ಒಂದು ಮತ್ತಿಯು ನಿರ್ಮಿತವಾಗಿರುವದು. ಅದು ಮೇಘದಿಂದ ಮುಚ್ಚಲ್ಪಟ್ಟ ಚಂದ್ರ ರೇಖೆಯ ಹಾಗೆ ಧೂಳಿಯಿಂದ ಮಾಸಿ, ಚನ್ನಾಗಿ ಕಾಣಿಸುವದಿಲ್ಲ. ಅದರ ಸುಮಾರಿನಿಂದ ನಾನು ಈಕೆಯನ್ನು ಗೊತ್ತು ಮಾಡಿದೆನು, ಅಂದನು. ಅದನ್ನು ಕೇಳಿ, ಸುನಂದಾ ದೇವಿಯು ದಮಯಂತಿಯ ಹಣೆಯಲ್ಲಿ ಇರುವ ಧೂಳಿಯನ್ನು ತನ್ನ ಶೀರೇ ಶೆರಗಿನಿಂದ ಒರಿಸಲು; ಮೇಘ ಮಂಡಲದಿಂದ ಹೊರಟು ಬರುವ ಸೂರ್ಯ ಬಿಂಬದಂತೆ ತೋರುವ ಮತ್ತಿಯನ್ನು ನೋಡಿ, ಸುಬಾಹು ರಾಜನ ಮಾತೆಯು ದಮಯಂತಿಯನ್ನು ತಬ್ಬಿ ಕೊಂಡು, ಕಣ್ಣೀರನ್ನು ಸುರಿಸುತ್ತಾ, ಆಕೆಯನ್ನು ನೋಡಿ,—ತಾಯಿ, ನಿನ್ನ ಹುಬ್ಬುಗಳ ನಡುವೆ ಇರುವ ಮತ್ತಿಯನ್ನು ನೋಡಿದ್ದರಿಂದ, ನನ್ನ ಒಡಹುಟ್ಟಿದವಳ ಮಗಳೆಂದು ತಿಳಿದೆನು. ನಾನೂ ನಿನ್ನ ತಾಯಿಯೂ ದಶಾರ್ನ ದೇಶಾಧ್ಯಕ್ಷನಾದ ಸುಧಾಮನ ಮಕ್ಕಳು. ಆತನು ನಿನ್ನ ತಾಯಿಯನ್ನು ಭೀಮ ಭೂಪಾಲಕನಿಗೂ, ನನ್ನನ್ನು ಚೇದಿ ದೇಶಾಧೀಶನಾದ ವೀರ ಬಾಹುಕನಿಗೂ, ಕೊಟ್ಟ

ಸು. ನಿನ್ನ ತಾಯಿಯು ತೌರ ಮನೆಗೆ ಬಂದಾಗ, ಚಿಕ್ಕತನದಲ್ಲಿ ನಿನ್ನನ್ನು ನೋಡಿ ಉಂಟು. ಆದ್ದರಿಂದ ನೀನು ಈ ಮನೆಗೂ ನಿನ್ನ ತಂದೆಯ ಮನೆಗೂ ಭೇದವೆಣಿಸ ಬೇಡ. ಈ ಐಶ್ವರ್ಯವಷ್ಟು ನಿನ್ನದು ಎಂದು ಎಣಿಸು, ಅಂದಳು.

ಆಗ ದಮಯಂತಿಯು ತನ್ನ ಚಿಕ್ಕಮ್ಮನಿಗೆ ನಮಸ್ಕಾರವನ್ನು ಮಾಡಿ–ಎಲೇ, ತಾಯೇ, ನನ್ನ ಸ್ವರೂಪವನ್ನು ತಿಳಿಯದಿದ್ದರೂ ಮಗಳೋಪಾದಿಯಲ್ಲಿ ನೀನು ಕಾಪಾಡಿದ್ದರಿಂದ, ಇಷ್ಟು ದಿವಸಗಳು ನಿನ್ನ ಮನೆಯಲ್ಲಿ ಸುಖವಾಗಿ ಇದ್ದೆನು. ನನ್ನ ಮಗಳಾದ ಇಂದ್ರಸೇನೆಯು ತಾಯಿ ತಂದೆಗಳನ್ನು ಅಗಲಿ, ಬಹು ಕಾಲವಾಯಿತು. ಹ್ಯಾಗಿದ್ದಾಳೋ, ತಿಳಿಯಲಿಲ್ಲ. ನಿನ್ನ ಮನಸ್ಸಿನಲ್ಲಿ ನನಗೆ ಪ್ರಿಯವನ್ನು ಮಾಡ ಬೇಕೆಂದು ಎಣಿಸಿದರೆ, ನನ್ನನ್ನು ಶೀಘ್ರದಲ್ಲಿ ವಿದರ್ಭ ನಗರಕ್ಕೆ ಕಳುಹಿಸ ಬೇಕೆನಲು; ಆ ದೇವಿಯು–ಹಾಗೆ ಆಗಲಿ ಎಂದು, ತನ್ನ ಮಗನಾದ ಸುಬಾಹುಕನನ್ನು ಕರತರಿಸಿ, ಅರಿಕೆ ಮಾಡಿ, ಆ ಕನ್ಯಾಮಣಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ, ಅನೇಕ ದಾಸ ದಾಸೀ ಜನಗಳನ್ನೂ ಬೇಕಾದ ವಸ್ತುಗಳನ್ನೂ ಕೊಟ್ಟು, ಅಂಗರಕ್ಷೆಗೆ ಚತುರ್ಬಲವನ್ನು ಜೊತೆಗೊಳಿಸಿ, ಕಳುಹಿಸಲು; ದಮಯಂತಿಯು ಶೀಘ್ರವಾಗಿ ತನ್ನ ತೌರ ಮನೆಗೆ ಹೋಗಿ, ತನ್ನ ಮಕ್ಕಳನ್ನೂ ತಾಯಿ ತಂದೆಗಳನ್ನೂ ನಂಟ ಇಷ್ಟರನ್ನೂ, ತನ್ನ ಸಂಗಾತಿಗಳನ್ನೂ ನೋಡಿ, ಸಂತೋಷ ಪಟ್ಟಳು. ಆ ಬಳಿಕ ಭೀಮ ಭೂಪಾಲಕನು ವಸುದೇವನಿಗೆ ಸಾವಿರ ಹಸುಗಳನ್ನೂ ಅನೇಕ ಧನ ರತ್ನಗಳನ್ನೂ ಊರುಂಬಳಿಗಳನ್ನೂ ಕೊಟ್ಟನು.

ಮೂರನೇ ದಿವಸ ದಮಯಂತಿಯು ತನ್ನ ತಾಯಿಯನ್ನು ಕುರಿತು–ಎಲೈ, ತಾಯೇ, ನೀನು ನಾನು ಪ್ರಾಣದೊಡನೆ ಇರ ಬೇಕೆಂದು ಎಣಿಸಿದರೆ, ನಳನು ಇರುವ ಎಡೆಗೆ ಬ್ರಾಹ್ಮಣರನ್ನು ಕಳುಹಿಸಿ, ಹುಡುಕುವದಕ್ಕೆ ಯತ್ನವನ್ನು ಮಾಡಿಸೆಂದು ನುಡಿಯಲು; ಕೇಳಿ, ಗದ್ಗದ ಕಂಠದೊಡನೆ ಬದಲು ಮಾತು ಆಡಲಾರದೆ, ಕಣ್ಣೀರುಗಳನ್ನು ಧಾರೆಯಾಗಿ ಸುರಿಸುತ್ತಾ, ಭೀಮ ಭೂಪಾಲಕನ ಎಡೆಗೆ ಹೋಗಿ–ಎಲೈ, ರಾಜೇಂದ್ರನೇ, ನಿನ್ನ ಮಗಳು ತನ್ನ ಗಂಡನಾದ ನಳನನ್ನು ಅಗಲಿ ಇರುವದರಿಂದ ಬಹಳ ದುಃಖಾಕ್ರಾಂತೆಯಾಗಿ ಚಿಂತಿಸುತ್ತಾ, ಆತನನ್ನು ತಡಕುವದಕ್ಕೆ ಜನರನ್ನು ಕಳುಹಿಸ ಬೇಕೆಂದು, ನಾಚಿಕೆಯನ್ನು ಬಿಟ್ಟು ಹೇಳುತ್ತಾಳೆ, ಎನಲು; ಭೀಮ ನರೇಂದ್ರನು ತನ್ನ ಬಳಿಯಲ್ಲಿ ಇರುವ ಹಾರುವರನ್ನು ಕರೆದು–ಇಳೆಯ ಮೇಲೆ ತಿರುಗಿ, ನಳನನ್ನು ತಡಕಿ, ಅವನಿ

ರುವ ಎಡೆಯನ್ನು ಅರಿದು, ಬನ್ನಿ ಎಂದು, ಅಪ್ಪಣೆ ಕೊಡಲು; ಅವರು ದಮಯಂತಿಯ ಬಳಿಗೆ ಬಂದು, ನಿನ್ನ ಪತಿಯನ್ನು ಹುಡುಕುವದಕ್ಕೆ ಹೋಗುತ್ತೇವೆ ಎಂದು ಹೇಳಿದರು. ದಮಯಂತಿಯು ಆ ಬ್ರಾಹ್ಮಣರನ್ನು ನೋಡಿ,—ನೀವು ದಿಕ್ಕು ದಿಕ್ಕುಗಳಿಗೆ ಹೋಗಿ, ಹತ್ತು ಮಂದಿ ಕೂಡಿರುವ ಚಾವಡಿಗಳನ್ನು ಹೊಕ್ಕು,—ನೀನು ಧರ್ಮವನ್ನು ತಿಳಿದವರಲ್ಲಿ ಪ್ರಸಿದ್ಧನಾಗಿ, ವಿವೇಕಿಯಾಗಿ, ದೊಡ್ಡ ಕುಲದಲ್ಲಿ ಹುಟ್ಟಿ, ದಯಾ ಸಮೇತನಾಗಿ, ಸದಾಚಾರ ಸಂಪನ್ನನಾಗಿ ಇದ್ದರೂ, ಧೂರ್ತನಾಗಿ, ಕೃಪಾ ರಹಿತನಾಗಿ, ನಡು ರಾತ್ರಿಯಲ್ಲಿ ನಿದ್ರೆ ಹೋಗುವಾಗ, ವಂಚಿಸಿ, ಉಟ್ಟ ಬಟ್ಟೆಯಲ್ಲಿ ಅರವಾಶಿ ಬಟ್ಟೆಯನ್ನು ಹರ ಕೊಂಡು—ನಿನ್ನಲ್ಲಿ ತುಂಬಾ ಪ್ರೀತಿಯುಳ್ಳ, ನಿನಗೆ ಧರ್ಮ ಪತ್ನಿಯಾದ ದಮಯಂತಿಯನ್ನು ಕಾಡಿನ ನಡುವೆ ಬಿಟ್ಟು, ನೀನು ಎಲ್ಲಿಗೆ ಹೋದೆ? ನಿನ್ನನ್ನು ಅಗಲಿದ್ದರಿಂದ ಕ್ಲೇಶ ಪಡುತ್ತಾ, ಆಕೆಯು ನೀನೆಲ್ಲಿ ಬಿಟ್ಟು ಬಂದೆಯೋ, ಅಲ್ಲಿ ಇದ್ದು ಕೊಂಡು, ನೀನು ಎಂದಿಗೆ ಬರುವೆಯೋ? ಎಂದು ದಾರೀ ನೋಡುತ್ತಾ, ಅರ್ಧ ಬಟ್ಟೆಯನ್ನು ಉಟ್ಟು ಕೊಂಡು, ದುಃಖದ ಕಿಚ್ಚಿನಿಂದ ಉರಿಯುವ ಮನಸ್ಸುಳ್ಳವಳಾಗಿ ಇದ್ದಾಳೆ. ಅನ್ನ ಬಟ್ಟೆಯನ್ನು ಕೊಟ್ಟು, ಕಾಪಾಡುವದೂ, ಮತ್ತೊಬ್ಬರಿಂದ ತೊಂದರೆ ಬಾರದ ಹಾಗೆ ಹೆಂಡರನ್ನು ರಕ್ಷಿಸುವದೂ, ಗಂಡಂದಿರಿಗೆ ಧರ್ಮವು ಎಂಬ ಈ ಎರಡು ಗುಣಗಳನ್ನು ಬಿಟ್ಟು, ನೀನು ವಂಚಿಸಿ, ಹೋದ್ದರಿಂದ ಅವಳ ನಿರ್ಭಾಗ್ಯತನವೇ ಹೊರತಾಗಿ ನಿನ್ನ ತಪ್ಪಲ್ಲ. ಇನ್ನಾದರೂ ಅವಳಲ್ಲಿ ದಯ ಮಾಡಿ, ಬದಲು ಮಾತನ್ನು ಆಡೆಂದು ಹೇಳಿರಿ. ಆಗ ಅದನ್ನು ಕೇಳಿ, ಯಾವವನು ಬದಲು ಹೇಳುತ್ತಾನೋ, ಆತನು ಐಶ್ವರ್ಯ ಸಂಪನ್ನನಾಗಿರುವದನ್ನೂ ಬಡವನಾಗಿರುವದನ್ನೂ ಅರ್ಥ ಕಾಮ ವಶನಾಗಿರುವದನ್ನೂ ಚನ್ನಾಗಿ ತಿಳು ಕೊಂಡು ಬನ್ನಿರಿ. ಮತ್ತು ಭೀಮ ಭೂಪಾಲಕನು ನಿಮ್ಮನ್ನು ಕಳುಹಿಸಿದವನಾಗಿ, ಆತನು ತಿಳಿಯದ ಹಾಗೆ ಇರ ಬೇಕು. ಮತ್ತು ಬೆಂಕಿಯು ಬೆಣ್ಣೆಯನ್ನು ಕರಗಿಸುವ ಹಾಗೆ ನಿಮ್ಮ ಮಾತುಗಳು ಆತನ ಹೃದಯವನ್ನು ಕರಗಿಸಿ, ನನ್ನಲ್ಲಿ ಪ್ರೀತಿಯನ್ನು ಹುಟ್ಟಿಸ ಬೇಕು ಎಂದು ನುಡಿದಳು. ಅವರು—ಹಾಗೆ ಆಗಲಿ ಎಂದು, ನಾನಾ ದೇಶಗಳಿಗೆ ಹೋಗಿ, ಪಟ್ಟಣ, ಗ್ರಾಮ, ಹಳ್ಳಿ, ಕೊಪ್ಪಲು, ಗಿರಿ, ಬೆಟ್ಟ ಘಟ್ಟಗಳು, ಪುಣ್ಯಾಶ್ರಮಗಳು, ಮಂಟಪ, ಛತ್ರ, ದೇವಸ್ಥಾನ, ರಾಜಸಭೆ, ಬ್ರಾಹ್ಮಣರ ಗೋಷ್ಠಿ, ಇವು ಮೊದಲಾದ ಎಡೆಗಳಲ್ಲಿ ನೆರೆದ ಜನರ ಸಮೂಹದಲ್ಲಿ ದಮಯಂತಿ ಹೇಳಿದ ವಾಕ್ಯಗಳನ್ನು ಹೇಳುತ್ತಾ, ಆ ಮಾತಿಗೆ ಪ್ರತ್ಯುತ್ತರವನ್ನು ಪಡೆಯದೆ, ತಿರಿಗಿ ವಿದ

ರ್ಭ ಪಟ್ಟಣಕ್ಕೆ ಬಂದು, ದಮಯಂತಿಗೆ ತಿಳಿಸಿ, ತಮ್ಮ ತಮ್ಮ ಮನೆಗೆ ಹೋದರು.

ಮತ್ತೆ ಕೆಲವು ದಿವಸದ ಮೇಲೆ ಪರ್ಣಾದನೆಂಬ ಒಬ್ಬ ಬ್ರಾಹ್ಮಣನು ದಮಯಂತಿಯ ಹತ್ರಕ್ಕೆ ಬಂದು—ಎಲೇ, ತಾಯೇ, ನಾನು ಎಲ್ಲಾ ದೇಶಗಳನ್ನು ರಾತ್ರಿ ಹಗಲು ತಿರುಗಿ, ನಳನನ್ನು ಹುಡುಕುತ್ತಾ, ಅಯೋಧ್ಯಾ ಪಟ್ಟಣಕ್ಕೆ ಹೋಗಿ, ಅಲ್ಲಿಗೆ ಅರಸಾದ ಋತುಪರ್ಣನ ಓಲಗದ ಚಾವಡಿಗೆ ಹೋಗಿ, ನೀನು ಮೊದಲು ನಮಗೆ ಹೇಳಿದ ವಾಕ್ಯಗಳಷ್ಟನ್ನು ನುಡಿಯಲು; ಎಲ್ಲರು ಕೇಳಿ, ಬದಲುತ್ತರವನ್ನು ಕೊಡದೆ, ಸುಮ್ಮನೆ ಇದ್ದರು. ಆ ಚಾವಡಿಯಲ್ಲಿ ಇದ್ದ ಋತುಪರ್ಣರಾಯನ ಸಾರಥಿಯಾಗಿ, ಅಡಿಗೇ ಮಾಡುವದರಲ್ಲಿಯೂ ಕುದುರೆಗಳನ್ನು ಚುರುಕಾಗಿ ನಡಿಸುವದರಲ್ಲಿಯೂ ಬಹಳ ಘಟ್ಟಿಗನಾದ ಬಾಹುಕನೆಂಬ ಹೆಸರುಳ್ಳ ಒಬ್ಬ ಪುರುಷನು ಹೊರಗೆ ಎದ್ದು, ಬಂದು, ನನ್ನನ್ನು ಏಕಾಂತದಲ್ಲಿ ಕರೆದು, ಹೆಚ್ಚಿದ ಅಳಲಿನಿಂದ ನಿಟ್ಟುಸುರುಗಳನ್ನು ಬಿಡುತ್ತಾ, ಕಣ್ಣೀರನ್ನು ಸುರಿಸುತ್ತಾ, ಮುಂದೆ ನನ್ನ ಪರಿಣಾಮವನ್ನು ಕೇಳಿ, ಆ ಮೇಲೆ—ಎಲೈ, ಬ್ರಾಹ್ಮಣನೇ, ಲೋಕದಲ್ಲಿ ಕಷ್ಟಕಾಲ ಬಂದಾಗ್ಯೆ ಪಾತಿವ್ರತ್ಯ ಧರ್ಮವುಳ್ಳ ಕುಲ ಸ್ತ್ರೀಯರು ತಮ್ಮನ್ನು ತಾವೇ ಕಾಪಾಡಿ ಕೊಂಡು, ಸ್ವರ್ಗಕ್ಕೆ ಹೋಗುವರು. ಮತ್ತು ಗಂಡನನ್ನು ಅಗಲಿದ ಪತಿವ್ರತೆಯರು ತಮ್ಮ ಒಳ್ಳೇ ನಡತೆ ಎಂಬ ಅಂಗಿಯಿಂದ ರಕ್ಷಿತರಾಗಿ, ಪ್ರಾಣಗಳನ್ನು ತಾಳಿ ಕೊಂಡಿರುವರೇ ಹೊರ್ತು, ಗಂಡರನ್ನು ಹೀಯಾಳಿಸುವದಿಲ್ಲ. ಅವನು ಕಾಲ ಗತಿಯಿಂದ ರಾಜ್ಯ ಕೋಶಗಳೇ ಮೊದಲಾದ ಸಕಲ ಸಂಪತ್ತುಗಳನ್ನು ಕಳ ಕೊಂಡು, ದುಖ್ಖದಿಂದ ಬುದ್ಧಿ ಕೆಟ್ಟು, ಮುಂದೋರದೆ, ಮೂಢನಾಗಿ, ಹುಚ್ಚನಂತೆ ಕಾಡಿನಲ್ಲಿ ಬಿಟ್ಟು ಹೋದನು. ಆದರೂ ಅವನಲ್ಲಿ ಪತಿವ್ರತೆಯಾದ ನೀನು ಕೋಪವನ್ನು ಮಾಡುವದು ಧರ್ಮವಲ್ಲ. ಅವನು ಹೊದ್ದಿದ್ದ ಬಟ್ಟೆಯನ್ನು ಹಕ್ಕಿಯು ಎತ್ತಿ ಕೊಂಡು ಹೋದ್ದರಿಂದ ತನ್ನ ಮಾನವನ್ನು ಕಾಯ್ದು ಕೊಳ್ಳುವದಕ್ಕೆ ಅರ್ಧ ಬಟ್ಟೆಯನ್ನು ಹರಿದು ಕೊಂಡು ಹೋದರೆ, ಆ ತಪ್ಪನ್ನೆಣಿಸಿ, ಹೀಗೆ ಆತನ ಮೇಲೆ ಕೋಪಿಸಬಹುದೇ? ಕುಲ ಸ್ತ್ರೀಯರಿಗೆ ಸಕಲ ಧರ್ಮವು ಗಂಡನೇ ಎಂದು ನೀನು ತಿಳಿದು, ಆತನು ನಿನ್ನ ಕಾಪಾಡಿದರೂ, ಕಾಪಾಡದೆ ಹೋದರೂ, ರಾಜ್ಯ ಹೀನನಾಗಿ, ಸಕಲ ಐಶ್ವರ್ಯಗಳನ್ನು ತೊರೆದು, ಕ್ಲೇಶಗಳನ್ನು ಅನುಭವಿಸುತ್ತಾ, ತಾನು ನಿನ್ನಲ್ಲಿ ಮಾಡಿದ ತಪ್ಪುಗಳನ್ನು ನೆನೆದು, ನೆನೆದು, ತನ್ನೊಳಗೆ ತಾನೇ ಕರಗುವಂಥಾವನ ಮೇಲೆ ತಪ್ಪೆಣಿಸ ಬಹುದೇ? ಎಂದು ನುಡಿದನು. ಇದಷ್ಟನ್ನು

ನಿನಗೆ ತಿಳಿಸಿ ಇದ್ದೇನೆ. ಇನ್ನು ನೀನು ಅರಸಿಗೆ ಅರಿಕೆ ಮಾಡಿ, ನಿನ್ನ ಮನಸ್ಸಿಗೆ ತೋರಿದ ರೀತಿಗೆ ನಡಿ, ಅಂದನು. ಆಗ ದಮಯಂತಿಯು–ತನ್ನ ತಾಯಿಯ ಸಮೀಪಕ್ಕೆ ಹೋಗಿ, ಆ ಸುದ್ದಿಯನ್ನೆಲ್ಲಾ ಹೇಳಿ, ಪರ್ಣಾದನೆಂಬ ವಿಪ್ರನಿಗೆ ವಿವಿಧ ವಿತ್ತಾದಿಗಳನ್ನು ಕೊಡಿಸಿ,–ನಳನು ಇಲ್ಲಿಗೆ ಬರುವಾಗ, ನಿನಗೆ ಬೇಕಾದ ಬಹುಮಾನಗಳನ್ನು ಮಾಡಿಸುತ್ತೇನೆ. ಗಂಡನಗಲಿದ ನನಗೆ ಗಂಡನೊಡನೆ ಕೂಡುವ ಉಪಕಾರವನ್ನು ಮಾಡಿದೆ. ಇಂಥಾ ಉಪಕಾರವನ್ನು ಮಾಡುವವರು ಯಾರು? ಎಂದು, ಶೀ ನುಡಿಗಳನ್ನು ನುಡಿದು, ಕಳುಹಿಸಲು; ಆತನು–ನಿನಗೆ ಶುಭವಾಗಲಿ! ಎಂದು ಆಶೀರ್ವಾದವನ್ನು ಮಾಡಿ, ಕೃತ ಕೃತ್ಯನಾಗಿ ತನ್ನ ಮನೆಗೆ ಹೋದನು.

ತರುವಾಯ ದಮಯಂತಿಯು ತನ್ನ ತಾಯಿಯನ್ನು ಕುರಿತು–ಎಲೇ, ತಾಯೇ, ಈಗ ನಾನು ಒಂದು ಆಲೋಚನೆಯನ್ನು ಹೇಳುತ್ತೇನೆ. ನಾನು ಚನ್ನಾಗಿ ಬದುಕ ಬೇಕೆಂಬ ಆಶೆಯು ನಿನಗೆ ಇದ್ದರೆ, ಈ ಮಾತನ್ನು ನನ್ನ ತಂದೆಗೆ ಹೇಳದೆ, ನಿನ್ನ ಮನಸ್ಸಿನಲ್ಲಿಯೇ ಇರಿಸಿ ಕೊಂಡಿರು. ಮೊದಲು ನನ್ನನ್ನು ನಿಮ್ಮೊಡನೆ ಕೂಡಿಸಿದ ವಸುದೇವನೆಂಬ ಬ್ರಾಹ್ಮಣನನ್ನು ಅಯೋಧ್ಯಾ ಪಟ್ಟಣದಲ್ಲಿ ರುತುಪರ್ಣ ರಾಯನ ಸನ್ನಿಧಾನದಲ್ಲಿ ಇರುವ ನನ್ನ ಗಂಡನನ್ನು ಕರ ತರಿಸುವದಕ್ಕೆ ಕಳುಹಿಸ ಬೇಕು ಎಂದು, ಆತನನ್ನು ಕರ ತರಿಸಿ, ತನ್ನ ತಾಯಿ ಕೇಳುತ್ತಿರಲು; ಆತನನ್ನು ಕುರಿತು–ಎಲೈ, ಬ್ರಾಹ್ಮಣೋತ್ತಮನೇ, ನೀನು ಅಯೋಧ್ಯಾ ಪತಿಯಾದ ರುತುಪರ್ಣ ರಾಯನ ಸನ್ನಿಧಾನಕ್ಕೆ ಹೋಗಿ,–ನಳನು ಜೂಜಿನಲ್ಲಿ ಪರಾಜಿತನಾಗಿ, ಎಲ್ಲಿ ಹುಡುಕಿದರೂ ಕಾಣಿಸದೆ ಇರುವದರಿಂದ, ಆ ದಮಯಂತಿಗೆ ತಿರಗಿ ಸ್ವಯಂವರವನ್ನು ಮಾಡುತ್ತಲಿದ್ದಾರೆ. ಸಮಸ್ತವಾದ ಅರಸುಗಳು ಕುಂಡಿನ ನಗರಕ್ಕೆ ಬಂದರು. ನಾಳೆ ಬೆಳಗ್ಗೆ ಸ್ವಯಂವರದಲ್ಲಿ ಎರಡನೇ ಗಂಡನನ್ನು ವರಿಸುತ್ತಲಿದ್ದಾಳೆ. ಅವಳನ್ನು ಮದುವೆಯಾಗ ಬೇಕೆಂದು ನಿನಗೆ ಬಯಕೆ ಇದ್ದರೆ, ಬೇಗನೆ ಹೋಗ ಬಹುದು ಎಂದು ಹೇಳಿ, ಬಂದು ಬಿಡು ಎಂದು ಕಳುಹಿಸಲು; ಆತನು ಅಯೋಧ್ಯಾ ಪಟ್ಟಣಕ್ಕೆ ಹೋಗಿ, ರುತುಪರ್ಣನೊಡನೆ ದಮಯಂತಿ ಹೇಳಿದ ಹಾಗೆ ತಿಳಿಸಿ, ತಿರಿಗಿ ಕುಂಡಿನ ಪಟ್ಟಣಕ್ಕೆ ಹೊರಟು ಬಂದನು. ರುತುಪರ್ಣ ರಾಯನು ಆ ಮಾತನ್ನು ಕೇಳಿ, ತನ್ನ ಮನಸ್ಸಿನಲ್ಲಿ, ಇದೇನೋ? ಬಹಳ ಆಶ್ಚರ್ಯವಾಗಿದೆ. ಮಹಾ ಪತಿವ್ರತೆಯಾದ ದಮಯಂತಿಯು ನಳನನ್ನು ಬಿಟ್ಟು, ಮತ್ತೊಬ್ಬನನ್ನು ವರಿಸೋಣಾ ಅಂದರೆ ಏನು? ಇದೇನೋ? ನಳನ ಗುರುತು ಹಿಡಿಯುವದಕ್ಕೆ ಮಾಡಿದ ಕಪಟೋಪಾ

ಯವಾಗಿ ತೋರುತ್ತದೆ. ಇದರ ಬುಡವನ್ನು ಅಗತ್ಯವಾಗಿ ತಿಳಿಯ ಬೇಕೆಂ
ದು ನಿಶ್ಚೈಸಿ, ತನ್ನ ಸಾರಥಿಯಾದ ಬಾಹುಕನನ್ನು ಕರಿಸಿ—ಎಲೈ, ಬಾಹುಕ
ನೇ, ದಮಯಂತಿಯ ಸ್ವಯಂವರಕ್ಕೆ ವಿದರ್ಭ ರಾಯನ ಪಟ್ಟಣಕ್ಕೆ ಹೋಗಿ,
ಎರಡನೇ ಸ್ವಯಂವರವನ್ನು ನೋಡ ಬೇಕೆಂದು ಎಣಿಸಿ ಇದ್ಧೇನೆ. ನೀನು
ಕುದುರೆಯ ಮನಸ್ಸನ್ನು ತಿಳಿದವನಾದ್ದರಿಂದ, ನಿನ್ನ ಕುಶಲತ್ವವನ್ನು ತೋರಿಸು
ವದಕ್ಕೆ ಇದೇ ಸಮಯವಾಗಿದೆ. ನಿನಗೆ ಬೇಕಾದ ಕುದುರೆಗಳನ್ನು ರಥಕ್ಕೆ
ಕಟ್ಟಿ, ನನ್ನನ್ನು ಒಂದು ದಿವಸದೊಳಗೆ ಕುಂಡಿನ ಪಟ್ಟಣಕ್ಕೆ ಕರ ಕೊಂಡು
ಹೋಗ ಬೇಕು ಎಂದು ಹೇಳಿದನು.

ನಳನು ಆ ಮಾತನ್ನು ಕೇಳಿ, ಎದೆಯಲ್ಲಿ ಶೂಲ ನೆಟ್ಟಂತೆ ಕೊರಗುತ್ತಾ,—
ಕ್ಷುದ್ರನಾಗಿ, ಪಾಪ ಬುದ್ಧಿಯಾಗಿ, ವಂಚಕನಾಗಿರುವ ನಾನು ತನಗೆ ಬಹಳ
ಅಪಕಾರವನ್ನು ಮಾಡಿದ್ದರಿಂದ, ಹೆಂಗಸರ ಮನಸ್ಸು ಮಿಂಚಿನಂತೆ ಚಂಚಲ
ವಾದ ಕಾರಣ, ನನ್ನಲ್ಲಿ ನಿರಾಶೆಯಿಂದ ಸ್ನೇಹವನ್ನು ಬಿಟ್ಟು, ಇಂಥಾ ಕ್ರೂ
ರ ಕರ್ಮವನ್ನು ಆಚರಿಸಿದಳೋ, ಏನೋ? ಎಂದು, ಮೊದಲು ತನ್ನ ಮನ
ಸ್ಸಿನಲ್ಲಿ ಯೋಚಿಸಿ, ಮತ್ತೆ ತಿರಿಗಿ—ಅಕಟಕಟಾ! ಮಹಾ ಪತಿವ್ರತಾ ಶಿರೋ
ಮಣಿಯಾದ ಆಕೆಯು ಪ್ರಾಣವನ್ನು ತೊರ ಕೊಳ್ಳುವಳೇ ಹೊರತಾಗಿ, ಇಂ
ಥಾ ಕೆಟ್ಟ ಕೆಲಸವನ್ನು ಎಂದಿಗೂ ಯೋಚಿಸಳು. ನಾನು ವಸುದೇವನ ಬಳಿ
ಯಲ್ಲಿ ಹೇಳಿ ಕಳುಹಿಸಿದ ಮಾತಿನಿಂದ ನಾನು ಇಲ್ಲಿ ಇರುವದನ್ನು ತಿಳಿದು,
ನನ್ನನ್ನು ಕರತರಿಸ ಬೇಕೆಂದು, ಹೀಗೆ ಮಾಡಿರುವಳು ಎಂದು ಎಣಿಸಿ, ರು
ತುಪರ್ನ ರಾಯನ ಕಾರ್ಯಕ್ಕಾಗಲಿ, ನನ್ನ ಕಾರ್ಯಕ್ಕಾಗಲಿ, ಹೋಗ ಬೇಕ
ಲ್ಲಾ! ಅಂದು ಕೊಂಡು, ಕೈ ಮುಗಿದು, ರುತುಪರ್ನನನ್ನು ಕುರಿತು—ಎಲೈ,
ಅರಸೇ, ನಿನ್ನನ್ನು ಒಂದೇ ದಿವಸದಲ್ಲಿ ಕುಂಡಿನ ಪಟ್ಟಣಕ್ಕೆ ಕರ ಕೊಂಡು
ಹೋಗಿ, ಬಿಡುವೆನು ಎಂದು ಪ್ರತಿಜ್ಞೆಯನ್ನು ಮಾಡಲು; ಆ ಮಾತ
ನ್ನು ಕೇಳಿ, ರುತುಪರ್ನನು—ಎಲೈ, ಬಾಹುಕನೇ, ನಿನ್ನ ಮಾತಿನಿಂದ ಬಹ
ಳ ಸಂತೋಷವಾಯಿತು. ನಿನಗೆ ಬೇಕಾದ ವಸ್ತುಗಳನ್ನು ಕೊಡುತ್ತೇನೆ;
ಬೇಡೆನಲು; ನಳನು—ನೀನು ಎಣಿಸಿರುವ ಕಾರ್ಯವನ್ನು ನೆರವೇರಿಸಿ, ನಿನ್ನನ್ನು
ಮೆಚ್ಚಿಸಿ, ಆ ಬಳಿಕ ತೆಗೆದು ಕೊಳ್ಳುತ್ತೇನೆ ಎಂದು, ಆತನ ಅಪ್ಪಣೆಯನ್ನು
ತೆಗೆದು ಕೊಂಡು, ಕುದುರೇ ಲಾಯಕ್ಕೆ ಹೋಗಿ, ಕೃಶಾಂಗಗಳಾಗಿ, ದಾರಿ
ಯನ್ನು ನಡಿಯುವದಕ್ಕೆ ತಕ್ಕವುಗಳಾಗಿ, ವೇಗದಿಂದ ವಾಯುವನ್ನು ಜೈಸು
ವಂಥಾವುಗಳಾಗಿ, ತೇಜೋ ಬಲ ಸಮೇತಗಳಾಗಿ, ಉತ್ತಮ ಲಕ್ಷಣಗ

ಳೂ, ಗಂಭೀರ ಧ್ವನಿಯೂ, ವಿಶಾಲವಾದ ಎದೆಯೂ, ಮಂಗಳಕರವಾಗಿರುವ ಹತ್ತು ಸುಳಿಗಳೂ, ಇವುಗಳಿಂದ ಪ್ರಕಾಶಮಾನಗಳಾಗಿರುವ ಸಿಂಧು ದೇಶದಲ್ಲಿ ಹುಟ್ಟಿದಂಥ, ಚನ್ನಾಗಿ ತಿದ್ದಿದ ಕುದುರೆಗಳನ್ನು ತರಲು; ಅವುಗಳನ್ನು ನೋಡಿ, ರುತುಪರ್ಣನು ಸ್ವಲ್ಪವಾಗಿ ಕೋಪಿಸಿ ಕೊಂಡು—ಎಲೈ, ಸಾರಥಿಯೇ, ಹೀಗೆ ಬಡವಾಗಿ, ಅಲ್ಪ ಬಲವುಳ್ಳ ಇಂಥಾ ಕುದುರೆಗಳನ್ನು ಯಾಕೆ ತಂದೆ? ನಾವು ಬಹು ಬೇಗ ಹೋಗ ಬೇಕಲ್ಲವೇ? ಇಂಥಾ ಎಳೆಯಲಾರದ ಕುದುರೆಗಳನ್ನು ನಮ್ಮ ತೇರಿಗೆ ಕಟ್ಟಿದರೆ, ಬಹು ದೂರ ಹ್ಯಾಗೆ ಒಂದೇ ದಿನದಲ್ಲಿ ಹೋದೇವು? ಅಂದನು. ಬಾಹುಕನು ಆತನನ್ನು ಕುರಿತು—ನಿನ್ನಲ್ಲಿ ನಾನು ಮಾಡಿದ ಪ್ರತಿಜ್ಞೆಯನ್ನು ಇವುಗಳು ನೆರವೇರಿಸುವವೆಂದು, ನನ್ನ ಬುದ್ಧಿಗೆ ತಿಳಿದು, ನಾನು ತಂದು ಇದ್ದೇನೆ. ನಿನ್ನ ಮನಸ್ಸಿಗೆ ಇವು ಬೇಡವಾದರೆ, ನಿನಗೆ ಬೇಕಾದ ಕುದುರೆಗಳನ್ನು ತರಿಸಿ, ತೇರಿಗೆ ಕಟ್ಟಿಸು, ಎನಲು; ಆತನು ಒಳ್ಳೇ ಕುಲದಲ್ಲಿ ಹುಟ್ಟಿ, ಅತಿ ವೇಗಶಾಲಿಗಳಾದ ನಾಲ್ಕು ಕುದುರೆಗಳನ್ನು ತೇರಿಗೆ ಕಟ್ಟಿಸಿ, ರಥದ ಮೇಲೆ ಏರಲು; ಅವುಗಳು ಆ ರಥವನ್ನು ಎಳೆಯಲಾರದೆ, ಮುಗ್ಗರಿಸಲು; ಅವುಗಳನ್ನು ಬಿಚ್ಚಿಸಿ, ಹಿಂದಕ್ಕೆ ಲಾಯಕ್ಕೆ ಕಳುಹಿಸಿ, ನಳನು ತಂದಿದ್ದ ಕುದುರೆಗಳನ್ನೇ ತೇರಿಗೆ ಹೂಡಿಸಿದ ಮೇಲೆ, ನಳನು ಕುದುರೆಗಳ ಕಡಿವಾಣಗಳನ್ನು ಬಿಗಿದು, ಹಿಡಿದು, ಕುತ್ತಿಗೆಗಳನ್ನು ತಟ್ಟಿ, ಲಾಲಿಸಿ, ತನ್ನ ಸಾರಥಿಯಾದ ವಾರ್ಷ್ಣೇಯನನ್ನು ಆ ತೇರಿನ ಮೇಲೆ ಕೂರಿಸಿಕೊಂಡು, ನಡಿಸಲು; ತೇಜೋ ಬಲಗಳಿಂದ ಕೂಡಿದ ಆ ಕುದುರೆಗಳು ಆಕಾಶ ಮಾರ್ಗದಲ್ಲಿಯೇ ಅತಿ ಬೇಗನೆ ನಡಿಯಲು; ರುತುಪರ್ಣನು ಆಶ್ಚರ್ಯಭರಿತನಾಗಿ ನೋಡುತ್ತಿದ್ದನು.

ಆಗ ವಾರ್ಷ್ಣೇಯನು ರಥ ವೇಗವನ್ನೂ ಬಾಹುಕನ ಅಶ್ವ ಹೃದಯ ಜ್ಞಾನವನ್ನೂ ಆತನು ಕುದುರೆಗಳ ನಡಿಸುವ ತೆರವನ್ನೂ ನೋಡಿ—ಈ ಬಾಹುಕನು ಇಂದ್ರ ಸಾರಥಿಯಾದ ಮಾತಲಿಯೋ? ಅಲ್ಲದಿದ್ದರೆ, ಮನುಷ್ಯನ ಆಕಾರವನ್ನು ತಾಳಿ ಬಂದಿರುವ ಕುದುರೆಗಳ ತತ್ವ ಜ್ಞಾನವುಳ್ಳ ಶಾಲಿಹೋತ್ರನೋ? ಅಥವಾ ಸಕಲ ಶತ್ರು ಸಂಹಾರಕನಾದ ಈ ವೇಷದಿಂದ ಬಂದಿರುವ ನಳನೋ? ಅಲ್ಲದಿದ್ದರೆ, ನಳನ ಬಳಿಯಲ್ಲಿ ಅಶ್ವ ಹೃದಯ ಜ್ಞಾನ ವಿದ್ಯೆಯನ್ನು ತಿಳಿದವನೋ? ಸುಮಾರು ನೋಡಿದರೆ, ಬಹು ತರ ಪುಣ್ಯ ಶ್ಲೋಕನಾದ ನಳನೇ ಎಂದು ತೋರುತ್ತದೆ. ಇವನಿಗೂ ನಳನಿಗೂ ಒಂದೇ ಪ್ರಾಯವಾಗಿದೆ; ರೂಪದಲ್ಲಿ ಮಾತ್ರ ಬೇರೆಯಾಗಿದೆ. ಆದರೂ ನನ್ನ ಮನಸ್ಸಿಗಂತು ನಳನೇ ಎಂ

ದು ತಿಳಿಯುತ್ತದೆ ಎಂದು ಯೋಚಿಸಿದನು. ಈ ಪ್ರಕಾರದಿಂದ ಹೋಗು ವಂಥಾ ತೇರು ಹೊಳೆಗಳನ್ನೂ ಬೆಟ್ಟ ಗುಡ್ಡಗಳನ್ನೂ ಕಾಡುಗಳನ್ನೂ ಕೊಳ ಗಳನ್ನೂ ದಾಟಿ, ಬಹಳ ಬೇಗವಾಗಿ ಘಾಳಿಯ ಚಂದದಿಂದ ಹೋಗುತ್ತಿರ ಲು; ಆ ಸಮಯದಲ್ಲಿ ರುತುಪರ್ನನು ತನ್ನ ಉತ್ತರೀಯವು ಜಾರಿ, ಭೂಮಿ ಯಲ್ಲಿ ಬಿದ್ದದ್ದನ್ನು ನೋಡಿ—ಎಲೇ, ಸಾರಥಿಯೇ, ನಾನು ಹೊದ್ದ ಶಲ್ಯವು ಜಾರಿ ಬಿತ್ತು. ವಾರ್ಷ್ಣೇಯನು ಹೋಗಿ, ತೆಗೆದು ಕೊಂಡು ಬರುವ ಪರಿ ಯಂತರವು ತೇರನ್ನು ಕ್ಷಣ ಮಾತ್ರ ನಿಲ್ಲಿಸೆನಲು; ನಳನು ಆತನನ್ನು ನೋಡಿ— ಎಲೇ, ರಾಜೇಂದ್ರನೇ, ನೀನು ಹೊದ್ದಿದ್ದ ಶಲ್ಯವು ಬಿದ್ದ ಎಡೆಗೂ ಇಲ್ಲಿಗೂ ಐದು ಹರದಾರೀ ದೂರ ಉಂಟು; ಅದನ್ನು ತೆಗೆದು ಕೊಂಡು ಬರುವದಕ್ಕೆ ಕೂಡದು, ಅಂದನು. ಆಗ ರುತುಪರ್ನನು ಸಂತೋಷ ಪಟ್ಟು, ಬಹಳ ಹಣ್ಣು ಗಳಿಂದ ಕೂಡಿರುವ ಒಂದು ತಾರೇ ಮರವನ್ನು ನೋಡಿ, ನಳನನ್ನು ಕುರಿ ತು—ಎಲೈ, ಬಾಹುಕನೇ, ಎಣಿಸುವದರಲ್ಲಿ ನನಗೆ ಬಹಳ ಸಾಮರ್ಥ್ಯ ಉಂ ಟು. ಲೋಕದಲ್ಲಿ ಅಷ್ಟು ಮಂದಿಯು ಸ್ವಲ್ಪವಾದ ಲೆಖ್ಖವನ್ನು ಅರಿತಿರುವರೇ ಹೊರತಾಗಿ, ಸಂಪೂರ್ಣವಾಗಿ ತಿಳಿದವರಿಲ್ಲ. ಈ ವಿದ್ಯ ನನ್ನಲ್ಲಿ ಉಂಟು. ಅದನ್ನು ನಿನಗೆ ಹೇಳುತ್ತೇನೆ; ಕೇಳು. ಈ ತಾರೇ ಮರದಲ್ಲಿ ಇರುವ ಎಲೆ ಕಾಯಿಗಳ ಲೆಖ್ಖವನ್ನು ಹೇಳುವೆನು. ಈ ಮರದಲ್ಲಿ ಉದುರಿರುವ ಎಲೆ ಕಾ ಯಿಗಳ ಲೆಖ್ಖವನ್ನು ಹೇಳುವೆನು; ಕೇಳು. ಆದರೆ ನೀನು ಅವಷ್ಟನ್ನು ಲೆಖ್ಖಾ ಮಾಡಿ, ಪರೀಕ್ಷಿಸುವದಕ್ಕೆ ಸಾಮರ್ಥ್ಯ ಇಲ್ಲದೆ ಇರುವದರಿಂದ, ಈ ಎರಡು ಕೊಂಬೆಗಳಲ್ಲಿ ಮಾತ್ರ ಎರಡು ಸಾವಿರದ ತೊಂಭತ್ತೈದು ಕಾಯಿಗಳಿವೆ, ಎನಲು; ಆ ನಳನು ರಥದಿಂದ ಇಳಿದು, ಮರವನ್ನು ಏರಿ, ಕೊಂಬೆಗಳೆರಡರ ಫಲಗಳನ್ನು ಲೆಖ್ಖಾ ಮಾಡಿ, ಆಶ್ಚರ್ಯ ಪಟ್ಟು, ರುತುಪರ್ನನನ್ನು ನೋಡಿ— ನೀನು ಎಷ್ಟು ಹಣ್ಣುಗಳವೆ ಎಂದು ಹೇಳಿದೆಯೋ, ಅಷ್ಟು ಹಣ್ಣುಗಳು ಅವೆ. ಯಾವ ವಿದ್ಯೆಯಿಂದ ನಿನಗೆ ಈ ಮಹಾತ್ಮೆಯು ಉಂಟಾಯಿತೋ, ಆ ವಿದ್ಯೆ ಯನ್ನು ನನಗೆ ತಿಳಿಸು. ನನ್ನ ಅಶ್ವ ಹೃದಯ ಜ್ಞಾನ ವಿದ್ಯೆಯನ್ನು ನಿನಗೆ ತಿಳಿ ಸುತ್ತೇನೆ, ಎನಲು; ರುತುಪರ್ನನು—ಹಾಗೆ ಆಗಲಿ ಎಂದು ಸಮ್ಮತಿಸಿ, ಆತನ ನ್ನು ನೋಡಿ—ನಿನಗೆ ಅಕ್ಷಹೃದಯ ವಿದ್ಯೆಯನ್ನು ಈಗ ಹೇಳುತ್ತೇನೆ. ನಿನ್ನ ಅಶ್ವ ಹೃದಯ ವಿದ್ಯೆಯು ನಿನ್ನಲ್ಲಿ ಇರಲಿ. ನನಗೆ ಬೇಕಾದಾಗ ತೆಗೆದು ಕೊ ಳ್ಳುತ್ತೇನೆ ಎಂದು ನುಡಿದು, ನಳನಿಗೆ ಸಾಂಗವಾಗಿ ಅಕ್ಷಹೃದಯ ವಿದ್ಯಾವ ನ್ನು ಉಪದೇಶಿಸಿದನು. ಆ ಬಳಿಕ ಅಕ್ಷವಿದ್ಯಾ ಸಮರ್ಥನಾದ ನಳನ ಶರೀರದ್ದೆ

ಶೆಯಿಂದ ಕಲಿಪುರುಷನು ಕಾರ್ಕೋಟಕನು ಕಚ್ಚಿದ ವಿಷದಿಂದಲೂ ದಮಯಂತಿಯು ಶಾಪದಿಂದಲೂ ಸುಡಲ್ಪಟ್ಟವನಾಗಿ, ಭೂಮಿಯಲ್ಲಿ ಬೀಳಲು; ನಳನು ನೋಡಿ, ಆತನಿಂದ ಬಹು ಕಾಲವು ತೊಂದರೆಯನ್ನು ಹೊಂದಿದವನಾದ್ದರಿಂದ, ಅವನನ್ನು ಶಪಿಸುವದಕ್ಕೆ ಎಣಿಸಿದನು. ಅದಕ್ಕೆ ಅವನು ಬೆದರಿ, ಗಡಗಡನೆ ನಡುಗುತ್ತಾ, ಕೈ ಮುಗಿದು—ಎಲೈ, ಮಹಾತ್ಮನೇ, ನನ್ನನ್ನು ಶಪಿಸಬೇಡ. ನಿನಗೆ ಬಹು ಕೀರ್ತಿ ಉಂಟಾಗುವಂತೆ ಮಾಡುತ್ತೇನೆ. ಮೊದಲು ನಿನ್ನನ್ನು ಅಗಲಿದ ಸಮಯದಲ್ಲಿ ದಮಯಂತಿಯು ಶಪಿಸಿದ್ದರಿಂದಲೂ ಕಾರ್ಕೋಟಕನ ವಿಷದಿಂದಲೂ ಬಹಳ ಪೀಡಿತನಾಗಿ ಇದ್ದೇನೆ. ನಿನ್ನನ್ನು ಶರಣವನ್ನು ಹೊಂದಿದ್ದೇನೆ. ಲೋಕದಲ್ಲಿ ಯಾವ ಜನರಾಗಲಿ ನಿನ್ನ ಹೆಸರನ್ನು ನೆನೆದರೆ, ಅವರಿಗೆ ನನ್ನ ಬಾಧೆಗಳು ಇಲ್ಲದೆ ಹೋಗಲಿ ಎಂದು ಬೇಡಿ ಕೊಳ್ಳಲು; ನಳನು ದಯಶಾಲಿಯಾದ್ದರಿಂದ ಮನ್ನಿಸಿ ಬಿಟ್ಟನು. ಕಲಿ ಪುರುಷನು ಹತ್ತಿರದಲ್ಲಿರುವ ತಾರೇ ಮರವನ್ನು ಹತ್ತಿ, ಮರಸಿ ಕೊಂಡನು. ಆದದರಿಂದಲೇ ತಾರೇ ಮರವು ಅಯೋಗ್ಯವೆನಿಸಿ ಕೊಂಡಿತು.

ಆ ಬಳಿಕ ರಥವನ್ನು ಏರಿ, ಕಲಿಯಿಂದ ಬಿಡಲ್ಪಟ್ಟ ನಳನು ಕುಂಡಿನ ನಗರಕ್ಕೆ ಹೋಗಲು; ತನ್ನ ಗಂಡನಾದ ನಳನು ರುತುಪರ್ನ ರಾಯನೊಡನೆ ಈಗ ಬರುವನು ಎಂದು ನಡುವಣ ತೊಟ್ಟಿಯ ಮಾಡದ ಮೇಲೆ ಹತ್ತಿ, ನಿಂತು, ದಮಯಂತಿಯು ದಾರಿಯನ್ನು ನೋಡುತ್ತಿರುವಲ್ಲಿ, ಬಾಹುಕ ವಾರ್ಷ್ಣೇಯರೊಡನೆ ಕೂಡಿ ಬರುವ ರುತುಪರ್ನನನ್ನು ಕಂಡಳು. ಆಗ ನಳನೂ ವಾರ್ಷ್ಣೇಯನೂ ತೇರನ್ನೂ ಕುದುರೆಗಳ ಕಡಿವಾಣಗಳನ್ನೂ ಹಿಡಿದು, ನಿಲ್ಲಿಸಲು; ರುತುಪರ್ನನು ತೇರಿನಿಂದ ಇಳದು, ಭೀಮ ಭೂಪಾಲನಿಗೆ ಎದುರಾಗಿ ಹೋಗಲು; ಆತನು ಈತನನ್ನು ಯಥೋಚಿತವಾಗಿ ಪೂಜಿಸಿ, ಹೆಂಗಸರು ಬಳಾಲೋಚನೆಯಿಂದ ನಡಿಸಿದ ಕೆಲಸವನ್ನು ಸ್ವಲ್ಪವಾದರೂ ತಿಳಿಯದೆ ಇರುವವನಾದ್ದರಿಂದ, ಒಮ್ಮಿಂದೊಮ್ಮೆ ಬಂದ ರುತುಪರ್ನನನ್ನು ನೋಡಿ, ಕುಶಲ ಪ್ರಶ್ನೆಯನ್ನು ಮಾಡಿ—ನೀನು ಬಂದ ಕೆಲಸವೇನು? ಎಂದು ಕೇಳಿದನು. ಆಗ ರುತುಪರ್ನನು ಜಾಣನಾದ್ದರಿಂದ, ಸ್ವಯಂವರಕ್ಕೆ ಒಬ್ಬ ಅರಸುಗಳೂ ಬಾರದೆ ಇರುವದನ್ನೂ ಸ್ವಯಂವರ ಪ್ರಯತ್ನವು ಕೊಂಚವಾದರೂ ಇಲ್ಲದೆ ಇರುವದನ್ನೂ ಕಂಡು, ಮತ್ತೊಂದು ಮಾತನ್ನು ಹೇಳದೆ—ನಿನ್ನನ್ನು ನೋಡಿ, ನಮಸ್ಕಾರಾ ಮಾಡುವದಕ್ಕೆ ಬಂದೆನು, ಅಂದನು. ಭೀಮ ಭೂಪಾಲನು—ಇಷ್ಟು ಮಾತ್ರಕ್ಕೆ ಇಷ್ಟು ದೂರ ಪ್ರಯಾಣಾ ಮಾಡುವದು ಯುಕ್ತವಾಗಿ ತೋರುವದಿಲ್ಲ. ಇವನು ತ

ನ್ನ ಮನೋಗತವನ್ನು ನಿಜವಾಗಿ ತಿಳಿಸಲಿಲ್ಲ ಎಂದು, ತನ್ನ ಮನದಲ್ಲಿ ತಿಳು ಕೊಂಡು, ಆತನಿಗೆ ಒಂದು ಬಿಡಾರವನ್ನು ಬಿಡಿಸಿ ಕೊಟ್ಟದರಿಂದ, ಅಲ್ಲಿ ವಾರ್ಷ್ಣೇಯನ ಸಹಿತವಾಗಿ ಹೋಗಿ, ಆ ಮನೆಯಲ್ಲಿ ಇಳಿದು ಕೊಂಡನು. ನಳನು ರಥವನ್ನು ರಥಶಾಲೆಗೆ ತೆಕ್ಕೊಂಡು ಹೋಗಿ, ಇರಿಸಿ, ತಾನೂ ಅದರ ಸಮೀಪ ದಲ್ಲಿಯೇ ಇದ್ದು ಕೊಂಡಿದ್ದನು.

ಆಗ ದಮಯಂತಿಯು ತನ್ನ ಬಳಿಯಲ್ಲಿ ಇರುವ ಒಬ್ಬ ದೂತಿಯನ್ನು ಕರೆದು—ಎಲ್ಯೆ, ಕೇಶಿನಿಯೇ, ಋತುಪರ್ಣನ ತೇರಿನ ಬಳಿಯಲ್ಲಿ ಕುಗ್ಗಿದ ತೋಳು ಳ್ಳವನಾಗಿ, ವಿಕೃತಾಕಾರನಾಗಿರುವ ಈತನಾರೋ, ತಿಳಿಯಲಿಲ್ಲ. ಈತನನ್ನು ನೋಡಿದ ಮಾತ್ರದಿಂದಲೇ ನನ್ನ ಮನಸ್ಸಿನಲ್ಲಿ ಸಂತೋಷ ಹುಟ್ಟಿದ್ದರಿಂದ, ಇವನು ನಳನೋ? ಎಂಬ ಸಂಶಯ ಉಂಟಾಗಿದೆ. ನೀನು ಇವನ ಸನ್ನಿಧಾನಕ್ಕೆ ಹೋಗಿ, ಸಕ್ಕರೆಯ ಹಾಗೆ ಶೀಯಾಗಿರುವ ಮಾತುಗಳಿಂದ ಕುಶಲ ಪ್ರಶ್ನೆಯನ್ನು ಮಾಡಿ, ಆತನು ಕೊಡುವ ಬದಲು ಮಾತನ್ನೂ, ಮೊದಲು ಪರ್ಣಾದನು ಹೋಗಿ ನುಡಿದ ವಾಕ್ಯಗಳಿಗೆ ಆತನು ಪ್ರತ್ಯುತ್ತರ ಕೊಟ್ಟದ್ದನ್ನೂ ವಿವರವಾಗಿ ತಿಳು ಕೊಂಡು ಬಾ ಎಂದು ಕಳುಹಿಸಿ, ತಾನು ಮಾಡವನ್ನೇರಿ, ನೋಡುತ್ತಿದ್ದಳು. ಅವಳು ಬಾಹುಕನ ಹತ್ರಕ್ಕೆ ಬಂದು, ಆತನನ್ನು ಕುರಿತು—ಎಲ್ಯೆ, ಮಹಾತ್ಮನೇ, ಕ್ಷೇಮದಲ್ಲಿ ಇದ್ದೀಯಾ? ಅಯೋಧ್ಯಾ ಪಟ್ಟಣದ್ದೆಶೆಯಿಂದ ಹೊರಟು ಎಷ್ಟು ದಿವಸಗಳಾಯಿತು? ಇಲ್ಲಿಗೆ ಯಾವ ಪ್ರಯೋಜನಕ್ಕೋಸ್ಕರ ಬಂದಿ? ಇದನ್ನು ತಿಳು ಕೊಂಡು ಬಾ ಎಂದು, ನಮ್ಮ ಅರಸಿನ ಮಗಳು ಕಳುಹಿಸಿದ್ದಾಳೆ. ನಿನ್ನ ಸ್ವರೂಪವನ್ನು ನಿಜವಾಗಿ ವಿವರಿಸು, ಎನ್ನಲು; ಬಾಹುಕನು—ದಮಯಂತಿಯು ಎರಡನೇ ಸ್ವಯಂವರವನ್ನು ನಾಳೇ ಬೆಳಗ್ಗೆ ಮಾಡುತ್ತಾಳೆಂದು, ಜನರು ಹೇಳಿದ ಸುದ್ದಿಯನ್ನು ಋತುಪರ್ಣನು ಕೇಳಿ, ವಾಯು ವೇಗಗಳಿಂದ ಕೂಡಿರುವ ಕುದುರೆಗಳನ್ನು ಕಟ್ಟಿದ ತೇರನ್ನು ಏರಿ, ಈ ದಿವಸ ಬೆಳಗ್ಗೆ ಹೊರಟು, ಈ ಸಾಯಂಕಾಲಕ್ಕೆ ಬಂದನು. ನಾನು ಆತನ ಸಾರಥಿಯು, ಅಂದನು. ಆಕೆಯು ಆ ಬಾಹುಕನನ್ನು ಕುರಿತು—ನಿನ್ನ ಸಂಗಡ ಇನ್ನೊಬ್ಬ ಬಂದನಲ್ಲ; ಅವನು ಯಾರು? ನೀನು ಯಾವ ಬಗೆಯವನು? ನಿನಗೆ ಸಾರಥ್ಯವು ಹ್ಯಾಗೆ ಬಂತು? ಎನಲು;—ಆತನು ಪುಣ್ಯ ಶ್ಲೋಕನಾದ ನಳನ ಸಾರಥಿಯು; ಆತನ ಹೆಸರು ವಾರ್ಷ್ಣೇಯನು. ನಳನು ರಾಜ್ಯವನ್ನು ಬಿಟ್ಟು, ಹೋದ ಬಳಿಕ, ಋತುಪರ್ಣರಾಯನನ್ನು ಶೇರಿ ಕೊಂಡನು. ನಾನು ಅಡಿಗೆ ಮಾಡುವದರಲ್ಲಿಯೂ ಸಾರಥ್ಯ ಮಾಡುವದರಲ್ಲಿಯೂ ಘಟ್ಟಿಗನಾದ್ದರಿಂದ, ಈ ಋತುಪರ್ಣನಿಗೆ ಸಾರಥ್ಯ

ವನ್ನೂ ಅಡಿಗೆಯನ್ನೂ ಮಾಡಿ ಕೊಂಡಿದ್ಧೇನೆ, ಅಂದನು. ಆ ಕೇಶಿನಿಯು—ನಳನ ಸಾರಥಿಯಾದ ವಾರ್ಷ್ಣೇಯನು, ಆತನು ಇಂಥಾ ಬಳಿಯಲ್ಲಿ ಇಧ್ಧಾನೆಂದು ನಿನಗೇನಾದರೂ ಒಂದು ದಿವಸ ತಿಳಿಸಿದ್ಧಾನೋ? ಎಂದು ಕೇಳಲು;—ನೈಷಿಧನು ನಳನ ಮಗನನ್ನೂ ಮಗಳನ್ನೂ ಈ ವಿದರ್ಭ ಪಟ್ಟಣದಲ್ಲಿ ಇರಿಸಿ, ತನ್ನ ಇಚ್ಛೆ ಬಂದ ಹಾಗೆ ಈ ರುತುಪರ್ನನನ್ನು ಶೇರಿ ಕೊಂಡದ್ದರಿಂದ ಆ ವಾರ್ಷ್ಣೇಯನಿಗೆ ನಳನ ಸುದ್ದಿ ತಿಳಿಯದು; ಹೇಳುವದೇನು? ಮೊದಲಿದ್ದ ರೂಪನ್ನು ಬಿಟ್ಟು, ಬೇರೆ ರೂಪಿನಿಂದ ಗುಟ್ಟಾಗಿ ತಿರುಗುವಂಥ ಆ ನಳನನ್ನು ಯಾರಾದರೂ ಅರಿಯುವದಕ್ಕೆ ಸಮರ್ಥರೇ? ಆತನ ಆತ್ಮನೂ ಆತಗೆ ಹೊರಗಣ ಪ್ರಾಣವಾಗಿರುವ ದಮಯಂತಿಯೂ, ಇವರಿಬ್ಬರೇ ಹೊರತಾಗಿ, ಮತ್ತೊಬ್ಬರೂ ಅರಿಯರು. ಆತನ ಗುರುತುಗಳನ್ನು ಅರಿಯುವದಕ್ಕೆ ಯಾರಿಗೂ ಶಕ್ಯವಲ್ಲ, ಅಂದನು. ಕೇಶಿನಿಯು—ಮೊದಲು ಅಯೋಧ್ಯಾ ಪಟ್ಟಣಕ್ಕೆ ಪರ್ನಾದನು ಬಂದು ಹೇಳಿದ ಮಾತಿಗೆ ನೀನು ಬದಲು ಮಾತು ಆಡಿದೆ ಅಷ್ಟೆ! ಅದನ್ನು ತಿರಿಗಿ ಹೇಳಬೇಕೆಂದು, ದಮಯಂತಿ ಬಯಸುತ್ತಾಳೆ. ಅದನ್ನು ಮತ್ತೊಮ್ಮೆ ಹೇಳು, ಎನಲು; ನಳನು ಮೊದಲು ಹೇಳಿದ ಹಾಗೆಯೇ ಹೇಳಿ, ಕಣ್ಣೀರನ್ನೂ ಸುರಿಸಿದನು.

ಅವಷ್ಟನ್ನು ಕೇಶಿನಿ ತಿರಿಗಿ ಹೋಗಿ, ದಮಯಂತಿಗೆ ಹೇಳಲು; ದಮಯಂತಿಯು—ತಿರಿಗಿ ಆತನ ಬಳಿಗೆ ಹೋಗಿ, ಸುಮ್ಮನಿದ್ದು ಕೊಂಡು, ಆತನು ಮಾಡುವ ಕೆಲಸಗಳನ್ನು ನೋಡುತ್ತಾ, ಆತನು ಎಷ್ಟು ಬೇಡಿದರೂ ಬೆಂಕಿಯನ್ನೂ ನೀರನ್ನೂ ತಂದು ಕೊಡ ಬೇಡ. ಅದನ್ನೆಲ್ಲಾ ತಿಳಿದು ಕೊಂಡು ಬಂದು, ಹೇಳು, ಎನಲು; ಅವಳು ತಿರಿಗಿ ಅವನ ಬಳಿಗೆ ಹೋಗಿ, ಅವನು ಮಾಡುವದನ್ನೆಲ್ಲಾ ತಿಳಿದು ಕೊಂಡು—ಎಲೈ, ಅರಸಿನ ಮಗಳೇ, ಇಂಥಾ ಚರಿತ್ರೆಯುಳ್ಳ ಮನುಷ್ಯನನ್ನು ಎಲ್ಲಿಯೂ ಕೇಳಿ ಇಲ್ಲ. ಆತನು ಕಿಟಕಿಯ ಕನ್ನಗಳನ್ನು ಹೊಕ್ಕು, ತಡೆ ಇಲ್ಲದೆ ಆಚೆಗೆ ಹೋಗುತ್ತಾನೆ. ಅಡಿಗೆ ಮಾಡುವದಕ್ಕೆ ನಮ್ಮ ಅರಸು ರುತುಪರ್ನನಿಗೆ ಮಾಂಸವನ್ನು ಕಳುಹಿಸಲು; ಅದನ್ನು ತೊಳೆಯುವದಕ್ಕೆ ಬರೀ ಚಾರಿಗೆಯನ್ನು ತಂದು ಕೊಟ್ಟರೆ, ಅದು ನೀರಿನಿಂದ ತುಂಬಿ ಇರುತ್ತದೆ. ಆ ನೀರುಗಳಿಂದ ಮಾಂಸವನ್ನು ತೊಳೆದು, ಅಡುವದಕ್ಕೆ ಕಟ್ಟಿಗೆಯನ್ನು ಕೈಯಿಂದ ಹಿಡಿದ ಮಾತ್ರದಿಂದಲೇ ಬೆಂಕಿಯು ಭಗ್ಗೆಂದು ಉರಿಯುತ್ತದೆ. ಆತನು ಬೆಂಕಿಯನ್ನು ಕೈಯಲ್ಲಿ ಹಿಡಿದರೂ ಸುಡುವದಿಲ್ಲ. ಆತನು ಎಷ್ಟು ನೀರು ಬೇಕೆಂದರೂ ಅಷ್ಟು ಬರುತ್ತದೆ. ಇದಲ್ಲದೆ ಇನ್ನೊಂದು ಆಶ್ಚರ್ಯ

ವನ್ನು ನೋಡಿದೆನು. ಆತನು ಬಾಡಿದ ಹೂವುಗಳನ್ನು ಕೈಯಿಂದ ಹಿಡಿದರೆ, ಅವಷ್ಟು ಬಾಡದೆ, ಪರಿಮಳದಿಂದ ಘುಮುಘುಮಿಸುತ್ತವೆ, ಅಂದಳು.

ದಮಯಂತಿಯು—ಎಷ್ಟು ವಿಧದಲ್ಲಿ ಪರೀಕ್ಷಿಸಿ ನೋಡಿದರೂ, ಈತನೇ ಹೌದೆಂದು ನಿಶ್ಚಯವಾಗುತ್ತೆ. ಇಂಥಾ ಕೀಳು ರೂಪು ಉಂಟಾಗುವದಕ್ಕೆ ಏನು ನಿಮಿತ್ತವೋ? ಎಂದು ಸಂಶಯ ಪಡುತ್ತಾ, ತಿರಿಗಿ ಕೇಶಿನಿಯನ್ನು ಕರೆದು,—ನೀನು ಬಾಹುಕ ಬೇಸಿದ ಬಾಡನ್ನು ಬೇಗ ಆತನು ತಿಳಿಯದ ಹಾಗೆ ತೆಗೆದು ಕೊಂಡು ಬಾ ಎಂದು ಕಳುಹಿಸಲು; ಅವಳು ಹೋಗಿ, ಅತ್ಯುಷ್ಣವಾದ ಮಾಂಸವನ್ನು ತೆಗೆದು ಕೊಂಡು ಬಂದು, ದಮಯಂತಿಗೆ ಕೊಡಲು; ಆಕೆಯು ಆ ಬಾಡನ್ನು ತಿಂದು, ಮೊದಲು ನಳನು ಬೇಸಿದ ಬಾಡನ್ನು ತಿಂದು, ರುಚಿಯನ್ನು ತಿಳಿದಿದ್ದವಳಾದ್ದರಿಂದ, ಈ ಬಾಹುಕನೇ ನಳನೆಂದು ನಿಶ್ಚೈಸಿ, ತನ್ನ ಮಗನನ್ನೂ ಮಗಳನ್ನೂ ಕೇಶಿನಿಯ ಸಂಗಡ ಕೂಡಿಸಿ, ಬಾಹುಕನ ಬಳಿಗೆ ಕಳುಹಿಸಲು; ಆತನು, ತನ್ನ ಕೂಸುಗಳೆಂದು ತಿಳಿದು, ಬೇಗ ಬಂದು, ತಬ್ಬಿ ಕೊಂಡು, ಮುತ್ತು ಕೊಟ್ಟು, ಮುದ್ದಾಡಿ, ತನ್ನ ತೊಡೆಯ ಮೇಲೆ ಕೂರಿಸಿ ಕೊಂಡು, ದೇವಕುಮಾರಕರೋಪಾದಿಯಲ್ಲಿ ಇರುವ ತನ್ನ ಮಕ್ಕಳನ್ನು ಧೀರೋದಾತ್ತನಾಯಕನಾದರೂ ದುಃಖವನ್ನು ಸಹಿಸಲಾರದೆ, ನಾಚಿಕೆಯನ್ನು ತೊರೆದು, ಹೆಚ್ಚಾಗಿ ಪ್ರಳಾಪಿಸಿ, ಆ ಮಕ್ಕಳನ್ನು ಕೇಶಿನಿಯ ವಶಕ್ಕೆ ಕೊಟ್ಟು, ಅವಳನ್ನು ನೋಡಿ—ನನಗೂ ಇಂಥ ಇಬ್ಬರು ಮಕ್ಕಳುಂಟು. ಈ ಮಕ್ಕಳನ್ನು ನೋಡಲು, ಅವರನ್ನು ನೆನಸಿ ಕೊಂಡು, ದುಃಖದಿಂದ ಕ್ಲೇಶ ಪಟ್ಟೆ. ದೇಶಾಂತರದಿಂದ ಬಂದ ನನ್ನ ಬಳಿಗೆ ಬಾರಿ ಬಾರಿಗೂ ನೀನು ಹೀಗೆ ಬರುತ್ತಾ ಇದ್ದರೆ, ನೋಡಿದವರಿಗೆ ಸಂದೇಹ ಉಂಟಾಗುವದು. ಇನ್ನು ನೀನು ಇಲ್ಲಿ ಇರದೆ, ಬೇಗ ಮನೆಗೆ ಹೋಗು, ಎನಲು; ಅವಳು ಆ ಮಾತನ್ನೆಲ್ಲಾ ಹೋಗಿ, ದಮಯಂತಿಗೆ ತಿಳಿಸಿದಳು. ಆಕೆಯು ಅವಳನ್ನು ನೋಡಿ—ನೀನು ನನ್ನ ತಾಯಿಯ ಬಳಿಗೆ ಹೋಗಿ,—ಈ ಬಾಹುಕನನ್ನು ಬಹು ಪ್ರಕಾರವಾಗಿ ಪರೀಕ್ಷಿಸಿದೆನು. ರೂಪದಲ್ಲಿ ವಿಕಾರವಾಗಿ ತೋರುವದು ಒಂದೇ ಹೊರತಾಗಿ, ಮಿಕ್ಕ ಎಲ್ಲಾ ನಡತೆಯಲ್ಲಿಯೂ ಈತನೇ ನಳನೆಂದು, ನಿಶ್ಚಯವಾಗಿ ತಿಳಿಯ ಬಂತು. ನಾನು ಆತನ ಕೂಡೆ ಮಾತನಾಡಿದರೆ, ಎಲ್ಲಾ ತಿಳಿಯುತ್ತದೆ. ನೀನು ಅರಸಿಗೆ ಅರಿಕೆ ಮಾಡಿಯಾದರೂ, ಮಾಡದೆಯಾದರೂ, ಆತನನ್ನು ಇಲ್ಲಿಗೆ ಕರ ತರಿಸಿದರೆ, ನಾನು ಮಾತನಾಡೇನು. ಅಲ್ಲದಿದ್ದರೆ, ಆತನ ಬಳಿಗೆ ನನ್ನನ್ನು ಕಳುಹಿಸಿದರೆ, ಹೋಗಿ ಬಂದೇನು ಎಂದು, ನಾನು ಹೇಳಿದ್ದಾಗಿ ಅರಿಕೆ ಮಾಡಿ ಬಾ, ಎಂದು ಕಳುಹಿ

ಸಲು; ಅವಳು ಹಾಗೆ ಹೋಗಿ, ರಾಣಿಗೆ ಅರಿಕೆ ಮಾಡಲು; ಆ ದೇವಿಯು ಭೀಮ ಭೂಪಾಲನಿಗೆ ಬಿನ್ನವಿಸಿದ್ದಕ್ಕೆ ಆತನು—ದಮಯಂತಿಗೆ ಹ್ಯಾಗೆ ಉಚಿತವಾಗಿ ತೋರುತ್ತದೋ, ಹಾಗೆ ಮಾಡಲಿ ಎಂದು, ತನ್ನ ಹೆಂಡತಿಗೆ ಹೇಳಿ ಕಳುಹಿಸಲು; ಆಗ ತಾಯಿ ತಂದೆಗಳ ಅಪ್ಪಣೆಯಿಂದ ದಮಯಂತಿಯು ದೂತಿಯನ್ನು ನೋಡಿ—ಎಲೇ, ಕೇಶಿನೀ, ನೀನು, ಬಾರಿ ಬಾರಿಗೂ ತಿರುಗುತ್ತಲಿದ್ದೇನೆ ಎಂದು ಬೇಸರದೆ, ನನ್ನ ತಾಯಿಯೋಪಾದಿಯಲ್ಲಿ ಪ್ರಿಯವನ್ನು ಮಾಡು. ನೀನು ಪುನಹ ಬಾಹುಕನ ಸಮೀಪಕ್ಕೆ ಹೋಗಿ,—ನಿನ್ನನ್ನು ಭೀಮ ನರೇಂದ್ರನು ಕರ ಕೊಂಡು ಬರ ಹೇಳಿದನು ಎಂದು ಹೇಳಿ, ಆತನನ್ನು ಅಂತಃಪುರಕ್ಕೆ ಕರ ಕೊಂಡು ಬಾ ಎಂದು ಕಳುಹಿಸಿದಳು.

ಅವಳು ಹೋಗಿ, ಹಾಗೆ ಕರೆಯಲು; ನಳನು ಮುಹೂರ್ತ ಮಾತ್ರವು ತನ್ನ ಮನಸ್ಸಿನಲ್ಲಿ ವಿಚಾರಿಸಿ, ಇದನ್ನು ನೋಡ ಬೇಕು ಎಂದು ಎಣಿಸಿ, ಆ ದೂತಿಯ ಸಂಗಡಲೇ ದಮಯಂತಿಯ ಮನೆಗೆ ಬರಲು; ಆಗ ವಿಕೃತಾಕಾರನಾಗಿರುವ ನಳನನ್ನು ನೋಡಿ, ಕಾವೀ ಬಟ್ಟೆಯನ್ನೂ ಜಡೆಗಳನ್ನೂ ಧರಿಸಿ, ಮಲಿನ ಗಾತ್ರಳಾಗಿರುವ ದಮಯಂತಿಯು—ಎಲೈ, ಬಾಹುಕನೇ, ಲೋಕದಲ್ಲಿ ಧರ್ಮಜ್ಞನಾದ ಪುರುಷನು ಮಹಾರಣ್ಯದ ಮಧ್ಯದಲ್ಲಿ ಒಂದಾಗಿ ನಿದ್ದೆ ಹೋಗುತ್ತಲಿರುವ ತನ್ನ ಪ್ರಿಯ ಭಾರ್ಯೆಯನ್ನು ಬಿಟ್ಟು ಹೋದದ್ದನ್ನು ನೀನು ಕಂಡು, ಕೇಳಿ ಉಂಟೇ? ನಿರಪರಾಧಿಯಾಗಿ, ಪ್ರಿಯಾಂಗನೆಯಾಗಿ, ಹಸಿವು ಬಾಯಾರಿಕೆಗಳಿಂದ ಕಂಗೆಟ್ಟು ಇರುವ ಧರ್ಮ ಪತ್ನಿಯನ್ನು ಅರಣ್ಯದಲ್ಲಿ ಬಿಟ್ಟು, ಹೋಗುವದು ಪುಣ್ಯ ಶ್ಲೋಕನಾದ ನಳ ಮಹಾರಾಯನಿಗೆ ಹೊರತಾಗಿ, ಮತ್ತೊಬ್ಬನಿಗೆ ಸಲ್ಲುವದೇ? ಮೊದಲು ತನ್ನ ಸ್ವಯಂವರಕ್ಕೆ ಇಂದ್ರಾದಿ ದಿಕ್ಪಾಲಕರು ಬಂದಲ್ಲಿ, ಅವರಷ್ಟು ಮಂದಿಯನ್ನು ಬಿಟ್ಟು, ಮೊದಲೇ ಹಂಸಗಳದೆಶೆಯಿಂದ ತನ್ನ ಗುಣಗಳ ಹೆಚ್ಚಿಗೆಯನ್ನು ಕೇಳಿದ್ದರಿಂದ, ಅಗ್ನಿ ಸಾಕ್ಷಿಯಾಗಿ ವರಿಸಿರುವದನ್ನು ಎಣಿಸದೆ, ಮಕ್ಕಳುಳ್ಳವಳಾಗಿಯೂ, ಪ್ರಿಯ ಹೆಂಡತಿಯಾಗಿಯೂ ಇರುವವಳನ್ನು, ಕಾಡಿಗೆ ತನ್ನ ಸಂಗಡಲೇ ಬಂದಳಲ್ಲ! ಎಂದು ಕೊಂಚವಾದರೂ ಕರುಣ ವಿಡದೆ, ಕಷ್ಟಕ್ಕೆ ಗುರಿಯಾಗಿ ಮಲಗಿದ್ದವಳನ್ನು ಮೋಸದಿಂದ ಮರಿಸಿ ಬಿಟ್ಟು ಹೋಗುವದು ತನ್ನಂಥಾವನಿಗೆ ತಕ್ಕದ್ದೇ? ಎಂದು, ಮರ್ಮೋದ್ಘಾಟನವಾಗಿ ಮಾತಾಡುವ ಮಡದಿಯ ಮಾತುಗಳನ್ನು ಕೇಳಿ, ಕಣ್ಣೀರುಗಳು ಸಂತತ ಧಾರೆಯಾಗಿ ಸುರಿಯಲು; ಸುಂದರಿಯಾದ ಆಕೆಯನ್ನು ಕುರಿತು—ಎಲೇ, ಕಲ್ಯಾಣಿಯೇ, ಮೊದಲು ಕಾಡಿನಲ್ಲಿ ಕಲಿಪುರುಷನಿಂದ ಕೂಡಿ,

ನಿನ್ನೊಬ್ಬಳನ್ನೇ ಬಿಟ್ಟು ಹೋದ ಪಾಪಿಷ್ಠನಾದ ನಳನು ನಾನೇ ಎಂದು ತಿಳು ಕೋ. ಸಕಲ ರಾಜ್ಯವನ್ನು ಕಳೆದು ಕೊಂಡು, ನಿನ್ನನ್ನು ಕಾಡಿನಲ್ಲಿ ಬಿಟ್ಟು ಹೋಗುವದು ಕಲಿಪುರುಷನ ಪ್ರೇರಣೆಯಿಂದ ಬಂತು ಎಂದು, ತಿಳುಕೋ. ನಾನು ವಸ್ತ್ರ ಹೀನನಾಗಿ ಒಬ್ಬನೇ ಕಾಡಿಗೆ ಹೋದೆನೆಂದು, ಕುಲವಂತೆಯಾದ ನೀನು ಕೋಪಿಸಿ ಕೊಂಡು, ಕಲಿ ಪುರುಷನನ್ನು ಶಪಿಸಿದವಳಾದ್ದರಿಂದ, ಆತ ನು ನಿನ್ನ ಶಾಪಾಗ್ನಿಯಿಂದ ಸುಡಲ್ಪಟ್ಟವನಾಗಿಯೂ, ನನ್ನ ತಪೋತಾಪದಿಂದ ತಪ್ತನಾಗಿಯೂ, ಆಪತ್ತುಗಳು ಬಿಟ್ಟು ಹೋಗುವ ಕಾಲವಾದ್ದರಿಂದ ನನ್ನೊಡ ಲಲ್ಲಿ ಇರದೆ ಹೋದನು. ನಾನು ನಿನ್ನ ನಿಮಿತ್ತದಿಂದಲೇ ಇಲ್ಲಿಗೆ ಬಂದೆನೇ ಹೊರತಾಗಿ, ನನಗೆ ಮತ್ತೊಂದು ಕಾರ್ಯವೇನದೆ? ಲೋಕದಲ್ಲಿ ತನ್ನಲ್ಲಿ ಎ ಷ್ಟೋ ಅನುರಕ್ತನಾಗಿ, ಕಣ್ಣಿನ ಸಂಜ್ಞೆಗೆ ಒಳಗಾಗಿರುವ ಪ್ರಿಯ ಪತಿಯನ್ನು ನಿನ್ನಷ್ಟಂದ ಪರ ಪುರುಷನನ್ನು ಪರಿಗ್ರಹಿಸುವ ಪತ್ನಿ ಉಂಟೇ?—ಪುನಹ ಸ್ವ ಯಂವರದಲ್ಲಿ ಚೆಲುವುಳ್ಳ ಎರಡನೇ ಗಂಡನನ್ನು ದಮಯಂತಿಯು ತನ್ನಿಚ್ಛೇ ಯಿಂದ ವರಿಸುತ್ತಾಳೆ; ಎಲ್ಲಾ ಅರಸುಗಳು ಬನ್ನಿ ಎಂದು, ನಿಮ್ಮ ಅಪ್ಪ ಕಳು ಹಿಸಿದ ಬೇಹಿನವರು ಎಲ್ಲಾ ದೇಶದಲ್ಲಿಯೂ ತಿರುಗುತ್ತಲಿದ್ದಾರೆ. ಇದಷ್ಟನ್ನು ಕೇಳಿ, ಬೇಗ ರುತುಪರ್ಣ ರಾಯನು ಬಂದನು ಎಂದು, ಹೇಳಲು;

ದಮಯಂತಿಯು ನಳನ ಕರ್ಣಕಠೋರವಾದ ಕ್ರೂರೋಕ್ತಿಗಳನ್ನು ಕೇ ಳಿ, ಬೆದರಿ, ಬೆಂಡಾಗಿ, ಬಸವಳದು, ಗಡಗಡನೆ ನಡುಗುತ್ತಾ, ಕೈ ಮುಗಿ ದು ಕೊಂಡು—ಎಲೈ, ಮಹಾತ್ಮನೇ, ಇಂದ್ರಾದಿ ದೇವತೆಗಳನ್ನು ಬಿಟ್ಟು, ನಿ ನ್ನನ್ನೇ ಬಯಸಿರುವಂಥ ನನ್ನಲ್ಲಿ ಇಂಥ ಪಾಪ ಶಂಕೆಯನ್ನು ಮಾಡುವದು ಉಚಿತವೇ? ನೀನು ಎಲ್ಲಿ ಇದ್ದೀಯೋ, ತಿಳಿಯ ಬೇಕೆಂದು, ನಾನು ಹೇಳಿ ದಂಥಾ ಮಾತುಗಳನ್ನು ಬ್ರಾಹ್ಮಣರು ಅಲ್ಲಲ್ಲಿ ನುಡಿಯುತ್ತಾ, ಹತ್ತು ದಿಕ್ಕು ಗಳಲ್ಲಿಯೂ ತಿರುಗಿ, ತಡಕುತ್ತಿರಲು; ಪರ್ಣಾದನೆಂಬ ಬ್ರಾಹ್ಮಣನು ರುತು ಪರ್ಣನ ಬಳಿಯಲ್ಲಿ ಆ ಮಾತುಗಳನ್ನು ಹೇಳಿದ್ದಕ್ಕೆ ನೀನು ಪ್ರತ್ಯುತ್ತರವನ್ನು ಕೊಟ್ಟೆ ಎಂದು, ನನ್ನ ಕೂಡೆ ಹೇಳಿದವನಾದ್ದರಿಂದ, ನೀನೇ ನಳನೆಂದು ಎ ಣಿಸಿ, ನಿನ್ನನ್ನು ಇಲ್ಲಿಗೆ ಕರಿಸುವದಕ್ಕೋಸ್ಕರ, ನೂರು ಯೋಜನ ದಾರಿ ಯನ್ನು ಒಂದು ದಿವಸದಲ್ಲಿ ತಲಪುವಂತೆ ತೇರು ನಡಿಸುವ ಸಾಮರ್ಥ್ಯವು ನಿನ್ನ ಲ್ಲಿ ಇರುವದೆಂದು ನಾನು ತಿಳಿದವಳಾದ್ದರಿಂದ, ಹಾಗೆ ಹೇಳಿ ಕಳುಹಿಸಿದೆನೇ ಹೊರತಾಗಿ, ಮತ್ತೊಂದಲ್ಲ. ನಿನ್ನ ಮನಸ್ಸಿನಲ್ಲಿ ಏನಾದರೂ ಅಂಥಾ ಸಂಶ ಯವಿದ್ದರೆ, ನಿನ್ನಡಿಗಳ ಮೇಲೆ ಆಣೆಯನ್ನು ಇಕ್ಕುತ್ತೇನೆ. ನಿನ್ನ ಮನಸ್ಸಿಗೆ

ಸಮ್ಮತವಾದ ಕಾರ್ಯವನ್ನು ನಾನು ಮನಸ್ಸಿನಲ್ಲಿ ಸ್ಮರಿಸಿದ್ದರೆ, ಸಕಲ ಭೂತ ಸಾಕ್ಷಿಯಾದ ವಾಯುವೂ, ಸಕಲ ಜನರ ಕರ್ಮ ಸಾಕ್ಷಿಗಳಾದ ಸೂರ್ಯ ಚಂದ್ರರೂ, ಎಲ್ಲಾ ಜನಗಳ ಪಾಪ ಪುಣ್ಯಗಳನ್ನು ತಿಳಿದು ಶಿಕ್ಷೆ ರಕ್ಷಣೆಯನ್ನು ಮಾಡುವ ಯಮನೂ, ಸಕಲ ಜನರನ್ನು ಹೊತ್ತು ಸಲಹುವ ಭೂಮಿಯೂ, ಎಲ್ಲರಿಗೆ ಪರಮೋಪಕಾರಿಗಳಾದ ನೀರು ಬೆಂಕಿಗಳೂ, ಇವರು ಮೊದಲಾದ ದೇವತೆಗಳೂ ಸತ್ಯವನ್ನೇ ನುಡಿಯಲಿ. ಹಾಗೆ ನುಡಿಯದೆ ಇದ್ದರೆ, ಈ ಶರೀರವನ್ನು ಬಿಡುತ್ತಲಿದ್ದೇನೆ ಎಂದು ಪ್ರತಿಜ್ಞೆಯನ್ನು ಮಾಡಲು; ಆಗ ದೇವತೆಗಳೆಲ್ಲಾ ಅಂತರಿಕ್ಷದಲ್ಲಿ ಮರೆಯಾಗಿ ಇದ್ದು ಕೊಂಡು, ನಳನನ್ನು ಕುರಿತು—ಎಲೈ, ರಾಜೇಂದ್ರನೇ, ದಮಯಂತಿಯು ತನ್ನ ಪಾತಿವ್ರತ್ಯವೆಂಬ ನಿಕ್ಷೇಪವನ್ನು ಒಂದು ವರುಷದಿಂದ ಕಾಪಾಡಿದಳು. ಇದಕ್ಕೆ ನಾವೆಲ್ಲರು ಸಾಕ್ಷಿಗಳಾಗಿದ್ದೇವೆ. ಒಂದು ದಿವಸದಲ್ಲಿ ನೂರು ಯೋಜನ ದಾರಿಯನ್ನು ತಲಪುವ ಶಕ್ತಿ ನಿನಗಿರುವದಲ್ಲದೆ ಮತ್ತೊಬ್ಬರಿಗೆ ಇಲ್ಲವೆಂದು ಎಣಿಸಿ, ನಿನ್ನನ್ನು ಕರಿಸುವದಕ್ಕೋಸ್ಕರ ಈ ಉಪಾಯವನ್ನು ಮಾಡಿದಳು. ನೀನು ಶಂಕಿಸ ಬೇಡ. ಈಕೆಯನ್ನು ಕೈಕೊಂಡು, ಸುಖವಾಗಿರು ಎಂದು ಹೇಳಿದರು. ಆಗ ಆಕಾಶದಿಂದ ಹೂವಿನ ಮಳೆಯು ಸುರಿಯಿತು. ದೇವ ದುಂದುಭಿಗಳು ಮೊಳಗಿದವು. ಪರಿಮಳದಿಂದ ಕೂಡಿದ ಮಂದ ಮಾರುತವು ಬೀಸಿತು.

ಇದಷ್ಟನ್ನು ನೋಡಿ, ಆಶ್ಚರ್ಯ ಭರಿತನಾಗಿ, ನಳನು ದಮಯಂತಿಯಲ್ಲಿ ಸಂಶಯವನ್ನು ಬಿಟ್ಟು, ಕಾರ್ಕೋಟಕನನ್ನು ನೆನೆದು, ಅವನು ಕೊಟ್ಟ ಎರಡು ಬಟ್ಟೆಯನ್ನು ಉಟ್ಟು, ಹೊದ್ದು ಕೊಂಡು, ಆ ಕ್ಷಣವೇ ತನ್ನ ಮೊದಲಿನ ಚೆಲುವಾದ ಮೈಯನ್ನು ಧರಿಸಿ ಕೊಂಡು, ಹೊಳೆಯುತ್ತಿದ್ದನು. ಅದನ್ನು ದಮಯಂತಿಯು ನೋಡಿ, ತನ್ನ ಗಂಡನನ್ನು ತಬ್ಬಿ ಕೊಂಡು, ಬಿಮ್ಮನೆ ಕೂಗಿ, ಅಳಲು; ಆತನು ಹಾಗೆಯೇ ಅವಳನ್ನು ತಬ್ಬಿ ಕೊಂಡು, ಅಳುತ್ತಾ, ಸಮಾಧಾನವನ್ನು ಮಾಡಿ, ಲಾಲಿಸಲು; ಧೂಳಿಯಿಂದ ತುಂಬಿದ ಮೈಯುಳ್ಳ ದಮಯಂತಿಯು ನಳನ ಎದೆಯಲ್ಲಿ ತನ್ನ ಮೊಗವನ್ನು ಇಟ್ಟು, ಕಣ್ಣೀರುಗಳನ್ನು ತುಂಬಿ ಕೊಂಡು ಇದ್ದಳು. ಆಗ ಇದಷ್ಟನ್ನು ದಮಯಂತಿಯ ತಾಯಿ ಕಂಡು, ಭೀಮ ಭೂಪಾಲಕನಿಗೆ ತಿಳಿಸಿದಳು. ಆತನು ಸಂತೋಷ ಪಟ್ಟು, ತನ್ನ ಮಡದಿಯನ್ನು ಕುರಿತು—ಆ ಗಂಡ ಹೆಂಡರಿಗೆ ನಾಳೇ ಬೆಳಿಗ್ಗೆ ಮಂಗಳ ಸ್ನಾನವನ್ನು ಮಾಡಿಸಿ, ದಿವ್ಯ ವಸ್ತ್ರಾಭರಣಗಳಿಂದ ಅಲಂಕರಿಸು. ಆ ಮೇಲೆ ನಾನು ಬಂದು ನೋಡುವೆನು ಎಂದು ಹೇಳಿ, ಕಳುಹಿಸಿದನು.

ಆ ರಾತ್ರಿಯಲ್ಲಿ ನಳನೂ ದಮಯಂತಿಯೂ ತಾವು ತಾವು ಪಟ್ಟ ಕಷ್ಟಗಳನ್ನು ಒಂದು ಕಥೆಯಾಗಿ ಒಬ್ಬರು ಒಬ್ಬರಿಗೆ ಹೇಳಿ ಕೊಳ್ಳುತ್ತಾ, ಚಂದ್ರನಿಂದ ಮೆರೆಯುವ ರಾತ್ರಿಯಂತೆಯೂ, ಕಮಲಿನಿಯಿಂದ ಕಳಕಳಿಸುವ ಕೊಳದಂತೆಯೂ ಸುಖವಾಗಿದ್ದರು. ಮಾರನೇ ದಿವಸ ಬೆಳಿಗ್ಯೆ ನಳನು ದಮಯಂತಿಯೊಡನೆ ಕೂಡಿ, ಮಂಗಳ ಸ್ನಾನವನ್ನು ಮಾಡಿ, ಸಕಲ ಭೂಷಣ ಭೂಷಿತನಾಗಿ, ದಿವ್ಯ ಮಾಲ್ಯಾಂಬರಾಲಂಕೃತನಾಗಿ, ದಮಯಂತಿಯೊಡನೆ ಭೀಮ ಭೂಪಾಲನ ಬಳಿಗೆ ಹೋಗಿ, ನಮಸ್ಕಾರವನ್ನು ಮಾಡಲು; ಆತನು ನಳನಲ್ಲಿ ಪುತ್ರವಾತ್ಸಲ್ಯವನ್ನು ಮಾಡಿ, ಶೀ ನುಡಿಗಳಿಂದ ಸಮಾಧಾನವನ್ನು ಮಾಡಿ, ಬೇಕಾದಷ್ಟು ವಸ್ತ್ರ ಭೂಷಣಾದಿಗಳನ್ನು ಕೊಟ್ಟು, ತನ್ನ ಮಗಳಿಗೂ ಬೇಕಾದಷ್ಟು ವಸ್ತ್ರಾಭರಣಗಳನ್ನು ಕೊಟ್ಟು, ಮನ್ನಿಸಲು; ಆ ಗಂಡ ಹೆಂಡರು ಚಂದ್ರ ರೋಹಿಣಿ ದೇವಿಯರಂತೆಯೂ, ಅಗ್ನಿ ಸ್ವಾಹಾ ದೇವಿಯರಂತೆಯೂ, ನಾರಾಯಣ ಲಕ್ಷ್ಮೀ ದೇವಿಯರಂತೆಯೂ, ಬ್ರಹ್ಮ ಸರಸ್ವತಿಯರಂತೆಯೂ, ಶಿವ ಶಿವೆಯರಂತೆಯೂ ಮೆರೆಯುತ್ತಿದ್ದರು. ಆಗ ಊರು ಜನರೆಲ್ಲಾ ಅವರಿಬ್ಬರನ್ನು ಕಣ್ಣು ತುಂಬಾ ನೋಡಿ, ಚಂದ್ರನನ್ನು ಕಂಡ ಸಮುದ್ರದಂತೆ ಸಂತೋಷದಿಂದ ಉಬ್ಬಿದರು. ಆಗ ಭೀಮ ಭೂಪಾಲನು ಪಟ್ಟಣವನ್ನೆಲ್ಲಾ ಅಲಂಕಾರ ಮಾಡಿಸಿದನು. ಆ ಬಳಿಕ ನಳನು ರುತುಪರ್ಣ ರಾಯನನ್ನು ಕರತರಿಸಿ, ಬಹುಮಾನಗಳನ್ನು ಮಾಡಿ, ಒಳ್ಳೇ ಮಾತುಗಳಿಂದ ಸಂತೋಷ ಪಡಿಸಿದನು. ಬುದ್ಧಿ ಸಂಪನ್ನನಾದ ಆತನು ನಳನಿಂದ ಸತ್ಕೃತನಾಗಿ, ನಸುನಗೆಯಿಂದ ಕೂಡಿದ ಮೊಗದಾವರೆಯುಳ್ಳವನಾಗಿ, ಆತನನ್ನು ಕುರಿತು—ಎಲೈ, ಮಹಾನುಭಾವನೇ, ದೇವರ ದಯದಿಂದ ಹೆಂಡತಿಯೊಡನೆ ಕೂಡಿದ ನಿನ್ನನ್ನು ನೋಡಿ, ನನ್ನ ಕಣ್ಣುಗಳು ಸಫಲಗಳಾದವು. ನಾನು ಧನ್ಯನಾದೆನು. ಮೊದಲು ನನ್ನ ಪಟ್ಟಣಕ್ಕೆ ಬಂದು, ನೀನು ಅಜ್ಞಾತ ವಾಸವಾಗಿರುವ ಸಮಯದಲ್ಲಿ, ನಾನು ಅರಿತಾದರೂ, ಅರಿಯದಿದ್ದಾದರೂ, ನಿನ್ನಲ್ಲಿ ಏನಾದರೂ ತಪ್ಪು ಮಾಡಿರುವೆನು. ಅದಷ್ಟನ್ನು ಸಹಿಸ ಬೇಕೆಂದನು. ನಳನು ಆತನನ್ನು ನೋಡಿ—ಇಷ್ಟು ದಿವಸಗಳು ನಿನ್ನ ಪಟ್ಟಣದಲ್ಲಿ ಸ್ವರ್ಗ ಲೋಕದಲ್ಲಿ ಇದ್ದಂತೆ ಸೌಖ್ಯವಾಗಿ ಇದ್ದೆನು. ನನ್ನ ರಾಜ್ಯದಲ್ಲಿ ನಾನು ಅಷ್ಟು ಸೌಖ್ಯದಿಂದ ಇರಲಿಲ್ಲ. ಇಂಥಾ ನೀನು ತಪ್ಪು ಮಾಡಿದ್ದರೂ ನಾನು ಮರೆಯ ಬೇಕು. ಇಂಥಾದ್ದರಲ್ಲಿ ನೀನು ಒಂದು ತಪ್ಪನ್ನು ಮಾಡಿದವನೇ ಅಲ್ಲ. ಅಶ್ವ ಹೃದಯವೆಂಬ ವಿದ್ಯೆಯನ್ನು ನನ್ನಲ್ಲಿಯೇ ನಿಲ್ಲಿಸಿದವನಾದ್ದರಿಂದ, ಅದನ್ನು ಪರಿಗ್ರಹಿಸ ಬೇಕೆಂದನು. ರುತು

ಪರ್ನನು ಆ ವಿದ್ಯೆಯನ್ನು ನಳನಿಂದ ಗುಟ್ಟಾಗಿ ಗ್ರಹಿಸಿ ಕೊಂಡು, ಅಪ್ಪಣೇ ತೆಗೆದು ಕೊಂಡು, ಮತ್ತೊಬ್ಬ ಸಾರಥಿಯಿಂದ ಕೂಡಿ, ತನ್ನ ಪಟ್ಟಣಕ್ಕೆ ಹೋದನು.

ಆ ಬಳಿಕ ನಳನು ಕುಂಡಿನ ಪಟ್ಟಣದಲ್ಲಿ ಒಂದು ತಿಂಗಳು ಸುಖದಿಂದ ಇದ್ದು, ಆ ಮೇಲೆ ಭೀಮ ಭೂಪಾಲಕನ ಅಪ್ಪಣೆಯನ್ನು ತೆಗೆದು ಕೊಂಡು, ಬಿಳೀ ಕುದುರೆಗಳು ಕಟ್ಟಿದ ತೇರನ್ನು ಏರಿ, ಹದಿನಾರು ಭದ್ರ ಗಜಗಳೂ ಐವತ್ತು ಕುದುರೆಗಳೂ ಆರು ನೂರು ಕಾಲಾಳುಗಳನ್ನು ಕೂಡಿ ಕೊಂಡು, ತನ್ನ ನಿಷಧ ದೇಶಕ್ಕೆ ಬಂದು, ಪುಷ್ಕರನ ಸಮೀಪಕ್ಕೆ ಹೋಗಿ,—ಇದಕೋ! ದಮಯಂತಿ ಹೊರತಾಗಿ ಮಿಕ್ಕಾದ ನನ್ನ ದ್ರವ್ಯವನ್ನು ಪಂಥಕ್ಕೆ ಒಡ್ಡುತ್ತಲಿದ್ದೇನೆ. ನೀನು ರಾಜ್ಯವಷ್ಟನ್ನು ಪಂಥಕ್ಕೆ ಒಡ್ಡು. ತಿರಿಗಿ ನಿನ್ನೊಡನೆ ಜೂಜಾಡ ಬೇಕೆಂದು ಎಣಿಸಿ ಇದ್ದೇನೆ. ಇದು ಮುಗಿದ ಮೇಲೆ, ನಮ್ಮಿಬ್ಬರ ಪ್ರಾಣಗಳನ್ನು ಒಡ್ಡುವ. ಜೂಜಿನಲ್ಲಿ ಒಬ್ಬನ ಧನ ರಾಜ್ಯಗಳನ್ನು ಗೆದ್ದು ಕೊಂಡವನ ಬಳಿಗೆ ಆತನು ತಿರಿಗಿ ಬಂದು, ಜೂಜಿಗೆ ಕರೆದರೆ, ಆಡ ಬೇಕು. ಅದಕ್ಕೆ ನೀನು ಒಲ್ಲದಿದ್ದರೆ, ಯುದ್ಧಕ್ಕೆ ಬಾ. ದ್ವಂದ್ವ ಯುದ್ಧದಲ್ಲಿ ಆದರೂ ನಮ್ಮಿಬ್ಬರಲ್ಲಿ ಒಬ್ಬನಿಗೆ ಕೇಡಾಗ ಬೇಕು. ಹಗೆಯು ತೆಗೆದು ಕೊಂಡ ರಾಜ್ಯವನ್ನು ಹ್ಯಾಗಾದರೂ ತಿರಿಗಿ ತೆಗೆದು ಕೊಳ್ಳ ಬೇಕು ಎಂದು, ದೊಡ್ಡವರು ಹೇಳುವದರಿಂದ, ನಾನು ಹೇಳಿದ ಎರಡು ಕೆಲಸಗಳಲ್ಲಿ ಒಂದಕ್ಕೆ ನಿಲ್ಲು! ಎಂದು ಕರೆಯಲು; ಪುಷ್ಕರನು ರಾಜ್ಯ ಗರ್ವಿತನಾಗಿ, ಜೂಜಾಡುವದಕ್ಕೆ ಉದ್ಯುಕ್ತನಾಗಿ, ಒಂದು ಪಂಥದಲ್ಲಿ ಧನ ಕನಕ ವಸ್ತು ವಾಹನಗಳನ್ನೂ ರಾಜ್ಯಗಳನ್ನೂ ತನ್ನ ಪ್ರಾಣಗಳನ್ನೂ ಒಡ್ಡಿ, ಆಡಲು; ನಳನು ಜೈಸಿ, ಆ ಪುಷ್ಕರನನ್ನು ನೋಡಿ—ನೀನು ಜೂಜಿನಲ್ಲಿ ನನಗೆ ಅಪಕಾರವನ್ನು ಮಾಡಿದವನಲ್ಲ; ಕಲಿ ಪುರುಷನು ಮಾಡಿದನು. ನೀನು ಹೆಡ್ಡನಾದ್ದರಿಂದ ತಿಳಿಯೆ. ನಿನ್ನ ಪ್ರಾಣಗಳನ್ನು ಕೊಲ್ಲುವದಿಲ್ಲ. ನೂರು ವರುಷಗಳು ಸುಖವಾಗಿ ಜೀವಿಸು. ನೀನು ಎಷ್ಟು ಅಪಕಾರ ಮಾಡಿದರೂ, ನನ್ನ ಒಡಹುಟ್ಟುಗಳಲ್ಲಿ ಒಬ್ಬನಾದ್ದರಿಂದ, ನಿನ್ನಲ್ಲಿ ನನಗೆ ಬಹು ಪ್ರೀತಿ ಅದೆ ಎಂದು ಹೇಳಿ, ಬಾರಿ ಬಾರಿಗೂ ತಬ್ಬಿ ಕೊಳ್ಳುತ್ತಿರಲು; ಪುಷ್ಕರನು ನಳನಿಗೆ ನಮಸ್ಕಾರವನ್ನು ಮಾಡಿ, ಕೈ ಮುಗಿದು—ಎಲೈ, ಮಹಾನುಭಾವನೇ, ನಿನ್ನ ಕೈಗೆ ಸಿಕ್ಕಿದ ಪ್ರಾಣಗಳನ್ನು ತಿರಿಗಿ ಕೊಟ್ಟು, ನನ್ನನ್ನು ಕಾಪಾಡಿದೆ ಎಂದು ಕೊಂಡಾಡಿ, ನಳನ ಅಪ್ಪಣೆಯನ್ನು ತೆಗೆದು ಕೊಂಡು, ಸಂತೋಷದಿಂದ ತನ್ನ ಪಟ್ಟಣಕ್ಕೆ ಹೋದನು.

ಆಗ ತೇಜೋವಂತನಾಗಿ, ನಡು ಹಗಲ ಸೂರ್ಯನ ಹಾಗೆ ಹೊಳೆಯುತ್ತಲಿರುವ ನಳನ ಬಳಿಗೆ ಬಂದು, ಪೌರ ಜನ ಪರಿಜನಗಳು ಅಡ್ಡ ಬಿದ್ದು—ಸ್ವಾಮಿಾ, ಮಹಾ ರಾಯನೇ, ತನ್ನ ತಾಯಿಯನ್ನು ಕಂಡ ಎಳೆ ಗರುವಿನಂತೆ ಈ ದಿವಸ ನಾವೆಲ್ಲರು ಸಂತುಷ್ಟರಾದೆವು, ಅಂದರು. ಆಗ ನಳಚಕ್ರವರ್ತಿಯು ಅವರನ್ನೆಲ್ಲಾ ಯಥೋಚಿತವಾಗಿ ಮನ್ನಿಸಿ, ಸಕಲ ಸೇನೆಗಳನ್ನು ಭೀಮ ಭೂಪಾಲಕನ ಪಟ್ಟಣಕ್ಕೆ ಕಳುಹಿಸಿ, ದಮಯಂತಿಯನ್ನೂ, ತನ್ನ ಮಕ್ಕಳನ್ನೂ ಕರಿಸಿಕೊಂಡು, ಸಂತೋಷ ಯುಕ್ತನಾಗಿ ಬಹು ಯಜ್ಞಗಳನ್ನು ಮಾಡಿ, ದೇವತೆಗಳನ್ನು ಸಂತೋಷ ಪಡಿಸುತ್ತಾ, ಮಕ್ಕಳ ಹಾಗೆ ಪ್ರಜೆಗಳನ್ನು ಕಾಪಾಡುತ್ತಾ, ಬಹು ಕೀರ್ತಿಯನ್ನು ಪಡೆದು, ಸುಖವಾಗಿದ್ದನು.

PART IV.

—:o:—

Extracts from the Ramayana.

—:o:—

65. Ravana's Conquest of the Universe.

೬೫. ರಾವಣನ ದಿಗ್ವಿಜಯ.

ಸನಕ, ಸನತ್ಕುಮಾರ, ಸನಂದನನೇ ಮೊದಲಾದ ಋಷಿಗಳು ಲಕ್ಷ್ಮೀ ಪತಿಯಾದ ನಾರಾಯಣನನ್ನು ಸೇವಿಸುವದಕ್ಕೆ ಬಂದಾನೊಂದು ದಿನ ವೈಕುಂಠ ಲೋಕಕ್ಕೆ ಬಂದು, ಆತನ ಬಳಿಗೆ ಹೋಗುತ್ತಿರಲು; ಬಾಗಿಲು ಕಾವಲುಗಾರರಾದ ಜಯ ವಿಜಯರು—ಅಪ್ಪಣೆ ಇಲ್ಲದೆ ಹೋಗ ಕೊಡದೆಂದು ತಡೆದ್ದರಿಂದ, ಆ ಋಷಿಗಳು ಬಹಳ ಕೋಪದಿಂದ—ಭೂಲೋಕದಲ್ಲಿ ನೀವು ರಾಕ್ಷಸರಾಗಿ ಹುಟ್ಟಿರಿ ಎಂದು, ಶಾಪವನ್ನು ಕೊಡಲು; ಆ ಜಯ ವಿಜಯರು ಹೆದರಿ, ಆ ಋಷಿಗಳನ್ನು ಒಳಗೆ ಬಿಟ್ಟರು. ಅವರು ಒಳ ಹೊಕ್ಕು, ವಿಷ್ಣುವನ್ನು ಸೇವಿಸಿ, ತಮ್ಮ ಲೋಕಕ್ಕೆ ಹೋದರು. ತರುವಾಯ ಈ ಜಯ ವಿಜಯರು ವಿಷ್ಣುವಿನ ಬಳಿಗೆ ಹೋಗಿ, ತಮಗೆ ಬಂದ ಋಷಿಗಳ ಶಾಪದ ವಿಚಾರವನ್ನು ಹೇಳಿ ಕೊಂಡು, ಅಳಲು; ವಿಷ್ಣುವು ಅವರನ್ನು ಕುರಿತು—ಎಲೈ, ಜಯ ವಿಜಯರಿರಾ, ಮುನಿಗಳ ಶಾಪವು ತಪ್ಪಲಾರದು. ನನಗೆ ಸ್ನೇಹಿತರಾಗಿ ಏಳು ಜನ್ಮ ಭೂಮಿಯಲ್ಲಿ ಹುಟ್ಟಿ, ತಿರಿಗಿ ಸನ್ನಿಧಾನಕ್ಕೆ ಬರುವಿರೋ? ಅಲ್ಲದಿದ್ದರೆ ಮೂರು ಜನ್ಮ ಹುಟ್ಟಿ, ನನಗೆ ಹಗೆಗಳಾಗಿದ್ದು, ತಿರಿಗಿ ನನ್ನ ಬಳಿಗೆ ಬರುವಿರೋ? ಈ ಎರಡು ವಿಧದಲ್ಲಿ ನಿಮಗೆ ಒಪ್ಪಿತವಾದದ್ದನ್ನು ಹೇಳಿ, ಅಂದನು. ಅವರು—ಏಳು ಜನ್ಮ ನಿನ್ನನ್ನು ಬಿಟ್ಟಿರಲಾರೆವು. ನಿನಗೆ ಹಗೆಗಳಾದಾಗ್ಯೂ ಚಿಂತೆ ಇಲ್ಲ. ಮೂರು ಜನ್ಮದಲ್ಲಿಯೇ ತಿರಿಗಿ ನಿನ್ನ ಸನ್ನಿಧಿಗೆ ಬರುವ ಹಾಗೆ ದಯ ಮಾಡ ಬೇಕೆಂದು ಬೇಡಿ ಕೊಳ್ಳಲು; ವಿಷ್ಣುವು—ಹಾಗೆ ಆಗಲಿ; ಹೋಗಿ, ಎಂದು ಅವರಿಗೆ ಅಪ್ಪಣೆ ಕೊಟ್ಟು, ಕಳುಹಿಸಿದನು.

ಆ ಮೇಲೆ ಅವರು ಮೊದಲನೇ ಜನ್ಮದಲ್ಲಿ ಕಶ್ಯಪ ಮುನಿಯ ಹೆಂಡತಿಯಾದ ದಿತಿ ಎಂಬವಳ ಬಸುರಿನಲ್ಲಿ ಹಿರಣ್ಯಾಕ್ಷ ಹಿರಣ್ಯಕಶಿಪು ಎಂಬ ಹೆಸರುಗಳಿಂದ ಹುಟ್ಟಿ, ವಿಷ್ಣುವಿನಲ್ಲಿ ಹಗೆ ಮಾಡುತ್ತಾ ಬಂದರು. ಆಗ ವಿಷ್ಣುವು ವರಾಹಾವತಾರವನ್ನು ಮಾಡಿ, ಹಿರಣ್ಯಾಕ್ಷನನ್ನೂ, ನರಸಿಂಹಾವತಾರ ಮಾಡಿ, ಹಿರಣ್ಯ

ಕಶಿಪುವನ್ನೂ ಕೊಂದು ಹಾಕಿದನು. ಅವರು ಎರಡನೆಯ ಜನ್ಮದಲ್ಲಿ ಹುಟ್ಟಿದ ರೀತಿ ಹ್ಯಾಗಂದರೆ, ಬ್ರಹ್ಮನ ಮಾನಸ ಪುತ್ರನಾದ ಪುಲಸ್ತ್ಯನೆಂಬ ಮುನಿ ಉಂಟು. ಆತನಿಗೆ ವಿಶ್ರವಸ್ಸು ಎಂಬ ಒಬ್ಬ ಮಗನಾದನು. ಅವನ ಮದುವೆಯಾದ ಹೆಂಡತಿಯ ಬಸುರಿನಲ್ಲಿ ವೈಶ್ರವಣನು ಎಂಬ ಒಬ್ಬ ಮಗನು ಹುಟ್ಟಿ, ಬ್ರಹ್ಮ ದೇವನನ್ನು ತಪಸ್ಸಿನಿಂದ ಮೆಚ್ಚಿಸಿ, ಆತನಿಂದ ಬಡಗ ದಿಕ್ಕಿನ ಒಡೆತನವನ್ನೂ, ಧನಗಳಿಗೆ ಒಡೆತನವನ್ನೂ, ಕಾಮಗಾಮಿಯಾದ ಒಂದು ವಿಮಾನವನ್ನೂ ಪಡ ಕೊಂಡು, ತಿರಿಗಿ ತಂದೆಯಾದ ವಿಶ್ರವಸ್ಸುವಿನ ಬಳಿಗೆ ಬಂದು, ನಮಸ್ಕರಿಸಿ, ತಾನು ವರವನ್ನು ಪಡ ಕೊಂಡು ಬಂದ ವಿವರವನ್ನು ಹೇಳಿ, ತನಗೆ ವಾಸಾ ಮಾಡಿ ಕೊಂಡಿರುವದಕ್ಕೆ ಒಂದು ಸ್ಥಳವನ್ನು ಅಪ್ಪಣೆ ಕೊಡಿಸ ಬೇಕೆಂದು ಕೇಳಿ ಕೊಂಡದರಿಂದ, ಆ ವಿಶ್ರವಸ್ಸು ಬಹಳ ಸಂತೋಷ ಪಟ್ಟು—ಕೇಳೈ, ಮಗನೇ, ಮೊದಲು ಒಡ ಹುಟ್ಟುಗಳಾದ ಮಾಲಿ, ಸುಮಾಲಿ, ಮಾಲ್ಯವಂತನು ಎಂಬ ಮೂರು ಜನ ರಾಕ್ಷಸರು ಲವಣ ಸಮುದ್ರದಲ್ಲಿ ನೂರು ಯೋಜನ ದಕ್ಷಿಣ ಭಾಗದಲ್ಲಿ ಮೂರು ಶಿಖರಗಳುಳ್ಳ ತ್ರಿಕೂಟಾಚಲವೆಂಬ ಬೆಟ್ಟದ ನಟ್ಟ ನಡುವೆ ಅಮರಾವತಿಗಿಂತ ಛಂದವಾದ ಲಂಕಾ ಪಟ್ಟಣವೆಂಬ ಒಂದು ಪುರವನ್ನು ಮಾಡಿ ಕೊಂಡು ಇದ್ದರು. ಅವರನ್ನು ವಿಷ್ಣುವು ದೇವತೆಗಳಿಗಾಗಿ ಯುದ್ಧದಲ್ಲಿ ಗೆದ್ದದರಿಂದ, ವಿಷ್ಣುವಿಗೆ ಹೆದರಿ ಕೊಂಡು, ಆ ಲಂಕಾ ಪಟ್ಟಣವನ್ನು ಬಿಟ್ಟು, ತಮ್ಮ ತಮ್ಮ ಸಂಸಾರ ಸಹಿತವಾಗಿ ಓಡಿ ಹೋಗಿ, ರಸಾತಲದಲ್ಲಿ ಔತು ಕೊಂಡಿದ್ದಾರೆ. ಆ ಲಂಕಾ ಪಟ್ಟಣವು ನೀನಿರುವದಕ್ಕೆ ಬಹಳ ಚನ್ನಾಗಿ ಇದೆ. ಅಲ್ಲಿಗೆ ಹೋಗಿ, ಸುಖದಿಂದ ಇರು ಎಂದು ಅಪ್ಪಣೆ ಕೊಟ್ಟನು. ಆ ಬಳಿಕ ವೈಶ್ರವಣನು ತನ್ನ ಬಡಗ ದಿಕ್ಕಿನಲ್ಲಿರುವ ಯಕ್ಷ ಜನರನ್ನು ಕೂಡಿ ಕೊಂಡು, ಬ್ರಹ್ಮ ಕೊಟ್ಟ ವಿಮಾನದ ಮೇಲೆ ಏರಿ ಕೊಂಡು, ಆ ಲಂಕಾ ಪಟ್ಟಣಕ್ಕೆ ಹೋಗಿ, ಸುಖವಾಗಿ ಆಳಿ ಕೊಂಡಿದ್ದನು.

ಹೀಗಿರುವಲ್ಲಿ, ರಸಾತಲದಲ್ಲಿ ಔತು ಕೊಂಡಿದ್ದ ಮಾಲಿ, ಸುಮಾಲಿ, ಮಾಲ್ಯವಂತರೆಂಬ ಮೂರು ಮಂದಿ ರಾಕ್ಷಸರಲ್ಲಿ ಸುಮಾಲಿ ಎಂಬವನು ತನ್ನ ಮಗಳಾದ ಕೈಕಸೆಯನ್ನು ಕರೆದು ಕೊಂಡು, ಭೂಲೋಕದಲ್ಲಿ ತಿರುಗ ಬೇಕೆಂದು ರಸಾತಲದಿಂದ ಹೊರಟು ಬಂದು, ಭೂಮಿಯಲ್ಲಿ ಸಂಚರಿಸುತ್ತಾ ಇರುವಲ್ಲಿ, ಒಂದು ದಿನ ಆ ವೈಶ್ರವಣನು ತನ್ನ ತಂದೆಯನ್ನು ನೋಡುವದಕ್ಕೋಸ್ಕರ ವಿಮಾನದಲ್ಲಿ ಏರಿ ಕೊಂಡು, ಆಕಾಶ ಮಾರ್ಗದಲ್ಲಿ ಎರಡನೇ ಸೂರ್ಯನ ಹಾಗೆ ಹೊಳೆಯುತ್ತಾ, ತಂದೆಯ ಬಳಿಗೆ ಬಂದು, ವಂದನೆಯನ್ನು ಮಾಡಿ, ತಿರಿಗಿ

ಲಂಕಾ ಪಟ್ಟಣಕ್ಕೆ ಹೋದದ್ದನ್ನು ಕಂಡು, ಹೊಟ್ಟೇ ಕಿಚ್ಚಿನಿಂದ,—ನಮ್ಮ ಲಂಕಾ ಪಟ್ಟಣವನ್ನು ಇವನಿಂದ ಕಿತ್ತು ಕೊಂಡು, ತಿರಿಗಿ ನಾವು ಅಲ್ಲಿ ವಾಸಾ ಮಾಡುವದಕ್ಕೆ ಏನು ಉಪಾಯವನ್ನು ಮಾಡ ಬೇಕೆಂದು, ಸ್ವಲ್ಪ ಹೊತ್ತು ಆಲೋಚಿಸಿ, ಸಮೀಪದಲ್ಲಿರುವ ತನ್ನ ಮಗಳಾದ ಕೈಕಸೆಯನ್ನು ಕರೆದು,—ಈ ಆಶ್ರಮದಲ್ಲಿರುವ ವಿಶ್ರವಸ್ಸೆಂಬ ಮಹಾ ಮುನಿಯ ಎಡೆಗೆ ನೀನು ಹೋಗಿ, ಆತನನ್ನು ವರಿಸಿ, ಆ ಮಹಾತ್ಮನಿಂದ ಮಕ್ಕಳನ್ನು ಪಡೆದರೆ, ಅವರಿಂದ ತಿರಿಗಿ ನಮ್ಮ ಲಂಕಾ ಪಟ್ಟಣವನ್ನು ಶೇರ ಬಹುದು ಎಂದು ಹೇಳಿ, ಕಳುಹಿಸಿದನು.

ಸರ್ವಾಂಗ ಸುಂದರಿಯಾದ ಆಕೆಯು ಮುಚ್ಚಂದೇ ವೇಳ್ಯದಲ್ಲಿ ಆ ಮುನಿಯ ಎಡೆಗೆ ಹೋಗಿ, ತಲೆಯನ್ನು ಬೊಗ್ಗಿಸಿ ಕೊಂಡು, ಕಾಲುಂಗುಟದಿಂದ ನೆಲವನ್ನು ಗೀರುತ್ತಾ ಇರಲು; ಆ ಮುನಿಯು ಈಕೆಯನ್ನು ನೋಡಿ, ತನ್ನ ಜ್ಞಾನ ದೃಷ್ಟಿಯಿಂದ ಇವಳು ಬಂದ ವಿಚಾರವನ್ನು ಅರಿತು, ಇವಳನ್ನು ನೋಡಿ—ಎಲೇ, ಕಾಂತೆಯೇ, ನೀನು ಬಂದದ್ದು ತಿಳಿಯಿತು. ರಾಕ್ಷಸರ ಸಂಚಾರಕ್ಕೆ ಯೋಗ್ಯವಾದ ಮುಚ್ಚಂದೆಯ ಹೊತ್ತಿನಲ್ಲಿ ನೀನು ಮಕ್ಕಳ ನಿಮಿತ್ತವಾಗಿ ಬಂದದರಿಂದ, ಲೋಕ ಕಂಟಕರಾದ, ಭಯಂಕರಾಕಾರರಾದ ಇಬ್ಬರು ಗಂಡು ಮಕ್ಕಳೂ ಒಬ್ಬಳು ಹೆಣ್ಣು ಮಗಳೂ ಹುಟ್ಟುವರು ಎಂದು ಹೇಳಲು; ಆಕೆಯು ಮಹಾ ದುಖ್ಖದಿಂದ ಆ ಮುನಿಯನ್ನು ನೋಡಿ, ಧಾರಾಳವಾಗಿ ಕಣ್ಣೀರನ್ನು ಸುರಿಸಲು; ಆ ಮುನಿಯು ಕನಿಕರದಿಂದ—ಇನ್ನೊಬ್ಬ ಮಗನು ಧರ್ಮಿಷ್ಟನಾಗಿ, ನಮ್ಮ ಕುಲಕ್ಕೆ ಸರಿಯಾಗಿ, ಒಳ್ಳೇ ಸಜ್ಜನನಾಗಿ ಹುಟ್ಟುವನು; ಹೋಗು, ಎಂದು ಅಪ್ಪಣೆ ಕೊಟ್ಟದರಿಂದ, ಆ ಕೈಕಸೆಯು ಮುನಿಗೆ ನಮಸ್ಕಾರ ಮಾಡಿ, ಹಿಂತಿರಿಗಿ, ತಂದೆಯ ಬಳಿಗೆ ಬಂದು, ನಡೆದ ಸುದ್ದಿಯನ್ನೆಲ್ಲಾ ಹೇಳಿದಳು. ಆಗ ಸುಮಾಲಿಯು ಸಂತೋಷ ಪಟ್ಟು, ಆ ಮುನಿಯ ಆಶ್ರಮದಲ್ಲಿಯೇ ಮೊಮ್ಮಕ್ಕಳ ಹುಟ್ಟನ್ನು ಕಾದು ಕೊಂಡಿದ್ದನು.

ಹೀಗಿರುವಲ್ಲಿ, ಕೈಕಸೆಯು ಕೆಲವು ದಿವಸದ ಮೇಲೆ, ಹತ್ತು ತಲೆಯೂ ಇಪ್ಪತ್ತು ತೋಳೂ ಇರುವ ಒಬ್ಬ ಮಗನನ್ನು ಪಡೆದಳು. ಆಗ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಬಹಳವಾಗಿ ಉತ್ಪಾತಗಳು ಉಂಟಾದವು. ಇಂದ್ರಾದಿ ದೇವತೆಗಳೆಲ್ಲಾ ಗಡಗಡನೆ ನಡುಗಿದರು. ಆಕಾಶದಿಂದ ಮೇಘಗಳು ರಕ್ತದ ಮಳೆಗಳನ್ನು ಸುರಿಸಿದವು. ನಕ್ಷತ್ರಗಳು ನೆಲಕ್ಕೆ ಉದುರಿದವು. ಕಾಮನ ಬಿಲ್ಲು ಆಕಾಶದಲ್ಲಿ ಕವಿಯಿತು. ಆಗ ವಿಶ್ರವಸ್ಸು ಅವನಿಗೆ ದಶಮುಖನೆಂದು ನಾಮಕರಣವನ್ನು ಮಾಡಿದನು. ಆ ಮೇಲೆ ಮತ್ತೆ ಕೆಲವು ದಿವಸದಲ್ಲಿ ಈ ಲೋ

ಕಗಳನ್ನೆಲ್ಲಾ ಒಂದೇ ತುತ್ತಾಗಿ ನುಂಗುವ ಮತ್ತೊಬ್ಬ ಮಗನನ್ನು ಕೈಕಸೆಯು ಹೆತ್ತಳು. ಅವನ ಕಿವಿಯು ಆನೆಯ ಕಿವಿಗಿಂತ ದೊಡ್ಡದಾಗಿದ್ದದರಿಂದ, ಆತನಿಗೆ ಕುಂಭಕರ್ಣನೆಂದು ಹೆಸರನ್ನು ಇಟ್ಟನು. ಮತ್ತೆ ಕೆಲವು ದಿವಸದ ಮೇಲೆ ಆ ಕೈಕಸೆಯು ಸೌಮ್ಯವಾದ ಆಕಾರವುಳ್ಳವನಾಗಿ, ಹುಣುಮೇ ಚಂದ್ರನೋಪಾದಿಯಲ್ಲಿ ಮುಖವುಳ್ಳವನಾಗಿ, ತಾವರೇ ಎಸಳುಗಳ ಹಾಗೆ ಇರುವ ಕಣ್ಣುಳ್ಳವನಾಗಿ, ಅಗಲವಾದ ಎದೆಯುಳ್ಳವನಾಗಿ, ದೊಡ್ಡದಾದ ತಲೆಯುಳ್ಳವನಾಗಿ, ನೀಳಗಳಾದ ತೋಳುಗಳುಳ್ಳವನಾಗಿ, ಆನೆಗಳ ಸೊಂಡಿಲಿನ ಹಾಗಿರುವ ತೊಡೆಗಳುಳ್ಳವನಾಗಿ, ಸೂರ್ಯನಂತೆ ಕಾಂತಿಯಿಂದ ಹೊಳೆಯುತ್ತಲಿರುವ ಇನ್ನೊಬ್ಬ ಮಗನನ್ನು ಹೆತ್ತಳು. ಆ ಮುನಿಯು ಆ ಮಗನನ್ನು ನೋಡಿ, ಸಂತೋಷ ಪಟ್ಟು, ಅವನಿಗೆ ವಿಭೀಷಣನೆಂದು ಹೆಸರನ್ನಿಟ್ಟನು. ಮತ್ತೆ ಮೊರದೋಪಾದಿಯಲ್ಲಿ ಇರುವ ಉಗುರುಗಳುಳ್ಳ ವಿಕಾರವಾದ ಒಡಲುಳ್ಳ ಒಬ್ಬ ಹೆಣ್ಣು ಮಗಳನ್ನು ಹೆತ್ತಳು. ಅವಳಿಗೆ ಮುನಿಯು ಶೂರ್ಪನಖಿ ಎಂದು ಹೆಸರಿಟ್ಟನು. ಈ ನಾಲ್ಕು ಜನರಲ್ಲಿ ದಶಮುಖ ಕುಂಭಕರ್ಣರೆಂಬವರೇ ಜಯವಿಜಯರ ಎರಡನೇ ಜನ್ಮದವರು.

ತರುವಾಯ ಆ ಮುನಿಯು ಮೂರು ಮಂದಿ ಮಕ್ಕಳಿಗೂ ಚೌಲೋಪನಯನಗಳನ್ನು ಮಾಡಿದನು. ಹಿರೀ ಮಗನಾದ ದಶಮುಖನಿಗೆ ಲೋಕದ ಜನರಿಗೆ ತೊಂದರೆಯನ್ನೂ ಸಂಕಟವನ್ನೂ ಕೊಡುವದೇ ಕೆಲಸವಾಗಿತ್ತು. ಎರಡನೆಯ ಕುಂಭಕರ್ಣನೆಂಬವನಿಗೆ ನೆಲನ ಜನರನ್ನು ಹಿಡಿ ಹಿಡಿದು, ತಿನ್ನುವದೇ ಉದ್ಯೋಗವು. ವೇದ ಶಾಸ್ತ್ರಗಮ ವಿನೋದವು ವಿಭೀಷಣನ ಬಗೆಗಾಯಿತು. ಹೀಗೆ ಇರುವಲ್ಲಿ, ಮತ್ತೊಂದು ದಿವಸ ತಂದೆಯ ದರುಶನಕ್ಕೆ ಲಂಕೆಯಿಂದ ಬಂದು ಹೋಗುವ ವೈಶ್ರವಣನನ್ನು ಕಂಡು, ಕೈಕಸೆಯು ತನ್ನ ಹಿರೀ ಮಗನನ್ನು ನೋಡಿ—ಎಲೇ, ದಶಮುಖಾ, ಬ್ರಹ್ಮನ ಕುಲದಲ್ಲಿ ಹುಟ್ಟಿದ್ದಕ್ಕೆ, ಈ ಕುಬೇರನ ಹಾಗೆ ತುಂಬ ಐಶ್ವರ್ಯವುಳ್ಳವನಾದರೆ, ಸಫಲವು. ಹಾಗಾಗದಿದ್ದರೆ, ಯಲಹದ ಮರವು ಕಾಯಿಯಾದಂತೆ ಆಗುವದು ಎನಲು; ಆ ದಶಮುಖನು—ಎಲೇ, ತಾಯಿಯೇ, ನಾನು ಹೆಚ್ಚು ಮಾತುಗಳನ್ನಾಡಿದರೆ, ನನ್ನನ್ನು ಗಳಹನು ಅನ್ನುವಿರಿ. ಈಗ ತಪಸ್ಸನ್ನು ಮಾಡುವೆನು; ನಿಮ್ಮ ದಯದಿಂದ ನಮ್ಮ ಮುತ್ತಜ್ಜನಾದ ಬ್ರಹ್ಮನನ್ನು ಮೆಚ್ಚಿಸಿ, ಬಹು ವರಗಳನ್ನು ಪಡೆದು, ಈ ನಮ್ಮ ಅಣ್ಣನಾದ ಕುಬೇರನ ಭಾಗ್ಯಕ್ಕೆ ಮಿಗಿಲಾದ ಭಾಗ್ಯವಂತನೆಂದು ಎನಿಸಿ ಕೊಳ್ಳುವೆನು ಎಂಬದಾಗಿ ಹೇಳಿ, ಸಹೋದರರೊಡನೆ ಕೂಡಿ, ಪಡುವಣ ಕಡಲ ಧ

ಡದಲ್ಲಿರುವ ಗೋಕರ್ಣವೆಂಬ ಪುಣ್ಯಾಶ್ರಮಕ್ಕೆ ಬಂದನು. ಆ ಆಶ್ರಮದಲ್ಲಿ ವಿವಿಧ ಶಾಸ್ತ್ರೋಕ್ತವಾದ ವಿಧಾನಗಳಿಂದಲೂ ನೇಮಗಳಿಂದಲೂ ಮೂರು ಮಂದಿ ಸಹೋದರರು ನಿಶ್ಚಲಚಿತ್ತರಾಗಿ, ಕಣ್ಣು, ಮೂಗು, ಕಿವಿ, ನಾಲಿಗೆ, ಚರ್ಮಗಳೆಂಬ ಐದು ಇಂದ್ರಿಯಗಳನ್ನು ರೂಪು, ವಾಸನೆ, ಶಬ್ದ, ರಸ, ಸ್ಪರ್ಶ ಗಳೆಂಬ ಅವುಗಳ ವಿಷಯದಲ್ಲಿ ಬಿಡದೆ, ನಿರಾಹಾರಿಗಳಾಗಿ, ಏಕೋ ಭಾವದಿಂದ ತಪಸ್ಸನ್ನು ಮಾಡಿದರು. ಅವರೊಳಗೆ ದಶಮುಖನು ಮಳೆಗಾಲದಲ್ಲಿಯೂ ಛಳಿ ಗಾಲದಲ್ಲಿಯೂ ಬೆಟ್ಟಗಳ ತೊಪ್ಪಲುಗಳಲ್ಲಿರುವ ಹೊಳೆಗಳಲ್ಲಿ ನಿಂತು, ಬೇಸಿ ಗೇ ಕಾಲಗಳಲ್ಲಿ ಪಂಚಾಗ್ನಿಗಳ ನಡುವೆ ನಿಂತು, ಘೋರವಾದ ತಪಸ್ಸನ್ನು ಮಾಡಿದನು. ಕುಂಭಕರ್ಣನು ಒಂದೇ ಕಾಲಿನಲ್ಲಿ ನಿಂತು, ತಪಸ್ಸನ್ನು ಮಾ ಡಿದನು. ವಿಭೀಷಣನು ತಲೆಯನ್ನು ಎತ್ತಿ, ಸೂರ್ಯನನ್ನು ನೋಡುತ್ತಾ, ತಪ ಸ್ಸನ್ನು ಮಾಡಿದನು.

ಮತ್ತು ದಶಮುಖನು ಒಂದೊಂದು ವರುಷದ ಕಡೇ ದಿನದಲ್ಲಿ ತನ್ನ ಒಂ ಗೊಂದು ತಲೆಯನ್ನು ಕಡಿದು, ಅಗ್ನಿಯಲ್ಲಿ ಹೋಮವನ್ನು ಮಾಡುತ್ತಾ, ಹೀಗೆ ಒಂಭತ್ತು ತಲೆಗಳನ್ನು ಕಡಿದು, ಅಗ್ನಿಯಲ್ಲಿ ಒಂಭತ್ತು ವರುಷ ಹೋಮಾ ಮಾ ಡಿ, ಹತ್ತನೇ ವರುಷದ ಕಡೆಯಲ್ಲಿ ಹತ್ತನೇ ತಲೆಯನ್ನು ಕಡಿಯುವದಕ್ಕೆ ಪ್ರ ಯತ್ನ ಮಾಡಲು, ಅವನ ಬಳಿಗೆ ಬ್ರಹ್ಮದೇವನು ಬಂದು—ಎಲೈ, ಮಗನೇ, ದಶಮುಖಾ, ಬಹಳ ಬಳಲಿದೆ. ವರಗಳನ್ನು ಕೇಳು; ಕೊಡುವೆನು, ಎನಲು; ದಶವದನನು ಕಣ್ದೆರೆದು ನೋಡಿ, ತನ್ನ ಮುತ್ತಜ್ಜನನ್ನು ಕಂಡು, ಆತನ ಕಾ ಲಿಗೆ ತನ್ನ ಹಣೆಯನ್ನು ಚಾಚಿ, ಕೈ ಮುಗಿದು ಕೊಂಡು—ಎಲೈ, ಕರುಣಾ ಳುವೇ, ಸುರರು, ಉರಗರು, ಯಕ್ಷರು, ರಾಕ್ಷಸರು, ಗರುಡರು, ಗಂಧರ್ವರು, ಸಿದ್ಧರು, ಸಾಧ್ಯರು, ಇವರೇ ಮೊದಲಾದ ದೇವ ದಾನವರಿಂದ ನನಗೆ ಸಾವು ಉಂಟಾಗದಂತೆ ವರವನ್ನು ಕೊಡು. ಉಳಿದ ಮೃಗ ಪಕ್ಷಿಗಳೂ ಮನುಷ್ಯರೂ ನನಗೆ ಸಮರಲ್ಲ ಎಂದು ಹೇಳಲು; ಚತುರ್ಮುಖನು—ಹಾಗೆಯೇ ಆಗಲೆಂದು, ವರವನ್ನು ಕೊಟ್ಟು, ಅವನು ಕೇಳದೆ, ತಾನಾಗಿ—ನೀನು ಕಡಿದು ಹೋಮಾ ಮಾಡಿದ ತಲೆಗಳು ತಿರಿಗಿ ಹುಟ್ಟಲಿ. ಮುಂದೆ ನಿನ್ನ ತಲೆಯನ್ನು ಯಾರು ಕಡಿ ದಾಗ್ಯೂ ಹುಟ್ಟುತ್ತಿರಲಿ, ಎಂದು ವರಗಳನ್ನು ಕೊಟ್ಟು, ವಿಭೀಷಣನು ಇದ್ದ ಸ್ಥಳಕ್ಕೆ ಬಂದು—ಎಲೈ, ಮಗನೇ, ವಿಭೀಷಣನೇ, ತಪಸ್ಸಿನಿಂದ ಬಹಳ ಬಳಲಿ ದೆಯಲ್ಲಾ! ಕಂದಾ, ಕುಲ ಶಿರೋಮಣಿಯೇ, ವರಗಳನ್ನು ಬೇಡು, ಎನಲು; ಅವನು ಮುತ್ತಾತನಡಿಗೆ ನಮಸ್ಕರಿಸಿ, ಕೈಗಳನ್ನು ಮುಗಿದು—ಎಲೈ, ಮುತ್ತಾ

ತನೇ, ನಿನ್ನ ಪಾದವನ್ನು ನಾನು ಕಂಡೆನಲ್ಲಾ; ಕೃತ ಕೃತ್ಯನಾದೆನು. ಎಲೈ, ದೇವಾ, ನನಗೆ, ಎಂಥ ಆಪತ್ತಿನಲ್ಲಿಯೂ, ಧರ್ಮವನ್ನು ನಾನು ಬಿಡದೆ ಇರುವ ಹಾಗೆ ವರವನ್ನು ಕೊಡು. ಮತ್ತು ಅಭ್ಯಾಸವನ್ನು ಮಾಡದೆ, ನಿನ್ನ ಬ್ರಹ್ಮಾಸ್ತ್ರವೇ ಮೊದಲಾದ ಸಕಲ ದೇವತಾ ಮಂತ್ರಾಸ್ತ್ರಗಳ ಸಂಧಾನವನ್ನೂ ಉಪಸಂಹಾರವನ್ನೂ ಮಾಡುವ ವಿದ್ಯೆಯು ನನಗೆ ಲಭಿಸುವ ಹಾಗೆ ವರವನ್ನು ಕರುಣಿಸ ಬೇಕು, ಎಂದು ಬೇಡಿ ಕೊಂಡನು. ಆಗ ಬ್ರಹ್ಮನು ಅವನು ಕೇಳಿದ ಎರಡು ವರಗಳನ್ನು ಕೊಟ್ಟು—ಸ್ಥಿರ ಜೀವಿಯಾಗಿರು ಎಂದು, ತಾನಾಗಿ ಮತ್ತೊಂದು ವರವನ್ನು ಕೊಟ್ಟನು.

ಅನಂತರದಲ್ಲಿ ಬ್ರಹ್ಮನು ಕುಂಭಕರ್ಣನು ಇರುವ ತಪೋ ವನಕ್ಕೆ, ಆತನಿಗೆ ವರವನ್ನು ಕೊಡ ಬೇಕು ಎಂದು, ಬರುತ್ತಿರಲು; ಇಂದ್ರಾದಿ ದೇವತೆಗಳೆಲ್ಲಾ ಬಂದು, ದೇವನೇ, ಕುಂಭಕರ್ಣನಿಗೆ ವರವನ್ನು ಕೊಡುವದು ಉಚಿತವಲ್ಲ. ಮೂರು ಲೋಕದವರನ್ನೆಲ್ಲಾ ತಿನ್ನುವನು. ಇಂಥ ಸ್ವಭಾವವುಳ್ಳವನಿಗೆ ನೀನು ತಿರಿಗಿ ವರವನ್ನು ಕೊಟ್ಟರೆ, ಒಂದೇ ದಿವಸದಲ್ಲಿ ಲೋಕಗಳೆಲ್ಲಾ ಹಾಳಾಗುವವು ಎಂದು, ಕೈ ಮುಗಿದು, ಬೇಡಿ ಕೊಳ್ಳಲು; ಬ್ರಹ್ಮ ದೇವರು ಸರಸ್ವತಿಯನ್ನು ಬರ ಮಾಡಿ—ಎಲೈ, ಸರಸ್ವತಿಯೇ, ನೀನು ಈ ಕುಂಭಕರ್ಣನ ಹೃದಯದಲ್ಲಿ ಸೇರಿ ಕೊಂಡು, ದೇವತೆಗಳಿಗೆ ಹಿತವಾಗುವಂತೆ ಆ ಖಳನು ವರವನ್ನು ಕೇಳುವ ಹಾಗೆ ಮಾಡು ಎಂದು, ಹೇಳಿ ಕಳುಹಿಸಲು; ಅವಳು ಆತನ ಹೃದಯವನ್ನು ಹೊಕ್ಕು, ಅವನಿಗೆ ವಿಕಲ್ಪವಾದ ಬುದ್ಧಿಯನ್ನು ಉಂಟು ಮಾಡಿದಳು. ಆ ವೇಳೆಯಲ್ಲಿ ಬ್ರಹ್ಮನು ಕುಂಭಕರ್ಣನ ಬಳಿಗೆ ಬಂದು—ಎಲೈ, ಖಳ ಶಿರೋಮಣಿಯೇ, ನಿನ್ನ ತಪಸ್ಸಿಗೆ ನಾನು ಮೆಚ್ಚಿದೆನು. ವರಗಳನ್ನು ಬೇಡು, ಕೊಡುವೆನು, ಎನಲು; ಆ ಕುಂಭಕರ್ಣನು—ಎಲೈ, ಬ್ರಹ್ಮನೇ, ನಾನು ಬಹು ಕಾಲ ನಿದ್ರೆಯನ್ನು ಅನುಭವಿಸುತ್ತಿರುವ ಹಾಗೆ ವರವನ್ನು ಕರುಣಿಸೆನಲು; ಚತುರ್ಮುಖನು—ಹಾಗೆಯೇ ಆಗಲಿ ಎಂದು ಹೇಳಿ, ಸರಸ್ವತೀ ಸಮೇತನಾಗಿ ಸತ್ಯಲೋಕಕ್ಕೆ ಹೊರಟು ಹೋದನು. ಆ ಮೇಲೆ ಸರಸ್ವತಿಯಿಂದ ಬಿಡಲ್ಪಟ್ಟ ಕುಂಭಕರ್ಣನು ದೇವತೆಗಳ ಮೋಸದಿಂದ ತನಗೆ ಇಂಥ ಬುದ್ಧಿ ಉಂಟಾಯಿತು ಎಂದು, ತನ್ನ ದುಷ್ಕೃತವನ್ನು ಬೈದು ಕೊಂಡನು. ಅನಂತರದಲ್ಲಿ ಆ ಮೂರು ಮಂದಿ ಸಹೋದರರು ಬ್ರಹ್ಮ ದೇವರಿಂದ ವರಗಳನ್ನು ಪಡೆದು,—ಮುಂದೆ ನಾವು ಮಾಡ ತಕ್ಕ ಕಾರ್ಯವೇನೆಂದು, ಶ್ಲೇಷ್ಮಾತಕವೆಂಬ ವನದಲ್ಲಿ ಯೋಚಿಸುತ್ತಾ ಇರುತ್ತಿದ್ದರು.

ಆ ಬಳಿಕ ತನ್ನ ಮಗಳ ಮಕ್ಕಳು ಬ್ರಹ್ಮನಿಂದ ವರಗಳನ್ನು ಪಡೆದ ಸುದ್ದಿಯನ್ನು ಕೇಳಿ, ಸುಮಾಲಿಯು ರಸಾತಲದಿಂದ ಬಹಳ ಸಂತೋಷದಲ್ಲಿ ಮಹೋದರ, ವಜ್ರದಂಷ್ಟ್ರ, ಸುಪಾರ್ಶ್ವ, ಮಾರೀಚ, ಪ್ರಹಸ್ತ, ಅಕಂಪ, ಧೂಮ್ರಾಕ್ಷ, ವಿಕಟ, ಸಂಪಾತಿ, ಶುಕ, ಸಾರಣರೇ ಮೊದಲಾದ ತನ್ನ ಮಕ್ಕಳೂ ಮೊಮ್ಮಕ್ಕಳೂ ಮಗಳ ಮಕ್ಕಳೂ ದಾಯಾದಿಗಳೂ ನಂಟರೂ ಇಷ್ಟರೊಡನೆ ದಶಮುಖನು ಇರುವ ಬಳಿಗೆ ಬಂದು, ದೌಹಿತ್ರರಾದ ಮೂರು ಮಂದಿಯನ್ನು ಕಾಣಿಸಿ ಕೊಳ್ಳಲು; ಅವರು ತಮ್ಮ ಮಾತಾಮಹನಿಗೆ ನಮಸ್ಕಾರವನ್ನು ಮಾಡಿ, ವಿನಯದಿಂದ ನಿಂತು ಇರಲು; ಸುಮಾಲಿಯು ಅವರನ್ನು ಬಿಗಿದಪ್ಪಿ, ಹರಸಿ, ದಶಮುಖನನ್ನು ನೋಡಿ,—ತಂದೆಯೇ, ತಮ್ಮಂದಿರೊಡನೆ ತಪಸ್ಸು ಮಾಡಿ, ವರವನ್ನು ಪಡೆದು, ಭಯವೆಂಬ ಸಮುದ್ರದಲ್ಲಿ ಮುಳುಗಿ ಇದ್ದ ರಾಕ್ಷಸ ಸಮೂಹವನ್ನು ಮೇಲಕ್ಕೆ ಎತ್ತಿ, ಕಾಪಾಡಿದೆ. ಇಗೋ, ಈ ಮಹೋದರನು, ಈ ಪ್ರಹಸ್ತನು, ಈ ಮಾರೀಚನು, ಈ ಸುಪಾರ್ಶ್ವಕನು, ಇವರು ಐದು ಜನವು ನಿನಗೆ ಸೋದರಮಾವಂದಿರು; ಸಾಮ ದಾನೋಪಾಯಗಳಲ್ಲಿ ಸಮರ್ಥರು. ಇವರೆಲ್ಲ ನಿನಗೆ ವಿಧೇಯರಾಗಿ ಇರುವರು. ಮೊದಲು ಲಂಕಾ ಪಟ್ಟಣವು ನಾವು ಕಟ್ಟಿದ್ದು. ಆದರೆ ವಿಷ್ಣುವಿನ ಭಯದಿಂದ ನಾವು ಅಲ್ಲಿ ನಿಲ್ಲಲಾರದೆ, ರಸಾತಲಕ್ಕೆ ಓಡಿ ಹೋದೆವು. ಆ ಸಮಯವನ್ನು ನೋಡಿ, ನಿನ್ನ ಬಲ ತಾಯಿಯ ಮಗನಾದ ಕುಬೇರನು ಆ ಲಂಕೆಯಲ್ಲಿ ಇದ್ದು ಕೊಂಡು ಇದ್ದಾನೆ. ನೀನು ನನಗೆ ದೌಹಿತ್ರನಾದ್ದರಿಂದ, ಆತನನ್ನು ಅಲ್ಲಿಂದ ಹೊರಡಿಸಿ ಲಂಕೆಯನ್ನು ಸ್ವಾಧೀನಾ ಮಾಡಿ ಕೊಂಡು, ಲಂಕಾ ಪಟ್ಟಣದಲ್ಲಿ ರಾಜ್ಯ ಭಾರಾ ಮಾಡಿ ಕೊಂಡಿರು, ಅಂದನು.

ಆ ಮಾತನ್ನು ಕೇಳಿ, ದಶಮುಖನು—ಎಲೈ, ಮಾತಾಮಹನೇ, ನೀನು ಹೇಳಿದ ಮಾತು ನಿಜವೇ ಸರಿ! ಆದರೂ ಕುಬೇರನು ನನ್ನ ಅಣ್ಣನಲ್ಲವೇ? ಆತನನ್ನು ಹೊರಡಿಸಿ, ನಾನು ಅಲ್ಲಿ ಇರುವದು ಉಚಿತವೇ? ಹೇಳು, ಎನಲು; ಸುಮಾಲಿಯು ಗಹಗಹಿಸಿ ನಗುತ್ತಾ—ಇಂಥ ಮಾತು ನೀನಾಡ ಬಹುದೇ? ಸವತಿಗಳ ಮಕ್ಕಳಿಗೆ ಸ್ವಭಾವ ವೈರವು ಎಂದು, ನೀತಿ ಶಾಸ್ತ್ರದಲ್ಲಿ ಹೇಳಿ ಇದೆ. ನಿನಗೆ ಕುಬೇರನು ಹಗೆಯೇ ಹೊರ್ತು, ಅಣ್ಣನೆಂದು ಭಾವಿಸ ಬಾರದು. ಇಗೋ, ಈ ಸಾಮ್ಯವನ್ನು ಕೇಳು. ಕಶ್ಯಪ ಮುನಿಗೆ ಅದಿತಿಯೂ ದಿತಿಯೂ ಎಂಬ ಇಬ್ಬರು ಹೆಂಡರು. ಅದಿತಿಯಲ್ಲಿ ದೇವತೆಗಳು ಹುಟ್ಟಿದರು; ದಿತಿಯಲ್ಲಿ ದೈತ್ಯರು ಹುಟ್ಟಿದರು. ಈಗ ಅವರಿಬ್ಬರಿಗೂ ಹ್ಯಾಗಿದೆ? ನೋಡು! ಪೂರ್ವ

ದೇವರಾದ ದೈತ್ಯರನ್ನು ದೇವತೆಗಳು, ಅಗ್ರಜರೆಂದು, ಕೊಲ್ಲದೆ ಬಿಟ್ಟರೇ? ಈಗ ನೀನು ಅಣ್ಣನೆಂದು ಹಿಮ್ಮೆಟ್ಟಿದರೆ, ಕುಬೇರನು ನಿನ್ನನ್ನು ಕೊಂದು ಹಾಕದೆ ಇರುವನೇ? ನಾನು ಹೇಳಿದ ಹಾಗೆ ಮಾಡು, ಅಂದನು. ಆಗ ಖೂಳನಾದ ದಶಕಂಠನು ಆ ಮಾತಿಗೆ ಒಪ್ಪಿ ಕೊಂಡು, ಪ್ರಹಸ್ತನನ್ನು ಕರೆದು—ಎಲೈ, ಸೋದರಮಾವನೇ, ನೀನು ನಮ್ಮ ಅಣ್ಣನ ಬಳಿಗೆ ಹೋಗಿ—ನೀನು ಇರುವ ಈ ಲಂಕಾ ಪಟ್ಟಣವು ನಮ್ಮ ಮಾತಾಮಹರು ಸಂಪಾದಿಸಿದ್ದು. ಅದು ನನಗೆ ಸಲ್ಲ ತಕ್ಕದ್ದು. ನೀನು ಅದನ್ನು ಬಿಡ ಬೇಕು ಎಂದು, ನಾನು ಹೇಳಿದ್ದಾಗಿ, ಸಾಮದಲ್ಲಿ ಹೇಳು ಎಂದು, ಹೇಳಿ ಕಳುಹಿಸಿದನು. ಪ್ರಹಸ್ತನು ಅದೇ ಪ್ರಕಾರ ಹೋಗಿ, ಲಂಕೆಯಲ್ಲಿ ಇದ್ದ ಕುಬೇರನಿಗೆ ತಿಳಿಸಲು; ಆತನು ಅರೆ ಘಳಿಗೆ ಆಲೋಚಿಸಿ, ಪ್ರಹಸ್ತನನ್ನು ಲಂಕೆಯಲ್ಲಿಯೇ ಇಟ್ಟು, ಬೇಗ ತಂದೆಯಾದ ವಿಶ್ರವಸ್ಸಿನ ಬಳಿಗೆ ಬಂದು, ದಶಮುಖನು ಹೇಳಿ ಕಳುಹಿಸಿದ ಸುದ್ದಿಯನ್ನು ಬಿನ್ನವಿಸಲು; ಆ ಮುನಿಯು—ಕೇಳು, ಮಗನೇ, ಆ ದಶಕಂಠನು ಕೆಟ್ಟವನು. ಆದ್ದರಿಂದ ನೀನು ಲಂಕೆಯನ್ನು ಬಿಟ್ಟು, ಕೈಲಾಸ ಪರ್ವತಕ್ಕೆ ಹೋಗಿ, ಅಲ್ಲಿ ಒಂದು ಪಟ್ಟಣವನ್ನು ಮಾಡಿ ಕೊಂಡು, ಬಡಗ ದಿಕ್ಕಿಗೆ ಅಧಿಪತಿಯಾಗಿರು. ನಿನಗೆ ಶಿವನ ಸ್ನೇಹವು ಉಂಟಾಗುವದು ಎಂದು ಹೇಳಿದನು. ತರುವಾಯ ಕುಬೇರನು ತಂದೆಗೆ ನಮಸ್ಕರಿಸಿ, ಲಂಕೆಗೆ ಬಂದು, ಪ್ರಹಸ್ತನನ್ನು ಕುರಿತು—ಎಲೈ, ಮಂತ್ರಿಯೇ, ದಶಕಂಠನು ಹೇಳಿ ಕಳುಹಿಸಿದ ಮಾತು ಯುಕ್ತವೇ ಸರಿ! ಇಗೋ, ನಾನು ಹೊರಟು ಹೋಗುವೆನು. ಸುಖದಲ್ಲಿ ಬಂದು ಇರ ಹೇಳು ಎಂದು, ಆ ಪ್ರಹಸ್ತನನ್ನು ಕಳುಹಿಸಿ, ತಾನು ತನ್ನ ಪರಿವಾರ ಸಮೇತನಾಗಿ ವಿಮಾನವನ್ನೇರಿ ಕೊಂಡು, ಲಂಕೆಯನ್ನು ಬಿಟ್ಟು, ಕೈಲಾಸ ಪರ್ವತಕ್ಕೆ ಬಂದು, ವಿಶ್ವಕರ್ಮನಿಂದ ಅಲ್ಲಿ ಒಂದು ಪಟ್ಟಣವನ್ನು ಮಾಡಿಸಿ, ಅದಕ್ಕೆ ಅಳಕಾಪುರವೆಂದು ಹೆಸರಿಟ್ಟು, ಶಿವನ ಸ್ನೇಹವನ್ನು ಸಂಪಾದಿಸಿ ಕೊಂಡು, ಸುಖದಲ್ಲಿ ಇದ್ದನು.

ಇತ್ತ ಆ ಪ್ರಹಸ್ತನು ದಶಮುಖನ ಬಳಿಗೆ ಬಂದು—ನೀನು ಹೇಳಿ ಕಳುಹಿಸಿದ ಮಾತ್ರದಲ್ಲಿಯೇ ಕುಬೇರನು ಹೆದರಿ, ಓಡಿ ಹೋದನು ಎಂದು ಹೇಳಲು; ದಶಗ್ರೀವನು ಸಂತೋಷದಿಂದ ರಾಕ್ಷಸರ ಪರಿವಾರದೊಡನೆ ಕೂಡಿ, ಹಿಮವತ್ಪರ್ವತದ ಗುಹೆಯನ್ನು ಸಿಂಹವು ಹೊಗುವಂತೆ, ಲಂಕೆಯನ್ನು ಹೊಕ್ಕನು. ಆಗ ಸುಮಾಲಿ ಮಾಲ್ಯವಂತರನ್ನು ಕೂಡಿ ಕೊಂಡು, ಪ್ರಹಸ್ತ ಮಾರೀಚ ಮುಂತಾದ ಮಂತ್ರಿಗಳು ದಶಮುಖನಿಗೆ ರಾಕ್ಷಸ ರಾಜ್ಯಾಧಿಪತ್ಯಕ್ಕೆ ಪಟ್ಟಾ

ಭಿಷೇಕವನ್ನು ಮಾಡಿದರು. ಆ ಮೇಲೆ ದಶಮುಖನು ತನ್ನ ತಂಗಿಯಾದ ಶೂರ್ಪನಖಿಯನ್ನು ಕಾಲಕೇಯರೆಂಬ ಅಸುರರಲ್ಲಿ ಬಹಳ ಬಲಿಷ್ಠನಾದ ವಿದ್ಯುಜ್ಜಿಹ್ವನೆಂಬವನಿಗೆ ಅತಿ ವಿಭವದಿಂದ ಮದುವೆಯನ್ನು ಮಾಡಿ ಕೊಟ್ಟು, ಲಂಕಾ ಪಟ್ಟಣವನ್ನು ಸುಖದಿಂದ ಆಳಿ ಕೊಂಡು ಇದ್ದನು.

ಹೀಗಿರುವಲ್ಲಿ ಒಂದಾನೊಂದು ದಿವಸ ದಶಕಂಠನು, ಬೇಟೆಯಾಡ ಬೇಕೆಂದು ಅಪೇಕ್ಷಿಸಿ, ಕಾಡುಗಳನ್ನೂ ಬೆಟ್ಟ ಗುಡ್ಡಗಳನ್ನೂ ಬೇಟೆಗಾರರೊಡನೆ ಕೂಡಿ ತಿರುಗುತ್ತಾ, ನಾನಾ ವಿಧವಾದ ಮೃಗ ಜಾತಿಗಳನ್ನು ಕೊಲ್ಲುತ್ತಾ ಬರುತ್ತಿರಲು; ಒಂದು ಸ್ಥಳದಲ್ಲಿ ತನ್ನ ಮಗಳೊಡನೆ ಕೂಡಿ ಕೊಂಡು ಇರುವ ಮಯನೆಂಬವನನ್ನು ಕಂಡು,—ನೀನು ಯಾರು? ಈ ಕಾಡಿನಲ್ಲಿ ನೀನು ಇರುವದಕ್ಕೆ ಕಾರಣವೇನು? ಈ ಹೆಂಗಸು ಯಾರ ಮಗಳು? ನಿನ್ನ ಉದ್ಯೋಗವೇನು? ಎಂದು ಕೇಳಲು; ಮಯನು—ಎಲೈ, ವೀರನೇ, ಕೇಳು. ನನ್ನನ್ನು ಮಯನೆಂದು ಕರೆಯುವರು. ನನ್ನ ದುಃಖವನ್ನು ಯಾರಲ್ಲಿ ಹೇಳಿ ಕೊಳ್ಳಲಿ? ಆದರೂ ಹೇಳುತ್ತೇನೆ; ಕೇಳು. ಅಪ್ಸರ ಸ್ತ್ರೀಯರೊಳಗೆ ಶ್ರೇಷ್ಠೆಯಾದ ಹೇಮೆ ಎಂಬ ಅಪ್ಸರ ಕನ್ನಿಕೆಯನ್ನು ಕೇಳಿ ಬಲ್ಲೆಯಷ್ಟೆ? ದೇವತೆಗಳು ಪ್ರೀತಿಯಿಂದ ಆಕೆಯನ್ನು ನನಗೆ ಹೆಂಡತಿಯಾಗಿ ಕೊಟ್ಟರು. ಆ ಸ್ತ್ರೀಯೊಡನೆ ನಾನು ಐನೂರು ವರ್ಷಗಳ ಪರ್ಯಂತರವೂ ಸುಖವಾಗಿ ಇದ್ದೆನು. ಆ ಮೇಲೆ ನನ್ನ ನಿರ್ಭಾಗ್ಯತನದಿಂದ ಆಕೆಯ ವಿಯೋಗವು ಉಂಟಾಯಿತು. ಆ ಹೆಂಗಸಲ್ಲಿ ಮಾಯಾವಿ, ದುಂದುಭಿ ಎಂಬ ಇಬ್ಬರು ಗಂಡು ಮಕ್ಕಳೂ, ಚಂದ್ರವದನೆಯಾದ ಈ ಮಂಡೋದರಿ ಎಂಬ ಹೆಣ್ಣು ಮಗಳೂ ಹುಟ್ಟಿದರು. ಪ್ರಿಯಳಾದ ಹೆಂಡತಿಯ ವಿಯೋಗದಲ್ಲಿ ಯಾವವನು ತಾನೇ ಬದುಕುವನು? ನಾನು ಮೊದಲು ಆ ಹೇಮೆಯನ್ನು ಮದುವೆಯಾದಾಗ, ಮಾಯೆಯಿಂದ ಹೇಮ ಎಂಬ ಪುರವನ್ನು ನಿರ್ಮಿಸಿ ಕೊಂಡು, ಸುಖವಾಗಿದ್ದೆನು. ಈಗ ದುಃಖದಿಂದ ಆ ಪಟ್ಟಣವನ್ನು ಬಿಟ್ಟು, ಈ ಮಗಳನ್ನು ಕೈ ಹಿಡಿದು ಕೊಂಡು, ದೊಡ್ಡ ವಂಶದಲ್ಲಿ ಹುಟ್ಟಿದ ಒಂದು ವರಕ್ಕೆ ಈಕೆಯನ್ನು ಕೊಡ ಬೇಕೆಂದು, ಈ ಕಾಡಿನಲ್ಲಿ ಸೇರಿ ಕೊಂಡು ಇದ್ದೇನೆ. ನೀನು ಯಾರು? ಎಂದು ಕೇಳಲು; ದಶಮುಖನು—ಎಲೈ, ಮಯನೇ, ಕೇಳು. ನಾನು ಪುಲಸ್ತ್ಯ ಮಹಾ ಮುನಿಯ ಮಗನಾದ ವಿಶ್ರವಸ್ಸಿನ ತನಯನು. ನನ್ನನ್ನು ದಶಕಂಠನೆಂದು ಕರೆಯುವರು, ಎಂದು ಹೇಳಲು; ಆ ಮಾತನ್ನು ಕೇಳಿ,—ಈಗ ನನ್ನ ಇಷ್ಟಾರ್ಥವು ಸಿದ್ಧಿಸಿತು. ಈ ಮಗಳಿಗೆ ತಕ್ಕ ವರನು ದೊರಕಿದನು ಎಂದು, ಮನಸ್ಸಿನಲ್ಲಿ ಯೋಚಿಸಿ, ದಶಗ್ರೀವನನ್ನು

ಕುರಿತು—ಎಲೈ, ಮಹಾತ್ಮನೇ, ಬ್ರಹ್ಮನ ಕುಲದಲ್ಲಿ ಹುಟ್ಟಿದ ನಿನಗಿಂತ ಒಳ್ಳೆ ಕುಲಸ್ಥರು ಮತ್ತೆ ಯಾರುಂಟು? ಈ ನನ್ನ ಮಗಳನ್ನು ನೀನು ಮದುವೆಯಾಗು ಎಂದು ಹೇಳಲು; ದಶವದನನು—ಹಾಗೆ ಆಗಲಿ ಎಂದು ಒಪ್ಪಿ ಕೊಂಡನು. ಆ ಮಯನ ಮಾಯಾ ಬಲವೆಷ್ಟೋ! ಆ ಕ್ಷಣದಲ್ಲಿಯೇ ಚಂದವಾದ ಮದುವೆಯ ಮಂಟಪವು ಉಂಟಾಯಿತು. ಆಗ ಮಯನು ಅನೇಕ ಬ್ರಾಹ್ಮಣರನ್ನು ಕರಿಸಿ, ವೈದಿಕ ವಿಧಾನದಲ್ಲಿ ಅಗ್ನಿಯಲ್ಲಿ ಹೋಮವನ್ನು ಮಾಡಿ, ತನ್ನ ಮಗಳಾದ ಮಂಡೋದರಿಯನ್ನು ಮದುವೇ ಮಾಡಿ ಕೊಟ್ಟು, ಅಳಿಯನಿಗೆ ಬಲುವಳಿಯಾಗಿ ಒಂದು ಶಕ್ತಿಯನ್ನು ಕೊಟ್ಟು, ಆಕಾಶ ಮಾರ್ಗಕ್ಕೆ ಹೊರಟು ಹೋದನು. ಆ ಮೇಲೆ ದಶಗ್ರೀವನು ಹೆಂಡತಿಯನ್ನು ಕರೆದು ಕೊಂಡು, ಲಂಕೆಗೆ ಬಂದು, ತನ್ನ ತಮ್ಮನಾದ ಕುಂಭಕರ್ಣನಿಗೆ ಪಾರೋಚನನ ಮಗಳ ಮಗಳಾದ ವಜ್ರಜ್ವಾಲೆ ಎಂಬವಳನ್ನೂ ಕಿರೀ ತಮ್ಮನಾದ ವಿಭೀಷಣನಿಗೆ ಶೈಲೂಷನೆಂಬ ಗಂಧರ್ವನ ಮಗಳಾದ ಸರಮೆ ಎಂಬವಳನ್ನೂ, ಅತಿ ಸಂಭ್ರಮದಿಂದ ಮದುವೇ ಮಾಡಿದನು.

ತರುವಾಯ ಕೆಲವು ದಿವಸದ ಮೇಲೆ, ಮಂಡೋದರಿಯು ಗಂಡು ಶಿಶುವನ್ನು ಹೆತ್ತಳು. ಆ ಕೂಸು ಅತ್ತ ಧ್ವನಿಯು ಗುಡುಗಿಗಿಂತ ಬಹು ದೊಡ್ಡದಾದ್ದರಿಂದ, ಅವನಿಗೆ ಮೇಘನಾದನೆಂದು, ದಶವದನನು ಹೆಸರನ್ನಿಟ್ಟನು. ಕುಂಭಕರ್ಣನು ಬ್ರಹ್ಮನು ಕೊಟ್ಟ ವರದಿಂದ ನಿದ್ರೆಯ ಭಾರವು ಹೆಚ್ಚಾಗಿ, ದಶಕಂಧರನ ಬಳಿಗೆ ಬಂದು,—ನನ್ನನ್ನು ನಿದ್ರೆಯು ಬಾಧಿಸುತ್ತದೆ. ನನಗೆ ಒಂದು ಮಲಗುವ ಮನೆಯನ್ನು ಮಾಡಿಸಿ ಕೊಡು ಎಂದು ಕೇಳಲು; ಆತನು ದೇವತೆಗಳ ಬಡಗಿಯಾದ ವಿಶ್ವಕರ್ಮನನ್ನು ಕರಿಸಿ, ಚಿನ್ನದ ಕಂಭಗಳಿಂದ ಕೂಡಿ ಇರುವ ನವರತ್ನ ಖಚಿತವಾದ ಮನೆಯನ್ನು ಮಾಡಿಸಿ ಕೊಟ್ಟನು. ಆ ಮನೆಯನ್ನು ನೋಡಿ, ಕುಂಭಕರ್ಣನು ಸಂತುಷ್ಟನಾಗಿ, ಅಲ್ಲಿ ಸಾವಿರಾರು ವರುಷ ಸುಖದಿಂದ ಮಲಗಿ ಕೊಂಡು ಇದ್ದನು.

ಇತ್ತ ದಶಕಂಧರನು ಶೌರ್‍ಯದ ಗರ್ವದಿಂದ ಮುನಿ ಜನಗಳನ್ನು ಕೊಲ್ಲುತ್ತಾ, ದಾನವ, ದೈತ್ಯ, ಸುರ, ನರ, ನಾಗ, ಕಿನ್ನರರ ಸಂದಣಿಗಳನ್ನು ಸವರುತ್ತಾ, ಕೆರೆ, ತೊರೆ, ಕಟ್ಟೆ, ಕಾಲುವೆ, ಮೊದಲಾದವುಗಳನ್ನು ಹಾಳು ಮಾಡುತ್ತಾ, ಹೊಳೆಗಳನ್ನು ಕದಡುತ್ತಾ, ಸೊಕ್ಕಿದ ಮದ್ದಾನೆಯ ಹಾಗೆ ಪರ್ವತಗಳ ಶಿಖರಗಳನ್ನು ಒದೆದು, ಕೆಡವುತ್ತಾ, ಪುರ ಗೋಪುರಗಳನ್ನು ಹಾಳು ಮಾಡುತ್ತಾ, ಯಾರೂ ಎದುರಿಲ್ಲದೆ ಮದೋನ್ಮತ್ತನಾಗಿರುತ್ತಿದ್ದನು.

ಹೀಗಿರುವಲ್ಲಿ ಕುಬೇರನು ತನ್ನ ತಮ್ಮನಾದ ದಶಮುಖನ ದುರ್ಮಾರ್ಗತನವನ್ನು ಕೇಳಿ—ಐಯೋ, ನಮ್ಮ ಕುಲದಲ್ಲಿ ಇಂಥ ದುಷ್ಟನು ಹುಟ್ಟಿದನಲ್ಲ! ಎಂದು, ಬಹಳ ವ್ಯಸನ ಪಡುತ್ತಾ, ಒಬ್ಬ ದೂತನನ್ನು ಕರೆದು—ಎಲೈ, ನೀನು ದಶಾನನನ ಬಳಿಗೆ ಹೋಗಿ, ಇಂಥ ದುರ್ಮಾರ್ಗತನವನ್ನು ಬಿಡು ಎಂದು, ನಾನು ಹೇಳಿದ್ದಾಗಿ ಹೇಳು ಎಂದು ಕಳುಹಿಸಿದನು. ಆತನು ಬಂದು, ದಶವದನನಿಗೆ ನಮಸ್ಕರಿಸಿ—ಕೇಳೈ, ರಾಕ್ಷಸೇಂದ್ರನೇ, ನಿಮ್ಮ ಅಣ್ಣನಾದ ಕುಬೇರನು ನಿನಗೆ ಹೇಳಿ ಕಳುಹಿಸಿರುವದನ್ನು ಕೇಳು. ಆತನು ಕೈಲಾಸ ಪರ್ವತದಲ್ಲಿ ಅಳಕಾವತಿ ಎಂಬ ಒಂದು ಪಟ್ಣವನ್ನು ಮಾಡಿ ಕೊಂಡು, ಹರನ ಸ್ನೇಹವನ್ನು ಸಂಪಾದಿಸಿ ಕೊಂಡು, ಸುಖವಾಗಿದ್ದಾನೆ. ನೀನು ಬ್ರಹ್ಮ ಕುಲದಲ್ಲಿ ಹುಟ್ಟಿ, ಮುನಿಗಳಿಗೂ ದೇವತೆಗಳಿಗೂ ಹೀಗೆ ಕೇಡು ಮಾಡುತ್ತಾ ಬಂದಲ್ಲಿ, ಇದರಿಂದ ನಿನಗೆ ಹಾನಿ ಬರುವದೇ ಹೊರ್ತು, ಸೌಖ್ಯವಾಗಲಾರದು. ಆದ್ದರಿಂದ ಇಂಥ ದುಷ್ಕೃತ್ಯವನ್ನು ಮಾಡದೆ, ಸನ್ಮಾರ್ಗದಲ್ಲಿ ನಡೆಯುತ್ತಾ, ಎಲ್ಲರಿಗೂ ಒಳ್ಳೆಯವನೆನ್ನಿಸಿ ಕೊಂಡು, ಸುಖವಾಗಿ ಬದುಕು ಎಂದು ಹೇಳಿ ಕಳುಹಿಸಿದನು, ಎನಲು; ಆ ಮಾತನ್ನು ಕೇಳಿ, ದಶಾನನನು ಕೋಪಾಟೋಪದಿಂದ ಆ ದೂತನನ್ನು ಕುರಿತು—ಏನೆಲೋ, ತಾನು ಹರಸಖನಾಗಿದ್ದೇನೆಂಬ ಗರ್ವದ ಬಲವನ್ನು ನನಗೆ ತಿಳಿಸು ಎಂದು, ನಿನ್ನನ್ನು ಕಳುಹಿಸಿದನೇ? ದೇವತೆಗಳಿಂದಲೂ, ಮುನಿಗಳಿಂದಲೂ, ನನಗೆ ಸಾವು ಬರುವದೇ? ಬಹಳ ಮಾತಿನಿಂದ ಏನು? ಅಣ್ಣನಾದರಾಗಲಿ. ಆತನನ್ನು ಮುಂಚೆ ಕೊಂದು, ಆ ಮೇಲೆ ಲೋಕಗಳನ್ನೆಲ್ಲಾ ನಾಶ ಮಾಡುವೆನು. ಲೋಕಪಾಲಕರನ್ನು ಯಮನ ಲೋಕಕ್ಕೆ ಸೇರಿಸುವೆನು. ಸುರನರೋರಗರನ್ನೂ ಇಂದ್ರ ಚಂದ್ರಾದಿತ್ಯರನ್ನೂ ಬಡಿಯುವೆನು ಎಂದು, ರಥವನ್ನು ಏರಿ, ಬಡಗಲ ದಿಕ್ಕಿಗೆ ಹೊರಟನು. ಅವನ ಸಂಗಡಲೇ ಆನೆ, ಕುದುರೆ, ತೇರು, ಕಾಲಾಳುಗಳು ಭೂಮಿ ತುಂಬುವ ಹಾಗೆ ಹೊರಟಿತು. ಮತ್ತು ಶುಕ ಸಾರಣ ಮೊದಲಾದ ಮಂತ್ರಿಗಳೂ ಸೇನಾಪತಿಗಳೂ ಸಂಗಡ ಹೊರಟರು. ಈ ಸೇನೆಯನ್ನು ಭೂಮಿಯೇ ಹೆತ್ತಿತೋ? ಎಂಟು ದಿಕ್ಕುಗಳೇನಾದರೂ ಈದವ್ವೋ? ಎನ್ನುವ ಹಾಗೆ ದಂಡು ಬರುತ್ತಿರಲು; ಆ ಸೇನೆಯು ಕಾಲು ಹೊಡತದಿಂದ ಎದ್ದ ಧೂಳು ಸೂರ್ಯನನ್ನು ಮುಚ್ಚಿ ಕೊಂಡಿತು. ಹೀಗೆ ಸಕಲ ಸನ್ನಾಹದಿಂದ ಗಿರಿ, ವನ, ಪಟ್ಣ, ನದ, ನದೀ, ಪ್ರದೇಶಗಳನ್ನು ಕಳೆದು, ಕೈಲಾಸ ಪರ್ವತ ತೊಪ್ಪಲಲ್ಲಿರುವ ಅಳಕಾವತಿಗೆ ಬಂದು, ಹೆಬ್ಬಾಗಿಲಲ್ಲಿ ನಿಂತು, ಬಾಗಲ ಕಾವಲುಗಾರರಲ್ಲಿ ಒಬ್ಬ ಯಕ್ಷನನ್ನು ದಶಾನನು ಕರೆದು—ಎಲೈ, ದ್ವಾರಪಾಲಕನೇ,

ನೀನು ನಿಮ್ಮ ಒಡೆಯನ ಬಳಿಗೆ ಹೋಗಿ—ದಶಕಂಠನು ಯುದ್ಧಕ್ಕೆ ಬಂದಿದ್ದಾನೆ. ನಿನ್ನನ್ನು ಬರ ಹೇಳಿದನೆಂದು, ತಿಳಿಸೆನಲು; ಅವನು ಕುಬೇರನ ಓಲಗದ ಚಾವಡಿಗೆ ಬಂದು, ಘಾಬರಿಯಿಂದ ಕೈ ಮುಗಿದು—ಏಳು, ಒಡೆಯನೇ, ದಶಾನನನೊಡನೆ ಕಾದು! ನಡೆ. ತೋಳ ತೀಟೆಯನ್ನು ನಮ್ಮಲ್ಲಿ ಕಳೆಯುವನಂತೆ. ನಮ್ಮ ಆಳುಗಳನ್ನು ಕೊಲ್ಲುವನಂತೆ. ಅವನ ಗರ್ವದ ನುಡಿಗಳನ್ನು ನಾನು ಹೇಳಲಾರೆನು. ಬೇಗ ಯುದ್ಧಕ್ಕೆ ಕಳುಹಿಸು, ಎಂದು ಹೇಳಲು; ಅದನ್ನು ಕೇಳಿ, ಕುಬೇರನು—ಹೇಳು, ಹೇಳು, ಇನ್ನೊಂದು ಸಾರಿ ದಶಾನನನ ಆಳುತನದ ಮಾತ! ನಮ್ಮೊಡನೆ ಕಾಳಗವೇ? ಶಿವ, ಶಿವಾ! ಇದು ಕಾಲ ಗತಿಯು. ಖೂಳ ರಾಕ್ಷಸನ ಕಾಳಗಕ್ಕೆ ನಮ್ಮ ಆಳುಗಳನ್ನು ಕರೆ, ಎನಲು; ಯಕ್ಷ, ಕಿನ್ನರರ ಗುಂಪು ಕೂಡಿ, ದಶಶಿರನೊಡನೆ ಜಗಳಕ್ಕೆ ನಿಂತು ಕೊಂಡಿತು.

ಆಗ ರಾಕ್ಷಸರ ಬಲವು ಆ ಯಕ್ಷರ ಸೇನೆಗೆ ಎದುರಾಗಿ ನಿಂತು—ದಶಾಸ್ಯನೂ ಧನಪತಿಯೂ ಸಹೋದರರು ಎನ್ನುತ್ತಾ, ನಾವು ಮನ್ನಿಸಿದರೆ, ನೀವು ಇಷ್ಟು ಕೊಬ್ಬಿದಿರೇ? ಎಂದು ಯಕ್ಷ ಕಿನ್ನರರ ಸೇನೆಯನ್ನು ಬರಸಿಡಿಲು ತಗಲುವ ಹಾಗೆ ತಗಲಿ, ಕೊಲ್ಲುತ್ತಿರಲು; ಯಮನು ಓಕರಿಸಿದಂತೆ ತಲೆ ಮಿದುಳುಗಳೂ ಮಜ್ಜೆ ಮಾಂಸಗಳೂ ನರಗಳೂ ರಕ್ತಗಳೂ ಇವುಗಳಿಂದ ಆ ರಣವು ನೋಡುವದಕ್ಕೆ ಬಹಳ ಹೇಸಿಕೆಯಾಯಿತು. ಯಕ್ಷ ಬಲವು ಕೂಡ ಧೈರ್ಯ ಕೆಡದೆ, ರಾಕ್ಷಸರ ಸೇನೆಯನ್ನು ಬಹಳವಾಗಿ ಕೊಂದಿತು. ಆಗ ದಶವದನನು ಬಾಣಗಳ ಮಳೆಯನ್ನು ಯಕ್ಷರ ಗುಂಪಿನ ಮೇಲೆ ಸುರಿಯಲು; ಆ ಬಾಣಗಳಿಂದ ಕಾಲು ಮುರಿದು, ಕೈ ಕತ್ತರಿಸಿ, ಕಿವಿ ಮೂಗುಗಳು ಹರಿದು, ತಲೆಗಳು ಒಡೆದು, ಚೂರ್ಣವಾಗಿ, ಎಲ್ಲರು ದಿಕ್ಕು ದಿಕ್ಕಿಗೆ ಓಡಿ ಹೋಗಲು; ಕುಬೇರನು ಮಾಣಿಭದ್ರನೆಂಬ ಸೇನಾಪತಿಯೊಡನೆ ಕೂಡಿ, ಯುದ್ಧಕ್ಕೆ ಬರಲು; ದಶಗ್ರೀವನು ಕುಬೇರನ ಎದುರಿಗೆ ನಿಂತನು. ಮಾಣಿಭದ್ರನ ಎದುರಿಗೆ ಪ್ರಹಸ್ತನು ಬಂದು ನಿಂತನು. ತರುವಾಯ ಮಾಣಿಭದ್ರನು ಪ್ರಹಸ್ತನೊಡನೆ ಯುದ್ಧಕ್ಕೆ ಆರಂಭಿಸಿ, ಆತನ ಗದೆಯ ಪೆಟ್ಟಿನಿಂದ ಕಣ್ಣು ಮೂಗುಗಳಲ್ಲಿ ರಕ್ತವನ್ನು ಕಾರುತ್ತಾ, ಭೂಮಿಯ ಮೇಲೆ ಬಿದ್ದು, ಮೂರ್ಛೆ ಹೊಂದಿದನು. ರಾವಣನು ಬ್ರಹ್ಮನ ವರದ ಬಲದಿಂದ ಕುಬೇರನನ್ನು ಯುದ್ಧದಲ್ಲಿ ಸೋಲಿಸಿ, ಆತನಿಗೆ ಬ್ರಹ್ಮ ದೇವರು ಕೊಟ್ಟು ಇದ್ದ ವಿಮಾನವನ್ನು ಕಿತ್ತು ಕೊಂಡು, ತನ್ನ ಸಕಲ ಸೇನೆ ಸಹಿತ ಆಕಾಶ ಮಾರ್ಗದಲ್ಲಿ ಹೊರಟು ಬರುತ್ತಾ, ಶರವಣವೆಂಬ ಸ್ಥಳವನ್ನು ನೋಡಿ, ಕೈಲಾಸ

ಪರ್ವತದ ಮೇಲುಗಡೆಯಲ್ಲಿ ಬರುತ್ತಿರಲು; ಅವನು ಏರಿ ಇದ್ದ ವಿಮಾನವು ಮುಂದಕ್ಕೆ ನಡೆಯದೆ, ಕಾಲು ಮುರಿದ ಕೋಳಿಯಂತೆ ನಿಂತಿತು.

ಆಗ ದಶಮುಖನು ಈ ದೇವ ವಿಮಾನವು ನಿಲ್ಲುವದಕ್ಕೆ ಕಾರಣವೇನು? ಕಾಲಗತಿಯೋ? ಇದಕ್ಕೆ ಗತಿ ಉಡುಗಿತೋ? ಎಲೈ, ಬುದ್ಧಿಶಾಲಿಯಾದ ಮಾರೀಚನೇ, ಇದರ ವಿಚಾರವನ್ನು ಹೇಳು ಎಂದು ಕೇಳಲು; ಆ ಮಾರೀಚನು—ಈ ವಿಮಾನವು ವೈಶ್ರವಣನಿಗೆ ಅಲ್ಲದೆ ಭೂಮಿಯಲ್ಲಿ ಮತ್ತೊಬ್ಬರಿಗೆ ನಡಿಯದೆ ಇರ ಬಹುದು ಎಂದು ಹೇಳುತ್ತಿರುವಲ್ಲಿ,—ಈ ಕೈಲಾಸ ಪರ್ವತದ ತುದಿಯಲ್ಲಿ ಬ್ರಹ್ಮೇಂದ್ರರೇ ಮೊದಲಾದ ಸುರರಿಗೂ, ಯಕ್ಷ, ರಾಕ್ಷಸ, ಕಿನ್ನರ, ಕಿಂಪುರುಷರೆಂಬ ಕಾಮಗಾಮಿಗಳಿಗೂ ಮಹಾ ದೇವನ ಪ್ರಭಾವದಿಂದ ಹೋಗಲು ಅಶಕ್ಯವಾಗಿರುವದು. ಹಿಮ್ಮೆಟ್ಟು! ಮುಂದಕ್ಕೆ ಹೋದರೆ, ನೀನು ಕೆಡುವಿ ಎಂದು, ದಶವದನನನ್ನು ಕುರಿತು ನಂದಿಕೇಶನು ಹೇಳಿದನು. ದಶಕಂಧರನು ಶಂಕರನ ಎರಡನೇ ರೂಪಾದ ನಂದಿಕೇಶನ ಮೊಗವನ್ನು ನೋಡಿ, ಕೋತಿಯ ಮುಖಕ್ಕೆ ಸರಿಯಾಗಿದ್ದದರಿಂದ, ಬುದ್ಧಿ ಶೂನ್ಯನಾಗಿ, ನಸು ನಗುತ್ತಾ, ಹಾಸ್ಯವನ್ನು ಮಾಡಲು; ನಂದೀಶ್ವರನು ನೊಂದು ಕೊಂಡು, ಬಹು ರೋಷದಿಂದ ದಶಕಂಠನನ್ನು ಕುರಿತು—ಎಲೈ, ಖೂಳನೇ, ನಿನ್ನ ಶೌರ್ಯವು ಎಷ್ಟು ಮಾತ್ರವು! ನಿನ್ನನ್ನುಕೊಲ್ಲುವದು ನನಗೆ ತುಸ ಮಾತ್ರವು. ನೀನು ಮಾಡುವ ದುರ್ನಡತೆಗಳಿಂದ ಕುಲ ಸಹಿತ ನೀನು ನಿರ್ಮೂಲವಾಗುವಿ. ಇದು ನಿಜವು. ನನ್ನ ಮುಖವನ್ನು ನೋಡಿ, ಹಾಸ್ಯ ಮಾಡಿದ್ದರಿಂದ, ನನ್ನಾಕಾರದ ಹಾಗೆ ಇರುವ ಕೋತಿಗಳಿಂದಲೇ ನಿನಗೆ ಪರಾಜಯವು ಉಂಟಾಗಲಿ ಎಂದು, ಶಾಪವನ್ನು ಕೊಟ್ಟನು. ಆ ತರುವಾಯ—ಈ ಕೈಲಾಸ ಪರ್ವತವಷ್ಟೆ ನನ್ನ ವಿಮಾನದ ಗತಿಯನ್ನು ತಡಿಯಿತು. ಇದರ ಕೊಬ್ಬನ್ನು ಮುರಿಯುವೆನು. ಶಿವನ ಬಲುಮೆಯನ್ನು ನೋಡುವೆನು ಎಂದು, ದಶವದನನು ವಿಮಾನದಿಂದ ಕೆಳಗೆ ಇಳಿದು, ಆ ಹರಾದ್ರಿಯನ್ನು ತನ್ನ ಇಪ್ಪತ್ತು ತೋಳುಗಳಿಂದ, ಸುರಾಸುರರು ಕಡಲ ಕಡೆಯುವಲ್ಲಿ ಮಂದರವನ್ನು ಮಹಾ ಶೇಷನಿಂದ ಬಿಗಿದ ಹಾಗೆ, ಬಿಗಿದು, ಮೇಲು ಜಗವು ಅಲ್ಲಾಡಲೂ, ಭೂತಳವು ರಸಾತಲಕ್ಕಿಳಿಯಲೂ, ದಿಕ್ಕಿನ ಮೂಲೆಗಳು ಬಿರಿಯಲೂ, ಕಿತ್ತು, ಎತ್ತಿದನು. ತೋಳುಗಳ ಬಲುಹು ಇನ್ನೆಷ್ಟೋ! ಖಳನು ಕೀಳಲೂ, ಆ ಕೈಲಾಸ ಪರ್ವತವು ಪುಟ ನೆಗೆಯಿತು. ಅವನ ಆಳುತನದ ಬಿಂಕಕ್ಕೆ ಅಖಿಳ ಜನವು ಗಡಗಡನೆ ನಡುಗಿತು. ಪಾರ್ವತಿಯು ಹೆದರಿ, ಹರನನ್ನು ಅಪ್ಪಿ ಕೊಂಡಳು. ಶಿವನು—ಇದು ದಶಮುಖನ

ಚೇಷ್ಟೆ ಎಂದು ತಿಳಿದು, ಕೈಲಾಸವನ್ನು ಕಾಲುಂಗುಟದಿಂದ ಮೆಟ್ಟಲು; ಆಗ ದಶವದನನು ಮೇಲಕ್ಕೆ ಎತ್ತುವನು; ಶಿವನು ಮತ್ತೆ ಮೆಟ್ಟುವನು. ಹೀಗೆ ಆಗುವದರಿಂದ ಆ ಕೈಲಾಸವು ಭೂದೇವಿಯು ತಿರಿಕಲ್ಲಾಡುವ ಹಾಗೆ ಪ್ರಕಾಶಿಸಿತು.

ಆ ವೇಳೆಯಲ್ಲಿ ರಾಕ್ಷಸನ ಇಪ್ಪತ್ತು ನಿಡು ತೋಳುಗಳು ಆ ಗಿರಿಯ ಇರಿಬಿನಲ್ಲಿ ಶಿಕ್ಕಲು, ಬೊಬ್ಬಿರಿದು, ಖಳನು ಒಳ ನೂಕಿ ಎತ್ತಿದರೆ, ಕೋಪದಿಂದ ಶಿವನು ಘಟ್ಟಿಯಾಗಿ ಮೆಟ್ಟಲು, ಖಳನ ಧೈರ್ಯವು ಕೆಟ್ಟಿತು. ಮನೋವ್ಯಥೆಗೆ ಮನವು ಗುರಿಯಾಯಿತು. ಬುದ್ಧಿಯು ಹಾಳಾಯಿತು. ಆಗ ನೀಚನು ಭೂಮಿಯು ಬಿಕ್ಕನೆ ಬಿರಿಯುವ ಹಾಗೆ ಹೆಚ್ಚು ಬೊಬ್ಬೆಯಲ್ಲಿ ಕೂರಗಿ, ಕೂಗುತ್ತಿರಲು;—ಇದೇನು ಅದ್ಭುತವಾದ ಕೂಗು? ಲೋಕದ ಅವಸಾನ ಸಮಯವೋ? ಎಂದು, ಮಾನವಾಮರ ನಾಗ ಲೋಕಗಳು ನಡುಗಿದವು. ಆ ಸಮಯದಲ್ಲಿ ಆತನ ಮಂತ್ರಿಗಳು ಅವನ ಕಷ್ಟವನ್ನು ಕಂಡು—ಎಲೈ, ದಶವದನನೇ, ನಿನ್ನ ಬುದ್ಧಿ ಎಲ್ಲಿ ಹೋಯಿತು? ಜಗದೊಡೆಯನ ಸಂಗಡ ನಿನಗೆ ಛಲವೇ? ಕಾಲರುದ್ರನನ್ನು ಕೆಣಕಿ ಬದುಕುವರುಂಟೇ? ಬೇಗ ಈಶ್ವರನನ್ನು ಭಜಿಸು; ವೇದಗಳಿಂದ ಸ್ತುತಿಸು, ಎಂದು ಹೇಳಲು; ದಶಾಸ್ಯನು—ಹಾಗೆ ಆಗಲೆಂದು, ಅನೇಕ ಸಾವಿರ ವರುಷ ಸಾಮ ಗಾನದಿಂದ ಸ್ತುತಿಸಿ, ಶಿವನನ್ನು ಮೆಚ್ಚಿಸಲು; ಶಂಕರನು ಪಾರ್ವತೀ ಸಮೇತನಾಗಿ ಬಂದು, ದಶಕಂಠನನ್ನು ಮನ್ನಿಸಿ—ಎಲೈ, ವೀರನೇ, ನಿನ್ನ ಭುಜ ಬಲಕ್ಕೆ ನಾನು ಮೆಚ್ಚಿದೆನು. ಮೂರು ಲೋಕವನ್ನು ಧ್ವನಿಯಿಂದ ಬೆಚ್ಚಿಸಿದವನಾದ್ದರಿಂದ, ಇದು ಮೊದಲುಗೊಂಡು ನಿನಗೆ ರಾವಣನೆಂಬ ಹೆಸರುಂಟಾಗಲಿ; ಹೋಗು ಎಂದನು. ತರುವಾಯ ರಾವಣನು ಶಿವನ ಮನಸ್ಸನ್ನು ತಿಳಿದು—ಎಲೈ, ದೇವನೇ, ನೀನು ನನಗೆ ಮೆಚ್ಚಿದರೆ, ಅಪೂರ್ವವಾದ ಒಂದು ಕತ್ತಿಯನ್ನು ಕರುಣಿಸ ಬೇಕೆಂದು, ಕೈ ಮುಗಿದು, ಬೇಡಿ ಕೊಳ್ಳಲು; ಚಂದ್ರಶೇಖರನು ಚಂದ್ರಹಾಸವೆಂಬ ಒಂದು ಕತ್ತಿಯನ್ನು ಕೊಟ್ಟು, ಅಂತರ್ಧಾನವಾದನು.

ಆ ಬಳಿಕ ರಾವಣನು ಭೂಲೋಕದಲ್ಲಿ ತಿರುಗುತ್ತಾ, ಬಲಿಷ್ಠರಾದ ಅರಸುಗಳನ್ನು ಯುದ್ಧದಲ್ಲಿ ತೋಳನು ಕುರಿಗಳನ್ನು ಕೊಲ್ಲುವ ಹಾಗೆ, ಕೊಲ್ಲುತ್ತಾ, ಹಿಮವತ್ಪರ್ವತದ ತೊಪ್ಪಲ ಅರಣ್ಯಕ್ಕೆ ಬರಲು; ರತಿಯಂತೆ ಅತಿ ಸೌಂದರ್ಯವತಿಯಾದ ಒಬ್ಬ ಹೆಂಗಸು ತಪಸ್ಸನ್ನು ಮಾಡುತ್ತಿರಲು; ಆಕೆಯನ್ನು ಕಂಡು,—ಎಲೈ, ಹೆಂಗಸೇ, ಇದೇನಾಶ್ಚರ್ಯ? ಈ ವನದಲ್ಲಿ ನೀನು ತಪಸ್ಸನ್ನು ಮಾ

ಡುವದಕ್ಕೆ ಕಾರಣವೇನು? ನೀನು ಯಾರು? ಹೇಳು, ಎನಲು; ಆಕೆಯು ಈ ರಾವಣನನ್ನು ಪ್ರೀತಿಯಿಂದ ಪೂಜಿಸಿ,—ಕೇಳು, ಬೃಹಸ್ಪತಿಯ ಮಗನಾದ ಕುಶಧ್ವಜನೆಂಬವನು ವೇದವನ್ನು ಓದುತ್ತಿರುವಾಗ, ಆತನ ಬಾಯಿಯಿಂದ ಹುಟ್ಟಿದವಳಾದ ಕಾರಣ, ತನಗೆ ಭೂಮಿಯಲ್ಲಿ ವೇದವತಿ ಎಂಬ ಹೆಸರಾಯಿತು. ಮತ್ತು ನಮ್ಮ ತಂದೆಯು ಬಹು ಪ್ರೀತಿಯಿಂದ ನನ್ನನ್ನು ಕಾಪಾಡುತ್ತಾ ಇರಲು; ಮುನಿಗಳು, ಸುರರು, ಯಕ್ಷ, ಕಿನ್ನರ, ಕಿಂಪುರುಷರಲ್ಲಿ ಚೆಲುವಾದವರು ನನ್ನನ್ನು ಬೇಡಲು; ನಮ್ಮ ತಂದೆಯು—ಇವಳು ಅಯೋನಿಜೆಯಾದ್ದರಿಂದ, ಈಕೆಯನ್ನು ವಿಷ್ಣುವಿಗೆ ಕೊಡುವೆನಲ್ಲದೆ, ಮತ್ತೊಬ್ಬರಿಗೂ ಕೊಡುವದಿಲ್ಲವೆಂದು ಹೇಳಿದನು. ಹೀಗಿರುವಲ್ಲಿ ಶಂಭುವೆಂಬ ರಾಕ್ಷಸನು ನನ್ನನ್ನು ಬಂದು ಕೇಳಲು; ನನ್ನ ತಂದೆಯು ಕೊಡದೆ ಇದ್ದದರಿಂದ, ಆ ರಾಕ್ಷಸನು ಕೋಪಿಷ್ಠನಾಗಿ, ನನ್ನ ತಂದೆಯ ತಲೆಯನ್ನು ಕಡಿದು ಹಾಕಿ, ಹೊರಟು ಹೋದನು. ಆಗ ನನ್ನ ತಾಯಿಯು ಗಂಡನೊಡನೆ ಸಹಗಮನವನ್ನು ಮಾಡಿದಳು. ಆ ಮೇಲೆ ನಾನು ತಂದೆ ತಾಯಿಗಳಿಗೆ ಪ್ರೇತ ಕಾರ್ಯವನ್ನು ಮಾಡಿ, ತಂದೆಯ ಕೋರಿಕೆಯನ್ನು ನೆರವೇರಿಸ ಬೇಕೆಂದು ವಿಷ್ಣುವನ್ನು ಕುರಿತು ಇಲ್ಲಿ ತಪಸ್ಸನ್ನು ಮಾಡುತ್ತಾ ಇದ್ದೇನೆ, ಎಂದು ಹೇಳಲು; ರಾವಣನು—ಹರಿ ಎಲ್ಲಿ? ನೀನೆಲ್ಲಿ? ಇಂಥ ಯೌವನ ಕಾಲದಲ್ಲಿ ಸುಖವಾಗಿರದೆ ತಪಸ್ಸು ಮಾಡುವದರಿಂದ ನಿನ್ನ ಯೌವನವು ಕಾಡಿನಲ್ಲಿ ಬಿದ್ದ ಬೆಳದಿಂಗಳಂತೆ ವ್ಯರ್ಥವಾಗಿ ಹೋಗುವದು. ನಾನು ಜಗದೇಕ ವೀರನು; ಸಮಸ್ತ ದೇವತೆಗಳಿಗೂ ಒಡೆಯನು. ನನ್ನನ್ನು ಮದುವೆಯಾಗಿ, ಸುಖದಲ್ಲಿ ಇರು ಎಂದು ಹೇಳಲು; ಆಕೆಯು ಒಪ್ಪದೆ ಇದ್ದ ಕಾರಣ, ಬಲಾತ್ಕಾರದಿಂದ ಮದುವೆಯಾಗ ಬೇಕೆಂದು ಪ್ರಯತ್ನ ಮಾಡಲು; ವೇದವತಿಯು ಅಗ್ನಿಯಂತೆ ಕೋಪದಿಂದ ಉರಿಯುತ್ತಾ, ಎಲೈ,—ಮೂಢಾತ್ಮನೇ, ಇಂಥ ಪಾಪಿಷ್ಠನಾದ ನಿನ್ನನ್ನು ಕೊಲ್ಲುವದು ನನಗೆ ಅಗಾಧವಲ್ಲ. ಆದರೆ ನನ್ನ ತಪಸ್ಸು ನಿಷ್ಫಲವಾಗುವದು. ಹೆಂಗಸು ಪುರುಷನನ್ನು ಕೊಲ್ಲುವದು ನಿಷೇಧವು. ಅದರಿಂದ ಇನ್ನೊಂದು ಜನ್ಮದಲ್ಲಿ ನಾನು ಸೀತೆ ಎಂಬ ಹೆಸರಿನಿಂದ ಹುಟ್ಟಿ, ವಿಷ್ಣುವಿನ ಅವತಾರವಾದ ರಾಮನೆಂಬವನನ್ನು ಮದುವೆಯಾಗಿ, ಆತನ ಕೈಯಿಂದ ನಿನ್ನನ್ನು ಕೊಲ್ಲಿಸುವೆನು ಎಂದು, ಶಾಪವನ್ನು ಕೊಟ್ಟು, ಆ ಕ್ಷಣವೇ ಅಗ್ನಿಯಲ್ಲಿ ಹೊಕ್ಕು, ಶರೀರವನ್ನು ಬಿಟ್ಟಳು.

ಅನಂತರದಲ್ಲಿ ರಾವಣನು ಪುಷ್ಪಕವನ್ನು ಏರಿ ಕೊಂಡು, ಭೂಮಂಡಲದಲ್ಲಿ ಸಂಚರಿಸುತ್ತಾ ಬರುವಲ್ಲಿ, ಮರುತ್ತನೆಂಬ ಮಹಾ ರಾಯನು ಯಜ್ಞವನ್ನು

ಮಾಡುತ್ತಿರಲು; ಆ ಯಜ್ಞ ಭೂಮಿಗೆ ಬಂದನು. ಆಗ ಖಳನಾದ ರಾವಣನನ್ನು ಕಂಡು, ಯಜ್ಞಕ್ಕೆ ಬಂದು ಇದ್ದ ಇಂದ್ರನು ಇವನಿಗೆ ಹೆದರಿ, ನವಿಲಾದನು. ಯಮನು ಕಾಗೆಯಾದನು. ವರುಣನು ಹಂಸವಾದನು. ಕುಬೇರನು ಗೋಸುಂಬೆಯಾದನು. ಈ ಪ್ರಕಾರ ದೇವತೆಗಳೆಲ್ಲಾ ಬೇರೆ ಬೇರೆ ರೂಪನ್ನು ಧರಿಸಿ ಕೊಂಡು, ಮರೆಯಾದರು. ಋಷಿಗಳೆಲ್ಲಾ ದಿಕ್ಕು ದಿಕ್ಕಿಗೆ ಓಡಿ ಹೋದರು. ಆಗ ರಾವಣನು ಮರುತ್ತ ರಾಯನನ್ನು ಕುರಿತು—ಎಲೈ, ಅರಸೇ, ನೀನು ಶೂರನಾದರೆ, ನನ್ನೊಡನೆ ಯುದ್ಧಕ್ಕೆ ಬಾ. ಇಲ್ಲದಿದ್ದರೆ, ಸೋತೆನು ಎಂದು ಹೇಳು; ನಿನ್ನನ್ನು ಕೊಲ್ಲುವದಿಲ್ಲ, ಅನ್ನಲು; ಮರುತ್ತ ರಾಯನು—ಎಲಾ, ನೀನು ಯಾರು? ಇಲ್ಲಿ ಏಕೆ ಬಂದೆ? ಎಂದು ಕೇಳಲು; ರಾವಣನು—ನಾನು ಕುಬೇರನ ತಮ್ಮನು; ನನ್ನನ್ನು ದಶಾಸ್ಯನೆಂದು ಹೇಳುವರು. ನಾನು ಕುಬೇರನನ್ನು ಗೆದ್ದು, ಆತನ ವಿಮಾನವನ್ನು ಕಿತ್ತು ಕೊಂಡು, ಲೋಕದಲ್ಲೆಲ್ಲಾ ಪ್ರಸಿದ್ಧವಾದ ಹೆಸರನ್ನು ಹೊಂದಿ ಇದ್ದೇನೆ. ನೀನು ಮಾತ್ರ ನನ್ನನ್ನು ತಿಳಿಯದೆ ಇರುವದು ಬಹಳ ಆಶ್ಚರ್ಯ, ಎಂದು ಹೇಳಲು; ಮರುತ್ತ ರಾಯನು—ಆದರೆ ನೀನು ಶ್ರೇಷ್ಠನು! ಅಣ್ಣನ ಸಂಗಡ ಜಗಳವಾಡಿದವನು! ಧರ್ಮದ ಹಾದಿಯನ್ನು ತಪ್ಪದೆ ನಡೆಯುವವನು! ಎಂದು, ಕಟಕೀ ಮಾತುಗಳನ್ನು ಆಡಿ—ಬಿಲ್ಲೇದು ಯುದ್ಧಕ್ಕೆ ನಿಲ್ಲು ಎಂದು, ಸನ್ನದ್ಧನಾಗುತ್ತಿದ್ದನು. ಆ ವೇಳೆಯಲ್ಲಿ ಬೃಹಸ್ಪತಿಯ ತಮ್ಮನಾದ ಸಂವರ್ತನೆಂಬ ಪುರೋಹಿತನು ಬಂದು, ತಡೆದು,—ಎಲೈ, ರಾಯನೇ, ನೀನು ಯಜ್ಞ ದೀಕ್ಷಿತನಾಗಿದ್ದೀ. ಈ ವೇಳೆಯಲ್ಲಿ ಇಂಥ ದುಷ್ಟನೊಡನೆ ಜಗಳಕ್ಕೆ ಹೋಗುವದು ನ್ಯಾಯವಲ್ಲವೆಂದು ಹೇಳಲು; ಅರಸು ಹಿಡಿದು ಇದ್ದ ಬಿಲ್ಲನ್ನು ಕೆಳಗೆ ಇಟ್ಟು, ರಾವಣನ ಬಳಿಗೆ ಬಂದು—ಎಲೈ, ವೀರನೇ, ನಿನಗೆ ನಾನು ಸೋತೆನು ಎಂದು ಹೇಳಿದನು.

ಆ ಮೇಲೆ ರಾವಣನು ಅಲ್ಲಿಂದ ಮುಂದಕ್ಕೆ ಹೊರಟು ಹೋಗಲು; ಆ ಯಜ್ಞ ಶಾಲೆಗೆ ಮೊದಲಿನ ಹಾಗೆ ಇಂದ್ರಾದಿ ದೇವತೆಗಳೂ ಮುನಿಗಳೂ ಬಂದು—ಬಂದಪಮೃತ್ಯು ನಮಗೆ ಬಂದಂಥಾದ್ದು ಹೋಯಿತು ಎಂದು, ಸಂತೋಷದಿಂದ ಇಂದ್ರನು ತಾನು ಮರಿಸಿ ಕೊಂಡು, ನವಿಲಾಗಿದ್ದದರಿಂದ, ಆ ನವಿಲನ್ನು ಕುರಿತು—ನಿನ್ನ ರೆಕ್ಕೆಯಲ್ಲಿ ನನ್ನ ಕಣ್ಣುಗಳ ಹಾಗೆ ಕಣ್ಣುಗಳು ಉಂಟಾಗಲಿ; ವರ್ಷಾ ಕಾಲದಲ್ಲಿ ನಿನಗೆ ಬಹಳ ಸಂತೋಷ ಉಂಟಾಗಿರಲಿ ಎಂದು, ವರವನ್ನು ಕೊಟ್ಟನು. ಯಮನು ಕಾಗೆಯನ್ನು ನೋಡಿ—ಎಲೈ, ವಾಯಸವೇ, ಈ ದಿವಸ ಮೊದಲ್ಗೊಂಡು ನಿನಗೆ ಮರಣವಾಗದೆ, ಬಹು ಕಾಲದ ವರಿಗೂ ಚಿರ

ಜೀವಿ ಎನಿಸಿ ಕೊಂಡಿರು. ಇಂದು ಮೊದಲು ಲೋಕದಲ್ಲಿ ಪಿತೃ ಕಾರ್ಯಗಳ
ನ್ನು ಮಾಡುವಂಥವರು ನಿನ್ನ ಮೂಲಕವಾಗಿ ಪಿತೃಗಳಿಗೆ ಪಿಂಡವನ್ನು ಹಾಕಿ
ದರೆ, ನಾನು ಬಹಳ ತೃಪ್ತಿಯನ್ನು ಹೊಂದುವೆನು ಎಂದು, ವರವನ್ನು ಕೊಟ್ಟ
ನು. ವರುಣನು ಹಂಸವನ್ನು ನೋಡಿ–ನಿನ್ನ ಈ ಕಪ್ಪಾಗಿರುವ ರೆಕ್ಕೆಗಳು
ಬಿಳುಪಾಗಲಿ ಎಂದು, ವರವನ್ನು ಕೊಟ್ಟನು. ಕುಬೇರನು ಗೋಸುಂಬೆಯು
ನ್ನು ನೋಡಿ–ನಿನ್ನ ಕುತ್ತಿಗೆಯಲ್ಲಿ ಚಿನ್ನದ ಗೆರೆಯು ಸದಾ ಇರಲಿ ಎಂದು, ವ
ರವನ್ನು ಕೊಟ್ಟನು. ಆ ಮೇಲೆ ಎಲ್ಲರು ಯಜ್ಞವನ್ನು ಮಾಡಿ ಕೊಂಡು,
ಹೊರಟು ಹೋದರು.

ಇತ್ತ ರಾವಣನು ಅಯೋಧ್ಯಾ ಪಟ್ಟಣಕ್ಕೆ ಹೋಗಿ, ಆ ಪಟ್ಟಣವನ್ನು ಆ
ಳುವ ಅನರಣ್ಯನೆಂಬ ಅರಸನ್ನು ಕುರಿತು–ಏನು ನೃಪನೇ, ನನ್ನೊಡನೆ ಯು
ದ್ಧಕ್ಕೆ ಬರುವಿಯೋ? ಇಲ್ಲವೆ, ಸೋತೆನೆಂದು ಹೇಳುವಿಯೋ? ಎಂದು ಕೇಳ
ಲು; ಆ ರಾಯನು ಮಹಾ ಕೋಪಿಷ್ಠನಾಗಿ, ಧನುರ್ಬಾಣಗಳನ್ನು ತೆಗೆದು ಕೊಂ
ಡು, ರಾವಣನೊಡನೆ ಬಹಳ ದಿವಸ ಯುದ್ಧವನ್ನು ಮಾಡಿ, ಆತನ ಬಾಣದ
ಪೆಟ್ಟಿನಿಂದ ಭೂಮಿಯಲ್ಲಿ ಬಿದ್ದು ಸಾಯುತ್ತಿರುವ ಸಮಯದಲ್ಲಿ, ರಾವಣನು
ಅವನ ಬಳಿಗೆ ಹೋಗಿ, ಬೆಂಕಿಯ ಸಂಗಡ ಜಗಳಕ್ಕೆ ಬಂದು ಸಾಯುವ ಮಿ
ಡಿತೆಯಂತೆ ಸಾಯುತ್ತೀಯಾ? ಸೋತೆನೆಂದು ಮೊದಲೇ ಹೇಳಿ ಇದ್ದರೆ, ಬದು
ಕುತ್ತಿದ್ದೆಯಲ್ಲ! ಎಂದು ಹಾಸ್ಯ ಮಾಡಲು; ಆ ರಾಯನು–ಎಲೈ, ಮೂರ್ಖ
ನೇ, ಯುದ್ಧದಲ್ಲಿ ಜಯ ಪರಾಜಯವು ದೈವಾಧೀನವು. ಶೂರರಾದವರಿಗೆ ಹಗೆ
ಗಳಿಂದ ಯುದ್ಧದಲ್ಲಿ ಸಾಯುವದೂ, ಹಗೆಗಳನ್ನು ಜೈಸುವದೂ, ಧರ್ಮವು. ಇ
ದರಿಂದ ಹೀನಾಯ ಬಹುಮಾನಗಳೊಂದೂ ಇಲ್ಲ. ನೀನು ಮೂಢನಾಗಿ ನನ್ನ
ನ್ನು ಹಾಸ್ಯ ಮಾಡಿದ ಕಾರಣ, ನನ್ನ ವಂಶದಲ್ಲಿ ಮುಂದೆ ರಾಮನೆಂಬವನು
ಹುಟ್ಟಿ, ನಿನ್ನನ್ನು ಕೊಲ್ಲುವನೆಂದು ಶಾಪವನ್ನು ಕೊಟ್ಟು, ಸತ್ತು ಹೋದನು.

ಆಗ ರಾವಣನ ವಿನಾಶಕ್ಕೆ ಕಾರಣವಾಗಿ ಉಂಟಾದ ಶಾಪಕ್ಕೆ ಸಂತೋಷ
ಪಟ್ಟು, ದೇವತೆಗಳು ದೇವ ದುಂದುಭಿಗಳನ್ನು ತಾಡಿಸಿದರು. ಖಳನು ಆ ಶಾ
ಪಕ್ಕೆ ಹೆದರುವನೇ? ನೃಪವರನು ಸಾಯಲು, ಅಲ್ಲಿಂದ ಹೊರಟು, ತೋಳ ತೀ
ಟೆಯನ್ನು ಅಡಗಿಸಲಿಕ್ಕೆ ಈ ಮನುಷ್ಯರ ಗುಂಪು ಸಾಲದೆನುತ್ತಾ, ಮನದಲ್ಲಿ
ಆಲೋಚಿಸಿ ಕೊಂಡು, ಆಕಾಶದಲ್ಲಿ ಬರುವಾಗ, ನಾರದ ಋಷಿಯನ್ನು ಕಂಡು,
ನಮಸ್ಕರಿಸಲು; ಆ ಮುನಿವರನು ಹರಸಿ–ಎಲೈ, ಲಂಕಾಧಿಪನೇ, ನಿನಗೆ ಸುಖ
ವೇ? ಎಂದು, ವಿನಯದಲ್ಲಿ ಯೋಗ ಕ್ಷೇಮವನ್ನು ಕೇಳಿ,–ಈಗ ನಿನ್ನ ಶೌರ್ಯದ

ಉರಿಯಲ್ಲಿ ಈ ಭೂಲೋಕವೆಲ್ಲಾ ಬೆಂದಿತು. ಈ ಮನುಷ್ಯರನ್ನು ಕೊಲ್ಲು ವಂಥಾದ್ದು ನಿನಗೆ ಹಿರಿದಲ್ಲ. ಈ ಮನುಷ್ಯರಲ್ಲಿ ನಿನ್ನೊಡನೆ ಕೈ ಕಟ್ಟಿ ಕಾದುವರುಂಟೇ? ನೀನು ಇಂಥಾ ಹೀನರನ್ನು ಕೊಂದರೆ, ನಿನ್ನ ಬಲವು ಮೆರೆಯುವದೇ? ಈ ಮನುಷ್ಯರು ಸ್ವಲ್ಪವಾದ ಆಯುಸ್ಸುಳ್ಳವರಾದ್ದರಿಂದ, ರೋಗದಿಂದಲೂ ಹಸಿವು ಬಾಯಾರಿಕೆ ಮೊದಲಾದ ಕಷ್ಟಗಳಿಂದಲೂ ಸ್ವಲ್ಪ ಕಾಲಕ್ಕೆ ತಾವಾಗಿ ಸತ್ತು, ಮೃತ್ಯುವಶರಾಗುವರು. ಇಂಥ ಹೀನ ಬಲರನ್ನು ಕೊಂದರೆ, ನಿನಗೆ ಕೀರ್ತಿ ಉಂಟಾಗಲಾರದು. ಇನ್ನು ಯಮನೇ ಮೊದಲಾದ ಲೋಕಪಾಲಕರು ಇರುವರು. ಅವರು ನಿನ್ನ ಭುಜ ಬಲಕ್ಕೆ ತಕ್ಕವರು. ಅವರನ್ನು ಯುದ್ಧದಲ್ಲಿ, ಜೈಸಿದರೆ, ನಿನಗೆ ಕೀರ್ತಿ ಉಂಟಾಗುವದು. ಅವರೊಳಗೆ ತೆಂಕಣ ದಿಕ್ಕಿಗೆ ಒಡೆಯನಾದ ಯಮನೆಂಬವನು ಕಾಲ ದಂಡವನ್ನು ಧರಿಸಿದವನಾಗಿ, ದೇವ ಮನುಷ್ಯೋರಗರು ಮೊದಲಾದ ಸಕಲ ಜನರನ್ನು ಬಾಧಿಸುತ್ತಿರುವನು. ಅವನನ್ನು ನೀನು ಕೊಂದು ಹಾಕಿದರೆ, ಎಲ್ಲಾ ಪ್ರಾಣಿಗಳು ಸ್ವಸ್ಥದಲ್ಲಿರುವರು, ಎನಲು; ರಾವಣನು—ಎಲೈ, ಮುನೀಂದ್ರನೇ, ನೀನು ಹೇಳಿದ ಮಾತು ಯುಕ್ತವೇ ಸರಿ. ನಾನು ಹೀಗೆಯೇ ಯೋಚಿಸಿದ್ದೆನು. ನೀನು ಹೇಳಿದಂತೆ ದಿಕ್ಪಾಲರಲ್ಲಿ ಕುಬೇರನನ್ನು ಮೊದಲೇ ಜೈಸಿದ್ದೇನೆ. ಇನ್ನು ಯಮ ವರುಣೇಂದ್ರಾದಿಗಳನ್ನು ಜೈಸಿ, ರಸಾತಲವನ್ನು ಹೊಕ್ಕು, ದೈತ್ಯ ದಾನವ ನಾಗರೇ ಮೊದಲಾದವರನ್ನು ಜೈಸಿ, ಕೀರ್ತಿಯನ್ನು ಹೊಂದುವೆನು, ಎಂದು ಹೊರಡಲು; ನಾರದ ಮುನಿಯು ಅವನಿಗಿಂತ ಮುಂದೆ ಯಮ ಲೋಕಕ್ಕೆ ಬಂದು, ಯಮನೊಡನೆ—ನಿನ್ನ ಸಂಗಡ ಜಗಳವಾಡುವದಕ್ಕೆ ರಾವಣನು ಬರುವನು. ಅವನನ್ನು ಕಾಲ ದಂಡದಿಂದ ಕೊಂದು ಹಾಕು; ಲೋಕವೆಲ್ಲಾ ಸುಖವಾಗಿರುವದು ಎಂದು ಹೇಳಿ, ಹೊರಟು ಹೋದನು.

ಆ ಬಳಿಕ ರಾವಣನು ರಾಕ್ಷಸ ಸೇನಾ ಸಮೇತನಾಗಿ ಯಮ ಲೋಕಕ್ಕೆ ಬಂದು, ಅಲ್ಲಿ ನರಕಗಳಲ್ಲಿ ಯಮ ಭಟರು ಪಾಪಿಗಳನ್ನು ಕಾದ ಮಳಲಲ್ಲಿ ಎಳೆಯುವದನ್ನೂ, ಕಣ್ಣುಗಳನ್ನು ಕಾಸಿದ ದಬ್ಬಳಗಳಿಂದ ತಿವಿಯುವದನ್ನೂ, ಕಬ್ಬಿಣದ ಕಾಗೆಗಳಿಂದ ಕೀಳಿಸುವದನ್ನೂ, ಕಾಸಿದ ಉಕ್ಕಿನ ಕಂಭಗಳನ್ನು ತಬ್ಬಿಸುವದನ್ನೂ, ಕೀವು ರಕ್ತಗಳ ಕುಡಿಸುವದನ್ನೂ, ವೈತರಣಿ ಎಂಬ ನರಕದ ಗುಂಡಿಯಲ್ಲಿ ಮುಳುಗಿಸುವದನ್ನೂ ನೋಡಿ, ಕರುಣದಿಂದ ಆ ಯಮ ಭಟರನ್ನು, ಬಾಣ ಪ್ರಯೋಗವನ್ನು ಮಾಡಿ, ಓಡಿಸಲು; ಪಾಪಿಗಳೆಲ್ಲಾ—ಈ ಮಹಾ ರಾಯನಿಂದ ನಮ್ಮ ಬಾಧೆಗಳೆಲ್ಲಾ ತಪ್ಪಿತು ಎಂದು ಸಂತೋಷ ಪಟ್ಟು, ರಾವಣನ

ಬಳಿಗೆ ಬಂದು, ನಮಸ್ಕರಿಸಿ,—ನಾವು ನಿನ್ನ ಸಂಗಡ ಯಮುನ ಜಗಳಕ್ಕೆ ಬರುತ್ತೇವೆಂದು ಬೊಬ್ಬಿರಿದು, ಕೂಗುತ್ತಿದ್ದರು. ರಾವಣನು ಆ ಪ್ರೇತಗಳನ್ನು ಕೂಡಿ ಕೊಂಡು, ಮತ್ತೊಂದು ದಿವ್ಯ ಸಭೆಯಲ್ಲಿ, ಹಸಿವು ಬಾಯಾರಿಕೆಗಳಿಲ್ಲದೆ ದಿವ್ಯ ದೇಹವನ್ನು ಧರಿಸಿ, ದಿವ್ಯಗಳಾದ ಉಡಿಗೆ ತೊಡಿಗೆಗಳನ್ನು ತೊಟ್ಟು, ಉಟ್ಟು ಕೊಂಡು, ದಿವ್ಯ ಪರಿಮಳ ಗಂಧಗಳನ್ನು ತೊಡೆದು ಕೊಂಡು, ಹೂವಿನ ಮಾಲಿಕೆಗಳನ್ನು ಧರಿಸಿ ಕೊಂಡು, ದಿವ್ಯ ದೇಹಧರರಾಗಿ ದಿವ್ಯ ಗಾನಗಳನ್ನು ಕೇಳುತ್ತಾ ಇರುವ ಪುಣ್ಯ ಶಾಲಿಗಳನ್ನು ನೋಡುತ್ತಾ, ಯಮುನ ಅರಮನೆಯ ಬಾಗಲ ಬಳಿಗೆ ಹೋಗಿ, ಬೊಬ್ಬಿರಿದು, ಸಿಂಹ ಗರ್ಜನೆಯನ್ನು ಮಾಡಿದನು. ಯಮನು ಅದನ್ನು ಕೇಳಿ, ಖೂಳನು ಜಗಳಕ್ಕೆ ಬಂದನೆಂದು ಎದ್ದು, ಕಾಲ ದಂಡವೇ ಮೊದಲಾದ ಆಯುಧಗಳನ್ನು ಧರಿಸಿ ಕೊಂಡು, ಕೋಣನ ಮೇಲೆ ಹತ್ತಿ ಕೊಂಡು, ರೂಪವನ್ನು ಧರಿಸಿರುವ ರಾಜಕ್ಷಯರೋಗವೇ ಮೊದಲಾದ ರೋಗಗಳನ್ನೂ, ಕಾಲ ಮೃತ್ಯುವನ್ನೂ ಸಂಗಡ ಕರೆದು ಕೊಂಡು, ಹೊರಟು, ರಾವಣನ ಎದುರಿನಲ್ಲಿ ನಿಂತು, ಬಿಲ್ಲನ್ನು ಧ್ವನಿ ಮಾಡಿ, ಬಾಣಗಳ ಮಳೆಯನ್ನು ಸುರಿಸುತ್ತಾ, ಮಹೋದರ ಮಾರೀಚ ಪ್ರಹಸ್ತ ಮೊದಲಾದ ರಾಕ್ಷಸ ಭಟರುಗಳನ್ನು ಹೊಡೆಯಲು; ಅವರೆಲ್ಲಾ ಕಾಲ ಯಮುನ ಬಾಣದ ಪೆಟ್ಟನ್ನು ಸಹಿಸಲಾರದೆ, ನೆಲದಲ್ಲಿ ಬಿದ್ದು, ಮೂರ್ಛೆಯನ್ನು ಹೊಂದಿದರು. ಲೋಕದಲ್ಲಿ ದೇವಾದಿ ಸರ್ವ ಪ್ರಾಣಿಗಳನ್ನು ಪ್ರಳಯ ಕಾಲದಲ್ಲಿ ಕೊಲ್ಲುವ ಯಮನೇ ಕಾಳಗಕ್ಕೆ ಬಂದು ನಿಂತರೆ, ಅವನ ಎದುರಿನಲ್ಲಿ ಯಾರು ತಾನೇ ನಿಂತು ಬದುಕುವರು? ರಾವಣನ ಧೈರ್ಯವನ್ನು ಎಷ್ಟೆಂದು ಹೇಳ ಬೇಕು! ಧೈರ್ಯಗೆಡದೆ, ಯಮನಿದಿರಿನಲ್ಲಿ ನಿಂತು, ಶಕ್ತಿ, ತೋಮರ, ಗದೆ, ಕುಂತ, ಮೊದಲಾದ ಆಯುಧಗಳಿಂದ ಇಡಲು; ಯಮನು ಅವುಗಳನ್ನೆಲ್ಲಾ ಕಡಿದು, ತನ್ನ ಕ್ರೂರವಾದ ಬಾಣಗಳಿಂದ ರಾವಣನ ಪುಷ್ಪಕ ವಿಮಾನವನ್ನು ಕತ್ತರಿಸಿದನು. ಆ ವಿಮಾನವು ಬ್ರಹ್ಮನ ವರದಿಂದ, ಎಷ್ಟೆಷ್ಟು ಕಡಿದಾಗ್ಯೂ, ತಿರಿಗಿ ಮೊದಲಿನ ಹಾಗೆಯೇ ಬೆಳೆಯುತ್ತಿತ್ತು.

ಆಗ ರಾವಣನು ಬಹಳ ಕೋಪಿಷ್ಠನಾಗಿ, ಹತ್ತು ಬಾಣಗಳಿಂದ ಯಮುನ ಕೋಣವನ್ನು ಹೊಡೆಯಲು; ಆ ಕೋಣವು ಆ ಪೆಟ್ಟನ್ನು ತಾಳಲಾರದೆ, ಯಮನನ್ನು ಹೊತ್ತು ಕೊಂಡು, ಒಂದು ಹರದಾರಿಯ ವರಿಗೆ ಹಿಂದಕ್ಕೆ ಓಡಿ ಹೋಯಿತು. ಕಾಲನು ಕೋಣನ ಮೂಗ ಧಾರವನ್ನು ಶೇದಿ, ಹಿಡಿದು ಕೊಂಡು, ನಿಲ್ಲಿಸಿ, ಸಮಾಧಾನವನ್ನು ಮಾಡಿ, ತಿರಿಗಿ ರಾವಣನ ಸಮುಖಕ್ಕೆ

ಬಂದು ನಿಲ್ಲುವದು; ಆ ಯಮನನ್ನು ನೋಡಿ, ಕಾಲ ಮೃತ್ಯುವು—ಎಲೈ, ಮಹಾನುಭಾವನೇ, ನನಗೆ ಅಪ್ಪಣೆಯನ್ನು ಕೊಡು. ಇಂದ್ರಾದಿಗಳನ್ನು ಸ್ವಾಧೀನಾ ಮಾಡಿ ಕೊಳ್ಳುವ ನನಗೆ ಈ ಖೂಳ ದಶಕಂಠನು ಎಷ್ಟು ಮಾತ್ರದವನು! ಎಂದು ಹೇಳಲು; ಯಮನು—ಒಂದು ನಿಮಿಷ ಮಾತ್ರ ತಾಳು ಎಂದು ಹೇಳಿ, ಭಯಂಕರವಾದ ಘೋರ ರೂಪವನ್ನು ಧರಿಸಿ, ಈ ಖಳನನ್ನು ಕೊಂದು ಹಾಕುವೆನೆಂದು, ಕಾಲ ದಂಡವನ್ನು ಕೈಯಲ್ಲಿ ತೆಗೆದು ಕೊಳ್ಳಲು; ಸ್ವರ್ಗವೇ ಮೊದಲಾದ ಸಮಸ್ತ ಲೋಕಗಳು ಬೆದರಿ, ಬೆಂಡಾಗಿ ಹೋದವು. ಇಂದ್ರನೇ ಮೊದಲಾದ ದೇವತೆಗಳೆಲ್ಲಾ ಹಾಹಾಕಾರವನ್ನು ಮಾಡುತ್ತಾ, ಬ್ರಹ್ಮದೇವರ ಬಳಿಗೆ ಓಡಿ ಹೋಗಿ,—ಆ ಕಾಲದಲ್ಲಿ ಪ್ರಳಯವಾಗುತ್ತೆ ಎಂದು ಮೊರೆ ಇಡಲು; ಬ್ರಹ್ಮನು ಬೇಗ ಯಮ ಲೋಕಕ್ಕೆ ಬಂದು, ಎಲ್ಲರಿಗೂ ಅದೃಶ್ಯನಾಗಿ, ಯಮನಿಗೆ ಮಾತ್ರ ಕಾಣಿಸಿ ಕೊಂಡು—ಎಲೈ, ಕಾಲನೇ, ಕಾಲ ದಂಡವನ್ನು ಕೈ ಕೊಳ್ಳ ಬೇಡ. ಯಾಕಂದರೆ, ಈ ಕಾಲ ದಂಡವನ್ನು ಯಾರ ಮೇಲೆ ಹಾಕಿದರೂ ಅವರನ್ನು ಕೊಂದೇ ತೀರ ಬೇಕು ಎಂದು, ನಾನೇ ವರವನ್ನು ಕೊಟ್ಟಿದ್ದೇನೆ. ಈ ರಾವಣನಿಗೆ ಮನುಷ್ಯರೂ ತಿರ್ಯಗ್ಜಂತುಗಳೂ ಹೊರತಾಗಿ, ಮಿಕ್ಕ ದೇವಾದಿಗಳು ಎಲ್ಲರಿಂದಲೂ ಸಾವು ಉಂಟಾಗುವದಿಲ್ಲವೆಂದು, ನಾನೇ ವರವನ್ನು ಕೊಟ್ಟಿದ್ದೇನೆ. ಆದ್ದರಿಂದ ಈ ಕಾಲ ದಂಡವು ರಾವಣನನ್ನು ಕೊಲ್ಲದೆ ಇದ್ದರೂ, ಇದರಿಂದ ರಾವಣನು ಸತ್ತರೂ, ನನ್ನ ಮಾತು ಹುಸಿಯಾಗುವದು. ಹಾಗೆ ಹುಸಿಯಾದಲ್ಲಿ ಸಕಲ ಲೋಕವು ಮುಳುಗಿ ಹೋಗುವದು. ಆದ್ದರಿಂದ ನೀನು ಇವನ ಯುದ್ಧ ಸ್ಥಳದಿಂದ ಮರೆಯಾಗಿ ಹೋಗು ಎಂದು ಹೇಳಿ, ತನ್ನ ಲೋಕಕ್ಕೆ ಹೋಗಲು; ಯಮನು ಬ್ರಹ್ಮ ದೇವರ ಮಾತಿನಿಂದ ಅದೃಶ್ಯನಾಗಲು; ಆಗ ರಾವಣನು—ಯಮನೂ ನನಗೆ ಬೆದರಿ, ಜಗಳದಿಂದ ಮರಸಿ ಕೊಂಡು, ಓಡಿ ಹೋದನು ಎಂದು, ಜಯ ಭೇರಿಯನ್ನು ಹೊಡಿಸಿ, ಅಲ್ಲಿಂದ ರಸಾತಲಕ್ಕೆ ಬಂದು, ನಿವಾತ ಕವಚರೆಂಬ ದೈತ್ಯರೊಡನೆ ಒಂದು ವರುಷ ಪರಿಯಂತರವು ಯುದ್ಧವನ್ನು ಮಾಡಿದಾಗ್ಯೂ, ಇಬ್ಬರಿಗೂ ಜಯ ಪರಾಜಯಗಳು ಉಂಟಾಗದೆ, ಬ್ರಹ್ಮ ದೇವರ ಮಾತಿನಿಂದ ಇಬ್ಬರು ಕೂಡಿ, ಅಗ್ನಿ ಸಾಕ್ಷಿಯಾಗಿ ಸ್ನೇಹವನ್ನು ಮಾಡಿ ಕೊಂಡರು.

ಅಲ್ಲಿಂದ ರಾವಣನು ಹೊರಟು, ಅಶ್ಮಪುರವೆಂಬ ಪಟ್ಟಣಕ್ಕೆ ಬಂದು, ಅಲ್ಲಿರುವ ಕಾಲಕೇಯರೆಂಬ ದೈತ್ಯರೊಡನೆ ಯುದ್ಧವನ್ನು ಮಾಡಿ, ತನ್ನ ತಂಗಿ

ಯಾದ ಶೂರ್ಪನಖಿಯ ಗಂಡ ವಿದ್ಯುಜ್ಜಿಹ್ವನೆಂಬವನನ್ನೂ ಕಾಲಕೇಯರೆಂಬ ಅನೇಕ ದೈತ್ಯರನ್ನೂ ಕೊಂದು, ಆ ಪಟ್ಟಣವನ್ನು ಸೂರೆ ಮಾಡಿ, ಅಲ್ಲಿಂದ ವರುಣನ ಪಟ್ಟಣಕ್ಕೆ ಬಂದು, ಆತನ ಮಕ್ಕಳನ್ನು ರಣದಲ್ಲಿ ಮೂರ್ಛಿತರಾಗುವಂತೆ ಕೆಡಹಿ, ವರುಣನ ಬೊಕ್ಕಸದಲ್ಲಿರುವ ಅನರ್ಘ್ಯಗಳಾದ ರತ್ನಗಳನ್ನು ತೆಗೆದು ಕೊಂಡು, ನಾಗ ಕನ್ನಿಕೆಯರೂ ದೇವ ಕನ್ನಿಕೆಯರೂ ದೈತ್ಯ ಕನ್ನಿಕೆಯರೂ ಮೊದಲಾದ ಯೌವನ ಸ್ತ್ರೀಯರುಗಳನ್ನು ಅಪಹರಿಸಿ ಕೊಂಡು, ವಿಮಾನದ ಮೇಲೆ ಕೂರಿಸಿ ಕೊಂಡು, ಜಯ ಭೇರಿಗಳನ್ನು ಹೊಡಿಸುತ್ತಾ, ತಿರಿಗಿ ಲಂಕಾ ಪಟ್ಟಣಕ್ಕೆ ಬರಲು; ಪುರದ ಹೆಂಗಸರುಗಳು ಹರಿವಾಣದಲ್ಲಿ ಸೊಡರುಗಳನ್ನು ಹತ್ತಿಸಿ ಕೊಂಡು, ನವ ರತ್ನಗಳ ಆರತಿಗಳನ್ನು ತಂದು, ರಾವಣನಿಗೆ ನಿವಾಳಿಸಿದರು. ಆಗ ರಾವಣನು ಓಲಗದ ಚಾವಡಿಯಲ್ಲಿ ಕುಳಿತು ಕೊಂಡು, ಊರಲ್ಲಿ ಇದ್ದ ವಿಭೀಷಣ ಮಾಲ್ಯವಂತ ಮೊದಲಾದವರ ಯೋಗ ಕ್ಷೇಮವನ್ನು ವಿಚಾರಿಸಿ, ತಾನು ಮಾಡಿದ ದಿಗ್ವಿಜಯದ ಸುದ್ದಿಯನ್ನು ತಿಳಿಸಿ, ಅಂತಃಪುರಕ್ಕೆ ಬಂದು, ಮಂಡೋದರಿಯೊಡನೆ ಕೆಲವು ದಿವಸ ಸುಖವಾಗಿದ್ದನು.

ಆಗ ಲಂಕಾ ಪಟ್ಟಣದಲ್ಲಿ ಇದ್ದ ಶೂರ್ಪನಖಿಯು ಅಣ್ಣನಾದ ರಾವಣನ ಬಳಿಗೆ ಬಂದು—ಎಲೈ, ಅಣ್ಣನೇ, ತಂಗಿಗೆ ಓಲೆಗಳೂ ಮಾಂಗಲ್ಯ ಸೂತ್ರವೂ ಬಳೆಗಳೂ ಇರ ಬಾರದೆಂದು, ನನ್ನ ಗಂಡನನ್ನು ಕೊಂದೆಯಾ? ಗಂಡನಿಲ್ಲದೆ ಬದುಕುವ ಹೆಂಗಸಿನ ಬಾಳು ವ್ಯರ್ಥವು! ನನ್ನನ್ನು ಕೊಂದು, ನನ್ನ ಗಂಡನಾದ ವಿದ್ಯುಜ್ಜಿಹ್ವನ ಬಳಿಗೆ ಬೇಗ ಕಳುಹಿಸು ಎಂದು, ಆತನ ಕಾಲಿನ ಮೇಲೆ ಬಿದ್ದು, ಮೊರೆ ಇಡುತ್ತಿರಲು; ರಾವಣನು ಮನಸ್ಸಿನಲ್ಲಿ ವ್ಯಸನ ಪಡುತ್ತಾ, ತಂಗಿಯನ್ನು ಹಿಡಿದು, ಎತ್ತಿ—ರಣದಲ್ಲಿ ಕಾಲಕೇಯರನ್ನು ಕೊಲ್ಲುವಾಗ, ಮದದಿಂದ ನಿನ್ನ ಗಂಡನನ್ನು ಕಾಣದೆ ಕೊಂದೆನು. ನಿನಗೆ ಒಂದೂ ಕಡಿಮೆಯಾಗದಂತೆ ಕಾಪಾಡುವೆನು. ನನ್ನ ಸಕಲ ಐಶ್ವರ್ಯವು ನಿನ್ನ ವಶವಾಗಿರುವದು. ನೀನು ಒಂದಕ್ಕೂ ಯೋಚನೆ ಮಾಡ ಬೇಡ ಎಂದು, ಸಮಾಧಾನವನ್ನು ಮಾಡಿ, ಖರ ದೂಷಣಾದಿ ರಾಕ್ಷಸರನ್ನು ಕರಿಸಿ,—ಹದಿನಾರು ಸಾವಿರ ರಾಕ್ಷಸರೊಡನೆ ಕೂಡಿ, ಈ ಶೂರ್ಪನಖಿಯನ್ನು ಕರೆದು ಕೊಂಡು, ದಂಡಕಾ ವನದಲ್ಲಿರುವ ಜನಸ್ಥಾನವೆಂಬುವದು ಈ ಲಂಕಾ ಪಟ್ಟಣಕ್ಕೆ ಉಕ್ಕಡವಾಗಿರುವದು. ಅಲ್ಲಿ ಹೋಗಿ ಇರಿ ಎಂದು, ಅವರಿಗೆ ಅಪ್ಪಣೇ ಕೊಡಲು; ರಾವಣನ ಚಿಕ್ಕಮ್ಮನ ಮಗನಾದ ಖರನು, ಶೂರ್ಪನಖಿ ಸಹಿತವಾಗಿ, ಜನಸ್ಥಾನಕ್ಕೆ ಹೋಗಿ, ಸುಖವಾಗಿದ್ದನು.

ಆ ಬಳಿಕ ಇತ್ತ ರಾವಣನು ನಿಕುಂಭಿಳೆ ಎಂಬ ರಾಕ್ಷಸರ ಕುಲದೇವತೆಯಾದ ಕಾಳಿಯ ವನಕ್ಕೆ ಹೋಗಲು; ಅಲ್ಲಿ ನೂರು ಯೂಪ ಸ್ತಂಭಗಳಿಂದಲೂ ಆಸುರ ಮಂತ್ರಗಳ ಧ್ವನಿಯಿಂದಲೂ ವಿಚಿತ್ರವಾಗಿರುವ ಯಾಗ ಮಂಟಪದಲ್ಲಿ ಕೃಷ್ಣಾಜಿನವನ್ನೂ ಜಡೆಗಳನ್ನೂ ಧರಿಸಿ ಕೊಂಡು, ಯಜ್ಞವನ್ನು ಮಾಡುತ್ತಲಿರುವ ತನ್ನ ಮಗನಾದ ಮೇಘನಾದನನ್ನು ನೋಡಿ, ಬೇಗ ಬಿಗಿದು ಅಪ್ಪಿ, ಮುಂಡಾಡಿ,—ಇದೇನು ನಿನ್ನ ಉದ್ಯೋಗವು? ಬೇಗ ಹೇಳೆನಲು; ಗುರುವಾದ ಶುಕ್ರಾಚಾರ್ಯನು ರಾವಣನನ್ನು ಕುರಿತು—ಎಲೈ, ರಾಕ್ಷಸ ರಾಜನೇ, ಅತಿ ಸಾಹಸಿಯಾದ ನಿನ್ನ ಮಗ ಮೇಘನಾದನು ಅಶ್ವಮೇಧ, ಅಗ್ನಿಷ್ಟೋಮ, ಅಪ್ತೋರ್ಯಾಮ, ಗೋಮೇಧ, ವೈಷ್ಣವ, ರಾಜಸೂಯ, ವಾಜಪೇಯಗಳೆಂಬ ಏಳು ಯಜ್ಞಗಳನ್ನು ಮಾಡಿ, ಆ ಮೇಲೆ ಮಾಹೇಶ್ವರ ಯಜ್ಞವನ್ನು ಮಾಡಿ, ಅದು ಮುಗಿಯುವ ಕಾಲದಲ್ಲಿ ಪರಮೇಶ್ವರನು ಪ್ರತ್ಯಕ್ಷನಾಗಿ ಬಂದು, ಬಾಣ, ಬಿಲ್ಲು, ಶಕ್ತಿ, ಗದೆ, ಕತ್ತಿ, ಕೊಡಲಿ ಮೊದಲಾದ ಆಯುಧಗಳನ್ನೂ, ರಣದಲ್ಲಿ ಹಗೆಗಳಿಂದ ದುರ್ಜಯವಾದ ರಥವನ್ನೂ, ಜಗಳದಲ್ಲಿ ವೈರಿಗಳ ಕಣ್ಣಿಗೆ ತಾನು ಕಾಣಿಸಿ ಕೊಳ್ಳದೆ, ಹಗೆಗಳ ಮೇಲೆ ಬಾಣ ಪ್ರಯೋಗಗಳನ್ನು ಮಾಡುತ್ತಾ, ವೈರಿಗಳನ್ನು ಜೈಸುವ ಹಾಗೆ ತಾಮಸೀ ಎಂಬ ಮಾಯೆಯನ್ನು ನಿನ್ನ ಮಗನಿಗೆ ಮೆಚ್ಚಿ, ಕೊಟ್ಟನು. ಈ ಮಗನಿಂದ ನಿನಗೆ ಉತ್ತರೋತ್ತರ ಕಾರ್ಯ ಸಿದ್ಧಿಯು ಆಗುವದು, ಅಂದನು. ಆ ಮಾತನ್ನು ಕೇಳಿ, ರಾವಣನು ನಸುನಗುತ್ತಾ,—ಎಲೈ, ಮಗನೇ, ನಮಗೆ ಹಗೆಗಳಾದ ಇಂದ್ರಾದಿ ದೇವತೆಗಳನ್ನು ಭಜಿಸಿದೆ. ನೀನು ಬುದ್ಧಿ ಇಲ್ಲದವನು ಎಂದು, ಮಗನ ಕೈಯನ್ನು ಹಿಡಿದು ಕೊಂಡು, ವಿಭೀಷಣಾದಿಗಳೊಡನೆ ತನ್ನ ಪಟ್ಟಣಕ್ಕೆ ಬಂದು, ಸರ್ವರನ್ನು ಅವರವರ ಮನೆಗೆ ಅಪ್ಪಣೇ ಕೊಟ್ಟು ಕಳುಹಿಸಿದನು. ಆಗ ಏಕಾಂತದಲ್ಲಿ ವಿಭೀಷಣನು ರಾವಣನನ್ನು ಕುರಿತು—ಎಲೈ, ಅಣ್ಣನೇ, ನೀನು ದಿಗ್ವಿಜಯವನ್ನು ಮಾಡಿದ್ದು ಸರಿಯಾದ ಕೆಲಸವು. ಆದರೆ ಅನ್ಯರ ಹೆಂಡರನ್ನು ನೀನು ಬಲಾತ್ಕಾರದಿಂದ ಹಿಡ ತಂದದ್ದು ಬಹಳ ಕೆಟ್ಟ ಕೆಲಸವು. ಆ ಹೆಂಗಸರ ದುಃಖದಿಂದ ನಿನ್ನ ಪರಾಕ್ರಮದ ಬಲುಹು ಮುರಿದು, ನಿನಗೆ ಬಂದ ಹಾನಿಯನ್ನು ಹೇಳುವೆನು; ಕೇಳು. ನಮ್ಮ ತಾಯಿ ಕೈಕಸೆಗೆ ತಂಗಿಯಾದ ಕುಂಭೀನಸಿಯನ್ನು, ಮಧುವೆಂಬ ದನುಜನು ಅಂತಃಪುರವ ಒಳ ಹೊಕ್ಕು, ನಿನ್ನ ಸೇನೆಯನ್ನು ಕಾದಿ, ಕೊಂದು, ಹಿಡು ಕೊಂಡು ಹೋದನು. ತಾನು ಮಾಡಿದ ಕೆಲಸವು ತನಗಾಗದಿರದು ಎಂಬ ಗಾದೆಯು ನಿನಗಾಯಿತು ಎಂದು,

ಹೇಳಲು; ರಾವಣನು—ಇದೇನಾಶ್ಚರ್ಯ? ನೀನೂ ಮೇಘನಾದನೂ ಕುಂಭಕರ್ಣನೂ ಏನು ಮಾಡಿದಿರಿ? ಎಲ್ಲಿದ್ದಿರಿ? ಎಂದು ಕೇಳಲು; ವಿಭೀಷಣನು—ನಾನು ಅಘಮರ್ಷಣ ಮಂತ್ರವನ್ನು ಜಪಿಸುತ್ತಾ, ನೀರಿನಲ್ಲಿ ಮುಳುಗಿದ್ದೆನು. ಮೇಘನಾದನು ನಿಕುಂಭಿಳೆಯಲ್ಲಿ ಯಾಗವನ್ನು ಮಾಡುತ್ತಿದ್ದನು. ಕುಂಭಕರ್ಣನು ಮಲಗಿದ್ದನು. ಮಿಕ್ಕ ರಾಕ್ಷಸ ಕುಮಾರರು ಏನು ಮಾಡುವರು? ಎಂದು ಹೇಳಿದನು.

ಅದನ್ನು ಕೇಳಿ, ರಾವಣನು ಕೋಪದಿಂದ ಕಿಡಿಕಿಡಿಯಾಗಿ, ಕೆಲವು ರಾಕ್ಷಸ ಸೇನಾಪತಿಗಳೊಡನೆ ತಮ್ಮನಾದ ವಿಭೀಷಣನನ್ನು ಲಂಕಾ ಪಟ್ಟಣದ ಸಂರಕ್ಷಣೆಗೆ ಇಟ್ಟು,—ಮಧುವೆಂಬ ಅಸುರನನ್ನು ಯಮ ಪುರಕ್ಕೆ ಕಳುಹಿಸಿ, ಅಮರಾವತಿಗೆ ಹೋಗಿ, ಇಂದ್ರನ ಗರ್ವವನ್ನು ಮುರಿದು, ದೇವತೆಗಳ ಪ್ರಾಣಗಳ ಹಿಂಡುವೆನು. ನನಗೆ ಜಗಳದಲ್ಲಿ ಯಾರು ಇದಿರು? ಎಂದು ಔಡುಗಳನ್ನು ಕಚ್ಚುತ್ತಾ, ಮೊರೆದು, ಘರ್ಜಿಸುತ್ತಾ, ಹೊರಟನು. ಆಗ ಕುಂಭಕರ್ಣ ಮೇಘನಾದನೇ ಮೊದಲಾದ ಸಮಸ್ತ ರಾಕ್ಷಸರು ಸಂಗಡ ಹೊರಟರು. ಆ ಆಶ್ಚರ್ಯವನ್ನು ಏನು ಹೇಳಲಿ? ಆನೆ, ತೇರು, ಕುದುರೆ, ಕೋಣ, ಗೂಳಿ, ಸಿಂಹ, ಶರಭ, ಹುಲಿ, ತೋಳ, ಹಾವು, ಹಂದಿ, ಹೇಸರಕತ್ತೆ, ಮುಂತಾದ ವಾಹನಗಳನ್ನು ಏರಿ, ಆಯುಧಗಳನ್ನು ಧರಿಸಿ, ಕಾಲಭೈರವನ ದಂಡೋ? ಎಂಬಂತೆ ದಶಮುಖನ ಸೇನೆಯು ಹೊರಟಿತು. ದಂಡಿನ ಮುಂದೆ ಮೇಘನಾದನೂ, ಹಿಂದೆ ಕುಂಭಕರ್ಣನೂ, ನಡವೆ ರಾವಣನೂ ಬಂದರು. ಹೀಗೆ ನಾಲ್ಕು ಸಾವಿರ ಅಕ್ಷೋಹಿಣಿಯ ರಾಕ್ಷಸರ ಬಲವು ಪ್ರಳಯ ಕಾಲದಲ್ಲಿ ಸಮುದ್ರವು ಮೇಲಕ್ಕೆ ಉಕ್ಕಿ, ಬ್ರಹ್ಮಾಂಡ ಮಂಡಲವನ್ನು ಮುತ್ತುವ ಹಾಗೆ, ಮಧು ದನುಜನ ಪುರವನ್ನು ಮುತ್ತಿತು. ಆ ಮಧುವೆಂಬ ದೈತ್ಯನು ಶಿವನನ್ನು ಪೂಜಿಸಿ, ಒಂದು ತ್ರಿಶೂಲವನ್ನು ಪಡೆದಿರುವನು. ಆ ತ್ರಿಶೂಲವನ್ನು ಕೈಯಲ್ಲಿ ತೆಗೆದು ಕೊಂಡು, ಕಾಳಗಕ್ಕೆ ಹೊರಟರೆ, ಹರನೊಬ್ಬನು ಉಳಿದು, ಮತ್ತೊಬ್ಬರು ನಿಲ್ಲಲಾರರು. ಆ ಬಲದಿಂದ ಆ ಮಧು ದೈತ್ಯನು ರಾವಣನ ಸೇನೆಯನ್ನು ಲಕ್ಷ್ಯಕ್ಕೆ ತಾರದೆ, ಧೈರ್ಯವಾಗಿದ್ದನು. ಅಷ್ಟರೊಳಗೆ ರಾವಣನ ಚಿಕ್ಕಮ್ಮನಾದ ಕುಂಭೀನಸಿಯು ಬೇಗ ರಾವಣನ ಬಳಿಗೆ ಬಂದು, ಬಲ ಮಧ್ಯದಲ್ಲಿ ನಿಂತು, ಆತನನ್ನು ಕುರಿತು—ಎಲೈ, ಮಗನೇ, ದಶಕಂಧರಾ, ಕೇಳು. ನನ್ನಲ್ಲಿ ಕನಿಕರವನ್ನು ಇಡು. ಕುಲಸ್ತ್ರೀಯರಿಗೆ ವಿಧವತ್ವಕ್ಕಿಂತ ಹೆಚ್ಚಾದ ಮತ್ತೊಂದು ದುಃಖವಿಲ್ಲ. ನನ್ನ ಗಂಡನಾದ ಮಧುವೆಂಬ ದೈತ್ಯನನ್ನು ನನ್ನ ಮೇಲೆ ದೃಷ್ಟಿ ಇಟ್ಟು, ಕಾಪಾಡು. ನನ್ನ

ಮಾತನ್ನು ಮೀರದೆ, ಸಲ್ಲಿಸು ಎಂದು ಬೇಡಿ ಕೊಳ್ಳಲು; ಆಗ ರಾವಣನು—ನಿನ ಗಂಡನನ್ನು ಕರೆ! ಭಯ ಪಡ ಬೇಡ! ಹೋಗೆಂದನು. ಆಗ ಅವಳು ಮಲಗಿ ರುವ ತನ್ನ ಗಂಡನ ಬಳಿಗೆ ಬಂದು, ಎಬ್ಬಿಸಿ, ಉಚಿತವಾದ ಮಾತಿನಲ್ಲಿ ಗಂಡ ನನ್ನು ಕುರಿತು—ದೇವೇಂದ್ರನನ್ನು ಜೈಸುವದಕ್ಕೆ ನನ್ನ ಮಗ ದಶಾನನನು ಸೇನೆ ಸಹಿತ ಹೊರಟು ಬಂದಿರುವನು. ಆತನ ಬಳಿಗೆ ಹೋಗಿ, ಆದರಿಸಿ, ಅವನಿಗೆ ಯುದ್ಧದಲ್ಲಿ ನಿನ್ನ ಭುಜಗಳ ಸಹಾಯವನ್ನು ಕೊಡು ಎಂದು ಹೇಳಲು; ಮಧು ದೈತ್ಯನು ಆ ಮಾತನ್ನು ಕೇಳಿ, ರಾವಣನೆಡೆಗೆ ಬಂದು, ಯಥಾ ಯೋಗ್ಯವಾಗಿ ಪೂಜಿಸಿ, ತನ್ನ ಮನೆಗೆ ಕರ ತಂದನು.

ಆ ಬಳಿಕ ರಾವಣನು ಆ ರಾತ್ರೆ ಅಲ್ಲಿ ಇದ್ದು, ಮರು ದಿವಸ ಬೆಳಗ್ಯೆ ಎದ್ದು, ಆ ಮಧು ದೈತ್ಯನನ್ನು ಸಂಗಡ ಕರೆದು ಕೊಂಡು, ಇಂದ್ರನ ಅಮರಾವತೀ ಪಟ್ಟಣವನ್ನು ಕುರಿತು ಬರುತ್ತಾ, ಸೂರ್ಯನು ಮುಳುಗಲು, ಕೈಲಾಸ ಪರ್ವತದ ತೊಪ್ಪಲಲ್ಲಿ ತನ್ನ ಬಿಡಾರವನ್ನು ಬಿಡಿಸಿ, ಕೋಮಲವಾದ ಚಿಗುರುಗಳನ್ನು ಮಂಚದ ಮೇಲೆ ಹಾಸಿಸಿ, ತಣ್ಣಗಿರುವ ಗಾಳಿಗೆ ಮೈಯೊಡ್ಡಿ, ಮಲಗಿರಲು; ಆ ಸಮಯದಲ್ಲಿ ದೇವಗಣಿಕೆಯರಾದ ಅಪ್ಸರ ಸ್ತ್ರೀಯರುಗಳಲ್ಲಿ ಅತಿ ಚೆಲುವೆಯಾದ ರಂಭೆ ಎಂಬವಳು ಹೋಗುತ್ತಿರಲು; ಅವಳನ್ನು ನೋಡಿ, ಅವಳ ಬಳಿಗೆ ಹೋಗಿ, ತಡೆಯಲು; ಆಕೆಯು ಅದೃಶ್ಯಳಾಗಿ, ತಾನು ವರಿಸಿದ್ದ ಕುಬೇರನ ಮಗನಾದ ನಳಕೂಬರನ ಬಳಿಗೆ ಹೋಗಿ, ದಾರಿಯಲ್ಲಿ ದುಷ್ಟ ದಶಾನನು ಮಾಡಿದ ದುರ್ನಡತೆಯನ್ನು ಹೇಳಲು; ಆ ನಳಕೂಬರನು ಕೋಪಿಷ್ಠನಾಗಿ,—ಈ ದಿನ ಮೊದಲುಗೊಂಡು ಈ ರಾವಣನು ಪರ ಸ್ತ್ರೀಯರುಗಳನ್ನು ಬಲಾತ್ಕಾರದಿಂದ ಹಿಡಿದರೆ, ಅವನ ಹತ್ತು ತಲೆಗಳು ಸೀಳಿ ಹೋಗಿ, ಸಾಯಲಿ ಎಂದು, ಶಾಪವನ್ನು ಕೊಟ್ಟನು.

ಆ ಬಳಿಕ ರಾವಣನು ಆಕಾಶ ವಾಣಿಯಿಂದ ತನಗೆ ನಳಕೂಬರನ ಶಾಪ ಬಂದದ್ದನ್ನು ಕೇಳಿದಾಗ್ಯೂ, ಗಣನೆಗೆ ತಾರದೆ, ಬೆಳಗ್ಯೆ ಸೇನೆ ಸಹಿತ ಅಮರಾವತೀ ಪಟ್ಟಣದ ಬಳಿಗೆ ಬಂದನು. ಆಗ ದೇವತೆಗಳು—ಓಹೋ! ಈಗ ಸೇನೆ ಸಹಿತ ಬಂದವನು ರಾವಣನಾಗ ಬೇಕು. ಈ ಸಮಯದಲ್ಲಿ ನಮ್ಮನ್ನು ಕೈಹಿಡಿದು, ಈ ಖೂಳನದೆಸೆಯಿಂದ ನಮ್ಮನ್ನು ಕಾಪಾಡುವವರು ಯಾರೋ? ಕಾಣೆವಲ್ಲಾ! ಎಂದು ಭಯದಿಂದ ದೇವೇಂದ್ರನ ಬಳಿಗೆ ಓಡಿ ಹೋಗಿ—ಎಲೈ, ಒಡೆಯನೇ, ಈಗ ರಾವಣನಿಂದ ನಮ್ಮ ಲೋಕಕ್ಕೆ ಭಯ ಬಂದಿರುವದು. ಈ ಭಯವನ್ನು ಪರಿಹರಿಸ ತಕ್ಕವರು ಹರಿ ಹರ ಬ್ರಹ್ಮರಲ್ಲದೆ ಮಿಕ್ಕವರಿಂದ ತೀ

ರದು, ಎಂದು ಹೇಳಿದರು. ಆಗ ಚಾವಡಿಯಲ್ಲಿದ್ದ ಏಕಾದಶ ರುದ್ರರೂ, ದ್ವಾದಶಾದಿತ್ಯರೂ, ಅಷ್ಟ ವಸುಗಳೂ, ಸಪ್ತ ಮರುತ್ತುಗಳೂ, ಸಿದ್ಧರೂ, ಸಾಧ್ಯರೂ, ವಿದ್ಯಾಧರರೂ, ಅಪ್ಸರರೂ, ಗುಹ್ಯರೂ, ಮೊದಲಾದ ನಾನಾ ದೇವತೆಗಳು ಕೂಡಿ, ಗರ್ವದಿಂದ ತಮ್ಮ ತಮ್ಮ ಪಂಥಗಳನ್ನು ಹೇಳಿ ಕೊಳ್ಳುತ್ತಾ,—ನಾವೆಲ್ಲರು ಇರುವಾಗ್ಯೆ ಈ ಖೂಳ ದಶಕಂಧರನಿಗೆ ಹೆದರಲೇಕೆ? ನಾವು ಹೋಗಿ, ಇವನ ದಳವನ್ನೆಲ್ಲಾ ಮುರಿದು, ಇವನನ್ನು ಲಂಕೆಗೆ ಓಡಿಸುವೆವು ಎಂದು, ಆಯುಧಗಳನ್ನು ಧರಿಸಿ, ಘರ್ಜಿಸುತ್ತಾ, ಏಳಲು;—ಹೋಹೋ! ತಾಳಿ, ತಾಳಿ! ಈ ರಾವಣನೊಡನೆ ನಮಗೆ ಯುದ್ಧವು ಸಾಗಲಾರದು ಎಂದು, ಅವರನ್ನೆಲ್ಲಾ ಸಮಾಧಾನ ಮಾಡಿ, ನಿಲ್ಲಿಸಿ, ಇಂದ್ರನು ಆ ರಾತ್ರಿಯಲ್ಲಿಯೇ ಗುಪ್ತವಾಗಿ ಶೇಷ ಶಯನನಾದ ವಿಷ್ಣುವಿನ ಬಳಿಗೆ ಹೋಗಿ, ಆತನ ಪಾದಕ್ಕೆ ಸಮಸ್ಕರಿಸಿ, ಕೈ ಮುಗಿದು ಕೊಂಡು—ದೇವಾ, ಒಂದು ಬಿನ್ನಹವಿರುವದು. ರಾವಣನೆಂಬ ಖೂಳ ರಕ್ಕಸನು ಬ್ರಹ್ಮ ವರದಿಂದ ಗರ್ವಿತನಾಗಿ, ನಮ್ಮ ದೇವ ಲೋಕವನ್ನು ಸುಡಬೇಕೆಂದು ಯುದ್ಧಕ್ಕೆ ಬಂದಿದ್ದಾನೆ. ಆತನ ಮೇಲೆ ನಮ್ಮ ಪರಾಕ್ರಮವು ನಡೆಯಲಾರದು. ನೀನೇ ಬಂದು, ಚಕ್ರದಿಂದ ಕತ್ತರಿಸಿ, ನಿನ್ನ ಭಕ್ತರಾದ ನಮ್ಮನ್ನು ಕಾಪಾಡ ಬೇಕೆಂದು ಬೇಡಿ ಕೊಂಡನು. ಆ ಮಾತನ್ನು ಕೇಳಿ, ವಿಷ್ಣುವು—ಈಗ ನಾನು ಬರ ಕೂಡದು. ಬ್ರಹ್ಮನ ವರವನ್ನು ಮನ್ನಿಸಿ, ಮುಂದೆ ಮನುಜನಾಗಿ, ಭೂಮಿಯಲ್ಲಿ ಹುಟ್ಟಿ, ಕಪಿಗಳ ಸೇನೆಯನ್ನು ಕೂಡಿ ಕೊಂಡು, ಆ ರಾವಣನನ್ನು ಕೊಲ್ಲುವೆನು. ಆ ಪರಿಯಂತರವು ನೀವು ಆತನ ಉಪದ್ರವನ್ನು ಸೈರಿಸಿ ಕೊಂಡಿರ್ರಿ, ಎಂದು ಹೇಳಿ ಕಳುಹಿಸಿದನು. ಅದನ್ನು ಕೇಳಿ, ದೇವೇಂದ್ರನು ಪುನಹ ತನ್ನ ಅಮರಾವತೀ ಪಟ್ಟಣಕ್ಕೆ ಬಂದು ಶೇರಿದನು.

ಮೂರನೇ ದಿವಸ ಉದಯವಾಗುವದಕ್ಕಿಂತ ಮುಂಚೆ ಭೇರೀ ಮೊದಲಾದ ವಾದ್ಯಗಳ ರವದೊಡನೆ ರಾಕ್ಷಸರ ಸೇನೆಯು ಸಿಂಹ ಘರ್ಜನೆಯನ್ನು ಮಾಡುತ್ತಾ, ಅಮರಾವತಿಯನ್ನು ಮುತ್ತಿ ಕೊಳ್ಳಲು; ದೇವತೆಗಳು ಬೀದಿ ಬೀದಿಯಲ್ಲಿ ಓಡ್ಯಾಡುತ್ತಾ, ಹಾಹಾಕಾರವನ್ನು ಮಾಡುತ್ತಿರಲು; ದೇವೇಂದ್ರನು—ಹೋಹೋ! ಸಾಕು, ಸಾಕು! ಯುದ್ಧಕ್ಕೆ ನಡೆಯಲಿ. ನಮ್ಮ ಬಲಗಳನ್ನು ಬರ ಹೇಳೆನುತ್ತಾ, ಕೈ ಬೀಸಲು; ದೇವತೆಗಳಲ್ಲಿ ಘಟ್ಟಿಗರಾದವರು ಹೊರಟು, ಸಮುದ್ರವು ಸಮುದ್ರವನ್ನು ಕೂಡುವಂತೆ ರಾಕ್ಷಸರ ಬಲವನ್ನು ಕೂಡಲು; ಆಗ ಎರಡು ಬಲವೂ ಕೂಡಿ, ಒನಿಕೆಯೂ, ಗದೆಯೂ, ಗುರಾಣಿಯೂ, ಕತ್ತಿಯೂ, ಮುಸುಂಡಿಯೂ, ಪ್ರಾಸವೂ, ಶಕ್ತಿಯೂ, ಬಾಣಗಳೂ, ಎಂಬ

ನಾನಾ ವಿಧವಾದ ಆಯುಧಗಳಿಂದ ಕಾದುತ್ತಾ, ಮಾತಿನಿಂದ ಮೂದಲಿಸುತ್ತಾ, ಎದುರು ಬಿದ್ದವರನ್ನು ಕೊಲ್ಲುತ್ತಾ, ಜಗಳವಾಡುತ್ತಿರಲು; ಆಗ ರಕ್ತದಿಂದ ನೆನೆದ ಮೈಗಳೂ, ಹೊರಗೆ ಹೊರಟ ಕರುಳುಗಳೂ, ತುಂಡು ತುಂಡಾದ ಕೈ ಕಾಲುಗಳೂ ಉಳ್ಳವರಾಗಿ, ದೇವತೆಗಳಲ್ಲಿಯೂ ರಾಕ್ಷಸರಲ್ಲಿಯೂ ಬಹು ಜನವು ಸತ್ತು ಹೋದರು. ಹೀಗೆ ಯುದ್ಧವಾಗುವಲ್ಲಿ, ಬಲಿಷ್ಠರಾದ ರಾಕ್ಷಸರ ಬಲವು ದೇವತೆಗಳ ಬಲದಿಂದ ಪೆಟ್ಟು ಬಿದ್ದು, ಕಂಗೆಟ್ಟು, ದಿಕ್ಕು ದಿಕ್ಕಿಗೆ ಓಡುತ್ತಿತ್ತು. ಅದನ್ನು ಕಂಡು, ರಾವಣನು ಶುಕ, ಸಾರಣ, ಮಹೋದರ, ಧೂಮ್ರಾಕ್ಷ, ದುರ್ಮುಖ, ಖರ, ಮಹಾಪಾರ್ಶ್ವ, ಮಾರೀಚ, ಪ್ರಹಸ್ತ, ನಿಕುಂಭ, ತ್ರಿಶಿರ, ದೂಷಣ, ಯಜ್ಞಾಂತಕ, ಸುರಾಂತಕ, ನರಾಂತಕ, ಸೂರ್ಯರಿಪು, ವಿಕಟ, ಸುಪ್ತಘ್ನ, ದುರ್ಧರ, ಸುಮಾಲಿ, ಮೊದಲಾದ ರಾಕ್ಷಸ ಶ್ರೇಷ್ಠರನ್ನು ಯುದ್ಧಕ್ಕೆ ನೇಮಿಸಲು; ಸುಮಾಲಿ ಎಂಬವನು ರಾಕ್ಷಸ ಸೇನೆಗಳನ್ನು ಕೂಡಿ ಕೊಂಡು ಬಂದು, ಸರಳ ಮಳೆಯನ್ನು ಸುರಿಸುತ್ತಾ, ದೇವತೆಗಳನ್ನು ದಿಕ್ಕು ದಿಕ್ಕಿಗೆ ಓಡಿಸುತ್ತಿರಲು; ಅದನ್ನು ನೋಡಿ, ವಸುಗಳೊಳಗೆ ಎಂಟನೆಯವನಾದ ಸಾವಿತ್ರನೆಂಬವನು ರಥಾರೂಢನಾಗಿ, ಸುಮಾಲಿಯ ಎದುರಿಗೆ ಬಂದು ನಿಂತು, ಬಿಲ್ಲಿಗೆ ಹೆದೆಯನ್ನು ಏರಿಸಿ, ಅನೇಕ ಬಾಣಗಳನ್ನು ಸುಮಾಲಿಯ ಮೇಲೆ ಹಾಕಲು; ಆತನು ಆ ಬಾಣಗಳನ್ನೆಲ್ಲಾ ಕತ್ತರಿಸಿ, ಪ್ರತಿಯಾಗಿ ಸಾವಿತ್ರನ ಮೇಲೆ ನೂರು ಬಾಣಗಳನ್ನು ಎಸೆದು, ಆತನ ತೇರಿನ ಅಚ್ಚನ್ನು ಕತ್ತರಿಸಿದನು. ಆಗ ಸಾವಿತ್ರನು ಮತ್ತೊಂದು ತೇರನ್ನು ಏರಿ ಬಂದು, ಹತ್ತು ಬಾಣದಿಂದ ಸುಮಾಲಿಯ ಸಾರಥಿಯ ತಲೆಯನ್ನೂ, ಇಪ್ಪತ್ತು ಬಾಣದಿಂದ ರಥಾಶ್ವಗಳನ್ನೂ, ನಾಲ್ಕು ಬಾಣದಿಂದ ರಥದ ಧ್ವಜವನ್ನೂ, ಐವತ್ತು ಬಾಣದಿಂದ ತೇರನ್ನೂ, ನೂರು ಬಾಣದಿಂದ ಸುಮಾಲಿಯ ಕೈಯಲ್ಲಿರುವ ಬಿಲ್ಲನ್ನೂ ಕತ್ತರಿಸಿ, ಬೊಬ್ಬಿರಿದನು. ಆಗ ಸುಮಾಲಿಯು ವಿರಥನಾದಾಗ್ಯೂ, ಧೈರ್ಯ ಗೆಡದೆ, ಭೂಮಿಗೆ ಧುಮುಕಿ, ಗದೆಯನ್ನು ತೆಗೆದು ಕೊಂಡು, ಮೇಲೆ ಬರುತ್ತಿರಲು; ಸಾವಿತ್ರನು ತಾನೂ ಗದೆಯನ್ನು ತೆಗೆದು ಕೊಂಡು, ಯುದ್ಧಕ್ಕೆ ನಿಂತನು. ಆಗ ಇಬ್ಬರು ಗದಾಯುದ್ಧವನ್ನು ಮಾಡುತ್ತಿರುವಲ್ಲಿ, ಶೂರನಾದ ಸಾವಿತ್ರನು ಸುಮಾಲಿ ಹೊಡೆದ ಗದೆಯ ಪೆಟ್ಟನ್ನು ತಪ್ಪಿಸಿ ಕೊಂಡು, ಅವನು ಆಕಾಶಕ್ಕೆ ಹಾರಿ ಹೋಗುವ ವೇಳೆಯಲ್ಲಿ ಮರ್ಮವರಿತು, ತನ್ನ ಗದೆಯಿಂದ ಸುಮಾಲಿಯ ಸೊಂಟಕ್ಕೆ ಹೊಡೆಯಲು; ಅವನು ನಡು ಮುರಿದು, ಭೂಮಿಯಲ್ಲಿ ಬಿದ್ದು, ಸತ್ತು ಹೋದನು.

ಅದನ್ನು ಕಂಡು, ಪ್ರಹಸ್ತ ಮಾರೀಚನೇ ಮೊದಲಾದ ಎಲ್ಲಾ ರಾಕ್ಷಸ ಸೇ

ನಾಧಿಪತಿಗಳು ಬಂದು, ಸಾವಿತ್ರನನ್ನು ನಾಲ್ಕು ಕಡೆಯಲ್ಲಿಯೂ ಮುಸುಕಿ ಕೊಂಡು, ಬಾಣದ ಮಳೆಯನ್ನು ಕರೆಯುತ್ತಿರಲು; ಉಳಿದ ಏಳು ಮಂದಿ ವಸುಗಳು ಸಾವಿತ್ರನಿಗೆ ಸಹಾಯವಾಗಿ ಬಂದು, ರಾವಣನ ಸೇನಾಧಿಪತಿಗಳನ್ನು ಬಾಣ ಪ್ರಯೋಗಗಳಿಂದ ಮೂರ್ಛಾಗತರಾಗಿ ಮಾಡಿದರು. ಅದನ್ನು ನೋಡಿ, ರಾವಣನು ತಾನೇ ಯುದ್ಧ ಸನ್ನದ್ಧನಾಗಿ ಹೊರಡುತ್ತಿರಲು; ಅದನ್ನು ಮೇಘನಾದನು ಕಂಡು, ರಾವಣನನ್ನು ನಿಲ್ಲಿಸಿ, ತಾನು ಧನುರ್ಬಾಣವನ್ನು ತೆಗೆದು ಕೊಂಡು, ಪ್ರಳಯ ಕಾಲದ ಯಮನಂತೆ ದೇವ ಸಮೂಹವನ್ನು ಹೊಕ್ಕು, ಬಾಣಗಳನ್ನು ಹೊಡೆಯುತ್ತಾ, ಅಷ್ಟ ವಸುಗಳನ್ನೂ ದ್ವಾದಶಾದಿತ್ಯರನ್ನೂ ಏಕಾದಶ ರುದ್ರರನ್ನೂ ಸಪ್ತ ಮರುತ್ತುಗಳನ್ನೂ ಮೂರ್ಛೆಗೆಡವುತ್ತಾ, ದೇವ ಬಲವನ್ನು ಓಡಿಸುತ್ತಿರಲು; ದೇವೇಂದ್ರನು ಅದನ್ನು ಕಂಡು, ಐರಾವತವನ್ನು ಏರಿ, ವಜ್ರಾಯುಧವನ್ನು ಧರಿಸಿ, ಯುದ್ಧಕ್ಕೆ ಹೊರಡುವಷ್ಟರಲ್ಲಿಯೇ, ಆತನ ಮಗನಾದ ಜಯಂತನು ತಂದೆಯನ್ನು ಕುರಿತು—ಈ ಅಲ್ಪನಾದ ರಾವಣಿಯ ಯುದ್ಧಕ್ಕೆ ನೀನೇ ಹೋಗ ಬೇಕೇ? ನಾನು ಹೋಗಿ, ಇವನನ್ನು ಕೊಲ್ಲುವೆನು ಎಂದು ಹೇಳಿ, ತಂದೆಯನ್ನು ನಿಲ್ಲಿಸಿ, ತಾನು ರಥಾರೂಢನಾಗಿ ಮೇಘನಾದನ ಸಮುಖಕ್ಕೆ ಬಂದು ನಿಂತು—ಎಲೈ, ನೀಚ ರಾಕ್ಷಸನೇ, ಹೇಡಿಗಳಾದ ದೇವತೆಗಳನ್ನು ಜೈಸಿದ ಮಾತ್ರಕ್ಕೆ ಘಟ್ಟಿಗನಾದೀಯಾ? ಇಗೋ, ನಾನು ಬಂದಿದ್ದೇನೆ. ನನ್ನ ಸಂಗಡ ಹಿಂಜರಿಯದೆ, ಒಂದು ಘಳಿಗೆ ನಿಂತು, ಯುದ್ಧಾ ಮಾಡಿದರೆ, ನಿನ್ನನ್ನು ಕೊಂದು, ನಿನ್ನ ಮಾಂಸಗಳನ್ನು ನರಿ, ಹದ್ದು, ಕಾಗೆಗಳ ಪಾಲು ಮಾಡುವೆನು, ಎನಲು; ಮೇಘನಾದನು ಕೇಳಿ, ನಸು ನಕ್ಕು—ಎಲೈ, ಜಯಂತನೇ, ಲೋಕದಲ್ಲಿ ಘಟ್ಟಿಗರಾದವರು ಕೈಯಿಂದ ಮಾಡಿ ತೋರಿಸುವರೇ ಹೊರ್ತು, ನಿನ್ನ ಹಾಗೆ ಬಾಯಿಗೆ ಬಂದ ಹಾಗೆ ಹರಟರು, ಎಂದು ಹೇಳಿ, ಕಾಳ ಸರ್ಪಗಳಿಗೆ ಸರಿಯಾದ ಹತ್ತು ಬಾಣಗಳಿಂದ ಆತನ ಎದೆಯು ಶೀಳುವ ಹಾಗೆ ಹೊಡೆಯಲು; ಜಯಂತನು ಆ ಬಾಣಗಳನ್ನು ಮಧ್ಯ ಮಾರ್ಗದಲ್ಲಿಯೇ ಕತ್ತರಿಸಿ, ನೂರು ಬಾಣಗಳಿಂದ ರಾವಣಿಯ ರಥವನ್ನು ಕತ್ತರಿಸಿ, ವಿರಥನಾಗಿ ಮಾಡಿದನು. ಆಗ ರಾವಣಿಯು ಕಾಲಾಗ್ನಿಯೋಪಾದಿಯಲ್ಲಿ ಉರಿಯುತ್ತಾ, ಈಶ್ವರನು ಕೊಟ್ಟ ಶಕ್ತ್ಯಾಯುಧವನ್ನು ಆತನ ಮೇಲೆ ಹಾಕಲು; ಅದರ ಹೊಡತವನ್ನು ಸಹಿಸಲಾರದೆ, ಜಯಂತನು ಕೆಳಗೆ ಬಿದ್ದು, ಒದ್ದು ಕೊಳ್ಳುತ್ತಾ, ಮೂರ್ಛೆಯನ್ನು ಹೊಂದಲು; ಅವನ ಮಾತಾಮಹನಾದ ಪುಲೋಮನು ಬೇಗ ಬಂದು, ಆತನನ್ನು ಎತ್ತಿ ಕೊಂಡು ಹೋದನು.

ಆಗ ದೇವೇಂದ್ರನು ರಣದಲ್ಲಿ ತನ್ನ ಮಗನನ್ನು ಕಾಣದೆ, ತಾನೇ ಯುದ್ಧಕ್ಕೆ ಬರಲು; ಅದನ್ನು ರಾವಣನು ಕಂಡು, ರಾವಣಿಯನ್ನು ಹಿಂದಕ್ಕೆ ನಿಲ್ಲಿಸಿ, ತಾನು ಹತ್ತು ತೋಳುಗಳಲ್ಲಿ ಹತ್ತು ಬಿಲ್ಲುಗಳನ್ನು ತೆಗೆದು ಕೊಂಡು, ಕ್ರೂರವಾದ ಬಾಣಗಳನ್ನು ಕಿವಿಯ ತನಕ ಶೆಳೆದು ಶೆಳೆದು, ಸುರಿಯುತ್ತಿರಲು; ಆಗ—ದಿಕ್ಕುಗಳೇನಾಯಿತೋ? ಆಕಾಶವು ಎಲ್ಲಿ ಅಡಗಿತೋ? ಎಂದು, ಜನರು ಹೇಳುತ್ತಿರಲು; ದೇವೇಂದ್ರನು ಆ ಬಾಣಗಳನ್ನೆಲ್ಲಾ ನುಚ್ಚುನುರಿಯಾಗಿ ಕತ್ತರಿಸಿ, ಬಾಣ ಪಂಜರಗಳಿಂದ ರಾವಣನು ತಲೆ ಎತ್ತದಂತೆ ಅವನನ್ನು ಮುಚ್ಚಲು; ದಶಕಂಠನು ಇಂದ್ರನ ಬಾಣಗಳನ್ನೆಲ್ಲಾ ತುಂಡು ತುಂಡಾಗಿ ಮಾಡುತ್ತಿದ್ದನು. ಮತ್ತೆ ದೇವೇಂದ್ರನು ಬಾಣ ಪ್ರಯೋಗಗಳನ್ನು ಮಾಡಿ, ರಾವಣನ ಸಾರಥಿಯನ್ನು ಕಡಿದು, ರಥವನ್ನು ಕೊಚ್ಚಿ, ಹತ್ತು ಕೈಗಳಲ್ಲಿದ್ದ ಬಿಲ್ಲುಗಳನ್ನು ಕತ್ತರಿಸಿ, ಕವಚವನ್ನು ಖಂಡಿಸಿ, ವಿರಥನನ್ನು ಮಾಡಲು; ಆಗ ರಾವಣನು ಗದೆಯನ್ನು ತೆಗೆದು ಕೊಂಡು, ಇಂದ್ರನನ್ನು ಹೊಡೆಯಲು; ಮೇಲೆ ಬಿದ್ದು ಬರುವದನ್ನು ತಿಳಿದು, ಇಂದ್ರನು ತನ್ನ ವಜ್ರಾಯುಧದಿಂದ ಅಪ್ಪಳಿಸಲು; ರಾವಣನು ಮೂರ್ಛಾಗತನಾಗಿ ಬಿದ್ದು, ಎಚ್ಚರಿಸಿ ಕೊಳ್ಳದೆ ಇದ್ದನು.

ಆಗ ರಾವಣಿಯು ಈಶ್ವರನು ಕೊಟ್ಟ ತಾಮಸೀ ಎಂಬ ಮಾಯೆಯನ್ನು ಆಶ್ರೈಸಿ, ಇಂದ್ರನ ಕಣ್ಣಿಗೆ ಕಾಣಿಸಿ ಕೊಳ್ಳದೆ, ಅಪರಿಮಿತವಾದ ಮಹಾಸ್ತ್ರಗಳನ್ನು ಸುರಿಯುತ್ತಿರಲು; ಇಂದ್ರನು ಹಗೆಯನ್ನು ಕಾಣದೆ, ಅಸ್ತ್ರಗಳ ಪೆಟ್ಟನ್ನು ಸಹಿಸಲಾರದೆ, ಹಿಂದು ಮುಂದು ತೋರದೆ, ಕಂಗೆಟ್ಟಿರುವದನ್ನು ನೋಡಿ, ರಾವಣಿಯು ಇಂದ್ರನ ಮೇಲೆ ಬಿದ್ದು, ತನ್ನ ಬಾಹುಗಳಿಂದ ಬಿಗಿದು ಕಟ್ಟಿ, ತನ್ನ ರಥದ ಮೇಲೆ ಹಾಕಿ ಕೊಂಡು, ಜಯ ಭೇರಿಗಳನ್ನು ಹೊಡಿಸುತ್ತಾ ಬರುವಲ್ಲಿ, ಮೂರ್ಛೆ ಬಿದ್ದು ಇದ್ದ ರಾವಣನು ಬ್ರಹ್ಮನ ವರದ ಬಲದಿಂದ ಚೇತರಿಸಿ ಕೊಂಡು, ತಿರಿಗಿ ಇಂದ್ರನೊಡನೆ ಯುದ್ಧವಾಡ ಬೇಕೆಂದು ಹೊರಟು ಬರುತ್ತಾ, ಇಂದ್ರನನ್ನು ಜೈಸಿ ಹಿಡಿದು ಕೊಂಡು ಬರುವ ಮಗನನ್ನು ಕಂಡು, ಸಂತೋಷ ಸಮುದ್ರದಲ್ಲಿ ಮುಳುಗಿ, ಬಾಚಿ, ತಬ್ಬಿ ಕೊಂಡು, ಇಂದ್ರಲೋಕವನ್ನು ಸೂರೇ ಮಾಡಿ ಕೊಂಡು, ಸಕಲ ರಾಕ್ಷಸ ಸೇನೆ ಸಹಿತವಾಗಿ ಲಂಕಾ ಪಟ್ಟಣಕ್ಕೆ ಬಂದು, ಇಂದ್ರನನ್ನು ಕಾರಾಗೃಹದಲ್ಲಿ ಇಡಿಸಿ, ಸುಖದಿಂದ ಇದ್ದನು.

ಈ ಸುದ್ದಿಯನ್ನು ಚತುರ್ಮುಖ ಬ್ರಹ್ಮನು ಕೇಳಿ, ಲಂಕಾ ಪಟ್ಟಣಕ್ಕೆ

ಬಂದು–ಎಲೈ, ಮಗನೇ, ರಾವಣನೇ, ಮೂರು ಲೋಕಗಳನ್ನು ಗೆದ್ದೆ; ಲೋಕೈಕ ವೀರನಾದೆ; ನಿನಗಿಂತ ನಿನ್ನ ಕಂದನು ಶೌರ್ಯದಲ್ಲಿ ಹೆಚ್ಚಾದವನು. ಆತನ ಪರಾಕ್ರಮಕ್ಕೆ ಮೆಚ್ಚಿದೆನು. ಇಂದು ಮೊದಲುಗೊಂಡು ಕಂದ ಮೇಘನಾದನಿಗೆ ಇಂದ್ರಜಿತುವೆಂಬ ಹೆಸರು ಪ್ರಸಿದ್ಧಿಯಾಗಲಿ. ಈ ಇಂದ್ರನು ನನ್ನ ಅಪ್ಪಣೆಯಿಂದ ದೇವ ಲೋಕವನ್ನು ಸಲಹುವನು. ಇಷ್ಟು ಜೈಸಿದ್ದೇ ಸಾಕು. ಆತನನ್ನು ಬಿಟ್ಟು ಬಿಡು. ನನ್ನ ಮಾತನ್ನು ನಡಿಸು, ಎನಲು; ಆಗ ಇಂದ್ರಜಿತುವು ಬ್ರಹ್ಮನಿಗೆ ನಮಸ್ಕರಿಸಿ–ಎಲೇ, ಪಿತಾಮಹನೇ, ನಿಮ್ಮ ಮಾತನ್ನು ನಡಿಸುವೆನು. ದೇವೇಂದ್ರನನ್ನು ಬಿಡುವೆನು. ಇವನ ಗೆದ್ದದರಿಂದ ಇಂದ್ರಜಿತುವೆಂಬ ಹೆಸರು ನನಗೆ ಆಯಿತು ಸರಿ. ನೀನು ನನ್ನಲ್ಲಿ ಪ್ರೀತಿಯನ್ನು ಮಾಡಿದರೆ, ನನಗೆ ಅಮರತ್ವವನ್ನು ಕೊಡು, ಎಂದು ಕೇಳಿ ಕೊಳ್ಳಲು; ಬ್ರಹ್ಮನು ಲೋಕದಲ್ಲಿ ಚರಾಚರಗಳಿಗೆ ಸರ್ವಾಮರತ್ವದ ಬಳಕೆ ಇಲ್ಲ. ಸುರ ನರೋರಗ ದೈತ್ಯರೇ ಮೊದಲಾದವರಿಗೂ ಕೂಡ ಸಾವು ತಪ್ಪದು. ಇದನ್ನು ಬಿಟ್ಟು, ಸುಲಭವಾದ ವರಗಳನ್ನು ಬೇಡು; ಕೊಡುವೆನು ಎಂದನು. ಆಗ ಇಂದ್ರಜಿತುವು–ಎಲೈ, ಪಿತಾಮಹನೇ, ನಾನು ಕಾದಲು ಹೊರಡುವ ಸಮಯದಲ್ಲಿ ಅಗ್ನಿಯನ್ನು ಪೂಜಿಸುವೆನು. ಆ ಅಗ್ನಿ ಕುಂಡದಿಂದ ಒಂದು ರಥವು ಉಂಟಾಗಲಿ. ಆ ರಥದ ಮೇಲೆ ನಾನು ಕುಳಿತು, ಜಗಳವಾಡುವಾಗ, ನಾನು ಸಾಯದೆ ಇರುವ ಹಾಗೆ ವರವನ್ನು ಕೊಡು ಎಂದು ಬೇಡಿದ್ದಕ್ಕೆ, ಬ್ರಹ್ಮನು ಆ ಪ್ರಕಾರ ವರವನ್ನು ಕೊಟ್ಟು, ಇಂದ್ರನನ್ನು ಬಿಡಿಸಿ ಕೊಂಡು, ಅಮರಾವತಿಗೆ ಕರೆದು ಕೊಂಡು ಹೋಗಿ,–ನೀನು ಗೌತಮ ಪತ್ನಿಯಾದ ಅಹಲ್ಯೆಯನ್ನು ಕಾಮಿಸಿದ್ದರಿಂದ ಇಂಥಾ ಪರಾಜಯವು ನಿನಗೆ ಉಂಟಾಯಿತು ಎಂದು ಹೇಳಿ, ಆ ಪಾಪ ಪರಿಹಾರಕ್ಕೆ ವೈಷ್ಣವ ಯಾಗವನ್ನು ಇಂದ್ರನ ಕಡೆಯಿಂದ ಮಾಡಿಸಿ, ಅವನ ಮನಸ್ಸನ್ನು ಸಂತೋಷ ಪಡಿಸಿ, ಸ್ವರ್ಗದಲ್ಲಿ ಇಂದ್ರನನ್ನು ಇಟ್ಟು, ತನ್ನ ಸತ್ಯ ಲೋಕಕ್ಕೆ ಹೊರಟು ಹೋದನು.

ಇತ್ತಲಾ ರಾವಣನು ಒಂದು ದಿವಸ ಓಲಗದ ಚಾವಡಿಯಲ್ಲಿ ಕುಳಿತು ಕೊಂಡು, ಇಂದ್ರಾದಿ ದಿಕ್ಪಾಲಕರನ್ನೂ ದೈತ್ಯ ದಾನವಾದಿಗಳನ್ನೂ ಜೈಸಿದ ಗರ್ವದ ಕೊಬ್ಬಿನಿಂದ ಪ್ರಹಸ್ತನೇ ಮೊದಲಾದ ಮಂತ್ರಿಗಳನ್ನು ನೋಡಿ–ನಾವು ಇನ್ಯಾರನ್ನು ಜೈಸ ಬೇಕು? ತ್ರಿಮೂರ್ತಿಗಳಲ್ಲಿ ಬ್ರಹ್ಮ ದೇವನು ನನಗೆ ಮುತ್ತಜ್ಜನು. ಶಿವನ ಶೈಲವನ್ನು ಅಲ್ಲಾಡಿಸಲು, ಆತನು ನನ್ನ ಪರಾಕ್ರಮಕ್ಕೆ ಮೆಚ್ಚಿ, ಚಂದ್ರಹಾಸವೆಂಬ ಕತ್ತಿಯನ್ನು ವರವಾಗಿ ಕೊಟ್ಟು, ಸಂತೋಷ

ಪಡಿಸಿದನು. ವಿಷ್ಣು ಒಬ್ಬನು ಉಳಿದಿರುವನು. ಆತನು ಕ್ಷೀರ ಸಮುದ್ರದಲ್ಲಿ ಮಲಗಿದ್ದಾನಂತೆ. ಅಲ್ಲಿಗೆ ಹೋಗಿ, ಆತನೊಬ್ಬನನ್ನು ಜೈಸಿ ಬಿಟ್ಟರೆ, ಈ ಹದಿನಾಲ್ಕು ಲೋಕದಲ್ಲಿ ನನ್ನ ಎದುರಿಗೆ ನಿಲ್ಲುವವನು ಯಾರೂ ಇಲ್ಲವೆಂದು ಹೇಳುತ್ತಾ ಇರಲು; ವಿಭೀಷಣನು ರಾವಣನನ್ನು ಕುರಿತು—ಎಲೈ, ರಾಕ್ಷಸ ರಾಜನೇ, ಲೋಕದಲ್ಲಿ ಶೂರರು ಇಲ್ಲ ಎಂದು ಹೇಳ ಕೂಡದು. ಒಬ್ಬರಿಗಿಂತ ಒಬ್ಬರು ಘಟ್ಟಿಗರು ಲೋಕದಲ್ಲಿರುವರು. ಸಾವಿರ ತೋಳುಗಳನ್ನು ಧರಿಸಿ, ಚಕ್ರವರ್ತಿ ಎನಿಸಿ ಕೊಂಡಿರುವ ಮಾಹಿಷ್ಮತೀ ಪಟ್ಟಣದ ಅರಸಾದ ಕಾರ್ತ್ತವೀರ್ಯ್ಯಾರ್ಜ್ಜುನನು ಸಾಮಾನ್ಯನೇ? ಜಗದೇಕ ವೀರನಲ್ಲ! ಮತ್ತು ಇಂದ್ರನ ಮಗನಾದ ವಾಲಿ ಎಂಬವನು ಕಿಷ್ಕಿಂಧಾ ಪಟ್ಟಣದಲ್ಲಿ ವಾನರಾಧೀಶ್ವರನಾಗಿರುವನು. ಆತನು ದುಂದುಭಿ ಮಾಯಾವಿಗಳೆಂಬ ಅಪರಿಮಿತ ಬಲ ಪರಾಕ್ರಮಶಾಲಿಗಳನ್ನು ಆಟದಿಂದ ಗೆದ್ದಂಥಾ ಮಹಾ ವೀರನು, ಆತನೇನು ಕಡಿಮೆಯೇ? ಎಂದು ಹೇಳಲು; ರಾವಣನು ಮುಂದೆ ಅವರಿಬ್ಬರನ್ನು ಜೈಸ ಬೇಕೆಂದು, ಪ್ರಹಸ್ತಾದಿ ಮಂತ್ರಿಗಳೊಡನೆ ಕೂಡಿ, ಮಾಹಿಷ್ಮತೀ ಪುರಕ್ಕೆ ಹೋಗಿ, ಆ ಪಟ್ಟಣದ ಹೊರಗಿರುವ ಉದ್ಯಾನ ವನದಲ್ಲಿ ಪಾಳೆಯವನ್ನು ಬಿಟ್ಟು ಕೊಂಡು, ತನ್ನ ದೂತನನ್ನು ಆತನ ಬಳಿಗೆ ಕಳುಹಿಸಲು; ಆ ದೂತನು ಬಂದು, ಕಾರ್ತ್ತವೀರ್ಯ್ಯಾರ್ಜ್ಜುನನ ಮಂತ್ರಿಯನ್ನು ಕಂಡು, ಅವನೊಡನೆ—ನಮ್ಮೊಡೆಯ ದಶಕಂಧರನು ನಿಮ್ಮೊಡೆಯನನ್ನು ಜಗಳಕ್ಕೆ ಕರೆಯುವದಕ್ಕೆ ನನ್ನನ್ನು ಕಳುಹಿಸಿದನು, ಎನಲು; ಆ ಮಂತ್ರಿಯು ಆ ದೂತನೊಡನೆ—ನಮ್ಮ ಧೊರೆಯು ನಾರಿಗಳೊಡನೆ ಕೂಡಿ, ನೀರಾಟಕ್ಕೆ ನರ್ಮ್ಮದಾ ನದಿಗೆ ಹೋಗಿರುವನು; ನಿಮಿಷ ಮಾತ್ರದಲ್ಲಿ ಬರುವನು ಎನಲು; ಆ ಮಾತನ್ನು ಕೇಳಿ, ದೂತ ಬಂದು, ದಶಾನನನಿಗೆ ತಿಳಿಸಲು;—ಆದರೆ ಅಲ್ಲಿಗೆ ನಾನೇ ಹೋಗುವೆನೆಂದು, ನರ್ಮ್ಮದೆಯನ್ನು ಅರಸುತ್ತಾ, ವಿಂಧ್ಯ ಗಿರಿಯ ಕಾಡಿನಲ್ಲಿ ಹೊಕ್ಕು ಬರುತ್ತಾ, ಬೇಸಿಗೆಯ ಬಿಸಲಲ್ಲಿ ಝಳದ ಹೊಯ್ಲಿನಿಂದ ಬಳಲಿ, ಆರು ಜನ ಪ್ರಧಾನರೊಡನೆ ಕೂಡ ನರ್ಮ್ಮದಾ ನದಿಯನ್ನು ಕಂಡು, ಪುಷ್ಪಕ ವಿಮಾನವನ್ನಿಳಿಸಿ, ಆ ಹೊಳೆಯ ಧಡದ ಮರಗಳ ನೆಳಲಿನಿಂದ ತಣ್ಣಗೆ ಇರುವ ಮಳಲಲ್ಲಿ ಕುಳಿತು, ವಿಶ್ರಮಿಸಿ ಕೊಂಡು, ಮಾರೀಚ ಪ್ರಹಸ್ತಾದಿಗಳನ್ನು ಕುರಿತು—ಈ ಹೊಳೆಯ ತೀರ ಸ್ಥಳವು ಬಹು ಚೆಲುವಾಗಿರುವದು. ಈ ನದಿಯಲ್ಲಿ ಸ್ನಾನವನ್ನು ಮಾಡಿ, ಶಂಕರನನ್ನು ಪೂಜಿಸುವೆನು. ಆ ಪೂಜೆಗೆ ಯೋಗ್ಯವಾದ ಹೂವು ಪತ್ರೆಗಳನ್ನು ಒದಗಿಸಿ ಕೊಡಿ, ಎಂದು ಹೇಳಲು; ಅವರು ನದೀ ತೀರದ ಕಾಡಿನಲ್ಲಿ ತಿರಿಗಿ, ಬೇಕಾದಷ್ಟು

ಹೂವು ಪತ್ರೆಗಳನ್ನು ಸಿದ್ಧಾ ಮಾಡಿದರು. ಆ ಬಳಿಕ ನಿಶಾಚರೇಶ್ವರನು ನರ್ಮದಾ ನದಿಯಲ್ಲಿ ಮಿಂದು, ಅದರ ಧಡದಲ್ಲಿ ಕುಳಿತು, ನಡು ಹಗಲಿನಲ್ಲಿ ಮಾಡತಕ್ಕ ನಿತ್ಯ ಕರ್ಮಗಳನ್ನು ನೆರವೇರಿಸಿ, ನಿರ್ಮಲವಾದ ಮಳಲಿನಲ್ಲಿ ಲಿಂಗವನ್ನು ಮಾಡಿ, ಅದರಲ್ಲಿ ಶಿವನನ್ನು ಪ್ರತಿಷ್ಠಿಸಿ, ಅರ್ಘ್ಯ ಪಾದ್ಯವೇ ಮೊದಲಾದ ಷೋಡಶೋಪಚಾರಗಳನ್ನು ಮಾಡಿ, ಶಿವನ ಸಹಸ್ರ ನಾಮವನ್ನು ಹೇಳುತ್ತಾ, ಹೂವು ಬಿಲ್ವ ಪತ್ರೆಗಳನ್ನು ಅರ್ಚಿಸುತ್ತಾ ಇದ್ದನು.

ಹೀಗಿರುವಲ್ಲಿ ಇವನು ಪೂಜೇ ಮಾಡುವ ಸ್ಥಳಕ್ಕೆ ಮುಂದುಗಡೆ ಬಿಲ್ಲಿನ ಎಸುಗೆಯ ಅಳತೆಯಲ್ಲಿ ನರ್ಮದಾ ನದಿಯೊಳಗೆ ಕಾರ್ತ್ತವೀರ್ಯ್ಯಾರ್ಜ್ಜುನನು ನೀರಾಟವನ್ನು ನಾರಿಗಳೊಡನೆ ಕೂಡಿ ಆಡುತ್ತಾ, ನೀರಿನೊಳಗೆ ಮುಳುಗಿ, ಆಡ ಬೇಕೆಂದು ಮನಸ್ಸಾಗಿ, ಆ ನದಿಯಲ್ಲಿ ನೀರು ಸ್ವಲ್ಪವಾಗಿರುವದರಿಂದ ಹೆಚ್ಚಾಗುವದಕ್ಕೆ ತನ್ನ ಎಡಗಡೆಯ ತೋಳುಗಳು ಐನೂರಿಂದ ಇದರ ಪ್ರವಾಹವನ್ನು ತಡೆದು, ನೀರನ್ನು ಹೆಚ್ಚು ಮಾಡಿ ಕೊಂಡು, ಬಲಗಡೆ ಐನೂರು ತೋಳುಗಳಿಂದ ಹೆಂಡರೊಡನೆ ನೀರಾಟವನ್ನು ಮುಳುಗಿ ಆಡುತ್ತಾ ಇದ್ದನು. ಅವನ ತೋಳಿನಿಂದ ನರ್ಮದಾ ನದಿಯ ಪ್ರವಾಹವು ತಡೆಯಲ್ಪಟ್ಟು, ಹಿಂದಕ್ಕೆ ಒದೆಯಲು; ಒದ್ದ ನೀರಿನಿಂದ ರಾವಣನು ಪೂಜೇ ಮಾಡುತ್ತಿದ್ದ ಮಳಲ ಲಿಂಗವೂ ಪೂಜೆಯ ಸಾಮಗ್ರೀಯಗಳೂ ಕೊಚ್ಚಿ ಹೋಗಲು; ರಾವಣನು ಪೂಜೆಯು ನೆರವೇರದೆ ಹೋದ್ದರಿಂದ ಮಹಾ ಕೋಪಿಷ್ಠನಾಗಿ, ದೂತರನ್ನು ಕಳುಹಿಸಿ, ನೀರು ಹೆಚ್ಚಾಗುವದಕ್ಕೆ ಕಾರ್ತ್ತವಿರ್ಯ್ಯಾರ್ಜ್ಜುನನ ದುರುಳತನವೇ ಕಾರಣವೆಂದು ತಿಳಿದು, ಕೋಪದಿಂದ ಕಣ್ಣು ಕಾಣದೆ, ಅವನಿರುವ ಬಳಿಗೆ ಹೋಗಿ,—ಜಗದೇಕ ವೀರನಾದ ನಾನು ಜಗಳಕ್ಕೆ ಬಂದು ನಿಂತಿರುವಲ್ಲಿ, ಕೈಯಲ್ಲಿ ಹರಿಯದವನ ಹಾಗೆ ಹೆಂಗಸರೊಡನೆ ನೀರಾಟವನ್ನಾಡುವದು ಯುಕ್ತವೇ? ನಿನಗೆ ಸಾವಿರ ತೋಳುಗಳು ಇದ್ದು ವ್ಯರ್ಥವೆಂದು ಹೇಳಲು; ಕಾರ್ತ್ತವೀರ್ಯ್ಯಾರ್ಜ್ಜುನನು ರಾವಣನನ್ನು ನೋಡಿ, ನಸುನಕ್ಕು, ತಾ ಕೋಡಗ ಬನವನ್ನು ಜರಿಯಿತು ಎಂಬ ಗಾದೆಗೆ ಸರಿಯಾಗಿ, ಹೆಂಗಸರೊಡನೆ ಕ್ರೀಡಿಸುವಂಥಾವನ ಬಳಿಗೆ ನಾಚಿಕೆ ಇಲ್ಲದೆ ಬಂದು, ಜಗಳಕ್ಕೆ ಕರೆಯುವದರಿಂದ, ನಿನ್ನ ಜಗದೇಕ ವೀರತ್ವವೂ ನಿನ್ನ ಮಾನವೂ ತಿಳಿದ ಹಾಗೆ ಆಯಿತು. ಹತ್ತು ತಲೇ ಹುಳುವಿನ ಹಾಗೆ ಇರುವ ನಿನ್ನನ್ನು ಕೊಲ್ಲ ಬೇಕಾದರೆ, ನನ್ನ ಸಾವಿರ ತೋಳು ತನಕ ಬೇಕೇ? ನಿಮಿಷ ನಿಲ್ಲು! ಎಂದು ಹೇಳಿ, ಹೆಂಗಸರನ್ನು ಪಟ್ಟಣಕ್ಕೆ ಕಳುಹಿಸಿ, ಗದೆಯನ್ನು ತೆಗೆದು ಕೊಂಡು, ರಾವಣನೊಡನೆ ಮೂರು ದಿವಸ ರಾತ್ರೆ ಹಗಲು ಯುದ್ಧವನ್ನು ಮಾಡಲು; ರಾವಣನು

ಬಲ ಕುಂದಿ, ಕಾರ್ತ್ತವೀರ್ಯಾರ್ಜ್ಜುನನ ಗದೆಯಿಂದ ಪೆಟ್ಟು ಬಿದ್ದು, ಮೂರ್ಛಿತನಾಗುವದು; ಆತನನ್ನು ಎತ್ತಿ, ತನ್ನ ರಥದ ಮೇಲೆ ಹಾಕಿ ಕೊಂಡು, ಮಾಹಿಷ್ಮತೀ ಪಟ್ಟಣಕ್ಕೆ ಹೊರಟು ಹೋದನು. ಪ್ರಹಸ್ತ ಮೊದಲಾದ ಪ್ರಧಾನರು ಸಹಿತ ರಾಕ್ಷಸ ಸೇನೆಯೆಲ್ಲಾ ಬೆದರಿ, ಬೆಜ್ಜರಗೊಂಡು, ಓಡಿ ಬಂದು, ಲಂಕಾಪಟ್ಟಣವನ್ನು ಶೇರಿ ಕೊಂಡರು.

ಇತ್ತಲಾ ಕಾರ್ತ್ತವೀರ್ಯಾರ್ಜ್ಜುನನು ತನ್ನ ಪಟ್ಟಣಕ್ಕೆ ಹೋಗಿ, ಮೂರ್ಛಿತನಾಗಿರುವ ದಶಾನನನನ್ನು ಶೈತ್ಯೋಪಚಾರಗಳಿಂದ ಚೇತರಿಸಿ ಕೊಳ್ಳುವ ಹಾಗೆ ಮಾಡಿ, ಆತನ ಕಾಲಿಗೆ ಭಂಗಾರದ ಸಂಕೋಲೆಯನ್ನು ಹಾಕಿಸಿ, ಕಾರಾಗೃಹದಲ್ಲಿ ಇಡಿಸಿದನು. ಹೀಗೆ ಒಂದು ಸಾವಿರ ವರುಷ ಪರಿಯಂತರ ಮಾಹಿಷ್ಮತೀ ಪಟ್ಟಣದಲ್ಲಿ ರಾವಣನು ಇರುತ್ತಿರಲು; ಈ ಸುದ್ದಿಯನ್ನು ಆತನ ಅಜ್ಜನಾದ ಪುಲಸ್ತ್ಯ ಮುನಿಯು ಕೇಳಿ, ಮಾಹಿಷ್ಮತೀ ಪಟ್ಟಣಕ್ಕೆ ಬಂದು, ಕಾರ್ತ್ತವೀರ್ಯಾರ್ಜ್ಜುನನಿಂದ ಸತ್ಕೃತನಾಗಿ, ಆತನನ್ನು ಅನೇಕ ವಿಧವಾಗಿ ಹೊಗಳಿ—ನೀನು ಇಂದ್ರಾದಿ ದಿಕ್ಪಾಲಕರನ್ನು ಜೈಸಿದ ಈ ದುರುಳ ದಶಾನನನನ್ನು ಭಂಗಿಸಿ, ದೇವತೆಗಳಿಗೂ ಮುನಿಗಳಿಗೂ ಬಹಳ ಸಂತೋಷವನ್ನು ಮಾಡಿದಿ. ಇವನ ಗರ್ವವನ್ನು ಮುರಿದು, ಇಷ್ಟು ಮಾನ ಭಂಗ ಮಾಡಿಸಿದ್ದೇ ಸಾಕು. ಇವನು ನನ್ನ ಮೊಮ್ಮಗನಾದ್ದರಿಂದ, ಇವನನ್ನು ನನ್ನ ಕೈಗೆ ಕೊಡ ಬೇಕೆಂದು, ಬೇಡಿ ಕೊಂಡದರಿಂದ, ಕಾರ್ತ್ತವೀರ್ಯಾರ್ಜ್ಜುನನು ಸಂಕೋಲೆಯನ್ನು ಕಡಿಸಿ, ಮಂಗಳ ಸ್ನಾನಾದಿಗಳನ್ನು ಮಾಡಿಸಿ, ತನ್ನ ಸಭೆಗೆ ಕರಿಸಿ, ಆಲಿಂಗಿಸಿ ಕೊಂಡು, ದಿವ್ಯವಾದ ವಸ್ತ್ರಾಭರಣವನ್ನು ಕೊಟ್ಟು,—ಶೂರರಾದವರಿಗೆ ಯುದ್ಧದಲ್ಲಿ ಒಂದು ಕಡೆಯಲ್ಲಿ ಒಂದು ವೇಳೆ ಜಯವು, ಮತ್ತೊಂದು ಕಡೆಯಲ್ಲಿ ಮತ್ತೊಂದು ವೇಳೆಯಲ್ಲಿ ಪರಾಜಯವು ಆಗುವದು ಸ್ವಭಾವವು. ಇದಕ್ಕೆ ವ್ಯಸನ ಪಡ ಬಾರದೆಂದು, ಸಮಾಧಾನ ಮಾಡಿ, ಪುಲಸ್ತ್ಯರ ಕೈಯಲ್ಲಿ ಕೊಡಲು; ಅವರು ಆತನನ್ನು ಕರೆದು ಕೊಂಡು, ಲಂಕೆಯಲ್ಲಿ ತಂದು ಬಿಟ್ಟು, ಇನ್ನು ಮೇಲಾದರೂ ಮೈ ಕೊಬ್ಬಿನಿಂದ ನಡೆಯದೆ, ತಾಗಿ ಬಾಗಿ ನಡೆಯುತ್ತಾ ಇರು, ಎಂದು ಬುದ್ಧಿ ಕಲಿಸಿ, ತಮ್ಮಾಶ್ರಮಕ್ಕೆ ಹೊರಟು ಹೋದರು.

ಆ ತರುವಾಯ ಕಡು ಮೂರ್ಖನಾದ ಖೂಳ ದಶಾನನನು ಕಾರ್ತ್ತವೀರ್ಯಾರ್ಜ್ಜುನನಿಂದ ತನಗೆ ಆದ ಮಾನಭಂಗವನ್ನು ಮನಸ್ಸಿನಲ್ಲಿ ಗಣನೆ ಮಾಡದೆ, ಕಿಷ್ಕಿಂಧಾ ಪತಿಯಾದ ವಾಲಿ ಎಂಬ ವಾನರೇಶ್ವರನೊಡನೆ ದ್ವಂದ್ವ ಯುದ್ಧವನ್ನು ಮಾಡಿ, ಆತನನ್ನು ಜೈಸ ಬೇಕೆಂದು, ಒಬ್ಬನೇ ಲಂಕೆಯಿಂದ ಹೊರಟು, ಅರು

ಣೋದಯ ಕಾಲದಲ್ಲಿ ಕಿಷ್ಕಿಂಧಾ ಪಟ್ಟಣವನ್ನು ಶೇರಿ, ಆತನ ಮಂತ್ರಿಯಾದ ತಾರನೆಂಬ ಕಪಿ ಶ್ರೇಷ್ಠನನ್ನು ಕುರಿತು—ಎಲೈ, ಕಪಿಯೇ, ನಿನ್ನ ಅರಸನಾದ ವಾಲಿಯಲ್ಲಿ—ನಾನು ದಶಾನನನು; ಆತನೊಡನೆ ದ್ವಂದ್ವ ಯುದ್ಧವನ್ನು ಮಾಡುವದಕ್ಕೆ ಬಂದು ಇದ್ಧೇನೆ. ಈ ಮಾತನ್ನು ಅವನಿಗೆ ತಿಳಿಸು, ಎನಲು; ಆ ತಾರನು—ಪರಾಕ್ರಮಶಾಲಿಯಾದ ನಮ್ಮ ಅರಸ ವಾಲಿಯು ಪೂರ್ವ ಸಮುದ್ರಕ್ಕೆ ಸ್ನಾನಕ್ಕೆ ಹೋಗಿದ್ಧಾನೆ. ಒಂದು ಮುಹೂರ್ತ ಮಾತ್ರ ಇರು; ಬರುವನು, ಎಂದು ಹೇಳುವದು;—ನಾನು ಅಲ್ಲಿಗೆ ಹೋಗುತ್ತೇನೆಂದು ಹೇಳಿ, ಕಿಷ್ಕಿಂಧೆಯಿಂದ ಹೊರಟು, ಪೂರ್ವ ಸಮುದ್ರಕ್ಕೆ ಬಂದು ನೋಡುವಾಗ, ವಾಲಿಯು ಸ್ನಾನವನ್ನು ಮಾಡಿ, ಆ ಸಮುದ್ರದ ಧಡದಲ್ಲಿ ಕಣ್ಣುಗಳನ್ನು ಮುಚ್ಚಿ ಕೊಂಡು, ಜಪವನ್ನು ಮಾಡುತ್ತಿದ್ದನು. ಇದೇ ಸಮಯದಲ್ಲಿ ಇವನನ್ನು ನನ್ನ ಇಪ್ಪತ್ತು ತೋಳುಗಳಿಂದ ಕಟ್ಟಿ, ಬಿಗಿದು, ಜೈಸುವೆನೆಂದು, ಅವನ ಹಿಂದು ಗಡೆಯಲ್ಲಿ ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತಾ, ಮೆಲ್ಲಗೆ ಬಂದು, ತಾನು ಬರುವದನ್ನು ಕಂಡೂ ಕಾಣದ ಹಾಗೆ ಕುಳಿತಿರುವ ವಾಲಿಯ ಎರಡು ಕಂಕುಳ ಸಂದಿಯಲ್ಲಿಯೂ ತನ್ನ ಇಪ್ಪತ್ತು ತೋಳುಗಳನ್ನು ಚಾಚಲು; ವಾಲಿಯು ತನ್ನ ಎರಡು ಕಂಕುಳುಗಳಿಂದ ಅವನ ಇಪ್ಪತ್ತು ತೋಳುಗಳನ್ನು ಘಟ್ಟಿಯಾಗಿ ಅಮುಕಿ ಕೊಂಡು, ಗರುಡನು ನಾಗರ ಹಾವನ್ನು ಕಚ್ಚಿ ಕೊಂಡು, ಆಕಾಶಕ್ಕೆ ಹಾರುವಂತೆ ಹಾರಿ, ಅಲ್ಲಿಂದ ತೆಂಕಣ ಕಡಲಿಗೆ ಹೋಗಿ, ಅಲ್ಲಿ ತನ್ನ ಹಿಂದುಗಡೆಯಲ್ಲಿ ಜೋಲಾಡುತ್ತಲಿರುವ ರಾವಣನನ್ನು ಅದ್ದಿ, ಅಲ್ಲಿಂದ ಪಡುವಣ ಕಡಲಿಗೆ ಹೋಗಿ, ಅದರ ನೀರಿನಲ್ಲಿಯೂ ಅದ್ದಿ, ಅಲ್ಲಿಂದ ಬಡಗಣ ಕಡಲಿಗೆ ಹೋಗಿ, ಅಲ್ಲಿಯೂ ಅದ್ದಿ, ಅದ್ದಿ, ತೆಗೆದು, ಕಿಷ್ಕಿಂಧಾ ಪಟ್ಟಣದ ಹೊರಗಿನ ಹೂವಿನ ತೋಟದ ಮೇಲುಗಡೇ ಆಕಾಶದಲ್ಲಿ ನಿಂತು, ಅಷ್ಟೊತ್ತಿಗೆ ತನ್ನ ವೇಗವನ್ನು ಸಹಿಸಲಾರದೆ, ಕಳವಳಗೊಂಡು, ಕಂಗೆಟ್ಟಿರುವ ರಾವಣನನ್ನು ಕಂಕುಳೆತ್ತಿ, ಕೆಡವಿ ಬಿಟ್ಟು, ತನ್ನ ಅಂತಃಪುರಕ್ಕೆ ಹೋಗಿ, ಭೋಜನಾದಿಗಳನ್ನು ಮಾಡಿ ಕೊಂಡು, ತನ್ನ ಸಕಲ ಪರಿವಾರ ಸಹಿತ ರಾವಣನು ಬಿದ್ದಿರುವ ಬಳಿಗೆ ಬರಲು; ಆಗ ರಾವಣನು ಆಕಾಶದಿಂದ ಕೆಳಗೆ ಬಿದ್ದ ಪೆಟ್ಟಿಗೆ ಮೂರ್ಛಿತನಾಗಿ, ಸ್ವಲ್ಪ ಚೇತರಿಸಿ ಕೊಂಡು ಇದ್ದದರಿಂದ, ಅವನನ್ನು ನೋಡಿ, ಏನೂ ಕಾಣದವನಂತೆ—ಇದೇನೈಯಾ, ರಾಕ್ಷಸ ರಾಜನೇ? ಪರಿವಾರಗಳೊಬ್ಬರೂ ಇಲ್ಲದೆ, ಒಬ್ಬನೇ ಈ ತೋಟದಲ್ಲಿ ಕಂಗೆಟ್ಟು ಬಿದ್ದು ಇದ್ಧೀಯೋ? ಇಂಥಾ ಪರಿಭವವು ನಿನಗೆ ಯಾರಿಂದ ಉಂಟಾಯಿತು? ನೀನು ದಿಕ್ಪಾಲರನ್ನೂ ತ್ರಿಲೋಕವನ್ನೂ ಜೈಸಿ

ದಂಥ ಜಗದೇಕ ವೀರನಲ್ಲ! ನನಗೆ ಸ್ವಲ್ಪ ಸುದ್ದಿಯನ್ನು ಹೇಳಿ ಕಳುಹಿಸಿದ್ದರೆ, ನಾನು ಬಂದು, ನಿನಗೆ ಸಹಾಯವನ್ನು ಕೊಡುತ್ತಿದ್ದೆನು ಎಂದು, ಕಟಕಿಯಾಗಿ ಹೇಳಲು; ಆ ಮಾತನ್ನು ರಾವಣನು ಕೇಳಿ, ನಾಚಿ ಕೊಂಡು, ತಲೆ ಬಾಗಿ—ಎಲೈ, ಮಹಾ ಶೂರನೇ, ಲೋಕದಲ್ಲಿ ನಿನ್ನ ಪರಾಕ್ರಮಕ್ಕೂ ವೇಗಕ್ಕೂ ಶಕ್ತಿಗೂ, ಸರಿಯಾದವರನ್ನು ಕಾಣೆನು. ನಿನ್ನಿಂದ ನಾನು ಪರಾಜಿತನಾದೆನು. ನಿನ್ನ ಕೂಡ ಸ್ನೇಹವನ್ನು ಅಪೇಕ್ಷಿಸುವೆನು, ಎಂದು ಬೇಡಿ ಕೊಳ್ಳಲು; ವಾಲಿಯು ಆತನನ್ನು ತನ್ನ ಅರಮನೆಗೆ ಕರೆದು ಕೊಂಡು ಹೋಗಿ, ಅಗ್ನಿ ಸಾಕ್ಷಿಯಾಗಿ ಸ್ನೇಹವನ್ನು ಮಾಡಿ ಕೊಂಡು, ಒಂದು ತಿಂಗಳ ವರಿಗೆ ತನ್ನ ಮನೆಯಲ್ಲಿ ಇರಿಸಿ ಕೊಂಡಿದ್ದು, ಬಹುಮಾನಗಳನ್ನು ಮಾಡಿ, ಲಾಂಕಾ ಪಟ್ಟಣಕ್ಕೆ ಕಳುಹಿಸಿ ಕೊಡಲು; ರಾವಣನು ಲಂಕೆಗೆ ಬಂದು, ಸುಖದಲ್ಲಿದ್ದನು.

66. Rama's Birth, Marriage, and Banishment to the Forest.

೬೬. ರಾಮನ ಜನನ, ವಿವಾಹ, ವನವಾಸಗಳ ಕಥೆ.

ಲಂಕಾ ಪಟ್ಟಣದಲ್ಲಿ ಇರುವ ರಾಕ್ಷಸ ರಾಜನಾದ ರಾವಣನು ಬ್ರಹ್ಮನಿಂದ ವರವನ್ನು ಪಡ ಕೊಂಡು, ಇಂದ್ರಾದಿ ಲೋಕ ಪಾಲಕರನ್ನೂ ಸ್ವರ್ಗ ಮರ್ತ್ಯ ಪಾತಾಳ ಎಂಬ ಮೂರು ಲೋಕಗಳನ್ನೂ ಜೈಸಿ, ಮುನಿಗಳು ಮಾಡುವ ಯಜ್ಞ ತಪಸ್ಸುಗಳನ್ನು ಕೆಡಿಸುತ್ತ, ಲೋಕ ಕಂಟಕನಾಗಿರಲು; ಇಂದ್ರನೇ ಮೊದಲಾದ ಸಕಲ ದೇವತೆಗಳು ಆತನ ಬಾಧೆಯನ್ನು ಸಹಿಸಲಾರದೆ, ಸತ್ಯ ಲೋಕಕ್ಕೆ ಹೋಗಿ, ಚತುರ್ಮ್ಮುಖ ಬ್ರಹ್ಮನೊಡನೆ ಆ ರಾವಣನ ಮೇಲೆ ದೂರು ಹೇಳಿ ಕೊಳ್ಳಲು; ಆ ದೇವತೆಗಳನ್ನು ಕೂಡಿ ಕೊಂಡು, ಬ್ರಹ್ಮನು ಕ್ಷೀರ ಸಮುದ್ರಕ್ಕೆ ಹೋಗಿ, ವಿಷ್ಣುವಿಗೆ ಆ ರಾವಣನ ಉಪದ್ರವನ್ನು ಅರಿಕೆ ಮಾಡಲು; ವಿಷ್ಣುವು—ನಾನು ಭೂಲೋಕದಲ್ಲಿ ಹುಟ್ಟಿ, ಆ ರಾವಣ ಮೊದಲಾದ ರಾಕ್ಷಸರನ್ನು ಕೊಲ್ಲುವೆನು ಎಂದು, ಅಭಯವನ್ನು ಕೊಡಲು; ಅವರೆಲ್ಲರು ಸಂತುಷ್ಟರಾಗಿ, ತಮ್ಮ ತಮ್ಮ ಸ್ಥಳಗಳಿಗೆ ಹೋದರು.

ಆ ಬಳಿಕ ವಿಷ್ಣುವು ತಾನು ನಾಲ್ಕು ಭಾಗವಾಗಿ, ಅಯೋಧ್ಯಾಧಿಪತಿಯಾದ ದಶರಥನ ಹಿರೀ ಹೆಂಡತಿಯಲ್ಲಿ ಅರ್ಧಾಂಶದಿಂದ ರಾಮನೆಂದೂ, ಕಿರೀ ಹೆಂಡತಿಯಾದ ಕೈಕೆಯಿಯ ಗರ್ಭದಲ್ಲಿ ಕಾಲಂಶದಿಂದ ಭರತನೆಂದೂ, ನಡುವಣ ಹೆಂಡತಿಯಾದ ಸುಮಿತ್ರೆಯ ಗರ್ಭದಲ್ಲಿ ಅವಳ ಮಕ್ಕಳಾಗಿ ಕಾಲಂಶದಿಂದ ಲಕ್ಷ್ಮಣ ಶತ್ರುಘ್ನರೆಂದೂ ಹುಟ್ಟಿ, ಮಿಥಿಲಾ ಪಟ್ಟಣಕ್ಕೆ ಧೊರೆಯಾದ ಜನಕ ರಾಯನು ಸಾಕಿದ ಭೂಮಿಯಲ್ಲಿ ಶಿಕ್ಕಿದ ಸೀತೆಯನ್ನು ರಾಮನೂ—

ಆ ಜನಕನ ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟಿದ ಮಗಳಾದ ಊರ್ಮಿಳೆ ಎಂಬ ವಳನ್ನು ಲಕ್ಷ್ಮಣನೂ—ಆ ಜನಕನ ತಮ್ಮನಾದ ಕುಶಧ್ವಜನ ಮಕ್ಕಳಾದ ಮಾಂಡವಿ ಶ್ರುತಿಕೀರ್ತಿ ಎಂಬವರನ್ನು ಭರತ ಶತ್ರುಘ್ನರೂ—ಹೀಗೆ ನಾಲ್ಕು ಜನವು ನಾಲ್ಕು ಮಂದಿ ಕನ್ನಿಕೆಯರನ್ನು ಮದುವೆಯಾಗಿ, ಬಂದು, ಅಯೋಧ್ಯಾ ಪಟ್ಟಣದಲ್ಲಿ ಇರುವಾಗ, ಭರತನ ಸೋದರ ಮಾವನಾದ ಯುಧಾಜಿತ್ತು ಎಂಬ ಕೇಕಯ ದೇಶದ ಯುವ ರಾಜನು ಅಯೋಧ್ಯೆಗೆ ಬಂದು, ದಶರಥ ರಾಯನಲ್ಲಿ ಹೇಳಿ ಕೊಂಡು, ತನ್ನ ಸೋದರಳಿಯನಾದ ಭರತನನ್ನು ಕೇಕಯ ಪಟ್ಟಣಕ್ಕೆ ಕರೆದು ಕೊಂಡು ಹೋದನು. ಸುಮಿತ್ರೆಯ ಮಗನಾದ ಶತ್ರುಘ್ನನು ಭರತನ ಸಂಗಡಲೇ ಹೋದನು.

ಇತ್ತ ಅಯೋಧ್ಯೆಯಲ್ಲಿ ರಾಮ ಲಕ್ಷ್ಮಣರು ಕೂಡಾ ಇದ್ದು ಕೊಂಡು, ತಂದೆ ತಾಯಿಗಳ ಶುಶ್ರೂಷೆಯನ್ನು ಮಾಡುತ್ತ, ದೇಶದ ಜನಕ್ಕೂ ಪುರ ಜನಕ್ಕೂ ಮಂತ್ರಿ ಸೇನಾಪತಿಗಳು ಮೊದಲಾದ ಪರಿವಾರ ಜನಕ್ಕೂ ಹಿತರಾಗಿ, ಸದ್ಗುಣಗಳಿಂದ ಮೆರೆಯುತ್ತಿದ್ದರು. ಆಗ ದಶರಥ ರಾಯನು ರಾಮನ ಒಳ್ಳೇ ನಡತೆಗೆ ಮನಸ್ಸಿನಲ್ಲಿ ಬಹಳ ಸಂತೋಷ ಪಟ್ಟು—ಈ ರಾಮನೇ ನನ್ನ ಸಿಂಹಾಸನವನ್ನು ಏರುವದಕ್ಕೂ, ಈ ಕೋಸಲ ರಾಜ್ಯವನ್ನು ಪರಿಪಾಲಿಸುವದಕ್ಕೂ, ಚಂದ್ರನು ಸಮುದ್ರನನ್ನು ಹೆಚ್ಚಿಸುವಂತೆ ನಮ್ಮ ರಘು ಕುಲವನ್ನು ಹೆಚ್ಚಿಸುವದಕ್ಕೂ ತಕ್ಕವನು ಎಂದು ನಿಶ್ಚೈಸಿ, ಮಂತ್ರಿಗಳೂ ದಳಪತಿಗಳೂ ಪಟ್ಟಣದಲ್ಲಿರುವ ವಯೋವೃದ್ಧರೂ ಜ್ಞಾನ ವೃದ್ಧರೂ ಪುರೋಹಿತ ವಶಿಷ್ಠನೇ ಮೊದಲಾದ ಅವರನ್ನೆಲ್ಲಾ ಕರಿಸಿ ಕೊಂಡು, ಆದರಿಸಿ, ಅವರುಗಳನ್ನು ಕುರಿತು—ನಾನು ಮುದುಕನಾದೆನು; ಇನ್ನು ಮೇಲೆ ನಾನು ದೇವೇಂದ್ರನ ಓಲಗದ ಚಾವಡಿಯನ್ನು ಏರ ತಕ್ಕವನು. ನನ್ನ ನಾಲ್ಕು ಮಂದಿ ಮಕ್ಕಳಲ್ಲಿ ಶೂರನಾಗಿಯೂ ಒಳ್ಳೇ ಗುಣವುಳ್ಳವನಾಗಿಯೂ ಇರುವ ಹಿರೀ ಮಗನಾದ ರಾಮನೇ ನನ್ನ ಈ ಸಾಂಬ್ರಾಜ್ಯಕ್ಕೆ ಒಡೆಯನಾಗ ತಕ್ಕವನು. ನೀವೆಲ್ಲರು ಒಪ್ಪಿದರೆ, ಒಳ್ಳೇ ಶುಭ ಲಗ್ನದಲ್ಲಿ ಈ ರಾಮನಿಗೆ ಪಟ್ಟವನ್ನು ಕಟ್ಟುವೆನು ಎಂದು ಹೇಳಿದನು. ಆಗ ಅವರೆಲ್ಲರು ಬಹಳ ಸಂತೋಷ ಪಟ್ಟು, ದಶರಥ ರಾಯನನ್ನು ಕುರಿತು—ಎಲೈ, ಮಹಾ ರಾಯನೇ, ನೀನು ಹೇಳಿದ್ದು ಬಹು ಚನ್ನಾಯಿತು. ಈ ರಾಮ ಚಂದ್ರನ ಕೊಡೆಯ ನೆಳಲು ಈ ದೇಶದ ಜನರುಗಳಿಗೆ ಕಲ್ಪ ವೃಕ್ಷದ ನೆಳಲಾಯಿತು. ಮನುವು, ದಿಳೀಪನು, ಮಾಂಧಾತನು, ಪುರೂರವನು, ಕಾರ್ತ್ತವೀರ್ಯ್ಯಾರ್ಜ್ಜುನನು, ಭಗೀರಥನು, ಸಗರನು, ನಳನು,

ನಹುಷನು ಮೊದಲಾದ ಚಕ್ರವರ್ತಿಗಳ ನೆನಹನ್ನು ಈ ರಾಮ ಚಂದ್ರನು ತನ್ನ ಧರ್ಮದ ನಡತೆಗಳಿಂದ ಮರಸುವನು. ನಮ್ಮ ಈ ಭೂವನಿತೆಯು ರಾಮನನ್ನು ಪತಿಯಾಗಿ ವರಿಸುವಳು. ಈತನು ಅರಸಾದರೆ, ನಾವೆಲ್ಲರು ನಿಶ್ಚಿಂತರಾಗಿ ಸುಖದಿಂದ ಇರುವೆವು ಎಂದು ಹೇಳಿದರು. ಆ ಮಾತನ್ನು ಕೇಳಿ, ದಶರಥ ರಾಯನು ಜೋಯಿಸರನ್ನು ಕರಿಸಿ, ವೈಶಾಖ ಶುದ್ಧ ಪಂಚಮೀ ದಿವಸದಲ್ಲಿ, ಒಳ್ಳೇ ಅಭಿಜಿನ್ಮುಹೂರ್ತದಲ್ಲಿ, ರಾಮನಿಗೆ ಪಟ್ಟಾಭಿಷೇಕದ ಲಗ್ನವನ್ನು ನಿಶ್ಚೈಸಿ, ಪಟ್ಟಣವನ್ನೆಲ್ಲಾ ಅಲಂಕರಿಸುವಂತೆಯೂ, ಪುರೋಹಿತ ವಶಿಷ್ಠರು ಹೇಳಿದ ಪ್ರಕಾರ ಪಟ್ಟಾಭಿಷೇಕದ ಸಾಮಗ್ರೀಯಗಳನ್ನು ಸಿದ್ಧ ಪಡಿಸುವಂತೆಯೂ ಮಂತ್ರಿಗಳಿಗೆ ಅಪ್ಪಣೇ ಕೊಟ್ಟು, ರಾಮನನ್ನು ಕರೇ ಕಳುಹಿಸಿ—ನಿನಗೆ ನಾಳೆ ಮಧ್ಯಾಹ್ನದಲ್ಲಿ ಈ ಕೋಸಲ ರಾಜ್ಯಕ್ಕೆ ಪಟ್ಟಾಭಿಷೇಕವನ್ನು ಮಾಡುವೆನು ಎಂದು ಹೇಳಿ, ಮನೆಗೆ ಅಪ್ಪಣೇ ಕೊಟ್ಟು ಕಳುಹಿಸಲು; ಆ ರಾಮನು ತಂದೆಗೆ ನಮಸ್ಕಾರವನ್ನು ಮಾಡಿ, ತನ್ನ ತಾಯಿಯಾದ ಕೌಸಲ್ಯಾ ದೇವಿಯ ಮನೆಗೆ ಹೋಗಿ, ತಂದೆಯು ಹೇಳಿದ ಮಾತನ್ನು ತಿಳಿಸಿ, ಲಕ್ಷ್ಮಣಾದಿಗಳಿಗೂ ಹೇಳಿ, ತನ್ನ ಅರಮನೆಗೆ ಬಂದನು. ಆ ಮೇಲೆ ದಶರಥನು ಪುರೋಹಿತ ವಶಿಷ್ಠರನ್ನು ಕರಿಸಿ,—ನೀವು ಹೋಗಿ, ನಾಳೆ ಪಟ್ಟಾಭಿಷೇಕ ಮಹೋತ್ಸವಕ್ಕೆ ರಾಮನಿಗೂ ಸೀತೆಗೂ ಕಂಕಣವನ್ನು ಕಟ್ಟಿಸಿ, ಈ ರಾತ್ರೆ ಉಪವಾಸ ವ್ರತವನ್ನು ಮಾಡುವ ಹಾಗೆ ನೇಮಿಸಿ ಬರ ಬೇಕೆಂದು ಹೇಳಲು; ವಶಿಷ್ಠರು ಅದೇ ಪ್ರಕಾರ ಮಾಡಿಸಿದರು. ಮಂತ್ರಿಗಳು ಧೊರೆಯ ಅಪ್ಪಣೇ ಮೇರೆಗೆ ಆ ರಾತ್ರಿಯೇ ಪಟ್ಟಣವನ್ನು ಅಲಂಕರಿಸಿ, ಅಭಿಷೇಕದ ಸೋಬಸ್ಕರಗಳನ್ನು ಸಿದ್ಧಾ ಮಾಡಿದರು.

ಅವುಗಳನ್ನೆಲ್ಲಾ ತಿಳಿದು, ಕೈಕೆಯಿಯ ಸೈಳೇಂದ್ರಿಯಾದ ಮಂಥರೆ ಎಂಬ ಕುಬ್ಜೆಯು ಹೊಟ್ಟೇಕಿಚ್ಚು ಪಟ್ಟು, ಕೈಕೆಯಿಯ ಬಳಿಗೆ ಹೋಗಿ, ನಾನಾ ಪ್ರಕಾರವಾಗಿ ದುರ್ಬೋಧನೆಯನ್ನು ಮಾಡಿ, ಆಕೆಯ ಮನಸ್ಸನ್ನು ಕೆಡಿಸಿ,—ನಿನ್ನ ಗಂಡನಾದ ದಶರಥ ರಾಯನು ನಿನಗೆ ಮೊದಲು ದೇವಾಸುರ ಯುದ್ಧದಲ್ಲಿ ಎರಡು ವರವನ್ನು ಕೊಟ್ಟನು. ಅದನ್ನು ನೀನು, ಸಮಯ ಬಂದಾಗ ಕೇಳುವೆನು ಎಂದು, ಹೇಳಿದ್ಧೀಯೇ. ಈ ಮಾತು ನಿನ್ನಿಂದಲೇ ನಾನು ಕೇಳಿದ್ಧೇನೆ. ಈಗ ಆ ಎರಡು ವರಗಳಲ್ಲಿ ಒಂದು ವರಕ್ಕೆ, ರಾಮನು ಜಡೆಯನ್ನು ಧರಿಸಿ ಕೊಂಡು, ನಾರ ಶೀರೆಯನ್ನು ಉಟ್ಟು ಕೊಂಡು, ಹದಿನಾಲ್ಕು ವರುಷ ವನವಾಸ ಮಾಡುವದನ್ನೂ; ಮತ್ತೊಂದು ವರಕ್ಕೆ, ಭರತನಿಗೆ ಈ ಕೋಸಲ

ರಾಜ್ಯಕ್ಕೆ ಪಟ್ಟಾಭಿಷೇಕಾ ಮಾಡುವದನ್ನೂ, ಕೇಳಿಕೋ. ಸತ್ಯವಚನನಾದ ಅ
ರಸು ತಪ್ಪದೆ ಆ ಪ್ರಕಾರ ನಡಿಸುವನು. ಹಾಗಾದರೆ ನಿನ್ನ ಮಗನಾದ ಭರತನು
ಆರೂಢ ಮೂಲನಾಗಿ, ಈ ಕೋಸಲ ರಾಜ್ಯವನ್ನು ಆಳುವನು; ನೀನೂ ನಿನ್ನ
ನ್ನು ನಂಬಿದ ನಾವೂ ಸುಖವಾಗಿರ ಬಹುದು ಎಂದು ಹೇಳಲು; ಆ ಮಾತಿಗೆ ಒ
ಡಂಬಟ್ಟು, ಕೈಕೆಯಿಯು ತನ್ನ ಒಡವೆ ವಸ್ತುಗಳನ್ನೂ ಪೀತಾಂಬರಗಳನ್ನೂ
ಕಳೆದು ಹಾಕಿ, ತಲೆ ಕೂದಲುಗಳನ್ನು ಕೆದರಿ ಕೊಂಡು, ಬಿಳೀ ಶೀರೆಯನ್ನು
ಉಟ್ಟು ಕೊಂಡು, ಬಿಚ್ಚೋಲೆಯನ್ನು ಇಟ್ಟು ಕೊಂಡು, ಊಟ ಉಪಚಾರಗಳ
ನ್ನು ಬಿಟ್ಟು, ನೆಲದ ಮೇಲೆ ಬಿದ್ದು ಕೊಂಡಿದ್ದಳು. ಆಗ ದಶರಥ ರಾಯನು
ರಾಮನಿಗೆ ಪಟ್ಟಾಭಿಷೇಕವನ್ನು ಮಾಡುವ ಸಂತೋಷದ ಸುದ್ದಿಯನ್ನು ತನಗೆ
ಪ್ರಿಯ ಪತ್ನಿಯಾದ ಕೈಕೆಯಿಗೆ ತಿಳಿಸ ಬೇಕೆಂದು, ಆಕೆಯ ಮನೆಗೆ ಬಂದು,
ಅವಳ ಅವಸ್ಥೆಯನ್ನು ನೋಡಿ, ಘಾಬರಿಯಾಗಿ—ಇದೇನು? ಎಂದು ಕೇಳಿದ್ದ
ಕ್ಕೆ—ನೀನು ಮೊದಲು ನನಗೆ ಕೊಟ್ಟ ಎರಡು ವರಗಳನ್ನು ಈಗ ಕೊಡ ಬೇ
ಕು. ತಪ್ಪುವದಿಲ್ಲಾ ಎಂದು ಪ್ರಮಾಣಾ ಮಾಡಿದರೆ, ನನ್ನ ಇಷ್ಟಾರ್ಥವನ್ನು ಕೇ
ಳಿ ಕೊಳ್ಳುವೆನು, ಎನಲು; ದಶರಥನು ಹೆಂಡತಿಯ ಮೇಲಿನ ಮೋಹದಿಂದ—
ಸತ್ಯವಾಗಿಯೂ ಕೊಡುವೆನೆಂದು, ರಾಮನ ಮೇಲೆ ಆಣೀ ಇಕ್ಕಿ, ಹೇಳಿದನು.

ಆ ಮೇಲೆ ಕೈಕೆಯಿ ದೇವಿಯು ದಶರಥ ರಾಯನನ್ನು ಕುರಿತು—ನೀನು
ಕೊಟ್ಟು ಇದ್ದ ಎರಡು ವರಗಳಲ್ಲಿ ಒಂದು ವರಕ್ಕೆ, ರಾಮನು ಜಟಾಚೀರ
ಧರನಾಗಿ, ಕಾಡಿನಲ್ಲಿ ಹದಿನಾಲ್ಕು ವರುಷವು ಇರುವ ಹಾಗೆ ಕಟ್ಟು ಮಾಡಿ ಕ
ಳುಹಿಸ ಬೇಕು. ಎರಡನೇ ವರಕ್ಕೆ, ಭರತನಿಗೆ ಈ ರಾಜ್ಯದ ಪಟ್ಟಾಭಿಷೇಕ
ವನ್ನು ಮಾಡಿಸ ಬೇಕು, ಎಂದು ಹೇಳಲು; ದಶರಥ ರಾಯನು ಪ್ರಚಂಡವಾದ
ಘಾಳಿಯಿಂದ ನಡುಗುವ ಮರದಂತೆ ಗಡಗಡನೆ ನಡುಗುತ್ತಾ, ಆಕೆಯ ಮಾತೆಂ
ಬ ಕಾದ ಉಕ್ಕಿನ ಸಲಾಖಿಯಿಂದ ಕಿವಿಗಳಲ್ಲಿ ಇರಿಯಲ್ಪಟ್ಟವನಾಗಿ, ನೆಲದಲ್ಲಿ
ಬಿದ್ದು, ಮೂರ್ಛೆಯನ್ನು ಹೊಂದಿದನು. ಅನಂತರ, ಬಹಳ ಹೊತ್ತಿನ ಮೇಲೆ
ಸ್ವಲ್ಪ ಚೇತರಿಸಿ ಕೊಂಡು, ಇದೇನು? ಕನಸೋ? ಮನಸ್ಸಿನ ಮೋಹವೋ?
ಎದೆಯ ಉಪದ್ರವೋ? ಯಾಕೆ ನನ್ನ ಶರೀರದಲ್ಲಿ ಇಂಥಾ ನೋವು ಉಂಟಾಗಿ
ದೆ? ಎಂದು ಆಲೋಚಿಸುತ್ತಾ, ಸುಖವನ್ನು ಹೊಂದದವನಾಗಿ ಭೂಮಿಯಲ್ಲಿ
ಯೇ ಬಿದ್ದು ಕೊಂಡು, ಬಹು ಉದ್ದವಾಗಿ ನಿಟ್ಟುಸುರನ್ನು ಬಿಡುತ್ತ, ಹಾವಾ
ಡಿಗನ ಮಂತ್ರದಿಂದ ತಡೆಯಲ್ಪಟ್ಟ ಮಹಾ ವಿಷವುಳ್ಳ ನಾಗರ ಹಾವಿನೋಪಾ
ದಿಯಲ್ಲಿ ಭೋರ್ಗರೆಯುತ್ತಾ,—ಹಾ ರಾಮಾ! ರಾಮ ಚಂದ್ರನೇ! ನನ್ನ ಮೋಹ

ದ ಕಂದನೇ! ಎಂದು ಹಂಬಲಿಸುತ್ತ, ದುಃಖವೆಂಬ ಬೆಂಕಿಯಿಂದ ಸುಟ್ಟು ಸುಣ್ಣವಾದ ಮೈಯುಳ್ಳವನಾಗಿ, ಮತ್ತೆ ಮೂರ್ಛೆಯನ್ನು ಹೊಂದಿ, ಬಹು ಕಾಲಕ್ಕೆ ಎಚ್ಚತ್ತು, ಬಹು ದುಃಖಿತನಾಗಿ, ಕೋಪದಿಂದ ಕೂಡಿ, ಕಣ್ಣಿನಿಂದ ಸುಡುವವನೋಪಾದಿಯಲ್ಲಿ ಕೈಕೆಯಿಯನ್ನು ನೋಡಿ—ಎಲೇ, ಘಾತುಕಳೇ, ದುರ್ನಡತೆಯುಳ್ಳವಳೇ, ಕುಲನಾಶಿನಿಯೇ, ಪಾಪಿಷ್ಠಳೇ! ನಾನಾಗಲಿ ರಾಮನಾಗಲಿ ನಿನಗೇನು ತಪ್ಪನ್ನು ಮಾಡಿದೆವು? ರಾಮನು ನಿನ್ನಲ್ಲಿ ತನ್ನ ತಾಯಿಯಂತೆ ಮರ್ಯಾದೆಯಿಂದ ಇದ್ದನಲ್ಲಾ! ಅಂಥಾ ರಾಮನ ಅನರ್ಥಕ್ಕೋಸ್ಕರ ಹೀಗೆ ನೀನು ಉದ್ಯುಕ್ತಳಾದೆ! ನನ್ನ ಸಾವಿಗೆ ನಿನ್ನನ್ನು ಮದುವೆಯಾಗಿ, ನನ್ನ ಮನೆಯನ್ನು ತೀಕ್ಷ್ಣವಾದ ವಿಷವುಳ್ಳ ಹೆಣ್ಣು ಹಾವು ಎಂದು ಅರಿಯದೆ, ರಾಜ ಕುವರಿ ಎಂದು ಹೊಗಿಸಿದೆನು. ಜೀವ ಲೋಕವೆಲ್ಲಾ ರಾಮನ ಗುಣಗಳ ಸ್ತೋತ್ರವನ್ನು ಮಾಡುವದು. ಪ್ರಿಯ ಮಗನಾದ ರಾಮನನ್ನು ಯಾವ ತಪ್ಪನ್ನು ಕುರಿತು ಕಾಡಿಗೆ ಅಟ್ಟುವೆನು? ಕೌಂಸಲ್ಯೆಯನ್ನಾಗಲಿ, ಸುಮಿತ್ರೆಯನ್ನಾಗಲಿ, ಐಶ್ವರ್ಯ ಲಕ್ಷ್ಮಿಯನ್ನಾಗಲಿ, ಪ್ರಾಣಗಳನ್ನಾಗಲಿ ಬಿಡುವೆನು; ಪಿತೃವತ್ಸಲನಾದ ರಾಮನನ್ನು ಬಿಡಲಾರೆನು. ಹಿರೀ ಮಗನಾದ ರಾಮನನ್ನು ನೋಡಿ, ಚಂದ್ರನನ್ನು ನೋಡಿದ ಸಮುದ್ರನಂತೆ ನನ್ನ ಪ್ರೀತಿಯು ಉಬ್ಬುವದು. ರಾಮನನ್ನು ಒಂದು ನಿಮಿಷ ಮಾತ್ರವಾದರೂ ನೋಡದೆ ಇದ್ದರೆ, ನನ್ನ ಚೇತನವು ಹಾರಿ ಹೋಗುವದು. ಸೂರ್ಯನಿಲ್ಲದೆ ಲೋಕವು, ನೀರಿಲ್ಲದೆ ಪೈರುಗಳು, ಒಂದು ವೇಳೆ ನಿಂತರೂ ನಿಲ್ಲುವವು. ರಾಮನಿಲ್ಲದೆ ನನ್ನ ಜೀವವು ನಿಲ್ಲಲಾರದು—ಎಲೇ, ಪಾಪಕಾರಿಯೇ, ಸಾಕು! ಬಿಡು! ನಿನ್ನ ಕಾಲುಗಳನ್ನು ನನ್ನ ತಲೆಯಿಂದ ಮುಟ್ಟುವೆನು. ನನಗೆ ಪ್ರಸನ್ನಳಾಗು. ಅಯ್ಯೋ! ಪರಮ ದಾರುಣವಾದ ಕಾರ್ಯವನ್ನು ಯಾಕೆ ಚಿಂತಿಸಿದೆ? ಕೇಕಯ ವಂಶದಲ್ಲಿ ಹುಟ್ಟಿ, ಇಕ್ಷ್ವಾಕು ಕುಲವನ್ನು ಹೊಕ್ಕಂಥ ನಿನಗೆ ಇಂಥ ದುರ್ಬುದ್ಧಿಯು ಹ್ಯಾಗೆ ಹುಟ್ಟಿತು? ನೀತಿ ಸಂಪನ್ನೆಯಾದ ನೀನು ನನಗೆ ಅಪ್ರಿಯವಾದ ಇಂಥ ಮಾತನ್ನು ಒಂದು ದಿವಸವಾದರೂ ಹೇಳಲಿಲ್ಲವಲ್ಲಾ! ಈಗೇನಾದರೂ ನಿನ್ನನ್ನು ಪಿಶಾಚಿ ಹಿಡಿದು ಇದೆಯೋ? ಅದರಿಂದ ಇಂಥ ವಿಕಾರವಾದ ಬುದ್ಧಿಯು ನಿನಗೆ ಉಂಟಾಯಿತೋ? ನೀನು ನನ್ನೊಡನೆ ಏಕಾಂತದಲ್ಲಿ ಇರುವಾಗ್ಯೆ, ಬಹು ಸಾರಿ ಲೋಕಾಭಿರಾಮನಾದ ರಾಮನು ನನಗೆ ಭರತನಿಗಿಂತಲೂ ಹೆಚ್ಚು ಎಂದು ಹೇಳುತ್ತಾ ಇದ್ದೆಯಲ್ಲಾ! ಅಂಥ ನೀನು ಧರ್ಮಿಷ್ಠನಾಗಿಯೂ ಕೀರ್ತಿವಂತನಾಗಿಯೂ ಇರುವ ರಾಮನಿಗೆ ಹದಿನಾಲ್ಕು ವರುಷ ವನವಾಸವನ್ನು ಕೋರಿದೆ! ಹೆತ್ತ ತಾಯಿಗಿಂತಲೂ ಹೆಚ್ಚಾಗಿ ಯಾವಾಗಲೂ ನಿನ್ನ

ನ್ನು ಶುಶ್ರೂಷೆಯನ್ನು ಮಾಡುತ್ತಲಿರುವ ರಾಮನಲ್ಲಿ, ಮನಸ್ಸಿನಲ್ಲಿಯಾದರೂ ಇಂಥ ಕ್ರೂರ ಕಾರ್ಯವನ್ನು ಎಣಿಸ ಬಹುದೇ? ನನಗೆ ಬಹು ಜನ ಹೆಂಡರಿರುವರು. ಅವರಲ್ಲಿ ಒಬ್ಬಳಾದರೂ ರಾಮನ ವಿಷಯದಲ್ಲಿ ಸ್ವಲ್ಪ ಅಪವಾದವನ್ನು ಒಂದು ದಿವಸವೂ ಹೇಳಲಿಲ್ಲ. ಸತ್ಯದಿಂದ ಲೋಕಗಳನ್ನೂ, ದಾನದಿಂದ ದೀನರನ್ನೂ, ಶುಶ್ರೂಷೆಯಿಂದ ಮುದುಕರನ್ನೂ, ಬಿಲ್ಲಿನಿಂದ ಹಗೆಗಳನ್ನೂ, ಜೈಸುವ ಸಕಲ ಗುಣ ಸಂಪನ್ನನಾದ ರಾಮನನ್ನು ನಿನ್ನ ನಿಮಿತ್ಯವಾಗಿ ಹ್ಯಾಗೆ ಕಾಡಿಗಟ್ಟಲಿ? ಯಾವ ರಾಮನಲ್ಲಿ ಸೈರಣೆಯೂ, ಇಂದ್ರಿಯ ನಿಗ್ರಹವೂ, ಸತ್ಯವೂ, ಧರ್ಮವೂ, ಕೃತಜ್ಞತೆಯೂ, ಸರ್ವ ಪ್ರಾಣಿಗಳಲ್ಲಿ ಅಹಿಂಸಾ ಗುಣವೂ ಇರುವವೋ, ಇಂಥ ರಾಮನನ್ನು ಬಿಟ್ಟು, ನನಗೆ ಗತಿ ಯಾರು? ದೀನನಾಗಿ ಬೇಡಿ ಕೊಳ್ಳುವ ಮುದುಕನಾದ ಪತಿಯಾದ ನನ್ನಲ್ಲಿ ನೀನು ಕನಿಕರವನ್ನು ಮಾಡು. ನಿನಗೆ ಕೋಪ ಬೇಡ! ಸಮುದ್ರಗಳು ಸುತ್ತಿರುವ ಈ ಭೂಮಿಯಲ್ಲಿ ನೀನು ಯಾವದು ಬೇಕು ಎಂದು ಕೇಳಿದಾಗ್ಯೂ, ಆ ಕ್ಷಣ ಅದನ್ನು ತಂದು ಕೊಡುವೆನು. ಎಲೇ, ಪ್ರಿಯಳೇ, ನಿನಗೆ ಕೈ ಮುಗಿಯುವೆನು. ನಿನ್ನ ಕಾಲುಗಳಿಗೆ ನಮಸ್ಕರಿಸುವೆನು. ನನಗೂ ರಾಮನಿಗೂ ರಕ್ಷಕಳಾಗು ಎಂದು, ಈ ರೀತಿಯಿಂದ ಪ್ರಲಾಪಿಸುತ್ತ, ದುಖ್ಖಿಸುತ್ತ, ಬಿಸುಸುಯ್ಯುತ್ತ, ಕಣ್ಣೀರುಗಳನ್ನು ಸುರಿಸುತ್ತ, ಬಾರಿ ಬಾರಿಗೂ ಬೇಡಿ ಕೊಳ್ಳುತ್ತಿರುವ ದಶರಥನನ್ನು ನೋಡಿ—

ಕ್ರೂರಳಾದ ಕೈಕೆಯಿಯು—ಎಲೈ, ಅರಸೇ, ಮೊದಲು ಪ್ರತಿಜ್ಞೆ ಮಾಡಿ, ಎರಡು ವರಗಳನ್ನು ಕೊಟ್ಟು, ಈಗ ಮಗನ ಮೇಲಿನ ಮೋಹದಿಂದ ಹೀಗೆ ಸಂಕಟ ಪಟ್ಟರೆ, ಈ ಭೂಮಿಯಲ್ಲಿ ನಿನ್ನನ್ನು ಧಾರ್ಮಿಕನು ಎಂದು ಹೇಳುವರೇ? ನಮ್ಮ ಈ ಇಕ್ಷ್ವಾಕು ಕುಲದಲ್ಲಿ ಹುಟ್ಟಿದ ಅರಸುಗಳಲ್ಲಿ ಒಬ್ಬರಾದರೂ ಕೊಟ್ಟ ಮಾತಿಗೆ ತಪ್ಪಿದವರಿಲ್ಲ. ನೀನು ಈ ಕುಲದಲ್ಲಿ ಹುಟ್ಟಿ, ಹೀಗೆ ತಪ್ಪ ಬಹುದೇ? ಶಿಬಿಚಕ್ರವರ್ತಿಯು ಪಾರಿವಾಳದ ಹಕ್ಕಿಗೆ ಕೊಟ್ಟ ಮಾತಿಗೆ ಗಿಡಗನಿಗೆ ತನ್ನ ಮಾಂಸವನ್ನು ಕೊಟ್ಟೂ, ಅಳರ್ಕನು ತನ್ನ ಕಣ್ಣುಗಳನ್ನು ಕೊಟ್ಟೂ, ಉತ್ತಮವಾದ ಗತಿಯನ್ನು ಹೊಂದಲಿಲ್ಲವೇ? ಒಳ್ಳೇದಾಯಿತು! ಧರ್ಮವನ್ನು ಬಿಟ್ಟು, ನಿನ್ನ ಮೋಹದ ಮಗನಾದ ರಾಮನನ್ನು ರಾಜ್ಯದಲ್ಲಿ ಅಭಿಷೇಕಿಸಿ, ಕೌಸಲ್ಯೆಯೊಡನೆ ಸುಖವಾಗಿರು. ನಾನು ಈಗಲೇ ನಿನ್ನ ಮುಂದೆ ವಿಷವನ್ನು ಕುಡಿದು, ಪ್ರಾಣವನ್ನು ಬಿಡುವೆನು. ಪಟ್ಟಾಭಿಷಿಕ್ತನಾದ ರಾಮನನ್ನೂ ಆತನ ತಾಯಿಯಾದ ಕೌಸಲ್ಯೆಯನ್ನೂ ಒಂದು ದಿವಸವಾದರೂ ನೋಡಲಾರೆನು. ರಾ

ಮನ ವನವಾಸವನ್ನು ಹೊರತಾಗಿ, ಇನ್ನು ಯಾತರಿಂದಲೂ ನಾನು ಸಂತೋಷಿಸಲಾರೆನು ಎಂದು ಹೇಳಿದಳು.

ದಶರಥನು ಘಾತಕಿಯಾದ ಕ್ರೂರ ಕೈಕೆಯಿಯ ಶಿಡಿಲಿಗೆ ಸರಿಯಾದ ಮಾತನ್ನು ಕೇಳಿ, ಆಕೆಯ ಸ್ಥಿರವಾದ ನಿಷ್ಕರ್ಷೆಯನ್ನು ನೆನೆದು, ಬುಡವನ್ನು ಕಡಿದ ಮರದಂತೆ ಭೂಮಿಯಲ್ಲಿ ಬಿದ್ದು, ಹುಚ್ಚನಂತೆಯೂ, ಸನ್ನಿಪಾತ ಜ್ವರದಿಂದ ಕೂಡಿದ ರೋಗಿಯಂತೆಯೂ, ತಡೆ ಕಟ್ಟಿದ ನಾಗರ ಹಾವಿನಂತೆಯೂ ಆದವನಾಗಿ,—ಹಾ, ರಾಮಾ! ಎಂದು ಮೂರ್ಛೆ ಹೋಗಿ, ಮತ್ತೆ ಚೇತರಿಸಿ ಕೊಂಡು, ಕೈಕೆಯಿಯನ್ನು ಕುರಿತು—ಎಲೈ, ಪಾಪಿಷ್ಠಳೇ, ನಮ್ಮ ಸೂರ್ಯ ವಂಶದಲ್ಲಿ ಹುಟ್ಟಿದ ಹಿಂದಿನವರೆಲ್ಲಾ ಹಿರಿಯ ಮಗನಿಗೆ ರಾಜ್ಯಾಭಿಷೇಕವನ್ನು ಮಾಡಿದರೇ ಹೊರ್ತು, ಕಿರಿಯ ಮಕ್ಕಳಿಗೆ ಯಾರೂ ಮಾಡಲಿಲ್ಲ. ಈಗ ನೀನು ಯೋಚಿಸಿರುವ ಕ್ರೂರ ಕೆಲಸವು ನಿನ್ನ ಮಗನಾದ ಭರತನಿಗೆ ಎಷ್ಟು ಮಾತ್ರವೂ ಪ್ರಿಯವಾಗಲಾರದು. ಕಿರೀ ಹೆಂಡತಿಯ ಮಾತನ್ನು ಕೇಳಿ ಕೊಂಡು, ಗುಣಶಾಲಿಯಾದ, ರಾಜ್ಯಕ್ಕೆ ಯೋಗ್ಯನಾದ ಹಿರಿಯ ಮಗ ರಾಮನನ್ನು ಅರಣ್ಯಕ್ಕೆ ಅಟ್ಟಿದನು ಎಂದು, ಲೋಕದ ಜನರೆಲ್ಲರು ನನ್ನನ್ನು ಹೀಯಾಳಿಸುವರು. ಧರ್ಮಮಾರ್ಗವನ್ನು ತಪ್ಪಿ, ಗಂಡನಿಗೆ ಪ್ರಿಯನಾದ ಮಗನನ್ನು ಕಾಡಿಗೆ ಓಡಿಸಿ, ಪತಿಯನ್ನು ಕೊಂದ ಘಾತಕಿಯು ಎಂದು, ನಿನಗೆ ಅಪಕೀರ್ತಿಯು ಸೂರ್ಯ ಚಂದ್ರರು ಇರುವ ತನಕ ಉಂಟಾಗುವದು. ಮಹಾನುಭಾವನಾದ ನಿನ್ನ ತಂದೆಯಾದ ಕೇಕಯ ರಾಯನೂ ನೀತಿವಂತನಾದ ನಿನ್ನ ತಮ್ಮನಾದ ಯುಧಾಜಿತ್ತುವೂ ನಿನ್ನ ಈ ಕೆಟ್ಟ ಸಂಕಲ್ಪವನ್ನು ಕೇಳಿದ ಕ್ಷಣದಲ್ಲಿಯೇ ನಿನ್ನನ್ನು—ನಮ್ಮ ಕುಲದಲ್ಲಿ ಹುಟ್ಟ ತಕ್ಕವಳಲ್ಲವೆಂದು, ತ್ಯಜಿಸುವರು. ಹೀಗೆ ತಂದೆ ತಮ್ಮಂದಿರಿಗೂ, ಗಂಡನಿಗೂ, ನಂಟ ಇಷ್ಟರಿಗೂ, ಅಸಹ್ಯವಾದ ಭರತನ ಪಟ್ಟಾಭಿಷೇಕದಲ್ಲಿಯೂ ರಾಮನ ವನವಾಸದಲ್ಲಿಯೂ ನೆನಸಿರುವ ನಿನ್ನ ಪಾಪ ಸಂಕಲ್ಪವನ್ನು ಬಿಟ್ಟು ಬಿಡು. ಯೌವನದಲ್ಲಿ ಧರ್ಮದಿಂದ ರಾಜ್ಯವನ್ನು ಕಾಪಾಡಿ, ಶೂರರಾದ ಮಕ್ಕಳಿಗೆ ರಾಜ್ಯಾಭಿಷೇಕವನ್ನು ಮಾಡಿ, ಮುದುಕತನದಲ್ಲಿ ನಮ್ಮ ಹಿರಿಯರೆಲ್ಲರು ಮಾಡಿದ ವನವಾಸಕ್ಕೆ ತರುಣನಾದ ರಾಮನನ್ನು ಮುದುಕನಾದ ನಾನು ಹ್ಯಾಗೆ ಹೋಗು ಅನ್ನಲಿ? ನನಗೆ ಹೊರಗೆ ತಿರುಗುವ ಪ್ರಾಣವೇ ರಾಮನು. ಆತ ವನವಾಸಕ್ಕೆ ಹೋದ ಕ್ಷಣದಲ್ಲಿ ನಾನು ಸತ್ತು ಹೋಗುವೆನು. ನನ್ನನ್ನು ಕೊಂದು, ರಾಮನನ್ನು ಕಾಡಿಗೆ ಕಳುಹಿಸಿ, ವಿಧವೆಯಾಗಿ, ಭರತನೊಡನೆ ಬಾಳುವೆನು ಎಂದು, ನೀನು ಎಣಿಸಿರುವದರಿಂದ, ಇಗೋ, ಈಗ ನಿಜವಾಗಿ ಹೇ

ಳುವೆನು. ನೀನು ನನಗೆ ಹೆಂಡತಿಯೂ ಅಲ್ಲ. ನಾನು ನಿನಗೆ ಗಂಡನೂ ಅಲ್ಲ. ನಿನ್ನ ಈ ಕೆಟ್ಟ ನಿಷ್ಕರ್ಷೆಯು ಭರತನಿಗೆ ಸಮ್ಮತಿಯಾಗಿದ್ದರೆ, ಅವನು ನನಗೆ ಮಗನೂ ಅಲ್ಲ. ನಾನು ಅವನಿಗೆ ತಂದೆಯೂ ಅಲ್ಲ. ನೀನು ನನ್ನನ್ನು ಕೊಲ್ಲುವ ಮೃತ್ಯುವೆಂದರಿಯದೆ, ಹೆಂಡತಿ ಎಂದು ನಿನ್ನೊಡನೆ ಇಷ್ಟು ದಿವಸವು ಕೂಡಿ ಇದ್ದೆನು. ಯೌವನ ಕಾಲದಲ್ಲಿ ಪ್ರಾಣಕ್ಕಿಂತ ಹೆಚ್ಚು ಪ್ರಿಯನಾದ ಯೌವನಸ್ಥನಾದ ಮಗನನ್ನು ಅಪರಾಧವಿಲ್ಲದೆ ಕಾಡಿಗೆ ಅಟ್ಟುವ ತಂದೆಯು ಯಾರಿಗೂ ಆಗ ಬೇಡ. ಆನೆಗಳ ಮೇಲೆಯೂ ಕುದುರೆಗಳ ಮೇಲೆಯೂ ತೇರುಗಳ ಮೇಲೆಯೂ ನಡೆಯುವ ನನ್ನ ಮಗನು ಕಲ್ಲು ಮುಳ್ಳುಗಳು ಕೂಡಿದ ಕಾಡು ದಾರಿಯಲ್ಲಿ ಹ್ಯಾಗೆ ಕಾಲು ನಡಿಗೆಯಿಂದ ನಡೆಯುವನು? ದಿವ್ಯವಾದ ಭಕ್ಷ್ಯ ಭೋಜ್ಯಾದಿಗಳನ್ನು ಉಣ್ಣುತ್ತಲಿದ್ದ ನನ್ನ ಕಂದನು ಕಂದ ಮೂಲಗಳನ್ನು ಹ್ಯಾಗೆ ತಿನ್ನುವನು? ದಿವ್ಯ ಪೀತಾಂಬರವನ್ನು ಉಡುತ್ತಿದ್ದ ನನ್ನ ಮೊಗುವು ನಾರ ಶೀರೆಯನ್ನು ಹ್ಯಾಗೆ ಉಡುವನು? ಶ್ರೇಷ್ಠವಾದ ನವ ರತ್ನದ ಒಡವೆಗಳನ್ನು ಧರಿಸಿ ಕೊಂಡಿದ್ದ ನನ್ನ ಬಾಲನು ಜಡೆಯನ್ನು ಹ್ಯಾಗೆ ಧರಿಸುವನು? ರತ್ನ ಮಯವಾದ ಮಂಚದ ಮೇಲೆ ಮೃದುವಾದ ಸುಪ್ಪತ್ತಿಗೆಯಲ್ಲಿ ಮಲಗುತ್ತಿದ್ದ ನನ್ನ ಕೂಸು ಕಾಡಿನಲ್ಲಿ ಕಲ್ಲುಗಳ ಮೇಲೂ ನೆಲಗಳ ಮೇಲೂ ಎಲೆಗಳ ಹಾಸಿಕೆಯ ಮೇಲೂ ಹ್ಯಾಗೆ ಮಲಗೀತು? ಇಂಥ ಮಾತನ್ನು ಆಡುವ ನಿನ್ನ ನಾಲಿಗೆಯೂ ಕೇಳುವ ನನ್ನ ಕಿವಿಗಳೂ ಶೀಳುವದಿಲ್ಲವಲ್ಲಾ! ಎಂದು, ಅನಾಥನ ಹಾಗೆ ಗೋಳಾಡುತ್ತ, ರಾಮನನ್ನು ಹಂಬಲಿಸುತ್ತ, ಕೈಕೆಯಿಯ ಕಾಲುಗಳ ಮೇಲೆ ಬೀಳುತ್ತ, ತಿರಿಗಿ ಮೂರ್ಛೆಯನ್ನು ಹೊಂದಿದನು.

ಅಷ್ಟರಲ್ಲಿಯೇ ಬೆಳಕು ಹರಿಯಲು; ಪುರೋಹಿತರಾದ ವಶಿಷ್ಠ ಮುನಿಯು ವಾಮ ದೇವಾದಿ ಮುನಿ ಜನಗಳೊಡನೆಯೂ, ಶಿಷ್ಯರ ಸಮೂಹದೊಡನೆಯೂ ಕೂಡಿದವನಾಗಿ, ರಾಮನ ಪಟ್ಟಾಭಿಷೇಕದ ಸಾಮಗ್ರಿಯಗಳನ್ನು ತೆಗಿಸಿ ಕೊಂಡು, ರಾಮನ ಅಂತಃಪುರದ ಬಾಗಿಲ ಬಳಿಗೆ ಬಂದು, ನಿಂತು, ಆ ಬಾಗಿಲಲ್ಲಿ ನಿತ್ಯಗಟ್ಲೆಯ ಪ್ರಕಾರ ಅರಸಿನ ಪ್ರೀತಿ ಪಾತ್ರನಾದ ಸುಮಂತ್ರನೆಂಬ ಮಂತ್ರಿಯನ್ನು ನೋಡಿ—ಎಲೈ, ಸುಮಂತ್ರನೇ, ನನ್ನ ಮಾತಿನಿಂದ ಅರಸನಿಗೆ ನಾನು ಬಂದಿರುವದಾಗಿಯೂ, ರಾಮನ ಪಟ್ಟಾಭಿಷೇಕಕ್ಕೋಸ್ಕರ ಗಂಗಾದಿ ನದೀ ಉದಕಗಳಿಂದಲೂ ನಾಲ್ಕು ಸಮುದ್ರದ ನೀರುಗಳಿಂದಲೂ ತುಂಬಿರುವ ಚಿನ್ನದ ಕಲಶಗಳೂ, ಅತ್ತೀ ಮರದಿಂದ ಮಾಡಿರುವ ಭದ್ರ ಪೀಠವೂ, ಸಕಲ ಧಾನ್ಯಗಳೂ, ನವರತ್ನಗಳೂ, ನಾನಾ ವಿಧವಾದ ಔಷಧಿ ರಸಗಳೂ, ಜೇನು ತುಪ್ಪವೂ, ಮೊಸ

ರೂ, ತುಪ್ಪವೂ, ಛತ್ತ್ರದ ಅರಳೂ, ದರ್ಭೆಗಳೂ, ಹೂವುಗಳೂ, ಹಾಲೂ, ಚೆಲುವೆಯರಾದ ಎಂಟು ಮಂದಿ ಕನ್ನಿಕೆಯರೂ, ಮದ್ದಾನೆಯೂ, ನಾಲ್ಕು ಕುದುರೆಗಳು ಕಟ್ಟಿರುವ ರಥವೂ, ಹೊಸ್ತಾಗಿ ಸಾಣೇ ಮಾಡಿದ ಕತ್ತಿಯೂ, ಬಿಲ್ಲೂ, ಬಾಣಗಳೂ, ಹುಣುಮೇ ಚಂದ್ರನನ್ನು ಹೋಲುವ ಬೆಳುಪು ಕೊಡೆಯೂ, ಚಿನ್ನದ ಹೂಜಿಗಳೂ, ಗಿಂಡಿಗಳೂ, ಚಿನ್ನದ ಸರಪಣಿಯಿಂದ ಕಟ್ಟಿರುವ ತೋರವಾದ ಹಿಳಲುಳ್ಳ ಬಿಳೀ ಗೂಳಿಯೂ, ನಾಲ್ಕು ಕೋರ ದಾಡೆಗಳುಳ್ಳ ಸಿಂಹವೂ, ಸಿಂಹಾಸನವೂ, ಸಂಪೂರ್ಣವಾದ ಹುಲೀ ಚರ್ಮವೂ, ಮುತ್ತುಗದ ಸಮಿತ್ತುಗಳೂ, ಬನ್ನೀ ಮರವನ್ನು ಕಡಿದು ಉಂಟು ಮಾಡಿದ ಬೆಂಕಿಯೂ, ಭೇರಿ ಮೃದಂಗಾದಿ ವಾದ್ಯಗಳೂ, ಅಲಂಕೃತರಾದ ವೇಶ್ಯಾ ಸ್ತ್ರೀರುಗಳೂ, ಗುರುಗಳೂ, ಬ್ರಾಹ್ಮಣರೂ, ಆಕಳುಗಳೂ, ಪವಿತ್ರವಾದ ಮೃಗ ಪಕ್ಷಿಗಳೂ, ಎಲ್ಲಾ ಸಿದ್ಧವಾಗಿವೆ, ಎಂದೂ ಹೇಳು. ಪರಿಶುದ್ಧವಾದ ನಕ್ಷತ್ರ ಯೋಗ ಕರಣಗಳು ಕೂಡಿದ ಶುಭ ಲಗ್ನದಲ್ಲಿ ಲೋಕಾಭಿರಾಮನಾದ ರಾಮನ ಪಟ್ಟಾಭಿಷೇಕಕ್ಕೆ ಅರಸನನ್ನು ಜಾಗ್ರತೆ ಪಡಿಸು, ಎಂದು ಹೇಳಿದರು.

ಆ ಮಾತನ್ನು ಸುಮಂತ್ರನು ಕೇಳಿ, ಅಂತಃಪುರವನ್ನು ಹೊಕ್ಕು, ಮಲಗುವ ಮನೆಯ ಬಾಗಿಲಲ್ಲಿ ನಿಂತು, ಕೈ ಮುಗಿದು ಕೊಂಡು,—ಎಲೈ, ಮಹಾ ರಾಯನೇ, ಸಕಲ ಲೋಕಗಳನ್ನು ಸಂತೋಷ ಪಡಿಸುತ್ತ, ಸೂರ್ಯನು ಹ್ಯಾಗೆ ಉದಯಿಸುತ್ತಿರುವನೋ, ಹಾಗೆಯೇ ನೀನು ಎದ್ದು, ನಮ್ಮನ್ನೆಲ್ಲಾ ಸಂತೋಷ ಪಡಿಸು. ಈ ವೇಳೆಯಲ್ಲಿ ಮಾತಲಿ ಎಂಬ ಸಾರಥಿಯು ಇಂದ್ರನನ್ನು ಹ್ಯಾಗೆ ಎಬ್ಬಿಸುವನೋ, ಸೂರ್ಯನು ಚಂದ್ರನೊಡನೆ ಕೂಡ ಪ್ರಾಣಿಗಳನ್ನು ಹ್ಯಾಗೆ ಎಬ್ಬಿಸುವನೋ, ಅಪರ ರಾತ್ರಿಯಲ್ಲಿ ಶಿಷ್ಯರು ಓದುವ ವೇದಾಧ್ಯಯನಗಳ ಘೋಷವು ಗುರುಗಳನ್ನು ಹ್ಯಾಗೆ ಎಬ್ಬಿಸುವದೋ, ಹಾಗೆ ನಾನು ನಿನ್ನನ್ನು ಎಬ್ಬಿಸುವೆನು. ಎಲೈ, ಮಹಾ ರಾಜನೇ, ಮೇರು ಪರ್ವತದ್ದೆಶೆಯಿಂದ ಸೂರ್ಯನು ಏಳುವ ಹಾಗೆ, ಹಾಸಿಗೆಯ ದೆಶೆಯಿಂದ ಏಳುವನಾಗು. ಚಂದ್ರ ಸೂರ್ಯರೂ, ವರುಣ ವೈಶ್ರವಣರೂ, ಇಂದ್ರಾಗ್ನಿಗಳೂ, ನಿನಗೆ ಮಂಗಳವನ್ನು ಕೊಡಲಿ! ರಾತ್ರಿಯು ಕಳೆದು ಹೋಯಿತು; ಮಂಗಳಕರವಾದ ಹಗಲು ಉಂಟಾಯಿತು. ರಾಮನ ಪಟ್ಟಾಭಿಷೇಕದ ಸಕಲ ಸಾಮಗ್ರೀಯಗಳನ್ನು ಸಿದ್ಧ ಮಾಡಿ ಕೊಂಡು, ಪುರೋಹಿತ ವಶಿಷ್ಠ ಮುನಿಯು ಕಾದಿದ್ದಾನೆ. ಶೀಘ್ರವಾಗಿ ರಾಮನಿಗೆ ಪಟ್ಟಾಭಿಷೇಕವನ್ನು ಮಾಡಿಸು. ದನಾ ಕಾಯುವವರಿಲ್ಲದೆ ಇರುವ ದನಗಳ ಹಾಗೂ, ದಳಪತಿಗಳಿಲ್ಲದ ದಳಗಳ ಹಾಗೂ, ಚಂದ್ರನಿಲ್ಲದ ರಾತ್ರಿಯ ಹಾಗೂ, ನೀನಿಲ್ಲದ ರಾಷ್ಟ್ರವು

ಶೋಭಿಸುವದಿಲ್ಲ ಎಂದು ಹೇಳುತ್ತಿರಲು; ಸ್ವಲ್ಪ ಎಚ್ಚತ್ತ ದಶರಥನಿಗೆ ಸುಮಂತ್ರ ಹೇಳಿದ ಆ ಮಾತುಗಳೆಲ್ಲಾ, ಘಾಯಗಳಲ್ಲಿ ಉಪ್ಪು ನೀರನ್ನು ಹಾಕಿದ ಹಾಗೆ, ಕರ್ಣ ಕಠೋರಗಳಾಗಿ ಸಂಕಟ ಪಡಿಸಲು; ಆ ಸಾರಥಿ ಸುಮಂತ್ರನನ್ನು ನಿದ್ರೆ ಇಲ್ಲದೆ ಕೆಂಪಾಗಿರುವ ಕಣ್ಣುಗಳಿಂದ ನೋಡಿ,—ಎಲೈ, ಸೂತನೇ, ನೀನು ಈ ವಾಕ್ಯಗಳಿಂದ ನನ್ನ ಮರ್ಮ ಸ್ಥಳಗಳನ್ನು ಬಾರಿ ಬಾರಿಗೂ ಯಾಕೆ ಕೊಯ್ಯುತ್ತೀ? ಎಂದು, ಇಷ್ಟು ಮಾತ್ರ ಹೇಳಿ, ಮತ್ತೆ ಮೂರ್ಛೆಯನ್ನು ಹೊಂದಿದನು.

ಆಗ ಕೈಕೆಯಿಯು—ಎಲೈ, ಸುಮಂತ್ರನೇ, ಅರಸು ರಾಮನ ಅಭಿಷೇಕೋತ್ಸವದ ಸಂತೋಷದಿಂದ ರಾತ್ರಿಯೆಲ್ಲಾ ಎಚ್ಚತ್ತು ಇದ್ದನು. ಈಗ ತಾನೇ ಸ್ವಲ್ಪ ನಿದ್ದೆ ಹೋಗುವನು. ಆದ್ದರಿಂದ ನೀನು ಬೇಗ ಹೋಗಿ, ರಾಮನನ್ನು ಕರೆದು ಕೊಂಡು ಬಾ. ಈ ಮಾತಿನಲ್ಲಿ ವಿಚಾರ ಮಾಡ ಬೇಡ; ಹೋಗು, ಎನಲು; ಸುಮಂತ್ರನು ರಾಮನ ಪಟ್ಟಾಭಿಷೇಕಕ್ಕೋಸ್ಕರ ಕೈಕೆಯೀ ದೇವಿಯು ತ್ವರೆ ಪಡಿಸುವಳು ಎಂದು ಸಂತೋಷ ಪಟ್ಟು ಕೊಂಡು, ಶೀಘ್ರವಾಗಿ ರಾಮನ ಬಳಿಗೆ ಹೋಗಿ, ಈ ಮಾತನ್ನು ಹೇಳಲು; ಆಗ ರಾಮನು ಶೀಘ್ರವಾಗಿ ಹೊರಟು, ಹಿಂದೆ ಬರುವ ಸೀತೆಯನ್ನು ನೋಡಿ, ತಂದೆಯೂ, ನನ್ನ ಕಿರೀ ತಾಯಿಯಾದ ಕೈಕೆಯಿಯೂ ಕೂಡಿ, ನನಗೆ ಪಟ್ಟಾಭಿಷೇಕವನ್ನು ಮಾಡಿಸುವದಕ್ಕೋಸ್ಕರ ಕರಿಸುವರು. ನಾನು ಹೋಗುವೆನು. ನಿನ್ನ ಪರಿವಾರದೊಡನೆ ಕೂಡಿ, ಇಲ್ಲಿ ಸುಖವಾಗಿರು ಎಂದು ಹೇಳಿ, ದಿವ್ಯವಾದ ರಥವನ್ನು ಏರಿ ಕೊಂಡು, ಹೊರಡಲು; ಲಕ್ಷ್ಮಣನು ಧನುರ್ಬಾಣಗಳನ್ನು ತೆಗೆದು ಕೊಂಡು, ಅಣ್ಣನ ವೈಗಾವಲಿಗಾಗಿ ಹಿಂದೆ ಬಂದನು. ಕತ್ತಿ, ಈಟಿ ಮುಂತಾದ ಆಯುಧಗಳನ್ನು ಧರಿಸಿ, ಬಹು ಜನ ಭಟರು ಕುದುರೆಗಳನ್ನು ಏರಿ ಕೊಂಡು, ಹಿಂದೆ ಬಂದರು. ದಿವ್ಯವಾದ ಶ್ವೇತ ಛತ್ರವನ್ನು ಹಿಡಿದರು. ಬಿಳೀ ಚೌರಿಗಳನ್ನು ಬೀಸಿದರು. ಮುಂದು ಗಡೆಯಲ್ಲಿ ಭಟ್ಟುಗಳು ಹೊಗಳುತ್ತಾ ಬಂದರು. ಬಹು ಜನ ಕಟ್ಟಿಗೆಯವರು ಮುಂದೆ ನೆರದಿರುವ ಗುಂಪುಗಳನ್ನು ಇಂಬಾಗಿ ಮಾಡುತ್ತಾ ಬಂದರು. ಇಷ್ಟು ಸಂಭ್ರಮದಿಂದ ರಾಮನು ರಾಜ ಬೀದಿಯಲ್ಲಿ ಬರುತ್ತ,—ಚಂದ್ರನು ರೋಹಿಣೀ ದೇವಿಯೊಡನೆ ಕೂಡುವಂತೆ, ರಾಜ್ಯ ಲಕ್ಷ್ಮಿಯೊಡನೆ ರಾಮನು ಕೂಡಿ, ನಮ್ಮನ್ನೆಲ್ಲಾ ಮಕ್ಕಳೋಪಾದಿಯಲ್ಲಿ ಕಾಪಾಡುವನು ಎಂದು, ಗುಂಪು ಗುಂಪಾಗಿ ಮಾತಾಡಿ ಕೊಳ್ಳುವ ಜನರುಗಳ ಮಾತುಗಳನ್ನು ಕೇಳುತ್ತ, ದಶರಥ ರಾಯನ ಅರಮನೆಯ

ಒಳಗೆ ಬಂದು, ರಥವನ್ನು ಇಳಿದು, ಸಕಲ ಪರಿವಾರದವರನ್ನು ಬಾಗಿಲಲ್ಲಿಯೇ
ನಿಲ್ಲಿಸಿ, ಒಬ್ಬನೇ ಒಳ ಹೊಕ್ಕು, ದುಖ್ಖಿತನಾಗಿರುವ ಒಣಗಿರುವ ತುಟಿಯುಳ್ಳ
ತಂದೆಯನ್ನು ನೋಡಿ, ಮೊದಲು ಆತನ ಕಾಲಿಗೆ ನಮಸ್ಕರಿಸಿ, ಆ ಹಿಂದೆ
ಕೈಕೆಯಿಗೆ ನಮಸ್ಕರಿಸಿ, ನಿಂತಿರುವ ರಾಮನನ್ನು ನೋಡಿ, ಕಣ್ಣೀರುಗ
ಳನ್ನು ಧಾರಾಳವಾಗಿ ಸುರಿಸುತ್ತ, ದಶರಥನು—ಹಾ, ರಾಮಾ! ಎಂದು ಘಟ್ಟಿ
ಯಾಗಿ ಕೂಗಿ, ಮೂರ್ಛೆಯನ್ನು ಹೊಂದಿದನು. ಆಗ ರಾಮನು ರಾಹು
ಹಿಡಿದ ಚಂದ್ರನಂತೆಯೂ, ಮೋಡಗಳಿಂದ ಮುಚ್ಚಿರುವ ಸೂರ್ಯನಂತೆಯೂ,
ಸುಳ್ಳು ಹೇಳಿದ ಋಷಿಯಂತೆಯೂ, ಕಾಂತಿ ಹೀನನಾಗಿ ಇರುವ ತಂದೆಯನ್ನು
ನೋಡಿ, ಭಯ ಪಟ್ಟು, ತಿರಿಗಿ ತಾಯಿಯಾದ ಕೈಕೆಯಿಗೆ ನಮಸ್ಕರಿಸಿ,—
ಎಲೈ, ತಾಯೇ, ಮೊದಲಿನ ಹಾಗೆ ನನ್ನ ತಂದೆಯು ಯಾಕೆ ನನ್ನನ್ನು ಸಂ
ತೋಷ ಪಡಿಸುವದಿಲ್ಲ? ಪೂರ್ವದಲ್ಲಿ ಯಾರ ಮೇಲಾದರೂ ನನ್ನ ತಂದೆಯು
ಕೋಪಿಷ್ಠನಾಗಿದ್ದರೆ, ನನ್ನ ನೋಡಿದ ಮಾತ್ರದಲ್ಲಿಯೇ ಪ್ರಸನ್ನನಾಗುತ್ತಿದ್ದನು.
ಅಂಥಾವನು ಈಗ ನನ್ನನ್ನು ನೋಡಿ, ಯಾಕೆ ಇಷ್ಟು ಆಯಾಸ ಪಡುತ್ತಾನೆ?
ಯಾಕೆ ಇಷ್ಟು ದುಖ್ಖ ಪಡುತ್ತಾನೆ? ಮಾವಿನ ಎಳೇ ಚಿಗುರು ಬೇಸಿಗೇ
ಬಿಸಲಿನಿಂದ ಕಂದಿರುವ ಹಾಗೆ ಈತನ ಮುಖವು ಯಾಕೆ ಕಂದಿ ಇದೆ?
ನಾನೇನಾದರೂ ತಿಳಿಯದೆ ಅಪರಾಧವನ್ನು ಮಾಡಿದ್ದರಿಂದ ಇಷ್ಟು ಕೋಪಿಷ್ಠ
ನಾಗಿದ್ಧಾನೋ? ಹಾಗಿದ್ದರೂ ನೀನು, ನನ್ನ ಮೇಲೆ ಕನಿಕರವಿಟ್ಟು, ನನ್ನಲ್ಲಿ
ಪ್ರಸನ್ನನಾಗುವ ಹಾಗೆ ಮಾಡ ಬೇಕು ಎಂದು, ಕೈ ಮುಗಿದು, ಬೇಡಿ
ಕೊಳ್ಳುತ್ತಿರುವ ರಾಮನನ್ನು ನೋಡಿ,—

ಕೈಕೆಯಿಯು ನಾಚಿಕೆ ತೊರೆದು, ತನಗೆ ಹಿತವಾದ ಮಾತನ್ನು ಹೇಳಲು
ದ್ಯುಕ್ತಳಾಗಿ—ಎಲೈ, ರಾಮನೇ, ನಿನ್ನ ಮೇಲೆ ಅರಸಿಗೆ ಸ್ವಲ್ಪವೂ ಕೋಪ
ವಿಲ್ಲ. ಆತನ ಮನೋಗತವು ಒಂದುಂಟು. ನಿನ್ನ ಭಯದಿಂದ ಅದನ್ನು ಹೇಳ
ಲಾರದೆ ಇದ್ಧಾನೆ. ಪ್ರಿಯನಾದ ನಿನಗೆ ಅಪ್ರಿಯವಾದ ಮಾತನ್ನು ಹ್ಯಾಗೆ ಹೇ
ಳಿಯಾನು? ಪೂರ್ವದಲ್ಲಿ ನನಗೆ ಎರಡು ವರಗಳನ್ನು ಪ್ರತಿಜ್ಞೆ ಮಾಡಿ ಕೊ
ಟ್ಟು, ಈಗ ಹೀಗೆ ಸಾಧಾರಣ ಜನರಂತೆ ಸಂಕಟ ಪಡುವನು. ಧರ್ಮಕ್ಕೆ
ಕಾರಣವಾದ ಆತನು ನನಗೆ ಕೊಟ್ಟ ಭಾಷೆಯನ್ನು ನೀನು ನಡಿಸಿ, ಅವನನ್ನು
ಸತ್ಯವಂತನಾಗಿ ಮಾಡಿ, ಆ ಕೆಲಸವು ನಿನಗೆ ಪ್ರಿಯವಾಗಿರಲಿ, ಅಪ್ರಿಯವಾ
ಗಿರಲಿ, ನಡಿಸುವದಾದರೆ, ವಿವರವಾಗಿ ಹೇಳುವೆನು, ಎನಲು; ರಾಮನು ಅದ
ನ್ನು ಕೇಳಿ, ತಂದೆಯ ಸನ್ನಿಧಾನದಲ್ಲಿ ಕೈಕೆಯಿಯನ್ನು ಕುರಿತು—ಎಲೇ, ತಾ

ಯೇ, ನನಗೆ ಇಂಥಾ ಮಾತನ್ನು ನೀನು ಹೇಳ ಬಹುದೇ? ತಂದೆಯ ಮಾತಿನಿಂದ ಬೆಂಕಿಯಲ್ಲಿಯಾದರೂ ಬೀಳುವೆನು, ಕ್ರೂರವಾದ ವಿಷವನ್ನಾದರೂ ಕುಡಿಯುವೆನು; ಕಡಲಿನಲ್ಲಿಯಾದರೂ ಮುಳುಗುವೆನು. ಎರಡು ಮಾತನ್ನಾಡುವನಲ್ಲ. ಬೇಗ ತಂದೆಯ ಮನೋಭಿಪ್ರಾಯವನ್ನು ಹೇಳು. ಮಾಡುವೆನು, ಎನಲು; ಕೈಕೆಯಿಯು ರಾಮನನ್ನು ಕುರಿತು—ಮೊದಲು ದೇವಾಸುರ ಯುದ್ಧದಲ್ಲಿ ನಿಮ್ಮ ತಂದೆಯ ಶ್ರಮವನ್ನು ನಾನು ಪರಿಹರಿಸಿದ್ದರಿಂದ, ನನಗೆ ಆಗ ಎರಡು ವರಗಳನ್ನು ಕೊಟ್ಟು ಇದ್ದನು. ಈಗ ಭರತನಿಗೆ ಪಟ್ಟಾಭಿಷೇಕವನ್ನೂ ನೀನು ಜಟಾಚೀರ ಧರನಾಗಿ ಹದಿನಾಲ್ಕು ವರುಷ ದಂಡಕಾರಣ್ಯದಲ್ಲಿ ವಾಸಾ ಮಾಡುವದನ್ನೂ ಕೇಳಿ ಕೊಂಡೆನು. ತಂದೆಯನ್ನು ಸತ್ಯ ಪ್ರತಿಜ್ಞನಾಗಿ ಮಾಡುವದಾದರೆ, ಆ ಪ್ರಕಾರ ನಡಿಸು ಎಂದು ಹೇಳಿದಳು. ರಾಮನು ಅಂಥಾ ಮಾತನ್ನು ಕೇಳಿದಾಗ್ಯೂ, ಸ್ವಲ್ಪವಾದರೂ ಮನಸ್ಸಿನಲ್ಲಿ ಚಿಂತಿಸದೆ,—ತಂದೆಯ ಪ್ರತಿಜ್ಞೆಯನ್ನು ಕಾಪಾಡುವದಕ್ಕೆ ಜಟಾಜಿನ ಧರನಾಗಿ ಅರಣ್ಯಕ್ಕೆ ಹೋಗುವೆನು. ಗುರುವಾಗಿಯೂ ಹಿತನಾಗಿಯೂ ತಂದೆಯಾಗಿಯೂ ಅರಸಾಗಿಯೂ ಇರುವವನ ಮಾತನ್ನು ಯಾವ ಮಗನಾದರೂ ಕೇಳದೆ ಇರುವನೇ? ನನ್ನ ರಾಜ್ಯವನ್ನೂ ಪ್ರಾಣಗಳನ್ನೂ ಧನಗಳನ್ನೂ ನನ್ನ ತಮ್ಮನಾದ ಭರತನಿಗೋಸ್ಕರ ನಾನಾಗಿಯೇ ಕೊಡುವದಕ್ಕೆ ಬಹಳ ಸಂತೋಷ ಯುಕ್ತನಾಗಿರುವಲ್ಲಿ, ತಂದೆ ತಾಯಿಗಳಿಂದ ಪ್ರೇರಿತನಾಗಿ ಕೊಡುವದು ಅತಿಶಯವೇನು? ಶೀಘ್ರವಾಗಿ ದೂತರು ಕೇಕಯ ಪಟ್ಟಣಕ್ಕೆ ಹೋಗಿ, ಭರತನನ್ನು ಕರತರಲಿ. ನನ್ನ ಕೈಯಿಂದ ಆತನಿಗೆ ಪಟ್ಟಾಭಿಷೇಕವನ್ನು ಮಾಡಿ, ನಾನು ದಂಡಕಾರಣ್ಯಕ್ಕೆ ಹೋಗುವೆನು ಎನಲು; ಕೈಕೆಯಿಯು ಸಂತುಷ್ಟಳಾಗಿ,—ನಾವು ಭರತನನ್ನು ಕರತರಿಸಿ, ಪಟ್ಟಾಭಿಷೇಕವನ್ನು ಮಾಡುವೆವು. ನೀನು ವಿಳಂಬ ಮಾಡದೆ, ವನಕ್ಕೆ ಹೊರಟು ಹೋದ ಹೊರ್ತು ಧೊರೆಯು ಸ್ವಸ್ಥಚಿತ್ತನಾಗುವದಿಲ್ಲ, ಎನ್ನಲು; ದಶರಥನು ಶಿಡಿಲು ಬಡಿದ ಮರದಂತೆ ಭೂಮಿಯಲ್ಲಿ ಬಿದ್ದು, ಮೂರ್ಛಿತನಾದನು. ಆಗ ರಾಮನು ತಂದೆಯನ್ನು ಎಬ್ಬಿಸಿ, ಕೈಕೆಯಿಯ ಮಾತಿನಿಂದ, ಚಾಟಿಯಿಂದ ಹೊಡೆದ ಕುದುರೆಯಂತೆ ಜಾಗ್ರತೆಯಿಂದ ಕೂಡಿ, ತಂದೆ ತಾಯಿಗಳಿಗೆ ನಮಸ್ಕರಿಸಿ, ಕೈಕೆಯಿಯನ್ನು ಕುರಿತು—ಎಲೈ, ತಾಯೇ, ನಾನು ಕೇವಲ ಹಣದಾಶೆಯುಳ್ಳವನು ಎಂದು ತಿಳಿಯ ಬೇಡ. ಋಷಿಗಳಿಗೆ ಸರಿಯಾದ ಧರ್ಮಿಷ್ಠನೆಂದು ತಿಳಿ ಎಂದು, ತಂದೆ ತಾಯಿಗಳನ್ನು ಬಲಗೊಂಡು, ಹೊರಗೆ ಬಂದು, ಓಲಗದ ಚಾವಡಿಯಲ್ಲಿ ಸಿದ್ಧವಾಗಿ ಇಟ್ಟ

ದ್ದ ಅಭಿಷೇಕದ ಪದಾರ್ಥಗಳನ್ನು ಪ್ರದಕ್ಷಿಣಾ ಮಾಡಿ, ಛತ್ರ ಚಾಮರ ಧಾರಿ
ಗಳು ಮೊದಲಾದ ಸಕಲ ಪರಿ ಜನರನ್ನು ಬಿಟ್ಟು, ಒಬ್ಬನಾಗಿಯೇ ತನ್ನ ತಾ
ಯಿಯಾದ ಕೌಸಲ್ಯಾ ದೇವಿಯ ಮನೆಗೆ ಬರುತ್ತಿರಲು; ಲಕ್ಷ್ಮಣ ಮಾತ್ರ
ಧನುರ್ಬಾಣವನ್ನು ತೆಗೆದು ಕೊಂಡು, ರಾಮನ ಹಿಂದೆ ಹೋದನು.

ಆಗ ಶ್ರೀರಾಮನು ತಾಯಿಯ ಅಂತಃಪುರವನ್ನು ಪ್ರವೇಶಿಸಿ, ಅವಳ ಸ
ನ್ನಿಧಾನಕ್ಕೆ ಹೋಗಿ, ನಮಸ್ಕರಿಸಲು; ಆಕೆಯು ರಾಮನನ್ನು ಬಾಚಿ, ತಬ್ಬಿ
ಕೊಂಡು, ಮುಂಗುರುಳುಗಳನ್ನು ಮೂಸಿ ನೋಡಿ, ಮುದ್ದಾಡಿ, ಮಗನ ಮೇಲಿನ
ವಾತ್ಸಲ್ಯದಿಂದ ರಾಮನನ್ನು ಕುರಿತು—ಈಗ ಮಹಾ ರಾಯನಾದ ನಿಮ್ಮ ತಂದೆ
ಯು ನಿನ್ನನ್ನು ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗಿ ಮಾಡುವನು. ನೀನು ತಂದೆ
ಯನ್ನು ಶುಶ್ರೂಷೆ ಮಾಡುತ್ತ, ನಿನ್ನ ತಂದೆಯ ರಾಣಿಗಳಾದ ಎಲ್ಲಾ ಬಲತಾಯಿ
ಗಳನ್ನು ನನ್ನಂತೆ ಕಾಣುತ್ತ, ಅವರಿಗೆಲ್ಲಾ ಪ್ರಿಯವಾಗುವಂತೆ ನಡೆಯುತ್ತ,
ಪ್ರಜೆ ಪರಿವಾರಗಳನ್ನು ಮಕ್ಕಳಿಗಿಂತ ಹೆಚ್ಚಾಗಿ ಕಾಪಾಡುತ್ತ, ಗುರುಗಳಾದ
ವಶಿಷ್ಠಾದಿಗಳನ್ನು ಪೂಜಿಸುತ್ತಾ, ಅವರ ಮಾತುಗಳನ್ನು ಮೀರದೆ, ರಾಜ ನೀತಿ
ಯನ್ನು ತಪ್ಪದೆ, ಆಚಂದ್ರಾರ್ಕವಾಗಿ ಸಾಂಬ್ರಾಜ್ಯವನ್ನು ಅನುಭವಿಸುತ್ತಿರು,
ಎಂದು ಹೇಳಲು; ರಾಮನು ನಾಚಿ ಕೊಂಡು—ಎಲೇ, ತಾಯೇ, ನಿನಗೆ ಈಗ
ಒದಗಿರುವ ಭಯವನ್ನು ಕಾಣದೆ, ಹೀಗೆ ಹೇಳುತ್ತಿದ್ದೀಯೇ? ನಾನು ನಿನಗೂ
ಸೀತೆಗೂ ಲಕ್ಷ್ಮಣನಿಗೂ ಮಹಾ ದುಖ್ಖವನ್ನು ಉಂಟು ಮಾಡುವದಕ್ಕೆ ಹು
ಟ್ಟಿದೆನು. ಈಗ ದಂಡಕಾರಣ್ಯವನ್ನು ಕುರಿತು ಹೋಗುವೆನು. ಮಾಂಸವೇ
ಮೊದಲಾದ ಭೋಜನಗಳನ್ನು ಬಿಟ್ಟು, ಮುನಿಗಳ ಹಾಗೆ ಗೆಡ್ಡೆ ಗೆಣಸುಗ
ಳನ್ನು ತಿಂದು ಕೊಂಡು, ಹದಿನಾಲ್ಕು ವರುಷ ದಂಡಕಾರಣ್ಯದಲ್ಲಿ ವಾಸಾ
ಮಾಡುವೆನು. ಮಹಾ ರಾಜನು ಭರತನಿಗೆ ಯುವ ರಾಜ್ಯವನ್ನು ಕೊಡುವನು.
ನನಗೆ ದಂಡಕಾರಣ್ಯವಾಸಕ್ಕೆ ಅಪ್ಪಣೇ ಕೊಟ್ಟನು, ಎಂದು ಹೇಳಲು; ಆಕೆ
ಯು ಆ ಮಾತನ್ನು ಕೇಳಿ, ಕೊಡಲಿಯಿಂದ ಕಡಿದ ಓಲೇ ಮರದ ಹಾಗೆ
ಯೂ, ಸ್ವರ್ಗದಿಂದ ಭೂಮಿಗೆ ಬಿದ್ದ ದೇವತೆಯಂತೆಯೂ, ಸುಂಟರ ಘಾಳಿಯಿಂದ
ಮುರಿಯಲ್ಪಟ್ಟ ಬಾಳೇ ಕಂಭದಂತೆಯೂ ಭೂಮಿಯಲ್ಲಿ ಬಿದ್ದು, ಮೂರ್ಛಿತ
ಳಾಗಲು; ರಾಮನು ಎಬ್ಬಿಸಿ, ನೀರನ್ನು ತಳಿದು, ಚೇತನ ಗೊಳಿಸಿದನು.

ಆಗ ಅವಳು ರಾಮನನ್ನು ನೋಡಿ,—ನಾನು ಬಹು ಕಾಲಕ್ಕೆ ಅನೇಕ ದೇವ
ತಾ ಪ್ರಾರ್ಥನೆಗಳಿಂದ ನಿನ್ನನ್ನು ಹೆತ್ತು, ಇಂಥಾ ದುಖ್ಖಕ್ಕೆ ಗುರಿಯಾದೆನು.
ಲೋಕದಲ್ಲಿ ಹೀಗೆ ಮಕ್ಕಳ ಹೆತ್ತು, ದುಖ್ಖವನ್ನು ಅನುಭವಿಸುವದಕ್ಕಿಂತ ಹೆಂ

ಗಸರಿಗೆ ಬಂಜೆಯಾಗಿರುವದೇ ಲೇಸು. ಆಕೆಗೆ ಮಕ್ಕಳಿಲ್ಲ ಎಂಬ ಒಂದು ದುಖ್ಖವೇ ಹೊರ್ತು, ಮತ್ತೆ ಬೇರೆ ದುಖ್ಖಗಳಿಲ್ಲ. ನನ್ನ ಸವತಿಯಾದ ಕೈಕೆಯಿಯು, ನಿನ್ನ ತಂದೆಗೆ ಪ್ರಿಯಳಾಗಿದ್ದೇನೆಂಬ ಗರ್ವದಿಂದ ಆಗಾಗ್ಯೆ ನನ್ನ ವಿಷಯವಾಗಿ ಕೆಟ್ಟ ಮಾತುಗಳನ್ನು ಆಡುತ್ತಿರುವಳು. ಅದನ್ನು, ನಿನ್ನ ನೋಡಿ, ಸಹಿಸಿ ಕೊಂಡಿದ್ದೆನು. ಈಗ ನೀನು ಕಾಡಿಗೆ ಹೋಗಿ, ಆಕೆಯ ಮಗನಿಗೆ ರಾಜ್ಯಾಭಿಷೇಕವಾಗಿ, ಅವಳ ಕೈ ಕೆಳಗೆ ನಾನು ಬಿದ್ದಿರ ಬೇಕಾಗಿ ಬಂತು. ಇದಕ್ಕಿಂತ ನನಗೆ ಹೆಚ್ಚಾದ ಮತ್ತೊಂದು ದುಖ್ಖ ಯಾವದಿರುವದು? ಎಲೈ, ಅಪ್ಪಾ, ನೀನು ಅರಣ್ಯ ವಾಸಕ್ಕೆ ಹೋದರೆ, ನನಗೆ ಸಾವು ಸಿದ್ಧವಾಗಿರುವದು. ಹದಿನಾಲ್ಕು ವರುಷ ಪರಿಯಂತರ ನಿನ್ನನ್ನು ಅಗಲಿ, ಹ್ಯಾಗೆ ಸಹಿಸಲಿ? ಚಂದ್ರ ಮಂಡಲಕ್ಕೆ ಸರಿಯಾದ ನಿನ್ನ ಮುಖವನ್ನು ಹ್ಯಾಗೆ ನೋಡದೆ ಇರಲಿ? ಪತಿಯ ಪ್ರೀತಿಯೂ ಇಲ್ಲದೆ, ನಿನ್ನನ್ನು ತೊರೆದು, ಕೃಪಣಳಾಗಿ, ಹ್ಯಾಗೆ ಬದುಕಲಿ? ನೀನು ಚನ್ನಾಗಿ ಬದುಕ ಬೇಕೆಂದು ನಾನು ಮಾಡಿದ ಉಪವಾಸ ವ್ರತಗಳೂ, ದೇವತಾ ಪ್ರಾರ್ಥನೆಗಳೂ, ದಾನ ಧರ್ಮಗಳೂ, ಬೂದಿಯಲ್ಲಿ ಮಾಡಿದ ಹೋಮದ ಹಾಗೆ ವ್ಯರ್ಥವಾದವು. ನಿನ್ನ ಅರಣ್ಯ ವಾಸದ ಸುದ್ದಿಯನ್ನು ಕೇಳಿ, ನನ್ನ ಎದೆಯು ಶೀಳದೆ ಇರುವದರಿಂದ, ವಿಧಿಯು ನನ್ನ ಹೃದಯವನ್ನು ವಜ್ರದಿಂದ ಮಾಡಿ ಇದ್ದಾನೆಂದು ನೆನಸುತ್ತೇನೆ. ಕಾಡಿನಲ್ಲಿ ಸಿಂಹವು ಹೆಣ್ಣು ಹುಲ್ಲೆಯನ್ನು ಎಳೆಯುವ ಹಾಗೆ, ಯಮನು ನನ್ನನ್ನು ಯಾಕೆ ತನ್ನ ಪಟ್ಟಣಕ್ಕೆ ಎಳ ಕೊಂಡು ಹೋಗುವದಿಲ್ಲ? ದುಖ್ಖ ಕಾಲದಲ್ಲಿ ಸಾವು ಉಂಟಾಗುವದಿಲ್ಲವೆಂದು, ಹಿರಿಯರು ಹೇಳುವ ಮಾತು ನಿಜವಾಗಿದೆ. ಕರುವನ್ನು ಕಾಣದ ಎಳೆಗಂದಿಯೋಪಾದಿಯಲ್ಲಿ ಸಂಕಟ ಪಡುತ್ತಾ ಬದುಕುವದಕ್ಕಿಂತ ಸಾಯುವದೇ ಒಳ್ಳೇದು. ಅಥವ ನಿನ್ನೊಡನೆ ನಾನೂ ವನಕ್ಕೆ ಬರುವೆನು. ಕರೆದು ಕೊಂಡು ಹೋಗು ಎಂದು, ಹೀಗೆ ಮೊರೆ ಇಡುತ್ತ, ಕಣ್ಣೀರುಗಳನ್ನು ಸುರಿಸುತ್ತ, ಪ್ರಳಾಪಿಸುತ್ತಿರಲು;

ಆಗ ಲಕ್ಷ್ಮಣನು ರಾಮನ ತಾಯಿಯಾದ ಕೌಸಲ್ಯೆಯನ್ನು ಕುರಿತು—ಈ ರಾಮನು ರಾಜ್ಯ ಶ್ರೀಯನ್ನು ಬಿಟ್ಟು, ಹೆಂಗಸಿಗೆ ವಶನಾದ, ಮುದುಕನಾಗಿ, ಬುದ್ಧಿ ಇಲ್ಲದ ತಂದೆಯ ಮಾತನ್ನು ಕೇಳಿ ಕೊಂಡು, ವನಕ್ಕೆ ಹೋಗುವದು ಯಾವ ನ್ಯಾಯವು? ರಾಜ್ಯಾಭಿಷೇಕಕ್ಕೆ ಯೋಗ್ಯನಾದ ಮಗನನ್ನು ವನವಾಸಕ್ಕೆ ಕಳುಹಿಸುವದಕ್ಕೆ ಇವನಲ್ಲಿ ಯಾವ ದೋಷವನ್ನೂ, ಯಾವ ತಪ್ಪನ್ನೂ, ಯಾವ ಅಪರಾಧವನ್ನೂ ಕಂಡನು? ಕೈಕೆಯಿಯ ವಶನಾದ ಮುದುಕನಾದ

ತಂದೆಯನ್ನು ನಾನು ಕೊಲ್ಲುವೆನು. ನನ್ನೊಡನೆ ಕೂಡಿ, ರಾಜ್ಯಭಾರವನ್ನು
ಮಾಡುವ ಈ ರಾಮನಿಗೆ ಅಪ್ರಿಯವನ್ನು ಮಾಡುವದಕ್ಕೆ ಯಾರು ಸಮರ್ಥರು?
ಒಂದು ವೇಳೆ ಕೈಕೆಯಿಯಿಂದ ಉಬ್ಬಿಸಲ್ಪಟ್ಟವನಾಗಿ, ಭರತನು ಏನಾದರೂ
ಕೆಟ್ಟಾಟವನ್ನು ಮಾಡಿದರೆ, ಅವನನ್ನು ಕೊಂದು ಹಾಕುವೆನು. ಗರ್ವಿಷ್ಠನಾಗಿ
ಕಾರ್ಯಾಕಾರ್ಯಗಳನ್ನು ತಿಳಿಯದೆ, ದುರ್ಮಾರ್ಗಿಯಾದ ಗುರುವನ್ನು ಕೂಡ
ಶಿಕ್ಷಿಸ ಬೇಕೆಂದು, ಶಾಸ್ತ್ರವಿರುವದು. ಲೋಕದಲ್ಲಿ ಯಾವ ಮನುಷ್ಯನು ಅತಿ
ಮೃದುವಾಗಿರುವನೋ, ಅವನು ಎಲ್ಲರಿಂದಲೂ ತಿರಸ್ಕಾರ ಹೊಂದುವನು, ಎಂ
ದು ಹೇಳಿದನು. ಈ ಪ್ರಕಾರ ಲಕ್ಷ್ಮಣನು ಉದ್ದುರುಟತನದಿಂದ ಹೇಳಿದ
ಮಾತನ್ನು ರಾಮನು ಕೇಳಿ, ಲಕ್ಷ್ಮಣನನ್ನು ಕುರಿತು—ಎಲೈ, ತಮ್ಮನೇ, ನೀನು
ಇಂಥಾ ಮಾತನ್ನು ಆಡ ಬಹುದೇ? ಆದರೆ ಹೀಗೆ ಆಡಿದ್ದು ನಿನ್ನ ಸ್ವಭಾವವ
ಲ್ಲ. ನನ್ನ ಮೇಗಳ ವ್ಯಾಮೋಹವೆಂಬ ಹುಚ್ಚಿನಿಂದ ಕೃತ್ಯಾಕೃತ್ಯ ವಿವೇಕ
ವು ತಿಳಿಯದೆ, ಇಂಥಾ ಮಾತನ್ನು ಆಡಿದಿ. ಆದರೆ ನಿನ್ನೊಡನೆಯೂ ನನ್ನೊಡ
ನೆಯೂ ಹಗೆತನವನ್ನು ಮಾಡಿ ಕೊಂಡು, ಯಾರು ಭರತನಿಗೆ ರಾಜ್ಯವನ್ನು
ಕೊಡುವರು? ಆದರೆ ನಾನು ನನ್ನ ತಮ್ಮನಾದ ಭರತನಲ್ಲಿ ಬಹು ಪ್ರಿಯವುಳ್ಳ
ವನಾಗಿದ್ದೇನೆ. ಆದ್ದರಿಂದ ಆತನು ನಮ್ಮ ಕೋಸಲ ರಾಜ್ಯವನ್ನು ಆಳುವಂ
ಥಾದ್ದು ನನಗೆ ಬಹು ಸಂತೋಷವಾಗಿರುವದು. ಇದರ ಮೇಲೆ ಈ ನಮ್ಮ
ದೇಹಗಳು ಯಾರವು? ಯಾರಿಂದ ಉಂಟಾದವು? ತಂದೆ ದಶರಥ ರಾಯನಿಂ
ದಲ್ಲವೇ? ಆತನು ತನ್ನ ಸ್ವತ್ತಾದ ನಮ್ಮ ದೇಹಗಳನ್ನು ಏನು ಮಾಡಿದರೂ,
ಬೇಕು ಬೇಡ ಎಂಬವರು ಯಾರು? ಲೋಕದಲ್ಲಿ ತಂದೆಯೇ ದೈವವು. ಆದ್ದ
ರಿಂದ ಇಂಥಾ ಮಾತುಗಳನ್ನು ಆಡ ಬಾರದು ಎಂದು, ಲಕ್ಷ್ಮಣನನ್ನು ಸಮಾ
ಧಾನ ಪಡಿಸುತ್ತಿರಲು;

ಕೌಸಲ್ಯಾ ದೇವಿಯು—ಎಲೈ, ರಾಮನೇ, ನಿನ್ನ ವಿಯೋಗದ್ದೆಶೆಯಿಂದ ಸು
ಖದಿಂದಲೂ ಪ್ರಾಣಗಳಿಂದಲೂ ನನಗೆ ಪ್ರಯೋಜನವಿಲ್ಲ. ನಿನ್ನೊಡನೆ ನಾ
ನು ಇದ್ದರೆ, ಗೆಡ್ಡೆ ಗೆಣಸುಗಳನ್ನು ತಿನ್ನುವದೂ ಹುಲ್ಲಿನ ಹಾಸಿಗೆಯು ಮೇಲೆ
ಮಲಗುವದೂ ನನಗೆ ಬಹಳ ಸುಖವಾಗಿರುವದು. ನನ್ನನ್ನು ಕರೆದು ಕೊಂ
ಡು ಹೋಗು. ಹಾಗಲ್ಲದೆ ಇದ್ದರೆ, ನಿಮ್ಮ ತಂದೆಯಾದ ದಶರಥನು ತನ್ನ
ಮೋಹದ ಹೆಂಡತಿಯಾದ ಕೈಕೆಯಿಯ ಮಗನಿಗೆ ರಾಜ್ಯವನ್ನು ಕೊಟ್ಟು
ಕೊಳ್ಳಲಿ. ನೀನು ಇಲ್ಲಿಯೇ ಇದ್ದು ಕೊಂಡು, ನನ್ನನ್ನು ಶುಶ್ರೂಷೆಯನ್ನು
ಮಾಡಿ ಕೊಂಡಿರು. ಈ ಎರಡು ಕೆಲಸವನ್ನು ಮಾಡದೆ, ನನ್ನ ಸವತಿಯು ಮಾ

ತನ್ನು ಕೇಳಿ, ಶೋಕ ಸಂತಪ್ತಳಾದ ನನ್ನನ್ನು ಇಲ್ಲಿ ಬಿಟ್ಟು, ಹೋಗುವದು ನ್ಯಾಯವಲ್ಲ. ಲೋಕದಲ್ಲಿ ಮಕ್ಕಳಾದವರಿಗೆ ತಂದೆ ತಾಯಿಗಳು ಇಬ್ಬರೂ ಸರಿಯಲ್ಲವೇ? ತಂದೆಯ ಮಾತನ್ನು ಮಾತ್ರ ಕೇಳಿ, ತಾಯಿಯ ಮಾತನ್ನು ಮೀರುವದು ಯುಕ್ತವಲ್ಲ. ಇದರ ಮೇಲೆ ನೀನು ಮೀರಿ, ನನ್ನನ್ನು ಬಿಟ್ಟು, ವನಕ್ಕೆ ಹೋದರೆ, ನಾನು ಪ್ರಾಣವನ್ನು ಬಿಡುವೆನು. ಇದು ಖಂಡಿತವು ಎಂದು, ಮೊರೆ ಇಡುತ್ತಲಿರುವ ತಾಯಿಯನ್ನು ನೋಡಿ, ರಾಮನು—ಎಲೇ, ತಾಯಿಯೇ, ತಂದೆಯ ಮಾತನ್ನು ಮೀರಿ ನಡೆಯುವದಕ್ಕೆ ಎಷ್ಟು ಮಾತ್ರವೂ ನನಗೆ ಶಕ್ತಿ ಸಾಲದು. ಅಡ್ಡ ಬಿದ್ದು, ನಿನ್ನನ್ನು ಬೇಡಿ ಕೊಳ್ಳುವೆನು. ವನಕ್ಕೆ ಹೋಗಲಿಚ್ಛೈಸುತ್ತೇನೆ. ನನ್ನಲ್ಲಿ ದಯವಿಟ್ಟು, ಅಪ್ಪಣೆ ಕೊಡು. ಮೊದಲು ನಮ್ಮ ವಂಶದಲ್ಲಿ ಸಗರನ ಮಕ್ಕಳಾದ ಅರುವತ್ತು ಸಾವಿರ ಮಂದಿಯು ಭೂಮಿಯನ್ನು ಅಗಿದು, ಸತ್ತು ಹೋಗಲಿಲ್ಲವೇ? ಮತ್ತು ಪರಶುರಾಮನು ತಂದೆಯಾದ ಜಮದಗ್ನಿಯ ಮಾತಿನಿಂದ ತಾಯಿಯಾದ ರೇಣುಕೆಯನ್ನು ಕೊಡಲಿಯಿಂದ ಕಡಿಯಲಿಲ್ಲವೇ? ನಾನು ಒಬ್ಬ ಮಾತ್ರ ತಂದೆಯ ಅಪ್ಪಣೇ ಮೇರೆಗೆ ನಡೆಯುವದಿಲ್ಲ. ಪೂರ್ವೀಕರಾದ ಬಹು ಜನರು ತಂದೆಗಳ ಮಾತನ್ನು ಮೀರದೆ, ನಡೆದಿರುವರು. ತಂದೆಯು ಮಹೋನ್ನತನಾಗಿರುವಲ್ಲಿ ನಿನ್ನನ್ನು ನಾನು ವನಕ್ಕೆ ಕರೆದು ಕೊಂಡು ಹೋಗುವದೂ ನನ್ನ ಸಂಗಡ ನೀನು ಬರುವದೂ ಬಹಳ ಅಯುಕ್ತವು. ಲೋಕದಲ್ಲಿ ಹೆಂಗಸರುಗಳಿಗೆ ಪತಿಗಿಂತ ಪ್ರಿಯವಾದವರು ಯಾರೂ ಇಲ್ಲ. ತಂದೆ ತಾಯಿಗಳೂ, ಅಣ್ಣ ತಮ್ಮಂದಿರೂ, ನಂಟ ಇಷ್ಟರೂ, ಮಕ್ಕಳೂ ಮುಂತಾದವರಿಗೆಲ್ಲಾ ಗಂಡನೇ ಶ್ರೇಷ್ಠನು. ಅದು ಅಲ್ಲದೆ, ಈಗ ನನ್ನ ತಂದೆಯು ಕೈಕೆಯಿಯ ಮಾತಿನಿಂದ ಪ್ರಿಯನಾದ ನನ್ನನ್ನು, ಸತ್ಯವನ್ನು ಮೀರಲಾರದೆ, ವನಕ್ಕೆ ಕಳುಹಿಸಿ, ಶೋಕವೆಂಬ ಸಮುದ್ರದಲ್ಲಿ ಮುಳುಗಿ, ಧಡವನ್ನು ಕಾಣದೆ, ಪ್ರಾಣಗಳು ಬಿಡುವವನಾಗಿದ್ದಾನೆ. ಇಂಥಾ ಕಷ್ಟ ಕಾಲದಲ್ಲಿ ಹಿರೀ ಹೆಂಡತಿಯಾಗಿಯೂ ಹಿತಳಾಗಿಯೂ ಸಕಲ ಧರ್ಮವನ್ನು ತಿಳಿದವಳಾಗಿಯೂ ಇರುವ ನೀನು ಪತಿಯ ಶುಶ್ರೂಷೆಯನ್ನು ಬಿಟ್ಟು ಬಂದರೆ, ಲೋಕದವರು ಒಪ್ಪರು. ಆದ್ದರಿಂದ ನನಗೆ ಅಪ್ಪಣೆಯನ್ನು ಕೊಡು. ದಂಡಕಾರಣ್ಯಕ್ಕೆ ಹೋಗುವೆನು. ನನ್ನ ಪ್ರಾಣಗಳ ಮೇಲೆ ಆಣೆ ಇಡುವೆನು. ಇದಕ್ಕೆ ಬದಲು ಮಾತನ್ನು ಆಡ ಬೇಡ. ಯಯಾತಿ ಎಂಬ ರಾಜ ಋಷಿಯು ಸ್ವರ್ಗವನ್ನು ಬಿಟ್ಟು, ಭೂಮಿಗೆ ಬಂದಂತೆ ಹದಿನಾಲ್ಕು ವರುಷವು ತಂದೆಯ ಆಜ್ಞೆಯನ್ನು ನಡಿಸಿ, ವನದಲ್ಲಿ ಇದ್ದು ಕೊಂಡಿದ್ದು, ತಿರಿಗಿ ನಿನ್ನ ಸನ್ನಿಧಾನಕ್ಕೆ

ಬರುವೆನು. ನಿನ್ನಿಂದಲೂ ನನ್ನಿಂದಲೂ ಸೀತೆಯಿಂದಲೂ ಲಕ್ಷ್ಮಣನಿಂದಲೂ ಸುಮಿತ್ರೆಯಿಂದಲೂ ತಂದೆಯ ಅಪ್ಪಣೆಯ ಮೇರೆ ನಡೆಯ ತಕ್ಕದ್ದು. ಇದೇ ನಮಗೆ ಮುಖ್ಯವಾದ ಧರ್ಮವು. ಆದ್ದರಿಂದ ಶೋಕವನ್ನು ಮನಸ್ಸಿನಲ್ಲಿ ಸಹಿಸಿ ಕೊಂಡು, ಆಶೀರ್ವಾದವನ್ನು ಮಾಡಿ, ನನ್ನನ್ನು ಅಪ್ಪಣೇ ಕೊಟ್ಟು, ವನಕ್ಕೆ ಕಳುಹಿಸು, ಎಂದು ಬೇಡಿ ಕೊಂಡನು.

ಆಗ ಆ ಮಾತನ್ನು ಕೇಳಿ, ಕೌಸಲ್ಯೆಯು ಪುತ್ರ ವಿಯೋಗ ದುಖ್ಖವನ್ನು ಸಹಿಸಲಾರದೆ, ಭೂಮಿಯಲ್ಲಿ ಬಿದ್ದು, ಮೂರ್ಛಿತಳಾದಳು. ಲಕ್ಷ್ಮಣನು ರಾಮನ ಕಾಲಿನ ಮೇಲೆ ಬಿದ್ದು, ಮೂರ್ಛಿತನಾದನು. ಆಗ ಸುಮಿತ್ರೆಯೇ ಮೊದಲಾದ ದಶರಥ ರಾಯನ ಅಂತಃಪುರದ ಸ್ತ್ರೀಯರುಗಳೆಲ್ಲಾ—ಹಾ, ಹಾ! ರಾಮಾ, ರಾಮಾ! ಎಂದು ಮೊರೆ ಇಡುತ್ತ,—ನಮಗೆಲ್ಲಾ ಗತಿಯಾಗಿದ್ದ ನೀನು ನಮ್ಮೆಲ್ಲರನ್ನು ಬಿಟ್ಟು, ವನಕ್ಕೆ ಹೋಗುವಿಯಾ? ತಾಯಿಯಾದ ಕೌಸಲ್ಯೆಯಂತೆ ನಮ್ಮೆಲ್ಲರಲ್ಲಿಯೂ ಪ್ರೀತಿ ಇಟ್ಟು, ನಡೆದು ಕೊಳ್ಳುತ್ತಿದ್ದೆಯಲ್ಲ! ನಮ್ಮಲ್ಲಿ ಒಂದು ದಿವಸವಾದರೂ ನೀನು ಕೋಪ ಮಾಡಿದವನಲ್ಲವಲ್ಲ! ನಿನ್ನ ಕ್ರೂರವಾದ ಮಾತನ್ನು ನಮ್ಮ ಕಿವಿಗಳಿಂದ ಒಂದು ದಿವಸವಾದರೂ ನಾವು ಕೇಳಲಿಲ್ಲ. ಏನಾದರೂ ಒಂದು ವ್ಯಾಕುಲದಿಂದ ನಾವು ಚಿಂತೆ ಪಡುತ್ತಾ ಇದ್ದಲ್ಲಿ, ನಿನ್ನ ಕೋಮಲವಾದ ಮಾತುಗಳಿಂದ ನಮ್ಮನ್ನು ಸಮಾಧಾನ ಮಾಡುತ್ತಿದ್ದೆಯಲ್ಲ! ಅಂಥ ನೀನು ನಮ್ಮನ್ನು ಬಿಟ್ಟು, ಕಾಡಿಗೆ ಹೋದರೆ, ನಮಗೇನು ಗತಿ? ಅರುವತ್ತಕ್ಕೆ ಅರಿವು ಮರುಳು ಎಂಬ ಲೋಕದ ಗಾದೆಯಂತೆ, ಈ ದಶರಥನು ಮುದುಕನಾದ್ದರಿಂದ, ಬುದ್ಧಿ ಇಲ್ಲದೆ, ಸಕಲ ಪ್ರಾಣಿಗಳಿಗೂ ಗತಿಯಾದ ನಿನ್ನನ್ನು ವನಕ್ಕೆ ಅಟ್ಟಿದನು ಎಂದು, ಘೋಳಿಡುತ್ತ, ಎಲ್ಲರು ಕರುಗಳಿಲ್ಲದ ಹಸುಗಳಂತೆ ರಾಮನ ಮುಂದೆ ಬಿದ್ದು, ಮೂರ್ಛೆಯನ್ನು ಹೊಂದಲು; ಆಗ ರಾಮನು ಅವರನ್ನು ನೋಡಿ, ಮಹಾ ದುಖ್ಖದಿಂದ ಕೂಡಿದವನಾದಾಗ್ಯೂ, ಧೈರ್ಯದಿಂದ ಹೊರಗೆ ತೋರ ಪಡಿಸದೆ, ತನ್ನ ಒಳಗೆ ಅಡಗಿಸಿ ಕೊಂಡು, ಅವರಿಗೆಲ್ಲಾ ಶೈತ್ಯೋಪಚಾರವನ್ನು ಮಾಡಿ, ಎಲ್ಲರನ್ನು ಚೈತನ್ಯ ಗೊಳಿಸಿ, ಎಲ್ಲರಿಗೂ ಕೈ ಮುಗಿದು ಕೊಂಡು,—ನೀವು ನನ್ನ ಮುಂದೆ ನನ್ನ ತಂದೆಯನ್ನು ನಿಂದಿಸಿದರೆ, ನನಗೆ ಹಿತವಾಗಲಾರದು. ಗುರುವಾಗಿಯೂ ತಂದೆಯಾಗಿಯೂ ಮುದುಕನಾಗಿಯೂ ಒಡೆಯನಾಗಿಯೂ ಇರುವ ದಶರಥ ರಾಯನು ಕೋಪದಿಂದಲೇ ಆಗಲಿ, ಸಂತೋಷದಿಂದಲೇ ಆಗಲಿ, ಕಾಮದಿಂದಲೇ ಆಗಲಿ, ಎಂಥ ಕೆಲಸವನ್ನು ಅಪ್ಪಣೇ ಕೊಟ್ಟಾಗ್ಯೂ, ನಾವೆಲ್ಲರು, ಅದು ಒಳ್ಳೇ ಕೆಲಸವೆಂದು, ಕೆಟ್ಟ ಕೆಲ

ಸನೆಂದು, ವಿಚಾರ ಪಡದೆ, ಅಗತ್ಯವಾಗಿ ಮಾಡ ಬೇಕು. ಇದಕ್ಕಿಂತ ನಮಗೆ ಹೆಚ್ಚಾದ ಧರ್ಮವಿಲ್ಲ. ನೀವೆಲ್ಲರು ನನ್ನ ಮೇಲೆ ದಯವಿಟ್ಟು, ಆಶೀರ್ವದಿಸಿ, ಕಳುಹಿಸ ಬೇಕು. ನಾನು ಸ್ವಲ್ಪ ದಿವಸದಲ್ಲಿ ತಿರಿಗಿ ಬರುವೆನು. ಹದಿನಾಲ್ಕು ವರುಷವೆಂಬುವದು ಹದಿನಾಲ್ಕು ಘಳಿಗೆಯ ಹಾಗೆ ಕಳೆದು ಹೋಗುವದು. ನೀವೆಲ್ಲರು ನನ್ನ ವಿಯೋಗದಿಂದ ದುಃಖ ಪಡುತ್ತಲಿರುವ ದಶರಥ ರಾಯನ ಕಿವಿಗೆ ಕ್ರೂರವಾದ ನುಡಿಗಳನ್ನು ಕೇಳಿಸದೆ, ಹಿತವಾದ ಮಾತುಗಳನ್ನಾಡಿ ಕೊಂಡು, ಶುಶ್ರೂಷೆಯನ್ನು ಮಾಡಿ ಕೊಂಡಿರ ಬೇಕೆಂದು, ಬೇಡಿ ಕೊಳ್ಳುತ್ತೇನೆ. ದುಃಖವನ್ನು ಸಹಿಸಿ ಕೊಳ್ಳಿ ಎಂದು, ಹೇಳುವ ರಾಮನ ಮಾತನ್ನು ಕೇಳಿ, ಮತ್ತು ಎಲ್ಲರಿಗೂ ಮಹಾ ದುಃಖವು ಉಂಟಾಗಿ, ಕೈಕೆಯಿಯನ್ನು ಬೈಯುತ್ತಿದ್ದರು.

ಆಗ ಕೌಸಲ್ಯೆಯು ತಂದೆಯ ಅಪ್ಪಣೆಯನ್ನು ಕಾಪಾಡುವದರಲ್ಲಿ ಬದ್ಧ ಕಂಕಣನಾದ ರಾಮನನ್ನು ನೋಡಿ,—ಅಯ್ಯೋ, ವಿಧಿಯೇ, ಹುಟ್ಟಿದಾರಭ್ಯ ದುಃಖವನ್ನು ಕಾಣದೆ, ಧರ್ಮಾತ್ಮನಾಗಿ, ಸರ್ವ ಪ್ರಾಣಿ ಪ್ರಿಯನಾಗಿ, ದಶರಥನಿಂದ ನನ್ನಲ್ಲಿ ಹುಟ್ಟಿದ ರಾಮನಿಗೆ ಇಂಥ ಕಷ್ಟವನ್ನು ಕೊಡ ಬಹುದೇ? ಯಾವ ರಾಮನ ದಾಸ ಭೃತ್ಯರು ಕೂಡ ಮೃಷ್ಟಾನ್ನವನ್ನು ಉಂಡು, ಉಡಿಗೆ ತೊಡಿಗೆಗಳನ್ನು ಉಟ್ಟು, ತೊಟ್ಟು, ಸುಖವಾಗಿರುವರೋ, ಅಂಥಾ ರಾಮನಿಗೆ ಜಡೆಯನು ಧರಿಸಿ, ನಾರ ಶೀರೆಯನ್ನುಟ್ಟು, ಜಿಂಕೆಯ ಚರ್ಮವನ್ನು ಹೊದ್ದು, ಕಾಡಿನಲ್ಲಿ ಕಲ್ಲು ಮುಳ್ಳು ದಾರಿಗಳಲ್ಲಿ ಬರೀ ಕಾಲಿನಿಂದ ನಡೆಯುತ್ತ, ಗೆಡ್ಡೆ ಗೆಣಸುಗಳನ್ನು ತನ್ನ ಕೈಗುದ್ದಲಿಯಿಂದ ತಾನೇ ಅಗಿದು, ತಿನ್ನುವಂಥ ಕಷ್ಟವನ್ನು ಕೊಡ ಬಹುದೇ? ಇಂಥ ಸುಕುಮಾರ ಶರೀರವುಳ್ಳವನಿಗೆ ಇಂಥ ಆಪತ್ತನ್ನು ಕೊಡುವದಕ್ಕೆ ನಿನಗೆ ಹ್ಯಾಗೆ ಮನಸ್ಸು ಬಂತು? ನಿನಗೆ ಸ್ವಲ್ಪವಾದರೂ ಕರುಣವಿಲ್ಲವಲ್ಲಾ! ಅಯ್ಯೋ, ವಿಧಿಯೇ! ಆದರೂ ಚಿಂತೆ ಇಲ್ಲ. ಇನ್ನೊಂದು ಮಾತನ್ನು ನಿನ್ನ ಬೇಡಿ ಕೊಳ್ಳುತ್ತೇನೆ. ನನ್ನಲ್ಲಿ ನೀನು ಕನಿಕರವಿಟ್ಟು, ಈ ರಾಮನು ವನಕ್ಕೆ ಹೋಗುವದಕ್ಕಿಂತ ಮುಂಚೆ ನನ್ನನ್ನು ಯಮನ ಬಳಿಗೆ ಕಳುಹಿಸು ಎಂದು, ಹೀಗೆ ನಾನಾ ವಿಧವಾಗಿ ಮೊರೆ ಇಡುವ ತಾಯಿಯಾದ ಕೌಸಲ್ಯೆಯನ್ನು ನೋಡಿ, ರಾಮನು ಆಕೆಯ ಕಾಲನ್ನು ಕಟ್ಟಿ ಕೊಂಡು—ಅಮ್ಮಾ! ತಾಯೇ! ನೀನು ಹೀಗೆ ದುಃಖ ಪಡುವದನ್ನು ನೋಡಿದರೆ, ನನಗೂ ಬಹಳ ದುಃಖವಾಗುವದು; ನೋಡಿದ ಇವರೆಲ್ಲಾ ಬಹಳ ದುಃಖ ಪಡುವರು. ನೀನು ಕೋಸಲ ದೇಶದ ರಾಯನಿಗೆ ಮಗಳಾಗಿ, ಇಕ್ಷ್ವಾಕು ಮಹಾ ರಾಯನ ಕುಲಕ್ಕೆ ಸೊಸೆಯಾಗಿ, ಮುದುಕಿಯಾಗಿ, ಸಕಲ ನ್ಯಾಯ ಮಾರ್ಗಗಳನ್ನು ತಿಳಿದು, ಆಪತ್ತು ಬಂದಾಗ

ಧೈರ್ಯವನ್ನು ಹಿಡಿಯ ಬೇಕೆಂಬ ದೊಡ್ಡವರ ಮಾತನ್ನು ಮೀರಿ, ನಿನ್ನ ಬುದ್ಧಿಯನ್ನೂ ನಿನ್ನ ವಿವೇಕವನ್ನೂ ಶೋಕಕ್ಕೆ ಮಾರಿ ಬಿಡ ಬಹುದೇ? ಈ ಸಂಸಾರದಲ್ಲಿ ಸುಖವೂ ದುಃಖವೂ ಎರಡು ಜೊತೆಯಾಗಿರುವವು. ಇಗೋ, ನೋಡು! ನಾವು ಅಪೇಕ್ಷಿಸದೆ ಇರುವ ದುಃಖವು ನಮಗೆ ಹ್ಯಾಗೆ ಬಂದು ಒದಗುವದೋ, ಹಾಗೆಯೇ ಸುಖವೂ ಬಂದೊದಗುವದು. ಹಿಂದೆ ನಮ್ಮ ವಂಶದಲ್ಲಿಯೇ ಮಹಾ ರಾಯನಾದ ಸತ್ಯ ಸಂಧನಾದ ಹರಿಶ್ಚಂದ್ರ ರಾಯನ ಹೆಂಡತಿಯಾದ ಮಹಾ ಪತಿವ್ರತೆಯು ಗಂಡನ ಅಪ್ಪಣೆಯ ಮೇರೆಗೆ ಮಹಾ ಕಷ್ಟವನ್ನು ಅನುಭವಿಸಿದಂಥಾದ್ದನ್ನೂ, ಪುನಹ ಪರಮ ಸೌಖ್ಯವನ್ನು ಪಡೆದು, ಪತಿಯೊಡನೆ ಸೌಖ್ಯವಾಗಿ ಇದ್ದಂಥಾದ್ದನ್ನೂ ನೀನು ಕೇಳ ಇಲ್ಲವೇ? ಈಗ ನನ್ನ ತಂದೆಯು ನನ್ನ ವಿಯೋಗದಿಂದ ಪ್ರಾಣವನ್ನು ಬಿಡುವವನಾಗಿದ್ದಾನೆ. ಇಂಥ ವೇಳೆಯಲ್ಲಿ ಪ್ರಾಜ್ಞಳಾದ ನೀನು ಆತನಿಗೆ ಧೈರ್ಯವನ್ನು ಹೇಳುತ್ತ, ಆತನ ದುಃಖವನ್ನು ಸಮಾಧಾನ ಪಡಿಸುತ್ತ ಇದ್ದರೆ, ನಾನು ಹದಿನಾಲ್ಕು ವರುಷವನ್ನು ಕಾಡಿನಲ್ಲಿ ಹದಿನಾಲ್ಕು ದಿನದ ಹಾಗೆ ಕಳೆದು, ತಿರಿಗಿ ನಿಮ್ಮ ಸನ್ನಿಧಾನಕ್ಕೆ ಬಂದು, ನಿಮ್ಮನ್ನು ಸಂತೋಷ ಪಡಿಸುವೆನು. ಸ್ತ್ರೀಯರಿಗೆ ಗಂಡನೇ ದೈವವು, ಗಂಡನೇ ಪ್ರಭುವು; ಆತ ಜೀವಂತನಾಗಿರುವಲ್ಲಿ ನಿನಗೇನು ಕಡಿಮೆ? ಮತ್ತು ಭರತನು ಧರ್ಮಿಷ್ಠನು; ಸರ್ವ ಭೂತ ಪ್ರಿಯನು; ಭ್ರಾತೃವತ್ಸಲನು. ಆತನು ನಿನ್ನಲ್ಲಿ ಬಹಳ ಗೌರವವನ್ನಿಟ್ಟು, ಕಾಪಾಡುವನು. ಎಲೇ, ತಾಯಿಯೇ, ನಾನು ವನದಲ್ಲಿ ಹದಿನಾಲ್ಕು ವರುಷ ಸುಖವಾಗಿ ಇದ್ದು, ತಿರಿಗಿ ನಿನ್ನ ಸನ್ನಿಧಾನಕ್ಕೆ ಬರುವ ಹಾಗೆ ಪತಿ ಶುಶ್ರೂಷೆಯನ್ನು ಮಾಡಿ ಕೊಂಡು, ವ್ರತ ಹೋಮಾದಿಗಳನ್ನೂ ದಾನ ಧರ್ಮಗಳನ್ನೂ ದೇವತಾ ಪೂಜೆಗಳನ್ನೂ ಮಾಡುತ್ತಾ, ನನ್ನ ಬರುವಿಕೆಯನ್ನು ನಿರೀಕ್ಷಿಸಿ ಕೊಂಡು, ಕೆಲವು ಕಾಲವನ್ನು ಕಳೆಯುತ್ತಿದ್ದರೆ, ಸಕಲ ಸೌಖ್ಯವನ್ನು ಹೊಂದುವಿ. ಮತ್ತು ಮಹಾ ರಾಜನಾದ ಭರತನಲ್ಲಿ ಅಪ್ರಿಯವಾದ ಮಾತುಗಳನ್ನಾಡದೆ, ನನ್ನಲ್ಲಿ ಇರುವ ಹಾಗೆ ವಾತ್ಸಲ್ಯ ಯುಕ್ತಳಾಗಿ ಇರು. ಕಷ್ಟ ಕಾಲದಲ್ಲಿ ಬುದ್ಧಿಯುಳ್ಳವರು ಯಾರು ಏನು ಹೇಳದಾಗ್ಯೂ, ಸಹಿಸಿ ಕೊಂಡು, ಬದಲು ಹೇಳದೆ, ತಾಳ್ಮೆಯಿಂದ ಇರ ಬೇಕು ಎಂದು,—

ಈ ಪ್ರಕಾರ ಒಡಂಬಡಿಸಿದ ಮಗನ ಮಾತನ್ನು ಕೇಳಿ, ಒಡಂಬಟ್ಟು, ಪುತ್ರ ಶೋಕಾರ್ತಳಾದ ಕೌಸಲ್ಯೆಯು ರಾಮನನ್ನು ನೋಡಿ,—ಎಲೈ, ಕಂದಾ, ವನವಾಸದಲ್ಲಿ ನಿಶ್ಚೈಸಿರುವ ಬುದ್ಧಿಯುಳ್ಳ ನಿನ್ನನ್ನು ತಡೆಯುವದಕ್ಕೆ ನನಗೆ ಶಕ್ತಿ ಇಲ್ಲ. ಇದೆಲ್ಲಾ ಕಾಲಗತಿಯು. ಯಾರಿಂದ ತಾನೇ ಮೀರುವದಕ್ಕೆ ಶಕ್ಯವಾಗು

ವದು? ಹೋಗು, ಮಗನೇ, ನಿನಗೆ ಮಂಗಳವಾಗಲಿ! ನೀನು ತಿರಿಗಿ ಬಂದರೆ, ಈ ದುಖ್ಖಗಳನ್ನೆಲ್ಲಾ ಕಳೆದು, ತಿರಿಗಿ ಬಂದಂಥ, ಕೃತಾರ್ಥನಾದ ತಂದೆಯ ಪ್ರತಿಜ್ಞೆಯನ್ನು ಕಾಪಾಡಿದಂಥ ನಿನ್ನನ್ನು ನೋಡಿ, ಪರಮ ಸುಖವನ್ನು ಹೊಂದುವೆನು ಎಂದು, ಈ ಪ್ರಕಾರ ಹೇಳಿ, ಮಗನಿಗೆ ಮಂಗಳಾಶಾಸನವನ್ನು ಮಾಡುವದಕ್ಕೋಸ್ಕರ ಕೈ ಕಾಲುಗಳನ್ನು ತೊಳೆದು ಕೊಂಡು, ಮಡಿ ವಸ್ತ್ರಗಳನ್ನು ಉಟ್ಟು ಕೊಂಡು, ಶುದ್ಧಾಚಮನವನ್ನು ಮಾಡಿ, ಮೂಡಣ ಮುಖಳಾಗಿ ಕುಳಿತು—ಎಲೈ, ಮಗನೇ, ಧೈರ್ಯದಿಂದಲೂ ನಿಯಮದಿಂದಲೂ ನೀನು ಯಾವ ಧರ್ಮವನ್ನು ಕಾಪಾಡುವಿಯೋ, ಆ ಧರ್ಮವು ನಿನ್ನನ್ನು ವನದಲ್ಲಿ ರಕ್ಷಿಸಲಿ. ಚೈತ್ಯದಲ್ಲಿಯೂ ದೇವಸ್ಥಾನಗಳಲ್ಲಿಯೂ ಯಾವ ಯಾವ ದೇವತೆಗಳಿಗೆ ನೀನು ನಮಸ್ಕರಿಸುತ್ತಿದ್ದೆಯೋ, ಅವರೆಲ್ಲಾ ನಿನ್ನನ್ನು ಕಾಡಿನಲ್ಲಿ ಕಾಪಾಡಲಿ. ಮತ್ತು ನೀನು ಮಹಾತ್ಮರಾದ ಯಾವ ಯಾವ ಋಷಿಗಳನ್ನು ಪೂಜಿಸಿರುವಿಯೋ, ಅವರೆಲ್ಲಾ ಅಡವಿಯಲ್ಲಿ ನಿನ್ನನ್ನು ಕಾಯಲಿ. ಷಣ್ಮುಖನೂ, ಚಂದ್ರನೂ, ಪಾರ್ವತೀ ಸಮೇತನಾದ ರುದ್ರನೂ, ಬೃಹಸ್ಪತಿಯೂ, ಶುಕ್ರನೂ, ಇಂದ್ರಾದಿ ಸಕಲ ದೇವತೆಗಳೂ, ಮಹಾ ಶೇಷನೇ ಮೊದಲಾದ ಉರಗಗಳೂ, ಬ್ರಹ್ಮನೂ, ವಿಷ್ಣುವೂ, ಇವರೆಲ್ಲಾ ಅರಣ್ಯದಲ್ಲಿ ನಿನ್ನನ್ನು ಕಾಯಲಿ. ವೃತ್ರಾಸುರನ ಸಂಹಾರ ಕಾಲದಲ್ಲಿ ಮಗನಾದ ಇಂದ್ರನಿಗೆ ಅದಿತಿಯು ಯಾವ ಮಂಗಳವನು ಮಾಡಿದಳೋ, ಆ ಮಂಗಳವು ಅರಣ್ಯದಲ್ಲಿ ನಿನಗಾಗಲಿ. ಅಮೃತವನ್ನು ತರುವದಕ್ಕೆ ಸನ್ನದ್ಧನಾದ ಗರುಡನೆಂಬ ಮಗನಿಗೆ ವಿನತೆಯು ಯಾವ ಮಂಗಳವನ್ನು ಮಾಡಿದಳೋ, ಆ ಮಂಗಳವು ನಿನಗೆ ವನದಲ್ಲಿ ಉಂಟಾಗಲಿ ಎಂದು, ರಾಮನಿಗೆ ಮಂಗಳಾಶಾಸನವನ್ನು ಮಾಡಿ, ಅವನನ್ನು ಆಲಿಂಗಿಸಿ ಕೊಂಡು,—ಶೀಘ್ರವಾಗಿ ಅರೋಗ ದೃಢ ಕಾಯನಾಗಿ, ಅರಣ್ಯದಿಂದ ಬರುವನಾಗು. ಪುನಹ ಪೌರ್ಣಮೀ ಚಂದ್ರನಂತೆ ಇರುವಂಥ ಅಯೋಧ್ಯೆಯಲ್ಲಿ ಸಿಂಹಾಸನದಲ್ಲಿ ಕುಳಿತು, ಸೀತಾ ಸಮೇತನಾಗಿ ಪಟ್ಟಾಭಿಷಿಕ್ತನಾದಂಥ ನಿನ್ನನ್ನು ನೋಡುವೆನು ಎಂದು, ಅಪ್ಪಣೇ ಕೊಟ್ಟಳು.

ಆಗ ರಾಮನು ಕಣ್ಣೀರನ್ನು ಬಿಡುತ್ತ, ತಾಯಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ, ಅಲ್ಲಿಂದ ಹೊರಟು, ಲಕ್ಷ್ಮಣನು ಹಿಂದೆ ಬರಲು; ತನ್ನ ಮನೆಗೆ ಬಂದು, ಈ ಸುದ್ದಿಗಳೊಂದನ್ನೂ ತಿಳಿಯದೆ, ಪಟ್ಟಾಭಿಷೇಕವಾಗುವದು ಎಂದು ಸಂತೋಷದಿಂದ ದೇವತಾ ಪೂಜೆಗಳನ್ನು ಮಾಡುತ್ತ, ಮುತ್ತೈದೆಯರಿಗೆ ಬಾಗಿನಗಳನ್ನು ಕೊಡುತ್ತ, ಮುದುಕರನ್ನು ಆರಾಧಿಸುತ್ತ, ಬಡವರಿಗೆ ಒಡವೆ ವ

ಸ್ತ್ರಗಳನ್ನು ಕೊಡುತ್ತ, ಕುರುಡ, ಕುಂಟ, ಗೂನ, ಕುಳ್ಳ, ಕಿವುಡ, ಕೈಕಾಲುಗಳಿಲ್ಲದವರು ಮೊದಲಾದವರಿಗೆ ದಾನಗಳನ್ನು ಮಾಡುತ್ತಿರುವ ಸೀತೆಯನ್ನು ನೋಡಿ, ನಾಚಿಕೆಯಿಂದ ತಲೆಯನ್ನು ಬೊಗ್ಗಿಸಿ ಕೊಂಡು, ಶೋಕವನ್ನು ಸಹಿಸಲಾರದೆ, ಕಣ್ಣೀರುಗಳನ್ನು ಸುರಿಸುತ್ತ, ವ್ಯಾಕುಲದ ಮನಸ್ಸುಳ್ಳವನಾಗಿ ನಿಂತಿರಲು; ಸೀತೆಯು ನೋಡಿ, ಮಹಾ ಆತಂಕ ಯುಕ್ತಳಾಗಿ, ರಾಮನನ್ನು ಕುರಿತು —ಏನ್ರೈ, ಪ್ರಾಣಕಾಂತನೇ, ಇಂಥ ಪಟ್ಟಾಭಿಷೇಕದ ಮಹೋತ್ಸವ ಕಾಲದಲ್ಲಿ ಹೀಗೆ ನಿನ್ನ ಮುಖವು ಬಾಡಿರುವದಕ್ಕೆ ಕಾರಣವೇನು? ಹೀಗೆ ಕಣ್ಣೀರುಗಳನ್ನು ಬಿಡುವಂಥ ನಿನ್ನ ಶೋಕಕ್ಕೆ ನಿಮಿತ್ಯವೇನು? ಎಂದು ಕೇಳಲು; ರಾಮನು—ಎಲೈ, ಪ್ರಾಣ ಪ್ರಿಯಳೇ, ಈಗ ನನಗೆ ಬಂದ ವಿಪತ್ತನ್ನು ಏನ ಹೇಳಲಿ? ಸತ್ಯ ಪ್ರತಿಜ್ಞನಾದ ನನ್ನ ತಂದೆಯು ಕಿರೀ ಹೆಂಡತಿ ಕೈಕೆಯಿಯ ಮಾತಿನಿಂದ ಆಕೆಯ ಮಗನಿಗೆ ಪಟ್ಟಾಭಿಷೇಕವನ್ನು ಮಾಡುತ್ತಾನೆ. ನನಗೆ ಜಟಾಚೀರಧರನಾಗಿ, ಹದಿನಾಲ್ಕು ವರುಷ ದಂಡಕಾರಣ್ಯದಲ್ಲಿ ಮುನಿಗಳಂತೆ ಗೆಡ್ಡೆ ಗೆಣಸುಗಳನ್ನು ತಿಂದು ಕೊಂಡು, ವಾಸಾ ಮಾಡುವ ಹಾಗೆ ಅಪ್ಪಣೇ ಕೊಟ್ಟನು. ನಾನು ತಂದೆಯ ಅಪ್ಪಣೇ ಪ್ರಕಾರ ವನ ಪ್ರಯಾಣಕ್ಕೆ ಸನ್ನದ್ಧನಾಗಿ, ನಿನಗೆ ಹೇಳಿ, ಹೋಗ ಬೇಕೆಂದು ಬಂದೆನು. ನೀನು ನನ್ನ ವಿಯೋಗದಿಂದ ದುಃಖ ಪಡುತ್ತಲಿರುವ ನನ್ನ ತಂದೆ ತಾಯಿಗಳಾದ ದಶರಥ ರಾಯನನ್ನೂ ಕೌಸಲ್ಯಾ ದೇವಿಯನ್ನೂ ಶುಶ್ರೂಷೆ ಮಾಡಿ ಕೊಂಡು, ಶುಚಿ ವ್ರತಳಾಗಿ ನಾನು ಬರುವ ವರಿಗೂ ಇಲ್ಲಿ ಇರು. ನನ್ನ ತಮ್ಮಂದಿರುಗಳನ್ನು ನಿನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗಿಂತ ಹೆಚ್ಚಾಗಿ ತಿಳಿದು ಕೊಂಡಿರು. ಕೈಕೆಯಿಯ ವಿಷಯದಲ್ಲಿ ಏನಾದರೂ ಬಿಡು ನುಡಿಗಳಾಡೀಯ! ಜೋಕೆ! ದಶರಥ ರಾಯನ ರಾಣೀವಾಸದ ಜನರೆಲ್ಲರೊಡನೆಯೂ ಒಳ್ಳೇ ಮಾತುಗಳನ್ನಾಡುತ್ತ ಇರು, ಎಂದು ಹೇಳಲು;—

ಸೀತೆಯು ರಾಮನನ್ನು ನೋಡಿ, ಪ್ರೀತಿಯಿಂದ ಕೋಪಿಷ್ಠಳಾಗಿ,—ಏನ್ರೈ, ಪ್ರಿಯನೇ, ಇಂಥ ಮಾತುಗಳನ್ನಾಡುತ್ತೀಯೇ? ನಿನಗೆ ಎರಡನೇ ನೆಳಲೋಪಾದಿಯಾಗಿರುವ ನನ್ನನ್ನು ಇಲ್ಲಿ ಬಿಟ್ಟು, ನೀನು ಒಬ್ಬನೇ ವನಕ್ಕೆ ಹೋಗುವಿಯೋ? ಬಹು ಚನ್ನಾಯಿತು! ನಿನ್ನ ಸಕಲ ಧರ್ಮಜ್ಞತೆಯು ತಿಳಿಯ ಬಂತು! ಎಲೈ, ಆರ್ಯನೇ, ಲೋಕದಲ್ಲಿ ಮಕ್ಕಳೂ, ತಂದೆಯೂ, ತಾಯಿಯೂ, ಅಣ್ಣ ತಮ್ಮಂದಿರೂ, ಅತ್ತೆ ಮಾವಂದಿರೂ, ಸೊಸೆಯೂ, ನಂಟ ಇಷ್ಟರೂ, ತಮ್ಮ ತಮ್ಮ ಪುಣ್ಯಾನುಸಾರವಾಗಿ ತಮ್ಮ ತಮ್ಮ ಭಾಗ್ಯಗಳನ್ನು ಅನುಭವಿಸುವರು.

ಹೆಂಡತಿಯೊಬ್ಬಳು ಮಾತ್ರ ಗಂಡನ ಸುಖ ದುಃಖಗಳನ್ನೂ ಐಶ್ವರ್ಯ ದಾರಿದ್ರ್ಯಗಳನ್ನೂ ಅನುಭವಿಸುವಳು ಎಂದು, ಸಕಲ ವೇದ ಶಾಸ್ತ್ರಗಳು ಒರಲುತ್ತಿರುವವು. ನೀನು ವನಕ್ಕೆ ಹೊರಟರೆ, ನಿನಗಿಂತ ಮುಂಚಿತವಾಗಿ ಕಲ್ಲು ಮುಳ್ಳುಗಳನ್ನು ತುಳಿಯುತ್ತ, ನಿನ್ನೊಡನೆ ವನಕ್ಕೆ ಬರುವೆನು ಎಂದು, ಕಂಬನಿಗಳನ್ನು ಸುರಿಸುತ್ತ ಹೇಳಲು; ರಾಮನು ಸೀತೆಯನ್ನು ಕುರಿತು—ಎಲೈ, ಪ್ರಾಣ ವಲ್ಲಭೆಯೇ, ನೀನು ಹೇಳಿದ್ದೆಲ್ಲಾ ಯುಕ್ತವೇ ಸರಿ. ಆದರೂ ಮಹಾ ರಾಯನ ಮಗಳಾಗಿ, ಮಹಾ ರಾಜನ ಸೊಸೆಯಾಗಿ, ಅತಿ ಸುಕುಮಾರಿಯಾಗಿ, ಸೂರ್ಯನನ್ನು ನೋಡದೆ ಇರುವ ನಿನ್ನನ್ನು, ಹುಲಿ ಕರಡಿ ಸಿಂಹ ಶರಭ ಮೊದಲಾದ ದುಷ್ಟ ಮೃಗಗಳಿಂದಲೂ ದುಷ್ಟರಾದ ರಾಕ್ಷಸರುಗಳಿಂದಲೂ ಕೂಡಿರುವ ದುರ್ಗಮವಾದ ಗೊಂಡಾರಣ್ಯಕ್ಕೆ ಕರ ಕೊಂಡು ಹೋಗಿ, ಹ್ಯಾಗೆ ಕಾಪಾಡಲಿ? ಕಾಡ ದಾರಿಯಲ್ಲಿ ನಡೆಯುವ ನಿನ್ನ ಕೋಮಲವಾದ ಕಾಲುಗಳಿಗೆ ಕಲ್ಲು ಮುಳ್ಳುಗಳು ತಗಲಿ, ಚಿಲ್ಲನೆ ರಕ್ತ ಹೊರಡುವದನ್ನು ಹ್ಯಾಗೆ ನೋಡಲಿ? ಸೂರ್ಯನ ಬಿಸಲಿನಿಂದ, ಬೆಂಕಿಯಲ್ಲಿ ಸುಟ್ಟ ಸುಳಿ ಬಾಳೆಯಂತೆ, ಕಂದಿದ ನಿನ್ನ ಮೈಯನ್ನು ಹ್ಯಾಗೆ ನೋಡಿ, ಸಹಿಸಲಿ? ಆದ್ದರಿಂದ ನೀನು ಇಲ್ಲಿಯೇ ಇರ ಬೇಕೆನ್ನಲು;

ಸೀತೆಯು,—ಎಲೈ, ಪ್ರಿಯನೇ, ಹೇಡಿಗಳ ಹಾಗೆ ನೀನು ಹೆಂಡತಿಯನ್ನು ಕಾಪಾಡಲಾರೆ ಎಂದು ಮಾತಾಡುವದರಿಂದ, ನಮ್ಮ ತಂದೆ ಜನಕನು—ಗಂಡಸರ ರೂಪನ್ನು ಧರಿಸಿ ಕೊಂಡಿರುವ ಹೆಂಗಸೆಂದು ನಿನ್ನನ್ನು ತಿಳಿಯದೆ, ನನ್ನನ್ನು ನಿನ್ನಂಥವನಿಗೆ ಮದುವೆ ಮಾಡಿ ಕೊಟ್ಟಂಥಾವನಾದನೆಂದು ಎಣಿಸುತ್ತೇನೆ. ಮುಂದೆ ನಿನ್ನ ಮನಸ್ಸಿನಲ್ಲಿ ನಾನು ಮೂಢಳು ಎಂದು ತಿಳಿದು, ಹೀಗೆ ಬಾಯಿಯಲ್ಲೊಂದು ಮನಸ್ಸಿನಲ್ಲೊಂದು ಮಾತಾಡುತ್ತೀಯೋ? ನಾನು ಎಲ್ಲಾ ಬಲ್ಲೆನು. ನಿನ್ನ ಶಕ್ತಿಯೂ ನಿನ್ನ ಪರಾಕ್ರಮವೂ ಅರಿಯದವರ ಸಂಗಡ ಇಂಥ ಕಪಟದ ಮಾತುಗಳನ್ನು ಆಡ ಬೇಕೇ ಹೊರ್ತು, ನನ್ನ ಸಂಗಡ ಆಡ ತಕ್ಕದ್ದಲ್ಲ. ನಿನ್ನ ಕೂಡ ಇರುವ ನನಗೆ ದುಷ್ಟ ಮೃಗ ರಾಕ್ಷಸರ ಭೀತಿ ಏನು ಬಂದೀತು? ನಿನ್ನ ಕೂಡ ಕಾಡಿನಲ್ಲಿ ಗೆಡ್ಡೆ ಗೆಣಸು ತಿಂದು ಕೊಂಡು ಇರುವದೇ ನನಗೆ ಸ್ವರ್ಗ ಸೌಖ್ಯವು. ನಿನ್ನನ್ನು ಬಿಟ್ಟು ಇರುವ ಸ್ವರ್ಗವು ನನಗೆ ಕಾಡು. ನಿನ್ನೊಡನೆ ಇರುವ ನಾನು ಯಾವ ರಾಜ ಭೋಗಗಳನ್ನೂ ನೆನಸೆನು. ಇಷ್ಟರ ಮೇಲೆ ನನ್ನನ್ನು ಬಿಟ್ಟು, ನೀನು ಹೋಗುವದಾದರೆ, ನಿನ್ನ ಮುಂದೆ ವಿಷವನ್ನು ಕುಡಿದು, ಪ್ರಾಣವನ್ನು ಬಿಡುವೆನು, ಎಂದು ಹೇಳಿ, ರಾಮನನ್ನು ತಬ್ಬಿ ಕೊಂಡು, ಕಣ್ಣೀ

ರನ್ನು ಸುರಿಸುತ್ತ ಇರಲು; ರಾಮನು ಆಕೆಯ ದುಃಖವನ್ನು ನೋಡಿ,—ನಿನ್ನ ವಸ್ತ್ರಾಭರಣಗಳನ್ನೆಲ್ಲಾ ಮುತ್ತೈದೆಯರಿಗೆ ದಾನವನ್ನು ಕೊಟ್ಟು, ಹೊರಡ ಸಿದ್ಧವಾಗೆಂದು ಹೇಳಿದನು.

ಆಗ ಲಕ್ಷ್ಮಣನು ರಾಮನ ಕಾಲಿನ ಮೇಲೆ ಬಿದ್ದು, ಅಳುತ್ತ—ಎಲೈ, ಅಣ್ಣನೇ, ನಾನು ನಿನಗೆ ಹೊರಗಿನ ಪ್ರಾಣವು. ನನ್ನನ್ನು ಸಂಗಡ ಕರೆದು ಕೊಂಡು ಹೋಗು. ನೀನೂ ನನ್ನ ಅತ್ತಿಗೆಯೂ ಸ್ವಲ್ಪವಾದರೂ ಕಾಡಿನಲ್ಲಿ ಕಷ್ಟ ಪಡದ ಹಾಗೆ ನಿಮ್ಮ ಶುಶ್ರೂಷೆಯನ್ನು ಮಾಡುತ್ತ, ಕಾಡಿನಲ್ಲಿ ಶೀಯಾದ ಹಣ್ಣು ಹಂಪಲುಗಳನ್ನೂ ಗೆಡ್ಡೆ ಗೆಣಸುಗಳನ್ನೂ ತಂದು ಕೊಡುತ್ತ, ನಿಮಗೆ ಹಸಿವು ಆಗದಂತೆ ಮಾಡುವೆನು. ರಾತ್ರಿ ವೇಳೆಯಲ್ಲಿ ಬಹು ಮೃದುವಾದ ಚಿಗುರು ಹಾಸಿಗೆಯನ್ನು ಮಾಡಿ ಕೊಟ್ಟು, ನಿಮಗೆ ದುಷ್ಟ ಮೃಗಗಳಿಂದಲೂ ದುಷ್ಟ ರಾಕ್ಷಸರುಗಳಿಂದಲೂ ಭಯ ಬಾರದ ಹಾಗೆ ಬಿಲ್ಲು ಬಾಣಗಳನ್ನು ಧರಿಸಿ ಕೊಂಡು, ಕಾದಿರುವೆನು ಎಂದು ಹೇಳಿದ್ದಕ್ಕೆ—ಬೇಡವೆಂದು, ಎಷ್ಟು ವಿಧದಲ್ಲಿ ಒಡಂಬಡಿಸಿದಾಗ್ಯೂ, ಕೇಳದೆ ಇರಲು; ರಾಮನು ಲಕ್ಷ್ಮಣನನ್ನೂ ಸೀತೆಯನ್ನೂ ಕಾಡಿಗೆ ತನ್ನ ಸಂಗಡ ಕರೆದು ಕೊಂಡು ಹೋಗುವದಕ್ಕೆ ಒಪ್ಪಿ, ತನ್ನ ಸ್ವಂತವಾದ ಸಕಲ ಪದಾರ್ಥಗಳನ್ನು ದಾನವನ್ನು ಮಾಡಿ, ಧನುರ್ಬಾಣಗಳನ್ನು ಧರಿಸಿ, ಸೀತಾ ಲಕ್ಷ್ಮಣರೊಡನೆ ಕೂಡಿ ಕೊಂಡು, ತಿರಿಗಿ ತಂದೆಯನ್ನು ಕಂಡು ಹೋಗ ಬೇಕೆಂದು ಬೀದಿಯಲ್ಲಿ ಬರುತ್ತಿರಲು; ಊರಿನವರೆಲ್ಲರು ಅವರನ್ನು ನೋಡಿ, ದುಃಖದಿಂದ ಅಳುತ್ತ,—ಕಟಕಟಾ! ಇಂಥ ಅನ್ಯಾಯ ಉಂಟೇ? ಈ ರಾಮನು ಮೊದಲು ರಾಜಬೀದಿಯಲ್ಲಿ ಬರುತ್ತಿರುವಾಗ್ಯೆ, ದಿವ್ಯವಾದ ಕುದುರೆಗಳನ್ನು ಕಟ್ಟಿರುವ ರಥದ ಮೇಲೆ ಕುಳಿತು ಕೊಂಡು, ಸುತ್ತು ಮುತ್ತಲು ಛತ್ರ ಧಾರಿಗಳೂ, ಚಾಮರವನ್ನು ಬೀಸುವಂಥಾವರೂ, ಗಿಂಡಿಯಲ್ಲಿ ದಿವ್ಯವಾದ ನೀರನ್ನು ಹಿಡಿದು ಕೊಂಡಿರುವವರೂ, ಅಡಿಕೆ ಎಲೆಯ ಹಡಪಿಗರೂ, ಕಾಳಂಜಿಯವರೂ, ಕಟ್ಟಿಗೆಯವರೂ, ಇವರಿಂದ ಸೇವೆ ಮಾಡಿಸಿ ಕೊಂಡು, ಸಂಭ್ರಮದಲ್ಲಿ ಬರುವದನ್ನು ನೋಡಿದ್ದ ನಮ್ಮ ಈ ಕಣ್ಣುಗಳು ಈಗ ಕಾಲ ನಡಿಗೆಯಲ್ಲಿ ಸೀತಾ ಲಕ್ಷ್ಮಣರೊಡನೆ ಬರುವದನ್ನು ನೋಡುತ್ತವೆಯಲ್ಲ! ಇವು ಒಡೆದು ಹೋಗ ಬಾರದೇ? ಅಯ್ಯೋ? ಸರ್ವಾಂಗ ಸುಂದರಿಯಾದ, ಸುಕುಮಾರಿಯಾದ, ಮಹಾ ಪತಿವ್ರತೆಯಾದ, ಈ ಸೀತೆಯು ಅಂತಃಪುರದಲ್ಲಿ ಇದ್ದು ಕೊಂಡು, ಸೂರ್ಯನನ್ನು ಸಹ ಕಾಣದೆ ಇರುವಂಥಾವಳು ಈಗ ಸೂರ್ಯನ ಝಳದಿಂದ ಬಾಡಿದ ಮುಖವುಳ್ಳವಳಾಗಿ ರಾಜ ಬೀದಿಯಲ್ಲಿ ಕಾಲನಡೆಯಿಂದ

ನಡೆದು ಬರುತ್ತಾಳಲ್ಲ! ಇವಳನ್ನು ನೋಡುವ ನಮ್ಮ ಎದೆಗಳು ಶೀಳಿ ಹೋಗ ಬಾರದೇ? ತಂದೆಯಾದವನು ನಿರ್ಗುಣನಾದ ಕೆಟ್ಟ ಮಗನನ್ನು ಕೂಡ ಅರಣ್ಯಕ್ಕೆ ಅಟ್ಟನು. ಇಂಥ ಸುಗುಣನಾದ ಸುಪುತ್ರನನ್ನು ಕಾಡಿಗೆ ಅಟ್ಟುವ ದಶರಥ ರಾಯನ ಬಾಳನ್ನು ಸುಡ ಬೇಕು? ಈ ರಾಮನನ್ನು ಬಿಟ್ಟು, ಈ ಪಟ್ಟಣದಲ್ಲಿ ಇರುವದರಿಂದ ನಮಗೇನು ಸುಖ ಉಂಟಾದೀತು? ನಮ್ಮ ನಮ್ಮ ಸಂಸಾರದೊಡನೆ ಕೂಡಿ, ಇವನೊಡನೆಯೇ ನಾವು ಅರಣ್ಯಕ್ಕೆ ಹೋದರೆ, ಶೂರನಾದ ಈ ರಾಮನೂ ಈ ಲಕ್ಷ್ಮಣನೂ ಈ ಸರ್ವ ಲಕ್ಷಣ ಸಂಪನ್ನೆಯಾದ ಸೀತೆಯೂ ನಮ್ಮನ್ನು ಕಾಪಾಡುವರು. ನಾವೆಲ್ಲರು ರಾಮನೊಡನೆಯೇ ವನಕ್ಕೆ ಹೋಗುವ. ಈ ಹಾಳಾದ ಅಯೋಧ್ಯೆಯಲ್ಲಿ ಈ ಕೆಟ್ಟ ಕೈಕೆಯಿಯೇ ತನ್ನ ಮಗನೊಡನೆ ಕೂಡಿರಲಿ ಎಂದು, ನಾನಾ ಪ್ರಕಾರವಾಗಿ ಗೋಳಿಡುತ್ತಿದ್ದರು.

ರಾಮನು ಆ ಮಾತುಗಳನ್ನು ಕೇಳುತ್ತ, ಮನಸ್ಸಿನಲ್ಲಿ ಬಹಳ ದುಃಖವನ್ನು ತಾಳಿ, ದಶರಥನ ಅರಮನೆಯ ಬಾಗಲಿಗೆ ಬಂದು, ಬಾಗಿಲಲ್ಲಿ ಕಾದಿರುವ ಸುಮಂತ್ರನನ್ನು ಕುರಿತು—ಎಲೈ, ಸಾರಥಿಯೇ, ನಾನು ಬಂದಿರುವದಾಗಿ ಅರಸಿಗೆ ತಿಳಿಸು ಎನ್ನಲು; ಸುಮಂತ್ರನು ಅನ್ನ ಆಹಾರಗಳಿಲ್ಲದೆ,—ಹಾ ರಾಮಾ! ಹಾ ರಾಮಾ! ಎಂದು, ಭೂಮಿಯಲ್ಲಿ ಬಿದ್ದು, ಹೊರಳುತ್ತ, ಕಣ್ಣೀರುಗಳ ಕಾಲುವೆಗಳನ್ನು ಹರಿಸುತ್ತ, ಕೈಕೆಯಿಯನ್ನೂ ತನ್ನನ್ನೂ ಬಾರಿ ಬಾರಿಗೂ ಬೈದು ಕೊಳ್ಳುತ್ತ ಘಳಿಗೆ ಘಳಿಗೆಗೆ ಮೂರ್ಛೆ ಹೋಗುತ್ತ, ಎಚ್ಚತ್ತು,—ಏನು ಮಾಡಲಿ? ಎಲ್ಲಿಗೆ ಹೋಗಲಿ? ವಿಷವನ್ನು ಕುಡಿಯಲೇ? ಬೆಟ್ಟದ ಮೇಲೆ ಹತ್ತಿ, ಕೆಳಗೆ ಬೀಳಲೇ? ಉಕ್ಕಿನ ಕಂಭಗಳನ್ನು ಹಾಯ್ದು, ತಲೆಯನ್ನು ಒಡೆದು ಕೊಳ್ಳಲೇ? ಹ್ಯಾಗೆ ರಾಮನನ್ನು ಬಿಟ್ಟು ಬದುಕುವೆನು? ಎಂದು, ಹುಚ್ಚನ ಹಾಗೆ ಪ್ರಳಾಪಿಸುತ್ತಾ, ನಾಲಿಗೆಯಿಂದ ಒಣಗಿದ ತುಟಿಯನ್ನು ಸವರಿ ಕೊಳ್ಳುತ್ತಾ, ಪಿಶಾಚಿ ಹಿಡಿದವನ ಹಾಗೆ ಭೂಮಿಯಲ್ಲಿ ಬಿದ್ದು ಹೊರಳುತ್ತಾ, ಧೂಳುಗಳಿಂದ ತುಂಬಿರುವ ಮೈಯುಳ್ಳ ದಶರಥನನ್ನು ನೋಡಿ, ಮಾತಾಡುವದಕ್ಕೆ ಭಯ ಪಟ್ಟು, ಮೆಲ್ಲ ಮೆಲ್ಲನೆ—ಎಲೈ, ಮಹಾ ರಾಯನೇ, ರಘು ರಾಮನು ಬ್ರಾಹ್ಮಣರಿಗೂ ದೀನರಿಗೂ ಉಪಜೀವಿಗಳಿಗೂ ತನ್ನ ಸರ್ವಸ್ವವನ್ನು ದಾನ ಕೊಟ್ಟು, ವನವಾಸಕ್ಕೆ ಹೊರಟು, ನಿನ್ನನ್ನು ಕಾಣುವದಕ್ಕೋಸ್ಕರ ಬಂದು, ಬಾಗಲಲ್ಲಿ ಕಾದು ಇದ್ದಾನೆ. ಸರ್ವ ಗುಣ ಸಂಪನ್ನನಾದ ಲೋಕಾಭಿರಾಮನಾದ ರಾಮನನ್ನು ಒಳಗೆ ಕರಿಸಿ, ಅಪ್ಪಣೆಯನ್ನು ಕೊಟ್ಟು ಕಳುಹಿಸು, ಎಂದು ಹೇಳಲು; ದಶರಥನು—ಎಲೈ, ಸಾರಥಿಯೇ, ನನ್ನ ಎಲ್ಲಾ ಹೆಂಡರೊಡನೆ ಕೂಡ, ಅರ

ಣ್ಯಕ್ಕೆ ಹೋಗುವ ರಾಮನನ್ನು ನೋಡಲಪೇಕ್ಷಿಸಿರುವೆನು, ಎನಲು; ಆಗ ಸುಮಂತ್ರನು ಶೀಘ್ರವಾಗಿ ಅಂತಃಪುರಕ್ಕೆ ಹೋಗಿ, ದಶರಥನ ಅಪ್ಪಣೆಯನ್ನು ಹೇಳಲು; ಪಟ್ಟ ಮಹಿಷಿಗಳಾದ ಕೌಸಲ್ಯೆಯೂ ಸುಮಿತ್ರೆಯೂ ದಶರಥ ರಾಯನು ಕೂಡಿದ ಮುನ್ನೂರೈವತ್ತು ಜನ ಭಂಗಾರದ ಹೆಂಡರೊಡನೆ ಕೂಡಿ ಬೇಗ ಬರಲು; ಆಗ ದಶರಥನು ಸುಮಂತ್ರನಿಂದ ರಾಮನನ್ನು ಒಳಗೆ ಕರಿಸಿ ಕೊಳ್ಳಲು; ರಾಮನು ಬಂದು, ಸೀತಾ ಲಕ್ಷ್ಮಣರು ಸಹಿತವಾಗಿ ದೂರದಲ್ಲಿಯೇ ತಂದೆಗೆ ನಮಸ್ಕರಿಸಿ, ಕೈ ಮುಗಿದು, ನಿಂತು ಕೊಂಡಿರಲು; ಆತನನ್ನು ದಶರಥನು ನೋಡಿ—ಹಾ, ರಾಮಾ! ಎಂದು ನೆಲದಲ್ಲಿ ಬಿದ್ದು, ಮೂರ್ಛಿತನಾಗಲು; ಹಾಗೆ ಕೈಕೆಯಿಯೊಬ್ಬಳು ಹೊರತಾಗಿ ಸುಮಿತ್ರೆಯೂ, ಕೌಸಲ್ಯೆಯೂ, ಕೂಡಿದ ಹೆಂಡರೂ, ನೆಲದಲ್ಲಿ ಬಿದ್ದು, ಗೋಳಾಡುತ್ತ, ಮೂರ್ಛೆಯನ್ನು ಹೊಂದಿದರು.

ಆಗ ರಾಮನು ಹೋಗಿ, ದಶರಥ ರಾಯನಿಗೆ ಶೈತ್ಯೋಪಚಾರಗಳನ್ನು ಮಾಡಿ, ಅವನನ್ನು ಲಕ್ಷ್ಮಣ ಸಮೇತನಾಗಿ ಎತ್ತಿ ಕೊಂಡು, ಮಂಚದ ಮೇಲೆ ಮಲಗಿಸಿ, ಕೈಯನ್ನು ಮುಗಿದು ಕೊಂಡು—ಎಲೈ, ಮಹಾ ರಾಜನೇ, ನೀನು ಸರ್ವರಿಗೂ ಒಡೆಯನು. ನಿನ್ನ ಅಪ್ಪಣೆಯನ್ನು ಕೇಳುವೆನು. ದಂಡಕಾರಣ್ಯವನ್ನು ಕುರಿತು ಹೊರಟಿರುವ ನನ್ನನ್ನು ಕೃಪಾ ದೃಷ್ಟಿಯಿಂದ ನೋಡು. ನಾನು ಎಷ್ಟು ವಿಧದಲ್ಲಿ ಒಡಂಬಡಿಸಿದಾಗ್ಯೂ ಸೀತೆಯೂ ಲಕ್ಷ್ಮಣನೂ ನನ್ನೊಡನೆ ಬರುವದಕ್ಕೆ ಇಚ್ಛೈಸಿದ್ಧಾರೆ. ಅವರಿಗೂ ಅಪ್ಪಣೆಯನ್ನು ಕೊಡು, ಎಂದು ಕೇಳಲು; ದಶರಥನು—ಎಲೈ, ರಾಘವನೇ, ನಾನು ಈ ಕೈಕೆಯಿ ಎಂಬ ಮೃತ್ಯುವಿಗೆ ವರ ದ್ವಯವನ್ನು ಕೊಟ್ಟು ಹುಚ್ಚನಾದೆನು. ನೀನೇ ನನ್ನನ್ನು ನಿಗ್ರಹಿಸಿ, ಅಯೋಧ್ಯೆಯಲ್ಲಿ ಅರಸನಾಗಿರು, ಎಂದು ಹೇಳಲು;—ಎಲೈ, ತಂದೆಯೇ, ನೀನೇ ಸಾವಿರಾರು ವರುಷ ಪರಿಯಂತರವು ಭೂಮಿಗೆ ಒಡೆಯನಾಗಿರು; ನಾನು ಅರಣ್ಯದಲ್ಲಿ ವಾಸಾ ಮಾಡಿ ಕೊಂಡಿರುವೆನು. ನಿನ್ನನ್ನು ಅಸತ್ಯವಂತನಾಗಿ ಮಾಡಿ, ಈ ರಾಜ್ಯವನ್ನು ನಾನು ಅನುಭವಿಸುವಂಥಾದ್ದು ನನಗೆ ಬಹಳ ಹೇಸಿಕೆಯಾಗಿರುವದು. ಹದಿನಾಲ್ಕು ವರುಷ ವನವಾಸವನ್ನು ಮಾಡಿ, ಪ್ರತಿಜ್ಞೆಯನ್ನು ನೆರವೇರಿಸಿ, ತಿರಿಗಿ ನಿನ್ನ ಪಾದ ಸನ್ನಿಧಿಗೆ ಬರುವೆನು ಎಂದು ಹೇಳಿ, ಒಡಂಬಡಿಸಿ, ಪ್ರದಕ್ಷಿಣ ನಮಸ್ಕಾರವನ್ನು ಮಾಡಿ, ಹೊರಡುವದಕ್ಕೆ ಸನ್ನದ್ಧನಾಗಲು; ಆಗ ದಶರಥ ರಾಯನು—ಸುಮಂತ್ರನಿಗೆ—ನನ್ನ ಸೇನಾ ಪತಿಗಳು, ಪರಿವಾರದವರು ಸಹ, ರಾಮನ ಸಂಗಡ

ಹೋಗಲಿ. ಮತ್ತು ಅಡಿಗೆಯವರೂ ಪರಿಚಾರಕರೂ ದಾಸ ಭೃತ್ಯರೂ ದಾಸೀ ಜನಗಳೂ ಗೌಡಿಗಳೂ ಎಲ್ಲರು ರಾಮನ ಸಂಗಡ ಹೋಗಲಿ. ಮತ್ತು ಹದಿನಾಲ್ಕು ವರುಷಕ್ಕೆ ತಕ್ಕಷ್ಟು ಒಂದು ಪದಾರ್ಥವೂ ನ್ಯೂನತೆ ಆಗದ ಹಾಗೆ ಭೋಜನದ ಸಾಮಗ್ರೀಯಗಳೂ ಉಡು ತೊಡುವ ವಸ್ತ್ರಾಭರಣಗಳೂ ಎಲ್ಲವನ್ನು ತೆಗಿಸಿ ಕೊಂಡು, ನೀನು ರಾಮನ ಸಂಗಡಲೇ ಹೊರಟು ಹೋಗೆನಲು; ರಾಮನು—ತಾಪಸಿಯಂತೆ ವನಕ್ಕೆ ಹೋಗುವ ನನಗೆ ಇವುಗಳಿಂದ ಎಷ್ಟು ಮಾತ್ರವೂ ಪ್ರಯೋಜನವಿಲ್ಲ. ಅರಣ್ಯದಲ್ಲಿ ಹಣ್ಣು ಹಂಪಲುಗಳೂ ಗೆಡ್ಡೆ ಗೆಣಸುಗಳೂ ಯಥೇಷ್ಟವಾಗಿರುವವು. ನಾರು ಮಡಿಗಳನ್ನು ಮಾತ್ರ ಕೊಡಿಸ ಬೇಕೆಂದು ಕೇಳಲು; ಕೈಕೆಯಿಯು ಸಂತೋಷದಿಂದ ಎದ್ದು, ಎರಡು ನಾರು ಮಡಿಗಳನ್ನು ತಂದು, ರಾಮನ ಕೈಗೆ ಕೊಡುವದು; ಅದನ್ನು ಲಕ್ಷ್ಮಣನು ತೆಗೆದು ಕೊಂಡು, ತಾನು ಉಟ್ಟಿದ್ದ ಪೀತಾಂಬರವನ್ನು ಕಳೆದು, ನಾರ ಶೀರೆಗಳನ್ನು ಉಟ್ಟು ಕೊಂಡನು. ಆ ಮೇಲೆ ತಿರಿಗಿ ಕೈಕೆಯಿಯು ಮತ್ತೆರಡು ನಾರ ಶೀರೆಯನ್ನು ತಂದು ಕೊಡಲು; ಅವುಗಳನ್ನು ಸೀತೆಯು ರಾಮನ ಕೈಯಿಂದ ಕಿತ್ತು ಕೊಂಡು, ತಾನು ಉಟ್ಟು ಕೊಳ್ಳುವದಕ್ಕೆ ತನಗೆ ಬಾರದೆ, ಕೈಯಲ್ಲಿ ಹಿಡಿದು ಕೊಂಡು, ಕಣ್ಣೀರನ್ನು ಬಿಡುತ್ತ, ರಾಮನ ಮುಖವನ್ನು ನೋಡಿ, ಮುನಿಗಳ ಹೆಂಡೆರು ನಾರ ಶೀರೆಯನ್ನು ಹ್ಯಾಗೆ ಉಡುವರು? ಎಂದು ಕೇಳಲು; ರಾಮನು ಬಂದು, ಆಕೆಯು ಉಟ್ಟ ಪೀತಾಂಬರದ ಮೇಲೆಯೇ ಆ ನಾರು ಮಡಿಗಳನ್ನು ಸುತ್ತಿ, ಕಟ್ಟಿದನು. ಆ ಮೇಲೆ ಸಂತೋಷದಿಂದ ಕೈಕೆಯಿಯು ಮತ್ತೆರಡು ನಾರು ಮಡಿಯನ್ನು ತಂದು, ರಾಮನ ಕೈಗೆ ಕೊಟ್ಟದರಿಂದ, ರಾಮನು ಅವುಗಳನ್ನು ಉಟ್ಟು ಕೊಂಡನು. ಅದನ್ನು ನೋಡಿ, ಅಲ್ಲಿ ಕೂಡಿದ್ದ ಗಂಡಸರು ಹೆಂಗಸರೆಲ್ಲಾ ಖೋ ಎಂದು ಕೂಗಿ, ಅಳುತ್ತ ಇರಲು; ವಶಿಷ್ಠ ಮಹಾ ಮುನಿಯು ಕೈಕೆಯಿಯ ಮೇಲೆ ಕೋಪವನ್ನು ಮಾಡಿ,—ನೀನು ರಾಮನೊಬ್ಬನನ್ನು ವನವಾಸಕ್ಕೆ ಹೋಗುವ ಹಾಗೆ ಕೇಳಿ ಕೊಂಡೆ. ಸೀತೆಯು ಪತಿ ಭಕ್ತಿಯಿಂದ ಆತನ ಸಂಗಡ ಹೋಗುವಳು. ಆಕೆಯು ನಾರು ಮಡಿಗಳನ್ನು ಉಡುವದಕ್ಕೆ ಎಷ್ಟು ಮಾತ್ರವೂ ನಿಮಿತ್ತವಿಲ್ಲ ಎಂದು ಹೇಳಿ, ಆಕೆಗೆ ಹದಿನಾಲ್ಕು ವರುಷಕ್ಕೆ ಬೇಕಾದಷ್ಟು ವಸ್ತ್ರಾಭರಣಗಳನ್ನು ಕೊಡಿಸಿದನು.

ಆ ಬಳಿಕ ದಶರಥನು ಸುಮಂತ್ರನನ್ನು ಕುರಿತು—ಎಲೈ, ಸಾರಥಿಯೇ, ನನ್ನ ರಥದಲ್ಲಿ ರಾಮನನ್ನು ಕೂರಿಸಿ ಕೊಂಡು, ವನಕ್ಕೆ ಕರೆದು ಕೊಂಡು ಹೋ

ಗಿ, ಬಿಟ್ಟು, ಆತನು ಕಳುಹಿಸಿದರೆ, ಹಿಂತಿರಿಗಿ ಬಾ, ಎಂದು ಅಪ್ಪಣೆ ಕೊಡಲು; ಸುಮಂತ್ರನು ರಥವನ್ನು ಸಿದ್ಧ ಮಾಡಿ ಕೊಂಡು ಬಂದನು. ಅದನ್ನು ಕಂಡು, ಸೀತೆಯು ಮೊದಲು, ಆ ಹಿಂದೆ ಲಕ್ಷ್ಮಣನು, ಆ ಮೇಲೆ ರಾಮನು ರಥವನ್ನು ಏರಿ ಕೊಂಡು ಹೊರಟರು. ಆಗ ದಶರಥನು ರಾಣೀ ವಾಸ ಸಮೇತನಾಗಿ ಹಿಂದೆ ಬಂದನು. ಮತ್ತು ಮಂತ್ರಿಗಳೂ ಸೇನಾ ಪತಿಗಳೂ ಪರಿವಾರ ಜನಗಳೂ ಪಟ್ಟಣದವರೂ ಎಲ್ಲರು ಗೋಳಿಡುತ್ತ, ಹಿಂದೆ ಬರುತ್ತಾ ಇದ್ದರು. ಆಗ ರಾಮನು ಅವರುಗಳ ದುಃಖಗಳನ್ನು ನೋಡಿ, ಸುಮಂತ್ರನಿಗೆ ಸನ್ನೆಯನ್ನು ಮಾಡಿ, ಜಾಗ್ರತೆಯಿಂದ ರಥವನ್ನು ನಡಿಸುತ್ತ, ತಮಸಾ ನದಿಯನ್ನು ದಾಟಿ, ಗಂಗಾ ತೀರದಲ್ಲಿ ಬೇಡರ ಅಧಿಪತಿಯಾದ, ತನ್ನ ಸ್ನೇಹಿತನಾದ ಗುಹನೆಂಬವನನ್ನು ಕಂಡು, ಆತನಿಂದ ಆಲದ ಹಾಲನ್ನು ತರಿಸಿ ಕೊಂಡು, ತಾನು ಲಕ್ಷ್ಮಣ ಸಹಿತ ಜಡೆಯನ್ನು ಧರಿಸಿ ಕೊಂಡು, ಸುಮಂತ್ರನನ್ನು ರಥ ಸಹಿತವಾಗಿ ಅಯೋಧ್ಯೆಗೆ ಕಳುಹಿಸಿ, ಓಡೆಯ ಮೇಲೆ ಗಂಗೆಯನ್ನು ದಾಟಿ, ಸೀತಾ ಲಕ್ಷ್ಮಣರ ಸಹಿತವಾಗಿ ಕಾಲ ನಡಿಗೆಯಿಂದಲೇ ಪ್ರಯಾಗ ಎಂಬ ಸ್ಥಳಕ್ಕೆ ಬಂದು, ಅಲ್ಲಿ ಇರುವ ಭರದ್ವಾಜ ಋಷಿಯನ್ನು ಕಂಡು, ಅವರ ಅಪ್ಪಣೆಯನ್ನು ತೆಗೆದು ಕೊಂಡು, ಚಿತ್ರಕೂಟವೆಂಬ ಪರ್ವತಕ್ಕೆ ಬಂದು, ಅಲ್ಲಿ ಲಕ್ಷ್ಮಣನಿಂದ ಒಂದು ಪರ್ನ ಶಾಲೆಯನ್ನು ಮಾಡಿಸಿ, ಇದ್ದು ಕೊಂಡು ಇದ್ದನು.

67. Ravana seizes and carries off Site to Lanka.

೬೭. ಸೀತಾಪಹಾರದ ಕಥೆ.

ರಾಮನು ಸೀತಾ ಲಕ್ಷ್ಮಣರೊಡನೆ ಕೂಡಿ, ವನವಾಸಕ್ಕೆ ಹೋದ್ದರಿಂದ, ದಶರಥ ರಾಯನು ಪುತ್ರ ಶೋಕವನ್ನು ಸಹಿಸಲಾರದೆ, ಸತ್ತು ಹೋದನು. ಆಗ ಸುಮಂತ್ರನೇ ಮೊದಲಾದ ಮಂತ್ರಿಗಳು, ಪುರೋಹಿತ ವಸಿಷ್ಠರು ಸಹ, ಕೇಕಯ ರಾಯನ ಪಟ್ಟಣದಿಂದ ಭರತ ಶತ್ರುಘ್ನರನ್ನು ಕರಿಸಿ, ದಶರಥನಿಗೆ ಪ್ರೇತ ಕಾರ್ಯಗಳನ್ನು ಮಾಡಿಸಿ, ಭರತನನ್ನು ಕುರಿತು—ರಾಜ್ಯಾಭಿಷಿಕ್ತನಾಗು, ಎಂದು ಹೇಳಿದರು. ಭರತನು ಅವರನ್ನು ಕುರಿತು—ದುರ್ಮಾರ್ಗಳಾದ ಈ ನನ್ನ ತಾಯಿ ಕೈಕೆಯಿಯು ನನ್ನ ತಂದೆಯನ್ನು ಕೊಂದು, ತಂದೆಗಿಂತ ಹೆಚ್ಚಾಗಿ ಕಾಪಾಡುತ್ತಿದ್ದ ನನ್ನ ಅಣ್ಣನನ್ನು ವನಕ್ಕೆ ಕಳುಹಿಸಿ, ನನಗೆ ತಾಳಲಾರದ ದುಃಖವನ್ನು ಉಂಟು ಮಾಡಿದಳು. ನಾನು ರಾಜ್ಯಾಭಿಷಿಕ್ತನಾಗಿ, ಇವಳ ಕೆಟ್ಟ ಆಶೆಯನ್ನು ನೆರವೇರಿಸುವದಿಲ್ಲ. ವನಕ್ಕೆ ಹೋಗಿ, ನಮ್ಮ ಅಣ್ಣನ ಕಾಲನ್ನು ಹಿಡು ಕೊಂಡು, ತಿರಿಗಿ ಅಯೋಧ್ಯೆಗೆ ಕರೆದು ಕೊಂಡು ಬರುವೆನು. ಆತ

ನೇ ರಾಜ್ಯಾಭಿಷೇಕಕ್ಕೆ ಯೋಗ್ಯನು. ನಾನು ಆತನ ದಾಸನು, ಎಂದು ಹೇಳಿ, ಸಕಲ ಪರಿವಾರ ಸಮೇತನಾಗಿ, ರಾಮನು ಇರುವ ಚಿತ್ರಕೂಟ ಪರ್ವತಕ್ಕೆ ಬಂದು, ಆತನಿಗೆ ನಮಸ್ಕರಿಸಿ, ಕಣ್ಣೀರನ್ನು ಸುರಿಸುತ್ತ, ತಂದೆ ಸತ್ತು ಹೋದ ಸುದ್ದಿಯನ್ನು ಹೇಳಿ,—ನೀನು ತಿರಿಗಿ ಅಯೋಧ್ಯಾ ಪಟ್ಟಣಕ್ಕೆ ಬಂದು, ಪಟ್ಟಾಭಿಷಿಕ್ತನಾಗ ಬೇಕೆಂದು, ನಾನಾ ವಿಧವಾಗಿ ಒಡಂಬಡಿಸಿದನು.

ರಾಮನು ಅದಕ್ಕೆ ಒಪ್ಪದೆ—ನಾನು ತಂದೆಯು ಮಾತನ್ನು ಮೀರುವದಿಲ್ಲ. ಆತನ ಅಪ್ಪಣೆಯು ಮೇರೆಗೆ ಹದಿನಾಲ್ಕು ವರುಷ ವನವಾಸವನ್ನು ಮಾಡಿ, ಆ ಮೇಲೆ ಅಯೋಧ್ಯೆಗೆ ಬಂದು, ಪಟ್ಟಾಭಿಷಿಕ್ತನಾಗುವೆನು ಎಂದು, ಭರತನನ್ನು ಸಮ್ಮತಿ ಪಡಿಸಲು; ಭರತನು—ನೀನು ಬರುವ ತನಕ ನಾನು ರಾಜ್ಯಾಭಿಷಿಕ್ತನಾಗುವದಿಲ್ಲ. ನಿನ್ನ ಪಾದದ ಹಾವುಗೆಗಳನ್ನು ಕೊಟ್ಟರೆ, ಅವುಗಳನ್ನು ಸಿಂಹಾಸನದ ಮೇಲೆ ಇರಿಸಿ, ರಾಜ್ಯ ಭಾರದ ಕೆಲಸಗಳನ್ನು ಅವುಗಳ ಸೇವಕನಾಗಿ ನಾನು ಮಾಡುತ್ತೇನೆ, ಎನಲು; ರಾಮನು ಆ ಮಾತಿಗೆ ಸಮ್ಮತಿ ಪಟ್ಟು, ತನ್ನ ಎರಡು ಪಾದುಕೆಗಳನ್ನು ಕೊಟ್ಟು, ತಿರಿಗಿ ಅಯೋಧ್ಯಾ ಪಟ್ಟಣಕ್ಕೆ ಕಳುಹಿಸಿ,—ಈ ಚಿತ್ರಕೂಟ ಪರ್ವತವು ಅಯೋಧ್ಯೆಗೆ ಹತ್ರವಾದ್ದರಿಂದ, ಪೌರ ಜನರು ಇಲ್ಲಿಗೆ ಬಂದು, ನನಗೆ ತೊಂದರೆಯನ್ನು ಕೊಡುವರು. ಇನ್ನು ಇಲ್ಲಿ ಇರ ಕೂಡದು ಎಂದು, ಮನಸ್ಸಿನಲ್ಲಿ ನಿಶ್ಚೈಸಿ, ಸೀತಾ ಲಕ್ಷ್ಮಣರೊಡನೆ ಕೂಡಿ, ಚಿತ್ರಕೂಟದಿಂದ ಹೊರಟು, ದಂಡಕಾರಣ್ಯವನ್ನು ಹೊಕ್ಕು, ಜನಸ್ಥಾನವೆಂಬ ಲಂಕಾ ಪಟ್ಟಣದ ಉಕ್ಕಡಕ್ಕೆ ಸಮೀಪವಾಗಿರುವ ಗೋದಾವರಿ ಎಂಬ ಹೊಳೆಯ ಧಡದ ಪಂಚವಟಿ ಎಂಬ ಸ್ಥಳದಲ್ಲಿ ತರಗು ಮನೆಯನ್ನು ಮಾಡಿಕೊಂಡು, ಅಲ್ಲಿ ಸೀತಾ ಲಕ್ಷ್ಮಣರೊಡನೆಯೂ, ತನ್ನ ತಂದೆ ದಶರಥ ರಾಯನಿಗೆ ಮಿತ್ರನಾದ ಜಟಾಯುವೆಂಬ ಗೃಧ್ರ ರಾಜನೊಡನೆಯೂ ಕೂಡಿ, ಸುಖವಾಗಿ ವಾಸಾ ಮಾಡಿ ಕೊಂಡಿದ್ದನು.

ಹೀಗಿರುವಲ್ಲಿ, ಛಳಿ ಕಾಲವು ಬಂತು. ಆಗ ಲಕ್ಷ್ಮಣನು ರಾಮನನ್ನು ಕುರಿತು—ಎಲೈ, ಅಣ್ಣನೇ, ಈಗ ದಿಕ್ಕುಗಳೆಲ್ಲಾ ಹಿಮಂತ ರುತುವಿನಿಂದ ಅಲಂಕರಿಸಿ ಇರುವ ಹಾಗೆ ಕಾಣುತ್ತವೆ. ಈ ಕಾಲವು ಬಹಳ ರಮಣೀಯವಾಗಿರುವದು. ಈ ಕಾಲದಲ್ಲಿ ಜನರು ಪಚ್ಚ ಕರ್ಪೂರದಿಂದ ಕೂಡಿರುವ ಶ್ರೀಗಂಧವನ್ನು ತೊಡೆದು ಕೊಳ್ಳುವದರಲ್ಲಿಯೂ, ತಾವರೆ, ಕನ್ನೈದಿಲೆ, ಆವಲ ಮುಂತಾದ ಹೂವುಗಳಿಂದ ಕೂಡಿರುವ ಕೊಳಗಳ ಶೀತಳವಾದ ಪಾವಟಿಗೆಗಳಲ್ಲಿ ಕುಳಿತು ಕೊಳ್ಳುವದರಲ್ಲಿಯೂ, ಹೂದೋಟಗಳಲ್ಲಿ ಹೂವುಗಳ ಗಮ

ದಿಂದ ಘುಮುಘುಮಿಸುವ ಹಿಮದ ಹನಿಗಳಿಂದ ಶೀತಳವಾದ ಸಣ್ಣ ಘಾಳಿಗೆ ಮೈಯೊಡ್ಡುವದರಲ್ಲಿಯೂ, ಉಪ್ಪರಿಗೆಗಳ ಕಿಟಕಿಗಳಲ್ಲಿ ಮೊಗಗಳನ್ನು ಚಾಚುವದರಲ್ಲಿಯೂ, ತಣ್ಣೀರುಗಳ ಮಜ್ಜನದಲ್ಲಿಯೂ, ಅಪೇಕ್ಷೆ ಪಡದವರಾಗಿದ್ಧಾರೆ. ಮತ್ತು ಮೊಲದ ಹೊಟ್ಟೆಯಂತೆ ನುಣ್ಣಗಿರುವ ಕಂಬಳಿಗಳನ್ನು ಹೊದ್ದು ಕೊಳ್ಳುವದರಲ್ಲಿಯೂ, ಅರಳೆಗಳನ್ನು ಹಾಕಿ ಹೊಲದಿರುವ ಇಜ್ಬೋಡೀ ಅಂಗಿಗಳನ್ನು ತೊಟ್ಟು ಕೊಳ್ಳುವದರಲ್ಲಿಯೂ, ಕಸ್ತೂರೀ ನೀರಿನಿಂದ ಬೊಳಿದಿರುವ ಅಡಿಕೆಗಳೂ ಚಂದ್ರನ ಹಾಗೆ ಬೆಳ್ಳಗಿರುವ ವೀಳ್ಯದೆಲೆಗಳೂ ಸುಣ್ಣವೂ ಕೂಡಿದ ತಾಂಬೂಲವನ್ನು ತಿನ್ನುವದರಲ್ಲಿಯೂ, ಹೊಗೆ ಇಲ್ಲದ ಕೆಂಡಗಳಿಂದ ತುಂಬಿರುವ ಅಗ್ಗಿಷ್ಟಿಕೆಯಲ್ಲಿ ಕಾಸಿ ಕೊಳ್ಳುವದರಲ್ಲಿಯೂ, ಇಟ್ಟಿಗೆಗಳಿಂದ ಮಾಡಿದ ಕೊಠಡಿಗಳಲ್ಲಿ ವಾಸಿಸುವದರಲ್ಲಿಯೂ, ಆಲದ ನೆಳಲಿನಲ್ಲಿ ಕೂತು ಕೊಳ್ಳುವದರಲ್ಲಿಯೂ, ಶೇದೋ ಭಾವಿಯ ನೀರಿನಿಂದ ಮೀಯುವದರಲ್ಲಿಯೂ, ಅಗಿಲು ಗಂಧವನ್ನು ತೊಡ ಕೊಳ್ಳುವದರಲ್ಲಿಯೂ ಆಶೆಯುಳ್ಳವರಾಗಿರುವರು.

ಮತ್ತು ಈ ಛಳಿಗಾಲದಲ್ಲಿ ಹಕ್ಕಿಗಳು ತಮ್ಮ ತಮ್ಮ ಗೂಡುಗಳಿಂದ ಹೊರಗೆ ಹೊರಡದೆ, ಮರಿಗಳನ್ನು ರಕ್ಕೆಗಳಲ್ಲಿ ಹುದುಗಿಸಿ ಕೊಂಡು, ಇರುತ್ತಿರುವವು. ಗದ್ದೆಗಳಲ್ಲಿ ಭತ್ತದ ಪೈರುಗಳು ಹೊಂಬಣ್ಣವಾದ ತೆನೆಗಳನ್ನು ಜೋಲಾಡಿಸುತ್ತ, ಚೆಲುವಾಗಿರುವವು. ದಾರಿ ದಾರಿಗಳಲ್ಲಿ ಅರವಂಟಿಗೇ ಮನೆಗಳೆಲ್ಲಾ ಹಾಳಾಗಿರುವವು. ಮುಂಜಾನೆ ಎದ್ದು, ಹೊಳೆಗಳಲ್ಲಿ ಸ್ನಾನವನ್ನು ಮಾಡಿ, ಮೇಲಕ್ಕೆ ಎದ್ದು, ಮುನಿ ಜನಗಳು ಛಳಿಗೆ ಗಡ ಗಡನೆ ನಡುಗುತ್ತ, ತುಟಿಗಳನ್ನು ಅಲುಗಿಸುವದರಿಂದ—ಈ ಛಳಿಗಾಲವು ಹೋಗಲಿ ಎಂದು, ಮಂತ್ರ ಜಪವನ್ನು ಮಾಡುತ್ತಾರೋ? ಎಂಬ ಹಾಗೆ ಶೋಭಿಸುವರು. ಮರಗಳೆಲ್ಲಾ ಎಲೆಗಳು ಉದುರಿ ಬಿದ್ದದರಿಂದ, ಬೆತ್ತಲೆ ಇವೆಯೋ? ಎಂಬಂತೆ ಇರುವವು. ದನಗಳು ಕಾಡಿನಲ್ಲಿ ಯಥೇಷ್ಟವಾಗಿ ಬೆಳೆದಿರುವ ಹುಲ್ಲುಗಳನ್ನು ಮೇದು, ಕೊಬ್ಬಿ ಇರುವವು. ತಾವರೇ ಕೊಳಗಳಲ್ಲಿ ಹಿಮದಿಂದ ಹೂವುಗಳೆಲ್ಲಾ ಉದುರಿ ಹೋಗಿ, ದಂಟು ಮಾತ್ರ ಇರುವದರಿಂದ, ಪದ್ಮಿನಿಗಳು ವಿರಾಜಿಸದೆ ಇರುವವು. ಕೋಗಿಲೆಗಳು ಬೇಗ ಹಿಮ ಕಾಲವು ಹೋಗಿ, ವಸಂತ ಕಾಲವು ಬಂದು, ಮರಗಳೆಲ್ಲಾ ಬೇಗ ಚಿಗುರಲಿ ಎಂದು, ನಿಯಮವನ್ನು ಕೈಕೊಂಡಿವೆಯೋ? ಎಂಬ ಹಾಗೆ ಮೌನ ವ್ರತವನ್ನು ಕೈಕೊಂಡಿರುವವು. ಕಾಗೆಗಳೆಲ್ಲಾ ತಮ್ಮ ಗೂಡಿನಲ್ಲಿ ತಮ್ಮ ಮೊಟ್ಟೆಗಳೊಡನೆ ಕೋಗಿಲೆಗಳು ತಂದು ಇಟ್ಟ ಅವುಗಳ ಮೊಟ್ಟೆಗಳನ್ನು ಕೂಡ, ತಮ್ಮ ಮೊಟ್ಟೆಗಳು ಎಂದು, ಅವುಗಳ ಮೇ

ಲೆ ಕುಳಿತು, ಪ್ರೀತಿಯಿಂದ ಮರಿಯನ್ನು ಮಾಡುತ್ತಿರುವವು. ಬಡವರ ಮನೆಗ
ಳ ಗೋಡೆಗಳಲ್ಲಿರುವ ತಿಗಣೆಗಳು, ಮೊದಲು ಮನುಷ್ಯರ ಮೈಗಳನ್ನು ಕ
ಚ್ಚಿ, ರಕ್ತವನ್ನು ಹೀರುತ್ತಿದ್ದಂಥ ಕೆಟ್ಟ ಗುಣಗಳನ್ನು ಬಿಟ್ಟು, ಸಜ್ಜನರ ಹಾಗೆ
ಪರ ಹಿಂಸೆಯನ್ನು ಮಾಡದೆ, ಹಿಂದೆ ಮಾಡಿದ ಪಾಪವು ಹೋಗುವದಕ್ಕೆ ಉಪ
ವಾಸ ವ್ರತವನ್ನು ಮಾಡಿ, ಬಡವಾಗಿವೆಯೋ? ಎಂಬ ಹಾಗೆ, ಗೋಡೆಗಳ ಕ
ನ್ನಗಳಲ್ಲಿ ಎಲುಬು ಚರ್ಮ ಮಾತ್ರದಿಂದ ಜೀವಿಸಿ ಕೊಂಡು, ಹತ್ತಿ ಕೊಂಡಿರು
ವವು. ಸೂರ್ಯನು ಚಂದ್ರನಾಗಿರುವನು. ಮಧ್ಯಾನ್ಹ ಕಾಲವು ಜನರ ಸಂಚಾ
ರಕ್ಕೆ ಬಹು ಸುಖಕರವಾಗಿರುವದು. ರಾತ್ರಿಯಲ್ಲಿ ಚಂದ್ರನು ಹಿಮದಿಂದ
ಮರಸಿದವನಾಗಿ, ಚನ್ನಾಗಿ ಪ್ರಕಾಶಿಸನು. ಪಡುವಣ ದಿಕ್ಕಿನ ಘಾಳಿಯು ಬ
ಹು ಶೀತಳವಾಗಿ ಬೀಸುವದು. ಭೂಮಿಯು ಎಲ್ಲಿ ನೋಡಿದರೂ ಎವದ ಪೈ
ರೂ ಗೋಧವೆ ಪೈರೂ ಉಳ್ಳದ್ದಾಗಿ ಪ್ರಕಾಶಿಸುತ್ತಿರುವದು. ಚಾಡಿಯನ್ನು
ಕೇಳುವ ಧೊರೆಯ ಐಶ್ವರ್ಯದ ಹಾಗೂ, ಉತ್ತಮರಾದ ಸ್ತ್ರೀ ಪುರುಷರ ನಗು
ವಿನ ಹಾಗೂ, ಈ ಹಿಮಂತ ರುತುವಿನ ಹಗಲುಗಳು ಬೇಗ ಹೋಗುವವು.
ಅರಸುಗಳೆಲ್ಲಾ ಹಗೆಗಳ ಮೇಲೆ ದಂಡೆತ್ತಿ, ಜಗಳಕ್ಕೆ ಹೋಗುವರು. ಕಾಡು
ಗಳಲ್ಲಿ ಆನೆಗಳು ಛಳಿಯನ್ನು ತಾಳಲಾರದೆ, ತಮ್ಮ ತಮ್ಮ ಸುಂಡಿಲುಗಳನ್ನು
ಬಾಯಿಯಲ್ಲಿ ಮುಚ್ಚಿ ಕೊಂಡು, ತಣ್ಣಗಿರುವ ನೀರನ್ನು ಕುಡಿಯಲಾರದೆ,
ಬಾಯಾರಿಕೆಯಿಂದ ಕಂಗೆಡುತ್ತಿರುವವು. ವನಗಳ ಸಾಲುಗಳು ಹೂವುಗಳಿಲ್ಲ
ದೆ ಇರುವದರಿಂದ, ಮಲಗಿ, ನಿದ್ದೆ ಹೋಗುತ್ತಲಿವೆಯೋ? ಎಂಬ ಹಾಗೆ ಇರು
ವವು, ಎಂದು ಹೇಳಿದನು. ಆಗ ಶ್ರೀರಾಮನು ಅಂಥಾ ಛಳಿಗಾಲದಲ್ಲಿಯೂ
ಗೋದಾವರಿಯಲ್ಲಿ ಸ್ನಾನವನ್ನು ಮಾಡಿ, ನಿತ್ಯ ಕರ್ಮಗಳನ್ನು ನೆರವೇರಿಸುತ್ತ,
ಮುನಿಗಳಂತೆ ಕೃಷ್ಣಾಜಿನಗಳನ್ನು ಹಾಸಿ, ಹೊದ್ದು ಕೊಂಡು, ಕಂದ ಮೂಲಾ
ದಿಗಳನ್ನು ತಿಂದು ಕೊಂಡು, ಕಷ್ಟ ಪಡುತ್ತ ಇದ್ದನು.

ಹೀಗಿರುವಲ್ಲಿ ಆ ಪಂಚವಟಿಯ ಸಮೀಪದಲ್ಲಿ ಇರುವ ಜನಸ್ಥಾನದಲ್ಲಿ ತನ್ನ
ಅಣ್ಣನಾದ ಖರನೊಡನೆ ಇದ್ದ ಶೂರ್ಪನಖಿ ಎಂಬ ರಾವಣನ ತಂಗಿಯು ಆಹಾ
ರಾರ್ಥವಾಗಿ ಕಾಡಿನಲ್ಲಿ ತಿರುಗುತ್ತ, ಪಂಚವಟಿಗೆ ಬಂದು, ರಾಮನ ರೂಪನ್ನು
ಕಂಡು, ಮೋಹಿತಳಾಗಿ, ಕಾಮ ರೂಪಿಯಾದ್ದರಿಂದ, ಚೆಲುವಾದ ಹೆಂಗಸಿನ
ಆಕಾರವನ್ನು ಧರಿಸಿ, ರಾಮನ ತರಗು ಮನೆಯನ್ನು ಹೊಕ್ಕು—ಎಲೈ, ಸುಂದ
ರ ಪುರುಷನೇ, ನೀನ್ಯಾರು? ನಿನ್ನ ಬಳಿಯಲ್ಲಿ ಇರುವ ಈ ಹೆಂಗಸು ಯಾರು?
ಎಂದು ಕೇಳಲು;—ನಾನು ದಶರಥ ರಾಯನ ಮಗನಾದ ರಾಮನು. ತಂದೆಯ

ಅಪ್ಪಣೆಯಿಂದ ಈ ದಂಡಕಾ ವನದಲ್ಲಿ ವಾಸ ಮಾಡುವೆನು. ಇವಳು ಜನಕ ರಾ
ಯನ ಮಗಳಾದ ಜಾನಕಿಯು, ನನ್ನ ಹೆಂಡತಿಯು, ಎಂದು ಹೇಳಲು; ಶೂ
ರ್ಪನಖಿಯು—ಎಲೈ, ರಾಮನೇ, ನಿನ್ನ ಅಂದವಾದ ರೂಪನ್ನು ನೋಡಿ, ನಿನ್ನ
ನ್ನು ಮೋಹಿಸಿದ್ದೇನೆ. ಈ ಮನುಷ್ಯ ಹೆಂಗಸನ್ನು ಬಿಟ್ಟು, ನನ್ನನ್ನು ಮದು
ವೆಯಾಗು. ನಾನು ರಾವಣನ ತಂಗಿಯಾದ ಶೂರ್ಪನಖಿ ಎಂಬವಳು, ಕಾಮ
ರೂಪಿಯು, ಎಂದು ಹೇಳಿದಳು.

ರಾಮನು ಆ ಮಾತನ್ನು ಕೇಳಿ, ಸೀತೆಯ ಮೊಗವನ್ನು ನೋಡುತ್ತ, ನಸು
ನಕ್ಕು, ಶೂರ್ಪನಖಿಯನ್ನು ಕುರಿತು—ಎಲೈ, ಶೋಭನಾಂಗಿಯೇ, ನಾನು ಏಕ
ಪತ್ನಿ ವ್ರತಸ್ಥನು. ನನಗೆ ಈಕೆ ಹೆಂಡತಿಯಾಗಿ ಇರುವಳು. ಇವಳ ಮೇಲೆ
ನಾನು ಮತ್ತೊಬ್ಬಳನ್ನು ಮದುವೆಯಾಗ ಕೂಡದು. ಇಗೋ, ಆ ಕಡೆಯಲ್ಲಿ
ನನಗಿಂತ ಚೆಲುವನಾದ ನನ್ನ ತಮ್ಮನಾದ ಲಕ್ಷ್ಮಣನು ಹೆಂಡತಿ ಇಲ್ಲದೆ ಇ
ರುವನು. ನೀನು ಹೋಗಿ, ಅವನನ್ನು ವರಿಸಿ, ಮದುವೆಯಾದರೆ, ನಿನಗೆ ಬ
ಹಳ ಸುಖ ಉಂಟಾಗುವದು ಎನಲು; ಆಕೆಯು ಲಕ್ಷ್ಮಣನ ಬಳಿಗೆ ಹೋಗಿ,
ಆತನ ಸೌಂದರ್ಯವನ್ನು ನೋಡಿ, ಆತನಿಗಿಂತ ಈತನು ಬಹಳ ಚೆಲುವಾಗಿರು
ವನು. ಆತ ಹೇಳಿದ ಮಾತು ನಿಜವೇ ಸರಿ. ಇವನನ್ನು ನಾನು ಗಂಡನನ್ನು
ಮಾಡಿ ಕೊಳ್ಳ ಬಹುದು, ಎಂದು ಎಣಿಸಿ, ಲಕ್ಷ್ಮಣನನ್ನು ಕುರಿತು—ಎಲೈ,
ಮೋಹನಾಂಗನೇ, ನಿಮ್ಮಣ್ಣ ರಾಮನು ನನ್ನನ್ನು ನಿನ್ನ ಬಳಿಗೆ ಕಳುಹಿಸಿದನು.
ನೀನು ನನ್ನನ್ನು ಬೇಗ ಮದುವೆಯಾಗು, ಅಂದಳು. ಲಕ್ಷ್ಮಣನು ಆಕೆಯನ್ನು
ನೋಡಿ, ಅವಳ ಇಂಗಿತ ಚೇಷ್ಟೆಗಳಿಂದ ರಾಕ್ಷಸಿ ಎಂದರಿತು, ಆಕೆಯನ್ನು ಕು
ರಿತು—ನಾನು ರಾಮ ದಾಸನು. ಆತನ ಸೇವೆಯನ್ನು ಮಾಡಿ ಕೊಂಡಿರುವೆನು.
ನೀನು ದಾಸನನ್ನು ಮದುವೆಯಾದರೆ, ದಾಸಿಯಾಗಿ, ಅವರ ಸೇವೆಯನ್ನು ಮಾ
ಡ ಬೇಕಾಗುತ್ತೆ. ರಾಮನನ್ನು ಮದುವೆಯಾದರೆ, ನೀನು ನನಗೆ ಒಡತಿ ಆಗು
ತ್ತೀ. ನಿನ್ನಂಥ ಕುಲ ಸ್ತ್ರೀಯು ದಾಸನ ಮದುವೆಯಾಗುವದು ಯುಕ್ತವಲ್ಲ,
ಅಂದನು.

ಆ ಮಾತನ್ನು ಕೇಳಿ, ಶೂರ್ಪನಖಿಯು—ಇವರು ನನ್ನನ್ನು ವಿನೋದ ಮಾ
ಡುತ್ತಾ, ತಿರಿಗಿಸುವರು. ಮನುಜ ಸ್ತ್ರೀಯಾದ ಈ ರಾಮನ ಹೆಂಡತಿಯ
ನ್ನು ತಿಂದು ಬಿಟ್ಟರೆ, ನನ್ನನ್ನು ಮದುವೆಯಾಗುವನು ಎಂದು, ಸೀತೆಯನ್ನು
ತಿನ್ನುವದಕ್ಕೆ ಬರುತ್ತಿರಲು; ರಾಮನ ಅಪ್ಪಣೆಯ ಪ್ರಕಾರ ಲಕ್ಷ್ಮಣನು ತ
ನ್ನ ಕೈ ಕತ್ತಿಯಿಂದ ಅವಳ ಕಿವಿ ಮೂಗುಗಳನ್ನು ಕೊಯಿದನು. ಆಗ ಅವ

ಳು ಮೂಘರಿಕಿಯೂ, ಮೂಳಿಯೂ ಆಗಿ, ಧಾರೆಯಾಗಿ ರಕ್ತಗಳನ್ನು ಸುರಿ
ಸುತ್ತ, ತನ್ನ ಅಣ್ಣನಾದ ಖರನ ಬಳಿಗೆ ಬಂದು, ದೂರ ಹೇಳಿ ಕೊಳ್ಳಲು; ಖ
ರನು ರಾಕ್ಷಸ ಸೇನಾ ಸಮೇತನಾಗಿ ರಾಮನೊಡನೆ ಜಗಳಕ್ಕೆ ಬಂದನು. ರಾ
ಮನು ಆ ಜನಸ್ಥಾನದಲ್ಲಿ ಒಬ್ಬ ರಾಕ್ಷಸನು ಉಳಿಯದಂತೆ ಎಲ್ಲರನ್ನು ಕೊಂ
ದು ಹಾಕಿದನು. ಆ ಮೇಲೆ ಆ ಶೂರ್ಪನಖಿಯು ಲಂಕಾ ಪಟ್ಟಣಕ್ಕೆ ಬಂದು,
ತನ್ನ ಅಣ್ಣನಾದ ರಾವಣನ ಬಳಿಯಲ್ಲಿ ಈ ವಿವರಗಳನ್ನೆಲ್ಲಾ ತಿಳಿಸಲು; ಆತ
ನು ಕೋಪಾಕ್ರಾಂತನಾಗಿ, ರಾಮ ಲಕ್ಷ್ಮಣರೊಡನೆ ಯುದ್ಧಕ್ಕೆ ಹೊರಡು
ವಾಗ, ಶೂರ್ಪನಖಿಯು ರಾವಣನನ್ನು ಕುರಿತು—ಎಲೈ, ಅಣ್ಣನೇ, ರಾಮ
ಲಕ್ಷ್ಮಣರನ್ನು ಜಗಳದಲ್ಲಿ ಜೈಸ ಶಿವನ ಕೈಯಲ್ಲಿಯೂ ಸಾಗದು. ರಾಮ
ಲಕ್ಷ್ಮಣರು ತಮ್ಮಿಂದ ತಾನೇ ಸಾಯುವದಕ್ಕೆ ಒಂದು ಯುಕ್ತಿಯನ್ನು ಹೇ
ಳುವೆನು; ಕೇಳು. ಆ ರಾಮನಿಗೆ ಸರ್ವ ಲೋಕ ಸುಂದರಿಯಾದ ಸೀತೆ ಎಂಬ
ಒಬ್ಬಳು ಹೆಂಡತಿ ಇರುವಳು. ನಿನ್ನ ಅಂತಃಪುರದಲ್ಲಿರುವ ದೇವ, ದಾನವ,
ಯಕ್ಷ, ರಾಕ್ಷಸ ಕನ್ನಿಕೆಗಳಲ್ಲಿ ಒಬ್ಬಳಾದರೂ ಅಂಥ ಲಾವಣ್ಯವತಿಯು ಇಲ್ಲ.
ನಮ್ಮ ಸೋದರಮಾವ ಮಾರೀಚನನ್ನು ಸಹಾಯಕ್ಕೆ ಕರೆದು ಕೊಂಡು,
ಪಂಚವಟಿಗೆ ಹೋಗಿ, ರಾಮ ಲಕ್ಷ್ಮಣರನ್ನು ಸೀತೆಯ ಬಳಿಯಿಂದ ಅಗಲಿಸಿ,
ಆ ವೇಳೆಯಲ್ಲಿ ನೀನು ಸೀತೆಯನ್ನು ಎತ್ತಿ ಕೊಂಡು, ಲಂಕೆಗೆ ಬಂದು, ನಿನಗೆ
ಹೆಂಡತಿಯಾಗಿ ಮಾಡಿ ಕೊಂಡರೆ, ನಿನ್ನ ಭಾಗ್ಯಕ್ಕೆ ಎಣೆಯೇ ಇಲ್ಲ. ರಾಮ
ನು ಪ್ರಿಯಳಾದ ಹೆಂಡತಿಯ ವಿಯೋಗವನ್ನು ತಾಳಲಾರದೆ, ಪ್ರಾಣವನ್ನು
ಬಿಡುವನು. ಅಣ್ಣನ ಮೇಲಿನ ವಾತ್ಸಲ್ಯದಿಂದ ಲಕ್ಷ್ಮಣನೂ ಸತ್ತು ಹೋಗು
ವನು, ಎಂದು ಹೇಳಿದಳು.

ಆ ಮಾತನ್ನು ಕೇಳಿ, ರಾವಣನು—ಇದು ಒಳ್ಳೇ ಯೋಚನೆ ಸರಿ. ಹೀಗೆ
ಯೇ ಮಾಡ ಬೇಕೆಂದು ಮನಸ್ಸಿನಲ್ಲಿ ನಿಶ್ಚೈಸಿ, ರಥದ ಮೇಲೆ ಹತ್ತಿ ಕೊಂಡು,
ಕಡಲ ನಡುವೆ ಇರುವ ಮಾರೀಚನ ಆಶ್ರಮಕ್ಕೆ ಬಂದು, ರಾಮನು ತನ್ನ
ತಂಗಿ ಶೂರ್ಪನಖಿಗೆ ಕಿವಿ ಮೂಗನ್ನು ಕೊಯಿದು, ಖರ ದೂಷಣಾದಿಗಳನ್ನು
ಕೊಂದ ಸುದ್ದಿಯನ್ನೂ, ತಾನು ಆ ರಾಮನ ಹೆಂಡತಿಯನ್ನು ಕದ್ದು ಕೊಂಡು
ಬರುವದಕ್ಕೆ ಬಂದದ್ದನ್ನೂ ತಿಳಿಸಿ, ಒಡಂಬಡಿಸಿ, ಅವನು ಪಂಚವಟಿಯಲ್ಲಿ
ಮಾಡ ತಕ್ಕ ಉಪಾಯಗಳನ್ನು ಹೇಳಿ ಕೊಟ್ಟು, ಆತನನ್ನು ಸಂಗಡ ಕರೆದು
ಕೊಂಡು, ಪಂಚವಟಿಗೆ ಬಂದು, ತಾನು ಒಂದು ಬಳಿಯಲ್ಲಿ ಮರಸಿ ಕೊಂಡಿ
ದ್ದು, ಮಾರೀಚನನ್ನು ಮುಂಚಿತವಾಗಿ ರಾಮಾಶ್ರಮಕ್ಕೆ ಕಳುಹಿಸಿದನು. ಆ

ಮಾರೀಚನು ಪಂಚ ರತ್ನ ಮಯವಾದ ಜಿಂಕೆಯ ರೂಪವನ್ನು ಧರಿಸಿ, ರಾಮಾಶ್ರಮದ ಬಳಿಗೆ ಬಂದು, ಸೀತಾ ರಾಮರ ಮುಂದೆ ಸುಳಿದಾಡುತ್ತಿರಲು; ಸೀತೆಯು ಆ ಮಾಯಾ ಮೃಗದ ಸೌಂದರ್ಯಕ್ಕೆ ಮೋಹಿತಳಾಗಿ, ರಾಮನನ್ನು ಕುರಿತು—ಎಲೈ, ಪ್ರಾಣ ವಲ್ಲಭನೇ, ಇಂಥಾ ಚೆಲುವಾದ ಹುಲ್ಲೆಯನ್ನು ಎಂದಿಗೂ ನಾನು ನೋಡಿದವಳಲ್ಲ. ಸರ್ವ ಪ್ರಯತ್ನದಿಂದ ಇದನ್ನು ಹಿಡಿದು ತಂದರೆ, ನಾವು ಈ ವನವಾಸದಲ್ಲಿ ಇರುವ ವರಿಗೂ ಇದರ ಸಂಗಡ ಆಡುತ್ತಿರ ಬಹುದು. ಆ ಮೇಲೆ ಅಯೋಧ್ಯೆಗೆ ಹೋಗುವಾಗ, ತೆಗೆದು ಕೊಂಡು ಹೋಗಿ, ನಮ್ಮ ಅಂತಃಪುರದಲ್ಲಿ ಇಟ್ಟು ಕೊಳ್ಳ ಬಹುದು ಎಂದು, ಬಹಳ ಅಂಗಲಾಚಿ ಹೇಳಿ ಕೊಂಡದ್ದರಿಂದ, ರಾಮನು ಲಕ್ಷ್ಮಣನನ್ನು ಸೀತೆಯ ಕಾವಲಿಗೆ ಇಟ್ಟು, ಧನುರ್ಬಾಣವನ್ನು ತೆಗೆದು ಕೊಂಡು, ಆ ಮೃಗದ ಬೆನ್ನಟ್ಟಿ ಹೋದನು. ಆ ಮಾಯಾ ಮೃಗವು ಕೈಗೆ ಸಿಕ್ಕುವಂತೆ ರಾಮನ ಹತ್ರಕ್ಕೆ ಬರುತ್ತ, ಹಿಡಿಯುವದಕ್ಕೆ ಬಂದರೆ, ದೂರಕ್ಕೆ ಹೋಗುತ್ತ, ಈ ಮೇರೆಗೆ ರಾಮನನ್ನು ಆಶ್ರಮಕ್ಕೆ ಬಹು ದೂರವಾಗಿ ಕಾಡಿಗೆ ಎಳ ಕೊಂಡು ಹೋಯಿತು. ರಾಮನು ಮಧ್ಯಾಹ್ನದ ಬಿಸಲಿನಲ್ಲಿ ತಿರಿಗಿ, ಬೇಸತ್ತು, ಬಸವಳಿದು,—ಈ ಮೃಗವು ಕೈಗೆ ಬೇರೆ ಶಿಕ್ಕುವದಿಲ್ಲ. ಇದನ್ನು ಕೊಂದು, ಇದರ ಚಕ್ಕಳವನ್ನು ಜಾನಕಿಗೆ ಕೊಂಡ್ಹೋಗಿ, ಕೊಡುವೆನು ಎಂದು ಮನಸ್ಸಿನಲ್ಲಿ ನಿಶ್ಚೈಸಿ, ಬಿಲ್ಲಿಗೆ ತೆಬ್ಬನ್ನು ಏರಿಸಿ, ಅಲಗನ್ನು ಹೂಡಿ, ಮೃಗದ ಮೇಲೆ ಬಿಡಲು; ಅದು ಆ ಬಾಣದ ಪೆಟ್ಟಿನಿಂದ ಜಿಂಕೆಯ ರೂಪವನ್ನು ಬಿಟ್ಟು, ರಾಮನ ಧ್ವನಿಯ ಹಾಗೆ ಧ್ವನಿಯನ್ನು ಮಾಡಿ ಕೊಂಡು—ಹಾ ಸೀತೇ! ಹಾ ಲಕ್ಷ್ಮಣಾ! ಎಂದು ಘಟ್ಟಿಯಾಗಿ ಆರ್ತ ಧ್ವನಿಯಿಂದ ಪ್ರಾಣವನ್ನು ಬಿಟ್ಟಿತು. ತರಗಿನ ಮನೆಯಲ್ಲಿದ್ದ ಸೀತೆಯು ಆ ಧ್ವನಿಯನ್ನು ಕೇಳಿ, ಬಹು ದುಃಖಿತಳಾಗಿ, ವ್ಯಸನದಿಂದ ಲಕ್ಷ್ಮಣನನ್ನು ಕುರಿತು—ಎಲೈ, ಮೈದುನನೇ, ನಿನಗೆ ಪ್ರಿಯನಾದ ಅಣ್ಣನ ದೀನ ಧ್ವನಿಯನ್ನು ಕೇಳಿದೆಯಾ? ಆ ಮೃಗವು ಮಾಯಾ ರಾಕ್ಷಸನೋ? ಏನೋ? ನಾನು ತಿಳಿಯದೆ, ಆಶೆ ಪಟ್ಟು, ನನ್ನ ಪ್ರಿಯನನ್ನು ಅಟ್ಟಿದೆನು. ನನ್ನ ಮನೋವಲ್ಲಭನು ಏನಾಗಿರುವನೋ? ನಡೆ! ಹೋಗು! ನಿಮ್ಮಣ್ಣನಿಗೆ ಸಹಾಯವನ್ನು ಮಾಡಿ, ಬೇಗ ನನ್ನ ಬಳಿಗೆ ಕರೆದು ಕೊಂಡು ಬಂದರೆ, ಸರಿ. ಇಲ್ಲದೆ ಇದ್ದರೆ, ಈ ಕ್ಷಣವೇ ಪ್ರಾಣವನ್ನು ಬಿಡುವೆನು ಎಂದು ಹೇಳಿ, ಲಕ್ಷ್ಮಣನನ್ನು ಕಳುಹಿಸಲು; ಆತನು ಕಾಡಿನಲ್ಲಿ ರಾಮನನ್ನು ಅರಸುತ್ತ ಬರುತ್ತಿದ್ದನು.

ಇತ್ತಲಾ ರಾವಣನು ಸನ್ಯಾಸಿ ವೇಷವನ್ನು ತಾಳಿ ಕೊಂಡು, ರಾಮನ ಎಲೇ

ಮನೆಯನ್ನು ಹೊಕ್ಕು, ಬಲಾತ್ಕಾರದಿಂದ ಸೀತೆಯನ್ನು ಎತ್ತಿ ಕೊಂಡು, ರಥದ ಮೇಲೆ ಕೂರಿಸಿ ಕೊಂಡು, ಆಕಾಶ ಮಾರ್ಗದಲ್ಲಿ ಬರುತ್ತಿರುವಾಗ, ಸೀತೆಯು—ಹಾ ರಾಮಾ! ಹಾ ಲಕ್ಷ್ಮಣಾ! ನೀವು ಇಲ್ಲದ ವೇಳೆಯಲ್ಲಿ ಖೂಳ ರಕ್ಕಸನು ಮಂದ ಭಾಗ್ಯಳಾದ ನನ್ನನ್ನು ಎತ್ತಿ ಕೊಂಡು ಹೋಗುವನು, ಎಂದು ಮೊರೆ ಇಟ್ಟು, ಅಳುವ ಶಬ್ದವನ್ನು ಜಟಾಯುವೆಂಬ ಗೃಧ್ರ ರಾಜನು ಕೇಳಿ, ಕೋಪದಿಂದ—ಎಲೈ, ಖೂಳ ರಾವಣನೇ, ಲೋಕಾಭಿರಾಮನಾದ ರಾಮನ ಹೆಂಡತಿಯಾದ ಸೀತೆಯನ್ನು ಕದ್ದು ಕೊಂಡು, ಎಲ್ಲಿಗೆ ಹೋಗುತ್ತೀ? ಬೇಗ ಬಿಟ್ಟರೆ, ಸರಿ. ಇಲ್ಲದಿದ್ದರೆ, ನಿನ್ನನ್ನು ಪ್ರಾಣದಿಂದ ಬಿಡಿಸುವೆನು ಎಂದು, ಆಕಾಶಕ್ಕೆ ಹಾರಿ, ತನ್ನ ಗರಿಗಳಿಂದ ರಾವಣನ ರಥ ಅಶ್ವ ಕೇತು ದಂಡಗಳನ್ನು ಬಡಿದು, ನೆಲಕ್ಕೆ ಕೆಡವಿ, ಕೊಕ್ಕುಗಳಿಂದ ರಾವಣನ ಮೈಯನ್ನು ಕಚ್ಚಿ, ರಕ್ತಗಳನ್ನು ಸುರಿಸಲು; ಆಗ ರಾವಣನು ಮಾಯೆಯಿಂದ ಆ ಜಟಾಯುವನ್ನು ಕೊಂದು, ತುಂಡಾಗಿ ಬಿದ್ದ ರಥವನ್ನೇ ತಿರಿಗಿ ಸರಿಯಾಗಿ ಜೋಡಿಸಿ ಕೊಂಡು, ಸೀತೆಯನ್ನು ಕೂರಿಸಿ ಕೊಂಡು, ಆಕಾಶ ಮಾರ್ಗದಲ್ಲಿ ಹೋಗುತ್ತಿರಲು; ರಾಮನನ್ನೂ ಲಕ್ಷ್ಮಣನನ್ನೂ ಬಾರಿ ಬಾರಿಗೂ ಹಂಬಲಿಸುತ್ತ, ದಿಕ್ಕು ದಿಕ್ಕುಗಳನ್ನು ನೋಡುತ್ತಾ, ಋಷ್ಯಮೂಕವೆಂಬ ಬೆಟ್ಟದ ತುದಿಯಲ್ಲಿ ನಳ, ನೀಲ, ಹನುಮಂತನೇ ಮೊದಲಾದ ಕಪಿಗಳೊಡನೆ ಕುಳಿತಿರುವ ಸುಗ್ರೀವನೆಂಬ ಕಪಿ ರಾಜನನ್ನು ನೋಡಿ, ತಾನು ಉಟ್ಟ ಶೀರೇ ಶೆರಗನ್ನು ಸ್ವಲ್ಪ ಹರಿದು, ಅದರಲ್ಲಿ ತಾನು ತೊಟ್ಟು ಇದ್ದ ಒಡವೆಗಳನ್ನು ಕಳೆದು, ತೆಗೆದು, ಗಂಟು ಕಟ್ಟಿ, ರಾಮ ತನ್ನನ್ನು ಹುಡುಕುತ್ತಾ ಬಂದರೆ, ಕೊಡುವರು ಎಂದು ಎಣಿಸಿ, ರಾವಣನು ಕಾಣದ ಹಾಗೆ ಅವರ ಬಳಿಗೆ ಎಸೆದಳು.

ರಾವಣನು—ಎಲ್ಲಿ ರಾಮನು ಹಿಂದೆ ಬರುವನೋ? ಎಂಬ ಭಯದಿಂದ ಹಿಂದ ಹಿಂದಕ್ಕೆ ನೋಡುತ್ತ, ತೇರನ್ನು ಬೇಗ ನಡಿಸುತ್ತ, ಕಡಲನ್ನು ದಾಟಿ, ಲಂಕಾ ಪಟ್ಟಣವನ್ನು ಶೇರಿ, ತನ್ನ ಅಂತಃಪುರದ ಅಶೋಕಾ ವನವೆಂಬ ತೋಟದಲ್ಲಿ, ಶಿಂಶುಪವೆಂಬ ಒಂದು ಮರದ ಕೆಳಗೆ ಸೀತೆಯನ್ನು ಇಟ್ಟು, ತ್ರಿಜಟೆ ಸರಮೆ ಮೊದಲಾದ ರಾಕ್ಷಸ ಸ್ತ್ರೀಯರುಗಳನ್ನು ಕಾವಲಿಟ್ಟು, ತನ್ನ ಕುಲ ಗೋತ್ರಗಳನ್ನೆಲ್ಲಾ ನಿರ್ಮೂಲ ಮಾಡುವ ಮೃತ್ಯುವನ್ನು ತನ್ನ ಮನೆಯಲ್ಲಿ ತಂದು ಇಟ್ಟು ಕೊಂಡೆನು ಎಂದು ತಿಳಿಯದೆ, ಉಬ್ರಮೆಯಿಂದ ತನ್ನ ತಂಗಿಯಾದ ಶೂರ್ಪನಖಿಯನ್ನು ಕರ ತರಿಸಿ, ಸೀತೆಯನ್ನು ತೋರಿಸಿ,—ಇಗೋ, ನೋಡು!

ನಿನ್ನ ಕಿವಿ ಮೂಗನ್ನು ಕೊಯಿದು ಮಾನ ಭಂಗಾ ಮಾಡಿಸಿದ್ದಕ್ಕೆ ಛಲದಿಂದ ಆ ರಾಮನ ಹೆಂಡತಿಯಾದ ಸೀತೆಯನ್ನು ತಂದು, ಸೆರೆಯಲ್ಲಿ ಇಟ್ಟದ್ದೇನೆ ಎಂದು ಹೇಳಿ, ಅಂತಃಪುರಕ್ಕೆ ಹೋಗಿ,—ನಾನು ಕೃತ ಕೃತ್ಯನಾದೆನು ಎಂದು ಸಂತೋಷದಿಂದಿದ್ದನು.

ಇತ್ತಲಾ ರಾಮನು, ಮಾಯಾ ಮೃಗ ರೂಪಿಯಾದ ಮಾರೀಚನೆಂಬ ರಾಚಿಸನು ಮೋಸದಿಂದ ತನ್ನ ಧ್ವನಿಯ ಹಾಗೆ ಮಾಡಿ ಕೊಂಡು—ಹಾ! ಸೀತೇ! ಲಕ್ಷ್ಮಣಾ! ಎಂದು ಕೂಗಿದ ಧ್ವನಿಯನ್ನು ಕೇಳಿ, ಸೀತೆಯು ಘಾಬರಿಯಾಗಿ, ಲಕ್ಷ್ಮಣನನ್ನು ಎಲ್ಲಿ ನನ್ನನ್ನು ನೋಡುವದಕ್ಕೆ ಕಳುಹಿಸುತ್ತಾಳೋ? ಆ ವೇಳೆಯಲ್ಲಿ ರಾಕ್ಷಸರು ಬಂದು, ಸೀತೆಯನ್ನು ಏನು ಮಾಡುತ್ತಾರೋ? ಎಂದು ಯೋಚಿಸುತ್ತ, ಬೇಗ ಬೇಗನೆ ತನ್ನಾಶ್ರಮವನ್ನು ಕುರಿತು ಬರುತ್ತಾ, ದಾರಿಯಲ್ಲಿ ಬರುವ ಲಕ್ಷ್ಮಣನನ್ನು ಕಂಡು—ಆಹಾ! ನಾನು ಯೋಚಿಸಿದಂತೆ ಆಯಿತು. ಸೀತೆ ಏನಾಗಿರುವಳೋ? ಎಂದು ಚಿಂತಾಕ್ರಾಂತನಾಗಿ, ಲಕ್ಷ್ಮಣನೊಡನೆ ಕೂಡಿ, ತನ್ನ ಪರ್ಣಶಾಲೆಗೆ ಬಂದು ನೋಡಿ, ಸೀತೆಯನ್ನು ಕಾಣದೆ, ಕಾಡಾನೆಯ ಸೊಂಡಿಲಿನಿಂದ ಮುರಿಯಲ್ಪಟ್ಟ ಸಾಲ ವೃಕ್ಷದ ಕೊಂಬಿನ ಹಾಗೆ ಭೂಮಿಯಲ್ಲಿ ಬಿದ್ದು, ಮೂರ್ಛಿತನಾಗಿ, ಲಕ್ಷ್ಮಣನು ಮಾಡಿದ ಶೈತ್ಯೋಪಚಾರದಿಂದ ಎಚ್ಚತ್ತು,—ಹಾ! ಪ್ರಿಯೇ! ಜಾನಕೀ! ಎಲ್ಲಿ ಹೋದೆ? ಏಕೆ ನನ್ನೊಡನೆ ಮಾತಾಡುವದಿಲ್ಲ? ಎಂದು ಹೇಳುತ್ತಾ, ಲಕ್ಷ್ಮಣನೇ, ನಾವು ರಾಕ್ಷಸರೊಡನೆ ಹಗೆತನವನ್ನು ಕಟ್ಟಿ ಕೊಂಡದರಿಂದ, ಅವರು ನಮ್ಮನ್ನು ಹೀಗೆ ಮೋಸಗೊಳಿಸಿ, ಸೀತೆಯನ್ನು ತಿಂದು ಬಿಟ್ಟರೋ? ಇಲ್ಲವೆ ಎತ್ತಿ ಕೊಂಡು ಹೋಗಿ, ತಮ್ಮ ಮನೆಗಳಲ್ಲಿ ಇಟ್ಟು ಕೊಂಡಿದ್ದಾರೋ? ಹಾಗೇನಾದರೂ ಆಗಿದ್ದರೆ, ಆ ರಾಕ್ಷಸರ ನಡುವೆ ಸಿಕ್ಕಿದ ನನ್ನ ವಲ್ಲಭೆಯು ಹುಲಿಗಳ ಮಧ್ಯದಲ್ಲಿ ಸಿಕ್ಕಿದ ಹೆಣ್ಣು ಹುಲ್ಲೆಯ ಹಾಗೆ ಪ್ರಾಣವನ್ನು ಬಿಡುವಳು. ಪ್ರಿಯಳಾದ ಸೀತೆಯನ್ನು ಕಾಣದೆ, ನಾನು ಒಂದು ನಿಮಿಷವಾದರೂ ಬದುಕಲಾರೆನು. ಎಲೈ, ಲಕ್ಷ್ಮಣನೇ, ಗೋದಾವರೀ ಹೊಳೆಗೆ ಏನಾದರೂ ನೀರಾಟಕ್ಕೆ ಹೋಗಿದ್ದಾಳೋ? ನೋಡೋಣ, ಬಾ ಎಂದು, ಅಲ್ಲಿಗೆ ಹೋಗಿ, ಹುಚ್ಚನ ಹಾಗೆ ಆ ನದಿಯಲ್ಲಿ ಇರುವ ತಾವರೆಯನ್ನು ಕುರಿತು—ಎಲೈ, ತಾವರೆಯೇ, ನಿನ್ನಂತೆ ಮುಖವುಳ್ಳ ನನ್ನ ಪ್ರಿಯಳಾದ ಸೀತೆಯನ್ನು ಕಾಣೆಯಾ? ಎಲೈ, ಬಿಳಿ ದಾವರೆಯೇ, ನಿನ ಬಣ್ಣದಂತಿರುವ ಮುಗುಳು ನಗೆಯುಳ್ಳ ನನ್ನ ಪ್ರಾಣ ಕಾಂತೆಯು ಎಲ್ಲಿ ಇರುವಳು? ಎಲೈ, ಹೊಂದಾವರೆಯೇ, ನಿನ್ನ ಕಾಂತಿಯಂತೆ ಮೈ ಕಾಂತಿಯುಳ್ಳ

ನನ್ನ ಮಡದಿಯನ್ನು ನೀನು ಎಲ್ಲಿಯಾದರೂ ಕಂಡಿದ್ದರೆ, ಹೇಳ ಬಾರದೇ? ಎಲೈ, ಕನ್ನೈದಿಲೆಯೇ, ನಿನ್ನ ಹಾಗೆ ಕಣ್ಣುಳ್ಳ ಕಾಂತೆಯನ್ನು ಕಂಡು ಇದ್ದೀಯಾ? ಓ ಭೃಂಗವೇ, ನಿನ್ನ ಹಾಗೆ ಮುಂಗುರುಳುಳ್ಳ ನನ್ನ ಮಾನಿನಿಯು ಎಲ್ಲಿ ಮರಸಿ ಕೊಂಡಿರುವಳು? ಸ್ವಲ್ಪ ತೋರಿಸು. ಎಲೈ, ಮೀನೇ, ನಿನ್ನಂತೆ ನನ ನಾರಿಯು ನೀರಿನಲ್ಲೇನಾದರೂ ಮುಳುಗಿರುವಳೋ? ಓ ಚಕ್ರವಾಕ ಪಕ್ಷಿಯೇ, ರಾತ್ರಿಯಲ್ಲಿ ನೀನು ನಿನ್ನ ಹೆಂಡತಿಯನ್ನು ಕಾಣದೆ ದುಃಖ ಪಡುವ ಹಾಗೆ, ನಾನೂ ದುಃಖ ಪಡುವೆನು. ಆದ್ದರಿಂದ ನನ್ನ ಮೇಲೆ ಕನಿಕರವಿಟ್ಟು, ನನ್ನ ಮೋಹದ ಪ್ರಿಯಳನ್ನು ತೋರಿಸಲೊಲ್ಲೆಯಾ? ಎಂದು ಪ್ರಲಾಪಿಸುತ್ತ, ಅಲ್ಲಿಂದ ಹೊರಟು, ಕಾಡಿನಲ್ಲಿ ಹುಡುಕುತ್ತ, ಕಂಡ ಕಂಡ ಮರಗಳ ಬಳಿಗೂ, ಮೃಗ ಪಕ್ಷಿಗಳ ಬಳಿಗೂ, ಓಡಿ ಓಡಿ ಹೋಗಿ,—ನನ್ನ ಹೆಂಡತಿಯಾದ ಪ್ರಿಯಾಂಗನೆಯನ್ನು ಕಾಣಿರೇ? ಎಂದು ಕೇಳುತ್ತ,—ಎಲೈ, ಸಿಂಹವೇ, ನಿನ್ನ ಸೊಂಟದಂತೆ ಸೊಂಟವುಳ್ಳ ನನ್ನ ಸುದತಿಯನ್ನು ನಿನ್ನ ಗುಹೆಯಲ್ಲಿ ಇಟ್ಟು ಕೊಂಡಿರುವೆಯೋ? ಎಲೈ, ಜಿಂಕೆಗಳಿರಾ, ನಿಮ್ಮ ಕಣ್ಣುಗಳಂತೆ ಕಪ್ಪಾದ ಕಣ್ಣುಳ್ಳ ನನ್ನ ಕಾಮಿನಿಯು ನಿಮ್ಮ ಇಕ್ಕೆಯಲ್ಲಿ ಇರುವಳೋ? ಎಲೈ, ಆನೆಯೇ, ನಿನ್ನ ಸೊಂಡಿಲಿನ ಹಾಗಿರುವ ತೊಡೆಯುಳ್ಳ ತರುಣಿಯು ಎಲ್ಲಿ ಇರುವಳು? ಎಲೈ, ಹಂಸವೇ, ನಿನ್ನ ನಡೆಯಂತೆ ನಡೆಯುಳ್ಳ ನನ್ನ ಮೋಹನಾಂಗನೆಯನ್ನು ತೋರಿಸ ಬಾರದೇ? ಎಲೇ, ಕೋಕಿಲೆಯೇ, ಕೋಕಿಲ ಧ್ವನಿಯಾದ ಕಾಂತೆಯನ್ನು ಕಾಣೆಯಾ? ಎಲೈ, ಗಿಣಿಯೇ, ನಿನ್ನಂತೆ ಸೊಲ್ಲುಳ್ಳ ನನ್ನ ಪ್ರಾಣವಲ್ಲಭೆ ಎಲ್ಲಿ ಹೋದಳು? ನಿನಗೆ ಕರುಣವಿಲ್ಲವೇ? ಸ್ವಲ್ಪ ಕಾಣಿಸು, ಎಂದು ಪ್ರಲಾಪಿಸುತ್ತ, ಅನ್ನ ನೀರಿಲ್ಲದೆ ಬಳ್ಳಿಗಳ ಪೊದರುಗಳಲ್ಲಿಯೂ, ಮರಗಳ ಪೊಟರೆಗಳಲ್ಲಿಯೂ, ಗಿರಿಗಳ ಗುಹೆಗಳಲ್ಲಿಯೂ, ಕೊಳಗಳ ಧಡಗಳಲ್ಲಿಯೂ, ಹೊಳೆಗಳ ಗುತ್ತಿಗಳಲ್ಲಿಯೂ, ಹುಡುಕುತ್ತ, ಹಶಿವಿನಿಂದಲೂ ಬಾಯಾರಿಕೆಯಿಂದಲೂ, ಕಂಗೆಟ್ಟು, ಕಳವಳಗೊಂಡು, ಬರುತ್ತಿರುವಲ್ಲಿ, ಹಿಂದೆ ಬರುವ ಲಕ್ಷ್ಮಣನನ್ನು ನೋಡಿ,—ಎಲೈ, ಲಕ್ಷ್ಮಣನೇ, ಬೇಗ ಬಿಲ್ಲು ಬಾಣಗಳನ್ನು ಕೊಡು. ಇಗೋ, ಇಲ್ಲಿ ಬಿದ್ದಿರುವ ರಾಕ್ಷಸನು ನನ್ನ ಹೆಂಡತಿಯಾದ ಸೀತೆಯನ್ನು ತಿಂದಿರುವನು ಎಂದು ಹೇಳುವ ರಾಮನ ಮಾತನ್ನು ಕೇಳಿ, ಕುಟುಕು ಜೀವದಿಂದ ಕೂಡಿಕೊಂಡಿರುವ ಜಟಾಯು ಪಕ್ಷಿಯು ರಾಮನನ್ನು ಕುರಿತು—ಎಲೈ, ರಾಮನೇ, ನಾನು ನಿನ್ನ ಮಡದಿಯನ್ನು ತಿಂದ ರಾಕ್ಷಸನಲ್ಲ. ಲವಣ ಸಮುದ್ರದಲ್ಲಿ ತ್ರಿಕೂಟಾಚಲವೆಂಬ ಪರ್ವತದ ಶಿಖರದಲ್ಲಿ ಇರುವ ಲಂಕೆ ಎಂಬ ಪಟ್ಟಣಕ್ಕೆ

ಧೊರೆಯಾದ ದುರುಳ ದಶಕಂಠನೆಂಬವನು ನನ್ನ ಪ್ರಾಣವನ್ನೂ ನಿನ್ನ ಪ್ರಾಣ ವಲ್ಲಭೆಯನ್ನೂ ಕೊಂಡು ಹೋದನು ಎಂದು, ಪ್ರಾಣ ಬಿಟ್ಟನು.

ಆಗ ರಾಮನು, ತನ್ನ ತಂದೆ ದಶರಥನ ಸ್ನೇಹಿತನಾದ ಜಟಾಯುವು ಸೀತೆಗೆ ಸಹಾಯವನ್ನು ಮಾಡಿ, ದಶಕಂಧರನಿಂದ ಪೆಟ್ಟು ತಿಂದು ಸತ್ತನು ಎಂದು ತಿಳಿದು, ಆ ಪಕ್ಷಿಯ ಹೆಣದ ಮೇಲೆ ಬಿದ್ದು, ಹೊರಳ್ಯಾಡುತ್ತ,—ಎಲೈ, ತಮ್ಮಾ, ಲಕ್ಷ್ಮಣನೇ, ನನಗೆ ಆಪತ್ತಿನ ಮೇಲೆ ಆಪತ್ತು ಬರುವದನ್ನು ನೋಡಿದೆಯಾ? ರಾಜ್ಯವನ್ನು ಕಳೆದು ಕೊಂಡು, ತಾಯಿ ತಮ್ಮಂದಿರನ್ನು ತೊರೆದು, ವನದಲ್ಲಿ ವಾಸಾ ಮಾಡಿ, ನಾರಿಯನ್ನು ನೀಗಲಾಡಿ ಕೊಂಡು, ಪ್ರಿಯನಾದ ಜಟಾಯುವನ್ನು ಹೋಗಲಾಡಿಸಿ ಕೊಂಡ ನನ್ನ ದುಃಖವೆಂಬ ಬೆಂಕಿಯು ಪ್ರತ್ಯಕ್ಷವಾದ ಬೆಂಕಿಯನ್ನು ಕೂಡ ಸುಡುವದು. ನಾನು ಏನು ಮಾಡಲಿ? ಎಲ್ಲಿಗೆ ಹೋಗಲಿ? ಯಾರನ್ನು ಶೇರಲಿ? ಯಾರ ಸಂಗಡ ಹೇಳಿ ಕೊಳ್ಳಲಿ? ಅನಾಥನಾದ ನನಗೆ ಗತಿ ಯಾರು? ಈ ಹಕ್ಕಿಯ ಸಂಗಡಲೇ ನಾನೂ ಪ್ರಾಣವನ್ನು ಬಿಟ್ಟು, ಯಮಲೋಕಕ್ಕೆ ಹೋಗುವೆನು. ನೀನು ಅಯೋಧ್ಯೆಗೆ ಹಿಂತಿರುಗಿ ಹೋಗಿ, ಈ ನನ್ನ ಅವಸ್ಥೆಯನ್ನು ತಾಯಿ ಭರತ ಮುಂತಾದವರಿಗೆಲ್ಲಾ ತಿಳಿಸು ಎಂದು ಹೇಳುತ್ತ, ದುಃಖದ ಕಡಲಿನಲ್ಲಿ ಮುಳುಗಿ, ಧಡವನ್ನು ಕಾಣದೆ, ತಿರಿಗಿ ಲಕ್ಷ್ಮಣನನ್ನು ಕುರಿತು—ದುಷ್ಟನಾದ ರಾವಣನು ನನ್ನ ಹೆಂಡತಿಯನ್ನು ಅಪಹರಿಸಿ ಕೊಂಡು, ನನಗೆ ಸಹಾಯವನ್ನು ಮಾಡಿದ ಈ ಪಕ್ಷಿಯನ್ನು ಕೊಂದು, ಎಲ್ಲಿ ಹೋಗಿ ಅಡಗಿ ಕೊಂಡಿದ್ಧಾನೋ? ಒಳ್ಳೇದು? ನನ್ನ ಧನುರ್ಬಾಣವನ್ನು ಕೊಡು ಎಂದು ತೆಗೆದು ಕೊಂಡು,—ಹದಿನಾಲ್ಕು ಲೋಕವನ್ನು ಸುಟ್ಟು, ಬೂದೀ ಮಾಡುವೆನು. ಹಾಗೆ ಮಾಡಿದರೆ, ಈ ರಾವಣನು ಎಲ್ಲಿ ಇದ್ದರೂ ಸತ್ತು ಹೋಗುವನು ಎಂದು, ಪ್ರಳಯ ಕಾಲದ ರುದ್ರನ ರೂಪವನ್ನು ಧರಿಸಿ ಕೊಳ್ಳಲು; ಲಕ್ಷ್ಮಣನು ನೋಡಿ, ಕೈ ಮುಗಿದು ಕೊಂಡು,—ಸ್ವಾಮೀ, ರಾಮಚಂದ್ರನೇ, ನೀನು ಮೊದಲು ಸಕಲ ಪ್ರಾಣಿಗಳಿಗೂ ಹಿತನಾಗಿದ್ದು, ಈಗ ಅಪರಾಧ ಮಾಡಿದ ಒಬ್ಬನಿಗೋಸ್ಕರ ಸಕಲ ಲೋಕವನ್ನು ಸುಡುವದು ಯುಕ್ತವಲ್ಲ. ಸಮಾಧಾನವನ್ನು ಮಾಡಿ ಕೊಳ್ಳ ಬೇಕು. ಅಪರಾಧಿಯಾದ ರಾವಣನು ತನ್ನ ತಾಯಿಯ ಹೊಟ್ಟೆಯಲ್ಲಿ ಅಡಗಿ ಕೊಂಡಿದ್ದಾಗ್ಯೂ, ಹುಡುಕಿ, ಹಿಡಿದು, ಕೊಲ್ಲುವ ಎಂದು, ಬಹು ತರವಾಗಿ ಸಮದಾಯಿಸಲು; ಆಗ ರಾಮನು ತಾಳ್ಮೆಯನ್ನು ಧರಿಸಿ, ಆ ಜಟಾಯು ಪಕ್ಷಿಗೆ ಅಪರ ಕೃತ್ಯಗಳನ್ನು ಮಾಡಿ, ಬ್ರಹ್ಮಲೋಕದಲ್ಲಿ ಇರುವಂತೆ ವರವನ್ನು ಕೊಟ್ಟು, ಅಲ್ಲಿಂದ ಹೊರಟು, ಸೀತೆಯನ್ನು

ಹುಡುಕುತ್ತ, ಕ್ರೌಂಚಾರಣ್ಯವನ್ನು ಪ್ರವೇಶಿಸಿ ಬರುವಲ್ಲಿ, ವಿಕಾರವಾದ ರೂಪೂ, ಘೋರವಾದ ಮುಖವೂ, ಜೋಲುತ್ತಲಿರುವ ಹೊಟ್ಟೆಯೂ, ಕ್ರೂರವಾದ ಕೋರೆ ದಾಡೆಗಳೂ ಉಳ್ಳ ಅಯೋಮುಖಿ ಎಂಬ ರಾಕ್ಷಸಿಯು ಲಕ್ಷ್ಮಣನನ್ನು ಹಿಡು ಕೊಂಡು, ತಿನ್ನುವದಕ್ಕೆ ಬರುತ್ತಿರಲು; ಲಕ್ಷ್ಮಣನು ಆಕೆಯನ್ನು ಶೂರ್ಪನಖಿಗೆ ಸರಿಯಾದವಳನ್ನಾಗಿ ಮಾಡಿದನು.

ಅಲ್ಲಿಂದ ಮುಂದಕ್ಕೆ ಬರುತ್ತಿರುವಲ್ಲಿ, ಯೋಜನ ಬಾಹುವಾದ ಕಬಂಧನೆಂಬ ರಾಕ್ಷಸನ ಬಾಹುಗಳೊಳಗೆ ಸಿಕ್ಕಿ, ರಾಮ ಲಕ್ಷ್ಮಣರಿಬ್ಬರು ತಮ್ಮ ಕೈ ಕತ್ತಿಗಳಿಂದ ಆತನ ತೋಳುಗಳನ್ನು ಕಡಿದು, ಆತನನ್ನು ಭೂಮಿಯಲ್ಲಿ ಹೂಳಿದ್ದರಿಂದ, ಆತನಿಗೆ ಸ್ಥೂಲಶಿರನೆಂಬ ಮುನಿಯಿಂದ ಬಂದ ಶಾಪವು ವಿಮೋಚನವಾಗಿ, ತನ್ನ ಪೂರ್ವದ ಗಂಧರ್ವ ರೂಪವನ್ನು ಧರಿಸಿ, ದಿವ್ಯವಾದ ವಿಮಾನದ ಮೇಲೆ ಕುಳಿತು ಕೊಂಡು, ರಾಮನನ್ನು ಕುರಿತು—ಎಲೈ, ರಾಮಚಂದ್ರನೇ, ನಾನು ದನುವೆಂಬ ಗಂಧರ್ವನು. ಸ್ಥೂಲಶಿರನೆಂಬ ಋಷಿಯ ಶಾಪದಿಂದ ನನಗೆ ರಾಕ್ಷಸ ಜನ್ಮವು ಉಂಟಾಗಿತ್ತು. ನಿನ್ನ ದಯದಿಂದ ಪರಿಹರವಾಯಿತು. ನಾನು ನನ್ನ ಲೋಕಕ್ಕೆ ಹೋಗುವೆನು. ನೀವು ಪಂಪೆ ಎಂಬ ದಿವ್ಯ ಸರಸ್ಸಿನ ಬಳಿಯಲ್ಲಿ ಇರುವ ಋಷ್ಯಮೂಕವೆಂಬ ಗಿರಿಯಲ್ಲಿ ವಾಸಿಸುವ ಸೂರ್ಯನ ಮಗನಾದ ಸುಗ್ರೀವನ ಸಖ್ಯವನ್ನು ಮಾಡಿ ಕೊಂಡರೆ, ಆತನು ನಿನಗೆ ರಾವಣ ಸಂಹಾರಕ್ಕೂ ಸೀತಾ ಪ್ರಾಪ್ತಿಗೂ ಸಹಾಯವನ್ನು ಮಾಡುವನು ಎಂದು ಹೇಳಿ, ಸ್ವರ್ಗಕ್ಕೆ ಸಾಗಿ ಹೋದನು.

ತರುವಾಯ ರಾಮ ಲಕ್ಷ್ಮಣರು ಪಂಪಾ ವನದಲ್ಲಿ ಬರುತ್ತ, ಶಬರಿ ಎಂಬ ಕಿರಾತ ಸ್ತ್ರೀಯ ಆಶ್ರಮವನ್ನು ಹೊಕ್ಕು, ಆಕೆ ಮಾಡಿದ ಪೂಜೆಯನ್ನು ಕೈಕೊಂಡು, ಪಂಪಾ ತೀರಕ್ಕೆ ಬಂದರು. ರಾಮನು ಲಕ್ಷ್ಮಣನನ್ನು ಕುರಿತು—ಎಲೈ, ತಮ್ಮನೇ, ನೋಡು! ಇದು ಮತಂಗ ಋಷಿಯ ಆಶ್ರಮವು. ಆ ಋಷಿಯ ಮಹತ್ವದ್ದೆಶೆಯಿಂದ ಇಲ್ಲಿರುವ ಮೃಗ ಪಕ್ಷಿಗಳು ಪರಸ್ಪರ ವೈರವನ್ನು ಬಿಟ್ಟು, ಉಪಕಾರಿಗಳಾಗಿರುವವು. ಹೆಣ್ಣು ನವಿಲುಗಳು ಹಾವಿನ ಮರಿಗಳಗೆ ಮೊಲೆಗಳನ್ನು ಊಡಿಸುವವು. ಸಿಂಹಗಳು ಆನೆಗಳ ಮರಿಗೆ ಸಲ್ಲಕೀ ಮರಗಳ ಕೊನೆಗಳನ್ನು ತಿನ್ನಿಸುವವು. ಹಸುಗಳ ಮೊಲೆಯನ್ನು ಹುಲಿಯ ಮರಿಗಳು ಉಣ್ಣುವವು. ಹುಲ್ಲೆಗಳ ಮರಿಗಳನ್ನು ಶಿವಂಗಿಗಳು ಆಡಿಸುತ್ತಿರುವವು. ಇಗೋ, ಇದೇ ಋಷ್ಯಮೂಕ ಗಿರಿಯು. ಇಲ್ಲಿ ನಮಗೆ ಸಹಾಯನಾಗ ತಕ್ಕ ಕಪಿ ರಾಜನಾದ ಸುಗ್ರೀವನು ಇರುವನು. ಇಗೋ, ಇದೇ ಪಂಪಾ ಸರಸ್ಸು.

ಈ ಸರಸ್ಸು ಹಾವಸೆಗಳೆಂಬ ಕೂದಲುಗಳಿಂದಲೂ, ತಾವರೆ ಎಂಬ ಮುಖದಿಂದಲೂ, ಮೀನುಗಳೆಂಬ ಕಣ್ಣುಗಳಿಂದಲೂ, ಧಡದಲ್ಲಿರುವ ಮಾವಿನ ಮರದ ಚಿಗುರುಗಳೆಂಬ ಚಂದ್ರಗಾವೀ ವಸ್ತ್ರದಿಂದಲೂ, ಸಂಪಿಗೇ ಹೂವೆಂಬ ಮೂಗಿನಿಂದಲೂ, ಶೆಲೆ ಎಂಬ ಸೊಂಟದಿಂದಲೂ, ಕುಮುದ ಪುಷ್ಪವೆಂಬ ಮುಗುಳು ನಗೆಯಿಂದಲೂ, ಕುಂದವೆಂಬ ಹಲ್ಲುಗಳಿಂದಲೂ, ನಿರ್ಮಲೋದಕವೆಂಬ ಲಾವಣ್ಯದಿಂದಲೂ ಕೂಡಿ, ರಮಣೀಯವಾಗಿರುವದು ಎಂದು ಹೇಳುತ್ತ, ಸೀತಾ ವಿಯೋಗದಿಂದ ಬಾರಿ ಬಾರಿಗೂ ಸೀತೆಯನ್ನು ಹಂಬಲಿಸುತ್ತ, ಅರ್ಧ ರಾತ್ರಿಯಲ್ಲಿ ಉದಿಸಿದ ಚಂದ್ರನನ್ನು ನೋಡಿ, ಲಕ್ಷ್ಮಣನನ್ನು ಕುರಿತು—ಎಲೈ, ತಮ್ಮನೇ, ಬೇಗ ಏಳು! ಒಂದು ಮರದ ನೆಳಲನ್ನು ಶೇರಿ ಕೊಳ್ಳುವ; ಸೂರ್ಯನು ತೀಕ್ಷ್ಣವಾಗಿ ಕಿರಣಗಳಿಂದ ಸುಡುತ್ತಿರುವನು, ಎನಲು; ಲಕ್ಷ್ಮಣನು—ಎಲೈ, ಅಣ್ಣನೇ, ಅರ್ಧ ರಾತ್ರಿಯಲ್ಲಿ ಸೂರ್ಯ ಎಲ್ಲಿರುವನು? ಚಂದ್ರನು ಉದಿಸಿರುವನು, ಎನಲು; ರಾಮನು—ಇವನು ಚಂದ್ರನೆಂದು ನಿನಗೆ ಹ್ಯಾಗೆ ತಿಳಿಯಿತು? ಎಂದು ಕೇಳಿದ್ದಕ್ಕೆ, ಲಕ್ಷ್ಮಣನು—ಅಗೋ, ನಡುವೆ ಕುರಂಗವನ್ನು ಧರಿಸಿ ಕೊಂಡಿದ್ದಾನೆ; ನೋಡು, ಅಂದನು. ಆಗ ರಾಮನು ಕುರಂಗ ಎಂಬ ಮಾತನ್ನು ಕೇಳಿ,—ಎಲೈ, ಕುರಂಗಾಕ್ಷಿಯೇ, ಚಂದ್ರಮುಖಿಯೇ, ಎಲ್ಲಿ ಇರುವೆ? ಎಂದು, ಸೀತೆಯನ್ನು ನೆನಸಿ ಕೊಂಡು, ಮೂರ್ಛೆ ಹೋದನು.

ಆಗ ಲಕ್ಷ್ಮಣನು ಶೈತ್ಯೋಪಚಾರವನ್ನು ಮಾಡಿ, ಎಬ್ಬರಿಸಿ, ತನ್ನ ಎದೆಗೆ ಒರಗಿಸಿ ಕೊಂಡು,—ಎಲೈ, ಅಗ್ರಜನೇ, ನೀನು ಮಹಾ ಧೈರ್ಯಶಾಲಿಯು. ಹೀಗೆ ಧೈರ್ಯವನ್ನು ಬಿಟ್ಟು, ದುಖ್ಖ ಪಡ ಬಾರದು. ದುಖ್ಖಕ್ಕಿಂತ ಮನುಷ್ಯರಿಗೆ ಬೇರೆ ಹಗೆ ಇಲ್ಲ. ದುಖ್ಖವು ಉತ್ಸಾಹವನ್ನು ಕೆಡಿಸುವದು; ಧೈರ್ಯವನ್ನು ನೀರ ಪಾಲ ಮಾಡುವದು; ಬುದ್ಧಿಯನ್ನು ಹೋಗಲಾಡಿಸುವದು; ಶಕ್ತಿಯನ್ನು ಕುಂದಿಸುವದು; ಕಾಂತಿಯನ್ನು ಕಂದಿಸುವದು. ಆದ್ದರಿಂದ ಶೋಕವನ್ನು ಬಿಟ್ಟು, ಸುಗ್ರೀವನ ಸಹಾಯವನ್ನು ಮಾಡಿ ಕೊಂಡು, ಸೀತೆಯನ್ನು ಕದ್ದು ಕೊಂಡು ಹೋದ ರಾವಣನನ್ನು ಸಂಹರಿಸುವ ಉದ್ಯೋಗವನ್ನು ಮಾಡು ಎಂದು, ಲಕ್ಷ್ಮಣನು ಹೇಳಿದ ಮಾತಿನಿಂದ ಧೈರ್ಯವನ್ನು ತಾಳಿ, ರಾಮನು ಪಂಪಾ ತೀರದಲ್ಲಿ ಸುಖದಿಂದ ಇದ್ದನು.

68. Rama obtains the help of Sugriva, the Monkey King.

೬೮. ಸುಗ್ರೀವ ಸಖ್ಯದ ಕಥೆ.

ಪಂಪಾ ತೀರದಲ್ಲಿ ಸುಗ್ರೀವನ ಸ್ನೇಹವನ್ನು ಬಯಸಿ ಇರುವ ರಾಮನು

ಲಕ್ಷ್ಮಣನನ್ನು ನೋಡಿ–ಎಲೈ, ತಮ್ಮನೇ, ಈ ಉದ್ಯಾನ ವನ ಲಕ್ಷ್ಮಿಯು ವಸಂತ ಋತುವೆಂಬ ಪತಿಯನ್ನು ಆಲಿಂಗಿಸಿ ಕೊಂಡಿರುವ ಹಾಗೆ ಕಾಣುತ್ತಾಳೆ. ಇಗೋ, ಈ ವಸಂತನೆಂಬ ರಾಜನು ಸತ್ಪುರುಷರ ನದೀ ಸ್ನಾನಗಳಿಗೆ ವಿರೋಧವನ್ನು ಮಾಡುತ್ತ, ಲಕ್ಷ್ಮಿಗೆ ಮನೆಯಾದ ತಾವರೆಗಳ ಅಂದವನ್ನು ಕೆಡಿಸುತ್ತ, ಲೋಕೋಪಕಾರಿಯಾದ ಸೂರ್ಯನ ಕಾಂತಿಯನ್ನು ಕುಂದಿಸಿ, ಹಾಸಿಗೆ ಹೊದಿಕೆ ಇಲ್ಲದೆ ಬಡವರಾಗಿರುವವರನ್ನು ತನ್ನ ಛಳಿಯಿಂದ ಕ್ಲೇಶ ಪಡಿಸುತ್ತ, ಮಾರ್ಗಸ್ಥರ ಶ್ರಮಗಳನ್ನು ತಮ್ಮ ನೆಳಲುಗಳಿಂದ ಹೋಗಲಾಡಿಸುವ ಮರಗಳ ಎಲೆಗಳನ್ನು ಉದುರಿಸಿ, ಬರಲು ಮಾಡುತ್ತ, ಲೋಕಕಂಟಕನಾಗಿರುವ ಹಿಮಂತ ಋತುವೆಂಬ ಅರಸನ್ನು ಗೆದ್ದು, ವನ ರಾಜ್ಯದಲ್ಲಿ ಪಟ್ಟಾಭಿಷಿಕ್ತನಾದನೋ? ಎಂಬ ಹಾಗೆ ಇರುವನು. ಇಗೋ, ಮಲ್ಲಿಗೆಯ ಹೂವಿನಲ್ಲಿ ಮಕರಂದ ರಸವನ್ನು ಕುಡಿದು, ಮದಿಸಿದ ತುಂಬಿಗಳು, ಲೋಕವನ್ನು ಜೈಸುವದಕ್ಕೆ ಹೊರಡುವ ಮನ್ಮಥನ ಪ್ರಯಾಣ ಶಂಖ ಧ್ವನಿಯೋ? ಎಂಬಂತೆ ಝೇಂಕಾರವನ್ನು ಮಾಡುತ್ತಿರುವವು. ಕಾಗೆಗಳ ಗೂಡುಗಳಲ್ಲಿ ಕೋಗಿಲೆಯ ಮರಿಗಳು–ಸಮಯ ಬರುವ ವರಿಗೂ ತಮ್ಮ ಗುಟ್ಟನ್ನು ತೋರಿಸದೆ, ಸಮಯ ಬಂದಾಗ, ಪ್ರಕಾಶವಾಗುವ ಕಾರ್ಯ ಸಾಧಕರಾದ ನಿಯೋಗಿ ಪುರುಷರಂತೆ–ತಮಗೆ ಗರಿಗಳು ಬಂದು, ಹಾರುವದಕ್ಕೆ ಶಕ್ತಿ ಬರುವ ವರಿಗೂ ಕೂಗದೆ, ಇದ್ದು ಕೊಂಡಿದ್ದು, ಈ ವಸಂತ ಕಾಲ ಬರುವದು, ಹಾರಿ ಬಂದು, ಮಾವಿನ ಎಲೆ ಚಿಗುರುಗಳನ್ನು ತಿಂದು, ಕೇಳುವವರ ಕಿವಿಗೆ ಸಂತೋಷಕರವಾಗಿ ತಮ್ಮ ಪಂಚಮ ಸ್ವರವನ್ನು ಮಾಡುತ್ತಿರುವವು. ಮಾವಿನ ಮರಗಳು ಎಂಬ ಮೇಘಗಳು ಎಳೆ ತಳಿರೆಂಬ ಮಿಂಚುಗಳಿಂದ ಕೂಡಿ, ಹೂವುಗಳೆಂಬ ಆನೆ ಕಲ್ಲುಗಳನ್ನು ಸುರಿಸುತ್ತ, ಮಕರಂಧ ರಸಗಳೆಂಬ ಮಳೆಗಳನ್ನು ಕರೆಯುತ್ತಿರುವವು. ಅಶೋಕ ವೃಕ್ಷಗಳು ಎಡೆ ಬಿಡದೆ ತುಂಬಿರುವ ಪುಷ್ಪಗಳಿಂದ ಮನ್ಮಥನ ವಿಜಯ ಪ್ರಯಾಣದ ಕೆಂಪು ಬಟ್ಟೆಯ ಗುಡಾರವೋ? ಎಂಬಂತೆ ಪ್ರಕಾಶಿಸುತ್ತವೆ. ನೇರಿಲು ಮರದಲ್ಲಿ ಹಣ್ಣುಗಳನ್ನು ತಿನ್ನುವದಕ್ಕೆ ಬಂದು ಕುಳಿತಿರುವ ಗಿಣಿಗಳ ಕೊಕ್ಕನ್ನು ಮುತ್ತುಗದ ಹೂವುಗಳೆಂದು ಭ್ರಾಂತಿಯಿಂದ ಅವುಗಳ ಮೇಲೆ ಆರಡಿಗಳು ಬೀಳುತ್ತಿರಲು; ಅವುಗಳನ್ನು ಗಿಣಿಗಳು ನೇರಿಲು ಹಣ್ಣು ಎಂಬ ಬುದ್ಧಿಯಿಂದ ತಮ್ಮ ತಮ್ಮ ಕೊಕ್ಕುಗಳಿಂದ ಕುಟುಕುತ್ತಿರುವವು. ಬಾಯಿಯಲ್ಲಿ ಹೇಳದೆ, ಕೆಲಸದಲ್ಲಿ ಉಪಕಾರವನ್ನು ಮಾಡಿ ತೋರಿಸುವ ಸತ್ಪುರುಷರಂತೆ, ಹೂವುಗಳನ್ನು ಕಾಣಿಸದೆ,

ಬುಡದಿಂದ ತುದಿಯು ವರಿಗೂ ಹಣ್ಣಾಗಿ ಬಿರಿದು, ಮಕರಂದ ರಸವನ್ನು ಸುರಿಸುವ ಫಲಗಳಿಂದ ದಾರಿಕಾರರ ಹಸಿವನ್ನು ಇಂಗಿಸುವ ಹಲಸಿನ ಮರಗಳು ವಿರಾಜಿಸುತ್ತಿರುವವು. ಕೆಂದೆಂಗಿನ ಮರಗಳು ಹೊಂಬಾಳೆಗಳಿಂದಲೂ, ಹರಳುಗಳಿಂದಲೂ, ಕುರುಬೆಗಳಿಂದಲೂ, ಎಳೆ ನೀರುಗಳಿಂದಲೂ, ಮೋತೆ ಗಾಯಿಗಳಿಂದಲೂ, ತಳಲುಗಳಿಂದಲೂ ಕೂಡಿ, ಸ್ವರ್ಗ ಲೋಕದಲ್ಲಿ ನಂದನ ವನದಲ್ಲಿರುವ ಕಲ್ಪ ವೃಕ್ಷಗಳಿಗೆ ತಮ್ಮ ಹೆಮ್ಮೆಯನ್ನು ತೋರಿಸುವದಕ್ಕೆ ಹೋಗುತ್ತವೋ? ಎಂಬ ಹಾಗೆ, ಬಹು ಉದ್ದವಾಗಿ ಬೆಳೆದು ಇರುವವು. ಕೊಳಗಳು ತಾವರೆ, ಕನ್ನೈದಿಲೆ, ಕುಮುದ, ಕಲ್ಹಾರ, ಮೊದಲಾದ ಹೂವುಗಳ ಮಕರಂದ ರಸಗಳಿಂದಲೇ ತುಂಬಿ, ಎರಡಷ್ಟಾದ ನೀರುಗಳಿಂದ ಕೂಡಿರುವವು. ಹಂಸ ಪಕ್ಷಿಗಳು ಮಾನಸ ಸರಸ್ಸನ್ನು ಬಿಟ್ಟು, ಪುಷ್ಪ ಸಮೃದ್ಧಿಯಿಂದ ಮೆರೆಯುತ್ತಲಿರುವ ಪದ್ಮಾಕರಗಳನ್ನು—ಬಡವರಾದ ಅರಸುಗಳನ್ನು ಬಿಟ್ಟು, ಐಶ್ವರ್ಯವಂತರಾದ ಅರಸುಗಳನ್ನು ಸೇರುವ ಸೇವಕರಂತೆ ಶೇರುತ್ತಿರುವವು. ತೆಂಕಣ ಘಾಳಿಯು ಕೊಳಗಳಲ್ಲಿ ಮುಳುಗಿ, ತಾವರೇ ಹೂವುಗಳ ಧೂಳುಗಳೆಂಬ ಗಂಧವನ್ನು ತೊಡೆದು ಕೊಂಡು, ಸಂಪಿಗೇ ಹೂವುಗಳೆಂಬ ಕೆಂಡಗಳನ್ನು ತುಳಿದು, ಸಂಗಡ ಬರುವ ತುಂಬಿಗಳ ಝೇಂಕಾರದಿಂದ ಬೊಬ್ಬೆ ಇಡುತ್ತ, ವನ ದೇವತೆಯ ಮುಂದೆ ತೂಳ ಬಂದವನ ಹಾಗೆ ತಿರುಗುತ್ತಿರುವದು. ಇಂಥ ವಸಂತ ಕಾಲದಲ್ಲಿ ನನ್ನನ್ನು ಬಿಟ್ಟು ಸೀತೆಯೂ, ಸೀತೆಯನ್ನು ಬಿಟ್ಟು ನಾನೂ, ದುಃಖ ಪಡುತ್ತಿರುವೆವು. ಕಾಲ ಗತಿಯನ್ನು ಯಾರು ಮೀರುವರು? ಎಂದು, ಬಿಸುಸುಯ್ಯುತ್ತಿರಲು;—

ಅವರ ಬಳಿಗೆ ಸುಗ್ರೀವನು ಕಳುಹಿಸಿದ ಹನುಮಂತನು ಸನ್ಯಾಸಿಯ ವೇಷವನ್ನು ಧರಿಸಿ ಬಂದು, ರಾಮ ಲಕ್ಷ್ಮಣರಿಗೆ ನಮಸ್ಕಾರವನ್ನು ಮಾಡಿ,—ನೀವ್ಯಾರು? ಮನುಷ್ಯ ರೂಪುಗಳನ್ನು ಧರಿಸಿದ ಮನ್ಮಥ ವಸಂತರೋ? ಜಯಂತ ನಳಕೂಬರರೋ? ಅಶ್ವಿನೀ ದೇವತೆಗಳೋ? ರಾಜ ಕುಮಾರರೋ? ಮುನಿ ಪುತ್ರರೋ? ನಿಮ್ಮನ್ನು ನೋಡುವಲ್ಲಿ, ಹೀಗೆ ಎಂದು ನಿಶ್ಚೈಸುವದಕ್ಕಾಗುವದಿಲ್ಲ. ಯಾಕಂದರೆ, ನಿಮ್ಮ ಸೊಂಟದಲ್ಲಿ ಹೆರೆಯನ್ನು ಕಳೆದ ಹಾವುಗಳಂತೆ, ಒರೆಯನ್ನು ಕಳೆದ ಕತ್ತಿಗಳಿರುವವು. ನಿಮ್ಮ ಕೈಗಳಲ್ಲಿ ಇಂದ್ರ ಧನುಸ್ಸುಗಳಂತೆ ಹೊಳೆಯುತ್ತಲಿರುವ ಶಿಂಗಾಡಿಗಳಿರುವವು. ಬೆನ್ನಿನಲ್ಲಿ ಕೂರಲಗುಗಳು ತುಂಬಿದ ಬತ್ತಳಿಕೆಗಳು, ಹಾವುಗಳಿಂದ ತುಂಬಿದ ಹುತ್ತಗಳಂತೆ ವಿರಾಜಿಸುತ್ತಿರುವವು. ನಿಮ್ಮ ಶಿರಸ್ಸುಗಳು ಜಡೆಗಳಿಂದ, ಬೀಳುಗಳಿಂದ ಕೂ

ಡಿದ ಆಲದ ಮರದಂತೆ ಹೊಳೆಯುತ್ತಿರುವವು. ಮುನಿಗಳಂತೆ ನಾರು ವಸ್ತ್ರಗಳನ್ನೂ ಕೃಷ್ಣಾಜಿನಗಳನ್ನೂ ಉಟ್ಟು, ಹೊದ್ದು ಇರುವಿರಿ. ನಿಮ್ಮ ಮುಖದಲ್ಲಿ ಥಳಥಳಿಸುತ್ತಲಿರುವ ಕಾಂತಿಗಳನ್ನೂ, ನಿಮ್ಮ ಅಂಗಾಂಗಗಳಲ್ಲಿರುವ ಸುಲಕ್ಷಣಗಳನ್ನೂ ನೋಡಿದರೆ, ಈ ಪಂಚಾಶತ್ಕೋಟಿ ವಿಸ್ತೀರ್ಣವಾದ ಭೂಮಂಡಲಗಳನ್ನು ಪಾಲಿಸ ತಕ್ಕವರಾಗಿ ಕಾಣಿಸುತ್ತೀರಿ. ಅಂಥಾ ನೀವು ಪಾದಚಾರಿಗಳಾಗಿ ಈ ವನ ಪ್ರದೇಶಕ್ಕೆ ಬರುವದಕ್ಕೆ ಕಾರಣವೇನು? ಅವುಗಳನ್ನೆಲ್ಲಾ ಕೇಳುವ ನನಗೆ ವಿಸ್ತಾರವಾಗಿ ಹೇಳ ಬೇಕು. ವಾಲಿ ಎಂಬ ಕಪಿ ರಾಜನು ತಿರಸ್ಕರಿಸಿದ ಸೂರ್ಯನ ಸುತನಾದ ಸುಗ್ರೀವನ ಸಚಿವನು ನಾನು. ನನ್ನ ತಂದೆಯು ವಾಯುವು. ನನ್ನ ತಾಯಿಯು ಕೇಸರಿ ಎಂಬ ಕಪಿ ಶ್ರೇಷ್ಠನ ಹೆಂಡತಿಯಾದ ಅಂಜನಾ ದೇವಿಯು. ಜನರು ನನ್ನನ್ನು ಹನುಮಂತನೆಂದು ಕರೆಯುವರು. ನಮ್ಮೊಡೆಯನಾದ ಸುಗ್ರೀವನು ನಿಮ್ಮ ಸ್ನೇಹವನ್ನು ಕೋರುತ್ತಿರುವನು, ಎಂದು ಹೇಳಲು; ಲಕ್ಷ್ಮಣನು ಆತನನ್ನು ಕುರಿತು—ನಾವು ಅಯೋಧ್ಯಾಧಿಪತಿಯಾದ ದಶರಥ ರಾಯನ ಕುವರರು. ಈತನು ನಮ್ಮಣ್ಣನು. ಈತನಿಗೆ ರಾಮನೆಂದು ಹೆಸರು. ನನಗೆ ಲಕ್ಷ್ಮಣನೆಂಬ ಅಭಿಧಾನವು. ಈ ರಾಮಚಂದ್ರನು ತಂದೆಯ ಅಪ್ಪಣೆಯ ಮೇರೆಗೆ ಜಟಾಚೀರ ಧರನಾಗಿ, ಸೀತೆ ಎಂಬ ಸತಿಯೊಡನೆಯೂ ನನ್ನೊಡನೆಯೂ ಕೂಡಿ, ದಂಡಕಾ ವನವನ್ನು ಹೊಕ್ಕು, ವಾಸಾ ಮಾಡುತ್ತಿರುವಲ್ಲಿ, ಖರಾದಿ ರಾಕ್ಷಸರನ್ನು ಸಂಹರಿಸಿದನು. ಆ ಹಗೆತನದಿಂದ ಈತನ ಸತಿಯಾದ ಸೀತೆಯನ್ನು ರಾವಣನು ಕಳವಿನಿಂದ ಕದ್ದು ಕೊಂಡು ಹೋದನು. ಅವನನ್ನು ಹುಡುಕುತ್ತ, ಸುಗ್ರೀವನ ಸ್ನೇಹವನ್ನು ಬಯಸಿ ಇಲ್ಲಿಗೆ ಬಂದನು, ಎಂದು ಹೇಳಿದನು.

ಅದನ್ನು ಕೇಳಿ, ಹನುಮಂತನು ಸಂತೋಷ ಪಟ್ಟು, ಸನ್ಯಾಸಿಯ ರೂಪನ್ನು ಬಿಟ್ಟು, ಮೊದಲಿನ ಕಪಿ ರೂಪನ್ನು ಧರಿಸಿ, ರಾಮ ಲಕ್ಷ್ಮಣರನ್ನು ತನ್ನ ಹೆಗಲುಗಳ ಮೇಲೆ ಕೂರಿಸಿ ಕೊಂಡು, ಅಲ್ಲಿಂದ ಋಷ್ಯಮೂಕ ಗಿರಿಗೆ ನೆಗೆದು, ಅಲ್ಲಿ ಮರಗಳ ಚಿಗುರನ್ನು ತಂದು, ಹಾಸಿ ಕೊಟ್ಟು, ಕೂರಿಸಿ, ಆ ಪರ್ವತದ ಗುಹೆಯಲ್ಲಿ ಇರುವ ಸುಗ್ರೀವನನ್ನು, ನಳ ನೀಲಾದಿ ಕಪಿ ಸೇನಾ ಸಹಿತವಾಗಿ, ಕರ ತಂದು, ಕಾಣಿಸಲು; ಆ ಸುಗ್ರೀವನು ರಾಮನಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಲು; ಆತನನ್ನು ರಾಮನು ಬಾಹುಗಳಿಂದ ಬಿಗಿದಪ್ಪಿ, ಮನ್ನಿಸಿದನು. ಆಗ ರಾಮ ಸುಗ್ರೀವರು ಯಥೋಚಿತವಾಗಿ ತಮ್ಮ ತಮ್ಮ ಕಷ್ಟಗಳನ್ನು ಒಬ್ಬರಿಗೊಬ್ಬರು ಹೇಳಿದ ಬಳಿಕ, ರಾಮನು—ನಿನ್ನ ಹಗೆಯಾದ ವಾಲಿಯು

ನ್ನು ಕೊಂದು, ನಿನಗೆ ಕಪಿ ರಾಜ್ಯಾಭಿಷೇಕವನ್ನು ಮಾಡಿಸುವೆನು ಎಂದು, ಸುಗ್ರೀವನಿಗೆ ನಂಬಿಗೆಯನ್ನು ಕೊಟ್ಟನು. ಸುಗ್ರೀವನು—ರಾವಣನೂ ಸೀತೆಯೂ ಸ್ವರ್ಗ ಮರ್ತ್ಯ ಪಾತಾಳ ಲೋಕಗಳಲ್ಲಿ ಎಲ್ಲಿ ಇದ್ದಾಗ್ಯೂ, ಗೊತ್ತು ಹತ್ತಿಸಿ, ಆ ರಾವಣನ ಸಂಹಾರಕ್ಕೆ ನಿನಗೆ ಕಪಿ ಸೇನಾ ಸಮೇತನಾಗಿ ಸಹಾಯನಾಗಿರುವೆನೆಂದು, ಭಾಷೆ ಮಾಡಿ ಕೊಟ್ಟನು. ತರುವಾಯ ಅಗ್ನಿಯನ್ನು ಪ್ರತಿಷ್ಠಿಸಿ, ಅಗ್ನಿ ಸಾಕ್ಷಿಯಾಗಿ ಸಖ್ಯವನ್ನು ಮಾಡಿ ಕೊಂಡು, ಒಬ್ಬರ ಕೈಯನ್ನು ಒಬ್ಬರು ಹಿಡಿದು, ಪರಸ್ಪರವಾಗಿ ಆಲಿಂಗನಾದಿ ಉಪಚಾರಗಳಿಂದ ಮನ್ನಿಸಿದರು.

ಆ ಬಳಿಕ ಸುಗ್ರೀವನು ಹಣ್ಣು ಹಂಪಲುಗಳಿಂದಲೂ, ಗೆಡ್ಡೆ ಗೆಣಸುಗಳಿಂದಲೂ, ರಾಮನಿಗೆ ಆತಿಥ್ಯವನ್ನು ಮಾಡಿ, ಮೊದಲು ಸೀತೆ ತನ್ನ ಬಳಿಗೆ ಹಾಕಿದ್ದ ಒಡವೆಗಳನ್ನು ಒಪ್ಪಿಸಿ, ವಾಲಿಯ ಅಮೋಘವಾದ ಪರಾಕ್ರಮವನ್ನು ನೆನದು, ಆತನನ್ನು ಕೊಲ್ಲುವದಕ್ಕೆ ರಾಮನಿಗೆ ಶಕ್ತಿ ಉಂಟೋ, ಇಲ್ಲವೋ? ಪರೀಕ್ಷಿಸಬೇಕೆಂದು ಮನದಲ್ಲಿ ಎಣಿಸಿ, ರಾಮನನ್ನು ಕುರಿತು—ಎಲೈ, ರಾಜೇಂದ್ರನೇ, ಇಗೋ, ಇಲ್ಲಿ ಬಿದ್ದಿರುವ ಈ ಮೂಳೆಯು ದುಂದುಭಿ ಎಂಬ ರಾಕ್ಷಸನ ಶರೀರವು. ವಾಲಿಯು ಇವನನ್ನು ಕಿಷ್ಕಿಂಧೆಯಲ್ಲಿ ಕೊಂದು, ಇಲ್ಲಿಗೆ ಎಡಗೈಯಿಂದ ಬಿಸಾಟನು. ಇಗೋ, ಇಲ್ಲಿ ಕಾಣುವ ಏಳು ಓಲೇ ಮರಗಳು ಪಾತಾಳದಿಂದ ಹಿಡಿದು, ಮೇಘ ಮಂಡಲದ ವರಿಗೂ ಬೆಳೆದಿರುವವು. ಇವನ್ನು ಕತ್ತರಿಸುವದಕ್ಕೆ ವಾಲಿಗೂ ಅಶಕ್ಯವಾಗಿರುವದು ಎಂದು ಹೇಳಲು; ರಾಮನು ಸುಗ್ರೀವನ ಮನೋಭಾವವನ್ನು ತಿಳಿದು, ಆ ದುಂದುಭಿಯ ಎಲುವನ್ನು ತನ್ನ ಕಾಲುಂಗುಟದಿಂದ ಹತ್ತು ಗಾವುದ ದಾರಿ ಹೋಗಿ ಬೀಳುವಂತೆ ಹಾರಿಸಿ, ಆ ಏಳು ಓಲೇ ಮರಗಳನ್ನು ಒಂದೇ ಬಾಣದಿಂದ ಕತ್ತರಿಸಲು; ಸುಗ್ರೀವನು ಸಂತೋಷ ಪಟ್ಟು, ಸಂಶಯ ಬಿಟ್ಟನು. ಆಗ ರಾಮನು ವಾಲಿಯನ್ನು ಕೊಂದು, ಸುಗ್ರೀವನಿಗೆ ಕಪಿ ರಾಜ್ಯಾಭಿಷೇಕವನ್ನೂ, ವಾಲಿಯ ಮಗನಾದ ಅಂಗದನಿಗೆ ಯುವ್ವ ರಾಜ್ಯಾಭಿಷೇಕವನ್ನೂ ಮಾಡಿಸಿ, ಸುಗ್ರೀವನನ್ನು ಕುರಿತು—ಎಲೈ, ಮಿತ್ರನೇ, ಈಗ ಹಗೆಯ ಮೇಲೆ ದಂಡ ಯಾತ್ರೆಗೆ ನಾವು ಹೋಗುವದಕ್ಕೆ ಗ್ರೀಷ್ಮ ರುತುವು ಬಂದಿರುವದರಿಂದ, ವರುಷ ರುತು ಕಳೆಯುವ ವರಿಗೂ, ನಾಲ್ಕು ತಿಂಗಳು ನೀನು ಕಿಷ್ಕಿಂಧಾ ಪಟ್ಟಣದಲ್ಲಿ ಸುಖವಾಗಿರು. ನಾನು ಋಷ್ಯಮೂಕ ಗಿರಿಯಲ್ಲಿ ಲಕ್ಷ್ಮಣನೊಡನೆ ವಾಸಾ ಮಾಡಿ ಕೊಂಡಿರುವೆನು. ನಾಲ್ಕು ತಿಂಗಳು ಆದ ಮೇಲೆ, ನೀನು ಹೇಳಿರುವ ರೀತಿ, ನನ್ನಲ್ಲಿ ದಯವಿಟ್ಟು, ಸಹಾಯವನ್ನು ಮಾಡ ಬೇಕೆಂದು ಹೇಳಿ, ಅಪ್ಪಣೇ ಕೊಡಲು; ಸುಗ್ರೀವನು ಶ್ರೀ ರಾಮನಿಗೆ

ನಮಸ್ಕರಿಸಿ, ತನ್ನ ಕಪಿ ಪರಿವಾರಗಳೊಡನೆ ಕೂಡಿ, ಕಿಷ್ಕಿಂಧೆಗೆ ಹೋಗಿ, ಸುಖವಾಗಿದ್ದನು.

ಇತ್ತಲಾ ರಾಮನು ಋಷ್ಯಮೂಕ ಗಿರಿಯಲ್ಲಿ ಲಕ್ಷ್ಮಣನೊಡನೆ ವಾಸಾ ಮಾಡಿಕೊಂಡಿರುತ್ತ, ಗ್ರೀಷ್ಮ ರುತು ಬಂದದ್ದನ್ನು ನೋಡಿ—ಎಲೈ, ಲಕ್ಷ್ಮಣನೇ, ಈ ಕಾಲದಲ್ಲಿ ಮಾರ್ಗಸ್ಥರು ಹಾಸಿ ಕೊಳ್ಳುವದಕ್ಕೂ ಹೊದ್ದು ಕೊಳ್ಳುವ ದಕ್ಕೂ ಬಟ್ಟೆ ಬರಿಗಳು ಇಲ್ಲದೆ ಇದ್ದಾಗ್ಯೂ, ಮರದ ನೆಳಲುಗಳಲ್ಲಿ ಚನ್ನಾಗಿ ಸುಖವಾಗಿ ನಿದ್ದೆ ಹೋಗುವರು. ನಾಲ್ಕು ಆಶ್ರಮದವರು ತ್ರಿಕಾಲಗಳಲ್ಲಿಯೂ, ಹೊಳೆ, ಕೆರೆ, ಕಟ್ಟೆ, ಕಾಲುವೆ, ಮುಂತಾದವುಗಳ ತಣ್ಣೀರುಗಳಲ್ಲಿ ಬಹಳ ಸಂತೋಷದಿಂದ ಮಿಾಯುವರು. ಲೋಕದಲ್ಲಿ ಸಕಲ ವಸ್ತುಗಳು ಮುದಿಯಾಗುವವು. ನಿದಾಘ ಕಾಲದ ಹಗಲುಗಳು ಮುದಿ ಮುದಿಯು ಆದ ಹಾಗೆ ಈಗ ಅತಿ ಚೆಲುವಾಗಿ, ಭೋಗ್ಯವಾಗಿರುವವು. ದಾರಿಗಳಲ್ಲಿ ಧನಿಕರು ಅಲ್ಲಲ್ಲಿ ಅರವಟ್ಟಿಗೆ ಗಳನ್ನು ಇಟ್ಟು, ಒಳ್ಳೆಯವರ ಮನಸ್ಸಿನ ಹಾಗೆ ನಿರ್ಮಲವಾಗಿಯೂ ತಂದೆಯಾದವನು ತನ್ನ ಮೊಗುವನ್ನು ತಬ್ಬಿ ಕೊಂಡರೆ, ಆತನಿಗೆ ಎಷ್ಟು ತಣ್ಣಗೆ ಇರುವದೋ, ಅಷ್ಟು ಶೀತಳವಾಗಿಯೂ—ತನ್ನ ಮಕ್ಕಳ ತೊದಲು ಮಾತು ಎಷ್ಟು ರುಚಿಯಾಗಿರುವದೋ, ಅಷ್ಟು ರುಚಿಯಾಗಿಯೂ ಇರುವ ನೀರುಗಳನ್ನೂ, ನಿಂಬೇ ಹಣ್ಣಿನ ರಸದಿಂದಲೂ, ಶುಂಠಿ, ಯಾಲಕ್ಕಿ, ಕರಿ ಬೇವುಗಳಿಂದ ಕೂಡಿದ ನೀರ ಮಜ್ಜಿಗೆಗಳನ್ನೂ, ಎಳೆ ನೀರುಗಳನ್ನೂ, ಬಂದ ದಾರಿಕಾರರಿಗೆ ಕುಡಿಯುವದಕ್ಕೆ ಕೊಟ್ಟು, ಪಚ್ಚ ಕರ್ಪೂರದಿಂದ ಕೂಡಿದ ಶ್ರೀಗಂಧವನ್ನು ಪೂಸಿ, ಜಾಜಿ ಪಾದರಿ ಮೊದಲಾದ ಹೂ ಮಾಲಿಕೆಗಳನ್ನು ಹಾಕಿ, ಸಂತಾಪಗಳನ್ನು ಪರಿಹರಿಸುತ್ತ, ಆದರಿಸುತ್ತಿರುವರು. ಸೂರ್ಯನ ಕುದುರೆಗಳು ಬಿಸಲಿನಿಂದ ರಥವನ್ನು ಎಳೆಯಲಾರದೆ, ಆಯಾಸದಿಂದ ಮೆಲ್ಲಗೆ ನಡೆಯುವದರಿಂದಲೋ, ಎಂಬ ಹಾಗೆ, ಈ ಕಾಲದ ಹಗಲುಗಳು ಹೆಚ್ಚಾಗಿರುವವು? ಹಕ್ಕಿಗಳು ಮಧ್ಯಾಹ್ನ ಕಾಲದಲ್ಲಿ ತಮ್ಮ ತಮ್ಮ ಗೂಡುಗಳನ್ನು ಬಿಟ್ಟು, ಹೊರಗೆ ಹೊರಡವು. ಭೋಗಿಗಳಾದ ಸ್ತ್ರೀ ಪುರುಷರು ಉನ್ನತವಾದ ಬೆಟ್ಟಗಳ ತುದಿಯಲ್ಲಿಯೂ ಬಹು ಕಿಟಕಿಗಳುಳ್ಳ ಮನೆಗಳಲ್ಲಿಯೂ, ಉದ್ದವಾದ ಉಪ್ಪರಿಗೆಗಳ ಕಡೇ ಅಂತಸ್ತುಗಳಲ್ಲಿಯೂ, ಹೊಳೆ ಮೊದಲಾದ ಜಲ ಪ್ರದೇಶಗಳ ಧಡಗಳಲ್ಲಿಯೂ, ವಾಸವನ್ನು ಮಾಡುವರು. ಪ್ರಜೆಗಳು ತಮ್ಮ ತಮ್ಮ ದನ ಕರುಗಳನ್ನು ಬಹು ಮರಗಳ ನೆಳಲುಗಳಿಂದ ಕೂಡಿರುವ ಅನೇಕವಾದ ಹಳ್ಳ ಕೊಳ್ಳಗಳುಳ್ಳ ಕಾಡುಗಳಲ್ಲಿ ಬಿಟ್ಟು ಕೊಂಡು, ಹುಲ್ಲುಗಳನ್ನು ಮೇಯಿಸುತ್ತ, ನೀರುಗಳನ್ನು

ಕುಡಿಸುತ್ತ, ಧಗೆ ಹತ್ತದ ಹಾಗೆ ಕಾಪಾಡುತ್ತಿರುವರು. ಮತ್ತು ಈ ಕಾಲದಲ್ಲಿ ಶೈತ್ಯ ಸೌರಭ್ಯ ಮಾಂದ್ಯ ಯುಕ್ತವಾದ ತಂಘಾಳಿಯು ಜನರುಗಳನ್ನು ಸಂಜೇ ವೇಳೆಯಲ್ಲಿ ಸಂತೋಷ ಪಡಿಸುತ್ತಿರುವದು. ಜನರು ಚೀನಾಂಬರಗಳನ್ನು ಧರಿಸುವಲ್ಲಿಯೂ, ನೀರಾಟಗಳಲ್ಲಿಯೂ ಬಹಳ ಆಸಕ್ತರಾಗಿರುವರು ಎಂದು ಹೇಳುತ್ತ, ಜ್ಯೇಷ್ಠ ಆಷಾಢ ಎರಡು ತಿಂಗಳುಗಳನ್ನು ಕಳೆಯುತ್ತ ಇದ್ದನು.

ಆ ಮೇಲೆ ವರುಷಾ ಕಾಲವು ಬಂದದ್ದನ್ನು ನೋಡಿ, ರಾಮನು ಲಕ್ಷ್ಮಣನನ್ನು ಕುರಿತು—ಎಲೈ, ತಮ್ಮನೇ, ಇಗೋ, ನೋಡು! ಆಕಾಶವು ಬೆಟ್ಟಗಳಿಗೆ ಸಮಾನವಾಗಿರುವ ಕಪ್ಪಾದ ಮೇಘಗಳಿಂದ ಮುಚ್ಚಲ್ಪಟ್ಟದೆ. ಈ ಮೇಘಗಳು ಸೂರ್ಯನ ಕಿರಣಗಳಿಂದ ಸಮುದ್ರದ ರಸವನ್ನು ಕುಡಿದು, ಗರ್ಭವನ್ನು ಧರಿಸಿ, ಉದುಕಗಳನ್ನು ಹೆರುತ್ತಲಿವೆ. ಇಗೋ, ನೋಡು! ಜನರು ಮೇಘಗಳೆಂಬ ಪಾವಟಗೆಗಳ ಸಾಲುಗಳಿಂದ ಆಕಾಶವನ್ನು ಹತ್ತಿ, ಕುಟಜ ಪುಷ್ಪಗಳಿಂದಲೂ ಬೆಟ್ಟ ದಾವರೇ ಹೂವುಗಳಿಂದಲೂ ಸೂರ್ಯನನ್ನು ಪೂಜಿಸ ಶಕ್ಯವಾಗಿಧೆಯೋ? ಎಂಬ ಹಾಗೆಯೂ ಸಂಧ್ಯಾ ರಾಗದಿಂದ ಕೆಂಪಾಗಿಯೂ ಮಧ್ಯದಲ್ಲಿ ಬಿಳುಪಾಗಿಯೂ ಇರುವ ಮೇಘಗಳಿಂದ ತುಂಬಿರುವ ಆಕಾಶವು ತನ್ನ ಘಾಯಕ್ಕೆ ಬಟ್ಟೆಯನ್ನು ಕಟ್ಟಿಕೊಂಡು ಇದೆಯೋ? ಎಂಬ ಹಾಗೆಯೂ, ಇದೆ. ಮಂದ ಮಾರುತವೆಂಬ ನಿಟ್ಟುಸುರುಗಳುಳ್ಳಂಥಾವನಾಗಿಯೂ ಸಂಧ್ಯಾಕಾಲವೆಂಬ ರಕ್ತ ಚಂದನದಿಂದ ಅಲಂಕೃತನಾಗಿಯೂ ಇರುವ ಆಕಾಶವೆಂಬವನು ಪ್ರಕಾಶಿಸುತ್ತಾನೆ. ಮೇಘದ ಮಧ್ಯದಿಂದ ಬರುವ, ಕಲ್ಹಾರ ಪುಷ್ಪಗಳಿಂದ ತಣ್ಣಗಿರುವ, ತಾಳೇ ಹೂವುಗಳ ಗಮವುಳ್ಳ ತಂಘಾಳಿಯು ಸುಳಿಯುತ್ತದೆ. ಮೇಘವೆಂಬ ಕೃಷ್ಣಾಜಿನವನ್ನೂ ನೀರಿನ ಧಾರೆಗಳೆಂಬ ಜನಿವಾರಗಳನ್ನೂ ಧರಿಸಿ, ಘಾಳಿಗಳಿಂದ ತುಂಬಿದ ಗುಹೆಗಳುಳ್ಳವುಗಳಾಗಿ, ಬೆಟ್ಟಗಳು ಯೋಗಿಗಳ ಹಾಗೆ ಕಾಣುತ್ತವೆ. ಮಿಂಚುಗಳೆಂಬ ಚಾಟಿಗಳಿಂದ ಹೊಡೆಯಲ್ಪಟ್ಟ ಮೇಘಗಳು ಆ ಪೆಟ್ಟನ್ನು ಸಹಿಸಲಾರದೆ, ಕೂಗಿ, ನರಳುತ್ತವೋ? ಎಂಬ ಹಾಗೆ, ಗುಡುಗುಗಳು ಕೇಳಿಸುತ್ತವೆ. ದುಖ್ಖದಿಂದ ಕಣ್ಣೀರುಗಳನ್ನು ಸುರಿಸುತ್ತವೆಯೋ? ಎಂಬ ಹಾಗೆ, ಮಳೇ ನೀರುಗಳು ಸುರಿಯುತ್ತವೆ. ಆಕಾಶದಲ್ಲಿ ತಿರುಗುವ ವಿದ್ಯಾಧರರ ಹೆಂಡರುಗಳ ಮುತ್ತಿನ ಹಾರಗಳು ಮೇಘಗಳಿಗೆ ಸಿಕ್ಕಿ, ಹರಿದು, ಕೆಳಗೆ ಉದುರುವ ಮುತ್ತುಗಳೋ? ಎಂಬ ಹಾಗೆ, ಆಕಾಶದಿಂದ ಆನೆ ಕಲ್ಲುಗಳು ಸುರಿಯುತ್ತವೆ. ಆಕಾಶಗಳಲ್ಲಿ ಬೆಳ್ವಕ್ಕಿಗಳು ಗುಂಪು ಗುಂಪಾಗಿ ಹಾರ್ಯಾ

ಡುತ್ತವೆ. ಹಂಸ ಪಕ್ಷಿಗಳು ತಾವರೇ ದಂಟುಗಳನ್ನು ಎತ್ತಿ ಕೊಂಡು, ಬುತ್ತಿಯನ್ನು ಕಟ್ಟಿ ಕೊಂಡು, ಹೋಗುವ ದಾರಿಕಾರರ ಹಾಗೆ, ಮಾನಸ ಸರಸ್ಸಿಗೆ ಹೋಗುತ್ತವೆ. ಚಾತಕ ಪಕ್ಷಿಗಳು ಶಿಡಿಲ ರಭಸಕ್ಕೆ ಹೆದರದೆ, ಆಕಾಶದಲ್ಲಿ ಬಾಯಿಯನ್ನು ತೆರೆದು ಕೊಂಡು, ಹೊಸ ಮೇಘಗಳ ನೀರಿನ ಹನಿಗಳನ್ನು ಕುಡಿದು, ನೀರಡಿಕೆಯನ್ನು ಇಂಗಿಸಿ ಕೊಳ್ಳುತ್ತವೆ. ಆನೆಗಳ ಗುಂಪುಗಳು ಮಳೇ ಹನಿಗಳಿಂದ ನೆನೆದವುಗಳಾಗಿ, ಬೇಸಿಗೆಯಿಂದ ಉಂಟಾದ ಧಗೆಯನ್ನು ಕಳೆದು ಕೊಂಡು, ಮೈ ಉಬ್ಬಿದವುಗಳಾಗಿ, ಸಂತೋಷದಿಂದ ಕೊಬ್ಬಿರುವವು. ಹೊಳೆಗಳು ಕೆಂಪಾದ ಹೊಸ ನೀರುಗಳಿಂದ ಉಬ್ಬಿ, ಎರಡು ಕಡೇ ಧಡಗಳನ್ನು ಮೀರಿ ಹರಿಯುತ್ತಿರುವವು. ಹಳ್ಳ ಕೊಳ್ಳಗಳಿಂದ ತುಂಬಿರುವದರಿಂದಲೂ, ಮಳೆಗಳಿಂದ ಕೆಸರಾಗಿರುವದರಿಂದಲೂ, ನಡೆಯುವದಕ್ಕೆ ಅಶಕ್ಯವೆಂದು ಜನರು ಹೊರಗೆ ಹೊರಡುವದನ್ನು ಉಳಿದು, ಮನೆಯಲ್ಲಿಯೇ ವಾಸಾ ಮಾಡಿ ಕೊಂಡಿರುವರು. ಅರಸುಗಳು ಶತ್ರುಗಳ ಮೇಲೆ ದಂಡಯಾತ್ರೆಗೆ ಹೊರಡುವದನ್ನು ಬಿಟ್ಟು, ಸ್ವಂತ ರಾಜ್ಯದಲ್ಲಿಯೇ ಸುಖವಾಗಿದ್ದು ಕೊಂಡಿರುವರು. ತಿಪ್ಪೇ ಹಳ್ಳಗಳಲ್ಲಿ ಕಪ್ಪೆಗಳು, ವಟ ವಟಾ ಎಂದು ಅರಚುತ್ತ, ರಾತ್ರೇ ವೇಳೆಯಲ್ಲಿ ಜನರ ನಿದ್ರೆಗಳಿಗೆ ತಡೆ ಮಾಡುತ್ತಿರುವವು. ನವಿಲುಗಳು ಮೇಘದ ಧ್ವನಿಯನ್ನು ಕೇಳಿ, ಸಂತೋಷದಿಂದ ಕೇಕಾ ರವವನ್ನು ಮಾಡುತ್ತ, ಉದ್ದವಾದ ಗರಿಗಳನ್ನು ಮೇಲಕ್ಕೆತ್ತಿ, ಅಗಲಿಸಿ ಕೊಂಡು, ಜಾಗರವಾಡುತ್ತಿರುವವು. ಗೋಪಾಳದವರು ಗೊರಸುಗಳನ್ನು, ಕಂಬಳೀ ಗೊಂಗಟೆಗಳನ್ನು ಸಹ, ಹಾಕಿ ಕೊಂಡು, ಕೊಡೆಗಳನ್ನು ಹಿಡಿದು ಕೊಂಡು, ಮರದಾವುಗೆಗಳನ್ನು ಮೆಟ್ಟಿ ಕೊಂಡು, ಗೋಪಾಳಕ್ಕೆ ತಿರುಗುತ್ತ, ಬಹಳ ಕಷ್ಟ ಪಡುತ್ತಿರುವರು. ಪ್ರಜೆಗಳು ಸಂತೋಷದಿಂದ ಹೊಲಗಳನ್ನೆಲ್ಲಾ ಉತ್ತು, ಬಿತ್ತಿ, ಹರತೆ ಮುಂತಾದ ಬೇಸಾಯುಗಳನ್ನು ಮಾಡುತ್ತ, ಗದ್ದೆಗಳಿಗೆಲ್ಲಾ ನೀರು ಕಟ್ಟಿ, ಅಟ್ಲುಕ್ಕೈಗಳನ್ನು ಉತ್ತು, ಸೊಪ್ಪು ಗೊಬ್ಬರಗಳನ್ನು ತುಳಿದು, ಮೊದಲು ನಾಟೀ ಹಾಕಿದ್ದ ಪೈರುಗಳನ್ನು ಕಿತ್ತು, ತಂದು, ಅಟ್ಲು ಗದ್ದೆಯಲ್ಲಿ ನೆಡುತ್ತ, ನೆಟ್ಟ ಪೈರುಗಳಿಗೆ, ಹದವರಿತು, ನೀರು ಹಾಯ್ಸುತ್ತ, ಒಂದು ಘಳಿಗೆಯಾದರೂ ಪುರಸತ್ತು ಇಲ್ಲದೆ, ಹಣಾಹಣಿಯಿಂದ ಆರಂಬದ ಕೆಲಸಗಳನ್ನು ನಡಿಸುತ್ತಿರುವರು. ಸೂರ್ಯ ಚಂದ್ರರು ಮೋಡಗಳಿಂದ ಮುಚ್ಚಿದವರಾಗಿರುವರು. ಒಂದು ವೇಳೆ ಕಾಣಿಸಿದಾಗ್ಯೂ, ಚನ್ನಾಗಿ ಪ್ರಕಾಶಿಸದೆ ಇದ್ದಾರೆ. ಈ ಮಳೆಗಾಲವು ಐಶ್ವರ್ಯವಂತರಿಗೆ ಬಹಳ ಸುಖಕರವಾಗಿರುವದು. ಬಡವರಿಗೂ ಗೋಪಾಳದವರಿಗೂ ಸಂಚರಿ

ಸುವವರಿಗೂ ಬಹಳ ಕಷ್ಟವಾಗಿರುವದು ಎಂದು ಹೇಳುತ್ತ, ಸೀತೆಯನ್ನು ನೆನಸಿ ಕೊಂಡು, ಚಿಂತೆ ಪಡುತ್ತ, ಶ್ರಾವಣ ಭಾದ್ರಪದ ಎರಡು ತಿಂಗಳನ್ನು ಕಳೆಯುತ್ತಿದ್ದನು.

ತರುವಾಯ ರಾಮನು ಲಕ್ಷ್ಮಣನನ್ನು ನೋಡಿ—ಎಲೈ, ತಮ್ಮನೇ, ನೋಡು! ಶರತ್ಕಾಲವು ಪ್ರಾಪ್ತವಾಯಿತು. ಆಕಾಶವು ಬಿಳುಪಾಗಿರುವದು. ಚಂದ್ರನು ಬಹಳ ನಿರ್ಮಲನಾಗಿರುವನು. ಈ ಶರತ್ಕಾಲದ ರಾತ್ರಿಯು ಬೆಳದಿಂಗಳಿಂದ ತುಂಬಿರುವದರಿಂದ, ಬಿಳೀ ಶೀರೆಯನ್ನು ಉಟ್ಟ ಹೆಂಗಸಿನ ಹಾಗೆ ಇರುವದು. ಹೊಳೆಗಳೆಲ್ಲಾ ಅಡಗಿ, ನಿರ್ಮಲವಾದ ಉದುಕಗಳಿಂದ ಕೂಡಿರುವವು. ಈ ನದಿಗಳು ಹಳ್ಳದಲ್ಲಿ ಹರಿಯುತ್ತ, ತಾವರೆ ಎಂಬ ಮುಖದಿಂದಲೂ, ಕನ್ನೈದಿಲೆ ಎಂಬ ಕಣ್ಣುಗಳಿಂದಲೂ, ಶಳೆ ಎಂಬ ನಡುವಿನಿಂದಲೂ, ಪ್ರವಾಹವೆಂಬ ಲಾವಣ್ಯದಿಂದಲೂ, ನಾರಿಯೋಪಾದಿಯಲ್ಲಿ ಪ್ರಕಾಶಿಸುತ್ತಿರುವವು. ಅರಸುಗಳು ವಿಜಯ ಪ್ರಯಾಣಕ್ಕೆ ಸನ್ನದ್ಧರಾಗುತ್ತಿರುವರು. ಇಂಥಾ ಕಾಲದಲ್ಲಿ ನಮ್ಮ ಪ್ರಿಯ ಸಖನಾದ ಸುಗ್ರೀವನು ನಮ್ಮನ್ನೂ ನಾವು ಮಾಡಿದ ಉಪಕಾರವನ್ನೂ ಮರೆತು, ಹತ ಶತ್ರುವಾಗಿ, ಕಾಮಾಸಕ್ತನಾಗಿ, ಕಿಷ್ಕಿಂಧೆಯಲ್ಲಿ ತಾನು ಮಾತ್ರ ಸುಖವಾಗಿ ಇದ್ದು ಕೊಂಡು, ನಮ್ಮ ಕಷ್ಟವನ್ನು ನೆನೆಯದೆ, ನಮಗೆ ಸಹಾಯವನ್ನು ಮಾಡದೆ ಇರುವನು. ನೀನು ಹೋಗಿ, ಎಚ್ಚರಿಸು. ಆತನು ಕೃತಜ್ಞನಾಗಿ, ನಿನ್ನ ಸಂಗಡ ಬಂದರೆ, ಉತ್ತಮ. ಇಲ್ಲದೆ ರಾಜ್ಯ ಮದದಿಂದ ಮತ್ತನಾಗಿದ್ದರೆ, ಆತನನ್ನು ಕೊಂದು, ಆ ಕಪಿ ರಾಜ್ಯವನ್ನು ವಾಲಿಯ ಮಗನಾದ ಅಂಗದನಿಗೆ ಕಟ್ಟಿ, ಆತನನ್ನು ಕಪಿ ಸೇನೆಯೊಡನೆ ಕರೆದು ಕೊಂಡು ಬಾ ಎಂದು, ಹೇಳಿ ಕಳುಹಿಸಿದನು.

ಲಕ್ಷ್ಮಣನು ಅಣ್ಣನ ಅಪ್ಪಣೆಯ ಪ್ರಕಾರ ಧನುರ್ಬಾಣಗಳನ್ನು ತೆಗೆದು ಕೊಂಡು, ಕಿಷ್ಕಿಂಧಾ ಪಟ್ಟಣದ ಊರು ಬಾಗಲಿಗೆ ಹೋಗಿ, ಬಿಲ್ಲಿಗೆ ಹೆದೆಯನ್ನು ಏರಿಸಿ, ಟೇಂಕಾರವನ್ನು ಮಾಡಲು; ಪ್ರಳಯ ಕಾಲದ ಸಿಡಿಲಿಗೆ ಸರಿಯಾದ ಲಕ್ಷ್ಮಣನ ಧನುಷ್ಟಂಕಾರ ಶಬ್ದವನ್ನು ಸುಗ್ರೀವನು ಕೇಳಿ, ಹನುಮ, ನೀಲ, ನಳ, ಜಾಂಬವಂತ, ಸುಷೇಣ, ಮೊದಲಾದ ಮಂತ್ರಿಗಳೊಡನೆ ಕೂಡಿ, ಬೆದರಿ, ಬೆಜ್ಜರ ಗೊಂಡು, ಲಕ್ಷ್ಮಣನ ಬಳಿಗೆ ಬಂದು, ನಮಸ್ಕಾರವನ್ನು ಮಾಡಿ—ಎಲೈ, ಲಕ್ಷ್ಮಣನೇ, ಶ್ರೀರಾಮಚಂದ್ರನು ನನಗೆ ಮಾಡಿದ ಉಪಕಾರವನ್ನು ಮರೆತು ಕೃತಘ್ನನಾಗಿ ಇರಲಿಲ್ಲ. ಇಗೋ, ಹಿಮವಂತನು, ನಿಷದ, ಗಂಧಮಾಧನ, ವಿಂಧ್ಯ, ಮೇರು ಮೊದಲಾದ ಪರ್ವತಗಳಲ್ಲಿಯೂ, ಸಮುದ್ರ ಪ್ರಾಂತ್ಯಗಳ

ಲ್ಲಿಯೂ, ವನ ಸ್ಥಳಗಳಲ್ಲಿಯೂ ಇರುವ ಎಲ್ಲಾ ಕಪಿ ಸೇನಾಪತಿಗಳನ್ನು ರಾಮ ಕಾರ್ಯಾರ್ಥವಾಗಿ ಕರಿಸಿದ್ದೇನೆ ಎಂದು ಹೇಳಿ, ಲಕ್ಷ್ಮಣನಿಗೆ ಸತ್ಕಾರವನ್ನು ಮಾಡಿ, ಆತನೊಡನೆ ಕೂಡಿ, ರಾಮನ ಸನ್ನಿಧಿಗೆ ಬಂದು, ನಮಸ್ಕಾರವನ್ನು ಮಾಡಿದನು. ರಾಮನು ಸುಗ್ರೀವನನ್ನು ತೆಗೆದು, ಬಿಗಿಯ ಅಪ್ಪಿ,—ಎಲೈ, ಪ್ರಿಯ ಸಖನೇ, ಮುಂದಣ ಕೆಲಸಕ್ಕೆ ಏನು ಯೋಚನೆಯನ್ನು ಮಾಡಿದ್ದೀಯೇ? ಎಂದು ಕೇಳಲು; ಸುಗ್ರೀವನು ಕೈಗಳನ್ನು ಮುಗಿದು ಕೊಂಡು—ಸ್ವಾಮಿಾ, ರಾಜೇಂದ್ರನೇ, ಸಕಲ ಕಪಿ ಸೇನಾ ನಾಯಕರು ತಮ್ಮ ತಮ್ಮ ಕಪಿ ಸೇನೆಗಳನ್ನು ಕೂಡಿ ಕೊಂಡು ಬಂದು, ಸನ್ನದ್ಧರಾಗಿ ಕಾದು ಇದ್ದಾರೆ. ಅವರೆಲ್ಲರ ಗಣಿತೆಗಳನ್ನು ಪರಾಂಬರಿಸಿ, ಚಿತ್ತಕ್ಕೆ ಒಪ್ಪಿದ ರೀತಿ ಅಪ್ಪಣೇ ಕೊಡಿಸ ಬೇಕೆಂದು ಬಿನ್ನೈಸಿ, ಒಟ್ಟು ದಳಪತಿಯಾದ ಅಗ್ನಿಯ ಮಗನಾದ ನೀಲನ ಮುಖವನ್ನು ನೋಡಲು; ಆಗ ಆತನು ಎಲ್ಲಾ ಕಪಿ ಸೇನಾಪತಿಗಳಿಗೂ ಶ್ರೀರಾಮಚಂದ್ರನ ಗಣಿತೆಗೆ ತಮ್ಮ ತಮ್ಮ ಸೇನೆಗಳನ್ನು ಕೂಡಿ ಕೊಂಡು ಬರುವಂತೆ ಆಜ್ಞಾಪಿಸಿದನು.

ಆ ಬಳಿಕ ನದೀ ಪ್ರದೇಶಗಳಲ್ಲಿಯೂ, ಪರ್ವತದ ಪ್ರದೇಶಗಳಲ್ಲಿಯೂ, ಕಡಲ ಧಡಗಳಲ್ಲಿಯೂ, ವನ ಸ್ಥಳಗಳಲ್ಲಿಯೂ, ವಾಸಾ ಮಾಡಿ ಕೊಂಡಿದ್ದ, ಬೆಟ್ಟದಂತೆ ದೊಡ್ಡವುಗಳಾದ ಮೈಗಳುಳ್ಳ, ಕ್ರೂರವಾದ ಹಲ್ಲುಗಳುಳ್ಳ, ಎಳೇ ಸೂರ್ಯನೋಪಾದಿಯಲ್ಲಿ ಕೆಂಪುಗಳಾಗಿಯೂ, ತಾವರೆಗಳ ಕೇಸರಿಗಳೋಪಾದಿಯಲ್ಲಿ ಹೊಂಬಣ್ಣಗಳಾಗಿಯೂ, ಚಂದ್ರನ ಹಾಗೆ ಬಿಳಿದುಗಳಾಗಿಯೂ ಇರುವ, ಹತ್ತು ಕೋಟಿ ಕಪಿಗಳಿಂದ ಕೂಡಿ, ಶೂರನಾದ ಶತಬಲಿ ಎಂಬ ಕಪಿ ನಾಯಕನು ಬಂದು, ರಾಮನನ್ನು ಕಾಣಿಸಿ ಕೊಂಡು, ತನ್ನ ಸೇನೆಗಳನ್ನು ತೋರಿಸಿದನು.

ಆ ಬಳಿಕ ತಾರೆಯ ತಂದೆಯಾದ ಸುಷೇಣನೆಂಬವನು ಮೇರು ಪರ್ವತಕ್ಕೂ ಮಂದರ ಪರ್ವತಕ್ಕೂ ಸಮಾನಗಳಾದ ಅನೇಕ ಕೋಟಿ ಕಪಿ ಸೇನೆಗಳನ್ನು ರಾಮ ಚಂದ್ರನಿಗೆ ಗಣಿತೀ ಕೊಟ್ಟನು. ಆ ಮೇಲೆ ರುಮೆಯ ತಂದೆಯಾದ ರುಮಣ್ವನೆಂಬ ಸುಗ್ರೀವನ ಮಾವನಾದ ಸೇನಾಪತಿಯು ಸಾವಿರಾರು ಕೋಟಿ ತನ್ನ ಕಪಿ ಸೇನೆಗಳನ್ನು ರಾಘವನಿಗೆ ಕಾಣಿಸಿದನು. ಹನುಮಂತನ ತಂದೆಯಾದ ಕೇಸರಿ ಎಂಬ ಕಪಿ ನಾಯಕನು ಲೆಖ್ಖವಿಲ್ಲದ ತನ್ನ ಕಪಿ ಸೇನೆಗಳನ್ನುರಾಮ ಚಂದ್ರನ ಮುಂದೆ ನಿಲ್ಲಿಸಿದನು. ಆ ಬಳಿಕ ಗವಾಕ್ಷನೆಂಬ ಮಹಾ ಪರಾಕ್ರಮ ಶಾಲಿಯಾದ ಕಪಿ ಸೇನಾ ನಾಯಕನು ತನ್ನ ಗೋಲಾಂಗೂಲ ಸೇನೆಗಳನ್ನು ರಘೂ

ನಾಥನಿಗೆ ತೋರಿಸಿದನು. ಹೀಗೆ ಧೂಮ್ರನೆಂಬವನೂ, ಜಾಂಬವಂತನೆಂಬವನೂ, ತಮ್ಮ ಕರಡಿಗಳ ಸೇನೆಗಳನ್ನೂ, ನೀಲನೆಂಬವನೂ, ಪನಸನೆಂಬವನೂ, ತಮ್ಮ ಮುಸಿಯ ಸೇನೆಗಳನ್ನೂ ಕಾಣಿಸಿದರು. ಗವಯನೂ, ಗದರೀಮುಖನೂ, ಯೂಥಪನೂ, ಗಜನೂ, ಗಂಧಮಾದನನೂ, ಯುವ ರಾಜನಾದ ಅಂಗದನೂ, ಇಂದ್ರಜಾನುವೂ, ರಂಭನೂ, ದುರ್ಮುಖನೂ, ಹನುಮಂತನೂ, ನಳನೂ, ದಧಿಮುಖನೂ, ಶರಭನೂ, ಕುಮುದನೂ, ಮೊದಲಾದ ಇನ್ನೂ ಅನೇಕರಾದ ಕಪಿ ಸೇನಾಪತಿಗಳು, ತಮ್ಮ ತಮ್ಮ ಸೇನೆಗಳನ್ನು ರಾಮನಿಗೆ ತೋರಿಸಿ, ಕೈಗಳನ್ನು ಮುಗಿದರು.

ಆಗ ಶ್ರೀರಾಮನು ಆ ಕಪಿ ಸೇನೆಗಳನ್ನೂ, ಸೇನಾಪತಿಗಳನ್ನೂ, ಅವರವರ ತೇಜಸ್ಸುಗಳನ್ನೂ, ಆಕೃತಿಗಳನ್ನೂ, ಕೊಬ್ಬನ್ನೂ ನೋಡಿ, ಬಹಳ ಸಂತೋಷ ಪಟ್ಟು, ಸುಗ್ರೀವನನ್ನು ಆಲಿಂಗಿಸಿ ಕೊಂಡು—ಎಲೈ, ಮಿತ್ರನೇ, ಈ ನಿನ್ನ ಸೇನೆಗಳ ಸಹಾಯದಿಂದ ಸಕಲ ಲೋಕವನ್ನು ಜೈಸುವೆನು. ರಾವಣನು ಎಷ್ಟು ಮಾತ್ರದವನು! ಆ ದುಷ್ಟನು ಎಲ್ಲಿ ಇರುವನೋ, ಅದನ್ನು ಗೊತ್ತು ಮಾಡಿಸಿ, ಆ ಸುದ್ದಿಯನ್ನು ತರಿಸಿದರೆ, ಆ ಮೇಲೆ ಮುಂದಣ ಕಾರ್ಯವನ್ನು ಯೋಚಿಸ ಬಹುದು. ಆ ಕೆಲಸಕ್ಕೆ ಕಪಿ ಸೇನಾಪತಿಗಳನ್ನು ನೇಮಿಸು, ಅಂದನು. ಸುಗ್ರೀವನು ರಾಮ ಲಕ್ಷ್ಮಣರ ಮುಂದೆಯೇ ಮೂಡಣ ದಿಕ್ಕಿಗೆ ವಿನತನೆಂಬ ಕಪಿ ಸೇನಾಪತಿಯನ್ನೂ, ತೆಂಕಣ ದಿಕ್ಕಿಗೆ ನೀಲನನ್ನೂ, ಹನುಮಂತನನ್ನೂ, ಬ್ರಹ್ಮನ ಮಗನಾದ ಜಾಂಬವಂತನನ್ನೂ, ಸುಹೋತ್ರನನ್ನೂ, ಇನ್ನೂ ಗಜ, ಗವಾಕ್ಷ, ಗವಯ, ಋಷಭ, ಮೈಂಧ, ದ್ವಿವಿದ, ವಿಜಯ, ಗಂಧಮಾದನ, ಉಲ್ಕಾಮುಖ, ಅಂಗದನೇ ಮೊದಲಾದ ವಾನರ ಶ್ರೇಷ್ಠರನ್ನೂ, ಬಡಗ ದಿಕ್ಕಿಗೆ ತಾರೆಯ ತಂದೆಯಾದ ಸುಷೇಣನನ್ನೂ; ಪಡುವಣ ದಿಕ್ಕಿಗೆ ಶತಬಲಿ ಎಂಬ ಕಪಿಯನ್ನೂ ನೇಮಿಸಿ—ನೀವೆಲ್ಲರು ನಿಮ್ಮ ನಿಮ್ಮ ಸೇನೆಗಳನ್ನು ಕೂಡಿ ಕೊಂಡು ಒಂದು ತಿಂಗಳೊಳಗೆ ನಿಮ್ಮ ನಿಮ್ಮ ದಿಕ್ಕಿನ ಕಡೆಯ ವರಿಗೂ ಆಕಳ ಹೆಜ್ಜೆಯಷ್ಟು ಸ್ಥಳವನ್ನು ಬಿಡದೆ, ಸೀತೆಯನ್ನೂ ರಾವಣನನ್ನೂ ತಡಕಿ, ಗೊತ್ತು ಹತ್ತಿಸಿ ಕೊಂಡು ಬರ ಬೇಕು. ತಿಂಗಳ ಮೇಲೆ ಬಂದವರಿಗೆ ಪ್ರಾಣಾಂತ ಶಿಕ್ಷೆಯನ್ನು ಮಾಡಿಸುವೆನು ಎಂದು, ಅಪ್ಪಣೆಯನ್ನು ಕೊಟ್ಟು, ಕಳುಹಿಸಲು; ಅವರೆಲ್ಲರು ಅದೇ ಪ್ರಕಾರ ತಮ್ಮ ತಮ್ಮ ಬಲಗಳನ್ನು ಕೂಡಿ ಕೊಂಡು, ಹೊರಟು ಹೋದರು.

ಸುಗ್ರೀವನು ಕ್ರೂರವಾದ ಆಜ್ಞೆಯುಳ್ಳವನು ಎಂದು, ಭಯದಿಂದ ಪೂರ್ವ

ಪಶ್ಚಿಮ ಉತ್ತರ ದಿಕ್ಕುಗಳಿಗೆ ನೇಮಿಸಿದ್ದ ವಿನತ, ಶತಬಲಿ, ಸುಷೇಣರೆಂಬವರು ಸೀತಾ ರಾವಣರನ್ನು ಹುಡುಕಿ, ಕಾಣದೆ, ತಿಂಗಳೊಳಗೆ ಸುಗ್ರೀವನ ಬಳಿಗೆ ಬಂದು, ಸೀತಾ ರಾವಣರನ್ನು ಕಾಣಲಿಲ್ಲವೆಂದು ಹೇಳಿದರು. ಇತ್ತಲು ದಕ್ಷಿಣ ದಿಕ್ಕಿಗೆ ಹೋದ ನೀಲ, ಅಂಗದ, ಹನುಮ, ಜಾಂಬವರೇ ಮೊದಲಾದವರು ಋಷ್ಯ ಮೂಕಾದ್ರಿಯಿಂದ ಹೊರಟು, ವಿಂಧ್ಯ ಪರ್ವತವನ್ನು ಶೇರಿ, ಪರ್ವತದ ತೊಪ್ಪಲುಗಳಲ್ಲಿಯೂ, ಗುಹೆಗಳಲ್ಲಿಯೂ ಬಹಳವಾಗಿ ಹುಡುಕಿ, ಹಸಿವು ಬಾಯಾರಿಕೆಗಳಿಂದ ಬೆಂಡಾಗಿ, ಸ್ವಯಂಪ್ರಭೆ ಎಂಬವಳ ಗುಹೆಯನ್ನು ಹೊಕ್ಕು, ಅವಳನ್ನು ಕಂಡು, ತಾವು ಬಂದ ಸುದ್ದಿಯನ್ನು ಹೇಳಲು; ಅವಳು ಇವರಿಗೆ ಹಣ್ಣು ಹಂಪಲನ್ನು ತಿನ್ನುವದಕ್ಕೂ, ತಿಳಿ ನೀರನ್ನೂ ಜೇನು ತುಪ್ಪವನ್ನೂ ಕುಡಿಯುವದಕ್ಕೂ ಕೊಟ್ಟು, ಇವರ ಹಸಿವು ಬಾಯಾರಿಕೆಗಳನ್ನು ನೀಗಿದಳು. ಆಗ ಇವರೆಲ್ಲರು ಆಕೆಯನ್ನು ಕುರಿತು—ಎಲೇ, ತಾಯೇ, ನಿನ್ನ ದಯದಿಂದ ನಮ್ಮ ಕ್ಷುತ್ತು ಅಡಗಿತು. ನಾವು ಬರುವಾಗ ಬಂದೆವು. ಈಗ ಹೋಗುವದಕ್ಕೆ ನಮಗೆ ದಾರಿಯು ತಿಳಿಯುವದಿಲ್ಲ. ನಮ್ಮ ಒಡೆಯನಾದ ಸುಗ್ರೀವನು—ಒಂದು ತಿಂಗಳಲ್ಲಿ ಹಿಂತಿರಿಗಿ ಬಾರದೆ ಇದ್ದರೆ, ನಿಮ್ಮನ್ನೆಲ್ಲಾ ಕೊಂದು ಹಾಕಿಸುವೆನು ಎಂದು, ಅಪ್ಪಣೆ ಮಾಡಿರುವನು. ಆದ್ದರಿಂದ, ಎಲೇ, ತಾಯೇ, ನಮ್ಮನ್ನು ದಯವಿಟ್ಟು ಈ ಗುಹೆಯಿಂದ ಹೊರಗೆ ಹೋಗುವ ಹಾಗೆ ಮಾಡಿದರೆ, ನಮ್ಮ ಪ್ರಾಣಗಳನ್ನು ಕಾಯ್ದವಳು ನೀನೇ ಆಗುತ್ತೀ ಎಂದು ಅಂಗಲಾಚಿ, ಬೇಡಿ ಕೊಳ್ಳಲು; ಆಕೆಯು ಇವರನ್ನು ಕುರಿತು—ಎಲೈ, ಕಪಿ ನಾಯಕರುಗಳಿರಾ, ಸುರಾಸುರರೇ ಮೊದಲಾದವರು ಕೂಡ ಈ ಗುಹೆಯನ್ನು ಹೊಕ್ಕು, ಹಿಂತಿರುಗಿ ಹೋಗಲಾರರು. ಆದಾಗ್ಯೂ ಚಿಂತೆ ಇಲ್ಲ. ನೀವೆಲ್ಲರು ಒಬ್ಬರ ಕೈಯೊಬ್ಬರು ಹಿಡು ಕೊಂಡು, ಕಣ್ಣುಗಳನ್ನು ಮುಚ್ಚಿ ಕೊಳ್ಳಿ, ಎಂದು ಹೇಳಿ, ಆ ಪ್ರಕಾರ ನಡೆದ ಕಪಿಗಳನ್ನು ಕ್ಷಣ ಮಾತ್ರದಲ್ಲಿ ಗುಹೆಯಿಂದ ಹೊರಗೆ ತಂದು ಬಿಟ್ಟು,—ಇಗೋ, ನೀವು ಹೊರಗೆ ಬಂದಿರಿ. ಇನ್ನು ಮೇಲೆ ನಿಮ್ಮೊಡೆಯನ ಅಪ್ಪಣೆಯಾದಂತೆ ನಡೆಯಬಹುದು ಎಂದು ಹೇಳಿ, ಗುಹೆಯನ್ನು ಹೊಕ್ಕಳು.

ಆ ಮೇಲೆ ಅಂಗದನು ದಿಕ್ಕುಗಳನ್ನು ನೋಡಿ, ಶರತ್ಕಾಲವು ಹೋಗಿ, ಹೈಮಂತ ಕಾಲವು ಬಂದದ್ದನ್ನು ತಿಳಿದು, ಮಹಾತಂಕ ಯುಕ್ತನಾಗಿ ಜಾಂಬವರೇ ಮೊದಲಾದವರನ್ನು ಕುರಿತು—ಇಗೋ, ಸುಗ್ರೀವನು ನೇಮಿಸಿದ ತಿಂಗಳ ಅವಧಿಯೂ ಮೀರಿ ಹೋಯಿತು; ಸೀತಾ ರಾವಣರನ್ನು ಕಾಣಲೂ

ಇಲ್ಲ. ನಾವು ತಿರಿಗಿ ಹೋದರೆ, ನಮ್ಮನ್ನು ಕಲ್ಲು ಗಾಣಗಳಿಗೆ ಹಾಕಿಸಿ, ಅರಸಿ ಬಿಡುವನು. ತಿರಿಗಿ ಅವನ ಬಳಿಗೆ ಹೋಗಿ, ಅವನಿಂದ ಕೊಲ್ಲಿಸಿ ಕೊಳ್ಳುವದಕ್ಕಿಂತ ನಾವೇ ಈ ವಿಂಧ್ಯ ಪರ್ವತದಲ್ಲಿ ಅನ್ನ ನೀರುಗಳನ್ನು ತೊರೆದು, ಪ್ರಾಣಗಳನ್ನು ಬಿಡುವದು ಲೇಸು, ಎಂದು ಹೇಳಲು; ಎಲ್ಲಾ ಕೋಡಗಗಳು ಒಪ್ಪಿ, ಕೂಡಿ ಬಂದು, ಒಂದು ಅರೇ ಬಂಡೆಯ ಮೇಲೆ ಕುಳಿತು ಕೊಂಡು, ನಿರಶನ ವ್ರತವನ್ನು ಕೈ ಕೊಂಡು, ಈ ಸೀತೆಯಿಂದ ವಿರಾಧನೆಂಬ ರಾಕ್ಷಸನೂ, ಕಬಂಧನೆಂಬ ನಿಶಾಚರನೂ, ಖರ ದೂಷಣರೇ ಮೊದಲಾದ ಹದಿನಾಲ್ಕು ಸಾವಿರ ರಾಕ್ಷಸರೂ, ಜಟಾಯುವೆಂಬ ಗೃಧ್ರ ರಾಜನೂ, ಇವರು ಮೊದಲಾದವರೆಲ್ಲಾ ಸತ್ತರು. ಇವರ ಹಾಗೆ ನಾವೂ ಈ ಸೀತೆಗಾಗಿ ಸಾಯ ಬೇಕಾಗಿ ಬಂತು, ಎಂದು ಮಾತಾಡಿ ಕೊಳ್ಳುತ್ತಿರಲು; ಅವರ ಸಮೀಪದಲ್ಲಿ ಗರಿ ಸೀದು ಬಿದ್ದು ಇದ್ದ ಸಂಪಾತಿ ಎಂಬ ಗೃಧ್ರ ರಾಜನು ಈ ಕಪಿಗಳನ್ನು ಕುರಿತು—ನೀವು ಯಾರಪ್ಪ? ನನ್ನ ತಮ್ಮನಾದ ಜಟಾಯುವು ಸತ್ತನೆಂದು ಹೇಳಿ, ನನ್ನ ಮನಸ್ಸಿಗೆ ಬಹಳ ದುಃಖವನ್ನು ಮಾಡುವಿರಿ. ಆತನನ್ನು ಯಾರು ಕೊಂದರಪ್ಪಾ? ಏನು ನಿಮಿತ್ಯ ಕೊಂದರು? ಆ ಸುದ್ದಿಯನ್ನು ನನಗೆ ವಿವರವಾಗಿ ತಿಳಿಸಿ, ಎನಲು; ಅಂಗದನು ಆತನನ್ನು ಕುರಿತು—ಅಯೋಧ್ಯಾ ಪಟ್ಟಣದ ಅರಸಾದ ದಶರಥನ ಮಗ ರಾಮನು ದಂಡಕಾ ವನದಲ್ಲಿ ತಂದೆಯ ಅಪ್ಪಣೆಯ ಪ್ರಕಾರ ಇರುತ್ತಿರುವಾಗ್ಯೆ, ಹಗೆತನದಿಂದ ರಾವಣನೆಂಬವನು ಆ ರಾಮನ ಹೆಂಡತಿಯಾದ ಸೀತೆಯನ್ನು ಅವನಿಲ್ಲದ ವೇಳೆಯಲ್ಲಿ ಕಳ್ಳತನದಿಂದ ಕದ್ದು ಕೊಂಡು ಹೋಗುತ್ತಿರುವಲ್ಲಿ, ನಿನ್ನ ತಮ್ಮನಾದ ಜಟಾಯುವು ಆತನಿಗೆ ಸಹಾಯ ಮಾಡುವದಕ್ಕೋಸ್ಕರ ರಾವಣನೊಡನೆ ಜಗಳಕ್ಕೆ ನಿಲ್ಲಲು; ಆತನು ನಿನ್ನ ತಮ್ಮನನ್ನು ಕೊಂದು, ಸೀತೆಯನ್ನು ಎತ್ತಿ ಕೊಂಡು ಹೋದನೆಂದು ತಿಳಿಸಿ, ತಾವು ಆ ಸೀತಾ ರಾವಣರನ್ನು ಹುಡುಕುವದಕ್ಕೆ ಬಂದ ಸುದ್ದಿಯನ್ನು ಆಮೂಲಾಗ್ರವಾಗಿ ಮನವರಿಕೆ ಮಾಡಿದರು.

ಆಗ ಸಂಪಾತಿಯು—ಎಲೈ, ಕಪಿಗಳಿರಾ, ಆ ರಾಮನು ನನ್ನ ಮಿತ್ರನ ಮಗನು. ನಿಮಗೆ ನಾನು ಸಹಾಯವನ್ನು ಮಾಡುವೆನು. ಮೊದಲು ನಾನೂ ನನ್ನ ತಮ್ಮನಾದ ಜಟಾಯುವೂ ನಮ್ಮ ಶಕ್ತಿಗಳನ್ನು ಪರೀಕ್ಷಿಸುವದಕ್ಕೋಸ್ಕರ ಛಲವನ್ನು ಮಾಡಿ ಕೊಂಡು, ಇಬ್ಬರು ಸೂರ್ಯ ಮಂಡಲದ ವರಿಗೂ ಹಾರಿ ಹೋಗಿ, ನಾನು ಸೂರ್ಯನ ಕಿರಣಗಳ ಝಳದಿಂದ ಸಂಕಟ ಪಡುತ್ತಲಿರುವ ನನ್ನ ತಮ್ಮನಿಗೆ ನನ್ನ ಗರಿಗಳನ್ನು ಮರೆ ಮಾಡಲು; ಆತನು ಜನಸ್ಥಾನ

ದಲ್ಲಿ ಬಿದ್ದು, ಗರಿಗಳಿಂದ ಕೂಡಿದ್ದನು. ನಾನು ಸುಟ್ಟು ಹೋದ ಗರಿಗಳುಳ್ಳವನಾಗಿ ಇಲ್ಲಿ ಬಿದ್ದೆನು. ನನ್ನನ್ನು ಕಂಡು, ನಿಶಾಕರನೆಂಬ ಒಬ್ಬ ಮಹಾ ಋಷಿಯು ನನ್ನ ಮೇಲೆ ದಯವಿಟ್ಟು,–ಇಲ್ಲಿಗೆ ರಾಮನ ಕೆಲಸಕ್ಕಾಗಿ ಕಪಿ ಸೇನಾ ನಾಯಕರು ಬರುವರು. ಅವರಿಗೆ ಸೀತಾ ರಾವಣರು ಇರುವ ಸ್ಥಳವನ್ನು ಹೇಳಿ, ನೀನು ಸಹಾಯಮಾಡಿದರೆ, ನಿನ್ನ ಗರಿಗಳು ತಿರಿಗಿ ಹುಟ್ಟುವವು ಎಂದು, ವರವನ್ನು ಕೊಟ್ಟಿದ್ದನು. ಇಗೋ, ನೋಡಿ! ಈ ಸಮುದ್ರದ ಆಚೆಗೆ ನೂರು ಯೋಜನದಲ್ಲಿ ತ್ರಿಕೂಟ ಪರ್ವತದ ಶಿಖರದ ಮೇಲೆ ಲಂಕಾ ಪಟ್ಟಣವೆಂದಿರುವದು. ಅದರಲ್ಲಿ ದುಷ್ಟನಾದ ರಾವಣನು ಇರುವನು. ಅವನ ಅಂತಃಪುರದಲ್ಲಿ ರಾಕ್ಷಸಿಯರ ಕಾವಲಿನಿಂದ ಸೀತೆ ಇರುವಳು. ನಾವು ಹದ್ದುಗಳಾದ್ದರಿಂದ, ನಮ್ಮ ದೃಷ್ಟಿಯು ಬಹು ದೂರ ನೋಡುವದು. ಇಗೋ, ಸೀತೆಯು ನನಗೆ ಕಾಣುತ್ತಾಳೆ! ನೀವು ಸಮುದ್ರವನ್ನು ದಾಟಿ, ಲಂಕೆಗೆ ಹೋದರೆ, ಸೀತೆಯನ್ನು ಕಾಣುವಿರಿ. ನನ್ನ ರೆಕ್ಕೆಗಳು ಹುಟ್ಟುತ್ತಲಿವೆ. ನೋಡಿ! ಎಂದು ತೋರಿಸಿದನು.

ಆ ಮಾತನ್ನು ಕೇಳಿ, ಕಪಿ ಸೇನಾಪತಿಗಳು ನಿಧಿಯನ್ನು ಕಂಡ ಗೋಪಾಳದವರಂತೆಯೂ, ಚಂದ್ರನನ್ನು ಕಂಡ ಚಕೋರಗಳಂತೆಯೂ, ಮಳೆಗಾಲವನ್ನು ಕಂಡ ನವಿಲುಗಳಂತೆಯೂ, ಮುಂಗಾರು ಹನಿಗಳನ್ನು ಕಂಡ ಚಾತಕ ಪಕ್ಷಿಗಳಂತೆಯೂ, ಸಂತೋಷ ಪಟ್ಟು, ಎಲ್ಲರು ಆ ಅರೇ ಬಂಡೆಯ ಮೇಲಿನಿಂದ ಎದ್ದು, ಸಮುದ್ರದ ದಡವನ್ನು ಬಂದು ಶೇರಿದರು.

69. Anjaneya discovers Site and burns the city of Lanka.

೬೯. ಆಂಜನೇಯನು ಸೀತೆಯನ್ನು ಕಂಡು ಕೊಂಡು ಲಂಕಾ ಪಟ್ಣವನ್ನು ಸುಟ್ಟದ್ದು.

ಕಪಿ ಸೇನಾಪತಿಗಳಾದ ಜಾಂಬವ, ಅಂಗದ, ಆಂಜನೇಯ, ಮುಂತಾದವರು ಘೋರತರವಾದ ತೆರೆಗಳ ಆರ್ಭಟೆಯಿಂದ ಒಪ್ಪಿ ಇರುವ ಸಮುದ್ರವನ್ನು ಕಂಡು, ವ್ಯಾಕುಲದಿಂದ–ಇದನ್ನು ಹ್ಯಾಗೆ ದಾಟುವದು? ಹ್ಯಾಗೆ ಲಂಕೆಯನ್ನು ಶೇರುವದು? ಸೀತಾ ರಾವಣರನ್ನು ಕಂಡು ತಿರಿಗಿ ಬರುವ ಬಗೆ ಹ್ಯಾಗೆ? ಎಂದು, ಕೈಗಳಲ್ಲಿ ಕೆನ್ನೆಯನ್ನು ಇಟ್ಟು ಕೊಂಡು, ಮುಂಗಾಣದೆ, ಕಂಗೆಟ್ಟು, ಕುಳಿತು ಕೊಂಡಿರಲು; ಆಗ ಜಾಂಬವಂತನು ಸಮಸ್ತ ಕಪಿಗಳನ್ನು ನೋಡಿ–ಎಲೈ, ಕಪಿಗಳೇ, ದೇವತೆಗಳಿಂದಲೂ, ದಾಟಲಶಕ್ಯವಾದ ಈ ಸಮುದ್ರವನ್ನು ನಮ್ಮ ಕಪಿ ಸೇನೆಯೊಳಗೆ ದಾಟಿ ಹಿಂತಿರಿಗಿ ಬರುವಂಥ ಶೂರರು ಯಾರು ಇದ್ದಾರೆ? ಎಂದು ಕೇಳಲು; ಅಂಗದನು ಎದ್ದು–ಸ್ವಾಮೀ, ಶಿವನಂತಿರುವ ನಿಮ್ಮ

ಬಲವು ನಮಗಿರುವಲ್ಲಿ ಈ ಸಮುದ್ರವನ್ನು ದಾಟುವದು ಎಷ್ಟರ ಕೆಲಸ? ಈ ಸಮುದ್ರವನ್ನೇ ಕುಡಿದು ಬಿಡುವಂಥ ಭಟರು ಇದ್ದಾರೆ ಎಂದು ಹೇಳಿ, ಕಪಿಗಳ ಮುಖವನ್ನು ನೋಡಲು; ಕಪಿಗಳೆಲ್ಲಾ ಎದ್ದು, ತೋಳನ್ನು ಅಪ್ಪಳಿಸಿ ಕೊಂಡು, ಹಲ್ಗಿರಿದು, ಆರ್ಭಟಿಸಲು; ಜಾಂಬವಂತನು—ಹೋ! ಹೋ! ಸೈರಿಸಿ! ಮೂರು ಲೋಕದಲ್ಲಿಯೂ ನಿಮ್ಮಂಥ ವೀರರು ಇಲ್ಲ. ಆದರೆ ಲಂಕೆಯನ್ನು ದಾಟಿ ಬರ ಬೇಕಾದರೆ, ನಾನಾ ಉಪಾಯಗಳನ್ನು ಮಾಡ ಬೇಕು; ಜಾನಕಿಯನ್ನು ಕಂಡು ಬರ ಬೇಕು. ಇಷ್ಟು ಸಾಮರ್ಥ್ಯ ನಿಮ್ಮಲ್ಲಿ ಯಾರಿಗುಂಟು? ಎಂದು ಕೇಳಲು; ಕಪಿ ವೀರರೆಲ್ಲಾ ಒಟ್ಟಾಗಿ ಎದ್ದು, ತಮ್ಮ ತಮ್ಮ ಸಾಮರ್ಥ್ಯವನ್ನೆಲ್ಲಾ ಹೇಳಿ ಕೊಳ್ಳಲು; ಜಾಂಬವಂತನು—ನಾನು ಪೂರ್ವದಲ್ಲಿ ಯೌವನಸ್ಥನಾಗಿ ಇದ್ದ ವೇಳೆಯಲ್ಲಿ, ಇದು ನನಗೆ ಲಕ್ಷ್ಯವಿರಲಿಲ್ಲ. ಈಗ ಅಜ್ಜುಗುಜ್ಜು ಮುದುಕನಾಗಿದ್ದೇನೆ. ಆದರೂ ನೂರು ಯೋಜನವನ್ನು ಹಾರುವೆನು. ತಿರಿಗಿ ನೂರು ಯೋಜನವನ್ನು ಹಾರಿ ಬರುವದಕ್ಕೆ ಶಕ್ತಿ ಉಂಟಾದೀತೋ, ಇಲ್ಲವೋ? ಎಂಬ ಸಂದೇಹವಾಗಿದೆ, ಎನ್ನಲು;—

ಆಗ ಅಂಗದನು ನೀವೆಲ್ಲರು ನೋಡುತ್ತಲಿರ್ರಿ. ನಾನು ಈ ನೂರು ಯೋಜನವನ್ನು ದಾಟಿ, ಸೀತಾ ರಾವಣರನ್ನು ಕಂಡು, ತಿರಿಗಿ ಬರುವೆನು ಎಂದು ಹೇಳಿದ್ದಕ್ಕೆ ಜಾಂಬವಂತನು—ನಾವು ಇಷ್ಟು ಜನವಿದ್ದು, ಯುವರಾಜನಾಗಿ, ಧೊರೆಯ ಮಗನಾದ ನಿನ್ನನ್ನು ಹಗೆಯ ಪಟ್ಟಣಕ್ಕೆ ಏಕಾಂಗಿಯಾಗಿ ಕಳುಹಿಸುವದು ನ್ಯಾಯವಲ್ಲ. ರಾಮಚಂದ್ರನೂ ಸುಗ್ರೀವನೂ ಒಪ್ಪಲಾರರು ಎಂದು, ಎಲ್ಲರನ್ನು ಸುಮ್ಮನಿರಿಸಿ, ಬುದ್ಧಿ, ಶಕ್ತಿ, ಪರಾಕ್ರಮಶಾಲಿಯಾದ ಹನುಮಂತನನ್ನು ನೋಡಿ—ಎಲೈ, ಮಹಾನುಭಾವನೇ, ಇಂಥಾ ವೇಳೆಯಲ್ಲಿ ನೀನು ಯಾಕೆ ಒಂದು ಮಾತನ್ನೂ ಆಡದೆ, ಸುಮ್ಮನೆ ಕುಳಿತಿದ್ದೀ? ನೀನು ಮನಸ್ಸು ಮಾಡಿದರೆ, ಇದೆಷ್ಟರ ಕೆಲಸ! ನಾವೆಲ್ಲರು ನಿನ್ನಿಂದ ತಿರಿಗಿ ಸುಗ್ರೀವ ರಾಮರ ಸನ್ನಿಧಿಗೆ ಹೋಗಿ, ನಮ್ಮ ಹೆಂಡರು ಮಕ್ಕಳ ಮೋರೆಯನ್ನು ನೋಡುವೆವು. ನಮ್ಮೊಡೆಯನಾದ ಸುಗ್ರೀವನು ಕೃತಕೃತ್ಯನಾಗುವನು. ರಾಮನು ರಾವಣನನ್ನು ಕೊಂದು, ಸೀತೆಯನ್ನು ಕೂಡಿ, ಸಂತೋಷ ಪಡುವನು. ನೀನು ಉದಾಸೀನವನ್ನು ಮಾಡಿದರೆ, ರಾಮ ಲಕ್ಷ್ಮಣರೂ, ಸುಗ್ರೀವನೂ, ನಾವೂ, ಪ್ರಾಣಗಳನ್ನು ಬಿಡುವೆವು. ನೀನು ಧೈರ್ಯದಿಂದ ಈ ಕೆಲಸವನ್ನು ನಿರ್ವಹಿಸ ಬೇಕೆಂದು ಬೇಡಿ ಕೊಳ್ಳಲು; ಹನುಮಂತನು ಉತ್ಸಾಹ ಶೀಲನಾಗಿ, ಅಂಗದ ಜಾಂಬವಂತ ಮೊದಲಾದವರನ್ನು ಸಮಾಧಾನ ಪಡಿಸಿ, ಸಮುದ್ರದ ಥಡದಲ್ಲಿರುವ ಮಹೇಂ

ದ್ರ ಪರ್ವತದ ಮೇಲಕ್ಕೆ, ಕಪಿ ಸೇನೆಗಳೊಡನೆ ಕೂಡಿ ಹತ್ತಿ, ಅಲ್ಲಿಂದ ಆಕಾಶ ಮಾರ್ಗಕ್ಕೆ ನೆಗಿದು ಬರುತ್ತಿರುವ ಕಾಲದಲ್ಲಿ, ಮೈನಾಕವೆಂಬ ಪರ್ವತವು ಸಮುದ್ರ ಮಧ್ಯದಿಂದ ಹೊರಟು, ಆಂಜನೇಯನನ್ನು ನಾನಾ ಪ್ರಕಾರವಾಗಿ ಉಪಚರಿಸಲು; ಅದಕ್ಕೆ ಸಂತೋಷ ಪಟ್ಟು,—ನಾನು ಸೀತೆಯನ್ನು ಕಂಡು, ಆ ವರ್ತಮಾನವನ್ನು ಶ್ರೀರಾಮನಿಗೆ ಹೇಳುವ ವರಿಗೂ, ಅನ್ನೋದಕಗಳನ್ನು ತೆಗೆದು ಕೊಳ್ಳುವದಿಲ್ಲವೆಂದು ಶಪಥವನ್ನು ಮಾಡಿದ್ದೇನೆ. ಆದ್ದರಿಂದ ನನ್ನ ಕಾರ್ಯ ಶೀಘ್ರದಲ್ಲಿ ಕೈ ಕೂಡುವ ಹಾಗೆ ಅನುಗ್ರಹಿಸ ಬೇಕು, ಎಂದು ಹೇಳಿ, ಅಲ್ಲಿಂದ ಮುಂದೆ ಹೋಗುತ್ತ, ತನ್ನ ಶೌರ್ಯವನ್ನು ಪರೀಕ್ಷಿಸ ಬೇಕೆಂದು ಇಂದ್ರನು ಕಳುಹಿಸಿದ ಸುರಸೆ ಎಂಬುವಳನ್ನು ಉಪಾಯದಿಂದ ಜೈಸಿ, ತನ್ನನ್ನು ಕೊಂದು ಹಾಕುತ್ತೇನೆಂದು ಆರ್ಭಟಿಸಿ ಕೊಂಡು ಬಂದ ಸಿಂಹಿಕೆ ಎಂಬ ರಾಕ್ಷಸಿಯನ್ನು ಎರಡು ಭಾಗವಾಗಿ ಶೀಳಿ, ಒಂದು ಹೋಳನ್ನು ಲಂಕಾ ಪಟ್ಟಣಕ್ಕೂ, ಮತ್ತೊಂದು ಹೋಳನ್ನು ಜಾಂಬವಾದಿಗಳಿರುವ ಸ್ಥಳಕ್ಕೂ ಬಿಸಾಟು, ಅತಿ ವೇಗದಿಂದ ಮುಂದಕ್ಕೆ ಹಾರಿ ಬಂದು, ಲಂಕಾ ಪಟ್ಟಣದ ಬಳಿಯಲ್ಲಿರುವ ಲಂಬನಾಮಕ ಪರ್ವತಕ್ಕೆ ಇಳಿದು, ಪಟ್ಣವನ್ನು ಕಂಡನು.

ಆ ಲಂಕಾ ಪಟ್ಟಣವು ಹ್ಯಾಗಿತ್ತಂದರೆ—ಸೂರ್ಯ ಮಂಡಲವನ್ನು ಮುಟ್ಟಿ ಇರುವ ಕೋಟೆಗಳುಳ್ಳದ್ದಾಗಿಯೂ—ಪಚ್ಚೆಗಳಿಂದ ಕೆತ್ತಲ್ಪಟ್ಟಿರುವ ಕೋಟೇ ತೆನೆಗಳುಳ್ಳದ್ದಾಗಿಯೂ—ಸೂರ್ಯ ಕೋಟಿ ಕಾಂತಿಯುಳ್ಳ ತ್ರಿಕೂಟಾಚಲದ ಮೇಲೆ ರಂಜಿಸುವಂಥಾದ್ದಾಗಿಯೂ—ನಾನಾ ಪುಷ್ಪ ಫಲ ಭರಿತಗಳಾದ ವೃಕ್ಷಗಳಿಂದಲೂ, ಲತೆಗಳಿಂದಲೂ, ನಾನಾ ಜಲ ಪಕ್ಷಿಗಳ ವಿಚಿತ್ರ ಧ್ವನಿಗಳಿಂದಲೂ, ಶೋಭಾಯಮಾನಗಳಾದ ಸರಸ್ಸುಗಳಿಂದಲೂ, ಶೈತ್ಯ ಸೌರಭ್ಯ ಮಾಂದ್ಯ ಯುಕ್ತವಾದ ಮಲಯ ಮಾರುತದಿಂದಲೂ, ಕಿವಿಗಿಂಪಾಗಿಯೂ ಇನಿದಾಗಿಯೂ ಇರುವ ಹಾಗೆ ಕೂಗುತ್ತಲಿರುವ ಶುಕ, ಪಿಕ, ಶಾರಿಕಾದಿಗಳಿಂದಲೂ, ಕಮಲ ಮೊದಲಾದ ಪುಷ್ಪಗಳ ಮಕರಂದ ರಸ ಪಾನವನ್ನು ಮಾಡಿ ಮದಿಸಿರುವ ತುಂಬಿಗಳ ಝೇಂಕಾರಗಳಿಂದಲೂ, ಮರುಗ, ಮಲ್ಲಿಗೆ, ಜಾಜಿ, ಸುರಗಿ, ವಕುಳ, ಶಾವಂತಿಗೆ, ಪಾಟಲಿ, ನಾಗಸಂಪಿಗೆ, ಕರವೀರ, ಇತ್ಯಾದಿ ನಾನಾ ಜಾತಿಯ ಪುಷ್ಪಗಳಿಂದಲೂ, ಕದಳಿ, ನಾರಿಕೇಳ, ಜಂಬು, ಫನಸ, ಚೂತ, ನಿಂಬೆ, ದಾಡಿಮ, ದ್ರಾಕ್ಷೆ, ಮಾದಲ, ಅಂಜೂರ, ಖರ್ಜೂರ, ಲವಂಗ, ಮೊದಲಾದ ವೃಕ್ಷ ಜಾತಿಗಳಿಂದಲೂ,—ಹಂಸ, ಕಾರಂಡ, ಚಕ್ರವಾಕ, ಕ್ರೌಂಚ, ಗರುಡ, ಮುಂತಾದ ಪಕ್ಷಿ ಜಾತಿಗಳಿಂದಲೂ, ಹುಲ್ಲೆ, ಎರಳೆ, ಕಸ್ತೂರಿ ಮೃಗ, ಚಮರಿ ಮೃ

ಗ, ವರಾಹ, ಭಲ್ಲೂಕ, ಶರಭ, ಸಾಲ್ವ, ಶಾರ್ದೂಲ, ಮೊದಲಾದ ಪಶು ಜಾತಿಗಳಿಂದಲೂ, ರಂಜಿಸುವ ಉದ್ಯಾನ ವನಗಳಿಂದ ಶೋಭಿಸುವಂಥಾದ್ದಾಗಿಯೂ,—ಮರಕತ ಶಿಲೆಯ ಸೋಪಾನಗಳಿಂದಲೂ, ಇಂದ್ರನೀಲ ಮಣಿಯ ಗೋಡೆಗಳಿಂದಲೂ, ವಜ್ರದ ಕಂಭಗಳಿಂದಲೂ, ಅತಿ ರಮಣೀಯವಾಗಿ ಶೋಭಿಸಿತು. ಹೀಗೆ ಶೋಭಿಸುವ ಉದ್ಯಾನ ವನವನ್ನು ನೋಡಿ, ಆಶ್ಚರ್ಯದಿಂದ ತಲೆದೂಗುತ್ತಾ, ಮತ್ತು ಪರಮೇಶ್ವರನಿಗೆ ಆವಾಸಸ್ಥಾನವಾದ ರಜತಾದ್ರಿಯೋಪಾದಿಯಲ್ಲಿ ಭೂಮಂಡಲದಲ್ಲಿರುವ ಸಕಲ ಪರ್ವತಗಳು ತನಗೆ ಸಮನಲ್ಲವೆಂದು ಬೆರತು ಇಥೆಯೋ ಎಂಬಂತೆ, ನಟ್ಟಗೆ ನಿಂತು ಇರುವ ತ್ರಿಕೂಟಾಚಲದ ಮೇಲೆ ನವರತ್ನ ಯುಕ್ತವಾದ, ಜೀವರತ್ನ ಕೆತ್ತಿ ಇರುವ, ಮೇಘ ಮಂಡಲವನ್ನು ಆಕ್ರಮಿಸಿ ಕೊಂಡಿರುವ ಕೋಟೆಗಳಿಂದಲೂ, ಕನಕ ಮಯಗಳಾಗಿ ಸೂರ್ಯ ಮಂಡಲವನ್ನು ಭೇದಿಸಿ ಕೊಂಡು ಹೋಗಿರುವ ಕೊತ್ತಲುಗಳಿಂದಲೂ ಹವಳದ ಬೋದಿಗೆಗಳಿಂದಲೂ, ಚಂದ್ರ ಮಂಡಲವನ್ನು ಪಕ್ಷಿಯ ಆಳ್ವೇರಿಗಳಿಂದ ಆಕ್ರಮಿಸಿ ಕೊಂಡು ಇರುವ ಥಳಥಳಾಯಮಾನವಾಗಿ ಮೇರು ಶಿಖರದ ಹಾಗೆ ರಾಜಿಸುತ್ತಿರುವ ರತ್ನ ಕಲಶಗಳಿಂದಲೂ, ಒಪ್ಪುತ್ತಾ, ಅಮರಾವತಿಯನ್ನು ಜರಿಯುವಂತೆ ರಂಜಿಸುತ್ತಲಿರುವ ಲಂಕಾ ಪಟ್ಟಣವನ್ನು ನೋಡಿ, ಆಂಜನೇಯನು ಅದರ ಕಾಂತಿಯನ್ನು ನೋಡಲಾರದೆ, ಒಂದು ಕ್ಷಣ ಮಾತ್ರ ಮನಸ್ಸಿನಲ್ಲಿ ರಾಮನ ಪಾದವನ್ನು ನೆನೆಯುತ್ತಾ, ಕಣ್ಣು ಮುಚ್ಚಿ, ಆ ಪಟ್ಟಣದ ದ್ವಾರದ ಸಮೀಪಕ್ಕೆ ಬಂದನು.

ಆ ದ್ವಾರ ಪ್ರದೇಶವು ಹ್ಯಾಗಿತ್ತಂದರೆ—ಸಾಲು ಮುತ್ತಿನ ಗೊಂಚಲುಗಳು ಕಟ್ಟಿ ಇರುವ ತೋರಣಗಳಿಂದಲೂ, ಸುವರ್ಣದ ಥಳುಕುಗಳು ಬಿಗಿದು ಇರುವ ಕೋಟೆ ಸಾಲು ತೋರಣಗಳಿಂದಲೂ, ರತ್ನ ಖಚಿತಗಳಾದ ಕವಾಟಗಳಿಂದಲೂ, ವಜ್ರದ ಕಂಭಗಳಿಂದಲೂ, ಮುತ್ತಿನ ಗೋಡೆಗಳಿಂದಲೂ, ಕರ್ಪೂರದ ದೀವಿಗೆಗಳಿಂದಲೂ, ಘಟ್ಟಿಯಾಗಿ ನಟ್ಟಿರುವ ಧ್ವಜ ಪತಾಕೆಗಳಿಂದಲೂ, ಶೋಭಿಸುತ್ತಿತ್ತು. ಮತ್ತು ಆ ದ್ವಾರವನ್ನು ಎಡೆ ಬಿಡದೆ ಹುಲಿ ಮುಖದ ರಾಕ್ಷಸರೂ, ಜ್ಯೋತೀ ಮುಖದ ನಿಶಾಚರರೂ, ಬ್ರಹ್ಮ ರಾಕ್ಷಸರೂ, ಪಿಶಾಚಿಗಳೂ, ಮೊರೆ ಗರೆದು ಕೊಂಡು, ಅತಿ ಭಯಂಕರವಾಗಿ ಆಯುಧ ಪಾಣಿಗಳಾಗಿ ಕಾದು ಕೊಂಡು ಇದ್ದರು. ಇಂಥ ದ್ವಾರ ಪ್ರದೇಶವನ್ನು ಆಂಜನೇಯನು ನೋಡಿ, ಆಶ್ಚರ್ಯ ಪಟ್ಟು, ಚೋರ ಗಂಡಿಯಿಂದ ಒಳ ಹೊಕ್ಕು, ಅಲ್ಲಿ ಒಂದು ನೊಣವನ್ನಾದರೂ ಒಳಗೆ ಬಿಡದ ಹಾಗೆ ಎಚ್ಚರದಿಂದ ಕಾದು

ಕೊಂಡಿರುವ ಲಂಕಿಣಿ ಎಂಬ ರಾಕ್ಷಸಿಯನ್ನು ಯಮನ ಮನೆಗೆ ಕಳುಹಿಸಿ, ಮುಂದಕ್ಕೆ ಹೋಗಿ, ರಾತ್ರಿ ವೇಳೆಯಲ್ಲಿ ಬ್ರಹ್ಮ ಕ್ಷತ್ರ ವೈಶ್ಯ ಶೂದ್ರರ ಬೀದಿಗಳಲ್ಲಿಯೂ, ಆನೆ, ಕುದುರೆ, ರಥ ಇವುಗಳ ಲಾಯಗಳಲ್ಲಿಯೂ, ಗುಡಿ, ಮಂಟಪ ಮೊದಲಾದ ಸ್ಥಳಗಳಲ್ಲಿಯೂ, ಅಂಗಡಿ ಬೀದಿಗಳಲ್ಲಿಯೂ, ಆಟಗಾರರ ಕೇರಿಯಲ್ಲಿಯೂ, ನಾನಾ ರಾಕ್ಷಸರ ಮನೆಗಳಲ್ಲಿಯೂ, ಪ್ರಹಸ್ತನೆಂಬ ರಾವಣನ ಮುಖ್ಯ ಪ್ರಧಾನನ ಮನೆಯಲ್ಲಿಯೂ, ಪೂರ್ವದಲ್ಲಿ ಕಿವಿ ಮೂಗುಗಳನ್ನು ಕಳೆದು ಕೊಂಡು ವಿಕಾರವಾದ ರೂಪುಳ್ಳ ಶೂರ್ಪನಖಿ ಎಂಬ ರಾವಣನ ತಂಗಿಯ ಮನೆಯಲ್ಲಿಯೂ, ಸೀತೆಯನ್ನು ಹುಡುಕಿ, ಕಾಣದೆ, ಅಲ್ಲಿಂದ ಮುಂದಕ್ಕೆ ಹೊರಟು, ಥರಥರದ ಚಿತ್ರ ಮಂಟಪಗಳಿಂದಲೂ, ವಿಚಿತ್ರವಾದ ನಿರಾಜೀ ಮೇಲ್ಕಟ್ಟುಗಳಿಂದಲೂ, ಗಗನವನ್ನು ಮುಟ್ಟುವ ಪತಾಕೆಗಳಿಂದಲೂ ಶೋಭಿಸುತ್ತ, ಇಂದ್ರ ಪುಷ್ಪಕದಂತಿರುವ ಕುಂಭಕರ್ಣನ ಮನೆಯನ್ನು ಹೊಕ್ಕು, ಒಳಗೆ ಘೋರ ರೂಪಿಗಳಾದ ರಾಕ್ಷಸ ಸ್ತ್ರೀಯರು ಬಿದ್ದಿರುವದನ್ನು ನೋಡಿ, ಪಾನ ಭೂಮಿಗಳಲ್ಲಿಯೂ, ಪಾಕ ಶಾಲೆಗಳಲ್ಲಿಯೂ ನೋಡಿ, ಅಂತಃಪುರವನ್ನು ಹೊಕ್ಕು, ಅಲ್ಲಿ—ನೀಲಗಿರೀಂದ್ರನು ಘಾಳಯಿಂದ ಇಲ್ಲಿ ತಂದು ಹಾಕಲ್ಪಟ್ಟಿದ್ದಾನೋ? ಎಂಬಂತೆ, ಕರ್ರಗೆ ಬಿದ್ದಿರುವ ರಾಕ್ಷಸಾಧಮನನ್ನು ನೋಡಿ,—ಇವನು ಕೊಲೆಗೆಲಸವನ್ನು ಮಾಡಿ, ಬಳಲಿ, ಬಿಗಿದ ನಿದ್ರೆಯಿಂದ ಬಿದ್ದಿರುವ ಭೈರವನೋ? ಲಯಕೃತಾಂತಕನೋ? ಸಮುದ್ರವನ್ನು ಕುಡಿದು ತೃಪ್ತನಾಗಿ ಬಿದ್ದಿರುವ ಬಡಬಾನಲನೋ? ಎಂದು ಬೆರಗಾಗುತ್ತ, ಇವನೇನಾದರೂ ಲೋಕವನ್ನು ನುಂಗ ಬೇಕೆಂದು ಎದ್ದರೆ, ಹರಿ, ಹರ, ಬ್ರಹ್ಮಾದಿ ದೇವತೆಗಳಲ್ಲಿಯೂ, ಭುಜಂಗಮರಲ್ಲಿಯೂ, ಮನುಷ್ಯರಲ್ಲಿಯೂ, ಬೇಕು ಬೇಡೆಂಬುವವರನ್ನು ಕಾಣೆನು ಎಂದು, ಮನಸ್ಸಿನಲ್ಲಿ ಭಯ ಪಡುತ್ತ, ಈ ಭೂಲೋಕವನ್ನೆಲ್ಲಾ ಮುಳುಗಿಸಿ ತೇಲಿಸುವ ಪ್ರಳಯ ಕಾಲ ಸಮುದ್ರದ ರಭಸದಂತೆಯೂ, ಪಿನಾಕಿಯ ಡಮುರುಗ ಧ್ವನಿಯಂತೆಯೂ, ಕರ್ಣ ಕಠೋರವಾದ ಆತನ ಉಸುರನ್ನು ಆಲೈಸಿ, ಕೇಳುತ್ತ, ಅವನ ಮೂಗಿನಲ್ಲಿ ಪ್ರವೇಶಿಸಿ, ಅವನು ಉಸುರು ಶೇದಿದಾಗ ಮೇಲಕ್ಕೆ ಹೋಗುತ್ತಾ, ಉಸುರು ಬಿಡುವಾಗ ಕೆಳಗೆ ಬರುತ್ತಾ, ಆ ಮೇಲೆ ಆ ರಾಕ್ಷಸನು ಕೆಲವು ಹೊತ್ತು ಉಸುರು ಬಿಡದೆ ಇರಲು; ಆಂಜನೇಯನು ಹೊರಗೆ ಬರುವದಕ್ಕೆ ಕೂಡದೆ, ದಿಗುಲು ಬಿದ್ದು, ಅವನ ಮೂಗಿನ ಸೊಳ್ಳೆಯಲ್ಲಿ ಬೆಳೆದು, ಕೀಲು ಕೊಟ್ಟಂತೆ ಮಾಡಲು; ಆ ರಕ್ಕಸನಿಗೆ ಉಬ್ಬಸವಾದಂತೆ ಆಗಲು; ಅವನು ಬರ ಶಿಡಿಲು ಶಿಡಿದ ಹಾಗೆ

ಶೀತನು. ಆಗ ಆಂಜನೇಯನು ಉಲ್ಕಾಪಾತದಂತೆ ಶಿಡಿದು, ವಜ್ರದ ಕಂಭಕ್ಕೆ ಬಡಿದು, ಬಹು ಯಾತನೆ ಪಟ್ಟು, ಕೋಪಗೊಂಡು,—ಹಲ್ಲು ಕಡಿಯುತ್ತಾ, ಇವನನ್ನು ಕೊಲ್ಲ ಬೇಕೆಂದು ಬೊಬ್ಬಿರಿದು, ಅಲ್ಲಿ ಇಟ್ಟಿದ್ದ ಶೂಲವನ್ನು ತೆಗೆದು ಕೊಂಡು, ಕುಂಭಕರ್ಣನ ಎದೆಯನ್ನು ತಿವಿಯಲು; ಆತನಿಗೆ ನೊಣ ಕಡಿತದಷ್ಟು ನೋವು ಆಗಲಿಲ್ಲ. ಆಗ ಆಂಜನೇಯನು, ಮಲಗಿದವರನ್ನು ಕೊಲ್ಲುವದು ಶೂರರಿಗೆ ವಿಹಿತವಲ್ಲವೆಂದು ತನ್ನೊಳಗೆ ತಿಳಿದು ಕೊಂಡು, ಅವನ ಮನೆಯಲ್ಲೆಲ್ಲಾ ಹುಡುಕಿ, ಸೀತೆಯನ್ನು ಕಾಣದೆ, ಅಲ್ಲಿಂದ ಹೊರಟು,—ಗರುಡ ಧ್ವಜದಿಂದ ಯುಕ್ತವಾಗಿಯೂ, ರತ್ನ ಖಚಿತವಾದ ವಿಮಾನಗಳುಳ್ಳದ್ದಾಗಿಯೂ, ಪಚ್ಚೇ ಕಲಶಗಳುಳ್ಳದ್ದಾಗಿಯೂ, ಹೊಳೆಯುತ್ತಿರುವ ವಿಭೀಷಣನ ಮನೆಯನ್ನು ಹೊಕ್ಕು, ಸೂಕ್ಷ್ಮ ರೂಪದಿಂದ ಹುಡುಕುತ್ತ ಇರಲಾಗಿ—ಎಲೈ, ವಾನರಾಧೀಶ್ವರನೇ, ಸೀತೆಯನ್ನು ಹುಡುಕುವ ಠಾವು ಇದಲ್ಲವೆಂದು, ಅಶರೀರ ವಾಕ್ಯ ನುಡಿಯಲು; ಆಂಜನೇಯನು ಆ ಧ್ವನಿಯನ್ನು ಕೇಳಿ, ಅಲ್ಲಿಂದ ಮುಂದಕ್ಕೆ ಹೊರಟು, ನವ ರತ್ನ ಕೆತ್ತಿರುವ ಕೋಟೆಗಳ ಸಾಲುಗಳಿಂದಲೂ, ಕನಕ ಖಚಿತವಾದ ಕೊತ್ತಲುಗಳಿಂದಲೂ, ಸುವರ್ಣ ಕಲಶಗಳಿಂದಲೂ, ಬಾಲಾರ್ಕ ಕೋಟಿ ಪ್ರಕಾಶಮಾನವಾದ ದ್ವಾರ ಬಂಧಗಳಿಂದಲೂ ರಂಜಿಸುತ್ತಿರುವ ರಾಕ್ಷಸಾಧಮನಾದ ರಾವಣನ ಅರಮನೆಯನ್ನು ಹೊಕ್ಕು, ಅಮರಾವತಿ ಪಟ್ಣವನ್ನು ಜರೆಯುವ ಆತನ ಸಭಾಸ್ಥಾನಕ್ಕೆ ಬಂದನು.

ಆ ಸಭೆಯು ಸುವರ್ಣ ಮಯವಾಗಿಯೂ, ಮುತ್ತಿನ ತೋರಣ ಮೇಲ್ಕಟ್ಟುಗಳುಳ್ಳದ್ದಾಗಿಯೂ ಶೋಭಿಸುತ್ತಿತ್ತು. ಮತ್ತು ಒಂದು ಕಡೆಯಲ್ಲಿ ಭೇರಿ, ಮೃದಂಗ, ಡಂಕ, ನಗಾರಿ, ರಣಮೌರಿ, ಮುಂತಾದ ವಾದ್ಯಗಳು ಭೋರ್ಗರೆಯುತ್ತಿದ್ದವು. ಮತ್ತೊಂದು ಕಡೆಯಲ್ಲಿ ವೀಣೆ, ತಂಬೂರಿ, ಸಾರಂಗ ನಾದವನ್ನು ಮಾಡುತ್ತ, ಮಾಣಿಕ್ಯದ ದೀಡುಗಳ ಮೇಲೆ ಕುಳಿತು ಕೊಂಡು, ಮುತ್ತಿನ ದಿಂಬುಗಳನ್ನು ಒರಗಿ ಕೊಂಡು, ಗಂಧರ್ವರು ಗಾಯನವನ್ನು ಮಾಡುತ್ತಿದ್ದರು. ಮತ್ತೊಂದು ಕಡೆಯಲ್ಲಿ ಬಡ ನಡು ಬಳುಕುತ್ತ, ಹುಬ್ಬು ಹಾರಿಸಿ ಕೊಂಡು, ಝುರ್ತಾರೀ ಶೀರೆಯನ್ನು ಉಟ್ಟು ಕೊಂಡು, ಕಡಗ ಕಂಕಣಾದಿ ಸರ್ವಾಭರಣಗಳನ್ನು ಇಟ್ಟು ಕೊಂಡು, ವಾರ ವಿಲಾಸಿನೀ ಜನರು ನರ್ತಿಸುತ್ತಿದ್ದರು. ಮತ್ತು ಆ ಸಭೆಯಲ್ಲಿ ವಿಶ್ವಕರ್ಮನೇ ಬಡಗಿಯು; ಕುಬೇರನೇ ಬೊಕ್ಕಸದವನು; ಗುರುವೇ ಜೋಯಿಸನು; ಇಂದ್ರಾದಿಗಳೇ ಸೇವಕರು. ಮತ್ತು ಅಗಿಲು ಚಂದನ ಮೊದಲಾದ ಪರಿಮಳ ದ್ರವ್ಯಗಳು ಘುಮಘುಮಿಸುತ್ತಿ

ದ್ದವು. ಇಂಥ ಸಭಾಸ್ಥಾನದಲ್ಲಿ ಸುತ್ತಲು ನೋಡಿ, ಅಲ್ಲಿಂದ ಅಂತಃಪುರಕ್ಕೆ ಹೋಗಲು; ಆ ಮಲಗುವ ಮನೆಯ ಬಾಗಲಿನಲ್ಲಿ ಹುಲಿ, ಕರಡಿ, ಸಿಂಹ, ಶಿವಂಗಿ, ಇತ್ಯಾದಿ ಮೃಗಗಳ ಮುಖದಂತೆ ಮುಖಗಳುಳ್ಳ ರಾಕ್ಷಸರು ತಮ್ಮ ಆಯುಧಗಳನ್ನು ಹಿಡಿದು ಕೊಂಡು, ಕಾದು ಇದ್ದರು. ಅಲ್ಲಿ ಲಕ್ಷ ಜನ ಹೆಂಗಸರು ಸಾಲು ಮಂಚಗಳ ಮೇಲೆ ಹೊಳಹೊಳೆವ ಕಿರು ದಾಡೆಗಳಿಂದಲೂ, ಥಳಥಳಿಸುವ ದೀರ್ಘ ನಯನಗಳಿಂದಲೂ, ಉದ್ದವಾದ ತೋಳುಗಳಿಂದಲೂ, ಹೊಳೆಯುತ್ತಿದ್ದರು. ಮತ್ತೊಂದು ಕಡೆಯಲ್ಲಿ ನಿಶಿತ ದಾಡೆಗಳಿಂದಲೂ, ಹುರಿಯ ಹುಬ್ಬುಗಳಿಂದಲೂ, ಕಠಿಣವಾದ ಶರೀರ ಲಕ್ಷಣಗಳಿಂದಲೂ, ಅತಿ ಭಯಂಕರರಾಗಿ ರಾಕ್ಷಸ ಸ್ತ್ರೀಯರು ಒಪ್ಪುತ್ತಿದ್ದರು. ಇಂಥ ಹೆಂಗಸರ ಗುಂಪಿನಲ್ಲಿ ಅತಿ ಸೌಂದರ್ಯದಿಂದ ರಂಜಿಸುವ ಮಂಡೋದರಿಯೊಡನೆ—ನೀರು ತುಂಬಿ ಇರುವ ಮೇಘದ ಕಾಂತಿಯಂತೆ ರಂಜಿಸುವ ಶರೀರ ಕಾಂತಿಯಿಂದಲೂ, ನಗೆ ಮೊಗದಿಂದಲೂ, ಥಳಥಳಿಸುವ ಕುಂಡಲಗಳಿಂದಲೂ, ಭೂರಿ ಭುಜ ದಂಡಗಳಿಂದಲೂ, ರಾಕ್ಷಸಾಧಿಪನಾದ ರಾವಣನು ಮಲಗಿ ಕೊಂಡಿದ್ದನು.

ಆ ಮಂಡೋದರಿಯು ಹ್ಯಾಗಿರುವಳೆಂದರೆ—ಹೊಳಹೊಳೆವ ಅರಳು ಕಣ್ಣುಗಳಿಂದಲೂ, ಸಂಪಿಗೇ ಹೂವಿನಂತಿರುವ ಮೂಗಿನಿಂದಲೂ, ಕೆಂಪಾಗಿರುವ ತುಟಿಗಳಿಂದಲೂ, ಮುತ್ತುಗಳಂತೆ ಇರುವ ಹಲ್ಲುಗಳಿಂದಲೂ, ಸಿಂಹದ ನಡುವಿನಂತಿರುವ ಸೂಕ್ಷ್ಮವಾದ ನಡುವಿನಿಂದಲೂ, ಆಮೆಯ ಹಾಗಿರುವ ಪಾದಗಳಿಂದಲೂ ಶೋಭಿಸುತ್ತ, ಮುತ್ತಿನ ಸೆರಗಿನ ಝರ್ತಾರೀ ಶೀರೆಯನ್ನು ಉಟ್ಟು ಕೊಂಡು, ನಿರಾಜೀ ಕುಪ್ಪಸವನ್ನು ತೊಟ್ಟು ಕೊಂಡು, ಚಿನ್ನದ ಬೊಂಬೆಯಂತೆ, ಪುರುಷತನವನ್ನು ಬಿಟ್ಟು ಸ್ತ್ರೀ ರೂಪನ್ನು ಧರಿಸಿರುವ ಮನ್ಮಥನೋ? ಎಂಬಂತೆ ರಾಜಿಸುತ್ತಿದ್ದಳು. ಇಂಥ ಮಂಡೋದರಿಯನ್ನು ಆಂಜನೇಯನು ಕಂಡು, ಮನಸ್ಸಿನಲ್ಲಿ ಸಂಶಯ ಹುಟ್ಟಿ, ಬುದ್ಧಿ ಕೆಟ್ಟು, ಕೈ ಗುಂದಿ, ಕಳವಳಿಸಿ, ತಾಪಗೊಂಡು, ನಿಜವನ್ನು ಹಿಡಿಯಲಾರದೆ, ಬಹಳ ವ್ಯಸನ ಪಟ್ಟು, ಒಂದು ಘಳಿಗೆಯ ಪರ್ಯಂತರವು ಸ್ತಬ್ಧನಾಗಿದ್ದು, ಮತ್ತೆ ಜ್ಞಾನವನ್ನು ತಂದು ಕೊಂಡು—ಈ ಸ್ತ್ರೀಯಲ್ಲಿ ನನ್ನೊಡೆಯನು ಹೇಳಿದ ಗುರುತುಗಳಲ್ಲಿ ಕೆಲವು ಗುರುತುಗಳು ಇವೆ; ಇನ್ನು ಕೆಲವು ಅಡಕವಾಗಿವೆ. ಏನು ಮಾಡಲಿ? ಎಂದು ಮನಸ್ಸಿನಲ್ಲಿ ಮಿಡುಕಾಡುತ್ತ, ಸಮಾಧಾನ ಮಾಡಿ ಕೊಳ್ಳುತ್ತ, ಘುಡಿಘುಡಿಸುತ್ತ, ಸ್ಥೈರಿಸಿ ಕೊಳ್ಳುತ್ತ, ಕಡೆಗೂ ನೋಡ ಬೇಕೆಂದು ಯೋಚಿಸಿ, ಅಣುವಾಗಿ, ದೀವಿಗೆಯ ಬೆಳಕನ್ನು ತೆಗೆದು ಕೊಂಡು, ಮಂಡೋದರಿಯ ಸರ್ವಾಂಗವನ್ನು ನೋಡಿ, ರಾ

ಮನು ಹೇಳಿದ ಸಕಲ ಲಕ್ಷಣಗಳನ್ನು ಕಂಡು, ಕಾಲಿನಲ್ಲಿ ಮಾತ್ರ ಕಾಕ ರೇಖೆ ಇರಲು; ಇದು ವೈಧವ್ಯ ಲಕ್ಷಣವೆಂದು ತಿಳಿದು, ಅರ್ಧ ಸಂಶಯವನ್ನು ಬಿಟ್ಟು, ನವ ವ್ಯಾಕರಣ ಪಂಡಿತನಾದ ಆಂಜನೇಯನು ಅವಳ ಮುಖದಲ್ಲಿ ಸುಧಾಂಶು ರೇಖೆ ಇಲ್ಲದ್ದನ್ನು ಕಂಡು, ಇವಳು ಸೀತೆಯಲ್ಲವೆಂದು ತಿಳಿದು, ಅಲ್ಲಿ ಸ್ವಲ್ಪ ಸ್ಥಳ ಬಿಡದಂತೆ ಚನ್ನಾಗಿ ಹುಡುಕಿ, ಸೀತೆಯನ್ನು ಕಾಣದೆ, ಹೊರಗೆ ಬಂದು, ಕುಬೇರನ ಪುಷ್ಪಕದಲ್ಲಿ ನೋಡಿ, ಅಲ್ಲಿಯೂ ಸೀತೆಯನ್ನು ಕಾಣದ್ದರಿಂದ ಚಿಂತಾಕ್ರಾಂತನಾಗಿ, ಕಂದಿದ ಮುಖವುಳ್ಳವನಾಗಿ, ಕಣ್ಣೀರನ್ನು ಸುರಿಸುತ್ತಾ—ಸೀತೆಯು ಏನಾದಳೋ? ಹಾ! ಎಂದು ಹಂಬಲಿಸಿ, ಹಲುಬುತ್ತಾ, ಮಾರ್ಗ ಹಿಡಿದು, ಹುಡುಕುತ್ತಾ ಬರುತ್ತಿರಲು;

ಆ ಪುರದ ಮಧ್ಯದಲ್ಲಿ ನಾನಾ ವಿಧವಾದ ಪತಾಕೆಗಳಿಂದಲೂ, ಸುರುಚಿರ ಕಲಶಾಳಿಗಳ ಬಂಧುರಗಳಿಂದಲೂ, ಮೇರು ಶಿಖರದಂತೆ ಹದಿನಾರು ಯೋಜನ ಉದ್ದವುಳ್ಳದ್ದಾಗಿ ಶೋಭಿಸುತ್ತಲಿರುವ ಉಪ್ಪರಿಗೆಯನ್ನು ಕಂಡು, ಬೆರಗಾಗಿ, ಉದಯಾಚಲವನ್ನು ಸೂರ್ಯನು ಹತ್ತುವಂತೆ ಆ ಉಪ್ಪರಿಗೆಯ ಮೇಲೆ ಹಾರಿ, ಕುಳಿತು ಕೊಂಡು, ಎಲ್ಲಿ ನೋಡಿದರೂ ಸೀತೆಯು ಸಿಕ್ಕಲಿಲ್ಲವಲ್ಲ ಎಂದು ಯೋಚಿಸುತ್ತ, ಘೋರ ಕರ್ಮಿಯಾದ ರಕ್ಕಸನು ಏನು ಮಾಡಿದನೋ? ನಾನು ಸೂರ್ಯ ಕುಲೇಶನಿಗೆ ಏನು ಹೇಳಲಿ? ರವಿ ನಂದನನಿಗೆ ಏನು ಹೇಳಲಿ? ಬ್ರಹ್ಮನಂದನನ ಬಳಿಗೆ ಹ್ಯಾಗೆ ಹೋಗಲಿ? ಎಲ್ಲರು ನನ್ನ ಬರವನ್ನೇ ಹಾರೈಸಿ ಕೊಂಡಿದ್ದಾರಲ್ಲ? ಸೀತೆಯು ಸಿಕ್ಕಲಿಲ್ಲವೆಂದು ಹೇಳಿದರೆ, ತಕ್ಷಣವೇ ರಾಮನು ಪ್ರಾಣ ಬಿಡುವನು; ಲಕ್ಷ್ಮಣನು ಸಹೋದರ ವ್ಯಸನದಿಂದ ಅಣ್ಣನ ಗತಿಯನ್ನು ಹೊಂದುವನು; ರಾಮ ಲಕ್ಷ್ಮಣರು ಸತ್ತ ಮೇಲೆ ಸುಗ್ರೀವನು ಸಹಿಸಲಾರದೆ, ರಾಮನ ಮಾರ್ಗವನ್ನು ಹೊಂದುವನು. ಈತನ ಮರಣ ವಾರ್ತೆಯನ್ನು ಸುಗ್ರೀವನ ಹೆಂಡರು ಕೇಳಿದರೆ, ಅವರು ಪತಿ ಶೋಕವನ್ನೈಬ್ಬಿಸಿ ಕೊಂಡು, ಆತನ ದಾರಿಯನ್ನೇ ಹಿಡಿಯುವರು. ಅಂಗದನು ಅದೇ ಪ್ರಕಾರವೇ ಪ್ರಾಣವನ್ನು ತೊರೆದು ಕೊಳ್ಳುವನು. ಈ ಅಭಿಪ್ರಾಯವನ್ನು ಭರತ ಶತ್ರುಘ್ನರು ಕೇಳಿದರೆ, ಆ ಕ್ಷಣವೇ ಅಸುವನ್ನು ನೀಗಿ ಕೊಳ್ಳುವರು. ತದನಂತರ ಕೌಸಲ್ಯೆ, ಕೈಕೆಯಿ, ಸುಮಿತ್ರೆಯರು ಜೀವವನ್ನು ಕಳ ಕೊಳ್ಳುವರು. —ಇಂಥಾ ರಾಯರೆಲ್ಲಾ ಹೋದ ಮೇಲೆ ನಾವು ಯಾಕೆ ಇರ ಬೇಕೆಂದು ಸಾಕೇತ ಪಟ್ಟಣದ ಪ್ರಧಾನಿಗಳೂ ಪುರವಾಸಿಗಳೂ ಮರಣವನ್ನು ಹೊಂದುವರು. ಇದಕ್ಕೆ ಏನು ಮಾಡ ಬೇಕು? ನನ್ನೊಬ್ಬನಿಂದ ಇಷ್ಟು ಪ್ರಳಯವಾಗುತ್ತಲಿದೆ.

ಇದಕ್ಕೋಸ್ಕರ ನಾನೇ ಜೀವ ಹತ್ಯವನ್ನು ಮಾಡಿ ಕೊಳ್ಳ ಬೇಕೆಂದು ಯೋಚನೆಯನ್ನು ಮಾಡಿ, ಪುನಹ ಹಾಗೆಯೇ ಧೈರ್ಯವನ್ನು ತಂದು ಕೊಂಡು—ಈ ಜೇವ ಒಂದು ಘಟ್ಟಿಯಾಗಿದ್ದರೆ, ಎಷ್ಟು ಕೆಲಸವಾದಾಗ್ಯೂ ಸಾಧಿಸ ಬಹುದು. ಈಗ ನಾನು ಯಮನ ಪಟ್ಟಣಕ್ಕೆ ಹೋಗಿ, ಆ ಯಮನನ್ನೇ ಯಮ ದಂಡದಿಂದ ಶಿಕ್ಷಿಸಿದರೆ, ಆತನಾದರೂ ಸೀತೆಯನ್ನು ತೋರಿಸುವನು. ಹಾಗಲ್ಲದಿದ್ದರೆ ಬ್ರಹ್ಮ ಲೋಕಕ್ಕೆ ಹೋಗಿ, ಬ್ರಹ್ಮ ದಂಡದಿಂದ ಬ್ರಹ್ಮನನ್ನು ಶಿಕ್ಷಿಸಿದರೆ, ಆತನಾದರೂ ತೋರಿಸುವನು. ಅಥವಾ ಇಂದ್ರಾದಿ ದೇವತೆಗಳನ್ನು ಹೆಡಕಟ್ಟು ಕಟ್ಟಿ ಕೇಳಿದರೆ, ಅವರಾದರೂ ತೋರಿಸುವರು. ಯಾರೂ ತೋರಿಸದೆ ಹೋದ ಪಕ್ಷದಲ್ಲಿ, ಈ ತ್ರಿಕೂಟಾಚಲವನ್ನೇ ಬಾಲದಿಂದ ಸುತ್ತಿ, ಕಿತ್ತು ಕೊಂಡು, ರಾಮನ ಬಳಿಗೆ ತೆಗೆದು ಕೊಂಡು ಹೋದರೆ, ಆತನೇ ಸೀತೆಯನ್ನು ಹುಡುಕಿ ಕೊಳ್ಳಲಿ ಎಂದು, ಮನಸ್ಸಿನಲ್ಲಿ ನಿಶ್ಚೈಸಿ, ತ್ರಿಕೂಟಾಚಲವನ್ನೇ ಲಂಕಾ ಪಟ್ಣ ಸಮೇತವಾಗಿ ಕಿತ್ತು ಕೊಂಡು ಹೋಗ ಬೇಕೆಂದು ಉದ್ಯುಕ್ತನಾಗಲು; ಅಶರೀರ ವಾಣಿಯು—ಎಲೈ, ವಾನರನೇ, ನೀನು ಈ ಪರ್ವತವನ್ನು ಕೀಳ ಬೇಡ. ನಿನ್ನ ಇಷ್ಟಾರ್ಥ ಪೂರ್ತಿಯಾಗುವದು ಎಂದು ನುಡಿಯಲು; ಆಂಜನೇಯನು ಸಂತುಷ್ಟನಾಗಿ, ಸುತ್ತಲು ನೋಡುತ್ತಿರುವಷ್ಟರಲ್ಲಿಯೇ, ಚಂದ್ರನು ಸೀತೆಯನ್ನು ತೋರಿಸುವದಕ್ಕೆ ಬಂದನೋ? ಎಂಬಂತೆ, ಥಳಥಳಾಯಮಾನವಾಗಿ ಉದಯವಾಗಲು; ಮಾರುತಿಯು ಬೆಳದಿಂಗಳಲ್ಲಿ ಸುತ್ತಲು ದೃಷ್ಟಿಯನ್ನು ಇಟ್ಟು ನೋಡುತ್ತಿರಲು; ಅವನ ಕಣ್ಣಿಗೆ ಅಶೋಕಾ ವನವು ಕಾಣಿಸಿತು.

ಆ ವನವು ಹ್ಯಾಗಿತ್ತಂದರೆ—ಪುಷ್ಪ ಫಲ ಭರಿತಗಳಾದ ವೃಕ್ಷಗಳಿಂದಲೂ, ಸುರಗಿ, ಶಾವಂತಿ ಮೊದಲಾದ ಪುಷ್ಪಲತೆಗಳಿಂದಲೂ, ನಾನಾ ಜಲ ಪಕ್ಷಿಗಳ ಕಲಕಲದಿಂದ ಕೂಡಿರುವ ದಿವ್ಯ ಸರಸ್ಸುಗಳಿಂದಲೂ, ಧ್ವನಿ ಗೈಯುವ ಶುಕ, ಪಿಕ, ಶಾರಿಕಾದಿ ಪಕ್ಷಿ ಸಮೂಹಗಳಿಂದಲೂ, ಅವನಿಜೆಯ ಕಿವಿಗಿಂಪಾಗುವ ಹಾಗೆ ಝೇಂಕರಿಸುವ ತುಂಬಿಗಳ ಸಾಲುಗಳಿಂದಲೂ, ನಂದನ ವನದ ಸೊಬಗಿಗೆ ಇಮ್ಮಡಿಯಾಗಿ ಶೋಭಿಸುತ್ತಿತ್ತು. ಇಂಥ ವನವನ್ನು ಕಂಡು, ಆಂಜನೇಯನು ಅತ್ಯಂತ ಸಂತೋಷವನ್ನು ಹೊಂದಿ, ತಾನು ಕೂತಿದ್ದ ಸ್ಥಳದಿಂದ ಅಶೋಕ ವನಕ್ಕೆ ಹಾರಿ, ಆ ವನ ಮಧ್ಯ ಪ್ರದೇಶದಲ್ಲಿ ಸುವರ್ಣದ ಜಗಲಿಗಳಿಂದ ಯುಕ್ತವಾಗಿ ಮೇರು ಪರ್ವತದೋಪಾದಿಯಲ್ಲಿ ದಿವಾಕರ ಮಾರ್ಗವನ್ನು ಆಕ್ರಮಿಸಿ ಕೊಂಡು, ವಿಸ್ತಾರವಾದ ಶಾಖೆಗಳಿಂದ ನಿಬಿಡ ಛಾಯೆಯು

ಳ್ಳದ್ದಾಗಿ ರಂಜಿಸುತ್ತಿರುವ ಒಂದು ಶಿಂಶುಪ ವೃಕ್ಷವನ್ನು ಕಂಡು, ಅದರ ಬುಡದಲ್ಲಿ ರಾಘವನ ಪ್ರಿಯ ಸತಿಯಾದ ಸೀತಾ ದೇವಿಯು ರಾಮ ಚಿಂತೆಯಿಂದ ರೋದನವನ್ನು ಮಾಡುವ ಧ್ವನಿಯನ್ನು ಕೇಳಿ, ಆ ವೃಕ್ಷದ ರೆಂಬೆಯನ್ನು ಏರಿ, ಕುಳಿತು ಕೊಂಡು, ಅಲ್ಲಿ ಸುವರ್ಣ ವೇದಿಕೆಯ ಮೇಲೆ ಮಲಿನ ವಸ್ತ್ರವನ್ನು ಉಟ್ಟು ಕೊಂಡು, ಉಪವಾಸದಿಂದ ಕೃಶಾಂಗಿಯಾಗಿ ಸಿಂಹಗಳ ಮಧ್ಯದಲ್ಲಿ ಶಿಕ್ಕಿರುವ ಹರಿಣದಂತೆಯೂ, ವಾದದಲ್ಲಿ ಬಿದ್ದಿರುವ ಆನೇ ಮರಿಯಂತೆಯೂ, ರಾಕ್ಷಸ ಸ್ತ್ರೀಯರ ಶೆರೆಯಲ್ಲಿ ಶಿಕ್ಕಿರುವ ಸೀತಾ ದೇವಿಯನ್ನು ಕಂಡು, ಕಣ್ಣೀರನ್ನು ತುಂಬಿ, ಒಂದು ಮುಹೂರ್ತ ಮಾತ್ರ ಧ್ಯಾನಾ ಮಾಡಿ, ಅನಂತರದಲ್ಲಿ ಸೀತೆಯನ್ನು ಕುರಿತು—ಎಲೈ, ಜಾನಕಿಯೇ, ಕೇಳು. ಶ್ರೀರಾಮನು ಸುಗ್ರೀವನೊಡನೆ ಪ್ರಸ್ರವಣ ಗಿರಿಗೆ ಬಂದು, ನಿನ್ನ ಚಿಂತೆಯಿಂದಲೇ ಇದ್ದಾನೆ. ಅವನು ಇಲ್ಲಿಗೆ ಬೇಗ ಬಂದು, ರಾವಣನನ್ನು ಸಂಹಾರಾ ಮಾಡಿ, ನಿನ್ನನ್ನು ಕರೆದು ಕೊಂಡು ಹೋಗುವನು. ಲಂಕಾ ಪಟ್ಟಣವನ್ನು ನೋಡಿ ಬರುವಂತೆ ನನ್ನನ್ನು ಕಳುಹಿಸಿದನು, ಎಂದು ಹೇಳಲು; ಸೀತೆಯು ಆ ಮಾತುಗಳನ್ನು ಕೇಳಿ, ಸುಮ್ಮನೇ ಇರಲು; ಆಂಜನೇಯನು ರೆಪ್ಪೆಯನ್ನು ಮುಚ್ಚದೆ, ಸೀತಾ ದೇವಿಯನ್ನೇ ನೋಡುತ್ತ ಇದ್ದನು.

ಅಷ್ಟರಲ್ಲೇ ಬೆಳಗಿನ ಝಾವವಾಗಲು, ದಶಕಂಠನು ಎಚ್ಚತ್ತು, ತನ್ನ ಸ್ತ್ರೀಯರನ್ನೆಲ್ಲಾ ಕೂಡಿ ಕೊಂಡು, ನಿಜಾಲಯದಿಂದ ಹೊರಡಲು; ಅನೇಕ ಮಂದಿ ರಾಕ್ಷಸರು ಬೊಂಬಾಳೆ ದೀವಿಗೆಗಳನ್ನು ಮುಂದೆ ಹಿಡಿದು ಕೊಂಡು ಹೋದರು. ಆಗ ದಶಕಂಠನು ಪುಷ್ಪಕವನ್ನೇರಿ ಕೊಂಡು, ಅಶೋಕ ವನ ಮಧ್ಯದಲ್ಲಿ ಇಳಿದು, ಅತಿ ರಭಸದಿಂದ ರಾಕ್ಷಸೀ ಜನಗಳು ತಂದು ಇತ್ತ ಪೀಠದ ಮೇಲೆ ಮಂಡೋದರಿಯ ಸಂಗಡ ಕುಳಿತು ಕೊಳ್ಳಲು; ಸೀತಾ ದೇವಿಯು ತಲೆಯನ್ನು ಬೊಗ್ಗಿಸಿ ಕೊಂಡು, ಕಣ್ಣುಗಳನ್ನು ಮುಚ್ಚಿ ಕೊಂಡು, ಹೇಮ ಲತೆಯಂತಿರುವ ತನ್ನ ಶರೀರವನ್ನು ತನ್ನ ಕೂದಲಿಂದ ಮುಚ್ಚಿ ಕೊಂಡು, ಭೂಮಿಯನ್ನು ನೋಡುತ್ತಾ, ಶ್ರೀರಾಮ ಚಂದ್ರನ ಪಾದಗಳನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ಇದ್ದಳು. ಆಗ ಸ್ಮಶಾನದಲ್ಲಿ ಮಾಡಿ ಇಟ್ಟ ಪ್ರತಿಮೆಯಂತಿರುವ ಸೀತೆಯ ಬಳಿಗೆ, ಭಯಂಕರಾಕಾರನಾದ ರಾವಣನು ಸೇವಕಾ ಸ್ತ್ರೀಯರನ್ನು ಕಳುಹಿಸಲು; ಆ ಸ್ತ್ರೀಯರು ಸೀತೆಯ ಮುಂದೆ ನಿಂತು ಕೊಂಡು, ಉಪಚರಿಸಿ, ಪರಿಮಳ ಎಣ್ಣೆಯನ್ನು ತಂದು, ಹೊಳೆಯುವ ಮಡಿ ವಸ್ತ್ರಗಳನ್ನು ನೆರಿ ಹಿಡಿದು ಇಟ್ಟು, ಬಿಸಿ ನೀರನ್ನು ಚಿನ್ನದ ಗುಡಾಣದಲ್ಲಿ ತಂದು ಇಟ್ಟು, ದಿ

ವ್ಯ ಸುಗಂಧಗಳನ್ನು ಅರೆದು ಇಟ್ಟು, ಸೀತೆಯನ್ನು ಕುರಿತು—ಎಲೈ, ಸೀತೆಯೇ, ನೀನು ಮೂರು ಲೋಕಕ್ಕೆ ಗಂಡನಾದ ರಾವಣನ ಮಾತನ್ನು ಮೀರ ಬಹುದೇ? ನೂರು ಜನ್ಮ ಸುವ್ರತಗಳನ್ನು ಮಾಡಿ, ದೇವತಾ ಸ್ತ್ರೀಯರು ರಾವಣನನ್ನು ವರಿಸುತ್ತಾರಲ್ಲ! ಈ ರಾವಣನಿಗೆ ಮೂರು ಲೋಕದಲ್ಲಿಯೂ ಸಮ ಉಂಟೇ? ಹದಿನಾಲ್ಕು ಲೋಕದ ಒಡೆತನವು ಈತನ ವಶವಾಗಿದೆ. ಇಂಥಾ ರಾವಣನನ್ನು ನೀನು ಅನುಭವಿಸದೆ ಇರ ಬಹುದೇ, ದೇವಿಯೇ? ಎಂದು ಮಾತನಾಡಿಸುವ ರಾಕ್ಷಸಿಯರ ಮಾತಿಗೆ ಕಿವಿ ಗೊಡದೆ, ಒಬ್ಬರನ್ನೂ ಕಣ್ಣಿನಿಂದ ನೋಡದೆ, ಹೃದಯದಲ್ಲಿ ರಾಮನ ಧ್ಯಾನವನ್ನು ಮಾಡುತ್ತಾ, ಸುಮ್ಮನಿರಲು; ರಾವಣನು ತ್ರಿಜಟೆಯನ್ನು ಕರೆದು—ಎಲೈ, ತ್ರಿಜಟೆಯೇ, ಸೀತೆಯ ಮನಸ್ಸಿನ ನಿಶ್ಚಯವು ಹ್ಯಾಗೆ? ಮಾನವೇಂದ್ರನನ್ನು ಮರೆತು ಬಿಟ್ಟಳೋ? ಏನು? ಎಂದು ಕೇಳಲು; ಆ ತ್ರಿಜಟೆಯು ರಾವಣನ ಕಿವಿಯಲ್ಲಿ—ಎಲೈ, ರಾಜೇಂದ್ರನೇ, ಕೇಳು. ನಾನು ಜಾನಕಿಯ ಮನೋ ನಿಶ್ಚಯವನ್ನು ಹೇಳಲಾರೆನು. ಆ ಸೀತೆಯು ಜಗತ್ತಿನಲ್ಲಿರುವ ಪತಿ ಭಕ್ತೆಯರಿಗೆಲ್ಲಾ ತಾಯಿಯು; ಜಗದ ಪತಿವ್ರತಾ ಜನಕ್ಕೆ ಗುರುವು. ನಾನು ಬಹು ಜನವನ್ನು ನೋಡಿದ್ದೇನೆ. ಧ್ರುವ, ವಶಿಷ್ಠ, ಅತ್ರಿ, ಗೌತಮ, ಇತ್ಯಾದಿ ಋಷಿಗಳ ಹೆಂಡರುಗಳು ಸೀತೆಯನ್ನು ಹೋಲಲಾರರು. ರಘು ಕುಲ ರಾಮನೇ ನಿತ್ಯನೆಂದು ಭರ್ತೃ ಚಿಂತಾಪರಾಯಣಳಾಗಿರುವಳು. ನಾವು ನಮ್ಮ ಬುದ್ಧಿ ತೋರಿದ ಹಾಗೆಲ್ಲಾ ಹೇಳಿ, ನೋಡಿದೆವು. ಬಹು ಪ್ರಕಾರವಾಗಿ ಬೆದರಿಸಿದೆವು. ಯಾವದಕ್ಕೂ ಸಾಧ್ಯಳಾಗಲಾರಳು. ಇನ್ನೂ ಬೇಕಾದರೆ, ನೀನೇ ಮಾತಾಡಿಸಿ ನೋಡು, ಎಂದು ಹೇಳಲು; ರಾವಣನು—ಎಲೈ, ಸೀತೆಯೇ, ಎಷ್ಟು ದಿವಸ ಈ ವನದೊಳಗೆ ಸೆರೆಯ ವೈಭವದಿಂದ ಇದ್ದೀ? ಇನ್ನ್ಯಾರಲ್ಲಿ ನಿನಗೆ ಮನಸ್ಸು ಉಂಟು? ಎಲೈ, ಸೀತೆಯೇ, ನಿನಗೆ ಹುಚ್ಚು ಹಿಡಿಯಿತು. ನಿನ್ನನ್ನು ತಿರಿಗಿ ಬಿಡಿಸಿ ಕೊಂಡು ಹೋಗ ಬೇಕಾದರೆ ಮುಕ್ಕಣ್ಣನಿಗೂ ಸಾಮರ್ಥ್ಯ ಸಾಲದು. ಹರಿ ಹರ ಬ್ರಹ್ಮ ದೇವತೆಗಳನ್ನು ಒಕ್ಕಲಿಕ್ಕುವ ಸಾಮರ್ಥ್ಯ ನನ್ನಲ್ಲಿ ಇದೆಯೋ, ಇಲ್ಲವೋ? ಚನ್ನಾಗಿ ತಿಳುಕೋ! ಈ ಹದಿನಾಲ್ಕು ಲಕ್ಷ ಸ್ತ್ರೀಯರ ಸಂಪದಕ್ಕೆ ನೀನೇ ನಾಯಕಿಯಾಗಿ ಪಟ್ಟದರಸಿಯಾಗು. ಹೆಡ್ಡತನವನ್ನು ಬಿಟ್ಟು, ಮನೆಗೆ ಬಾ! ದೇವತೆಗಳೆಲ್ಲಾ ನಿನಗೆ ಸೇವಕರಾಗುವರು. ದೇವ ಮುನಿಗಳಾದ ತುಂಬುರ ನಾರದಾದಿಗಳು ನಿನ್ನ ಗಾಯಕರಾಗಿರುವರು. ದೇವತಾ ಸ್ತ್ರೀಯರು ನಿನಗೆ ದಾಸಿಯರಾಗಿರುವರು. ಎಲೈ, ಸೀತೆಯೇ, ನನಗೆ ಯಾರೂ ಸರಿ ಇಲ್ಲ. ಹದಿನಾಲ್ಕು ಲೋಕದ ಒಡೆತನವು ನನಗೆ ಶೇರಿ ಇದೆ. ಇಂಥಾ

ಶಿರಿಯನ್ನು ನೀನು ಅನುಭವಿಸದೆ ವ್ಯರ್ಥವಾಗಿ ಜರಡು ಮನುಷ್ಯನನ್ನು ಧ್ಯಾನಿಸುವದು ಯೋಗ್ಯವಲ್ಲ. ನಿನಗೆ ನರಾಧಮನನ್ನು ಭಾವಿಸುವ ಮರುಳುತನವು ಎಲ್ಲಿಂದ ಬಂತು? ಈ ಅವಿವೇಕವನ್ನು ಬಿಡು! ನನಗೆ ಅರಸಿಯಾಗು, ಎಂದು ಹೇಳಲು; ಸೀತೆಯು ಕಣ್ಣುಗಳಲ್ಲಿ ಕಿಡಿಗಳನ್ನು ಉಗುಳುತ್ತ, ಕೈಯಲ್ಲಿ ಒಂದು ತೃಣವನ್ನು ಹಿಡಿದು ಕೊಂಡು, ಅವರ ಸಂಗಡ ಮಾತನಾಡುವ ಹಾಗೆ— ಎಲವೋ, ಬಣಬು ರಕ್ಕಸನೇ! ಎಲವೋ, ಚೋರ ಶ್ರೇಷ್ಠನೇ! ನಿನ್ನ ಐಶ್ವರ್ಯವನ್ನು ಸುಡ ಬೇಕು. ಎಲೈ, ಹಂದಿಯೇ! ಎಲೋ, ನಾಯಿಯೇ! ಬಹು ವಿಕಾರದ ಮಾತುಗಳನ್ನು ಆಡ ಬೇಡ! ಬ್ರಹ್ಮ ರುದ್ರ ಇಂದ್ರಾದಿಗಳಿಂದ ಪೂಜೆಯನ್ನು ತೆಗೆದು ಕೊಳ್ಳುವಂಥಾವನು ರಘು ರಾಮನು! ನಿನಗೆ ಯಾರು ಪೂಜೆಯನ್ನು ಕೊಟ್ಟಾರು? ಎಲವೋ, ಪಾಪಿಯೇ! ಮೂರ್ಖಾಧಮನೇ! ಪತಿವ್ರತೆಯರನ್ನು ಹಿಂಸೆ ಪಡಿಸಿದ ಪಾಪವೆಂಬ ಸಮುದ್ರದಲ್ಲಿ ಮುಳುಗಿ ಇದ್ದ ನಿನ್ನ ಎದೆಯನ್ನು ಇರಿದು, ನಿನ್ನ ಪ್ರಾಣವನ್ನು ಕೊಂಡೊಯ್ಯುವ ಅಂತಕನಲ್ಲವೇ, ಶ್ರೀರಾಮನು? ಈ ಮಾತು ನೀನು ಚನ್ನಾಗಿ ತಿಳಿದು ಕೊಂಡಿರು. ನಿನ್ನ ಹೆಂಡರನ್ನು ಮತ್ತೊಬ್ಬನು ಅಪೇಕ್ಷಿಸಿದರೆ, ನೀನು ಸುಮ್ಮನೇ ಇರುವಿಯಾ? ನೀನು ಹೆಂಡತಿಗಳೊಡನೆ ಸುಖವಾಗಿ ಬಾಳ ಬೇಕೆಂದು ಅಪೇಕ್ಷೆ ಇದ್ದರೆ, ನನ್ನನ್ನು ತೆಗೆದು ಕೊಂಡು ಹೋಗಿ, ನನ್ನ ಪತಿಯಾದ ರಾಮನಿಗೆ ಒಪ್ಪಿಸಿ, ಶರಣಾಗತನಾಗು. ಹಾಗೆ ಮಾಡದೆ ಇದ್ದರೆ, ನಿನ್ನೊಬ್ಬನ ತಪ್ಪಿನಿಂದ ನಿನ್ನ ರಾಷ್ಟ್ರವೂ, ನಿನ್ನ ಪಟ್ಟಣವೂ, ನಿನ್ನ ಬೊಕ್ಕಸ ಭಂಡಾರಗಳೂ, ನಿನ್ನ ಮಕ್ಕಳು ಮರಿಗಳೂ, ನಂಟರಿಷ್ಟರೂ, ನಿನ್ನ ಸಕಲ ಐಶ್ವರ್ಯವೂ ಹಾಳಾಗುವವು. ನಾನು ಶ್ರೀರಾಮಚಂದ್ರನಿಗೆ ಧರ್ಮ ಪತ್ನಿಯಾಗಿರುವೆನು. ನೀನು ಆತನು ಇಲ್ಲದ ಕಾಲದಲ್ಲಿ ನನ್ನನ್ನು ಕದ್ದು ಕೊಂಡು ಬಂದೆ. ನೀನು ಆತನ ಮುಂದೆ ನನ್ನನ್ನು ತಂದು ಇದ್ದರೆ, ನಿನ್ನ ಭವಿಷ್ಯವು ಕಾಣುತ್ತಿತ್ತು. ಹುಲಿಯ ಎದುರಿನಲ್ಲಿ ನಾಯಿಗೂ, ಸಿಂಹದ ಎದುರಿನಲ್ಲಿ ಮೊಲಕ್ಕೂ, ನಿಲ್ಲುವದಕ್ಕೆ ಹ್ಯಾಗೆ ಸಾಮರ್ಥ್ಯವಿಲ್ಲವೋ, ಹಾಗೆ ನನ್ನ ಪತಿಯ ಎದುರಿನಲ್ಲಿ ನೀಚನಾದ ನಿನಗೆ ನಿಲ್ಲುವದಕ್ಕೆ ಸಾಮರ್ಥ್ಯವಿಲ್ಲ. ನೀನು ನಿನ್ನ ತಾಯಿಯ ಹೊಟ್ಟೆಯನ್ನು ಬಗೆದು, ಹೊಕ್ಕು, ಮರಸಿಕೊಂಡಾಗ್ಯೂ, ರಾಮನ ಬಾಣವು ಬಂದು, ನಿನ್ನನ್ನು ಕೊಂದು ಹಾಕುವದು. ಈ ಮಾತಿನಲ್ಲಿ ಸಂದೇಹವಿಲ್ಲ. ಹೀಗೆ ನಿಶ್ಚಯವಾಗಿ ನಾನು ತಿಳಿದು ಇರುವದರಿಂದ, ಇಂಥ ಕೆಟ್ಟ ಮಾತುಗಳನ್ನು ಬೊಗುಳುವ ನಿನ್ನನ್ನು ನನ್ನ ತಪೋಗ್ನಿಯಿಂದ ಸುಟ್ಟು ಬೂದೀ ಮಾಡದೆ ಇದ್ದೇನೆ. ಎಂದು ಹೇಳಿ, ರಾವಣ ಕಡೆ

ಗೆ ಬೆನ್ನು ಮಾಡಿ ಕೊಂಡು, ಕುಳಿತು ಕೊಳ್ಳಲು; ರಾವಣೇಂದ್ರನು ಕೋಪಾಕ್ರಾಂತನಾಗಿ—ಇಂಥಾ ಬಾಯಿ ಬಡುಕ ಹೆಂಗಸನ್ನು ಸಂಹರಿಸಿ ಬಿಡುತ್ತೇನೆಂದು, ಕತ್ತಿಯನ್ನು ಎತ್ತಲಾಗಿ, ಮಂಡೋದರಿಯು—ಹಾಹಾ! ರಕ್ಕಸ ರಾಯನೇ! ನಿನ್ನ ಬುದ್ಧಿಗೆ ಏನು ಹೇಳ ಬೇಕು? ಹೆಂಗೊಲೆಯನ್ನು ಮಾಡುವರುಂಟೇ? ಮಹಾ ಪಾಪಕ್ಕೆ ಒಳಗಾಗುತ್ತೀಯಲ್ಲ! ಮರುಳುತನವನ್ನು ಬಿಡು! ನನ್ನ ಸೌಂದರ್ಯದ ಮುಂದೆ ಈ ಸೀತೆಯೇ? ಎಂದು ಹೇಳಿ, ಅವನನ್ನು ಎಳೆದು ಕೊಂಡು, ಮನೆಗೆ ಕರೆದು ಕೊಂಡು ಹೋದಳು.

ಅನಂತರದಲ್ಲಿ ರಾವಣನು ದುಮ್ಮಾನದಲ್ಲಿ ಹೊರಟು ಹೋಗಲು; ಸೀತಾದೇವಿಯು ತನ್ನ ಗಂಡನನ್ನು ನೆನೆಸಿ ಕೊಂಡು—ಎಲೈ, ನೆಲವೇ, ಬಾಯಿ ತೆರೆಯೆಯಾ? ಈ ಖಳನ ಬಾಧೆಯನ್ನು ಹ್ಯಾಗೆ ತಾಳಲಿ? ಎಂದು, ಬಾಯಿ ಬಿಟ್ಟು ಅಳುತ್ತಾ, ರಾಮನನ್ನು ಕರೆದು—ನಿನ್ನನ್ನು ನಂಬಿದ ನನ್ನನ್ನು ಯಾಕೆ ಅಳಿಸುತ್ತೀ? ಯಾರಿಗೆ ಹೇಳಲಿ? ಯಾರಿಗೆ ಅಳಲಿ? ಪೂರ್ವದಲ್ಲಿ ಯಾರ ಪತ್ನಿಯರನ್ನು ನೋಯಿಸಿದ್ದೆನೋ? ಯಾವ ದೇವರ ಭಕ್ತಿಯಲ್ಲಿ ಕುಂದು ಮಾಡಿದ್ದೆನೋ? ಯಾವ ಗುರು ದ್ವಿಜರನ್ನು ನೋಯಿಸಿದ್ದೆನೋ? ಯಾರ ಪತಿಗಳನ್ನು ಅಗಲಿಸಿದ್ದೆನೋ? ಆ ದುಷ್ಕರ್ಮ ಫಲವು ಈಗ ನನಗೆ ಸಂಭವಿಸಿತು. ಮರಣವು ಬಾರದಲ್ಲ! ರಾಮನು ಏನಾಗಿದ್ದಾನೋ? ಆ ನರೇಂದ್ರನ ಸುದ್ದಿಯನ್ನು ತಿಳಿಯ ಪಡಿಸುವವರಿಲ್ಲವಲ್ಲ! ಹಾ ರಾಮನೇ! ಎಂದು, ಹಮ್ಮೈಸಿ, ಬಿದ್ದಳು.

ಮತ್ತೆ ಸೀತೆಯು ಮೂರ್ಛೆಯಿಂದ ಎದ್ದು, ಮೆಲ್ಲನೆ ಬಂದು—ಪ್ರಾಣವನ್ನಾದರೂ ತೊರ ಕೊಳ್ಳುತ್ತೇನೆಂದು, ಕೈಗೆ ಕತ್ತಿಯನ್ನು ತೆಗೆದು ಕೊಳ್ಳಲು; ತ್ರಿಜಟೆಯು ಧಿಗ್ಗನೆ ಎದ್ದು, ಬಂದು—ಏನಮ್ಮಾ ಸೀತೆಯೇ, ಇದೇನು ಇಂಥ ಹುಚ್ಚು ಕೆಲಸವನ್ನು ಮಾಡುತ್ತೀ? ಎಂದು ಹೇಳಿ, ಅವಳ ಕೈ ಖಡ್ಗವನ್ನು ಕಿತ್ತು ಕೊಂಡು,—ಎಲೈ, ಜಾನಕಿಯೇ, ನೀನು ಇನ್ನು ಮೇಲೆ ಯೋಚಿಸ ಬೇಡ. ಶೀಘ್ರದಲ್ಲಿಯೇ ನಿನ್ನ ಬಳಿಗೆ ಶ್ರೀರಾಮನು ಬರುವನು. ಹ್ಯಾಗಂದರೆ, ನಾನು ಸ್ವಪ್ನದಲ್ಲಿ—ಶ್ರೀರಾಮನು ಲಕ್ಷ್ಮಣ ಸಮೇತನಾಗಿ ಇಲ್ಲಿಗೆ ಬಂದು, ರಾವಣ ಕುಂಭಕರ್ಣಾದ್ಯರನ್ನು ಕೊಂದು, ನಿನ್ನನ್ನು ಒಡಗೊಂಡು, ಅಯೋಧ್ಯೆಗೆ ಹೋಗಿ, ಪಟ್ಟಾಭಿಷಿಕ್ತನಾದದ್ದನ್ನು ಕಂಡೆನು. ನೀನು ಯೋಚನೆಯನ್ನು ಬಿಟ್ಟು, ಸಂತೋಷ ಚಿತ್ತಳಾಗಿರು, ಎಂದು ಹೇಳಲು; ಸೀತೆಯು ರಾಮನನ್ನು ನೆನೆಸಿ ಕೊಂಡು, ಹಲುಬುತ್ತಾ ಇರಲು; ಆಂಜನೇಯನು—ಎಲೈ, ರಾಜೀವಲೋಚನೆಯಾದ ದೇವಿಯೇ, ನಿನ್ನ ಪತಿಯೂ ಲಕ್ಷ್ಮಣನೂ ಕ್ಷೇಮದಲ್ಲಿದ್ದಾರೆ. ನಾ

ನು ಶ್ರೀರಾಮನ ಅಪ್ಪಣೆಯ ಮೇರೆಗೆ ನಿನ್ನನ್ನು ನೋಡುವದಕ್ಕೋಸ್ಕರ ಇಲ್ಲಿಗೆ ಬಂದೆನು, ಎಂದು ಹೇಳಲು; ಆ ಮಾತನ್ನು ಸೀತಾ ದೇವಿಯು ಕೇಳಿ, ಮೊಗವೆತ್ತಿ ನೋಡಿ, ಇದು ಮಾಯಾವಿಗಳಾದ ರಾಕ್ಷಸರ ನುಡಿಯೇ ಸರಿ ಎಂದು, ನೆಲಕ್ಕೆ ತಲೆಯನ್ನು ಬೊಗ್ಗಿಸಿ ಕೊಂಡಳು.

ಆಗ ಆಂಜನೇಯನು ಪುನಹ—ಎಲೈ, ಸೀತೆಯೇ, ಖಳನು ನಿನ್ನನ್ನು ಕಳವಿನಿಂದ ತಂದ ಬಳಿಕ, ರವಿಕುಲೋತ್ಪನ್ನನು ಜಟಾಯುವನ್ನು ಕಂಡು, ಅವನಿಂದ ನಿನ್ನ ವೃತ್ತಾಂತವನ್ನು ತಿಳಿದು, ಜಟಾಯುವಿಗೆ ಪಿತೃ ಕೃತ್ಯಗಳನ್ನೆಲ್ಲಾ ಮಾಡಿ, ಪಂಪಾ ಸರಸ್ಸಿನ ಬಳಿಗೆ ಬಂದು, ಸುಗ್ರೀವನೊಡನೆ ಸಖ್ಯವನ್ನು ಬೆಳಿಸಿ, ವಾಲಿಯನ್ನು ಸಂಹರಿಸಿ, ಸುಗ್ರೀವನಿಗೆ ಕಿಷ್ಕಿಂಧಾ ರಾಜ್ಯಾಭಿಷೇಕವನ್ನು ಮಾಡಿಸಿ, ಕಪಿ ಸೇನೆಗಳನ್ನೊಡಗೊಂಡು, ನಿನ್ನನ್ನು ಹುಡುಕುವದಕ್ಕೋಸ್ಕರ ನಾಲ್ಕು ದಿಕ್ಕಿಗೂ ಕಪಿ ವೀರರನ್ನು ಕಳುಹಿಸಲು; ದಕ್ಷಿಣ ದಿಕ್ಕಿಗೆ ನಾನು ಅಂಗದ ಜಾಂಬವಾದಿಗಳೊಡನೆ ಬಂದು, ಅವರ ಅಪ್ಪಣೆಯ ಮೇರೆಗೆ ಕಡಲನ್ನು ದಾಟಿ, ಈ ಲಂಕೆಯನ್ನು ಹೊಕ್ಕು, ಖಳೇಂದ್ರನೇ ಮೊದಲಾದ ಸಮಸ್ತ ರಾಕ್ಷಸರ ಮನೆಗಳಲ್ಲಿಯೂ ನಿನ್ನನ್ನು ಹುಡುಕಿ, ಎಲ್ಲಿಯೂ ಕಾಣದೆ, ವಿಮಾನಾರೂಢನಾಗಿ ಕುಳಿತಿರುವ ಸಮಯದಲ್ಲಿ ಚಂದ್ರೋದಯವಾಗಲು; ಈ ಅಶೋಕಾ ವನವನ್ನು ಕಂಡು, ನೀನು ಕುಳಿತು ಕೊಂಡು ಇರುವ ಶಿಂಶುಪಾ ವೃಕ್ಷವನ್ನು ಏರಿ, ರಾಕ್ಷಸಾಧಮನು ನಿನ್ನ ಬಳಿಗೆ ಬಂದು, ನಡಿಸಿದ ವಿವರವನ್ನೆಲ್ಲಾ ಕೇಳಿ, ಅನಂತರ ತ್ರಿಜಟೆಯು ಹೇಳಿದ ಸ್ವಪ್ನವನ್ನು ಕೇಳಿದೆನು ಎಂದು ಹೇಳಿ, ಮರದಿಂದ ಕೆಳಕ್ಕೆ ಇಳಿದು, ಆಂಜನೇಯನು ಸೀತೆಯ ಸಮೀಪಕ್ಕೆ ಬರುತ್ತಾ ಇರಲು; ಆಕೆಯು ಬೆದರುತ್ತಾ, ಹಿಂದಕ್ಕೆ ಜರಿಯುತ್ತಿರಲು; ಹನುಮಂತನು—ಎಲೈ, ತಾಯಿಯೇ, ನೀನು ಅಂಜ ಬೇಡ! ನಾನು ದಾನವ ಭಂಜಕನ ಭೃತ್ಯನಾದ ಅಂಜನಾ ಸುತನು, ರಾಕ್ಷಸನಲ್ಲ, ಎಂದು ಹೇಳಲು; ಸೀತೆಯು—ಎಲೈ, ವಾನರನೇ, ನೀನು ಕಪಿಯು; ಶ್ರೀರಾಮನು ಧೊರೆಯು. ನಿಮ್ಮಿಬ್ಬರಿಗೂ ಸ್ವಾಮಿ ಭೃತ್ಯತ್ವ ಹ್ಯಾಗಾದೀತು? ನಿನಗೆ ಸಮುದ್ರವನ್ನು ದಾಟುವ ಶಕ್ತಿ ಉಂಟೇ? ನಿನ್ನ ಮಾಯದ ಮಾತುಗಳಿಗೆ ಭಯ ಪಡುತ್ತೇನೆ, ಎಂದು ನುಡಿಯಲು; ಆಂಜನೇಯನು—ಎಲೈ, ಲೋಕ ಮಾತೆಯೇ, ರಾಮನ ಪಾದ ಸೇವಕನಾದ ನನಗೆ ಈ ಸಮುದ್ರವನ್ನು ದಾಟುವದು ಕಷ್ಟವೇ? ಹಾಗಾದರೆ ನೋಡು ಎಂದು, ತ್ರಿವಿಕ್ರಮನ ರೂಪಿಗೆ ಇಮ್ಮಡಿಯಾಗಿ ಘೋರಾಕಾರವನ್ನು ಧರಿಸಿ ಕೊಳ್ಳಲು; ಸೀತೆಯು ಅಂಥ ಅದ್ಭುತ ರೂಪವನ್ನು ನೋಡಲಾರದೆ, ಕಣ್ಣು

ಮುಚ್ಚಿ ಕೊಳ್ಳಲು; ಆಂಜನೇಯನು ಆ ರೂಪವನ್ನು ಅಡಗಿಸಿ, ಪೂರ್ವದ ರೂಪವನ್ನು ಧರಿಸಿ ಕೊಂಡು, ನಿಂತಿರಲು; ಸೀತೆಯು ಇನ್ನೂ ಅನುಮಾನ ಪಡಲು;—

ಆಗ ವಾಯು ಪುತ್ರನು—ಎಲೈ, ತಾಯಿಯೇ, ಅರಣ್ಯದಲ್ಲಿ ನೀನೂ ಶ್ರೀರಾಮನೂ ನಡಿಸಿದ ಗುರುತುಗಳನ್ನು ಹೇಳುತ್ತೇನೆ, ಕೇಳು. ನೀನೂ ರಘುರಾಮನೂ ಚಿತ್ರಕೂಟದಲ್ಲಿ ಸ್ನಾನ ಕಾಲದಲ್ಲಿ ಕೊಳದ ನೀರನ್ನು ಕಲಕಿದಿರಂತೆ. ಇದು ನಿಜವೋ, ಸುಳ್ಳೋ? ಮತ್ತು ನಿನಗೆ ಎರಡು ಬಗೆದ ಕಾಕಾಸುರನನ್ನು ಶ್ರೀರಾಮನು ದಯೆಯಿಂದ ಸಲಹಿದನಂತೆ. ಮತ್ತು ನೀನು ಮಾಯಾ ಮೃಗವನ್ನು ಅಪೇಕ್ಷಿಸಿದೆಯಂತೆ. ಇದೆಲ್ಲಾ ನಿಶ್ಚಯವೋ, ಸುಳ್ಳೋ? ಎಂದು ಹೇಳಲು; ಸೀತೆಯು ಘಳ ಘಳನೆ ಕಣ್ಣಿನಿಂದ ನೀರು ಸುರಿಸುತ್ತಾ—ಹೋ, ರಾಮಾ! ಎಂದು ಹೊರಳಿದವಳಾಗಿ,—ಎಲೈ, ಹನುಮಂತನೇ, ಇದು ವರಿಗೂ ನೀನು ಹೇಳಿದ ಗುರುತುಗಳೆಲ್ಲಾ ಯಥಾರ್ಥವು! ಮುಂದೆ ನನಗೆ ದುಃಖ ಬರುತ್ತದೆ; ಹೇಳ ಬೇಡ! ಎಂದು ಹೇಳಲು; ಆಂಜನೇಯನು ಆಕೆಯ ಕಾಲು ಕೈ ಮುಖಗಳಲ್ಲಿರುವ ಗುರುತುಗಳನ್ನು ಹೇಳಿ, ಅನಂತರ ರಾಮ ನಾಮಾಂಕಿತದ ಮುದ್ರೇ ಉಂಗರವನ್ನು ಕೊಟ್ಟು, ಕೈ ಮುಗಿದು, ನಿಂತು ಕೊಂಡಿರಲು; ಸೀತೆಯು ಸಂಶಯವನ್ನು ಬಿಟ್ಟು, ಆ ಮುದ್ರೇ ಉಂಗುರವನ್ನು ರಾಮನೆಂದೇ ಭಾವಿಸಿ ಕೊಂಡು, ಸಂತೋಷ ಸಮುದ್ರದಲ್ಲಿ ಮುಣುಗಿ,—ಎಲೈ, ತಂದೆಯೇ, ಹನುಮನೇ, ನೀನು ಹೇಳಿದ ಮಾತು ಸತ್ಯವೇ. ಶ್ರೀರಾಮನು ಕ್ಷೇಮದಲ್ಲಿ ಇದ್ದಾನೆಯೇ? ಲಕ್ಷ್ಮಣನು ಸುಖವಾಗಿ ಇದ್ದಾನೆಯೇ? ನನ್ನ ವಿಷಯದಲ್ಲಿ ರಾಘವನಿಗೆ ಸ್ವಲ್ಪವಾದರೂ ಬೇಸರಿಕೆ ಇಲ್ಲವೇ? ಹೇಳೈಯಾ, ಎಂದು ಕೇಳಲು; ಆಂಜನೇಯನು—ಎಲೈ, ಮಾತೆಯೇ, ರಾಮನೂ ಲಕ್ಷ್ಮಣನೂ ಕುಶಲಿಗಳಾಗಿ ಇದ್ದಾರೆ. ರಘುವೀರನು ಯಾವಾಗಲೂ ನಿನ್ನ ಚಿಂತೆಯಲ್ಲಿಯೇ ಇದ್ದಾನೆ. ನೀನು ಚಿಂತೆಯನ್ನು ಬಿಡು. ಇನ್ನು ಒಂದು ತಿಂಗಳಲ್ಲಿಯೇ ನಿನ್ನರಸನಾದ ಶ್ರೀರಾಮನನ್ನು ಕರೆದು ಕೊಂಡು ಬಂದು, ಈ ದಶಕಂಧರನನ್ನು ಕೊಲ್ಲಿಸಿ, ನಿನ್ನನ್ನು ಬಿಡಿಸುವೆನು. ಚಿಂತೆಯನ್ನು ಬಿಟ್ಟು, ಚನ್ನಾಗಿ ನಂಬಿ ಕೊಂಡಿರು! ಶ್ರೀರಾಮನಿಗೆ ನಿನ್ನ ಕುರುಹನ್ನು ಕೊಡು! ಧೈರ್ಯವಾಗಿರು! ಎಂದು ಹೇಳಲು; ಜಾನಕಿಯು ಸಂತುಷ್ಟಳಾಗಿ, ತನ್ನ ಮಲಿನಾಂಬರದ ನೆರಿಯಲ್ಲಿದ್ದ ನಿರುಪಮ ಚೂಡಾರತ್ನವನ್ನು ಬಿಚ್ಚಿ—ಎಲೈ, ಗುಣ ನಿಧಿಯೇ, ಇದನ್ನು ತೆಗೆದು ಕೊಂಡು ಹೋಗಿ, ರಣದಿಶಾಪಟಮಲ್ಲನಾದ ರಾಮನಿಗೆ ಕೊಡು. ಮಗನೇ, ರಾಕ್ಷಸರು ಮಾಯಾವಿಗಳು, ಮಾಂಸಾಹಾರಿಗಳು. ನೀನು ಇನ್ನು ಇಲ್ಲಿ ನಿಲ್ಲ ಬೇಡ! ಬೇಗ ಹೋ

ಗು ಎಂದು ಹೇಳಿ, ಅವನನ್ನು ಅಗಲಲಾರದೆ, ಬಾರಿ ಬಾರಿಗೂ ಉಪಚರಿಸಿ, ನಿರೂಪವನ್ನು ಕೊಟ್ಟಳು. ಆಗ ಆಂಜನೇಯನು, ಹತ್ತು ತಲೆಗಳುಳ್ಳ ರಾಕ್ಷಸನಿಗೆ ತನ್ನ ಪರಾಕ್ರಮವನ್ನು ತಿಳಿಸದೆ ಇದ್ದರೆ, ತನ್ನ ವೀರತ್ವಕ್ಕೆ ಕುಂದು ಬರುತ್ತದೆ ಎಂದು ಯೋಚಿಸಿ—ತಾಯಿಯೇ, ನಾನು ಇದು ವರಿಗೂ ಅಶನ ಹೀನನಾಗಿ ಇದ್ದೇನೆ. ಈ ವನದ ಹಣ್ಣು ತಿನ್ನ ಬೇಕೆಂಬ ಆಶೆ ಉಂಟು. ನನಗೆ ಅಪ್ಪಣೆಯನ್ನು ಕೊಡು ಎಂದು ಕೇಳಲು; ಸೀತೆಯು—ಎಲೈ, ಬಾಲಕನೇ, ಈ ವನಕ್ಕೆ ಬಹು ಮಂದಿ ರಾಕ್ಷಸರು ಕಾವಲು ಇದ್ದಾರೆ. ಅವರು ಅರಿಯದಂತೆ ಭಕ್ಷಿಸಿಕೋ, ಎಂದು ಹೇಳಿ ಕಳುಹಿಸಿದಳು.

ಆಗ ಮಹಾ ಪರಾಕ್ರಮಿಯಾದ ಹನುಮನು ಪ್ರಳಯ ಕಾಲದ ಕುಲಿಶ ಕೋಟಿಯ ಘಾತದ ರಭಸದಂತೆಯೂ, ಕಾಲ ಭೈರವನ ಆಟೋಪದಂತೆಯೂ, ಕಲ್ಪಾಂತ ಮೇಘಗಳ ಸಿಡಿಲು ಧ್ವನಿಯಂತೆಯೂ, ಸಕಲ ಜನರ ಹೃದಯ ತಲ್ಲಣಿಸುವಂತೆ ಆರ್ಭಟಿಸಿ, ಕಂಡ ಮರಗಳನ್ನೆಲ್ಲಾ ಕಿತ್ತು, ಪಾದ ಘಾತದಿಂದ ವನ ಭೂಮಿಯನ್ನೆಲ್ಲಾ ಹಳ್ಳ ತಿಟ್ಟು ಮಾಡಿ, ಸರಸ್ಸುಗಳಿಗೆ ಕಟ್ಟಿ ಇರುವ ಪಾವಟಿಗೆಗಳನ್ನೆಲ್ಲಾ ಕಿತ್ತು, ಚಿತ್ರ ಮಂಟಪಗಳಿಗೆ ಹಾರಿ, ತೆನೆಗಳನ್ನೂ ಕಲಶಗಳನ್ನೂ ವೇದಿಕೆಗಳನ್ನೂ ಬೋದಿಗೆಗಳನ್ನೂ ಕಂಭಗಳನ್ನೂ ಮುರಿದು ಹಾಕಿದನು. ಆಗ ಆ ವನವು ಪತಿಯ ಮರಣದಲ್ಲಿ ಅಗಲಿದ ಕೇಶಗಳುಳ್ಳ ವಿಧವೆಯ ಶಿರಸ್ಸಿನಂತೆ ಅಮಂಗಳಕರವಾಗಿಯೂ, ನೋಡುವದಕ್ಕೆ ಅಸಹ್ಯಕರವಾಗಿಯೂ ಇತ್ತು. ಆಗ ಆ ವನದಲ್ಲಿ ಇದ್ದ ಪಕ್ಷಿಗಳೂ, ಮೃಗಗಳೂ, ಹನುಮನ ರಭಸಕ್ಕೆ ಬೆದರಿ, ಮೊರೆ ಇಡುತ್ತಾ, ಓಡಿ ಹೋದವು. ಈ ಕಳಕಳವನ್ನು ಆ ವನದ ಕಾವಲಿನ ರಾಕ್ಷಸರು ಕೇಳಿ, ನಿದ್ರೆಯನ್ನು ಬಿಟ್ಟು, ಎದ್ದು, ಕಣ್ಣುಗಳನ್ನು ಉಜ್ಜಿ ಕೊಳ್ಳುತ್ತಾ, ಕತ್ತಿ ಕಠಾರಿ ಮೊದಲಾದ ಆಯುಧಗಳನ್ನು ತೆಗೆದು ಕೊಂಡು,—ಕೋಡಗವನ್ನು ಹಿಡಿ! ಹಿಡಿ! ಕಡಿ! ಕಡಿ! ತಿವಿ! ತಿವಿ! ಎಂದು ಆರ್ಭಟಿಸಿ ಕೊಂಡು ಬರಲು; ಆಂಜನೇಯನು ದೊಡ್ಡ ಮರಗಳನ್ನು ಕಿತ್ತು ಕೊಂಡು, ಆ ರಾಕ್ಷಸರನ್ನು ಸದೆದು, ನಿಮಿಷ ಮಾತ್ರದಲ್ಲಿ ಹೆಣಗಳ ಬಣಬೆಯನ್ನು ಒಟ್ಟಿದನು. ಮತ್ತು ಸುಮಾಲಿ ಎಂಬ ರಾಕ್ಷಸನನ್ನು ಕರೆದು—ಎಲೈ, ನೀನು ನಾರೀ ಚೋರನ ಬಳಿಗೆ ಹೋಗಿ, ರಾಮ ದೂತನು ಬಂದದ್ದನ್ನು ತಿಳಿಸು. ವೀರರಿದ್ದರೆ, ಬರ ಹೇಳು. ಇದು ಉಪಚಾರದ ಮಾತಲ್ಲ. ಬಂದವರಿಗೆ ಕಾಲನ ಮನೆಯನ್ನು ತೋರಿಸುತ್ತೇನೆ, ಎಂದು ಹೇಳಲು; ಅವನು ಓಡಿ ಬಂದು, ಒಡ್ಡೋಲಗದಲ್ಲಿ ಕೂತು ಕೊಂಡಿರುವ ರಾವಣೇಶ್ವರನಿಗೆ

ಕೈ ಮುಗಿದು–ಬುದ್ಧೀ! ಮೃತ್ಯು ಕಪಿ ರೂಪವಾಗಿ ಬಂದು, ರಾಕ್ಷಸರನ್ನೆಲ್ಲಾ ಕೊಂದು ಹಾಕುತ್ತಲಿದೆ. ನಮ್ಮಿಂದ ನಿರ್ವಹಿಸುವದಕ್ಕೆ ಆಗುವದಿಲ್ಲ ಎಂದು, ಬಿನ್ನವಿಸಲಾಗಿ;–ಎಲವ್ರೋ, ಹರಿ ಹರ ಬ್ರಹ್ಮಾದಿಗಳು ನನಗೆ ಸಾಡಲ್ಲ! ಶ್ವಾನವೇ, ಬಗುಳ ಬೇಡ! ಕಪಿ ಬಂದು, ರಕ್ಕಸರನ್ನು ಕೊಂದಿತಂತೆ! ವನವನ್ನು ಮುರಿಯಿತಂತೆ! ಇಂಥಾ ಕಪಿಯನ್ನು ಹಿಡಿಯಲಾರದೆ, ನನ್ನ ಹತ್ರ ಬಂದು, ಬಗುಳುತ್ತೀ. ನಿನ್ನಂಥಾ ಹುಲು ನಾಯಿಗಳನ್ನು ಶೀಳಿಸ ಬೇಕು, ಎಂದು ದಶಕಂಠನು ಹೇಳಲಾಗಿ; ಹತವಾಗದ ರಾಕ್ಷಸರು ರಾವಣನ ಸಮೀಪಕ್ಕೆ ಬಂದು–ಸ್ವಾಮೀ, ಕಪಿಯಿಂದ ನಮ್ಮನ್ನು ಕೊಲ್ಲಿಸ ಬೇಡ! ನೀನು ಸಾಕಲಾರದೆ ಇದ್ದರೆ, ನಿನ್ನ ಕತ್ತಿಯಿಂದ ನಮ್ಮೆಲ್ಲರ ತಲೆಗಳನ್ನು ತರಿದು ಹಾಕು, ಎಂದು ಹೇಳಲು;–

ಆಗ ಅಕ್ಷಯ ಕುಮಾರನು ಎದ್ದು, ಕಪಿಯನ್ನು ಕೊಂದು ಹಾಕುವದಕ್ಕೆ ತನ್ನ ತಂದೆಯಿಂದ ವೀಳೆಯವನ್ನು ತೆಗೆದು ಕೊಂಡು, ಏಳು ನೂರು ಮಂದಿ ಕುಮಾರಕರನ್ನು ಕೂಡಿ ಕೊಂಡು, ಖಡ್ಗವನ್ನು ಝಳಪಿಸುತ್ತಾ, ಸುಳಿಯುವ ಶಿಡಿಲ ಮರಿಯಂತೆ ಹಾರುತ್ತಾ, ಬರುತ್ತಿರಲು; ವೀರನಾದ ಆಂಜನೇಯನು ಗರ್ವಿತರಾಗಿಯೂ, ನೋಟ ಭಯಂಕರರಾಗಿಯೂ, ಇರುವ ರಾವಣ ಪುತ್ರರನ್ನು ನೋಡಿ, ಹಿಗ್ಗಿದವನಾಗಿ, ಆರ್ಭಟಿಸಿ ಕೊಂಡು, ವಿಕಾರ ರೂಪಿಗಳಾದ ಆ ರಾಕ್ಷಸರನ್ನು ಹಲ್ಗಿರಿದು, ಅಣಕಿಸುತ್ತ ಇರಲು; ರಾಕ್ಷಸರೆಲ್ಲರೂ ನೋಡಿ, ನಗುತ್ತ,–ಬಾಯಿಯ ಮೇಲೆ ಹೊಡಿಯಿರಿ ಎಂದು, ಸಾಣೆ ಹಿಡಿದ ಖಡ್ಗಗಳಿಂದಲೂ ಶೂಲಗಳಿಂದಲೂ ತಿವಿಯುವದಕ್ಕೆ ಬರಲು; ಹನುಮಂತನು ತೋರಣ ಸ್ತಂಭದಿಂದ ಇಳಿದು, ಓಡುವವನ ಹಾಗೆ ಸ್ವಲ್ಪ ದೂರ ಹೋಗಲು;–ಎಲೋ, ಕಪಿಯು ಓಡುತ್ತದೆ; ಹಿಡಿಯಿರಿ! ಹೊಡಿಯಿರಿ! ಕಡಿಯಿರಿ! ಜಡಿಯಿರಿ! ಎಂದು ಮುತ್ತಿ ಕೊಳ್ಳುವದಕ್ಕೆ ಬರಲು; ಹನುಮಂತನು ಹಿಂತಿರಿಗಿ ಕೊಂಡು, ತೋರಣದ ಸ್ತಂಭಗಳನ್ನು ಕಿತ್ತು ಕೊಂಡು, ಬಾಹುವನ್ನು ಅಪ್ಪಳಿಸಿ ಕೊಂಡು, ಸಂಹಾರ ರುದ್ರನಿಗೆ ಎಂಟು ಮಡಿಯಾಗಿ, ನಿಮಿಷ ಮಾತ್ರಕ್ಕೆ ಎಂಭತ್ತು ಸಾವಿರ ಮಂದಿ ರಾಕ್ಷಸರನ್ನು ಭೂ ದೇವತೆಗೆ ಬಲಿಯಾಗಿ ಅರ್ಪಿಸಿ, ಆನೆ, ತೇರು, ಕುದುರೆ, ಕಾಲಾಳುಗಳನ್ನು ಯಮನ ಮನೆಗೆ ಕಳುಹಿಸಿ, ಆರ್ಭಟಿಸಲು; ಜಂಬುಮಾಲಿಯು ಬೊಬ್ಬಿರಿದು,–ಪ್ರಳಯ ಕಾಲದ ಬರ ಸಿಡಿಲೇ ಉದ್ಭವಿಸಿತೋ? ಎಂಬ ಹಾಗೆ ರೋಷಾವೇಶ ಯುಕ್ತನಾಗಿ ಕುಂತದಿಂದ ಆಂಜನೇಯನನ್ನು ಹೊಡೆಯಲು; ಆ ಹನುಮಂತನು ಹಲ್ಗಿರಿದು, ಪರ್ವತವು ಬಿದ್ದಂತೆ ಬಿದ್ದು, ಎರಡು

ಘಳಿಗೆಯ ಮೇಲೆ ಎದ್ದು, ಒಂದು ಹೆಮ್ಮರದಿಂದ ಜಂಬುಮಾಲಿಯನ್ನು ಹೊಡೆಯಲು; ಅವನು ಆ ಪೆಟ್ಟನ್ನು ತಪ್ಪಿಸಿ ಕೊಂಡು, ಆಂಜನೇಯನನ್ನು ಶೂಲದಿಂದ ತಿವಿಯಲು; ಹನುಮಂತನು ಅತಿ ಕೋಪಾಕ್ರಾಂತನಾಗಿ, ಆ ದುಷ್ಟ ರಾಕ್ಷಸನ ಮುಂದಲೆಯನ್ನು ಹಿಡಿದು ಕೊಂಡು, ಮೇಲಕ್ಕೆ ಎತ್ತಿ, ನೆಲಕ್ಕೆ ಅಪ್ಪಳಿಸಿ, ಕಾಲಲ್ಲಿ ಮೆಟ್ಟಿ ಕೊಂಡು, ಜೀರ್ಣ ವಸ್ತ್ರವನ್ನು ಶೀಳುವ ಹಾಗೆ ಶೀಳಿ ಬಿಟ್ಟನು.

ಅನಂತರ ಅಕ್ಷಯ ಕುಮಾರನು ಶರ ವರ್ಷಗಳಿಂದ ಆಂಜನೇಯನನ್ನು ಮುಚ್ಚಿಸಲು; ಹನುಮನು ಅದಕ್ಕೆ ಬೆದರದೆ, ಅಕ್ಷಯ ಕುಮಾರನ ಮಸ್ತಕವನ್ನು ಮುಷ್ಟಿಯಿಂದ ಹೊಡೆಯಲು; ಅವನ ತಲೆಯು ಒಡೆದು, ಮೂರ್ಛೆಯು ಉಂಟಾಯಿತು. ಹಾಗಾದಾಗ್ಯೂ, ತ್ರೈಲೋಕ್ಯದಲ್ಲಣನೆಂಬ ಬಿರಿದು ರಾವಣನಿಗೆ ವ್ಯರ್ಥವೇ? ಅಂಥವನ ಮಗನು ಸಾಮಾನ್ಯನೇ? ಆ ಅಕ್ಷಯ ಕುಮಾರನು ತಿರಿಗಿ ಆರ್ಭಟಿಸಿ ಕೊಂಡು, ಎದ್ದು, ಗದೆಯಿಂದ ರಾಮ ದೂತನನ್ನು ಹೊಡೆಯಲು; ಆಂಜನೇಯನು ಶಿಡಿದು ಬಿದ್ದು, ಒರಲಿ ಕೊಂಡು, ಅರ್ಧ ಘಳಿಗೆಗೆ ಸ್ವಲ್ಪ ಹೆಚ್ಚಾಗಿ ಮೂರ್ಛೆ ಬೀಳಲು; ಅಕ್ಷಯ ಕುಮಾರನು—ಎಲೋ, ಕಪಿಯು ಬಿತ್ತು! ಬಲೆಯನ್ನು ಹಾಕಿ, ಎನಲು; ಮಾರುತಿಯು ಆರ್ಭಟಿಸಿ ಕೊಂಡು, ಎದ್ದು, ಅಕ್ಷಯ ಕುಮಾರಕನ ರಥವನ್ನು ತೆಗೆದು ಕೊಂಡು, ಗರಿಗರಿನೆ ಬೀಸಿ, ರವಿ ಮಂಡಲಕ್ಕೆ ಇಡಲು; ಅಕ್ಷಯ ಕುಮಾರನು ಸಮುದ್ರಕ್ಕೆ ಲಂಘಿಸಿ, ಪರಿಘದಿಂದ ಅನಿಲಜನನ್ನು ಹೊಡೆಯಲು; ವೀರ ಹನುಮನು ತೋರಣ ಸ್ತಂಭದಿಂದ ಅಕ್ಷಯ ಕುಮಾರಕನನ್ನು ಶಿರಸ್ಸಿಲ್ಲದವನಾಗಿ ಮಾಡಿ, ಅವನ ತಲೆಯನ್ನು ರಾವಣನ ಮುಂದೆ ಬೀಳುವ ಹಾಗೆ ಎಸೆಯಲು;—

ರಾಕ್ಷಸೇಶ್ವರನು ತನ್ನ ಕುಮಾರನ ತಲೆಯನ್ನು ನೋಡಿ, ಆತಂಕ ಯುಕ್ತನಾಗಿ, ಇಂದ್ರಜಿತುವನ್ನು ಕುರಿತು—ಈ ಕಪಿಯು ಕಪಿ ಮಾತ್ರವಲ್ಲ. ಏನೋ ಮಾಯೆಯಾಗಿ ತೋರುತ್ತೆ. ನೀನು ಹೋಗಿ, ಅದನ್ನು ಕೊಲ್ಲದೆ, ಪ್ರಾಣ ಸಹಿತ ನನ್ನ ಬಳಿಗೆ ಹಿಡು ಕೊಂಡು ಬಾ, ಎಂದು ಕಳುಹಿಸಲು; ಆತನು ಚತುರಂಗ ಬಲ ಸಮೇತನಾಗಿ ಬಂದು, ಅಶೋಕಾ ವನದ ಹೆಬ್ಬಾಗಿಲ ಮೇಲೆ ಕುಳಿತಿರುವ ಹನುಮಂತನನ್ನು ಸಕಲ ಆಯುಧಗಳಿಂದ ಹೊಡೆದಾಗ್ಯೂ, ಆ ಆಯುಧಗಳೆಲ್ಲಾ ಆತನ ವಜ್ರ ಸಮಾನವಾದ ಮೈಗೆ ತಗಲಿ, ಮುರಿದು, ತುಮುರು ತುಮುರಾಗಿ ನೆಲಕ್ಕೆ ಬೀಳುವದೇ ಹೊರ್ತು, ಅವನ ಮೈಗೆ ಸ್ವಲ್ಪವಾದರೂ ಪೆಟ್ಟಾಗದೆ ಇರುವದನ್ನೂ, ಆತನು ತನ್ನ ಚತುರಂಗ ಬಲವನ್ನು ಒದ್ದು, ತಿವಿ

ದು, ಕಚ್ಚಿ, ಚಿವುಟ, ಒಬ್ಬರುಳಿಯದಂತೆ ಕೊಲ್ಲುವದನ್ನು ನೋಡಿ, ಇಂದ್ರ ಜಿತುವು ಸಕಲವಾದ ದೇವತಾಸ್ತ್ರಗಳನ್ನು ಆತನ ಮೇಲೆ ಪ್ರಯೋಗಿಸಿದಾಗ್ಯೂ, ಆತನಿಗೆ ಏನೂ ಆಗದೆ ಇದ್ದ ಕಾರಣ, ಆಶ್ಚರ್ಯ ಪಟ್ಟು, ಬ್ರಹ್ಮಾಸ್ತ್ರವನ್ನು ಪ್ರ ಯೋಗಿಸಿದನು. ಅದನ್ನು ಕಂಡು, ಹನುಮಂತನು ಇದರಲ್ಲಿಯೂ ಸಾಯ ದಂತೆ ನನಗೆ ಬ್ರಹ್ಮ ದೇವರ ವರ ಉಂಟು. ಆದ್ದರಿಂದ ಇದರೊಳಗೆ ಸಿಕ್ಕಿ ದವನಂತೆ ಬಿದ್ದು, ರಾವಣನನ್ನು ಕಂಡು, ರಾಮನ ಬಳಿಗೆ ಹೋಗುವೆನು, ಎಂ ದು ನಿಶ್ಚೈಸಿ, ಮೂರ್ಛೆ ಹೋದವನಂತೆ ನಿಶ್ಚೇಷ್ಟನಾಗಿ ಭೂಮಿಯಲ್ಲಿ ಬಿದ್ದ ನು. ಆಗ ಇಂದ್ರಜಿತುವು ಆತನನ್ನು ಕರೆದು ಕೊಂಡು, ರಾವಣನ ಓಲಗದ ಚಾವಡಿಗೆ ಬಂದು, ಕುಳಿತಿರುವ ರಾವಣನಿಗೆ ತೋರಿಸಲು; ಅಷ್ಟು ಹೊತ್ತಿಗೆ ಈ ಹನುಮಂತನು ಎಚ್ಚತ್ತು, ಬಿಂಕದಿಂದ ಕುಳಿತು ಕೊಂಡನು.

ಆಗ ರಾವಣನ ಮುಖ್ಯ ಮಂತ್ರಿಯಾದ ಪ್ರಹಸ್ತನು ಹನುಮಂತನ ಬಳಿಗೆ ಬಂದು—ನೀನು ಯಾರು? ನಿನ್ನನ್ನು ಯಾರು ಕಳುಹಿಸಿದರು? ನಮ್ಮ ಪಟ್ಟಣ ಕ್ಕೆ ಏನು ಕೆಲಸದ ಉದ್ದಿಶ್ಯ ಬಂದೆ? ನಮ್ಮ ಅಶೋಕಾ ವನವನ್ನು ಯಾಕೆ ಮುರಿದೆ? ನಮ್ಮ ರಾಕ್ಷಸರುಗಳನ್ನು ಯಾಕೆ ಕೊಂದೆ? ಎಂದು ಕೇಳಲು; ಹ ನುಮಂತನು ಪ್ರಹಸ್ತನನ್ನು ಕುರಿತು—ಎಲೈ, ಮಂತ್ರಿ ಶಿಖಾಮಣಿಯೇ, ನಾನು, ನಿಮ್ಮ ಒಡೆಯನಾದ ರಾವಣನನ್ನು ಯುದ್ಧದಲ್ಲಿ ಜೈಸಿ, ಚಿನ್ನದ ಸಂಕೋಲೆ ಯನ್ನು ಹಾಕಿ, ಒಂದು ಸಾವಿರ ವರುಷ ಕಾವಲಿನಲ್ಲಿ ಇಟ್ಟು ಇದ್ದ ಸಾವಿರ ತೋಳು ಉಳ್ಳ ಕಾರ್ತ್ತವೀರ್ಯ್ಯಾರ್ಜ್ಜುನನನ್ನು ಕೊಡಲಿಯಿಂದ ಕಡಿದ ಪರಶುರಾ ಮನನ್ನು ಜೈಸಿದವನಾಗಿಯೂ, ಮತ್ತು ಈ ರಾವಣನು ಯಾವ ವಾಲಿಯ ಕಂ ಕುಳಿನಲ್ಲಿ ಸಿಕ್ಕಿ, ನರಳಿ, ನಾಯಾಗಿ, ಆತನೊಡನೆ ಸಖ್ಯವನ್ನು ಮಾಡಿ ಕೊಂ ಡನೋ, ಅಂಥ ವಾಲಿಯನ್ನು ಕೊಂದವನಾಗಿಯೂ ಇರುವ ರಾಮನ ದೂತ ನು; ಸುಗ್ರೀವನೆಂಬ ಕಪಿ ರಾಜನ ಮಂತ್ರಿಯು; ನನ್ನ ಹೆಸರು ಹನುಮಂತ ನು. ಆ ರಾಮನ ಹೆಂಡತಿಯಾದ ಸೀತೆಯನ್ನು ಈ ರಾವಣನು ಕದ್ದು ಕೊಂ ಡು ಬಂದು, ತನ್ನ ಪಟ್ಟಣದಲ್ಲಿ ಇಟ್ಟು ಕೊಂಡದರಿಂದ, ರಾಮನ ಅಪ್ಪಣೆಯ ಪ್ರಕಾರ ಆಕೆಯನ್ನು ನೋಡುವದಕ್ಕೆ ಈ ಪಟ್ಟಣಕ್ಕೆ ಬಂದೆನು. ಆಕೆಯ ನ್ನು ಕಂಡು, ಮಾತಾಡಿಸಿದೆನು. ನಿಮ್ಮ ರಾವಣನನ್ನು ಕಾಣುವ ಉದ್ದಿಶ್ಯ ಅ ಶೋಕಾ ವನವನ್ನು ಮುರಿದೆನು. ಬಹು ಜನ ರಾಕ್ಷಸರು ನನ್ನನ್ನು ಕೊಲ್ಲ ಬಂದರು. ನನ್ನ ಜೀವವನ್ನು ಉಳಿಸಿ ಕೊಳ್ಳುವದಕ್ಕೋಸ್ಕರ ಅವರನ್ನೆಲ್ಲಾ ಕೊಂದೆನು. ಬ್ರಹ್ಮಾಸ್ತ್ರದಲ್ಲಿಯೂ ಸಾಯದ ಹಾಗೆ ನನಗೆ ಬ್ರಹ್ಮ ದೇವರ

ವರ ಉಂಟು. ಬೇಕು ಎಂದು, ಅದರಲ್ಲಿ ಕಟ್ಟು ಬಿದ್ದವನ ಹಾಗೆ ಈ ರಾವಣನನ್ನು ಕಂಡು, ಒಂದು ಮಾತನಾಡ ಬೇಕೆಂದು, ಈ ಚಾವಡಿಗೆ ಬಂದೆನು. ಅದೇನಂದರೆ, ಈಗಲಾದರೂ ಈ ರಾವಣನು ಬದುಕ ಬೇಕೆಂದು ಆಶೆ ಇದ್ದರೆ, ರಾಮುನಿಗೆ ಶರಣಾಗತನಾಗಿ, ಸೀತೆಯನ್ನು ಒಪ್ಪಿಸಿದರೆ, ದಯಾಳುವಾದ ರಾಮನು ಕಾಪಾಡುವನು. ಅದು ಈತನ ಮನಸ್ಸಿಗೆ ಬಾರದೆ ಇದ್ದರೆ, ಈಗಲೇ ತನ್ನ ಜೀವ ಶ್ರಾದ್ಧವನ್ನು ಮಾಡಿ ಕೊಳ್ಳಲಿ, ಎಂದು ಹೇಳಿದನು.

ಅದನ್ನು ಕೇಳಿ, ರಾವಣನು ಮಹಾ ಕೋಪಿಷ್ಠನಾಗಿ ಹಿಂದು ಮುಂದು ಯೋಚಿಸದೆ, ಈ ಕೋಡಗನನ್ನು ಕೊಂದು ಹಾಕಿಸು ಎಂದು, ಅಪ್ಪಣೆ ಕೊಡಲು; ವಿಭೀಷಣನು—ನೀನು ರಾಕ್ಷಸ ಚಕ್ರವರ್ತಿಯಾಗಿ, ದೂತನನ್ನು ಕೊಲ್ಲಿಸುವದು ಧರ್ಮವಲ್ಲ. ದೂತನು ತನ್ನ ಧಣಿಯನ್ನು ಹೊಗಳುವದು ನ್ಯಾಯವು. ಏನಾದರೂ ಬಹಳ ಅಪರಾಧವನ್ನು ಮಾಡಿದರೆ, ಸ್ವಲ್ಪ ಶಿಕ್ಷೆ ಮಾಡಿಸ ಬೇಕು ಎಂದು ಹೇಳಲು; ರಾವಣನು ತನ್ನ ದೂತರನ್ನು ಕುರಿತು-ಎಲೈ, ನೀವು ಈ ಕಪಿಯ ಕಿವಿಯನ್ನು ಕೊಯಿದು ಬಿಡಿ. ಹೋಗಿ, ತನ್ನೊಡೆಯನಿಗೆ ತೋರಿಸಲಿ ಎಂದು, ಆಜ್ಞಾಪಿಸಲು; ದೂತರು ಚೂರಿ, ಕತ್ತಿ, ಶೂಲ ಇತ್ಯಾದಿ ಆಯುಧಗಳನ್ನು ತಂದು, ಕೊಯ್ಯುತ್ತಿರಲು; ಒಂದು ಕೂದಲಾದರೂ ಹರಿಯದೆ, ಆಯುಧಗಳೆಲ್ಲಾ ಮುರಿದು ಹೋಗುತ್ತಿರಲು; ರಾವಣನು ನೋಡಿ, ಬೆರಗಾಗಿ, ಮೂಗಿನ ಮೇಲೆ ಬೆರಳಿಟ್ಟು ಕೊಂಡು, ಕಿರು ನಗೆಯಿಂದ ಪ್ರಹಸ್ತನನ್ನು ನೋಡಿ—ಇದೇನೈಯಾ, ಪ್ರಹಸ್ತನೇ? ಇದು ಏನೋ ಮಾಯವಾಗಿದೆ! ಆದರೆ ಕಪಿಗಳಿಗೆ ಬಾಲವೇ ಮುಖ್ಯ. ಆದ್ದರಿಂದ ಈ ಕಪಿಯ ಬಾಲಕ್ಕೆ ಬಟ್ಟೆಗಳನ್ನು ಸುತ್ತಿ, ಅಗ್ನಿಯನ್ನು ತೋರಿಸಿ ಬಿಡಿ, ಎಂದು ಹೇಳಲು;—ಇದು ಸರಿ ಎಂದು ತಿಳಿದು, ಎಲ್ಲರೂ ಆ ಕಪಿಯ ಬಳಿಗೆ ಬರಲು; ಆಂಜನೇಯನು ಚೀರಿ, ಕೀರಿ, ಕಿರಿಗುಟ್ಟುತ್ತಾ, ಹಾರಿ, ಬಿದ್ದು, ಹಲ್ಕಿರಿದು, ಹುಬ್ಬಾರಿಸುತ್ತಾ, ಹೆದರಿಸುತ್ತಾ, ತಲೆಯನ್ನು ಕುಣಿಸುತ್ತಾ, ತನ್ನ ಬಾಲವನ್ನು ಅರುವತ್ತು ಸಾವಿರ ಯೋಜನ ಬೆಳಸಿದನು. ರಾವಣನ ಆಳುಗಳು ಕಪಿಯನ್ನು ಮುತ್ತಿ ಕೊಂಡು, ಬಾಲದ ಒಂದು ಕಡೆಯಲ್ಲಿ ಬಟ್ಟೆಗಳನ್ನು ಸುತ್ತುತ್ತಿರುವಾಗ, ಮತ್ತೊಂದು ಕಡೆ ಬೆಳೆಯುತ್ತಿರಲು; ಆ ಲಂಕಾ ಪಟ್ಟಣದಲ್ಲಿರುವ ವಸ್ತ್ರಗಳನ್ನೆಲ್ಲಾ ಎಣ್ಣೆಯಲ್ಲಿ ಅದ್ದಿ, ಸುತ್ತಿದರು.

ಆ ಮೇಲೆ ರಾವಣನ ಅಪ್ಪಣೆಯಿಂದ ಆ ರಾಕ್ಷಸ ದೂತರು ಹತ್ತಿಗಳ ಹೊರೆಗಳನ್ನು ತರಿಸಿ, ಬಾಲದ ಕೊನೆಗೆ ಸುತ್ತಿ, ಕಣಜಗಳನ್ನು ಒಡೆದು, ಸಜ್ಜೇ

ರಸ, ಗುಡ, ಕರ್ಪೂರಗಳನ್ನು ಮೆತ್ತಿ, ಬೆಂಕಿ ಹತ್ತಿಸಿ, ಅವನ ಸೊಂಟಕ್ಕೆ ಹಗ್ಗವನ್ನು ಕಟ್ಟಿ, ಊರಲ್ಲೆಲ್ಲಾ ಡಂಗುರವನ್ನು ಹೊಯ್ದು, ಮೆರೆಯಿಸುತ್ತಾ ಬರುವಲ್ಲಿ, ಆ ಪಟ್ಟಣದ ಸಮಸ್ತ ರಾಕ್ಷಸ ಸ್ತ್ರೀ ಪುರುಷರೆಲ್ಲಾ ಉರಿಯುತ್ತಲಿರುವ ಬಾಲವುಳ್ಳ ಹನುಮಂತನನ್ನು ನೋಡಿ, ಸಂತೋಷ ಪಟ್ಟರು. ಆಗ ಹನುಮಂತನು—ನಾನು ನೆನ್ನೇ ರಾತ್ರೆಯಲ್ಲಿ ಈ ಲಂಕಾ ಪಟ್ಟಣವನ್ನು ಚನ್ನಾಗಿ ನೋಡಲಿಲ್ಲ. ಈಗ ಈ ಲಂಕಾ ಪಟ್ಟಣದ ಹೆಬ್ಬಾಗಿಲುಗಳನ್ನೂ, ದಿಡ್ಡೀ ಬಾಗಿಲುಗಳನ್ನೂ, ಕನ್ನ ಗಂಡಿಗಳನ್ನೂ, ಸುರಂಗಗಳನ್ನೂ, ಯಂತ್ರಗಳನ್ನೂ, ಅವುಗಳ ಕೀಲುಗಳನ್ನೂ, ಚನ್ನಾಗಿ ನೋಡಿ, ಈ ಪಟ್ಟಣದ ಆಯುಧಾಯುವನ್ನೆಲ್ಲಾ ಚನ್ನಾಗಿ ತಿಳಿದು ಕೊಂಡು, ಇವರು ಕಟ್ಟಿರುವ ಹಗ್ಗದ ಕಟ್ಟನ್ನು ಹರಿದು, ಪುಡಿ ಪುಡಿ ಮಾಡಿ, ಇವರನ್ನೆಲ್ಲಾ ಕೊಂದು, ರಾಮನ ಬಳಿಗೆ ಹೋಗುವೆನು. ಇವರು ಸಾರಿ ಕೊಂಡು, ಈ ಪಟ್ಟಣದಲ್ಲಿ ತಿರುಗಿಸಲಿ ಎಂದು ನಿಶ್ಚೈಸಿ, ಸುಮ್ಮನೆ ಇದ್ದನು. ಅದನ್ನು ಸೀತೆಯ ಮೇಲೆ ಕಾವಲಿದ್ದ ರಾಕ್ಷಸಿಯರು ಕಂಡು, ಸೀತೆಯ ಬಳಿಗೆ ಹೋಗಿ—ಎಲೈ, ಜಾನಕಿಯೇ, ನಿನ್ನ ಸಂಗಡ ನೆನ್ನೇ ರಾತ್ರೆ ಮಾತಾಡಿದ ಕೆಂಪು ಮುಖವುಳ್ಳ ಕೋತಿಯ ಬಾಲಕ್ಕೆ ಬಟ್ಟೇ ಸುತ್ತಿ, ಬೆಂಕಿ ಹತ್ತಿಸಿ, ಊರಲ್ಲೆಲ್ಲಾ ಸಾರುತ್ತಾ, ತಿರುಗಿಸುತ್ತಾರೆ, ಎಂದು ಹೇಳಿದರು. ಅದನ್ನು ಕೇಳಿ, ವೈದೇಹಿಯು ಬಹಳ ದುಖ್ಖ ಪಟ್ಟು, ಅಗ್ನಿ ಪುರುಷನಿಗೆ ನಮಸ್ಕರಿಸಿ—ಎಲೈ, ಅಗ್ನಿ ದೇವತೆಯೇ, ನಾನು ಪತಿ ಶುಶ್ರೂಷೆಯನ್ನು ಮಾಡಿ, ತಪಸ್ಸನ್ನು ಮಾಡಿ ಇದ್ದವಳೇ ಆದರೆ—ನನ್ನಲ್ಲಿ ಏಕ ಪತಿತ್ವವು ಇದ್ದದ್ದೇ ಆದರೆ—ನಾನು ಒಳ್ಳೇ ನಡತೆಯಿಂದ ಕೂಡಿದವಳೆಂದೂ, ತನ್ನನ್ನು ಒಡ ಗೂಡುವದರಲ್ಲಿ ಆಶೆಯುಳ್ಳವಳು ಎಂದೂ, ಶ್ರೀರಾಮಚಂದ್ರನು ಮನಸ್ಸಿನಲ್ಲಿ ತಿಳಿದು, ಈ ದುಖ್ಖ ಸಮುದ್ರದ್ದೆಶೆಯಿಂದ ನನ್ನನ್ನು ದಾಟಿಸುವದು ನಿಶ್ಚಯವಾಗಿದ್ದರೆ—ನನಗೆ ಒಳ್ಳೇ ಭಾಗ್ಯವು ಉಂಟಾಗುವದಾದರೆ—ಹನುಮಂತನಿಗೆ ತಣ್ಣೀರಿನ ಹಾಗೆ ತಣ್ಣಗಾಗು ಎಂದು ಪ್ರಾರ್ಥಿಸಿದಳು.

ಅತ್ತಲಾ ಹನುಮಂತನು ಉರಿಯುತ್ತಲಿರುವ ತನ್ನ ಬಾಲವನ್ನು ನೋಡಿ,—ಅಗ್ನಿಯ ಮಹಾ ಜ್ವಾಲೆಯು ನನ್ನ ಬಾಲದಲ್ಲಿ ಕಾಣುತ್ತದೆ. ಸ್ವಲ್ಪವಾದರೂ ಸುಡುವದಿಲ್ಲ. ಪನ್ನೀರನ್ನು ಸುರಿದಂತೆ ಶೀತಳವಾಗಿದೆ. ಸೀತೆಯ ಪಾತಿವ್ರತ್ಯ ಧರ್ಮದಿಂದಲೂ, ರಾಮನ ತೇಜಸ್ಸಿನಿಂದಲೂ, ನಮ್ಮ ತಂದೆಯಾದ ವಾಯುವಿನ ಸ್ನೇಹದಿಂದಲೂ, ನನ್ನನ್ನು ಅಗ್ನಿಯು ಸುಡುವದಿಲ್ಲ ಎಂದು ನಿಶ್ಚೈಸಿ, ಮತ್ತೆ ಅತ್ಯುನ್ನತವಾಗಿ ಬೆಳದು, ರಾಕ್ಷಸರು ಕಟ್ಟಿದ್ದ ಹಗ್ಗಗಳನ್ನು ನುಚ್ಚು ನೂರಾ

ಗಿ ಮಾಡಿ, ಊರು ಬಾಗಿಲ ಕಬ್ಬಿಣದ ಲಾಳಮುಂಡಿಗೆಯನ್ನು ತೆಗೆದು ಕೊಂಡು, ತನ್ನನ್ನು ಸಾರುತ್ತಾ ಬರುತ್ತಿರುವ ರಕ್ಕಸರನ್ನೆಲ್ಲಾ ಯಮನ ಪಟ್ಟಣಕ್ಕೆ ಕಳುಹಿಸಿ, ಊರು ಬಾಗಿಲ ಉಪ್ಪರಿಗೆಯ ಮೇಲೆ ಕುಳಿತು ಕೊಂಡು,—ಇನ್ನು ನಾನು ಮಾಡ ತಕ್ಕ ಉಳಿದ ಕೆಲಸವ್ಯಾವದಿರುವದು? ವನವನ್ನು ಮುರಿದೆನು; ಶ್ರೇಷ್ಠರಾದ ರಾಕ್ಷಸರನ್ನು ಕೊಂದೆನು; ಇಲ್ಲಿರುವ ಬಲದಲ್ಲಿ ಕಾಲು ಪಾಲು ಚತುರಂಗ ಬಲವನ್ನು ಸದೆದೆನು; ಇನ್ನು ಈ ಲಂಕಾ ದುರ್ಗವನ್ನು ಹಾಳು ಮಾಡುವದೊಂದೇ ನಿಂತಿರುವದು. ಈಗ ನನ್ನ ಬಾಲದಲ್ಲಿ ನನಗೆ ಸ್ವಲ್ಪವಾದರೂ ನೋವನ್ನು ಕೊಡದೆ, ಉರಿಯುತ್ತಲಿರುವ ಬೆಂಕಿಗೆ ಈ ಲಂಕಾ ಪಟ್ಟಣವನ್ನು ಹೋಮಾ ಮಾಡಿ, ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವದು ನ್ಯಾಯವು ಎಂದು, ಲಂಕಾ ಪಟ್ಟಣದಲ್ಲಿರುವ ರಾಕ್ಷಸರುಗಳ ಮನೆಯಿಂದ ಮನೆಗೆ ನೆಗೆಯುತ್ತ, ಅವುಗಳಿಗೆಲ್ಲಾ ಬೆಂಕಿಯನ್ನು ಹತ್ತಿಸುತ್ತ, ನಿರ್ಭಯನಾಗಿ ಸುಡುತ್ತ, ಅಲ್ಲಿಂದ ಪ್ರಹಸ್ತನ ಮನೆಗೆ ಹಾರಿ, ಅಲ್ಲಿ ಬೆಂಕಿಯನ್ನು ಹತ್ತಿಸಿ, ವಿಭೀಷಣನ ಮನೆ ಒಂದು ಹೊರತಾಗಿ, ಮಹಾಪಾರ್ಶ್ವ ಮೊದಲಾದ ರಾಕ್ಷಸ ಶ್ರೇಷ್ಠರ ಮನೆಗಳಿಗೆಲ್ಲಾ ಹಾರಿ, ಅವುಗಳಲ್ಲಿ ಬೆಂಕಿಯನ್ನು ಹತ್ತಿಸಿ, ರಾವಣನ ಮನೆಗೆ ಬಂದು, ಅದರಲ್ಲಿಯೂ ಬೆಂಕಿಯನ್ನು ಹತ್ತಿಸಿ, ನೋಡುತ್ತಿರಲು; ಈ ಮನೆಗಳಿಗೆ ಹತ್ತಿಸಿದ ಬೆಂಕಿಯು ಒಟ್ಟಾಗಿ ಸುಡುತ್ತಿರಲು; ನವರತ್ನ ಖಚಿತಗಳಾದ ಮನೆಗಳೆಲ್ಲ ಪುಣ್ಯ ನಾಶದಲ್ಲಿ ಸ್ವರ್ಗದಿಂದ ಕೆಳಗೆ ಬೀಳುವ ವಿಮಾನಗಳ ಹಾಗೆ ಮುರಿದು, ಭೂಮಿಯಲ್ಲಿ ಬೀಳುತ್ತಾ ಇದ್ದವು.

ಆಗ ತಮ್ಮ ತಮ್ಮ ಮನೇ ಪದಾರ್ಥಗಳನ್ನು ಕಾಪಾಡುವದರಲ್ಲಿ ಆಶೆಯನ್ನು ತೊರೆದು, ತಮ್ಮ ತಮ್ಮ ಪ್ರಾಣಗಳ ಸಂರಕ್ಷಣೆಯಲ್ಲಿಯೇ ಆಶೆಯುಳ್ಳವರಾಗಿ, ಓಡ್ಯಾಡುವ ಜನರುಗಳ ಘೋಳು ಕೇಳಿಸಿತು. ಅಯ್ಯೋ! ಇದು ಕೋಡಗನಲ್ಲ; ಕಪಿ ರೂಪವನ್ನು ಧರಿಸಿದ ಅಗ್ನಿಯೇ ಸರಿ! ಎಂದು ಕೂಗುತ್ತ, ಅಳುತ್ತ, ಮೊಲೇ ಉಣ್ಣುವ ಮಕ್ಕಳುಗಳನ್ನು ಎತ್ತಿ ಕೊಂಡು, ಕೆಲವು ಹೆಂಗಸರುಗಳು ಮೈಗಳ ಸುಟ್ಟು ಕೊಂಡು, ಓಡಿ ಹೋದರು. ಬೆಂಕಿಯು ಒಣಗಿದ ಕಾಷ್ಟಗಳನ್ನು ಸುಡುವದರಲ್ಲಿ ಹ್ಯಾಗೆ ತೃಪ್ತಿ ಹೊಂದುವದಿಲ್ಲವೋ, ಹಾಗೆ ಈ ಹನುಮಂತನು ಎಷ್ಟು ಜನ ರಾಕ್ಷಸರನ್ನು ಕೊಂದಾಗ್ಯೂ, ತೃಪ್ತಿಯನ್ನು ಹೊಂದುವದಿಲ್ಲ. ಆನೆ, ಕುದುರೆ, ತೇರು, ಮಂದಿ, ಮಾರ್ಬಲ, ಎತ್ತು, ಹಸು, ಒಂಟೆ, ಮೊದಲಾದವುಗಳೂ, ಅನೇಕ ರಾಕ್ಷಸರೂ ಸುಟ್ಟು, ಬೂದಿಯಾಗಿ ಹೋದರು. ಅಯ್ಯೋ, ನನ್ನ ಮಗನೇ! ಹಾ, ನನ್ನ ತಂದೆಯೇ! ಅ

ಯ್ಯೋ, ನನ್ನ ಭಾಗ್ಯವೇ! ಎಂದು ಕೂಗುವ ಶಬ್ದವು ಕೇಳಿಸಿತು. ಮತ್ತು—ನನ್ನ ಮಗ ಎಲ್ಲಿ ಹೋದನೋ? ಅಪ್ಪಾ, ನೀನೆಲ್ಲಿದ್ದೀ? ಹೆಂಡತಿಯೇ, ಮೊಗುವನ್ನು ಎತ್ತಿ ಕೊಂಡು ಓಡಿ ಬಾ! ಓ ತಮ್ಮಾ, ನೀನಾದರೂ ಓಡಿ ಹೋಗು; ನಾನು ಉರಿಯಲ್ಲಿ ಸಿಕ್ಕಿ ಮೈಯೆಲ್ಲಾ ಸುಟ್ಟು ಸತ್ತು ಹೋಗುತ್ತೇನೆ. ಈ ಪಾಪಿಷ್ಠನಾದ ರಾವಣನು ಮೂಘರಿಕಿಯಾದ ಮೂಳಿ ಶೂರ್ಪನಖಿಯ ಮಾತನ್ನು ಕೇಳಿ, ಮಹಾ ರಾಯ ರಾಮನ ಧರ್ಮ ಪತ್ನಿಯನ್ನು ತಂದು, ನಮಗೆ ಈ ಪಾಡನ್ನು ತಂದನು. ತಾನು ತಾನೇ ಬದುಕುತ್ತಾನೇ? ಇಲ್ಲ. ಮಕ್ಕಳು ಮರಿ ಸಹಿತ ನಿರ್ಮೂಲವಾಗಿ ಹೋಗುತ್ತಾನೆ. ಅನ್ಯರ ಹೆಂಡರಿಗೆ ಆಶೆ ಪಟ್ಟವನು ಎಂದೂ ಬಾಳುವದಿಲ್ಲ ಎಂದು, ಆ ಪಟ್ಟಣದವರೆಲ್ಲರು ಮೊರೆ ಇಡುತ್ತಿದ್ದರು.

ಹೀಗೆ ಆಂಜನೇಯನು ಲಂಕಾ ಪಟ್ಣವನ್ನೆಲ್ಲಾ ದಹಿಸಿ, ತಿರಿಗಿ ಸೀತೆಯ ಬಳಿಗೆ ಬಂದು, ಅವಳಿಗೆ ಭರವಸವನ್ನು ಕೊಟ್ಟು, ಅಪ್ಪಣೆಯನ್ನು ತೆಗೆದು ಕೊಂಡು, ಅಲ್ಲಿಂದ ಹೊರಟು, ಸಮುದ್ರವನ್ನು ದಾಟಿ, ಜಾಂಬವಾದಿಗಳು ಇರುವಲ್ಲಿಗೆ ಬಂದು, ವೃದ್ಧನಾದ ಜಾಂಬವಂತನ ಪಾದಕ್ಕೆ ಎರಗಲು; ಜಾಂಬವಂತನು ಹನುಮಂತನನ್ನು ಅಪ್ಪಿ ಕೊಂಡು—ಎಲೈ, ಬಾಲಕನೇ, ಸೌಖ್ಯದಿಂದ ತಿರಿಗಿ ಬಂದೆಯಾ? ಅವನಿ ಜಾತೆಯನ್ನು ಕಂಡೆಯಾ? ನೀನು ಹೋದ ಸಂಗತಿ ಹ್ಯಾಗೆ? ವಿಸ್ತಾರವಾಗಿ ಹೇಳು ಎನಲು; ಹನುಮಂತನು ತಾನು ನಡಿಸಿದ ಸಂಗತಿಯನ್ನೆಲ್ಲಾ ವಿಸ್ತಾರವಾಗಿ ತಿಳಿಸಲು; ಜಾಂಬವಂತನು ಸಂತೋಷಪಟ್ಟು ಕೊಂಡು, ಸಕಲ ಸೇನಾ ಸಮೇತನಾಗಿ ಹೊರಟು, ಸುಗ್ರೀವನು ಇದ್ದ ಮಧು ವನಕ್ಕೆ ಬಂದು, ಇಷ್ಟೆ ಬಂದ ಹಾಗೆ ಮಧು ಪಾನವನ್ನು ಮಾಡಿ ನೆಗಿಯುತ್ತ, ಕುಣಿಯುತ್ತ, ಚೀರುತ್ತ, ಶ್ರೀರಾಮನು ಇರುವ ಋಷ್ಯಮೂಕ ಪರ್ವತಕ್ಕೆ ಬಂದನು.

ಅನಂತರದಲ್ಲಿ ಶ್ರೀರಾಮನು ನಗೆ ಮುಖದ ಕಪಿ ವೀರನನ್ನು ನೋಡಿ,—ಎಲೈ, ಕಪಿಗಳೇ, ನೀವು ಹೋದ ಕಾರ್ಯ ಜಯವಾಯಿತೇ? ಎಂದು ಕೇಳಲು; ಜಾಂಬವಂತನು ಕೈ ಮುಗಿದು,—ಜೀಯಾ, ಅವಧರಿಸು! ನಾವು ನಿನ್ನ ಸನ್ನಿಧಿಯಿಂದ ಹೊರಟು, ಮಾರ್ಗ ತಪ್ಪಿ, ಸ್ವಯಂಪ್ರಭಾ ಪಟ್ಟಣಕ್ಕೆ ಹೋಗಿ, ಅಲ್ಲಿಂದ ಮುಂದಕ್ಕೆ ಹೊರಟು, ಇಪ್ಪತ್ತೇಳು ದಿವಸ ಕಳೆದು ಹೋದದರಿಂದ ವ್ಯಸನ ಪಡುತ್ತಾ, ಸಂಪಾತಿಯಿಂದ ಲಂಕಾ ಮಾರ್ಗವನ್ನು ತಿಳಿದು, ಸಮುದ್ರದ ತಡಿಗೆ ಹೋಗಲು; ಧೀರನಾದ ಆಂಜನೇಯನು ಸಮುದ್ರವನ್ನು ದಾಟಿ,

ಸೀತೆಯನ್ನು ಕಂಡು ಬಂದನು, ಎಂದು ಹೇಳಿ, ಹನುಮಂತನನ್ನು ರಾಮನ ಪಾದದ ಮೇಲೆ ಕೆಡಹಲು; ಶ್ರೀರಾಮನು ಆಂಜನೇಯನನ್ನು ಅಪ್ಪಿ ಕೊಂಡು—ಬಾರೈಯಾ, ಕಂದನೇ, ನನ್ನ ಬಂಧುವೇ, ನನ್ನ ದುಖ್ಖವನ್ನು ಪರಿಹರಿಸುವದಕ್ಕೆ ಎಷ್ಟು ಶ್ರಮ ಪಟ್ಟೆಯೋ! ಎಂದು, ಮೈದಡವುತ್ತಾ, ಆತನು ಕೊಟ್ಟ ಶಿರೋ ರತ್ನವನ್ನು ನೋಡಿ, ಸೀತೆಯನ್ನು ಕಂಡಂತೆ ಸಂತುಷ್ಟನಾಗಿ, ಮುಂದೆ ಮಾಡ ತಕ್ಕ ಪ್ರಯತ್ನಗಳನ್ನು ಸುಗ್ರೀವನಿಗೆ ನೇಮಿಸಿದನು.

70. The Building of the Bridge across the Sea to Lanka.

೭೦. ಸೇತು ಬಂಧನದ ಕಥೆ.

ಋಷ್ಯಮೂಕ ಗಿರಿಯಲ್ಲಿ ಶ್ರೀರಾಮನು ಸೀತಾ ರಾವಣರ ಸುದ್ದಿಯನ್ನು ಹನುಮಂತನ ಮುಖದಿಂದ ಕೇಳಿ, ಆ ರಾತ್ರಿ ಸಭೆಯನ್ನು ಮಾಡಿ, ಸುಗ್ರೀವನನ್ನು ಕುರಿತು—ಎಲೈ, ಪ್ರಿಯ ಸಖನೇ, ನೀನು ನನಗೆ ನಂಬಿಗೆಯನ್ನು ಕೊಟ್ಟ ಪ್ರಕಾರ, ನನ್ನ ಪ್ರಾಣವಲ್ಲಭೆಯನ್ನು ಕದ್ದು ಕೊಂಡು ಹೋದ ರಾವಣನು ಇರುವ ಸ್ಥಳವನ್ನೂ, ಅವನ ಶೆರೆಯಲ್ಲಿ ಸೀತೆ ಇರುವದನ್ನೂ ಗೊತ್ತು ಮಾಡಿಸಿ ಕೊಟ್ಟೆ. ಇನ್ನು ಮೇಲೆ ನನ್ನ ಪ್ರಿಯಳು ಸಂಕಟ ಪಡುವದನ್ನು ಒಂದು ಕ್ಷಣವಾದರೂ ಸಹಿಸಲಾರೆನು. ಎಷ್ಟು ಹೊತ್ತಿಗೆ ನನ್ನ ಹಗೆಯಾದ ಖೂಳ ರಾವಣನನ್ನು ಕೊಂದು, ಸೀತೆಯನ್ನು ಬಿಡಿಸಿ ಕೊಂಡು ಬರುವೆನೋ? ಎಂಬ ಆತುರವು ನನಗೆ ಹತ್ತಿದೆ. ಇದಕ್ಕೆ ಮುಂದೆ ಏನು ಯೋಚನೆಯನ್ನು ನಿನ್ನ ಮನಸ್ಸಿನಲ್ಲಿ ಮಾಡಿ ಇದ್ದೀಯಾ? ಎಂದು ಕೇಳಲು; ಸುಗ್ರೀವನು ಎದ್ದು, ಕೈ ಮುಗಿದು ಕೊಂಡು,—ಜೀಯಾ, ನಿನ್ನ ಅಮಾನುಷ ಪರಾಕ್ರಮಕ್ಕೆ ಬ್ರಹ್ಮಾಂಡವು ವಶವರ್ತಿಯಾಗುವದು. ಪಟ್ಟಣವನ್ನೇ ನುಂಗುವವನಿಗೆ ಕದವು ಹಪ್ಪಳವು ಎಂಬ ಗಾದೆಯಂತೆ, ಈ ಹದಿನಾಲ್ಕು ಲೋಕವನ್ನು ನುಂಗುವ ನಿನಗೆ ಈ ಖೂಳ ರಾವಣನು ಎಷ್ಟು ಮಾತ್ರವು! ಆದರೂ ನಿನ್ನ ದಯದಿಂದ ನನ್ನಲ್ಲಿರುವ ಕಪಿ ವೀರರು ಮಹಾ ಸಮರ್ಥರಾಗಿದ್ದಾರೆ. ನಿನ್ನ ಅಪ್ಪಣೆಯಾದರೆ, ಮೂರು ದಿವಸದಲ್ಲಿ ಬೆಟ್ಟಗಳಿಂದಲೂ, ಕಲ್ಲು ಮೊರಡಿಗಳಿಂದಲೂ, ಮರಗಳಿಂದಲೂ, ಕಡಲನ್ನು ತುಂಬಿಸುವೆನು. ನೀನು ಲಕ್ಷ್ಮಣನೊಡನೆ ಕೂಡಿ, ನಮ್ಮ ಕಪಿ ಸೇನಾ ಸಮೇತನಾಗಿ, ದುಷ್ಟ ರಾವಣನನ್ನು ಸಂಹರಿಸ ಬಹುದು. ನಾನು ಮೊದಲಾದ ಸಕಲ ಕಪಿ ಸೇನೆಗಳು ನಿನ್ನ ಕೆಲಸದಲ್ಲಿ ನಮ್ಮ ನಮ್ಮ ಪ್ರಾಣಗಳನ್ನು ಹುಲ್ಲಿಗಿಂತಲೂ ಕಡೆಯಾಗಿ ಎಣಿಸಿದ್ದೇವೆ. ಇಗೋ, ಈ ಅಗ್ನಿಯ ಮ

ಗನಾದ ನೀಲನೆಂಬ ವಾನರೋತ್ತಮನು ಮಹಾ ಪರಾಕ್ರಮ ಶಾಲಿಯೂ, ಬುದ್ಧಿ
ವಂತನೂ. ಈತನಿಗೆ ಸಕಲ ಕಪಿ ದಳಕ್ಕೆ ದಳಪತಿಯಾಗಿ ಇರುವಂತೆ ಪಟ್ಟಾ
ಭಿಷೇಕವನ್ನು ಮಾಡಿಸ ಬೇಕು. ಜಾಂಬವಂತನು ಮುದುಕನಾಗಿಯೂ, ಸಕಲ
ರಾಜ ನೀತಿಗಳನ್ನು ತಿಳಿದವನಾಗಿಯೂ ಇರುವದರಿಂದ, ಮಂತ್ರಾಲೋಚನೆಗೆ
ಇರಿಸಿ ಕೊಳ್ಳ ಬೇಕು. ವಾಲಿಯ ಮಗನಾದ ಅಂಗದನನ್ನು ನಮ್ಮ ಕಪಿ ಸೇನೆ
ಗಳನ್ನೆಲ್ಲಾ ಮೇಲು ವಿಚಾರಣೆಯನ್ನು ತೆಗೆದು ಕೊಂಡು, ಕಾಪಾಡುವದಕ್ಕೆ
ನಿಲ್ಲಿಸ ಬೇಕು. ಪರಾಕ್ರಮದಲ್ಲಿ ಶಿವನಿಗೆ ಸರಿಯಾದ ಹನುಮಂತನನ್ನು ನಿಮ್ಮ
ಮೈಗಾವಲಿಗೂ, ನಿಮ್ಮ ಪಾದ ಸೇವೆಗೂ ಇಟ್ಟು ಕೊಳ್ಳ ಬೇಕು, ಎಂದು ಹೇ
ಳಲು; ಶ್ರೀರಾಮಚಂದ್ರನು ಆ ಮಾತಿಗೆ ಒಪ್ಪಿ, ಅಂಗದ, ಜಾಂಬವಂತ, ಹನು
ಮಂತರನ್ನು ಆಯಾಯ ಕೆಲಸದಲ್ಲಿ ನೇಮಿಸಿ, ಅಗ್ನಿ ಕುಮಾರನಾದ ನೀಲನ
ನ್ನು ಒಳ್ಳೇ ಲಗ್ನದಲ್ಲಿ ಪೀಠದಲ್ಲಿ ಕುಳ್ಳಿರಿಸಿ, ಸಮುದ್ರೋದಕಗಳಿಂದಲೂ, ಗಂ
ಗಾದಿ ಪುಣ್ಯ ನದಿಗಳ ಉದಕಗಳಿಂದಲೂ, ದಿವ್ಯೌಷಧಿಗಳ ರಸಗಳಿಂದಲೂ, ಅ
ಭಿಷೇಕವನ್ನು ಮಾಡಿ, ದಳಪತಿಯ ಪಟ್ಟವನ್ನು ಕಟ್ಟಿಸಿದನು. ಆಗ ನೀಲನ
ನ್ನು ಸಕಲ ಕಪಿ ಸೇನಾಪತಿಗಳು ಕಾಣಿಸಿ ಕೊಂಡು, ಹಣ್ಣು ಹಂಪಲುಗಳನ್ನು
ಕೈ ಗಾಣಿಕೆಯನ್ನು ಕೊಟ್ಟರು. ಆ ಮೇಲೆ ನೀಲನು ಎದ್ದು, ರಾಮ ಲಕ್ಷ್ಮಣ
ಸುಗ್ರೀವ ಜಾಂಬವಂತರಿಗೆ ನಮಸ್ಕಾರವನ್ನು ಮಾಡಿ, ಸಕಲ ಕಪಿ ಸೇನಾಧಿ
ಪತ್ಯದಿಂದ ತನ್ನ ತಂದೆಯಾದ ಅಗ್ನಿಯಂತೆ ಪ್ರಕಾಶಿಸಿದನು.

ತರುವಾಯ ಮಾರ್ಗಶಿರ ಶುದ್ಧ ಅಷ್ಟಮಿಯ ಉತ್ತರಾ ನಕ್ಷತ್ರದಲ್ಲಿ ನಡು
ಹಗಲೆಂಬ ಅಭಿಜಿನ್ಮುಹೂರ್ತದಲ್ಲಿ ವಿಜಯ ಪ್ರಯಾಣವನ್ನು ಬೆಳಸಿ, ಶ್ರೀರಾ
ಮನು ಹನುಮಂತನ ಮೇಲೆ ಕುಳಿತು ಕೊಂಡು, ಹೊರಟನು. ಲಕ್ಷ್ಮಣನು
ಅಂಗದನ ಮೇಲೆ ಕುಳಿತು ಕೊಂಡು, ಬಂದನು. ಸಮಸ್ತ ಕಪಿ ಸೇನೆಗಳು
ನೀಲನ ಅಪ್ಪಣೆಯ ಮೇರೆ ಮರಗಳನ್ನು ಬೇರು ಸಹಿತವಾಗಿಯೂ, ಪರ್ವತದ
ಶಿಖರಗಳನ್ನು ಗೆಡ್ಡೆ ಸಹಿತವಾಗಿಯೂ, ತೆಗೆದು ಕೊಂಡು, ಹೊರಟರು. ಆ
ಸೇನೆಗಳಲ್ಲಿ ಕರಡಿಗಳೇ ಕರಿಘಟೆಗಳು. ಕೊಂಡಮುಸುಗಳೇ ಕುದುರೆಗಳು.
ಶಿಂಗಳೀಕಗಳೇ ತೇರುಗಳು. ಉಳಿದ ಕಪಿಗಳೆಲ್ಲಾ ಕಾಲಾಳುಗಳು. ಈ ಪ್ರ
ಕಾರವಾದ ಕಪಿ ಚತುರಂಗ ಬಲಕ್ಕೆ ತೋಳುಗಳೇ ಗದೆಗಳು. ಉದ್ದವಾದ
ಬಾಲಗಳೇ ಸಬಳಗಳು. ಕ್ರೂರವಾದ ಉಗುರುಗಳೇ ಗರಗಸಗಳು. ಕೋ
ರೇ ಹಲ್ಲುಗಳೇ ಕತ್ತಿಗಳು. ಬೆಟ್ಟ, ಗುಡ್ಡ, ಮರ, ಗುಂಡುಗಳೇ ಮಿಕ್ಕಾಯು
ಧಗಳಾಗಿ, ಕಣ್ಣಿಗೆ ಕಾಣಿಸಿದವು. ಈ ಕಪಿಗಳ ಕಾಲಿನ ತುಳಿತಕ್ಕೆ ಮಹಾ

ಶೇಷನ ಕೊರಳುಗಳು ಕುಸಿದವು. ಕುಲ ಗಿರಿಗಳು ಜರಿದವು. ಕೂರ್ಮನ ಉಸುರು ಕುತ್ತಿಗೆಯಲ್ಲಿ ಮಿಡುಕಿತು. ದಿಗ್ಗಜಗಳು ತಲೆಗಳನ್ನು ಕೊಡಹಿದವು. ಬೊಬ್ಬೆಯಿಂದ ಬ್ರಹ್ಮಾಂಡ ಮಂಡಲವು ತುಂಬಿತು. ಕಡಲು ಧೂಳುಗಳಿಂದ ಮುಚ್ಚಿತು. ಮೇರು ಪರ್ವತದ ಕೀಲುಗಳು ಕಳಚಿದವು. ಮೇಲು ಲೋಕಗಳೆಲ್ಲಾ ಅಲ್ಲಾಡಿದವು. ಇಂಥಾ ಸೇನೆಯ ಭಾರವನ್ನು ಇನ್ಯಾರು ತಾಳುವರೋ? ಎಂದು ಬ್ರಹ್ಮನು ಚಿಂತಿಸುತ್ತಿದ್ದನು.

ಹೀಗೆ ಹೊರಟು, ಆ ದಿವಸ ಮಲಯ ಪರ್ವತದ ತೊಪ್ಪಲಿನಲ್ಲಿ ನೀಲನ ಅಪ್ಪಣೆಯ ಪ್ರಕಾರ ಬೀಡು ಬಿಟ್ಟಿತು. ಮೂರನೇ ದಿವಸ ಬೆಳಗ್ಗೆ ಎದ್ದು, ಮೂರು ದಿವಸದಲ್ಲಿ ಸಮುದ್ರದ ಧಡಕ್ಕೆ ಬಂದು ಶೇರಿತು. ಆ ಸಮುದ್ರ ರಾಜನು ತೆರೆಗಳೆಂಬ ಗುಡಿಗಳಿಂದಲೂ, ನೊರೆಗಳೆಂಬ ಬಿಳು ಗೊಡೆಗಳಿಂದಲೂ, ತುಂತುರು ಹನಿಗಳೆಂಬ ಚೌರಿಗಳಿಂದಲೂ, ಸುಳಿಗಳ ಘುಳು ಘುಳು ಧ್ವನಿಗಳೆಂಬ ಭೇರೀ ಧ್ವನಿಗಳಿಂದಲೂ, ರಘು ಪತಿಯನ್ನು ಇದಿರು ಗೊಂಬುವವನ ಹಾಗೆ ಮೆರೆದನು. ಆಗ ಸಕಲ ನಾಯಕವಾಡಿಗಳು ಕಡಲ ಧಡದಲ್ಲಿ ಬೀಡು ಬಿಟ್ಟರು ಅಲ್ಲಿ ಶ್ರೀರಾಮನಿಗೆ ಎಳೆ ಚಿಗುರುಗಳ ಹೊದಿಕೆಯಿಂದ ದಿವ್ಯವಾದ ಅರಮನೆಯೂ, ಓಲಗದ ಚಾವಡಿಯೂ, ಕ್ಷಣ ಮಾತ್ರದಲ್ಲಿ ಉಂಟಾದವು.

ಹೀಗೆ ಎರಡನೇ ಕಡಲಿನ ಹಾಗೆ ಬಂದು ಇಳಿದ ಕಪಿ ಬಲವನ್ನು ಕಂಡು, ಅಲ್ಲಿ ಠಾಣಯದೊಳಿದ್ದ ರಾವಣನ ಕಡೇ ರಕ್ಕಸರು ಹೆದರಿ, ಲಂಕೆಗೆ ಓಡಿಹೋಗಿ, ಒಡ್ಡೋಲಗದ ಚಾವಡಿಯಲ್ಲಿ ಕುಳಿತಿರುವ ರಾವಣನ ಮುಂದೆ ತಾವು ಹೊತ್ತು ಕೊಂಡು ಬಂದ ಭಯದ ಬೀಜಗಳ ಹೊರೆಯನ್ನು ಇಳಿಸಿದರು. ಅದು ಹ್ಯಾಗಂದರೆ,—ಜೀಯಾ, ಕಾಮ ರೂಪಿಗಳಾದ, ಮೈ ಕೊಬ್ಬುಳ್ಳ, ಇಂದ್ರಾದಿ ದೇವತೆಗಳ ಲಕ್ಷ್ಯಕ್ಕೆ ತಾರದ, ಗಿರಿ ಮರಗಳೇ ಆಯುಧವಾಗುಳ್ಳ, ಕಣ್ಣೆತ್ತಿ ಇಣಿಕಿ ನೋಡ ಕೂಡದ ಕಪಿ ಸೇನೆಯು ಸಮುದ್ರದ ಧಡದಲ್ಲಿ ಬಂದು ಇಳಿದು ಇದೆ. ಆ ಕಪಿ ಸೇನೆಗಳಲ್ಲಿ ಮೃತ್ಯುವಿನ ಮುಖದವರೂ, ನಮ್ಮ ಈ ಲಂಕೆಯನ್ನು ಬೆಂಕಿಗೆ ತುತ್ತಾಗಿ ಕೊಟ್ಟ ಕೋಡಗನಂದದವರೂ ಕೋಟ್ಯಾಂತರವು ಇದೆ. ಈ ಕಪಿಗಳ ದಂಡು ದೇವರು ಮೊದಲು ಎಳ ತಂದ ಸೀತೆಯ ಗಂಡನದಂತೆ; ಈ ಕಪಿ ಬಲಕ್ಕೆಲ್ಲಾ ಸುಗ್ರೀವನೆಂಬುವನು ಒಡೆಯನಂತೆ, ಎಂದು ಬಿನ್ನವಿಸಿದರು.

ಅದನ್ನು ಕೇಳಿ,—ಹೊಯಿ ಇವರ ಬಾಯಿಗಳನ್ನು! ಹುಲು ಮನುಜನ ಕೋತಿಗಳ ಹಿಂಡಿಗೆ ಹೆದರಿ ಬಂದ ಹೇಡಿಗಳು ಇವರು, ಎಂದು ಹೇಳುತ್ತಾ, ಕೋಪ

ದಿಂದ ಸಿಂಹಾಸನವನ್ನು ಇಳಿದು, ಅರಮನೆಗೆ ಹೋಗಿ, ಕುಳಿತು ಕೊಂಡು,
ಪ್ರಹಸ್ತನೂ ಇಂದ್ರಜಿತುವೂ ಮೊದಲಾದ ಖಳರನ್ನು ಕರಿಸಿ ಕೊಂಡು,—ಬಡ
ಗ ದಿಕ್ಕಿನ ಸುದ್ದಿಯು ಚಂದವನ್ನು ಕೇಳಿದಿರೇ? ಸೀತೆಯ ಹಿಂದಣ ಗಂಡನು
ಧೈರ್ಯವು ಮೊಳೆತು ಬಂದಿದ್ದಾನಂತೆ. ಅಂದು ನಮ್ಮ ಪುರವನ್ನು ಉರಿಯಲ್ಲಿ
ಶೇರಿಸಿದ ಕೋಡಗನಂದದ ಭಟರು ಕೂಡಿರುವರಂತೆ. ಇದಕ್ಕೆ ಏನು ಯೋಚ
ನೆ? ಹೇಳಿ! ಎಂದು ಕೇಳಲು; ಪ್ರಹಸ್ತನು ರಾವಣನನ್ನು ಕುರಿತು—ಎಲೇ, ಜೀ
ಯಾ, ನಿನ್ನ ಶಕ್ತಿಗೆ ಶೂಲಿಯು ಅಂಜುವನು. ಆದರೂ, ಹಗೆಗಳು ಹುಲು ಮ
ನುಜ ಕೋತಿಗಳೆಂದು, ಅಸಡ್ಡೆಯಲ್ಲಿರ ಕೂಡದು. ನಾವು ಈ ಸಮಯದಲ್ಲಿ
ಎಚ್ಚರವಾಗಿರ ಬೇಕು. ನಮ್ಮ ಲಂಕಾ ಪಟ್ಟಣವನ್ನು ವೀರ ಭಟರು ಎಚ್ಚರ
ವಾಗಿ ಕಾದು ಕೊಂಡಿರುವಂತೆ ಅಪ್ಪಣೇ ಕೊಡಿಸು. ಕೋಟೆ ಕೊತ್ತಲು ಹೆ
ಬ್ಬಾಗಿಲು ಮುಂತಾದ ಸ್ಥಳಗಳಲ್ಲಿಯೂ, ಪಟ್ಟಣದ ಬೀದಿ ಬೀದಿಗಳ ಮೂಲೆ
ಗಳಲ್ಲಿಯೂ, ಸಕಲಾಯುಧ ಸಮೇತರಾಗಿ ಚತುರಂಗ ಬಲಗಳು ಸರತೀ ಮೇ
ರೆ ಕಾದಿರುವಂತೆ ನೇಮಿಸು. ಹಗೆಗಳ ಬಲದಲ್ಲಿ ಬಲುಮೆಯುಳ್ಳವರ್ಯಾರು?
ಆ ಬಲಿಷ್ಠರಲ್ಲಿ ಹೆಸರಾದ ಸಾಹಸಿಗಳು ಯಾರು? ಆ ಸಾಹಸಿಗಳಲ್ಲಿ ದುಡುಕಿ
ಗಳು ಯಾರು? ಆಲೋಚನಾಪರರು ಯಾರು? ಆ ಆಲೋಚನಾಪರರಲ್ಲಿ ಒ
ಬ್ಬರಿಗೊಬ್ಬರಿಗೆ ಆಗದೆ ಇರುವವರು ಯಾರು? ಇದನ್ನೆಲ್ಲಾ ತಿಳಿದು ಕೊಂಡು
ಬರುವ ಬಗ್ಗೆ ಬೆಸಸು, ಎನಲು; ರಾವಣನು—ಅಹುದು, ಇದು ನೀತಿ ಸರಿ ಎಂ
ದು, ಮನದಲ್ಲಿ ನಿಶ್ಚೈಸಿ, ಆಪ್ತನಾದ ಬೇಹಿನವನನ್ನು ರಾಮನ ಬಲಕ್ಕೆ ಕಳು
ಹಿಸಿ, ಮಂತ್ರಿ ಪ್ರಹಸ್ತನನ್ನು ಮನೆಗೆ ಕಳುಹಿಸಿದನು.

ಆ ಬಳಿಕ ಇಂದ್ರಜಿತುವೇ ಮೊದಲಾದ ಮಕ್ಕಳು ರಾವಣನನ್ನು ಕುರಿ
ತು—ಎಲೈ, ತಂದೆಯೇ, ನಮಗೆ ಯಾರು ಸರಿ? ನಾವ್ಯಾಕೆ ಈ ಬಣಗು ಭೂ
ಪತಿಗೆ ಅಂಜ ಬೇಕು? ಹಗೆತನದಲ್ಲಿ ನಮ್ಮನ್ನು ಗೆದ್ದು ಹೆಂಡತಿಯನ್ನು ಕೊಂ
ಡು ಹೋಗುವ ಆತನ ಭಂಟತನವನ್ನು ನಾವು ನೋಡಿ ಕೊಳ್ಳುವೆವು ಎಂದು,
ತಮ್ಮ ಮೈಗೊಬ್ಬಿನ ಮಾತುಗಳನ್ನು ಆಡಿ ಕೊಂಡರು. ಅವರುಗಳನ್ನೆಲ್ಲಾ ಅ
ವರವರ ಮನೆಗೆ ಕಳುಹಿಸಿ, ರಾವಣನು ಹಗೆಯ ಹಮ್ಮನ್ನು ನೆನೆದು, ನಿದ್ರೆ
ಬಾರದೆ, ಏಳುತ್ತ, ಮಲಗುತ್ತ, ಕುಳ್ಳಿರುತ್ತ, ಚಿಂತೆ ಎಂಬ ಲಲನೆಯ ಕೂಟ
ದಲ್ಲಿ ಇರುಳನ್ನು ನೂಕುತ್ತಿದ್ದನು. ಅಷ್ಟರೊಳಗೆ ಝಾವದ ಕೋಳಿಯು ಕೂ
ಗಿತು. ಹಕ್ಕಿಗಳೆಲ್ಲಾ ತಮ್ಮ ತಮ್ಮ ಗೂಡುಗಳಲ್ಲಿ ಚಿಲುಪಿಲಗುಟ್ಟುತ್ತಿದ್ದವು.
ಪೂರ್ವ ದಿಕ್ಕೆಂಬ ಹೆಂಗಸು ಸೂರ್ಯನೆಂಬ ಗಂಡಸನ್ನು ಮದುವೆಯಾಗಲು ಚಂ

ದ್ರಗಾವೀ ಶೀರೆಯನ್ನು ಉಟ್ಟಳೋ? ಎಂಬ ಹಾಗೆ ಮುಚ್ಚಂದೆಯು ಕೆಂಪಾಗಿ ಕಾಣಿಸಿತು. ಉದಯ ಪರ್ವತದ ಮಾಣಿಕದ ಮಂಚದಲ್ಲಿ ಸೂರ್ಯನು ಎಚ್ಚತ್ತು, ಕುಳಿತು ಕೊಂಡನು. ಆ ಸೂರ್ಯೋದಯ ಕಾಲದಲ್ಲಿ ಮಂಗಳ ಪಾಠಕರ ಹೊಗಳಿಕೆಯ ಶಬ್ದದಿಂದ ರಾವಣನು ಮಂಚವನ್ನು ಇಳಿದು, ಗುರುವಾದ ಶುಕ್ರಾಚಾರ್ಯನಿಗೂ, ಮುತ್ತಜ್ಜನಾದ ಬ್ರಹ್ಮ ದೇವನಿಗೂ ನಮಸ್ಕರಿಸಿ, ಅವರ ಆಶೀರ್ವಾದವನ್ನು ಕೈ ಕೊಂಡು, ಸ್ನಾನ ಸಂಧ್ಯಾವಂದನೆಗಳನ್ನು ಮಾಡಿ, ಶಿವ ಪೂಜೆಯನ್ನು ನೆರವೇರಿಸಿ, ಓಲಗ ಚಾವಡಿಗೆ ಬಂದನು. ಆ ಓಲಗಕ್ಕೆ ಇಂದ್ರಜಿತು ಪ್ರಹಸ್ತ ಮೊದಲಾದ ರಾಕ್ಷಸ ಶ್ರೇಷರು ಕೋಟ್ಯಾಂತರ ಸಂಖ್ಯೆಯಿಂದ ಬಂದರು.

ಆಗ ವಿಭೀಷಣನು ಗದಾ ದಂಡವನ್ನು ಕೈಯಲ್ಲಿ ಧರಿಸಿ ಕೊಂಡು, ಓಲಗಕ್ಕೆ ಬರಲು; ಬಂದ ತಮ್ಮನನ್ನು ರಾವಣನು ಕಂಡು, ಮುಗುಳು ನಗೆಯಿಂದ ನೋಡಿ, ಕೈ ಸನ್ನೆಯಿಂದ—ಬಾ, ಇತ್ತ ಬಾರೈ ಎಂದು, ತನ್ನ ಸಮೀಪದಲ್ಲಿ ಮಣಿಮಯವಾದ ಗದ್ದುಗೆಯಲ್ಲಿ ಕೂರಿಸಿ ಕೊಂಡು, ಆ ಮೇಲೆ ಚಾವಡಿಯಲ್ಲಿ ಕೂಡಿರುವ ವೀರ ಭಟರನ್ನು ನೋಡಿ—ಸೀತೆಯ ಗಂಡನು ನಮ್ಮ ಕೈಯಲ್ಲಿ ಸಿಕ್ಕಿದ ಸೀತೆಯನ್ನು ಕೊಂಡು ಹೋಗುವದಕ್ಕೆ ದಂಡೆತ್ತಿ, ಬಂದಿದ್ಧಾನಂತೆ. ಇದಕ್ಕೆ ನಿಮ್ಮ ನಿಮ್ಮ ಮನದಲ್ಲಿ ಏನು ಯೋಚಿಸಿದ್ಧೀರಿ? ಹೇಳಿ ಎಂದು ಕೇಳಿದನು. ಅದಕ್ಕೆ ಇಂದ್ರಜಿತುವು—ಜೀಯಾ, ಇದು ಎಷ್ಟರ ಕೆಲಸ! ಹಾವಿನ ಗುಂಪುಗಳು ಗರುಡನ ಗೆಲ್ಲ ಬಲ್ಲವೇ? ಕಾಡಿನಲ್ಲಿ ಮರದ ಮೇಲೆ ಓಡಿಯಾಡುವ ಕೋಡಗಗಳು ನಮಗೆ ಗಣ್ಯವೇ? ಯಮನ ತಲೆಯನ್ನು ತರ ಹೇಳು. ಇಂದ್ರನ ಅಮರಾವತೀ ಪಟ್ಟಣವನ್ನು ಕಿತ್ತು, ತಂದು, ಅತಲದಲ್ಲಿ ನಿಲ್ಲಿಸ ಹೇಳು. ಹಾವುಗಳೊಡೆಯನ ಹೊಳಲನ್ನು ಕಿತ್ತು ತಂದು, ಅಮರಾವತಿಯಲ್ಲಿ ಇಳಿಸ ಹೇಳು. ಎಲೈ, ತಂದೆಯೇ, ಕೇಳು! ಯಮನಿಗೆ ಅಸದಳವಾದ ಕಲ್ಪಾಂತ ರುದ್ರನ ಕಣ್ಣಿನ ಕಿಡಿಗೆ ಅಂಜದ ನಮ್ಮಂಥ ವೀರ ಭಟರೊಡನೆ ಹುಲು ಮನುಜನ ರಣದ ರಾಜ ಕಾರ್ಯವ ಹೇಳ ಬಹುದೇ? ಈ ಭಟರ ಪರಿಯಂತ ಯಾಕೆ? ನಿನ್ನ ಛತ್ರೀ ಹಿಡಿಯುವವರ ಕಡೆಯಿಂದ ಈ ಕೋಡಗಗಳ ತಂಡವನ್ನೂ ಆ ಹುಲು ನರರನ್ನೂ ಬೀಳ ಕೆಡಹಿಸುವೆನು. ಈ ಮಾತು ಹಾಗಿರಲಿ. ಬೇಗ ಸೀತೆಯು ನಿನಗೆ ಒಲಿಯುವ ಉಪಾಯದ ಮಾತುಗಳನ್ನು ಆಡು. ಈ ಆಸ್ಥಾನದಲ್ಲಿ ಹುಲು ಮನುಜರ ಮಾತನ್ನು ಆಡ ಬೇಡವೆಂದು ಹೇಳಿದನು.

ಆ ಇಂದ್ರಜಿತುವಿನ ಕೊಬ್ಬಿನ ಮಾತು ಕಿವಿಯಲ್ಲಿ ಬೀಳಲು, ಮುಖದಲ್ಲಿ ಕೋಪಾಗ್ನಿಯು ಭುಗಿಲೆಂದು ಉರಿಯಲು; ಗಹಗಹಿಸಿ ನಗುತ್ತ, ವಿಭೀಷಣನು ಮೈಯನ್ನು ಒಲೆದು, ಇಂದ್ರಜಿತುವನ್ನು ಕುರಿತು—ಎಲೈ, ಶೂರನೇ, ನೀನು ಹೇಳಿದ ಮಾತು ನಮಗೆ ಚನ್ನಾಗಿ ತಿಳಿಯಲಿಲ್ಲ. ಇನ್ನೊಂದು ವೇಳೆ ಚನ್ನಾಗಿ ತಿಳಿಯ ಹೇಳು. ನೀನು ಬಹು ಪರಾಕ್ರಮಶಾಲಿಯಷ್ಟೆ! ನಿನ್ನ ಉಬ್ಬಾಳುತನವನ್ನು ನಾವು ಹೊಸ್ತಾಗಿ ಈಗ ತಿಳಿಯ ಬೇಕೇ? ಸತ್ತಿಗೆಯವರಿಂದ ಕೋಡಗಗಳನ್ನೂ ಮನುಜರನ್ನೂ ಹೊಯ್ಯುವೆಯೋ? ಇಂಥಾ ನಿನ್ನ ಸಾಮರ್ಥ್ಯವು, ನಿನ್ನ ತಮ್ಮ ಅಕ್ಷನೇ ಮೊದಲಾದ ರಾಕ್ಷಸರ ಹೊಟ್ಟೆಗಳನ್ನು ಬಗೆದು, ಪ್ರಾಣಗಳನ್ನು ಹಾರಿಸಿ, ನಮ್ಮ ಈ ಲಂಕೆಯನ್ನು ಸುಟ್ಟ ಒಬ್ಬ ಕೋಡಗನ ಮುಂದೆ ಎಲ್ಲಿ ಹೋಗಿತ್ತು? ಈ ಕುಂಭ, ನಿಕುಂಭ, ದೇವಾಂತಕ, ನರಾಂತಕ ಮೊದಲಾದ ಶೂರರೆಲ್ಲರು ಆ ವೇಳೆಯಲ್ಲಿ ಎಲ್ಲಿ ಹೊಕ್ಕೊಂಡು ಇದ್ದರು? ಎಲೇ, ಅಣ್ಣಾ, ಕೇಳು. ಇವರುಗಳ ಬನ್ನಣೆಯ ಮಾತು ಹಾಗಿರಲಿ. ಭೂಮಿಯ ಭಾರವನ್ನು ಹೋಗಲಾಡಿಸುವದಕ್ಕೆ ಶ್ರೀ ಮಹಾ ವಿಷ್ಣುವು ನರ ರೂಪನಾಗಿ ಬಂದಿರುವನು. ಹೆಣ್ಣಿನ ನೆವದಲ್ಲಿ ನಮ್ಮನ್ನು ಮಣ್ಣು ಪಾಲು ಮಾಡದೆ ಇರನು. ಇನ್ನು ನಾವ್ಯಾಕೆ ಉಣ್ಣದೆ, ಉಡದೆ, ಉರಿದು ಹೋಗ ಬೇಕು? ಆ ರಾಮನು ಮನುಜನಲ್ಲ. ಆ ಕೋಡಗಗಳು ಮೃಗಗಳಲ್ಲ. ಲೋಕ ಕಂಟಕರಾದ ದುಷ್ಟರೆಂಬ ಮೃಗಗಳಿಗೆ ಒಡ್ಡಿದ ಬೀಸು ಬಲೆಗಳು ಎಂದು ತಿಳುಕೋ. ಜನಕನ ಪಟ್ಟಣದಲ್ಲಿ ನಿನ್ನನ್ನು ಔಕಿ, ಒದ್ದಾಡಿಸಿದ ಶಿವನ ಬಿಲ್ಲನ್ನು ಮುರಿದವನು ಯಾರು? ನಿನ್ನ ತಮ್ಮನಾದ ಖರಾಸುರನು ಸಾಮಾನ್ಯನೇ? ದೂಷಣಾಸುರನು ಕೈಯಲ್ಲಿ ಹರಿಯದವನೇ? ಅವರನ್ನು ಕೊಂದವನು ಯಾರು? ನೀನು ಸ್ನೇಹವನ್ನು ಮಾಡಿ ಕೊಂಡ ವಾಲಿಯನ್ನು ಒಂದೇ ಬಾಣದಲ್ಲಿ ಸಂಹರಿಸಿದವನು ಯಾರು? ಇದನ್ನೆಲ್ಲಾ ಮನಸ್ಸಿನಲ್ಲಿ ಚನ್ನಾಗಿ ನೆನೆದು, ಆ ರಾಮನಲ್ಲಿ ಹಗೆತನವನ್ನು ಮಾಡಿ, ಹಾಲುಣ್ಣುವ ಬಾಯಿಗೆ ಮಣ್ಣು ಹಾಕಿ ಕೊಳ್ಳ ಬೇಡ. ಸೀತೆಯನ್ನು ಆ ರಾಮನ ಬಳಿಗೆ ಕಳುಹಿಸಿ, ಸರ್ವರೊಡನೆ ಕೂಡಿ, ಸುಖವಾಗಿ ಬಾಳು, ಅಂದನು.

ಅದನ್ನು ಕೇಳಿ, ರಾವಣನು ಕೋಪದಿಂದ ವಿಭೀಷಣನನ್ನು ನೋಡಿ—ಎಲೇ, ತಮ್ಮಾ, ನಿನಗೆ ಇಷ್ಟು ನಿಷ್ಠುರವು ಯಾಕೆ? ನಮ್ಮಲ್ಲಿರುವ ವೀರಭಟರ ಸಾಹಸ ಶಕ್ತಿ ಪರಾಕ್ರಮಗಳನ್ನು ಅರಿಯದೆ, ಗರ್ವದಿಂದ ಹೀಗೆ ಹೀಯಾಳಿಸಿ, ನುಡಿಯ ಬಹುದೇ? ನಮ್ಮ ಅಂಜಿಕೆಯನ್ನು ಬಿಟ್ಟು, ನಮ್ಮನ್ನು ಹುಲ್ಲಿಗಿಂತ ಕಡೆಯಾಗಿ ಎಣಿಸಿ ಹೇಳುವದು ನಿನಗೆ ಗುಣವೇ? ನಿನಗೆ ನಾನು ಹಿರಿಯನಲ್ಲವೇ? ಆದ್ದರಿಂದ

ನನಗೆ ಹಗೆಯಾದ ಹುಲು ಮನುಜನಾದ ರಾಮನು ನಿನ್ನನ್ನು ಭೇದಿಸಿ, ನನ್ನದೆಶೆ
ಯಿಂದ ಹಿಗ್ಗು ತೆಗೆದಿದ್ಧಾನೆ. ನೀನು ಆ ರಾಮನನ್ನೇ ಶೇರಿಕೋ. ನಿನ್ನನ್ನೂ
ರಾಮನನ್ನೂ ಕೂಡ ಸಂಹರಿಸುವೆನು. ಹೋಗು. ಇನ್ನು ನೀನು ನಿಂತು, ನ
ನ್ನೊಡನೆ ಹೆಚ್ಚು ಗಳಹಿದರೆ, ಬಾಯ ಕೊಯ್ಯುವೆನು, ಎಂದು ಹೇಳಲು; ವಿಭೀ
ಷಣನು—ನೀನು ನನ್ನನ್ನು ನೂಕಲ್ಯಾಕೆ? ನನ್ನ ನಾನೇ ನೂಕಿ ಕೊಳ್ಳುವೆನು ಎಂ
ದು, ಮನಸ್ಸಿನಲ್ಲಿ ಶ್ರೀರಾಮನ ಅಡಿ ದಾವರೆಯನ್ನು ನೆನಸುತ್ತ, ಚಾವಡಿಯಿಂದ
ಹೊರಟು, ತಾಯಾದ ಕೈಕಸೆಯ ಅರಮನೆಗೆ ಬಂದು, ಆಕೆಯ ಚರಣಕ್ಕೆ
ನಮಸ್ಕರಿಸಲು; ಆಕೆಯು ವಿಭೀಷಣನನ್ನು ತಬ್ಬಿ ಕೊಂಡು, ತೊಡೆಯ ಮೇಲೆ
ಕೂರಿಸಿ ಕೊಂಡು,—ಮಗನೇ, ಹೆಮ್ಮಗನು ನುಡಿದ ದುರುಕ್ತಿಗಳನ್ನು ಕೇಳಿ
ದೆನು. ಅದು ನಿನಗೆ ಒಳ್ಳೇದಾಯಿತು. ನಿನ್ನ ಮೇಲೆ ತಪ್ಪಿಲ್ಲದಂತೆ ರಾಘವನ
ಮರೆ ಹೊಗುವದಕ್ಕೆ ಇದೇ ಸಮಯ; ಹೋಗು. ಆ ದಯಾಳುವು ನಿನಗೆ ಅಗ
ಲದ ಆಯುಸ್ಸನ್ನೂ ಐಶ್ವರ್ಯವನ್ನೂ ಶೇರಿಸುವನು. ನೀನು ನಮಗೆ ಎಳ್ಳು ನೀರ
ನ್ನು ಶೇರಿಸು; ನಡೆ! ಎಂದು, ಕಣ್ಣೀರು ಸುರಿಸುತ್ತ, ಅಪ್ಪಣೆಯನ್ನು ಕೊಡಲು;
ತಾಯಿಯ ಅಡಿಗೆ ಅಳುತ್ತ, ಎರಗಿ, ತೇರನ್ನು ಏರಿ, ರಾಮನನ್ನು ನೆನೆದು, ಸಂಭ್ರ
ಮದಿಂದ ಆಕಾಶಕ್ಕೆ ಹಾರಿ, ಮತ್ತೆ ಅಣ್ಣನ ಮೇಲೆ ಕರುಳುಗಳು ಕರಗಿ,—ಇ
ನ್ನೊಂದು ವೇಳೆ ಹೇಳಿ, ನೋಡುವೆನು ಎಂದು, ಚಾವಡಿಯ ಸಮೀಪದಲ್ಲಿ ಆ
ಕಾಶದ ಮೇಲೆ ನಿಲ್ಲಲು; ಕಂಡು, ರಾವಣನು—ಹೋಗ ಹೇಳು. ಅವನ್ಯಾಕೆ
ತಿರಿಗಿ ಇಲ್ಲಿಗೆ ಬಂದನು? ಬಾಗಿಲಲ್ಲಿ ಹೊಗಿಸದಿರಿ! ಎನಲು; ಕೈ ಗುದಿಗೆಗಳ
ಖಳರು ಬಂದು, ವಿಭೀಷಣನನ್ನು ತರುಬಲು; ಅವರುಗಳ ಪ್ರಾಣಗಳನ್ನು
ಗದೆಯಿಂದ ಹೋಗಲಾಡಿಸಿ, ಅಣ್ಣನನ್ನು ಕುರಿತು—ಸಾಯುವ ರೋಗಿಗೆ ಮದ್ದು
ಸೊಗಸದು ಎಂಬ ಗಾದೆಯು ಸಟೆಯಲ್ಲ. ಆಗದವರು ಮುಂದೆ ಸವಿ ನುಡಿಯ
ನ್ನಾಡುವರು; ಹಿಂದೆ ಹೀಯಾಳಿಸುವರು. ಈಗ ಕ್ರೂರವಾಗಿದ್ಧಾಗ್ಯೂ ನಾಳೆ
ಹಿತವಾಗುವಂಥ ಮಾತನ್ನಾಡುವವರು ಅಪುರೂಪ. ಅಂಥಾ ಮಾತನ್ನ ಕೇಳು
ವವರು ಅಪುರೂಪ. ನಾನು ಸಾರಿ ಹೇಳುತ್ತೇನೆ. ಕೂಗಿ, ಮಾರಿಯನ್ನು ಕರೆ
ದು ಕೊಳ್ಳುವದು ಯೋಗ್ಯವಲ್ಲ. ಸೀತೆ ಎಂಬ ಕಾಂತೆಯನ್ನು ಬಿಟ್ಟು, ಕೀರ್ತಿ
ಎಂಬ ಕಾಂತೆಯನ್ನು ಕೈ ಹಿಡಿಯುವದು ಒಳ್ಳೇದು. ನಾನಾಡುವ ಈ ಹಿತದ
ಮಾತು ನಿನಗೆ ಈಗ ಒಡಂಬಡದು. ಮೃತ್ಯುವು ನಿನ್ನ ಹೆಗ್ಗತ್ತಿನ ಮೇಲೆ ಕುಳಿ
ತಿರುವದು, ಎಂದು ಹೇಳಿ, ವಿಭೀಷಣನು ಕೆಟ್ಟ ಅಣ್ಣನ ಜೊತೆ ಎಂಬ ಕೋಟ
ಲೆಯನ್ನೂ ಲಂಕೆಯ ಕೋಟೆಯನ್ನೂ ದಾಟಿ, ರಾಕ್ಷಸ ವಂಶದಲ್ಲಿ ಹುಟ್ಟಿದ ಪಾ

ಷವೆಂಬ ಕಡಲನ್ನೂ ನೂರು ಯೋಜನ ಸಮುದ್ರವನ್ನೂ ಹಾರಿ, ಕಪಿ ಬಲಾಂಬುಧಿಯು ಹಾಲ್ಗಡಲಂತೆ, ರಘುರಾಮನು ಲಕ್ಷ್ಮೀ ಪತಿಯಂತೆ, ತೋಳಿನ ಸಿರಿಯು ಶ್ರೀ ದೇವಿಯಂತೆ, ಲಕ್ಷ್ಮಣನು ಮಹಾ ಶೇಷನಂತೆ, ಹನುಮಂತನು ಗರುಡನಂತೆ, ಬರುವ ವಿಭೀಷಣನ ಕಣ್ಣಿಗೆ ಕಾಣಿಸಿದರು. ಸದ್ಯೋಜಾತ, ತತ್ಪುರುಷ, ವಾಮದೇವ, ಅಘೋರವೆಂಬ ನಾಲ್ಕು ಮುಖಗಳ ನಡುವೆ ಇರುವ ಈಶಾನವೆಂಬ ಈಶ್ವರನ ಮುಖದಂತೆ, ನಾಲ್ಕು ದಿಕ್ಕಿನಲ್ಲಿಯೂ ಮೈ ಗಾವಲುಗಾರರಾಗಿರುವ ನಾಲ್ವರು ಮಂತ್ರಿಗಳ ನಡುವೆ ಬರುವ ವಿಭೀಷಣನನ್ನು ನೋಡಿ, ತುದಿ ಪಾಳಯದ ಕೋತಿಗಳ ತಂಡವು ಖೋ ಎಂದು ಮುತ್ತಿದರು.

ಆಗ ವಿಭೀಷಣನು—ಶರಣಾಗತರ ಕಾಮಧೇನುವೇ! ದಯಾಕರನೇ! ಕಂಗೆಟ್ಟು ಕಷ್ಟ ಪಡುವ ಜನರ ಕಾಪಾಡುವವನೇ! ವೇದದ ತಲೆಗೆ ಚೂಡಾಮಣಿಯೇ! ಸಕಲ ದೇವತೆಗಳ ಕಿರೀಟದಿಂದ ಹೊಳೆಯುತ್ತಲಿರುವ ಚರಣ ಕಮಲವುಳ್ಳವನೇ! ಶರಣು, ಶರಣು ಎಂದು, ಮೊರೆ ಇಡುತ್ತಿದ್ದನು. ನಾನಾ ವೇದಗಳು ಹೊಗಳುವ ನುಡಿಗಳನ್ನು ಆಲಿಸಿ, ಕೇಳದ ರಾಮನ ಕಿವಿಗಳಿಗೆ ಶರಣಾಗತ ವಿಭೀಷಣನ ವಚನಾಮೃತವು ಸೊಗಸಲು; ಎಸಳು ಕಂಗಳ ಕಡೇ ನೋಟದಲ್ಲಿ ವಿಭೀಷಣನನ್ನು ನೋಡಿ, ಮನದ ಉಬ್ಬಿದ ಹರುಷದಿಂದ, ಈತನನ್ನು ಕೈ ಕೊಳ್ಳ ಬೇಕೆಂದು ನಿಶ್ಚೈಸಿ, ಹನುಮನ ಮುಖವನ್ನು ನೋಡಲು; ಆತನು ಒಡೆಯನ ಮನದ ಎಣಿಕೆಯನ್ನು ತಿಳಿದು, ಅಂಗದನನ್ನು ಕೂಡಿ ಕೊಂಡು, ವಿಭೀಷಣನ ಬಳಿಗೆ ಬಂದು, ಮೊದಲೇ ಅವನ ಗುಣಗಳನ್ನು ತಿಳಿದವನಾಗಿದ್ದ ಕಾರಣ, ಉಕ್ಕಿದ ಆನಂದ ಬಾಷ್ಪಗಳಿಂದ ಆತನ ಆಲಿಂಗನವನ್ನು ಗೈದು, ನಗುತ್ತ,—ಏನೈ, ವಿಭೀಷಣನೇ, ಇದ್ದಕ್ಕಿದ್ದ ಹಾಗೆ ಬರವು ಇದೇನು? ರಾವಣನ ಅಪ್ಪಣೆಯೋ? ಅಲ್ಲವೆ ನಿನ್ನ ಮುಂದಣ ಯೋಚನೆಯೋ? ಈ ಎರಡರೊಳಗೆ ಏನು? ಎಂದು ಬೆಸಗೊಳ್ಳಲು; ವಿಭೀಷಣನು—ನೀನು ಕೇಳಿದ ಎರಡರಿಂದಲೂ ನಾನು ಬಂದೆನು ಎನಲು; ಕಣ್ಣು ಸನ್ನೆಯಿಂದ ವಿಭೀಷಣನ ಕಾವಲಿಗೆ ಅಂಗದನನ್ನು ಇರಿಸಿ, ತಾನು ರಾಮನ ಬಳಿಗೆ ಬಂದು,—ಜೀಯಾ, ಈಗ ಬಂದಿರುವವನು ರಾವಣನ ತಮ್ಮನು; ನೀತಿಯನ್ನು ತಿಳಿದವನು; ಅಸಹಾಯ ಶೂರನು; ಉದಾರ ಗುಣ ಗಂಭೀರನು; ಧೀರನು; ಧಾರ್ಮಿಕನು. ಇವನಲ್ಲಿ ಮಾಯವು ಸ್ವಲ್ಪವಾದರೂ ಇಲ್ಲ. ಮೊದಲು ದುಷ್ಟ ರಾವಣನಿಗೆ ಬುದ್ಧೀ ಹೇಳಿ, ನನ್ನ ಕಷ್ಟವನ್ನು ಬಿಡಿಸಿದನು. ರಕ್ಕಸರೊಳಗೆ ತಪ್ಪಿ ಹುಟ್ಟಿದ್ದಾನೆ. ರಾವಣನೊಡನೆ, ದೇವರ ಹೆಂಡತಿಯನ್ನು ಬಿಡ ಹೇಳಿದರೆ, ಬಿಡದೆ, ತಮ್ಮನೆಂದು ನೋಡದೆ, ಹಗೆ ಮಾಡಿ

ನೂಕಿದ್ದರಿಂದ, ಈ ವಿಭೀಷಣನು ದೇವರ ಅಡಿ ದಾವರೆಗಳನ್ನು ಓಲೈಸ ಬಂದನಂತೆ, ಎಂದು ಬಿನ್ನೈಸಿದನು.

ಆಗ ಸುಗ್ರೀವನು ಕೈ ಮುಗಿದು, ರಾಮನನ್ನು ಕುರಿತು—ಜೀಯಾ, ಈ ಜಗದ ಜನರ ಅಂತಸ್ಥವು ದೇವರಿಗೆ ತಿಳಿಯದೆ ಇರುವದು ತುಸವೂ ಇಲ್ಲ. ತಮ್ಮ ಸನ್ನಿಧಾನದಲ್ಲಿ ನಾನು ಭಯದಿಂದ ಅರಿಕೆ ಮಾಡಿ ಕೊಳ್ಳುವ ಮಾತನ್ನು ಲಾಲಿಸಿ, ದೇವರ ಚಿತ್ತಕ್ಕೆ ಒಪ್ಪಿದ ರೀತಿ ನಡಿಸ ಬಹುದು. ಅದೇನಂದರೆ, ರಕ್ಕಸರು ಮಾಯಾವಿಗಳು. ರಾವಣನು ಸಕಲ ವೇದ ಶಾಸ್ತ್ರಗಳನ್ನು ಓದಿ, ರಾಜ ನೀತಿಗಳನ್ನು ತಿಳಿದಂಥಾವನೇ ಹೊರ್ತು, ಅಲ್ಪನಲ್ಲ. ಇಂಥಾ ಹಗೆಗಳು ತನ್ನ ಮೇಲೆ ದಂಡೆತ್ತಿ ಬಂದಿರುವ ಸಮಯದಲ್ಲಿ, ಸಕಲ ತನ್ನ ಮರ್ಮಗಳನ್ನು ತಿಳಿದಿರುವ ತಮ್ಮನನ್ನು ಅಟ್ಟುವನೇ? ಇವನು, ಅಣ್ಣನಾದವನು ಹಗೆ ಮಾಡಿದರೆ, ಇಷ್ಟು ದಿನ ಪರಿಯಂತರ ಅವನಿಗೆ ವಿಧೇಯನಾಗಿದ್ದು, ಈ ವೇಳೆಯಲ್ಲಿ ನಮ್ಮಲ್ಲಿಗೆ ಬರುವನೇ? ಇದೇನೋ ಮೋಸವಾಗಿ ನನ್ನ ಬುದ್ಧಿಗೆ ಕಾಣುತ್ತೆ. ಹಿಂದೆ ಕಾಗೆಯು ಗೂಬೆಗಳ ಒಳ ಹೊಕ್ಕು, ಶೇರಿ, ಅವುಗಳನ್ನು ಕೊಂದ ಹಾಗೆ, ನಮ್ಮನ್ನು ಇವನು ಒಳ ಹೊಕ್ಕು, ಮೋಸಾ ಮಾಡುವನು. ಖಂಡಿತವಾಗಿ ಇವನನ್ನು ಶೇರಿಸಿ ಕೊಳ್ಳ ಕೂಡದು, ಅಂದನು.

ಅದಕ್ಕೆ ಜಗದೇಕವೀರನಾದ ಶ್ರೀರಾಮ ಚಂದ್ರನು ಸುಗ್ರೀವನನ್ನು ಕುರಿತು—ಎಲೈ, ಪ್ರಿಯ ಸ್ನೇಹಿತನೇ, ನಮ್ಮಲ್ಲಿ ಇರುವ ಸ್ನೇಹದಿಂದ ಹಿತೈಷಿಯಾಗಿ ಇಂಥಾ ಯೋಚನೆಯನ್ನು ಹೇಳುವದು ಯುಕ್ತವೇ ಸರಿ. ಆದರೆ ರಣದೊಳಗೆ ಎದುರಾದವರನ್ನು ಇರಿಯುವದೂ, ಶರಣು ಹೊಕ್ಕವರನ್ನು ರಕ್ಷಿಸುವದೂ, ಧರ್ಮವನ್ನು ಕಾಪಾಡುವದೂ, ಅಧರ್ಮವನ್ನು ನೀಗಿ ಕಳೆಯುವದೂ ಅರಸುಗಳಿಗೆ ನೀತಿಯು. ನಮಗೆ ತೋಳಿನ ಬಲವು ಇಲ್ಲದಿದ್ದರೆ, ಭಯ ಪಡ ಬೇಕು. ಕೀಳಾದ ಬಲವುಳ್ಳವರು ಒಳ ಹೊಕ್ಕು, ನಮಗೆ ಏನು ಮಾಡುವರು? ಸತ್ಯವನ್ನು ಮೋಸವು ಎಂದಿಗೂ ಗೆಲ್ಲಲಾರದು. ಇದರ ಮೇಲೆ ನಮ್ಮ ಇಕ್ಷ್ವಾಕು ವಂಶಕ್ಕೆ ಶರಣರನ್ನು ರಕ್ಷಿಸುವ ಬಿರಿದೇ ಮುಖ್ಯವಾಗಿರುವದು. ನಿನಗೆ ನಾನು ಏನು ಹೇಳುವದು? ನೀನೇನಾದರೂ ಮೂಢನೇ? ತಮ್ಮ ಒಡಲನ್ನಾದರೂ ಇತ್ತು, ಮರೆ ಹೊಕ್ಕವನನ್ನು ಕಾಪಾಡುವದು ಉತ್ತಮ ಕ್ಷತ್ರಿಯರ ಧರ್ಮವು. ಹಿಂದೆ ಪಾರಿವಾಣದ ಹಕ್ಕಿಯು ತನ್ನ ಮನೆಗೆ, ಮಳೆಯಿಂದ ನೆನೆದು, ಕಂಗೆಟ್ಟು ಬಂದ ಕಿರಾತನಿಗೆ ಕಟ್ಟಿಗೆಯನ್ನು ತಂದು, ಉರಿ ಮಾಡಿ, ಅವನ ಛಳೀ ನಡುಕವನ್ನು ನೀಗಿ, ತನ್ನ ದೇಹವನ್ನು ಅವನಿಗೆ ಆಹಾರವಾಗಿ ಕೊಟ್ಟ ಚರಿತ್ರೆಯನ್ನು ನೀ

ನು ಕೇಳಿ, ಅರಿಯಾ? ನೀನು ಬದಲು ಯೋಚನೇ ಮಾಡ ಬೇಡ. ಈ ವಿಭೀಷಣನು ಜಾಣನಾದ್ದರಿಂದಲೂ, ಇವನ ಅಣ್ಣನಾದ ರಾವಣನು ನಿಮ್ಮಣ್ಣನಾದ ವಾಲಿಯಂತೆ ದುರ್ಮಾರ್ಗಿಯಾಗಿ, ಪಾಪ ಕೆಲಸದಲ್ಲಿ ಉದ್ಯುಕ್ತನಾದ್ದರಿಂದಲೂ, ನಾನು ವಾಲಿಯನ್ನು ಕೊಂದು, ನಿನಗೆ ರಾಜ್ಯಾಭಿಷೇಕವನ್ನು ಮಾಡಿದ್ದನ್ನು ಕೇಳಿ, ಈಗ ನಿನ್ನನ್ನು ಕಣ್ಣಾರ ಕಂಡದ್ದರಿಂದಲೂ, ಹಾಗೆಯೇ ತನ್ನ ಅಣ್ಣನನ್ನು ಕೊಂದು, ತನಗೆ ಲಂಕಾ ರಾಜ್ಯದ ಪಟ್ಟಾಭಿಷೇಕವನ್ನು ನಾನು ಮಾಡುವೆನು ಎಂದು, ತನ್ನ ಮನದಲ್ಲಿ ನಿಶ್ಚೈಸಿ, ನಮ್ಮನ್ನು ಮರೆ ಹೊಗಲಿಕ್ಕೆ ಬಂದಿದ್ಧಾನೆ. ಇದರಲ್ಲಿ ಸಂದೇಹವಿಲ್ಲವೆಂದು ಹೇಳಲು; ಸುಗ್ರೀವನು ರಾಮನನ್ನು ಕುರಿತು—ದೇವಾ, ನಿನ್ನ ಮೈ ಸಿರಿಯ ಸೊಬಗು ಯಾವ ದೇವರಿಗುಂಟು? ದೇವರ ದೇವನಲ್ಲಾ! ನೀನು ಪ್ರಾಕೃತ ನರನೇ? ನಾವು ಕೀಳು ಬುದ್ಧಿಗಳು; ನಮಗೇನು ತಿಳಿಯುವದು? ದೇವರ ಮಾತಿಗೆ ಬೇಕು ಬೇಡ ಎಂಬುವವರು ಯಾರೂ ಇಲ್ಲ. ಚಿತ್ತ ಒಪ್ಪಿದ ರೀತಿ ನಡಿಸ ಬಹುದು ಎಂದು, ಅರಿಕೇ ಮಾಡಿದನು.

ಆ ಮಾತನ್ನು ಕೇಳಿ, ಲಕ್ಷ್ಮಣನೂ, ಜಾಂಬವಂತ, ಹನುಮಂತ, ನೀಲ, ಮುಂತಾದ ಸಕಲ ಕಪಿ ಸೇನಾ ನಾಯಕರೂ ಒಡಂಬಡಲು; ರಾಮ ಚಂದ್ರನು ಸುಗ್ರೀವನನ್ನು ನೋಡಿ—ಎಲೈ, ಪ್ರಿಯ ಸ್ನೇಹಿತನೇ, ನೀನೇ ಹೋಗಿ, ವಿಭೀಷಣನನ್ನು ಕರೆದು ಕೊಂಡು ಬಾ, ಎಂದು ಅಪ್ಪಣೆಯನ್ನು ಕೊಡಲು; ಸುಗ್ರೀವನು ಆತನ ಬಳಿಗೆ ಬಂದು, ಬಹಳ ಸಂತೋಷದಿಂದ ಆಲಿಂಗಿಸಿ,—ನಿನ್ನ ಮೇಲೆ ರಘುರಾಮನ ಕೃಪಾ ಕಟಾಕ್ಷವು ಸಂಪೂರ್ಣವಾಗಿದೆ. ನೀನೇ ಧನ್ಯನು. ರಾಮನ ಅಡಿ ದಾವರೆಯನ್ನು ಕಾಣು, ಬಾ, ಎನಲು; ವಿಭೀಷಣನು ತನ್ನ ಆಯುಧಗಳನ್ನು ತನ್ನ ಮಂತ್ರಿಗಳ ಕೈಯಲ್ಲಿ ಕೊಟ್ಟು, ರಥದಿಂದ ಭೂಮಿಗೆ ಇಳಿದು, ರತ್ನಮಯ ಖಚಿತವಾದ ತನ್ನ ಸಿಂಗಾಡಿಯನ್ನೂ ವಜ್ರದಲಗುಳ್ಳ ಬಾಣವನ್ನೂ ರಾಮನ ಅಡಿ ದಾವರೆಗೆ ಸಮರ್ಪಿಸಿ, ಮಂಡೆಯನ್ನು ಚಾಚಿ,—ನನ್ನನ್ನು ಕಾಪಾಡ ಬೇಕೆಂದು, ಬಾರಿ ಬಾರಿಗೂ ಬೇಡಿ ಕೊಳ್ಳುತ್ತ, ನಮಸ್ಕರಿಸುತ್ತಾ ಇದ್ದನು. ಆಗ ಶ್ರೀರಾಮ ಚಂದ್ರನು ಕೃಪಾ ದೃಷ್ಟಿಯಿಂದ ನೋಡಿ,—ಏಳು! ಭಯ ಬೇಡ! ಎಲೇ ವಿಭೀಷಣನೇ, ಕೇಳು. ದಶರಥ ರಾಯನ ಆಣೆಯಾಗಿಯೂ ಲಕ್ಷ್ಮಣನಂತೆ ನಿನ್ನನ್ನು ಕಾಪಾಡುವೆನು. ಮನಸ್ಸಿನಲ್ಲಿ ಚಿಂತೆ ಬೇಡ! ಎಂದು ಹೇಳಿ, ಮಂಡೆಯನ್ನು ಹಿಡಿದು, ಎತ್ತಿ, ಸೀತೆಯನ್ನು ಅಪ್ಪಿಕೊಳ್ಳುವ ತೋಳುಗಳಿಂದ ಆಲಿಂಗಿಸಿ, ಲಕ್ಷ್ಮಣ ಸುಗ್ರೀವರನ್ನು ಕುರಿತು—ಈ ವಿಭೀಷಣನಿಗೆ ಲಂಕಾ ರಾಜ್ಯದ ಪಟ್ಟಾಭಿಷೇಕವನ್ನು ಮಾಡಿ ಎಂದು,

ಅಪ್ಪಣೆಯನ್ನು ಕೊಡಲು; ಅವರು ದಿವ್ಯವಾದ ರತ್ನ ಪೀಠದಲ್ಲಿ ವಿಭೀಷಣನ
ನ್ನು ಕೂರಿಸಿ, ಪಟ್ಟಾಭಿಷೇಕವನ್ನು ಮಾಡಿದರು. ಆಗ ದೇವತೆಗಳು ದೇವ
ಗಂಗೋದಕಗಳನ್ನು ವಿಭೀಷಣನ ತಲೆಯ ಮೇಲೆ ಸುರಿದು, ಪಾರಿಜಾತದ
ಹೂವುಗಳನ್ನು ವರ್ಷಿಸಿ, ದೇವ ದುಂದುಭಿಗಳನ್ನು ಬಾರಿಸಿದರು. ನಾರದನು
ದಿವ್ಯ ವೀಣಾ ಗಾನವನ್ನು ಮಾಡಿದನು. ಅಪ್ಸರ ಸ್ತ್ರೀರುಗಳು ನರ್ತನವನ್ನು
ಮಾಡಿದರು. ವಿಭೀಷಣನು ಅನಂತರ ಶರತ್ಕಾಲದ ಹುಣ್ಣುಮೇ ಚಂದ್ರನಂತಿ
ರುವ ಮುಖವುಳ್ಳವನಾಗಿ ಬಂದು, ರಾಮನ ಪಾದ ಕಮಲಕ್ಕೆ ನಮಸ್ಕರಿಸಲು;
ಶ್ರೀರಾಮಚಂದ್ರನು ಆತನನ್ನು ಎತ್ತಿ, ಆಲಿಂಗಿಸಿ ಕೊಂಡು, ತನ್ನ ತೊಡೆ ಎಂಬ
ಸಿಂಹಾಸನದ ಮೇಲೆ ಕುಳ್ಳಿರಿಸಿ, ತನ್ನ ಕಣ್ಣುಗಳೆಂಬ ಕೊಡಗಳಲ್ಲಿ ತುಂಬಿರುವ
ಆನಂದ ಬಾಷ್ಪಗಳೆಂಬ ಪನ್ನೀರುಗಳಿಂದ ತಾನೂ ಆತನಿಗೆ ಲಂಕಾ ರಾಜ್ಯಾಭಿ
ಷೇಕವನ್ನು ಮಾಡಿ,—ಈಗಿರುವ ಬ್ರಹ್ಮನ ಕಲ್ಪದ ಪರಿಯಂತರವು ಚಿರಂಜೀ
ವಿಯಾಗಿದ್ದು, ಲಂಕಾ ರಾಜ್ಯವನ್ನು ಆಳಿ ಕೊಂಡಿರು ಎಂದು, ಆಶೀರ್ವಾದವ
ನ್ನು ಮಾಡಿ,—ಎಲೈ, ವಿಭೀಷಣನೇ, ನಾವು ರಾವಣನ ಮೇಲೆ ಮಾಡುವ ರಾಜ
ಕಾರ್ಯಕ್ಕೆ ಸಮುದ್ರ ರಾಜನು ತಡೆಯಾಗಿರುವನಲ್ಲ? ಈ ನೂರು ಯೋಜನ
ಸಮುದ್ರವನ್ನು ನಾವೂ ನಮ್ಮ ಸೇನೆಗಳೂ ಆಯಾಸವಿಲ್ಲದೆ ದಾಟಿ, ಲಂಕೆಯ
ನ್ನು ಶೇರುವದಕ್ಕೆ ಏನು ಉಪಾಯವನ್ನು ಮಾಡ ಬೇಕು? ನಿನ್ನ ಬುದ್ಧಿಗೆ
ಏನು ತೋಚುತ್ತದೆ? ಎಂದು ಕೇಳಿದನು. ಅದಕ್ಕೆ ವಿಭೀಷಣನು ಕೈ ಮುಗಿ
ದು, ನಿಂತು ಕೊಂಡು,—ಭಕ್ತರಾದ ಸರ್ವ ಜನರನ್ನು ಸಂಸಾರ ಸಮುದ್ರದಿಂದ
ಸುಲಭವಾಗಿ ದಾಟಿಸುವ ಮಹಾತ್ಮನಾದ ನಿನಗೆ, ನಿನ್ನ ಸೃಷ್ಟಿಯಾದ ಬ್ರಹ್ಮಾಂ
ಡದಲ್ಲಿ ಶೇರಿರುವ ಈ ಒಂದು ಸಮುದ್ರದ ನೂರು ಯೋಜನವನ್ನು ದಾಟಿಸುವ
ದು ಅಸಾಧ್ಯವಾದ ಕೆಲಸವೇ? ಆದರೂ ನರ ನಾಟಕವನ್ನು ನಟಿಸುವ ನಿನ್ನ
ಲೀಲೆಗೆ ತಕ್ಕ ಹಾಗೆ ಈ ಸಮುದ್ರ ರಾಜನನ್ನು ಕುರಿತು ತಪಸ್ಸನ್ನು ಮಾಡಿ,
ನಿನಗೆ ಈತನು ಪ್ರಸನ್ನನಾಗುವಂತೆ ಮಾಡಿ ಕೊಳ್ಳ ಬೇಕೆಂದು, ನನ್ನ ಬುದ್ಧಿ
ಗೆ ತೋರುತ್ತಲಿದೆ ಎಂದು, ಅರಿಕೆ ಮಾಡಿದನು.

ಅದನ್ನು ಕೇಳಿ, ಶ್ರೀರಾಮನು, ತನ್ನ ಮನದಲ್ಲಿ ಇದ್ದಂತೆ ಶರಣನ ಹೇಳಿ
ದನೆಂದು ಆತನ ಬುದ್ಧಿಗೆ ಬಹಳ ಸಂತೋಷ ಪಟ್ಟು, ಆ ಕ್ಷಣದಲ್ಲಿಯೇ ಕೈ
ಕಾಲು ತೊಳೆದು ಕೊಂಡು, ಶುದ್ಧಾಚಮನಗಳನ್ನು ಮಾಡಿ, ಕಡಲ ಧಡ
ದಲ್ಲಿ ದರ್ಭೆಯನ್ನು ಹಾಸಿ ಕೊಂಡು, ಸಮುದ್ರ ರಾಜನನ್ನು ಕುರಿತು—ಎಲೈ,
ಸರ್ವ ಲೋಕ ರಕ್ಷಕನಾದ ರತ್ನಾಕರನೇ, ನಿನ್ನ ಶರಣಾಗತನಾದ ನನಗೆ ಲಂಕೆಗೆ

ಹೋಗುವದಕ್ಕೆ ದಾರಿಯನ್ನು ಕೊಟ್ಟು, ನನ್ನನ್ನು ಕಾಪಾಡ ಬೇಕು. ನೀನು ಹಾಗೆ ಮಾಡದೆ ಇದ್ದರೆ, ನಿರಾಹಾರನಾಗಿ ನಿನ್ನ ಸನ್ನಿಧಾನದಲ್ಲಿ ಪ್ರಾಣಗಳನ್ನು ಬಿಡುವೆನು ಎಂದು, ನಿರಶನ ವ್ರತವನ್ನು ಕೈ ಕೊಂಡು, ದರ್ಭ ಶಯನದಲ್ಲಿ ಮಲಗಿ ಕೊಂಡನು. ಹೀಗೆ ಮೂರು ದಿವಸ ಪರಿಯಂತರವು ಪ್ರಾರ್ಥನೇ ಮಾಡುತ್ತ, ಮಲಗಿ ಕೊಂಡಿದ್ದಾಗ್ಯೂ, ಸಮುದ್ರ ರಾಜನು ಪ್ರಸನ್ನನಾಗಿ ಮೈದೋರದಿರಲು; ನಾಲ್ಕನೇ ದಿವಸದಲ್ಲಿ ಶ್ರೀರಾಮ ಚಂದ್ರನು ಕಣ್ದೆರೆದು, ಸಮುದ್ರನನ್ನು ನೋಡಿ,—ಇವನು ನಮ್ಮನ್ನು ಬಗೆಯದೆ ಹೋದನು. ಶಿವ, ಶಿವಾ! ನಾವಿವನಿಗೆ ಸದರವೇ? ಎನುತ್ತ, ರೌದ್ರಾವೇಶ ಮನನಾಗಿ, ಮೂಗಿನ ಸೊಳ್ಳೆಗಳಲ್ಲಿ ಬೆಂಕಿಯನ್ನು ಉಗುಳುತ್ತ, ಕಣ್ಣುಗಳಲ್ಲಿ ಕಾಲ ರುದ್ರನ ಭಾಳ ಲೋಚನದ ಕಿಡಿಗಳನ್ನು ಉದುರಿಸುತ್ತ, ಇಂಥ ಮದಾಂಧರಲ್ಲಿ ತಾಳಿಮೆಯನ್ನು ತಾಳುವದು ಯುಕ್ತವಲ್ಲ. ಲೋಕದಲ್ಲಿ ಯಾವವನು ಅತಿ ಮೃದುವಾಗಿರುವನೋ, ಅವನನ್ನು ಹೆಂಡತಿ ಮಕ್ಕಳುಗಳು ಸಹ ನಿರಾಕರಿಸುವರು ಎಂದು ಹೇಳುತ್ತ, ಲಕ್ಷ್ಮಣನನ್ನು ನೋಡಿ—ಎಲೈ, ತಮ್ಮನೇ, ನನ್ನ ಬಿಲ್ಲನ್ನೂ ಕಾಳೋರಗನಿಗೆ ಸರಿಯಾದ ಬಾಣವನ್ನೂ ತಾ. ಸಮುದ್ರವನ್ನು ಬತ್ತಿಸಿ, ತಳ ಮಳಲನ್ನು ಕಾಣಿಸುವೆನು. ನಮ್ಮ ಕಪಿ ಬಲವು ಕಾಲಿನಿಂದ ನಡೆದು ಹೋಗಲಿ ಎಂದು, ಬಿಲ್ಲು ಬಾಣಗಳನ್ನು ಕೈಯಲ್ಲಿ ತೆಗೆದು ಕೊಂಡು, ಬಿಲ್ಲಿಗೆ ಹೆದೆಯನ್ನು ಏರಿಸಿ, ಹೆದೆಯಲ್ಲಿ ಅಂಬನ್ನು ತೊಡಿಸಿ, ಅಗ್ನಿ ಮಂತ್ರದಿಂದ ಬಿಡಲುದ್ಯುಕ್ತನಾದ ಮಾತ್ರಕ್ಕೆ ಕಡಲ ಒಡಲೊಳಗೆ ಉರಿ ಇಳಿದು, ತೆರೆಗಳು ಕುದಿದು, ಛಟಛಟತ್ಕೃತಿಗಳಲ್ಲಿ ತುಳುಕಿ ತೂರುವ ತುಂತುರಿನ ಕಿಡಿಗಳು ಬಡಬಾಗ್ನಿಯನ್ನು ತಮ್ಮೊಳಗೆ ಶೇರಿಸಿ ಕೊಂಡು, ಜಲ ಜಂತುಗಳನ್ನು ಶೀಸಿ, ಕರಿ ಮಾಡಿ, ನೀರಿನ ಸಮುದ್ರವು ಉರಿ ಕಡಲಾಗಲು;—ಹಾ, ಸರಿತ್ಪತಿಯೇ! ಎಂದು, ತಲೆಯನ್ನು ಕೆದರಿ ಕೊಂಡು, ಬಾಯಿ ಬಿಡುತ್ತ, ಗಂಗಾದಿ ನದಿಗಳು ಸಮುದ್ರನನ್ನು ಕುರಿತು—ಎಲೈ, ಪಾಪಿಯೇ, ಬೇಗ ಹೊರಡು. ರುದ್ರ ರೂಪಿನಲ್ಲಿ ಲೋಕಗಳನ್ನು ಸುಡುವ ಮಹಾ ವಿಷ್ಣುವಿನ ಕೋಪದಲ್ಲಿ ನಿನ್ನ ಈ ಕೆಟ್ಟ ಗಂಭೀರತನವು ನಡೆಯುವದೇ? ರೂಪು ಕೆಡ ಬೇಡ ಎಂದು, ಗಂಡನಾದ ಕಡಲನ್ನು ಸಂಗಡ ಕರೆದು ಕೊಂಡು, ಶ್ರೀರಾಮನ ಸನ್ನಿಧಿಗೆ ಬಂದು, ತಮ್ಮ ಕಿವಿಗಳ ಓಲೆಗಳನ್ನು ರಾಮನ ಅಡಿ ದಾವರೆಗಳಲ್ಲಿ ಇಟ್ಟು, ನಮಸ್ಕರಿಸಿದರು.

ಅವರೊಳಗೆ ಗಂಗೆಯು ರಾಮನನ್ನು ಕುರಿತು—ಎಲೈ, ರಘು ಪತಿಯೇ, ನಾನು ನಿನ್ನ ಮಗಳಲ್ಲವೇ? ಐಯನಾದ ನಿನಗೆ ಮಗಳ ಮೇಲೆ ಇಷ್ಟು ಅಗಡುತನ

ಉಂಟೇ? ನನ್ನ ಕೊರಳ ತಾಳಿಯ ಮೇಲಾದರೂ ನೀನು ದೃಷ್ಟಿಯನ್ನು ಇಡದೆ ಹೋದೆಯಲ್ಲ! ಮಗಳ ಮೇಲೆ ತಂದೆ ಮುನಿದರೆ, ಬಲ್ಲವರು ನಗದೆ ಇರುವರೇ? ಸಾಕು! ಬಿಡು! ಮರೆ ಹೊಕ್ಕವರ ಕಾಯುವವನೆಂಬ ನಿನ್ನ ಬಿರುದನ್ನು ಕಾಪಾಡಿಕೋ! ಇಗೋ, ದೀನನಾಗಿ ಬಂದಿರುವ ನನ್ನ ಗಂಡನಾದ ಸಮುದ್ರನನ್ನು ನೋಡು! ಇವನು ನಿನ್ನ ಮರೆ ಹೊಗ ಬಂದವನೋ? ನಿನ್ನೊಡನೆ ಮತ್ಸರಿಸ ಬಂದವನೋ? ನನ್ನ ಮಾಂಗಲ್ಯ ಸೂತ್ರವನ್ನು ಹರಿಯ ಬೇಡ! ಎಂದು ಹೇಳಿ, ಸಮುದ್ರ ರಾಜನನ್ನು ಕರ ತಂದು, ಕಾಲಿನ ಮೇಲೆ ಕೆಡವಲು; ರಾಮನು ಆತನನ್ನು ಆಲಿಂಗಿಸಿ ಕೊಂಡು, ಮನ್ನಿಸಿ,—ಎಲೈ, ಸಮುದ್ರ ರಾಜನೇ, ನೀವು ದೇವತೆಗಳು. ನಾನು ಮನುಜನು. ನನ್ನ ಹೆಂಡತಿಯನ್ನು ದುಷ್ಟನಾದ ರಾವಣನು ಕದ್ದು ಕೊಂಡು ಹೋಗಿ, ನನ್ನನ್ನು ಬಹು ಕಷ್ಟ ಪಡಿಸಿದನು. ಅವನನ್ನು ಕೊಲ್ಲ ಹೋಗುವದಕ್ಕೆ ನನ್ನ ಮೇಲೆ ನೀವು ಕನಿಕರವಿಟ್ಟು, ದಾರಿಯನ್ನು ಕೊಡ ಬೇಕು, ಎಂದು ಬೇಡಿ ಕೊಳ್ಳಲು; ಸಮುದ್ರ ರಾಜನು ರಾಮನನ್ನು ಕುರಿತು—ಎಲೈ, ರಘುಪತಿಯೇ, ದೇವತೆಗಳ ಬಡಗಿಯಾದ ವಿಶ್ವಕರ್ಮನ ಮಗನಾದ ನಳನೆಂಬ ಈ ಕಪಿ ನಾಯಕನಿಂದ ಸೇತುವನ್ನು ಕಟ್ಟಿಸು. ಆ ಸೇತುವಿನ ನಿಮಿತ್ತವಾಗಿ ಹಾಕುವ ಬೆಟ್ಟ, ಗುಡ್ಡ, ಕಲ್ಲು, ಮರಗಳೆಲ್ಲಾ ಈ ನಳನು ಕೈ ಮುಟ್ಟಿ, ನನ್ನಲ್ಲಿ ಹಾಕಲು, ತೇಲುವವು. ಹೀಗೆಂದು, ಈ ನಳನಿಗೆ ಈತನ ತಂದೆ ವಿಶ್ವಕರ್ಮನು ಹಿಂದೆ ವರವನ್ನು ಕೊಟ್ಟಿರುವನು. ಇಗೋ, ಈಗ ನನ್ನ ಮೇಲೆ ನೀನು ತೊಟ್ಟ ಆಗ್ನೇಯಾಸ್ತ್ರವು ಅಮೋಘವಾದ್ದರಿಂದ, ಈ ಅಸ್ತ್ರವನ್ನು—ನನ್ನ ದ್ವೀಪದಲ್ಲಿ ಇದ್ದು ಕೊಂಡು, ಬಹು ಜನ ಕಿರಾತರು ನನಗೆ ತೊಂದರೆಯನ್ನು ಕೊಡುತ್ತಿರುವರು. ಅವರ ಮೇಲೆ ಹಾಕು ಎಂದು, ಹೇಳಿ ಕೊಳ್ಳಲು; ಶ್ರೀರಾಮನು ಸಮ್ಮತಿ ಪಟ್ಟು, ಅಸ್ತ್ರವನ್ನು ಕಿರಾತರ ಮೇಲೆ ಪ್ರಯೋಗಿಸಿ, ಅವರನ್ನೆಲ್ಲಾ ಕೊಂದು, ಸಮುದ್ರನನ್ನು ಕಳುಹಿಸಿ ಬಿಟ್ಟನು.

ಆ ಬಳಿಕ ಶ್ರೀರಾಮನು ಸುಗ್ರೀವನನ್ನು ಕುರಿತು—ಎಲೈ, ಕಪಿ ರಾಜನೇ, ಇನ್ನು ಮುಂದೆ ಏನು ಯೋಚನೆಯನ್ನು ಮಾಡ ಬೇಕು? ಎನಲು; ಸುಗ್ರೀವನು —ಎಲೈ, ಅರಸೇ, ಇನ್ನೇನು ಯೋಚನೆ? ಭೂಮಿಯಲ್ಲಿ ಗಿರಿ ತರುಗಳವೆ. ವೀರ ಕಪಿ ಭಟರಿಗೆ ತೋಳುಗಳ ಬಲಗಳವೆ. ಒಂದು ನಿಮಿಷದಲ್ಲಿ ಕಡಲನ್ನು ಹೂಳಿಸಿ, ಹಗೆ ರಾವಣನನ್ನು ನಿನ್ನ ಪಾದಕ್ಕೆ ತೋರಿಸುವೆನು. ಆ ಮೇಲೆ ಅವನನ್ನು ಕೊಲ್ಲ ಬೇಕಾದರೂ, ಉಳುಹ ಬೇಕಾದರೂ, ದೇವರ ಚಿತ್ತವೆಂದು ಬಿನ್ನವಿಸಿದನು. ಆಗ ಗವಾಕ್ಷನೆಂಬ ಕಪಿ ನಾಯಕನು ಎದ್ದು, ಕೈ ಮುಗಿದು,—ಎಲೈ,

ರಾಘವೇಂದ್ರನೇ, ಈ ಸುಗ್ರೀವನು ನುಡಿದ ನುಡಿಯು ನಮ್ಮಂಥ ಸಮರ್ಥರಿಗೆ ತಕ್ಕದ್ದಲ್ಲ. ಕಡಲನ್ನು ಕಷ್ಟ ಪಟ್ಟು, ಯಾಕೆ ಹೂಳ ಬೇಕು? ನನ್ನ ಉದ್ದವಾದ ಈ ಬಾಲ ಒಂದನ್ನೇ ಲಂಕೆಗೆ ಕಳುಹಿಸಿ, ಆ ಹುಳು ಪರೆಗೆ ಸರಿಯಾದ ರಾವಣನನ್ನು ಹಿಡ ತರಿಸುವೆನು, ಅಂದನು.

ಆಗ ಗವಯನೆಂಬ ವಾನರ ಸೇನಾಪತಿಯು ಗವಾಕ್ಷನನ್ನು ಕುರಿತು—ರಾಮನ ಮುಂದೆ ಒಳ್ಳೇ ಮಾತಾಡಿದಿ! ಛೀ! ಆಚೆಗೆ ಹೋಗು! ರಾವಣನೊಬ್ಬ ಹಗೆಯನ್ನು ಹಿಡ ತರಿಸುವದು ಮಹಾ ಪೌರುಷವೋ? ಆ ಖಳನನ್ನೂ, ಅವನ ಬಲವನ್ನೂ, ಅವನ ಲಂಕೆಯನ್ನೂ ನಿಮಿಷದಲ್ಲಿ ತಂದು, ರಾಘವನ ಮುಂದೆ ನಾನು ಇಳುಹದಿದ್ದರೆ, ತಾನು ಬಂಟನಲ್ಲೆಂದು ಬೊಬ್ಬಿರಿದನು. ಶರಭನು ಎಂಬ ಕಪಿ ನಾಯಕನು—ಸಮುದ್ರವನ್ನು ಬಿಟ್ಟು, ಈ ಕೆಲಸಾ ಮಾಡುವದು ಬಹು ಹೆಚ್ಚಲ್ಲ. ಕೊಡನ ಮಗನಾದ ಅಗಸ್ತ್ಯನ ಹಾಗೆ ಕಡಲನ್ನು ಕುಡಿದು, ರಾವಣನ ತಲೆಗಳನ್ನು ತರಿದು, ರಾಮನ ಮುಂದೆ ತಂದೊಟ್ಟುವೆನು, ಅಂದನು. ಆಗ ಸರ್ವ ಸೇನಾಪತಿಯಾದ ನೀಲನು—ಇದೆಲ್ಲಾ ಬಹು ದೊಡ್ಡದಲ್ಲ. ಒಡೆಯನ ಅಪ್ಪಣೆಯಾದರೆ, ಈ ಬ್ರಹ್ಮಾಂಡವನ್ನೇ ತಲೆ ಕೆಳಗಾಗಿ ಮಾಡುವೆನು, ಅಂದನು.

ಈ ಪ್ರಕಾರ ಸಮಸ್ತ ಸೇನಾ ನಾಯಕರು ತಮ್ಮ ತಮ್ಮ ಶಕ್ತಿ ಸಾಹಸಗಳನ್ನು ಹೇಳಿ ಕೊಳ್ಳುತ್ತ, ಆರ್ಭಟಿಸುತ್ತಿರಲು; ದಿನಕುಲೇಂದ್ರನು ಕೇಳಿ, ಸಂತೋಷದಿಂದ ಹಿಗ್ಗಿ, ಹನುಮನ ಮುಖವನ್ನು ನೋಡಿ—ನಿನ್ನ ಬುದ್ಧಿಗೆ ಏನು ತೋರಿದೆ, ಐಯ್ಯಾ? ಎಂದು ಕೇಳಲು; ಹನುಮನು ಎದ್ದು, ಕೈ ಮುಗಿದು,—ಜೀಯಾ, ಈ ಪ್ರಖ್ಯಾತರಾದ ಕಪೀಂದ್ರರಲ್ಲಿ ನಾನು ಎಷ್ಟರವನು? ಪಾದದ ಅಪ್ಪಣೆ ಹ್ಯಾಗೆ ಆಗುತ್ತದೋ? ಆ ಪ್ರಕಾರ ನಡೆಯುವದೊಂದೇ ನನ್ನ ಮತವು ಎಂದು, ಬಿನ್ನೈಸಲು; ರಾಮನು ಹನುಮನ ಬಿನ್ನಹಕ್ಕೆ ಮೆಚ್ಚಿ, ಸುಗ್ರೀವನನ್ನು ನೋಡಿ—ಎಲೈ, ಪ್ರಿಯ ಸಖನೇ, ನಿನ್ನ ಕಪಿ ಸೇನಾಪತಿಗಳಿಗೆ ಅಪ್ಪಣೆಯನ್ನು ಕೊಟ್ಟು, ಗಿರಿ ಪರ್ವತಗಳನ್ನು ತರಿಸು. ನಳನಿಗೆ ಸಮುದ್ರದಲ್ಲಿ ಆ ಬೆಟ್ಟ ಗುಡ್ಡಗಳಿಂದ ಸೇತುವನ್ನು ಕಟ್ಟುವ ಹಾಗೆ ಕಟ್ಳೇ ಮಾಡು, ಎಂದು ಅಪ್ಪಣೇ ಕೊಡಲು; ಆಗ ಸುಗ್ರೀವನು ನಳನನ್ನು ಕರಿಸಿ, ಶ್ರೀರಾಮನ ಆಜ್ಞೆಯನ್ನು ಹೇಳಲು; ಆ ನಳನು ರಾಮನ ಚರಣಾರವಿಂದಕ್ಕೆ ನಮಸ್ಕರಿಸಿ, ಹನುಮನು ಲಂಕೆಗೆ ಹಾರಿದ ಮಹೇಂದ್ರ ಪರ್ವತವನ್ನು ಬುಡ ಸಹಿತ ಕಿತ್ತು, ಅಂಬುಧಿಯ ಬಡಗ ದಿಕ್ಕಿನ ಮೊದಲಿನಲ್ಲಿ ಇಟ್ಟು, ಸೇತು ಕಟ್ಟುವದಕ್ಕೆ ಪ್ರಾರಂಭಿಸಿದನು. ಆಗ ಆಕಾಶದಲ್ಲಿ ದೇವತೆಗಳು ಆತನ ಸಾಹಸನ್ನು ನೋಡಿ,—ಶಾಬಾಸು! ಶಾಬಾಸು! ಎಂದು

ಹೊಗಳಿದರು. ಶ್ರೀರಾಮನು ನಸು ನಕ್ಕನು. ಆಗ ಶತಬಲಿ ಎಂಬ ಕಪಿಯು—ಈ ನಳನು ಕಿತ್ತ ಮಹೇಂದ್ರ ಪರ್ವತವು ಬಲು ದೊಡ್ಡದೋ? ಎಂದು ಹತ್ತು ಯೋಜನ ವಿಸ್ತಾರವಾದ ಒಂದು ಅದ್ರಿಯನ್ನು ಕಿತ್ತು ಕೊಂಡು ಬಂದು, ಆ ಮಹೇಂದ್ರ ಪರ್ವತದ ಒತ್ತಿನಲ್ಲಿ ಹಾಕಿದನು. ಸಂಗಡಲೇ ಗಜ ಗವಯಾದಿ ಕಪಿ ನಾಯಕರು ಹುರುಡಿನಿಂದ ಅದ್ರಿಗಳನ್ನು ತಂದು, ತಂದು, ನಳನ ಕೈಗೆ ಕೊಡು ತ್ತಿದ್ದರು. ಆ ನಳನ ಸಾಮರ್ಥ್ಯವೆಷ್ಟೋ! ಇಷ್ಟು ಜನ ಕಪಿ ಸೇನಾ ನಾಯಕ ರು ತಂದು ಕೊಡುವ ತೋರ ಗಿರಿಗಳನ್ನು ಲಕ್ಷ್ಯವಿಲ್ಲದೆ ತನ್ನ ಕೈಯಲ್ಲಿ ತೆಗೆ ದು ಕೊಂಡು, ಓರೆಕೋರೆಯಾಗದಂತೆ ಸೂತ್ರಿಸಿದ ಪ್ರಕಾರ ಸಮುದ್ರದಲ್ಲಿ ಎಸೆ ಯುತ್ತಿದ್ದನು.

ಆಗ ಕಡಲಿನಲ್ಲಿ ಬೆಟ್ಟಗಳು ಬೀಳುತ್ತಿದ್ದವು. ಆ ಬೆಟ್ಟಗಳು ಬಿದ್ದ ಪೆಟ್ಟಿಗೆ ಸಮುದ್ರದ ತೆರೆಗಳು ಅಂಬರದ ತುದಿಯ ವರಿಗೂ ಹಾರುತ್ತಿದ್ದವು. ಆ ಸೇತು ವಿನ ಸೂತ್ರದ ಒಳಗಡೆಯಲ್ಲಿರುವ ಮೀನು, ಮೊಸಳೆ, ನೀರಾನೆ, ಆವೆ, ಮುಂ ತಾದ ಜಲ ಜಂತುಗಳು ಆ ಸ್ಥಳವನ್ನು ಬಿಟ್ಟು, ಮತ್ತೊಂದು ಕಡೆಗೆ ಓಡಿ ಹೋಗುತ್ತಿದ್ದವು. ಮರು, ಯವನ, ಗಾಂಧಾರ, ಗುಜ್ಜಳ, ಗೌಳ, ಮಾಳವ, ಪಾರಶೀಕ, ಪಾಂಚಾಳ, ಸೇವಣ, ಸಿಂಧು, ಕಾಂಭೋಜ, ಕೇರಳ, ಆಂಧ್ರ, ಕರೂಷ, ಕುರು, ಹಮ್ಮೀರ, ವಂಗ, ಅಂಗ, ಕಳಿಂಗ ದೇಶಗಳ ದೊಡ್ಡ ದೊಡ್ಡ ಬೆಟ್ಟಗಳೆಲ್ಲಾ ನಳನ ಸಮುದ್ರದ ಬಂಧದಲ್ಲಿ ತೀರಿ ಹೋದವು. ಆದರೂ ಸೇತುವು ಸ್ವಲ್ಪವಾದರೂ ಬೆಳೆದು ಸಾಗದೆ ಇದ್ದದರಿಂದ ಮತ್ತೆ ಕಪಿ ನಾಯಕರು ಹೊರ ಟು, ಕಿನ್ನರ, ಕಿಂಪುರುಷ, ಗುಹ್ಯಕ, ಯಕ್ಷ, ವಿದ್ಯಾಧರ, ಖಚರ, ಗರುಡ, ಗಂ ಧರ್ವಾದಿಗಳ ನಾನಾ ವಿಧವಾದ ಭೂಮಿಗಳಲ್ಲಿರುವ ದೊಡ್ಡ ದೊಡ್ಡ ಬೆಟ್ಟಗಳ ನ್ನು ಕಿತ್ತು, ಕಡಲಲ್ಲಿ ತಂದು, ಅಡಕಿದರು.

ಹೀಗೆ ಕಪಿ ಸೇನಾ ನಾಯಕರು ತಂದು ಇಡುತ್ತಿರುವ ಗಿರಿಗಳನ್ನು ಹಿಡಿ ಹಿಡಿದು, ನಳನು ಒಟ್ಟಿ, ಮೆಟ್ಟಿ, ಗಿರಿ ಗಿರಿಗೆ ಜೋಡಿಸಿ, ಸಂದುಗಳಿಗೆ ಸಣ್ಣ ಗುಡ್ಡ ಗಳನ್ನು ತುಳಿದು, ಕೊಟ್ಟ ಗಿರಿಗಳ, ಕೊಡುವ ಗಿರಿಗಳ, ಕಟ್ಟೆಯಲ್ಲಿ ಕಾಚಿ, ಇಕ್ಕಿ, ಕೋಪದ ದೃಷ್ಟಿಯಿಂದ ನೋಡುತ್ತ, ಭಟರನ್ನು ಕುರಿತು—ಹೂ! ಹೂ! ಬೇಗ, ಬೇಗ, ಬೆಟ್ಟಗಳು ಬರಲಿ ಎಂದು ಆರ್ಭಟಿಸುತ್ತಿರಲು; ಅದನ್ನು ಕೇಳಿ, ಸುಗ್ರೀವನು—ಸೇತು ಬೇಗ ಸಾಗುವದಿಲ್ಲ ಎಂದು ಕೋಪದಿಂದ ಎದ್ದು, ಉದ ಯ ಪರ್ವತಕ್ಕೆ ಹಾರಿ, ಅದರ ಶಿಖರವನ್ನು ಕಿತ್ತು, ಅದನ್ನು ಎಡ ಗೈಯಲ್ಲಿಟ್ಟು ಕೊಂಡು, ಅಲ್ಲಿಂದ ಅಸ್ತ ಪರ್ವತಕ್ಕೆ ಹಾರಿ, ಅದರ ಶಿಖರವನ್ನು ಕಿತ್ತು, ಬಲ ಗೈ

ಯಲ್ಲಿ ತೆಗೆದು ಕೊಂಡು, ನಳನ ಕೈಯಲ್ಲಿ ಕೊಟ್ಟನು. ವಿನತನು ಶತಕೋಟಿ ಎಂಬ ಪರ್ವತವನ್ನೂ, ಸುಷೇಣನು ಸುದರ್ಶನಾದ್ರಿಯನ್ನೂ, ಪನಸನು ಪಾರಿಯಾತ ಮಹೀಧರವನ್ನೂ, ವೃಷಭನು ವೃಷಗಿರಿಯನ್ನೂ, ಗವಯನು ಗೋವರ್ಧನಾಚಲವನ್ನೂ, ಗವಾಕ್ಷನು ಅಂಜನ ಶಿಖರಿಯನ್ನೂ, ನಳನ ಕೈಗೆ ತಂದು ಕೊಟ್ಟರು. ಅರರೇ! ಶಿವ! ಶಿವಾ! ಹೊಗಳುವದಕ್ಕೆ ಎರಡು ಸಾವಿರ ನಾಲಿಗೆಯುಳ್ಳ ಮಹಾ ಶೇಷನ ಪಾಡೇ? ಗಿರಿಗಳೋ, ತಿರಿ ಕಲ್ಲುಗಳೋ? ವಾನರರೋ, ವಜ್ರ ಕಾಯರೋ? ಸುಮುಖ, ದುರ್ಮುಖ, ತಾರ, ದಧಿಮುಖ, ಕುಮುದ, ಮೈಂಧ, ದ್ವಿವಿದ, ಶತಬಲಿ, ರುಮ, ರುಮಣ್ವಕ, ಜ್ಯೋತಿಮುಖ, ಗಜ, ಗಂಧಮಾದನರೇ ಮೊದಲಾದ ಕಪಿ ನಾಯಕರು ಮೇರು ಪರ್ವತವನ್ನು ಬಳಸಿರುವ, ಕಡಲ ನಟ್ಟ ನಡುವೆ ಇರುವ, ಗಿರಿಗಳನ್ನು ತಂದು ಜಲಧಿಯಲ್ಲಿ ಒಟ್ಟಿದರು.

ಯಾರ ಹವಣೂ ಅಲ್ಲ. ವಾಲಿ ಕುಮಾರನ ಸಾಹಸವು ಎಲ್ಲರನ್ನು ಮೀರಿತು. ಇಂದ್ರನ ಮೊಮ್ಮಗನಲ್ಲಾ! ಅವನ ಪರಾಕ್ರಮವನ್ನು ಹೇಳ ಬೇಕೆಂಬುವದೇನು? ಕೂಗಿ, ಬೊಬ್ಬಿರಿದು, ಕೈಲಾಸ ಪರ್ವತಕ್ಕೆ ಹಾರಿ,—ಆಹಾ! ಇದೊಂದು ಗಿರಿಯು. ಸಮುದ್ರದ ಸೇತು ಬಂಧನಕ್ಕೆ ಸಾಕು! ನಳನ ಕೋಪವು ಇದರಿಂದ ಅಡಗುವದು. ಈ ಪರ್ವತವನ್ನು ರಾವಣನು ನೋಡಿ, ತಾನು ಅಲ್ಲಾಡಿಸಿ, ಕೈಸಿಕ್ಕಿ, ಅತ್ತನು. ಇಂಥಾ ಪರ್ವತವನ್ನು ನಾನು ಕಿತ್ತು, ಸಮುದ್ರದಲ್ಲಿ ಹಾಕಿದರೆ, ರಾವಣನು ತನಗೆ ಹೆದರಿ, ಜಗಳಕ್ಕೆ ಬಾರದೆ, ರಾಮನಿಗೆ ಶರಣಾಗತನಾಗಿ, ಸೀತೆಯನ್ನು ಒಪ್ಪಿಸುವನು ಎಂದು ನಿಶ್ಚೈಸಿ, ತನ್ನ ತೋಳುಗಳಿಂದ ಔಕಿ, ಜಡಿದು, ಅಲ್ಲಾಡಿಸಲು; ಶಿವನ ಪಟ್ಟಣವು—ಮತ್ತೆ ರಾವಣ ಬಂದನೆಂದು ಬೆದರಿತು. ಅದನ್ನು ನೋಡಿ, ಶಂಕರನು ಜ್ಞಾನ ದೃಷ್ಟಿಯಿಂದ ತಿಳಿದು, ಅಂಗದನ ಬಳಿಗೆ ಬಂದು—ಎಲಾ! ಯಾರೋ ನೀನು? ಈ ಗಿರಿಯನ್ನು ಕೀಳುವಂತೆ ನಿನಗೆ ಯಾರು ಹೇಳಿದರು? ಆಚೆಗೆ ಹೋಗು ಎನ್ನಲು; ಅಂಗದನು ಶೂಲಿಯನ್ನು ಕಿರು ನಗೆಯಿಂದ ನೋಡಿ,—ಹೋಗು ಎಂದು ಹೇಳುವ ಇಷ್ಟು ಸಲಿಗೆಯನ್ನು ನಿನಗೆ ಯಾರು ಕೊಟ್ಟರು? ಎಂದು ಹೇಳಿ, ಮಹಾ ದೇವನನ್ನು ಗಣ್ಯ ಮಾಡದೆ, ಕೈಲಾಸ ಪರ್ವತವನ್ನು ಬೇರು ಸಹಿತ ಕಿತ್ತು, ಮೇಲಕ್ಕೆತ್ತಿದನು. ಆಗ ಹರನು ಬೆರಗಾಗಿ, ಅಂಗದನನ್ನು ಕುರಿತು—ಎಲೈ, ಕಪೀಶ್ವರನೇ, ಈ ಗಿರಿಯು ನಮ್ಮದು; ನಾವು ನಿಮ್ಮ ರಾಮನಿಗೆ ಮಿತ್ರರು; ನಿಶ್ಚಯವು; ಹುಸಿಯಲ್ಲ. ಪ್ರೀತಿ ಮಾಡಿ, ನಮ್ಮನ್ನು ನೋಡು ಎಂದು, ತನ್ನ ಐದು ಮುಖಗಳನ್ನು ಧರಿಸಿ, ಕಾಣಿಸಿ ಕೊಂಡನು. ಅಂಗದನು ನೋಡಿ—ನಾನೇನು, ಹೆಡ್ಡನೇ? ನೀನು ಶಂಕರನೆಂದೂ, ಈ

ಗಿರಿಯು ನಿನ್ನದೆಂದೂ, ನಾನರಿಯೆನೇ? ನೀನು ನಮ್ಮೊಡೆಯನಿಗೆ ಮಿತ್ರನಾದ
ಮೇಲೆ ಈ ಗಿರಿಯು ನಮ್ಮ ರಘುಪತಿಗೆ ಸಲ್ಲದೇ? ನಾವು ಸ್ವಾಮಿ ಕಾರ್ಯವನ್ನು
ಬಿಡುವರಲ್ಲ. ಇದೆಲ್ಲಾ ಯಾತಕ್ಕೆ? ನಮ್ಮೊಡೆಯನಿರುವದು ಬಹು ದೂರವೇ?
ಆತನ ಅಪ್ಪಣೆ ಬರಲಿ. ಇದನ್ನು ಇಲ್ಲಿ ಬಿಸಾಟು, ಬಂದ ದಾರೀ ಹಿಡಿದು ಹೋ
ಗುವೆವು, ಎನಲು; ಮಹೇಶ್ವರನು ನಗುತ್ತ, ಸಮೀಪದಲ್ಲಿರುವ ತನ್ನ ಮಕ್ಕಳಾದ
ಗುಹ ಗಣೇಶರನ್ನು ನೋಡಿ, ಆಗಲೇ ರಾಮನ ಮೂರ್ತಿಯನ್ನು ಕೈ ಕೊಂಡು,
ಅಂಗದನನ್ನು ಕುರಿತು—ಎಲೈ ಕಂದಾ, ಕೇಳು! ಈ ಶಂಕರನಿಗೂ ನಮಗೂ ಭೇ
ದವಿಲ್ಲ. ಈ ಗಿರಿಯನ್ನು ಬಿಟ್ಟು, ಇದರ ಸುತ್ತಮುತ್ತಲಿರುವ ಬೆಟ್ಟಗಳನ್ನು
ಕಿತ್ತು ಕೊಂಡು ಬಾ, ಎಂದು ಹೇಳಿ, ಅದೃಶ್ಯನಾಗಲು; ಅಂಗದನು ಆ ಕೈಲಾ
ಸ ಪರ್ವತವನ್ನು ಓರೆಕೋರೆಯಾಗದಂತೆ ಮೊದಲಿನ ಪ್ರಕಾರ ಇಟ್ಟು, ಸಮೀ
ಪದಲ್ಲಿರುವ ಗಿರಿಗಳನ್ನು ಕಿತ್ತು, ನಳನ ಕೈಗೆ ತಂದಿತ್ತನು.

ಆ ಬಳಿಕ ನೀಲನು ಮಂದರ ಪರ್ವತಕ್ಕೆ ಹಾರಿ, ಅದನ್ನು ಕೀಳಲು; ದೇ
ವೇಂದ್ರನು ಓಡಿ ಬಂದು—ಎಲೈ, ಕಪಿ ನಾಯಕನೇ, ಈ ಪರ್ವತದಲ್ಲಿ ನಾನು
ಮೊದಲಾದ ದೇವತೆಗಳೆಲ್ಲಾ ವಾಸಿಸಿ ಕೊಂಡಿರುವೆವು. ಇಲ್ಲಿ ಮೃತ ಸಂಜೀವ
ನಾದಿ ದಿವ್ಯೌಷಧಿಗಳಿವೆ. ಇದು ಲಕ್ಷ್ಮೀ ಪತಿಯಿಂದ ಪ್ರತಿಷ್ಠಿಸಿದ ಪರ್ವತವು;
ಇದನ್ನು ಕೀಳ ಬೇಡವೆಂದು, ಬೇಡಿ ಕೊಳ್ಳಲು; ನೀಲನು ಓರೆ ಗಣ್ಣಿನಲ್ಲಿ ನೋ
ಡಿ,—ನೀನ್ಯಾರು? ಇಂದ್ರನೇ? ಹು, ಹು! ಇಂದ್ರನಾಗು; ಹರನಾಗು; ಬ್ರಹ್ಮನಾಗು;
ನಮಗೇನು? ಎಂದು ಕೀಳುತ್ತಿರಲು; ನಾರದನು ಬಂದು—ಎಲೈ, ನೀಲನೇ, ನಿಮ
ಗೆ ನಮಗೆಲ್ಲಾ ಶ್ರೀರಾಮನು ಒಡೆಯನು ಎಂದು, ಬಹಳ ಬಗೆಯಲ್ಲಿ ತಾನು ಹೇ
ಳಿ ಕೊಂಡು, ಇವನ ತಂದೆಯಾದ ವಿಶ್ವಕರ್ಮನಿಂದ ಹೇಳಿಸಿದ್ದರಿಂದ, ಆ ಗಿರಿ
ಯನ್ನು ಅಲ್ಲಿ ಬಿಟ್ಟು, ಸಮೀಪದ ಗಿರಿಗಳನ್ನು ತಂದು, ನಳನ ಕೈಗೆ ಕೊಟ್ಟನು.
ಮೊದಲು ಅಂಗದನು ತಂದ ಗಿರಿಗಳಿಂದ ಹತ್ತು ಯೋಜನ ಸೇತುವು ನಡೆದಿತ್ತು.
ಈ ನೀಲನು ತಂದ ಗಿರಿಗಳಿಂದ ಹತ್ತು ಯೋಜನ ಸೇತುವಾಯಿತು.

ಆ ಬಳಿಕ ಬ್ರಹ್ಮನ ಮಗನಾದ ಜಾಂಬವಂತನ ಬಲವು ಎಲ್ಲಾ ಕಪೀಶ್ವರರ ಬ
ಲವಿಗಿಂತ ಹೆಚ್ಚಾಯಿತು. ಈತನು ಹಿಮವತ್ಪರ್ವತಕ್ಕೆ ಹಾರಿ, ಕಣ್ಣುಗಳ ಜೋ
ಲು ಗೂದಲುಗಳನ್ನು ಮೇಲಕ್ಕೆ ಸೆಗಹಿ, ಎತ್ತಿ, ನೋಡಿ—ಓಹೋ! ನಾವು ಮುದ
ಕರು. ಇದಕ್ಕಿಂತ ಹೆಚ್ಚಾದ ಗಿರಿಯನ್ನು ಹೊರಲಾರೆವು. ನಮಗೀ ಬಡ ಗಿರಿ
ಯೇ ಸಾಕು ಎಂದು, ಎರಡು ಸಾವಿರ ಯೋಜನದಗಲವೂ, ಎರಡು ಸಾವಿರ
ಯೋಜನದ ಮಟ್ಟವೂ, ಐವತ್ತೆರಡು ಸಾವಿರ ಯೋಜನದ ಉದ್ದವೂ, ಇರು

ವ ಆ ಹಿಮವತ್ಪರ್ವತವನ್ನು ಕಿತ್ತು, ಮೇಲಕ್ಕೆತ್ತಲು; ಆ ಬೆಟ್ಟದ ಹೆಂಡತಿಯಾದ ಮೇನಕಿಯು ಥಿಗ್ಗನೆ ಎದ್ದು, ಜಾಂಬವಂತನ ಬಳಿಗೆ ಬಂದು—ಎಲೈ, ವೃದ್ಧನೇ, ಕೃತ್ಯಾಕೃತ್ಯಗಳನ್ನು ತಿಳಿದ ವಿವೇಕಶಾಲಿಯೇ, ನೀನೀ ಪರ್ವತವನ್ನು, ಕೀಳ ಬಹುದೇ? ನೀನು ಶಿವ ಭಕ್ತನು. ಶಿವನ ಹೆಂಡತಿಯಾದ ಪಾರ್ವತಿಯು ನಾನು ಹೆತ್ತ ಮಗಳು. ಸಕಲವನ್ನು ತಿಳಿದ ಪ್ರಾಜ್ಞನಿಗೆ ವಿಶೇಷವಾಗಿ ಹೇಳ ತಕ್ಕದ್ದಿಲ್ಲಾ ಎನಲು; ಜಾಂಬವಂತನು ಆಕೆಯನ್ನು ತಿರಿಗಿ ನೋಡಿ,—ನಾವು ಇದನ್ನು ಕಿತ್ತು, ಶಂಕರನ ಚಿತ್ತಕ್ಕೆ ವಿರೋಧವನ್ನು ಮಾಡುವದು ಅನುಚಿತವೆಂದು ಎಣಿಸಿ, ಆ ಗಿರಿಯನ್ನು ಅಲ್ಲಿರಿಸಿ, ಮೇನಕಿಯನ್ನು ಕುರಿತು—ನೀವು ತೆರಳಿ ಎಂದು, ಎರಡು ಕೈಗಳನ್ನು ಮುಗಿದು, ಕಳುಹಿಸಿ, ಅದರ ಸುತ್ತಣ ಗಿರಿಗಳನ್ನು ಕಿತ್ತು, ತಲೆಯ ಮೇಲೆ ಎಂಟದ್ರಿಯನ್ನೂ, ಎರಡು ಭುಜಗಳಲ್ಲಿ ನಾಲ್ಕು ನಾಲ್ಕು ಗಿರಿಗಳನ್ನೂ, ಕಂಕುಳುಗಳಲ್ಲಿ ಎರಡೆರಡು ಗಿರಿಗಳನ್ನೂ, ಅಂಗೈಗಳಲ್ಲಿ ಒಂದೊಂದು ಗಿರಿಯನ್ನೂ, ಧರಿಸಿ ಕೊಂಡು, ಎರಡು ಕಾಲುಗಳಲ್ಲಿ ಒಂದೊಂದು ಗಿರಿಯನ್ನು ಉರುಳಿಸಿ ಕೊಂಡು, ಸುರರು ಬೆರಗಾಗುತ್ತಿರಲು; ಶ್ರೀರಾಮನು ವಿಸ್ಮಿತನಾಗುತ್ತಿರಲು; ನಳನು ದೂರದಲ್ಲಿ ಕಂಡು, ಓಡಿ, ಜಾಂಬವಂತನ ಎದುರಿಗೆ ಬಂದು, ಅತಿ ಭಯ ಭಕ್ತಿಯಿಂದ ಅವನು ತಂದ ಗಿರಿಗಳನ್ನು ತೆಗೆದು ಕೊಂಡು, ತಾನು ಹೊತ್ತು ಕೊಂಡು ಹೋಗಿ, ಅವುಗಳನ್ನೆಲ್ಲಾ ಕಡಲಲ್ಲಿ ಹುದುಗಿಸಿ, ಸಂದಿ ಸಂದಿಗೆ ಚಿಕ್ಕ ಗಿರಿಗಳನ್ನು ಹರ್ವಿಸಿ, ಇದಿರು ಕಲ್ಲುಗಳ ಬೆಣೆಗಳನ್ನು ಹಾಕಿ, ಹತ್ತು ಯೋಜನ ಸೇತುವನ್ನು ಕಟ್ಟಿದನು. ಗವಯ, ದಧಿಮುಖ, ಕುಮುದ, ಮೈಂಧರೇ ಮೊದಲಾದ ಕಪಿಗಳು ತಂದ ಪರ್ವತಗಳಿಂದ ಮೂವತ್ತು ಯೋಜನ ಸೇತುವು ನಡೆಯಿತು. ಹೀಗೆ ಅರುವತ್ತು ಯೋಜನ ಸೇತುವು ಕಟ್ಟೆ ಆಯಿತು. ಲಂಕಾ ಪಟ್ಟಣಕ್ಕೆ ಶೇರ ಬೇಕಾದರೆ, ಇನ್ನು ನಾಲ್ವತ್ತು ಯೋಜನ ಸೇತು ನಡೆಯ ಬೇಕು.

ಕಪಿ ಪತಿಗಳೆಲ್ಲಾ ಬಹಳ ಶ್ರಮ ಪಟ್ಟು, ಕಂಗೆಟ್ಟಿದ್ದಾರೆ ಎಂದು, ದಯಾಳುವಾದ ಶ್ರೀರಾಮನು ಸುಗ್ರೀವ ವಿಭೀಷಣ, ಜಾಂಬವಂತರೊಡನೆ ಯೋಚನೇ ಮಾಡುತ್ತ, ಸಮೀಪದಲ್ಲಿ ಕಾಲನ್ನು ಒತ್ತುತ್ತಲಿರುವ ನಿಜ ದಾಸನಾದ ಹನುಮನ ಮುಖವನ್ನು ನೋಡಲು; ಝುಗ್ಗನೆ ಎದ್ದು, ಹನುಮಂತನು ಮೇರು ಪರ್ವತವಿದ್ದೆಡೆಗೆ ಹಾರಿ, ಅದರ ಬಳಿಯಲ್ಲಿ ನಿಂತು, ಆ ಗಿರಿಯನ್ನು ಬುಡದಿಂದ ಹಿಡಿದು ತುದಿಯ ವರಿಗೂ ಚನ್ನಾಗಿ ನೋಡಿ, ಇದು ಲಕ್ಷ ಯೋಜನ ಉದ್ದವೂ, ಲಕ್ಷ ಯೋಜನದಗಲವೂ ಆಗಿರುವದು. ಲವಣ ಸಮುದ್ರವು ಲಕ್ಷ ಯೋಜನದಗಲ

ವೂ ಲಕ್ಷ ಯೋಜನದುದ್ದವೂ ಆಗಿರುವದ್ದರಿಂದ, ಈ ಒಂದು ಗಿರಿಯನ್ನು ಕಿ
ತ್ತು ಕೊಂಡು ಹೋಗಿ, ಹಾಕಿದರೆ, ಉಪ್ಪಿನ ಕಡಲೇ ಹೂಳಿ ಹೋಗುವದೆಂದು
ಎಣಿಸಿ, ಆ ಗಿರಿಯು ತೋರ ಉದ್ದ ದಪ್ಪಗಳಿಗೆ ಸರಿಯಾಗಿ, ತನ್ನ ಶರೀರವನ್ನು
ಉದ್ದ ದಪ್ಪಗಳಾಗಿ ಬೆಳಸಿ, ತನ್ನ ಬಾಲವನ್ನು ಆ ಪರ್ವತಕ್ಕೆ ಮೂರು ಸುತ್ತು
ಸುತ್ತಿ, ಕೀಳಲು; ಕೆಳಗಣ ಏಳು ಲೋಕವೂ ಮೇಗಣ ಏಳು ಲೋಕವೂ ಅ
ಲ್ಲೋಲ ಕಲ್ಲೋಲವಾಗಿ, ಸತ್ಯ ಲೋಕದಲ್ಲಿ ಬ್ರಹ್ಮನು ತನ್ನ ಸಿಂಹಾಸನದಿಂದ
ಕೆಳಗೆ ಬಿದ್ದು—ಇದೇನಾಶ್ಚರ್ಯ? ಲೋಕಗಳಿಗೆ ಅವಸಾನ ಕಾಲವು ಅಕಾಲದಲ್ಲಿ
ಪ್ರಾಪ್ತವಾಗಿ ಇದೆ, ಎಂದು ಯೋಚಿಸುತ್ತ, ತನ್ನ ಜ್ಞಾನ ದೃಷ್ಟಿಯಿಂದ, ಇದು
ಮಹಾ ವಿಷ್ಣುವಿನ ಮನುಜ ಲೀಲಾ ನಟಣೆಯು. ಅದಲ್ಲದಿದ್ದರೆ, ಕೋಡಗಗಳಿ
ಗೆ ಇಷ್ಟು ಕಲಿತನವು ಎಲ್ಲಿ ಉಂಟಾಗುವದು? ಎಂದು, ಬೇಗನೆ ಹನುಮಂತನ
ಬಳಿಗೆ ಬಂದು—ಇದೇನಿದೇನುದ್ದಂಡತನ? ಮರ್ಕಟರ ಕಟಕದಲ್ಲಿ ನೀನು ಹುಚ್ಚ
ನೋ, ಮೂರ್ಖನೋ? ರಾಮನಿಗೆ ಹಗೆಯೋ, ಸೇವಕನೋ? ನೀ ಕೈ ಕೊಂ
ಡ ಕೆಲಸವು ಇದೇನು? ಹೇಳು! ನಾವು ಸ್ವಲ್ಪ ಕೇಳುವೆವು, ಎನಲು; ಹನುಮಂ
ತನು ಬ್ರಹ್ಮನನ್ನು ಕುರಿತು—ಹೇಳಿ, ನಾನು ಮಾಡುವದೇನು? ಕೇಳಿ, ನೀವು ಮಾ
ಡುವವೇನು? ನಮ್ಮೊಳಗದ ವಿಚಾರ ನಿಮಗೇಕೆ? ನಮ್ಮನ್ನು ಮಾತಾಡಿಸುವದ
ಕ್ಕೆ ನಿಮಗೆ ಬಾಧ್ಯತೆ ಏನು? ಅದು ಮುಂಚೆ ನೀವು ನನಗೆ ಹೇಳಿ ಎಂದು, ಬ್ರ
ಹ್ಮನನ್ನು ಗಣಿಸದೆ, ಬರ ಸೆಳೆದು, ಆ ಗಿರಿಯನ್ನು ಕೀಳುತ್ತಿದ್ದನು. ಮತ್ತೆ ಬ್ರ
ಹ್ಮನು—ನೀನು ಹುಡುಗನಾಗಿದ್ದೀ; ಸಿನಗೆ ಸ್ವಲ್ಪವಾದರೂ ಬುದ್ಧಿ ಇಲ್ಲ. ಈ ಗಿ
ರಿಯನ್ನು ಕಿತ್ತರೆ, ಸುರ ನರೋರಗರು ಮೊದಲಾದ ಜಗದ ಜನಗಳ ಜೀವ
ಜಾಲವೆಂಬ ಲತೆಯು ಕೀಳದಿರುವದೇ? ಧರ ಧರವಾದ ಲೋಕಗಳ ಸಾಲಿನ
ವಿಸ್ತಾರವಾದ ಸೂತ್ರದ ಕಂಭವು ಈ ಗಿರಿಯು. ನಿನ್ನೊಡೆಯನ ವೃದ್ಧಿಯನ್ನೇ
ನೀನು ವಿಚಾರಿಸದೆ ಹೋದೆ. ಈ ಗಿರಿಯನ್ನು ಕಿತ್ತರೆ, ಕಡಲೆಲ್ಲಿರುವದು? ನೀ
ನು ತಾನೆಲ್ಲಿರುವಿ? ನಿಮ್ಮರಸನೆಲ್ಲಿರುವನು? ಲಂಕೆ ಎತ್ತಿರುವದು? ಜಾನಕಿ ಎಲ್ಲಿ
ರುವಳು? ಹಗೆಗಳೆಲ್ಲಿರುವರು? ಛೀ! ಹೋಗೆಂದನು.

ಅದನ್ನು ಕೇಳಿ, ಹನುಮಂತನು ಬ್ರಹ್ಮನನ್ನು ಕುರಿತು—ನೀವು ಲೋಕಗಳ
ನ್ನು ನಿರ್ಮಿಸುವವರಾಗಿ, ಬಹು ಮುದುಕರಾಗಿದ್ದಾಗ್ಯೂ, ನಿಮ್ಮ ಬುದ್ಧಿ ವಿವೇಕ
ವು ಇಷ್ಟೇನೇ? ಈ ಸುರಾಚಲದ ವಿಚಾರವು ನನಗೆ ತಿಳಿದಿಲ್ಲ ಎಂದು ಹೇಳು
ತ್ತೀರೋ? ಈ ಮೇರು ಗಿರಿಯನ್ನು ಕಿತ್ತು, ಇದು ಧರಿಸಿರುವ ಲೋಕಗಳ
ನ್ನು ನನ್ನ ಬಾಲಗಳಿಂದ ಧರಿಸಿ, ಕೈ ಕಾಲು ಮೊದಲಾದ ಅಂಗಗಳಿಂದ ರಾಘವ

ನ ಸೇವೆಯನ್ನು ಮಾಡಿ, ಹಗೆಯಾದ ರಾವಣನನ್ನು ಕೊಂದ ಮೇಲೆ ತಿರಿಗಿ ಈ ಮೇರು ಗಿರಿಯನ್ನು ಅಲ್ಲಿಂದ ಕಿತ್ತು, ತಂದು, ಇಲ್ಲಿ ಇಟ್ಟು, ನನ್ನ ಬಾಲವನ್ನು ಬಿಡಿಸಿ ಕೊಂಡು, ಅಯೋಧ್ಯೆಗೆ ನಮ್ಮೊಡೆಯನ ಸೇವೆಗೆ ಹೋಗುವೆನು ಎಂದು, ನಾನು ಮೊದಲೇ ನಿಶ್ಚೈಸಿದ್ಧೇನೆ. ನಿಮ್ಮ ದಾರೀ ಹಿಡು ಕೊಂಡು, ನೀವು ಹೋಗಿ, ಎನಲು; ಬ್ರಹ್ಮನು ಆ ಮಾತಿಗೆ ಪ್ರತ್ಯುತ್ತರವನ್ನು ಹೇಳುವದಕ್ಕೆ ತೋಚದೆ, ಮೇರುವನ್ನು ಕೀಳುತ್ತಿರುವ ಹನುಮನ ಹೊಟ್ಟೆಯಲ್ಲಿ ತನ್ನ ನಾಲ್ಕು ಮುಖಗಳನ್ನು ಚಾಚಿ, ಆತನ ಕೈಯನ್ನು ಹಿಡಿದು ಕೊಂಡು, ದೀನತ್ವದಿಂದ–ಎಲೈ, ಹನುಮನೇ, ಕೇಳು! ನಿಮ್ಮರಸನಾದ ರಾಮನು ಈ ಕಲ್ಪಕ್ಕೆ ನನ್ನನ್ನು ಒಡೆಯನಾಗಿ ನೇಮಿಸಿರುವನು. ಮುಂದಣ ಕಲ್ಪಕ್ಕೆ ನಿನ್ನನ್ನು ಒಡೆಯನಾಗಿ ಕಟ್ಟು ಮಾಡಿರುವನು. ನಿನ್ನ ಅರಸುತನದಲ್ಲಿ ನಿನ್ನ ಮನ ಬಂದಂತೆ ಮಾಡು. ನನ್ನ ಅಧಿಕಾರದಲ್ಲಿ ಸರ್ವರಂತೆ ನೀನು ನಮ್ಮ ಮಾತನ್ನು ಮನ್ನಿಸು, ಎಂದು ಹೇಳಿ, ತಬ್ಬಿ ಕೊಂಡನು. ಆಗ ಹನುಮಂತನು–ಆದರೆ ಇದೊಂದು ಸಾರಿ ನಿಮ್ಮಪ್ಪಣೆಯನ್ನು ಮನ್ನಿಸುವೆನು. ನೀವು ಬಿಜಯ ಮಾಡಿರಿ. ನಿಮ್ಮೊಡನೆ ನನಗೆ ವಾದವೇಕೆ? ನೀವು ನನಗೆ ನಮ್ಮೈಯನ ಹಾಗೆ. ನಾನು ಇಷ್ಟುಪದ್ರದ ಹಾದಿಯವನಲ್ಲ ಎನುತ್ತ, ಎತ್ತಿದ ಸುರ ಗಿರಿಯನ್ನು ಓಸರ ಬಾರದಂತೆ ಇಟ್ಟು, ಅದರ ಚಿನ್ನದ ಶಿಖರ ಒಂದನ್ನು ಕಿತ್ತು ಕೊಂಡು, ನಡೆಯುವ ಗಿರಿಯೋಪಾದಿಯಲ್ಲಿ ಬಂದು, ನಳನ ಕೈಗೆ ಕೊಡಲು; ಉಳಿದಿದ್ದ ನಾಲ್ವತ್ತು ಯೋಜನ ಸೇತುವು ನಡೆದು, ನಳನಿಂದ ನೂರು ಯೋಜನ ಸೇತುವು ಕಟ್ಟಿ ಮುಗಿಯಿತು. ಆಗ ಹನುಮಂತನು ಶ್ರೀರಾಮನ ಸನ್ನಿಧಿಗೆ ಬಂದು, ನಮಸ್ಕರಿಸಿ–ಎಲೈ, ಕರುಣಾ ಜಲಧಿಯೇ, ಸೇತು ಸಂಪೂರ್ಣವಾಗಿ ಕಟ್ಟಿ ಆಯಿತು. ನೋಡಲಿಕ್ಕೆ ಚಿತ್ತೈಸಬೇಕೆಂದು, ಬಿನ್ನವಿಸಿದನು.

ಆಗ ಶ್ರೀರಾಮನು ಸುಗ್ರೀವನ ಕೈಯನ್ನು ಹಿಡಿದು, ಸಿಂಹ ಪೀಠವನ್ನು ಇಳಿದು, ಸುರರು–ಜಯ, ಜಯ ಎನಲು; ಸುರ ಮುನಿಗಳು ಸ್ತುತಿಸಲು; ವಿದ್ಯಾಧರರು ಹೊಗಳಲು; ಸೂತ ಮಾಗಧರು ಬಿರಿದನ್ನು ಹೇಳುತ್ತಿರಲು; ಹನುಮನು–ಧೀರುರೇ! ಪಾಯವಧಾರ! ಎನುತ್ತಿರಲು; ಸೇತುವಿನ ಬಳಿಗೆ ಬಂದು, ನಿಂತು–ಹಗೆಯಾದ ರಾವಣನನ್ನು ಎಳೆದು ಕೊಂಡು ಹೋಗುವ ಬಗ್ಯೆ ನೀಡಿದ ಮೃತ್ಯುವಿನ ಕೈಯೋ? ಕಪಿಗಳ ಬಲ ಪರಾಕ್ರಮದ ಶಿಲಾಶಾಸನವೋ? ರಾಘವನ ಕೀರ್ತಿ ಎಂಬ ಕಾಂತೆಯ ಬೈತಲೆಯೋ? ರಾವಣನ ವಿಜಯಕ್ಕೆ ದಯಮಾಡುವ ರಾಘವನಿಗೆ ಬ್ರಹ್ಮನೆಂಬ ಅಗಸನು ಹಾಸಿದ ನಿರ್ಮಲವಾದ ನಡೆ ಮು

ಡಿಯ ಸೀರೆಯೋ? ಮೂರು ಲೋಕದ ದೇವರನ್ನು ಸಮುದ್ರನು ಭಜಿಸಿ, ಹಣೆಯಲ್ಲಿಟ್ಟ ತಿಲಕವೋ? ಎಂಬ ಹಾಗಿರುವ, ನಳ ಕಟ್ಟಿದ ಸೇತುವನ್ನು ನೋಡಿ, ನಳನನ್ನು ಆಲಿಂಗನೆ ಮಾಡಿ ಕೊಂಡು, ಬಹಳವಾಗಿ ಮೆಚ್ಚಿ, ಆ ನಳನಿಗೆ ಮುಂದಣ ಇಂದ್ರ ಪದವಿಯನ್ನು ಕೊಟ್ಟನು. ಆಗ ರಘುಪತಿಯು ಲಂಕಾ ಪ್ರಯಾಣಕ್ಕೆ ಸನ್ನದ್ಧನಾಗಲು; ಕಪಿ ಬಲದ ಮುಂಗಡೆಯ ಆರೈಕೆಯು ನೀಲನಿಗೂ, ಹಿಂಗಡೆಯ ಕಾವಲು ಸುಷೇಣನಿಗೂ, ಮೇಲಾರೈಕೆಯು ನಳ, ಶತಬಲಿ, ಗವಾಕ್ಷರಿಗೂ, ಹಗೆಗಳು ಬಾರದಂತೆ ಎಚ್ಚರದಿಂದ ನೋಡುವಿಕೆಯು ವಿಭೀಷಣನಿಗೂ, ಆಯಿತು. ಕಪಿ ಬಲ ಸಮೇತನಾಗಿ, ಗೋ ಧೂಳೀ ಲಗ್ನದಲ್ಲಿ ಶ್ರೀರಾಮನು ಲಂಕಾ ಪಟ್ಟಣದ ಬಳಿಗೆ ಬಂದು, ಪಾಳಯವನ್ನು ಬಿಡಿಸಿದನು.

71. The Battle of Lanka—Death of Kumbhakarna.

೭೧. ಕುಂಭಕರ್ಣನ ಸಂಹಾರ.

ಲಂಕಾ ಪಟ್ಟಣದಲ್ಲಿ ರಾವಣನು ಓಲಗ ಚಾವಡಿಯಲ್ಲಿ ಒಡ್ಡೋಲಗವನ್ನು ಕೊಡುತ್ತಿರಲು; ಬೇಹಿನವರು ಬಂದು—ಜೀಯಾ, ರಾಕ್ಷಸೇಂದ್ರನೇ, ರಾಮನು ಸಮುದ್ರದಲ್ಲಿ ಹತ್ತು ಯೋಜನದಗಲವಾಗಿಯೂ ನೂರು ಯೋಜನದುದ್ದವಾಗಿಯೂ ಸೇತುವನ್ನು ನಳನೆಂಬ ಕಪಿಯಿಂದ ಕಟ್ಟಿಸಿ, ಸಕಲ ಕಪಿ ಬಲ ಸಮೇತನಾಗಿ ಸಮುದ್ರವನ್ನು ದಾಟಿ, ಲಂಕಾ ಪಟ್ಟಣದ ಒತ್ತಿನಲ್ಲಿರುವ ಸುವೇಲವೆಂಬ ಪರ್ವತದಲ್ಲಿ ಪಾಳಯವನ್ನು ಬಿಡಿಸಿ ಕೊಂಡು, ಇಳಿದು ಇದ್ದಾನೆ, ಎಂದು ಹೇಳಲು; ರಾವಣನು ಮನಸ್ಸಿನಲ್ಲಿ ಆತಂಕ ಪಟ್ಟು, ತನ್ನ ಸರ್ವ ಸೇನಾ ಪತಿಯಾದ ಪ್ರಹಸ್ತನನ್ನು, ಅನೇಕ ಚತುರಂಗ ಬಲ ಸಹಿತವಾಗಿ, ಲಂಕೆಯ ಮೂಡಣ ದಿಕ್ಕಿನ ಬಾಗಿಲಿನಲ್ಲಿಯೂ; ದೇವಾಂತಕ, ನರಾಂತಕ, ತ್ರಿಶಿರ, ಅತಿಕಾಯ, ಕುಂಭ, ನಿಕುಂಭ, ಮಕರಾಕ್ಷ, ಮೊದಲಾದ ಮಕ್ಕಳನ್ನು, ಅನೇಕ ಬಲ ಸಹಿತವಾಗಿ, ತೆಂಕಣ ದಿಕ್ಕಿನ ಬಾಗಿಲಿನಲ್ಲಿಯೂ; ಶೂರನಾದ ಇಂದ್ರಜಿತುವನ್ನು, ಅಪರಿಮಿತ ಸೇನೆಯೋಡನೆ ಕೂಡಿ, ಪಡುವಣ ದಿಕ್ಕಿನ ಬಾಗಿಲಿನಲ್ಲಿಯೂ ಕಾವಲಿಟ್ಟು, ತಾನು ಬಹು ಜನ ರಾಕ್ಷಸ ಭಟರೊಡನೆ ಕೂಡಿ, ಬಡಗಣ ದಿಕ್ಕಿನ ಬಾಗಿಲಿನಲ್ಲಿ ನಿಂತು,—ಯುದ್ಧಕ್ಕೆ ಬರ ಹೇಳಿ, ರಾಮನ ಬಳಿಗೆ ದೂತರನ್ನು ಅಟ್ಟಲು; ಅವರು ರಾಮನ ಸನ್ನಿಧಾನಕ್ಕೆ ಬಂದು, ಆ ವಿವರವನ್ನು ಹೇಳಲು; ರಾಮನು—ಒಳ್ಳೇದು, ಬರುತ್ತೇವೆಂದು ಹೇಳಿ ಕಳುಹಿಸಿ; ಆ ರಾವಣನು ನಾಲ್ಕು ದಿಕ್ಕಿನ ಬಾಗಿಲುಗಳಲ್ಲಿಯೂ ಪ್ರಹಸ್ತಾದಿಗಳ ಕಾವಲನ್ನಿಟ್ಟು ಇರುವದನ್ನು ತಿಳಿದು,

ಪ್ರಹಸ್ತನಿಗೆ ಎದುರಾಗಿ ತಮ್ಮ ಸರ್ವ ಸೇನಾಪತಿಯಾದ ನೀಲನನ್ನೂ, ದೇವಾಂತ
ಕ ಮೊದಲಾದವರಿಗೆ ಎದುರಾಗಿ ವಾಲಿಯ ಮಗನಾದ ಅಂಗದನನ್ನೂ, ಇಂದ್ರ
ಜಿತುವಿಗೆ ಎದುರಾಗಿ ಪರಾಕ್ರಮಶಾಲಿಯಾದ ಲಕ್ಷ್ಮಣನನ್ನೂ ನೇಮಿಸಿಟ್ಟು,
ರಾವಣನಿಗೆ ಎದುರಾಗಿ ತಾನೇ ನಿಂತು, ಲಂಕೆಯನ್ನು ಲಗ್ಗೇ ಹತ್ತುವ ಹಾಗೆ
ಸುಗ್ರೀವನಿಗೆ ಅಪ್ಪಣೇ ಕೊಡಲು; ಸುಗ್ರೀವನು ಸಕಲ ಸೇನಾ ಸಮೇತನಾಗಿ
ಲಂಕೆಯನ್ನು ಮುತ್ತಿ ಕೊಂಡನು.

ಆಗ ರಾವಣನ ಅಪ್ಪಣೆಯಿಂದ ರಾಕ್ಷಸರು ಯುದ್ಧಕ್ಕೆ ಹೊರಟು, ಕಪಿ
ರಾಕ್ಷಸರಿಗೆ ಬಹಳ ಯುದ್ಧಗಳಾಗಿ, ರಾಕ್ಷಸರ ಸೇನೆಯಲ್ಲಿಯೂ ಕಪಿಗಳ ಸೇನೆ
ಯಲ್ಲಿಯೂ ಅನೇಕ ಜನರೂ, ಬಹಳ ಆನೆಗಳೂ, ಅಪರಿಮಿತವಾದ ಕುದು
ರೆಗಳೂ, ಅನೇಕ ರಥಗಳೂ ನಾಶನವಾಗಿ, ರಕ್ತದ ಕೋಡಿಯು ಹರಿಯಿತು.
ಆಗ ಶರಣಾಗತನಾದ ವಿಭೀಷಣನು ಶೂರನಾದ ಮಿತ್ರಘ್ನನೆಂಬ ರಾಕ್ಷಸನನ್ನು
ಸಂಹಾರಾ ಮಾಡಲು; ಅದನ್ನು ಕೇಳಿ, ಆ ರಾತ್ರಿಯಲ್ಲಿ ಇಂದ್ರಜಿತುವು ಮಹಾ
ಕೋಪಿಷ್ಠನಾಗಿ, ಧನುರ್ಬಾಣಗಳನ್ನು ತೆಗೆದು ಕೊಂಡು, ಈಶ್ವರನ ವರ
ದಿಂದ ಪಡೆದಿರುವ ರಥವನ್ನೇರಿ, ತಾಮಸಿ ಎಂಬ ಮಾಯೆಯನ್ನು ಕೈ ಕೊಂ
ಡು, ಕಪಿ ಬಲವನ್ನು ಹೊಕ್ಕು, ಹಗೆಗಳಿಗೆ ಕಾಣಿಸಿ ಕೊಳ್ಳದೆ, ಸಿಡಿಲಿನಂತೆ
ಸಿಂಹ ಘರ್ಜನೆಯನ್ನು ಮಾಡಲು; ಆ ಇಂದ್ರಜಿತುವಿನ ಬೊಬ್ಬೆಯ ಆರ್ಭಟೆ
ಯು ಸುಗ್ರೀವಾದಿ ನಾಯಕರನ್ನು ಅಳುಕಿಸಿತು. ಆಗ ಕಪಿಗಳು—ಎಲೈ, ಖ
ಳರು ಕವಿದು ಕೊಲ್ಲುತ್ತಿರುವರು! ಏಳಿ! ಏಳಿ! ಎನುತ್ತ, ತೋರವಾದ ಗಿರಿಗ
ಳನ್ನೂ ದೊಡ್ಡದಾದ ಮರಗಳನ್ನೂ ಕೈಯಲ್ಲಿ ತೆಗೆದು ಕೊಂಡು, ಹಗೆಗಳಾದ
ರಕ್ಕಸರನ್ನು ಕಾಣದೆ, ಬೆದಕುತ್ತಿದ್ದರು. ವಿಭೀಷಣನು ತನ್ನ ಮನಸ್ಸಿನಲ್ಲಿ—
ಇದು ಇಂದ್ರಜಿತುವಿನ ಮರೆಯ ಮಾಯಾ ಯುದ್ಧವೆಂದು ತಿಳಿದು, ಇವನಿಂದ
ಈ ರಾತ್ರಿಯಲ್ಲಿ ನಮಗೆ ಅಪಾಯವು ತಪ್ಪದೆ ಇರದೆಂದು ಮರುಗುತ್ತಾ, ಸು
ಗ್ರೀವನೆಡೆಗೆ ಬಂದು—ಎಲೈ, ಕಪಿ ರಾಜನೇ, ರಾಮ ಲಕ್ಷ್ಮಣರ ಮೈಗಾವ
ಲಿಗೆ ನೀಲಾಂಗದರನ್ನು ಇರಿಸು. ಸುಷೇಣ ಜಾಂಬವಂತರನ್ನು ಮೇಲಾರೈಕೆಗೆ
ನಿಲ್ಲಿಸು. ಮಿಕ್ಕ, ನಳ, ಕೇಸರಿ, ಗವಾಕ್ಷ, ದ್ವಿವಿದ, ದುರ್ಮುಖ, ಶರಭ, ಶತ
ಬಲಿ, ಹನುಮ, ಮೊದಲಾದವರನ್ನು ಧುರಕ್ಕೆ ಶೇರಿಸು. ಇಗೋ, ಈ ಮೊ
ಳಗುವವನು ಇಂದ್ರಜಿತುವು. ಕತ್ತಲೆಯ ಕದನದವನು; ಮಾಯೆಯಲ್ಲಿ ಸಮ
ರ್ಥನು. ಈ ಸುದ್ದಿಯನ್ನು ರಾಮ ಲಕ್ಷ್ಮಣರಿಗೆ ಬೇಗ ತಿಳಿಸು ಎಂದು ಹೇಳಿ,
ತನ್ನ ನಾಲ್ಕು ಜನ ಮಂತ್ರಿಗಳು ಸಹಿತವಾಗಿ ಆಕಾಶಕ್ಕೆ ಹಾರಿ, ಇಂದ್ರಜಿತು

ವಿನ ಮೇಲೆ ಬಾಣಗಳನ್ನು ಸುರಿಸಲು; ಇಂದ್ರಜಿತುವು ಆ ಬಾಣಗಳನ್ನೆಲ್ಲಾ ತುಮುರು ತುಮುರಾಗಿ ಮಾಡಿ, ವಿಭೀಷಣನನ್ನು ಬಾಣದ ಕಡಲೊಳಗೆ ಮುಳುಗಿಸಿ, ಅವನ ನಾಲ್ಕು ಮಂತ್ರಿಗಳನ್ನು ಅಂಬುಗಳಿಂದ ಹೂಳಿದನು. ವಿಧಿ ಶಿವರು ಕೂಡ ಇಂದ್ರಜಿತುವಿನೊಡನೆ ಯುದ್ಧದಲ್ಲಿ ತೊಡಕಿ, ನಿಲ್ಲಲಾರರು. ಎಂಥಾ ವೀರನೋ! ಕಪಿಗಳ ಪಡೆಯ ಮೇಲೆ ಎಡೆಬಿಡದೆ ಬಾಣಗಳು ಬೀಳುತ್ತಿದ್ದವು. ಹಾಗೆ ಬೀಳುವ ಬಾಣಗಳೊಂದೊಂದಕ್ಕೆ ಒಂದೊಂದು ಕಪಿಯ ಹೆಣವು ಬೀಳುತ್ತಿತ್ತು. ಒಂದು ದೆಸೆಯಲ್ಲಿ ಇಂದ್ರಜಿತುವಿನ ತೇರಿನ ಚೀತ್ಕಾರವೂ, ಮತ್ತೊಂದು ದೆಸೆಯಲ್ಲಿ ರಥಾಶ್ವಗಳ ಹೇಷಾ ರವವೂ, ಇನ್ನೊಂದು ಬಳಿಯಲ್ಲಿ ಬಿಲ್ಲಿನ ರಭಸವೂ, ಬೇರೆ ಒಂದು ದಿಕ್ಕಿನಲ್ಲಿ ಇಂದ್ರಜಿತುವಿನ ಸಿಂಹನಾದವೂ ಕೇಳಿಸುತ್ತ, ಇಂಥಾ ಕಡೆಯಲ್ಲಿ ಇರುವನೆಂದು, ಗೋಚರಿಸದೆ, ಕಪಿ ಬಲಗಳನ್ನು ಕಾಲ ಯಮನಪ್ಪಂದ ಕೊಲ್ಲುತ್ತಿದ್ದನು.

ಗವಯ, ಗಜ, ನೀಲ, ಮೊದಲಾದ ಕಪಿ ಸೇನಾ ನಾಯಕರು ಹಗೆ ಇರುವ ಎಡೆಯನ್ನು ಕಾಣದೆ, ಗಿರಿ ತರುಗಳನ್ನು ಎಸೆಯುತ್ತಾ, ಆಕಾಶವನ್ನು ತುಂಬಿದರು. ರಾವಣಿಯು ಆಗ ಕಪಿ ಸೇನಾ ನಾಯಕರೆಲ್ಲರನ್ನು ಸರಳುಗಳ ಸುರಿದು, ನೆಲದಲ್ಲಿ ಒರಗಿಸಿ, ರಾಮ ಲಕ್ಷ್ಮಣರ ಸಮೀಪಕ್ಕೆ ಬಂದು, ಅವರ ಮೇಲೆ ಬಾಣಗಳನ್ನು ಸುರಿಯುತ್ತಿರಲು; ಕಪಿ ಭಟರೊಳಗೆ ಒಡೆಯನ ಮೈ ಆರೈಕೆಯು ಹನುಮನಿಗೆ ಎಷ್ಟು ಮಿಗಿಲೋ! ಆ ರಾವಣಿಯ ಬಿಲ್ಲಿನ ಧ್ವನಿಯ ಜಾಡೆಯನ್ನು ತಿಳಿದು, ಗರುಡನಂತೆ ಆಕಾಶಕ್ಕೆ ಹಾರಿ, ಅರಿ ಭಟನನ್ನು ಒದೆಯಲು; ಆ ರಾವಣಿಯು ಮಾಯೆಯಿಂದ ರಥದ ಆಚೆಗೆ ಹಾರಿ ಹೋದನು. ರಥವು ಭೂಮಿಯಲ್ಲಿ ನುಚ್ಚು ನೂರಾಗಿ ಉದುರಿತು. ಆಗ ಮತ್ತೊಂದು ರಥವನ್ನೇರಿ, ಹನುಮನ ಮೈಯೊಳಗೆ ಎಡೆ ಬಿಡದಂತೆ ಬಾಣಗಳನ್ನು ತಗುಲಿಸಿ, ತಿರಿಗಿ ರಾಮನ ಮೇಲೆ ಕಣೆಗಳನ್ನು ಕವಿಸುತ್ತಿರಲು; ರಾಮನು ದಿವ್ಯಾಸ್ತ್ರಗಳನ್ನು ತೊಟ್ಟು, ಅವನ ಬಾಣಗಳು ಬರುವ ದಾರಿಯಲ್ಲಿಯೇ ಬಾಣಗಳನ್ನು ಹೊಡೆದು, ಆತನ ರಥಾಶ್ವ, ಸಾರಥಿ, ಪತಾಕೆಗಳನ್ನು ಕತ್ತರಿಸಲು; ಆಗ ರಾವಣಿಯು—ನಾನು ಹಿಂದೆ ಜಗಳವಾಡಿದ ಸುರಾಸುರ ಯಕ್ಷ ಕಿನ್ನರಾದಿಗಳಲ್ಲಿ ಇಂಥಾ ಕಲಿ ಪರಾಕ್ರಮಿಯಾದ ಶೂರನನ್ನು ಕಾಣೆನು. ಆದ್ದರಿಂದಲೇ ಖರ ದೂಷಣಾದಿಗಳನ್ನೂ ವಾಲಿಯನ್ನೂ ಕೊಂದನು ಎಂದು, ರಾಮನನ್ನು ಹೊಗಳುತ್ತ, ಮತ್ತೆ ರಾಮನ ಮೇಲೆ ಬಾಣಗಳ ಮಳೆಯನ್ನು ಕರೆಯಲು; ಶ್ರೀರಾಮನು ತಿರಿಗಿ ಬಾಣಗಳನ್ನು ಪ್ರಯೋಗಿಸಿದನು. ಆ ಬಾಣಗಳು ರಾವಣಿಯ

ಬಾಣಗಳನ್ನು ಕತ್ತರಿಸಿ, ಆತನ ಮೈಯಲ್ಲಿ ರಕ್ತ ಪ್ರವಾಹವನ್ನು ಹರಿಸಿ, ಸಕಲ ದಿಕ್ಕಿನಲ್ಲಿಯೂ ಮುತ್ತಿ ಕೊಂಡು, ಆತನ ರಥಾಶ್ವಗಳನ್ನು ರಕ್ತಗಳನ್ನು ಕಾರಿಸಿ, ಇಂದ್ರಜಿತುವಿನ ಛತ್ರಿ, ಚಾಮರ, ಸೀಗುರಿ, ಪತಾಕೆಗಳನ್ನು ಕೆಡವಿದವು. ರಾವಣಿಯು ತಲೆಯನ್ನು ತೂಗಿ,—ಅಮಮಾ! ಈ ಧನುರ್ವಿದ್ಯಾ ಪ್ರಾಢಿಯು ಮೂರು ಕಣ್ಣುಳ್ಳ ಪರಮೇಶ್ವರನಿಗೂ ಇಲ್ಲ. ಈತನು ಸಾಧಾರಣವಾದ ಮನುಜನಲ್ಲ. ಮಹಾ ವಿಷ್ಣುವೇ ರಾಮನಾಗಿ ಹುಟ್ಟಿದನೆಂದು, ಜನರು ಹೇಳುವದು ನಿಜವೇ, ಸರಿ! ಎಂದು ತಿಳಿದು, ಶಿವನು ತನಗೆ ಕೊಟ್ಟ ಸರ್ಪಾಸ್ತ್ರವನ್ನು ತಿರುವಿನಲ್ಲಿ ಹೂಡಿ, ರಾಮನ ಬಲದ ಮೇಲೂ ರಾಮನ ಮೇಲೂ ಪ್ರಯೋಗಿಸಲು; ಎಂಟು ಕುಲದ ಹಾವುಗಳ ತಂಡಗಳು ಕಪಿ ಬಲವನ್ನೂ ರಾಮ ಲಕ್ಷ್ಮಣರುಗಳನ್ನೂ ಮುತ್ತಿ ಕೊಂಡು, ಕಚ್ಚಿ, ವಿಷ ಜ್ವಾಲೆಗಳಿಂದ ಕಪಿ ಬಲಗಳನ್ನು ಮೂರ್ಛೆಗೊಳಿಸಿ, ರಾಮ ಲಕ್ಷ್ಮಣರುಗಳನ್ನು ಕೂಡ ಮೂರ್ಛೆ ಹೊಂದಿಸಿದವು. ಆಗ ಇಂದ್ರಜಿತುವು ಜಯ ಭೇರಿಯನ್ನು ಹೊಡಿಸಿ, ಲಂಕಾ ಪಟ್ಟಣಕ್ಕೆ ಹೋಗಿ, ತನ್ನ ಜಯದ ಸುದ್ದಿಯನ್ನು ತಂದೆಗೆ ನಮಸ್ಕರಿಸಿ ಹೇಳಲು; ರಾವಣನು ಸಂತೋಷವೆಂಬ ಸಮುದ್ರದಲ್ಲಿ ಮುಳುಗಿ, ಇಂದ್ರಜಿತುವನ್ನು ಆಲಿಂಗಿಸಿ ಕೊಂಡನು.

ಇತ್ತಲು, ರಾಮನ ದಂಡಿನಲ್ಲಿ ಸುಗ್ರೀವ, ಹನುಮ, ನೀಲ, ನಳ, ಜಾಂಬವಾದಿಗಳು ರಾಮನನ್ನು ನೋಡಿ, ಕಣ್ಣೀರುಗಳನ್ನು ಸುರಿಸುತ್ತ, ರಾಮ ಲಕ್ಷ್ಮಣರ ಸುತ್ತು ಮುತ್ತು ಕುಳಿತಿರಲು; ಆಗ ಜಾಂಬವಂತನು ಸುಷೇಣನನ್ನು ನೋಡಿ—ಎಲೈ, ಕಪೀಂದ್ರನೇ, ನಿನಗೆ ವೈದ್ಯ ಶಾಸ್ತ್ರದಲ್ಲಿ ತುಂಬ ಅಭ್ಯಾಸ ಉಂಟಲ್ಲ? ದೇವೇಂದ್ರನ ಮನೆಯ ವೈದ್ಯ ಧನ್ವಂತರಿಯ ಮಗನಷ್ಟೆ! ರಾಮ ಲಕ್ಷ್ಮಣರನ್ನು ನೋಡು! ಎನಲು; ಸುಷೇಣನು ಆಗ ರಾಮ ಲಕ್ಷ್ಮಣರನ್ನು ನೋಡಿ, ಜಾಂಬವಂತನನ್ನು ಕುರಿತು—ಬಡಗ ದಿಕ್ಕಿನಲ್ಲಿ ಮೇರು ಪರ್ವತದ ಹಾದಿಯಲ್ಲಿ ಹರಿದಶ್ವವೆಂಬ ಬೆಟ್ಟದ ತುದಿಯಲ್ಲಿ, ನಾಲ್ಕು ವಿಧಗಳಾದ ಔಷಧಿಗಳುಂಟು. ಅವುಗಳನ್ನು ಬೇಗ ತಂದರೆ, ನೀವೇ ನಿಶಾಚರರ ಪಡೆಯನ್ನು ತಿಂದವರು, ರಾವಣನನ್ನು ಕೊಂದವರು, ವಿಭೀಷಣನಿಗೆ ಲಂಕಾ ರಾಜ್ಯ ಪಟ್ಟಾಭಿಷೇಕವನ್ನು ಮಾಡಿಸಿದವರು, ಎಂದು ಹೇಳಲು; ಹನುಮಂತನು ಆ ಮದ್ದುಗಳನ್ನು ತರುವದಕ್ಕೆ ಜಾಂಬವಾದಿಗಳಿಗೆ ನಮಸ್ಕರಿಸಿ, ಸನ್ನದ್ಧನಾದನು.

ಅಷ್ಟರಲ್ಲಿಯೇ ಋಗ್ವೇದ ಮಯವಾದ ಬಲದ ಗರಿಯೂ, ಸಾಮ ವೇದ ಮಯವಾದ ಮುಖ ಮಂಡಲವೂ, ಯಜುರ್ವೇದ ಮಯವಾದ ಎಡದ ಗರಿಯೂ, ಉಪ

ನಿಷದ್ವಿಕಾರವಾದ ಒಡಲೂ ಉಳ್ಳ ಗರುಡನು ಚಂದ್ರ ಮಂಡಲದ ಬಳಿಯಿಂದ ಆ ರಣ ಭೂಮಿಗೆ ಇಳಿದು ಬರುತ್ತಿರಲು; ಆ ಗರುಡನ ಗರಿಯ ಘಾಳಿಗೆ ಸಮುದ್ರದ ತುಂತುರು ಹನಿಗಳು ಅಂಬರದಲ್ಲಿ ತುಂಬಿದವು. ಮಂದರ, ಮೇರು, ವಿಂಧ್ಯಾದ್ರಿಗಳು ಅಲುಗಿದವು. ವಾಸುಕಿ, ತಕ್ಷಕ, ಮಹಾ ಶೇಷರುಗಳ ವೈಸಿರಿಗಳು ಉಡುಗಿದವು. ಬಣಗು ಹಾವುಗಳಲ್ಲಿ ಒಂದನ್ನಾದರೂ ಗರುಡನ ಮುಂದೆ ಕಾಣೆನು. ಗರಿಯ ಘಾಳಿಯ ಗಾವಲಿಗೆ ಕೆಲವು ಹಾವುಗಳು ಅಸುಗಳನ್ನು ತೊರೆದು, ಸತ್ತವು. ಕೆಲವು ಹಾವುಗಳು ನೆಲನನ್ನು ಕೊರೆದು ಕೊಂಡು, ಹೊಕ್ಕವು. ಕೆಲವು ಕಡಲಲ್ಲಿ ಅಡಗಿದವು. ಕೆಲವು ಮುರಿದು, ಕೆಟ್ಟು, ಓಡಿದವು. ಕೆಲವು ಹುತ್ತಗಳನ್ನು ಅರಸಿದವು. ಕೆಲವು ಗರುಡನ ಕಣ್ಣಿಗೆ ಸಿಕ್ಕಿ, ಸುಟ್ಟು, ಕರಿಗಳಾದವು. ಆಗ ಶ್ರೀರಾಮನೂ ಲಕ್ಷ್ಮಣನೂ ಕಣ್ಣು ತೆರೆದು, ನಸು ನಗುತ್ತ, ವಿಹಗೇಂದ್ರನನ್ನು ನೋಡಿದರು. ಮತ್ತು ಸಮಸ್ತವಾದ ಕಪಿ ಬಲಗಳು, ಸರ್ಪಗಳೆಲ್ಲಾ ಬಿಟ್ಟು, ಓಡಿ ಹೋಗಲು; ಮೂರ್ಛೆಯಿಂದ ಎಚ್ಚತ್ತು, ಶ್ರೀರಾಮನಿಗೆ ನಮಸ್ಕರಿಸಿ, ಮೃತ್ಯುವಿನ ದಂಡಿನಂತೆ ಲಂಕೆಗೆ ಲಗ್ಗೆಯನ್ನು ಹತ್ತಿ, ರಾಕ್ಷಸರನ್ನು ಕೊಲ್ಲುತ್ತಿರಲು; ರಾವಣನು ಚಿಂತಾಕ್ರಾಂತನಾಗಿ, ಧೂಮ್ರಾಕ್ಷ ವಜ್ರದಂಷ್ಟ್ರರೆಂಬ ರಾಕ್ಷಸ ಶ್ರೇಷ್ಠರನ್ನು ಜಗಳಕ್ಕೆ ಕಳುಹಿಸಲು; ಹನುಮಂತನು ಧೂಮ್ರಾಕ್ಷನನ್ನೂ, ಅಂಗದನು ವಜ್ರದಂಷ್ಟ್ರನನ್ನೂ ಕೊಂದು, ಅವರ ಕೂಡ ಬಂದಿದ್ದ ರಾಕ್ಷಸರ ಚತುರಂಗ ಬಲದಲ್ಲಿ ಒಂದುಳಿಯದಂತೆ ಸವರಿದರು. ಆ ಸುದ್ದಿಯನ್ನು ರಾವಣನು ಕೇಳಿ, ಅಪರಿಮಿತ ಬಲ ಸಹಿತ ಅಕಂಪನೆಂಬ ಘೋರ ಪರಾಕ್ರಮಿಯಾದ ರಾಕ್ಷಸನನ್ನು ಕಳುಹಿಸಲು; ಆತನನ್ನು ಅವನ ಬಲದೊಡನೆ ಕೂಡಿ, ಅನಿಲ ಸುತನು ಅಂತಕ ನಗರಿಗೆ ಕಳುಹಿಸಲು; ತಿರಿಗಿ ರಾವಣನು ತನ್ನ ಸರ್ವಸೇನಾ ಪತಿಯಾದ ಪ್ರಹಸ್ತನನ್ನು ಯುದ್ಧಕ್ಕಟ್ಟಿದನು. ಅವನನ್ನು ಕಪಿ ಸೇನಾಪತಿಯಾದ ನೀಲನು ಕಾಲನ ಪುರಿಗೆ ಓಡಿಸಿದನು.

ಆ ಬಳಿಕ ರಾವಣನು ಮಹಾ ಕೋಪಾವಿಷ್ಟನಾಗಿ, ದೇವಾಂತಕ, ನರಾಂತಕ, ತ್ರಿಶಿರ, ಅತಿಕಾಯ, ಮೊದಲಾದ ತನ್ನ ಮಕ್ಕಳೊಡನೆಯೂ, ಅನೇಕ ಸೇನಾಪತಿಗಳೊಡನೆಯೂ, ಕುಂಭ ನಿಕುಂಭರೆಂಬ ಕುಂಭಕರ್ಣನ ಮಕ್ಕಳೊಡನೆಯೂ ಕೂಡಿ, ರಥಾರೂಢನಾಗಿ, ಯುದ್ಧಕ್ಕೆ ಬರಲು; ಆಗ ರಾಮ ಲಕ್ಷ್ಮಣರು ಸುಗ್ರೀವ ಮೊದಲಾದ ಕಪಿ ಸೇನಾಪತಿಗಳೊಡನೆ ಕೂಡಿ ಬಂದು, ಯುದ್ಧವನ್ನು ಮಾಡಿ, ರಾವಣನೊಡನೆ ಬಂದಿದ್ದ ಸರ್ವರನ್ನು ಸಂಹರಿಸಿದರು. ರಾಮನು ರಾವಣನ ರಥವನ್ನು ಕತ್ತರಿಸಿ, ಕವಚ ಕಿರೀಟ ಬಿಲ್ಲುಗಳನ್ನು ಕಡಿದು,

ಬಲ ಗುಂದಿದ ರಾವಣನನ್ನು ನೋಡಿ—ಎಲೈ, ಕಳ್ಳನೇ, ಈಗ ನೀನು ಬಹಳ ನೊಂದಿ! ತಿರಿಗಿ ಲಂಕೆಗೆ ಹೋಗು! ಸುದಾರಿಸಿ ಕೊಂಡು ಬಾ! ಈಗ ನಿನ್ನನ್ನು ಕೊಲ್ಲುವದಿಲ್ಲ, ಎಂದು ಹೇಳಲು; ಹಿಂತಿರಿಗಿ, ಲಂಕೆಗೆ ಹೋಗಿ, ಬಹಳ ವ್ಯಸನ ಪಟ್ಟು,—ನನ್ನ ತಮ್ಮನಾದ ಕುಂಭಕರ್ಣನನ್ನು ಎಬ್ಬಿಸಿ, ಈ ಹುಲು ಮನುಜರಾದ ರಾಮ ಲಕ್ಷ್ಮಣರ ಜಬ್ಬನ್ನು ತುಳಿಸಿ, ಉಳಿದ ಮರ್ಕಟಾಧಿಪರನ್ನು ಕೊಲ್ಲಿಸಿ, ಭೂತ ಪ್ರೇತಗಳಿಗೆ ಹಬ್ಬವನ್ನು ಮಾಡಿಸುವೆನು ಎಂದು, ಶೂರರಾದ ರಾಕ್ಷಸರಿಗೆ ಕುಂಭಕರ್ಣನನ್ನು ಎಬ್ಬಿಸುವಂತೆ ಅಪ್ಪಣೆಯನ್ನು ಕೊಡಲು;—

ಅನೇಕ ಸಾವಿರ ಮಂದಿ ರಾಕ್ಷಸರುಗಳನ್ನು ಕೂಡಿ ಕೊಂಡು, ಮಹಾ ಪ್ರಧಾನಿಗಳು ಹೋಗಿ, ಮುರಜ, ಡಿಂಡಿಮ, ಪಟಹ, ಕೋಸಲೆ, ಕರಡೆ, ಚಂಬಕ, ಕೊಂಬು, ರಣಮೌರಿ, ಭೇರಿ, ಕಹಳೆ, ಮೊದಲಾದ ವಾದ್ಯಗಳನ್ನು ಬಾರಿಸಲು; ಆ ಶಬ್ದಗಳಿಂದ ಬ್ರಹ್ಮಾಂಡವು ಬಿರಿಯಿತು; ಕಡಲು ಜರಿಯಿತು; ದಿಗ್ಗಜಗಳ ಕಿವಿಗಳು ಕಿವುಡಾದವು. ಹೀಗಾದರೂ ಈ ಕುಂಭಕರ್ಣನಿಗೆ ಎಚ್ಚರ ತೋರದೆ ಇರಲು; ಉಕ್ಕಿನ ದಡಿಗಳಲ್ಲಿ ಕೆಲವರು ಬಡಿದರು. ಕೆಲವರು ಕಬ್ಬಿಣದ ಚಮ್ಮಟಿಗೆಗಳಲ್ಲಿ ಹೊಯ್ದರು. ಕಲ್ಲು ಕುಟಕರು ಉಕ್ಕಿನ ಉಳಿಗಳನ್ನು ತೆಗೆದು ಕೊಂಡು, ಅವನ ಮೈ ಮೇಲೆ ಇಟ್ಟು, ಕಬ್ಬಿಣದ ಕೊಡತಿಗಳಿಂದ ಕುಟ್ಟಿದರು. ಅವುಗಳಿಂದ ಆ ಕುಂಭಕರ್ಣನ ನಿದ್ರೆಯು ಮಲಗುವವರ ಮೈ ಗುದ್ದಿದಂತೆ ಮತ್ತೂ ಹೆಚ್ಚಾಯಿತು. ಆ ಮೇಲೆ ಅವನ ಕೈ ಕಾಲುಗಳ ಉಗುರುಗಳಲ್ಲಿ ಮೊನೆಯಾದ ಕಬ್ಬಿಣದ ಹಾರೆಗಳನ್ನು ಇಟ್ಟು, ಕೊಡತಿಗಳಿಂದ ಬಡಿದರು. ಮತ್ತು ಗಡ್ಡದಲ್ಲಿ ಅಲಗುಗಳನ್ನು ಜಡಿದರು. ಸಬಳಗಳಲ್ಲಿ ಅಳ್ಳೆಗಳನ್ನು ಕುತ್ತಿದರು. ಕೋಡು ಗಲ್ಲುಗಳಿಂದ ಬಾಯಿಯ ಕೋರ ದಾಡೆಗಳನ್ನು ಮುರಿದರು. ಇವುಗಳೆಲ್ಲಾ ನೂರಜುಗಳು ನೆಣದ ಕೊಬ್ಬಿನಲ್ಲಿ ಕುಲ ಗಿರಿಗಳನ್ನು ಗುಡುಗಾಡಿಸುವ ಹಾಗೆ ಆ ಕುಂಭಕರ್ಣನಿಗೆ ಈ ರಾಕ್ಷಸರುಗಳು ಮಾಡುವ ನಿರ್ಬಂಧಗಳೆಲ್ಲಾ ಆದವು. ಆ ಕುಂಭಕರ್ಣನು ಬಿಡುವ ನಿಟ್ಟುಸುರುಗಳ ಮೈಹಾಳಿಯಲ್ಲಿ, ಅವನ ನಿದ್ರೇ ಮನೆಗೆ ಹೊಕ್ಕ ಆಳುಗಳು ಲಕ್ಷ ಸಂಖ್ಯೆಯಲ್ಲಿ ಆಕಾಶ ಮಂಡಲಕ್ಕೆ ತರಗೆಲೆಯ ಹಾಗೆ ಹಾರಿದರು. ಅವರಲ್ಲಿ ಕೆಲವರು ಭೂಮಿಯಲ್ಲಿ ಬಿದ್ದು, ಪ್ರಾಣಗಳನ್ನು ನೀಗಿದರು. ಮತ್ತೆ ಕೆಲವರು ಆ ಕುಂಭಕರ್ಣನ ಕೈ ಕಾಲುಗಳ ನಿಗುರಾಟದಲ್ಲಿ ಅಸುಗಳನ್ನು ತೊರೆದರು. ತಿರಿಗಿ ರಕ್ಕಸರು ಸಾವಿರಾರು ಕಬ್ಬಿಣದ ಇಕ್ಕಳಗಳನ್ನು ತೆಗೆದು ಕೊಂಡು, ಅವನ ಕಿವಿಗಳನ್ನು ಹಿಡಿದು, ಕಿತ್ತರು. ಸುಣ್ಣವನ್ನೂ ಸಾಸುವೆಯನ್ನೂ ಕೂಡಿಸಿ, ಅರೆ

ದು, ಅವನ ಕಣ್ಣುಗಳಲ್ಲಿ ಹಾಕಿದರು. ನೂರಾರು ಪೆಟ್ಟಿ ಮೆಣಸಿನ ಕಾಯಿಯನ್ನು ಪುಡಿ ಮಾಡಿ, ಅವನ ಮೂಗಿನಲ್ಲಿ ಸುರಿದರು. ತವರ ಸೀಸಗಳನ್ನು ಕಾಸಿ, ಅವನ ಮೈ ಮೇಲೆ ಚೆಲ್ಲಿದರು. ಅವನು ಮೇಲುಸುರು ಶೇದಿ ಕೊಳ್ಳುವಲ್ಲಿ ಮೂಗಿನ ಸೊಳ್ಳೆಗಳಲ್ಲಿ ಸುರಿದಿದ್ದ ಮೆಣಸಿನ ಪುಡಿಗಳು ನೆತ್ತಿಗೇರಿ, ಶೀನಲು; ಆ ಶೀನು ಸಿಡಿಲಾಕಾರದಲ್ಲಿ ಹೊರಟು, ಅಲ್ಲಿ ನೆರೆದಿದ್ದವರನ್ನು ಹೊಯ್ದು, ಕೊಂದಿತು.—ಈ ಮಾರಿ ರಕ್ಕಸನು ಎದ್ದರೆ, ಈ ಊರನ್ನು ತಿನ್ನದೆ ಬಿಡನು, ಎಂದು ಪಟ್ಟಣದ ಜನರುಗಳು ಭೀತಿಯಿಂದ ಸರುಕುಗಳನ್ನು ಸವರಿಸಿ ಕೊಂಡು, ಗೂಳ್ಯಾ ಹೋದರು. ಅವನ ಬಿಗಿದ ನಿದ್ರೆಯ ಬಾಯಿಯ ಆಕಳಿಕೆಗಳ ಸುಂಟರ ಘಾಳಿಯು ಉತ್ಪಾತದ ಘಾಳಿಯಂತೆ ರಾವಣನ ಓಲಗದ ಚಾವಡಿಯಲ್ಲಿ ಬೀಸಿತು. ಮತ್ತೆ ಜನರು ಅವನ ಮೂಗಿನ ನಾಳದೊಳಗೆ ಕುರೀ ಕೋಣಗಳ ಹಿಂಡುಗಳನ್ನು ಹೊಗಿಸಿದರು. ಅದರ ಮೇಲೆ ಮದದಿಂದ ಸೊಕ್ಕಿರುವ ಮದ್ದಾನೆಗಳ ಕಾಲುಗಳಿಂದ ತುಳಿಸಿದರು. ಆಗ ತಲೆ ಕೂದಲುಗಳ ಹೇನುಗಳು ದಾರಿಗಳನ್ನು ಕಾಣದೆ, ಅಲ್ಲಿಯೇ ತಿರುಗುವ ಹಾಗೆ ಆ ಆನೆಗಳಲ್ಲಿ ಕೆಲವು ಆನೆಗಳು ಆತನ ರೋಮಗಳ ಸಾಲಿನ ಕುಳಿಗಳಲ್ಲಿ ಬಿದ್ದು, ಕೆಡದವು. ಮತ್ತೆ ಕೆಲವು ಆನೆಗಳು ಅವನ ಶೀನಿನಲ್ಲಿ ಸಿಡಿದು ಬಿದ್ದ ಶಿಂಬಳದೊಳಗೆ ಶಿಕ್ಕಿ, ಶ್ಲೇಷ್ಮಗಳಲ್ಲಿ ಶಿಕ್ಕಿದ ನೊಣಗಳಂತೆ ಮಿಡುಕುತ್ತಿದ್ದವು. ಸಬಳನ್ನು ಅವನ ಕಿವಿಗಳೊಳಗೆ ಹಾಕಿ, ತಿರುಗಿಸಿ, ತೆಗೆಯಲು, ಮುಳ್ಳು ಹಂದಿಗಳ ಮುಳ್ಳಿನ ಕಡ್ಡಿಗಳಿಂದ ಕಿವಿಗಳ ಗುಗ್ಗಿಯನ್ನು ತೆಗೆದಂತೆ, ನೆಟ್ಟಗಾಗಿ ಆತನು ಸುಖಿಸಿದನು. ಮತ್ತು ಬೆಟ್ಟಗಳನ್ನು ತಂದು, ತಂದು, ಅವನ ಮೈ ಮೇಲೆ ಹಾಕುತ್ತಿರಲು; ಮೈಯನ್ನು ಗುದ್ದಿದಂತೆ ಸುಖವಾಗಿ ನಿದ್ದೆ ಹೋದನು.

ಹೀಗೆ ಎಷ್ಟು ಪ್ರಯಾಸ ಪಟ್ಟಾಗ್ಯೂ, ಆತನು ಏಳುವದಿಲ್ಲ ಎಂದು, ರಾವಣನ ಬಳಗೆ ಬಂದು, ಆ ಮಂತ್ರಿಗಳೆಲ್ಲಾ ಅರಿಕೆ ಮಾಡಲು; ರಾವಣನು—ತಮ್ಮಗೆ ವರವ ಕೊಟ್ಟ ಬ್ರಹ್ಮನನ್ನು ಕರೆಯಿರೋ! ಅವನೇ ಈ ನಿದ್ರೆಯ ಜಾಡ್ಯವನ್ನು ಪರಿಹರಿಸಲಿ, ಎಂದು ಅಪ್ಪಣೆ ಕೊಡಲು; ರಾಕ್ಷಸ ದೂತರು ಬೇಗನೆ ಓಡಿ ಹೋಗಿ, ಚತುರ್ಮುಖನನ್ನು ಕರ ತಂದು, ರಾವಣನ ಎದುರಿನಲ್ಲಿ ನಿಲ್ಲಿಸಿದರು. ಆತನುಗಡಗಡನೆ ನಡುಗುತ್ತ, ಕೈಯಿಂದ ಬಾಯಿಯನ್ನು ಮುಚ್ಚಿ ಕೊಂಡು,—ನನ್ನನ್ನುಕರಿಸಿದ ಕೆಲಸವೇನೆಂದು ಕೇಳದ್ದಕ್ಕೆ,—ಬೇರೆ ಕೆಲಸವೇನು? ತಮ್ಮನನ್ನು ಬೇಗ ಎಬ್ಬಿಸ ಹೋಗು ಎನಲು; ಕೈಯಿಂದ ಎದೆಯನ್ನು ಸವರಿ ಕೊಳ್ಳುತ್ತ, ಅಲ್ಲಿಗೆ ಬಂದು, ಆ ಕುಂಭಕರ್ಣನ ಮುಸುಡಿನ ಮುಂದಕ್ಕೆ ಸುಳಿಯಲಮ್ಮದೆ, ಮುಂಡೆಯ

ಹಿಂಭಾಗದಲ್ಲಿ ಕುಳಿತು ಕೊಂಡು, ತನ್ನ ಕಮಂಡಲದ ನೀರನ್ನು ಮಂತ್ರಿಸಿ, ಅ
ವನ ಮೂಗಿನ ಸೊಳ್ಳೆಗಳಲ್ಲಿ ಸುರಿಯಲು; ಆ ಕುಂಭಕರ್ಣನು ಬೆದರುತ್ತ, ಎ
ದ್ದು,—ಅವರ್ಯಾರೋ, ನನ್ನ ನಿದ್ದೆಯನ್ನು ಹೋಗಲಾಡಿಸಿದ ಪಾಪಿಗಳು? ಎನಲು;
ಆ ಮಾತನ್ನು ಪುರದ ಜನವೆಲ್ಲಾ ಕೇಳಿ, ಕಂಡ ಕಂಡ ಕಡೆಗೆ ಓಡಿ ಹೋದರು.
ಎದ್ದು ಕುಂಭಕರ್ಣನು—ಈಗಿನ ನನ್ನ ಹಸಿವಿಗೆ ಬ್ರಹ್ಮಾಂಡವನ್ನು ತಿನ್ನುವೆನೋ?
ಬಾಯಾರಿಕೆಗೆ ಏಳು ಕಡಲುಗಳನ್ನು ಕುಡಿಯುವೆನೋ? ಎಂದು ಮುಂಗಡೆ
ಯನ್ನು ನೋಡುವಲ್ಲಿ, ಅಂಬರವನ್ನು ತಿವಿಯುತ್ತಲಿರುವ ಮಾಂಸಗಳ ಬಟ್ಟಲ
ನ್ನೂ, ರಕ್ತೋದನಗಳ ಬಣಬೆಗಳನ್ನೂ, ಅವುಗಳ ಬಳಿಯಲ್ಲಿ ಬೆಟ್ಟದಂತೆ ಬಿದ್ದಿ
ರುವ ಕಜ್ಜಾಯಗಳನ್ನೂ, ತರಿದ ಕುರಿ ಕೋಣಗಳ ಗಿರಿಗಳನ್ನೂ, ಗರಿಗಳ
ಹರಿದ ಹಕ್ಕಿಗಳ ರಾಶಿಗಳನ್ನೂ, ಇರಿದು ಕೆಡವಿದ ನಾನಾ ಮೃಗಗಳ ಗುಡ್ಡೆಗಳ
ನ್ನೂ, ಹುರಿದು ಒಗ್ಗರಣಿಸಿದ ಮೀನಿನ ಕುಪ್ಪೆಗಳನ್ನೂ, ಪರಿ ಪರಿಯಾದ ಹರಿ
ವಿಗಳಲ್ಲಿ ತುಂಬಿರುವ ಸಕ್ಕರೆ, ಹಾಲು, ಮೊಸರು, ಜೇನು ತುಪ್ಪಗಳನ್ನೂ, ಓಲೆ
ಹಣ್ಣು, ತೆಂಗಿನ ಹಣ್ಣು ಮೊದಲಾದ ಫಲಗಳ ಸಮೂಹವನ್ನೂ ನೋಡಿ, ಅವು
ಗಳನ್ನೆಲ್ಲಾ ತಿಂದು, ಕುಡಿಯಲು; ಅವನಿಗೆ ಅರ್ಧ ಗ್ರಾಸವಾಯಿತು. ಮತ್ತು ಆ
ತನು—ಹೊಟ್ಟೆ ತುಂಬಲಿಲ್ಲವೆಂದು ಕೂಗುವಾಗ, ರಾವಣನ ಮಂತ್ರಿಗಳು ಆ ವ
ರಿಗೆ ಜಗಳದಲ್ಲಿ ಸತ್ತ ರಾಕ್ಷಸರ ಹೆಣಗಳನ್ನು ತರಿಸಿ, ಮುಂದೊಟ್ಟಿಸಲು; ಅವು
ಗಳನ್ನೂ ತಿಂದು, ಹಸಿವು ತೀರದೆ, ಬೊಬ್ಬಿಡುತ್ತ, ಊರಿನ ಜನರನ್ನು ತಿನ್ನುತ್ತಿರು
ವದನ್ನು ಕೇಳಿ, ರಾವಣನು ಶುಕ್ರಾಚಾರ್ಯರನ್ನು ಕರಿಸಿ—ಈ ತಮ್ಮನ ಹಸಿವು ಅ
ಡಗುವ ಹಾಗೆ ಮಾಡು, ಅಂದನು. ಆತನು ಆ ಕ್ಷಣ ಬಂದು, ಮಂತ್ರ ಸಿದ್ಧವಾ
ದ ಗುಳಿಗೆಯನ್ನು ಕುಂಭಕರ್ಣನಿಗೆ ಕೊಡಲು; ಅವನು ಅದನ್ನು ತಿಂದು, ಹಸಿವ
ಡಗಿ, ತೃಪ್ತಿಯಾಗಿ, ಥರ್ರನೆ ತೇಗಿದನು. ಆ ತರುವಾಯ ಸಮೀಪದಲ್ಲಿದ್ದ ಮಂತ್ರಿ
ಗಳು ಸೇವಕರುಗಳಿಂದ ಶ್ರೀಗಂಧ ರಸದ ಕೊಪ್ಪರಿಗೆಗಳನ್ನು ತರಿಸಿ, ಅವನ
ಮೈಗೆ ತೊಡಿಸಿ, ಅಡಿಕೆಗಳ ರಾಶಿಗಳನ್ನು ಅವನ ಬಾಯಿಯಲ್ಲಿ ಸುರಿಸಿದರು. ಬಿ
ಳೀ ವೀಳ್ಯದೆಲೆಗಳ ಸಾವಿರಾರು ಪಿಂಡಿಗಳನ್ನು ಹಾಕಿ, ಸುಣ್ಣದ ಮುದ್ದೆಗಳನ್ನು
ಬಾಯಿಯೊಳಗೆ ಇಡಿಸಿದರು.

ಆ ಮೇಲೆ ಕುಂಭಕರ್ಣನು ಅಣ್ಣನಾದ ರಾವಣನ ಓಲಗದ ಚಾವಡಿಗೆ ಬಂ
ದು, ಆತನಿಂದ ಮಾನಿತನಾಗಿ, ಅವನ ಅರ್ಧಾಸನದಲ್ಲಿ ಕುಳಿತು ಕೊಂಡು,—ಏನು
ನಿನ್ನ ಮೊಗದ ಕಳೆ ಗುಂದಿದೆ? ಈ ದುಮ್ಮಾನವು ಯಾರಿಂದಾಯಿತು? ನಿನ್ನ ಓ
ಲಗದ ಚಾವಡಿಯು ಬಯಲಾಗಿದೆ. ವಿಭೀಷಣ, ಮಹೋದರ, ಪ್ರಹಸ್ತ, ಅತಿ

ಕಾಯ, ದೇವಾಂತಕಾದಿ ವೀರರೆಲ್ಲಾ ಎಲ್ಲಿ? ರುದ್ರನು ನಿನ್ನ ನೆನಹಿಗೆ ಒದಗನೋ? ಬ್ರಹ್ಮನು ನಿನ್ನ ಅರಮನೆಯ ಬಾಗಿಲಲ್ಲಿ ಇರನೋ? ವಾಯುವು ದಿನದಿನದಲ್ಲಿಯೂ ಬಂದು, ನಿನ್ನ ಓಲಗದ ಚಾವಡಿಯ ಕಸಗಳನ್ನು ಗುಡಿಸನೋ? ಅಗ್ನಿಯು ನಿನಗೆ ಅಡಿಗೆಯನ್ನು ಮಾಡನೋ? ಬೃಹಸ್ಪತಿಯು ನಿನಗೆ ದಿನ ವಾರಗಳನ್ನು ಹೇಳನೋ? ವರುಣನು ನಿನಗೆ ನೀರುಗಳನ್ನು ಒದಗಿಸನೋ? ಸುರಪತಿಯು ನಿನ್ನ ಪಾದ ತಳದ ಎಚ್ಚರಿಕೆಯನ್ನು ಹೇಳನೋ? ಯಮನು ನೀನಟ್ಟದ ಬಳಿಗೆ ಹೋಗನೋ? ಧನಪಾಲನು ನಿನ್ನ ಬೊಕ್ಕಸದಲ್ಲಿ ಧನವು ಮುಗಿಯಲು, ತಿರಿಗಿ ತಂದು, ಸುರಿಯನೋ? ನೈರುತಿಯು ನಿನ್ನ ಮುಖವನ್ನು ಒರಸಿ ಕೊಳ್ಳುವ ಪಾವುಡೆಯನ್ನು ಹೊತ್ತಿರನೋ? ರಂಭೆ ಊರ್ವಸಿ ಮೊದಲಾದ ಅಪ್ಸರಸ್ತ್ರೀಯರುಗಳು ನಿಸಗೆ ಒಲಿಯರೋ? ಕೀಳು ಮೇಲಿನ ಜಗದವರು ನಿನ್ನಾಳು ಕೆಲಸದಲ್ಲಿ ಇರರೋ? ಪುಷ್ಪಕ ವಿಮಾನವು ನೀನು ಹೇಳಿದಲ್ಲಿಗೆ ತೆರಳದೋ? ಇಷ್ಟು ನಿನ್ನ ಮುಖದ ಕಂದುವಿಕೆಗೆ ಕಾರಣವೇನೆಂದು, ಕೇಳಿದನು.

ಆಗ ರಾವಣನು ಶೂರ್ಪನಖಿಯ ಕಿವಿ ಮೂಗುಗಳ ಛೇದನ ದಾರಭ್ಯ ನೆನ್ನೇ ಯುದ್ಧದಲ್ಲಿ ರಾಮನಿಂದ ತನಗಾದ ಅಭಿಮಾನ ಹಾನಿಯ ವರಿಗೂ ಹೇಳಲು; ಕುಂಭಕರ್ಣನು ರಾವಣನನ್ನು ಕುರಿತು,—ಎಲೈ, ಅಣ್ಣನೇ, ಕೇಳು. ಪರರ ಹೆಂಡರ ಆಶೆಯಲ್ಲಿ ಇಂದ್ರಾದಿ ದೇವರುಗಳು ಕೂಡ ಕೋಳು ಹೋದರು. ಕಾಮನ ಯಾರಿಗೂ ಹಿತವನಲ್ಲ. ಲೋಕದಲ್ಲಿ ಜಾಣನಾದವನು ತನ್ನ ಬುದ್ಧಿಯಿಂದ ತಾನೇ ಊಹಾಪೋಹಗಳನ್ನು ತಿಳಿದು ನಡೆಯ ಬೇಕು. ಒಂದು ವೇಳೆ ತನಗೆ ಯೋಚನೆಯು ತೋಚದಿದ್ದರೆ, ಆಪ್ತರಾದವರು ಮುರಿದು, ಹೇಳಿದ ದಾರಿಯಲ್ಲಿ ಅಡಿಗಳನ್ನು ಇಡ ಬೇಕು. ಹಾಗೆ ನಡಯದೆ ಇದ್ದರೆ, ತನ್ನ ಪ್ರಾಣಕ್ಕೆ ಅಳಿವು ಉಂಟಾಗುವದು. ಸದ್ಧರ್ಮವು ಆಚಾರವನ್ನು ಅನುಸರಿಸುವದು. ಕೀರ್ತಿಯು ಧರ್ಮವನ್ನು ಬೆಂಬಿಡದೆ ಇರುವದು. ಶಿರಿಯು ಕೀರ್ತಿಯನ್ನು ಹಿಂಬಾಲಿಸಿರುವದು. ನಮ್ಮ ತಪಸ್ಸೂ, ಇಂದ್ರಾದಿಗಳ ಬಡಿಯುವ ನಮ್ಮ ತೋಳಿನ ಪರಾಕ್ರಮವೂ, ಶಿವನ ಮೆಚ್ಚಿಸುವ ನಮ್ಮ ಧೈರ್ಯವೂ, ಕುಡಿ ಏರುವ ನಮ್ಮ ಕೀರ್ತಿಯೂ, ಲೋಗರನ ಮಡದಿಗೆ ಅಪೇಕ್ಷಿಸಿದ ಕಾರಣದಿಂದ ಬಯಲಾಯಿತು. ನಮಗೆ ಸುರರು ಶೇರರು. ತನ್ನ ಗಿರಿಯ ಕಿತ್ತಂದಿನಾರಭ್ಯ ಶಿವನ ಕೃಪೆಯು ನಮ್ಮ ಮೇಲೆ ಸಾಮಾನ್ಯವಾಗಿರುವದು. ದಿಗಧಿಪರು ಭೀತಿಯಿಂದ ಕಾರ್ಯವಾಸಿಗೆ ನಮಗೆ ಕರಗಳನ್ನು ಮುಗಿಯುವರು. ನಿನಗೆ ಹದಿನಾಲ್ಕು ಲಕ್ಷದ ರಾಣಿವಾಸದ ಸತಿಗಳಿದ್ದರೂ, ನಮ್ಮ ಈ ಕುಲಕ್ಕೆ ಮೃತ್ಯುವಾದ ಈ ಹೆಣ್ಣಿನಾಶೆ

ಯು ನಿನಗೆ ಯಾತಕ್ಕೆ ಬಂತು? ಸೀತೆಯು ಸಾಕ್ಷಾತ್ ಲಕ್ಷ್ಮಿಯು. ರಾಮನು ಬ್ರಹ್ಮನ ತಂದೆಯು. ನಮ್ಮ ಪಿತಾಮಹನಿಗೆ ಪಿತಾಮಹನಾದ್ದರಿಂದ, ಈತನಲ್ಲಿ ಛಲ ಬೇಡ. ಇವನು ಯಮ ಇಂದ್ರಾದಿಗಳ ಹಾಗಲ್ಲ. ಹಿಂದೆ ರಣದಲ್ಲಿ ಹೋದವರು ಹೋಗಲಿ. ಮುಂದಿರುವವರನ್ನು ನೀನು ಆದರಿಸುವದಾದರೆ, ಸೀತೆಯನ್ನು ಕೊಂಡು ಹೋಗಿ, ರಾಮನಿಗೆ ಕೊಡು, ಎಂದು ಹೇಳಿದನು.

ಅದನ್ನು ಕೇಳಿ, ರಾವಣನು ಹಗಲಿರುಳು ಹಗೆಯ ಹೊಗಳುವದಕ್ಕೆ ಒಬ್ಬ ತಮ್ಮ ಸಾಲದೆ, ಮಿಕ್ಕ ರಾಗಿಯನ್ನು ಬೀಸುವದಕ್ಕೆ ನೀನೊಬ್ಬ ತಮ್ಮನು ಬಂದಿಯೋ? ಚನ್ನಾಯಿತು! ನೀನು ವೈರಿಯ ಬಿರುದಾವಳಿಯನ್ನು ಹೇಳುತ್ತ, ಅವನ ಪಾಳಯವನ್ನು ಹೊಗುವವನೋ? ಕತ್ತಿಯ ಮೊನೆಯಲ್ಲಿ ಹೊಗುವವನೋ? ರಣಕ್ಕಂಜಿ, ನುಸುಳು ಗಂಡಿಯಲ್ಲಿ ಓಡುವವನೋ? ನಿನ್ನ ಬಗೆಯನ್ನು ಹೇಳು, ಅಂದನು.

ಅದಕ್ಕೆ ಕುಂಭಕರ್ಣನು—ಕಾದಲಂಜುವವನಲ್ಲ. ಮುಕ್ತಿಯ ಹಾದಿಯು ಮಾಸೀತು, ಎಂದು ಹೇಳಿದೆನು. ಸೀತೆಯನ್ನು ತಂದಾಗಲೇ, ನಮ್ಮ ಆಯುಷ್ಯದ ವಿಧಿಯ ಬರಹವು ತೀರಿತು. ಹಗೆಯಲ್ಲಿ ಕಾದಿ ಗೆಲ್ಲುವದು ಅಸಾಧ್ಯವು. ನಿನ್ನೊಳು ನೀನೇ ತಿಳಿದು ನೋಡು, ಎನಲು; ರಾವಣನು—ಎಲವೋ, ನೀನು ಈ ಸಮರ ಭಾರವನ್ನು ಗೆಲ್ಲುವವನೆಂದು ಎಬ್ಬಿಸಿದರೆ, ಕಲಹಕ್ಕೆ ಹೋಗದೆ, ನೀತಿಗಳನ್ನು ಓದುತ್ತ, ಕಲಿತ ವಿದ್ಯವನ್ನು ತೋರಿಸುತ್ತಿರುವೆ. ಬಲಿದ ನಿದ್ರೆಯುಳ್ಳ ಸೀಜನ ಎದುರಿನಲ್ಲಿ ನಿಲ್ಲಿಸಿ ಕೊಂಡು, ನುಡಿದ್ದೇ ತಪ್ಪು! ಮುನ್ನಿನ ಹಾಗೆಯೇ ನಿದ್ದೆಯಲ್ಲಿ ಸತ್ತು ಬಿದ್ದಿರು! ಹೋಗು ಎಂದು ಕೋಪಿಸಿದನು.

ಆಗ ಕುಂಭಕರ್ಣನು—ವೀಳಯವನ್ನು ತಾ! ನನ್ನ ಕಾಳಗದ ಹೊಸ ಪರಿಯನ್ನು ನೋಡು! ಶೂಲಿಯು ಅಡ್ಡಲಾಗಿ ಬಂದರೂ, ಕೊಲ್ಲುವೆನು; ಮಿಕ್ಕ ಜಾಳುಗಳನ್ನು ಹೇಳದಿರು. ಮದನಗೆ ಕೋಳು ಹೋದವರು ಕೆಡುವರೆಂದು ಹೇಳಿದರೆ, ನಿನಗೆ ಇಷ್ಟು ಕೋಪವಾಯಿತೇ? ಅಂದನು.

ಆಗ ರಾವಣನು—ಎಲೇ, ತಮ್ಮಾ, ನಾವಂತೂ ಮನ್ಮಥನ ಬಿಲ್ಲಿಗೆ ಗುರಿಯಾದವರು. ಶೂರರಾದವರು ಮರಣಕ್ಕಂಜಿದರೆ, ಜಗತ್ತಿನಲ್ಲಿರುವ ಅಖಿಳ ಜನರು ನಗರೇ? ಪ್ರಾಣದಾಶೆಯನ್ನು ಬಿಟ್ಟು, ಜಗಳವನ್ನಂಗೀಕರಿಸು. ನಮ್ಮ ಮುಕ್ತಿಗೆ ಸಂಗರವೇ ಸಾಧನವು. ನಾನು ಧುರದಲ್ಲಿ ಅಳಿಯುವದೇ ಕೀರ್ತಿ, ಎಂದು ನಿರ್ಧರಿಸಿರುವೆನು. ನೀನು ಅದೇ ರೀತಿ ನಿಶ್ಚೈಸಿ ಕೊಂಡು, ಹೋಗೆಂದು ಅಪ್ಪಣೆಯನ್ನು ಕೊಟ್ಟನು. ಆಗ ಕುಂಭಕರ್ಣನು ತಾಂಬೂಲವನ್ನು ತೆಕ್ಕೊಂ

ಡು, ಎದ್ದು, ನಮಸ್ಕರಿಸಿ,—ಎಲೈ, ಅಣ್ಣಾ, ನನ್ನ ಮಾತನ್ನು ಕೇಳು. ಒಪ್ಪುವ
ಕಪಿ ಸೈನ್ಯವೆಂಬ ಸಮುದ್ರವನ್ನು ಕುಡಿದು, ಆ ಕಪಿಗಳ ಅರಸನನ್ನು ಹಿಡಿ
ತಂದು, ನಿನಗೆ ಒಪ್ಪಿಸುವೆನು. ರಾಮ ಚಂದ್ರನೊಡನೆ, ಮೂರು ಲೋಕಗಳು
ಮೆಚ್ಚುವಂತೆ, ಕಾದುವೆನು. ಮೇಲಣ ಕೆಲಸ ದೈವಾಧೀನ. ನಿನ್ನ ಭಾಗ್ಯವಿ
ದ್ದಂತೆ ಆಗುವದು ಎಂದು ಹೇಳಿ, ನಡೆಯುವ ಅಂಜನಾಚಲವೋ? ಎಂಬ
ಹಾಗೆ ಇರುವ ತಮ್ಮನು ಯುದ್ಧಕ್ಕೆ ಸನ್ನದ್ಧನಾಗಲು; ರಾವಣನು ರತ್ನ ಖಚಿ
ತಾಭರಣಗಳನ್ನು ತರಿಸಿ, ತಾನೇ ತೊಡಿಸಿದನು. ಆಗ ಅಂಜನಾದ್ರಿ ಪರ್ವತ
ವು ಮಂದರ ಪರ್ವತವನ್ನು ಧರಿಸಿತೋ? ಎಂಬ ಹಾಗೆ ಕುಂಭಕರ್ಣನ ತಲೆ
ಯಲ್ಲಿ ಕಿರೀಟವು ಝಗ ಝಗಿಸಿತು. ಕಪ್ಪಿನ ಮುಗಿಲ ಬಳಿಯಲ್ಲಿ ಕಾಮನ
ಬಿಲ್ಲು ಎದ್ದಂತೆ, ಖಳನ ಕೊರಳಲ್ಲಿ ಪಂಚ ರತ್ನದ ಪದಕವು ಥಳ ಥಳಿಸಿತು.
ಮೇರು ಪರ್ವತದ ಹಿಂದೆ ಮುಂದೆಸೆಯುವ ಸೂರ್ಯ ಚಂದ್ರರ ಹಾಗೆ, ಕುಂಭಕ
ರ್ಣನ ಕಿವಿಗಳೊಳಗೆ ಮಾಣಿಕ ವಜ್ರಗಳ ಕಡುಕುಗಳು ಒಪ್ಪಿದವು. ಸಮುದ್ರ
ವನ್ನು ಕಡೆಯುವ ಮಂದರ ಪರ್ವತಕ್ಕೆ ಸುತ್ತಿದ ವಾಸುಕಿಯಂತೆ, ಕಾಲು ಕಡ
ಗಗಳು ನಿಶಾಚರನ ಕಾಲುಗಳಲ್ಲಿ ಮೆರೆದವು. ಆಕಾಶದಲ್ಲಿ ಹೊಳೆಯುವ ಸಂಜೆ
ಯ ಕೆಂಪಿನ ಹಾಗೆ, ಅವನ ಉಡಿಯಲ್ಲಿ ಚಂದ್ರಗಾವೀ ವಸ್ತ್ರವು ಶೋಭಿಸಿತು.

ಆ ಬಳಿಕ ಸಕಲ ವಾದ್ಯಗಳ ರಭಸದೊಡನೆ ಕೂಡಿ, ರಾಜಾಲಯವನ್ನು
ಹೊರಡಲು, ಅವನ ರಥವು ಬಂದು, ನಿಂತಿತು. ಆ ರಥಕ್ಕೆ ಕಬ್ಬಿಣದ ಹೊರ
ಜೆಗಳೂ, ಉಕ್ಕಿನ ಅಚ್ಚೂ, ಲೋಹದ ಘಾಲಿಗಳೂ, ಎಳೆಯುವ ಆನೆಗಳು
ಹದಿನೆಂಟು ಸಾವಿರವೂ, ಇದ್ದವು. ಇಷ್ಟು ಸಮಕಟ್ಟನಿಂದ ಬಂದ ತೇರನ್ನು
ಏರಿ, ತೊಂಭತ್ತಾರು ಘಾಲಿಗಳು ಚೀತ್ಕರಿಸುತ್ತಿರಲು;—ಪುರದ ಊರು ಬಾಗಿ
ಲು ಮುರಿದು ಬಿದ್ದೀತೆಂದು, ರಥವನ್ನು ಏರದೆ, ಲಂಕೆಯ ಏಳು ಸುತ್ತಿನ
ಕೋಟೆಯನ್ನು ಒಂದು ಹೆಜ್ಜೆಗೆ ದಾಟ ಬರುತ್ತಿರಲು; ಕಂಡು, ರಾಮನ ಪರಿವಾ
ರವೆಲ್ಲಾ ಓಟಾ ಕಿತ್ತಿತು. ಆ ಖಳನೊಡನೆ ಎರಡು ಕೋಟಿ ಬ್ರಹ್ಮ ರಾಕ್ಷ
ಸರೂ, ಹತ್ತು ಕೋಟಿ ಶಾಕಿನೀ ಘಾಕಿನೀ ಸಮೂಹದವರೂ,—ಧಿರುರೇ!
ಪಾಯುವಧಾರು! ರಕ್ಕಸರರಸ! ಹಳು, ಹಳು! ಜೀಯಾ, ಬಾಳೆಂದು ಹೇಳು
ತ್ತ ಬರುತ್ತಿದ್ದವು. ಝಳಪಿಸುವ ಆತನ ಕೈಯ ಕತ್ತಿಯ ಬೆಳಕು ಸೂ
ರ್ಯನನ್ನು ಬೆದರಿಸಿತು. ಅವನ ಕೋರ ದಾಡೆಯ ಹೊಳಪು ಕಲ್ಪಾಂತ ಭೈರ
ವನ ಹೊಳಪಿನಂತೆ ರಂಜಿಸಿತು. ಮೈಯ ಕಪ್ಪಿನ ಕಾಂತಿಯಿಂದ ಹಗಲು
ಕತ್ತಲೆಯಾಯಿತು.

ಅವನನ್ನು ನೋಡಿ, ಸುಗ್ರೀವನು ಅಂಜಿದನು; ಹನುಮ, ನೀಲರು ಶಕ್ತಿಗುಂದಿದರು; ಜಾಂಬವ, ಸುಷೇಣ, ಗವಾಕ್ಷ, ಮೊದಲಾದ ಮಹಾ ಬಲಿಷ್ಠ ಕಪಿ ಪತಿಗಳ ಮೊಗದಾವರೆಗಳಿಗೆ ಮಂಜು ಮುಸುಕಿತು; ಮಿಕ್ಕವರವಸ್ಥೆಯನ್ನು ಹೇಳಲಾರೆನು. ಧೀರೋದಾತ್ತ ರಘುನಾಥನು ರಕ್ಕಸನನ್ನು ನೋಡಿದ ಮಾತ್ರಕ್ಕೆ ಮುರಿದೋಡುವ ತನ್ನ ಬಲವನ್ನು ನೋಡಿ, ನಗುತ್ತ,—ಇವನು ಯಾರು? ಎಂದು ವಿಭೀಷಣನನ್ನು ಕೇಳಲು; ಆತನು—ಜೀಯಾ, ಚಿತ್ತೈಸು. ಇವನು ದಶಮುಖನ ತಮ್ಮನು; ನನ್ನ ಅಣ್ಣನು; ಪುಲಸ್ತ್ಯನ ಮೊಮ್ಮಗನು; ವಿಶ್ರವಸ್ಸುವಿನ ಮಗನು. ಇವನು ಮಾಡಿದ ಕೆಲಸವನ್ನು ಹೇಳಿದರೆ, ನೀವು ಬೆರಗಾಗುವಿರಿ. ಹುಟ್ಟಿದ ಏಳು ದಿವಸದಲ್ಲಿ ಜಗತ್ತನ್ನು ಅಟ್ಟಿ, ತಿಂದನು. ಅದರಿಂದ ಬ್ರಹ್ಮನು ಇವನನ್ನು ನಿದ್ದೆಯಲ್ಲಿದ್ದು, ಆರು ತಿಂಗಳಿಗೆ ಒಂದು ಬಾರಿ ಎದ್ದು, ಅನ್ನಾಹಾರ ಮಾಡಿ ಕೊಂಡು, ತಿರಿಗಿ ಮಲಗುವಂತೆ ಕಟ್ಟು ಮಾಡಿ, ಕೆಡವಿದನು. ಇವನು ಧುರಕ್ಕೆ ಕೈಗಟ್ಟಿ ನಿಂತರೆ, ನರ, ನಿರ್ಜರ, ಭುಜಂಗಮ ಭಟರೊಳಗೆ ಯಾರನ್ನೂ ಇವನಿದಿರಿನೊಳು ನಿಲ್ಲುವವರ ಕಾಣೆನು. ಪರಸ್ತ್ರೀ ಹರಣದ ಪಾಪದ್ದೆಸೆಯಿಂದ ಸತ್ತರೆ, ಸಾಯ ಬೇಕೇ ಹೊರ್ತು, ಈ ದೋಷವಿಲ್ಲದಿದ್ದರೆ, ಎಂದಿಗೂ ಇವನಿಗೆ ಸಾವು ಕಾಣೆನು. ಜೀಯಾ, ನಮ್ಮ ಬಲದ ಪಲಾಯನವನ್ನು ಚಿತ್ತೈಸು. ಮೇಲೆ ಆಕಾಶದಲ್ಲಿ ನೋಡು! ನೆರೆದ ದೇವತೆಗಳಲ್ಲಿ ಒಬ್ಬರಾದರೂ ಕಾಣುವರೇ? ಸಮರದ ನೆಲವನ್ನು ಹೊಗುವದಕ್ಕೆ ಮುಂಚೆಯೇ ಈ ಅವಸ್ಥೆ ಆಯಿತು. ಮುಂದೆ ಇವನ ಇರಿತಕ್ಕೆ ನಾವೇನಾಗುವೆವೋ? ಎಲೈ, ರಾಜೇಂದ್ರನೇ, ಅವಧರಿಸು. ನಮ್ಮವನ ಹೆಗಲಿನಲ್ಲಿರುವ ಶೂಲದ ತೋರವನ್ನು ನೋಡು. ಅದು ಹಾಗಿರಲಿ. ಈ ಶೂಲದ ಅಲಗಿನಲ್ಲಿ ಯಮನ ಎದೆಯ ರಕ್ತವಿದೆ; ಕುಬೇರನ ಮಾಂಸವೂ ಕೂಡಿ ಇದೆ; ಮಿಕ್ಕ ದಿಕ್ಪಾಲರ ತುಪ್ಪದ ಲೇಪವಿದೆ. ಈ ನೆರೆದ ಮರ ಕೈದುಗಳ ಮರ್ಕಟರು ಕಾದಿ, ಗೆಲ್ಲಲಾರರು. ನಿಮ್ಮ ಪಾದ, ನೀವೇ ಇವನೊಡನೆ ಕಾದ ಬೇಕು, ಎಂದು, ಹೀಗೆ ಮಾತಾಡುತ್ತಿರುವಲ್ಲಿ ಸುಗ್ರೀವನು ಆ ಕುಂಭಕರ್ಣನ ಎದುರಿನಲ್ಲಿ ನಿಂತನು. ಅವನ ಬೆಂಬಲಕ್ಕೆ ಹನುಮ, ನೀಲ, ಅಂಗದ, ಜಾಂಬವರೇ ಮುಖ್ಯರಾದ ಪ್ರಬಲ ಕಪಿ ಪತಿಗಳು ಗಿರಿ ತರುಗಳನ್ನು ಸಂವರಿಸಿ ಕೊಂಡು, ನಿಂತರು. ಮತ್ತು ಮೃತ್ಯುವನ್ನು ಕೆಣಕುವ ಹಾಗೆ ಅವನ ನೆತ್ತಿಯ ಮೇಲೆ ಗಿರಿ ತರುಗಳನ್ನು ಕಿತ್ತು, ಕಿತ್ತು, ತಂದು, ಒಟ್ಟುತ್ತಿದ್ದರು. ಅವನು ಉಸುರಿನ ಘಾಳಿಯಲ್ಲಿ ಆ ಕಪಿ ಪತಿಗಳನ್ನೂ ಅವರು ತಂದು ಹಾಕಿದ ಮರ ಬೆಟ್ಟಗಳನ್ನೂ ಊ

ದಿ, ದಿಗಂತರಕ್ಕೆ ಹಾರಿಸಿದನು. ಮತ್ತು ಹೊಕ್ಕ ಮೈಯಲ್ಲಿ ಕೋಟಿ ಸಂಖ್ಯೆಯ ಕಪಿಗಳನ್ನು ಇಕ್ಕಿದನು. ನಾಲಿಗೆಯನ್ನು ನಿಗರಿಸಿ, ಶತ ಕೋಟಿ ಸಂಖ್ಯೆಯ ವಾನರರನ್ನು ನೆಕ್ಕಿದನು. ಕೈಗಳಿಂದ ಬರಸಿ, ನಿರ್ಬುದ ಕೋತಿಗಳನ್ನು ಮುಕ್ಕಿದನು. ಮಹಾರ್ಬುದ ಲೆಖ್ಖದ ಕೋಡಗಗಳನ್ನು ನುಂಗಿದನು. ಗಜನ ಮೋಹರವು ಮುಗಿಯಿತು. ನೀಲನ ಬಲವು ನುಗ್ಗಾಯಿತು. ಜಾಂಬವಂತನ ಒಡ್ಡು ಒಡೆಯಿತು. ಅಂಗದನ ಪಡೆಯು ಸರಿಯಿತು. ಹನುಮನ ಸೇನೆಯು ಓಡಿತು. ಗಿಜಿಬಿಜಿಯಾದ ಮಿಕ್ಕ ಕಪಿಗಳ ರಣ ನಾಟಕವನ್ನು ಬಣ್ಣಿಸಲಾಗದು. ಯಮನ ಕೊಲೆ ಗೆಲಸವೋ? ಮಹಾ ಭೈರವನ ಕಾಲಾಟವೋ? ಕಾಲಾಂತ ಕಪರ್ದಿಯ ಕವರುವಿಕೆಯೋ? ಕಲಿ ಕುಂಭಕರ್ಣನ ಕಾಳಗದ ಕೇಳಿಕೆಯೋ? ದೇವೇಂದ್ರನ ಪುರವು ತುಂಬಿತು. ಬ್ರಹ್ಮನ ಹೊಳಲಲ್ಲಿ ಹೊರ ಕೇರಿಯು ಕಟ್ಟಿತು. ಯಮನ ಪಟ್ಟಣದ ದಾರಿಯಲ್ಲಿ ಬಹು ನುಗ್ಗಾಯಿತು. ಸುಗ್ರೀವನು ಸಾಯಲಿ! ತನ್ನಯ ದಾಯಿಗನನ್ನು ಕೊಂದು, ಕೊಟ್ಟ ರಾಜ್ಯದ ಬಿಡಯಕ್ಕೆ ಆಶೆ ಪಟ್ಟನು. ರಾಮನು ಹೆಂಡತಿಯ ಮೋಹದಲ್ಲಿ ಸಾಯಲಿ! ನಮಗೇನು? ಸಂಬಳವೋ? ಸಾರಿಕೆಯೋ? ಕಾಡಿನಲ್ಲಿರುವ ಹಣ್ಣುಗಳನ್ನು ತಿಂದು, ತೊರೆ ಕೆರೆಗಳಲ್ಲಿ ನೀರನ್ನು ಕುಡಿದು, ಈ ರಾಮ ಸುಗ್ರೀವರಿಗೋಸ್ಕರ ಇವನ ಕೈಯಲ್ಲಿ ಸಿಕ್ಕಿ, ಪ್ರಾಣವನ್ನು ಬಿಡ ಬೇಕೆಂಬ ತೆವುಲೇನು? ಎಂದು, ಕಪಿಗಳೆಲ್ಲಾ ಕಂಡ ಕಂಡ ಕಡೆಗೆ ಸರಿದರು. ಉಸುರುಗಳನ್ನು ಕೈಯಲ್ಲಿ ಹಿಡಿದು ಕೊಂಡು, ಹನುಮಂತನೂ, ನೀಲನೂ, ಅಂಗದನೂ, ನಳ, ಸುಷೇಣ, ಗವಾಕ್ಷ ಮುಂತಾದ ಸೇನಾ ಪತಿಗಳೂ, ಸುಗ್ರೀವನ ಮೇಗಳ ಅಭಿಮಾನದಿಂದ ಮತ್ತೆ ಗಿರಿ ತರುಗಳನ್ನು ತಂದು, ಕುಂಭಕರ್ಣನ ಮೇಲೆ ಸುರಿದರು. ಅವುಗಳೆಲ್ಲಾ ಅವನ ರೋಮಗಳಿಗೆ ತಗಲಿ, ಹುಡಿ ಹುಡಿಯಾಗಿ ಕೆಳಗೆ ಬೀಳುತ್ತಿದ್ದವು. ಸಿಡಿಲು ಹೊಯ್ದರೆ, ಸಿಗುರು ಏಳದ ತೋರವಾದ ಗಿರಿಯು ನುಗ್ಗೆಯ ದಡಿಯ ಪೆಟ್ಟಿಗೆ ನಗ್ಗುವದೇ? ನೀವು ವಿವೇಕ ಹೀನರು ಎನುತ್ತ, ಗದೆಯಿಂದ ಹೋರುವ ಕಪಿ ಪತಿಗಳನ್ನು ರಕ್ತವನ್ನು ಕಾರಿಸಿದನು.

ರವಿ ಅಟ್ಟಿದ ಕತ್ತಲೆಯಂತೆ ಮತ್ತೆ ಕಪಿ ಮೊತ್ತ ಮುರಿಯಲು; ರಾಮನನ್ನು ಹುಡುಕುತ್ತ, ಕುಂಭಕರ್ಣನು ಬರುತ್ತಿದ್ದನು. ಸುಗ್ರೀವನು—ಎತ್ತ ಹೋಗುತ್ತೀಯೋ, ಖೂಳ ಖಳನೇ? ಇತ್ತ ತಿರುಗೆಲೋ! ಎಂದು ಹೇಳುತ್ತ, ಅವನ ಮುಂದೆ ನಿಲ್ಲಲು;—ಹೆದರದಿರಿ! ಕಾಳಗದೊಳು ಸತ್ತವರಿಗೆ ಸ್ವರ್ಗವು ಶಿಕ್ಕುವದು. ಪ್ರಾಣ ಭಯದಿಂದ ಯುದ್ಧವನ್ನು ಬಿಟ್ಟು, ಓಡಿ ಹೋದರೆ, ನಿಮ್ಮ ಪ್ರಾ

ಣಗಳು ಬ್ರಹ್ಮನ ಕಲ್ಪ ಪರಿಯಂತರಕ್ಕೂ ಇರುವವೇ? ಹುಚ್ಚುತನವನ್ನು ಬಿಟ್ಟು, ಸ್ವಾಮಿ ಕಾರ್ಯ ಹತ ಪ್ರಾಣರಾಗಿ, ಪುಣ್ಯವನ್ನು ಸಂಪಾದಿಸಿ ಕೊಳ್ಳಿ, ಎಂದು ಹೇಳುವ ಜಾಂಬವನ ಮಾತನ್ನು ಕೇಳಿ, ತಿರಿಗಿ ಕಪಿ ಸಮೂಹವು ಪ್ರಳಯ ಕಾಲದಲ್ಲಿ ಕಡಲುಬ್ಬಿ, ಅಂಬರವನ್ನು ಅಡರುವಂತೆ, ಕುಂಭಕರ್ಣನನ್ನು ತರು ಗಿರಿಗಳ ತಂಡದಿಂದ ತುಂಬಲು; ಅದ್ರಿಯು ಗುಂಗುರಿನ ಊರಿಕೆಗೆ ಮೈ ಅಳುಕುವದೇ? ಮಂಜೇರಿದರೆ, ನಡು ಹಗಲಿನ ಸೂರ್ಯ ಬಿಂಬವು ನಡುಗುವದೇ? ಆ ಕಪಿ ಸೇನೆಯನ್ನು ಖಳನು ತೂರಿದನು; ಕೆದರಿದನು; ಬೀರಿದನು; ಬಿಸುಟನು; ತುಳಿದನು; ಯಮನ ಪಟ್ಟಣಕ್ಕೆ ಏರಿಸಿದನು; ಜಗಳಕ್ಕೆ ಅಳುಕದೆ, ಕವಿಯುವವರನ್ನು ಕಳವಳಕ್ಕೆ ಗುರಿ ಮಾಡಿದನು. ಮತ್ತು ಹೊಂಚಿ ಹಳಚುವ ಹೊಂತಕಾರಿಗಳನ್ನು ಹಿಡಿದು, ಹಿಡಿದು, ಬಾಯಿಯೊಳಗೆ ಅಡಸಿದನು. ಹಾಗೆ ನುಂಗಿದ ಭಟರುಗಳು ಅವನ ನವ ದ್ವಾರದ ಕನ್ನಗಳಿಂದ ಚಿಗಿ ಚಿಗಿದು, ಹೊರಡುತ್ತಲಿದ್ದರು. ಹಲ್ಲಡಿಯಲ್ಲಿ ಸಿಕ್ಕಿ ಅಜಿಗಿಜಿಯಾದ ಸುಭಟರಿಗೂ, ಮಡವೂ, ಮೊಳಕಾಲೂ, ಹೆಜ್ಜೆಯೂ, ಮೊಳಕೈಯೂ, ಮುಡುಹೂ, ಮುಷ್ಟಿಯೂ, ಇವುಗಳ ಪೆಟ್ಟುಗಳಿಂದ ಸತ್ತ ಸುಭಟರಿಗೂ ಸಂಖ್ಯೆ ಕಾಣೆನು.

ಏನ ಹೇಳಲಿ? ಕುರಿಯ ಹಿಂಡಿನ ತೋಳನೋ? ಕರಿಘಟೆಗಳ ಕದನದ ಕರಾಳ ಸಿಂಹವೋ? ಹುಲ್ಲೆಗಳ ಹಿಂಡುಗಳ ಹೆಬ್ಬುಲಿಯೋ? ಹಾವಿನ ಕುಲದಲ್ಲಿ ಹೊಕ್ಕ ಗರುಡನೋ? ಎಂಬ ಹಾಗೆ ಖೂಳ ಖಳನು ಕಪಿಗಳ ಸೇನೆಯನ್ನು ಕೊಂದು, ರಾಮನನ್ನು ಅರಸುತ್ತ, ಮುಂದು ವರಿದು ಬಂದು, ಹೆಂಡತಿಯನ್ನು ಹೋಗಲಾಡಿ ಕೊಂಡು, ಕಾಳಗದಲ್ಲಿ ಕಪಿಗಳನ್ನು ಕೊಲ್ಲಿಸುವ ಕಾಕುತ್ಸ್ಥನು ನೀನೇ ಎಂದು ರಾಮನನ್ನು ಹಿಡಿಯುವದಕ್ಕೆ ಬರುತ್ತಿರಲು;—ಕೆಲಸ ಕೆಟ್ಟಿತು! ಇನ್ನೇನೆಂದು ಕೂಗುವ ದೇವತೆಗಳ ಕಳಕಳವನ್ನು ಕೇಳಿ, ಕೋಪದಲ್ಲಿ ಹನುಮನು ಕಿಡಿಗೆದರುತ್ತ, ಓಡಿ ಬಂದು, ಬೊಬ್ಬಿರಿದು, ಖಳನು ತಿನುಕುವ ಹಾಗೆ ತಿವಿದನು. ಪ್ರಳಯ ಕಾಲದ ವಜ್ರದ ಪೆಟ್ಟಿನಲ್ಲಿ ತಲೆ ಕೊಡಹುವ ಮೇರು ಗಿರಿಯ ಹಾಗೆ ಒಲದೊಲದು, ಕಣ್ಣಿಗೆ ಕವಿಯುವ ಕತ್ತಲೆಯಿಂದ ಕಳವಳಿಸಿ, ಕುಂಭಕರ್ಣನು ಚಟುಲ ವಿಕ್ರಮನಾದ ಹನುಮಂತನನ್ನು, ಕೈಯಲ್ಲಿ ಇದ್ದ ಶೂಲದ ತುದಿಯಿಂದ ತಿವಿಯಲು; ಅನಿಲ ಸುತನು ಶೂಲವನ್ನು ಕೆಡೆ ನೂಕಿ, ಬಾಯಿಯಲ್ಲಿ ರಕ್ತ ಸುರಿಯುವಂತೆ ಖಳನ ಎದೆಯನ್ನು ತಿವಿದನು. ಕಪಿಯ ಕೈ ಪೆಟ್ಟನ್ನು ನಿಶಾಚರನು ಗಣಿಸುವನೇ? ಆ ಕ್ಷಣ ಪರಿಘಾಯುಧದಲ್ಲಿ ಅಂಜನೆಯ ಮಗನನ್ನು ಅಪ್ಪಳಿಸಿದನು. ಆಗ ಹನುಮನು ಎದ್ದು, ಕಡು ಕೋಪದಲ್ಲಿ

ಕೈ ಮುಷ್ಟಿಯಿಂದ ಕುಂಭಕರ್ಣನ ಅಳ್ಳೆಯನ್ನು ಗುದ್ದಲು; ತುಪ್ಪದಲ್ಲಿ ಅದ್ದಿ, ಅದ್ದಿ, ಉಂಡ ಕೂಳಿನ ಮುದ್ದೆಗಳು ಬಾಯಿಯಿಂದ ಹೊರಟು, ನೆಲದಲ್ಲಿ ಬಿದ್ದವು. ಆಗ ಕುಂಭಕರ್ಣನು ತಿರಿಗಿ, ನೋಡಿ,—ಅಹುದೋ? ಕಪಿಗಳ ಗುಂಪಿನಲ್ಲಿ ನೀನೇ ಘಟ್ಟಿಗನು. ಪರಾಕ್ರಮದಲ್ಲಿ ಇಂದ್ರಜಿತುವಿಗೆ ಸಮಾನನಾಗಿರುವೆ. ನೀನು ಮತ್ತೊಂದು ಸಾರಿ ನನ್ನೊಡನೆ ಜಗಳಕ್ಕೆ ನಿಂತರೆ, ನೀನೇ ಶೂರನು ಎಂದು, ಅರಿ ಭಯಂಕರನನ್ನು ಆಯುಧದ ಬುಡದಿಂದ ತಿವಿದು, ಹಾರಿಸಲು; ರಣಕ್ಕೆ ಐನೂರು ಕೋಲ ಅಳತೆಯಲ್ಲಿ ಹಾರಿ, ಬಿದ್ದನು.

ಹನುಮನನ್ನು ಹೊಡೆದ ಪೆಟ್ಟಿನಲ್ಲಿ ಭೂಮಿಯಲ್ಲಿ ಬಿದ್ದವನು ಮೆಲ್ಲಗೆ ಕೈ ಊರಿ, ಎದ್ದು, ಹನುಮನ ಬಳಿಗೆ ಹೋಗುತ್ತಿರಲು; ಸುಗ್ರೀವನು ಆ ಕುಂಭಕರ್ಣನ ಬಳಿಗೆ ಬಂದು, ನಿಂತು, ಅವನ ಹಾಗೆ ಬೆಳೆದು, ದೇವತೆಗಳು ಹೊಗಳುವ ಹಾಗೆ ಗಿರಿ ತರುಗಳಿಂದ ಹೊಯಿದನು.—ಬಲದೊಳಗೆ ವಾಲಿಯೇ ಸಮರ್ಥನು. ಅವನ ತದನಂತರದಲ್ಲಿ ನೀನೇ ಸುಭಟನು, ಹೌದು ಎಂದು, ಬೆರಳನ್ನು ಆಡಿಸುತ್ತ, ತಲೆಯನ್ನು ತೂಗಿಸುತ್ತ, ಹೊಗಳುತ್ತಿರಲು; ಸುಗ್ರೀವನು,—ಎಲಾ, ಖೂಳ ಖಳನೇ, ಕೇಳು. ಕಪಿ ರಾಜನೆಂಬುದನ್ನು ಕೇಳಿ ಇಲ್ಲವೇ? ರಣ ಕೇಳಿಯಲ್ಲಿ ಕೈ ಗುಂದಿ, ಸೋಲುವ ಭಟನೇ, ನಾನು? ಎನುತ್ತ, ತೋಳನ್ನು ಎತ್ತಿ, ಮುಷ್ಟಿಯಲ್ಲಿ ಸಿಡಿಲಿನಂತೆ ಘರ್ಜಿಸಿ,—ಬೀಳೆಂದು ತಿವಿಯಲು; ತಲೆ ಕೆಳಗಾಗಿ ಕುಂಭಕರ್ಣನು ನೆಲಕ್ಕೆ ಬೀಳಲು; ಭೂಮಿಯು ನೂರು ಪುರುಷ ಪ್ರಮಾಣವು ರಸಾತಲಕ್ಕೆ ಇಳಿದು, ಗುಂಡಿಯಾಯಿತು. ಆಗ ಚೇತರಿಸಿ ಕೊಂಡು, ಎದ್ದು,—ಎಲವೋ, ಕಪಿಯೇ, ಕೇಳು. ಈ ಮಹಾಯುಧದ ಅಲಗಿಗೆ ಸಾಯದೆ, ಸಮರದಲ್ಲಿ ನೀನುಳಿದೆಯಾದರೆ, ನಾನು ಮೂಗು ಹೋದವನು ಎಂದು, ಕ್ರೂರವಾದ ಶಕ್ತಿಯಿಂದ ಹೊಡೆಯಲು; ಹನುಮಂತನ ಎಚ್ಚರಿಕೆ ಎಷ್ಟೋ! ಮೇಲಾಪೇಕ್ಷೆ ಎಷ್ಟೋ! ಸುಗ್ರೀವನಿಗೆ ಹಾನಿಯಾಗದಂತೆ ಬರುವ ಶಕ್ತಿಯನ್ನು ಪುಟ ನೆಗೆದು, ಹಾರಿ ಬಂದು, ಹಿಡಿದು ಕೊಂಡು, ತಿರಿಗಿ ಅದನ್ನೇ ಕುಂಭಕರ್ಣನ ಮೇಲೆ ಹಾಕುವದಕ್ಕೆ ಉದ್ಯುಕ್ತನಾಗುತ್ತಿರಲು; ವಿಭೀಷಣನು ಓಡಿ ಬಂದು, ಹನುಮನ ಕೈಯನ್ನು ಹಿಡಿದು ಕೊಂಡು,—ಎಲೈ, ವೀರನೇ, ಈ ಆಯುಧವನ್ನು ತಿರಿಗಿ ಆತನ ಮೇಲೆ ಇಟ್ಟವನ ತಲೆ ನೆಲಕ್ಕೆ ಉರುಳಲಿ ಎಂದು, ವರ ಉಂಟು. ಅದರಿಂದ ಇಡಬೇಡವೆಂದು ತಡೆಯಲು; ಹನುಮಂತನು ಮೊಳಕಾಲಿನಿಂದ ಅಮುಕಿ, ಮುರಿದು, ಸಮುದ್ರದಲ್ಲಿ ಹಾಕಿ ಬಿಟ್ಟನು. ಅದನ್ನು ನೋಡಿ, ಸೂರ್ಯನು—ತನ್ನ ಮಗನಾದ ಸುಗ್ರೀವನನ್ನು ಈ ಶೂಲದಿಂದ ಸಾಯದಂತೆ ಮುರಿದು ಹಾಕಿದನಲ್ಲಾ!

ಎಂಬ ಸಂತೋಷದಿಂದ ದಿವ್ಯ ರತ್ನ ಖಚಿತಗಳಾದ ಎರಡು ಕರ್ಣಕುಂಡಲಿಗಳನ್ನು ಕೊಟ್ಟನು.

ಆಗ ಕುಂಭಕರ್ಣನು—ಮಹಾ ತ್ರಿಶೂಲಾಯುಧವು ತೀರಿ ಹೋಯಿತೇ? ಕಪಿ ವೀರನು ಉಳಿದನೇ? ಎಂದು ನೆಗೆದು ಬಂದು, ಸುಗ್ರೀವನನ್ನು ಹಿಡಿದು ಕೊಂಡು,—ಇವನಷ್ಟೆ ಕಪಿ ರಾಯನು. ಇವನಿಂದಲೇ ರಾಮ ಲಕ್ಷ್ಮಣರು ಜಗಳಕ್ಕೆ ಬಂದರು. ಇವನನ್ನು ಕೊಲ್ಲದೆ, ಹಿಡಿದು ಕೊಂಡು ಹೋದರೆ, ಈ ನೆರದಿರುವ ಕೋಡಗಗಳೆಲ್ಲಾ ಓಡಿ ಹೋಗುವವು. ಬಳಿಕ ಉಳಿದ ಮನುಜರಿಬ್ಬರನ್ನು ಕ್ಷಣ ಮಾತ್ರದಲ್ಲಿ ಜೈಸ ಬಹುದು ಎಂದು, ಕಂಕುಳಲ್ಲಿ ಔಕಿ ಕೊಂಡು, ಲಂಕೆಗೆ ತಿರುಗಿದನು. ಅಹಹ! ವಾನರ ರಾಜನು ಶಿಕ್ಕಿದನೇ, ಖಳನ ಕೈಗೆಂದು, ರಘು ರಾಮನು ಹನುಮನ ಮುಖವನ್ನೂ ತಮ್ಮನ ಮುಖವನ್ನೂ ನೋಡಲು; ಅವರಿಬ್ಬರು ಯುದ್ಧಕ್ಕೆ ಬರುತ್ತಿರಲು; ಸುಗ್ರೀವನು ಅವರನ್ನು ನೋಡಿ—ಬೇರೆ ಬವರದ ಬಲುಮೆಗಳನ್ನು ಕೈ ತೋರದಿರಿ! ತಾನು ಈ ಖೂಳನಿಗೆ ಶಿಕ್ಕಿದೆನೆಂದು ಬಗೆಯದಿರಿ! ನಗೆಗಾರರಿಗೆ ಇವನ ಹಗರಣವನ್ನು ಅರೆ ಘಳಿಗೆಯಲ್ಲಿ ತೋರಿಸುವೆನು ಎಂದು, ಸಮಾಧಾನವನ್ನು ಮಾಡಿದನು. ಕುಂಭಕರ್ಣನು—ಇಂದಿನ ರಣವನ್ನು ಗೆದ್ದೆನು; ಕಪಿ ರಾಜನ ಹಿಡಿದೆನು; ಮೇಲಣ ಕೆಲಸ ನಾಳನದು ಎನುತ್ತ, ಹೊಳಲನ್ನು ಹೊಕ್ಕನು. ಆಗ ನಿಸ್ಸಾಳಗಳು ಮೊಳಗಿದವು. ಗುಡಿಗಳು ಅಗಲಕ್ಕೆ ತಳಿತವು. ಹೆಂಗಸರು ಕನ್ನಡಿ ಕಲಶಗಳನ್ನು ಹಿಡಿದು, ಒಗ್ಗಿನಲ್ಲಿ ಬಂದು, ಬಹಳ ಸಂಭ್ರಮದಲ್ಲಿ ಇದಿರು ಗೊಂಡರು. ಸ್ತ್ರೀಯರುಗಳು ಗಂಧೋದಕಗಳನ್ನೂ ಪನ್ನೀರುಗಳನ್ನೂ ಕುಂಭಕರ್ಣನ ಮೇಲೆ ಸುರಿದರು. ವಾರುಣಿ ಕಾದಂಬರಿ ಎಂಬ ರಸಗಳ ಹೆಂಡಗಳನ್ನು ಕುಡಿಯಲಿಕ್ಕೆ ಕೊಟ್ಟರು. ಆ ಹೆಂಡಗಳ ಕುಡಿಯುವಿಕೆಯ ಸುಖದಿಂದ ಮದ ತಲೆಗೆ ಹತ್ತಿ, ಕದನದಲ್ಲಿ ಕಪಿ ಸಾರ್ವಭೌಮನನ್ನು ಹಿಡಿದಿದ್ದನ್ನು ಖಳನು ಮರೆತನು. ಆ ವೇಳೆಯಲ್ಲಿ ಕಪೀಂದ್ರನು ಮೆಲ್ಲನೆ ಅವನ ಸಡಿಲವಾದ ಕಂಕುಳಿನಿಂದ ಕೈ ಊರಿ, ಹೆಡಕಿನಲ್ಲಿ ಕುಳಿತು, ಎರಡು ಕೈಗಳಿಂದ ಎರಡು ಕೊಡಗಿವಿಗಳನ್ನೂ, ಹಲ್ಲಿನಿಂದ ಮೂಗನ್ನೂ ಚಿವಿಟ, ಕಚ್ಚಿ, ತೆಗೆದು ಕೊಂಡು, ಆಕಾಶಕ್ಕೆ ಹಾರಿ ಹೋದನು. ಆಗ ಲಕ್ಷ್ಮಣ ಹನುಮಂತರೊಡನೆ ಕೂಡಿ, ಸುಗ್ರೀವನು ರಾಮನ ಸನ್ನಿಧಾನಕ್ಕೆ ಹೋಗಿ, ನಮಸ್ಕರಿಸಿದನು. ಕಪಿ ಕಟಕವು ನಲಿದಾಡಿತು.

ಇತ್ತಲು ಕುಂಭಕರ್ಣನು ಅಣ್ಣನಾದ ದಶಗ್ರೀವನ ಓಲಗಕ್ಕೆ ಸಂತೋಷದಿಂದ ಸರಸರನೆ ಬಂದು, ನಮಸ್ಕರಿಸಿ,—ಎಲೈ, ಅಗ್ರಜನೇ, ಹುಲು ಮನುಜರಿಗೆ

ನಿನ್ನ ಮೇಗಳ ಜಗಳಕ್ಕೆ ಕಾರಣನಾದ ಕಪಿ ರಾಜನನ್ನು ತಂದಿದ್ದೇನೆ, ನೋಡು! ಎಂದು ಕಂಕುಳನ್ನು ಎತ್ತಿ, ಸುಗ್ರೀವನನ್ನೂ, ಕಿವಿ ಮೂಗುಗಳಲ್ಲಿ ಬೆರಳಿಟ್ಟು, ಅವುಗಳನ್ನೂ ಕಾಣದೆ, ರಕ್ತಮಯವಾದ ಬೆರಳುಗಳನ್ನು ಮಾತ್ರ ಕಂಡು, ನಾಚಿಕೆ ಎಂಬ ಕಡಲೊಳಗೆ ಮುಳುಗಿ, ಘೆರ್ರನೆ ಹಿಂತಿರುಗಿ—ಸುಡು! ಬದುಕು ಸಾಕು! ಇನ್ನು ಪ್ರಾಣವನ್ನು ಹಿಡಿಯುವದು ಅನುಚಿತವು ಎಂದು, ತಿರಿಗಿ ಜಗಳಕ್ಕೆ ಬಂದನು. ಆಗ ಶ್ರೀರಘುರಾಮನು ಲಕ್ಷ್ಮಣನನ್ನು ಕರೆದು—ತಮ್ಮನೇ, ಈ ಕುಂಭಕರ್ಣನನ್ನು ಕಂಡು, ಇದು ದೊಡ್ಡ ಗುಮ್ಮನೆಂದು ಬಲವು ಬೆದರುತ್ತಿದೆ. ಇವನೊಡನೆ ಯುದ್ಧವು ನಮ್ಮ ಪಾಲಿಗಾಗಲಿ. ಸುಮ್ಮನೆ ಕಪಿ ಭಟರನ್ನು ಬಳಲಿಸ ಬೇಡ. ಇವನೊಡನೆ ಬಂದಿರುವ ಸೇನೆಗಳ ಸಂಗಡ ಯುದ್ಧಕ್ಕೆ ನೀನು ಹೋಗು ಎಂದು ಹೇಳಿ ಕಳುಹಿಸಿ, ಹನುಮನನ್ನು ಕರೆದು,—ನೀನು ಲಕ್ಷ್ಮಣನಿಗೆ ಸಹಾಯವಾಗಿ ಹೋಗು. ನನ್ನ ಅಂಗ ರಕ್ಷಣೆಗೆ ವಿಭೀಷಣನೂ ಸುಗ್ರೀವನೂ ಇರುವರು. ತಮ್ಮನ ಯುದ್ಧದ ಲೇಸು ಹೊಲ್ಲೆಹವು ನಿನು ಕೂಡಿತು ಎಂದು, ಹನುಮನನ್ನು ಲಕ್ಷ್ಮಣನೊಡನೆ ಕಳುಹಿಸಿ, ಬಿಲ್ಲನ್ನು ಮೊಣಕಾಲಿಂದ ಬಾಗಿಸಿ, ತಿರುವನ್ನು ಬಿಲ್ಲಿನ ಕೊನೆಗೆ ಸಂಧಿಸಿ, ಕುಂಭಕರ್ಣನ ಎದುರಿನಲ್ಲಿ ನಿಂತು, ಶಿಂಜಿನಿಯನ್ನು ಶೆಳೆದು, ಟಂಕಾರ ಧ್ವನಿಯಿಂದ ಕುಂಭಕರ್ಣನನ್ನು ಯುದ್ಧಕ್ಕೆ ಕರೆದನು. ಶಿಡಿದ ಕಿವಿ ಮೂಗುಗಳ ಭಟನು ರಾಮನ ಬಿಲ್ಲಿನ ಧ್ವನಿಯು ಶಿಡಿಲು ಹೊಡೆದಂತಾಗಲು;—ಮಾ, ಮಾ, ರಾಮನೇ, ರಣದಲ್ಲಿ ಭೀಮನೇ, ಭಾಪೆನುತ್ತ, ತನ್ನ ಉಕ್ಕಿನ ರಥವನ್ನು ನೂಕಿ, ಬಾಣವನ್ನು ತುಡುಕಿ, ಬಿಲ್ಲಿಗೆ ಸಂಧಿಸಿ, ರಾಮನನ್ನು ಕುರಿತು—ಎಲೈ, ರಾಮನೇ, ನೀನೇಯೋ, ಬನದಲ್ಲಿ ಭಾಮಿನಿಯನ್ನು ಹೋಗಲಾಡಿ ಕೊಂಡವನು? ನೀನು ಬಹು ಪರಾಕ್ರಮಶಾಲಿಯಾಗಿದ್ದೀ. ನಮ್ಮ ರಣದ ಉತ್ಸವವನ್ನು ನೀನು ನೋಡೆಂದು ಘರ್ಜಿಸಿದನು.

ಅದಕ್ಕೆ ಶ್ರೀರಾಮನು—ಎಲೈ, ಕುಂಭಕರ್ಣನೇ, ನೀವು ರಕ್ಕಸರಾಯ ಕುಲದವರು. ನಾವು ರಕ್ಕಸರಲ್ಲ. ನಿಮಗೆ ದೇವ ಕುಲವು ಅಂಜುವದು. ನಾವು ದೇವ ಕುಲಕ್ಕೆ ಅಂಜುವೆವು. ನಿಮಗೆ ನಮಗೆ ಸರಿ ಎಂದರೇನು? ಆದರೂ, ನಮ್ಮ ಜಗಳದ ರೀತಿಯನ್ನು ನೀನು ಸಂಭಾವಿಸಿ ನೋಡು ಎನುತ್ತ, ಸಮಾನವಿಲ್ಲದ ಬಾಣವನ್ನು ಹೂಡಲು; ಅದನ್ನು ಕಂಡು, ರಾಕ್ಷಸನು ರಾಮನಸ್ತ್ರವು ತನ್ನ ಬಳಿಗೆ ಬರುವದಕ್ಕಿಂತ ಮುಂಚೆಯೋ ಅದಕ್ಕೆ ಪ್ರತಿಯಾಗಿ ಎಷ್ಟು ಬಾಣಗಳನ್ನು ಹಾಕಿದರೂ, ಆ ರಾಮ ಬಾಣಗಳು ಅವುಗಳನ್ನು ಗಣಿಸದೆ, ಖಳನ

ಅವಯವಗಳನ್ನು ಬಗೆದು, ರಕ್ತಗಳನ್ನು ಹೊರಡಿಸಿದವು. ಆಗ ಕುಂಭಕರ್ಣನು ಬಾಣ ಪ್ರಯೋಗಗಳನ್ನು ಮಾಡಿ, ರಾಮನ ಮೈಯಲ್ಲಿ ಒಂದಕ್ಕೆರಡಾಗಿ ರಕ್ತ ಪ್ರವಾಹವನ್ನು ಸುರಿಸಿದನು. ಬಿಲ್ಲುಗಳೋ? ಕಾಮನ ಬಿಲ್ಲುಗಳೋ? ಹೆದೆಯ ಧ್ವನಿಗಳೋ? ಸಿಡಿಲಿನ ಧ್ವನಿಗಳೋ? ತನುಗಳೋ? ಉದಕ ತುಂಬಿದ ಮೇಘಗಳೋ? ಬಾಣ ಸಮೂಹಗಳೋ? ಮಳೆಗಳ ಧಾರೆಗಳೋ? ಅವರಿಬ್ಬರ ಜಗಳವು ವರ್ಷಾ ಕಾಲದಂತೆ ಜಗತ್ತನ್ನು ಮೋಹಿಸಿತು. ರಾಮನು ಅಂಬನ್ನು ತಿರುವಿನಲ್ಲಿ ಹೂಡಲು, ಆಕಾಶದಲ್ಲಿ ಬೃಹಸ್ಪತಿಯು—ಶಾಬಾಸು, ರಾಮಾ! ಎಂದು ಹೊಗಳುತ್ತಿರುವನು. ಕುಂಭಕರ್ಣನು ಹೂಡಲು, ಶುಕ್ರಾಚಾರ್ಯನು—ಭಾಪುರೆ, ಕುಂಭಕರ್ಣನೇ! ಎಂದು ಕೊಂಡಾಡುವನು. ಇವರಿಬ್ಬರ ಎಸುಗೆಯಲ್ಲಿ ರವಿ ಮಂಡಲವೆಲ್ಲಾ ಬಾಣದಿಂದ ತುಂಬಿತು.

ಆಗ ಶ್ರೀರಾಮನು ಕುಂಭಕರ್ಣನನ್ನು ಕುರಿತು—ಎಲೈ, ಅಸುರಾ, ಕೇಳು. ಕಠೋರ ಖಳರಲ್ಲಿ ಹೆಸರಾದ ಶೂರ ಭಟನು ನೀನು. ನಿನ್ನಂಥ ಜಗದೇಕ ವೀರನು ಈ ಮೂರು ಲೋಕದಲ್ಲಿಯೂ ಇಲ್ಲ. ನೀನು ನಮ್ಮೊಳು ಹಗೆ ಮಾಡಿದವನಲ್ಲ. ನಿನ್ನನ್ನು ನಾನು ಕೊಲ್ಲುವವನಲ್ಲ. ನಮ್ಮ ಅಮೋಘವಾದ ಅಸ್ತ್ರಕ್ಕೆ ನಿಮ್ಮಣ್ಣನು ಗುರಿಯು. ಆತನನ್ನು ಕಳುಹಿಸು; ಹೋಗು! ನಮ್ಮ ಆಹವದಲ್ಲಿ ನಿನ್ನ ಅಣ್ಣನು ಅಳಿದ ಮೇಲೆ, ನಿನ್ನ ತಮ್ಮ ವಿಭೀಷಣನಂತೆ ಸುಖವಾಗಿ ಬದುಕುವದು ಲೇಸು. ಸತ್ತು ಕಾಣುವ ಸ್ವರ್ಗಕ್ಕಿಂತ ಇದು ಲೇಸೋ, ಅಲ್ಲವೋ? ನಿನ್ನ ಮನಸ್ಸಿನಲ್ಲಿಯೇ ತಿಳಿದುಕೋ, ಅಂದನು.

ಅದಕ್ಕೆ ಕುಂಭಕರ್ಣನು—ಎಲೈ, ಶ್ರೀರಾಮ ಚಂದ್ರನೇ, ನಾವು ತಾಮಸರು. ಮೇಲೆ ನಮಗೆ ಆಸುರ ಕರ್ಮದ ಬಳಕೆ. ಇಳೆಯ ಮೂರ್ಖರಿಗೆಲ್ಲಾ ನಾವು ಗುರುಗಳು. ತಲೆ ಹೋದರೂ, ಅಟ್ಟೆಯಲ್ಲಿ ಕಾದುವರೆಂಬುವದನ್ನು ನೀನು ಕೇಳಿ ಅರಿಯಾ? ನೀವು ರಾಜೇಂದ್ರರು, ಕರುಣಾಶಾಲಿಗಳು, ಹೌದು! ನಿನ್ನ ಕೋಮಲ ಹೃದಯವನ್ನು ನನ್ನ ತಮ್ಮನೊಬ್ಬನಲ್ಲಿ ಇಟ್ಟಿರುವದೇ ಸಾಕು. ನಮ್ಮಲ್ಲಿ ಕಲ್ಲು ಹೃದಯವೇ ಇರಲಿ. ಕರುಣದ ಮಾತೇಕೆ? ನೋಡು, ನಮ್ಮ ಸರಳಿನ ಸಾರವನ್ನು! ಎಂದು, ರಾಮನನ್ನು ಹೊಡೆದನು.

ರಾಮನು ಆ ಬಾಣದ ಪೆಟ್ಟನ್ನು, ವಿಶ್ವಾಮಿತ್ರನು ಕೊಟ್ಟು ಇದ್ದ ಮಂತ್ರ ಕವಚದ ಶಕ್ತಿಯಿಂದಲೂ, ತಾನು ಲಕ್ಷ್ಮೀ ಪತಿಯಾದ್ದರಿಂದಲೂ, ತಾಳಿದನಲ್ಲದೆ, ಮತ್ತೆ ಸುರೋರಗ ಮನುಷ್ಯರಲ್ಲಿ ಯಾರಾದರು ಬದುಕುವರುಂಟೇ? ಎಂದು, ದೇವತೆಗಳು ಮೇಲೆ ಹೇಳುತ್ತಿರಲು; ರಘುರಾಮನು ಆತನ ಬಾಣಗಳನ್ನೆಲ್ಲಾ

ತರಿದೊಟ್ಟು, ಒಂದು ಮಹಾಸ್ತ್ರವನ್ನು ಬಿಲ್ಲಿನಲ್ಲಿ ಹೂಡಿ, ಆ ಖಳನ ಧನುಸ್ಸನ್ನು ಎರಡು ತುಂಡಾಗಿ ಕತ್ತರಿಸಿದನು. ಆಗ ಕುಂಭಕರ್ಣನು ಮೊದಲು ಕಮಲದ ಮಗನು ತನಗೆ ಕೊಟ್ಟಿದ್ದ ಶಕ್ತಿಯನ್ನು ಮೂಡಿಗೆಯಿಂದ ತೆಗೆಯಲು, ಧಳ್ಳುರಿಯು ಧಗ ಧಗ ಎಂದು ಆಕಾಶವನ್ನು ವ್ಯಾಪಿಸಿತು. ದೇವತೆಗಳೆಲ್ಲಾ ದಿಕ್ಕು ದಿಕ್ಕಿಗೆ ಓಡಿ ಹೋದರು. ಅಂಥಾ ಶಕ್ತಿಯನ್ನು ಕೈಯಲ್ಲಿ ತೆಗೆದು ಕೊಂಡು, ರಾಮನನ್ನು ನೋಡಿ—ಎಲೈ, ರಾಮನೇ, ಇದು ಹರಿ ಹರ ಬ್ರಹ್ಮರೇ ಮೊದಲಾದವರ ಎದೆಗಳನ್ನು ಗಡಗಡನೆ ನಡುಗಿಸುವಂಥ ಶಕ್ತಿಯು. ಇದರಲ್ಲಿ ನೀನು ಉಳಿದರೆ, ದಶವದನನು ತಂದ ಹೆಂಗಸಿನ ಮುಂದಣ ಮದುವೆ ನಿನ್ನದು; ನಿನಗೆ ಸರಿಯಾದ ಸುಭಟರಿಲ್ಲ, ಅಂದನು. ಆಗ ವಿಭೀಷಣನು ಮನಸ್ಸಿನಲ್ಲಿ—ರಾಮನ ಕೀರ್ತಿಯು ಉಡುಗಿತೇ? ಪ್ರಳಯ ಶಕ್ತಿಯನ್ನು ತಡೆಯುವವರ್ಯಾರು? ಎಂದು ಯೋಚಿಸಿ, ಗಡ ಗಡನೆ ನಡುಗುತ್ತ, ರಾಮನ ಬಳಿಗೆ ಓಡಿ ಬರುತ್ತಿರಲು; ಶ್ರೀರಾಮನು ವಿಭೀಷಣ ಬರುವ ಸಂಜ್ಞೆಯನ್ನು ತಿಳಿದು, ಬ್ರಹ್ಮನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ, ಬೇಗನೆ ಬಿಲ್ಲಿನಲ್ಲಿ ವಾಯವ್ಯಾಸ್ತ್ರವನ್ನು ಹೂಡಿ, ಅವನ ಕೈಯಲ್ಲಿರುವ ಶಕ್ತ್ಯಾಯುಧದ ಮೇಲೆ ಪ್ರಯೋಗಿಸಲು; ಆ ಅಸ್ತ್ರವು ಅವನ ಕೈಯಲ್ಲಿ ಇರುವ ಶಕ್ತಿಯನ್ನು ಆಕಾಶಕ್ಕೆ ಹಾರಿಸಿತು. ಆ ಶಕ್ತಿಯು ಆಕಾಶ ಗಂಗೆಯ ನೀರುಗಳನ್ನೆಲ್ಲಾ ಕುಡಿದು, ಇಂದ್ರನೇ ಮೊದಲಾದ ದೇವತೆಗಳನ್ನೆಲ್ಲಾ ಸುಟ್ಟು, ಸತ್ಯ ಲೋಕಕ್ಕೆ ಹೋಗಿ, ಬ್ರಹ್ಮನ ಮೂಡಿಗೆಯಲ್ಲಿ ನಿಂತಿತು. ಕುಂಭಕರ್ಣನು ಆ ಕೈದು ಕೈ ಮೀರಿ ಹೋದದ್ದನ್ನು ಕಂಡು, ಕಂಗೆಡದೆ, ಪರಿಘಾಯುಧದಿಂದ ರಾಮನನ್ನು ಹೊಡೆಯಲು; ಆತನು ಅದನ್ನು ಐದು ಬಾಣಗಳಿಂದ ಕತ್ತರಿಸಿದನು. ಮತ್ತೆ ಕುಂಭಕರ್ಣನು ಕೋಪದಿಂದ ಮೇರು ಪರ್ವತದಂತೆ ತೋರವಾದ ಗದೆಯನ್ನು ಹಾಕಲು; ಆ ಗದೆಯು ಲೋಕಗಳನ್ನು ಬೆದರಿಸುತ್ತ ಬರುತ್ತಿರಲು; ಬಿಲ್ಲಾಳುಗಳ ಜಾಣನಾದ ಶ್ರೀರಾಮನು,—ಈ ಗದೆಯು ಈ ಕದನ ಭೂಮಿಯಲ್ಲಿ ಬಿದ್ದರೆ, ನಮ್ಮ ಕಪಿ ಕಟಕಕ್ಕೆ ಹಾನಿಯಾಗುವದೆಂದು ಯೋಚಿಸಿ, ಐವತ್ತು ಬಾಣಗಳಿಂದ ಅದನ್ನು ಕಡಿದು, ಲಂಕೆಯಲ್ಲಿ ಬೀಳುವ ಹಾಗೆ ಮಾಡಲು; ಆ ತುಂಡುಗಳು ಲಂಕೆಯಲ್ಲಿ ಬಿದ್ದು, ರಾಕ್ಷಸರ ಚತುರಂಗ ಬಲಗಳನ್ನು ಬಹಳವಾಗಿ ಕೊಂದವು.

ಆ ಬಳಿಕ ರಕ್ಕಸನು ರಾಮನ ಮೇಲೆ ತನ್ನ ತೇರನ್ನು ನೂಕಲು, ಶ್ರೀರಾಮನು ಆ ತೇರನ್ನು ಎಳೆಯುವ ಆನೆಗಳನ್ನು ಸವರಿ, ಸಾರಥಿಯ ತಲೆಯನ್ನು ಕಡಿದನು. ಅಷ್ಟಾದರೂ, ಖಳನು ಕಂಗೆಡದೆ, ಕಠಾರಿಯನ್ನು ಕೈಯಲ್ಲಿ ತೆಗೆದು

ಕೊಂಡು, ಬೊಬ್ಬಿರಿಯುತ್ತ, ರಾಮನ ಮೇಲೆ ಬರುತ್ತಿರಲು; ಆತನು ದಿವ್ಯಾಸ್ತ್ರದಿಂದ ಅವನ ಹಸ್ತವನ್ನು ಕತ್ತರಿಸಿದನು. ಆ ಮೇಲೆ ಕುಂಭಕರ್ಣನು ತನ್ನ ಉಕ್ಕಿನ ತೇರಿನ ಘಾಲಿಯನ್ನು ಕಳಚಿ ಕೊಂಡು, ಮೋಟ ಕೈಗೆ ಶಿಕ್ಕಿಸಿ ಕೊಂಡು, ರಾಮನ ಮೇಲೆ ತಿರುವಿ, ಹೊಡೆಯುವದಕ್ಕೆ ಉದ್ಯುಕ್ತನಾಗಲು; ರಾಮನು ಮಹಾಸ್ತ್ರದಿಂದ ಅವನ ತೋಳನ್ನು ಕತ್ತರಿಸಿ, ಕಡಲಲ್ಲಿ ಬೀಳುವಂತೆ ಮಾಡಿದನು. ಅದಕ್ಕೂ ಧೈರ್ಯ ಗೆಡದೆ,—ಎಡ ತೋಳಿನಿಂದ ಹೊಡೆಯುವೆನು ಎಂದು, ಬರುತ್ತಿರಲು; ಅದನ್ನು ಅಸ್ತ್ರದಿಂದ ಕತ್ತರಿಸಿ, ರಾಮನು ಸಮುದ್ರದಲ್ಲಿ ಹಾಕಿಸಿದನು. ತಿರಿಗಿ ಖಳನು—ರಾಮನ ಮೇಲೆ ಬಿದ್ದು, ಕೊಲ್ಲುವೆನು ಎಂದು, ಓಡಿ ಬರುತ್ತಿರಲು; ಶ್ರೀರಾಮನು ವೈಷ್ಣವಾಸ್ತ್ರವನ್ನು ಪ್ರಯೋಗಿಸಿ, ಆತನ ತಲೆಯನ್ನು ಕತ್ತರಿಸಿದನು. ಆ ಕುಂಭಕರ್ಣನ ಸಂಹಾರದಿಂದ ದೇವತೆಗಳಿಗೆ ಅರ್ಧ ಭಯವು ಹಿಂಗಿ, ರಾಮನ ಮೇಲೆ ಹೂವಿನ ಮಳೆಯನ್ನು ಸುರಿದರು. ರಾಮನು ಲೋಕ ಕಂಟಕನಾದ ಕುಂಭಕರ್ಣನನ್ನು ಸಂಹರಿಸಿ, ಸುಗ್ರೀವ ವಿಭೀಷಣಾದಿಗಳಿಂದ ಸತ್ಕೃತನಾಗಿ, ಬಿಡಾರಕ್ಕೆ ಹೋದನು. ಲಕ್ಷ್ಮಣ ಹನುಮಂತರು ರಾಕ್ಷಸರ ಸೇನೆಗಳನೆಲ್ಲಾ ಸಂಹರಿಸಿ, ರಾಮನ ಬಳಿಗೆ ಬಂದು, ನಮಸ್ಕರಿಸಲು; ಶ್ರೀರಾಮನು ಸಂತೋಷವೆಂಬ ಸಮುದ್ರದಲ್ಲಿ ಮುಳುಗಿ, ಅವರನ್ನು ಆಲಿಂಗಿಸಿ ಕೊಂಡನು.

72. The Battle of Lanka—Death of Indrajitu.
೭೨. ಇಂದ್ರಜಿತು ಸಂಹಾರ.

ಲಂಕೆಯಲ್ಲಿ ರಾವಣನು, ಕುಂಭಕರ್ಣನು ಸತ್ತು ಹೋದ ಸುದ್ದಿಯನ್ನು ಕೇಳಿ, ಮಹಾ ದುಃಖದಿಂದ ಹಾಸಿಗೆಯ ಮೇಲೆ ಬಿದ್ದು, ಹೊರಳಾಡುತ್ತ, ಚಿಂತಾ ಸಮುದ್ರದಲ್ಲಿ ಮುಳುಗಿ, ಧಡವನ್ನು ಕಾಣದೆ ಇರುತ್ತಿದ್ದನು. ಆ ಸಮಯದಲ್ಲಿ ಶೂರನಾದ ಇಂದ್ರಜಿತುವು ತಂದೆಯ ಬಳಿಗೆ ಬಂದು,—ಎಲೈ, ತಂದೆಯೇ, ಚಿಂತ್ತೈಸು. ನಾಳಿನ ಉದಯ ಮುಖದಲ್ಲಿ ನಾನು ರಾಮ ಲಕ್ಷ್ಮಣರ ಮಾಂಸದಿಂದಲೂ ಸುಗ್ರೀವಾದಿ ಕಪಿಗಳ ಮಾಂಸದಿಂದಲೂ ಪಿಶಾಚಿಗಳ ಸಮೂಹವನ್ನು ಸಾಕದೆ ಇದ್ದರೆ, ನಿನ್ನಿಂದ ಮಂಡೋದರಿಯಲ್ಲಿ ಹುಟ್ಟಿದವನಲ್ಲ. ಈ ಪ್ರತಿಜ್ಞೆಯು ಸಾಗದೆ ಇದ್ದಲ್ಲಿ, ಬೆಂಕಿಯಲ್ಲಿ ಬಿದ್ದು ಸಾಯುವೆನು. ಮನಸ್ಸಿನ ದುಗುಡವನ್ನು ಬಿಡು. ನನ್ನ ಕದನಕ್ಕೆ ಇದೇ ಕಡೆ ಎಂದು ಭಾಷೆಯನ್ನಿತ್ತು, ರಥವನ್ನು ಏರಿ, ರಿಪು ಮಾರಣದ ಮಂತ್ರದ ರಾಕ್ಷಸ ಬ್ರಾಹ್ಮಣರ ಗುಂಪಿನೊಡನೆ ಆ ರಾತ್ರೆ ನಿಕುಂಭಿನಿಗೆ ಬಂದು, ಅಗ್ನಿಯನ್ನು ಪ್ರತಿಷ್ಠಿಸಿ, ಆಸುರ

ಹೋಮವನ್ನು ಮಾಡಲುದ್ಯೋಗಿಸಿ, ಮಾಂಸದ ಚರುವನ್ನೂ, ರಕ್ತದ ತುಪ್ಪದ ಧಾರೆಗಳನ್ನೂ, ನರದ ದರ್ಭೆಗಳನ್ನೂ, ಬೆರಳ ಸಮಿತ್ತುಗಳನ್ನೂ ಹೋಮಾ ಮಾಡಿ, ಪೂರ್ಣಾಹುತಿಯನ್ನು ಮಾಡಲು; ಆಗ ಬ್ರಹ್ಮನು ಬಂದು, ಬಹ್ಮಾಸ್ತ್ರವನ್ನು ಕೊಟ್ಟು,—ನಾಳೆ ಕಾಳಗದಲ್ಲಿ ಜಯವಾಗುವದು ಎಂದು, ವರವನ್ನು ಕೊಟ್ಟು, ಹೋದನು. ಇಂದ್ರಜಿತುವು ಅಗ್ನಿ ಕುಂಡದಿಂದ ಹುಟ್ಟಿದ ದಿವ್ಯ ರಥ, ಕುದುರೆ, ಬಾಣ, ಬಿಲ್ಲುಗಳನ್ನು ತೆಗೆದು ಕೊಂಡು, ತಿರಿಗಿ ತಂದೆಯ ಬಳಿಗೆ ಬಂದು—ಎಲೈ, ಜನಕನೇ, ಈ ವರಿಗೂ ನಿನಗಾದ ಸೋಲೆಂಬ ಸಶಿಯನ್ನು ಕಿತ್ತು, ರಾಮನ ಹೊಟ್ಟೆ ಎಂಬ ಗದ್ದೆಯಲ್ಲಿ ನೆಡುವೆನು. ಲಕ್ಷ್ಮಣನ ರಕ್ತವೆಂಬ ನೀರಿನಿಂದ ಬೆಳಸುವೆನು. ಅದರ ಫಲವನ್ನು ಸುಗ್ರೀವನೇ ಮೊದಲಾದ ಕೋತಿಗಳು ತಿನ್ನುವ ಹಾಗೆ ಮಾಡುವೆನು. ಈ ವರಿಗೆ ಸತ್ತು ಹೋದ ಕುಂಭಕರ್ಣನೇ ಮೊದಲಾದ ಸುಭಟರುಗಳನ್ನು ನಿನ್ನ ಓಲಗದ ಚಾವಡಿಯಲ್ಲಿ ಇರ ಮಾಡುವೆನು. ಕೊಡದೆ ಇದ್ದರೆ, ಯಮನ ಹೊಟ್ಟೆಯನ್ನು ಬಗೆದು, ಕಲ್ಲು ಮರಗಳನ್ನು ತುಂಬುವೆನು, ಎಂದು ಹೇಳಿ, ವೀಳಯವನ್ನು ತೆಗೆದು ಕೊಂಡು, ಚತುರಂಗ ಬಲ ಸಮೇತನಾಗಿ ಯುದ್ಧ ಭೂಮಿಗೆ ಬಂದನು.

ಆಗ ಸೇನಾಪತಿಯಾದ ನೀಲನ ಅಪ್ಪಣೆಯ ಪ್ರಕಾರ ಸಕಲ ಕಪಿ ಸೇನಾಪತಿಗಳು ಬೆಟ್ಟ ಗುಡ್ಡಗಳನ್ನು ತೆಗೆದು ಕೊಂಡು, ಯುದ್ಧಕ್ಕೆ ಸನ್ನದ್ಧರಾಗಿ ನಿಂತರು. ಆಗ ಕಪಿ ಸೇನೆಗೂ ರಾಕ್ಷಸ ಸೇನೆಗೂ ಮಹಾ ಯುದ್ಧವು ಆಗಿ, ಬಹು ಜನವು ಉಭಯ ಬಲದಲ್ಲಿಯೂ ಸತ್ತು ಹೋಯಿತು. ಶ್ರೀರಾಮ ಚಂದ್ರನು ಆ ವೇಳೆಯಲ್ಲಿ ಆದ ಅವಶಕುನಗಳನ್ನು ನೋಡಿ, ಜಾಂಬವಂತನನ್ನು ಕುರಿತು—ಏನೈ, ಈ ದಿವಸ ಇಂಥ ಭಯಂಕರವಾದ ಉತ್ಪಾತಗಳು ತೋರುತ್ತವೆ, ಎಂದು ಕೇಳಲು; ಆತನು ಎದ್ದು, ಕೈ ಮುಗಿದು,—ಜೀಯಾ, ಏನು ಹೇಳಲಿ? ಈ ದಿವಸದ ಯುದ್ಧದಲ್ಲಿ ನಮ್ಮ ಬಲಕ್ಕೆ ಮರಣ ತಪ್ಪದು ಎಂದು ಹೇಳಿ, ಸುಗ್ರೀವನನ್ನು ಏಕಾಂತದಲ್ಲಿ ಕರೆದು,—ಈ ದಿನ ನಮಗೆ ಸಾವು ತಪ್ಪದು. ಇದಕ್ಕೆ ತಕ್ಕ ಯೋಚನೆಯನ್ನು ಮಾಡು, ಅಂದನು.

ಅದನ್ನು ಕೇಳಿ, ಸುಗ್ರೀವನು ರಾಮನ ಸಮೀಪದಲ್ಲಿ ಹನುಮಂತನನ್ನೂ ಸುಷೇಣನನ್ನೂ ಇರಿಸಿ, ಕಪಿ ಪಡೆಯ ಒಡ್ಡಿನ ಮೂಡಣ ಭಾಗದಲ್ಲಿ ಶತಬಲಿ ವಿಭೀಷಣರನ್ನು ನೇಮಿಸಿ, ಗವಾಕ್ಷ, ಶಗಭ, ಮೈಂಧ, ದ್ವಿವಿದರನ್ನು ಪಡುವಲು ಭಾಗದ ಕಾವಲಿಗೆ ನಿಲ್ಲಿಸಿ, ನೀಲಾಂಗದರು ಸಹಿತ ಯುದ್ಧಕ್ಕೆ ಸನ್ನದ್ಧನಾಗಿ ನಿಂತನು. ಆಗ ಮಾಯೆಯಲ್ಲಿ ಶಂಬರನೋ? ಮಾರೀಚನೋ? ವಿದ್ಯುಜ್ಜಿಹ್ವ

ನೋ? ಪ್ರಳಯ ಕಾಲದಲ್ಲಿ ಅಖಿಲ ಭುವನಾವಳಿಯ ಕೊಲೆ ಗೆಲಸಕ್ಕೆ ಹೊಕ್ಕ
ಫಾಲ ನೇತ್ರನೋ? ಎಂಬಂತೆ, ಇಂದ್ರಜಿತುವು ಕಪಿ ಬಲದೊಳಗೆ ಮೈದೋರಿ,
ಮಾಯೆಯನ್ನು ಬೆಳಸಿ, ನಾನಾ ರೂಪಾಗಿ, ಕಣೆಗಳಲ್ಲಿ, ಗದಗಸಗಳಲ್ಲಿ, ಡೊಂ
ಕಣಿಗಳಲ್ಲಿ, ಪರಿಘ, ಪರಶು, ಮುಸುಂಡಿಗಳಲ್ಲಿ, ಕುಂತ, ಕಠಾರಿ, ಕತ್ತಿಗಳಲ್ಲಿ,
ಕೊಂದನು. ಮತ್ತು ಬೆಟ್ಟಗಳಾಗಿ ಬಿದ್ದು, ಹುಲಿಗಳಾಗಿ ಕುತ್ತಿಗೆಗಳನ್ನು ಹಿಡಿ
ದು, ರಕ್ತಗಳನ್ನು ಹೀರಿ, ಸಿಂಹಗಳಾಗಿ ಕ್ರೂರ ದಾಡೆಗಳಿಂದ ಕಚ್ಚಿ, ಹಾವುಗ
ಳಾಗಿ ವಿಷ ಜ್ವಾಲೆಗಳಿಂದ ಸುಟ್ಟು, ಕಪಿ ಬಲಗಳನ್ನು ಕೊಂದನು. ಆಗ ದಿ
ಕ್ಕು ದಿಕ್ಕಿಗೆ ಓಡುವ ತನ್ನ ಕಪಿ ಸೇನೆಗಳನ್ನು ನೋಡಿ,—ಎಲೈ, ಭಟರುಗಳ
ರಾ, ಒಡೆಯನಿಗೆ ತಲೆಗಳನ್ನು ಕೊಡುವದಕ್ಕೆ ಇದೇ ಸಮಯವೆಂದು ಕೂಗಲು;
ಆ ಮಾತನ್ನು ಕೇಳಿ, ಎಪ್ಪತ್ತೇಳು ಕೋಟಿ ಕಪೀಶ್ವರರು ತಿರುಗಿ, ಗಿರಿ ತರುಗ
ಳ ಸಮೂಹದಿಂದ ಹಗೆಯನ್ನು ಮುಚ್ಚಿದರು.

ಮತ್ತೆ ಇಂದ್ರಜಿತುವು ಮಾಯೆಯಿಂದ ಕೆಲವರನ್ನು ಟಗರಾಗಿ ತಾಗಿದನು.
ಕಾರ್ಬೊಗೆಯಾಗಿ ಕೆಲವರನ್ನು ಕವಿದನು. ಹರಿಯಾಗಿ ಹೊಯಿದನು. ಕೆಲವ
ರ ಮೇಲೆ ಬೆಟ್ಟವಾಗಿ ಹೊರಳಿದನು. ಕೆಲವರನ್ನು ಸಮುದ್ರವಾಗಿ ಮುಳುಗಿಸಿ
ದನು. ಕೆಲವರನ್ನು ಕಾಲ ಭೈರವನಾಗಿ ಮೆಟ್ಟಿದನು. ಕೆಲವರನ್ನು ವಿಷದುರಿ
ಯಾಗಿ ಬೆಚ್ಚಿಸಿದನು. ಸಿಡಿಲಾಗಿ ಎರಗಿದನು. ಬೆಂಕಿಯಾಗಿ ಉರುಬಿದನು.
ಬೇರುಂಡನಾಗಿ ತುಂಡಿಸಿದನು. ಕಾಡನಾಗಿ ಸೀಳಿದನು. ಈ ಪ್ರಕಾರ ಕೋ
ಟ್ಯಾಂತರ ಕಪಿಗಳನ್ನು ಕೊಂದು ಹಾಕಲು; ಅವನ ಮಾಯಾ ಸಮರಕ್ಕೆ ನಿ
ಲ್ಲಲಾರದೆ, ರವಿಸುತನ ಒಡ್ಡುಗಳೆಲ್ಲಾ ರಾಮನ ಮರೆ ಹೊಕ್ಕವು. ಉಳಿದ
ಮಾತೇನು? ರಾವಣಿಯು ರಾಮನ ಎದುರಿನಲ್ಲಿ ಬಂದು, ನಿಂತು, ಚಿನ್ನದ ಗರಿಗಳು
ಳ್ಳ ಹೊಸ ಬಾಣಗಳನ್ನು ಕಾರ್ಮುಗಿಲ ಮಳೆಯಂತೆ ಕರೆದನು. ರಾಮನು ಅ
ನೇಕ ಬಾಣ ವರ್ಷಗಳಿಂದ ಇಂದ್ರಜಿತುವನ್ನು ಮುಚ್ಚಿ, ಅನೇಕ ಕೋಟಿ ರಾ
ಕ್ಷಸರುಗಳನ್ನು ಕೊಂದು ಹಾಕಿದನು. ಅದನ್ನು ನೋಡಿ, ಇಂದ್ರಜಿತುವು, ಈ
ತನು ಸತ್ಯಯುದ್ಧದಲ್ಲಿ ಸೋಲುವವನಲ್ಲವೆಂದು ಯೋಚಿಸಿ, ಮಾಯೆಯಿಂದ ಕಾ
ರ ಕಗ್ಗತ್ತಲೆಯನ್ನು ನಿರ್ಮಿಸಿ, ಬ್ರಹ್ಮನು ಕೊಟ್ಟ ರಥವನ್ನು ಸ್ಮರಿಸಿ, ಅದರ ಮೇ
ಲೆ ಏರಿ, ಆಕಾಶ ಮಾರ್ಗಕ್ಕೆ ಹಾರಿದವನಾಗಿ, ಬ್ರಹ್ಮ ದತ್ತ ಕಾರ್ಮುಕವನ್ನು
ಕೈಯಲ್ಲಿ ತೆಗೆದು ಕೊಂಡು, ಹೆದೆಯನ್ನು ಏರಿಸಿ, ಝೇವಡೆಯಲು; ಕಪಿಗಳ
ತಂಡವು ಬಿಲ್ಲಿನ ರಭಸಕ್ಕೆ ಬೆದರಿ, ಭೂಮಿಯಲ್ಲಿ ಬಿತ್ತು. ತ್ರಿದಶ ಪತಿಯು
ಬೆದರಿದನು. ಅಂತಕನು ಸರಿದನು. ಅಗ್ನಿಯು ಹಾಯ್ದನು. ವರುಣನು ಓಡಿ

ದನು. ಕುಬೇರನು ಅಡಗಿ ಕೊಂಡನು. ವಾಯುವು ಗುಹೆಯಲ್ಲಿ ಶೇರಿ ಕೊಂಡನು. ಈಶ್ವರನು ಅದೃಶ್ಯನಾದನು. ನಿರುತಿಯು ಇಂದ್ರಜಿತುವನ್ನೇ ಮರೆ ಹೊಕ್ಕನು. ಪ್ರಳಯ ಕಾಲದ ಮೇಘದ ಕಪ್ಪು ಕಾಂತಿಯೋ? ಇಂದ್ರಜಿತುವಿನ ಮೈ ಕಾಂತಿಯೋ? ಗುಡುಗುಗಳೋ? ಅವನ ಆರ್ಭಟೆಗಳೋ? ಹೊಳೆಯುವ ಮಿಂಚೋ? ತೇರಿನ ಬೆಳಕೋ? ಹೊಡೆಯುವ ಸಿಡಿಲೋ? ಬಾಣಗಳ ಪೆಟ್ಟೋ? ಯಾರು ಹೋಲಿಸ ಬಹುದು? ಶಿವ, ಶಿವ! ಮಾರಿ ಮುಳಿದಂತಾಯಿತು! ನೆತ್ತರಿನ ತೊರೆಯಲ್ಲಿ ತೇಲಿ ಹೋಗುವ ಕಪಿಗಳಿಗೆ ಕಡೆಯೇ ಇಲ್ಲ. ಹೆಣಗಳನ್ನು ಬಗೆ ಬಗೆದು, ಕೆಲವು ಕಪಿಗಳು ಹುಣುಗಿ ಕೊಂಡವು. ಕೆಲವು ಬೆಟ್ಟಗಳ ಇರಿಬಿನಲ್ಲಿ ಹುದುಗಿದವು. ಕೆಲವು ಹರಿಯುವ ರಕ್ತದ ಹೊಳೆಗಳಲ್ಲಿ ಮುಳುಗಿ ಕೊಂಡವು. ಬೆಟ್ಟವನ್ನು ಕೊಡೆಯಾಗಿ ಹಿಡಿದು ಕೊಂಡು, ಮರದಿಂದ ಮರಕ್ಕೆ ಪುಟ ನೆಗೆದು, ಅಂಬರದಲ್ಲಿ ಬಾಲವನ್ನೆತ್ತಿ ಕೊಂಡು, ಹಾರ್ರ್ಯಾಡುವ ನಳನೇ ಮೊದಲಾದ ಕಪಿ ಭಟರ ಹೊಟ್ಟೆಯಲ್ಲಿ ಬಾಣಗಳನ್ನು ತುಂಬಿದನು. ಮತ್ತು ಕಪಿಗಳ ಕಡಿದ ತಲೆಗಳ ಬಣಬೆಗಳನ್ನು ಯುದ್ಧಾಂಗಣವೆಂಬ ಕಣದಲ್ಲಿ ಒಟ್ಟಿದನು. ಕಡಿದ ತಲೆ ತೋಳುಗಳ,—ಬಾಣಗಳಿಂದ ಕೊರೆದ ಹೊಟ್ಟೆಗಳ,—ಹೊರಟ ಕರುಳುಗಳ,—ಮುರಿದ ಮೂಳೆಗಳ,—ತುಂಡಾದ ತೊಡೆ ಮೊಣ ಕಾಲುಗಳ,—ಬೆಜ್ಜಿ, ಹಲ್ಲುಗಳನ್ನು ಕಿರಿಯುತ್ತಲಿರುವ ಕಪಿ ಹೆಣಗಳ ಸಮೂಹದಿಂದ ರಣ ಭೂಮಿಯೆಲ್ಲಾ ಹೇಸಿಗೆಯಾಯಿತು. ಹೀಗೆ ಕೂಡಿದ ಎಪ್ಪತ್ತೇಳು ಕೋಟಿ ಕಪಿ ನಾಯಕರು ಭೂಮಿಯಲ್ಲಿ ಒರಗಿದರು.

ಆಗ ಬ್ರಹ್ಮನಿಂದ ಬಂದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ, ಹನುಮಂತನನ್ನು ಕಟ್ಟಿದನು. ಜಾಂಬವಂತನನ್ನು ಬಿಗಿದನು. ಉಳಿದ ಸುಗ್ರೀವಾದಿ ಸಮಸ್ತ ಕಪಿ ಸೇನಾ ಪತಿಗಳನ್ನು ರಣ ಭೂಮಿಯಲ್ಲಿ ಒರಗಿಸಿದನು. ಆ ಬಳಿಕ—ಹೆಂಡತಿಯನ್ನು ಕಳ ಕೊಂಡ ಅಳಲಿಗೆ ತಮ್ಮನೊಡನೆ ಕೂಡಿ ಬಂದು, ಕಪಿಗಳ ಸೇನೆಯನ್ನು ಕೊಲ್ಲಿಸಿದ ಕಲಿಯು ನೀನೇ? ಎಂದು, ರಾಮ ಲಕ್ಷ್ಮಣರನ್ನು ನೆಲದಲ್ಲಿ ಮಲಗಿಸಿ, ಜಯ ಭೇರಿಯನ್ನು ಹೊಡಿಸಿ, ಉಳಿದ ರಾಕ್ಷಸ ಸೇನಾ ಸಮೇತನಾಗಿ ಲಂಕೆಗೆ ಬರುತ್ತ, ಮುಂಚಿತವಾಗಿ ತಂದೆಗೆ ಒಸಿಗೆಯನ್ನು ಹೇಳಿ ಕಳುಹಿಸಲು; ರಾವಣನು ಆ ಮಾತನ್ನು ಕೇಳಿ, ಮಗನ ಎದುರಿಗೆ ಬಂದು, ಬಾಚಿ, ತಬ್ಬಿ ಕೊಂಡು,—ಮಗನೇ, ನನ್ನ ನಗೆಗೇಡು ಮಾಡದೆ, ಛಲೋಕ್ತಿಯನ್ನಾಡಿ, ನನ್ನ ಮನದ ದುಖ್ಖವನ್ನಿಂಗಿಸಿಸಲು, ನನ್ನ ಹಗೆಗಳನ್ನು ಗೆದ್ದು, ಬಂದೆಯಾ? ಎಂದು, ದಿವ್ಯ ವಸ್ತ್ರಾಭರಣಗಳನ್ನು ಉಡುಗೆರೆಯಾಗಿ ಕೊಟ್ಟು, ಮನ್ನಿಸಿ,

ಆತನ ಮನೆಗೆ ಕಳುಹಿಸಿ, ತಾನೂ ತನ್ನ ಅರಮನೆಯನ್ನು ಹೊಕ್ಕು, ತನ್ನ ಪಟ್ಟದ ಹೆಂಡತಿಯಾದ ಮಂಡೋದರಿಯೊಡನೆ ಮಗನ ಜಗಳದ ಜಯದ ಸುದ್ದಿಯನ್ನು ಹೇಳಿ, ಸಂತೋಷದಿಂದ ಆ ದಿವಸ ಸುಖವಾಗಿ ನಿದ್ದೆ ಹೋದನು.

ಇತ್ತಲು ರಣ ಭೂಮಿಯಲ್ಲಿ ನಿಶ್ಶಬ್ದವಾದ ರಣವನ್ನು ಕಂಡು, ವಿಭೀಷಣನು ಕಣ್ಣೀರುಗಳನ್ನು ಸುರಿಸುತ್ತ, ಪಾಪಿಯ ಮಾಯಾ ಜಗಳದಲ್ಲಿ ರಾಘವೇಶ್ವರನ ಕಪಿ ಬಲಾಂಬುಧಿಯು ಬತ್ತಿತಲ್ಲಾ! ಸುಗ್ರೀವ ಜಾಂಬವ ಹನುಮ ಸುಷೇಣಾದಿಗಳು ಏನಾಗಿರುವರೋ? ರಾಮ ಲಕ್ಷ್ಮಣರು ಹ್ಯಾಗಿರುವರೋ? ಎಂದು, ರಾಮನನ್ನು ಹುಡುಕುತ್ತ, ಹೆಣಗಳನ್ನು ತಿಂದು, ನೊರೆ ರಕ್ತಗಳನ್ನು ಕುಡಿದು, ಕುಣಿಯುವ ಪಿಶಾಚಿಗಳನ್ನು ನೋಡಿದನು. ಅವುಗಳಲ್ಲಿ ಕೆಲವು ಪಿಶಾಚಿಗಳು ಆನೇ ಕುಂಭ ಸ್ಥಳಗಳೆಂಬ ಮದ್ದಲೆಗಳನ್ನು ಬಾರಿಸಿದವು. ಕೆಲವು ಆನೆಗಳ ಸೊಂಡಿಲುಗಳನ್ನು ತೆಗೆದು ಕೊಂಡು, ಕೊಂಬುಗಳೂದಿದವು. ಕೆಲವು ಕುದುರೆಗಳ ಕಾಲು ಕೊಳಗಗಳನ್ನು ತೆಗೆದು ಕೊಂಡು, ತಾಳವನ್ನು ಹೊಡೆದವು. ಕೆಲವು ಹಾಡುಗಳನ್ನು ಹಾಡಿದವು. ಕೆಲವು ಕುಣಿದವು. ಅದನ್ನು ನೋಡುತ್ತ, ಮಜ್ಜ, ಮಾಂಸ, ನೆಣ, ನರ, ಎಲು, ರಕ್ತ, ಕೊಬ್ಬು, ಇವುಗಳಿಂದ ಕೆಸರಾಗಿ ಭೂಮಿಯಲ್ಲಿ ಕಾಲಿಕ್ಕಲು, ಸೊಂಟ ತನಕ ಹೂಳಿ ಹೋಗುತ್ತ, ಗದೆಯನ್ನೂರಿ ಕೊಂಡು, ಮೇಲಕ್ಕೆದ್ದು, ಪ್ರಯಾಸದಿಂದ ಹೆಜ್ಜೆ ಇಕ್ಕುತ್ತ ಬಂದು, ಶ್ರೀರಾಮನನ್ನು ಕಂಡು, ಲಕ್ಷ್ಮಣನ ಇರುವಿಕೆಯನ್ನು ನೋಡಿ, ಘನವಾದ ಶೋಕಾಂಬುಧಿಯಲ್ಲಿ ಒಡಲನ್ನು ಈಡಾಡಿ,—ವನಜನಾಭನೇ, ಮುಕುಂದನೇ, ಭೃತ್ಯನಾದ ನನ್ನನ್ನು ನೆನೆಯದೆ, ಹೋಗುವರೇ? ಮಾಯೆ ನಿನ್ನ ಕೈವಶವಲ್ಲವೇ? ಇಂಥಾ ಮರವೆ ಏನು ನಿನಗೆ? ನನಗೆ ಕೊಟ್ಟ ಭಾಷೆಯನ್ನು ಮರೆತು, ನನ್ನನ್ನು ಬಿಟ್ಟು, ವೈಕುಂಠಕ್ಕೆ ಹೋಗುವರೇ? ಈ ನರ ನಾಟಕದಿಂದ ನೀನು ಪ್ರಾಣವನ್ನು ಬಿಟ್ಟರೆ, ಇನ್ನು ನಾನು ಯಾರನ್ನು ಸೇರುವೆನು? ನಡು ಕಾಡಿನಲ್ಲಿ ಕಣ್ಣು ಕಟ್ಟಿ, ಕೈ ಬಿಟ್ಟವನ ಹಾಗೆ ಆದೆನಲ್ಲ! ನನಗೆ ಬಟ್ಟೆ ಯಾವದು? ಹೇಳೈ, ದೇವನೇ. ಶರಣು ಹೊಕ್ಕವರನ್ನು ಕಾಯುವೆನೆಂಬ ಬಿರುದು ನಿನಗಿತ್ತಷ್ಟೆ! ನೀನು ಬಿಜಯ ಮಾಡುವ ಸಮಯದಲ್ಲಿ ನನಗೆ ಎಚ್ಚರಿಸ ಬಾರದಿತ್ತೇ? ನಾನು ಇನ್ನು ಪ್ರಾಣವನ್ನು ಹ್ಯಾಗೆ ಹಿಡಿದಿರುವೆನು? ಎಂದು ಯೋಚಿಸಿ, ಮತ್ತೆ ಧೈರ್ಯವನ್ನು ತಾನೇ ತಂದು ಕೊಂಡು,—ಆಗಲಿ! ಮುಂದೆ ಹನುಮಂತನ ಆಗು ಹೋಗುಗಳು ಏನಾಗಿರುವವೋ? ನೋಡುವೆನು. ಆತನು ಈ ಬ್ರಹ್ಮಾಸ್ತ್ರಕ್ಕೆ ಒಳಗಾಗನು; ಅತಿ ಬಲಿಷ್ಠನು; ವಜ್ರ ಶರೀರಿಯು; ಹರಿ ಭೃತ್ಯನು; ಎಂದು ಅರಸುತ್ತ ಬರು

ವಾಗ್ಯೆ, ಮಿಡಿಕ್ಯಾಡುತ್ತಿರುವ ಜೀವದ ಜಾಂಬವಂತನನ್ನು ಕಂಡು, ನಮಸ್ಕರಿಸಲು; ಆ ಜಾಂಬವಂತನು—ಎಲೈ, ವಿಭೀಷಣನೇ, ಹತ್ರ ಬಾ ಎಂದು ಕರೆದು, ಕುಳ್ಳಿರಿಸಿ ಕೊಂಡು,—ರಣದಲ್ಲಿ ಯಾರ್ಯಾರು ಸತ್ತರು? ಯಾರ್ಯಾರು ಉಳಿದಿದ್ದಾರೆಂದು, ಕೇಳಿದನು. ಆಗ ವಿಭೀಷಣನು—ರಾಮ ಲಕ್ಷ್ಮಣರು ಮೊದಲಾಗಿ ಸಮಸ್ತ ಕಪಿ ಸೇನೆಗಳು ಸತ್ತು ಇವೆ. ಹನುಮಂತ ಮಾತ್ರ ಏನಾಗಿದ್ದಾನೋ! ನೋಡಲಿಲ್ಲ ಎಂದು ಹೇಳಿದನು.

ಅಷ್ಟರಲ್ಲಿಯೇ ಹನುಮಂತನು ಬಂದು, ಜಾಂಬವ ವಿಭೀಷಣರನ್ನು ಕಾಣಿಸಿ ಕೊಳ್ಳಲು; ಜಾಂಬವಂತನು ವಿಭೀಷಣನನ್ನು ಕುರಿತು—ಎಲೈ, ರಾಕ್ಷಸ ರಾಜನೇ, ಹನುಮಂತನೊಬ್ಬನು ಉಳಿದಿದ್ದ ಮೇಲೆ ರಾಮ ಲಕ್ಷ್ಮಣ ಸುಗ್ರೀವರೇ ಮೊದಲಾದ ಸಮಸ್ತರು ಬದುಕಿದರು ಎಂದು ತಿಳಿದುಕೋ. ಇನ್ನು ಅಳಬೇಡ, ಅಂದನು. ಅದಕ್ಕೆ ಹನುಮಂತನು—ಸರ್ವರು ಜಾಂಬವರಿಂದಲೇ, ಬದುಕ ಬೇಕೇ ಹೊರ್‍ತು, ನಾನು ಉಳಿದಿದ್ದು ಪ್ರಯೋಜನವೇನು? ಈ ಸಮಸ್ತರು ಬದುಕುವ ಹಾಗೆ ಜಾಂಬವಂತರು ಏನು ಯುಕ್ತಿಯನ್ನು ತಿಳಿದು, ನನಗೆ ನೇಮಿಸುತ್ತಾರೋ, ಅದನ್ನು ನಾನು ತಲೆಯಲ್ಲಿ ಆಂತು, ಅದು ಯಾವ ಕೆಲಸವಾದರೂ ಮಾಡಿ, ನಿರ್ವಹಿಸುವೆನು ಎಂದು, ಹೇಳಿದನು. ಆಗ ಜಾಂಬವಂತನು—ಕೇಳೈ, ಹನುಮಂತನೇ, ಬೆಳಗಾದ ಮೇಲೆ ಒಬ್ಬರೂ ಬದುಕುವದಿಲ್ಲ. ಇನ್ನು ಬೆಳಗಾಗುವದಕ್ಕೆ ಏಳು ಘಳಿಗೆ ಉಂಟು. ಅಷ್ಟರೊಳಗೆ ನೀನು ಸಾಹಸವನ್ನು ಮಾಡಿದರೆ, ರಾಮಚಂದ್ರನು ಕಪಿ ಬಲ ಸಹಿತ, ಬದುಕುವನು, ಅಂದನು.

ಆ ಮಾತನ್ನು ಕೇಳಿ, ಹನುಮಂತನು—ಅದೇನು? ಬೇಗ ಹೇಳು, ಎನಲು; ಜಾಂಬವಂತನು—ಚಂದ್ರದ್ರೋಣ ಪರ್ವತದಲ್ಲಿ ಸಂಧಾನ ಕರಣಿ, ವಿಶಲ್ಯ ಕರಣಿ, ಸಾವರ್ಣ ಕರಣಿ, ಮೃತ ಸಂಜೀವಿನಿ ಎಂಬ ಔಷಧಿಗಳು ಇರುವವು. ಅವುಗಳನ್ನು ಬೆಳಗಾಗುವಷ್ಟರಲ್ಲಿಯೇ ತರ ಹೋಗು! ಎನಲು;—ಅಗತ್ಯವಾಗಿ ತರುವೆನು. ಆ ಚಂದ್ರದ್ರೋಣ ಪರ್ವತವು ಎಲ್ಲಿರುವದು? ಆ ದಿಕ್ಕನ್ನು ಹೇಳು, ಎಂದು ಕೇಳಲು; ಜಾಂಬವಂತನು ಇಲ್ಲಿಂದ ಹಿಮವತ್ಪರ್ವತಕ್ಕೆ ಹೋಗಿ, ಅದನ್ನು ದಾಟಿ, ಅಲ್ಲಿಂದ ಆಚೆಗೆ ಋಷಭವೆಂಬ ಪರ್ವತವಿರುವದು. ಅದರ ಆಚೆಗೆ ಕೈಲಾಸ ಪರ್ವತವಿರುವದು. ಆ ಎರಡು ಪರ್ವತದ ನಡುವೆ ಚಂದ್ರದ್ರೋಣ ಎಂಬ ಔಷಧಿ ಪರ್ವತವು ಇರುವದು. ಅದರ ಶಿಖರದಲ್ಲಿ ನಾನು ಹೇಳಿದ ಔಷಧಿಗಳಿರುವವು, ಎಂದು ಹೇಳಿದನು.

ಆಗ ಹನುಮಂತನು ಎರಡನೇ ಪರ್ವತದೋಪಾದಿಯಲ್ಲಿ ಬೆಳೆದು, ಜಾಂಬವಂತನಿಗೆ ನಮಸ್ಕಾರವನ್ನು ಮಾಡಿ, ವಿಭೀಷಣನನ್ನು ಆಲಿಂಗಿಸಿ ಕೊಂಡು, ಆಕಾಶಕ್ಕೆ ಹಾರಿ, ಬೊಬ್ಬಿರಿದನು. ಆತನ ಶಬ್ದದಿಂದ ಲಂಕಾ ಪಟ್ಟಣವೆಲ್ಲಾ ಬೆದರಿತು. ಹೀಗೆ ಆಕಾಶ ಮಾರ್ಗದಲ್ಲಿ ಹೋಗುತ್ತ, ನಾನಾ ದೇಶ, ಗಿರಿ, ದುರ್ಗ, ವನಾದಿಗಳನ್ನು ಕಳೆದು, ಹಿಮವತ್ಪರ್ವತವನ್ನು ಶೇರಿ, ಅದನ್ನು ದಾಟಿ, ಔಷಧಿ ಪರ್ವತಕ್ಕೆ ಬಂದು, ಅದರ ಶಿಖರಗಳಲ್ಲಿ ಆ ಔಷಧಿಗಳು ಎಷ್ಟು ಹುಡುಕಿದಾಗ್ಯೂ ಶಿಕ್ಕದೆ ಇದ್ದ ಕಾರಣ,—ಇವುಗಳನ್ನು ಹುಡುಕಿ ಕೊಂಡು ಇರುವದಕ್ಕೆ ಇದು ವೇಳೆಯಲ್ಲ. ಈ ಶಿಖರವನ್ನೇ ಕಿತ್ತು ಕೊಂಡು ಹೋಗುವೆನು ಎಂದು, ಆ ಪರ್ವತದ ಶಿಖರವನ್ನು ಕಿತ್ತು ಕೊಂಡು, ಆಕಾಶ ಮಾರ್ಗದಲ್ಲಿ ಎರಡನೇ ಸೂರ್ಯನ ಹಾಗೆ ಬರುತ್ತ, ಕಪಿ ಸೇನೆಗೆ ಇಳಿಯಲು; ಆ ಔಷಧಿಗಳ ಘಾಳಿಯ ಆಘ್ರಾಣದಿಂದ ರಾಮ ಲಕ್ಷ್ಮಣಾದಿ ಸರ್ವರು ಎದ್ದರು. ಆಗ ದೇವ ದುಂದುಭಿಗಳು ಮೊಳಗಿದವು. ಸುಗ್ರೀವನು ಪ್ರಳಯ ಕಾಲದ ರುದ್ರನಂತೆ ಕೋಪಿಸಿ ಕೊಂಡು, ಲಂಕಾ ಪಟ್ಟಣಕ್ಕೆ ಲಗ್ಗೆ ಹತ್ತಿದನು. ಅದನ್ನು ರಾವಣನು ಕೇಳ,—ಅಯ್ಯೋ! ಇಂದ್ರಜಿತುವಿನ ಬ್ರಹ್ಮಾಸ್ತ್ರವು ಕೂಡ ವ್ಯರ್ಥವಾಯಿತು! ಆಯುಧದ ಹೆಮ್ಮೆಯಿಂದ ಹಗೆಗಳ ಬಲವು ಸಾಯದೆ ಇಧೆ. ಇನ್ನು ಇವರನ್ನು ಯಾವ ವಿಧದಿಂದ ಜೈಸ ಬೇಕು? ಇದಕ್ಕೆ ಉಪಾಯವು ಕಾಣುವದಿಲ್ಲವಲ್ಲಾ! ಎಂದು ಚಿಂತಿಸುತ್ತಿರಲು; ಇಂದ್ರಜಿತುವು,—ಎಲೇ, ಜೀಯಾ, ಹಗೆಗಳ ಪಡೆಗೆ ಯಮನಾಗಿರುವ ನಾನು ಇರುವಲ್ಲಿ ನಿನಗೆ ಚಿಂತೆ ಏಕೆ? ಎಂದು ಹೇಳಿ, ಅವನ ಅಪ್ಪಣೆಯನ್ನು ತೆಗೆದು ಕೊಳ್ಳದೆಯೇ, ರಥಾರೂಢನಾಗಿ ಬರುತ್ತಿರಲು; ಅವನ ತೇರಿನ ಘಾಲಿಗಳ ಧ್ವನಿಯನ್ನು ಕೇಳಿ,—ಇಂದ್ರಜಿತು ಮತ್ತೆ ಬರುವನು ಎಂದು ನಿಶ್ಚೈಸಿ, ಸುಗ್ರೀವನು ಪಡುವಣ ಬಾಗಲಿಗೆ ಹನುಮಂತನನ್ನೂ, ಅವನ ಸಹಾಯಕ್ಕೆ ಅನೇಕ ಬಲವನ್ನೂ, ತೆಂಕಣ ದಿಕ್ಕಿಗೆ ಸೇನೆ ಸಹಿತ ಅಂಗದನನ್ನೂ, ಮೂಡಣ ದಿಕ್ಕಿಗೆ ಪಡೆಯೊಡನೆ ಕೂಡ ನೀಲನನ್ನೂ ಕಳುಹಿಸಿ, ರಾಮ ಲಕ್ಷ್ಮಣರೊಡನೆ ತಾನು ನಿಂತು, ನಡುವೆ ವಿಭೀಷಣನನ್ನು ಇಟ್ಟು, ಗಿರಿ ತರುಗಳನ್ನು ತೆಗೆದು ಕೊಂಡು, ರಾವಣಿಯನ್ನು ಅಟ್ಟಿ ಕೊಂಡು ಹೋಗುತ್ತಿರಲು; ಶ್ರೀರಾಮ ಚಂದ್ರನು ಸುಗ್ರೀವನನ್ನು ನಿಲ್ಲಿಸಿ, ತಾನೇ ಧನುರ್ಬಾಣವನ್ನು ತೆಗೆದು ಕೊಂಡು, ಪ್ರಳಯಾಂತಕನಂತೆ ಕೋಪದಿಂದ ಕಣ್ಣುಗಳಲ್ಲಿ ಕಿಡಿಗಳನ್ನು ಉದುರಿಸುತ್ತ, ರಾವಣಿಯ ಮೇಲೆ ಅಕ್ಷಯಾಸ್ತ್ರವನ್ನು ಹೂಡಲು; ಆ ರಾಮ ಬಾಣಗಳು ಆತನ ರಥವನ್ನೂ ರಥಾಶ್ವಗಳನ್ನೂ ಸಾರಥಿಯನ್ನೂ ಕತ್ತ

ರಿಸಿ, ಆ ಇಂದ್ರಜಿತುವಿನ ರಥ ಚೀತ್ಕಾರವಾಗಲಿ, ಕುದುರೆಗಳ ಹೇಷಿತ ಧ್ವನಿಯಾಗಲಿ, ಬಾಣಗಳ ಝೇಂಕಾರವಾಗಲಿ, ಬಿಲ್ಲಿನ ಟಂಕಾರವಾಗಲಿ, ಸಾರಥಿಯ ಆರ್ಭಟೆಯಾಗಲಿ, ಇಂದ್ರಜಿತುವಿನ ಸಿಂಹ ಘರ್ಜನೆಯಾಗಲಿ, ಭೂಮಿಯಲ್ಲಿ ಕೇಳಿದರೂ, ದಿಕ್ಕುಗಳಲ್ಲಿ ಕೇಳಿದರೂ, ಆಕಾಶದಲ್ಲಿ ಕೇಳಿದರೂ, ಅಲ್ಲಲ್ಲಿ ಹೋಗಿ, ಆತನ ರಥಾಶ್ವ, ಸಾರಥಿ, ಬಿಲ್ಲು, ಬತ್ತಳಿಕೆ, ಧ್ವಜ, ಪತಾಕೆಗಳನ್ನು ತರಿದೊಟ್ಟುತ್ತಿದ್ದವು.

ಆಗ ಉಪಾಯದಲ್ಲಿ ಜಾಣನಾದ ಇಂದ್ರಜಿತುವು ರಾಮನಿರುವ ಬಡಗಣ ಬಾಗಲನ್ನು ಬಿಟ್ಟು, ಲಂಕೆಯನ್ನು ಹೊಕ್ಕು, ಹನುಮಂತನು ಇರುವ ಪಡುವಣ ಬಾಗಿಲಿಗೆ ಬಂದು, ಅವನ ಸಹಾಯಕ್ಕಾಗಿರುವ ಕಪಿಗಳನ್ನೆಲ್ಲಾ ಮಾಯೆಯಿಂದ ಸಂಹರಿಸಿದನು. ಉಳಿದ ಅಲ್ಪ ಸ್ವಲ್ಪ ಕಪಿಗಳೆಲ್ಲಾ ಅವನೊಡನೆ ಕಾಳಗಕ್ಕೆ ಆನಲಾರದೆ, ಬೆಂಗೊಟ್ಟೋಡಿದವು. ಆಗ ಹನುಮನೊಬ್ಬನೇ ಬೆಟ್ಟವನ್ನು ತೆಗೆದು ಕೊಂಡು, ಕೋಪದಿಂದ ಕಿಡಿ ಕಿಡಿಯಾಗಿ ಅವನ ತೇರು ಬಿಲ್ಲು ಬಾಣಗಳ ಸಪ್ಪಳಿಗೆ ಕಿವಿಗೊಟ್ಟು ಕೇಳಿ, ಅಟ್ಟಿ, ಹೊಡೆಯುತ್ತ, ಸೂರ್ಯಾಸ್ತಮಾನದ ವರಿಗೂ ಜಗಳವಾಡುತ್ತಿರಲು; ಇಂದ್ರಜಿತುವು ತನ್ನ ರಥದಲ್ಲಿ ಮಾಯೆಯಿಂದ ಸೀತೆಯನ್ನು ಮಾಡಿ ಇಟ್ಟು ಕೊಂಡು, ಹನುಮಂತನಿಗೆ ಎತ್ತಿ ತೋರಿಸಲು; ಆ ಮಾಯೆಯು,—ಹನುಮಾ! ಅಕಟಕಟಾ! ಕೆಟ್ಟೆನೆನುತ್ತ, ಬಾಯಿ ಬಿಡುತ್ತಿತ್ತು. ಆಗ ಹನುಮಂತನು ತಾನು ಮೊದಲು ವನದಲ್ಲಿ ಕಂಡ ಸೀತೆಯ ರೂಪಿನಂತಿರುವ, ಇಂದ್ರಜಿತುವಿನ ಕೈ ಕತ್ತಿಗೆ ಒಡ್ಡಿದ ಕೊರಳುಳ್ಳ, ಆ ಮಾಯೆಯನ್ನು ನೋಡಿ, ಆತಂಕ ಯುಕ್ತನಾಗಿ ಕಣ್ಣಿನಲ್ಲಿ ನೀರು ಸುರಿಸುತ್ತ ಇರಲು; ತಿರಿಗಿ ಆ ಮಾಯೆಯು ಹನುಮನನ್ನು ನೋಡಿ,—ಎಲೈ, ಹನುಮನೇ, ನಾನು ನಿಮ್ಮೊಡೆಯನಾದ ರಾಮಚಂದ್ರನ ಒಡತಿ ಅಲ್ಲವೇ? ನನ್ನಲ್ಲಿ ಕರುಣವನ್ನು ಇರಿಸಲಾಗದೇ? ಇನ್ನು ನೀವು ಯಾರಿಗೋಸ್ಕರ ಯುದ್ಧವನ್ನು ಮಾಡುವಿರಿ? ಈ ಕ್ರೂರ ಕೆಲಸದ ಖಳನ ಕೈಯಲ್ಲಿ ನನ್ನ ಬಾಳು ತೀರುವಂತಾಯಿತು. ಗಂಡನೂ, ಅತ್ತೆಯೂ, ಇನ್ನು ನನಗೆ ಬೇಕಾದವರೆಲ್ಲರೂ,—ಕಾಡಿಗೆ ಹೋಗಬೇಡ, ಎಂದು ಹೇಳಿದರೂ, ಅವರ ಮಾತನ್ನು ಕೇಳದೆ, ಬಂದು, ಈ ಆಪತ್ತನ್ನು ಉಂಡೆನು. ಜನಕ ರಾಯನ ಬಸುರಿನಲ್ಲಿ ಬಂದು, ದಶರಥ ರಾಯನ ಮಗನ ಕೈ ಹಿಡಿದು, ಕಡೆಗೆ ನನಗೆ ಈ ವಿಧಿಯಾಯಿತು! ನೋಡಯ್ಯಾ! ನನಗೆ ಇದು ಯಾವ ಜನ್ಮದ ಪಾಪದ ಫಲವೋ? ಇನ್ನು ಇಲ್ಲಿ ನಿಲ್ಲದೆ, ನನ್ನ ಆಶೆಯನ್ನು ಬಿಟ್ಟು, ಲಕ್ಷ್ಮಣ ಸಹಿತವಾಗಿ ರಾಮ ಚಂದ್ರನನ್ನು ಅಯೋಧ್ಯೆಗೆ

ಹೋಗ ಹೇಳು. ಈ ಖೂಳ ಖಳನ ಕತ್ತಿಯಿಂದ ಕಡಿಸಿ ಕೊಂಡು, ಪ್ರಾಣವನ್ನು ತೊರೆದ ನನ್ನನ್ನು ಕೊಂಡ್ಹೋಗಿ, ತೋರಿಸು. ಈ ನನ್ನ ಮಾತು ಮೀರದಿರು. ಈ ರಾಕ್ಷಸರು ಬಹು ಮಾಯಾವಿಗಳು. ಏನಾದರೂ ಒಂದು ಉಪಾಯದಿಂದ ನನ್ನ ಪ್ರಾಣಕ್ಕೆ ಮುನಿದ ಹಾಗೆ ರಾಮ ಚಂದ್ರನ ಪ್ರಾಣಕ್ಕೂ ಮುನಿಯುವರು ಎಂದು ಹೇಳುತ್ತಿರಲು; ಇಂದ್ರಜಿತುವು ತನ್ನ ಕೈ ಕತ್ತಿಯಿಂದ ಹನುಮ ನೋಡುತ್ತಿರುವ ಹಾಗೆ ಮಾಯಾ ಸೀತೆಯ ತಲೆಯನ್ನು ಕಡಿದು, ರಥದಿಂದ ಕೆಳಗೆ ಹಾಕಿ ಬಿಟ್ಟನು. ಆಗ ಹನುಮಂತನು ದುಃಖದಿಂದಲೂ ಕೋಪದಿಂದಲೂ ಕೂಡಿ ಹೋಗಿ, ಆ ರಾವಣಿಯ ರಥವನ್ನು ಒದೆಯಲು; ಆ ತೇರು ಪುಡಿ ಪುಡಿಯಾಯಿತು. ಇಂದ್ರಜಿತುವು ಮಾಯೆಯಿಂದ ಮರೆಸಿ ಕೊಂಡು, ಲಂಕೆಗೆ ಓಡಿ ಹೋದನು. ಹನುಮಂತನು ಹಿಂತಿರುಗಿ ಬಂದು, ಕಡಿದಿರುವ ಮಾಯಾ ಸೀತೆಯನ್ನು ನೋಡಿ, ಮೂರ್ಛೆ ಹೋಗಿ, ನೆಲದಲ್ಲಿ ಬಿದ್ದು ಇರಲು;

ಅತ್ತಲು ಶ್ರೀರಾಮ ಚಂದ್ರನು—ಹನುಮಂತನಿರುವ ಬಾಗಿಲಿನಲ್ಲಿ ಈ ವರಿಗೂ ಹನುಮನ ಆರ್ಭಟೆಯು ಕೇಳಿಸುತ್ತಿತ್ತು, ಈಗ ಅಡಗಿ ಇದೆ. ಜಾಂಬವರೇ, ನೀವು ಹನುಮನ ಬಳಿಗೆ ಹೋಗಿ, ಎಂದು ಕಳುಹಿಸಿ, ಲಕ್ಷ್ಮಣನನ್ನು ಅಂಗದನಿಗೆ ಸಹಾಯವಾಗಿ ಕಳುಹಿಸಿ, ವಿಭೀಷಣನನ್ನು ನೀಲನಿಗೆ ಬೆಂಬಲವಾಗಿ ಕಳುಹಿಸಿದನು. ತರುವಾಯ ಜಾಂಬವಂತನು ಹನುಮಂತನ ಬಳಿಗೆ ಬಂದು, ಮೂರ್ಛೆ ಹೋಗಿರುವ ಹನುಮಂತನನ್ನೂ, ಕಡಿದು ಬಿದ್ದಿರುವ ಸೀತೆಯನ್ನೂ ನೋಡಿ, ಹನುಮನಿಗೆ ಶೈತ್ಯೋಪಚಾರವನ್ನು ಮಾಡಿ, ಎಬ್ಬಿಸಲು; ಹನುಮಂತನು ನಡೆದ ಸಂಗತಿಗಳನ್ನೆಲ್ಲಾ ಜಾಂಬವಂತನಿಗೆ ಹೇಳಿ, ಕಡಿದ ಮಾಯಾ ಸೀತೆಯ ಎರಡು ತುಂಡುಗಳನ್ನು ತೆಗೆದು ಕೊಂಡು ಬಂದು, ರಾಮನ ಮುಂದೆ ಇಳಿಸಿದನು. ಅದನ್ನು ರಾಮನು ನೋಡಿ—ಎಲೈ, ಹನುಮಂತನೇ, ನಮ್ಮ ಯುದ್ಧದ ಕೆಲಸವು ಈ ಭವಣೆಗೆ ಆಯಿತೇ? ಎಂದು, ಮೂರ್ಛೆಯಿಂದ ನೆಲದಲ್ಲಿ ಒರಗಿದನು. ಸುಗ್ರೀವನು ಕಣ್ಣುಗಳಲ್ಲಿ ನೀರು ಸುರಿಸುತ್ತ, ಬೆರಗಾಗಿ ನಿಂತನು. ಮಿಕ್ಕ ಕಪಿಗಳೆಲ್ಲಾ ಅಳಲೆಂಬ ಕಡಲಿನಲ್ಲಿ ಮುಳುಗಿದರು. ಹನುಮನು—ಯಾತಕ್ಕೆ ಹೀಗೆ ಮರುಗುವಿರಿ? ಔಷಧಿಯನ್ನು ತಂದು, ಈ ಸೀತೆಯನ್ನು ಎಬ್ಬಿಸುವೆನು ಎಂದು, ಸಮಾಧಾನಾ ಮಾಡುತ್ತಿದ್ದನು. ರಾಮನು ಅಷ್ಟರಲ್ಲಿಯೆ ತಿರಿಗಿ ಎಚ್ಚತ್ತು, ಆ ಮಾಯಾ ಸೀತೆಯನ್ನು ನೋಡಿ,—ಅಕಟಕಟಾ! ರಾಜ ವಂಶದೊಳಗೆಲ್ಲಾ ಶ್ರೇಷ್ಠನಾದ ಜನಕ ರಾಯನ ಮಗಳಾದ ನಿನಗೆ ಇಂಥ ಹೇಸಿಕೆಯ ಸಾವನ್ನು ವಿಧಿ ಕೂಡಿಸಿದನೇ? ಎಂದು, ಆ ತುಂಡುಗಳ ಮೇಲೆ ಬಿ

ದ್ದು, ಹೊರಳಾಡುತ್ತ,—ಬನಕ್ಕೆ ಬರ ಬೇಡವೆಂದು ಹೇಳಿದರೂ, ಆ ಮಾತನ್ನು ಮನಸ್ಸಿಗೆ ತಾರದೆ, ನನ್ನ ಮೇಲೆ ಕೋಪವನ್ನು ಮಾಡಿದೆ! ನಿನ್ನ ತಂದೆ ಜನಕನು ಕೇಳಿದರೆ, ನಾನು ಏನ ಹೇಳಲಿ? ನನಗೆ ಬುದ್ಧಿ ಏನು? ನನ್ನ ತಾಯಿಗಳಿಗೇನು ಹೇಳುವೆನು? ಭರತ ಶತ್ರುಘ್ನರಿಗೆ ಏನು ಉಸುರುವೆನು? ರಣ ಬಲಿಗೆ ನಿನ್ನನ್ನು ಚಾಚಿದೆನು ಎಂದು ಹೇಳುವೆನೇ? ಇನ್ನು ಹಗೆಯನ್ನು ಕೊಂದು, ನಾನು ಯಾವ ಹೆಚ್ಚಳವನ್ನು ಪಡೆಯ ಬೇಕು? ನೀನು ಸತ್ತ ಮೇಲೆ ನನ್ನ ಈ ಕೆಟ್ಟ ಬದುಕುವಿಕೆಯಿಂದ ಏನು ಪ್ರಯೋಜನವು? ಸೇವೆಯಲ್ಲಿ ತೊತ್ತಾಗಿಯೂ, ಆಲೋಚನೆಯಲ್ಲಿ ಮಂತ್ರಿಯಾಗಿಯೂ, ನನ್ನ ದೇಹಾರೈಕೆಯಲ್ಲಿ ತಾಯಿಯಾಗಿಯೂ, ಸೈರಣೆಯಲ್ಲಿ ಭೂಮಿ ದೇವಿಯಾಗಿಯೂ, ಇದ್ದ ನಿನ್ನನ್ನು ಹ್ಯಾಗೆ ಮರೆಯಲಿ? ನಿನ್ನಲ್ಲಿ ತುಸವಾದರೂ ದುರ್ಗುಣವನ್ನು ಕಾಣೆನಲ್ಲಾ! ಎಂದು ಹಂಬಲಿಸುತ್ತಿರಲು;—

ಆ ಸಮಯದಲ್ಲಿ ಗದಾ ದಂಡವನ್ನು ಧರಿಸಿ, ವಿಭೀಷಣನು ಬಂದು, ಆ ಅವಸ್ಥೆಯನ್ನು ನೋಡಿ, ರಾಮನನ್ನು ಕುರಿತು—ಎಲೈ, ದೇವನೇ, ನೀನು ನಿಜವಾದ ನರನೇ? ಸೀತೆಯು ಮನುಜಳೇ? ಸರ್ವಜ್ಞನಾದ ನೀನು ಇಂಥ ಮಾಯಾ ವಿಲಾಸಕ್ಕೆ ಹೀಗೆ ಮರುಗುವರೇ? ಇದು ಮಾಯಾವಿಯಾದ ಇಂದ್ರಜಿತುವಿನ ಮೋಸದ ಕೆಲಸವು. ಇದಕ್ಕೆ ಚಿಂತಿಸ ಬೇಡ! ಹನುಮನನ್ನು ಕಳುಹಿಸು. ನನ್ನ ಮಂತ್ರಿಗಳಲ್ಲಿ ಒಬ್ಬನನ್ನು ಕಳುಹಿಸುವೆನು. ಅಲ್ಲಿ ಸೀತಾ ದೇವಿಯು ಇಲ್ಲದಿದ್ದರೆ, ನಿನ್ನಡಿಗೆ ಸೇವಕನಲ್ಲ ನಾನು, ಎಂದು ಹೇಳಲು; ರಾಮನು ಕೈ ಸನ್ನೆಯಿಂದ ಹನುಮನಿಗೆ ಅಪ್ಪಣೆಯನ್ನು ಕೊಡಲು; ಹನುಮಂತನು ಕಣ್ಣು ಮುಚ್ಚಿ ಕಣ್ಣು ತೆಗಿಯುವಷ್ಟರಲ್ಲಿಯೇ ಅಶೋಕಾ ವನಕ್ಕೆ ಹೋಗಿ, ಸೀತೆಯನ್ನು ನೋಡಿ, ತಿರಿಗಿ ಬಂದು, ರಾಮನ ಸನ್ನಿಧಿಯಲ್ಲಿ—ದೇವಾ, ನಿನ್ನರಸಿ ಸೀತೆಯು ನಿನ್ನಡಿದಾವರೆಗಳ ನೆನಹೆಂಬ ಅಮೃತವನ್ನು ಕುಡಿಯುತ್ತ, ಸುಖವಾಗಿರುವಳು, ಎಂದು ಹೇಳಲು; ಜಾಂಬವಾದಿಗಳು ವಿಭೀಷಣನನ್ನು ಹೊಗಳಿದರು. ಆಗ ವಿಭೀಷಣನು ಶ್ರೀರಾಮಚಂದ್ರನಿಗೆ ನಮಸ್ಕರಿಸಿ—ಎಲೈ, ರಾಮಚಂದ್ರನೇ, ಮಾಯಾವಿಯಾದ ಖೂಳ ರಾವಣಿಯು—ನಿಮ್ಮನ್ನು ಜೈಸುವೆನೆಂದು ತಂದೆಗೆ ಭಾಷೆಯನ್ನು ಇತ್ತು, ಅದು ನಡೆಯದೆ ಇರುವದರಿಂದ, ನಾಚಿ ಕೊಂಡು, ಈ ಮಾಯಾ ಸೀತೆಯನ್ನು ಮಾಡಿ, ಕಡಿದು, ದುಖ್ಖದ ಕಡಲಿನಲ್ಲಿ ಮುಳುಗಿಸಿ ಬಿಟ್ಟು, ತಾನು ನಮ್ಮ ಕುಲದೇವತೆಯಾದ ನಿಕುಂಭಿಳಾ ದೇವಸ್ಥಾನದಲ್ಲಿ ಮಾರಣ ಹೋಮದ ಯಜ್ಞವನ್ನು ಮಾಡ ಪ್ರಾರಂಭಿಸಿದ್ದಾನೆ. ಈ ರಾತ್ರಿಯಲ್ಲಿ ಆ ಯಜ್ಞ ಪೂರೈಸುತ್ತೆ. ಆ ಮೇಲೆ ನಾವು ಹಗೆಯನ್ನು ಜೈಸುವ ಬಗೆಯು ಕಾಣುವದಿಲ್ಲ. ಶೀ

ಘ್ರವಾಗಿ ಲಕ್ಷ್ಮಣನನ್ನೂ ಹನುಮಂತ ಮೊದಲಾದ ಶೂರ ಕಪಿಗಳನ್ನೂ ನನ್ನ ಸಂಗಡ ಕೊಡು. ನಾನು ಈಗ ಹೋಗಿ, ಅವನ ಯಜ್ಞವನ್ನು ಕೆಡಿಸಿ, ಆತನನ್ನು ಯಮನ ನಗರಿಗೆ ಕಳುಹಿಸಿ, ಬರುವೆನು. ತಾಮಸ ಮಾಡದೆ, ಬೇಗನೆ ಅಪ್ಪಣೇ ಕೊಡು, ಎನ್ನಲು; ಶ್ರೀರಾಮನು ಇಂದ್ರಜಿತುವಿನ ಪರಾಕ್ರಮವನ್ನು ನೆನೆದು, ತನಗೆ ಹೊರಗೆ ತಿರುಗಾಡುವ ಪ್ರಾಣನಾದ ಲಕ್ಷ್ಮಣನನ್ನು ಅವನೊಡನೆ ಜಗಳಕ್ಕೆ ಕಳುಹಿಸ ಸಂದೇಹ ಪಟ್ಟು, ಯೋಚಿಸುತ್ತಿರಲು; ಲಕ್ಷ್ಮಣನು ಉಕ್ಕಿನ ಅಂಗಿಯನ್ನು ತೊಟ್ಟು, ಉಡುವಿನ ಚರ್ಮದ ಕೈ ಅಂಗಿಯನ್ನು ಹಾಕಿಕೊಂಡು, ತಲೆಗೆ ಸೀಸಕವನ್ನಿಟ್ಟು ಕೊಂಡು, ಬೆನ್ನಿಗೆ ಅಕ್ಷಯ ಬತ್ತಳಿಕೆಯನ್ನು ಕಟ್ಟಿ, ಬಿಲ್ಲು ಬಾಣಗಳನ್ನು ತೆಗೆದು ಕೊಂಡು, ರಾಮನ ಪಾದಗಳಿಗೆ ನಮಸ್ಕರಿಸಿ, ಯುದ್ಧಕ್ಕೆ ಅಪ್ಪಣೆಯನ್ನು ಬೇಡಿ ಕೊಂಡನು. ರಾಮನು ಅಂಜುತ್ತ, ತಮ್ಮನ ಬೆಂಬಲಕ್ಕೆ ಅಂಗದನನ್ನೂ ಆಂಜನೇಯನನ್ನೂ ಅಗ್ನಿ ನಂದನನನ್ನೂ ಅಜ ಕುಮಾರನನ್ನೂ ಅಪರಿಮಿತ ಕಪಿ ಸೇನೆಗಳನ್ನೂ ಕೊಟ್ಟು,—ಯುದ್ಧದಲ್ಲಿ ಶತ್ರುವನ್ನು ಜೈಸು ಎಂದು, ಆಶೀರ್ವಾದವನ್ನು ಮಾಡಿ, ಅಪ್ಪಣೇ ಕೊಟ್ಟು ಕಳುಹಿಸಿದನು.

ಆಗ ವಿಭೀಷಣನು ಗದಾ ಧರನಾಗಿ ಮುಂದೆ ಹೊರಟು, ಇವರನ್ನೆಲ್ಲಾ ಸಂಗಡ ಕರೆದು ಕೊಂಡು, ನಿಕುಂಭಿಳೆಯ ದೇವಸ್ಥಾನವನ್ನು ಹೊಕ್ಕು, ನೋಡುವಲ್ಲಿ, ಅಲ್ಲಿ ಇನ್ನೂರೇಳು ಅಕ್ಷೋಹಿಣಿ ರಾಕ್ಷಸರ ಬಲವು ಸಕಲಾಯುಧಗಳನ್ನು ಧರಿಸಿ ಕೊಂಡು, ನೊಣಗಳನ್ನು ಸಹಿತವಾಗಿ ಒಳಗೆ ಬಿಡದೆ ಇತ್ತು. ಆ ಬಲದೊಡನೆ ಬ್ರಹ್ಮ ರುದ್ರೇಂದ್ರಾದಿಗಳು ಏಳು ವರುಷ ಕಾದಿದ್ದರೂ, ತೀರದು. ಇಂಥಾದ್ದರಲ್ಲಿ ಹಗೆಗಳಾದವರು ಅವನು ಮಾಡುವ ಯಜ್ಞದ ಸ್ಥಳಕ್ಕೆ ಹ್ಯಾಗೆ ಹೋಗುವದು? ಆಗ ಹನುಮಂತನೇ ಮೊದಲಾದ ಕಪಿ ಭಟರು ಗಿರಿ ತರುಗಳನ್ನು ತೆಗೆದು ಕೊಂಡು, ನಾಲ್ಕು ಮೈಯಲ್ಲಿಯೂ ಔಕಿ, ಹೊಕ್ಕು, ಕವಿದು, ಹೊಯಿದು, ಕುಟ್ಟಿ, ಕಚ್ಚಿ, ಇಡಿದು, ಒದೆದು, ತಿವಿದು, ಗೆವಚಿ, ರಾಕ್ಷಸರ ಚತುರಂಗ ಬಲವನ್ನು ಪುಡಿ ಪುಡಿ ಮಾಡಿದರು. ಸುಗ್ರೀವನ ಆಜ್ಞಾಮಂತ್ರ ಶಕ್ತಿಯು ಎಂಥಾದ್ದೋ! ಬೇಕಾದಷ್ಟು ಧನವನ್ನೂ, ಬಟ್ಟೆ ಬರಿಗಳನ್ನೂ, ಒಡವೆ ವಸ್ತುಗಳನ್ನೂ, ಮಾಸ ಗಟ್ಲೇ ಸಂಬಳಗಳನ್ನೂ ಕೊಟ್ಟರೂ, ಹೀಗೆ ಸ್ವಾಮಿ ಕಾರ್ಯವನ್ನು ಮಾಡುವದು ದುರ್ಲಭವು. ಈ ಕಪಿ ಸೇನೆಗಳು ಒಂದು ಕ್ಷಣ ಮಾತ್ರದಲ್ಲಿ ರಾಕ್ಷಸರನ್ನು ಸಂಹರಿಸಿ, ಆ ಇಂದ್ರಜಿತುವಿನ ಯಜ್ಞಾದ ಮಂಟಪದ ಒಳಗೆ ಹೋಗಿ, ನೋಡುವಲ್ಲಿ, ಇಂದ್ರಜಿತುವು ವೀರ ಬಾ

ಹುವೇ ಮೊದಲಾದ ಮೈಗಾವಲಿನ ಜನರಿಂದ ಯಜ್ಞ ದೀಕ್ಷಿತನಾಗಿರಲು; ಅಲ್ಲಿ ಇಟ್ಟಿದ್ದ ಯಜ್ಞ ರಕ್ಷಣೆಯ ಬಲಗಳನ್ನು ಯಾರು ಲೆಖ್ಖ ಮಾಡುವರು? ಅಷ್ಟು ಬಲಗಳು ಒಮ್ಮುಖವಾಗಿ ಲಕ್ಷ್ಮಣಾದಿಗಳನ್ನು ಬಂದು ಮುತ್ತಲು; ಹನುಮನೇ ಮೊದಲಾದವರು ಎಷ್ಟೆಷ್ಟು ಕೊಂದು ಕೆಡಹಿದರೂ, ಮತ್ತೆ ಮತ್ತೆ ಬಂದು, ಮುತ್ತುತ್ತ, ದಾರಿ ಗೊಡದೆ ಇರಲು; ವಿಭೀಷಣನು ನೋಡಿ—ಹೀಗೆ ಇವರೊಡನೆ ಜಗಳವಾಡುತ್ತಾ ಇದ್ದರೆ, ಇನ್ನು ಸೂರ್ಯೋದಯಕ್ಕೆ ಒಂದು ಝಾಮವಿರುವದು. ಖಳನ ಯಜ್ಞವು ನೆರವೇರುವದು, ಎಂದು ಯೋಚಿಸಿ, ತನ್ನ ಗದಾ ದಂಡವನ್ನು ಕೈಯಲ್ಲಿ ತೆಗೆದು ಕೊಂಡು, ಲಕ್ಷ್ಮಣನನ್ನು ನೋಡಿ—ನಾನು ನಿನಗೆ ದಾರಿಯನ್ನು ಮಾಡಿ ಕೊಡುತ್ತ, ಮುಂದೆ ಹೋಗುತ್ತೇನೆ. ನೀನು ನನ್ನ ಬೆನ್ಹತ್ತಿ ಬಾ! ಹನುಮಾದಿಗಳು ಇವರೊಡನೆ ಕಾದುತ್ತಿರಲಿ, ಎಂದು ಹೇಳಿ, ತನ್ನ ಗದಾ ದಂಡದಿಂದ ಎದುರಿಗೆ ಸಿಕ್ಕಿದ ರಾಕ್ಷಸರನ್ನು ಯಮನ ನಗರಿಗೆ ಕಳುಹಿಸುತ್ತ, ಹೋಗುತ್ತಿರಲು; ಲಕ್ಷ್ಮಣನು ಬೆಂಬಲವನ್ನು ಹಾರೈಸದೆ, ತನ್ನ ಬಾಣದ ಮಳೆಗಳಿಂದ ಒತ್ತಿ ಬಂದ ರಾಕ್ಷಸರನ್ನು ಸಂಹರಿಸುತ್ತಾ, ವಿಭೀಷಣನ ಹಿಂದೆ ನಡೆದನು.

ಆ ಲಕ್ಷ್ಮಣನ ಹಿಂದುಗಡೆಯಲ್ಲಿ ಹನುಮಂತನು ಆತನ ಮೇಲೆ ಬೀಳುವ ರಾಕ್ಷಸರನ್ನು ಕೊಲ್ಲುತ್ತ ಬಂದನು. ಹೀಗೆ ಮೂವರು ಇಂದ್ರಜಿತುವಿನ ಬಳಿಗೆ ಬಂದು, ಶೇರಿ, ವಿಭೀಷಣನು ಲಕ್ಷ್ಮಣನನ್ನು ಕುರಿತು—ಇಗೋ, ಇವನೇ ಮಾಯಾ ಸೀತೆಯನ್ನು ಕಡಿದಂಜಿಸಿದ ನೀಚನು! ಇತ್ತ ನೋಡು! ಆಕಾಶದಿಂದ ಅಕ್ಷಯವಾದ ಬತ್ತಳಿಕೆಯೂ, ಅಮೋಘವಾದ ಬಿಲ್ಲೂ, ಅತಿ ವೇಗ ಶಾಲಿಗಳಾದ ಅಶ್ವಗಳೂ, ಅಖಂಡಿತವಾದ ರಥವೂ, ಬರುತ್ತಲಿವೆ. ಇವು ಇವನ ಕೈ ಸೇರಿದರೆ, ನಮಗೆ ಕಡೆ ಗಾಲವು. ಇದಕ್ಕುಪಾಯವನ್ನು ಬೇಗ ಮಾಡು, ಎನಲು; ಹನುಮಂತನು ನೆಗೆದು ಇಂದ್ರಜಿತುವನ್ನು ಕಾಲಲ್ಲಿ ಒದ್ದು, ಅವನ ಯಜ್ಞದ ಸಾಮಗ್ರೀಯಗಳನ್ನು ಕೆಡಿಸಿ, ಯಜ್ಞದ ಬೆಂಕಿಗೆ ನೀರುಗಳನ್ನು ಸುರಿದು, ಆರಿಸಿದನು.

ಆ ಕ್ಷಣವೇ ಬ್ರಹ್ಮ ಕಳುಹಿಸಿದ ರಥವು ಹಿಂತಿರುಗಿ ಹೋಯಿತು. ಆ ಮೇಲೆ ಇಂದ್ರಜಿತುವು ಮಹಾ ರೋಷದಿಂದ ಕಣ್ದೆರೆದು ನೋಡಲು; ಹನುಮಂತನು—ಎಲಾ, ದೈವ ದ್ರೋಹಿಯೇ, ಬ್ರಾಹ್ಮಣ ನಿಂದಕನೇ, ಜಗಳಕ್ಕೆ ಬಾರೆಲಾ! ನಿನಗೆ ಕಡೆ ಗಾಲದ ಮೃತ್ಯು ಬಂದಿದೆ. ಕಾಳಗವ ಕೊಡು! ನಡೆ! ನಿಜಾಯುಧವ ಹಿಡಿ! ಬೇಳುವೆಯ ಬೇಳಂಬ ಸಾಕು! ಇನ್ನೇಳು! ಎನುತ್ತ, ಮತ್ತೆ ಇಂದ್ರ

ಜಿತುವಿನ ಕಟವಾಯಿಯನ್ನು ಹೊಡೆದನು. ಇಂದ್ರಜಿತುವು, ನೆಲ್ಲುಲ್ಲಿನ ಬಣಬೆಗೆ ಕಾಡ್ಗಿಚ್ಚು ಹತ್ತಿದ ಹಾಗೆ, ಕಣ್ಣು ಮೂಗುಗಳಲ್ಲಿ ಉರಿ ಹೊರಡುತ್ತಿರಲು; ತೇರನ್ನು ಹತ್ತಿ, ಲಕ್ಷ್ಮಣನಿದುರಿಗೆ ಬಂದು,—ಎಲೋ, ಲಕ್ಷ್ಮಣಾ, ನಿನ್ನನ್ನು ಈ ಮುಸುಂಡಿ ರಕ್ಕಸ ಕೊಂಡು ಬಂದನೇ? ಇವನ ರಕ್ತವನ್ನು ಹಿಂಡಿ, ನಿನ್ನ ಪರಾಕ್ರಮವೆಂಬ ಬೆಂಕಿಯನ್ನು ಕೆಡಿಸಿ, ಕಪಿ ಬಲದ ಕರುಳುಗಳನ್ನು ತಿನ್ನುವೆನು. ಕೋದಂಡವನ್ನು ಹಿಡಿ! ಬಾಣವನ್ನು ಬಿಡು! ಹೆದರಿ, ಹಿಂಜೆಗಿಯುವ ವೀರನೇ, ನಾನು? ಎನುತ್ತ, ಬಾಣಗಳಿಂದೆಚ್ಚನು. ಎಚ್ಚ ಬಾಣಗಳನ್ನು ಈತನು ಮಧ್ಯದಲ್ಲಿಯೇ ಕೊಚ್ಚಿ, ಆಕಾಶ ಭೂಮಿಗಳು ತುಂಬುವಂತೆ ಇಂದ್ರಜಿತುವಿನ ಮೇಲೆ ಬಾಣಗಳನ್ನು ಸುರಿದನು.

ಮತ್ತೊಂದು ಕಡೆಯಲ್ಲಿ ಕಪಿ ಬಲಕ್ಕೂ ರಾಕ್ಷಸರ ಬಲಕ್ಕೂ ಮಹಾ ಯುದ್ಧವು ನಡೆಯುತ್ತಾ ಇತ್ತು. ಬಳಿಕ ಲಕ್ಷ್ಮಣನು ಒಂದೇ ಬಾಣದ ಎಸುಗೆಯಲ್ಲಿ ಹಗೆಯ ರಥದ ನಾಲ್ಕು ಕುದುರೆಗಳನ್ನೂ ಭಂಡಿಗಳನ್ನೂ ಸಾರಥಿಯನ್ನೂ ನೆಲಕ್ಕೆ ಉರುಳಿಸಿ,—ಎಲೋ, ರಾವಣೀ, ಕತ್ತಲೆಯ ಕಪಟವನ್ನು ಒಡ್ಡಿ, ಗಗನ ಸ್ಥಳದಲ್ಲಿ ಮೈ ತೋರಿಸದೆ, ಎಸೆಯುವ ಉಬ್ಬಾಳುತನವು ಇಂದು ಮಾಸಿ ಹೋಯಿತೇ? ಕಲಿಗಳಾದವರಿಗೆ ಎದುರಾಗಿ ನಿಂತು, ತಮ್ಮ ಪರಾಕ್ರಮವನ್ನು ತೋರಿಸುವದು ಗುಣವು. ದುರ್ಬಲರಾದ ರಣ ಕಳ್ಳರಿಗೆ ಮರೆಯಿಂದ ಮೋಸದಿಂದ ಜಗಳವಾಡುವದು ಸ್ವಭಾವವು. ಇನ್ನು ಒಡಲನ್ನು ಬಚ್ಚಿಡದೆ, ಜಗಳವನ್ನು ಮಾಡು! ಇದು ನಮ್ಮಿಬ್ಬರಿಗೂ ಸರಿಯಾದ ಕೆಲಸವು. ಇದರಲ್ಲಿ ನಿನ್ನಂಥ ವೀರನಿಗೆ ಮಾಯೆಯನ್ನು ಮರೆ ಗೊಳ್ಳುವದು, ಅನುಚಿತವು. ಎರಡು ಕಟಕದ ಭಟರು ನಮ್ಮಿಬ್ಬರ ಕಲಿತನವನ್ನು ನೋಡಲಿ! ಮೇಲೆ ಅಮರರು ನೋಡಿ, ಸಂತೋಷಿಸಲಿ! ಎಂದು, ಹೀಯಾಳಿಸಿ, ನುಡಿದು, ಇಂದ್ರಜಿತು ಹಿಡಿದಿದ್ದ ಧನುಸ್ಸನ್ನು ಮೂರು ಬಾಣದಿಂದ ಕತ್ತರಿಸಿದನು.

ಆಗ ವಿಭೀಷಣನು—ಭೂತುರೆ, ಲಕ್ಷ್ಮಣಾ! ಮಾವಾ! ಈ ಬಿಲ್ಲಾಳುತನವೂ ವಿದ್ಯಾತಿಶಯವೂ ಭೂತ ನಾಥನಿಗೂ ಇಲ್ಲ. ಮಜಭಾಪು! ರಾಮನಿಗೆ ಸರಿಯಾದ ತಮ್ಮನು! ಎಂದು ಹೊಗಳಿದನು. ಬಳಿಕ, ಲಕ್ಷ್ಮಣನು ಇಂದ್ರಜಿತುವನ್ನು ಕುರಿತು—ಎಲೈ, ವೀರನೇ, ನನ್ನ ಮೇಲೆ ಬಾಣ ಪ್ರಯೋಗವನ್ನು ಮಾಡುವದಕ್ಕೆ ಕೈಯಲ್ಲಿ ಬಿಲ್ಲಿಲ್ಲ, ಹತ್ತುವದಕ್ಕೆ ತೇರಿಲ್ಲ. ಇಂಥಾ ನಿನ್ನನ್ನು ನಾನು ಕೊಲ್ಲೆನು. ಹೊಸ ತೇರು ಬಿಲ್ಲು ಸಾರಥಿಗಳನ್ನು ಸಿದ್ಧಾ ಮಾಡಿ ಕೊಂಡು, ನನ್ನೊಡನೆ ಜಗಳಕ್ಕೆ ಬಾ, ಎಂದು ನಸು ನಗುತ್ತ, ಹೇಳುತ್ತಿರಲು; ಆ ನಿಮಿಷದಲ್ಲಿ

ಇಂದ್ರಜಿತುವು ಮತ್ತೊಂದು ತೇರನ್ನೇರಿ, ಹೊಸ ಬಿಲ್ಲನ್ನು ಧರಿಸಿ, ಲಕ್ಷ್ಮಣನ ಮೇಲೆ ಬಾಣಗಳನ್ನು ಸುರಿದು, ಲಕ್ಷ್ಮಣನನ್ನು ಕುರಿತು—ಎಲೈ, ಸೌಮಿತ್ರಿಯೇ, ನಮಗೆ ಬ್ರಹ್ಮನು ಹರಸುವ ಬ್ರಾಹ್ಮಣನು, ಯಮನು ಕಿಂಕರನು, ಶಿವನು ನಮ್ಮ ಮನೇ ಭಿಕ್ಷುಕನು, ಮೃತ್ಯು, ಮಾರಿ, ಮಸಣಿಗಳು ನಮ್ಮ ಹೆಂಡರ ತೊತ್ತಿರುಗಳು; ಹಿಂದಣವರ ಹಾಗೆ ಈಗ ಜಯವನ್ನು ಹಾರೈಸದಿರು. ಈ ದಿವಸದ ಕದನದ ಕಠೋರ ಗತಿಯು ಬೇರೆ, ಎಚ್ಚರವಾಗಿರು, ಎಂದು ಬೊಬ್ಬಿರಿದನು.

ಅದನ್ನು ಕೇಳಿ, ಲಕ್ಷ್ಮಣನು ನಸು ನಕ್ಕು, ಇಂದ್ರಜಿತುವನ್ನು ಕುರಿತು—ನಿಮಗೆ ಆಶೀರ್ವಾದವನ್ನು ಮಾಡುವ ಬ್ರಹ್ಮನು ನಿಮ್ಮ ಅತ್ತೆಯ ಕೊಯಿದ ಕಿವಿ ಮೂಗುಗಳನ್ನು ಹತ್ತಿಸಲಿಲ್ಲ; ಏಕೆ? ಮತ್ತು ನಿಮಗೆ ಕಿಂಕರನಾದ ಯಮನು ನಿನ್ನ ಚಿಕ್ಕಪ್ಪ ತಮ್ಮ ಮಾವಂದಿರು ಮೊದಲಾದ ಸತ್ತವರ ಜೀವವನ್ನು ತಂದು ಕೊಡಲಿಲ್ಲವ್ಯಾಕೆ? ನೀನು ಹೀಗೆ ತಿಳಿಯದೆ, ಹೆಮ್ಮೆಯನ್ನು ಕೊಚ್ಚಿಕೊಳ್ಳುವದರಿಂದ ನಿನ್ನನ್ನು ದೊಡ್ಡ ಹೇಸರಗತ್ತೆ ಎಂದು ಎಣಿಸ ಬೇಕು, ಎಂದು ಹೇಳಿ, ಬಾಣಗಳನ್ನು ಸುರಿದನು. ಇಂದ್ರಜಿತುವು ಅವನ ಬಾಣಗಳನ್ನು ಕತ್ತರಿಸಿ—ಇನ್ನು ಹೆಚ್ಚು ಗಳಹಿದರೆ, ನಿನ್ನ ತಲೆಯನ್ನು ತರಿದು, ಇಳಿಸುವೆನು. ನೀವು ಹುಚ್ಚರು. ಈ ವಿಭೀಷಣನೆಂಬ ಹೇಡಿಯನ್ನು ನಂಬಿ, ನಮ್ಮ ವಿರೋಧದಿಂದ ಕೆಟ್ಟರಿ. ನಮ್ಮನ್ನು ಮೊದಲು ನಿಮ್ಮ ಕೈಯಿಂದ ಕೊಲ್ಲಿಸಿ, ನಿಮಗೆ ಗೆಲುವನ್ನು ತೋರಿಸಿ, ಆ ಹಿಂದೆ ನಿಮ್ಮನ್ನು ಕೊಂದು, ನಿಮ್ಮ ಧರಣಿ ನಮ್ಮ ಧರಣಿಯನ್ನೂ ಸೀತೆಯನ್ನೂ ತನ್ನಾಧೀನಾ ಮಾಡಿ ಕೊಳ್ಳ ಬೇಕೆಂಬು, ಕೊನೆ ಸಾಗದ ಕೆಟ್ಟಾಲೋಚನೆಯನ್ನು ಮನಸ್ಸಿನಲ್ಲಿ ಮಾಡಿ ಕೊಂಡು, ನಿಮ್ಮನ್ನು ಶೇರಿದ್ದಾನೆ. ಹದ್ದಿಗೂ ಹಾವಿಗೂ ಮಿತ್ರುತ್ವ ಉಂಟೇ? ನಿಮ್ಮ ವಿಧಿ ಕಡೆಗೇನಾಗುತ್ತದೆ? ನೋಡಿ! ಅಂದನು.

ಆ ಮಾತುಗಳನ್ನು ಕೇಳಿ, ಲಕ್ಷ್ಮಣನು,—ಎಲಾ, ನೀಚನೇ, ಯುದ್ಧದಲ್ಲಿ ಎದುರಾಗಿ ನಿಲ್ಲದೆ, ತಂತ್ರದ ಮಾತಿನ ಬಳಕೆಯಲ್ಲಿ ಬೆದರಿಸಿದರೆ, ಬೆದರುವರೆಂದು, ಬಗೆದೆಯಾ? ಕೊಳಕಾದ ಚಿಪ್ಪಿನಲ್ಲಿ ಹುಟ್ಟಿದ ಮುತ್ತಿಗೆ ಕೊರತೆ ಉಂಟೇ? ನಿಮ್ಮೊಡನೆ ಹುಟ್ಟಿದ ವಿಭೀಷಣನು ನಿರ್ಮಲನು ಎಂಬುವದನ್ನು ನಾವು ತಿಳಿಯೆವೇ? ಸಾಕು! ಇನ್ನು ಬೊಗಳದಿರು! ಹಯವನ್ನು ನೂಕು, ಕಣೆಗಳನ್ನು ಕಳುಹಿಸು! ಮಾಯಾ ಪಾಂಡಿತ್ಯವನ್ನು ನಮ್ಮೊಡನೆ ಮೆರೆಯ ಬೇಡ ಎಂದು, ಹೊಸ ಸಾಣೆಯ ಅಲಗುಗಳನ್ನು ಎಚ್ಚನು. ರಾವಣಿಯು ಅವನ

ಬಾಣಗಳನ್ನು ಕತ್ತರಿಸಿ, ನೈರುತಾಸ್ತ್ರವನ್ನು ಬಿಲ್ಲಿನಲ್ಲಿ ಹೂಡಿ, ಲಕ್ಷ್ಮಣನ ಎದೆಗೆಸೆಯಲು; ಆ ಪೆಟ್ಟಿನಿಂದ ರಕ್ತಗಳು ಸುರಿದು, ಕಳವಳಗೊಂಡು, ಕೈ ಆಡದೆ ನಿಂತಿರುವ ಲಕ್ಷ್ಮಣನನ್ನು ನೋಡಿ, ಕಪಿಗಳು ಬಂದು, ಕವಿದರು. ಆಗ ಇಂದ್ರಜಿತುವು ಕವಿದ ನೀಲನನ್ನು ಇಕ್ಕಿದನು. ಅಂಗದನನ್ನು ಭೂಮಿಗೆ ಮಲಗಿಸಿದನು. ಜಾಂಬವಂತನ ತಲೆ ನಡುಗಲಿಟ್ಟನು. ಗವಾಕ್ಷನ ಉಸುರು ತೆಗೆಬುಗೆಯಾಗುವಂತೆ ಹೊಡೆದನು. ನಳನನ್ನು ಓಡಿಸಿದನು. ಸುಷೇಣನನ್ನು ಹಲ್ಲುಗಿರಿಸಿದನು. ಗಜ ಗವಯರನ್ನು ಮೂರ್ಛೆ ಗೆಡವಿದನು. ಎದುರಾದ ಹನುಮನನ್ನು ಬಾಣದಲ್ಲಿ ಹೂಳಿ, ವಿಭೀಷಣನನ್ನು ಜಗಳಕ್ಕೆ ಕೆಣಕಿದನು. ಮುನಿದರೆ, ವಿಭೀಷಣ ದೇವನು ಯುದ್ಧಕ್ಕೆ ಹೆದರುವನೇ? ದೇವತೆಗಳು ಕೊಂಡಾಡುವ ಹಾಗೆ ಗದೆಯನ್ನು ತೆಗೆದು ಕೊಂಡು, ಇಂದ್ರಜಿತುವಿನ ರಥವನ್ನು ಅಪ್ಪಳಿಸಲು; ಇಂದ್ರಜಿತುವು ಚಿಕ್ಕಪ್ಪನ ಗದೆಯ ಹೊಯಿಲಿನ ಚಮತ್ಕಾರವನ್ನು ತಿಳಿದಿದ್ದವನಾದ್ದರಿಂದ, ಮತ್ತೊಂದು ರಥಕ್ಕೆ ಹಾರಿದನು. ಆ ರಥವು ಕುದುರೆ ಸಾರಥಿ ಸಹಿತವಾಗಿ ನುಚ್ಚು ನುರಿಯಾಯಿತು. ಆ ಮೇಲೆ ವಿಭೀಷಣನು ಗದೆಯಿಂದ ರಾಕ್ಷಸರ ಸೇನೆಗಳನ್ನು ಸವರುತ್ತ, ಯಮನ ಪಟ್ಟಣಕ್ಕೆ ಕಳುಹಿಸುತ್ತ ಇದ್ದನು.

ಅಷ್ಟರಲ್ಲಿಯೇ ಲಕ್ಷ್ಮಣನು ಜಾಗರೂಕನಾಗಿ, ಬ್ರಹ್ಮಾಂಡವು ಗುಮ್ಮಿಡುವ ಹಾಗೆ ತನ್ನ ಬಿಲ್ಲಿನ ತೆಬ್ಬಿನ ಧ್ವನಿಯನ್ನು ಮಾಡಿದನು. ಹನುಮಂತನು ಬೊಬ್ಬಿರಿದನು. ತಿರಿಗಿ ಇಂದ್ರಜಿತುವೂ ಲಕ್ಷ್ಮಣನೂ ಕಾಡಿನಲ್ಲಿ ಮದ್ದಾನೆಗಳು ಒಂದಕ್ಕೊಂದಕ್ಕೆ ಮಲತು, ನಿಲ್ಲುವ ಹಾಗೆ ನಿಂತು, ಎಚ್ಚಾಡುತ್ತ ಇರಲು; ಜೋರುತ್ತಿರುವ ನೆತ್ತರಿನಲ್ಲಿ ಜೋಡುಗಳು ನೆನೆದವು. ಇಬ್ಬರ ಮೈಗಳಲ್ಲಿಯೂ ಸರಳುಗಳು ನೆಟ್ಟವು. ಪಾಡು ಪಂಥದ ಮೋಡಿ ಮುರಿಯಿತು. ಮರವೆಯಿಂದ ಭೂಮಿಯಲ್ಲಿ ಬಿದ್ದರು. ಆಗ ಅವರಿಬ್ಬರ ಆಪ್ತರುಗಳು ಅಂಗ ಮೂರ್ಛೆಯನ್ನು ಶೈತ್ಯೋಪಚಾರಗಳಿಂದ ತಿಳಿಸಿ, ಘಾಯಗಳಲ್ಲಿ ಮದ್ದುಗಳನ್ನು ಮೆತ್ತಿ, ರಕ್ತಗಳನ್ನು ತೊಳೆದು, ದಿವ್ಯ ವಸ್ತ್ರಗಳನ್ನು ಉಡಿಸಿ, ಕಸ್ತೂರಿ ಕರ್ಪೂರ ಕೇಸರಿಗಳಿಂದ ಕೂಡಿದ ಗಂಧಗಳನ್ನು ಮೈಗಳಿಗೆ ಬೊಳಿದು, ಕವಳಗಳನ್ನು ತಿನ್ನಿಸಿ, ಕರ್ಪೂರದ ವೀಳ್ಯಗಳನ್ನು ಕೊಟ್ಟು, ಹುರಿ ಮಾಡಿದರು. ಬಳಿಕ ಬೊಬ್ಬಿರಿದು, ಬಿಲ್ಲುಗಳ ತೆಬ್ಬುಗಳನ್ನು ಕಟ್ಟಿ, ಅಂಬರ ತುಂಬುವಂತೆ ಅಂಬುಗಳನ್ನು ಒಬ್ಬರ ಮೇಲೊಬ್ಬರು ಇಟ್ಟರು. ಮುಬ್ಬಾಗಿರುವ ಮುಗಿಲ ಮೋಹರಕ್ಕೆ ಉಬ್ಬುವ ಅಂಬುಧಿಯಂತೆ ಕದನದ ಕೊಬ್ಬಿನಲ್ಲಿ ಕಲಿ ಏರಿ, ಇಂದ್ರಾರಿಯು ಲಕ್ಷ್ಮಣನನ್ನು ಕುರಿತು—ಎಲೈ, ಸೌಮಿತ್ರಿಯೇ, ನಿಮ್ಮ ಅಣ್ಣನನ್ನು ಕರಸಿಕೋ!

ನಿನ್ನ ಹತ್ತಿರ ಇರಲಿ! ನೀನು ಬದುಕಿರುವಾಗಲೇ ಭರತ ಶತ್ರುಘ್ನರಿಗೆ ಓಲೆಯನ್ನು ಬರಿಸು! ನಿಮ್ಮ ಶರಣು ಹೊಕ್ಕ ಈ ವಿಭೀಷಣನನ್ನು ದೇಶಾಂತರಕ್ಕೆ ಕಳುಹಿಸು. ನಿನಗೆ ಪರಗತಿ ಆಗುವದಕ್ಕೆ ನಿನ್ನ ಇಷ್ಟ ದೈವವನ್ನು ನೆನೆ! ಎನುತ್ತ, ತೆಗೆದೆಚ್ಚನು. ಲಕ್ಷ್ಮಣನು—ನಿಮ್ಮಪ್ಪನ ಕೊಲ್ಲುವದಕ್ಕೆ ನಮ್ಮಣ್ಣನನ್ನು ಕರಿಸುವೆನು. ನಿಮ್ಮ ವಿಜಯದ ಸುದ್ದಿಗೆ ಅಯೋಧ್ಯೆಗೆ ಓಲೆಯನ್ನು ಬರಿಸುವೆನು. ಶರಣು ಹೊಕ್ಕ ವಿಭೀಷಣನನ್ನು ನಿಮ್ಮ ಲಂಕಾ ಪುರದ ಅರಸುತನಕ್ಕೆ ಕಳುಹಿಸುವೆನು. ಖೂಳಾ! ಹೋಗೆನುತ್ತ, ಅವನು ಹೊಡೆದ ಬಾಣಗಳನ್ನು ಕತ್ತರಿಸಿ, ಬದಲಾಗಿ ಬಾಣಗಳನ್ನು ಹೊಡೆದು, ತಿರಿಗಿ ಅವನ ರಥಾಶ್ವ ಸಾರಥಿಗಳನ್ನು ಪುಡಿ ಮಾಡಿದನು.

ಆ ಕ್ಷಣದಲ್ಲಿಯೇ ಆತನ ಮಾತಾಮಹನಾದ ಮಯನು ರಥವನ್ನೂ, ಸಾರಥಿಗಳನ್ನೂ, ಕುದುರೆಗಳನ್ನೂ, ಅಕ್ಷಯವಾದ ಬಾಣ ಬತ್ತಳಿಕೆಗಳನ್ನೂ, ಕ್ರೂರವಾದ ಬಿಲ್ಲನ್ನೂ, ಕಳುಹಿಸಿದನು. ಅದನ್ನು ಇಂದ್ರಜಿತುವು ಅಂಗೀಕರಿಸಿ, ಲಕ್ಷ್ಮಣನನ್ನು ಕುರಿತು—ಇದಕೋ, ಬರುತ್ತಿದೆ ಬಾಣ! ಇದನ್ನು ಮಧ್ಯದಲ್ಲಿ ಸಡಲಿಸುವ ಶಕ್ತಿ ಇದ್ದರೆ, ಬಾಣವನ್ನು ತೊಡು, ಎಂದು ಹೊಡೆಯಲು; ಲಕ್ಷ್ಮಣನು ಅದನ್ನು ವಜ್ರಾಸ್ತ್ರದಿಂದ ಕತ್ತರಿಸಿ, ಇಂದ್ರಜಿತುವಿನ ರಥವು ಹದಿನಾರು ಯೋಜನ ಹಿಂದಕ್ಕೆ ಹೋಗುವಂತೆ ಹೊಡೆದನು. ಅದನ್ನು ಇಂದ್ರಜಿತುವು ಸಮದಾಯಿಸಿ ಕೊಂಡು, ಲಕ್ಷ್ಮಣನನ್ನು ಹೊಗಳುತ್ತ, ಮತ್ತೆ ಲಕ್ಷ್ಮಣನ ಮೇಲೆ ಬಾಣಗಳನ್ನು ಪ್ರಯೋಗಿಸಿದನು. ಹೀಗೆ ಉಭಯ ವೀರರಿಗೂ ನಾಲ್ಕು ದಿವಸ ಅಹೋ ರಾತ್ರಿಯು ಯುದ್ಧ ನಡೆಯಿತು. ಐದನೇ ದಿವಸದಲ್ಲಿ ಲಕ್ಷ್ಮಣನು ರಾಮನ ಅಡಿ ದಾವರೆಗಳನ್ನು ಮನಸ್ಸಿನಲ್ಲಿ ನೆನೆದು, ಶಸ್ತ್ರಾಚಾರ್ಯರಾದ ವಿಶ್ವಾಮಿತ್ರರಿಗೆ ಅಭಿವಂದಿಸಿ, ಧನುಸ್ಸಿನಲ್ಲಿ ಬ್ರಹ್ಮಾಸ್ತ್ರವನ್ನು ಹೂಡಿ, ಬಿಡಲು; ಆ ಇಂದ್ರಜಿತುವಿನ ಶಿರಸ್ಸನ್ನು ಕತ್ತರಿಸಿ, ಆಕಾಶಕ್ಕೆ ಹಾರಿಸಿತು. ಆಗ ದೇವೇಂದ್ರನು ದೇವ ದುಂದುಭಿಯನ್ನು ಧ್ವನಿ ಗೈಸಿದನು. ಆ ಇಂದ್ರಜಿತುವಿನ ತಲೆಯು ರಾವಣನ ಭುಜದ ಭಾಪುರಿಯು ನೆಲಕ್ಕೆ ಬೀಳುವಂತೆ ಬಿತ್ತು. ವಿಭೀಷಣನು ಆ ತಲೆಯನ್ನು ಹಿಡಿದು, ಮುಂಡಾಡಿ,—ಹಾ, ಮಕ್ಕಳ ಮಾಣಿಕವೇ, ಕನ್ನಡಿ ಕಂದಾ! ತಂದೆಯ ದುರ್ಮಾರ್ಗತನದಿಂದ ನೀನು ಮಡಿದೆಯಾ? ಯಾರ ಮಾತನ್ನು ಕೇಳದೆ, ಹೋರಿ, ಕೆಟ್ಟರಿ. ಕಣ್ಣಾರ ಪುತ್ರ ಮಿತ್ರ ಭ್ರಾತೃ ವಧೆಗಳನ್ನು ಕಂಡೆನೇ? ಶಿವಾ, ಮಹಾ ದೇವೆನುತ್ತಾ, ಗೋಳಿಡುತ್ತಿರಲು; ಲಕ್ಷ್ಮಣ ಹನುಮಂತ ಜಾಂಬವಂತಾದಿಗಳು ವಿಭೀಷಣನನ್ನು ಸಮಾಧಾನ ಪಡಿಸಿದರು.

73. The Battle of Lanka—Death of Ravana.

೭೩. ರಾವಣನ ಮರಣ.

ಆ ಬಳಿಕ ಲಂಕಾ ಪಟ್ಟಣದಲ್ಲಿ ರಾವಣನು ಇಂದ್ರಜಿತುವು ಮಡಿದ ಸುದ್ದಿಯನ್ನು ಕೇಳಿ, ಎದೆಯಲ್ಲಿ ನೆಟ್ಟ ಅಲಗು ಬೆನ್ನಿನಲ್ಲಿ ಹೊರಟಂತೆ ಕಳವಳಿಸಿ,—ಹಾ, ಯುವರಾಜನೇ, ಎನುತ್ತ, ನೆಲದಲ್ಲಿ ಬಿದ್ದು,—ಓ ಮಗನೇ, ನಿನ್ನಿಂದ ಸುರರ ನಗರವು ನನಗೆ ಕೈ ವಶವಾಯಿತು. ಇಂದ್ರನೇ ಮೊದಲಾದ ದೇವತೆಗಳ ಗಂಡನೆಂಧೆಸರಾಯಿತು. ನನ್ನ ಬಿರುದಿನ ಹೊಗಳಿಕೆ ಎಂಬ ಬಳ್ಳಿ ಬೆಳೆದು, ಮೂರು ಲೋಕದಲ್ಲಿಯೂ ಹರಹಿ ಕೊಂಡಿತು. ಇನ್ನು ಸಿರಿ ಯಾಕೆ? ಇನ್ನೀ ಜಗ ತ್ರಯದ ಅರಸುತನವ್ಯಾಕೆ? ಎಲೈ, ಕಂದಾ, ನೀನಿಲ್ಲದೆ ನನ್ನ ಪ್ರಾಣವದೇಕೆ? ಒಂದು ಮಾತನಾಡೈ, ಮಗನೇ! ನೀನಿಲ್ಲದೆ ನಾನು ಕಿರಣವಿಲ್ಲದ ಚಂದ್ರನಂತಾದೆನು. ಸುಕುಮಾರನೇ, ನನಗೆ ಬುದ್ಧಿಯನ್ನು ಹೇಳು! ನಾನು ಸಾಯಲೋ? ಬದುಕಿರಲೋ? ನನ್ನ ನಾಲಿಗೆಗೆ ಮುಳ್ಳು ಮುರಿದುದೆಲ್ಲೈ! ಕುವರನೇ, ಹಸುಳೇ, ನಾನು ನಿರ್ಭಾಗ್ಯನು! ನಿನ್ನಲ್ಲಿ ಏನು ಕೊರತೆ? ಆಹವದಲ್ಲಿ ಹಗೆಗಳಿಗೆ ಹಾವಿನಸ್ತ್ರದಿಂದ ಹಾನಿಯ ಹೊಂದಿಸಿದೆ. ಅದು ಅಲ್ಲದೆ, ಬ್ರಹ್ಮಾಸ್ತ್ರದಲ್ಲಿ ವೈರಿಗಳನ್ನು ರಣ ರಂಗದಲ್ಲಿ ಕೆಡವಿದೆ. ಆಡಲು ನನಗೆ ನಾಲಿಗೆ ಇಲ್ಲ. ಮದನಾತುರನಾಗಿ, ಮಕ್ಕಳು ಮರಿಗಳನ್ನೆಲ್ಲಾ ಮಡುಹಿದೆನು. ನನಗೆ ಮುಂದೇನು ಗತಿ? ಎಂದು ಹಂಬಲಿಸುತ್ತ, ರಾವಣನು ಮೊರೆ ಇಡುವಾಗ;—

ಮಗ ಸತ್ತ ವಾರ್ತೆಯನ್ನು ಕೇಳಿ, ಮಂಡೋದರಿಯು ಮನದಲ್ಲಿ ಮರುಗುತ್ತ, ಮೊರೆ ಇಡುತ್ತ, ಸೊಸೆಯರೊಡನೆ ಕೂಡಿ, ಅಸವಳಿದು, ಬಸವಳಿದು, ತಲೆಗಳ ಕೆದರಿಕೆಯಿಂದಲೂ, ಬಸುರ ಬಡಿಯುವಿಕೆಯಿಂದಲೂ ಬಂದು, ಚಾವಡಿಯ ನೆಲದಲ್ಲಿ ಬಿದ್ದು, ಹುಡಿಯಲ್ಲಿ ಹೊರಳುತ್ತ,—ನನ್ನ ರತ್ನದ ಕಲಶವನ್ನು ಸೆಳೆದು ಕೊಂಡರೋ? ನನ್ನ ಮುತ್ತಿನ ಮಣಿಯನ್ನು ಕಳೆದು ಕೊಂಡರೋ? ನನ್ನ ಕೈ ಗನ್ನಡಿಯನ್ನು ಒಡೆ ಬಡಿದರೋ? ನನ್ನ ಚಿಂತಾಮಣಿಯನ್ನು ಕದ್ದರೋ? ನನ್ನ ಭಾಗ್ಯದ ನಿಧಿಯನ್ನು ಸೂರೆ ಗೊಂಡರೋ? ಈ ರಾಜ ಮಂಡಲದಲ್ಲಿ ನನ್ನ ಮೊರೆಯನ್ನು ಯಾರೂ ವಿಚಾರಿಸುವದಿಲ್ಲವೇ? ನೀವರಸುಗಳಲ್ಲವೇ? ಹೀಗೆ ಪರದೇಶಿಯ ಮೊರೆಯನ್ನು ಆಲಿಸದೆ ಇರುವದು ನಿಮಗೆ ಪಾಪವಲ್ಲವೇ? ನೀವೇ ನನ್ನ ಕಂದನನ್ನು ಕೊಂದಿರಿ! ಲೇಸು ಮಾಡಿದಿರಿ! ಇನ್ನೀ ದೇಶವನ್ನು ನೀವೇ ಪಾಲಿಸಿ! ಎಂದು ಮೊರೆ ಇಡುತ್ತ,—ಹಗೆಗಳ ಕೊಲೆಗೆ ಮಗನ ಕಳುಹಿಸಿ ಬಂದಿರೇ? ಬವರಕ್ಕೆ ಕುವರನನ್ನು ಬಲಿ ಕೊಟ್ಟರೇ? ಮೊಗು

ವನ್ನು ಮೃತ್ಯುವಿನ ಬಾಯಿಯಲ್ಲಿ ಅಡಗಿಸಿದಿರೇ? ಕೇಡಾ ನನಗೊಬ್ಬಳಿಗೆ ಬಂತಲ್ಲ! ನಿಮ್ಮ ಕಣ್ಣೆದಿರಿಗೆ ತೊಳಲುತ್ತಿದ್ದವನು ಹೋದನು. ಇನ್ನು ನಿಮಗೆ ನಿರ್ಮಲವಾಯಿತು. ಚನ್ನಾಗಿ ಬದುಕಿ! ಮಗನೇ, ಸೋದರಸ್ತ್ರೀಯಾದ ಶೂರ್ಪನಖಿಯು ನಿನಗೆ ಮೃತ್ಯುವಾದಳೇ? ತಮ್ಮಣ್ಣನಿಗೆ ಬೋಧಿಸಿ, ನನ್ನ ಕುಲದ ಬೇರನ್ನು ಕಿತ್ತು, ಬಿಸುಟಳೇ? ಹೆತ್ತ ಒಡಲು ಹಾಳಾಯಿತು; ಕಂಡಿರೇ? ಎತ್ತಿ ಸಲಹಿದ ತೋಳು ನೆರೆ ಮುರಿಯಿತು; ಕಂಡಿರೇ? ಎನುತ್ತ, ಸೊಸೆಗಳ ಕೊರಳ ಕಟ್ಟಿಕೊಂಡಳುತ್ತ, ಮೂರ್ಛೆ ಬಿದ್ದಳು.

ಆಗ ರಾವಣನು ಬಂದು, ಆಕೆಯನ್ನು ಎಬ್ಬಿಸಿ, ಸೊಸೆಗಳನ್ನು ಸಮದಾಯಿಸಿ, ಅಂತಃಪುರಕ್ಕೆ ಕಳುಹಿಸಿ, ರಣ ದೀಕ್ಷೆಯನ್ನು ಕೈ ಕೊಂಡು, ಛಲದ ಮಾತುಗಳನ್ನಾಡುತ್ತ, ಹೊರಡಲು; ನಾನಾ ವಾದ್ಯಗಳನ್ನು ಬಾರಿಸಿದರು. ಕುದುರೆಗಳನ್ನು ಕಟ್ಟಿ, ಧ್ವಜ ಪಟವನ್ನು ಎತ್ತಿ, ಸಂಗರಕ್ಕೆ ಬೇಕಾದ ಸಾಮಗ್ರೀಯಗಳನ್ನು ತುಂಬಿ, ಸಾರಥಿಯು ಸನ್ನದ್ಧನಾಗಿ, ರಥವನ್ನು ತಂದು, ನಿಲ್ಲಿಸಲು; ರಾವಣನು ಆ ತೇರನ್ನು ಏರಿ, ಸಾರಂಭದಿಂದ ರಣಕ್ಕೆ ಬರುತ್ತಿರಲು; ಮುಂದಣ ಕಹಳೆಗಳು,—ರಣ ಭೈರವನಲ್ಲಿ ಕಾಳಗ ಬೇಡ! ರಿಪು ಭಯಂಕರನಲ್ಲಿ ತೋಟಿ ಬೇಡವೆಂದು ಕೂಗುತ್ತಿದ್ದವು. ಆಗ ರಾವಣನು ಹತ್ತು ತೋಳುಗಳಲ್ಲಿ ಹತ್ತು ಧನುಸ್ಸುಗಳನ್ನು ಧರಿಸಿ, ಮತ್ತೆ ಹತ್ತು ತೋಳುಗಳಿಂದ ಬಾಣಗಳನ್ನು ಬಿಡುತ್ತಾ, ಬರಲು; ಬಂದೊಂದು ಬಾಣಕ್ಕೆ ಹತ್ತು, ನೂರು, ಸಾವಿರ, ಹತ್ತು ಸಾವಿರ ಕಪಿಗಳ ತಲೆಗಳು ಕತ್ತರಿಸಿ, ಭೂಮಿಯಲ್ಲಿ ಬೀಳುತ್ತಿದ್ದವು. ಆಗ ಕಪಿ ಸೇನಾ ಪತಿಗಳು ರಾವಣನನ್ನು ತಾಗಿ, ಗವಯನು ನೊಂದನು. ಗಜನು ಅರುಚಿ ಕೊಂಡನು. ವಿನತನ ಪ್ರಾಣಗಳು ತುದಿ ಮೂಗಿನಲ್ಲಿ ತೆರಳದವು. ಜಾಂಬವಂತನು ನರಳುತ್ತ ನಡೆದನು. ಮಿಕ್ಕ ಹೆಸರುಳ್ಳ ಸಾಹಸಿಗಳು ರಾವಣನ ಸಮ್ಮುಖದಲ್ಲಿ ನಿಂತವರಿಲ್ಲ. ಶರಭನು ಬಡೆದು ಕೊಂಡನು. ಗಂಧಮಾದನನ ಎದೆಯಲ್ಲಿ ಸರಳ ಘಾಯದಿಂದ ರಕ್ತದ ಜಲವು ಜಾರಿತು. ಎರಡನೇ ಕಾಲ ರುದ್ರನಂತೆ ಜಗಳವಾಡಲು ಮನಸ್ಸಿಟ್ಟರೆ, ಮೂರು ಲೋಕದ ಗಂಡನ ಬಾಣಗಳೆಂಬ ಕಿಚ್ಚಿನ ಎದುರೆ ನಿಲ್ಲುವವರ್ಯಾರು? ರಾವಣನ ಬಾಣದಿಂದ ಸತ್ತ ಕಪಿಗಳಿಗೆ ಯಮ ಲೋಕದಲ್ಲಿ ಇರಲು ಸ್ಥಳವಿಲ್ಲದೆ ಹೋಯಿತು. ಉಳಿದ ಕಪಿಗಳು ಸುಗ್ರೀವನಾಜ್ಞೆಯನ್ನು ಸಡ್ಡೇ ಮಾಡದೆ, ದಿಕ್ಕು ದಿಕ್ಕಿಗೆ ಓಡಿ ಹೋದವು. ಕಾಡು ಗಿಚ್ಚು ಹತ್ತಿ ಕೊಂಡುರಿಯುವಲ್ಲಿ, ಯಾವ ಮರಗಳು ಎದುರೆ ನಿಂತಾವು? ಆಗ ಕಪಿ ರಾಜನಾದ ಸುಗ್ರೀವನು

ತಲೆ ಹತ್ತರ ರಕ್ಕಸನ ರಣವನ್ನು ನೋಡಿ, ಕೋಪಾಟೋಪದ ಉಬ್ಬಿನಲ್ಲಿ ರಾವಣನ ಎದುರಿಗೆ ಬಂದು, ನಿಂತು,—ಇದೇನೈ, ರಾಕ್ಷಸ ರಾಜೇಂದ್ರರೇ, ಬಹಳ ಸುಮ್ಮಾನದಿಂದ ದಯ ಮಾಡುವಿರಿ! ಜಗಳಕ್ಕೋ? ಇಲ್ಲವೆ ರಾಮ ಚಂದ್ರನಿಗೆ ಶರಣಾಗತರಾಗುವದಕ್ಕೋ? ಸ್ವಲ್ಪ ಹೇಳಿ; ಕೇಳುವ, ಎನಲು;

ರಾವಣನು—ಹುಯ್ಯಲ್ಲದೆ ಶರಣು ಹೊಗುವ ಭ್ರಮೆ ಏಕೆ? ಭುಜ ಬಲ ವಿ ಕ್ರಮದ ಕುಚೇಷ್ಟೆಯ ಹರಟೆಯು ನಮ್ಮೊಡನೆ ನಿನಗೆ ಸೊಗಸೇ? ಬ್ರಹ್ಮ ರು ದ್ರೇಂದ್ರಾದಿಗಳನ್ನು ಗೆಲಿದೀ ಭುಜಗಳಿಗೆ ನರಾಧಮರು ಪಾಡೇ? ದಾರಿಯನ್ನು ಬಿಡು! ಬಿಡೆನುತ್ತ, ಸುಗ್ರೀವನನ್ನು ಬಾಣದಿಂದೆಚ್ಚನು. ಅವನು ಎಚ್ಚ ಬಾಣಕ್ಕೆ ತನ್ನ ಬಾಹು ದಂಡವನ್ನು ಮರೆ ಮಾಡಿ, ಬಿಡಿಗಣ್ಣರು ಬೆಚ್ಚಲು ಬೊಬ್ಬಿರಿದು, ಭೂಧರದ ಶಿಖರವನ್ನು ರಾವಣನ ಮೇಲೆ ಹಾಕಲು; ಆತನ ತೇರಿನ ಅಚ್ಚು ಮುರಿಯಿತು. ರಾವಣನು ಮತ್ತೊಂದು ರಥಕ್ಕೆ ಹಾರಿ, ಬೊಬ್ಬಿರಿದು, ಬಾಣ ದ ಮಳೆಯನ್ನು ಕರೆಯಲು; ಸುಗ್ರೀವನು ಅಷ್ಟು ಬಾಣಗಳನ್ನು ತನ್ನ ತೋಳಿ ನ ಘಾಳಿಯಿಂದ ಹಾರಿಸಿ, ಕಡುಹಿನಿಂದ ರಾವಣನ ಕಿರೀಟಗಳಿಗೆ ಎರಗಲು; ದೆಸೆ ದೆಸೆಗೆ ರತ್ನಗಳು ಇಟ್ಟಾಡಿದವು. ಮತ್ತು—ಎಲಾ, ಖೂಳ ಖಳನೇ, ಮೊದಲು ನಿನಗೆ ನಾ ಮಾಡಿದ ಕಿರೀಟ ಭಂಗವನ್ನು ಮರೆತೆಯಾ? ನಾವು ಕಾಡಿನ ಸಾಧಾ ರಣದ ಕಪಿಗಳೇ? ವಿಚಾರಿಸದೆ, ಗಳಹುವೆಯಲ್ಲಾ! ಎಂದು ಹಲ್ಲು ಮೊರೆದು, ಹಲ್ಲುಗಳು ಕಳಚಿ ಬೀಳುವ ಹಾಗೆ ರಾವಣನ ಕಪಾಲಗಳನ್ನು ಹೊಡೆದನು.

ರಾವಣನು ಆ ಪೆಟ್ಟನ್ನು ಸಹಿಸಲಾರದೆ, ಮೂಗಿನಲ್ಲಿ, ಬಾಯಿಯಲ್ಲಿ ಸಹ, ರಕ್ತವನ್ನು ಕಾರುತ್ತ, ರಥದಿಂದ ಕೆಳಗೆ ಬಿದ್ದು, ಮೂರ್ಛಾಗತನಾಗಲು; ಕಪಿ ಗಳೆಲ್ಲಾ ಆರ್ಭಟೆಯನ್ನು ಮಾಡುತ್ತ, ಸಂತೋಷದಿಂದ ನೆಗೆದಾಡಿದವು. ಸು ಗ್ರೀವನು—ಅಹಹ! ಮೋಸವಾಯಿತು. ಖೂಳನು ರಾಘವನ ಬಾಣಕ್ಕೆ ಗುರಿ ಯಾದನು. ಇವನನ್ನು ನಾನು ಕೊಲ್ಲ ಬಾರದಾಗಿತ್ತು. ರಾಮನು—ಹಗೆಯ ನ್ನು ಕೊಂದದ್ದು ಒಳ್ಳೇದಾಯಿತು! ಅನ್ನುವನೋ?—ನನ್ನ ಕೀರ್ತಿಯನ್ನು ನೀನು ಅಪಹರಿಸಿ ಕೊಂಡೆ, ಅನ್ನುವನೋ? ಎಂದು ಆತಂಕದಿಂದ ಇದ್ದನು.

ಅಷ್ಟರಲ್ಲಿ ರಾವಣನ ಸಾರಥಿಯು ಬಂದು, ನೋಡಿ, ಆತನ ಮೂಗಿನ ಸೊ ಳ್ಳೆಗಳಲ್ಲಿ ಉಸುರು ಹೊರಡುತ್ತಿರುವದನ್ನು ಕಂಡು, ಬೇಗ ಶೈತ್ಯೋಪಚಾರ ಗಳನ್ನು ಮಾಡಲು; ರಾವಣನು—ಅಸ್ಸಪ್ಪಾ, ಎಂದು ಎದ್ದು, ಸಾರಥಿಯ ಕಡೆ ಯಿಂದ ಹೂಜಿಯಲ್ಲಿ ನೀರನ್ನು ತರಿಸಿ ಕೊಂಡು, ಕೈ ಕಾಲು ಮೈಗಳ ರಕ್ತ ಗಳನ್ನು ತೊಳೆದು ಕೊಂಡು, ಬಾಯಿ ಮುಕ್ಕುಳಿಸಿ, ಮದ್ದಿನ ಗುಳಿಗೆಯನ್ನು

ತಿಂದು, ಕರ್ಪೂರ ತಾಂಬೂಲವನ್ನು ಸವಿದು, ರಥಾರೂಢನಾಗಿ, ಸುಗ್ರೀವನೆದುರಿಗೆ ಬಂದು, ನಿಂತು—ಎಲೈ, ಕಪಿ ರಾಜನೇ, ನಾನು ಈ ವರಿಗೆ ಯುದ್ಧ ಮಾಡಿದ ವೀರರಲ್ಲಿ ಒಬ್ಬರಾದರೂ ನನಗೆ ಇಂಥ ನೋವನ್ನು ಮಾಡಿದವರಿಲ್ಲ. ನೀನು ನಿಮ್ಮಣ್ಣ ವಾಲಿಗೆ ಸರಿಯಾದ ಭಟನು. ಶಾಬಾಸು! ಎಂದು ಕೊಂಡಾಡಿ, ಬ್ರಹ್ಮನ ಮಂತ್ರವನ್ನು ಬಾಣದ ಮೊನೆಗೆ ಮಂತ್ರಿಸಿ, ಬೊಬ್ಬಿರಿದು, ತೆಬ್ಬಿನ ಧ್ವನಿಯನ್ನು ತೋರಿ,—ಇಗೋ, ಈ ಬಾಣವನ್ನು ಸಹಿಸಿಕೋ! ಎಂದು ಹೇಳಿ, ಸುಗ್ರೀವನ ಎದೆಗೆ ಎಚ್ಚನು. ಆ ಬಾಣವು ತಗಲಿ, ಸುಗ್ರೀವನು ಇಳೆಗೆ ಒರಗಿದನು. ಆಗ ಸಮಸ್ತ ಕಪಿ ಸೇನಾಪತಿಗಳು ಮರ, ಕಲ್ಲು, ಗುಂಡು, ಬೆಟ್ಟಗಳನ್ನು, ಹತ್ತು ದಿಕ್ಕಿನಲ್ಲಿಯೂ ರಾವಣನನ್ನು ಮುತ್ತಿ ಕೊಂಡು, ಆತನ ಮೇಲೆ ಸುರಿದರು. ಬಳಿಕ ರಾವಣನು ಕಲ್ಲು ಗುಂಡಿನಲ್ಲಿ ತರುಬುವ ಹೊಂತಕಾರಿಗಳನ್ನು ತರಿದು, ಮುಂದಕ್ಕೆ ರಥವನ್ನು ಹರಿಸಿ, ಶ್ರೀರಾಮಚಂದ್ರನನ್ನು ಅರಸುತ್ತಾ ಬರುತ್ತಿರಲು; ಸರ್ವ ಸೇನಾ ಪತಿಯಾದ ನೀಲನು ವಿಲಯ ಕಾಲದ ಕಾಲನ ಹಾಗೆ ಹಲ್ಲುಗಳನ್ನು ಕಚ್ಚುತ್ತಾ, ದೊಡ್ಡ ಬೆಟ್ಟವನ್ನು ಕೈಯಲ್ಲಿ ತೆಗೆದು ಕೊಂಡು, ಸೀತಾ ಚೋರನ ಎದುರಿಗೆ ಬಂದು, ನಿಂತು,—ಎಲ್ಲಿಗೆಲಾ, ಹೋಗುತ್ತೀಯೇ? ಗರ್ವದ ಕೊಬ್ಬು ಯಾರಲ್ಲಿ ನಡಿಸುತ್ತೀಯೇ? ನಿಲ್ಲು! ನೋಡು! ನಾನು ಯಾರು? ನಿನಗೆ ಅಭಿಮುಖನಾಗಿ ನಿಂತಿರುವ ನನ್ನನ್ನು ಚನ್ನಾಗಿ ಕಣ್ಣು ಬಿಟ್ಟು ನೋಡು! ನಿನಗೆ ಕಾಲ ಮೃತ್ಯುವಾದ ನೀಲನಲ್ಲಾ, ನಾನು! ನನಗೆ ಯುದ್ಧವನ್ನು ಕೊಟ್ಟು, ಮುಂದಕ್ಕೆ ಸಾಗು, ಅಂದನು.

ಆ ಮಾತನ್ನು ಕೇಳಿ, ರಾವಣನು—ಅಹುದಹುದು! ಕೋತಿಗಳ ಬಲದಲ್ಲಿ ಕ್ರೂರ ಪರಾಕ್ರಮಿಯು ನೀನು. ನಿನಗೆ ನಾನು ಹೆದರುವೆನು. ನೀನು ನಮಗೆ ಉಬ್ಬಸವನ್ನು ಮಾಡದೆ ಬಿಡೆ. ಎಲಾ, ನೀಚ ಕೋಡಗನೇ, ಯಾವ ಕಾಲದಲ್ಲಿಯಾದರೂ, ಮದಿಸಿರುವ ಆನೆಯ ಕುಂಭ ಸ್ಥಳವನ್ನು ಸೀಳುವ ಸಿಂಹವನ್ನು ಗುಳ್ಳೆ ನರಿಯು ಹೆದರಿಸಿ, ಜೀವಿಸಿದ್ದುಂಟೇ? ವಿಷಗ್ರೀವನಿಗೆ ಸರಿ ಬಲನಾದ ಸುಗ್ರೀವನನ್ನು ತಿಂದು ಬರುವ ನನಗೆ ನೀನೆದುರೇ? ನನ್ನ ಸಂಗಡ ವೈರದಿಂದ ದೇವಾಸುರ ನರೋರಗರಲ್ಲಿ ಹೋರಿ, ಬದುಕಿದವರು ಯಾರೂ ಇಲ್ಲ. ಮಿಕ್ಕ ಮೃಗ ಮನುಷ್ಯರು ನನಗೆ ಪಾಡೇ? ದಾರಿಯನ್ನು ತೆಗೆ, ಅಂದನು.

ನೀಲನು—ಕಳ್ಳರ ಮಾತು ತಳವಾರರ ಕೇರಿಯಲ್ಲಿ ಮೆರೆಯುವದೇ? ಹೊತುರ್ಗ, ವೀರರಾದ ನಮ್ಮಲ್ಲಿ ಈ ಆತ್ಮ ಸ್ತುತ್ಯದ ಮಾತು ಶೋಭಿಸುವದೇ? ರಘುರಾಮನ ಭೃತ್ಯರಿಗೆ ಭಯವೆಂದಿಗಾದರೂ ಉಂಟೇ? ನಿನ್ನ ಬಾಯಿ ಬಡುಕತನ

ವನ್ನು ನಿನ್ನೂರಿನವರ ಸಂಗಡ ಗಳಹು; ನಮ್ಮೊಡನೆ ಉಸುರ ಬೇಡ. ನಮ್ಮ ರಘು ರಾಜನ ಸಂಗಡ ನಿನ್ನ ಪ್ರಾಣಕ್ಕೆ ಮುಗುವಳಿಯನ್ನು ಮಾಡಿ ಕೊಂಡು ಬಂದು ಇದ್ದೇನೆ. ನಿನ್ನಂಥಾ ನೂರು ಮಂದಿ ರಾವಣರು ಬಂದರೂ, ಸಡ್ಡೆ ಮಾಡುವೆನೇ? ಕೆಲವು ಕಳ್ಳತನಗಳು ದಕ್ಕಿದರೂ, ಕಳ್ಳರಿಗೆ ಕಡೆಯಲ್ಲಿ ಎದೆಗೆ ಶೂಲ ಬರುವದು. ಅದರ ಹಾಗೆ ನೀನು ದೇವಾಸುರರಲ್ಲಿ ಮಾಯೆಯಿಂದ ಕೆಲವರನ್ನು ಜಯಿಸಿದ ಮಾತ್ರಕ್ಕೆ ಆ ಜಯವು ನಮ್ಮಲ್ಲಾಗುವದು ಎಂದು ಹಾರೈಸ ಬೇಡ. ನಾನು ನಿನಗೆ ಎದೆಯ ಶೂಲದ ಹಾಗೆ ನಿಂತಿದ್ದೇನೆ ಎಂದು, ಬೊಬ್ಬಿರಿದನು.

ರಾವಣನು—ಬರೀ ಎದೆ ಕೆಚ್ಚಿನ ಮಾತಿನಿಂದ ನಮ್ಮನ್ನು ಜರೆದು ನುಡಿಯುವವನು ನೀನೇ! ನಿನ್ನ ಪರಾಕ್ರಮವನ್ನು ನೋಡುವಾ! ಎಂದು, ಬಿಲ್ಲಿನ ತೆಬ್ಬಿನಲ್ಲಿ ಬಾಣವನ್ನು ಹೂಡಿ, ನೀಲನನ್ನು ಹೊಡೆದನು. ನೀಲನು—ಸವುದೆಗಳಿಂದ ಬೆಂಕಿಗೆ ಭಯ ಉಂಟೇ? ನಿನ್ನ ಬಾಣಗಳ ಪೆಟ್ಟು ನನಗೆ ಸಡ್ಡೆಯೇ? ಎಂದು ಹೇಳಿ, ದೇವತೆಗಳು ಮಜಭಾಪೆನಲು ದಶಾನನನನ್ನು ತಿವಿದನು. ಬಳಿಕ ತ್ರಿಪುರ ದಹನದಲ್ಲಿ ನಂದೀಶ್ವರನೊಡನೆ ವಿದ್ಯುನ್ಮಾಲಿಗಾದಂತೆ ರಾವಣನಿಗೆ ನೀಲನೊಡನೆ ಜಗಳವಾಯಿತು. ನೀಲನು ರಾವಣನ ಮೇಲೆ ಇಡುವ ಮರ ಬೆಟ್ಟ ಗುಂಡುಗಳಿಂದಲೂ, ರಾವಣನು ನೀಲನ ಮೇಲೆ ಇಡುವ ಬಾಣಗಳಿಂದಲೂ, ಆಕಾಶ ಭೂಮಿಯು ತುಂಬಿತು. ಹೀಗೆ ಉಭಯತ್ರರಿಗೂ ಯುದ್ಧವಾಗುವಲ್ಲಿ, ನೀಲನು ತನ್ನ ಬಾಲವನ್ನು ಉದ್ದವಾಗಿ ಬೆಳಸಿ ಕೊಂಡು, ರಾವಣನ ಮೇಲೆ ನೆಗೆದು ತನ್ನ ಬಾಲದಿಂದ ಅವನನ್ನು ಕಟ್ಟಿ, ತಾನೂ ಮೇರು ಮಂದರಾಕಾರವಾಗಿ ಬೆಳೆದು,—ಅಳದಿರು ಎನ್ನಯ ಕಂದಾ, ಎಂದು ಜೋಗುಳವನ್ನು ಹಾಡುತ್ತ, ಮೇಲೆ ದೇವ ಸ್ತ್ರೀಯರುಗಳು ಗಹ ಗಹಿಸಿ ನಗುತ್ತಿರಲು; ಅಲ್ಲಾಡಿಸಿ, ತಿರಿಗಿಸಿ, ಅವನ ರಥದಲ್ಲಿ ಇಳಿಸಿ, ಅವನ ರಥದ ಧ್ವಜದ ಕಂಭದ ಮೇಲೆ ಕುಳಿತು ಕೊಂಡು, ರಾವಣನನ್ನು ಕುರಿತು—ಎಲಾ, ರಕ್ಕಸಾ, ರಣಕ್ಕೆ ನಾವು ಅತಿ ಬಲರೋ? ಹೀನ ಬಲರೋ? ಮೃಗಗಳೆಂದು ನಮ್ಮನ್ನು ಹೀಯಾಳಿಸಿದೆ. ಎಲಾ, ನಾವು ಮರದ ಮೇಲೆ ನೆಗೆದಾಡುವ ಕೋತಿಗಳೇ? ನೀನು ರಾಕ್ಷಸನೇ? ನಾಚ ಬೇಡ; ಹೇಳು. ವಿಮಾನದ ಅಮರರು ಇನ್ನೂ ನಮ್ಮ ಕೆಲಸಗಳನ್ನು ಕಾಣರು. ಜಾನಕಿಯನ್ನು ಕಳ್ಳತನದಲ್ಲಿ ಕೊಂಡು ಬಂದ ಸುಮ್ಮಾನವು ಎಲ್ಲಿ? ತೋರು! ಎನುತ್ತ, ಮತ್ತೆ ರಾವಣನ ನೆತ್ತಿಯನ್ನು ತಿವಿದನು.

ರಾವಣನು ಮಹಾ ಕೋಪಿಷ್ಠನಾಗಿ, ಚಂದ್ರಹಾಸದಿಂದ ಹೊಡೆಯಲು; ಅ

ದನ್ನು ತಪ್ಪಿಸಿ ಕೊಂಡು, ನೀಲನು ಮತ್ತೆ ರಾವಣನನ್ನು ಹೊಯಿದನು. ಆಗ ರಾವಣನು ತನ್ನ ಕೈ ಕಠಾರಿಯಿಂದ ನೀಲನನ್ನು ತಿವಿದನು. ಹೀಗೆ ಯುದ್ಧವಾಗುತ್ತಿರಲು; ರಾವಣನು ರಥದಿಂದ ಇಳಿದು ಬಂದು, ನೀಲನನ್ನು ಒದ್ದನು. ಬದದ ಕಾಲಿನ ಪೆಟ್ಟಿಗೆ ಈತನು, ಪ್ರಾಣವು ಗಜಬಜಿಸಿ, ನೊಂದನು. ಆ ನೊಂದ ವೇಳೆಯಲ್ಲಿ ರಥದ ಮೇಲೆ ಹತ್ತಿ ಕೊಂಡು,—ರಾಮನ ಬಳಿಗೆ ಹೋಗುವೆನೆಂದು, ರಾವಣನು ಉದ್ಯೋಗಿಸುತ್ತಿರಲು; ನೀಲನು ಎಚ್ಚತ್ತು, ತನ್ನ ಬಾಲವನ್ನು ಬೆಳಸಿ, ಕುದುರೆಗಳ ಕಾಲುಗಳನ್ನೆಲ್ಲಾ ಬಿಗಿದು, ಕೇದಿ, ಕಟ್ಟಲು; ಆ ಕುದುರೆಗಳು ಮುಗ್ಗುರಿಸಿದವು. ಅದನ್ನು ಕಂಡು, ರಾವಣನು ಸಾರಥಿಯ ಮೇಲೆ ಕೋಪಿಸಿ ಕೊಳ್ಳಲು; ಆತನು ಕುದುರೆಗಳ ಕಡಿವಾಣಗಳನ್ನು ಶೇದಿ, ಹಿಡಿದು, ಚಾಟಿಗಳಿಂದ ಹೊಡೆದು, ಎಷ್ಟು ಬೊಬ್ಬಿರಿದು ಆರ್ಭಟಿಸಿದಾಗ್ಯೂ, ಕುದುರೆಗಳು ಮುಂದಕ್ಕೆ ಹೆಜ್ಜೆಯನ್ನು ಕೀಳದಿರಲು; ರಾವಣನು ಕೆಳಗೆ ಬೊಗ್ಗಿ, ನೋಡಿ, ಕಪಿಯ ಬಾಲದಿಂದ ಕಟ್ಟಿರುವದನ್ನು ಕಂಡು,—ಈ ಕೋಡಗವು ಬಹಳ ಕೆಟ್ಟ ಚೇಷ್ಟೆಯುಳ್ಳದ್ದು ಎಂದು, ತನ್ನ ಕೈಯಲ್ಲಿ ಇದ್ದ ಕತ್ತಿಯಿಂದ ನೀಲನನ್ನು ಹೊಡೆದನು. ನೀಲನು ಆ ಪೆಟ್ಟನ್ನು ತಪ್ಪಿಸಿ ಕೊಂಡು, ಆ ರಾವಣನ ಹೆಗಲಿಗೆ ನೆಗೆದು, ಒಂದೊಂದು ತಲೆಯ ಕಿರೀಟವನ್ನು ತೆಗೆದು, ತೆಗೆದು, ಈಡಾಡಿ, ರಥದ ಮೂಕೀ ಮರದ ತುದಿಗೆ ನೆಗೆದು, ನೊಗದಲ್ಲಿ ಕಟ್ಟಿ ಇದ್ದ ಕುದುರೆಗಳ ಜತ್ತಿಗೆಗಳನ್ನು ಸಡಿಲಿಸಿ, ಸಾರಥಿಯನ್ನು ಕಾಲಲ್ಲಿ ಒದ್ದು, ಭೂಮಿಗೆ ಕೆಡವಿ, ರಾವಣನ ಬೆನ್ನಿನಲ್ಲಿ ಇದ್ದ ಬತ್ತಳಿಕೆಯನ್ನು ಕಿತ್ತು, ಬಿಸಾಟು, ಅವನ ಕೈಯಲ್ಲಿ ಇದ್ದ ಶಸ್ತ್ರವನ್ನು ಕಿತ್ತು ಕೊಂಡು, ದೂರಾ ಎಸೆದು, ರಥದ ಭಂಡಿಗಳನ್ನು ಒದ್ದು, ದೂರಕ್ಕೆ ಹಾರಿಸಿ, ಅಚ್ಚುಗಳನ್ನು ಮುರಿದು, ರಾವಣನ ಮುಡುಹು, ಮುಸುಡು, ಎದೆ, ಕೊರಳು, ಕಂಕುಳು, ಹೆಡಕುಗಳಲ್ಲಿ ಹಾರ್‍ಯಾಡುತ್ತ, ರಾವಣನನ್ನು ಕುರಿತು—ಎಲಾ, ನೀನು ರಾಘವೇಂದ್ರನೊಡನೆ ಕಾದುವ ಭಟನೇ? ಛೀ! ಖೂಳರ ಖೂಳಾ! ಹೋಗೆನುತ್ತ, ತೋಳನ್ನು ಎತ್ತಿ, ಮುಷ್ಟಿಯಿಂದ ರಾವಣನ ನೆತ್ತಿಯನ್ನು ತಿವಿದನು.

ಅದನ್ನು ನೋಡಿ, ಆಕಾಶದಲ್ಲಿ ದೇವತೆಗಳ ಸೂಳೆಯರು ಘೊಳ್ಳೆನುತ್ತ, ನಗೆಯ ಕಡಲಲ್ಲಿ ಬಿದ್ದು—ನೀಲನ ಕೆಲಸವು ಲೇಸು! ಎಂದು ಕೊಂಡಾಡಿದರು. ಮತ್ತೆ ನೀಲನು ಕೋಟೆಯ ತೆನೆಗಳ ಮೇಲೆ ಅಳಲುಗಳು ಓಡ್ಯಾಡುವಂತೆ, ರಾವಣನ ತಲೆಯ ಮೇಲೆ ಓಡ್ಯಾಡುತ್ತ, ಅವನ ಮೂಗಿನ ಸೊಳ್ಳೆಗಳ ಕೂದಲುಗಳನ್ನು ಕೀಳುತ್ತ—ಛೀ! ಹೆಂಗಸು ಗಳ್ಳ! ಹೋಗೆಂದು, ರಾವಣನನ್ನು ಒದೆದನು.

ಆಗ ರಾವಣನು ನೀಲನ ಪರಾಕ್ರಮಕ್ಕೆ ಮೆಚ್ಚಿ, ಬಿಲ್ಲಿನಲ್ಲಿ ಆಗ್ನೇಯಾಸ್ತ್ರವನ್ನು ಹೂಡಿ, ಆತನ ಮೇಲೆ ಬಿಡಲು; ಆ ಅಸ್ತ್ರದಿಂದ ನೀಲನು, ಅಗ್ನಿಯ ಮಗನಾದ್ದರಿಂದ ಬದುಕ್ಕಿದ್ದೇ ಹೊರ್ತು, ಮಿಕ್ಕವರು ಯಾರು ಬದುಕುವರು? ಆ ಅಸ್ತ್ರವು ಎದೆಯಲ್ಲಿ ನಾಟ, ಬೆನ್ನಿನಲ್ಲಿ ಮೂಡಲು; ನೀಲನು ಮೂರ್ಛಿತನಾಗಿ, ನೆಲದಲ್ಲಿ ಬಿದ್ದನು.

ಆ ಸಮಯದಲ್ಲಿ ರಾವಣನು ಮುಂದಕ್ಕೆ ರಥವನ್ನು ನೂಕುತ್ತ, ಕಪಿ ಪತಿಗಳನ್ನು ಸಂಹರಿಸುತ್ತ, ಬರುತ್ತಿರಲು; ಘಾಯವು ಬಿರಿಸಾಗಿ, ಕಪಿ ರಾಯ ಸುಗ್ರೀವನು ಬಿದ್ದನು. ಕಪಿ ಸೇನಾಧಿಪತಿಯಾದ ನೀಲನ ಪ್ರಾಣದ ಹವಣು ತಿಳಿಯುವದಿಲ್ಲ. ಏನಾಗಿದೆಯೋ? ವಾಲಿಯ ಮಗನಾದ ಅಂಗದನನ್ನು ನೋಯಿಸಿತು.—ಇನ್ನೀ ರಾವಣನ ಬಾಣದ ಎದುರಿಗೆ ನಿಲ್ಲುವವರ್ಯಾರೆಂದು, ಕಪಿ ಸೇನೆಗಳೆಲ್ಲಾ ಬಾಯಿಯನ್ನು ಬಡು ಕೊಳ್ಳುತ್ತಿರಲು; ಹನುಮಂತನು ಪ್ರಳಯ ಕಾಲದ ರುದ್ರನಂತೆ ಕೋಪಿಸಿ ಕೊಂಡು,—ಕೊರತೆ ಬಂದರೆ, ಬರಲಿ. ರಾಮನು ನನ್ನನ್ನು ತೊರೆದರೆ, ತೊರೆಯಲಿ. ನನ್ನ ಪ್ರತಿಜ್ಞೆಯನ್ನು ಮುರಿದನು; ಇವನು ಉನ್ಮತ್ತನೆಂದು ನೆನಸಿ ಕೊಂಡರೂ ನೆನಸಿ ಕೊಳ್ಳಲಿ. ಈ ಖಳನ ಎಲುವನ್ನು ಮುರಿಯುವೆನು; ರಕ್ತವನ್ನು ಶಾಕಿನಿಯರ ಬಾಯಿಗೆ ರುಚಿಯಾಗುವಂತೆ ಸುರಿಸುವೆನು. ಇವನು ರಣ ಮೂರ್ಖನು ಎಂದು, ರಾವಣನ ಎದುರಿಗೆ ಬಂದು, ನಿಂತು,—ಏನೆಲಾ, ದಶಕಂಠಾ, ಯಾರೊಡನೆ ರಣದ ಸುಮ್ಮಾನವು? ಎಂದು ಕೇಳಲು; ರಾವಣನು—ಏನೋ, ಕೋಡಗನೇ, ನಮ್ಮನ್ನು ಮರೆತೆಯಾ? ನಮ್ಮೂರಲ್ಲಿ ಹಳೇ ಚಿಂದಿ ಬಟ್ಟೆಗಳನ್ನು ನಿನ್ನ ಬಾಲಕ್ಕೆ ಸುತ್ತಿಸಿ, ಬೆಂಕಿಯ ಹಚ್ಚಿಸಿದವನಲ್ಲವೇ? ನಮ್ಮೊಡನೆ ಇಷ್ಟು ಕೊಬ್ಬಿನ ಮಾತೇ, ನಿನಗೆ? ಎನಲು; ಹನುಮಂತನು—ಹವುದು, ಬಲ್ಲೆನು. ಹುಲು ರಕ್ಕಸರನ್ನು ಜಗಳಕ್ಕೆ ನಿಲ್ಲಿಸಿ, ಕೊಲ್ಲಿಸಿದ ಭಂಟ ನೀನು. ಈಗ ನಿನಗೆ ನನಗೆ ದ್ವಂದ್ವ ಯುದ್ಧವು ದೊರಕಿದೆ. ಕಾದಿ, ನೋಡುವ. ಈ ಜಗಳವು ನಮ್ಮಿಬ್ಬರ ಪರಾಕ್ರಮವನ್ನು ತೂಗುವದಕ್ಕೆ ತಕ್ಕಡಿಯಾಗಿದೆ ಎಂದು ಹೇಳಿ, ರಾವಣನ ಹೆಗ್ಗತ್ತನ್ನು ಹಿಡಿದು, ನೆಲಕ್ಕೆ ಅಂಗತೆರಕನಾಗಿ ಬೀಳಿಸಿದನು. ಮತ್ತು ಅವನ ಸಾರಥಿಯನ್ನು ನೋಡಿ—ಎಲವೋ, ಸಾರಥಿಯೇ, ನಮ್ಮ ಮಲ್ಲಯುದ್ಧದಲ್ಲಿ ನಿಮ್ಮೊಡೆಯನು ಬದುಕಿ ಬಂದರೆ, ನೀನು ಹಿಂತಿರುಗಿ ಕೊಡು ಎಂದು, ರಾವಣನ ಕೈಗಳಲ್ಲಿ ಇದ್ದ ಆಯುಧಗಳನ್ನು ಕಿತ್ತು ಕೊಂಡು, ಸಾರಥಿಯ ಬಳಿಗೆ ಬಿಸಾಟನು. ಆ ಬಳಿಕ ರಾವಣನನ್ನು ಕುರಿತು—ಕೈದುಗಳನ್ನು ಸೆಳೆದು ಬಿಸಾಟೆನೆಂದು, ಶಕ್ತಿ ಗುಂದ ಬೇಡ. ನಿನಗೆ ಮುಷ್ಟಿ ಯುದ್ಧವನ್ನು ಮಾ

ಡುವದಕ್ಕೆ ಸಾಮರ್ಥ್ಯ ಉಂಟೇ, ಇಲ್ಲವೇ? ತಳುವನ್ನು ಮಾಡದೆ, ಹೇಳು.
ನಮ್ಮಿಬ್ಬರ ಜಗಳವನ್ನು ಸುರರು ನೋಡಲಿ, ಎಂದು ಘರ್ಜಿಸಿದನು.

ರಾವಣನು—ಎಳೇ, ಕೊನೆಯನ್ನು ಚಿವುಟುವದಕ್ಕೆ ಉಕ್ಕಿನ ಕೊಡಲಿಯನ್ನು
ತೊಳಿಸುವರೋ? ಕೇಳೆಲಾ, ಕಪಿಯೇ, ನಿನ್ನೊಡನೆ ಕಾದುವದಕ್ಕೆ ಅಸ್ತ್ರಗಳ
ಪರ್ಯಂತರ ಬೇಕೇ? ಶಸ್ತ್ರ ಹೀನನಾದ ನಿನಗೆ ನನ್ನ ಕೈ ತಳದ ಪೆಟ್ಟೇ ಕೈದು,
ಎನಲು; ಹನುಮಂತನು ಗಹ ಗಹಿಸಿ, ನಕ್ಕು,—ಖಳರಲ್ಲಿ ನೀನು ಘಟ್ಟಿಗನೇ, ಹ
ವುದು. ನಿನ್ನ ಮಾತಿಗೆ ಮೆಚ್ಚಿದೆನು. ನಮ್ಮಿಬ್ಬರಿಗೂ ಯುದ್ಧದ ಖಾಡಾಖಾಡಿ
ಯು ಮತ್ತೊಂದರಿಂದ ಬೇಡ. ಒಂದೊಂದು ಗುದ್ದನ್ನು ಒಬ್ಬರೊಬ್ಬರು ಹೊ
ಡೆದು, ಮೂರು ಗುದ್ದಿನಲ್ಲಿ ಯಾರು ಸಾಯುವರೋ? ಯಾರು ಬದುಕುವ
ರೋ? ನೋಡುವ, ಎನ್ನಲು; ರಾವಣನು,—ಆದರೆಲವೋ, ಕಪಿಯೇ, ಮೊದಲು
ನೀನು ಗುದ್ದು. ಆ ಮೇಲೆ ನಾನು ಗುದ್ದುವೆನು, ಎನಲು; ಹನುಮಂತನು ಘರ್ಜಿ
ಸುತ್ತ, ಕಣ್ಗಿಡಿ ಕೆದರಿ, ಭೂಮಿಯು ಅದರುವ ಹಾಗೆ ಮುಷ್ಟಿಯನ್ನು ಎತ್ತಿ,—ಈ
ಘಾಯವನ್ನು ಆತುಕೋ. ನೀನು ರಣರಂಗದಲ್ಲಿ ನಿರ್ಭೀತನು, ವೀರನು ಎಂ
ದು, ಲೋಕಗಳೆಲ್ಲಾ ಹೊಗಳುವವು. ನಾವು ಕೋತಿಯ ಕುಲದವರು ಎಂದು,
ಒಂದು ಗುದ್ದು ಗುದ್ದಲು; ರಾವಣನು ಭೂಮಿಗೆ ಹಾರಿ ಬಿದ್ದು, ರಕ್ತವ ಕಾರಿ,
ಕಾರಿ, ಮೈಯಿಂದ ನೆಣಗಳು ಹೊರಟು, ಇಂದ್ರಿಯಗಳು ಕಳವಳಿಸಿ, ಕೈ ಕಾ
ಲುಗಳನ್ನು ಒದ್ದು ಕೊಂಡು, ಮೂರ್ಛಾಗತನಾಗಲು; ಆಗ ಸುರರು ಹನುಮ
ನ ಮೇಲೆ ಹೂಮಳೆಗಳನ್ನು ಕರೆದು, ದೇವ ದುಂದುಭಿಗಳನ್ನು ಹೊಡೆದು,—ಒಂ
ದು ಗುದ್ದಿಗೆ ಈ ರಾವಣನಿಗೆ ಈ ಅವಸ್ಥೆ ಆಯಿತು. ಇನ್ನು ಎರಡು ಗುದ್ದಿನ
ಲ್ಲಿ ಖಂಡಿತವಾಗಿ ಬದುಕುವದೂ ಇಲ್ಲ ಎಂದು, ಬ್ರಹ್ಮ ರುದ್ರೇಂದ್ರಾದಿಗಳು
ನಿಶ್ಚಯಿಸಿದರು.

ಆ ಬಳಿಕ ಅರೆ ಘಳಿಗೆಯಲ್ಲಿ, ರಾಮನ ಬಾಣದ ಪೆಟ್ಟಿನಿಂದ ಹೋಗ ತಕ್ಕ
ದ್ದಾದ ಕಾರಣ, ರಾವಣನ ಪ್ರಾಣವು ಚೇತರಿಸಿ ಕೊಂಡು, ಕಣ್ಣನ್ನು ಬಿಟ್ಟು,
ನೋಡಿ, ಎದ್ದು, ಹನುಮಂತನನ್ನು—ಈ ಮೂರು ಲೋಕದೊಳಗೂ ನಿನಗೆ
ಸಮಾನರಾದ ವೀರರು ಯಾರೂ ಇಲ್ಲ. ನಾನು ಹುಟ್ಟಿದಾರಭ್ಯ ಈ ವರಿಗೂ
ಒಂದು ವೇಳೆಯಲ್ಲ್ಯಾದರೂ ಇಂಥಾ ಪೆಟ್ಟನ್ನು ತಿಂದವನಲ್ಲ ಎಂದು ಹೊಗಳಲು;
ಹನುಮಂತನು—ನನ್ನನ್ನು ನೀನು ಹೊಗಳುವದು ಉಚಿತವಲ್ಲ. ನನ್ನಂಥ ಹೀನ
ಬಲನು ಜಗದೊಳಗೆ ಒಬ್ಬನೂ ಇಲ್ಲ. ನನ್ನ ಗುದ್ದಿನಂಥ ಕೀಳು ಪೆಟ್ಟು
ಯಾವದೂ ಇಲ್ಲ. ನನ್ನ ಪೆಟ್ಟಿನಿಂದ ನೀನು ತಿರಿಗಿ ಬದುಕಿದ ಮೇಲೆ, ನನ್ನ

ಪೆಟ್ಟನ್ನು ಹೊಗಳುವದು ಎಷ್ಟು ಮಾತ್ರವೂ ನ್ಯಾಯವಲ್ಲ. ಆದರೆ, ಇಗೋ, ನಾನು ಸಿದ್ಧವಾಗಿ ಇದ್ದೇನೆ. ಈಗ ನಿನ್ನ ಸರತಿಯು. ನಿನ್ನ ಶಕ್ತಿಯನ್ನು ನನ್ನ ಮೇಲೆ ತೋರಿಸು, ಎಂದು ಹೇಳಲು; ರಾವಣನು ತನ್ನ ಹತ್ತು ಮುಷ್ಟಿಗಳನ್ನು ಎತ್ತಿ—ಎಲಾ, ಹನುಮಾ, ನೀನು ಬಹಳ ಗರ್ವದಿಂದ ಕಟಕಿಯಾಗಿ ನಮ್ಮೊಡನೆ ಮಾತಾಡಿದೆ. ನಮ್ಮ ಮೂರು ಗುದ್ದಿನಲ್ಲಿ ನೀನು ಬದುಕಿದವನಾದರೆ, ನಾನು ಶಸ್ತ್ರ ಸನ್ಯಾಸವನ್ನು ಮಾಡುವೆನು ಎಂದು, ಹನುಮಂತನನ್ನು ಗುದ್ದಲು; ಗೋಣು ಕುಕ್ಕರಿಸಿತು. ಗೋಣಿನಲ್ಲಿ ರಕ್ತವು ಹೊರಟಿತು. ಆಗ ಹನುಮನು ಮೂರ್ಛೆ ಹೋದನು. ರಾವಣನು—ನನ್ನ ಈ ಪೆಟ್ಟಿನಲ್ಲಿ ಮೇರು ಪರ್ವತವು ಕೂಡ ಪುಡಿ ಪುಡಿಯಾಗಿ ಹೋಗ ಬೇಕು. ಅಂಥಾದ್ದರಲ್ಲಿ ಈ ಹನುಮನು ಬದುಕಿ, ಮೂರ್ಛೆ ಹೋದನಲ್ಲ! ಇವನು ಎಚ್ಚತ್ತು, ಮತ್ತೆ ಬಂದು, ನಮ್ಮನ್ನು ಗುದ್ದಿದವನಾದರೆ, ಆ ಗುದ್ದಿನಲ್ಲಿಯೇ ನಮ್ಮ ಆಯುಸ್ಸು ಮುಗಿಯುವದು ಎಂದು, ಸಾರಥಿಯನ್ನು ಕುರಿತು—ಇದೇ ವೇಳೆಯಲ್ಲಿ ಬೇಗ ರಥವನ್ನು ನಡಿಸಿ, ರಾಮನ ಎದುರಿಗೆ ಕೊಂಡು ಹೋಗಿ ಬಿಡು, ಎಂದು ಹೇಳಲು;—

ಸಾರಥಿಯು ಆ ಪ್ರಕಾರ ಮಾಡಲು; ತನ್ನ ಎದುರಿಗೆ ನಡಿಸಿ ಕೊಂಡು ಬರುವ ರಾವಣನ ರಥವನ್ನು ಕಂಡು, ಶ್ರೀರಾಮ ಚಂದ್ರನು ಸುಗ್ರೀವನನ್ನು ನೋಡಿ,—ಎಲೈ, ಕಪಿ ರಾಜನೇ, ಈ ರಾವಣನ ಯುದ್ಧಕ್ಕೆ ನಾನೇ ನಿಲ್ಲ ತಕ್ಕವನು. ವ್ಯರ್ಥವಾಗಿ ಕಪಿ ಸೇನೆಗಳನ್ನು ದಣಿಸ ಬೇಡ. ಎಲ್ಲರೂ ನಮ್ಮ ಯುದ್ಧವನ್ನು ನೋಡುತ್ತಿರ್ರಿ. ಈ ರಾವಣನು ಅಪ್ರತಿಮ ಪರಾಕ್ರಮನು. ಇವನು ನಿಮ್ಮೆಲ್ಲರನ್ನು ಸಡ್ಡೆಗೆ ತಾರನು, ಎಂದು ಹೇಳಿ, ಕಪಿ ಸೇನೆಗಳನ್ನು ರಾವಣನೊಡನೆ ಯುದ್ಧಕ್ಕೆ ಹೋಗದಂತೆ ನಿಲ್ಲಿಸಿ, ತನ್ನ ಉಟ್ಟ ನಾರು ಮಡಿಯನ್ನು ವೀರ ಘಳಿಯ ಬಿಗಿದುಟ್ಟು, ಸೊಂಟದಲ್ಲಿ ಕಠಾರಿಯನ್ನು ಸಿಕ್ಕಿಸಿ, ಅಕ್ಷಯ ಬಾಣದ ಬತ್ತಳಿಕೆಗಳನ್ನು ಬೆನ್ನಿಗೆ ಕಟ್ಟಿ, ಕೆದರಿರುವ ಜಡೆಗಳನ್ನು ಒಂದುಗೂಡಿಸಿ ಸುತ್ತಿ, ಬಿಗಿದು, ತನ್ನ ಕೈಯಲ್ಲಿರುವ ಬಿಲ್ಲಿನ ಠಂಕಾರವನ್ನು ತೋರಿಸಲು; ಆ ರಭಸವನ್ನು ಕೇಳಿ,—ಇದು ರಾವಣನ ಕಡೆಗಾಲದ ಯುದ್ಧವೆಂದು ತಿಳಿದು, ಆತನ ಭಯವನ್ನು ಬಿಟ್ಟು, ಅಷ್ಟ ದಿಕ್ಪಾಲಕರೂ, ಏಕಾದಶ ರುದ್ರರೂ, ದ್ವಾದಶಾದಿತ್ಯರೂ, ಸಪ್ತ ಮರುತ್ತುಗಳೂ, ಬ್ರಹ್ಮ ರುದ್ರರೂ, ಸನಕ ನಾರದಾದಿ ಋಷಿಗಳೂ, ಆಕಾಶದಲ್ಲಿ ಕೂಡಿ, ವಿಮಾನಗಳ ಮೇಲೆ ಕುಳಿತು ಕೊಂಡು, ನೋಡುತ್ತಿದ್ದರು. ಆಗ ರಾವಣನ ತೇರಿನ ಕುದುರೆಗಳು ರಾಮನ ಎದುರಿನಲ್ಲಿ ನಲಿದಾಡುತ್ತಿರುವದನ್ನೂ ರಾಮನು ಕೆಳಗೆ ನಿಂತಿರುವದನ್ನೂ ನೋಡಿ, ಸಹಿಸ

ಲಾರದೆ, ಲಕ್ಷ್ಮಣನು—ರಥವನ್ನು ಚೂರು ಮಾಡುವೆನೆಂದು, ಧನುಸ್ಸಿನಲ್ಲಿ ಬಿಲ್ಲನ್ನು ತೊಟ್ಟನು. ಆಗ ಮೂರ್ಛೆ ತಿಳಿದು, ಎದ್ದು, ಬಂದು ಇದ್ದ ಹನುಮಂತನು—ಈ ತೇರನ್ನು ನುಚ್ಚು ನುರಿಯಾಗಿ ಮಾಡುವೆನೆಂದು ಮುಷ್ಟಿಯನ್ನು ಎತ್ತಿದನು. ಶ್ರೀರಾಮಚಂದ್ರನು ಇವರ ಉದ್ಯೋಗವನ್ನು ನೋಡಿ,—ಸಾಕು! ಉಭ್ರಮಿಸ ಬೇಡಿ. ಕಂಡವರ ಐಶ್ವರ್ಯಕ್ಕೆ ಹೊಟ್ಟೇ ಗಿಚ್ಚು ಪಡುವದು ಒಳ್ಳೆಯವರಿಗೆ ಉಚಿತವಲ್ಲ. ಈ ಹೆಚ್ಚು ಕಡಿಮೆಯಿಂದ ಪ್ರಯೋಜನವೇನು? ಯುದ್ಧದ ಕೈ ಕೆಲಸದಲ್ಲಿ ಹೆಚ್ಚು ಕುಂದನ್ನು ನೋಡಿ, ಎಂದು ಸಮಾಧಾನ ಪಡಿಸಿ, ಅವರನ್ನು ನಿಲ್ಲಿಸಿದನು.

ಆ ವೇಳೆಯಲ್ಲಿ ಮೇಲೆ ಸುರರ ಸಮೂಹವು ನೊಸಲಿನಲ್ಲಿ ಅಂಜಲಿಗಳನ್ನಿಟ್ಟು ಕೊಂಡು, ಮೆಲ್ಲಗೆ ಮಧುರವಾದ ಮಾತಿನಿಂದ ದೇವೇಂದ್ರನನ್ನು ಕುರಿತು—ಎಲೈ, ಸುರ ನಾಯಕನೇ, ನೋಡು. ರಘು ರಾಮನು ರಣ ರಂಗದಲ್ಲಿ ಕಾಲಿನಲ್ಲಿ ನಿಂತು ಇದ್ದಾನೆ; ರಾವಣನು ರಥಾರೂಢನಾಗಿ ಮೆರೆಯುತ್ತಾನೆ. ಇದು ನಿನಗೆ ಉಚಿತವೇ? ಎಂದು ಬಿನ್ನೈಸಲು; ಇಂದ್ರನು ಆ ಮಾತಿಗೆ ಒಪ್ಪಿ, ಬ್ರಹ್ಮ ರುದ್ರರಿಗೆ ತಿಳಿಸಿ, ಅವರ ಸಮ್ಮತಿಯಿಂದ ತನ್ನ ಸಾರಥಿಯಾದ ಮಾತಲಿಯನ್ನು ಕರೆದು, ನನ್ನ ರಥವನ್ನು ಸನ್ನದ್ಧವಾಗಿ ಮಾಡಿ ಕೊಂಡು, ನೃಪ ಚೂಡಾ ಮಣಿಯಾದ ರಾಮನಿಗೆ ಸಾರಥಿಯಾಗು; ಹೋಗು, ಎಂದು ಅಪ್ಪಣೇ ಕೊಟ್ಟನು. ಆಗ ಮಾತಲಿಯು ರಥಕ್ಕೆ ಕುದುರೆಗಳನ್ನು ಬಿಗಿದು, ಏರಿ ಕೊಂಡು, ರಥ ಸಹಿತವಾಗಿ ರಾಮನ ರಣ ರಂಗ ಭೂಮಿಗೆ ಬಂದು, ರಾಮಚಂದ್ರನಿಗೆ ನಮಸ್ಕರಿಸಿ—ಎಲೈ, ರಾಜೇಂದ್ರನೇ, ಇದು ಇಂದ್ರನ ರಥವು. ನಿನ್ನ ಅಡಿದಾವರೆಗಳಿಂದ ಇದನ್ನು ಅಲಂಕರಿಸುವದಕ್ಕೆ ಆತನು ಕಳುಹಿಸಿರುವನು. ಈ ರಥಕ್ಕೆ ಬಿಜಯ ಮಾಡ ಬೇಕೆಂದು, ಬಿನ್ನವಿಸಿದನು. ಆಗ ಶ್ರೀರಾಮನು ಮಾತಲಿಯನ್ನು ಕುರಿತು—ಇಂದಿನ ವರಿಗೂ ತೇರಿನ ಬಲದಿಂದ ಹಗೆಗಳನ್ನು ನಾವು ಕೊಲ್ಲಲಿಲ್ಲ. ಈಗ ಇಂದ್ರನ ಹಂಗು ನಮಗೆ ಯಾಕೆ ಬೇಕು? ಆತನು ಮಾಡಿದ ಉಪಚಾರವು ನಮಗೆ ಸಂತೋಷವಾಯಿತು. ನಾವು ಕಾಲ ನಡಿಗೆಯಲ್ಲಿಯೇ ಇಂದ್ರನನ್ನು ಮೆಚ್ಚಿಸುವ ಹಾಗೆ ಈ ಇಂದ್ರಾರಿಯೊಡನೆ ಕಾದುವೆವು. ನೀನು ತಿರುಗು. ಅಲ್ಲದಿದ್ದರೆ, ನಮ್ಮ ಪಾರ್ಶ್ವದಲ್ಲಿ ಇದ್ದು ಕೊಂಡು, ನಮ್ಮ ಜಗಳವನ್ನು ನೋಡಿ, ಇಂದ್ರಾದಿಗಳಿಗೆ ತಿಳಿಸು ಎಂದು ಹೇಳುವಷ್ಟರಲ್ಲಿಯೇ, ನಾರದನು ಬಂದು—ಎಲೈ, ನೃಪೋತ್ತಮನೇ, ಚಿತ್ತೈಸು. ಇಂದ್ರಾದ್ಯಷ್ಟದಿಕ್ಪಾಲಕರೂ ಬ್ರಹ್ಮ ರುದ್ರರೂ ನಿನ್ನ ಬಳಿಗೆ ನನ್ನನ್ನು ಕಳುಹಿಸಿದರು.—ಈಗ ನಾವು

ಕಳುಹಿಸಿದ ರಥದ ಮೇಲೆ ನೀನು ಕುಳಿತು ಕೊಂಡು, ಯುದ್ಧವನ್ನು ಮಾಡುವದನ್ನು ನೋಡ ಬೇಕೆಂಬ ಕುತೂಹಲವು ಬಹಳವಾಗಿ ಇದೆ. ನಮ್ಮ ಈ ಮನುವೆಯನ್ನು ದಯವಿಟ್ಟು ಈಡೇರಿಸ ಬೇಕೆಂದು, ಪ್ರಾರ್ಥಿಸುತ್ತಾರೆ. ಅವರ ಪ್ರಾರ್ಥನೆಯನ್ನು ನೀನು ನೆರವೇರಿಸ ಬೇಕೆಂದು, ಬಹು ಪ್ರಕಾರ ಹೇಳಲು; ರಾಮನು ಆ ಮಾತಿಗೆ ಒಡಂಬಟ್ಟು, ಇಂದ್ರನ ರಥವನ್ನು ಏರಿದನು.

ಆಗ ಹನುಮಂತನು ಬೊಬ್ಬಿರಿಯುತ್ತ, ಆ ಇಂದ್ರ ರಥದ ಕೇತು ದಂಡದ ತುದಿಯಲ್ಲಿ ಕುಳಿತು ಕೊಂಡನು. ರಾಮನ ಅಡಿ ದಾವರೆಗಳಿಗೆ ನಮಸ್ಕರಿಸಿ, ಇಂದ್ರನ ಸಾರಥಿಯಾದ ಮಾತಲಿಯು ರಥಕ್ಕೆ ಹತ್ತಿ, ಕಡಿವಾಣಗಳನ್ನು ಹಿಡಿದು, ಕುದುರೆಗಳ ಕುತ್ತಿಗೆಯನ್ನು ತಟ್ಟಿ, ಮೈಗಳನ್ನು ಸವರಿ, ಎದುರಿರುವ ಹಗೆಯ ಸಾರಥಿಯನ್ನು ಮೂದಲಿಸಿ, ಕುದುರೆಗಳನ್ನು ಮುಂದಕ್ಕೆ ನಡಿಸಿದನು. ಆಗ ದೇವತೆಗಳು ಹೂವಿನ ಮಳೆಗಳನ್ನು ರಾಮನ ಮೇಲೆ ಸುರಿದು, ದೇವ ದುಂದುಭಿಯನ್ನು ಬಡಿದರು. ಆ ಕಾಲದಲ್ಲಿ ರಾಮ ರಾವಣರ ರಥಗಳೆರಡು ಸಮರದಲ್ಲಿ ಕೂಡಿ, ಯುದ್ಧವು ನಡೆಯಿತು. ರಥಿಕರಿಬ್ಬರ ಬೊಬ್ಬೆಯೂ, ಸಾರಥಿಗಳಿಬ್ಬರ ಚಪ್ಪರಣೆಯೂ, ಉದ್ದಂಡವಾದ ಇಬ್ಬರ ಬಿಲ್ಲುಗಳ ಅಬ್ಬರಣೆಯೂ, ಎರಡು ರಥಗಳ ಭಂಡಿಗಳ ಚೀತ್ಕಾರವೂ, ಶೂರರಿಬ್ಬರು ಬಿಡುವ ಬಾಣಗಳ ಛೀಂಕೃತಿಯೂ, ಕಡೆಯುವ ಕಡಲಿನ ಶಬ್ದಕ್ಕಿಂತ ಮಿಗಿಲಾಗಿ, ಮೂರು ಜಗವನ್ನು ತುಂಬಿತು. ಕಲಹಗಳು ಬಲವಾಗಲು; ಕದನಕ್ಕೆ ನಿಲುಕಿ, ನಿಂದು, ರಾವಣನು ರಾಮನನ್ನು ಕುರಿತು—ಎಲೈ, ರಾಮನೇ, ಕೇಳು. ಇನ್ನೇಕೆ ಸೀತೆಯ ಅಪೇಕ್ಷೆಯು? ನೀನು ಶುದ್ಧ ಹುಚ್ಚನಲಾ! ಇಂದ್ರನು ಕಳುಹಿಸಿದ ರಥದ ಬಲುಹು ಉಂಟು, ಎಂದು ಬೆರತಿರುವೆಯೋ? ಬ್ರಹ್ಮ ರುದ್ರಾದಿ ಸುರರ ಕೋಟಿಗಳು ಸಂಗ್ರಾಮಕ್ಕೆ ಎದುರಾದರೂ, ಕಡ್ಡಿಗೆ ಬಗೆಯುವವನಲ್ಲ, ಅಂದನು. ರಾಮನು—ಎಲಾ, ರಾವಣನೇ, ಕೇಳು. ಶಂಕರನೇ ಮೊದಲಾದ ದಿವಿಜರ ಸಹಾಯವನ್ನು ಬಯಸುವ ಭಟನೇ ನಾನು. ನನ್ನನ್ನು ಯಾರೆಂದು ತಿಳಿದಿರುವಿ. ಹಲವು ತಲೆಗಳನ್ನು ಹೊತ್ತಿರುವ ನಿನ್ನ ಕೊರಳನಲ್ಲಿ ಅಲಗನ್ನು ಚಾಚಿ ಮೂಗುಗಳಿಂದ ಹೊರಡಿಸಿ, ಸೀತೆಯನ್ನು ಪಡೆಯುವೆನು, ನೋಡು! ಎಂದು, ರಾವಣನ ಮೇಲೆ ಬಾಣ ಪ್ರಯೋಗಗಳನ್ನು ಮಾಡಿದನು.

ರಾವಣನು ಆ ಬಾಣಗಳನ್ನೆಲ್ಲಾ ಕತ್ತರಿಸಿ, ಬತ್ತಳಿಕೆಯಿಂದ ಹೊಸ ಸಾಣೆಯ ಬಾಣಗಳನ್ನು ತೆಗೆದು, ರಾಮನ ಮೇಲೆ ಹಾಕಿದನು. ಶ್ರೀರಾಮನು ಪ್ರತಿ ಬಾಣಗಳನ್ನು ಹಾಕಿ, ಆ ಬಾಣಗಳನ್ನು ನಡುವೆಯೇ ಕತ್ತರಿಸಿ,—ಎಲೈ, ರಾವ

ಣನೇ, ಲೋಕದಲ್ಲಿ ಪರರ ಒಡವೆಗೆ ಅಪೇಕ್ಷಿಸದೆ, ಪರ ಸ್ತ್ರೀಯರುಗಳನ್ನು
ಕಾಮಿಸದೆ, ಪರರಿಗೆ ಹಿತವನ್ನೇ ಮಾಡುವಂಥಾವನಿಗೆ ಒಂದು ವೇಳೆ ದೈವ
ಯೋಗದಿಂದ ವ್ಯಾಧಿ ವಿಡ್ದೂರಗಳು ಬಂದಾಗ್ಯೂ, ಪರಿಹರವಾಗುವವು; ಯು
ದ್ಧದಲ್ಲಿ ಜಯವು ಕೈ ಶೇರುವದು. ನಿನ್ನಂಥಾ ಪರಮ ದ್ರೋಹಿಯಾದ, ಪರ
ರಿಗೆ ದುಖ್ಖವನ್ನು ಮಾಡುವ, ದುರ್ಮಾರ್ಗನಿಗೆ ಎಂದಿಗೂ ಜಯವಾಗಲಾರದು.
ಆದರೆ ನೀನು ನಿನಗೆ ಹಿತೇಷಿಗಳಾದವರ ಹಿತೋಕ್ತಿಗಳನ್ನು ಕೇಳದೆ, ವ್ಯರ್ಥ
ವಾಗಿ ನಿನ್ನ ಪುತ್ರ ಮಿತ್ರರೇ ಮೊದಲಾದವರನ್ನು ಕಳೆದು ಕೊಂಡು, ಏಕಾಂಗಿ
ಯಾಗಿ ನಿಂತೆ. ಈಗಲಾದರೂ ನಿನ್ನ ತಮ್ಮನಾದ ವಿಭೀಷಣನಂತೆ ನಮಗೆ
ಶರಣಾಗತನಾಗಿ, ಸೀತೆಯನ್ನು ತಂದು, ಒಪ್ಪಿಸಿ, ವಿಭೀಷಣನೊಡನೆ ಕೂಡ
ಲಂಕಾ ರಾಜ್ಯವನ್ನು ಆಳಿ ಕೊಂಡು, ಸುಖವಾಗಿ ಬಾಳು. ನಮ್ಮ ಈ ಹಿತವಾ
ದ ಮಾತನ್ನು ನೀನು ಕೇಳದೆ ಇದ್ದರೆ, ನಿನ್ನ ತಲೆಗಳನ್ನು ಕಡಿದು, ನಿನ್ನ ಮೈಯ
ನ್ನು ಹದ್ದು, ನಾಯಿ, ನರಿ, ಮೊದಲಾದವುಗಳ ಪಾಲು ಮಾಡುವೆನು ಎಂದು ತೀ
ಕ್ಷ್ಣವಾದ ಬಾಣವನ್ನು ಪ್ರಯೋಗಿಸಿ, ರಾವಣನ ಹತ್ತು ತಲೆಗಳನ್ನು ಕತ್ತರಿಸಿ,
ಆಕಾಶಕ್ಕೆ ಹಾರಿಸಿದನು. ಮತ್ತೆ ರಾವಣನ ಮಂಡೆಗಳು ಹುಟ್ಟಿ, ಬೊಬ್ಬಿರಿ
ದವು. ಕೈಗಳು ಬ್ರಂಹ್ಮಾಂಡ ಮಂಡಲವನ್ನು ತುಂಬುವ ಹಾಗೆ ಅಸ್ತ್ರಗಳನ್ನು
ಎಬ್ಬಿಸಿದವು. ಆ ಕೈದುಗಳು ಭೂಮಿಯಲ್ಲಿ ರಾಮನನ್ನು ಘಾತಿಸಿದ್ದಲ್ಲದೆ, ಆ
ಕಾಶದಲ್ಲಿ ಇಂದ್ರಾದಿ ದೇವತೆಗಳ ಒಡಲಲ್ಲಿ ರಕ್ತದ ತೊರೆಯನ್ನು ಕಾಣಿಸಿದವು.

ಆಗ ಮಾತಲಿಯು ಅವನ ಬಾಣಗಳಿಂದ ನೊಂದು, ರಾಮನನ್ನು ಕುರಿತು—
ಖಳನ ಎಸುಗೆಯ ಪೆಟ್ಟನ್ನು ತಾಳ ಕೂಡದು; ರಣದಲ್ಲಿ ಅಲಸಿಕೆಯು ರಘು
ಕುಲದ ವೀರರಿಗೆ ಸಲ್ಲದು. ಬಾಣವನ್ನು ಬಿಡು. ಖಳನ ಮಸ್ತಕವನ್ನು ಕಡಿ.
ಖೂಳನ ಕೊರಳುಗಳ ಸರಿಸದಲ್ಲಿ ಅಲಗುಗಳು ಆಡುತ್ತಿರಲಿ. ಕೈ ಗುಂದ ಬೇ
ಡವೆಂದು, ತೇರಿನ ತೇಜಿಗಳನ್ನು ಮುಂದಕ್ಕೆ ನೂಕಿದನು. ಮಾತಲಿಯ ಮಾತು
ಗಳು ಕಿವಿಗಳಿಗೆ ಬೀಳುವದಕ್ಕೆ ಮುಂಚಿತವಾಗಿಯೇ ರಾಮನ ಬಾಣಗಳು ರಾ
ವಣನ ತಲೆಗಳನ್ನು, ರಣ ಲಕ್ಷ್ಮಿಯು ಆಡುವ ಚಂಡುಗಳೋ? ಎಂಬಂತೆ, ಕಡಿ
ದು, ಆಕಾಶ ಮಾರ್ಗದಲ್ಲಿ ಹಾರಿಸುತ್ತಿದವು. ಹೀಗೆ ನೂರಾರು ಸಾರಿ ತಲೆಗ
ಳನ್ನು ಕಡಿಯುತ್ತಾ ಇದ್ದಾಗ್ಯೂ, ಮತ್ತೆ ಮತ್ತೆ ಹುಟ್ಟುತ್ತಿದ್ದವು. ಶ್ರೀರಾಮನು
ಅದನ್ನು ನೋಡಿ, ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ, ವರವನ್ನು ಪಡೆದ ರಾವ
ಣನ ಮಹಿಮೆಗೆ ಆಶ್ಚರ್ಯ ಪಟ್ಟು,—ಇನ್ನು ಯುದ್ಧವು ಸಾಕು. ಲಂಕಾ ರಮಣ
ನ ಆಯುಷ್ಯಕ್ಕೆ ಅವಸಾನವಿಲ್ಲ. ಇವನೊಡನೆ ಯುದ್ಧಕ್ಕೆ ಅವಸಾನವನ್ನು

ನಾನು ಮಾಡ ಬೇಕೆಂದು, ಧನುಸ್ಸನ್ನು ರಥದಲ್ಲಿ ಇರಿಸಿ, ಧ್ವಜ ಸ್ತಂಭಕ್ಕೆ ಬೆನ್ನನ್ನು ಆಂತು, ಬಳಲಿ,—ಘೋತುರೆ, ರಾವಣಾ! ಎನುತ್ತ, ಬೆರಗಾಗಿದ್ದನು.

ಅಷ್ಟರೊಳಗೆ ಅಗಸ್ತ್ಯ ಮಹಾ ಮುನಿಯು ರಾಮನ ಸನ್ನಿಧಿಗೆ ಬಂದು, ಆದಿತ್ಯ ಹೃದಯವೆಂಬ ಮಂತ್ರವನ್ನು ಉಪದೇಶಿಸಿ—ಮೂರು ಮೂರ್ತಿಗಳನ್ನು ನೀನು ಬಿಡುವ ಬಾಣದಲ್ಲಿ ನೆಲೆಗೊಳಿಸಿ, ಈ ಖೂಳನ ವಕ್ಷ ಸ್ಥಳಕ್ಕೆ ಪ್ರಯೋಗಿಸು, ಎಂದು ಹೇಳಿ, ರಾಮುನನ್ನು ಧೈರ್ಯ ಗೊಳಿಸಿ, ಹೊರಟು ಹೋದನು. ಆಗ ಶ್ರೀರಾಮನು ಬಿಲ್ಲಿಗೆ ದಿವ್ಯ ಮಾರ್ಗಣವನ್ನು ತೊಡಿಸಿ, ಹರಿ ಹರ ಬ್ರಹ್ಮಾದಿಗಳನ್ನು ಮಂತ್ರದಿಂದ ಅದರೊಳಗೆ ಸ್ಥಾಪಿಸಿ, ರಾವಣನ ಎದೆಗೆ ಗುರಿ ನೋಡಿ, ಇಟ್ಟನು. ರಾವಣನು ಕಂಗೆಡದೆ, ತನ್ನ ಮೇಲೆ ಬರುವ ಆ ದಿವ್ಯಾಸ್ತ್ರವನ್ನು ಅನೇಕ ಮಂತ್ರಾಸ್ತ್ರಗಳಿಂದ ಎಚ್ಚನು. ಸೂರ್ಯ ಚಂದ್ರರನ್ನು ಹಿಡಿದು ನುಂಗುವ ರಾಹುವನ್ನು ನಕ್ಷತ್ರಗಳು ತಡೆಯುವವೇ? ರಾವಣನು ಬಿಟ್ಟ ಮಹಾಸ್ತ್ರಗಳನ್ನೆಲ್ಲಾ ಕಡಿದೊಟ್ಟುತ್ತ, ಅವನ ವಕ್ಷ ಸ್ಥಳವನ್ನು ಹೊಕ್ಕು, ಬೆನ್ನಿನಲ್ಲಿ ಹಾಯಲು; ರಾವಣನು ಭೂಮಿಯಲ್ಲಿ ಬಿದ್ದು, ಪ್ರಾಣವನ್ನು ಬಿಟ್ಟನು. ಆಗ ವಿಭೀಷಣನು ಸೋದರ ವ್ಯಾಮೋಹದಿಂದ ಕಣ್ಣುಗಳಲ್ಲಿ ನೀರನ್ನು ಸುರಿಸಿದನು. ಲೋಕದಲ್ಲಿ ಎಂಥಾ ದುರ್ಮಾರ್ಗಿಯಾಗಿದ್ದರೂ, ಹಗೆಯಾಗಿದ್ದರೂ, ರಕ್ತ ಸಮ್ಬಂಧವು ಬಿಡುವದಿಲ್ಲ. ಈ ರಾವಣನು ಸತ್ತ ಸುದ್ದಿಯನ್ನು ಕೇಳಿ, ಆತನ ಪಟ್ಟದ ರಾಣಿಯಾದ ಮಂಡೋದರಿಯು ಅನೇಕ ಅಂತಃಪುರ ಸ್ತ್ರೀಯರೊಡನೆ ಕೂಡಿ, ರಣ ರಂಗಕ್ಕೆ ಬಂದು, ರಾವಣನ ಹೆಣವನ್ನು ಅಪ್ಪಿ ಕೊಂಡು, ಕಲ್ಮರಗಳು ಕರಗುವಂತೆ ಮೊರೆ ಇಡುತ್ತಾ ಇದ್ದಳು.

ಆಗ ಶ್ರೀರಾಮನು ವಿಭೀಷಣನನ್ನು ನೋಡಿ—ಎಲೈ, ರಾಕ್ಷಸ ರಾಜೇಂದ್ರನೇ, ವಿಧಿ ಬರಹವನ್ನು ತಪ್ಪಿಸುವದಕ್ಕೆ ಯಾರಿಂದಲೂ ತೀರದು. ಜಗದೇಕ ವೀರನಾದ ರಾವಣನ ರಾಣಿಯಾದ ಮಂಡೋದರಿಯನ್ನು ಸಮಾಧಾನ ಪಡಿಸಿ ಆತನಿಗೆ ಉತ್ತರ ಕ್ರಿಯಾದಿಗಳನ್ನು ಮಾಡು, ಎಂದು ಅಪ್ಪಣೇ ಕೊಡಲು; ವಿಭೀಷಣನು ಶ್ರೀರಾಮನನ್ನು ಕುರಿತು—ಜೀಯಾ, ಜಗತ್ಪೂಜ್ಯನೇ, ನನ್ನ ಬಿನ್ನಹವನ್ನು ಲಾಲಿಸ ಬೇಕು. ಈ ರಾವಣನು ಬ್ರಹ್ಮ ಕುಲದಲ್ಲಿ ಹುಟ್ಟಿ, ಸುಮಾರ್ಗದಲ್ಲಿ ನಡಿ ಎಂದು ಬುದ್ಧಿ ಹೇಳಿ ಕಳುಹಿಸಿದ್ದಕ್ಕೆ ಅಣ್ಣನಾದ ಕುಬೇರನೊಡನೆ ಜಗಳವಾಡಿ, ಆತನ ಪುಷ್ಪಕ ವಿಮಾನವನ್ನು ಕಿತ್ತು ಕೊಂಡು, ಭ್ರಾತೃ ದ್ರೋಹವನ್ನು ಸಂಪಾದಿಸಿ ಕೊಂಡನು. ಮತ್ತು, ಇಂದ್ರಾದಿ ದೇವತೆಗಳಿಗೆ ನಾನಾ ವಿಧವಾದ ದ್ರೋಹಗಳನ್ನು ಮಾಡಿ, ದೈವ ದ್ರೋಹಿಯಾದನು. ಇನ್ನೂ ಭೂಮಿ

ಯಲ್ಲಿ ತಪಸ್ಸನ್ನು ಮಾಡಿ ಕೊಂಡಿರುವ ಮುನಿಗಳ ಯಜ್ಞಾದಿ ಕರ್ಮಗಳನ್ನು ಕೆಡಿಸಿ, ಬ್ರಹ್ಮ ದ್ರೋಹಕ್ಕೆ ಗುರಿಯಾದನು. ಜಗದೇಕ ರಾಜನಾದ ನಿನ್ನ ಅಡಿ ದಾವರೆಗಳಿಗೆ ಅಪರಾಧವನ್ನು ಮಾಡಿ, ರಾಜ ದ್ರೋಹಿ ಎನಿಸಿ ಕೊಂಡನು. ಮತ್ತು—ಇಂಥ ದುರ್ಬುದ್ಧಿಗಳನ್ನು ಮಾಡ ಬೇಡವೆಂದು, ನಾನು ಹಿತವನ್ನು ಹೇಳಿದ್ದಕ್ಕೆ ನನ್ನನ್ನು ಹೇಳ ಬಾರದ ನಿಷ್ಠೂರಗಳನ್ನು ಹೇಳಿ, ಚಾವಡಿಯಿಂದ ದೊಬ್ಬಿಸಿ ಬಿಟ್ಟನು. ಇಂಥ ಪತಿತನು ನನಗೆ ಅಣ್ಣನೂ ಅಲ್ಲ; ನಾನು ಆತನಿಗೆ ತಮ್ಮನೂ ಅಲ್ಲ. ಲೋಕದಲ್ಲಿ ಜನರು ತಮ್ಮ ಶರೀರದಲ್ಲಿಯೇ ಹುಟ್ಟಿದ್ದಾಗ್ಯೂ ರೋಗಗಳನ್ನು ಕಾಡಿನಲ್ಲಿ ಹುಟ್ಟಿರುವ ಗಿಡ ಮೂಲಿಕೆಗಳಿಂದ ಹೋಗಲಾಡಿಸುವರು. ಹಾಗೆಯೇ ಇವನು ನನ್ನ ಒಡ ಹುಟ್ಟಿದವನಾದಾಗ್ಯೂ, ನನ್ನ ದೇಹದಲ್ಲಿ ಹುಟ್ಟಿದ ರೋಗದಂತೆ ತ್ಯಾಜ್ಯನು. ಆದ್ದರಿಂದ ನಾನು ಇವನಿಗೆ ಪ್ರೇತ ಕಾರ್ಯವನ್ನು ಮಾಡುವದಿಲ್ಲ, ಅಂದನು.

ಆ ಮಾತನ್ನು ಕೇಳಿ, ಶ್ರೀರಾಮನು ವಿಭೀಷಣನನ್ನು ಕುರಿತು—ಎಲೈ, ಧರ್ಮಾತ್ಮನೇ, ನೀನು ತಿಳಿಯದ ಧರ್ಮಗಳು ಒಂದೂ ಇಲ್ಲ. ಲೋಕದಲ್ಲಿ ಹಗೆತನಕ್ಕೆ ಮರಣನೇ ಕಡೆಯಾಗಿರುವದು, ಎಂದು ಧರ್ಮಜ್ಞರು ಹೇಳುವರು. ಅದು ಅಲ್ಲದೆ, ಈ ರಾವಣನು ಸಕಲ ವೇದ ಶಾಸ್ತ್ರಗಳನ್ನು ಓದಿದವನು; ಸಕಲ ರಾಜ ನೀತಿಗಳನ್ನು ತಿಳಿದವನು. ಶೂರರಾದವರಿಗೆ ದೇವಾಸುರ ನರೋರಗರನ್ನೆಲ್ಲಾ ಜೈಸಿ, ಕೀರ್ತಿಯನ್ನು ಹೊಂದುವದು ನ್ಯಾಯವಲ್ಲದೆ, ಅನ್ಯಾಯವಲ್ಲ. ಸುರ ರಾಕ್ಷಸರುಗಳಿಗೆ ಗಜ ಸಿಂಹಗಳಂತೆಯೂ, ಗರುಡೋರಗಗಳಂತೆಯೂ, ಗೋವ್ಯಾಘ್ರಗಳಂತೆಯೂ, ಇಲಿ ಬೆಕ್ಕುಗಳಂತೆಯೂ, ಹಗೆತನವು ಆಜನ್ಮ ಸಿದ್ಧವಾಗಿರುವದು. ಅದರಿಂದ ಈ ರಾಕ್ಷಸ ರಾಜನಾದ ರಾವಣನು ದೇವಾದಿಗಳನ್ನು ಜೈಸಿದನು. ಈ ದೇವಾದಿಗಳಿಗೆ ಮುನಿಗಳ ಯಜ್ಞಾಹುತಿಯೇ ಜೀವನವಾದ್ದರಿಂದ ಆ ಯಜ್ಞಗಳನ್ನು ಕೆಡಿಸಿದನು. ಈ ಲೋಕೈಕ ವೀರನಾದ ಇವನ ತಂಗಿ ಶೂರ್ಪನಖಿಯ ಕಿವಿ ಮೂಗುಗಳನ್ನು ನಾವು ಕೊಯ್ದು, ಮೊದಲು ಈತನಿಗೆ ಅಪಮಾನವನ್ನು ಮಾಡಿದ್ದರಿಂದ, ನಮಗೆ ಬದಲಾಗಿ ಈತನು ಅಪಮಾನವನ್ನು ಮಾಡಿದನು. ಈ ತಪ್ಪು ನಮ್ಮದೇ ಹೊರತು, ಈತನದಲ್ಲ. ಆದ್ದರಿಂದ ಸ್ವತಹ ಬುದ್ಧಿವಂತನಾದವನಿಗೆ ನಾನು ವಿಶೇಷವಾಗಿ ಹೇಳ ತಕ್ಕದ್ದೇನು? ಎಂದು ಹೇಳಿದನು.

ವಿಭೀಷಣನು ರಾಮ ಚಂದ್ರನ ಅಪ್ಪಣೆಯನ್ನು ತಲೆಯಲ್ಲಿ ಆಂತು, ರಾವಣನು ಸತ್ತು ಬಿದ್ದಿರುವ ಬಳಿಗೆ ಹೋಗಿ, ಆತನ ಮೇಲೆ ಬಿದ್ದು, ಹೊರಳಿ,—ಎಲೈ,

ಅಣ್ಣನೇ, ಮೊದಲೇ ಹೀಗಾಗುವದೆಂದು ನಾನು ತಿಳಿದು, ನಿನಗೆ ಹೇಳಿದಂಥ ಹಿತೋಕ್ತಿಗಳು ವಿಷವಾಗಿ, ಸಾಯುವವನಿಗೆ ವೈದ್ಯರು ಕೊಟ್ಟ ಮದ್ದುಗಳು ಸೊಗಸದ ಹಾಗೆ ಸೊಗಸದೆ ಹೋಯಿತು. ಈಗ ನಿನ್ನನ್ನು ಹ್ಯಾಗೆ ನೋಡಲಿ? ದೈವಯತ್ನವನ್ನು ಯಾರು ತಾನೇ ಮೀರುವರು? ಎಂದು, ಬಹು ಪ್ರಕಾರವಾಗಿ ಮೊರೆ ಇಟ್ಟು, ಮಂಡೋದರಿ ಮೊದಲಾದ ಮಾನಿನೀ ಜನರನ್ನು ಸಮುದಾಯಿಸಿ, ರಾವಣನ ಹೆಣವನ್ನು ಪಾಲಕಿಯಲ್ಲಿಟ್ಟು ಕೊಂಡು, ಅನೇಕ ವಾದ್ಯಗಳೊಡನೆ ಕೂಡಿ, ಕಾಡುಪುರಕ್ಕೆ ತೆಗೆದು ಕೊಂಡು ಹೋಗಿ, ಅಲ್ಲಿ ಅಗ್ನಿ ಸಂಸ್ಕಾರವನ್ನು ಮಾಡಿ, ತಿಲ ತರ್ಪಣವನ್ನು ಕೊಟ್ಟು, ಮತ್ತು ಯುದ್ಧ ರಂಗದಲ್ಲಿ ಸತ್ತ ಭ್ರಾತೃ, ಪುತ್ರ, ಮಿತ್ರ, ಜ್ಞಾತಿ, ಬಾಂಧವರಿಗೆಲ್ಲಾ ತಿಲೋದಕವನ್ನು ಇತ್ತು, ಮಂಡೋದರಿ ಮೊದಲಾದ ಮಡದಿಗಳನ್ನು ಲಂಕಾ ಪಟ್ಟಣಕ್ಕೆ ಕಳುಹಿಸಿ, ತಾನು ಸ್ನಾನವನ್ನು ಮಾಡಿ, ಶುಚಿರ್ಭೂತನಾಗಿ, ಪಾಳಯದಲ್ಲಿ ಸುಗ್ರೀವಾದಿ ಕಪಿ ಸೇನಾ ಸಮೇತನಾಗಿ ಕುಳಿತಿರುವ ಶ್ರೀರಾಮನ ಸನ್ನಿಧಿಗೆ ಬಂದು, ನಮಸ್ಕರಿಸಿ, ನಿಂತು ಕೊಂಡು ಇದ್ದನು. ಆಗ ಶ್ರೀರಾಮನು ಸುಗ್ರೀವನನ್ನು ನೋಡಿ—ಎಲೈ, ಕಪಿ ರಾಜನೇ, ನೀನು ಲಕ್ಷ್ಮಣನನ್ನು ಕೂಡಿ ಕೊಂಡು, ಕಪಿ ಬಲ ಸಹಿತವಾಗಿ ವಿಭೀಷಣನನ್ನು ಲಂಕೆಗೆ ಕರೆದು ಕೊಂಡು ಹೋಗಿ, ರಾವಣನ ಸಭೆಯಲ್ಲಿ ಇರುವ ದಿವ್ಯ ಸಿಂಹಾಸನದ ಮೇಲೆ ಕುಳ್ಳಿರಿಸಿ, ಲಂಕಾ ರಾಜ್ಯಕ್ಕೆ ಪಟ್ಟಾಭಿಷೇಕವನ್ನು ಮಾಡಿ, ಈ ರಾಕ್ಷಸ ರಾಜನಾದ ವಿಭೀಷಣನು ಅಪ್ಪಣೆಯನ್ನು ಕೊಟ್ಟರೆ, ಮಂಗಳ ಸ್ನಾನಾದಿಗಳನ್ನು ಮಾಡಿಸಿ, ಸೀತೆಯನ್ನು ಕರೆದು ಕೊಂಡು ಬಾ, ಎಂದು ಹೇಳಿದನು. ಆ ಮಾತನ್ನು ಕೇಳಿ, ಸುಗ್ರೀವನು ರಾಮನ ಅಪ್ಪಣೆಯ ಮೇರೆಗೆ ವಿಭೀಷಣನಿಗೆ ಪಟ್ಟಾಭಿಷೇಕವನ್ನು ಮಾಡಿಸಿದನು. ಅನಂತರ ವಿಭೀಷಣನು ಅತಿ ಉತ್ತಮವಾದ ಭೋಜನಗಳಿಂದಲೂ, ಗಂಧ ಮಾಲ್ಯ ತಾಂಬೂಲಗಳಿಂದಲೂ, ದಿವ್ಯವಾದ ವಸ್ತ್ರಾಭರಣಾದಿಗಳಿಂದಲೂ, ಪೂಜಿಸಿ, ತನ್ನ ಪಟ್ಟದ ರಾಣಿಯಿಂದ ಸೀತೆಗೆ ಮಂಗಳ ಸ್ನಾನವನ್ನು ಮಾಡಿಸಿ, ವಸ್ತ್ರಾಭರಣಗಳಿಂದ ಅಲಂಕರಿಸಿ, ನವರತ್ನ ಖಚಿತವಾದ ಪಾಲಕಿಯಲ್ಲಿ ಕೂರಿಸಿ ಕೊಂಡು, ಆ ಪಾಲಕಿಯ ಮುಂದೆ ತಾನು ಬೆತ್ತದ ಕೋಲನ್ನು ಹಿಡಿದು ಕೊಂಡು, ದಾರಿಯನ್ನು ಬಿಡಿಸುತ್ತ, ಕರೆದು ಕೊಂಡು ಬಂದು, ರಾಮನ ಸನ್ನಿಧಿಯಲ್ಲಿ ನಿಲ್ಲಿಸಿ, ತಾನು ನಮಸ್ಕಾರವನ್ನು ಮಾಡಿ, ಕೈ ಕಟ್ಟಿ ಕೊಂಡು, ನಿಂತಿದ್ದನು.

ಆಗ ಶ್ರೀರಾಮನು, ನಾಚಿಕೆಯಿಂದ ತಲೆಯನ್ನು ಬೊಗ್ಗಿಸಿ ಕೊಂಡು, ಭೂಮಿಯನ್ನು ಕಣ್ಣೀರುಗಳಿಂದ ನೆನಸುತ್ತ ನಿಂತಿರುವ ಸೀತೆಯನ್ನು ನೋಡಿ—

ಎಲೈ, ಜಾನಕಿಯೇ,—ರಾಕ್ಷಸನು ಹೆಂಡತಿಯನ್ನು ಅಪಹರಿಸಿ ಕೊಂಡು ಹೋ ದರೆ, ಕೈಯಲ್ಲಿ ಹರಿಯದೆ, ಬಿಟ್ಟು ಬಿಟ್ಟನು ಎಂದು, ಲೋಕದ ಜನರು ನನ್ನನ್ನು ಹೀಯಾಳಿಸುವರು ಎಂಬುವದಕ್ಕಾಗಿ, ನಿನ್ನನ್ನು ಕೊಂಡು ಬಂದ ರಾವಣನನ್ನು ಕೊಂದು, ನಿನ್ನನ್ನು ಶೆರೆ ಮನೆಯಿಂದ ಬಿಡಿಸಿದೆನೇ ಹೊರತು, ನಿನ್ನೊಡನೆ ಸು ಖವಾಗಿ ಬಾಳುವದಕ್ಕಲ್ಲ. ಒಂದು ವರುಷದಿಂದ ದುಷ್ಟರಾದ ರಾಕ್ಷಸರ ಶೆರೆ ಮನೆಯಲ್ಲಿದ್ದ ನಿನ್ನೊಡನೆ ನಾನು ತಿರಿಗಿ ಜೊತೆಯಾಗಿದ್ದರೆ, ಲೋಕದ ಜನರು ಒಪ್ಪರು. ನೀನು ಭೂಮಿಯ ಮಗಳು; ಮಹಾ ಪತಿವ್ರತೆಯು; ಒಳ್ಳೇ ನಡತೆ ಯುಳ್ಳವಳು ಎಂಬುವದನ್ನು ನಾನು ಬಲ್ಲೆನು. ಆದಾಗ್ಯೂ, ಲೋಕಾಪವಾದಕ್ಕೆ ಒಳ್ಳೇ ಕುಲದಲ್ಲಿ ಹುಟ್ಟಿದವರು ಅಂಜಿ, ನಡೆಯ ಬೇಕು. ನಾನು ಏಕ ಪತ್ನೀ ವ್ರತಸ್ಥನಾದ್ದರಿಂದ, ನಿನ್ನನ್ನು ಬಿಟ್ಟು, ಮತ್ತೊಬ್ಬಳನ್ನು ಮದುವೆಯಾಗುವದಿಲ್ಲ. ನಾನು ಅಯೋಧ್ಯಾ ಪಟ್ಟಣಕ್ಕೆ ಹೋಗಿ, ಭರತನನ್ನು ಸಮ್ಮತಿ ಪಡಿಸಿ, ಆತ ನಿಗೆ ಪಟ್ಟಾಭಿಷೇಕವನ್ನು ಮಾಡಿ, ವೃದ್ಧಳಾದ ತಾಯಿ ಕೌಸಲ್ಯೆಯನ್ನು ಸಂಗ ಡ ಕರೆದು ಕೊಂಡು, ತಪೋ ವನಕ್ಕೆ ಬಂದು, ತಪಸ್ಸನ್ನು ಮಾಡಿ ಕೊಂಡಿರು ವೆನು. ನೀನು ನಿಮ್ಮ ತಂದೆಯಾದ ಜನಕ ರಾಯನ ಮನೆಗಾದರೂ, ಮತ್ತು ನಿನ್ನ ಮನಸ್ಸು ಬಂದ ಕಡೆಗಾದರೂ ಹೋಗ ಬಹುದು, ಎಂದು ಹೇಳಿ, ಸು ಮ್ಮಗಾಗಲು;—

ಸೀತೆಯು ತನ್ನ ಮನಸ್ಸಿನಲ್ಲಿ—ಈ ರಾಮಚಂದ್ರನು ಸರ್ವಜ್ಞನಾಗಿ, ಸಕಲ ಜಗತ್ತುಗಳ ಮನೋಗತಗಳನ್ನು ತಿಳಿದಿದ್ದವನಾದಾಗ್ಯೂ, ಲೋಕವನ್ನು ಮೆ ಚ್ಚಿಸುವದಕ್ಕೋಸ್ಕರ ಇಂಥ ಮಾತುಗಳನ್ನು ನನಗೆ ಹೇಳುತ್ತಾನೆ. ನಾನು ಈತನ ಮನೋಗತಕ್ಕೆ ಸರಿಯಾಗಿ ನಡೆದು, ಜನರನ್ನು ಮೆಚ್ಚಿಸ ಬೇಕೆಂದು ನಿ ಶ್ಚೈಸಿ, ಗಡ ಗಡನೆ ನಡುಗುತ್ತ, ಕಣ್ಣೀರುಗಳನ್ನು ಸುರಿಸುತ್ತ, ಗದ್ಗದ ಸ್ವರ ದಿಂದ ರಾಮನನ್ನು ಕುರಿತು—ಎಲೈ, ಪ್ರಾಣ ಕಾಂತನೇ, ನೀನು ನನ್ನ ಕೈ ಹಿಡಿದ ದಿನದಾರಭ್ಯ ಅಯೋಧ್ಯಾ ಪಟ್ಟಣದಲ್ಲಿ ಹನ್ನೆರಡು ವರುಷವೂ, ಅರಣ್ಯದಲ್ಲಿ ಹದಿಮೂರು ವರುಷವೂ, ನಿನ್ನೊಡನೆ ಇದ್ದೆನಷ್ಟೆ? ನನ್ನ ನಡತೆಗಳಲ್ಲಿ ಎಳ್ಳ ಷ್ಟಾದರೂ ತಪ್ಪು ಕಂಡೆಯಾ? ಲಂಕೆಯಲ್ಲಿ ಇರುವಾಗ್ಯೆ ನಾನು ಹ್ಯಾಗೆ ಇದ್ದೆ ನೋ, ಅದನ್ನು ಕಂಡು ಬಂದಿರುವ, ಇಗೋ, ನಿನ್ನ ದೂತ ಹನುಮಂತನು ಇಲ್ಲಿ ಯೇ ನಿಂತು ಇದ್ದಾನೆ. ಆತನು ನಿನಗೆ ಮೊದಲೂ ಹೇಳಿರ ಬಹುದು. ಈಗ ಲೂ ಬೇಕಾದರೆ ಕೇಳು. ನೀನೇ ಗತಿಯಾಗಿರುವ ನನ್ನಲ್ಲಿ ಕರುಣೆಯನ್ನು ಇಡದೆ, ಕಲ್ಲೆದೆಯನಾಗಿ ಇಂಥ ಕಠಿಣೋಕ್ತಿಗಳೆಂಬ ಅಲಗುಗಳಿಂದ ನನ್ನ ಎ

ದೆಯನ್ನು ಕೇಳ ಬಹುದೇ? ಇಂಥ ಮಾತುಗಳನ್ನು ಕೇಳಿದ ಮೇಲೆ ನಾನು ಪ್ರಾಣವನ್ನು ತೊರೆದು ಕೊಳ್ಳದೆ, ಬದುಕುವೆನೇ? ನಿರಪರಾಧಿಯಾದ ನಾನು ನಿನ್ನ ಮಾತಿನಿಂದ ಸತ್ತರೆ, ನಿನಗೆ ಸ್ತ್ರೀ ಹತ್ಯ ದೋಷವು ಬರುವದಿಲ್ಲವೇ? ಲೋಕದಲ್ಲಿ ಒಳ್ಳೆಯವರಿಗೆ ಕಠಿಣ ಬುದ್ಧಿಯು ಬರುವದೇ ಇಲ್ಲ. ಒಂದು ವೇಳೆ ಬಂದರೆ, ಎಷ್ಟು ಒಡಂಬಡಿಕೆಯ ಮಾತಿನಿಂದಲೂ ಹೋಗುವದಿಲ್ಲ. ಇಗೋ, ಈಗ ಅಗ್ನಿ ಪ್ರವೇಶವನ್ನು ಮಾಡುವೆನು. ಧರ್ಮ ಸಾಕ್ಷಿಗಳಾದ ಸೂರ್ಯನೂ, ಚಂದ್ರನೂ, ಅಗ್ನಿಯೂ, ಆಕಾಶವೂ, ಭೂಮಿ ದೇವತೆಯೂ, ಉದಕವೂ, ಮನಸ್ಸೂ, ಯಮನೂ, ನನ್ನ ಸತ್ಯವನ್ನು ನೋಡಲಿ! ಎಂದು ಹೇಳಿ, ಲಕ್ಷ್ಮಣನನ್ನು ನೋಡಿ—ಎಲೈ, ಮೈದುನನೇ, ಬೇಗ ಚಿತಿಯನ್ನು ಮಾಡಿ, ಬೆಂಕಿಯನ್ನು ಉರಿಸು, ಅಂದಳು. ಆಗ ಲಕ್ಷ್ಮಣನು ಅಣ್ಣನ ಮುಖವನ್ನು ನೋಡಲು, ರಾಮನು ಕಣ್ಣು ಸನ್ನೆಯಿಂದ—ಹಾಗೆ ಮಾಡೆಂದು, ಅಪ್ಪಣೇ ಕೊಟ್ಟ ಬಳಿಕ, ಲಕ್ಷ್ಮಣನು ಕ್ಷಣ ಮಾತ್ರದಲ್ಲಿ ದೊಡ್ಡವುಗಳಾದ ಒಣಗಿದ ಕೊರಡುಗಳನ್ನು ಒಟ್ಟಿ, ಚಿತಿಯನ್ನು ಮಾಡಿ, ಬೆಂಕಿಯನ್ನು ಹಾಕಿ, ಹತ್ತಿಸಲು; ಉರಿಯು ಆಕಾಶದ ತನಕ ಹತ್ತಿತು. ಆಗ ವಿಭೀಷಣ ಸುಗ್ರೀವಾದಿಗಳು ರಾಮನ ಕಠಿಣ ಹೃದಯವನ್ನು ನೋಡಿ, ಚಿತ್ತಾರದ ಬೊಂಬೆಗಳಂತೆ ಬೆರಗಾಗಿ ನಿಂತಿದ್ದರು. ಮೇಲೆ ದೇವತೆಗಳು—ಹೂವಿನಂತೆ ಮೃದುವಾದ ರಾಮನ ಮನಸ್ಸು ಹೀಗೆ ವಜ್ರದಂತೆ ಕಠಿಣವಾಗ ಬಹುದೇ? ಅಯ್ಯೋ! ಎಂದು ಮರುಗುತ್ತಿದ್ದರು. ಶಿವನ ಹೆಂಡತಿಯಾದ ಪಾರ್ವತಿಯೂ, ಬ್ರಹ್ಮನ ಹೆಂಡತಿಯಾದ ಸರಸ್ವತಿಯೂ, ಇಂದ್ರನ ಹೆಂಡತಿಯಾದ ಶಚೀದೇವಿಯೂ,—ಲೋಕದಲ್ಲಿ ಗಂಡಸರಂಥ ಕ್ರೂರರು ಯಾರೂ ಇಲ್ಲ. ಲೋಕಾಭಿರಾಮನಾದ ರಾಮಚಂದ್ರನ ಮನಸ್ಸು ಇಂಥ ಮಹಾ ಪತಿವ್ರತೆಯಾದ ಸೀತೆಯಲ್ಲಿ ಇಷ್ಟು ಕಠಿಣವಾದ ಮೇಲೆ, ಮಿಕ್ಕ ಪುರುಷರನ್ನು ನೆಚ್ಚುವದು ಹ್ಯಾಗೆ? ಪುರುಷರನ್ನು ಮೆಚ್ಚಿಸುವ ಜಾಣೆಯಾದ ಹೆಂಗಸು ಲೋಕದಲ್ಲಿ ಇನ್ಯಾರು ಇರುವಳೋ? ಕಾಣೆವು ಎಂದು, ಮನದಲ್ಲಿ ಕೊರಗುತ್ತಿದ್ದರು.

ಇಲ್ಲಿ ಜಾನಕಿಯು ಶ್ರೀ ರಾಮನಿಗೆ ನಮಸ್ಕರಿಸಿ, ಉರಿಯುತ್ತಲಿರುವ ಚಿತಿಯ ಬಳಿಗೆ ಬಂದು, ಮೂರು ಪ್ರದಕ್ಷಿಣವನ್ನು ಮಾಡಿ,—ನಾನು ಮನೋ ವಾಕ್ಕಾಯ ಕರ್ಮಗಳಿಂದ ರಾಮನಲ್ಲದೆ ಪರ ಪುರುಷನನ್ನು ಅಪೇಕ್ಷಿಸಿದ್ದವಳಾದರೆ, ಈ ಅಗ್ನಿ ದೇವತೆಯು ನನ್ನನ್ನು ಸುಟ್ಟು, ಬೂದೀ ಮಾಡಲಿ! ಇಲ್ಲದಿದ್ದರೆ, ಕಾಪಾಡಲಿ! ಎಂದು, ರಾಮನ ಅಡಿ ದಾವರೆಗಳನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ, ಚಿತಿಯಲ್ಲಿ ಬಿದ್ದಳು. ಆಗ ಸಕಲ ಕಪಿ ಸೇನೆಗಳೂ ವಿಮಾನದ ಸುರರೂ—ಭೋ

ಎಂದು ಕೂಗಿ, ಅತ್ತರು. ತರುವಾಯು ಅಗ್ನಿ ದೇವತೆಯು ತನ್ನ ರೂಪನ್ನು ಧರಿಸಿ, ಮುಡಿದ ಹೂವು ಬಾಡದಂತೆ, ಉಟ್ಟ ವಸ್ತ್ರಾಭರಣಗಳು ಕಂದದಂತೆ, ಸರ್ವಾಲಂಕಾರ ಭೂಷಿತೆಯಾದ ಸೀತೆಯನ್ನು ಎತ್ತಿ ಕೊಂಡು, ಚಿತಿಯ ನಡುವಿನಿಂದ ಹೊರಟು, ರಾಮನ ಸನ್ನಿಧಿಗೆ ಬಂದು—ಎಲೈ, ಶ್ರಿ ರಾಮಚಂದ್ರನೇ, ನೀನೇನು, ಮನುಷ್ಯನೇ? ರಾವಣನನ್ನು ಕೊಲ್ಲುವದಕ್ಕಾಗಿ ಮನುಷ್ಯಾವತಾರವನ್ನು ಮಾಡಿದ ಮಹಾ ವಿಷ್ಣುವಲ್ಲವೇ? ಈ ಸೀತೆಯು ಮನುಷ್ಯಳೇ? ನಿನಗೆ ಅನುಸಾರಿಯಾಗಿ ನರ ರೂಪಿಯಾಗಿ ಹುಟ್ಟಿದ ಮಹಾ ಲಕ್ಷ್ಮಿಯಲ್ಲವೇ? ನೀನು ಪ್ರಾಕೃತ ಮನುಷ್ಯರಂತೆ ಹೀಗೆ ನಟಿಸ ಬೇಡ. ಸೀತೆಯನ್ನು ಪರಿಗ್ರಹಿಸು, ಎಂದು ಹೇಳಿ, ಸೀತೆಯನ್ನು ರಾಮನ ಸನ್ನಿಧಿಯಲ್ಲಿ ಬಿಟ್ಟು, ತಾನು ಅದೃಶ್ಯನಾದನು.

ಆಗ ಬ್ರಹ್ಮ ರುದ್ರೇಂದ್ರರೇ ಮೊದಲಾದ ಸಕಲ ದೇವತೆಗಳು ತಮ್ಮ ತಮ್ಮ ವಿಮಾನಗಳ ಮೇಲೆ ಏರಿ ಕೊಂಡು, ರಾಮನ ಸನ್ನಿಧಿಗೆ ಬಂದು, ಆತನನ್ನು ಬಹು ಪ್ರಕಾರವಾಗಿ ಸ್ತೋತ್ರವನ್ನು ಮಾಡಿ—ಎಲೈ, ಶ್ರೀ ರಾಮಚಂದ್ರನೇ, ಈ ಜಾನಕಿಯೂ ನೀನೂ ಲೋಕ ಸಂರಕ್ಷಣಾರ್ಥವಾಗಿ ಅವತರಿಸಿದವರು. ನೀನು ಮಹಾ ವಿಷ್ಣುವಾಗಿ, ಈ ಮಹಾ ಲಕ್ಷ್ಮಿಯಾಗಿರುವ ಸೀತೆಯಲ್ಲಿ ಹೀಗೆ ಸಂದೇಹ ಪಟ್ಟು,—ಲೋಕದ ಜನರು ಲೋಕಾಪವಾದಕ್ಕೆ ಹೆದರಿ, ನಡೆಯ ಬೇಕೆಂಬುವದನ್ನು ತೋರಿಸಿ, ನಿನ್ನ ಈ ಸದ್ಗುಣಕ್ಕೂ, ನಿನಗನುಸಾರಿಯಾಗಿ ಸೀತೆಯು ನಡಿಸಿದ ಈ ಆಶ್ಚರ್ಯವಾದ ಕೆಲಸಕ್ಕೂ, ನಾವು ಮೆಚ್ಚಿದೆವು. ಈ ಎರಡು ಕೆಲಸಕ್ಕೂ ಎರಡು ವರವನ್ನು ಬೇಡಿಕೋ; ಕೊಡುವೆವು, ಎನಲು;—

ಶ್ರೀ ರಾಮನು ಆ ದೇವತೆಗಳಿಗೆಲ್ಲಾ ನಮಸ್ಕರಿಸಿ,—ನಿಮ್ಮೆಲ್ಲರಿಗೂ ಸೀತೆಯು ಪರಿಶುದ್ಧಳೆಂದು ತಿಳಿದ ಮೇಲೆ, ನಿಮ್ಮಪ್ಪಣೆಯ ಪ್ರಕಾರ ಸೀತೆಯನ್ನು ಪರಿಗ್ರಹಿಸುವೆನು. ನನಗೆ ನೀವು ಕೊಡ ತಕ್ಕ ಎರಡು ವರಗಳು ಯಾವವು ಅಂದರೆ,—ನನ್ನ ನಿಮಿತ್ಯವಾಗಿ ಯುದ್ಧದಲ್ಲಿ ಪ್ರಾಣಗಳನ್ನು ಬಿಟ್ಟ ಕಪಿಗಳೆಲ್ಲಾ, ಮಲಗಿಕೊಂಡವರು ಏಳುವ ಹಾಗೆ, ಏಳ ಬೇಕು. ನನಗೆ ಸಹಾಯವನ್ನು ಮಾಡಿದ ಈ ಕಪಿಗಳು ಯಾವ ಯಾವ ಸ್ಥಳದಲ್ಲಿ ಇರುವವೋ? ಅಲ್ಲಲ್ಲಿ ಎಲ್ಲಾ ಮರಗಳು ತಮ್ಮ ತಮ್ಮ ಫಲಗಳಿಂದ ಯಾವಾಗಲೂ ಕೂಡಿ ಇದ್ದು, ಇವುಗಳಿಗೆ ಸಂತೋಷಪಡಿಸುತ್ತಾ ಇರ ಬೇಕೆಂದು, ಕೇಳಿ ಕೊಂಡನು. ಅವರು ಅದೇ ಪ್ರಕಾರ ವರವನ್ನು ಕೊಡಲು; ಸತ್ತ ಕಪಿಗಳೆಲ್ಲಾ ಎದ್ದು, ರಾಮನಿಗೆ ನಮಸ್ಕಾರವನ್ನು ಮಾಡಿದವು. ಆಗ ಈಶ್ವರನು ರಾಮನನ್ನು ನೋಡಿ—ಎಲೈ, ರಾಮನೇ, ನಿನ್ನನ್ನು

ನೋಡುವ ಉದ್ದಿಶ್ಯ ನಿಮ್ಮ ತಂದೆಯಾದ ದಶರಥ ರಾಯನು, ಇಗೋ, ವಿಮಾ
ನದ ಮೇಲೆ ಬಂದು ಇದ್ದಾನೆ, ನೋಡು, ಎನ್ನಲು; ದಶರಥ ರಾಯನು ತನ್ನ ವಿ
ಮಾನವನ್ನು ಕೆಳಗೆ ಇಳಿಸಿ, ಸೀತಾ ರಾಮ ಲಕ್ಷ್ಮಣರನ್ನು ವಿಮಾನಕ್ಕೆ ಕರೆದು
ಕೊಂಡು, ತಬ್ಬಿ ಕೊಂಡು, ಮುದ್ದಾಡಿ, ರಾಮನನ್ನು ಕುರಿತು—ಹದಿನಾಲ್ಕು ವರು
ಷ ವನ ವಾಸದಲ್ಲಿ ಕಷ್ಟ ಪಟ್ಟು, ನನ್ನನ್ನು ಸತ್ಯ ಪ್ರತಿಜ್ಞನಾಗಿ ಮಾಡಿದೆ. ಇನ್ನು
ಮೇಲೆ ಅಯೋಧ್ಯಾ ಪಟ್ಟಣಕ್ಕೆ ಹೋಗಿ, ತಮ್ಮಂದಿರೊಡನೆ ಕೂಡಿ, ಪಟ್ಟಾ
ಭಿಷಿಕ್ತನಾಗಿ, ರಾಜ್ಯ ಪರಿಪಾಲನೆಯನ್ನು ಮಾಡಿ ಕೊಂಡು ಇರು ಎಂದು, ಆ
ಶೀರ್ವಾದವನ್ನು ಮಾಡಿ, ಇವರನ್ನು ಕಳುಹಿಸಿ, ತಾನು ಇಂದ್ರಾದಿ ದೇವತೆಗಳೊ
ಡನೆ ಹೊರಟು ಹೋದನು. ಆ ಬಳಿಕ, ಶ್ರೀ ರಾಮನು ಸೀತಾ ಲಕ್ಷ್ಮಣರೊ
ಡನೆ ಕೂಡಿ ಕೊಂಡು, ಸುಗ್ರೀವ ವಿಭೀಷಣಾದಿ ಕಪಿ ರಾಕ್ಷಸ ಸೇನಾ ಸಮೇತ
ನಾಗಿ, ತನ್ನ ಶಿಬಿರಕ್ಕೆ ಬಂದು, ಸಂತೋಷದಿಂದ ಇದ್ದನು.

74. Rama's Coronation.
೭೪. ರಾಮನ ಪಟ್ಟಾಭಿಷೇಕವು.

ಆ ಬಳಿಕ, ಸೀತಾ ಲಕ್ಷ್ಮಣ ಸಮೇತನಾಗಿ, ಸಂತೋಷದಿಂದಿರುವ ಶ್ರೀ ರಾ
ಮಚಂದ್ರನಿಗೆ ಸಾಷ್ಟಾಂಗವಾಗಿ ನಮಸ್ಕರಿಸಿ, ಕೈ ಮುಗಿದು, ನಿಂತು ಕೊಂಡು,
ವಿಭೀಷಣನು—ಜೀಯಾ, ಪಟ್ಟಣಕ್ಕೆ ಬಿಜಯ ಮಾಡಿ, ನಿನ್ನ ಶರಣಾಗತನಾದ
ನಾನು ಮಾಡುವ ಉಪಚರಣೆಯನ್ನು ಕೈ ಕೊಂಡು, ಲಂಕಾ ಪುರದ ಜನಗಳ
ನ್ನು ಸಂತೈಸಿ, ಅಯೋಧ್ಯೆಗೆ ಬಿಜಯ ಮಾಡ ಬೇಕೆಂದು, ಬೇಡಿ ಕೊಳ್ಳಲು;
ಶ್ರೀರಾಮನು—ಎಲೈ, ರಾಕ್ಷಸ ರಾಜೇಂದ್ರನೇ, ನನ್ನ ತಮ್ಮ ಭರತನ ತಾಯಿ
ಯಾದ ಕೈಕೆಯಿಯು ನೇಮಿಸಿದ ಹದಿನಾಲ್ಕು ವರುಷ ತುಂಬುವದಕ್ಕಿಂತ
ಮುಂಚೆ ಹೊಳಲುಗಳನ್ನು ಹೊಗುವದಿಲ್ಲವೆಂದು, ಪ್ರತಿಜ್ಞೆಯನ್ನು ಮಾಡಿರುವೆ
ನು. ನೀನು ಹಗೆಯನ್ನು ಕೊಲ್ಲುವದಕ್ಕೆ ಈ ವರಿಗೂ ನನಗೆ ಮಾಡಿದ ಸಹಾ
ಯಕ್ಕಿಂತ ಇನ್ನು ಹೆಚ್ಚಾದ ಉಪಚಾರವು ಏನಿರುವದು? ಅಯೋಧ್ಯೆಯಲ್ಲಿ ನ
ನ್ನ ತಾಯಿಗಳು ಚಿಂತಿಸುತ್ತಿರುವರು. ನನ್ನ ತಮ್ಮಂದಿರು ಭರತ ಶತ್ರುಘ್ನರಿಗೆ
ನನ್ನನ್ನು ಬಿಟ್ಟಿರುವ ದುಃಖವು ತುಂಬಿರುವದು. ನಾನು ಈ ದಿವಸವೇ ಅಯೋ
ಧ್ಯೆಗೆ ಹೊರಡ ಬೇಕು. ಇದಕ್ಕೆ ನೀನು ಸಹಾಯವನ್ನು ಮಾಡು, ಅಂದನು.

ಆಗ ವಿಭೀಷಣನು ಪುಷ್ಪಕ ವಿಮಾನವನ್ನು ತರಿಸಿ, ಮುಂದೆ ನಿಲ್ಲಿಸಿ,—ಬಿಜ
ಯ ಮಾಡ ಬಹುದೆಂದು, ಕೈ ಮುಗಿದು ಕೊಂಡು, ಬಿನ್ನವಿಸಲು; ಶ್ರೀ ರಾಮ
ನು, ದೇವತೆಗಳ ವಿಮಾನಗಳಿಗೆ ಇಮ್ಮಿಗಿಲೆನಿಸಿ, ಶಂಕರನಿಗೆ ಮನೆಯಾದ ಕೈ

ಲಾಸದಂತೆಯೂ, ವಿಷ್ಣುವಿಗೆ ಮಂದಿರವಾದ ಕ್ಷೀರ ಸಮುದ್ರದಂತೆಯೂ, ಬ್ರಹ್ಮನಿಗೆ ಭವನವಾದ ಸತ್ಯ ಲೋಕದಂತೆಯೂ, ಬಹಳವಾದ ಮನೆಗಳಿಂದಲೂ, ಅನೇಕವಾದ ಉಪ್ಪರಿಗೆಗಳಿಂದಲೂ, ಚೆಲುವಾದ ಚಂದ್ರಶಾಲೆಗಳಿಂದಲೂ, ಕೇಳಿದ ಫಲಗಳನ್ನು ಕೊಡುವ ಬಹಳ ಮರಗಳುಳ್ಳ ನಂದನ ವನಗಳಿಂದಲೂ, ನಿರ್ಮಲವಾದ ನೀರಿನಿಂದ ತುಂಬಿದ ಕೊಳಗಳಿಂದಲೂ, ಯಾರ್ಯಾರಿಗೆ ಯಾವ್ಯಾವ ಊಟದಲ್ಲಿ ರುಚಿಯೋ? ಆಯಾಯ ಊಟಗಳನ್ನು ಮಾಡಿಸುವ ದೇವತಾ ಸ್ತ್ರೀಯರುಗಳಿಂದಲೂ, ಕೂಡಿರುವ ವಿಮಾನವನ್ನು ನೋಡಿ, ಅತ್ಯಾಶ್ಚರ್ಯ ಪಟ್ಟು, ಶ್ರೀರಾಮನು ಮುಂದೆ ಏರಿ, ಆ ಮೇಲೆ ಸೀತೆಗೆ ಕೈ ಕೊಟ್ಟು, ವಿಮಾನಕ್ಕೆ ಹತ್ತಿಸಿ ಕೊಂಡು, ತನ್ನ ತೊಡೆಯಲ್ಲಿ ಕುಳ್ಳಿರಿಸಿ ಕೊಂಡನು. ತರುವಾಯ ಲಕ್ಷ್ಮಣನು ಧನುರ್ಬಾಣಗಳನ್ನು ತೆಗೆದು ಕೊಂಡು, ರಾಮನ ಬೆನ್ನಿನ ಹಿಂದೆ ಕುಳಿತು ಕೊಂಡನು. ಬಳಿಕ ಶ್ರೀ ರಾಮನ ಅಪ್ಪಣೆಯಿಂದ ಸುಗ್ರೀವ, ಜಾಂಬವ, ಸುಷೇಣ, ಮೊದಲಾದ ಕಪಿ ಸೇನಾಪತಿಗಳು, ತಮ್ಮ ತಮ್ಮ ಸೇನಾ ಸಹಿತವಾಗಿ, ಕುಬೇರನ ಪುಷ್ಪಕವನ್ನು ಏರಿದರು. ಇಷ್ಟು ಜನ ಏರಿದಾಗ್ಯೂ ಆ ವಿಮಾನದಲ್ಲಿ ತಿರಿಗಿ ಜನರು ಏರುವದಕ್ಕೆ ಸ್ಥಳವು ತೆರಪಾಗಿ ಇರುವದು. ಆಗ ದೇವತೆಗಳು—ಜಯ, ಜಯ, ಎನ್ನುತ್ತ, ದೇವ ದುಂದುಭಿಗಳನ್ನು ಬಾರಿಸಿದರು.

ಶ್ರೀ ರಾಮನ ಅಪ್ಪಣೆಯಿಂದ ಆ ವಿಮಾನವು ಆಕಾಶ ಮಾರ್ಗದಲ್ಲಿ ಬರುತ್ತ, ಕಿಷ್ಕಿಂಧಾ ಪಟ್ಟಣದ ಬಳಿಗೆ ಬರಲು; ಸೀತೆಯು ರಾಮನನ್ನು ನೋಡಿ, ಮಾತಾಡುವಷ್ಟರಲ್ಲಿಯೇ, ಕಪಿ ರೂಪುಗಳನ್ನು ಬಿಟ್ಟು, ಮನುಷ್ಯ ರೂಪುಗಳನ್ನು ಧರಿಸಿ, ಸರ್ವಾಲಂಕಾರ ಶೋಭಿತೆಯರಾಗಿ, ರುಮೆ, ತಾರೆ, ಮೊದಲಾದ ವಾನರ ನಾರಿಯರು ಅನರ್ಘ್ಯವಾದ ಫಲ ಪುಷ್ಪಾದಿಗಳನ್ನು ತೆಗೆದು ಕೊಂಡು, ಎದುರಾಗಿ ಬಂದು, ಸೀತೆಗೆ ಕೈ ಗಾಣಿಕೆಯನ್ನು ಒಪ್ಪಿಸಿ, ಮೊದಲು ರಾವಣನು ತನ್ನನ್ನು ಕೊಂಢೋಗುವಾಗ, ಸೀತೆಯು ಬಿಸಾಟಿದ್ದ ಆಭರಣಗಳನ್ನು ತಂದು, ಸೀತೆಗೆ ಇಟ್ಟು, ಅಲಂಕರಿಸಿದರು. ಆಗ ಸೀತಾ ದೇವಿಯು ಪರಮ ಸಂತೋಷದಿಂದ ರುಮೆ, ತಾರೆ, ಮೊದಲಾದ ವಾನರ ನಾರಿಗಳನ್ನು ಆಲಿಂಗಿಸಿ, ಮನ್ನಿಸಿದಳು. ಬಳಿಕ, ಸುಗ್ರೀವನು ಎದ್ದು, ರಾಮನಿಗೆ ಸಾಷ್ಟಾಂಗವೆರಗಿ,—ಈ ರಾತ್ರೆ ನಮ್ಮ ಪಟ್ಟಣದಲ್ಲಿದ್ದು, ಸೇವಕನ ಪೂಜೆಯನ್ನು ಕೈ ಕೊಂಡು, ಮುಂಜಾನೆ ದಯ ಮಾಡ ಬೇಕೆಂದು, ಬೇಡಿ ಕೊಳ್ಳುತ್ತಿರಲು; ಶ್ರೀ ರಾಮನು ಸುಗ್ರೀವನನ್ನು ಕುರಿತು—ಯಾರು ನಿನ್ನ ಹಾಗೆ ನಮಗೆ ಸತ್ಕಾರವನ್ನು ಮಾಡಿದವರು? ಇದೇನು? ಉಪಚಾರದ ಮಾತೇ? ಅಲ್ಲ. ನಾನು ಜನ್ಮ ಜನ್ಮದಲ್ಲಿಯೂ ನೀನು ಮಾಡಿದ ಸೇವೆ

ಯನ್ನು ಮರೆಯ ಬಹುದೇ? ಯಾರ ದೆಶೆಯಿಂದ ಹೋಗಿದ್ದ ನನ್ನ ಅಭಿಮಾನವು ತಿರಿಗಿ ನನಗೆ ಕೈ ಗೂಡಿತು. ನಾನು ಒಂದು ಬಾಯಿಯಿಂದ ನಿನ್ನನ್ನು ಹೊಗಳಲಾರೆನು. ಈ ದಿನದಲ್ಲಿ ಭರತನು ನನ್ನನ್ನು ಕಾಣದೆ ಇದ್ದರೆ, ಬೆಂಕಿಯಲ್ಲಿ ಬೆರಸಿ ಹೋಗುವನು. ಆತನು ಹೀಗೆ ಹಿಂದೆ ಪ್ರತಿಜ್ಞೆಯನ್ನು ಮಾಡಿರುವನು. ನಿನ್ನ ನಾರಿಗಳು ಕೂಡ ಸೀತೆಯೊಡನೆ ಸುಖ ಸಂಭಾಷಣೆಗಳನ್ನು ಮಾಡುತ್ತ ಬರಲಿ, ಎಂದು ಹೇಳಿ, ಅವರು ಸಹಿತವಾಗಿ ವಿಮಾನವನ್ನು ನಡಿಸುತ್ತ, ಭರದ್ವಾಜರಾಶ್ರಮದ ಸಮುಕ್ಕೆ ಬರಲು; ಆತನು ಪರಮ ಹರುಷದಲ್ಲಿ ಸಾವಿರಾರು ಮುನಿಗಳ ಕೂಡ ರಾಮನಿಗೆ ಎದುರಾಗಿ ಬಂದು, ವೇದ ಘೋಷಗಳನ್ನು ಮಾಡುತ್ತ, ರಾಮನ ಮೇಲೆ ಮಂತ್ರಾಕ್ಷತೆಗಳನ್ನು ಎರಚಿ, ಫಲಾದಿಗಳನ್ನು ಕೊಟ್ಟು—ಎಲೈ, ರಘು ರಾಜೇಂದ್ರನೇ, ಈ ದಿವಸ ನಮ್ಮಾಶ್ರಮದಲ್ಲಿ ಇದ್ದು, ನಾವು ಮಾಡುವ ಆತಿಥ್ಯವನ್ನು ಕೈ ಕೊಂಡು, ಬೆಳಗ್ಯೆ ಭರತನನ್ನು ಕಾಣ ಬಹುದು, ಎಂದು ಹೇಳಿದ್ದಕ್ಕೆ,—ತಮ್ಮ ಅಪ್ಪಣೆಯ ಪ್ರಕಾರ ನಡೆಯುವದು ವಿಹಿತವೇ ಸರಿ. ಆದರೆ ಈ ದಿವಸ ನಾನು ಭರತನನ್ನು ಕಾಣದೆ ಇದ್ದರೆ, ಆತನು ಯಜ್ಞೇಶ್ವರನಿಗೆ ಆಹುತಿಯಾಗುವನು. ಇದಕ್ಕೆ ಹ್ಯಾಗೆ ಮಾಡ ಬೇಕು? ಎಂದು ರಾಮನು ಕೇಳಿದ್ದಕ್ಕೆ, ಭರದ್ವಾಜ ಮುನಿಯು—ಭರತನ ಬಳಿಗೆ ಹನುಮಂತನನ್ನು ನೀನು ನಮ್ಮಾಶ್ರಮದಲ್ಲಿರುವ ಸುದ್ದಿಯನ್ನು ತಿಳಿಸುವ ಹಾಗೆ, ಹೇಳಿ ಕಳುಹಿಸು, ಎನಲು; ಶ್ರೀ ರಾಮನು—ಆಗಲದಕ್ಕೇನೆಂದು, ಆಂಜನೇಯನನ್ನು ಭರತನ ಬಳಿಗೆ ಕಳುಹಿಸಿ, ತಾನು, ತನ್ನ ಪರಿವಾರ ಸಮೇತನಾಗಿ, ಸುರಾಚಾರ್ಯನ ಮಗನಾದ ಭರದ್ವಾಜ ಮುನಿಯ ಆಶ್ರಮಕ್ಕೆ ಪುಷ್ಪಕ ವಿಮಾನವನ್ನು ಇಳಿಸಿದನು.

ಆ ಬಳಿಕ ಭರದ್ವಾಜ ಮುನಿಯು ಕಾಮ ಧೇನುವನ್ನು ಸ್ಮರಿಸಲು, ಆ ಕಾಮ ಧೇನುವು ಪರಮ ಭೋಜನ ಗಂಧ ಮಾಲ್ಯಾಂಬರ ವಿಭೂಷಣಾದಿಗಳಿಂದ ಸೀತಾ ರಾಮ ಲಕ್ಷ್ಮಣರನ್ನೂ, ಕಪಿ ರಾಕ್ಷಸ ಸೇನೆಗಳನ್ನೂ ಬಂದು, ಸತ್ಕರಿಸಿದ ಬಳಿಕ, ಮುನಿಯ ಅಪ್ಪಣೆಯಿಂದ ರಾಮನು ನಂದಿಗ್ರಾಮಕ್ಕೆ ಹೊರಟು ಬರುತ್ತಿದ್ದನು. ಅತ್ತಲು ಆಂಜನೇಯನು ರಾಮನ ಅಪ್ಪಣೆಯ ಮೇರೆಗೆ ನಂದಿಗ್ರಾಮಕ್ಕೆ ಬಂದು, ಅಗ್ನಿಯನ್ನು ಪ್ರದಕ್ಷಿಣೇ ಮಾಡುತ್ತಿರುವ ಭರತನ ಭಕ್ತಿಯನ್ನು ಕಂಡು, ಜಾಗ್ರುತೆಯಲ್ಲಿ ಬೇಗ ಬಂದು, ಆತನ ಕೈಯನ್ನು ಹಿಡಿದುಕೊಂಡು,—ಅಗ್ನಿಯನ್ನು ಹೊಗ ಬೇಡ! ಇಗೋ, ಶ್ರೀ ರಾಮನು ಬಂದನು. ಕೈಲಾಸದ ಹಾಗೆ ಕುಬೇರನ ವಿಮಾನವು ಆಕಾಶ ಮಾರ್ಗದಲ್ಲಿ ಬರುತ್ತದೆ, ನೋ

ಡು! ಅದರ ನಟ್ಟ ನಡುವೆ ಬಿಳೀ ಗೊಡೆಯೂ ಬಿಳೀ ಚೌರಿಗಳೂ ಇರುವ ಮಣಿ
ಪೀಠದಲ್ಲಿ ಕುಳಿತಿರುವವನು ನಿನ್ನ ಹೃದಯದ ವಲ್ಲಭನಾದ ರಾಘವೇಶ್ವರನು.
ನನ್ನ ಹೆಸರು ಹನುಮಂತನು, ನಿನ್ನ ಮನದ ಸಂಶಯವನ್ನು ಬಿಟ್ಟು, ತೆಂಕಣ ದಿ
ಕ್ಕಿನ ಕಡೆಯನ್ನು ನೋಡು, ಎನಲು; ಭರತನು ಮುಗಿಲಿನ ನಡೆಯಂತೆ ಆಕಾ
ಶದಲ್ಲಿ ಬರುವ ವಿಮಾನವನ್ನು ನೋಡುತ್ತಾ ಇರುವಷ್ಟರಲ್ಲಿಯೇ, ದಿವ್ಯ ವಿಮಾನ
ವು ನಂದಿಗ್ರಾಮದ ಶೀಮೆಗೆ ಇಳಿಯಿತು.

ಆಗ ಭರತನು ಬಹಳ ಸಂತೋಷ ಪಟ್ಟು, ಶ್ರೀ ರಾಮಚಂದ್ರನ ರತ್ನ ಖಚಿತ
ವಾದ ಆವುಗೆಗಳನ್ನು ಮಂಡೆಯ ಮೇಲಿರಿಸಿ ಕೊಂಡು, ಹೊರಡುವಾಗ, ಆ ಪಾ
ದುಕೆಗಳಿಗೆ ಎರಡು ಕಡೆಯಲ್ಲಿಯೂ ಚಿನ್ನದ ಹಿಡಿಗಳಿಂದ ಕೂಡಿರುವ ಬಿಳೀ
ಚಾಮರಗಳಿಂದ ಬೀಸಿದರು. ಮತ್ತು ಶರತ್ಕಾಲದ ಹುಣ್ಣುಮೇ ಚಂದ್ರನ ಹಾ
ಗೆ ಬಿಳುಪಾಗಿಯೂ ಬಟುವಾಗಿಯೂ ಇರುವ ಬಿಳೀ ಕೊಡೆಗಳೂ, ಎಳೇ
ಸೂರ್ಯನಂತಿರುವ ಕೆಂಪು ಕೊಡೆಗಳೂ, ಕಾರ್ಮುಗಿಲಂತೆ ಕಪ್ಪಾಗಿರುವ ಕರೀ
ಕೊಡೆಗಳೂ, ಪಚ್ಚೆಯಂತೆ ಹೊಳೆಯುತ್ತಲಿರುವ ಎಲೆ ಹಸುರು ಬಣ್ಣದ
ಕೊಡೆಗಳೂ ಹಿಡಿದವು. ಮುಂದೆ ನವ ರತ್ನ ಖಚಿತವಾದ ತಡಿಗಳಿಂದಲೂ, ವಿಚಿ
ತ್ರ ಮಣಿಗಳಿಂದ ಅಲಂಕೃತವಾದ ಮೊಕವಾಡದಿಂದಲೂ, ಕೆಂಪು ದಮಾಸಿನ ಎದೆ
ಪಟ್ಟೆಯಿಂದಲೂ, ನಾನಾ ಪ್ರಕಾರವಾದ ಚಿನ್ನ ಬೆಳ್ಳೀ ಒಡವೆಗಳಿಂದಲೂ ಅಲಂ
ಕೃತಗಳಾದ ಹಿಡಿಗುದುರೆಗಳೂ ನಡೆದವು. ಮತ್ತು, ದಿಗ್ಗಜಗಳು ಭೂಮಿಯನ್ನು
ಹೊರುವ ಸಂಕಟವನ್ನು ಹೋಗಲಾಡಿಸುವದಕ್ಕೋಸ್ಕರ ನಾನಾ ರೂಪಗಳನ್ನು
ಧರಿಸಿ, ಶ್ರೀರಾಮನ ಪಾದುಕೆಗಳ ಸೇವೆಯನ್ನು ಮಾಡುವದಕ್ಕೆ ಬಂದು ಇರು
ವವೋ? ಎಂಬಂತೆ ಆನೆಗಳು ನಿರಾಜೀ ರಂಚೆಗಳಿಂದಲೂ, ಚಿನ್ನದ ಕಿರು ಘಂಟೆ
ಗಳಿಂದಲೂ, ಸರಪಣಿಗಳಿಂದಲೂ, ಕಾಲು ಕಡಗಗಳಿಂದಲೂ, ಕಿವಿಗಳ ಮುಂದು
ಗಡೆಯಲ್ಲಿ ಜೋಲುತ್ತಲಿರುವ ಬಿಳೀ ಚಾಮರಗಳಿಂದಲೂ, ಅಲಂಕೃತಗಳಾಗಿ,
ನವ ರತ್ನ ಖಚಿತವಾದ ಅಂಬಾರಿಗಳನ್ನು ಧರಿಸಿ ಕೊಂಡು, ಮುಂದೆ ನಡೆದವು.
ಅವುಗಳ ಮುಂದೆ ಹಸುರು ಭಲ್ಲೆಯವರೂ, ಅವರ ಮುಂದೆ ಬೆಳ್ಳೀ ಕಟ್ಟಿನ ಈಟಿ
ಯವರೂ, ಅವರ ಮುಂದೆ ಬಾಣದವರೂ, ಎರಡು ಕಡೆಯಲ್ಲಿಯೂ ಸಾಲು ಹಿ
ಡುಡಿ ಹೋಗುತ್ತಿದ್ದರು. ಅವರ ನಡುವೆ ಓಲಗದವರೂ, ಕೊಳಲಿನವರೂ,
ಕಹಳೆಯವರೂ, ತಂಬೂರಿಯನ್ನೂ, ವೀಣೆಯನ್ನೂ, ಸಾರಂಗಿಯನ್ನೂ, ಸ್ವರ
ಮಂಡಲವನ್ನೂ, ಕಿನ್ನರಿಯನ್ನೂ ನುಡಿಸುವವರೂ, ಭೇರಿಯನ್ನೂ, ನಗಾರಿಯ
ನ್ನೂ, ಮದ್ದಲೆಯನ್ನೂ, ಹುಯಿಲು ತಬಟೆಯನ್ನೂ ಬಾರಿಸುವವರೂ, ಹೋಗು

ತ್ತಿದ್ದರು. ಮತ್ತು ಭರತ ಶಾಸ್ತ್ರದ ಅಧಿ ದೇವತೆಗಳೋ? ಅಪ್ಸರ ಸ್ತ್ರೀಯರುಗಳೋ? ಎಂಬ ಹಾಗೆ ಇರುವ ವೇಶ್ಯಾ ಸ್ತ್ರೀಯರುಗಳೂ, ದಿವ್ಯವಾದ ನಾನಾ ಬಣ್ಣವಾದ ಶೀರೆಗಳನ್ನು ಉಟ್ಟು, ಕಾಶಿಯನ್ನು ಕಟ್ಟಿ ಕೊಂಡು, ಶೀರೇ ಶೆರಗನ್ನು ನಡುವಿನ ಒಡ್ವಾಣದಲ್ಲಿ ಶಿಕ್ಕಿಸಿ, ನವ ರತ್ನಾಭರಣ ಭೂಷಿತರಾಗಿ, ವಿಚಿತ್ರವಾದ ಕುಪ್ಪಸಗಳನ್ನು ತೊಟ್ಟು, ಕಾಲಿಗೆ ಕಿರು ಗೆಜ್ಜೆಗಳನ್ನು ಕಟ್ಟಿ ಕೊಂಡು, ಎದುರು ಬದರಿಗೆ ವರಸೆಯಾಗಿ ನಿಂತು, ಕುಣಿಯುತ್ತಿದ್ದರು. ದಿವ್ಯವಾದ ಬಿಳೀ ನಿಲಂಗಿಯನ್ನು ತೊಟ್ಟು, ನಾನಾ ಬಣ್ಣವಾದ ಪಾಗುಗಳನ್ನಿಟ್ಟು ಕೊಂಡು, ಕೈಗಳಲ್ಲಿ ಚಿನ್ನ ಬೆಳ್ಳೀ ಕೋಲುಗಳನ್ನು ಹಿಡಿದು ಕೊಂಡು, ಜನರು ಒಬ್ಬರ ಮೇಲೆ ಒಬ್ಬರು ನುಗ್ಗದಂತೆ ಎಚ್ಚರವನ್ನು ಹೇಳುತ್ತ, ಕಂಚುಕಿಗಳು ಬರುತ್ತಾ ಇದ್ದರು. ಮತ್ತು ಕುತ್ನೀ ಚಲ್ಲಣಗಳನ್ನು ಇಟ್ಟು ಕೊಂಡು, ತುಂಡಂಗಿಗಳನ್ನು ತೊಟ್ಟು ಕೊಂಡು, ವಿಧ ವಿಧವಾದ ಚಿನ್ನದ ಕಂಬೀ ರುಮಾಲುಗಳನ್ನು ಸುತ್ತಿ ಕೊಂಡು, ಚಿನ್ನ ಬೆಳ್ಳೀ ದೊಣ್ಣೆಗಳನ್ನು ಹೆಗಲ ಮೇಲೆ ಇಟ್ಟು ಕೊಂಡು, ಅನೇಕರು ಪಙ್ತಿಯಾಗಿ ಬರುತ್ತಿದ್ದರು. ಮತ್ತು ಕೇತು ದಂಡಗಳನ್ನೂ, ಬಿರಿದು ಬಾವಲಿಗಳನ್ನೂ ಹಿಡಿದು ಕೊಂಡು, ಅನೇಕ ಜನರು ಬರುತ್ತಾ ಇದ್ದರು. ಮತು ವಂದಿ, ಮಾಗಧ, ವೈತಾಳಿಕರೂ, ಸ್ತುತಿ ಪಾಠಕರೂ, ಶ್ರೀ ರಾಮನ ಪಾದುಕೆಗಳನ್ನು ಹೊಗಳುತ್ತಾ ಬಂದರು. ಹಿಂದು ಗಡೆಯಲ್ಲಿ ಶತ್ರುಘ್ನನು ಧನುರ್ಬಾಣಗಳನ್ನು ಧರಿಸಿ ಬಂದನು. ಮತ್ತು ಮುತ್ತೈದೆಯರಾದ ವೃದ್ಧ ಸ್ತ್ರೀಯರು ಕಲಶ ಕನ್ನಡಿಗಳನ್ನು ಹಿಡಿದು ಕೊಂಡು ಬಂದರು. ಇಂದ್ರನೀಲ ಮಣಿ ಮಯವಾದ ನಾಲ್ಕು ಕೋಲುಗಳಿಂದ ಕೂಡಿದ ನಡು ಚಪ್ಪರವನ್ನು ಶ್ರೀ ರಾಮನ ಪಾದುಕೆಗಳ ಮೇಲೆ ನಾಲ್ಕು ಜನ ಹಿಡಿದು ಕೊಂಡು ಬಂದರು. ಮುನಿಗಳೂ, ಬ್ರಾಹ್ಮಣರೂ, ನಿಂಬೇ ಹಣ್ಣು, ತೆಂಗಿನ ಕಾಯಿ, ಉತ್ತುತ್ತಿ, ಮೊದಲಾದ ಫಲಗಳನ್ನೂ, ಮಂತ್ರಾಕ್ಷತೆಗಳನ್ನೂ, ಕೈಯಲ್ಲಿ ತೆಗೆದು ಕೊಂಡು, ಋಗ್ಯಜುಸ್ಸಾಮಗಳೆಂಬ ಮೂರು ವೇದಗಳ ಪಠಣವನ್ನು ಮಾಡುತ್ತ, ಪಾದುಕೆಗಳ ಸಮೀಪದಲ್ಲಿ ಬಂದರು. ಮತ್ತು ಅನೇಕ ಸಾವಂತ ರಾಜ ಕುಮಾರರು ತೇಜಿಗಳನ್ನೇರಿ ಕೊಂಡು, ಕತ್ತಿ ಕಠಾರಿ ಮುಂತಾದ ಆಯುಧಗಳನ್ನು ಧರಿಸಿ, ಬೆಂಗಾವಲಾಗಿ ಬರುತ್ತಾ ಇದ್ದರು. ಕೌಸಲೆ, ಸುಮಿತ್ರೆ, ಕೈಕೆಯಿ ಮೊದಲಾದ ಮಾತೃ ಜನಗಳೂ, ಅಂತಃಪುರ ಸ್ತ್ರೀಯರೂ, ರಾಮ ದರುಶನೋತ್ಸುಕರಾಗಿ, ಅಂದಣಗಳನ್ನೂ ಪಾಲಖಿಗಳನ್ನೂ ಏರಿ ಕೊಂಡು ಬಂದರು.

ಆಗ ಶ್ರೀ ರಾಮನು ತನ್ನ ಹಾಗೆಯೇ ಜಟಾ ಚೀರ ಧರರಾಗಿ, ಅನ್ನಾಹಾರಗಳನ್ನು ಬಿಟ್ಟು, ಹದಿನಾಲ್ಕು ವರುಷದಿಂದ ಫಲಾಹಾರಗಳನ್ನು ಮಾಡುತ್ತ, ಬಡವಾದ ಮೈಯುಳ್ಳ ತಮ್ಮಂದಿರಾದ ಭರತ, ಶತ್ರುಘ್ನರನ್ನು ನೋಡಿ,—ಅಯ್ಯೋ! ನನ್ನಲ್ಲಿರುವ ಪರಮ ಭಕ್ತಿಯಿಂದ ಇವರು ಇಷ್ಟು ಕಷ್ಟ ಪಟ್ಟರಲ್ಲ! ನನ್ನ ಹುಟ್ಟು ತಾಯಿ ತಂದೆಗಳೂ ತಮ್ಮಂದಿರೂ ಮೊದಲಾದ ಇಷ್ಟ ಬಂಧುಗಳ ದುಃಖಕ್ಕೆ ಕಾರಣವಾಯಿತು, ಎಂದು ಮರುಗುತ್ತಾ, ಬೇಗ ವಿಮಾನವನ್ನು ಭೂಮಿಗೆ ಇಳಿಸಿದನು. ಆಗ ಭರತನು ಶ್ರೀ ರಾಮಚಂದ್ರನ ಅಡಿ ದಾವರೆಗಳಿಗೆ ರತ್ನ ಪಾದುಕೆಗಳನ್ನು ತೊಡಿಸಿ, ಭೂಮಿಯಲ್ಲಿ ಅಡ್ಡ ಬಿದ್ದನು. ಶತ್ರುಘ್ನನು ಸೀತಾ ರಾಮ ಲಕ್ಷ್ಮಣರಿಗೆ ನಮಸ್ಕರಿಸಿದನು. ಆಗ ಶ್ರೀ ರಾಮನು ಭರತ ಶತ್ರುಘ್ನರನ್ನು ತಬ್ಬಿ ಕೊಂಡು, ಮುದ್ದಾಡಿ, ಮುತ್ತು ಕೊಟ್ಟು, ಮುಂಗುರುಳುಗಳನ್ನು ಆಘ್ರಾಣಿಸಿ, ಕೌಸಲ್ಯೆ ಮೊದಲಾದ ಮಾತೃ ಜನಗಳಿಗೆ ನಮಸ್ಕರಿಸಲು; ಕೌಸಲ್ಯೆಯು ಸೀತಾ ರಾಮ ಲಕ್ಷ್ಮಣರನ್ನು ಆಲಿಂಗಿಸಿ, ಆನಂದ ಬಾಷ್ಪಗಳಿಂದ ಅವರನ್ನು ನೆನಸಿದಳು. ಆ ಮೇಲೆ ಶ್ರೀ ರಾಮಚಂದ್ರನು ವಶಿಷ್ಠಾದಿ ಮುನಿಗಳಿಗೆ ನಮಸ್ಕರಿಸಿ, ಅವರ ಆಶೀರ್ವಾದವನ್ನು ಕೈ ಕೊಂಡು, ಮಿಕ್ಕ ಮಂತ್ರಿ ಸೇನಾಪತಿ ಪೌರ ಪರಿಜನಗಳನ್ನು ಅವರವರ ಯೋಗ್ಯತಾನುಸಾರವಾಗಿ ಮನ್ನಿಸಿದನು.

ತರುವಾಯ ಭರತನು ಶ್ರೀ ರಾಮಚಂದ್ರನಿಗೆ ನಮಸ್ಕರಿಸಿ, ಕೈ ಮುಗಿದು, ನಿಂತು ಕೊಂಡು,—ಎಲೈ, ಶ್ರೀ ರಾಮಚಂದ್ರನೇ, ನೀನು ನನ್ನ ತಾಯಿಯಾದ ಕೈಕೆಯಿಯ ಮಾತನ್ನು ಮನ್ನಿಸಿ, ತಂದೆಯಾದ ದಶರಥ ರಾಯನನ್ನು ಸತ್ಯ ಪ್ರತಿಜ್ಞನಾಗಿ ಮಾಡಲು, ನನಗೆ ನೀನು ಕೊಟ್ಟು ಇದ್ದ ಕೋಸಲ ರಾಜ್ಯವನ್ನು ತಿರಿಗಿ ನಾನು ನಿನ್ನ ಪಾದಕ್ಕೊಪ್ಪಿಸಿದ್ದೇನೆ. ದೊಡ್ಡ ಗೂಳಿಯಿಂದ ಹೊತ್ತು ನಿರ್ವಹಿಸ ತಕ್ಕಂಥ ಭಾರವನ್ನು ಹೊರುವದಕ್ಕೆ ಎಳೇ ಕರುವಿಗೆ ಹ್ಯಾಗೆ ಶಕ್ತಿ ಇಲ್ಲವೋ, ಹಾಗೆ ಮೂರು ಲೋಕಗಳ ಭಾರವನ್ನು ವಹಿಸ ತಕ್ಕವನಾಗಿರುವ ನೀನು ಧರಿಸ ತಕ್ಕ ಈ ಕೋಸಲ ರಾಜ್ಯದ ಭಾರವನ್ನು ನನಗೆ ವಹಿಸುವದಕ್ಕೆ ಬಲವಿಲ್ಲ. ಮತ್ತು ಕುದುರೆಯ ಹಾಗೆ ಕತ್ತೆಯೂ, ನವಿಲಿನ ಹಾಗೆ ಕಾಗೆಯೂ ಹ್ಯಾಗೆ ನಡೆಯಲಾರವೋ, ಹಾಗೆ ನಾನು ನಿನ್ನ ಹಾಗೆ ರಾಜ್ಯ ಪರಿಪಾಲನೆಯನ್ನು ಮಾಡಲಾರೆನು. ಸೂರ್ಯ ಚಂದ್ರರು ಎಷ್ಟು ದಿವಸ ಪರಿಯಂತರವು ಪ್ರಕಾಶಿಸುವರೋ, ಈ ಭೂಮಂಡಲವು ಎಷ್ಟು ದಿವಸ ಪರಿಯಂತರವಿರುವದೋ, ಅಷ್ಟು ದಿವಸ ಪರಿಯಂತರವು ಈ ಕೋಸಲ ರಾಜ್ಯ ಪರಿಪಾಲನೆಯನ್ನು ಮಾಡಿ

ಕೊಂಡು, ನಾನು ಮೊದಲಾದ ಸರ್ವರನ್ನು ಕಾಪಾಡಿ ಕೊಂಡು ಬಾ! ಎಂದು ಬಿನ್ನವಿಸಲು; ರಾಮನು ಆ ಮಾತಿಗೆ ಒಪ್ಪಿ ಕೊಂಡು, ದಿವ್ಯವಾದ ಆಸನದ ಮೇಲೆ ಕುಳಿತು ಕೊಂಡನು.

ಆ ಬಳಿಕ ಶತ್ರುಘ್ನನ ಅಪ್ಪಣೆಯ ಪ್ರಕಾರ ಜಾಣರಾದ ಜಡೇ ಬಿಡಿಸುವವರು ಬಂದು, ರಾಮನ ಸನ್ನಿಧಿಯಲ್ಲಿ ನಿಂತರು. ಮೊದಲು ಭರತನ ಜಡೆಯನ್ನೂ, ಆ ಹಿಂದೆ ಲಕ್ಷ್ಮಣನ ಜಡೆಯನ್ನೂ, ಆ ಬಳಿಕ ಶತ್ರುಘ್ನನ ಜಡೆಯನ್ನೂ, ರಾಮನ ಅಪ್ಪಣೆಯ ಪ್ರಕಾರ ಬಿಡಿಸಿ, ಅವರು ಮಂಗಳ ಸ್ನಾನವನ್ನು ಮಾಡಿದ ಬಳಿಕ, ಶ್ರೀ ರಾಮನು ತನ್ನ ಜಡೆಯನ್ನು ಬಿಡಿಸುವ ಹಾಗೆ ಅಪ್ಪಣೇ ಕೊಡಲು; ಆ ಜಡೆಯ ಬಿಡಿಸುವವರು ನವ ರತ್ನ ಖಚಿತವಾದ ಶಿಕ್ಕಟ್ಟಿಗೆ ಬಾಚಣಿಗೆಗಳಿಂದಲೂ, ತಮ್ಮ ತೀಕ್ಷ್ಣವಾದ ಉಗುರುಗಳಿಂದಲೂ, ನೋವಾಗದಂತೆ ಪರಿಮಳವಾದ ಎಣ್ಣೆಗಳನ್ನು ತೊಡೆದು, ಮೆಲ್ಲನೆ ಜಡೆಯನ್ನು ಬಿಡಿಸಿದ ಮೇಲೆ, ರಾಮನು ಮಂಗಳ ಸ್ನಾನವನ್ನು ಮಾಡಿದನು. ಅನಂತರ ಸುಗ್ರೀವಾದಿ ಕಪಿ ಸೇನಾ ಪತಿಗಳೂ, ವಿಭೀಷಣನೇ ಮೊದಲಾದ ಸರ್ವ ರಾಕ್ಷಸರೂ, ಮಂಗಳ ಸ್ನಾನವನ್ನು ಮಾಡಿ, ವಸ್ತ್ರಾಭರಣ ಭೂಷಿತರಾದರು.

ಅಷ್ಟರಲ್ಲಿಯೇ, ಪಡುವಣ ದಿಕ್ಕೆಂಬ ವನಿತೆಯು ಜಡೆಯನ್ನು ಬಿಡಿಸಿ ಕೊಂಡು, ಲೋಕಾಭಿರಾಮನಾಗಿರುವ ರಾಮನಿಗೆ ಮಂಗಳಾರತಿಯನ್ನು ಎತ್ತುವದಕ್ಕೆ ಕೈಯಲ್ಲಿ ಧರಿಸಿ ಕೊಂಡಿರುವ ಮಾಣಿಕದ ಹರಿವಾಣವೋ? ಎಂಬಂತೆ ಸಂಧ್ಯಾ ರಾಗದಿಂದ ಕೆಂಪಾಗಿರುವ ಸೂರ್ಯ ಮಂಡಲವು ಅಸ್ತ ಗಿರಿಯ ಶಿಖರದಲ್ಲಿ ಪ್ರಕಾಶಿಸಿತು. ಕೂಡಲೆ ರಾತ್ರೆ ಎಂಬ ರಮಣಿಯು ಗಂಡನಾದ ಚಂದ್ರನನ್ನು ಕೂಡುವದಕ್ಕೆ ಕುಸುಂಬೆಯ ಬಣ್ಣದ ಶೀರೆಯನ್ನು ಉಟ್ಟಿರುವಳೋ? ಎಂಬ ಹಾಗೆ ಸಂಜೆ ಗೆಂಪು ಶೋಭಿಸಿತು. ಮತ್ತು ಆಕೆಯು ಧರಿಸಿದ ಮಲ್ಲಿಗೆಯ ಹೂವುಗಳೋ? ಎಂಬ ಹಾಗೆ ನಕ್ಷತ್ರಗಳು ಕಾಣಿಸಿದವು. ಗಾಢಾಂಧಕಾರವು—ನನ್ನನ್ನು ಆಶ್ರೈಸಿ, ಸಂಚರಿಸುವ ತಮುಚ್ಚರರನ್ನು ಈ ರಾಘವನು ಕೊಂದು ಹಾಕಿದನು. ಆದ್ದರಿಂದ ಈತನ ದೇಶವನ್ನು ಮುತ್ತಿ ಕೊಂಡು, ಮೋಹಿಸುವೆನು ಎಂದು, ಮುತ್ತಿ ಕೊಂಡಿತೋ? ಎಂಬ ಹಾಗೆ ಇತ್ತು.—ಇಂದ್ರಾದಿಗಳನ್ನು ಜೈಸಿದ ನನ್ನೊಡನೆ ಬುದ್ಧಿ ಇಲ್ಲದೆ ಈ ಅಂಧಕಾರವು ಶೆಣಸುವದಲ್ಲಾ! ಎಂದು, ರಾಮನು ನಕ್ಕದ್ದರಿಂದ ಆ ನಗುವಿನ ಕಾಂತಿಯೋ? ಎಂಬ ಹಾಗೆ ಬೆಳದಿಂಗಳು ಅಂಧಕಾರವನ್ನು ಕೆಡಿಸಿ, ಪ್ರಕಾಶಿಸಿತು. ಶ್ರೀ ರಾಮಚಂದ್ರನ ಮುಖ ಕಾಂತಿಯನ್ನು ಕುಡಿದು, ಸಂತೋಷ ಪಟ್ಟ ಅಯೋಧ್ಯಾ ಪುರ ವಾಸಿಗಳ ಕ

ಣ್ಣುಗಳ ಹಾಗೆ, ಚಕೋರ ಪಕ್ಷಿಗಳು ಬೆಳದಿಂಗಳನ್ನು ಕುಡಿದು, ಸಂತೋಷ ಪಟ್ಟವು. ಪೂರ್ವ ದಿಗ್ವನಿತೆಯು ಕೈಯಲ್ಲಿ ಹಿಡಿದ ಸ್ಫಟಿಕ ದರ್ಪಣವೋ? ಎಂಬ ಹಾಗೆ ಉದಯ ಗಿರಿಯಲ್ಲಿ ಚಂದ್ರ ಮಂಡಲವು ಚನ್ನಾಗಿ ಕಾಣಿಸಿತು. ಗುರು ಪತ್ನಿಯೊಡನೆ ಕೂಡಿ, ಕಳಂಕಿಯಾದ ಈ ದೋಷಾಕರನನ್ನು ನೋಡ ಬಾರದು ಎಂದು, ಕಣ್ಣುಗಳನ್ನು ಮುಚ್ಚಿ ಕೊಂಡವೋ? ಎಂಬ ಹಾಗೆ ಪದ್ಮಿನಿಗಳು ತಮ್ಮ ಹೂವುಗಳನ್ನು ಮುಚ್ಚಿ ಕೊಂಡವು. ತಾನು ಸೂರ್ಯನಿಗೆ ಹೆಂಡತಿಯಾಗಿ, ಮದ್ಯ ಪಾಯಿಗಳೊಡನೆ ಯಾವಾಗಲೂ ಇರುತ್ತ, ತನ್ನ ದೋಷವನ್ನು ಮರೆತು, ಅನ್ಯರ ದೋಷವನ್ನು ಎಣಿಸುವದು ಬಹಳ ಆಶ್ಚರ್ಯವೆಂದು ನಗುತ್ತದೋ? ಎಂಬ ಹಾಗೆ, ಕುಮುದಿನಿಗಳು ಅರಳಿದವು. ರಾಘವನು ಕೊಂದ ರಾಕ್ಷಸರ ಮಡದಿಗಳ ಹಾಗೆ ಚಕ್ರವಾಕಿಗಳು ತಮ್ಮ ಗಂಡಂದಿರನ್ನು ಕಾಣದೆ, ವಿರಹದಿಂದ ಕೊರಗುತ್ತಿದ್ದವು. ಆಗ ಶ್ರೀ ರಾಮನು ಇಷ್ಟ ಬಂಧುಗಳೊಡನೆ ದಿವ್ಯ ಭೋಜನಾದಿಗಳನ್ನು ಮಾಡಿ, ಸೆಜ್ಜೇ ಮನೆಯಲ್ಲಿ ಸುಪ್ಪತ್ತಿಗೆಗಳಿಂದಲೂ, ಶಾಲು ಸಕಲಾತಿಗಳಿಂದಲೂ, ಕೂಡಿರುವ ರತ್ನದ ಮಂಚದ ಮೇಲೆ ಸೀತೆಯೊಡನೆ ಸುಖವಾಗಿ ಮಲಗಿದನು.

ಆ ಬಳಿಕ—ಲೋಕಾಭಿರಾಮನಾದ ಶ್ರೀ ರಾಮನಿಗೆ ಈ ದಿವಸ ಪಟ್ಟಾಭಿಷೇಕ ಮಹೋತ್ಸವ ಬೆಳೆಯುತ್ತದೆ; ಮೂರು ಲೋಕದವರು ನೋಡ ಬನ್ನಿ ಎಂದು ಸಾರುತ್ತವೋ? ಎಂಬ ಹಾಗೆ ಮುಂಗೋಳಿಗಳು, ಕೊಕೊಕೋ ಎಂದು, ಮೂರು ಲೋಕವು ಕೇಳುವ ಹಾಗೆ ಮೂರು ಸಾರಿ ಕೂಗುತ್ತಿದ್ದವು. ಇದು ನಿಜವೋ? ಸುಳ್ಳೋ? ಎಂಬದಾಗಿ, ವಿಚಾರಿಸಿ ಕೊಂಡು ಬಾ, ಎಂದು, ದೇವೇಂದ್ರನು ಅಪ್ಪಣೇ ಕೊಡಲು; ನಂದನ ವನದಿಂದ ಹೊರಟು, ದೇವ ಗಂಗೆಯನ್ನು ಹಾದು, ಕೈಲಾಸ ಮಾರ್ಗವಾಗಿ ಬರುವಲ್ಲಿ, ಶಿವನ ಭೂಷಣವಾದ ಹಾವುಗಳು ತನ್ನನ್ನು ನುಂಗುತ್ತಿರಲು; ತಪ್ಪಿಸಿ ಕೊಂಡು, ಸೂಕ್ಷ್ಮ ದೇಹದಿಂದ ಅಯೋಧ್ಯೆಗೆ ಬಂದು, ತಿರುಗಾಡುತ್ತ, ವಿಚಾರಿಸುವದೋ? ಎಂಬ ಹಾಗೆ ಮುಂಝಾವದ ಚಿಕ್ಕ ಘಾಳಿಯು ಪ್ರಕಾಶಿಸಿತು. ಕೋಳಿಗಳ ಕೂಗನ್ನು ಕೇಳಿ,—ನನ್ನ ಕುಲೋದ್ಧಾರಕನಾದ ರಾಮ ಚಂದ್ರನ ಪಟ್ಟಾಭಿಷೇಕ ಮಹೋತ್ಸವವನ್ನು, ಉದ್ದವಾದ ಸ್ಥಳದಲ್ಲಿ ಇದ್ದು ಕೊಂಡು, ನೋಡ ಬೇಕೆಂಬ ಆಶೆಯಿಂದ ಸೂರ್ಯನು ಉದಯ ಗಿರಿಯ ಶಿಖರವನ್ನು ಹತ್ತಿದನು. ಪಟ್ಟಾಭಿಷಿಕ್ತನಾದ ಗಂಡನಾದ ರಾಮನನ್ನು ನೋಡಿ, ಸೀತೆಯ ಕಣ್ಣುಗಳು ಹೀಗೆ ಅರಳುತ್ತವೆ ಎಂದು ತೋರಿಸುವವೋ? ಎಂಬ ಹಾಗೆ ಪದ್ಮಿನಿಗಳು ತಮ್ಮ ಹೂವುಗಳನ್ನು ಅರಳಿಸಿದವು.

ಪೂರ್ವ ದಿಕ್ಕಿನಲ್ಲಿ ಕೆಂಪಾದ ಸೂರ್ಯನೂ, ಪಶ್ಚಿಮ ದಿಕ್ಕಿನಲ್ಲಿ ಬಿಳುಪಾಗಿರುವ ಚಂದ್ರನೂ, ಈ ಎರಡು, ದಿಗ್ವನಿತೆಗಳು ಲೀಲೆಯಿಂದ ಆಡುವದಕ್ಕೆ ಧರಿಸಿರುವ ಮಾಣಿಕದ ಮುತ್ತಿನ ಚಂಡುಗಳೋ? ಎಂಬ ಹಾಗೆ ಪ್ರಕಾಶಿಸಿದವು.

ಇಂಥ ಸೂರ್ಯೋದಯ ಕಾಲದಲ್ಲಿ ಮಂಗಳ ವಾದ್ಯ ಧ್ವನಿಗಳಿಂದಲೂ, ಭಟ್ಟಗಳ ಜಯ ಶಬ್ದದಿಂದಲೂ, ರಾಘವನು ಹಾಸಿಗೆಯಿಂದ ಎದ್ದು, ನಿತ್ಯ ಕರ್ಮಾದಿಗಳನ್ನು ನೆರವೇರಿಸಿ, ತಮ್ಮಂದಿರು ಮೊದಲಾದ ಸರ್ವರೊಡನೆ ಕೂಡಿ, ಭರತನ ಓಲಗದ ಚಾವಡಿಗೆ ಬಂದು, ದಿವ್ಯಾಸನದ ಮೇಲೆ ಕುಳಿತು ಕೊಳ್ಳಲು; ಭರತನು ಎದ್ದು, ಸಾಷ್ಟಾಂಗವಾಗಿ ನಮಸ್ಕರಿಸಿ, ಕೈಗಳನ್ನು ಮುಗಿದು, ನಿಂತು ಕೊಂಡು,—ಎಲೈ, ಶ್ರೀ ರಾಮಚಂದ್ರನೇ, ನನ್ನ ವಶಕ್ಕೆ ನೀನು ಅಯೋಧ್ಯೆಯ ಸಾಂಬ್ರಾಜ್ಯವನ್ನು ಕೊಟ್ಟು, ವನಕ್ಕೆ ತೆರಳಿದಾಗ ಇದ್ದ ಲೆಖ್ಖಕ್ಕೂ ಈಗ ಇರುವ ಲೆಖ್ಖಕ್ಕೂ ಹತ್ತು ಮಡಿಯು ಹೆಚ್ಚಾಗಿದೆ. ಇಗೋ, ಬೊಕ್ಕಸದ, ಉಗ್ರಾಣದ, ಚತುರಂಗ ಬಲದ, ರಾಜ್ಯದ, ಕರಣಿಕರುಗಳೆಲ್ಲಾ ಆದಾಯ, ವೆಚ್ಚ, ನಿಲುವುಗಳ ಲೆಖ್ಖಗಳನ್ನು ತೆಗೆದು ಕೊಂಡು, ಕಾದಿದ್ದಾರೆ. ವಿಚಾರಿಸ ಬಹುದು ಎಂದು ಬಿನ್ನವಿಸಲು; ಶ್ರೀ ರಾಮನು ಅವರನ್ನು ಬೇರೆ ಬೇರೆಯಾಗಿ ಕರಿಸಿ, ತಾನು ಮೊದಲು ಹೋದಾಗ್ಯೆ ಇದ್ದ ನಿಲುವುಗಳು ಇಷ್ಟು, ಈಚೆಗೆ ಭರತನು ಮಾಡಿಸಿದ ಆದಾಯವಿಷ್ಟು, ಅಂತು ಮೊತ್ತಕ್ಕೆ ಈ ದಿವಸದ ವರಿಗೆ ವೆಚ್ಚವಾದ್ದು ಹೋಗಲಾಗಿ, ನಿಂತ ನಿಲುವನ್ನು ವಿಚಾರಿಸುವಲ್ಲಿ, ಸಕಲದರಲ್ಲಿಯೂ, ಭರತ ಹೇಳಿದಂತೆ ಹತ್ತು ಮಡಿ ಹೆಚ್ಚಾಗಿರಲು; ಭರತನನ್ನು ಬಾಚಿ, ತಬ್ಬಿ ಕೊಂಡು, ಆತನ ರಾಜ್ಯ ಭಾರದ ಜಾಣತನಕ್ಕೆ ಬಹಳವಾಗಿ ಮೆಚ್ಚಿ, ಕೊಂಡಾಡಿದನು. ಆಗ ಸುಮಂತ್ರನು ರಥವನ್ನು ಸಿದ್ಧಾ ಮಾಡಿ ಕೊಂಡು, ಬಂದು, ನಿಲ್ಲಲು; ಶ್ರೀರಾಮನು ಸುಗ್ರೀವನನ್ನು ಆನೆಯ ಅಂಬಾರಿಯ ಮೇಲೆ ಕುಳ್ಳಿರಿಸಿ, ಮಿಕ್ಕ ಕಪಿ ಸೇನೆಗಳು ಏರುವದಕ್ಕೆ ಅನೇಕ ಗಜಗಳನ್ನು ತರಿಸಲು; ಕಪಿಗಳು ಆನೆಗಳ ಕೊಂಬುಗಳ ಮೇಲೆಯೂ, ಕುಂಭ ಸ್ಥಳಗಳ ಮೇಲೆಯೂ, ಬೆನ್ನುಗಳ ಮೇಲೆಯೂ, ಕುಳಿತು ಕೊಂಡು, ಹೊರಟವು. ಅದನ್ನು ನೋಡಿ, ಸಂತೋಷ ಪಟ್ಟು, ಶ್ರೀ ರಾಮಚಂದ್ರನು ಸೀತಾ ಸಮೇತನಾಗಿ ರಥಾರೂಢನಾಗಲು; ಭರತನು ಕುದುರೆಗಳ ಕಡಿವಾಣಗಳನ್ನು ಹಿಡಿದು ಕೊಂಡು, ಸಾರಥಿಯ ಕೆಲಸವನ್ನು ಮಾಡಿದನು. ಶರಣಾಗತನಾದ ವಿಭೀಷಣನು ಬೆಳ್ಗೊಡೆಯನ್ನು ಹಿಡಿದನು. ಲಕ್ಷ್ಮಣ ಶತ್ರುಘ್ನರು ಚಾಮರಗಳನ್ನು ಬೀಸಿದರು. ಕೌಸಲ್ಯಾದಿ ರಾಣೀ

ವಾಸಗಳು ಅಂದಣಗಳನ್ನು ಏರಿ ಕೊಂಡು, ಅನ್ವೇರುಗಳು ಸಹಿತವಾಗಿ ಹೊರಟರು.

ಅತ್ತ ಅಯೋಧ್ಯಾ ಪಟ್ಟಣದಲ್ಲಿ ನಗರವನ್ನು ಶೃಂಗರಿಸುವದಕ್ಕೆ ಹೋಗಿದ್ದ ಶಿಲ್ಪಗಾರರು ನಂದಿಗ್ರಾಮದಿಂದ ಹಿಡಿದು, ಅಯೋಧ್ಯೆಯ ವರಿಗೂ ದಾರಿಗಳಲ್ಲಿ ಹಳ್ಳವಾದ ಬಳಗೆ ತಿಟ್ಟುಗಳಿಂದ ಮಣ್ಣು ಅಗಿದು, ತುಂಬಿ, ನೀರು ಇಲ್ಲದ ಬಳಿಯಲ್ಲಿ ಚಿಲುಮೆಗಳನ್ನು ಕಲ್ಪಿಸಿ, ಅವುಗಳಿಗೆ ಕಾರಂಜಿಗಳಿಂದ ನೀರನ್ನು ತಂದು, ತುಂಬಿಸಿ, ನೆಳಲು ಇಲ್ಲದ ಕಡೆಗಳಲ್ಲಿ ನೆಳಲನ್ನು ಮಾಡಿ, ಅಲ್ಲಲ್ಲಿಗೆ ಅರವಟ್ಟಿಗೆಗಳನ್ನು ಮಾಡಿ, ಅಯೋಧ್ಯಾ ಪಟ್ಟಣಕ್ಕೆ ಹೋಗಿ, ಶ್ರೀ ರಾಮನು ವನಕ್ಕೆ ಹೋದಾರಭ್ಯ ಆ ಅಯೋಧ್ಯೆಯ ಜನರೆಲ್ಲಾ ಊರು ಬಿಟ್ಟು ಬೇರೂರಿಗೆ ಹೋದ್ದರಿಂದ, ನಗರವು ಹಾಳಾಗಿ, ಯಾವ ಮನೆಯಲ್ಲಿ ನೋಡಿದರೂ, ಹೆಗ್ಗಣಗಳು ತೋಡಿದ ಮಣ್ಣಿನ ಗುಡ್ಡೆಗಳೂ, ದರುಗಳೂ, ಗೆದ್ದಲು ಹತ್ತಿದ ಕಂಭ, ಗಡಿಗೆ, ಚಕ್ರ, ಬೋದಿಗೆ, ತೊಲೆ, ಮುಂಡಿಗೆಯ ಸರಗಳೂ, ಬಿದ್ದ ಗೋಡೆಗಳೂ, ಸುರಿದ ಹಂಚುಗಳೂ, ಸಡಿಲಿದ ಹಂಜರಗಳೂ, ಮುರಿದ ಗಳುವುಗಳೂ, ಕಿತ್ತ ಹಂಬುಗಳೂ, ಒಡೆದ ಮಡಿಕೆಗಳೂ, ಓಡ್ಯಾಡುವ ಬೆಕ್ಕುಗಳೂ, ಕಿಇಪಿಇ ಎಂದು ಕೂಗುವ ಇಲಿಗಳೂ, ಮೂಗಿಲಿಗಳೂ, ಸುಂಡಗಳೂ, ತುಂಬಿರುವ ತಿಗಣೆಗಳೂ, ಹಾಡುವ ಸೊಳ್ಳೆಗಳೂ, ಹಾರುವ ಚಿಗಟಗಳೂ, ಇಲಿಗಳ ಬಿಲಗಳಲ್ಲಿ ಹೊಗುವ ಹಾವುಗಳೂ, ಘೂತ್ಕಾರವನ್ನು ಮಾಡುವ ಗೂಬೆಗಳೂ, ಬೊಗುಳುವ ಗುಳ್ಳೇ ನರಿಗಳೂ, ಬಾಯಿಗಳಿಂದ ರಕ್ತಗಳನ್ನು ಸುರಿಸುತ್ತ ಕೂಗುವ ಹಂದಿಕೀರಗಳೂ, ಇನ್ನು ಹಂದಿ, ನಾಯಿ, ನರಿ, ಮೊದಲಾದ ಮೃಗಗಳಿಂದಲೂ, ಕೂಡಿರುವದನ್ನು ನೋಡಿ, ಬಹಳ ವ್ಯಸನ ಪಟ್ಟು, ಜಾಗ್ರತೆಯಾಗಿ ಪಟ್ಟಣದ ಮನೆಗಳನ್ನೆಲ್ಲಾ ಪರಿಶುದ್ಧಾ ಮಾಡಿ, ಸಕಲ ಮನೆಗಳನ್ನು ತೋರಣಾದಿಗಳಿಂದ ಅಲಂಕರಿಸಿ, ಅರಮನೆಗಳನ್ನೆಲ್ಲಾ ಶೃಂಗರಿಸಿ,—ವಿಶ್ವಕರ್ಮ ನಿರ್ಮಿತವಾದ ಹೊಸ ಅಯೋಧ್ಯೆಯೋ? ಎಂಬ ಹಾಗೆ ಮಾಡುತ್ತಿಹಲು; ರಾಮನು ತಿರಿಗಿ ಅಯೋಧ್ಯೆಗೆ ಬರುವ ವರ್ತಮಾನವನ್ನು ಕೇಳಿ, ಮೊದಲು ಓಡಿ ಹೋಗಿದ್ದವರೆಲ್ಲಾ ಬೇಗನೆ ಬಂದು, ತಮ್ಮ ತಮ್ಮ ಮನೆಗಳನ್ನು ಶೇರಿ ಕೊಂಡರು. ಆಗ ಈ ಶಿಲ್ಪಗಾರರೂ, ಪುರದವರೂ, ಶ್ರೀರಾಮನ ಬರುವಿಕೆಯನ್ನು ನಿರೀಕ್ಷಿಸಿ ಕೊಂಡು ಇದ್ದರು.

ಶ್ರೀ ರಾಮಚಂದ್ರನು ಗೋ ಧೂಳೀ ಲಗ್ನದಲ್ಲಿ ಅಯೋಧ್ಯಾ ಪಟ್ಟಣವನ್ನು ಹೊಕ್ಕು, ತನ್ನ ತಂದೆಯಾದ ದಶರಥ ರಾಯನ ಮನೆಗೆ ಹೋಗಿ, ಇಳಿದು

ಕೊಂಡು, ಭರತನನ್ನು ನೋಡಿ,—ಎಲೈ, ಭರತನೇ, ನಮ್ಮ ಪ್ರಿಯ ಸಖನಾದ ಸುಗ್ರೀವನು ನಮಗೆ ಪರಮೋಪಕಾರಿಯಾದ್ದರಿಂದ ಸೇನಾ ಸಮೇತನಾಗಿ ನೀನೇ ಕರೆದು ಕೊಂಡು ಹೋಗಿ, ನನ್ನ ಮೊದಲಿನರಮನೆಯಲ್ಲಿ ಇಳಿಸಿ, ಒಂದರಲ್ಲಿಯೂ ಕಡಿಮೆಯಾಗದಂತೆ ವಿಚಾರಿಸಿಕೋ, ಎಂದು ಅಪ್ಪಣೇ ಕೊಡಲು; ಭರತನು ಸುಗ್ರೀವನ ಬಳಿಗೆ ಬಂದು, ಆತನ ಕೈಯನ್ನು ಹಿಡಿದು ಕೊಂಡು, ಶ್ರೀ ರಾಮನ ಮೊದಲಿನರಮನೆಗೆ ಕರೆದು ಕೊಂಡು ಬಂದು, ಇಳಿಸಿ, ಸುಗ್ರೀವನನ್ನು ಕುರಿತು—ಎಲೈ, ಪ್ರಿಯ ಸಖನೇ, ನೀನು ನಮಗೆ ಮಾಡಿದ ಉಪಕಾರಕ್ಕೆ ನಾವು ಏನು ಪ್ರತಿ ಉಪಕಾರವನ್ನು ಮಾಡೇವು? ನೀನು, ನಾವು ನಾಲ್ವರು ಸಹೋದರರಲ್ಲಿ ಐದನೆಯವನಾದಿ ಎಂದು ಹೊಗಳಿ, ನಾಳೆ ಶ್ರೀ ರಾಮನ ಪಟ್ಟಾಭಿಷೇಕಕ್ಕೆ ಸಮುದ್ರೋದಕಗಳನ್ನೂ, ಗಂಗಾದಿ ಮಹಾ ನದಿಗಳ ಉದಕಗಳನ್ನೂ, ದಿವ್ಯೌಷಧಿ ರಸಗಳನ್ನೂ ತರುವದಕ್ಕೆ ಕಪಿ ವೀರರಿಗೆ ಕಟ್ಳೇ ಮಾಡು, ಎಂದು ಹೇಳಲು; ಆ ಕ್ಷಣದಲ್ಲಿಯೇ ಸುಗ್ರೀವನು ಜಾಂಬವಂತನನ್ನು ಮೂಡಣ ಸಮುದ್ರಕ್ಕೆ, ವೇಗದರ್ಶಿಯನ್ನು ಪಡುವಣ ಕಡಲಿಗೆ, ವೃಷಭನನ್ನು ತೆಂಕಣ ಕಡಲಿಗೆ, ಹನುಮಂತನನ್ನು, ಬಡಗಣ ಕಡಲಿಗೆ,—ಹೋಗಿ, ಸಮುದ್ರದ ಉದಕಗಳನ್ನೂ, ನದೀ ಉದಕಗಳನ್ನೂ, ಔಷಧೀ ರಸಗಳನ್ನೂ, ಈ ರಾತ್ರೆ ಬೆಳಗಾಗುವಷ್ಟರಲ್ಲಿಯೇ ತೆಗೆದು ಕೊಂಡು ಬರಬೇಕೆಂದು ನೇಮಿಸಿ, ರತ್ನ ಖಚಿತವಾದ ಸುವರ್ಣದ ಕೊಡಪಾನಗಳನ್ನು ಅವರಿಗೆ ಕೊಟ್ಟು, ಕಳುಹಿಸಿದನು. ಅವರು ಅದೇ ಪ್ರಕಾರ ಆ ರಾತ್ರೆ ಎರಡು ಝಾವದ ಹೊತ್ತಿಗೆ ಸಮುದ್ರಾದಿ ಉದಕಗಳನ್ನು ತೆಗೆದು ಕೊಂಡು ಬಂದು, ಭರತನಿಗೆ ಒಪ್ಪಿಸಿದರು.

ಹಾಗೆ ಸೂರ್ಯೋದಯವಾಗಲು; ಕೌಸಲ್ಯಾ ದೇವಿಯು ತನ್ನ ಮಗನಾದ ಶ್ರೀ ರಾಮಚಂದ್ರನಿಗೆ ಪಟ್ಟಾಭಿಷೇಕ ಮಹೋತ್ಸವವು ತಡೆ ಇಲ್ಲದೆ ಬೆಳೆಯುವದಕ್ಕೋಸ್ಕರ ಅರಮನೆಯ ಹಜಾರವನ್ನು ಕಸ್ತೂರಿಯ ರಸದಿಂದ ಸಾರಿಸಿ, ಮುತ್ತಿನ ರಂಗೋಲೆಗಳನ್ನು ಇಕ್ಕಿಸಿ, ಹಸೇ ಜಗಲಿಯ ಮೇಲೆ ಹಸೆಯನ್ನು ಬರಿಸಿ, ನವ ರತ್ನ ಖಚಿತವಾದ ಹಸೇ ಮಣೆಯನ್ನು ತಂದು, ಹಾಕಿಸಿ, ಅದರ ಮೇಲೆ ರತ್ನ ಗಂಬಳಿಯನ್ನು ಹಾಸಿಸಿ, ಅದರ ಮುಂದು ಗಡೆಯಲ್ಲಿ ಎರಡು ಬೀಸುವ ಕಲ್ಲುಗಳನ್ನು ಅಲಂಕರಿಸಿ, ಎರಡು ಒನಿಕೆಗಳನ್ನು ಶೃಂಗರಿಸಿ, ಇರಿಸಿ, ಅದರ ನಾಲ್ಕು ಕಡೆಯಲ್ಲಿಯೂ ಸಗಣಿಯ ಉಂಡೆಯಿಂದ ಬೆನಕಗಳನ್ನು ಮಾಡಿಸಿ, ಅವುಗಳ ತುದಿಯಲ್ಲಿ ಗರಿಕೇ ಹುಲ್ಲುಗಳನ್ನು ಶಿಕ್ಕಿಸಿ, ಇಡಿಸಿ, ಒಂದು ಪರಾತದಲ್ಲಿ ಬಿಡಿ ಹೂವುಗಳನ್ನೂ, ಮತ್ತೊಂದರಲ್ಲಿ ಎಲೆ, ಅಡಿಕೆ, ತೆಂಗಿನ ಕಾಯಿ, ಬಾಳೇ ಹಣ್ಣು

ಗಳನ್ನೂ, ಒಂದು ತಟ್ಟೆಯಲ್ಲಿ ಮಂತ್ರಾಕ್ಷತೆಗಳನ್ನೂ, ಮತ್ತೊಂದು ಹರಿವಾಣದ
ಲ್ಲಿ ಅರಿಸಿನದ ಪುಡಿಯನ್ನೂ, ಇನ್ನೊಂದು ತಾಂಬಾಣದಲ್ಲಿ ಗೋಧೀ ಹಿಟ್ಟನ್ನೂ,
ಬೇರೊಂದು ಬಟ್ಟಲಲ್ಲಿ ದಿವ್ಯ ಗಂಧವನ್ನೂ, ನವ ರತ್ನ ಖಚಿತವಾದ ಕಿಣ್ಣದಲ್ಲಿ
ದಿವ್ಯ ಪರಿಮಳವಾದ ಎಣ್ಣೆಯನ್ನೂ ಇರಿಸಿ, ಊರಲ್ಲಿರುವ ಮುತ್ತೈದೆಯರಾ
ದ ವೃದ್ಧ ಸ್ತ್ರೀಯರನ್ನೆಲ್ಲಾ ಅವ್ವೇರುಗಳನ್ನು ಕಳುಹಿಸಿ, ಕರಿಸಿ ಕೊಂಡು,—
ಸೀತಾ ರಾಮರನ್ನು ಹಸೇ ಮಣೆಯ ಮೇಲೆ ಕೂರಿಸಿ, ಓಲಗ, ತಾಳ, ಮೇಳ
ಮುಂತಾದ ಸಂಭ್ರಮದಿಂದ ಅವರಿಗೆ ಎಣ್ಣೇ ಶಾಸ್ತ್ರಗಳನ್ನು ಬೆಳಸಿರಿ ಎಂದು,
ಮುದುಕರಾದ ಮುತ್ತೈದೆಯರಿಗೆ ಹೇಳಿದಳು. ಆಗ ಕುಲದ ಸಂಪ್ರದಾಯ
ಗಳನ್ನು ತಿಳಿದಂಥ ಐದು ಜನ ವೃದ್ಧ ಸುವಾಸಿನಿಗಳು ಬಂದು, ಅಲ್ಲಿ ಇಟ್ಟು ಇ
ದ್ದ ಸಗಣೀ ಬೆನಕಗಳನ್ನು ಗಂಧ ಪುಷ್ಪಾಕ್ಷತೆಗಳಿಂದ ಪೂಜಿಸಿ, ತೆಂಗಿನ ಕಾಯಿ
ಯನ್ನು ಒಡೆದು, ಆ ಹೋಳುಗಳನ್ನೂ ಬಾಳೇ ಹಣ್ಣುಗಳನ್ನೂ ಎಲೆ ಅಡಿಕೆಗ
ಳನ್ನೂ ನೈವೇದ್ಯಾ ಮಾಡಿ,—ಸ್ವಾಮೀ, ಬೆನಕನೇ, ನಮ್ಮ ರಾಮಚಂದ್ರನಿಗೆ
ಪಟ್ಟಾಭಿಷೇಕ ಮಹೋತ್ಸವವು ತಡೆ ಇಲ್ಲದೆ ಬೆಳೆಯುವಂತೆ ನೀನು ದಯ ಮಾ
ಡು, ಎಂದು ಬೇಡಿ ಕೊಂಡು, ಆ ಬೆನಕಗಳನ್ನು ಬಲಗೊಂಡು, ನಮಸ್ಕರಿಸಿ, ಇ
ಬ್ಬರು ಕೈಯಲ್ಲಿ ಒನಿಕೆಗಳನ್ನು ತೆಗೆದು ಕೊಂಡು, ಸುವ್ವೀ ಪದಗಳನ್ನು ಹಾಡು
ತ್ತಾ, ಅರಿಸಿನವನ್ನು ಕುಟ್ಟಿ, ಆ ಬಳಿಕ ಗೋಧೀ ಕಲ್ಲುಗಳಿಗೆ ಗೋಧೀ ಹಿಟ್ಟ
ನ್ನು ಹಾಕಿ, ಬೀಸುವ ಪದಗಳನ್ನು ಹೇಳುತ್ತಾ, ಬೀಸಿ, ತರುವಾಯ ಇಬ್ಬರು
ಮುತ್ತೈದೆಯರು ಸೀತಾ ರಾಮರಿಗೆ ಆಶೀರ್ವಾದವನ್ನು ಮಾಡಿ, ಸೀತೆಗೆ ಒಬ್ಬ
ಳು, ರಾಮನಿಗೆ ಒಬ್ಬಳು, ಚಿನ್ನದ ಬಟ್ಟಲಲ್ಲಿರುವ ಪರಿಮಳದ ಎಣ್ಣೆಯನ್ನು,
ಒತ್ತಿ, ಆರತಿಗಳೆತ್ತಿದರು.

ಆ ಮೇಲೆ ಕೌಸಲ್ಯಾ ದೇವಿಯು ಅವರನ್ನೆಲ್ಲಾ ಅರಿಸಿನ, ಗಂಧ, ಹೂವು,
ಕುಂಕುಮ, ಹಣ್ಣು, ಕಾಯಿ, ದಕ್ಷಿಣೆ, ತಾಂಬೂಲಗಳಿಂದ ಸತ್ಕರಿಸಿ, ಆ ಮು
ತ್ತೈದೆಯರನ್ನು ಅವರವರ ಮನೆಗೆ ಕಳುಹಿಸಿ ಕೊಟ್ಟು, ತರುವಾಯ ಅವ್ವೇ
ರುಗಳನ್ನು ಕುರಿತು—ಸೀತಾ ರಾಮರಿಗೆ ಮಂಗಳ ಮಜ್ಜನವನ್ನು ಮಾಡಿಸಿ, ವ
ಸ್ತ್ರಾಭರಣಗಳಿಂದ ಅಲಂಕರಿಸಿರಿ, ಎಂದು ಅಪ್ಪಣೆ ಕೊಟ್ಟಳು. ಆ ಬಳಿಕ ಜಾ
ಣರೂ ಹಿರಿಯರೂ ಆಗಿರುವ ಅವ್ವೇರುಗಳು ಸೀತಾ ರಾಮರನ್ನು ಮಜ್ಜನದ
ಮನೆಗೆ ಬಿಜಯ ಮಾಡಿಸಿ, ಸ್ಫಟಿಕದ ಕಲ್ಲುಗಳಿಂದ ಮಾಡಿರುವ ಬಚ್ಚಲಲ್ಲಿ ಚಂ
ದ್ರಕಾಂತ ಶಿಲಾ ಮಯವಾಗಿರುವ ಕಾಲು ಮಣೆಗಳ ಮೇಲೆ ಕೂರಿಸಿ, ನವ ರತ್ನ
ಖಚಿತವಾದ ಕರಗಗಳಿಂದ ಬಹಳ ಬಿಸಿಯೂ ಬಹಳ ತಣ್ಣಗೂ ಆಗದೆ ಇರು

ವ ಪರಿಮಳೋದಕವನ್ನು ಎರೆದು, ಅರಿಸಿನ ಮೊದಲಾದ ಅಂಗ ರಾಗಗಳನ್ನು ತೊಡೆದು, ಮತ್ತೆ ಮಂಗಳ ಸ್ನಾನವನ್ನು ಮಾಡಿಸಿ, ದಿವ್ಯವಾದ ಒಣಗಿದ ಬಿಳೀ ವಸ್ತ್ರಗಳಿಂದ ಮೈಗಳ ನೀರನ್ನೆಲ್ಲಾ ಒರಿಸಿ, ರಾಮನಿಗೆ ದಿವ್ಯ ಪೀತಾಂಬರಗಳನ್ನು ಉಡಿಸಿ, ಹೊದಿಸಿ, ಕಿರೀಟ, ಕುಂಡಲ, ಭಾಪುರಿ, ಕಡಗ, ಉಂಗುರ, ಉಡುಧಾರ, ಹಾರ ಮೊದಲಾದ ಆಭರಣಗಳನ್ನು ತೊಡಿಸಿ, ದಿವ್ಯ ಗಂಧ ಮಾಲಿಕೆಗಳಿಂದ ಅಲಂಕರಿಸಿ, ಹಜಾರದಲ್ಲಿ ನವ ರತ್ನ ಖಚಿತವಾದ ಮಂಚದ ಮೇಲೆ ಕೂರಿಸಿ, ತರುವಾಯ ಸೀತೆಯನ್ನು ಅಲಂಕರಿಸಲಾರಂಭಿಸಿದರು.

ಅದರಲ್ಲಿ ಒಬ್ಬ ಜಾಣಳು ಸೀತೆಯ ಅಂದ ಚಂದಗಳನ್ನು ನೋಡಿ—ಎಲೈ, ಅಕ್ಕಂದಿರಾ, ಲೋಕದ ಸಾಧಾರಣವಾದ ಹೆಂಗಸರಿಗೆ ಒಡವೆಗಳನ್ನು ತೊಡಿಸಿದರೆ, ಅವುಗಳಿಂದ ಅವರಿಗೆ ಒಂದು ಚೆಲುವು ಉಂಟಾಗುವದು. ಈ ಚೆಲುವಾದ ಸೀತೆಗೆ ಒಡವೆಗಳನ್ನು ಇಟ್ಟರೆ, ಈಕೆಯ ರೂಪು ಲಾವಣ್ಯಗಳಿಂದ ಆ ಒಡವೆಗಳಿಗೆ ಚೆಲುವು ಉಂಟಾಗುವದೇ ಹೊರತು, ಇವಳಿಗೇನೂ ಪ್ರಯೋಜನವಿಲ್ಲ, ಎನಲು; ಮತ್ತೊಬ್ಬಳು—ಎಲೇ, ತಂಗೀ, ನೀನು ಆಡಿದ ಮಾತು ನಿಜವೇ ಸರಿ. ಆದಾಗ್ಯೂ ಲೋಕದ ನಟಣೆಯ ಪ್ರಕಾರ ಮರ್ಯಾದೆಗಾದರೂ ತೊಡಿಸ ಬೇಕು ಎಂದು ಹೇಳಿ, ಸೀತೆಯ ಕಾಲು ಬೆರಳುಗಳಿಗೆ ವಜ್ರದ ಅಣಿಮೆಟ್ಟು, ಕಾಲುಂಗರ, ಬೊಬ್ಬುಳೀಕಾಯಿ, ಅಕ್ಕಿಪಿಲ್ಲಿ, ಕಿರು ಪಿಲ್ಲಿಗಳೆಂಬ ಒಡವೆಗಳನ್ನು ಇಕ್ಕಿದ್ದರಿಂದ, ಆ ಬೆರಳುಗಳ ಉಗುರಗಳ ಕಾಂತಿಯಿಂದ ಪರಾಜಿತವಾಗಿ ನಕ್ಷತ್ರಗಳು ಬಂದು ಸೇವಿಸುತ್ತವೋ? ಎಂಬ ಹಾಗೆ, ಆ ಬೆರಳೊಡವೆಗಳು ಹೊಳೆದವು. ಮತ್ತೊಬ್ಬಳು ಅರಗಿನ ರಸವನ್ನು ಬತ್ತಿಯಿಂದ ಅದ್ದಿ, ತೆಗೆದು, ಸೀತೆಯ ಕಾಲುಗಳನ್ನು ಶೃಂಗರಿಸಲು; ಆ ಅರಗಿನ ರಸದ ಕಾಂತಿ, ಇನ್ನು ಮೇಲೆ ಮತ್ತೊಬ್ಬಳು ಇಡುವ ಮಾಣಿಕದ ಕಾಲು ಕಡಗವೆಂಬ ಸೂರ್ಯನು ಹುಟ್ಟುವದಕ್ಕಿಂತ ಮುಂಚೆ ಕಾಣಿಸುವ ಪ್ರಾತಃಕಾಲದ ಸಂಜೆ ಗೆಂಪೋ? ಎಂಬ ಹಾಗೆ ಇತ್ತು. ಮತ್ತೊಬ್ಬಳು ಇಟ್ಟ ಕಾಲು ಕಡಗವೆಂಬ ಸೂರ್ಯನ ಪರಿವೇಷವೋ? ಎಂಬ ಹಾಗೆ, ಇನ್ನೊಬ್ಬಳು ಇಟ್ಟ ಚಿನ್ನದ ಉಳಿಯು ಪ್ರಕಾಶಿಸಿತು. ಬೇರೊಬ್ಬಳು ದಿವ್ಯವಾದ ಹೊಂಬಣ್ಣದ ಶೀರೆಯನ್ನು ಚನ್ನಾಗಿ ನೆರೀ ಹಿಡಿದು, ಕೈಯಲ್ಲಿ ತೆಗೆದು ಕೊಂಡು, ಸೀತೆಗೆ ಉಡಿಸುವದಕ್ಕೆ ಹೋಗಿ, ಆಕೆಯ ನಡುವನ್ನು ಕಾಣದೆ, ಸ್ವಲ್ಪ ಹೊತ್ತು ಸುಮ್ಮನೆ ನಿಂತು ಇದ್ದು, ಬಹಳ ಪ್ರಯಾಸದಿಂದ ನಡುವಿನ ಗುರುತು ಹಿಡಿದು, ಉಡಿಸಿದಳು. ಮತ್ತೊಬ್ಬಳು ಚಿನ್ನದ ನ್ಯಾವಣದಿಂದಲೂ ಕಿರು ಘಂಟೆಗಳಿಂದಲೂ ಕೂಡಿರುವ ನವ ರತ್ನ ಖಚಿತವಾದ ಒಡ್ಯಾಣವನ್ನು

ಇಟ್ಟಳು. ಒಬ್ಬಳು ಕೈ ಬೆರಳುಗಳಿಗೆ ಮುದ್ರೇ ಉಂಗುರಗಳನ್ನೂ, ಹಸ್ತಕ್ಕೆ ಕಡಗ, ಹಿಂಬಳೆ, ಚಳಕೆ ಮುಂತಾದ ಒಡವೆಗಳನ್ನೂ, ತೋಳಿಗೆ ನಾಗಮುರಿ, ಬಾಜೇಬಂದುಗಳನ್ನೂ, ಕೊರಳಿಗೆ ಕಂಠೀ ಸರ, ಕಡ್ಲೇ ಕಾಯಿ ಸರ, ಜರೀ ಸರ, ಮುತ್ತಿನ ಸರ, ಜೋಮಾಲೆ, ಅಡ್ಡಿಕೆ, ಬಂದಿ, ತಾಳಿಗಳನ್ನೂ, ಹಣೆಯಲ್ಲಿ ಮುತ್ತಿನ ಚುಟ್ಟಿಯನ್ನೂ, ಮೂಗಿನಲ್ಲಿ ಮೂಗುತಿಯನ್ನೂ, ನಡುತಲೆಯಲ್ಲಿ ಮಲಕು, ಗೊಂಡೇ ಧಾರಗಳನ್ನೂ, ಹಿಂದಲಿನಲ್ಲಿ ಜಡೇ ಭಂಗಾರಗಳನ್ನೂ ಇಟ್ಟು, ಶೃಂಗರಿಸಿದಳು. ಮತ್ತೊಬ್ಬಳು ದಿವ್ಯವಾದ ರತ್ನಗಳು ಕೆತ್ತಿರುವ ಕುಪ್ಪಸವನ್ನು ತೊಡಿಸಿದಳು.

ಈ ಪ್ರಕಾರವಾಗಿ ಶೃಂಗಾರವಾದ ಸೀತೆಗೆ ಆರತಿಯನ್ನು ಎತ್ತಿ, ಹಜಾರದಲ್ಲಿ ಕುಳಿತಿರುವ ರಾಮನ ಬಳಿಗೆ ಕರೆದು ಕೊಂಡು ಹೋಗಿ, ಅವನ ಬಲ ಗಡೆಯಲ್ಲಿ ಕೂರಿಸಿ, ಇಬ್ಬರಿಗೂ ಸೊಡರಾರತಿಗಳನ್ನು ಎತ್ತಿದರು. ಅಷ್ಟರಲ್ಲಿಯೇ, ವಶಿಷ್ಠರು ಬಂದು, ಸೀತಾ ರಾಮರನ್ನು ವೇದ ಘೋಷಗಳನ್ನು ಬ್ರಾಹ್ಮಣರ ಕಡೆಯಿಂದ ಮಾಡಿಸುತ್ತಾ, ಓಲಗದ ಚಾವಡಿಗೆ ಕರೆದು ಕೊಂಡು ಹೋಗಿ, ಕೂರಿಸಿದರು. ತರುವಾಯ ಒಳ್ಳೇ ಮುಹೂರ್ತದಲ್ಲಿ ವಶಿಷ್ಠಾದಿ ಎಂಟು ಜನ ಋಷಿಗಳು ಸೀತಾ ರಾಮರಿಗೆ ನಿರ್ಮಲವಾಗಿಯೂ ಪರಿಮಳ ಯುಕ್ತವಾಗಿಯೂ ಇರುವ ಉದಕದಿಂದ, ಅಷ್ಟ ವಸುಗಳು ಇಂದ್ರನನ್ನು ಹ್ಯಾಗೋ, ಹಾಗೆ ಅಭಿಷೇಕವನ್ನು ಮಾಡಿದರು. ಆ ಮೇಲೆ ಬ್ರಾಹ್ಮಣರೂ, ಮಂತ್ರಿಗಳೂ, ದಳವಾಯಿಗಳೂ, ಜ್ಞಾನ ವೃದ್ಧರೂ, ವಯೋ ವೃದ್ಧರೂ, ಮುಂತಾದ ಸರ್ವರೂ, ಸಮುದ್ರೋದಕದಿಂದಲೂ, ಗಂಗಾ ನದಿಯ ಮಹಾ ಜಲಗಳಿಂದಲೂ, ಅಖಿಳೌಷಧೀ ರಸಗಳಿಂದಲೂ, ಕ್ರಮವಾಗಿ ಅಭಿಷೇಕವನ್ನು ಮಾಡಿದರು. ಪೂರ್ವದಲ್ಲಿ ಬ್ರಹ್ಮ ದೇವನು ತಾನೇ ರತ್ನ ಮಯವಾದ ಕಿರೀಟವನ್ನು ನಿರ್ಮಿಸಿ, ರಘು ಕುಲಕ್ಕೆ ಮೊದಲನೇ ಪುರುಷನಾದ ವೈವಸ್ವತ ಮನುವಿಗೆ ಇಟ್ಟು ಇದ್ದ ಕಿರೀಟವನ್ನು ಪುರೋಹಿತ ವಶಿಷ್ಠರು ತಂದು, ರಾಮನ ತಲೆಗೆ ಇಟ್ಟರು. ಆಗ ಶತ್ರುಘ್ನನು ಶ್ವೇತ ಛತ್ರವನ್ನು ಹಿಡಿದನು. ಸುಗ್ರೀವ ವಿಭೀಷಣರು ಚಮರೀ ಮೃಗದ ಕೂದಲಿನ ಬಿಳೀ ಚೌರಿಗಳನ್ನು ಹಿಡಿದು ಕೊಂಡು, ಎರಡು ಕಡೆಯಲ್ಲಿಯೂ ಬೀಸುತ್ತಿದ್ದರು. ವಾಯುವು ಇಂದ್ರನಿಂದ ಪ್ರೇರಿತನಾಗಿ, ಒಂದು ದಿವ್ಯ ಮುತ್ತಿನ ಹಾರವನ್ನು ತಂದು, ಶ್ರೀರಾಮನ ಕೊರಳಿಗೆ ಹಾಕಿದನು. ದೇವ ಗಂಧರ್ವರು ಗಾನವನ್ನು ಮಾಡಿದರು. ಅಪ್ಸರ ಸ್ತ್ರೀಯರು ನರ್ತನವನ್ನು ಮಾಡಿದರು. ಆ ಮೇಲೆ ಶ್ರೀ ರಾಮನು ನಾಲ್ಕು ಜಾತಿಯವರಿಗೂ, ದೀನಾನಾಥರಿಗೂ, ಯಾಚಕಸ್ತ್ರರಿಗೂ, ಕುರುಡ್ಡರೇ ಮೊದಲಾದ ಅಂಗ ಹೀನರಿಗೂ, ಅನೇಕ ಧನ ಕನಕ ವಸ್ತ್ರ

ಭರಣಗಳನ್ನು ದಾನಾ ಮಾಡಿದನು. ಶ್ರೀ ರಾಮನು ಲಕ್ಷ್ಮಣನನ್ನು ನೋಡಿ—ಎಲೈ, ತಮ್ಮನೇ, ನೀನು ಹದಿನಾಲ್ಕು ವರುಷ ನನ್ನೊಡನೆ ಕಾಡಿನಲ್ಲಿ ಕಷ್ಟಪಟ್ಟೆ. ಈಗ ಯುವ ರಾಜ್ಯವನ್ನು ವಹಿಸಿ, ನನ್ನೊಡನೆ ಸುಖವಾಗಿ ಇರು ಎಂದು, ಎಷ್ಟು ವಿಧದಲ್ಲಿ ಒಡಂಬಡಿಸಿದಾಗ್ಯೂ, ಲಕ್ಷ್ಮಣನು ಒಪ್ಪದೆ—ನಿನ್ನ ಪಾದದ ಸೇವೆಯಲ್ಲಿ ಇರುವದೇ ನನಗೆ ಸ್ವರ್ಗ ಪದವಿಯು, ಎಂದು ಹೇಳಲು; ತರುವಾಯ ಭರತನಿಗೆ ಯುವ ರಾಜ್ಯ ಪಟ್ಟಾಭಿಷೇಕವನ್ನು ಮಾಡಿಸಿ, ಸುಗ್ರೀವ ಹನುಮ ಜಾಂಬವಂತಾದಿ ಕಪಿಗಳಿಗೂ, ವಿಭೀಷಣಾದಿ ರಾಕ್ಷಸರಿಗೂ, ಅವರವರ ಮನಸ್ಸಿನ ಅಪೇಕ್ಷೆ ಇದ್ದ ಹಾಗೆ ಪದಾರ್ಥಗಳನ್ನು ಕೊಟ್ಟು, ಮನ್ನಿಸಿ, ಕಳುಹಿಸಿ ಕೊಟ್ಟು, ತಮ್ಮಂದಿರೊಡನೆ ಕೂಡಿ, ಕೋಸಲ ರಾಜ್ಯ ಪರಿಪಾಲನೆಯನ್ನು ಧರ್ಮದಿಂದ ಮಾಡಿ ಕೊಂಡಿದ್ದನು.

ರಾಮನು ರಾಜ್ಯ ಪರಿಪಾಲನೆಯನ್ನು ಮಾಡುವ ಕಾಲದಲ್ಲಿ, ಆತನ ದೇಶದಲ್ಲಿ ಕಾಲಾನುಸಾರವಾಗಿ ಮುಗಿಲುಗಳು ಮಳೆಗಳನ್ನು ಕರೆಯುತ್ತಾ ಇದ್ದವು. ಭೂಮಿಯು ಸಕಲವಾದ ಬೆಳಸುಗಳಿಂದ ತುಂಬಿತ್ತು. ಧನಿಕರಿಂದ ದರಿದ್ರರಿಗೆ ಉಪದ್ರವಿಲ್ಲದೆ ಇತ್ತು. ನೆರೆಯುವರ ಐಶ್ವರ್ಯವನ್ನು ಕಂಡು, ಹಿಗ್ಗುವವರೇ ಹೊರ್ತು, ಒಬ್ಬರಾದರೂ ಹೊಟ್ಟೇಕಿಚ್ಚು ಪಡುವವರಿಲ್ಲ. ಮುದುಕರಾದವರು ಚಿಕ್ಕವರಿಗೆ ಪ್ರೇತ ಕಾರ್ಯವನ್ನು ಮಾಡಿದವರೇ ಇಲ್ಲ. ಉಂಡ ಮನೆಗೆ ಎರಡು ಬಗೆಯುವಂಥಾವರೂ, ಕೊಂಡ ಸಾಲ ಕೊಡದೆ ಇರುವವರೂ, ಭಂಡತನದಲ್ಲಿ ಬಾಳುವಂಥಾವರೂ, ಕಳ್ಳತನದಲ್ಲಿ ಕಂಡವರ ಮನೆಗೆ ಕನ್ನವಿಕ್ಕಿ, ಕಳುವವರೂ ಇಲ್ಲವೇ ಇಲ್ಲ. ಚನ್ನಾಗಿರುವವರನ್ನು ನೋಡಿ, ಚಾಡಿಗಳನ್ನು ಹೇಳಿ, ಒಡಿಸುವ ಚಾಡಿಕಾರರ ಹುಟ್ಟೇ ಇಲ್ಲ. ಸುಳ್ಳಾಡುವವರ ಸುಳಿವು ಕಾಣದೆ ಹೋಯಿತು. ಸರ್ವರು ಪರರ ದುಖ್ಖವನ್ನು ಸಹಿಸದೆ ಇರುವಂಥಾವರಾಗಿಯೂ, ಪರರಿಗೆ ವ್ಯಾಧಿ ವಿಡ್ಡೂರಗಳು ಬಂದಾಗ್ಯೆ, ತಮ್ಮ ತಮ್ಮ ಕೈಲಾದ ಮಟ್ಟಿಗೂ ಉಪಕಾರಾ ಮಾಡುವಂಥಾವರಾಗಿಯೂ, ಒಬ್ಬರಿಗೊಬ್ಬರು ಸ್ನೇಹಿತರಾಗಿಯೂ, ಇರುವ ಸಜ್ಜನರೇ ತುಂಬಿ ಇದ್ದರು. ಹೀಗೆ ಶ್ರೀ ರಾಮನು ಚಂದ್ರನಂತೆ ಸರ್ವ ಜನರಿಗೂ ಸಂತೋಷಕರನಾಗಿ, ಪ್ರಜೆ ಪರಿವಾರಗಳನ್ನು ತನ್ನ ಮಕ್ಕಳೋಪಾದಿಯಲ್ಲಿ ಕಾಪಾಡುತ್ತ, ಮುದುಕರನ್ನು ಮನ್ನಿಸುತ್ತ, ಹಗೆಗಳನ್ನು ಹಿಂಸಿಸುತ್ತ, ಮುನಿಗಳನ್ನು ವಂದಿಸುತ್ತ, ಪರ ನಾರಿಗಳನ್ನು ತಾಯಿ, ಅಕ್ಕ, ತಂಗಿಗಳ ಹಾಗೆ ಭಾವಿಸುತ್ತ, ಸರ್ವೋತ್ಕೃಷ್ಟನಾಗಿದ್ದನು.

———:0:———

PART V.

——:o:——

The Ten Incarnations of Vishnu.

——:o:——

75. The First or Fish Incarnation.

೭೫. ಮತ್ಸ್ಯಾವತಾರದ ಕಥೆ.

ಪರಮ ಪದದಲ್ಲಿ ಶ್ರೀಮನ್ನಾರಾಯಣನು ಮಹಾ ಲಕ್ಷ್ಮೀ ಸಮೇತನಾಗಿ ನಿತ್ಯೈಶ್ವರ್ಯವನ್ನು ಅನುಭವಿಸುತ್ತ—ನಾನು ಬಹು ಪ್ರಜೆಯಾಗುವೆನು ಎಂದು ಸಂಕಲ್ಪ ಮಾಡಿದ್ದಾಗಿ, ವೇದಾಂತದಲ್ಲಿ ಹೇಳಿರುವ ಪ್ರಕಾರ ಜಗತ್ತುಗಳನ್ನು ನಿರ್ಮಿಸಿ, ಬಹು ರೂಪಾಗಿ ಲೀಲೈಶ್ವರ್ಯವನ್ನು ಅನುಭವಿಸ ಬೇಕೆಂದು ಸಂಕಲ್ಪಿಸಿ, ಚಿತ್ತು ಅಚಿತ್ತುಗಳೇ ಮೊದಲಾದ ತನ್ನಲ್ಲಿರುವ ಸೂಕ್ಷ್ಮ ತತ್ವಗಳಿಂದ, ಸ್ಥೂಲ ಚಿದಚಿತ್ತು ಮೊದಲಾದ ತತ್ವಗಳ ಮಯವಾಗಿ, ಚತುರ್ಮುಖ ಬ್ರಹ್ಮನನ್ನು ತನ್ನ ನಾಭೀ ಕಮಲದಲ್ಲಿ ಹುಟ್ಟಿಸಿ, ಅವನನ್ನು ಕುರಿತು,—ಕೃತ, ತ್ರೇತಾ, ದ್ವಾಪರ, ಕಲಿಗಳೆಂಬ ನಾಲ್ಕು ಯುಗಗಳು ಸಾವಿರ ಸಾರಿ ಮರಳಿ ಬಂದರೆ, ಒಂದು ಹಗಲು ನಿನಗೆ ಆಗುವದು. ಆ ಹಗಲಿನಲ್ಲಿ ನೀನು ಹದಿನಾಲ್ಕು ಲೋಕಗಳನ್ನು ಸೃಷ್ಟಿಸು. ಅವುಗಳು ನಿನ್ನ ಹಗಲಿನಲ್ಲಿ ಪ್ರಕಾಶಿಸುತ್ತಾ ಇರುವವು. ತಿರಿಗಿ ನಿನ್ನ ರಾತ್ರಿಯಲ್ಲಿ ಅವಾಂತರ ಪ್ರಳಯವನ್ನು ಹೊಂದುವವು. ಆ ರಾತ್ರಿಯಲ್ಲಿ ಹಗಲಿನ ಪ್ರಕಾರವೇ ನಾಲ್ಕು ಯುಗಗಳು ಸಾವಿರ ಸಾರಿ ಮರಳುವ ಪರಿಯಂತರ ನೀನು ಮಲಗಿದ್ದು, ಪುನಹ ಬೆಳಗಾಗುವಾಗ ಸೃಷ್ಟಿಯನ್ನು ಮಾಡುತ್ತಾ, ಈ ರೀತಿಯಲ್ಲಿ ನೂರು ವರುಷ ಪರಿಯಂತರವು ಬ್ರಹ್ಮ ಪಟ್ಟವನ್ನಾಳುತ್ತಾ ಇದ್ದು, ಆ ನಿನ್ನ ನೂರು ವರುಷದ ಕಡೆಯಲ್ಲಿ ಮಹಾ ಪ್ರಳಯವು ಉಂಟಾಗಲು, ನೀನು ಯಥಾ ಪ್ರಕಾರ ನನ್ನಲ್ಲಿ ಬಂದು ಸೇರು, ಎಂದು ಅಪ್ಪಣೆ ಕೊಟ್ಟನು.

ಅದನ್ನು ಕೇಳಿ, ಬ್ರಹ್ಮನು ಶ್ರೀಮನ್ನಾರಾಯಣನಿಗೆ ನಮಸ್ಕರಿಸಿ—ಎಲೈ, ಸ್ವಾಮಿಯೇ, ನಾನು ಯಾವ ಶಕ್ತಿಯಿಂದ ಲೋಕಗಳನ್ನು ಸೃಷ್ಟಿಸಲಿ? ಎಂದು ಬಿನ್ನಹವನ್ನು ಮಾಡಿ ಕೊಳ್ಳಲು; ಮಹಾ ವಿಷ್ಣುವು ಆತನಿಗೆ ಸಕಲ ವೇದಗಳನ್ನು ಉಪದೇಶಿಸಿ, ವೇದ ಪುಸ್ತಕಗಳನ್ನು ಕೊಟ್ಟು—ಈ ವೇದಗಳ ಬಲದಿಂದ ಜಗತ್ತನ್ನು ಸೃಷಿಸು ಎಂದು ಅಪ್ಪಣೆ ಕೊಟ್ಟು, ತಾನು ಮೊದಲು ಉದಕವನ್ನು ನಿರ್ಮಿಸಿ, ಅದರ ಮೇಲೆ ಬ್ರಹ್ಮಾಂಡವನ್ನು ಕಲ್ಪಿಸಿ, ಅದರೊಳಗೆ ಆ ಬ್ರಹ್ಮ

ನನ್ನು ಇಟ್ಟು, ತಾನೂ ಲಕ್ಷ್ಮೀ ಸಮೇತನಾಗಿ ಪ್ರವೇಶಿಸಿ, ಕ್ಷೀರ ಸಮುದ್ರದಲ್ಲಿ ಶೇಷ ಶಾಯಿಯಾಗಿ ಯೋಗ ನಿದ್ರೆಯನ್ನು ಮಾಡುತ್ತಾ ಇದ್ದನು.

ಇತ್ತಲಾ ಚತುರ್ಮುಖ ಬ್ರಹ್ಮನು ಭೂಲೋಕ, ಭುವರ್ಲೋಕ, ಸುವರ್ಲೋಕ, ಮಹೋಲೋಕ, ಜನೋಲೋಕ, ತಪೋಲೋಕ ಎಂಬ ಏಳು ಲೋಕಗಳನ್ನು ಮೇಲು ಗಡೆಯಲ್ಲಿಯೂ; ಅತಲ, ವಿತಲ, ಸುತಲ, ತಲಾತಲ, ರಸಾತಲ, ಮಹಾತಲ, ಪಾತಾಳಗಳೆಂಬ ಏಳು ಲೋಕಗಳನ್ನು ಕೆಳಗಡೆಯಲ್ಲಿಯೂ; ಹೀಗೆ ಹದಿನಾಲ್ಕು ಲೋಕಗಳನ್ನು ನಿರ್ಮಿಸಿ, ಅವುಗಳಲ್ಲಿ ವೇದವು ಹೇಳಿರುವ ಪ್ರಕಾರ ತಕ್ಕ ತಕ್ಕ ಸ್ವೇದಜ, ಅಂಡಜ, ಉದ್ಭಿಜ, ಜರಾಯುಜಗಳೆಂಬ ನಾಲ್ಕು ವಿಧಗಳಾದ ಸ್ಥಾವರ ಜಂಗಮಗಳನ್ನು ಕಲ್ಪಿಸಿ; ಇನ್ನು ನವ ಬ್ರಹ್ಮರೂ, ಹದಿನಾಲ್ಕು ಮನುಗಳೂ, ಸೂರ್ಯ ಚಂದ್ರರೂ, ಇಂದ್ರಾದಿಗಳೂ, ಮೊದಲಾದ ಅಧಿಕಾರಿಗಳನ್ನು ಸೃಷ್ಟಿಸಿ, ಅವರವರಿಗೆ ತಕ್ಕ ಅಧಿಕಾರಗಳನ್ನು ಕಟ್ಟು ಮಾಡಿ ಇರುತ್ತಾ, ವಿಷ್ಣುವಿನ ಆಜ್ಞೆಯ ಪ್ರಕಾರ ನಡೆದು ಕೊಂಡಿದ್ದನು. ಆ ಬ್ರಹ್ಮನ ರಾತ್ರಿಯ ಅವಾಂತರ ಪ್ರಳಯವೆಂಬ ಜಲ ಪ್ರಳಯದ ಮನುಷ್ಯ ಮಾನದ ಮುಂಚಿನ ದಿನದಲ್ಲಿ ಈ ಭೂಮಂಡಲಕ್ಕೆ ಅರಸಾಗಿದ್ದಂಥ ಸತ್ಯಾಚರಣೆಯೂ ಭಗವದ್ಭಕ್ತಿಯೂ, ಪ್ರಜಾ ರಂಜನೆಯೂ ಇವುಗಳು ಮೊದಲಾದ ಸಕಲ ಸದ್ಗುಣಗಳುಳ್ಳ ಸತ್ಯವ್ರತ ರಾಯನು ಪ್ರಾತಸ್ನಾನಕ್ಕೆ ಗಂಗಾ ನದಿಗೆ ಬಂದು, ಮಿಂದು, ಶುಚಿರ್ಭೂತನಾಗಿ, ಸಂಧ್ಯಾ ವಂದನೆಯನ್ನು ಮಾಡುವದಕ್ಕೆ ಪ್ರಾರಂಭಿಸಿ, ಸೂರ್ಯನಿಗೆ ಅರ್ಘ್ಯ ಪ್ರದಾನವನ್ನು ಮಾಡಲು, ತನ್ನ ಬೊಗಸೆಯಲ್ಲಿ ಗಂಗಾ ಜಲವನ್ನು ಎತ್ತಿ ಕೊಂಡು, ಆ ನದಿಯಲ್ಲಿ ಬಿಡ ಬೇಕೆಂದಿರುವಾಗ, ಆ ಬೊಗಸೆಯಲ್ಲಿರುವ ನೀರಿನಲ್ಲಿ ಒಂದು ಸಣ್ಣ ಮೀನಿನ ಪಿಳ್ಳೆಯು ಅರಸನ ಕಣ್ಣಿಗೆ ಕಾಣಿಸಿದ್ದರಿಂದ, ಆ ಮೀನಿನ ಮರಿಯನ್ನು ಅರ್ಘ್ಯದ ನೀರಿನಲ್ಲಿ ಕೂಡಿಸಿ, ಅರ್ಘ್ಯವನ್ನು ಬಿಡಬಾರದೆಂದು, ಆ ನೀರನ್ನು ಸುಮ್ಮನೆ ನದಿಯಲ್ಲಿ ಬಿಟ್ಟು, ತಿರಿಗಿ ಬೊಗಸೇ ತುಂಬಾ ನೀರು ಎತ್ತಲು; ತಿರಿಗೂ ಆ ಬೊಗಸೆಯ ನೀರಿನಲ್ಲಿ ಅದೇ ಮೀನಿನ ಮರಿಯು ಕಾಣ ಬಂತು. ಹೀಗೆ ಎಷ್ಟು ಸಾರಿ ಬಿಟ್ಟು ಬಿಟ್ಟು, ತಿರಿಗಿ ನೀರನ್ನು ಬೊಗಸೆಯಲ್ಲಿ ಎತ್ತುತ್ತಾ ಇದ್ದರೂ, ಆ ಮರಿಯು ಕಾಣುತಾ ಬಂದದರಿಂದ, ಅದನ್ನು ತಿರಿಗಿ ಅರಸನು ನೀರಿನಲ್ಲಿ ಬಿಡ ಬೇಕೆಂದಿರುವಲ್ಲಿ, ಆ ಮರಿಯು ಈ ಅರಸನನ್ನು ಕುರಿತು—ಎಲೈ, ಸತ್ಯವ್ರತನೇ, ನೀನು ಬಹು ಧರ್ಮಿಷ್ಠನೂ ಕರುಣೆಯುಳ್ಳವನೂ ಪ್ರಾಣಿ ಹಿತನೂ ಎಂದು ತಿಳಿದು, ನಾನು ಈ ಹೊಳೆಯಲ್ಲಿ ಬೆಸ್ತರ ಬಲೆಯಿಂದ ಉಂಟಾಗುವ ಸಂಕಟವನ್ನು

ತಪ್ಪಿಸಿ ಕೊಳ್ಳುವದಕ್ಕಾಗಿ ನಿನ್ನ ಕೈಗೆ ಬಂದು, ಮರೆ ಹೊಕ್ಕೆನು. ಅಂಥ ನನ್ನನ್ನು ನೀನು ಅನಾದರಣೇ ಮಾಡಿ ಬಿಟ್ಟು, ಬಿಡ ಬಹುದೇನಯ್ಯಾ, ಧರ್ಮಾತ್ಮನೇ? ಎಂದು ಹೇಳಿತು.

ಆ ಮಾತನ್ನು ಕೇಳಿ, ಕರುಣೆಯೂ ಆಶ್ಚರ್ಯವೂ ಹೆಚ್ಚಾಗಿ ಮನಸ್ಸಿನಲ್ಲಿ ಹುಟ್ಟಿ—ಬಾರೈ, ಮೀನು ಮರಿಯೇ, ಎಂದು, ಆ ಮರಿ ಸಹಿತವಾಗಿ ಬೊಗಸೆಯಲ್ಲಿ ಇದ್ದ ನೀರನ್ನು ಸಮೀಪದಲ್ಲಿ ಇದ್ದ ಅರ್ಘ್ಯ ಪಾತ್ರೆಯಲ್ಲಿ ಬಿಟ್ಟು, ಸಂಧ್ಯಾ ಕರ್ಮದಲ್ಲಿ ಕುಳಿತು ಕೊಂಡಿದ್ದನು. ಅಷ್ಟರಲ್ಲಿಯೇ ಆ ಅಂಗುಷ್ಟ ಮಾತ್ರ ಪ್ರಮಾಣವಾಗಿದ್ದ ಮೀನಿನ ಪಿಳ್ಳೆಯು ಆ ಅರ್ಘ್ಯ ಪಾತ್ರೆಯ ತುಂಬಾ ಬೆಳೆದು, ಆ ರಾಯನನ್ನು ಕುರಿತು—ಎಲೇ, ಮಹಾ ರಾಯನೇ, ನನ್ನನ್ನು ನೋಡು. ನನಗೆ ಈ ಕೊಂಚವಾದ ಅರ್ಘ್ಯ ಪಾತ್ರೆಯ ನೀರು ಸಾಕೇ? ಎನಲು; ರಾಯನು ಅದನ್ನು ನೋಡಿ, ಇದು ಸಾಧಾರಣವಾದ ಮೀನಲ್ಲ. ದೈವೀಕದ ಮೀನೆಂದು ತಿಳಿದು, ಅಲ್ಲಿದ್ದ ನೀರಿನ ಗಡಿಗೆಯಲ್ಲಿ ಬಿಟ್ಟ ಕ್ಷಣವೇ ಅದರ ತುಂಬಾ ಬೆಳೆಯಲು; ಅಲ್ಲಿಂದ ತೆಗೆದು, ಒಂದು ಕಡಾಯಿ ನೀರಿನಲ್ಲಿ ಬಿಟ್ಟಾಗ್ಯೂ, ಅಲ್ಲಿಯೂ ಅದರ ತುಂಬಾ ಬೆಳೆಯಲು; ಅದನ್ನು ಕಂಡು, ಆ ರಾಯನು—ಇದರ ಬೆಳವಿಗೆಗೆ ಯಾವ ನೀರೂ ಸಾಕಾಗುವದಿಲ್ಲ. ಸಮುದ್ರದ ನೀರೇ ಸರಿ ಎಂದು, ತನ್ನ ಮನಸ್ಸಿನಲ್ಲಿ ನಿಶ್ಚೈಸಿ, ಸಮುದ್ರದಲ್ಲಿ ತೆಗಿಸಿ ಕೊಂಡು ಹೋಗಿ ಬಿಡಲು, ಅದು ಅಲ್ಲಿ ಮಹಾದ್ಭುತಾಕಾರವಾಗಿ ಬೆಳೆದು, ಸಮುದ್ರದಲ್ಲಿ ಸಂಚಾರ ಮಾಡುತ್ತ, ಈ ರಾಯನಿಗೆ ನಾಲ್ಕು ತೋಳುಗಳಿಂದ ಶಂಖ ಚಕ್ರ ಗದಾ ಪದ್ಮಗಳನ್ನು ಧರಿಸಿ, ದಿವ್ಯ ಕಿರೀಟ, ಕುಂಡಲ, ಕಟಕ ಕೇಯೂರಾದಿ, ಭೂಷಣಗಳಿಂದಲೂ ಪೀತಾಂಬರದಿಂದಲೂ ಅಲಂಕೃತವಾಗಿ, ಶ್ರೀ ಮಹಾ ಲಕ್ಷ್ಮೀ ಸಮೇತವಾಗಿ ಮತ್ಸ್ಯಾಕಾರದಿಂದ ಕಾಣಿಸಿ ಕೊಂಡು, ಆ ರಾಯನನ್ನು ಕುರಿತು—ಎಲೈ, ರಾಯನೇ, ನಿನ್ನ ಪರಿವಾರಗಳನ್ನು ಪಟ್ಟಣಕ್ಕೆ ಅಪ್ಪಣೇ ಕೊಟ್ಟು ಕಳುಹಿಸಿ, ನೀನೊಬ್ಬನೇ ನಾನಾಡುವ ಮಾತುಗಳನ್ನು ಕೇಳು ಎಂದು ಹೇಳಿತು.

ಆ ರಾಯನು ಆ ಮಾತನ್ನು ಕೇಳಿ, ಆ ಕ್ಷಣದಲ್ಲಿಯೇ ತನ್ನ ಪರಿವಾರಗಳನ್ನೆಲ್ಲಾ ಕಳುಹಿಸಿ ಬಿಟ್ಟು, ಒಬ್ಬನೇ ಕೈ ಮುಗಿದು, ನಿಂತು ಕೊಂಡು—ಏನು ಅಪ್ಪಣೆ? ಎಂದು ಕೇಳುವದು;—ಈ ಹೊತ್ತಿಗೆ ಏಳನೇ ದಿವಸಕ್ಕೆ ಜಲ ಪ್ರಳಯವಾಗಿ ಭೂಮಿಯು ಕಾಣದೆ ಹೋಗುವದು. ಅದುಕಾರಣ ನೀನು ನಿನ್ನ ಕುಟುಂಬದ ಸಂಗಡ ಇನ್ನು ಮೇಲೆ ಬರುವ ಯುಗದಲ್ಲಿ ಹುಟ್ಟುವ ಪ್ರಜೆಗಳಿಗೆ ಜೀವನೋಪಾಯಕ್ಕೆ ಬೇಕಾದ ಬೀಜಗಳನ್ನು ಸಂಗ್ರಹಾ ಮಾಡಿ ಕೊಂಡು, ಇಂದಿ

ಗೆ ಆರನೇ ದಿವಸದ ರಾತ್ರಿಗೆ ಇದೇ ಸ್ಥಳಕ್ಕೆ ಬಂದಲ್ಲಿ, ಆವಾಗ್ಯೆ ಈ ಮಹಾ ನನ್ನ
ಮತ್ಸ್ಯಾಕೃತಿಯನ್ನು ನೋಡುವಿ. ಆಗ ನನ್ನ ಕೋರೆಯಲ್ಲಿ ಸಿಕ್ಕಿ ಅಲ್ಲಾಡು
ತ್ತಲಿರುವ ಒಂದು ಹಡಗು ಕಾಣಿಸುವಾಗ, ಆ ಹಡಗಿನಲ್ಲಿ ನಿನ್ನ ಕುಟುಂಬದಸಂ
ಗಡ ಸಕಲ ಧಾನ್ಯೌಷಧಿ ಬೀಜಗಳನ್ನು ತೆಗೆದು ಕೊಂಡು, ಹತ್ತು. ಆ ಮೇಲೆ
ನಡೆಯುವ ಕಾರ್ಯಗಳನ್ನು ನೀನೇ ತಿಳಿಯುತ್ತೀ ಎಂದು ಅಪ್ಪಣೀ ಕೊಟ್ಟು,
ಸಮುದ್ರಾಂತರ್ಜಲ ಪ್ರವೇಶವನ್ನು ಮಾಡಿತು. ಆ ಬಳಿಕ ಆ ರಾಯನು ಮಹಾ
ವಿಷ್ಣುವಿನ ಆಜ್ಞೆಯನ್ನು ಶಿರಸಾ ವಹಿಸಿ, ತನ್ನ ಪಟ್ಟಣಕ್ಕೆ ಬಂದು, ರಾಜ್ಯದ ಎ
ಲ್ಲಾ ಪ್ರಜೆಗಳಿಗೂ—ನೀವೆಲ್ಲರು ವಿಷ್ಣುವಿನ ಧ್ಯಾನವನ್ನು ಮಾಡಿ ಕೊಂಡು, ಮೋ
ಕ್ಷ ರಾಜ್ಯದಲ್ಲಿ ಶೇರಿ, ಸುಖ ಪಡಿರಿ ಎಂದು, ಡಂಗುರವನ್ನು ಹೊಯ್ಸಿ, ಸಾರಿಸಿ,
ತಾನು ಮಹಾ ವಿಷ್ಣುವಿನ ಅಪ್ಪಣೆಯ ಪ್ರಕಾರ ಬಂದು, ಹಡಗವನ್ನೇರಿದ ಉ
ತ್ತರ ಕ್ಷಣದಲ್ಲಿಯೇ ಭೂಮಿಯು ಸಮುದ್ರದಲ್ಲಿ ಮುಳುಗಿ ಹೋಯಿತು. ಆಗ
ಲಾ ರಾಯನು ಸಮುದ್ರದಲ್ಲಿ ಹಡಗಿನ ಮೇಲೆ ಸಂಚರಿಸುತ್ತಾ, ಆಗಾಗ್ಯೆ ಮ
ತ್ಸ್ಯ ಮೂರ್ತಿಯ ಸಂದರುಶನವನ್ನು ಮಾಡುತ್ತಾ ಇದ್ದನು.

ಹೀಗಿರುವಲ್ಲಿ ಬ್ರಹ್ಮನು ರಾತ್ರಿಯಾದಾಗ ಮಲಗಿ ಕೊಂಡನು. ಆ ವೇಳೆಯ
ನ್ನರಿತು, ಸೋಮಕ ಹಯಗ್ರೀವರೆಂಬ ಹೆಸರುಳ್ಳ ಇಬ್ಬರು ದೈತ್ಯರು ತಾವು
ತಾವು ಪರಸ್ಪರವಾಗಿ ಆಲೋಚಿಸಿ ಕೊಂಡದ್ದೇನಂದರೆ—ಈ ಚತುರ್ಮುಖ ಬ್ರ
ಹ್ಮನು ನಿದ್ರೆಯಿಂದ ಎಚ್ಚತ್ತ ಮೇಲೆ, ಈಗ ಜಲ ಪ್ರಳಯದಲ್ಲಿ ಮುಳುಗಿ ಹೋ
ಗಿರುವ ಭೂಲೋಕ, ಭುವರ್ಲೋಕ, ಸುವರ್ಲೋಕಗಳೆಂಬ ಮೂರು ಲೋ
ಕಗಳನ್ನು ತಿರಿಗಿ ಸೃಷ್ಟಿಸುವನು. ಆಗ ಭೂಲೋಕದಲ್ಲಿ ನಡೆಯುವ ದೇವ
ಯಾಗ ಪಿತೃ ಯಾಗಗಳಲ್ಲಿ ಮಾಡಿದ ಹೋಮದ ಹವ್ಯ ಕವ್ಯಗಳಿಂದ ತೃಪ್ತ
ರಾಗಿ, ದೇವತೆಗಳು ನಮಗೆ ಹಗೆಗಳಾಗಿ, ಹೆಚ್ಚಿ, ನಮ್ಮನ್ನು ತಿರಸ್ಕರಿಸುವರು.
ಇದಕ್ಕೆಲ್ಲಾ ಮೂಲ ಭೂತವಾದದ್ದು ವೇದ ವಾಕ್ಯಗಳು. ಆದ್ದರಿಂದ ಈಗ
ಬ್ರಹ್ಮನು ಮಲಗಿ ಇದ್ದಾನೆ. ಈ ವೇಳೆಯಲ್ಲಿ ಆ ವೇದ ಪುಸ್ತಕಗಳನ್ನು ಕದ್ದು
ಕೊಂಡು ಬಂದು ಬಿಟ್ಟರೆ, ನಮಗೆ ಹಗೆಗಳಾದ ದೇವತೆಗಳ ಹುಟ್ಟೇ ನಾಶವಾಗಿ
ಹೋಗುವದು ಎಂದು ಯೋಚಿಸಿ, ಸತ್ಯ ಲೋಕಕ್ಕೆ ಹೋಗಿ, ವೇದದ ಪುಸ್ತ
ಕಗಳನ್ನು ಕದ್ದು ಕೊಂಡು ಬಂದು, ಸಮುದ್ರವನ್ನು ಹೊಗಲು; ಅವರನ್ನು
ಮತ್ಸ್ಯ ಮೂರ್ತಿಯಾದ ಮಹಾ ವಿಷ್ಣುವು ಕಂಡು, ಆ ಇಬ್ಬರು ದೈತ್ಯರ
ನ್ನು ಸಂಹರಿಸಿ, ವೇದ ಪುಸ್ತಕಗಳನ್ನೆಲ್ಲಾ ತೆಗೆದು ಕೊಂಡು, ತನ್ನಲ್ಲಿ ಇಟ್ಟು
ಕೊಂಡಿದ್ದನು.

ಆ ಬಳಿಕ ನೇಮಕವಾದ ರಾತ್ರಿಯು ಕಳೆದು ಬೆಳಗಾದಾಗ, ಚತುರ್ಮುಖ ಬ್ರಹ್ಮನು ಎದ್ದು, ಸ್ನಾನ ಸಂಧ್ಯಾದಿ ನಿತ್ಯ ಕರ್ಮಗಳನ್ನು ನೆರವೇರಿಸಿ ಕೊಂಡು, ಕಮಲಾಸನದಲ್ಲಿ ಕುಳಿತು, ತಿರಿಗಿ ಸೃಷ್ಟಿಯನ್ನು ಮಾಡುವದಕ್ಕೆ ವೇದ ವಾಕ್ಯ ಪುಸ್ತಕಗಳನ್ನು ನೋಡುವಲ್ಲಿ, ಅವುಗಳಿಲ್ಲದೆ ಇರಲು; ಮಹಾ ಚಿಂತಾಕ್ರಾಂತನಾಗಿ, ಮಹಾ ವಿಷ್ಣುವನ್ನು ಧ್ಯಾನಾ ಮಾಡಿ,—ಎಲೈ, ಮಹಾ ವಿಷ್ಣುವೇ, ನಿನ್ನ ಅಪ್ಪಣೆಯ ಪ್ರಕಾರ ನಾನು ರಾತ್ರಿಯಲ್ಲಿ ಮಲಗಿ ಇದ್ದೆನು. ವೇದ ಪುಸ್ತಕಗಳು ಏನಾದವೋ? ನಾನರಿಯೆನು. ಈಗ ಅವುಗಳೊಂದೂ ಕಾಣಿಸುವದಿಲ್ಲ. ಇನ್ನು ನಾನು ಹ್ಯಾಗೆ ಸೃಷ್ಟೀ ಮಾಡಲಿ? ನಾನು ಮೈ ಮರೆತು, ಮಲಗಿರುವಾಗ್ಯೆ ಜಗದೀಶ್ವರನಾದ ನೀನು ಜಾಗರೂಕನಾಗಿ ಕಾದು ಇದ್ದು, ನನ್ನನ್ನು ಕಾಪಾಡದೆ ಇದ್ದರೆ, ಮತ್ತೊಬ್ಬರು ಕಾಪಾಡುವರುಂಟೋ? ಮಹಾ ಸ್ವಾಮೀ, ನಾನು ಈಗ ಕಣ್ಣಿಲ್ಲದ ಕುರುಡನ ಹಾಗಿದ್ದೇನೆ, ಎಂದು ಮೊರೆ ಇಡಲು; ಮತ್ಸ್ಯ ಮೂರ್ತಿಯಾದ ಮಹಾ ವಿಷ್ಣುವು ಪ್ರತ್ಯಕ್ಷವಾಗಿ ಕಾಣಿಸಿಕೊಂಡು, ಹಯಗ್ರೀವ ಸೋಮಕರು ವೇದ ಪುಸ್ತಕವನ್ನು ಕದ್ದು ಕೊಂಡು, ಮಹಾ ಸಮುದ್ರದಲ್ಲಿ ಹೊಕ್ಕದ್ದನ್ನೂ, ಸರ್ವಜ್ಞನಾದ ತಾನು ಮುಂದೆ ಹೀಗಾಗುವದೆಂದು ತಿಳಿದು, ಮೊದಲೇ ಮತ್ಸ್ಯಾವತಾರವನ್ನು ಮಾಡಿ, ಸಮುದ್ರದಲ್ಲಿ ಸಂಚರಿಸುತ್ತಾ ಇದ್ದದ್ದನ್ನೂ, ಆ ದೈತ್ಯರನ್ನು ಕೊಂದು, ವೇದ ಪುಸ್ತಕಗಳನ್ನು ತಿರಿಗಿ ತೆಗೆದು ಕೊಂಡಿರುವದನ್ನೂ ತಿಳಿಸಿ, ವೇದ ಪುಸ್ತಕಗಳನ್ನು ಕೊಟ್ಟು, ಪುನಹ ವೇದಗಳನ್ನು ಉಪದೇಶಿಸಿ, ಅಂತರ್ಧಾನನಾದನು. ಆ ಬಳಿಕ—ಬ್ರಹ್ಮನು ಪೂರ್ವದ ಹಾಗೆ ನಿರ್ಮಿಸಿದನು ಎಂಬ ವೇದ ವಾಕ್ಯ ಪ್ರಕಾರ ಜಲ ಪ್ರಳಯದಲ್ಲಿ ಮುಳುಗಿದ್ದ ಭೂಲೋಕ, ಭುವರ್ಲೋಕ, ಸುವರ್ಲೋಕಗಳನ್ನು ಪೂರ್ವದಂತೆಯೇ ಉಂಟು ಮಾಡಿದನು.

76. The Second or Turtle Incarnation.

೭೬. ಕೂರ್ಮಾವತಾರದ ಕಥೆ.

ಅಮರಾವತೀ ಪಟ್ಟಣದಲ್ಲಿ ದೇವೇಂದ್ರನು ಸುಧರ್ಮೆ ಎಂಬ ಸಭೆಯಲ್ಲಿ ಅಷ್ಟ ದಿಕ್ಪಾಲಕರೇ ಮೊದಲಾದ ಸಮಸ್ತ ದೇವತೆಗಳೊಡನೆ ಕೂಡಿ, ಒಡ್ಡೋಲಗವನ್ನು ಕೊಡುತ್ತ ಇದ್ದವನು, ತನ್ನ ಪಟ್ಟಣದ ಶೃಂಗಾರವನ್ನು ನೋಡ ಬೇಕೆಂದು ಕುತೂಹಲ ಹುಟ್ಟಿ, ನಾಲ್ಕು ಕೊಂಬುಗಳುಳ್ಳ ಐರಾವತನೆಂಬ ಬಿಳೀ ಆನೆಯನ್ನು ನವ ರತ್ನ ಖಚಿತವಾದ ರೆಂಚೆಗಳಿಂದಲೂ, ರತ್ನದ ಪದಕಗಳಿಂದಲೂ, ಮಣಿ ಮಯವಾದ ಗಗ್ಗರಗಳಿಂದಲೂ, ಕೆಂಬರಲುಗಳಿಂದ ಕೆತ್ತಿದ ಹಿಡಿ

ಗಳುಳ್ಳ ಚೌರಿಗಳಿಂದಲೂ ಶೃಂಗರಿಸಿರುವಂತೆ, ಮಾವುಟಗನಿಗೆ ಕಟ್ಟು ಮಾಡಿದ ಪ್ರಕಾರ ಅಲಂಕರಿಸಿದಂಥ ಐರಾವತದ ಮೇಲೆ ಶಚೀ ದೇವಿಯೊಡನೆ ಕೂಡಿ, ಏರಿ ಕೊಂಡು ಹೊರಡಲು; ಅಗ್ನಿಯು ಟಗರನ್ನೂ, ಯಮನು ಕೋಣವನ್ನೂ, ನಿರುತಿಯು ಮನುಷ್ಯನನ್ನೂ, ವರುಣನು ನೆಗಳನ್ನೂ, ವಾಯುವು ಎರಳೆಯನ್ನೂ, ಕುಬೇರನು ಕುದುರೆಯನ್ನೂ, ಈಶಾನನು ನಂದಿಯನ್ನೂ, ಏರಿ ಕೊಂಡು, ದೇವೇಂದ್ರನ ಎರಡು ಕಡೆಯಲ್ಲಿಯೂ ಸಂಭ್ರಮದಿಂದ ಬಂದರು. ಮತ್ತು ಅಷ್ಟ ವಸುಗಳೂ, ಸಪ್ತ ಮರುತ್ತುಗಳೂ, ಏಕಾದಶ ರುದ್ರರೂ, ದ್ವಾದಶಾದಿತ್ಯರೂ, ತಮ್ಮ ತಮ್ಮ ವಾಹನಗಳನ್ನು ಏರಿ, ವಸ್ತ್ರಾಭರಣ ಭೂಷಿತರಾಗಿ, ದೇವೇಂದ್ರನ ಹಿಂದು ಗಡೆಯಲ್ಲಿ ಬಂದರು.

ಮತ್ತು ಗಂಧರ್ವಾಧಿಪತಿಗಳು ವೀಣೆ, ತಂಬೂರಿ, ಸಿತಾರು, ಸಾರಂಗಿ, ಕಿನ್ನರಿ, ಸ್ವರಮಂಡಲ ಮೊದಲಾದ ತಂತೀ ವಾದ್ಯಗಳನ್ನೂ; ಕೊಳಲು, ಮುಖವೀಣೆ, ಓಲಗ, ರಣ ಕಹಳೆ, ಕೊಂಬು, ತುತ್ತೂರಿ, ಮುಂತಾದ ರಂಧ್ರ ವಾದ್ಯಗಳನ್ನೂ; ಮದ್ದಳೆ, ಭೇರಿ, ಢಕ್ಕೆ, ಡಿಂಡಿಮ, ಮೊದಲಾದ ಚರ್ಮ ವಾದ್ಯಗಳನ್ನೂ; ತಾಳ ಮೊದಲಾದ ಕಾಂಸ್ಯ ವಾದ್ಯಗಳನ್ನೂ ನುಡಿಸುತ್ತ, ಊದುತ್ತ, ಬಾರಿಸುತ್ತ, ಸಾವೇರಿ, ಅಸಾವೇರಿ, ಕಾಂಬೋದಿ, ಯರಕಲಕಾಂಬೋದಿ, ಭೈರವಿ, ಆನಂದಭೈರವಿ, ನೀಲಾಂಬುರಿ, ರೇಗುಪ್ತಿ, ತೋಡಿ, ಮುಂತಾದ ಅನೇಕ ರಾಗಗಳಿಂದ ಸಂಗೀತವನ್ನು ಹಾಡುತ್ತ, ದೇವೇಂದ್ರನ ಮುಂಗಡೆಯಲ್ಲಿ ಬಂದರು. ಮತ್ತು ಅಪ್ಸರ ಸ್ತ್ರೀಯರು ಇಂದ್ರನ ಪುರೋ ಭಾಗದಲ್ಲಿ ಸಾಲಾಗಿ ಎದಿರು ಬದಿರಿಗೆ ನಿಂತು, ಭರತ ಶಾಸ್ತ್ರದಲ್ಲಿ ಹೇಳಿರುವ ಮೇರೆಗೆ ನರ್ತನವಾಡಿದರು. ಕಿನ್ನರ, ಕಿಂಪುರುಷಾದಿಗಳು—ಜಂಭಾರಿಯೇ, ಪಾಕಶಾಸನನೇ, ವೃತ್ರಾಸುರ ಸಂಹಾರಕನೇ, ತ್ರಿ ಲೋಕದೊಡೆಯನೇ, ಜಯ ಜಯಾ ಎಂದು ಹೊಗಳುತ್ತಾ ಬಂದರು. ಇಷ್ಟು ಸಂಭ್ರಮದಿಂದ ಕೂಡಿ, ದೇವೇಂದ್ರನು ಅಮರಾವತಿಯ ರಾಜಬೀದಿಯಲ್ಲಿ ಬರುತ್ತ, ದೇವ ಸ್ತ್ರೀಯರು ಬಂದು, ಬಂದು, ನವ ರತ್ನದಾರತಿಗಳನ್ನು ಬೆಳಗಿದರೆ, ಅವರಿಗೆ ಅನೇಕ ವಸ್ತ್ರಾಭರಣಗಳನ್ನು ಕೊಡುತ್ತ, ಮಹದೈಶ್ವರ್ಯದಿಂದ ಮದೋನ್ಮತ್ತನಾಗಿ, ತನಗೆ ಯಾರೂ ಸರಿ ಇಲ್ಲವೆಂದು, ಮನಸ್ಸಿನಲ್ಲಿ ಎಣಿಸಿ ಕೊಂಡು, ಬಹಳ ಹೆಮ್ಮೆಯಿಂದ ಬರುತ್ತಾ ಇದ್ದನು.

ಅಷ್ಟರಲ್ಲಿಯೇ ದೂರ್ವಾಸನೆಂಬ ಕೋಪ ಸ್ವಭಾವವುಳ್ಳ ಉಗ್ರ ತಪಸ್ವಿಯು ಕೈಲಾಸ ಪರ್ವತಕ್ಕೆ ಹೋಗಿ, ಪಾರ್ವತೀ ಪರಮೇಶ್ವರರನ್ನು ವಂದಿಸಿ, ಬಹಳವಾಗಿ ಸ್ತೋತ್ರಾ ಮಾಡಲು; ಪ್ರಸನ್ನಳಾಗಿ, ಪಾರ್ವತಿಯು ತಾನು ಧರಿಸಿದ್ದ ಪು

ಷ್ಪ ಮಾಲಿಕೆಯನ್ನು ಅನುಗ್ರಹಾ ಮಾಡಿ ಕೊಟ್ಟದರಿಂದ, ಅದನ್ನು ತೆಗೆದು ಕೊಂಡು, ಅಮರಾವತಿಗೆ ಬಂದು, ರಾಜ ಬೀದಿಯಲ್ಲಿ ಹೋಗುವ ದೇವೇಂದ್ರನಿಗೆ ಹರಸಿ ಕೊಟ್ಟನು. ಆ ದೇವೇಂದ್ರನು ಐಶ್ವರ್ಯ ಮತ್ತನಾಗಿ, ಆ ಮುನಿಯನ್ನು ವಿನಯದಿಂದ ಮನ್ನಿಸದೆ, ಅವನು ಕೊಟ್ಟ ಪುಷ್ಪ ಮಾಲಿಕೆಯನ್ನು ತಾನು ತಲೆಯಲ್ಲಿ ಧರಿಸದೆ, ಐರಾವತದ ಕುಂಭ ಸ್ಥಳದ ಮೇಲೆ ಹಾಕಲು; ಅದು ತನ್ನ ಸುಂಡಿಲಿನಿಂದ ತೆಗೆದು, ಭೂಮಿಯಲ್ಲಿ ಬಡಿದು, ಕಾಲಿನಲ್ಲಿ ತುಳದು ಬಿಟ್ಟಿತು. ಅದನ್ನು ಕಂಡು, ಈ ದೂರ್ವಾಸ ಮುನಿಯು ಕೋಪಿಸಿ ಕೊಂಡು, ಕಣ್ಣುಗಳಿಂದ ಕಿಡಿಗಳನ್ನು ಉದುರಿಸುತ್ತ, ಇಂದ್ರನನ್ನು ಕುರಿತು—ಎಲೈ, ಮದಾಂಧನೇ, ಮಹಾ ದೇವಿಯ ಪ್ರಸಾದವನ್ನು—ನೀನು ತ್ರಿ ಲೋಕಾಧಿಪತಿಯು; ಹೆಚ್ಚಾಗಿ ಬಾಳುತ್ತಿರಬೇಕೆಂದು ನಿನ್ನಲ್ಲಿ ನಾನು ಅನುಗ್ರಹವನ್ನು ಮಾಡಿ ತಂದು ಕೊಟ್ಟರೆ, ಆ ಪ್ರಸಾದವನ್ನು ವಿನಯದಿಂದ ನಿನ್ನ ಶಿರಸ್ಸಿನಲ್ಲಿ ಧರಿಸದೆ, ಐರಾವತದ ಕುಂಭ ಸ್ಥಳದಲ್ಲಿ ಯಾವ ತ್ರಿ ಲೋಕಾಧಿಪತ್ಯದ ಐಶ್ವರ್ಯ ಮದದಿಂದ ಹಾಕಿದೆಯೋ, ಆ ನಿನ್ನ ಐಶ್ವರ್ಯವನ್ನು ನಿನ್ನ ಹಗೆಗಳಾದ ದೈತ್ಯರು ಕಿತ್ತು ಕೊಳ್ಳಲಿ ಎಂದು, ಶಾಪವನ್ನು ಕೊಟ್ಟನು. ಆಗ ದೇವೇಂದ್ರನು—ಕೆಟ್ಟ ಮೇಲೆ ಬುದ್ಧಿ ಬಂತು; ಅಟ್ಟ ಮೇಲೆ ಒಲೆ ಉರಿಯಿತು. ಎಂಬ ಗಾದೆಗೆ ಸರಿಯಾಗಿ ಬುದ್ಧಿ ತಿಳದು, ಬೇಗ ಐರಾವತದಿಂದ ಕೆಳಕ್ಕೆ ಧುಮುಕಿ, ಆ ದೂರ್ವಾಸ ಮುನಿಗಳ ಎರಡು ಕಾಲುಗಳ ಮೇಲೆ ಬಿದ್ದು—ನಾನು ಮಹಾ ಅಪರಾಧಿಯು. ನನ್ನ ಅಪರಾಧವನ್ನು ಮನ್ನಿಸಿ, ವಿಶಾಪವನ್ನು ಕೊಟ್ಟು, ಉದ್ಧಾರಾ ಮಾಡ ಬೇಕೆಂದು ಅಂಗಲಾಚಿ ಕೊಂಡು, ಬಹಳವಾಗಿ ಬೇಡಿ ಕೊಂಡದರಿಂದ, ಕರುಣ ಹುಟ್ಟಿ, ದೂರ್ವಾಸ ಮುನಿಯು—ಕೆಲವು ಕಾಲದ ಮೇಲೆ ಲಕ್ಷ್ಮೀ ಪತಿಯಾದ ಮಹಾ ವಿಷ್ಣುವು ಯಥಾ ಪ್ರಕಾರ ನಿನಗೆ ತ್ರಿ ಲೋಕಾಧಿಪತ್ಯ ಉಂಟಾಗುವಂತೆ ಮಾಡುವನು ಎಂದು ವಿಶಾಪವನ್ನು ಕೊಟ್ಟು, ಹೊರಟು ಹೋದನು. ಆ ಬಳಿಕ, ದೇವೇಂದ್ರನು ಕೊಬ್ಬು ಅಡಗಿ, ಚಿಂತಾಕ್ರಾಂತನಾಗಿ, ಮೋರೆಗೆ ಮುಸುಗು ಹಾಕಿ ಕೊಂಡು, ಅರಮನೆಗೆ ಹೋಗಿ, ಏಕಾಂತ ಸ್ಥಳದಲ್ಲಿ ಬಿದ್ದು ಕೊಂಡನು.

ಹೀಗಿರುವಲ್ಲಿ, ರಸಾತಲದಿಂದ ನಮುಚಿ, ಬಲಿ, ಮೊದಲಾದ ದೈತ್ಯೇಂದ್ರರು ಕಳುಹಿಸಿ ಇದ್ದ ಗೂಢಚಾರರು ಈ ಸುದ್ದಿಯನ್ನು ತಿಳದು, ರಸಾತಲಕ್ಕೆ ಹೋಗಿ, ಆ ದೈತ್ಯೇಂದ್ರರಿಗೆ ಅರಿಕೆ ಮಾಡಿದರು. ಆಗ ಬಲಿಯು ಏಕಾಂತದಲ್ಲಿ ತಮ್ಮ ಗುರುಗಳಾದ ಶುಕ್ರಾಚಾರ್ಯರನ್ನೂ ತನ್ನ ಜೊತೆಯ ದೈತ್ಯ ರಾಜರನ್ನೂ ಕೂರಿಸಿ ಕೊಂಡು,—ನಾವು ಮುಂದೆ ಮಾಡುವ ಕಾರ್ಯವೇನು? ಎಂದು ಕೇಳಿ

ದನು. ಅದಕ್ಕೆ ಶುಕ್ರಾಚಾರ್ಯನು—ಎಲೈ, ದೈತ್ಯ ರಾಜನೇ, ಎಣ್ಣೆ ಬಂದಾಗ್ಯೆ ಕಣ್ಣು ಮುಚ್ಚಿ ಕೊಂಡನು ಎಂಬಂತೆ ಮಾಡದೆ, ಇಂಥಾ ವೇಳೆಯಲ್ಲಿ ನಾವು ಚತುರಂಗ ಬಲ ಸಮೇತರಾಗಿ ದೇವ ಲೋಕಕ್ಕೆ ಹೋಗಿ, ದೇವೇಂದ್ರನನ್ನು ಯುದ್ಧದಲ್ಲಿ ಸದೆ ಬಡಿದು, ಅವನ ಪದವಿಯನ್ನು ಶೆಳ ಕೊಂಡು, ಸುಖ ಪಡದೆ ಇದ್ದಲ್ಲಿ, ನಮ್ಮಂಥಾ ಹೇಡಿಗಳು ಜಗತ್ತಿನಲ್ಲಿ ಇನ್ಯಾರುಂಟು? ಲೋಕದಲ್ಲಿ ರಾಜ ನೀತಿಯನ್ನು ತಿಳಿದಂಥ ಧೊರೆಗಳು ಗೂಢ ಚಾರರನ್ನು ಹಗೆಗಳ ಪಟ್ಟಣಕ್ಕೆ ನಾನಾ ವೇಷಗಳನ್ನು ಹಾಕಿಸಿ, ಕಳುಹಿಸಿ, ಹಗೆಗಳ ಪಟ್ಟಣದಲ್ಲಿ ಅನ್ಯಾಯಗಳು ನಡೆಯುವಂಥಾದ್ದನ್ನೂ; ಅರಸು, ಮಂತ್ರಿ, ದಳವಾಯಿ, ಮುಂತಾದವರಿಗೆ ಪರಸ್ಪರವಾಗಿ ಮನಸ್ತಾಪಗಳು ಹುಟ್ಟಿರುವದನ್ನೂ; ಅರಸುಗಳಿಗೆ ಜ್ಞಾತಿ ವರ್ಗದಲ್ಲಿ ಒಬ್ಬರೊಬ್ಬರಿಗೆ ವೈಷಮ್ಯ ಹುಟ್ಟಿರುವದನ್ನೂ; ಅರಸು ತನ್ನ ರಾಜ್ಯದಲ್ಲಿ ದುಷ್ಟರಿಗೆ ಶಿಕ್ಷೆಯನ್ನೂ, ಶಿಷ್ಟರಿಗೆ ರಕ್ಷಣೆಯನ್ನೂ ಮಾಡದೆ, ದುಷ್ಟರಿಗೆ ಮನ್ನಣೆಯನ್ನೂ, ಶಿಷ್ಟರಿಗೆ ಅವಮನ್ನಣೆಯನ್ನೂ ಮಾಡುವದನ್ನೂ; ತನ್ನ ಕೈ ಕೆಳಗಿನ ಉದ್ಯೋಗಸ್ಥರಿಗೆ ಕ್ಲಿಪ್ತ ಪ್ರಕಾರ ತಿಂಗಳು ತಿಂಗಳಿಗೂ ಸಂಬಳಗಳನ್ನು ಸಲ್ಲಿಸುತ್ತಾ ಬಾರದೆ ಇರುವದನ್ನೂ; ರಾಜ್ಯದಲ್ಲಿ ಪ್ರಜೆಗಳು ವ್ಯಾಧಿ, ವಿಡ್ವರ, ಬರ, ಮುಂತಾದವುಗಳಿಂದ ಕ್ಷೋಭೆ ಪಡುವದನ್ನೂ; ತಿಳಿದು ಕೊಂಡು, ಅಂಥಾ ವೇಳೆಯಲ್ಲಿ ಒಂದು ಕ್ಷಣವಾದರೂ ತಾಮಸ ಮಾಡದೆ, ದಂಡೆತ್ತಿ, ಹೋಗಿ, ಹಗೆಗಳನ್ನು ಜೈಸಿ, ಅವರ ದೇಶ ಕೋಶಗಳನ್ನು ಸ್ವಾಧೀನಾ ಮಾಡಿ ಕೊಳ್ಳುವರು, ಎಂದು ಹೇಳಲು; ದೈತ್ಯ ರಾಜರೆಲ್ಲರು—ಆಚಾರ್ಯರು ಹೇಳಿದಂತೆಯೇ ನಡೆಯ ಬೇಕೆಂದು, ಒಮ್ಮನಸ್ಸಾಗಿ ದೇವೇಂದ್ರನ ಮೇಲೆ ಯುದ್ಧಕ್ಕೆ ಹೋಗ ಬೇಕೆಂದು ಸನ್ನದ್ಧರಾಗುತ್ತಾ ಇದ್ದರು.

ದೇವ ಗುರುವಾದ ಬೃಹಸ್ಪತ್ಯಾಚಾರ್ಯರು ದೈತ್ಯರ ಪಟ್ಟಣಗಳಿಗೆ ಕಳುಹಿಸಿದ್ದ ಬೇವಿನವರು ಇವರ ಸಮಕಟ್ಟನ್ನು ತಿಳಿದು, ಬೇಗನೆ ಬೃಹಸ್ಪತ್ಯಾಚಾರ್ಯರ ಬಳಿಗೆ ಹೋಗಿ, ಗುಟ್ಟಾಗಿ ತಿಳಿಸಿದರು. ಅವರು ಬಹಳ ವ್ಯಾಕುಲ ಚಿತ್ತರಾಗಿ, ದೇವೇಂದ್ರಾದಿ ಅಷ್ಟದಿಕ್ಪಾಲಕರನ್ನು ಏಕಾಂತದಲ್ಲಿ ಕೂರಿಸಿ ಕೊಂಡು,—ಮಹಾ ಮುನಿಯಾದ ದೂರ್ವಾಸರ ಶಾಪದಿಂದ ನಮಗೆ ಪರಾಜಯವಾಗುವದು ಸಿದ್ಧವು. ಈಗ ವ್ಯರ್ಥವಾಗಿ ಆ ದೈತ್ಯರೊಡನೆ ಹುಯ್ಲಲ್ಲಿ ಹೋರಿ, ಹತರಾಗುವದಕ್ಕಿಂತ ಎಲ್ಲರು ಸ್ವರ್ಗ ಲೋಕವನ್ನು ಬಿಟ್ಟು, ಹೆಂಡರು, ಮಕ್ಕಳು, ಬಂಧು ಬಳಗಗಳೊಡನೆ ಕೂಡಿ, ಎಲ್ಲಿಯಾದರೂ, ಒಂದು ಗುಪ್ತವಾದ ಪುಣ್ಯಾಶ್ರಮದಲ್ಲಿ ಕೆಲವು ಕಾಲ ಇದ್ದು ಕೊಂಡು, ಮಹಾ ವಿಷ್ಣುವನ್ನು ಆರಾಧಿಸುತ್ತ ಇದ್ದು

ಸಮಯ ಬಂದಾಗ್ಯೆ ಹಗೆಗಳಾದ ದುಷ್ಟ ದೈತ್ಯರನ್ನು ಗೆದ್ದು, ನಮ್ಮ ದೇವ ಲೋಕವನ್ನು ಸಾಧಿಸುವಂಥಾದ್ದು ನನ್ನ ಬುದ್ಧಿಗೆ ಯುಕ್ತವಾಗಿ ತೋರುತ್ತದೆ ಎಂದು ಹೇಳಲು; ಆ ಮಾತಿಗೆ ಅವರೆಲ್ಲಾ ಒಡಂಬಟ್ಟದರಿಂದ,—ನೀವೆಲ್ಲರು ಜಾಗ್ರತೆಯಾಗಿ ಹೊರಟು ಹೋಗಿ, ನೈಮಿಶಾರಣ್ಯವೆಂಬ ಪುಣ್ಯ ಕ್ಷೇತ್ರದಲ್ಲಿ ಇರ್ರಿ. ನಾನು ಶುಕ್ರಾಚಾರ್ಯರನ್ನೂ ದೈತ್ಯ ರಾಜರನ್ನೂ ಕಂಡು, ಕೂಡಲೆ ನಿಮ್ಮ ಬಳಿಗೆ ಬರುವೆನು ಎಂದು ಹೇಳಿ, ಅವರನ್ನೆಲ್ಲಾ ಕಳುಹಿಸಿ ಬಿಟ್ಟು, ತಾನು ಜಾಗ್ರತೆಯಾಗಿ ದೈತ್ಯ ರಾಜರ ಬಳಿಗೆ ರಸಾತಲಕ್ಕೆ ಬಂದನು. ಆಗ ಅವರೆಲ್ಲರು ಇವರಿಗೆ ವಂದಿಸಿ, ಉಪಚಾರಗಳನ್ನೆಲ್ಲಾ ಮಾಡಿ, ರಹಸ್ಯ ಸ್ಥಳದಲ್ಲಿ ಕೂರಿಸಿಕೊಂಡು,—ಮತ್ತೇನು ತಾವು ದಯ ಮಾಡಿದ್ದು? ನಿಮ್ಮ ಮುಖವನ್ನು ನೋಡಿದರೆ, ಬಹಳ ದುಗುಡದಿಂದ ಇರುವ ಹಾಗೆ ಕಾಣುತ್ತದೆಂದು ಕೇಳಲು; ಸುರಗುರುವು—ಎಲೈ, ದೈತ್ಯೇಂದ್ರರುಗಳಿರಾ, ನಾನು ಈಗ ಹೇಳುವ ಮಾತುಗಳನ್ನೆಲ್ಲಾ ನೀವು ಸಾವಧಾನದಿಂದ ಕೇಳಿ, ಮಹಾ ಬುದ್ಧಿ ಶಾಲಿಗಳಾದ ಶುಕ್ರಾಚಾರ್ಯರೊಡನೆ ಆಲೋಚಿಸಿ, ನಾನು ಹೇಳಿದಂಥಾದ್ದು ಯುಕ್ತವಾಗಿದ್ದರೆ, ಆ ಪ್ರಕಾರ ನಡೆಯ ಬಹುದು. ಆ ಮಾತುಗಳು ಏನಂದರೆ,—ಈ ದೇವೇಂದ್ರನು, ಬಾರಿ ಬಾರಿಗೂ, ಎಷ್ಟು ವಿಧವಾಗಿ ನೀತಿಗಳನ್ನು ನಾನು ಉಪದೇಶಾ ಮಾಡುತ್ತಾ ಬಂದಾಗ್ಯೂ, ತನ್ನ ಶಿರಿಯ ಹೆಮ್ಮೆಯಿಂದ ಅದನ್ನು ಕೇಳದೆ, ಮಹಾ ಋಷಿಗಳಿಗೆ ಅವಮಾನವನ್ನು ಮಾಡುವದೂ, ಅನ್ಯಾಯದಿಂದ ನಡೆಯುವದೂ, ಹೀಗೆ ಮಾಡುತ್ತ ಬಂದದರಿಂದ, ಪದೆ ಪದೆ ಅವನಿಗೆ ಹಾನಿಗಳು ತಟ್ಟುತ್ತಾ ಇರುವವು. ಹಾಗೆ ತಟ್ಟಿದಾಗ್ಯೂ, ವಿಷ್ಣುವು ಅವನಿಗೆ ಸಹಾಯಕನಾದ್ದರಿಂದ, ಅವುಗಳನ್ನೆಲ್ಲಾ ಪರಿಹರಿಸುತ್ತ, ತಿರಿಗಿ ತ್ರಿ ಲೋಕಾಧಿಪತ್ಯವನ್ನು ಶೇರಿಸುತ್ತ ಬಂದನು. ಈಗ ಅವನ ಕೊಬ್ಬಿನಿಂದ ದೂರ್ವಾಸ ಮುನಿಯ ಶಾಪವು ಅವನಿಗೆ ಪ್ರಾಪ್ತವಾಗಿ, ಸಕಲ ದೇವತೆಗಳೊಡನೆ ಕೂಡಿ, ಓಡಿ ಹೋಗಿದ್ದಾನೆ. ನಿಮಗೆ ತ್ರಿ ಲೋಕಾಧಿಪತ್ಯವು ಸ್ವಾಧೀನವಾಗುತ್ತೆ. ಆದರೂ, ಕೆಲವು ದಿವಸದ ಮೇಲೆ ನಿಮ್ಮನ್ನು ಜೈಸಿ, ವಿಷ್ಣುವು ತಿರಿಗಿ ಅವನಿಗೆ ಶೇರಿಸುವನು. ಇದನ್ನು ನಾನು ಯೋಚಿಸಿ, ಈ ದುಷನಾದ ಇಂದ್ರನ ಸಹವಾಸವು ನನಗೆ ತಪ್ಪುವ ಹಾಗೆ ಮಾಡುವದಕ್ಕೆ ನಿಮಗೆ ಶಾಶ್ವಿತವಾಗಿ ತ್ರಿ ಲೋಕಾಧಿಪತ್ಯವು ನಿಲ್ಲುವಂತೆ ಮಾಡಿ, ನಾನೂ ಶುಕ್ರಾಚಾರ್ಯರೂ ಏಕಾಲೋಚನೆಯಿಂದ ಸುಖವಾಗಿರ ಬೇಕೆಂದು ನಿಮ್ಮ ಬಳಿಗೆ ಬಂದೆನು, ಅಂದನು.

ಆಗ ಶುಕ್ರಾಚಾರ್ಯರೂ ದೈತ್ಯ ರಾಜರೂ ಆಲೋಚಿಸಿ,—ನೀವು ಹೇಳಿ

ದ್ದೆಲ್ಲಾ ನಿಜವೇ ಸರಿ! ಒಂದು ಮಾತಾದರೂ ಸುಳ್ಳಲ್ಲ. ನೀವು ಇಂದ್ರನನ್ನು ಬಿಟ್ಟು, ನಮಗೆ ಸಹಾಯವಾದರೆ, ಎಂದಿಗೂ ತ್ರಿ ಲೋಕಾಧಿಪತ್ಯವು ನಮ್ಮನ್ನು ಬಿಟ್ಟು ತೊಲಗುವದಿಲ್ಲವೆಂದು ಖಂಡಿತವಾಗಿ ತಿಳಿದು ಇದ್ದೇವೆ. ತಾವು ನಮಗೆ ಸ್ಥಿರವಾಗುವ ಹಾಗೆ ಮಾಡಿದಲ್ಲಿ, ನಿಮ್ಮ ಆಜ್ಞೆಯನ್ನು ಸ್ವಲ್ಪವಾದರೂ ಮೀರದೆ ನಡೆದು ಕೊಳ್ಳುವೆವೆಂದು ಬಿನ್ನವಿಸಿದರು. ಆಗ ಬೃಹಸ್ಪತಿಯು ಅವರನ್ನು ಕುರಿತು—ಎಲೈ, ದೈತ್ಯ ರಾಜರುಗಳಿರಾ, ನೀವು ಹಾಗೆ ನಡೆಯುವಂಥಾವರೇ ಸರಿ. ಈ ವಿಷಯದಲ್ಲಿ ನನಗೆ ಬಹಳ ನಂಬಿಗೆ ಉಂಟು. ಆದರೆ ನಾನು ಯೋಚಿಸಿರುವ ಕೆಲಸವು ಮಹಾ ದುರ್ಘಟವಾಗಿರುವದು. ಆ ಕೆಲಸಕ್ಕೆ ವಿಷ್ಣುವು ಸಹಾಯವಾಗದಿದ್ದರೆ, ನಡೆಯಲಾರದು. ಆದ್ದರಿಂದ ನಾನು ಮೊದಲಿನ ಹಾಗೆಯೇ ಆ ದೇವತೆಗಳಲ್ಲಿಯೇ ಸೇರಿ ಕೊಂಡು, ಅದರ ಸಂವಿಧಾನಗಳೆಲ್ಲಾ ಮಾಡಿ, ಕೈ ಗೂಡಿದರೆ, ತಿರಿಗಿ ಬಂದು, ನಿಮ್ಮನ್ನು ಕಂಡು, ಏಕಾಂತದಲ್ಲಿ ತಿಳಿಸುತ್ತೇನೆ. ಈಗ ಸದ್ಯಕ್ಕೆ ನೀವು ಸರ್ವರು ಮಹಾತ್ಮರಾದ ಶುಕಾಚಾರ್ಯರನ್ನು ಕರೆದು ಕೊಂಡು, ದೇವತೆಗಳು ಬಿಟ್ಟು ಹೋಗಿರುವ ಸ್ವರ್ಗಕ್ಕೆ ಹೋಗಿ, ತ್ರಿ ಲೋಕಾಧಿಪತ್ಯವನ್ನು ಆಳಿ ಕೊಂಡು ಇರ್ರಿ, ಎಂದು ಹೇಳಿ, ಅವರನ್ನೆಲ್ಲಾ ಅಮರಾವತೀ ಪಟ್ಟಣಕ್ಕೆ ಕಳುಹಿಸಿ ಬಿಟ್ಟು, ತಾನು ಅವರ ಅಪ್ಪಣೆಯನ್ನು ತೆಗೆದು ಕೊಂಡು, ಅಲ್ಲಿಂದ ಹೊರಟು, ಮಹಾ ವಿಷ್ಣುವಿನ ಬಳಿಗೆ ಬಂದು, ದೇವೇಂದ್ರನಿಗೆ ದೂರ್ವಾಸರ ಶಾಪ ಬಂದದ್ದನ್ನೂ ತಾನು ದೇವತೆಗಳನ್ನು ನೈಮಿಶಾರಣ್ಯಕ್ಕೆ ಕಳುಹಿಸಿ, ದೈತ್ಯರ ಬಳಿಗೆ ಹೋಗಿ, ಮಾಡಿರುವ ತಂತ್ರವನ್ನೂ ತಿಳಿಸಿ,—ನೀನು ಮಹಾತ್ಮನು. ಯಥಾ ಪ್ರಕಾರವಾಗಿ ದೇವತೆಗಳಿಗೆ ಸ್ವರ್ಗವು ಸೇರುವದಕ್ಕೆ ಏನು ಉಪಾಯವನ್ನು ಹೇಳುತ್ತೀಯೋ, ಆ ಪ್ರಕಾರ ನಡೆಯುವೆನು, ಅಂದನು.

ಆ ಮಾತನ್ನು ಕೇಳಿ, ಮಹಾ ವಿಷ್ಣುವು ಮುಗುಳು ನಗೇ ನಕ್ಕು, ಸುರ ಗುರುವನ್ನು ನೋಡಿ,—ನೀನು ಮಹಾ ಬುದ್ಧಿವಂತನು; ಒಳ್ಳೇ ಯೋಚನೆಯನ್ನು ಮಾಡಿದೆ. ನಿನ್ನಂಥಾ ಗುರುವು ದೇವೇಂದ್ರನಿಗೆ ಇರುವಲ್ಲಿ, ಅವನಿಗೆ ಯಾವ ಕೆಲಸ ತಾನೆ ಅಸಾಧ್ಯವು? ಎಂದು, ಬಹಳವಾಗಿ ಹೊಗಳಿದನು. ಅದನ್ನು ಕೇಳಿ, ಸುರ ಗುರುವು—ಎಲೈ, ಸ್ವಾಮಿಯೇ, ಸಕಲ ಲೋಕದಲ್ಲಿರುವ ಪ್ರಾಣಿಗಳು ಬೊಂಬೆಗಳು, ನೀನು ಸೂತ್ರಧಾರನು. ನೀನು ಕುಣಿಸಿದ ಹಾಗೆ ಕುಣಿಯುವವು. ಭಕ್ತನಾದ ನನ್ನ ಹೃದಯದಲ್ಲಿ ಇದ್ದು ಕೊಂಡು, ನೀನು ಪ್ರೇರಿಸಿದ ಹಾಗೆ ನಾನು ಮಾಡಿದೆನೇ ಹೊರ್ತು, ನನ್ನ ಬುದ್ಧಿ ಎಷ್ಟರದು? ನಾನು ಎಷ

ರವನು? ನೀನು ಉಬ್ಬಿಸಿ, ನನ್ನನ್ನು ಕೊಂಡಾಡಿ, ನಾಚಿಕೆ ಪಡಿಸ ಬೇಡ. ಮುಂದೆ ಮಾಡುವ ಕೆಲಸಕ್ಕೆ ಅಪ್ಪಣೇ ಕೊಡು ಎಂದು ಬೇಡಿ ಕೊಂಡನು.

ಮಹಾ ವಿಷ್ಣುವು—ಎಲೈ, ಸುರಾಚಾರ್ಯನೇ, ನನ್ನ ಕ್ಷೀರ ಸಮುದ್ರವನ್ನು ಮಂದರ ಪರ್ವತದಿಂದ ಕಡೆದರೆ, ಈ ಕಡಲಲ್ಲಿ ಅಮೃತವು ಹುಟ್ಟುವದು. ಆ ಅಮೃತವನ್ನು ದೇವತೆಗಳು ಕುಡಿದರೆ, ಜರಾ ಮರಣ ರಹಿತರಾಗಿ, ತ್ರಿ ಲೋಕಾಧಿಪತ್ಯವನ್ನು ಹೊಂದಿ, ತಿರಿಗಿ ಆಳುವರು. ಇದು ಮಹಾ ಅಸಾಧ್ಯ ವಾದ ಕೆಲಸವು. ದೇವತೆಗಳಿಂದ ಮಾತ್ರವೇ ಸಾಗದು. ನೀನು ಏನಾದರೂ ಈಗೆ ಮಾಡಿರುವ ತಂತ್ರವನ್ನೇ ತಳಹದಿ ಮಾಡಿ ಕೊಂಡು, ದೇವತೆಗಳಿಗೂ ದೈತ್ಯರಿಗೂ ಸಂಧಿಯನ್ನು ಮಾಡಿ, ಇಬ್ಬರನ್ನು ಕೂಡಿಸಿದರೆ, ಈ ಕೆಲಸ ಸಾಗೀತು ಎಂದು, ಹೇಳಿ ಕಳುಹಿಸಿದನು. ಸುರ ಗುರುವು ಆ ಮಾತನ್ನು ಕೇಳಿ, ವಿಷ್ಣುವಿಗೆ ನಮಸ್ಕರಿಸಿ,—ನಿನ್ನ ಕೃಪೆಯಿಂದ ನೀನು ಹೇಳಿದ ಹಾಗೆ ಯೇ ಮಾಡುವೆನೆಂದು ಅಪ್ಪಣೆಯನ್ನು ತೆಗೆದು ಕೊಂಡು, ಅಲ್ಲಿಂದ ಹೊರಟು, ನೈಮಿಶಾರಣ್ಯಕ್ಕೆ ಬಂದು, ದೇವೇಂದ್ರನಿಗೆ ಏಕಾಂತದಲ್ಲಿ ತಾನು ಮಾಡಿರುವ ತಂತ್ರಾಲೋಚನೆಗಳನ್ನೆಲ್ಲಾ ತಿಳಿಸಿ, ಅಲ್ಲಿಂದ ಸ್ವರ್ಗ ಲೋಕವನ್ನು ಕುರಿತು ಹೊರಟನು.

ಅಷ್ಟರಲ್ಲಿ ದೈತ್ಯ ರಾಜರು ಸ್ವರ್ಗ ಲೋಕದಲ್ಲಿ ಇದ್ದು ಕೊಂಡು, ತ್ರಿ ಲೋಕಾಧಿಪತ್ಯವನ್ನು ಆಳುತ್ತ, ತಮ್ಮ ಗುರುವಾದ ಶುಕ್ರಾಚಾರ್ಯರೊಡನೆ—ಸುರರ ಗುರುವಾದ ಬೃಹಸ್ಪತ್ಯಾಚಾರ್ಯರು ನಮ್ಮಲ್ಲಿ ಹೇಳಿ, ಹೋಗಿ, ಬಹಳ ದಿವಸ ವಾಯಿತು; ಇನ್ನೂ ಬರಲಿಲ್ಲ. ನಮ್ಮ ಬಳಿಗೆ ಬಂದು, ಸುಳ್ಳು ಮಾತುಗಳನ್ನು ಹೇಳಿ, ನಮ್ಮನ್ನು ಪುಸಲಾಯಿಸಿ ಹೋದ ಹಾಗೆ ಕಾಣುತ್ತದೆ ಎಂದು ಹೇಳಲು; ಶುಕ್ರಾಚಾರ್ಯರು,—ಅವರು ಹಾಗೆ ಸುಳ್ಳು ಹೇಳ ತಕ್ಕವರಲ್ಲ. ಏನೋ ಮಹಾ ಕಾರ್ಯ ಪ್ರಯತ್ನದಿಂದ ಸ್ವಲ್ಪ ಸಾವಕಾಶವಾಗಿರ ಬಹುದು. ನೀವು ಇಷ್ಟು ಮಾತ್ರಕ್ಕೆ ಚಪಲ ಚಿತ್ತರಾಗಿ ಬೇರೆ ಆಲೋಚನೆಯನ್ನು ಮಾಡ ಬಾರದು. ಯಾವ ಮನುಷ್ಯನು ಚಂಚಲ ಚಿತ್ತನಾಗದೆ, ಸ್ಥಿರ ಚಿತ್ತನಾಗಿರುವನೋ? ಅವನಿಗೆ ತಾನು ಎಣಿಸಿದ ಕೆಲಸಗಳೆಲ್ಲಾ ಕೈ ಗೂಡುವವು ಎಂದು ಹೇಳುತ್ತ, ಇದ್ದರು.

ಆ ವೇಳೆಗೆ ಸರಿಯಾಗಿ ಬೃಹಸ್ಪತ್ಯಾಚಾರ್ಯರು ಅರಮನೆಯ ಬಾಗಲಲ್ಲಿ ನಿಂತು—ನಾನು ಬಂದಿರುವ ಸುದ್ದಿಯನ್ನು ದೈತ್ಯ ರಾಜರಿಗೆ ಬೇಗ ತಿಳಿಸು ಎಂದು, ಬಾಗಲ ಕಾಯುವವನಿಗೆ ಹೇಳಲು; ಅವನು ಹೋಗಿ, ಬಿನ್ನವಿಸಿದ ಕ್ಷಣವೇ,

ಅವರೆಲ್ಲರು—ಆಚಾರ್ಯರು ಹೇಳಿದ ಮಾತು ಯುಕ್ತವೆಂದು ನಿಶ್ಚೈಸಿ ಕೊಂಡು, ಶುಕ್ರಾಚಾರ್ಯರನ್ನು ಸಂಗಡ ಕರೆದು ಕೊಂಡು, ಎದುರಾಗಿ ಬಂದು, ಬೃಹಸ್ಪತ್ಯಾಚಾರ್ಯರಿಗೆ ಅಭಿವಂದಿಸಿ, ಕೈ ಹಿಡಿದು, ಏಕಾಂತ ಸ್ಥಳಕ್ಕೆ ಕರೆದು ಕೊಂಡು ಹೋಗಿ, ಪೀಠದಲ್ಲಿ ಕುಳ್ಳರಿಸಿ, ಮನ್ನಣೆಯನ್ನು ಮಾಡಿ, ಅವರ ಅಪ್ಪಣೆಯಿಂದ ತಾವು ತಮ್ಮ ತಮ್ಮ ಉಚಿತ ಸ್ಥಾನಗಳಲ್ಲಿ ಕುಳಿತು ಕೊಂಡರು. ಆ ಬಳಿಕ ಸುರಾಚಾರ್ಯನು ನಗೆ ಮೊಗದಿಂದ ದೈತ್ಯರನ್ನು ಕುರಿತು—ನೀವು ಬಹಳ ಧರ್ಮಿಷ್ಠರಾದ್ದರಿಂದ, ನಿಮ್ಮ ಕೆಲಸವು ಕೈ ಗೂಡುವ ಹಾಗೆ ದೇವರು ಮಾಡಿದ್ದಾನೆ. ದೇವತೆಗಳಿಗೆ ಸಹಾಯವಾಗಿ ಮಹಾ ವಿಷ್ಣುವು—ಮಂದರ ಪರ್ವತದಿಂದ ತನ್ನ ಕ್ಷೀರ ಸಮುದ್ರವನ್ನು ಕಡೆದರೆ, ಅದರಲ್ಲಿ ನಿಮಗೆ ಬೇಕಾದ ಅನರ್ಘ್ಯವಾದ ವಸ್ತುಗಳೂ, ಅಮೃತವೂ ಹುಟ್ಟುವವು. ಆ ಅಮೃತವನ್ನು ನೀವು ಕುಡಿದರೆ, ಅಮರ್ತ್ಯರಾಗಿ, ತಿರಿಗಿ ದೈತ್ಯರನ್ನು ಜೈಸಿ, ನಿಮ್ಮ ಸ್ವರ್ಗವನ್ನು ಹೊಂದುವಿರಿ ಎಂದು, ಅಪ್ಪಣೇ ಕೊಡಲು; ಅಲ್ಲಿಂದ ಈಚೆಗೆ ಬಂದ ದೇವತೆಗಳನ್ನು ಕುರಿತು ನಾನು—ಎಲೈ, ದೇವತೆಗಳಿರಾ, ನೀವು ಅಲ್ಪ ಬಲರು. ಮೇರು ಪರ್ವತಕ್ಕೆ ಸಮಾನವಾದ ಮಂದರ ಪರ್ವತವನ್ನು ಕಿತ್ತು, ಹೊತ್ತು ಕೊಂಡು ಬರುವದಕ್ಕೆ ಶಕ್ತಿ ಸಾಲದು. ಇದಕ್ಕೆ ಒಂದು ಒಳ್ಳೇ ಯೋಚನೆಯು ನನ್ನ ಮನಸ್ಸಿಗೆ ತೋರಿ ಇದೆ. ಅದೇನಂದರೆ, ನೀವೂ ದೈತ್ಯರೂ ಒಬ್ಬ ತಂದೆಯ ಮಕ್ಕಳು. ಅವರಿಗೆ ನೀವು ದ್ವೇಷಿಗಳಾಗಿರುವದರಿಂದ ಪದೆ ಪದೆ ನಿಮಗೆ ಇಂಥಾ ತೊಂದರೆಗಳು ಸಂಭವಿಸುತ್ತವೆ. ಲೋಕದಲ್ಲಿ ಸ್ವ ಜನ ವಿರೋಧವು ಬಹಳ ಕೆಟ್ಟದ್ದು. ಅದರಿಂದ ದುಃಖ ಪ್ರಾಪ್ತಿಯೇ ಹೊರತು, ಎಳ್ಳಷ್ಟು ಸುಖವಿಲ್ಲ. ಆದ್ದರಿಂದ ನೀವೂ ಅವರೂ ಕೂಡಿದರೆ, ಎಂಥಾ ಅಸಾಧ್ಯ ಕೆಲಸವಾದರೂ ಸಾಗುವದು. ಆ ಮೇಲೆ ಇತ್ತಂಡದವರು ಅಮೃತ ಪಾನವನ್ನು ಮಾಡಿ, ಸುಖವಾಗಿ ಸಹೃದಯರಾಗಿರ ಬಹುದು ಎಂದು ಹೇಳಿದೆನು. ಅದಕ್ಕೆ ಅವರೆಲ್ಲರು ನನ್ನನ್ನು ಕುರಿತು—ತಾವೇ ದೈತ್ಯರಿಗೂ ನಮಗೂ ಸಂಧೀ ಮಾಡಿಸ ಬೇಕೇ ಹೊರ್ತು, ಇನ್ನೊಬ್ಬರಿಂದಲೂ ಈ ಕೆಲಸ ತೀರಲಾರದು ಎಂದು, ಬಹಳವಾಗಿ ಬೇಡಿ ಕೊಂಡದರಿಂದ, ನಾನು ನನ್ನ ಮನಸ್ಸಿನಲ್ಲಿ ಮಾಡಿದ ಯೋಚನೆಯು ಕೈ ಗೂಡುವದೆಂದು ಸಂತೋಷ ಪಟ್ಟು, ಅವರ ಮಾತಿನ ಮೇಲೆ ನಿಮ್ಮ ಬಳಿಗೆ ಬಂದವನ ಹಾಗೆ ನಿಮ್ಮ ಬಳಿಗೆ ಬಂದೆನು, ಅಂದನು.

ಅದನ್ನು ಕೇಳಿ, ಶುಕ್ರಾಚಾರ್ಯರೂ ದೈತ್ಯರೂ ಬೃಹಸ್ಪತ್ಯಾಚಾರ್ಯರ ಯುಕ್ತಿಯನ್ನು ಬಹಳವಾಗಿ ಕೊಂಡಾಡಿ,—ಮುಂದೆ, ನಾವು ನಡೆಯ ತಕ್ಕ ಬಗ್ಯೆ ಬುದ್ಧಿ

ಕಲಿಸ ಬೇಕೆಂದು ಬೇಡಿ ಕೊಂಡರು. ಅದಕ್ಕೆ ಬೃಹಸ್ಪತ್ಯಾಚಾರ್ಯರು—ನೀವು ಇತ್ತಂಡದವರು ಕೂಡಿ, ಕಡಲನ್ನು ಕಡೆಯುವಲ್ಲಿ, ಅಮೃತ ಒಂದು ವಿನಹ, ಉಳಿದ ಭೋಗ್ಯ ವಸ್ತುಗಳು ಏನೇನು ಹುಟ್ಟಿದಾಗ್ಯೂ, ಅವುಗಳನ್ನೆಲ್ಲಾ ನೀವು ಮುಟ್ಟದೆ, ದೇವತೆಗಳಿಗೆ ಬಿಟ್ಟು ಬಿಟ್ಟು, ಅಮೃತ ಒಂದನ್ನು ಮಾತ್ರ ನೀವು ತೆಗೆದು ಕೊಂಡು ಕುಡಿದರೆ, ನೀವೇ ಅಮರ್ತ್ಯರಾಗುವಿರಿ; ನೋಡುವವರಿಗೆ ನ್ಯಾಯಕ್ಕೂ ಸರಿಯಾಗಿರುವದು, ಎಂದು ಹೇಳಲು; ಆ ಮಾತನ್ನು ಕೇಳಿ, ದೈತ್ಯರೆಲ್ಲರು—ಈ ಸುರಾಚಾರ್ಯರು ನಮ್ಮ ಶ್ರೇಯಸ್ಸನ್ನೇ ಕೋರಿ ಕೊಂಡಿದ್ದಾರೇ ಹೊರ್ತು, ದೇವತೆಗಳಲ್ಲಿ ಎಷ್ಟು ಮಾತ್ರವೂ ಪ್ರೇಮವಿಲ್ಲವೆಂದು, ತಮ್ಮ ಮನಸ್ಸಿನಲ್ಲಿ ತಿಳಿದು ಕೊಂಡು, ಸುರ ಗುರುಗಳನ್ನು ಕುರಿತು—ಮುಂದೆ ಏನು ಮಾಡುತ್ತೀರಿ? ಎಂದು ಕೇಳಲು;—ನಾನು ಹೋಗಿ, ಇಂದ್ರಾದಿಗಳನ್ನೆಲ್ಲಾ ಮಂದರ ಪರ್ವತದ ತೊಪ್ಪಲಲ್ಲಿ ನಿಲ್ಲಿಸಿ, ಬಂದು, ನಿಮ್ಮನ್ನು ಅಲ್ಲಿಗೆ ಕರೆದು ಕೊಂಡು ಹೋಗುವೆನೆಂದು ಹೇಳಿ, ತಿರಿಗಿ ಮಹಾ ವಿಷ್ಣುವಿನ ಬಳಿಗೆ ಬಂದು, ತಾನು ದೈತ್ಯರಲ್ಲಿ ಹೇಳಿದ ಮಾತುಗಳನ್ನೆಲ್ಲಾ ತಿಳಿಸಿ,—ಕಡೆಗೆ ಅಮೃತವು ಅವರಿಗೆ ಶೇರದೆ, ದೇವತೆಗಳಿಗೆ ಶೇರುವ ಹಾಗೆ ಮಾಡುವ ಭಾರ ನಿನ್ನ ಕೂಡಿ ಇದೆ ಎಂದು ಹೇಳಲು; ವಿಷ್ಣುವು—ಹಾಗೆ ಮಾಡುವೆನೆಂದು ನಂಬಿಗೆಯನ್ನು ಕೊಟ್ಟು, ಕಳುಹಿಸಿದನು.

ಬೃಹಸ್ಪತ್ಯಾಚಾರ್ಯರು ದೇವೇಂದ್ರಾದಿಗಳನ್ನೆಲ್ಲಾ ಮಂದರ ಪರ್ವತದ ಬಳಿಗೆ ಕರೆದು ಕೊಂಡು ಬಂದು, ನಿಲ್ಲಿಸಿ, ದೈತ್ಯ ರಾಜರ ಬಳಿಗೆ ಹೋಗಿ, ಶುಕ್ರಾಚಾರ್ಯರು ಸಹಿತವಾಗಿ ಅವರನ್ನೆಲ್ಲಾ ಕರೆದು ಕೊಂಡು, ದೇವತೆಗಳ ಬಳಿಗೆ ಬಂದು, ಇಬ್ಬರಿಗೂ ಸಂಧೀ ಮಾಡಿ, ಸ್ನೇಹವನ್ನು ಮಾಡಿಸಿದನು. ಆ ಮೇಲೆ ಸುರಾಸುರರು, ದೈತ್ಯ ದಾನವರು, ಯಕ್ಷ, ಗರುಡ, ಗಂಧರ್ವ, ಕಿಂಪುರುಷೋರಗ, ಮುಂತಾದವರೆಲ್ಲಾ ಕೂಡಿ, ಮಂದರ ಪರ್ವತವನ್ನು ಎಷ್ಟು ಬಲದಿಂದ ಕಿತ್ತಿಗ್ಯೂ, ಅಲ್ಲಾಡದೆ ಇದ್ದ ಕಾರಣ, ದೇವಾಸುರರೆಲ್ಲರು ಮಹಾ ವಿಷ್ಣುವಿಗೆ ನಮಸ್ಕರಿಸಿ, ಪ್ರಾರ್ಥನೆಯನ್ನು ಮಾಡಿ ಕೊಳ್ಳಲು; ವಿಷ್ಣುವು ಅನಂತನೆಂಬ ಮಹಾ ಶೇಷನನ್ನು ಕರೆದು—ನೀನು ಹೋಗಿ, ಮಂದರ ಪರ್ವತವನ್ನು ಕಿತ್ತು, ಇಟ್ಟು ಬಾ ಎಂದು ಹೇಳಿ ಕಳುಹಿಸಲು; ಆತನು ಮಹಾ ಬಲಿಷ್ಠನಾದ್ದರಿಂದ, ನಿಮಿಷ ಮಾತ್ರದಲ್ಲಿ ಕಿತ್ತು ಬಿಟ್ಟನು. ಆ ಮೇಲೆ ಸುರಾಸುರರೆಲ್ಲಾ ಕೂಡಿ, ಆ ಪರ್ವತವನ್ನು ತಲೆಯ ಮೇಲೆ ಹೊತ್ತು ಕೊಂಡು ಬಂದು, ಕ್ಷೀರ ಸಮುದ್ರದಲ್ಲಿ ಹಾಕಲು; ಅದು ಕಡಲಲ್ಲಿ ಮುಳುಗಿ ಹೋಯಿತು. ಆಗ ದೇವಾಸುರರೆಲ್ಲರು ರಾತ್ರಿಯೆಲ್ಲಾ ಶ್ರಮ ಪಟ್ಟು,—ಹೆತ್ತ ಕೂಸನ್ನು ನಾಯಿ ಎತ್ತಿ ಕೊಂಡು ಹೋಯಿತು ಎಂಬ ಗಾದೆಗೆ

ಸರಿಯಾಗಿ ನಮ್ಮ ಶ್ರಮವೆಲ್ಲಾ ವ್ಯರ್ಥವಾಗಿ ಹೋಯಿತು. ಎಂದು ಚಿಂತೆ ಪಟ್ಟು—ಭಕ್ತ ಪರಾಧೀನನಾದ ಲಕ್ಷ್ಮೀ ಪತಿಯೇ, ನೀನೇ ನಮ್ಮ ಕಷ್ಟವನ್ನು ಸಾಫಲ್ಯ ಮಾಡಿ, ನಾವು ಈಗ ಯೋಚಿಸಿರುವ ಕಾರ್ಯವು ಕೈ ಗೂಡುವಂತೆ, ನಮ್ಮ ಮೇಲೆ ಕನಿಕರವಿಟ್ಟು, ಮಾಡಿಸ ಬೇಕೆಂದು, ಬಹಳವಾಗಿ ಪ್ರಾರ್ಥಿಸಿ ಕೊಂಡದರಿಂದ, ಮಹಾ ವಿಷ್ಣುವು ಅವರಿಗೆ ಪ್ರತ್ಯಕ್ಷನಾಗಿ,—ಎಲೈ, ದೇವಾಸುರರುಗಳಿರಾ, ನಾನು ಮಹಾ ಕೂರ್ಮಾವತಾರವನ್ನು ಮಾಡಿ, ಸಮುದ್ರದಲ್ಲಿ ಮುಳುಗಿರುವ ಈ ಮಂದರ ಪರ್ವತವನ್ನು ಎತ್ತಿ, ನನ್ನ ಬೆನ್ನಿನ ಮೇಲೆ ಸಮುದ್ರದ ನಡು ನೀರಿನಲ್ಲಿ ಹೊತ್ತು ಕೊಂಡಿರುವೆನು; ನಿಮ್ಮ ಸಂತೋಷವಿದ್ದ ಹಾಗೆ ಕಡೆಯಿರಿ, ಎಂದು ಹೇಳಿ, ಅದೃಶ್ಯನಾಗಿ, ಮಹಾ ಕೂರ್ಮಾವತಾರವನ್ನು ಮಾಡಿ, ತನ್ನ ಬೆನ್ನಿನಿಂದ ಎತ್ತಿ, ಪರ್ವತವನ್ನು ಧರಿಸಿ ಕೊಂಡನು.

ಆಗ ನೀರಿನ ಮೇಲೆ ನಿಂತಿರುವ ಮಂದರ ಪರ್ವತವನ್ನು ದೇವಾಸುರರು ನೋಡಿ, ಮಹಾ ವಿಷ್ಣುವಿನ ಮಹಿಮೆಗೆ ಬಹಳ ಆಶ್ಚರ್ಯ ಪಟ್ಟು, ಆತನನ್ನು ಅನೇಕ ವಿಧವಾಗಿ ಸ್ತುತಿಸಿ, ಸಮುದ್ರವನ್ನು ಕಡೆಯುತ್ತಿರಲು; ಅದರಿಂದ ಮೊದಲು ಹುಟ್ಟಿದ ವಿಷವನ್ನು ಶಿವನು ಪಾನಾ ಮಾಡಿ, ಆ ಹಿಂದೆ ಹುಟ್ಟಿದ ಚಂದ್ರ ಕಳೆಯನ್ನು ಆಭರಣವಾಗಿ ಧರಿಸಿ ಕೊಂಡನು. ತರುವಾಯ ಹುಟ್ಟಿದ ಲಕ್ಷ್ಮಿಯನ್ನೂ ಕೌಸ್ತುಭ ರತ್ನವನ್ನೂ ಮಹಾ ವಿಷ್ಣುವು ಅಂಗೀಕರಿಸಿದನು. ಆ ಬಳಿಕ ಹುಟ್ಟಿದ ಅಪ್ಸರ, ಸ್ತ್ರೀಯರೂ, ಕಲ್ಪ ವೃಕ್ಷವೂ, ಕಾಮ ಧೇನುವೂ, ಚಿಂತಾಮಣಿಯೂ, ವಾರುಣಿ ಎಂಬ ಮದ್ಯವೂ, ಉಚ್ಚೈಶ್ರವಸ್ಸೆಂಬ ಕುದುರೆಯೂ, ಮುಂತಾದ್ದನ್ನೆಲ್ಲಾ ದೇವೇಂದ್ರನು ತೆಗೆದು ಕೊಂಡನು. ಆ ಮೇಲೆ ಧನ್ವಂತ್ರಿ ಎಂಬ ಒಬ್ಬ ತೇಜಃ ಪುರುಷನು ಅಕ್ಷಯವಾದ ಅಮೃತ ಕಲಶವನ್ನು ಕೈಯಲ್ಲಿ ತೆಗೆದು ಕೊಂಡು, ಸಮುದ್ರದಿಂದ ಮೇಲಕ್ಕೆ ಬರಲು; ಆತನನ್ನು ಕಂಡು, ಬೃಹಸ್ಪತ್ಯಾಚಾರ್ಯನು ದೈತ್ಯರಿಗೆ ಕಣ್ಣಿನಿಂದ ಸಂಜ್ಞೇ ಮಾಡಲು; ದೈತ್ಯರಾಜರು ಆ ಸೂಚನೆಯನ್ನು ತಿಳಿದು, ಆ ಧನ್ವಂತ್ರಿಯ ಕೈಯಿಂದ ಅಮೃತ ಕಲಶವನ್ನು ಕಿತ್ತು ಕೊಂಡರು. ಅದನ್ನು ಕಂಡು, ದೇವತೆಗಳೆಲ್ಲಾ ಬಹಳ ಘಾಬರಿಯಾಗಿ, ಮಹಾ ವಿಷ್ಣುವನ್ನು ಕುರಿತು—ಎಲೈ, ಆಪದ್ರಕ್ಷಕನೇ, ನಮಗಿನ್ನೇನು ಗತಿ? ಈ ವೇಳೆಯಲ್ಲಿ ನೀನು ಉದ್ಧಾರಾ ಮಾಡದೆ ಇದ್ದರೆ, ನಾವು ವ್ಯರ್ಥವಾಗಿ ಕೆಟ್ಟು ಹೋಗುತ್ತೇವೆ ಎಂದು, ಬಹಳವಾಗಿ ಸ್ತುತಿಸಿದ್ದರಿಂದ, ಕರುಣಾಳುವಾದ ವಿಷ್ಣುವು ಮೋಹಿನೀ ಅವತಾರವನ್ನು ತಾಳಿ, ದೈತ್ಯರನ್ನು ವಂಚಿಸಿ, ಅವರ ಕೈಯಿಂದ ಅಮೃತ ಕಲಶವನ್ನು ತೆಗೆದು ಕೊಂಡು, ದೇವತೆಗಳಿಗೆಲ್ಲಾ ಕುಡಿಸಿ, ಧನ್ವಂತ್ರಿಯನ್ನೂ ಅ

ಮೃತ ಕಲಶವನ್ನೂ ದೇವೇಂದ್ರನ ವಶಕ್ಕೆ ಕೊಟ್ಟು, ಅದೃಶ್ಯವಾಗಿ ಹೋದನು. ದೈತ್ಯರೆಲ್ಲಾ—ಮೋಸ ಹೋದೆವೆಂದು ಯೋಚಿಸಿ ಕೊಂಡು, ತಿರಿಗಿ ದೇವತೆಗಳ ಕಡೆಯಿಂದ ಕಿತ್ತು ಕೊಳ್ಳ ಬೇಕೆಂದು ಯುದ್ಧಕ್ಕೆ ಉದ್ಯುಕ್ತರಾಗಲು; ದೇವೇಂದ್ರಾದಿ ದೇವತೆಗಳು ಅಮೃತ ಪಾನದ ಬಲದಿಂದ ದೈತ್ಯರನ್ನೆಲ್ಲಾ ಜೈಸಿದ್ದರಿಂದ, ಅವರೆಲ್ಲರು ರಸಾತಲಕ್ಕೆ ಓಡಿ ಹೋದರು. ಆ ಬಳಿಕ ದೇವತೆಗಳೆಲ್ಲರು ಮಹಾ ವಿಷ್ಣುವನ್ನು ಕಂಡು, ನಮಸ್ಕರಿಸಿ, ಸ್ವರ್ಗ ಲೋಕಕ್ಕೆ ಬಂದು, ದೇವೇಂದ್ರನಿಗೆ ತಿರಿಗಿ ತ್ರಿ ಲೋಕಾಧಿಪತ್ಯಕ್ಕೆ ಅಭಿಷೇಕವನ್ನು ಮಾಡಿ, ಸುಖವಾಗಿದ್ದರು.

77. The Third or Boar Incarnation.

೭೭. ವರಾಹಾವತಾರದ ಕಥೆ.

ಚತುರ್ಮುಖ ಬ್ರಹ್ಮನ ಮಾನಸ ಪುತ್ರನಾದ ಕಶ್ಯಪ ಪ್ರಜಾಪತಿಯ ಹೆಂಡತಿಯಾದ ದಿತಿಯು ಬಸುರಿನಲ್ಲಿ, ವೈಕುಂಠ ಲೋಕದ ದ್ವಾರ ಪಾಲಕರಾದ ಜಯ ವಿಜಯರು ಸನಕ ಸನಂದನರೆಂಬ ಮುನಿಗಳ ಶಾಪದಿಂದ ಅವಳ ಮಕ್ಕಳಾಗಿ ಹುಟ್ಟಲು; ಬ್ರಹ್ಮ ದೇವನು ಅವರ ಬಳಿಗೆ ಬಂದು, ಹಿರೀ ಹುಡುಗನಿಗೆ ಹಿರಣ್ಯಕಶಿಪುವೆಂದೂ, ಕಿರಿಯವನಿಗೆ ಹಿರಣ್ಯಾಕ್ಷನೆಂದೂ, ಹೆಸರನ್ನಿಟ್ಟು, ಅವರಿಗೆ ಬೇಕಾದ ಒಡವೆ ವಸ್ತು ಆಭರಣಾದಿಗಳನ್ನು ಕೊಟ್ಟು, ಹರಸಿ, ಹೊರಟು ಹೋದನು. ಆ ಮೇಲೆ ಅವರಿಬ್ಬರು ಅದ್ಭುತಾಕಾರರಾಗಿ ಬೆಳೆದು, ಮಹಾ ಪರಾಕ್ರಮ ಶಾಲಿಗಳಾಗಿ, ದಿಗ್ವಿಜಯಗಳನ್ನು ಮಾಡಿ, ಸಕಲ ಧರಣೀ ಮಂಡಲವನ್ನು ತಮ್ಮ ಸ್ವಾಧೀನಾ ಮಾಡಿ ಕೊಂಡು, ಶೋಣಿತ ಪುರವೆಂಬ ಪಟ್ಟಣದಲ್ಲಿ ಅತಿ ಸಂಭ್ರಮದಿಂದ ಇದ್ದು ಕೊಂಡು, ರಾಜ್ಯ ಭಾರವನ್ನು ಮಾಡುತ್ತಾ ಇದ್ದರು. ಅವರ ರಾಜ್ಯದಲ್ಲಿ ದೇವೇಂದ್ರನು ಅವರಿಗೆ ಹೆದರಿ ಕೊಂಡು, ಕಾಲ ಕಾಲದಲ್ಲಿ ಮಳೆಗಳನ್ನು ಕರೆಯುತ್ತ ಬಂದದರಿಂದ, ಗದ್ದೆ, ಹೊಲ, ತೋಟ ಮುಂತಾದ ಪೈರುಗಳಾಗುವ ಭೂಮಿಗಳೆಲ್ಲಾ ಪೈರು ಪಚ್ಚೆಗಳಿಂದ ಸದಾ ಕಾಲವು ತುಂಬಿ ಇದ್ದ ಕಾರಣ, ಸರ್ವ ಪ್ರಜೆಗಳು ಸುಭಿಕ್ಷದಿಂದ ಸುಖವಾಗಿ ಸಕಲ ಐಶ್ವರ್ಯ ಸಂಪನ್ನರಾಗಿದ್ದರು. ಯಮನು ಆ ದೈತ್ಯರ ಭಯದಿಂದ, ಅವರಾಳುವ ದೇಶದಲ್ಲಿ ಅಕಾಲದಲ್ಲಿ ಸಾವು ಉಂಟಾಗದಂತೆ ಕಾದು ಕೊಂಡು, ಜಾಗರೂಕನಾಗಿರುವನು. ಮತ್ತು ಅವರ ರಾಜ್ಯದಲ್ಲಿ ಒಬ್ಬನಾದರೂ ದರಿದ್ರನಿಲ್ಲ.

ಹೀಗೆ ಏಕ ಛತ್ರಾಧೀಶ್ವರರಾಗಿ, ರಾಜ್ಯವನ್ನಾಳುತ್ತಾ ಇರುವಲ್ಲಿ, ನಾರದ ಮುನೀಶ್ವರನು, ಅವರ ಐಶ್ವರ್ಯವನ್ನು ನೋಡ ಬೇಕೆಂದು, ಬರಲು; ಆ ಹಿರಣ್ಯಾಕ್ಷ ಹಿರಣ್ಯಕಶಿಪುಗಳು ಬಂದ ನಾರದನನ್ನು ಮನ್ನಿಸಿ, ತಮ್ಮ ಸಮೀಪದಲ್ಲಿ

ಚಿನ್ನದ ಕಾಲು ಮಣೆಯ ಮೇಲೆ ಕುಳ್ಳಿರಿಸಿ,—ಎಲೈ, ಮುನಿಯೇ, ನೀನು ಮೂರು ಲೋಕಗಳನ್ನು ತಿರುಗುತ್ತೀಯಲ್ಲ? ಹಿಂದೆಯಾಗಲಿ, ಈಗಲಾಗಲಿ, ನಮ್ಮ ಹಾಗೆ ಸಕಲ ಸಂಪತ್ತಿನಿಂದ ರಾಜ್ಯ ಭಾರವನ್ನು ಮಾಡಿದ್ದವರೂ ಮಾಡುತ್ತಿರುವವರೂ ಉಂಟೇ? ಎಂದು ಕೇಳಿದ್ದಕ್ಕೆ, ಆ ಮುನಿಯು—ನಿಮ್ಮ ಹಾಗೆ ರಾಜ್ಯ ಭಾರವನ್ನು ಮಾಡುತ್ತ ಇದ್ದವರೂ ಇರುತ್ತಿರುವವರೂ ಮೂರು ಲೋಕದಲ್ಲಿಯೂ ಯಾರೂ ಇಲ್ಲ, ಎಂದು ಹೇಳಿದನು. ಆ ಮಾತಿಗೆ—ಹಾಗಾದರೆ, ಮುಂದೆಯಾದರೂ ನಮ್ಮ ಹಾಗೆ ರಾಜ್ಯ ಭಾರಾ ಮಾಡುವವರು ಯಾರಾದರೂ ಹುಟ್ಟುವರೋ? ಎಂದು ಕೇಳಲು; ಆ ಮುನಿಯು—ನಿಮ್ಮ ವಂಶದಲ್ಲಿ ಬಲಿ ಚಕ್ರವರ್ತಿ ಎಂಬವನು ನಿಮಗಿಂತ ಅತಿಶಯವಾಗಿ ಈ ಧರಣಿಯನ್ನು ಆಳುವನು. ವಿಷ್ಣುವು ಮೋಸವನ್ನು ಮಾಡಿ, ಅವನ ಕೈಯಿಂದ ಭೂಮಿಯನ್ನು ಕಿತ್ತು ಕೊಳ್ಳುವನು ಎಂದು ಹೇಳಿದನು. ಆ ಮಾತನ್ನು ಕೇಳಿದ ಕ್ಷಣವೇ, ಕಿರಿಯವನಾದ ಹಿರಣ್ಯಾಕ್ಷನೆಂಬವನು ಕೋಪದಿಂದ ಕಣ್ಣುಗಳಲ್ಲಿ ಕಿಡಿಗಳನ್ನು ಉದುರಿಸುತ್ತ, ನಾವೂ ನಮ್ಮ ವಂಶದವರೂ ಆಳುವ ಧರಣಿಯನ್ನು ನಮ್ಮ ಕಡೆಯಿಂದ ಕಳೆದು ಕೊಳ್ಳುವದಕ್ಕೆ ವಿಷ್ಣು ಎಷ್ಟರವನು? ಈ ನಮ್ಮ ಧರಣಿಯು ಅವನ ಕೈಗೆ ಸಿಕ್ಕದಂತೆ ಮಾಡ ಬೇಕು ಎಂದು, ಆ ಕ್ಷಣವೇ ಎದ್ದು, ಭೂಮಿಯನ್ನು ಚಾಪೆಯ ಹಾಗೆ ಸುತ್ತಿ ಕೊಂಡು, ಕಂಕುಳಲ್ಲಿ ಇಟ್ಟು ಕೊಂಡು, ಸಮುದ್ರದೊಳಗೆ ಹೊಕ್ಕು, ರಸಾತಲದಲ್ಲಿ ತೆಗೆದು ಕೊಂಡು ಹೋಗಿ, ಇಟ್ಟು, ತನ್ನ ಮೈ ಗೊಬ್ಬಿನಿಂದ ದೇವತೆಗಳನ್ನು ಜೈಸ ಬೇಕೆಂದು, ಗದಾ ದಂಡವನ್ನು ಧರಿಸಿ ಕೊಂಡು, ಹೊರಟು ಹೋದನು.

ಅಷ್ಟರಲ್ಲಿಯೇ ಸಕಲ ದೇವತೆಗಳೂ ಮುನಿ ಜನಗಳೂ ಕೂಡಿ, ಬ್ರಹ್ಮ ದೇವರ ಬಳಿಗೆ ಹೋಗಿ, ಆತನನ್ನು ಕರೆದು ಕೊಂಡು, ಕ್ಷೀರ ಸಮುದ್ರಕ್ಕೆ ಹೋಗಿ, ಶ್ರೀ ಮಹಾ ವಿಷ್ಣುವನ್ನು ಕಂಡು, ನಮಸ್ಕರಿಸಿ, ಸ್ತೋತ್ರವನ್ನು ಮಾಡಿ,—ಎಲೈ, ಜಗನ್ನಾಥನೇ, ದುಷ್ಟನಾದ ಹಿರಣ್ಯಾಕ್ಷನೆಂಬ ದೈತ್ಯನು ಭೂಮಿಯನ್ನು ತೆಗೆದು ಕೊಂಡು ಹೋಗಿ, ರಸಾತಲದಲ್ಲಿ ಹಾಕಿದ್ದರಿಂದ, ದೇವ ಯಜ್ಞ, ಪಿತೃ ಯಜ್ಞ ಮೊದಲಾದದ್ದು ಒಂದೂ ನಡೆಯದೆ, ನಾವೆಲ್ಲರು ಮೃತ ಪ್ರಾಯರಾಗಿದ್ದೇವೆ. ನೀನು ಕರುಣಿಸಿ, ಆ ದೈತ್ಯನನ್ನು ಕೊಂದು, ಭೂಮಿಯನ್ನು ರಸಾತಲದಿಂದ ಮೇಲಕ್ಕೆ ಎತ್ತಿ ಇಟ್ಟು, ನಮ್ಮನ್ನು ಕಾಪಾಡ ಬೇಕೆಂದು, ಬೇಡಿಕೊಂಡದರಿಂದ,—ಒಳ್ಳೇದೆಂದು, ಅವರಿಗೆ ಅಭಯವನ್ನಿತ್ತು, ಅವರವರ ಲೋಕಕ್ಕೆ ಕಳುಹಿಸಿ ಬಿಟ್ಟನು.

ಹೀಗಿರುವಲ್ಲಿ, ಒಂದು ದಿವಸ ಸತ್ಯ ಲೋಕದಲ್ಲಿ ಬ್ರಹ್ಮ ದೇವನು—ಎಂದಿಗೆ ಪುರುಷೋತ್ತಮನು ಈ ಭೂಮಿಯನ್ನು ಯಥಾ ಪ್ರಕಾರಕ್ಕೆ ರಸಾತಲದಿಂದ ಮೇಲಕ್ಕೆ ಎತ್ತಿ, ಹವ್ಯ ಕವ್ಯಗಳು ನಡೆಯುವ ಹಾಗೆ ಮಾಡುವನೋ? ಎಂದು ಚಿಂತಿಸುತ್ತ, ಆತನನ್ನು ಧ್ಯಾನಿಸುತ್ತಿರುವಲ್ಲಿ, ಆತನ ಮೂಗಿನ ಸೊಳ್ಳೆಯ ದೆಸೆಯಿಂದ ಅಂಗುಷ್ಟ ಮಾತ್ರಕ್ಕೆ ಒಂದು ವರಾಹನು ಕೆಳಗೆ ಬಿದ್ದು, ಒಡನೆ ಗಗನವನ್ನು ಮುಟ್ಟುವ ಹಾಗೆ ರೌದ್ರಾಕಾರನಾಗಿ ಬೆಳೆದು, ಎಂಟು ದಿಕ್ಕುಗಳು ಒಡೆಯುವ ಹಾಗೆ ಘರ್ಜಿಸಿದನು. ಆ ವರಾಹನಿಗೆ ನಾಲ್ಕು ವೇದಗಳು ನಾಲ್ಕು ಕಾಲುಗಳಾದವು. ವಾಸುಕಿಯು ಬಾಲವಾದನು. ಸ್ಮೃತಿ ಪುರಾಣಗಳೆರಡೂ ಕಿವಿಗಳಾದವು. ಸೂರ್ಯ ಚಂದ್ರರು ಕಣ್ಣುಗಳಾದರು. ಯಜ್ಞಗಳು ಕೋರ ದಾಡೆಗಳಾದವು. ಸಕಲ ಮಂತ್ರಗಳು ಸರ್ವಾಂಗಗಳಾದವು. ಇಂಥ ಅದ್ಭುತಾಕಾರಿಯಾದ ವರಾಹನನ್ನು ಕಂಡು, ಬ್ರಹ್ಮ ದೇವನು—ಸ್ವಾಮೀ, ನಿನ್ನಾರ್ಭಟೆಯನ್ನು ನೋಡಿ, ಯಾವವನು ಸಹಿಸ್ಯಾನು? ನೀನು ಕೃಪೆ ಮಾಡಿ, ಭೂಮಿಯನ್ನು ತಂದು, ಆ ಕೇಡುಗನನ್ನು ಕೊಂದು, ಲೋಕವನ್ನು ಉದ್ಧರಿಸು, ಎಂದು ಬೇಡಿಕೊಳ್ಳಲು; ಒಡನೆ ವರಾಹನು ಘುಡಿ ಘುಡಿಸುತ್ತ, ದಾಡೆಯನ್ನು ಮಸೆದು, ಎಡಬಲಗಳನ್ನು ನೋಡಿ, ಮೂಗಿನ ಸೊಳ್ಳೆಗಳಲ್ಲಿ ಕಿಡಿಗಳನ್ನು ಉದುರಿಸುತ್ತ, ಬಾಲವನ್ನು ಆಕಾಶಕ್ಕೆ ಎತ್ತಿ, ರೋಮವನ್ನು ಕೆದರಿ ಕೊಂಡು, ಪಾತಾಳವನ್ನು ಹೊಕ್ಕು, ಅಲ್ಲಿ ಬಿದ್ದಿರುವ ಧರಣಿಯನ್ನು ಕೋರ ದಾಡೆಗಳಿಂದ ಮೇಲಕ್ಕೆ ಎತ್ತಿ, ತರುತ್ತಿದ್ದನು.

ಇತ್ತಲು, ಅಷ್ಟರಲ್ಲಿಯೇ ಪ್ರಾಯದ ಕೊಬ್ಬಿನಿಂದ ಬಲಿಷ್ಠರಾದ ದೇವತೆಗಳನ್ನು ಜೈಸುವದಕ್ಕೆ ಹೊರಟದ್ದ ಹಿರಣ್ಯಾಕ್ಷನು ಬಲದ ಉಬ್ಬಿನಲ್ಲಿ ಕಂಡಕಂಡವರನ್ನು ಕಾಳಗಕ್ಕೆ ಕರೆದು, ಕರೆದು, ಎದುರಾದವರನ್ನು ಧೂಳೀಪಟಾ ಮಾಡುತ್ತ, ಬರುತ್ತಿರುವಲ್ಲಿ, ಒಬ್ಬರೂ ಅವನ ಕಣ್ಣಿಗೆ ಎದುರಾಗದೆ, ಕದ್ದು, ಓಡಿ ಹೋಗುತ್ತಾ ಇದ್ದರು. ಆ ಹಿರಣ್ಯಾಕ್ಷನು ತನ್ನೊಡನೆ ನಿಂತು ಕಾದುವವರು ಯಾರೂ ಇಲ್ಲದೆ ಇರಲು; ಬಲಿಷ್ಠರಾದವರನ್ನು ಹುಡುಕುತ್ತ ಬಂದು, ಅಮರಾವತೀ ಪಟ್ಟಣವನ್ನು ಹೊಗಲು; ಅವನನ್ನು ಕಂಡು, ದೇವತೆಗಳೆಲ್ಲಾ ದಿಕ್ಕು ದಿಕ್ಕಿಗೆ ಚೆಲ್ಲಿ ಹೋದರು. ಆಗ ದೈತ್ಯನು ದೇವೇಂದ್ರನ ಬಳಿಗೆ ಬಂದು, ಅವನನ್ನು ಕುರಿತು—ಎಲೈ, ಸುರಾಧಿಪನೇ, ನೀನಷ್ಟೆ ಈ ದೇವತೆಗಳಿಗೆಲ್ಲಾ ಒಡೆಯನೆನಿಸಿ ಕೊಂಡು, ಜಂಭಾಸುರ, ಪಾಕಾಸುರ ಮೊದಲಾದ ದೈತ್ಯರನ್ನು ಗೆದ್ದು, ಜಂಭಾರಿ, ಪಾಕಶಾಸನ, ಎಂದು ಹೆಸರು ಇಡಿಸಿ ಕೊಂಡು, ಹೊಗಳಿಸಿ

ಕೊಳ್ಳುವವನು. ಏಳು! ನನ್ನೊಡನೆ ಕಾಳಗಕ್ಕೆ ಬಾ! ನೋಡೋಣಾ, ಎನ್ನಲು; ಇಂದ್ರನು ಗಡ ಗಡನೆ ನಡುಗುತ್ತ,—ಐಯ್ಯಾ, ದೈತ್ಯ ರಾಜನೇ, ಎಲ್ಲಿಯಾದರೂ ಬೆಂಕಿಯೊಡನೆ ಅರಳೆಗೂ, ಶಿಂಗದೊಡನೆ ಮೊಲಕ್ಕೂ, ಗರುಡನೊಡನೆ ಹಾವಿಗೂ, ಜಗಳವಾದರೆ, ಬದುಕುವವೇ? ಹಾಗೆ ನಿನ್ನೊಡನೆ ನಾನು ಜಗಳವಾಡಿದರೇ, ಬದುಕ ಬಲ್ಲೆನೇ? ನಿನಗೆ ನಾನು ಸರಿಯೇ? ಎಂದು ದೈನ್ಯ ವಚನದಿಂದ ಹೇಳಿ ಕೊಳ್ಳಲು; ಆ ದೈತ್ಯನು,—ಛೀ ಹೇಡಿ! ನೀನು ಗಂಡಸು ಎಂದು ಹುಟ್ಟ ಬಹುದೇ? ಸಾವಿಗೆ ಅಂಜಿ, ಮೂರು ಲೋಕದ ಅಧಿಪತಿ ಎಂದು ಎನಿಸಿ ಕೊಂಡು, ಹೀಗೆ ಕಾಳಗಕ್ಕೆ ನಿಲ್ಲಲಾರದೆ ಹೋದ ನಿನ್ನ ಜನ್ಮವನ್ನು ಸುಡ ಬೇಕು! ನೀನು ಪುರುಷಾಕಾರದ ಹೆಂಗಸು! ಎಂದು ಹೀಯಾಳಿಸಿ, ಅವನನ್ನು ಬಿಟ್ಟು, ಅಲ್ಲಿಂದ ಅಗ್ನಿ, ಯಮ, ನಿರುತಿ, ವಾಯು, ಕುಬೇರ, ಮುಂತಾದವರ ಪಟ್ಟಣಗಳಿಗೆ ಹೋಗಲು; ಅವರೆಲ್ಲರು ಇವನು ಬರುವದನ್ನು ಕೇಳಿ, ಅವನ ಕಣ್ಣಿಗೆ ಬೀಳದೆ, ಔತು ಕೊಂಡರು.

ಅದನ್ನು ಕಂಡು, ಈ ಹಿರಣ್ಯಾಕ್ಷನು—ಅಯ್ಯೋ, ನನಗೆ ಎದುರಾಗುವವರು ಯಾರೂ ಇಲ್ಲದೆ ಹೋದರಲ್ಲ! ನನ್ನ ತೋಳು ತೀಟೆಯನ್ನು ಎಲ್ಲಿ ಕಳೆದು ಕೊಂಡೇನೆಂದು ಯೋಚಿಸುತ್ತ, ಸಮುದ್ರವನ್ನು ಹೊಕ್ಕು, ವರುಣನ ಪಟ್ಟಣಕ್ಕೆ ಹೋಗಿ, ಆತನನ್ನು ಹಿಡಿದು,—ಕಾಳಗಕ್ಕೆ ಬಾ ಎಂದು ಕರೆಯಲು;—ಮಹಾ ಪರಾಕ್ರಮ ಶಾಲಿಯಾದ ನಿನಗೆ ಬಡ ಪಾಪಿಯಾದ ನಾನು ಎದುರಾಗುವದಕ್ಕೆ ಶಕ್ಯನೇ? ನನ್ನ ಕೈಯಲ್ಲಿ ತೀರದೆಂದು, ಕೈ ಮುಗಿದು, ಬೇಡಿ ಕೊಂಡನು. ಆಗ ದೈತ್ಯನು ವರುಣನನ್ನು ಕುರಿತು—ನೀನು ಬಹಳ ಮುದುಕನಾಗಿದ್ದೀ. ನನಗೆ ಎದುರಾಗಿ ನಿಲ್ಲುವ ಘಟ್ಟಿಗರ್ಯ್ಯಾರಾದರೂ ಈ ಲೋಕಗಳಲ್ಲಿ ಇದ್ದರೆ, ಬೇಗ ಹೇಳು, ಎಂದು ಕೇಳಿದನು. ಅದಕ್ಕೆ ವರುಣನು—ಎಲೈ, ದೈತ್ಯ ರಾಜನೇ, ನೀನು ರಸಾತಲದಲ್ಲಿ ಹಾಕಿದ ಭೂಮಿಯನ್ನು ಕೋರ ದಾಡೆಯ ಮೇಲೆ ಎತ್ತಿ ಕೊಂಡು, ಒಬ್ಬ ವರಾಹನು ಹೋಗುತ್ತಾನೆ. ಅವನೇನಾದರೂ ಒಂದು ವೇಳೆ ನಿನ್ನ ಎದುರಿಗೆ ಜಗಳಕ್ಕೆ ನಿಂತರೆ, ನಿಲ್ಲ ಬಹುದು, ಎಂದು ಹೇಳಿದನು. ಅದನ್ನು ಹಿರಣ್ಯಾಕ್ಷನು ಕೇಳಿ, ಕೋಪದಿಂದ ಮುಂಗಾಣದೆ, ಹೊರಟು, ಭೂ ತಳವನ್ನು ಎತ್ತಿ ಕೊಂಡು ಬರುವ ವರಾಹನನ್ನು ಕಂಡು, ಅಬ್ಬರಿಸಿ, ಎದುರಾಗಿ ನಿಂತು, ತನ್ನವರನ್ನು ಕುರಿತು—ಎಲೇ, ಎಲೇ, ಹಂದಿ! ಹಂದಿ! ಮಜಭಾಪು! ನಾವು ತಂದು ಹಾಕಿದ ಭೂಮಿಯನ್ನು ಎತ್ತಿ ಕೊಂಡು ಹೋಗುತ್ತದೆ. ಹೊಯಿ! ಹೊಯಿ! ಹಿಂದಟ್ಟಿ! ಬಿಡದಿರ್ರಿ! ಬಲೆಗಳನ್ನು ಹಾಕಿ, ಕುತ್ತಿಗೆಯ ನೇಣು

ಗಳನ್ನು ಕಳಚಿ ನಾಯಿಗಳನ್ನು ಬಿಡಿ! ಇದು ನಮಗೆ ಇಂದಿನಾಹಾರಕ್ಕಾಯಿತು. ಈ ಕ್ಷಣ ಕೊಲ್ಲದೆ ಬಿಡೆನು, ಎಂದು ಬೊಬ್ಬಿಡುತ್ತ, ವರಾಹನ ಎದುರಿಗೆ ಬಂದು ನಿಂತು, ಅದನ್ನು ಕುರಿತು—ಎಲಾ, ಹಂದಿಯೇ, ನಿನಗೆ ಇಷ್ಟು ಬೊಬ್ಬೆ ಗಿಬ್ಬೆಗಳ್ಯಾಕೋ? ಮಾರಿಯ ಹಬ್ಬದಲ್ಲಿ ತಲೆ ಕೊಡುವ ಸೂಕರನೇ, ನಿನ್ನ ಮೈ ಕೊಬ್ಬನ್ನು ನನ್ನೊಡನೆ ತೋರಿಸೇಳು! ನಿನ್ನ ಸತ್ವದ ಕಡುಹನ್ನು ನೆಗ್ಗುವೆನು. ಅರಸುವ ಬಳ್ಳಿಯು ಕಾಲನ್ನು ತೊಡಕಿದಂತೆ ಈಗ ನೀನು ನನ್ನ ಕೈಗೆ ಶಿಕ್ಕಿದೆ. ನಿನ್ನ ಅಸುವನ್ನು ಕುಡಿಯುವೆನು. ಇಗೋ, ಇದನ್ನು ಸಹಿಸಿಕೋ ಎಂದು, ಗದೆಯಿಂದ ವರಾಹನನ್ನು ಹೊಯಿದನು. ಆ ವರಾಹನು ಹಾರಿ, ಆ ಹೊಯಿತವನ್ನು ತಪ್ಪಿಸಿ ಕೊಂಡು, ತನ್ನ ಕೋರ ದಾಡೆಯ ಮೇಲಿದ್ದ ಭೂಮಿಯನ್ನು ಮಹಾ ಶೇಷನ ಹೆಡೆಯ ಮೇಲೂ, ದಿಗ್ಗಜಗಳ ಮೇಲೂ, ಇಟ್ಟು,—ಈ ರಕ್ಕಸನ ಬೊಬ್ಬಾಟವು ಬಲುವಾಗಿದೆ. ಇವನ ಉಕ್ಕನ್ನು ತಗ್ಗಿಸುವೆನು ಎಂದು, ಗಗನಕ್ಕೆ ಹಾರಿ, ನೆಗೆದು, ಅಬ್ಬರಿಸಿ, ದೈತ್ಯನ ಹಲ್ಲುಗಳು ಮುರಿಯುವ ಹಾಗೆ ಹೊಕ್ಕು ಹೊಯ್ಯಲು; ಕಂಡು, ದಾನವನು ತನ್ನ ಗದೆಯಿಂದ ವರಾಹನ ಕೈಯಲ್ಲಿರುವ ಗದೆಯನ್ನು, ಹೊಡೆದು, ಅಪ್ಫಳಿಸಲು; ಆ ಗದೆಯು ವರಾಹನ ಕೈಯಿಂದ ಕೆಳಗೆ ಬಿತ್ತು.

ಆ ವೇಳೆಯಲ್ಲಿ ಮತ್ತು ದೈತ್ಯನು ಮಾಯೆಯಿಂದ ಮಳೆಯಾಗಿ, ವರಾಹನ ಮೇಲೆ ಸುರಿದನು. ಗಿರಿ ಬೆಟ್ಟಗಳಾಗಿ, ಉರುಳಿದನು; ಕಲ್ಲು ಗುಂಡುಗಳನ್ನು ಸುರಿದನು. ಹುಲಿ, ಸಿಂಹ, ಕರಡಿಗಳಾಗಿ, ಕಚ್ಚಿದನು. ಗಾಢಾಂಧಕಾರವಾಗಿ, ಕಣ್ಣುಗಳನ್ನು ಮುಚ್ಚಿದನು. ಶಿಡಿಲು ಮಿಂಚುಗಳಾಗಿ, ಎರಗಿದನು. ನಾನಾ ವಿಧವಾದ ಹಾವುಗಳಾಗಿ ಕಚ್ಚಿ, ವಿಷವನ್ನು ಕಾರಿದನು. ಕಾಡ್ಗಿಚ್ಚಾಗಿ, ದಹಿಸಿದನು. ಮತ್ತು ಭೂತ, ಪ್ರೇತ, ಪಿಶಾಚಿಗಳ ತಂಡಗಳಾಗಿ, ವರಾಹನನ್ನು ಮುತ್ತಿ ಕೊಂಡು,—ಹಂದಿ ಒಳಗೆ ಸಿಕ್ಕಿತು. ಹಿಡಿ, ಹಿಡಿ! ಬಡಿ, ಬಡಿ! ಕೊಲ್ಲು, ಕೊಲ್ಲು! ತಿವಿ, ತಿವಿ! ಬಸುರಿನಿಂದ ಕರುಳುಗಳನ್ನು ಕೀಳು! ರಕ್ತವನ್ನು ಹೀರು! ಎಂದು, ಈ ಪ್ರಕಾರ ಮಾಯಾ ಸಾಮರ್ಥ್ಯವನ್ನು ತೋರಿಸಿ, ಮತ್ತೆ ತನ್ನ ಪೂರ್ವದ ರೂಪನ್ನೇ ಧರಿಸಿ,—ಎಲಾ, ಹಂದಿಯೇ, ಕಾದು ಬಾರೋ! ಹಿಡಿ ಮುಷ್ಟಿ ಯುದ್ಧವ! ಎಂದು ತಿವಿಯಲು; ವರಾಹನು ರೋಷದಿಂದ ಆ ಹಿರಣ್ಯಾಕ್ಷನ ಹಣೆಯನ್ನು ಮುಷ್ಟಿಯಿಂದ ತಿವಿದನು. ಆ ಪೆಟ್ಟಿಗೆ ತಲೆ ಬಿರಿದು, ಹಣೆ ಒಡೆದು, ಹಲ್ಲುಗಳುದುರಿ, ರಕ್ತವು ಸುರಿದು, ಭೂಮಿಯಲ್ಲಿ ಸತ್ತು ಬಿದ್ದನು. ಆ ಬಳಿಕ ವರಾಹಾವತಾರವನ್ನು ಮಾಡಿದ ಮಹಾ ವಿಷ್ಣುವು ಭೂಮಿಯನ್ನು ಮೊದಲಿನಂತೆ ಸ್ಥಾಪಿಸಿ, ಹವ್ಯ ಕವ್ಯ

ಗಳು ಸರಾಗವಾಗಿ ನಡೆಯುವ ಹಾಗೆ ಮಾಡಿ, ದೇವತೆಗಳೂ, ಮುನಿಗಳೂ ಮೊದಲಾದ ಸಜ್ಜನರನ್ನು ಸಲಹಿ, ವೈಕುಂಠಕ್ಕೆ ಹೋದನು.

73. The Fourth or Man-lion Incarnation.

೭೩. ನೃಸಿಂಹಾವತಾರದ ಕಥೆ.

ಆ ಬಳಿಕ ಆ ಹಿರಣ್ಯಾಕ್ಷ ಹಿರಣ್ಯಕಶಿಪುಗಳ ತಾಯಿಯಾದ ದಿತಿಯು, ತನ್ನ ಕಿರೀ ಮಗನಾದ ಹಿರಣ್ಯಾಕ್ಷನು ವರಾಹಾವತಾರಿಯಾದ ಮಹಾ ವಿಷ್ಣುವಿನಿಂದ ಸಂಹಾರವಾದ ಸುದ್ದಿಯನ್ನು ಕೇಳಿ, ಸಿಡಿಲು ಬಡಿದು, ಬೇರು ಸಹಿತ ಮುರಿದು, ಇಳೆಗೆ ಒರಗಿದ ದೊಡ್ಡ ಮರದಂತೆ ಭೂಮಿಯಲ್ಲಿ ಬಿದ್ದು, ಮೂರ್ಛಿತಳಾಗಿ, ಸ್ವಲ್ಪ ಹೊತ್ತಿನ ಮೇಲೆ ಎಚ್ಚತ್ತು, ಎದ್ದು, ಹೊಟ್ಟೆಯನ್ನೂ ಬಾಯಿಯನ್ನೂ ಬಡುಕೊಳ್ಳುತ್ತ, ಮಗನ ಶಕ್ತಿ ಪರಾಕ್ರಮಗಳನ್ನು ನೆನ ನೆನದು, ಹಂಬಲಿಸುತ್ತ, ಕಣ್ಣೀರುಗಳನ್ನು ಸುರಿಸುತ್ತ, ತಲೆಯನ್ನು ಕೆದರಿ ಕೊಂಡು, ತನ್ನ ಹಿರೀ ಮಗನಾದ ಹಿರಣ್ಯಕಶಿಪುವಿನ ಬಳಿಗೆ ಬಂದು—ಸನ್ನೊಡಲು ಬೆಂದುದು; ನಿನ್ನ ತಮ್ಮನು,—ಬೇಡ ಎಂದರೂ, ಕೇಳದೆ, ಭೂಮಿಯನ್ನು ಕೊಂಡು ಒಯಿದನು. ಆ ನಿಮಿತ್ಯದಿಂದ ವಿಷ್ಣುವು ಆತನನ್ನು ಕೊಂದನು ಎಂದು, ಬಹಳ ದುಃಖ ಪಟ್ಟು, ಅವನ ಕೊರಳನ್ನು ಕಟ್ಟಿ ಕೊಂಡು,—ಎಲೈ, ಕಂದಾ, ಕೆಟ್ಟೆನು, ಕೆಟ್ಟೆನೈ, ಹಾ! ಎಂದು ಮೊರೆ ಇಡಲು;—

ಕೇಳಿ, ಹಿರಣ್ಯಕಶಿಪುವು ರೋಷ ಪರವಶನಾಗಿ, ಏಳಲು; ಒಡನೆ ಅವನ ಕಣ್ಣುಗಳು ಕೆಂಡಗಳನ್ನು ಕಾರಿದವು. ತರುವಾಯ ಅವನು—ಸತ್ತ ತಮ್ಮನ ಕಾಲಿನ ಬಳಿಯಲ್ಲಿ ಆ ಹಂದಿಯನ್ನು ಕೆಡಹಿ, ತತ್ತರದರಿದು, ಈಗಲೇ ದಿಗು ಬಲಿಯನ್ನು ಕೊಡುವೆನು ಎಂದು ಆರ್ಭಟಿಸುತ್ತ, ಹೊರಟು, ಹತ್ತು ದಿಕ್ಕುಗಳನ್ನೂ, ಸಮುದ್ರಗಳನ್ನೂ, ಅವುಗಳೊಳಗಣ ದ್ವೀಪಾಂತರಗಳನ್ನೂ, ರಸಾತಲ ತಲಾತಲ ಪಾತಾಳಾದಿ ಲೋಕಗಳನ್ನೂ ಅರಸಿ, ಆ ಮಹಾ ವಿಷ್ಣುವನ್ನು ಕಾಣದೆ, ಆ ವಿಷ್ಣುವು ಧರ್ಮದ ಬಳಿಯಲ್ಲಿ ಇರುವನು ಎಂದು, ತನ್ನ ಮನದಲ್ಲಿ ಎಣಿಸಿ, ವೇದ ಶಾಸ್ತ್ರಗಳ ಓದುವ ಬಳಿಗಳಲ್ಲಿಯೂ, ಜಪ ತಪ ಹೋಮ ನೇಮಗಳು ನಡೆಯುವ ಸ್ಥಳಗಳಲ್ಲಿಯೂ, ಗಂಗಾದಿ ಮಹಾ ನದಿಗಳ ತೀರಗಳಲ್ಲಿಯೂ, ಪುಣ್ಯ ಕ್ಷೇತ್ರಗಳಲ್ಲಿಯೂ, ಬಂದು ನೋಡಿ, ಹರಿಯನ್ನು ಕಾಣದೆ, ಆ ಸಜ್ಜನರನ್ನೆಲ್ಲಾ ಹೊಡೆದು, ಬಂದು, ಅವರು ಮಾಡುವ ಕರ್ಮಗಳನ್ನೆಲ್ಲಾ ಕೆಡಿಸಿ,—ಬ್ರಹ್ಮನ ಕುರಿತು ತಪಸ್ಸನ್ನು ಮಾಡಿ, ಯಾರಿಂದಲೂ ತನಗೆ ಮರಣವಾಗದಂತೆ ವರವನ್ನು ಪಡೆದು, ಆ ವರ ಬಲದಿಂದ—ಕಪಟಿಯಾದ ವಿಷ್ಣುವನ್ನು, ಹಾವಾಡಿ

ಗನು ಮಂತ್ರ ಬಲದಿಂದ ಹುತ್ತದಲ್ಲಿ ಹೊಕ್ಕಿರುವ ಹಾವನ್ನು ಹೊರಗೆ ತೆಗೆದು, ಹಲ್ಲನ್ನು ಮುರಿಯುವ ಹಾಗೆ, ಎಲ್ಲಿ ಹೊಕ್ಕಿದ್ದರೂ, ಹಿಡಿದು, ಕೊಂದು ಹಾಕು ವೆನು ಎಂದು, ತನ್ನ ಮನಸ್ಸಿನಲ್ಲಿ ನಿಶ್ಚೈಸಿ, ಹಿಂತಿರಿಗಿ, ತಾಯಿಯ ಮನೆಗೆ ಬಂದು,—ತಾಯಿಯೇ, ಆ ಮಾಯಕಾರ ಹರಿಯು ಶಿಕ್ಕಲಿಲ್ಲ. ನನ್ನ ಆಯುಸ್ಸು ಇರುವ ವರಿಗೂ ಅವನು ಎಲ್ಲಿದ್ದರೂ, ಹೊಕ್ಕು, ಅರಸಿ, ಹಿಡಿದು, ಅವನನ್ನು ಸಾಯ ಬಡಿಯದೆ ಬಿಡೆನು. ಆದರೆ ನನ್ನ ಪ್ರಾಣಕ್ಕೆ ಭಯವಿಲ್ಲದಂತೆ ತಪಸ್ಸು ಮಾಡಿ, ವರವನ್ನು ಪಡೆದು ಕೊಂಡು ಬರುವೆನು. ಆ ವರಿಗೂ ಅಳದೆ ಇರು ಎಂದು, ತಾಯಿ ಮೊದಲಾದ ತನ್ನ ಸಂಸಾರದ ಜನಗಳನ್ನೆಲ್ಲಾ ಸಮಾಧಾನ ಪ ಡಿಸಿ, ಹೊರಟು, ಮಂದರ ಪರ್ವತಕ್ಕೆ ಬಂದು, ಬ್ರಹ್ಮ ದೇವನನ್ನು ಕುರಿತು, ಕಾಲಿನ ಹೆಬ್ಬೆಟ್ಟನ್ನು ನೆಲಕ್ಕೆ ಊರಿ, ನಿಂತು, ಕತ್ತನ್ನು ಎತ್ತಿ, ಕಣ್ಣು ಬಿಟ್ಟು, ಸೂರ್ಯನನ್ನು ನೋಡುತ್ತ, ಕೈ ಮುಗಿದು ಕೊಂಡು, ಸಂಪೂರ್ಣ ಭಕ್ತಿಯಿಂದ ಏಕಾಗ್ರ ಚಿತ್ತನಾಗಿ ತಪಸ್ಸನ್ನು ಅನೇಕ ಸಹಸ್ರ ವರುಷ ಮಾಡುತ್ತಿರಲು; ಅವ ನ ಮೈ ಮೇಲೆ ಹುತ್ತ ಬೆಳೆದು, ಮೈ ಸುತ್ತಲು ಬಿದುರು ಬೆತ್ತಗಳು ಬೆಳೆದು, ಮುಚ್ಚಿ ಕೊಂಡವು. ಗಡ್ಡ ಮೀಸೆಗಳು ಆಲದ ಬಿಳಿಗಳು ನೆಲಕ್ಕೆ ಇಳಿಯು ವಂತೆ ಭೂಮಿಗೆ ಇಳಿದು, ಬೇರು ಹರಿದವು. ಕಾಲು ಕೈಗಳ ಉಗುರುಗಳು ಬಹಳ ಉದ್ದವಾಗಿ ಬೆಳೆದವು. ಗೆದ್ದಲು ಹುಳುಗಳು ಶರೀರದ ಚರ್ಮ ಮಾಂಸ ಗಳನ್ನು ತಿಂದವು. ದೈತ್ಯನು ಬರೀ ಅಸ್ತಿ ಮಯವಾಗಿದ್ದನು.

ಆ ವೇಳೆಯಲ್ಲಿ ತಪ್ತೋಗ್ನಿಯು ಭುಗಿಲೆಂದು ಉಬ್ಬಿ, ನೆತ್ತಿಯನ್ನು ಒಡೆದು, ಲೋಕಗಳನ್ನು ವ್ಯಾಪಿಸಿ, ಸುಡುತ್ತಿರಲು; ಸಕಲ ಲೋಕಗಳು ಕಂಗೆಟ್ಟು, ಬ್ರ ಹ್ಮನ ಬಳಿಗೆ ಓಡಿ ಹೋಗಿ,—ಯಾವೋನೋ ಒಬ್ಬನ ತಪೋಗ್ನಿಯು ಲೋಕದ ಪ್ರಜೆಗಳನ್ನೆಲ್ಲಾ ಬೆನ್ನಟ್ಟಿ ಸುಡುತ್ತಲಿದೆ. ನೀನು ಕೃಪೆಯಿಂದ ನಮ್ಮನ್ನು ಕಾ ಪಾಡ ಬೇಕೆಂದು ಬೇಡಿ ಕೊಂಡರು. ಆಗ ಬ್ರಹ್ಮನು ಜ್ಞಾನ ದೃಷ್ಟಿಯಿಂದ—ತಪ ವನ್ನು ಮಾಡುವವನು ತನ್ನ ಮೊಮ್ಮಗನಾದ ಹಿರಣ್ಯ ಕಶಿಪುವೆಂದು ತಿಳಿದು, ಅವರನ್ನೆಲ್ಲಾ ಸಮಾಧಾನಾ ಮಾಡಿ, ಕಳುಹಿಸಿ, ತಾನು ಹಂಸೆಯನ್ನೇರಿ ಕೊಂಡು, ಅವನು ತಪಸ್ಸು ಮಾಡುವ ಬಳಿಗೆ ಬಂದು, ಅಸ್ತಿ ಪಂಜರ ಮಾತ್ರ ಇರುವ ಆತ ನನ್ನು ನೋಡಿ,—ಹೀಗೆ ಭಕ್ತಿಯಿಂದ ಕಾಯ ಕೇಶವನ್ನು ಸಹಿಸಿ ಕೊಂಡು, ತಪಸ್ಸು ಮಾಡಿದವರು ಯಾರೂ ಇಲ್ಲ ಎಂದು ಮೆಚ್ಚಿ, ತನ್ನ ಕೈಯಲ್ಲಿದ್ದ ಕಮಂ ಡಲದ ಉದಕವನ್ನು ಅವನ ಮೇಲೆ ಚಿಮಿಕಿಸಲು; ಆ ಹಿರಣ್ಯಕಶಿಪುವು ತನ್ನ ಸುತ್ತ ಬೆಳೆದಿರುವ ಬಿದಿರು ಬೆತ್ತಗಳನ್ನು ಒಡ ಕೊಂಡು, ಹುತ್ತದಿಂದ ಹೊರ

ಟು ಬಂದು, ಒತ್ತಿನಲ್ಲಿ ನಿಂತಿರುವ ಬ್ರಹ್ಮನನ್ನು ಕಂಡು, ಬಹಳ ಸಂತೋಷದಿಂದ ಆತನ ಕಾಲುಗಳಿಗೆ ನಮಸ್ಕರಿಸಿ, ಭೂಮಿಯಲ್ಲಿ ಬಿದ್ದಿರಲು; ಬ್ರಹ್ಮನು—ಏಳು, ಏಳೈ, ಕಂದನೇ, ಸಾಕು! ನೀನು ಬಹು ಕಾಲದಿಂದ ಆಯಾಸ ಪಟ್ಟದ್ದು ಸಾಲದೇ? ನಿನ್ನ ಮನೋರಥವೇನು? ಬೇಡು. ಈಗ ಕೊಡುವೆನು ಎನಲು; ಹಿರಣ್ಯಕಶಿಪುವು ಎದ್ದು, ಕೈ ಮುಗಿದು—ಎಲೈ, ಪಿತಾಮಹನೇ, ಸುರರೂ, ನರರೂ, ಉರಗರೂ, ಯಕ್ಷರೂ, ಮೃಗಗಳೂ, ಇನ್ನೂ ನಾನಾ ವಿಧ ಪ್ರಾಣಿಗಳೂ, ಇವರೆಲ್ಲರಿಂದಲೂ, ಮತ್ತು ಹಿಮ, ಜಲ, ಭೂಮಿ, ಆಕಾಶ, ಹಗಲು, ರಾತ್ರಿ, ಒಳಗೆ, ಹೊರಗೆ, ನಿದ್ರೆ ಮಾಡುವಲ್ಲಿ ಉರಿ, ಸಿಡಿಲು, ಶಿಲೆ, ಅಖಿಳ, ಶಸ್ತ್ರ, ವಿಷ, ತೃಣ, ಕಾಷ್ಟ, ಮಂತ್ರೋಚ್ಚಾರಣೆ, ವ್ಯಾಧಿ, ಇವುಗಳಿಂದಲೂ, ನಾನು ಸಾಯದಂತೆ ವರವನ್ನು ಕೊಡ ಬೇಕು. ಬಹಳ ಮಾತೇನು? ಸರ್ವರು ನನ್ನನ್ನು ಬಂದು, ಓಲೈಸ ಬೇಕು. ಈ ಪ್ರಕಾರ ವರವನ್ನು ಕೊಡ ಬೇಕು ಎಂದು ಕೇಳಿದನು.

ಬ್ರಹ್ಮನು ತನ್ನ ಮನಸ್ಸಿನಲ್ಲಿ—ಇವನು ಮಹಾ ದುಷ್ಟನು. ಇಂಥಾ ವರಗಳನ್ನು ಕೇಳಿ ಕೊಂಡನು. ಕೊಟ್ಟರೆ, ತಕ್ಷಣದಲ್ಲಿಯೇ, ಲೋಕಗಳನ್ನೆಲ್ಲಾ ಸುಟ್ಟು, ಬೂದಿ ಮಾಡುವನು. ಕೊಡದೆ ಇದ್ದರೆ, ನನ್ನ ಭಕ್ತರು ನೋಡಿ, ನಗುವರು. ಏನಾದರೂ ಆಗಲಿ, ಇವನು ಕೇಳಿದಂತೆ ಕೊಡ ಬೇಕಾಗಿ ಬಂತು ಎಂದು ನಿಶ್ಚೈಸಿ, ದೈತ್ಯನನ್ನು ಕುರಿತು—ನಿನ್ನ ಮನಸ್ಸಿನ ಇಷ್ಟ ಪ್ರಕಾರ ವರಗಳನ್ನು ಕೊಟ್ಟೆನು. ಹೋಗು! ಎಂದು ಹೇಳಿ, ಅದೃಶ್ಯನಾದನು. ಆಗ ಹಿರಣ್ಯಕಶಿಪುವು ಮಹಾ ಸಂತೋಷದಿಂದ ದೈತ್ಯರ ಬಡಗಿಯಾದ ಮಯನನ್ನು ನೆನೆಯಲು; ಆತನು ಬಂದು, ಕೈಮುಗಿದು,—ನನಗೇನಪ್ಪಣೆ? ಎಂದು ಕೇಳಿದ್ದಕ್ಕೆ—ಕ್ಷಣ ಮಾತ್ರದಲ್ಲಿ ನೀನು ನನ್ನ ಪಟ್ಟಣಕ್ಕೆ ಹೋಗಿ, ಪಟ್ಟಣವನ್ನು ಶೃಂಗರಿಸು, ಎಂದು ಹೇಳಿ, ಕಳುಹಿಸಿ ಕೊಟ್ಟನು. ಆ ಮಯನು ಆತನ ಅಪ್ಪಣೆಯನ್ನು ತಲೆಯಲ್ಲಿ ಆಂತು, ಪಟ್ಟಣವನ್ನು ಜಾಗ್ರತೆಯಾಗಿ ಶೃಂಗರಿಸಿದನು. ತರುವಾಯ ಹಿರಣ್ಯಕಶಿಪುವು ಗೋಧೂಳೀ ಲಗ್ನದಲ್ಲಿ ಪಟ್ಟಣವನ್ನು ಹೊಕ್ಕು, ಒಂದು ದಿವಸ ಅಲ್ಲಿ ಇದ್ದು, ಮಾರನೇ ದಿವಸವೇ ದೈತ್ಯ ಭಟರೊಡನೆ ಕೂಡಿ, ಹೊರಟು, ಇಂದ್ರ ಲೋಕಕ್ಕೆ ಹೋಗಿ, ಇಂದ್ರಾದಿ ಅಷ್ಟ ದಿಕ್ಪಾಲಕರನ್ನು ಯುದ್ಧಕ್ಕೆ ಕರೆಯಲು; ಆ ಇಂದ್ರನು ಅಷ್ಟ ದಿಕ್ಪಾಲಕರೊಡನೆ ಕೂಡಿ, ಹಿರಣ್ಯಕಶಿಪುವಿನೊಡನೆ—ನಾವು ನಿನ್ನ ಸಂಗಡ ಯುದ್ಧಾ ಮಾಡಲಾರೆವು. ನಿನಗೆ ಕಪ್ಪಗಳನ್ನು ಕೊಟ್ಟು, ನೀನು ಹೇಳಿದಂತೆ ಕೇಳಿ ಕೊಂಡು ಇರುವೆವು ಎಂದು, ವಿನಯದಿಂದ ಹೇಳಿ ಕೊಂ

ಡದರಿಂದ, ಅವರೆಲ್ಲರನ್ನೂ, ಸಂಗಡ ಕರೆದು ಕೊಂಡು, ಅವರು ಕೊಟ್ಟ ಕಪ್ಪ ಗಳನ್ನು ತೆಗಿಸಿ ಕೊಂಡು, ತನ್ನ ಪಟ್ಟಣಕ್ಕೆ ಹಿಂತಿರುಗಿ ಬಂದು, ಸಿಂಹಾಸನದ ಲ್ಲಿ ಕುಳಿತು ಕೊಂಡು, ತ್ರಿ ಲೋಕಾಧಿಪತಿಯಾಗಿ—ಭೂಮಿಯಲ್ಲಿ ಮಾಡುವ ಕರ್ಮಗಳಲ್ಲಿ ಎಲ್ಲರು ನನ್ನ ಹೆಸರು ಹೇಳಿ, ಆಹುತಿಗಳನ್ನು ಕೊಡ ಬೇಕೇ ಹೊರ್ತು, ಇಂದ್ರನೇ ಮೊದಲಾದ ಒಬ್ಬ ದೇವತೆಗಳ ಹೆಸರನ್ನು ಹೇಳಿಯೂ ಕೊಡ ಕೂಡದು ಎಂದು, ಎಲ್ಲರಿಗೂ ಕಟ್ಟು ಮಾಡಿಸಿ, ತಾನೇ ತಾನಾಗಿ ಎಲ್ಲ ರಿಂದಲೂ ಓಲೈಸಿ ಕೊಂಡು ಇದ್ದನು.

ಹೀಗಿರುವಲ್ಲಿ ಒಂದು ದಿವಸ ಸಭೆಯಲ್ಲಿ, ಮಹಾ ವಿಷ್ಣುವು ತನ್ನ ತಮ್ಮನಾದ ಹಿರಣ್ಯಾಕ್ಷನನ್ನು ಕೊಂದದ್ದನ್ನು ನೆನಸಿ ಕೊಂಡು,—ಆ ವಿಷ್ಣುವನ್ನು ಕೊಂದು ಹಾಕದ ಮೇಲೆ ನಾನು ಬದುಕಿದ್ದೂ, ಈ ಸಕಲ ಜನರಿಂದ ಸೇವೆ ಮಾಡಿಸಿ ಕೊಳ್ಳುವದೂ, ನನ್ನ ಈ ತ್ರಿ ಲೋಕಾಧಿಪತ್ಯವೂ ವ್ಯರ್ಥವೆಂದು ಎಣಿಸಿ,—ಎಲ್ಲಿ ಇದ್ದರೂ, ಅವನನ್ನು ಹಿಡಿದು, ಕೊಂದು ಹಾಕ ಬೇಕೆಂದು, ತನ್ನ ಚತುರಂಗ ಬ ಲದೊಡನೆ ಕೂಡಿ, ಹೊರಟನು. ಆಗ ಆತನ ಸೇನಾ ರಭಸಕ್ಕೆ ಹದಿನಾಲ್ಕು ಲೋಕವು ಅಲ್ಲೋಲ ಕಲ್ಲೋಲವಾಗಿ ಬೆದರಿ, ಕ್ಷೀರ ಸಮುದ್ರದ ಧಡಕ್ಕೆ ಹೋಗಿ, ಶ್ರೀ ಮಹಾ ವಿಷ್ಣುವಿನ ಸಂಗಡ ದೂರ ಹೇಳಿ ಕೊಳ್ಳಲು; ಆತನು—ದು ಷ್ಟ ಹಿರಣ್ಯಾಕಶಿಪುವನ್ನು ಹಿಂತಿರಿಗಿ, ಪಟ್ಟಣಕ್ಕೆ ಹೋಗುವಂತೆ ಮಾಡುತಲಿದ್ದೇ ನೆ. ನೀವು ಹೆದರ ಬೇಡಿ! ನಿಮ್ಮ ನಿಮ್ಮ ಲೋಕಗಳಿಗೆ ಹೋಗಿ, ಸ್ವಸ್ಥವಾಗಿ ಇರ್ರಿ ಎಂದು ಹೇಳಿ, ನಂಬಿಗೆಯನ್ನು ಕೊಟ್ಟು, ಕಳುಹಿಸಿ, ಆ ಮೇಲೆ ಆ ಹಿರ ಣ್ಯಾಕಶಿಪುವು ಬರುವ ಮಾರ್ಗದಲ್ಲಿ ಮಾಯೆಯಿಂದ ಒಂದು ಋಷ್ಯಾಶ್ರಮ ವನ್ನು ಕಲ್ಪಿಸಿ ಕೊಂಡು, ತಾನು ಜಡೆಯನ್ನು ಧರಿಸಿ, ಕುತ್ತಿಗೆಯಲ್ಲಿ ರುದ್ರಾಕ್ಷೀ ಮಾಲಿಕೆಗಳನ್ನೂ, ತಲೆಗೆ ರುದ್ರಾಕ್ಷೀ ಕುಲಾವಿಯನ್ನೂ, ಕೈಗೆ ರುದ್ರಾಕ್ಷೀ ಕಂಕ ಣವನ್ನೂ ಹಾಕಿ ಕೊಂಡು, ಬಲ ಗೈಯ ಅನಾಮಿಕವೆಂಬ ಬೆರಳಿಗೆ ದರ್ಭೆ ಹುಲ್ಲಿನಿಂದ ಪವಿತ್ರವನ್ನು ಮಾಡಿ, ಇಟ್ಟು ಕೊಂಡು, ಒಂದು ಕೌಪೀನ ಮಾತ್ರವ ನ್ನು ಧರಿಸಿ, ಆ ಆಶ್ರಮದಲ್ಲಿರುವ ಕೊಳದ ಧಡದಲ್ಲಿ ಒಂದು ದೊಡ್ಡ ಹುಲೀ ಚ ರ್ಮದ ಮೇಲೆ ಕುಳಿತು ಕೊಂಡು, ಆ ಕೊಳದ ಪಾವಟಿಗೆಯ ಕಲ್ಲಿನ ಮೇಲೆ ಮಳಲಿನಲ್ಲಿ ಒಂದು ದೊಡ್ಡ ಲಿಂಗವನ್ನು ಮಾಡಿ, ಆ ಲಿಂಗವನ್ನು ತುಂಬೇ ಹೂ ವುಗಳಿಂದಲೂ, ಉಮ್ಮತ್ತದ ಹೂವುಗಳಿಂದಲೂ, ಬಿಲ್ಪತ್ರೆಗಳಿಂದಲೂ, ಗಂಧಾ ಕ್ಷತೆಗಳಿಂದಲೂ ಪೂಜೇ ಮಾಡಿ, ಶಿವ ಧ್ಯಾನವನ್ನು ಮಾಡುತ್ತ, ಪಾಶುಪತ ಮತಸ್ಥನಾದ ಮುನಿಯಂತೆ ಕುಳಿತು ಕೊಂಡಿದ್ದನು.

ಅಷ್ಟರಲ್ಲಿಯೇ ಈ ಹಿರಣ್ಯಕಶಿಪುವು ಸೇನಾ ಸಮೇತನಾಗಿ ದಾರಿಯಲ್ಲಿ ಬರುತ್ತ, ಈತನನ್ನು ಕಂಡು—ಇವನ್ಯಾರೋ? ಮಹಾತ್ಮನಾದ ಶಿವ ಯೋಗಿಯಾಗಿ ಕಾಣುತ್ತಾನೆ ಎಂದು ಯೋಚಿಸಿ, ತಾನು ಹತ್ತಿ ಕೊಂಡಿದ್ದ ಅಂದಣವನ್ನು ಇಳಿದು, ಈ ಕಪಟ ಶಿವ ಯೋಗಿಯ ಬಳಿಗೆ ಬಂದು, ಭಯ ಭಕ್ತಿಯಿಂದ ಸಾಷ್ಟಾಂಗ ಪ್ರಣಾಮವನ್ನು ಮಾಡಿ, ಕೈ ಮುಗಿದು, ನಿಂತು ಕೊಂಡು,—ಎಲೈ, ಮಹಾನುಭಾವನೇ, ನೀನು ಭೂತ ಭವಿಷ್ಯದ್ವರ್ತಮಾನಗಳನ್ನೂ, ಸಕಲ ಲೋಕಗಳಲ್ಲಿಯೂ ನಡೆಯುವ ಸುದ್ದಿಗಳನ್ನೂ, ಅರಿತಂಥ ಮಹಾ ಜ್ಞಾನ ನಿಧಿಯು ಎಂದು, ನಿನ್ನನ್ನು ಕುರಿತು ಒಂದು ಮಾತನ್ನು ಬಿನ್ನವಿಸುತ್ತೇನೆ. ಅದೇನಂದರೆ,—ಮಾಯಾವಿಯಾದ ವಿಷ್ಣುವು ಹಂದಿಯ ರೂಪವನ್ನು ಧರಿಸಿ, ನನ್ನ ತಮ್ಮನನ್ನು ಕೊಂದು ಹಾಕಿದನು. ಆ ದುಖ್ಖದಿಂದ ಆತನನ್ನು ನಾನು ಕೊಂದು ಹಾಕಬೇಕೆಂದು, ಎಲ್ಲಿ ಹುಡುಕಿದಾಗ್ಯೂ, ಶಿಕ್ಕಲಿಲ್ಲ. ಈಗ ವರ ಬಲದಿಂದ ನಾನು ಸಾವಿಲ್ಲದವನಾಗಿದ್ದೇನೆ. ನನ್ನ ಮೇಲೆ ದಯವಿಟ್ಟು, ಆ ಕಪಟಿಯಾದ ವಿಷ್ಣುವು ಎಲ್ಲಿದ್ದಾನೋ, ತಾವು ಜ್ಞಾನ ದೃಷ್ಟಿಯಿಂದ ನೋಡಿ, ತಿಳಿದು, ಹೇಳಿದರೆ, ಆತನನ್ನು ಕೊಂದು, ನನ್ನ ದುಖ್ಖವನ್ನು ತೀರಿಸಿ ಕೊಂಡೇನು, ಅಂದನು.

ಆ ಮಾತನ್ನು ಕೇಳಿ, ಕಪಟ ಶಿವ ಯೋಗಿಯು ಕಣ್ಣುಗಳನ್ನು ಮುಚ್ಚಿಕೊಂಡು, ಒಂದು ಘಳಿಗೆ ಧ್ಯಾನಿಸುವವನ ಹಾಗೆ ಧ್ಯಾನಿಸಿ, ಆ ಮೇಲೆ ಕಣ್ಣುಗಳನ್ನು ತೆರೆದು, ಆ ಹಿರಣ್ಯಕಶಿಪುವನ್ನು ನೋಡಿ, ನಸು ನಗುತ್ತ—ಎಲೈ, ದೈತ್ಯಾಧಿರಾಜನೇ, ನೀನು ಹೇಳಿದಂತೆ ಆ ವಿಷ್ಣುವು ಮಹಾ ಕಪಟಿಯು ಅಹುದು. ಆತನು ಇರುವ ಸ್ಥಳಗಳು ಮೂರು. ಯಾವವಂದರೆ, ವೈಕುಂಠವೂ, ಕ್ಷೀರ ಸಮುದ್ರವೂ, ಸೂರ್ಯ ಮಂಡಲವೂ. ಈಗ ನೀನು ವರ ಬಲದಿಂದ ಅವಧ್ಯನಾದಿ ಎಂದು ತಿಳಿದು,—ತನ್ನನ್ನು ಎಲ್ಲಿ ಬಂದು ಕೊಂದಾನೋ? ಎಂಬದಾಗಿ, ನಿನ್ನ ಭಯದಿಂದ ಆ ಮೂರು ಸ್ಥಳಗಳನ್ನು ಬಿಟ್ಟು, ನಿನ್ನ ಹೊಟ್ಟೆಯಲ್ಲಿಯೇ ಬಂದು ಹೊಕ್ಕೊಂಡು ಇದ್ದಾನೆ, ಅಂದನು. ಅದಕ್ಕೆ ಹಿರಣ್ಯಕಶಿಪುವು—ಎಲೈ, ಮುನಿಯೇ, ನನ್ನ ಹೊಟ್ಟೆಯಲ್ಲಿ ಅವನು ಹೊಗುವದು ಹ್ಯಾಗೆ? ಈ ಮಾತು ಸುಳ್ಳಾಗಿ ತೋರುತ್ತದೆ, ಎನಲು; ಶಿವ ಯೋಗಿಯು—ನಾನು ಸುಳ್ಳು ಹೇಳ ತಕ್ಕವನಲ್ಲ. ಇಗೋ, ನಿನಗೆ ಪರೀಕ್ಷೆಯನ್ನು ತೋರಿಸಿ ಕೊಡುತ್ತೇನೆಂದು ಹೇಳಿ, ಆ ಕ್ಷಣದಲ್ಲಿಯೇ ಅದೃಶ್ಯನಾಗಿ, ಅವನ ಹೊಟ್ಟೆಯಲ್ಲಿ ಹೊಕ್ಕು,—ಎಲಾ, ಖೂಳ ರಕ್ಕಸನೇ, ನಿನ್ನ ನಾನು ಕೊಂದು ಹಾಕುವ ವರಿಗೂ, ಮತ್ತೆಲ್ಲಿಯೂ ಇರದೆ, ನಿನ್ನ ಹೊಟ್ಟೆಯಲ್ಲಿಯೇ ಇರುತ್ತೇನೆ. ನೀನು ಎಲ್ಲಿ ಹುಡುಕಿದಾಗ್ಯೂ, ನಿನಗೆ,

ನಾನು ಶಿಕ್ಕೆನು. ನನ್ನನ್ನು ನೀನು ನೋಡ ಬೇಕಾದರೆ, ನಿನ್ನ ಹೊಟೆಯನ್ನು ನೀನೇ ಶೀಳಿ ಕೊಂಡು, ನೋಡಿದರೆ, ನಾನು ಕಾಣಿಸಿ ಕೊಳ್ಳುವೆನು. ಮಹಾತ್ಮನಾದ ಶಿವ ಯೋಗಿ ಹೇಳಿದ ಮಾತು ಸುಳ್ಳಲ್ಲ, ನಿಜವೆಂದು ತಿಳಿ ಎಂದು ಘರ್ಜಿಸಿ ಹೇಳಿದ್ದರಿಂದ, ಈ ಹಿರಣ್ಯಕಶಿಪುವು ಆ ಮಾತನ್ನು ಕೇಳಿ—ಅಹಹ! ನನ್ನಿಂದ ಮೋಸ ಹೋಯಿತು. ಆ ವಿಷ್ಣುವೇ ಶಿವ ಯೋಗಿಯಾಗಿ ನನಗೆ ಹೇಳಿ, ನನ್ನ ಮುಂದೆಯೇ ಅದೃಶ್ಯವಾಗಿ, ನನ್ನ ಹೊಟ್ಟೆಯನ್ನು ಹೊಕ್ಕನು. ಆ ಶಿವ ಯೋಗಿ ಇದ್ದಾಗಲೇ ಅವನನ್ನು ಹಿಡಿದು, ಕೊಂದು ಹಾಕ ಬೇಕಾಗಿತ್ತು. ತಿಳಿಯದೆ ಹೋಯಿತು. ಈಗ ಏನು ಮಾಡಲಿ? ಪಾಪಿಯು ನನ್ನ ಹೊಟ್ಟೆಯನ್ನು ಹೊಕ್ಕನಲ್ಲ! ಇವನನ್ನು ಇನ್ನು ನಾನು ಕೊಲ್ಲುವ ಬಗೆ ಹ್ಯಾಗೆ? ಎಂದು ಹಿಂತಿರುಗಿ, ಯಥಾ ಪ್ರಕಾರಕ್ಕೆ ಸೇನಾ ಸಮೇತನಾಗಿ ತನ್ನ ಪಟ್ಟಣಕ್ಕೆ ಬಂದು ಶೇರಿದನು.

ಇತ್ತಲಾ ಮಹಾ ವಿಷ್ಣುವು ನಾರದರನ್ನು ಕರೆದು, ಹಿರಣ್ಯಕಶಿಪುವಿನ ಹೆಂಡತಿಯು ಬಹಳ ಪರಿಶುದ್ಧೆಯು. ನೀನು ಅವಳ ಬಳಿಗೆ ಹೋಗಿ,—ಏಕಾಂತದಲ್ಲಿ ವಿಷ್ಣುವನ್ನೇ ಧ್ಯಾನಿಸುತ್ತ ಇದ್ದಲ್ಲಿ, ಲೋಕೈಕ ವೀರನಾದ ಪರಮ ಭಾಗವತ ಶಿರೋಮಣಿಯಾದ ಗಂಡು ಮಗನು ಹುಟ್ಟುವನು, ಎಂದು ಹೇಳಿ ಬಾ, ಅನ್ನಲಾಗಿ; ಆತನು ಆಕೆಯ ಬಳಿಗೆ ಹೋಗಿ, ಅದೇ ಪ್ರಕಾರ ಆಕೆಗೆ ರಹಸ್ಯವಾಗಿ ಉಪದೇಶಿಸಿ ಬಂದನು. ಅವಳು ನಾರದನ ಉಪದೇಶದ ಪ್ರಕಾರ ಸದಾ ಕಾಲದಲ್ಲಿಯೂ ಹೃದಯದಲ್ಲಿ ಹರಿಯನ್ನೇ ಧ್ಯಾನಿಸುತ್ತಾ ಇದ್ದದರಿಂದ, ಸಂಗಾತಲೇ ಗರ್ಭಿಣಿಯಾದಳು.

ಹೀಗಿರುವಲ್ಲಿ ಹಿರಣ್ಯಕಶಿಪುವು ಮತ್ತೊಂದು ದಿವಸ—ವಿಷ್ಣುವನ್ನು ಹ್ಯಾಗೆ ಕೊಲ್ಲಲಿ? ಎಂದು ಯೋಚಿಸುತ್ತ, ಶಿವನನ್ನು ತಪಸ್ಸು ಮಾಡಿ, ಮೆಚ್ಚಿಸಿ, ವಿಷ್ಣುವು ನನ್ನ ಕೈಗೆ ಶಿಕ್ಕುವ ಹಾಗೆ ವರವನ್ನು ಕೇಳಿ ಕೊಂಡು, ಆ ವರ ಬಲದಿಂದ ಮಾಯಾವಿಯಾದ ವಿಷ್ಣುವನ್ನು ಹಿಡಿದು, ಕೊಂದು ಹಾಕುವೆನು ಎಂದು ನಿಶ್ಚೈಸಿ ಕೊಂಡು, ತನ್ನ ಮಂತ್ರಿಗಳ ಮೇಲೆ ರಾಜ್ಯ ಭಾರವನ್ನು ಇರಿಸಿ, ಹಿಮವತ್ಪರ್ವತಕ್ಕೆ ಒಬ್ಬನೇ ಹೋಗಿ, ಶಿವನನ್ನು ಕುರಿತು ತಪಸ್ಸನ್ನು ಮಾಡುತ್ತಾ ಇದ್ದನು. ಅಷ್ಟರಲ್ಲಿ ಇಂದ್ರಾದ್ಯಷ್ಟ ದಿಕ್ಪಾಲಕರು ಸಮಸ್ತ ದೇವ ಸಮೂಹದೊಡನೆ ಕೂಡಿ, ಮಹಾ ವಿಷ್ಣುವಿನ ಬಳಿಗೆ ಬಂದು,—ಎಲೈ, ಸ್ವಾಮಿಯೇ, ಆ ದುಷ್ಟನಾದ ಹಿರಣ್ಯಕಶಿಪುವು ಮತ್ತೆ ಶಿವನನ್ನು ಕುರಿತು ತಪಸ್ಸಿಗೆ ಕುಳಿತು ಇದ್ಧಾನೆ. ಈಗಲೇ ಅವನಿಂದ ಸಕಲ ಲೋಕಗಳು ಧೂಳೀ ಪಟವಾಗಿ ಹೋದವು. ಮತ್ತೆ ಆ ದುಷ್ಟನು ತಪಸ್ಸಿನಿಂದ ಶಿವನನ್ನು ಮೆಚ್ಚಿಸಿ, ಎಂಥ ವರ

ವನ್ನು ಕೇಳಿ ಕೊಂಡು ಬಂದು, ಲೋಕಗಳನ್ನೆಲ್ಲಾ ಏನು ಮಾಡುತ್ತಾನೋ, ತಿಳಿಯದು. ಮುಂದೆ ನಮಗೇನು ಅಪ್ಪಣೆ? ಎಂದು ಕೇಳಿದರು. ಅದಕ್ಕೆ ಶ್ರೀ ಮಹಾ ವಿಷ್ಣುವು ಇಂದ್ರನನ್ನು ಕರೆದು, ಏಕಾಂತದಲ್ಲಿ ಒಂದು ಮಾತು ಹೇಳಿದ್ದರಿಂದ, ದೇವೇಂದ್ರನು ಸಂತೋಷ ಪಟ್ಟು, ಮಹಾ ವಿಷ್ಣುವಿಗೆ ನಮಸ್ಕರಿಸಿ, ತಿರಿಗಿ ಅಮರಾವತೀ ಪಟ್ಟಣಕ್ಕೆ ಬಂದು, ವಿಷ್ಣು ತನ್ನೊಳಗೆ ಗುಟ್ಟಾಗಿ ಹೇಳಿದ ಪ್ರಕಾರ ಸಮಸ್ತ ದೇವತೆಗಳೊಡನೆ ಕೂಡಿ, ರಾತ್ರೇ ವೇಳೆಯಲ್ಲಿ ಒಮ್ಮಿಂದೊಮ್ಮೆ ಹಿರಣ್ಯಾಕಶಿಪುವಿನ ಶೋಣಿತ ಪುರಕ್ಕೆ ಹೋಗಿ, ಮುತ್ತಿ ಕೊಂಡು, ಆತನ ಮಂತ್ರಿಗಳು ಮೊದಲಾದ ಸಕಲ ದೈತ್ಯರನ್ನು ಸದೆ ಬಡಿದು, ಪೂರ್ನ ಗರ್ಭಿಣಿಯಾದ ಆ ಹಿರಣ್ಯಾಕಶಿಪುವಿನ ಹೆಂಡತಿಯನ್ನು ಅಂತಃಪುರವನ್ನು ಹೊಕ್ಕು, ಕೈ ಶೆರೆ ಹಿಡಿದು ಕೊಂಡು, ಅಮರಾವತೀ ಪಟ್ಟಣಕ್ಕೆ ಹಿಂತಿರುಗಿ ಬಂದನು.

ಅಷ್ಟರೊಳಗೆ ನಾರದ ಮಹಾ ಮುನೀಶ್ವರನು ದೇವೇಂದ್ರನ ಬಳಗೆ ಬಂದು,—ಏನಯ್ಯಾ, ಇಂದ್ರನೇ, ನೀನು ಇಂಥ ಅನುಚಿತವಾದ ಕೆಲಸವನ್ನು ಮಾಡ ಬಹುದೇ? ಮಹಾ ಪತಿವ್ರತೆಯಾದ ಸಕಲ ಲೋಕೋಪಕಾರಿಯಾದ ಹಿರಣ್ಯಾಕಶಿಪುವಿನ ಹೆಂಡತಿಯನ್ನು ಕೈ ಶೆರೆ ಹಿಡಿದು ಕೊಂಡು ಬಂದದ್ದು ಬಹಳ ತಪ್ಪು ಕೆಲಸವಾಯಿತು. ಇದು ಅಲ್ಲದೆ, ಈ ಮಹಾತ್ಮಳ ಹೊಟ್ಟೆಯಲ್ಲಿ ಪರಮ ವೈಷ್ಣವ ಶಿಖಾಮಣಿಯು ಇರುವನು. ಆತನು ಹುಟ್ಟಿ, ಆ ಹಿರಣ್ಯಾಕಶಿಪುವನ್ನು ಕೊಲ್ಲಿಸಿ, ನಿಮ್ಮ ನಿಮ್ಮ ಪದವಿಗಳು ನಿಮಗೆ ಯಥಾ ಪ್ರಕಾರವಾಗುವ ಹಾಗೆ ಮಾಡಿ, ಸರ್ವ ಲೋಕಗಳನ್ನು ಸಂತೋಷ ಪಡಿಸುವನು. ಆದ್ದರಿಂದ ಈ ಮಹಾ ಪತಿವ್ರತೆಯನ್ನು ನೀನೇ ಹಿಂತಿರುಗಿ ಕರೆದು ಕೊಂಡು ಹೋಗಿ, ಅವಳ ಅಂತಃಪುರದಲ್ಲಿ ಬಿಟ್ಟು ಬಾ, ಎಂದು ಹೇಳಿದನು. ದೇವೇಂದ್ರನು ನಾರದ ಮುನಿಯ ಮಾತಿಗೆ ಒಡಂಬಟ್ಟು, ಆಕೆಯನ್ನು ಪಾಲಖಿಯಲ್ಲಿ ಕೂರಿಸಿ ಕೊಂಡು, ಬಹಳ ಮರ್ಯಾದೆಯಿಂದ ಕರೆದು ಕೊಂಡು ಬಂದು, ಆ ಪಟ್ಟಣದಲ್ಲಿ ಆಕೆಯ ಅಂತಃಪುರದಲ್ಲಿ ಬಿಟ್ಟು, ತನ್ನ ಅಮರಾವತೀ ಪಟ್ಟಣಕ್ಕೆ ಹೊರಟು ಬಂದನು. ಅಷ್ಟರೊಳಗೆ ದೇವತೆಗಳಿಂದ ಪರಾಜಿತರಾದ ಹಿರಣ್ಯಾಕಶಿಪುವಿನ ಮಂತ್ರಿಗಳು ಹಿಮವತ್ಪರ್ವತಕ್ಕೆ ಓಡಿ ಹೋಗಿ, ತಪಸ್ಸನ್ನು ಮಾಡುತ್ತಿರುವವನನ್ನು ಕಂಡು,—ದೇವತೆಗಳು ಬಂದು, ತಮ್ಮನ್ನೆಲ್ಲಾ ಜೈಸಿ, ಪಟ್ಟದ ರಾಣಿಯನ್ನು ಕೈ ಶೆರೇ ಹಿಡಿದು ಕೊಂಡು ಹೋದರು ಎಂದು ಹೇಳಲು; ಹಿರಣ್ಯಾಕಶಿಪುವು ಪ್ರಳಯ ಕಾಲದ ಭೈರವನಂತೆ ರೌದ್ರಾಕಾರನಾಗಿ—ಸಕಲ ದೇವ

ಸಮೂಹಗಳನ್ನು ಸುಟ್ಟು, ಬೂದೀ ಮಾಡಿ, ಹಣೆಗೆ ಹಚ್ಚಿಸಿ ಕೊಳ್ಳುವೆನು ಎಂದು, ತಪಸ್ಸನ್ನು ಬಿಟ್ಟು, ತನ್ನ ಶೋಣಿತ ಪುರದ ಸಮೀಪಕ್ಕೆ ಬರುವಷ್ಟರಲ್ಲಿಯೇ, ಆ ಹಿರಣ್ಯಕಶಿಪುವಿನ ಹೆಂಡತಿಯು ಕೋಟಿ ಸೂರ್ಯ ಪ್ರಕಾಶವಾದ ಗಂಡು ಮೊಗುವನ್ನು ಹೆರಲು; ಲೋಕೋಪಕಾರಿಯಾದ ಹರಿ ಭಕ್ತನು ಹುಟ್ಟಿದನೆಂದು ಬಹಳ ಸಂತೋಷದಿಂದ ಇಂದ್ರಾದಿ ದೇವತೆಗಳು ದೇವ ದುಂದುಭಿಯನ್ನು ಬಾರಿಸಿದರು; ಗಂಧರ್ವರು ಗಾನವನ್ನು ಮಾಡಿದರು; ಅಪ್ಸರ ಸ್ತ್ರೀಯರು ನರ್ತನವನ್ನು ಮಾಡಿದರು; ಕಲ್ಪ ವೃಕ್ಷ ಪಾರಿಜಾತಾದಿ ನಂದನ ವನದ ವೃಕ್ಷಗಳ ಹೂವುಗಳ ಮಳೆಯನ್ನು ಸುರಿಸಿದರು.

ಇದನ್ನೆಲ್ಲಾ ಪಟ್ಟಣಕ್ಕೆ ಬರುವ ಹಿರಣ್ಯಕಶಿಪುವು ಕಂಡು,—ಇಷ್ಟು ಸಂಭ್ರಮವು ದೇವತೆಗಳಿಗೆ ಆಗುವದಕ್ಕೆ ಕಾರಣವೇನೆಂದು ಯೋಚಿಸುತ್ತ ಇರುವಲ್ಲಿ, ದೇವೇಂದ್ರನು ಅಷ್ಟ ದಿಕ್ಪಾಲಕರೊಡನೆ ಕೂಡಿ, ಆತನ ಎದುರಿಗೆ ಬಂದು, ದೇವ ಲೋಕದ ವಸ್ತುಗಳನ್ನು ಕೈ ಗಾಣಿಕೇ ಒಪ್ಪಿಸಿ, ಕೈ ಮುಗಿದು ಕೊಂಡು,—ಎಲೈ, ಸರ್ವ ಲೋಕಾಧಿರಾಜನೇ, ನಿನಗೆ ಪುತ್ರೋತ್ಸವವಾಯಿತು ಎಂಬ ಸಂತೋಷವು ನಮಗೆ ಉಂಟಾಗಿ, ಈ ಪ್ರಕಾರ ನಾವು ನಡ ಕೊಂಡೆವು ಎಂದು ಬಿನ್ನವಿಸಿದರು. ಆ ಮಾತನ್ನು ಹಿರಣ್ಯಕಶಿಪುವು ಕೇಳಿ, ದೇವತೆಗಳ ಮೇಲೆ ಇದ್ದ ಕೋಪವೆಲ್ಲಾ ಶಾಂತವಾಗಿ, ಪುತ್ರೋತ್ಸವದ ಸಂತೋಷದಿಂದ ಆ ಇಂದ್ರಾದಿಗಳೊಡನೆ ಕೂಡಿ, ಪಟ್ಟಣವನ್ನು ಹೊಕ್ಕು, ಅಂತಃಪುರಕ್ಕೆ ಹೋಗಿ, ದಿವ್ಯ ತೇಜಃ ಪುಂಜನಾದ ಮಗನನ್ನು ನೋಡಿ, ಅತ್ಯಾಶ್ಚರ್ಯ ಪಟ್ಟು, ತನ್ನ ಶೆರೆ ಮನೆಯಲ್ಲಿ ಇಟ್ಟದ್ದ ಸರ್ವ ಜನರನ್ನು ಬಿಡಿಸಿ, ಸಕಲ ಜಾತಿಯವರಿಗೂ ಬೇಕಾದಷ್ಟು ದಾನ ಧರ್ಮಗಳನ್ನು ಮಾಡಿ, ದೈತ್ಯ ಗುರುವಾದ ಶುಕ್ರಾಚಾರ್ಯನನ್ನು ಕರಿಸಿ, ಹುಟ್ಟಿದ ಮೊಗುವಿಗೆ ಜಾತ ಕರ್ಮವನ್ನು ಮಾಡಿ, ಹನ್ನೆರಡನೇ ದಿವಸದಲ್ಲಿ, ಸಕಲ ಲೋಕಾಹ್ಲಾದಕರನಾಗಿ ಹುಟ್ಟದ್ದರಿಂದ, ಶುಕ್ರಾಚಾರ್ಯನಿಂದ ಪ್ರಹ್ಲಾದನೆಂದು ನಾಮ ಕರಣವನ್ನು ಮಾಡಿಸಿದನು.

ಆ ಪ್ರಹ್ಲಾದನು ಗರ್ಭದಲ್ಲಿಯೇ ಹರಿ ಭಕ್ತಿ ರಸ ಮಯವಾದ ದೇಹವುಳ್ಳವನಾದ್ದರಿಂದ, ಭೂಮಿಯಲ್ಲಿ ಜನಿಸಿದಾಗ್ಯೂ, ಅಜ್ಞಾನವನ್ನು ಹೊಂದದೆ, ಆ ಶಿಶುತ್ವದಲ್ಲಿಯೂ ಹರಿ ಧ್ಯಾನ ಪರಾಯಣನಾಗಿ, ತಾಯಿಯ ಮೊಲೆ ಹಾಲನ್ನು ಹರಿ ಪಾದ ತೀರ್ಥವೆಂದೇ ಭಾವಿಸಿ, ಕುಡಿಯುತ್ತ, ಹರಿಗೆ ಈ ಪ್ರಕಾರ ಅಡ್ಡ ಬೀಳ ಬೇಕೆಂದು ತೊಟ್ಲನಲ್ಲಿ ಮೊಗುಚಿ ಕೊಳ್ಳುತ್ತ,—ಹರಿಗೆ ಅರ್ಪಿಸದೆ, ಹಾಲು, ತುಪ್ಪ, ಸಕ್ಕರೆಗಳನ್ನು ಕೈ ಹಿಡಿದು, ಬಲಾತ್ಕಾರದಿಂದ ತಿನ್ನಿಸುತ್ತಾರಲ್ಲ ಎಂಬ

ದುಃಖದಿಂದ ಅಳುತ್ತ, ಹರಿಯ ಮಹಾತ್ಮೆಯನ್ನು ಮನದಲ್ಲಿ ನೆನೆದು, ನೆನದು, ನಗುತ್ತ, ಕಣ್ಣು ಮುಚ್ಚಿ, ನಿದ್ದೆ ಹೋಗುವಂತೆ ತದೇಕ ಚಿತ್ತನಾಗಿ, ಹರಿಯ ಧ್ಯಾನವನ್ನು ಮಾಡುತ್ತ, ಹರಿಯ ಮಂದಿರಕ್ಕೆ ಹೋಗ ಬೇಕೆಂದು ದಟ್ಟಡಿಗಳನ್ನು ಇಡುತ್ತ, ಹರಿಯ ನಾಮಗಳನ್ನು ಸದಾ ಹೇಳ ಬೇಕೆಂದು ತೊದಲು ನುಡಿಗಳನ್ನು ಆಡುತ್ತ, ಸರಿ ಹುಡುಗರೊಡನೆ ಆಡುವದಕ್ಕೆ ಹೋಗಿ, ಅವರೊಡನೆ ಚಂಡು, ಬುಗುರಿ, ಗಜ್ಜುಗ, ಹಿಳ್ಳೇ ಕೋಲು ಮುಂತಾದ ಕೆಟ್ಟ ಆಟಗಳನ್ನು ಆಡದೆ, ತುಲಸೀ ಗಿಡಗಳು ಇರುವ ಬಳಿಗೆ ಹೋಗಿ, ದಶಿಯಿಂದ ಅವುಗಳಿಗೆ ಗುಣಿಸೆದೇ ಮಾಡಿ, ಪಾತೀ ಕಟ್ಟಿ, ನೀರನ್ನು ಹೊಯಿದು, ಬಲಗೊಂಡು, ನಮಸ್ಕರಿಸಿ, ಅವುಗಳರ ಮುಂದೆ ಸಂತೋಷದಿಂದ ಕುಣಿದಾಡುತ್ತ, ಈ ಪ್ರಕಾರ ಐದು ವರುಷದ ವರಿಗೂ ಲೀಲೆಯಿಂದ ಬೆಳೆದನು.

ತರುವಾಯ ಮಗನನ್ನು ನೋಡಿ, ಹಿರಣ್ಯಕಶಿಪುವು ತಬ್ಬಿ ಕೊಂಡು, ಮುಂಡಾಡಿ,—ಇವನಿಗೆ ಓದು ಬರಹಾ ಕಲಿಯುವ ಕಾಲವಾಯಿತೆಂದು ತಿಳಿದು, ಶುಕ್ರಾಚಾರ್ಯನನ್ನು ಕರಿಸಿ, ಒಳ್ಳೇ ದಿವಸದಲ್ಲಿ, ಒಳ್ಳೇ ಲಗ್ನದಲ್ಲಿ, ಹಣ್ಣು, ಕಾಯಿ, ಕಜ್ಜಾಯಗಳ ರಾಶಿಯನ್ನು ಊರಗಲಕ್ಕೆ ಸುರಿಸಿ, ಜೆನಕನ ಪೂಜೆಯನ್ನು ಮಾಡಿಸಿ, ಗುರುವಾದ ಶುಕ್ರಾಚಾರ್ಯನ ವಶಕ್ಕೆ ಮಠದಲ್ಲಿ ಓದುವದಕ್ಕೆ ಕಳುಹಿಸಿ ಬಿಟ್ಟನು. ಆ ಮೇಲೆ ಶುಕ್ರಾಚಾರ್ಯನು ಈ ಪ್ರಹ್ಲಾದನಿಗೆ ನೆಲ ಪಳ್ಳಿಯ ಮೇಲೆ ಓಂನಮಶ್ಶಿವಾಯ ಎಂಬ ಅಕ್ಷರಗಳನ್ನು ಬರೆದು, ಇವನ ಕೈ ಹಿಡಿದು ಕೊಂಡು, ಹತ್ತೆಂಟು ವೇಳೆ ತಿದ್ದಿಸಿ,—ಎಲ್ಲಿ? ನೋಡೋಣ, ನೀನೇ ಬರೆ ಎಂದು ಹೇಳುವದು; ಈ ಪ್ರಹ್ಲಾದನು—ಸರಸಿಜಾಂಬಕ, ವಿಷ್ಣು, ದಾಮೋದರ, ಲಕ್ಷ್ಮೀಶ, ಪೀತಾಂಬರ, ಮುರಾರಿ, ಶೌರಿ, ಹರಿ, ನಾರಾಯಣ, ಅಸುರಾರಿ, ಹೃಷೀಕೇಶ, ಗರುಡ ವಾಹನ, ಕೃಷ್ಣ, ವಿಶ್ವಂಭರ, ಜನಾರ್ದನ, ಎಂದು ಬರೆದು, ಸಂತೋಷದಿಂದ ಓದುತ್ತಾ ಇದ್ದನು. ಶುಕ್ರಾಚಾರ್ಯನು ಅದನ್ನು ಕಂಡು—ಓಹೋ! ಇನ್ನೇನು ಗತಿ? ಹೀಗೆ ಬರೆಯುವದನ್ನು ಇವನ ಅಪ್ಪ ಕಂಡರೆ—ಏನೂ ಅರಿಯದ ಹುಡುಗನಿಗೆ ಈ ಮಾರಿ ಗುರುವು ನನಗೆ ಹಗೆಯಾದ ವಿಷ್ಣುವಿನ ಹೆಸರುಗಳನ್ನು ಬರೆದೋದ ಕಲಿಸಿದನು ಎಂದು, ನನ್ನನ್ನು ಸುಮ್ಮಗೆ ಬಿಡನು ಎನುತ್ತ,—ಹೀಗೆ ಬರೆಯ ಬೇಡ! ಚನ್ನಾಗಿ ಬರೆ, ಎಂದು ಅದ್ದರಿಸಿ, ಪ್ರಹ್ಲಾದನಿಗೆ ಹೇಳಲು; ಮತ್ತೆ ಪ್ರಹ್ಲಾದನು ಮಳಲಲ್ಲಿ ಹರಿಯ ಮೂರ್ತಿಯನ್ನು ಬರೆದು, ನೋಡಿ, ನಲಿಯುತ್ತ ಇರಲು; ಶುಕ್ರಾಚಾರ್ಯನು—ಇದು ಬೇಡ ಎಂದು ಹೇಳಿ, ಮಗ್ಗಿಯನ್ನು ಬರೆದು, ಇದನ್ನು ಕೂಡಿ, ಕಳೆ, ಎಂದು ಹೇಳಲು; ಪ್ರಹ್ಲಾ

ದನು ಹರಿಯನ್ನು ಮನಸ್ಸಿನಲ್ಲಿ ಕೂಡಿ, ಸಕಲ ದುಷ್ಕೃತಗಳನ್ನು ಕಳೆಯುತ್ತ, ಅಂತರಂಗದಲ್ಲಿ ಹರಿಯನ್ನೇ ಧ್ಯಾನಿಸುತ್ತ, ಹೊರಗಣ ವ್ಯಾಪಾರಗಳನ್ನು ತೊರೆದು, ಸುಮ್ಮನಿದ್ದನು.

ಅದನ್ನು ನೋಡಿ, ಶುಕ್ರಾಚಾರ್ಯನು—ಈ ಹುಡುಗ ಯಾಕೆ ಹೀಗೆ ಮಂಕಾದನು? ಹಸಿದನೋ? ಏನೋ? ಉಂಡು ಬರಲಿ; ಮನೆಗೆ ಕಳುಹಿಸಿ ಬನ್ನಿ ಎಂದು, ಅವನ ಜೊತೇ ಹುಡುಗರ ಕೂಡಲಿಟ್ಟು, ಕಳುಹಿಸಲು; ಪ್ರಹ್ಲಾದನು ಆ ಹುಡುಗರ ಜೊತೆಯಲ್ಲಿ ಕಾಲು ಗೆಜ್ಜೆಗಳು ಉಲಿಯಲು; ಕೆಂಗುರುಳುಗಳು ಕುಣಿದಾಡಲು; ಮಾಗಾಯಿ ಹುಲಿ ಉಗುರುಗಳು ಒಲದಾಡಲು; ನಳಿ ತೋಳುಗಳನ್ನು ಆಡಿಸುತ್ತ ಬರುವದನ್ನು ದೂರದಲ್ಲಿ ಹಿರಣ್ಯಕಶಿಪುವು ಕಂಡು, ಹಿಗ್ಗಿ ಬಗ್ಗಿ ಬರಿಯಾಗಿ—ಎನ್ನ ಕಂದಾ, ಎನ್ನ ಮುದ್ದಾನೆಯೇ, ಎನ್ನ ವಂಶೋದ್ಧಾರಕನೇ, ಬಾ ಎಂದು ಕೈ ನೀಡಿ, ಕರೆದು, ಅಪ್ಪಿ ಕೊಂಡು, ಮುಂಡಾಡಿ,—ನಿನಗೆ ಗುರುಗಳು ಏನು ತಿಳಿಸಿದರು? ಯಾವ ವಿದ್ಯವನ್ನು ಕಲಿಸಿದರು? ನೀನು ಏನು ಕಲಿತೆ? ಹೇಳು; ನೋಡೋಣ, ಎಂದು ಕೇಳಲು; ಪ್ರಹ್ಲಾದನು—ಹರೇ, ಹರೇ, ಶರಣು, ಶರಣು! ಎಂದು ಬರೆದು ಓದಲು; ಹಿರಣ್ಯಕಶಿಪುವು ಕೇಳಿ, ಬೆದರಿ, ಭಯ ಪಟ್ಟು,—ಇವನಿಗೆ ಈ ಹರಿಯ ತಳ್ಳಿ ಎಲ್ಲಿಂದ ಬಂತು? ಏನೋ ಶಿಶುವು; ಅರಿಯದೆ ಬರೆದು ಓದಿದನು. ಇದಕ್ಕೇನು? ಈ ಬುದ್ಧಿಯನ್ನು ಬಿಡಿಸ ಬೇಕು ಎಂದು, ಪ್ರಹ್ಲಾದನನ್ನು ಕುರಿತು—ಎಲೈ, ಮಗನೇ, ನೀನ್ಯಾರು? ಹರಿ ಯಾರು? ಆ ಹರಿಯು ನಮಗೆ ಹಗೆಯು. ದೇವತೆಗಳ ಮಾತನ್ನು ಕೇಳಿ, ಹಂದಿಯ ರೂಪನ್ನು ತಾಳಿ, ನಿನ್ನ ಚಿಕ್ಕಪ್ಪನನ್ನು ಕೊಂದು ಹಾಕಿದ ದುರಾತ್ಮನು. ಅವನನ್ನು ಹೊಗಳುವರೇ? ಬೇಡ, ಬೇಡ, ಅಪ್ಪಾ! ಎಂದು ಹೇಳಿದನು.

ಆ ಮಾತನ್ನು ಕೇಳಿ, ಪ್ರಹ್ಲಾದನು—ಎಲೈ, ತಂದೆಯೇ, ಕೇಳು. ಹರಿಗೆ ಇವರು ಹಗೆಗಳು, ಇವರು ಬಂಧು ಬಳಗಗಳು ಎಂಬ ಭೇದಗಳೊಂದೂ ಇಲ್ಲ. ಆತನು ದಯಾಂಬುಧಿಯು. ನಿನ್ನನ್ನು ಹಗೆ ಮಾಡಿ, ನಿನ್ನ ತಮ್ಮನನ್ನು ಕೊಂದನೆಂದು ತಿಳಿಯ ಬೇಡ. ಅವನ ಪುರಾಕೃತವಾದ ಪಾಪದ ಫಲದಿಂದ ಅವನು ಅಳಿದನು. ನೀನು ಚನ್ನಾಗಿ ತಿಳಿದು ನೋಡು, ಎಂದು ಹೇಳಿದನು. ಅದಕ್ಕೆ ಹಿರಣ್ಯಕಶಿಪುವು ಕೋಪಿಷ್ಠನಾಗಿ—ಇವನಿಗೆ ಎಷ್ಟು ಹೇಳಿದರೂ, ನನ್ನ ಹಗೆಯಾದ ಹರಿಯ ನೆನೆಯುವದನ್ನು ಬಿಡುವದಿಲ್ಲ. ಇಂಥ ಕೆಟ್ಟ ಮಗ ಇದ್ದೇನು ಫಲ? ಇವನ ಕುತ್ತಿಗೆಯನ್ನು ಕಡಿದು ಹಾಕುವೆನು ಎಂದು, ಕತ್ತಿಯನ್ನು ಹಿರಿದು, ಕಡಿಯುವದಕ್ಕೆ ಹೋಗಲು; ಗುರುವಾದ ಶುಕ್ರಾಚಾರ್ಯನು ಬೇಗ ಬಂದು, ಹಿ

ರಣ್ಯಕಶಿಪುವಿನ ಕೈಯನ್ನು ಹಿಡು ಕೊಂಡು,—ಬೇಡ! ಬೇಡ! ಬೇಡ! ಕೋಡಗ ನನ್ನು ಕೊಂದರೇನುಂಟು? ಮೊಗುವಿನ ಕೂಡೆ ನಿನಗೆ ಫಲವೇ? ಬಿಡು! ಇವ ನನ್ನು ಮುದ್ದಿಸು. ಲೋಕ ಮೆಚ್ಚುವಂತೆ ಇವನಿಗೆ ವಿದ್ಯ ಬುದ್ಧಿಯನ್ನು ನಾ ನು ಕಲಿಸುವೆನು ಎಂದು ಹೇಳಿ, ಸಮುದಾಯಿಸಿದನು. ಆಗ ಹಿರಣ್ಯಕಶಿಪುವು ಶಾಂತನಾಗಿ, ಪ್ರಹ್ಲಾದನನ್ನು ಗುರುವಿನ ಕೈಯಲ್ಲಿ ಕೊಟ್ಟು,—ಹರಿಯನ್ನು ನೆನೆ ಯುವ ಇವನ ಹುಚ್ಚುತನವನ್ನು ಬಿಡಿಸಿ, ವಿದ್ಯ ಬುದ್ಧಿಗಳನ್ನು ಕಲಿಸು ಎಂದು ನೇಮಿಸಿದನು.

ತಿರಿಗಿ ಶುಕ್ರಾಚಾರ್ಯನು ಪ್ರಹ್ಲಾದನನ್ನು ಮಠಕ್ಕೆ ಕರೆದು ಕೊಂಡು ಬಂದು, ಎಷ್ಟೆಷ್ಟು ಉಪಾಯಗಳಿಂದ ಒಡಂಬಡಿಸಿ—ಹರಿಯ ನೆನೆಯುವದನ್ನು ಬಿಡು ಎಂ ದು ಹೇಳಿದಾಗ್ಯೂ, ಕೇಳದೆ, ಪ್ರಹ್ಲಾದನು ಹರಿ ಧ್ಯಾನ ಪರನಾಗಿ ಇರುವದನ್ನು ಬಿಡದೆ, ಗುರುವಿಗೇನೆ ವೇದಾಂತವನ್ನು ಉಪದೇಶಿಸುತ್ತ, ಬುದ್ಧಿಯನ್ನು ಹೇಳು ತ್ತ ಬಂದದರಿಂದ ಆತನು ಛಳಿತು, ಆ ಪ್ರಹ್ಲಾದನನ್ನು ಕರೆದು ಕೊಂಡು, ಹಿರ ಣ್ಯಕಶಿಪುವಿನ ಬಳಿಗೆ ಬಂದು—ಈ ನಿನ್ನ ಮಗನು ನಾನು ಎಷ್ಟು ವಿಧದ ಒಳ್ಳೇ ಮಾತಿನಲ್ಲಿ ಹೇಳಿದಾಗ್ಯೂ, ನಾನಾ ವಿಧದಲ್ಲಿ ಹೊಡೆದು, ಬಡಿದು, ಬೈದಾಗ್ಯೂ, ಹರಿಯ ಧ್ಯಾನವನ್ನು ಒಂದು ಕ್ಷಣವಾದರೂ ಬಿಡದೆ, ನಾನು ಹೇಳಿ ಕೊಟ್ಟದ್ದು ಒಂದನ್ನೂ ಓದಿ ಬರೆಯುವದಿಲ್ಲ. ಇವನನ್ನು ತಿದ್ದುವದಕ್ಕೆ ನನ್ನಿಂದ ಖಂಡಿತ ವಾಗಿ ತೀರದು, ಎಂದು ಹೇಳಿದನು. ಆ ಮಾತನ್ನು ಪ್ರಹ್ಲಾದನು ಕೇಳಿ—ಎಲೈ, ತಂದೆಯೇ, ಪರಾತ್ಪರನಾದ ಸಕಲ ದೇವೋತ್ತಮನಾದ ಹರಿಯು ನನ್ನ ಹೃದ ಯಾರವಿಂದದ ಕರ್ನಿಕಾ ಮಧ್ಯದಲ್ಲಿ ಸದಾ ಕಾಲದಲ್ಲಿಯೂ ನೆಲೆಗೊಂಡಿರುವಲ್ಲಿ, ಈ ಕೆಟ್ಟ ಗುರುವು ನನಗೆ ಹೇಳಿ ಕೊಡುವದೇನು? ನಾನು ಕಲಿಯುವದೇನು? ನನಗೆ ತಂದೆಯೂ, ತಾಯಿಯೂ, ಗುರುವೂ, ಬಂಧು ಬಳಗವೂ, ಸ್ನೇಹಿತನೂ, ಸಕಲ ಐಶ್ವರ್ಯವೂ, ಶ್ರೀ ಹರಿಯೇ ಆಗಿರುವಲ್ಲಿ, ಅನ್ಯರ ಸ್ನೇಹದಿಂದಲೂ, ದ್ವೇ ಷದಿಂದಲೂ, ಸ್ವಲ್ಪವಾದರೂ ಪ್ರಯೋಜನವಿಲ್ಲ. ನನಗೆ ಒಬ್ಬರ ಲಕ್ಷ್ಯವು ಇಲ್ಲ ವೆಂದು, ಖಂಡಿತವಾಗಿ ಹೇಳಿದನು.

ಅದನ್ನು ಕೇಳಿ, ಹಿರಣ್ಯಕಶಿಪುವು ಕೋಪಿಷ್ಠನಾಗಿ, ಕಟಕರನ್ನು ಕರಿಸಿ,—ಈ ಹುಡುಗನನ್ನು ಸ್ಮಶಾನಕ್ಕೆ ಕರೆದು ಕೊಂಡು ಹೋಗಿ, ಕಡಿದು ಹಾಕಿ ಬನ್ನಿ, ಎಂದು ಅಪ್ಪಣೇ ಕೊಡಲು; ಆ ಕಟಕರು ಈ ಪ್ರಹ್ಲಾದನನ್ನು ಹಿಡಿದು ಕೊಂ ಡು, ಕಾಡ ಪುರಕ್ಕೆ ಕರೆದು ಕೊಂಡು ಹೋಗಿ, ಅಲ್ಲಿಯೂ ಎಡೆ ಬಿಡದೆ ಹರಿ ನಾಮ ಸ್ಮರಣೆಯನ್ನು ಮಾಡುತ್ತಲಿರುವ ಪ್ರಹ್ಲಾದನನ್ನು ಸಕಲ ಆಯುಧಗಳಿಂ

ದ ಕಡಿದು, ತಿವಿದಾಗ್ಯೂ, ಆ ಆಯುಧಗಳೇ ತುಂಡು ತುಂಡಾಗಿ ತುಮುರು ತುಮುರಾಗಿ ಹೋದದ್ದಲ್ಲದೆ, ಇವನ ಮೈಗೆ ಸ್ವಲ್ಪವಾದರೂ ಘಾಯವಾಗದೆ ಇದ್ದದರಿಂದ, ಆ ಕಟಕರು ಆಶ್ಚರ್ಯ ಪಟ್ಟು, ಈ ಸುದ್ದಿಯನ್ನು ಹಿರಣ್ಯಕಶಿಪುವಿಗೆ ತಿಳಿಸಲು; ಆತನು—ಹಗೆಯಾದ ಹರಿಯೇ ಈ ಮಗನ ಸ್ವರೂಪವಾಗಿರ ಬೇಕು. ಇವನನ್ನು ಕೊಂದರೆ, ಹರಿಯನ್ನೇ ಕೊಂದ ಹಾಗೆ ಆಗುತ್ತದೆ ಎಂದು ನಿಶ್ಚೈಸಿ—ಇವನ ಕೈ ಕಾಲು ಕಟ್ಟಿ, ಸಮುದ್ರದಲ್ಲಿ ಹಾಕಿ ಎಂದು ನೇಮಿಸಿದನು. ಅವರು ಅದೇ ಪ್ರಕಾರ ಸಮುದ್ರದಲ್ಲಿ ಹಾಕಲು; ಸಮುದ್ರ ರಾಜನು ಪ್ರತ್ಯಕ್ಷವಾಗಿ ಬಂದು, ಪರಮ ಭಾಗವತನಾದ ಪ್ರಹ್ಲಾದನಿಗೆ ನಮಸ್ಕರಿಸಿ, ಅನರ್ಘ್ಯವಾದ ರತ್ನಾಭರಣಗಳಿಂದ ಅಲಂಕರಿಸಿ, ತಾನೇ ಎತ್ತಿ ಕೊಂಡು ಬಂದು, ಧಡದಲ್ಲಿ ಇರುವ ಈ ಕಟಕರ ವಶಕ್ಕೆ ಕೊಟ್ಟು, ಅದೃಶ್ಯನಾದನು. ಆ ಮೇಲೆ ಕಟಕರು ಈ ಪ್ರಹ್ಲಾದನ ಮಹಾತ್ಮೆಗೆ ಬೆರಗಾಗಿ—ಇವನೇನೋ ದೈವೀಕದ ಮೊಗುವಾಗಿರ ಬೇಕೆಂದು ಎಣಿಸಿ, ಅವನನ್ನು ಕರೆದು ಕೊಂಡು, ಹಿರಣ್ಯಕಶಿಪುವಿನ ಬಳಿಗೆ ಬಂದು, ನಡೆದ ವಿವರವನ್ನು ತಿಳಿಸಿದರು. ಆತನು ಆ ಮಾತನ್ನು ಕೇಳಿ, ಮತ್ತೂ ಕೋಪಿಷ್ಠನಾಗಿ, ಆ ಕಟಕರನ್ನು ಕುರಿತು—ದೊಡ್ಡ ದೊಡ್ಡವುಗಳಾದ ಒಣಗಿದ ಮರಗಳನ್ನು ಒಟ್ಟಿ, ನಾಲ್ಕು ಕಡೆಗೂ ಬೆಂಕೀ ಹತ್ತಿಸಿ, ಅದರ ಉರಿಯಲ್ಲಿ ಇವನ ಕೈ ಕಾಲು ಕಟ್ಟಿ ಹಾಕಿ ಎಂದು ನೇಮಿಸಿ, ಕಳುಹಿಸಲು; ಅವರು ಅದೇ ಪ್ರಕಾರ ಮಾಡಿದರು. ಆಗ ಅಗ್ನಿ ದೇವತೆಯು ಕೋಟಿ ಸೂರ್ಯರ ಹಾಗೆ ಪ್ರಕಾಶಿಸುವ ಈ ಪ್ರಹ್ಲಾದನನ್ನು ಸುಡುವದಕ್ಕೆ ತನಗೆ ಶಕ್ತಿ ಸಾಲದೆ, ಬಹಳವಾಗಿ ಉಪಚರಿಸಿ, ಎತ್ತಿ ಕೊಂಡು ಬಂದು, ಈ ಕಟಕರ ವಶಕ್ಕೆ ತಿರಿಗಿ ಕೊಟ್ಟು, ಆ ಬೆಂಕಿಯಲ್ಲಿಯೇ ಹೊಕ್ಕು, ಮರಸಿ ಕೊಂಡನು.

ಈ ವರ್ತಮಾನವನ್ನು ಹಿರಣ್ಯಕಶಿಪುವಿಗೆ ಹೇಳಲು;—ಘಟ ಸರ್ಪಗಳಿಂದ ಕಚ್ಚಿಸಿ, ಕೊಂದು ಹಾಕಿ ಎಂದು ಅಪ್ಪಣೇ ಕೊಡಲು; ಆ ಕಟಕರು ದೊಡ್ಡ ದೊಡ್ಡ ನಾಗರ ಹಾವುಗಳನ್ನು ಹಿಡ ತಂದು, ಈ ಪ್ರಹ್ಲಾದನ ಮೇಲೆ ಬಿಡಲು; ಹಾವುಗಳೊಂದೂ ಅವನನ್ನು ಮುಟ್ಟದೆ, ಈ ಕಟಕರನ್ನೇ ಕಚ್ಚುವದಕ್ಕೆ ಅಟ್ಟಿ ಕೊಂಡು ಬರಲು; ಅವರೆಲ್ಲರು ಹೆದರಿ, ಹಿರಣ್ಯಕಶಿಪುವಿನ ಬಳಿಗೆ ಓಡಿ ಬಂದು, ನಡೆದ ವಿವರವನ್ನು ಬಿನ್ನವಿಸಿದರು. ಅದನ್ನು ಕೇಳಿ, ಹಿರಣ್ಯಕಶಿಪುವು ಬಹಳ ಕೋಪಿಷ್ಠನಾಗಿ, ಪ್ರಹ್ಲಾದನನ್ನು ತನ್ನ ಚಾವಡಿಗೆ ಹಿಡ ತರಿಸಿ, ಅವನ ಜುಟ್ಟನ್ನು ಹಿಡಿದು ಕೊಂಡು, ಕತ್ತಿಯನ್ನು ಕಿತ್ತು ಕೊಂಡು,—ಎಲಾ, ಹಗೆಯಾದ ಮಗನೇ, ನೀನು ನೆನೆಯುವ ಹರಿಯು ಎಲ್ಲಿದ್ದಾನೆ? ಎನಲು; ಪ್ರಹ್ಲಾದನು—

ಎಲೈ, ತಂದೆಯೇ, ಸಕಲವಾದ ಲೋಕಗಳಲ್ಲಿಯೂ ಅಣು ರೇಣು ತೃಣ ಕಾಷ್ಟಗಳಲ್ಲಿಯೂ ಪರಿಪೂರ್ಣನಾಗಿರುವ ಹರಿಯು ಎಲ್ಲಾ ಕಡೆಯಲ್ಲಿಯೂ ಇದ್ದಾನೆ. ಅವನು ಇಲ್ಲದ ಸ್ಥಳ ಯಾವದೂ ಇಲ್ಲ, ಎನಲು; ಹಿರಣ್ಯಾಕಶಿಪುವು—ಹಾಗಾದರೆ, ನಿನ್ನ ಹರಿಯನ್ನು ಈ ನನ್ನ ಚಾವಡಿಯ ಉಕ್ಕಿನ ಕಂಭದಲ್ಲಿ ತೋರಿಸಿದೆಯಾ? ಸರಿ! ಇಲ್ಲದೆ ಇದ್ದರೆ, ನಿನ್ನನ್ನು ಈಗಲೇ ತುಂಡು ತುಂಡಾಗಿ ಕಡಿದು ಹಾಕುವೆನು ಎಂದು, ನಾನಾ ಪ್ರಕಾರ ಪ್ರಹ್ಲಾದನನ್ನು ಬಾಧಿಸುತ್ತಿದ್ದನು. ಅದನ್ನು ನೋಡಿ, ಮಹಾ ವಿಷ್ಣುವು ಸಹಿಸಲಾರದೆ,—ಈ ಹಿರಣ್ಯಾಕಶಿಪುವಿಗೆ ಬ್ರಹ್ಮ ಕೊಟ್ಟ ವರವು ತಪ್ಪದ ಹಾಗೆ, ಇವನನ್ನು ಹ್ಯಾಗೆ ಕೊಂದು ಹಾಕ ಬೇಕು? ಎಂದು ಯೋಚಿಸಿ, ಆಗ ಕುತ್ತಿಗೆಯಿಂದ ಮೇಲಕ್ಕೆ ಸಿಂಹವಾಗಿಯೂ, ಕೆಳ ಗಡೆಗೆ ಮನುಷ್ಯನಾಗಿಯೂ ಇರುವ ನರಸಿಂಹ ರೂಪನ್ನು ಧರಿಸಿ, ಆ ಚಾವಡಿಯ ಉಕ್ಕಿನ ಕಂಭವನ್ನು ಎರಡು ಭಾಗವಾಗಿ ಶೀಳಿ ಕೊಂಡು, ಹೊರಗೆ ಬರಲು; ಆ ರಭಸಕ್ಕೆ ಹಿರಣ್ಯಾಕಶಿಪುವು, ಕೋಟಿ ಶಿಡಿಲು ಬಡಿದ ಹಾಗೆ ಕೆಳಗೆ ಬಿದ್ದು, ಮೂರ್ಛಿತನಾದನು. ಅಲ್ಲಿದ್ದ ಕೋಟ್ಯಾಂತರ ದೈತ್ಯ ಬಲದೊಳಗೆ ಒಬ್ಬನಾದರೂ ಉಳಿಯದೆ, ಎಲ್ಲರೂ ನರಸಿಂಹನ ತೇಜಸ್ಸಿನಿಂದ ಸುಟ್ಟು, ಭಸ್ಮೀಭೂತನಾಗಿ ಹೋದರು. ಆಗ ಪ್ರಹ್ಲಾದನು ನರಸಿಂಹನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಕೈ ಮುಗಿದು, ನಿಂತು ಕೊಂಡು, ಅನೇಕ ವಿಧವಾದ ಸ್ತುತಿಗಳಿಂದ ಸ್ತೋತ್ರ ಮಾಡುತ್ತಾ ಇದ್ದನು. ಆ ಮೇಲೆ ನರಸಿಂಹನು ಹಗಲು ರಾತ್ರಿಯಲ್ಲದ ಮುಚ್ಚಂಜೇ ವೇಳೆಯಲ್ಲಿ ಆ ಹಿರಣ್ಯಾಕಶಿಪುವನ್ನು ಎತ್ತಿ ಕೊಂಡು, ಒಳಗೂ ಹೊರಗೂ ಅಲ್ಲದ ಹೊಸ್ತಿಲ ಮೇಲೆ ಕುಳಿತು ಕೊಂಡು, ಆಕಾಶವೂ ಭೂಮಿಯೂ ಅಲ್ಲದ ತನ್ನ ತೊಡೆಯ ಮೇಲೆ ಮಲಗಿಸಿ ಕೊಂಡು, ಯಾವ ಆಯುಧಗಳೂ ಅಲ್ಲದ ತನ್ನ ಉಗುರುಗಳಿಂದ ಅವನ ಹೊಟ್ಟೆಯನ್ನು ಬಗೆದು, ಕರುಳುಗಳನ್ನು ತೆಗೆದು, ವನಮಾಲಿಕೆಯನ್ನು ಹಾಕಿ ಕೊಂಡನು.

ಆ ಸಮಯದಲ್ಲಿ ನರಸಿಂಹನು ಅತಿ ಕೋಪಾವೇಶದಿಂದ ರೌದ್ರಾಕಾರನಾಗಿ, ಕೋಪದ ಶಿಖಿಯು ಮೂರು ಲೋಕವನ್ನು ಸುಡುತ್ತಾ ಇದ್ದಾಗ್ಯೂ, ಶಾಂತನಾಗದೆ ಇರಲು; ಬ್ರಹ್ಮಾದಿ ಸುರರೆಲ್ಲಾ ಕೂಡಿ, ಲಕ್ಷ್ಮಿಯನ್ನು ಪ್ರಾರ್ಥಿಸಿ, ನರಸಿಂಹನ ಬಳಿಗೆ ಕಳುಹಿಸಲು; ಲಕ್ಷ್ಮೀ ದೇವಿಯು ಬಂದು, ತಾನು ಕೂಡ ನರಸಿಂಹನ ಎದುರಿಗೆ ಹೋಗುವದಕ್ಕೆ ಅಂಜಿ, ಪರಮ ಭಕ್ತನಾದ ಪ್ರಹ್ಲಾದನನ್ನು ಮುಂದು ಮಾಡಿ ಕೊಂಡು, ಹೋಗಿ, ನರಸಿಂಹನ ಎದುರಿಗೆ

ನಿಲ್ಲಲು; ನರಸಿಂಹನು ಅವರಿಬ್ಬರನ್ನು ನೋಡಿ, ಶಾಂತನಾಗಿ, ಸೆಳೆದು ಕೊಂಡು ತನ್ನ ಎರಡು ತೊಡೆಗಳ ಮೇಲೆ ಅವರನ್ನು ಕೂರಿಸಿ ಕೊಂಡನು. ಆಗ ಬ್ರಹ್ಮಾದಿಗಳು ಪುಷ್ಪ ವೃಷ್ಟಿಯನ್ನು ಕರೆದು, ನರಸಿಂಹನ ಸನ್ನಿಧಿಗೆ ಬಂದು, ಸ್ತುತಿಸಿದರು. ಆ ಬಳಿಕ ನರಸಿಂಹನು ಬ್ರಹ್ಮಾದಿ ಸುರರೊಡನೆ ಕೂಡಿ, ಭಕ್ತನಾದ ಪ್ರಹ್ಲಾದನಿಗೆ ದೈತ್ಯ ರಾಜ ಪಟ್ಟಾಭಿಷೇಕವನ್ನು ಮಾಡಿ,—ಸ್ಥಿರ ಜೀವಿಯಾಗಿರು ಎಂದು ಹರಸಿ, ಲಕ್ಷ್ಮೀ ಸಮೇತನಾಗಿ ವೈಕುಂಠಕ್ಕೆ ತೆರಳಿದನು. ಬ್ರಹ್ಮಾದಿಗಳು ತಮ್ಮ ತಮ್ಮ ಲೋಕಕ್ಕೆ ಹೋದರು. ಪ್ರಹ್ಲಾದನು ಪರಮ ಭಕ್ತಿಯಿಂದ ಹರಿ ಧ್ಯಾನವನ್ನು ಮಾಡುತ್ತ, ಧರ್ಮದಿಂದ ರಾಜ್ಯ ಭಾರವನ್ನು ಮಾಡಿ ಕೊಂಡು, ಸುಖವಾಗಿದ್ದನು.

79. The Fifth or Dwarf Incarnation.

೭೯. ವಾಮನಾವತಾರದ ಕಥೆ.

ಅನಂತರದಲ್ಲಿ ಪ್ರಹ್ಲಾದನು ಶೋಣಿತ ಪುರದಲ್ಲಿ ಧರ್ಮದಿಂದ ರಾಜ್ಯ ಪರಿಪಾಲನೆಯನ್ನು ಮಾಡುತ್ತ—ಹರಿಯೇ ಪರಮೋತ್ಕೃಷ್ಟ ದೇವತೆ ಎಂದೂ, ಶರಣಾಗತ ರಕ್ಷಕನೆಂದೂ, ಸರ್ವ ಜಗದ್ವ್ಯಾಪಕನೆಂದೂ, ತಾನು ತಿಳಿದು, ಸಕಲ ಜನರಿಗೂ ಉಪದೇಶಾ ಮಾಡುತ್ತ ಇದ್ದು, ಬಹು ಕಾಲದ ಮೇಲೆ ರಾಜ್ಯದಲ್ಲಿ ವಿರಕ್ತನಾಗಿ—ತನ್ನ ಮೊಮ್ಮಗನಾದ ಬಲಿಯು ರಾಜ್ಯ ಭಾರಕ್ಕೆ ಯೋಗ್ಯವಾದ ಪ್ರಾಯವುಳ್ಳವನಾದನೆಂದು ತಿಳಿದು, ಆತನನ್ನು ಕರೆದು, ಏಕಾಂತದಲ್ಲಿ ಕೂರಿಸಿ ಕೊಂಡು,—ಎಲೈ, ಬುದ್ಧಿ ಶಾಲಿಯಾದ ಮೊಮ್ಮಗನೇ, ನಿನ್ನ ತಂದೆಯಾದ ವಿರೋಚನನು ಸಕಲ ದೈವದ ಗಂಡನಾದ ಲೋಕೈಕ ನಾಥನಾದ ವಿಷ್ಣುವಿಗೆ ದ್ರೋಹವನ್ನು ಮಾಡಿ, ಕಾಲ ಗತಿಯನ್ನು ಹೊಂದಿದನು. ನೀನು ಆ ಪ್ರಕಾರ ಮಾಡದೆ, ವಿಷ್ಣುವಿನಲ್ಲಿ ಪರಮ ಭಕ್ತಿಯನ್ನು ಇಟ್ಟು, ಸದಾ ಕಾಲದಲ್ಲಿಯೂ ಆತನ ಧ್ಯಾನವನ್ನು ಮಾಡುತ್ತ, ಧರ್ಮದಿಂದ ರಾಜ್ಯ ಪರಿಪಾಲನೆಯನ್ನು ಮಾಡಿ ಕೊಂಡು, ಸಕಲ ಪ್ರಾಣಿಗಳಲ್ಲಿಯೂ, ದಯವುಳ್ಳವನಾಗಿ, ಸುಖದಿಂದ ಇರು, ನಾನು ನಿನಗೆ ರಾಜ್ಯಾಭಿಷೇಕವನ್ನು ಮಾಡಿ, ತಪಸ್ಸಿಗೆ ಹೋಗುವೆನು. ಆದರೆ ದೈತ್ಯರಲ್ಲಿ ದೇವತೆಗಳಿಗೆ ಸ್ವಭಾವವಾದ ಜಾತಿ ದ್ವೇಷವು ಇರುವದರಿಂದ, ನೀನು ವಿಷ್ಣು ಭಕ್ತಿಯಿಂದಲೂ, ಧರ್ಮದಿಂದಲೂ, ವರ ಬಲದಿಂದಲೂ, ದೇವತೆಗಳನ್ನು ತಲೆ ಎತ್ತದಂತೆ ಅಡಗಿಸಿ, ಬಾಳು ಎಂದು ಬುದ್ಧಿ ಗಲಿಸಿ, ಒಳ್ಳೇ ಲಗ್ನದಲ್ಲಿ ರಾಜ್ಯಾಭಿಷೇಕವನ್ನು ಮಾಡಿ, ತಪಸ್ಸಿಗೆ ಹೊರಟು ಹೋದನು.

ಅನಂತರದಲ್ಲಿ ಬಲಿಯು ತನ್ನ ಸ್ವಾಧೀನವಾದ ರಾಜ್ಯ ಭಾರವನ್ನು ಮಂತ್ರಿ

ಗಳ ಮೇಲೆ ಇಟ್ಟು—ಎಷ್ಟಾದರೂ ಧರ್ಮಕ್ಕೆ ಲೋಪ ಬಾರದಂತೆಯೂ, ತನ್ನ ದೇಶದ ಸರ್ವ ಜನರು ಪರಮ ಭಕ್ತಿಯಿಂದ ವಿಷ್ಣುವನ್ನೇ ಆರಾಧಿಸುವಂತೆಯೂ ಸಕಲ ಪ್ರಜೆಗಳಿಗೂ ಕಟ್ಟು ಮಾಡಿಸಿ, ನೀವು ಧರ್ಮಿಷ್ಠರಾಗಿ ವಿಚಾರಿಸಿಕೊಳ್ಳುತ್ತ ಇರ್ರಿ ಎಂದು ಹೇಳಿ, ತಾನು ಹಿಮವತ್ಪರ್ವತಕ್ಕೆ ಹೋಗಿ, ಸರ್ವ ಲೋಕ ಪಿತಾಮಹನಾದ ಬ್ರಹ್ಮ ದೇವರನ್ನು ಕುರಿತು ಅನೇಕ ಸಂವತ್ಸರಗಳು ತಪಸ್ಸು ಮಾಡಿದ್ದರಿಂದ, ಬ್ರಹ್ಮ ದೇವರು ಮೆಚ್ಚಿ, ಆತನ ಬಳಿಗೆ ಬಂದು—ಎಲೈ, ಬಲಿಯೇ, ನಿನ್ನ ತಪಸ್ಸಿಗೆ ನಾನು ಮೆಚ್ಚಿದೆನು. ನಿನಗೆ ಬೇಕಾದ ವರಗಳನ್ನು ಕೇಳಿಕೋ; ಕೊಡುವೆನು ಎಂದು ಹೇಳಲು; ಬಲಿಯು ಆತನಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ, ಕೈ ಮುಗಿದು, ನಿಂತು ಕೊಂಡು,—ಸ್ವಾಮಿ, ಜಗತ್ಕರ್ತನೇ, ಮೊದಲು ನನಗೆ ಎಂಥಾ ಎಡರು ಬಂದ ಕಾಲದಲ್ಲಿಯೂ ವಿಷ್ಣುವಿನಲ್ಲಿ ಭಕ್ತಿಯೂ, ಧರ್ಮದಲ್ಲಿ ಬುದ್ಧಿಯೂ, ತಪ್ಪದ ಹಾಗೆ ಕೊಡ ತಕ್ಕ ವರ ಒಂದು. ನಾನು ಆಳುವ ರಾಜ್ಯಗಳಲ್ಲಿ ಸಕಲ ಪ್ರಜೆಗಳು ಸಂತತಿ ಸಂಪತ್ತುಗಳಿಂದ ಸದಾ ಸಂತೋಷ ಚಿತ್ತರಾಗಿ ಇರುವ ಹಾಗೆ ಕೊಡ ಬೇಕಾದ ವರ ಒಂದು. ನಾನು ಸ್ಥಿರ ಜೀವಿಯಾಗಿ ಇರ ತಕ್ಕ ವರ ಒಂದು. ಸಕಲ ದೇವತೆಗಳು, ದಾನವರು, ಯಕ್ಷ, ಗರುಡ, ಗಂಧರ್ವ, ಕಿನ್ನರೋರಗರು ಮುಂತಾದವರಲ್ಲಿ ಇರುವ ಮಂತ್ರಾಸ್ತ್ರಗಳೂ, ವೈಷ್ಣವ ಪಾಶುಪತ ಬ್ರಹ್ಮಾಸ್ತ್ರಗಳೂ, ನನಗೆ ಸಿದ್ಧಿಸುವಂತೆ ಅನುಗ್ರಹ ಮಾಡುವ ವರ ಒಂದು. ಇವುಗಳನ್ನು ದಯ ಪಾಲಿಸ ಬೇಕೆಂದು ಬೇಡಿ ಕೊಂಡದರಿಂದ, ಬ್ರಹ್ಮ ದೇವನು ಬಹಳ ಸಂತೋಷ ಪಟ್ಟು—ಎಲೈ, ಮಗನೇ, ನಿನ್ನ ಸುಗುಣಕ್ಕೆ ನಾನು ಬಹಳ ಮೆಚಿ ದೆನು. ನೀನು ಕೇಳಿದ ನಾಲ್ಕು ವರಗಳನ್ನು ನಿನಗೆ ಕೊಟ್ಟು ಇದ್ದೇನೆ. ಸುಖದಿಂದ ಬಾಳು ಎಂದು, ಆತನ ತಲೆಯ ಮೇಲೆ ಕೈ ಇಟ್ಟು, ಹರಸಿ, ಹಂಸೆಯನ್ನು ಏರಿ, ಸತ್ಯ ಲೋಕಕ್ಕೆ ಹೊರಟು ಹೋದನು.

ಆ ತರುವಾಯ ಬಲಿಯು ತನ್ನ ಶೋಣಿತ ಪುರಕ್ಕೆ ಬಂದು, ಆಚಾರ್ಯನಾದ ಶುಕ್ರಾಚಾರ್ಯನಿಗೆ ಸಾಷ್ಟಾಂಗವಾಗಿ ಎರಗಿ, ಷೋಡಶೋಪಚಾರಗಳಿಂದ ಪೂಜಿಸಿ, ತಾನು ಬ್ರಹ್ಮನಿಂದ ಪಡೆದು ಕೊಂಡು ಬಂದ ನಾಲ್ಕು ವರಗಳ ವಿವರಗಳನ್ನು ಬಿನ್ನವಿಸಿ,—ಮುಂದೆ ನಾನು ಮಾಡುವ ಕಾರ್ಯವೇನು? ಅಪ್ಪಣೇ ಕೊಡ ಬೇಕೆಂದು ಕೇಳಲಾಗಿ; ಶುಕ್ರಾಚಾರ್ಯನು—ಎಲೈ, ಬಲಿಯೇ, ನೀನು ಇಂಥ ಅಮೋಘವಾದ ವರಗಳನ್ನು ಪಡೆದ ಮೇಲೆ ನೀನೇ ತ್ರಿ ಲೋಕಾಧಿಪತಿಯಾಗ ಬೇಕೇ ಹೊರ್ತು, ನಿನ್ನ ಮುಂದೆ ದೇವೇಂದ್ರನು ತ್ರಿ ಲೋಕಾಧಿಪತಿಯಾಗಿರು

ವದೂ, ನೀನು ಆತನ ಸ್ವಾಧೀನವಾದ ಕೆಲವು ದೇಶಗಳಿಗೆ ಅರಸು ಎನ್ನಿಸಿಕೊಂಡು ಇರುವದೂ, ನಿನಗೆ ಬಹಳ ಕೊರತೆಯು; ನೀನು ಪಡೆದ ವರಗಳು ಸಫಲವಾಗದೆ ಹೋಗುವವು, ಎಂದು ಹೇಳಿದನು. ಅದನ್ನು ಕೇಳಿ,—ನೀವೇ ಇಂದ್ರ ಲೋಕಕ್ಕೆ ದಯ ಮಾಡಿ, ಮೊದಲು ಸುರ ಗುರುಗಳಾದ ಬೃಹಸ್ಪತ್ಯಾಚಾರ್ಯರನ್ನು ಕಂಡು, ಅವರ ಪಾದಗಳಿಗೆ ನಾನು ವಂದನೇ ಮಾಡಿದ್ದಾಗಿ ಹೇಳಿ, ಈ ಮಾತುಗಳನ್ನು ತಿಳಿಸ ಬೇಕು. ಅವು ಯಾವವೆಂದರೆ,—ದೇವೇಂದ್ರನಿಗೆ ಹ್ಯಾಗೆ ನೀವು ಗುರುಗಳಾಗಿ ಮಾನ್ಯರಾಗಿದ್ದೀರೋ, ಹಾಗೆಯೇ ನನಗೂ ಗುರುಗಳಾಗಿಯೂ ಮಾನ್ಯರಾಗಿಯೂ ಇದ್ದೀರಿ. ದೇವತೆಗಳಿಗೂ ದೈತ್ಯರಿಗೂ ಆ ಜನ್ಮ ವೈರವೂ ಎಂದು ತಮಗೆ ಮನವರಿಕೆಯೇ ಇದೆ. ನಮ್ಮ ಮುತ್ತಜ್ಜನಾದ ಹಿರಣ್ಯಕಶಿಪುವು ಆಳುತ್ತ ಇದ್ದ ತ್ರಿ ಲೋಕಾಧಿಪತ್ಯವನ್ನು ಆತ ಸತ್ತು ಹೋದ ಮೇಲೆ, ಬಲಾತ್ಕಾರದಿಂದ ದೇವೇಂದ್ರನು ಅನುಭವಿಸುತ್ತ ಬರುತ್ತಾನೆ. ಈಗ ದೇವರ ದಯದಿಂದ ಆ ದೇವೇಂದ್ರನನ್ನು ಜೈಸಿ, ಆ ತ್ರಿ ಲೋಕಾಧಿಪತ್ಯವನ್ನು ಅನುಭವಿಸ ತಕ್ಕ ಶಕ್ತಿಯು ನನಗೆ ಉಂಟಾಗಿದೆ. ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಉಪಾಯಗಳು ರಾಜ ನೀತಿಯಲ್ಲಿ ಹೇಳಿ ಇರುವವು. ಅವುಗಳೊಳಗೆ ಸಾಮೋಪಾಯವನ್ನೇ ಬುದ್ಧಿ ಶಾಲಿಗಳಾದ ಅರಸುಗಳು ಮಾಡಿ, ರಾಜ್ಯಗಳನ್ನು ಸಂಪಾದಿಸ ಬೇಕೆಂದೂ; ಅದು ತಪ್ಪಿದರೆ, ದಾನೋಪಾಯ; ಅದೂ ಸಾಗದ ಪಕ್ಷ ಭೇದೋಪಾಯ; ಅದೂ ನಡೆಯದೆ ಇದ್ದಲ್ಲಿ, ಕಡೆಗೆ ದಂಡೋಪಾಯವನ್ನು ಮಾಡ ತಕ್ಕದ್ದು ಎಂದೂ; ತಮ್ಮಂಥ ದೊಡ್ಡವರು ಹೇಳುವರು. ಆದ್ದರಿಂದ ಈಗ ತಮ್ಮ ಚರಣ ಸನ್ನಿಧಿಯಲ್ಲಿ ನಾನು ಬಿನ್ನವಿಸುವದೇನಂದರೆ—ದೇವೇಂದ್ರನು ತನ್ನ ಪುತ್ರ ಮಿತ್ರ ಕಳತ್ರರು ಮೊದಲಾದ ನಂಟರಿಷ್ಟರೊಡನೆ ಕೂಡಿ, ಭಗವಂತನಿಂದ ಇಂದ್ರ ಪದವಿಗೆ ನೇಮಿಸಲ್ಪಟ್ಟಿರುವ ಐರಾವತ, ವಜ್ರಾಯುಧ, ಕಲ್ಪ ವೃಕ್ಷ, ಕಾಮ ಧೇನು, ಚಿಂತಾ ಮಣಿ, ಮುಂತಾದ ವಸ್ತುಗಳನ್ನು ಬಿಟ್ಟು, ತನ್ನ ಸ್ವಂತವಾದ ಪದಾರ್ಥಗಳನ್ನು ತೆಗೆದು ಕೊಂಡು, ತನಗೆ ಬೇಕಾದ ಕಡೆಗೆ ಹೋಗಿ, ಸುಖವಾಗಿ ಬಾಳುವದು ಉತ್ತಮ ಪಕ್ಷವು. ಅದು ಆತನ ಮನಸ್ಸಿಗೆ ಒಡಂಬಡದೆ ಇದ್ದಲ್ಲಿ, ನನ್ನೊಡನೆ ಜಗಳಕ್ಕೆ ನಿಂತು, ತನ್ನನ್ನು ಸೇರಿದ ಜನಗಳಿಗೂ ತೊಂದರೇ ಕೊಟ್ಟು, ತಾನೂ ನನ್ನಿಂದ ಜಿತನಾಗಿ ಕಾರಾ ಗೃಹದಲ್ಲಿ ಸೇರಿ, ದುಃಖ ಪಡುವದು ಎರಡನೇ ಪಕ್ಷವು. ಈ ಎರಡು ಪಕ್ಷವನ್ನು ಇಂದ್ರನಿಗೆ ತಿಳಿಸಿ, ಆತನಿಗೆ ಸಮ್ಮತವಾದ ಪಕ್ಷವನ್ನು ನನಗೆ ಅಪ್ಪಣೇ ಕೊಟ್ಟು ಕಳುಹಿಸ ಬೇಕೆಂದು, ನಾನು ಹೇಳಿದ್ದಾಗಿ ತಿಳಿಸಿ, ಅವರ ಮನೋಭಿಪ್ರಾಯ

ವನ್ನು ನನಗೆ ಬಂದು ಅಪ್ಪಣೇ ಕೊಡ ಬೇಕೆಂದು ಹೇಳಿ, ಬಲಿಯು ಶುಕ್ರಾಚಾರ್ಯರನ್ನು ಕಳುಹಿಸಿ ಕೊಟ್ಟನು.

ಅವರು ಬಲಿಯ ನಯ ಭಯೋಕ್ತಿಗಳನ್ನು ಕೇಳಿ, ಮನಸ್ಸಿನಲ್ಲಿ ಬಹಳ ಸಂತೋಷ ಪಡುತ್ತ, ಅಮರಾವತಿಗೆ ಬಂದು, ಬೃಹಸ್ಪತ್ಯಾಚಾರ್ಯರನ್ನು ರಹಸ್ಯವಾಗಿ ಕಂಡು, ಅವರಿಂದ ಪೂಜಿತರಾಗಿ, ಬಲಿಯು ಹೇಳಿದ ಮಾತುಗಳಲ್ಲಿ ಚಾಚೂ ತಪ್ಪದಂತೆ ಎಲ್ಲಾ ಹೇಳಿದರು. ಬೃಹಸ್ಪತ್ಯಾಚಾರ್ಯರು ಆ ಮಾತುಗಳನ್ನೆಲ್ಲಾ ಕೇಳಿ, ತಮ್ಮ ಮನಸ್ಸಿನಲ್ಲಿ ಚನ್ನಾಗಿ ಪರಿಭಾವಿಸಿ ನೋಡಿ, ಶುಕ್ರಾಚಾರ್ಯರನ್ನು ಭೋಜನಾದಿಗಳಿಂದ ಸತ್ಕರಿಸುವ ಹಾಗೆ ತಮ್ಮ ಮನೆಯ ಜನಗಳಿಗೆ ನೇಮಿಸಿ, ತಾವು ಇಂದ್ರನ ಬಳಿಗೆ ಬಂದು, ಏಕಾಂತದಲ್ಲಿ ಬಲಿಯು ಶುಕ್ರಾಚಾರ್ಯರ ಬಳಿಯಲ್ಲಿ ಹೇಳಿ ಕಳುಹಿಸಿದ ಮಾತುಗಳನ್ನೆಲ್ಲಾ ಹೇಳಿದರು. ಅವುಗಳನ್ನು ಕೇಳಿ, ದೇವೇಂದ್ರನು ಬಹಳ ಚಿಂತಾಕ್ರಾಂತನಾಗಿ, ಬೃಹಸ್ಪತ್ಯಾಚಾರ್ಯರನ್ನು ಕುರಿತು—ಎಲೈ, ಆಚಾರ್ಯರೇ, ಬಲಿಯು ವರ ಬಲದಿಂದ ಬಹಳ ಬಲಿಷ್ಠನಾಗಿದ್ದಾನೆ. ಈ ವಿಷಯದಲ್ಲಿ ಹ್ಯಾಗೆ ಮಾಡ ಬೇಕೋ? ನನಗೆ ಒಂದೂ ತೋಚುವದಿಲ್ಲ. ಹೀಗೆ ನಡಿ ಎಂದು ತಾವು ಅಪ್ಪಣೇ ಕೊಟ್ಟ ಪ್ರಕಾರ ನಡಿಯುತ್ತೇನೆ, ಎಂದು ಹೇಳಿದನು. ಅದಕ್ಕೆ ಬೃಹಸ್ಪತ್ಯಾಚಾರ್ಯರು ಇಂದ್ರನನ್ನು ಕುರಿತು,—ಎಲೈ, ದೇವೇಂದ್ರನೇ, ಯಾವ ಕಾರ್ಯವನ್ನಾದರೂ ನಿಧಾನಿಸಿ ಮಾಡ ಬೇಕೇ ಹೊರ್ತು, ದುಡುಕ ಕೂಡದು, ಅಶುಭವಾದ ಕೆಲಸಗಳಿಗೆ ಕಾಲ ಹರಣವನ್ನು ಮಾಡಿ, ನೋಡ ಬೇಕೆಂದು, ನೀತಿ ಉಂಟು. ಒಂದು ತಿಂಗಳಲ್ಲಿ ಪ್ರತ್ಯುತ್ತರವನ್ನು ಹೇಳಿ ಕಳುಹಿಸುತ್ತೇವೆಂದು, ಶುಕ್ರಾಚಾರ್ಯರಿಗೆ ಹೇಳಿ, ಕಳುಹಿಸಿ ಬಿಟ್ಟು, ತಿರಿಗಿ ಬರುತ್ತೇನೆ. ಆ ಮೇಲೆ ಮುಂದೆ ಆಗ ತಕ್ಕ ಕೆಲಸಕ್ಕೆ ತಕ್ಕ ಯೋಚನೆಯನ್ನು ಮಾಡಿ, ನೋಡುವ, ಎಂದು ಹೇಳಿ, ತಿರಿಗಿ ಮನೆಗೆ ಬಂದು, ಭೋಜನಾದಿಗಳಿಂದ ಸತ್ಕೃತರಾಗಿ, ಕುಳಿತು ಕೊಂಡಿರುವ ಶುಕ್ರಾಚಾರ್ಯರನ್ನು ಕಂಡು,—ಬಲಿಯು ತಮ್ಮ ಸಂಗಡ ಹೇಳಿ ಕಳುಹಿಸಿದ ಮಾತಿಗೆ ಒಂದು ತಿಂಗಳಲ್ಲಿ ಪ್ರತ್ಯುತ್ತರ ಕೊಡುತ್ತೇನೆಂದು, ಇಂದ್ರನು ಹೇಳಿದನೆನಲು; ಶುಕ್ರಾಚಾರ್ಯರು ಬಲಿಯ ಬಳಿಗೆ ಹೋಗಿ, ಬೃಹಸ್ಪತ್ಯಾಚಾರ್ಯರು ಹೇಳಿದ ಮಾತನ್ನು ತಿಳಿಸಲು; ಆತನು ಬಹಳ ನಿಧಾನಿಯಾದ್ದರಿಂದ,—ಹಾಗೇ ಆಗಲಿ ಎಂದು, ಒಡಂಬಟ್ಟನು.

ಇತ್ತಲಾ ಬೃಹಸ್ಪತ್ಯಾಚಾರ್ಯರು ಇಂದ್ರನನ್ನು ಕರೆದು ಕೊಂಡು, ಸತ್ಯ ಲೋಕಕ್ಕೆ ಹೋಗಿ, ಬ್ರಹ್ಮ ದೇವನಿಗೆ ವಂದಿಸಿ—ಸ್ವಾಮೀ, ಚತುರ್ಮುಖನೇ, ನೀನೇ ಒಂದು ಮನ್ವಂತರದ ವರಿಗೂ ಈ ಇಂದ್ರನು ತ್ರಿ ಲೋಕಾಧಿಪತ್ಯವನ್ನು ಮಾಡಿ

ಕೊಂಡಿರ ಬೇಕೆಂದು ಕಟ್ಲೇ ಮಾಡಿ, ಇಂದ್ರ ಪದವಿಯಲ್ಲಿ ಇಟ್ಟೆ. ಈಗ ನಡು
ಗಾಲದಲ್ಲಿ ಬಲಿಯು ಇವನ ಇಂದ್ರ ಪದವಿಯನ್ನು ಕಿತ್ತು ಕೊಂಡು, ತಾನು
ಅನುಭವಿಸ ಬೇಕೆಂದು ಹೇಳಿ ಕಳುಹಿಸಿದ್ದಾನೆ. ನಿನ್ನ ಕಣ್ಣಿನ ಮುಂದೆ ನೀನು
ಮಹೋನ್ನತನಾಗಿರುವಲ್ಲಿ, ನಿನ್ನ ಆಜ್ಞೆಗೆ ಭಂಗವಾದರೆ, ಆ ಅಪಮಾನವು ನಿನ
ಗೆ ಹೊರತು, ಇಂದ್ರನಿಗೆ ಬೇರೆ ಇಲ್ಲವಷ್ಟೆ! ಇದಕ್ಕೆ ಏನು ಅಪ್ಪಣೆ ಕೊಡು
ತ್ತೀ? ಎಂದು ಕೇಳಿದನು. ಆ ಮಾತಿಗೆ ಚತುರ್ಮುಖ ಬ್ರಹ್ಮನು—ನಾನೇನು
ಮಾಡಲಿ? ತಪಸ್ಸು ಮಾಡಿದವರು ಕೇಳಿದ ವರವನ್ನು ಕೊಡುವದು ನನ್ನ ಧ
ರ್ಮವು. ಕೊಡುವದಕ್ಕೆ ನನಗೆ ಶಕ್ತಿ ಉಂಟೇ ಹೊರತು, ನಿಗ್ರಹಿಸುವ ಶಕ್ತಿ
ನನಗೆ ಇಲ್ಲ. ಜಗದೀಶ್ವರನಾದ ಶಿವನಲ್ಲಿ ಹೋಗಿ, ಹೇಳಿ ಕೊಳ್ಳಿ. ಒಂದು
ವೇಳೆ ಆತನೇನಾದರೂ ಒಂದು ಉಪಾಯದಿಂದ ನಿಮಗೆ ಸಹಾಯವನ್ನು ಮಾ
ಡಿಯಾನು. ಹೋಗಿ, ಎಂದು ಕಳುಹಿಸಿ ಬಿಟ್ಟನು. ಆ ಮೇಲೆ ಕೈಲಾಸಕ್ಕೆ
ಬಂದು, ಪರಮೇಶ್ವರನನ್ನು ಕಂಡು, ತಮಗೆ ಬಲಿ ಹೇಳಿ ಕಳುಹಿಸಿದ್ದನ್ನೂ,
ತಾವು ಬ್ರಹ್ಮನಲ್ಲಿ ಹೇಳಿ ಕೊಂಡದ್ದಕ್ಕೆ ಆತನು ಹೇಳಿದ್ದನ್ನೂ ಹೇಳಿ—ಮುಂದೆ
ನೀನೇನು ಅಪ್ಪಣೆ ಕೊಡುತ್ತೀ? ಎಂದು ಕೇಳಿದನು. ಈಶ್ವರನು ಅದನ್ನೆಲ್ಲಾ
ಕೇಳಿ—ಅಯ್ಯೋ! ಅಯ್ಯೋ! ಆ ಬ್ರಹ್ಮನ ಹಾಗೆಯೇ ವರವನ್ನು ಕೊಡುವದಕ್ಕೆ
ನಾನೂ ಬಲ್ಲೆನೇ ಹೊರ್ತು, ತಪ್ಪಿಸುವ ಉಪಾಯವು ನನಗೆ ತಿಳಿಯದು. ನಾನು,
ಬ್ರಹ್ಮ, ಇಂದ್ರ ಮೊದಲಾದ ದೇವತೆಗಳಿಗೆ ಪ್ರಾಪ್ತವಾದ ಆಪತ್ತುಗಳನ್ನು ಏನಾ
ದರೂ ಒಂದು ಉಪಾಯದಿಂದ ತಪ್ಪಿಸಿ ಕಾಪಾಡುವ ಶಕ್ತನು ಶ್ರೀ ಮಹಾ
ವಿಷ್ಣು ಒಬ್ಬನೇ ಹೊರ್ತು, ಇನ್ನು ಯಾರಿಂದಲೂ ತೀರದು. ಆತನ ಸನ್ನಿಧಿಗೆ
ಹೋಗಿ, ಹೇಳಿ ಕೊಳ್ಳಿ ಎಂದು ಅಪ್ಪಣೆ ಕೊಟ್ಟು ಕಳುಹಿಸಿದನು. ಆ ಮೇಲೆ
ಕ್ಷೀರ ಸಮುದ್ರಕ್ಕೆ ಬಂದು, ಮಹಾ ವಿಷ್ಣುವನ್ನು ಕಂಡು, ನಮಸ್ಕರಿಸಿ, ನಡೆ
ದಿರುವ ವಿಚಾರಗಳನ್ನೆಲ್ಲಾ ಬಿನ್ನವಿಸಿ,—ಕಾಪಾಡ ಬೇಕೆಂದು ಬೇಡಿ ಕೊಂಡರು.

ಮಹಾ ವಿಷ್ಣುವು ಬೃಹಸ್ಪತ್ಯಾಚಾರ್ಯರನ್ನು ಕುರಿತು—ಎಲೈ, ಸುರ ಗುರು
ವೇ, ಬಲಿಯು ಮಹಾ ಧರ್ಮಿಷ್ಠನು. ಇದರ ಮೇಲೆ ನನಗೆ ಪರಮ ಭಕ್ತನು.
ನನ್ನಿಂದ ಆತನ ನಿಗ್ರಹಿಸುವ ಕೆಲಸ ಎಷ್ಟು ಮಾತ್ರವು ಆಗಲಾರದು. ನೀನು
ಬುದ್ಧಿವಂತನು. ನಿನಗೆ ತಿಳಿಯುವ ಉಪಾಯವು ಯಾರಿಗೂ ತಿಳಿಯದು. ನೀ
ನೇ ಇದನ್ನು ನಿರ್ವಹಿಸ ತಕ್ಕ ಆಲೋಚನೆಯನ್ನು ಮಾಡಿ, ಇಂದ್ರನನ್ನು ಕಾ
ಪಾಡು ಎಂದು ಹೇಳಿ, ಅದೃಶ್ಯನಾದನು. ಆ ಮೇಲೆ ಬೃಹಸ್ಪತ್ಯಾಚಾರ್ಯನು
ತುಂಬಿದ ದುಖ್ಖದಿಂದ ಬಾಡಿರುವ ಮುಖವುಳ್ಳ ಇಂದ್ರನನ್ನು ಕರೆದು ಕೊಂಡು

ಅಮರಾವತಿಗೆ ಹಿಂತಿರಿಗಿ ಬಂದು, ಇಂದ್ರನನ್ನೂ, ಆತನ ಹೆಂಡತಿಯಾದ ಶಚೀ ದೇವಿಯನ್ನೂ ಆತನ ಮಗನಾದ ಜಯಂತನನ್ನೂ, ಈ ಮೂರು ಜನರನ್ನು ಮಾತ್ರ ಸ್ವರ್ಗದಿಂದ ಹೊರಡಿಸಿ ಕೊಂಡು ಬಂದು, ಇಂದ್ರನ ತಂದೆಯಾದ ಕಶ್ಯಪರ ಆಶ್ರಮದಲ್ಲಿ ಬಂದು ಎಡೆಯಲ್ಲಿ ಬಿಟ್ಟು—ಇಲ್ಲಿ ಇರ್ರಿ; ನಾನು ಬೇಗ ಬರುವೆನು ಎಂದು ಹೇಳಿ, ಅಲ್ಲಿಂದ ಹೊರಟು, ಶೋಣಿತ ಪುರಕ್ಕೆ ಬಂದು, ಮೊದಲು ಶುಕ್ರಾಚಾರ್ಯರನ್ನು ಕಂಡು, ಅವರಿಂದ ಪೂಜಿತನಾಗಿ, ಅವರನ್ನು ಸಂಗಡ ಕರೆದು ಕೊಂಡು, ಬಲಿಯ ಬಳಿಗೆ ಬರಲು; ಆತನು ಝುಗ್ಗನೆ ಸಿಂಹಾಸನದಿಂದ ಎದ್ದು, ಎದುರಾಗಿ ಬಂದು, ಬೃಹಸ್ಪತ್ಯಾಚಾರ್ಯರಿಗೆ ವಂದಿಸಿ, ಕೈ ಕೊಟ್ಟು, ಕರೆದು ಕೊಂಡು ಹೋಗಿ, ನವ ರತ್ನ ಖಚಿತವಾದ ಚಿನ್ನದ ಕಾಲು ಮಣೆಯ ಮೇಲೆ ಕುಳ್ಳಿರಿಸಿ, ಷೋಡಶೋಪಚಾರದಿಂದ ಪೂಜಿಸಿ, ಕೈ ಮುಗಿದು ನಿಂತು ಕೊಂಡು—ಈ ದಿವಸ ನನ್ನ ಬಳಿಗೆ ದಯ ಮಾಡಿಸಿದ್ದು—ಬಡವನ ಮನೆಗೆ ಭಾಗೀರಥಿ ಬಂದ ಹಾಗೆ ಆಯಿತು; ನಾನು ಧನ್ಯನಾದೆನು; ನನ್ನ ಕುಲ ಕೋಟಿ ಎಲ್ಲಾ ಪಾವನವಾಯಿತು ಎಂದು, ಬಹಳವಾಗಿ ಕೊಂಡಾಡಿದನು. ಅನಂತರದಲ್ಲಿ ಬೃಹಸ್ಪತ್ಯಾಚಾರ್ಯನು ಬಲಿಯನ್ನು ಕುರಿತು,—ಎಲೈ, ದೈತ್ಯ ರಾಜನೇ, ಇಂದ್ರನು ನಿನ್ನ ಸಾಮೋಕ್ತಿಗಳಿಗೆ ಸಂತೋಷ ಪಟ್ಟು, ತನ್ನ ಹೆಂಡತಿಯಾದ ಶಚೀ ದೇವಿಯನ್ನೂ, ಮಗನಾದ ಜಯಂತನನ್ನೂ ಸಂಗಡ ಕರೆದು ಕೊಂಡು, ಇಂದ್ರ ಪದವಿಯ ಸಕಲ ಐಶ್ವರ್ಯವನ್ನು ನಿನಗೆ ಬಿಟ್ಟು, ಹೊರಟು ಹೋಗಿ, ಈ ಮಾತನ್ನು ನಿನಗೆ ಹೇಳಿ ಬರುವಂತೆ ನಿನ್ನ ಬಳಿಗೆ ನನ್ನನ್ನು ಕಳುಹಿಸಿದನು, ಎಂದು ಹೇಳಿದನು. ಆ ಮಾತನ್ನು ಕೇಳಿ, ಬಲಿಯು ಸಂತುಷ್ಟನಾಗಿ, ಸಕಲ ದೈತ್ಯ ರಾಜ ಬಲದೊಡನೆ ಕೂಡಿ, ಬೃಹಸ್ಪತ್ಯಾಚಾರ್ಯರನ್ನೂ ಶುಕ್ರಾಚಾರ್ಯರನ್ನೂ ಸಂಗಡ ಕರೆದು ಕೊಂಡು, ಅಮರಾವತೀ ಪಟ್ಟಣಕ್ಕೆ ಅತಿ ಸಂಭ್ರಮದಿಂದ ಬಂದನು.

ಆ ಬಳಿಕ ಬೃಹಸ್ಪತ್ಯಾಚಾರ್ಯರು ಅಗ್ನಿಯೇ ಮೊದಲಾದ ದಿಕ್ಪಾಲಕರನ್ನೂ, ವಸುಗಳು, ಮರುತ್ತುಗಳು, ಆದಿತ್ಯರು, ಮೊದಲಾದ ಸರ್ವ ದೇವತೆಗಳನ್ನೂ, ಯಕ್ಷ, ಕಿನ್ನರ, ಕಿಂಪುರುಷ, ಗರುಡ, ಗಂಧರ್ವ, ಅಪ್ಸರೋರಗ ಮುಂತಾದವರನ್ನೂ ಕರಿಸಿ, ಸು ಮುಹೂರ್ತದಲ್ಲಿ ಸುಧರ್ಮೆ ಎಂಬ ಸಭೆಯಲ್ಲಿ ಇಂದ್ರನ ಸಿಂಹಾಸನದಲ್ಲಿ ಬಲಿಯನ್ನು ಕೂರಿಸಿ, ತ್ರಿ ಲೋಕಾಧಿಪತ್ಯಕ್ಕೆ ಪಟ್ಟಾಭಿಷೇಕವನ್ನು ಮಾಡಿ, ಬಲೀಂದ್ರನೆಂದೂ, ಬಲಿ ಚಕ್ರವರ್ತಿ ಎಂದೂ, ಹೆಸರು ಕೊಟ್ಟು, ಆಶೀರ್ವಾದವನ್ನು ಮಾಡಿದನು. ಆ ಬಳಿಕ ಸರ್ವರು ಬಲಿ ಚಕ್ರವರ್ತಿಗೆ ಕೈ ಗಾಣಿಕೆಯನ್ನು ಕೊಟ್ಟು, ಕಾಣಿಸಿ ಕೊಂಡರು. ಆಗ ಬಲೀಂದ್ರನು ವಶಿಷ್ಠಾದಿ ಬ್ರಹ್ಮ

ಋಷಿಗಳಿಗೂ, ನಾರದಾದಿ ದೇವ ಋಷಿಗಳಿಗೂ, ಮಹಾ ಋಷಿಗಳಿಗೂ, ರಾಜ ಋಷಿಗಳಿಗೂ, ಸಮಸ್ತ ದಿಕ್ಪಾಲರೇ ಮೊದಲಾದವರಿಗೂ, ಯಥಾ ಯೋಗ್ಯವಾಗಿ ಧನ, ಕನಕ, ವಸ್ತ್ರಾಭರಣ, ಭೋಜನ, ಗಂಧ, ಮಾಲ್ಯಾದಿಗಳಿಂದ ಸತ್ಕಾರವನ್ನು ಮಾಡಿ, ಸರ್ವ ಸಮ್ಮತಿಯಿಂದ ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಲೋಕಗಳಲ್ಲಿಯೂ ಎಳ್ಳಷ್ಟಾದರೂ ಅಧರ್ಮ ನಡೆಯದಂತೆಯೂ, ನಾಲ್ಕು ಕಾಲುಗಳನ್ನು ಊರಿ, ಧರ್ಮವು ಸಂಚರಿಸುವಂತೆಯೂ, ಸರ್ವರು ವಿಷ್ಣು ಭಕ್ತರಾಗಿ ವಿಷ್ಣುವನ್ನು ಪೂಜಿಸುತ್ತ, ಇರುವಂತೆಯೂ ಕಟ್ಟು ಮಾಡಿಸಿ, ತ್ರಿ ಲೋಕಾಧಿಪತ್ಯವನ್ನು ಸುಖದಿಂದ ಮಾಡುತ್ತಾ ಬಂದನು. ಆ ಬಲಿ ಚಕ್ರವರ್ತಿಯು ರಾಜ್ಯ ಭಾರವನ್ನು ಮಾಡುವಲ್ಲಿ ಮೂರು ಲೋಕಗಳಲ್ಲಿಯೂ ಸಂತತಿ ಸಂಪತ್ತುಗಳು ದಿನ ದಿನಕ್ಕೆ ಹಾಲು ಉಕ್ಕುವಂತೆ ಉಕ್ಕಿದವು. ಭೂಮಿಯಲ್ಲಿ ಬಿತ್ತದೆ, ಬೆಳೆಯು ಹೆಚ್ಚಾಗಿ ಬೆಳೆಯಿತು. ಮುಗಿಲುಗಳು ಕಾಲ ಕಾಲಗಳಲ್ಲಿ ತಪ್ಪದೆ ಮಳೆಯನ್ನು ಕರೆಯುತ್ತ ಬಂದವು. ಬಡತನದ ಹುಟ್ಟೇ ಹಾಳಾಯಿತು. ಧರ್ಮದಿಂದ ಸರ್ವ ಪ್ರಜೆಗಳು ನಡೆದು ಕೊಂಡು, ಹರಿ ಭಕ್ತಿ ಪರಾಯಣರಾಗಿ ಸುಖವಾಗಿದ್ದರು.

ಅನಂತರದಲ್ಲಿ ಒಂದು ದಿವಸ ಬೃಹಸ್ಪತ್ಯಾಚಾರ್ಯರು ರಹಸ್ಯವಾಗಿ ಬಲಿ ಚಕ್ರವರ್ತಿಯ ಬಳಿಗೆ ಬಂದು, ಆತನಿಂದ ಪೂಜಿತನಾಗಿ, ಪೀಠದಲ್ಲಿ ಕುಳಿತು ಕೊಂಡು, ಅವನನ್ನು ಕುರಿತು—ನೀನು ಧರ್ಮದಿಂದ ತ್ರಿ ಲೋಕಾಧಿಪತ್ಯವನ್ನು ಮಾಡುವದನ್ನು ನೋಡಿ, ನನಗೆ ಬಹಳ ಸಂತೋಷವಾಯಿತು. ಇನ್ನು ಮೇಲೆ ಮಹಾತ್ಮರಾದ ಶುಕ್ರಾಚಾರ್ಯರನ್ನು ಇಟ್ಟು ಕೊಂಡು, ಸುಖವಾಗಿ ಬಾಳು. ನೀನು ಅಪ್ಪಣೇ ಕೊಟ್ಟರೆ, ನಾನು ತಪಸ್ಸಿಗೆ ಹೋಗುವೆನು, ಎಂದು ಹೇಳಲು; ಬಲಿ ಚಕ್ರವರ್ತಿಯು ವ್ಯಾಕುಲದಿಂದ ಬಹಳ ಖಿನ್ನನಾಗಿ, ಬೃಹಸ್ಪತ್ಯಾಚಾರ್ಯರನ್ನು ಕುರಿತು—ಎಲೈ, ಸುರ ಗುರುವೇ, ಶುಕ್ರಾಚಾರ್ಯರು ದೈತ್ಯರಿಗೆ ಗುರುವೇ ಹೊರ್ತು, ಇಂದ್ರ ಪದವಿಗೆ ಗುರುವಲ್ಲ. ಈ ಪದವಿಗೆ ಬಂದವರಿಗೆ ನೀವೇ ಗುರುಗಳಾಗಿ, ಸನ್ಮಾರ್ಗಗಳನ್ನು ಬೋಧಿಸುತ್ತ ಇರ ಬೇಕು. ಈಗ ನೀವು ತಪಸ್ಸಿಗೆ ಹೋಗುವದು ಹ್ಯಾಗಾದೀತು? ಬ್ರಹ್ಮಾದಿ ಸರ್ವ ದೇವತೆಗಳು ಮಹಾ ವಿಷ್ಣುವಿನಿಂದ ನಿಯಮಿಸಲ್ಪಟ್ಟ ತಮ್ಮ ತಮ್ಮ ಅಧಿಕಾರಗಳನ್ನು ಬಿಟ್ಟು ಹೋಗುವದಕ್ಕೆ ಹ್ಯಾಗೆ ಶಕ್ತರಲ್ಲವೋ, ನಿಮಗೂ ಹಾಗೆಯೇ ಮಹಾ ವಿಷ್ಣುವು ಈ ಸುರ ಗುರುತ್ವದ ಪದವಿಯನ್ನು ಕೊಟ್ಟು ಇರುವದರಿಂದ, ನೀವು ಇದನ್ನು ಬಿಟ್ಟು ಹೋಗ ಕೂಡದು, ಎಂದು ಹೇಳಿದನು. ಅದಕ್ಕೆ ಬೃಹಸ್ಪತ್ಯಾಚಾರ್ಯರು ಬಲಿ

ಚಕ್ರವರ್ತಿಯನ್ನು ಕುರಿತು—ನೀನು ಹೇಳಿದ ಮಾತು ಯುಕ್ತವೇ ಸರಿ. ಆದರೆ ಇದರಲ್ಲಿ ಒಂದು ಕೊಂಕಿರುವದು. ಅದೇನಂದರೆ,—ನೀನು ಮಹಾ ವಿಷ್ಣುವಿನಿಂದ ಆದಿಯಲ್ಲಿ ನಿಯಮಿಸಲ್ಪಟ್ಟು, ಇಂದ್ರ ಪದವಿಯನ್ನು ಅನುಭವಿಸುವವನಲ್ಲ. ನಿನ್ನ ವರ ಬಲದಿಂದಲೂ ಧರ್ಮದಿಂದಲೂ ಸದ್ಗುಣದಿಂದಲೂ ಅನುಭವಿಸುತ್ತೀಯೆ. ಆದ್ದರಿಂದ ವಿಷ್ಣುವಿನಿಂದ ನೇಮಿಸಲ್ಪಟ್ಟು, ಈ ಪದವಿಯನ್ನು ಅನುಭವಿಸುತ್ತಾ ಇದ್ದ ಇಂದ್ರನು ತಪಸ್ಸಿಗೆ ಹೋದ ಮೇಲೆ ಆತನಿಗೆ ಗುರುವಾದ ನಾನು ತಪಸ್ಸಿಗೆ ಹೋಗುವದು ಯುಕ್ತವೇ ಸರಿ. ಆದ್ದರಿಂದ ನೀನು ಅಪ್ಪಣೇ ಕೊಡಬೇಕೆಂದು ಹೇಳಿ, ಒಡಂಬಡಿಸಿ, ಅಲ್ಲಿಂದ ಹೊರಟು, ಕಶ್ಯಪರ ಆಶ್ರಮಕ್ಕೆ ಬಂದು, ಮೊದಲು ಕಶ್ಯಪರ ಹೆಂಡತಿಯಾದ ಅದಿತಿ ದೇವಿಯನ್ನು ಕಂಡು, ಈ ವಿವರಗಳನ್ನೆಲ್ಲಾ ತಿಳಿಸಲು; ಆಕೆಯು ಮಹಾ ದುಃಖಾಕ್ರಾಂತೆಯಾಗಿ, ಬೃಹಸ್ಪತ್ಯಾಚಾರ್ಯರನ್ನು ಕುರಿತು—ಎಲೈ, ಬೃಹಸ್ಪತಿಯೇ, ನೀನು ನನ್ನ ಮಗನಿಗೆ ಗುರುವಾಗಿದ್ದು, ಅವನು ತ್ರಿ ಲೋಕಾಧಿಪತ್ಯವನ್ನು ಕಳೆದು ಕೊಂಡು, ಹೀಗೆ ಕಷ್ಟ ಪಡುತ್ತಾ ಇರುವದು ನಿನಗೆ ಮಾನವೇ? ಇದಕ್ಕೆ ಮುಂದೆ ಏನು ಮಾಡ ಬೇಕು? ನನಗೆ ನೀನು ಹೇಳಿದರೆ, ಆ ಪ್ರಕಾರ ನಡೆಯುವೆನು ಎಂದು ಹೇಳಲು; ಬೃಹಸ್ಪತ್ಯಾಚಾರ್ಯರು ಅವಳು ನಡೆಯ ತಕ್ಕ ಮಾತನ್ನು ಅವಳ ಕಿವಿಯಲ್ಲಿ ಹೇಳಿ,—ಇಂದ್ರ ಶಚಿ ಜಯಂತರೊಡನೆ ನಾನು ನಿಮ್ಮ ಆಶ್ರಮದಲ್ಲಿ ಇಂಥಾ ಕಡೆಯಲ್ಲಿ ಇರುವೆನು ಎಂದು ಸೂಚಿಸಿ, ಅವಳ ಅಪ್ಪಣೆಯನ್ನು ತೆಗೆದು ಕೊಂಡು, ಇಂದ್ರನಿರುವ ಬಳಿಗೆ ಬಂದು, ಆತನಿಗೆ ವೈಷ್ಣವ ಮಂತ್ರವನ್ನು ಉಪದೇಶಿಸಿ, ಸಾರ್ವ ಕಾಲದಲ್ಲಿಯೂ ವಿಷ್ಣುವನ್ನು ಆರಾಧಿಸುವಂತೆ ನೇಮಿಸಿ, ತಾನು ವಿಷ್ಣು ಧ್ಯಾನ ಪರನಾಗಿದ್ದನು.

ಇತ್ತಲಾ ದೇವೇಂದ್ರನ ತಾಯಿಯಾದ ಅದಿತಿ ದೇವಿಯು ಬಹಳ ದುಃಖಾಕ್ರಾಂತಳಾಗಿ, ಪ್ರಾತರಾನ್ಹಿಕಗಳನ್ನು ನೆರವೇರಿಸಿ, ಸುಖಾಸೀನನಾಗಿರುವ ತನ್ನ ಗಂಡನಾದ ಕಶ್ಯಪ ಪ್ರಜಾಪತಿಯ ಸನ್ನಿಧಿಗೆ ಹೋಗಿ, ಅವರ ಕಾಲುಗಳ ಮೇಲೆ ಬಿದ್ದು, ತನ್ನ ಕಣ್ಣೀರುಗಳಿಂದ ಅವರ ಅಡಿ ದಾವರೆಗಳನ್ನು ತೊಳೆದು, ದುಃಖ ಪಡುತ್ತಿರಲು; ಅದನ್ನು ಕಂಡು, ಅವರು ಕನಿಕರದಿಂದ—ಎಲೈ, ಪ್ರಾಣ ವಲ್ಲಭೆಯೇ, ನಿನಗೇನು ಇಷ್ಟು ದುಃಖ? ಹೇಳು. ನಾನು ಪರಿಹರಿಸಿ ಕೊಡುವೆನು, ಎಂದು ಹೇಳಲು; ಅದಿತಿ ದೇವಿಯು ಕೈ ಮುಗಿದು, ನಿಂತು ಕೊಂಡು,—ಎಲೈ, ಪ್ರಾಣ ಪ್ರಿಯನೇ, ಆಪದ್ರಕ್ಷಕನೇ, ನನಗೆ ನಿನ್ನ ಚರಣವೇ ಗತಿಯೋ ಹೊರ್ತು, ಬೇರೆ ಗತಿ ಇಲ್ಲ. ನನ್ನ ಮಗನ ಇಂದ್ರ ಪದವಿಯನ್ನು ಬಲಿ ಎಂಬ

ದೈತ್ಯನು ಬಲಾತ್ಕಾರದಿಂದ ಕಿತ್ತು ಕೊಂಡದರಿಂದ, ನನ್ನ ಸೊಸೆಯಾದ ಶಚಿ
ಯನ್ನೂ ಮೊಮ್ಮಗನಾದ ಜಯಂತನನ್ನೂ ಕೈ ಹಿಡು ಕೊಂಡು, ಬಿಕಾರಿಯ
ಹಾಗೆ ಸ್ವರ್ಗವನ್ನು ಬಿಟ್ಟು, ಎಲ್ಲಿಯೋ ಹೋದನು? ಮಹಾ ವಿಷ್ಣು ನೇಮಿಸಿ
ದ ನಿನ್ನ ಮಗನ ಇಂದ್ರ ಪದವಿಯು ಅನ್ಯಾಕ್ರಾಂತವಾದ ಮೇಲೆ ಇನ್ನು ಜಗ
ತ್ತಿನಲ್ಲಿ ಯಾವ ಮರ್ಯಾದೆ ತಾನೆ ನೆಲೆಯಾಗಿ ನಿಂತೀತು? ನೀನು ಸರ್ವಜ್ಞನು,
ನೀನು ಅರಿಯದೆ ಇರುವದು ಯಾವದುಂಟು? ಎಂದು ಹೇಳಿ, ತಿರಿಗಿ ಗಂಡನ
ಕಾಲಿನ ಮೇಲೆ ಬಿದ್ದು, ಹೊರಳುತ್ತಿರಲು; ಕಶ್ಯಪನು—ಎಲೈ, ಅದಿತಿಯೇ, ನೀ
ನು ಹೆದರ ಬೇಡ. ನಿನ್ನ ಮಗನ ಇಂದ್ರ ಪದವಿಯು ಯಥಾ ಪ್ರಕಾರವಾಗುವ
ಹಾಗೆ ಮಾಡುವೆನು, ಎಂದು ಹೇಳಿ, ಆಕೆಗೆ ಅಭಯುವನ್ನು ಕೊಟ್ಟು, ಅವಳನ್ನು
ಕರೆದು ಕೊಂಡು, ಸಿದ್ಧಾಶ್ರಮವೆಂಬ ಒಂದು ಪುಣ್ಯಾಶ್ರಮಕ್ಕೆ ಬಂದು, ಅಲ್ಲಿ
ಶುಚಿರ್ಭೂತನಾಗಿ, ಮಹಾ ವಿಷ್ಣುವನ್ನು ಕುರಿತು ಅನೇಕ ಸಹಸ್ರ ವರ್ಷ ತಪ
ಸ್ಸನ್ನು ಮಾಡುತ್ತಾ ಇದ್ದನು. ಅದಿತಿ ದೇವಿಯು ಶುಚಿರ್ಭೂತಳಾಗಿ, ಸದಾ ಪತಿ
ಶುಶ್ರೂಷೆಯನ್ನು ಮಾಡಿ ಕೊಂಡಿದ್ದಳು.

ಹೀಗಿರುವಲ್ಲಿ, ಕ್ಷೀರ ಸಮುದ್ರದಲ್ಲಿ ಶೇಷ ಶಾಯಿಯಾದ ಮಹಾ ವಿಷ್ಣುವು
ತನ್ನ ಪ್ರಾಣ ಪ್ರಿಯಳಾದ ಲಕ್ಷ್ಮಿಯನ್ನು ಕುರಿತು—ಎಲೇ, ದೇವಿಯೇ, ನನ್ನ
ಪರಮ ಭಕ್ತನಾದ ಬಲೀಂದ್ರನು ನನ್ನಿಂದ ನಿಯಮಿತನಾದ ಇಂದ್ರನ ಪದವಿ
ಯನ್ನು ಕಿತ್ತು ಕೊಂಡು, ಆತನನ್ನು ಸ್ವರ್ಗದಿಂದ ಓಡಿಸಿದ್ದಾನೆ. ಈಗ ಆ
ಇಂದ್ರನ ತಂದೆಯಾದ ಕಶ್ಯಪನು ತಿರಿಗಿ ಬಲಿಯಿಂದ ಇಂದ್ರನಿಗೆ ಇಂದ್ರ ಪದವಿ-
ಯನ್ನು ಕೊಡಿಸ ತಕ್ಕ ಬಗ್ಯೆ, ನನ್ನನ್ನು ಕುರಿತು ತಪಸ್ಸು ಮಾಡುತ್ತಲಿದ್ದಾನೆ.
ಇಂಥ ಅನಿರ್ವಾಹವಾದ ಕೆಲಸವು ಒದಗಿ ಇದೆ. ಇದಕ್ಕೆ ಹ್ಯಾಗೆ ಮಾಡಲಿ?
ಎಂದು ಕೇಳಲು; ಲಕ್ಷ್ಮಿಯು—ಎಲೈ, ಪ್ರಿಯನೇ, ನೀನು ಮಹಾ ಮಾಯ
ಕಾರನು; ಏನೂ ಅರಿಯದವನ ಹಾಗೆ ನನ್ನನ್ನು ಕೇಳುತ್ತೀ. ನೀನು ಅರಿಯದೆ
ಇರುವ ತಂತ್ರೋಪಾಯವು ಯಾವದುಂಟು? ನಂಟು ರತ್ನ ಎರಡೂ ಉಳಿ
ಯುವ ಹಾಗೆ ಮಾಡಿ, ನಿನ್ನ ನೇಮಕಕ್ಕೆ ಭಂಗ ಬಾರದಂತೆ ನಡಿ. ಎಂದು
ಹೇಳಿದಳು. ಆ ಮಾತನ್ನು ಕೇಳಿ, ಮಹಾ ವಿಷ್ಣುವು ನಸು ನಕ್ಕು, ಗರುಡಾ
ರೂಢನಾಗಿ ಕಶ್ಯಪ ಮುನಿಯ ಬಳಿಗೆ ಬಂದು,—ಏನೈ, ಮುನಿಯೇ, ಯಾಕೆ
ನನ್ನನ್ನು ಕುರಿತು ತಪಸ್ಸು ಮಾಡುತ್ತೀ? ನನ್ನಿಂದ ನಿನಗೆ ಆಗ ತಕ್ಕ ಕಾರ್ಯವೇ
ನು? ಅದನ್ನು ಬೇಗ ಹೇಳು. ನಡಿಸಿ ಕೊಡುವೆನು, ಅಂದನು.

ಅದನ್ನು ಕೇಳಿ, ಕಶ್ಯಪ ಮುನಿಯು ವಿಷ್ಣುವಿಗೆ ವಂದಿಸಿ,—ನೀನು ಅದಿ

ತಿಯ ಹೊಟ್ಟೆಯಲ್ಲಿ ಹುಟ್ಟಿ, ಇಂದ್ರನಿಗೆ ತಮ್ಮನಾಗಿ, ಉಪೇಂದ್ರನೆನಿಸಿ ಕೊಂಡು, ಬಲಿ ಚಕ್ರವರ್ತಿ ಕಿತ್ತು ಕೊಂಡಿರುವ ಇಂದ್ರ ಪದವಿಯನ್ನು ತಿರಿಗಿ ಆತನಿಂದ ತೆಗೆದು, ಆ ಇಂದ್ರನಿಗೆ ಕೊಟ್ಟು, ನಿನ್ನ ನೇಮಕವು ನೆಲೆಯಾಗಿ ನಿಲ್ಲುವ ಹಾಗೆ ಮಾಡಿಕೋ, ಎಂದು ಬೇಡಿ ಕೊಂಡದರಿಂದ,—ಒಳ್ಳೇದು ಎಂದು ಆತನಿಗೆ ಅಭಯವನ್ನು ಕೊಟ್ಟು, ಅಂತರ್ಧಾನವಾಗಿ, ಅದಿತಿ ದೇವಿಯ ಗರ್ಭವನ್ನು ಹೊಕ್ಕು, ವಾಮನನಾಗಿ ಹುಟ್ಟಲು; ಕಶ್ಯಪನು ಬಹಳ ಸಂತೋಷದಿಂದ ಆತನಿಗೆ ಜಾತ ಕರ್ಮ ನಾಮ ಕರಣ ಉಪನಯನಗಳನ್ನು ಮಾಡಿ,—ಎಲೈ, ಮಗನೇ, ನೀನು ಅವತರಿಸಿದ ಕಾರ್ಯವನ್ನು ನೆರವೇರಿಸು ಎಂದು ಹೇಳಲು; ವಾಮನನು ಮೌಂಜೀ ಉಡಧಾರವನ್ನೂ ದಂಡು ಕೋಲು ಕೃಷ್ಣಾಜಿನಗಳನ್ನೂ ಧರಿಸಿ, ಬಿಳೀ ವಸ್ತ್ರ ದ್ವಯವನ್ನು ಉಟ್ಟು, ಹೊದ್ದು ಕೊಂಡು, ಚಿಕ್ಕ ಗಿಂಡಿಯನ್ನು ಕೈಯಲ್ಲಿ ಹಿಡಿದು ಕೊಂಡು, ಒಂದು ಗಜ ಪ್ರಮಾಣ ಉದ್ದವಾದ ದೇಹವುಳ್ಳವನಾಗಿ, ತಂದೆ ತಾಯಿಗಳಿಗೆ ನಮಸ್ಕರಿಸಿ, ಅಲ್ಲಿಂದ ಬಲೀಂದ್ರನ ಬಳಗೆ ಹೋಗುವದಕ್ಕೆ ಹೊರಟನು.

ಅಷ್ಟರಲ್ಲಿ ಬಲಿ ಚಕ್ರವರ್ತಿಯು ಶುಕ್ರಾಚಾರ್ಯರನ್ನು ವರಿಸಿ, ವೈಷ್ಣವ ಯಾಗವನ್ನು ಮಾಡುತ್ತ, ಹೋಮಾದಿ ನಿತ್ಯ ವಿಧಿಗಳನ್ನು ನೆರವೇರಿಸಿ, ಯಜ್ಞ ಶಾಲೆಯಲ್ಲಿ ವಿಷ್ಣುವಿನ ಕಥೆಗಳನ್ನು ಕೇಳುತ್ತ ಕುಳಿತಿದ್ದನು. ಅಲ್ಲಿಗೆ ಈ ವಾಮನನು ಹೋಗಲು; ಈತನ ಅಮಾನುಷ ತೇಜಸ್ಸನ್ನು ಬಲಿ ಚಕ್ರವರ್ತಿಯು ನೋಡಿ, ಭಗ್ಗನೆ ಎದ್ದು, ಬಂದು, ನಮಸ್ಕರಿಸಿ, ಮಣೆಯಲ್ಲಿ ಕುಳ್ಳರಿಸಿ, ಸತ್ಕರಿಸಿ,—ಎಲೈ, ಮಹಾತ್ಮನೇ, ನಿನ್ನ ಬರುವಿಕೆಯು ಬಹಳ ಅಪೂರ್ವವು. ನಿನ್ನ ದರುಶನದಿಂದ ನನ್ನ ಜನ್ಮವು ಸಾರ್ಥಕವಾಯಿತು; ನನ್ನ ಯಾಗವು ಸಂಪೂರ್ಣ ವಾಯಿತು, ಎಂದು ಸ್ತುತಿಸುತ್ತಿರುವಲ್ಲಿ, ಶುಕ್ರಾಚಾರ್ಯನು ಬಂದು, ಬಲೀಂದ್ರನ ಕಿವಿಯಲ್ಲಿ—ಇವನು ಮಾಯಾವಿಯಾದ ವಿಷ್ಣುವು. ಈ ವಾಮನ ರೂಪನ್ನು ಧರಿಸಿ, ನಿನ್ನಿಂದ ತ್ರಿ ಲೋಕಾಧಿಪತ್ಯವನ್ನು ಕಿತ್ತು ಕೊಂಡು, ತಿರಿಗಿ ಇಂದ್ರನಿಗೆ ಕೊಡ ಬೇಕೆಂದು ಬಂದಿದ್ದಾನೆ. ಇವನೇನಾದರೂ ಕೇಳಿದರೆ,—ಕೊಡುತ್ತೇನೆಂದು ಹೇಳ ಬೇಡ, ಎನಲು; ಬಲಿ ಚಕ್ರವರ್ತಿಯು—ನೀವು ನನ್ನ ಗುರುಗಳಾಗಿ, ಇಂಥಾ ಮಾತನ್ನು ನನಗೆ ಹೇಳ ಬಹುದೇ? ನನ್ನೊಡೆಯನಾದ ಮಹಾ ವಿಷ್ಣುವು ನನ್ನನ್ನು ಬಂದು ಕೇಳಿದರೆ, ಈ ತ್ರಿ ಲೋಕಾಧಿಪತ್ಯವು ಒಂದೇನು? ನನ್ನ ಪತ್ನಿ, ಪುತ್ರ, ಪ್ರಾಣಗಳು ಸಹಿತ ಆತನ ಪಾದಕ್ಕೆ ಒಪ್ಪಿಸುವೆನು, ಎಂದು ಹೇಳಿ, ತಿರಿಗಿ ವಾಮನನನ್ನು ಕುರಿತು—ಎಲೈ, ಮಹಾ ತೇಜಸ್ವಿಯಾದ ಬ್ರಾಹ್ಮಣ

ಬ್ರಹ್ಮಚಾರಿಯೇ, ಈಗ ನನ್ನ ಯಾಗ ಶಾಲೆಗೆ ಏನು ನಿಮಿತ್ತ್ಯ ಬಂದೆ? ನನ್ನ ಪ್ರಾಣ ಮೊದಲಾದ ಸಮಸ್ತ ವಸ್ತುವು ನಿನ್ನಾಧೀನವಾಗಿರುವದು. ನೀನು ಬೇಕಾದದ್ದನ್ನು ಕೇಳ ಬಹುದು, ಅಂದನು. ಆಗ ಆ ವಾಮನನು—ಎಲೈ, ದೈತ್ಯ ರಾಜನೇ, ನನಗೆ ನಿನ್ನ ವಸ್ತುಗಳಿಂದ ಏನೂ ಪ್ರಯೋಜನವಿಲ್ಲ. ನಾನು ಬ್ರಹ್ಮಚಾರಿಯು. ಸ್ವತಂತ್ರದಿಂದ ಇತರರ ಬಾಧೆ ಇಲ್ಲದಂತೆ ತಪಸ್ಸು ಮಾಡುವದಕ್ಕೆ ನನ್ನ ಈ ಪುಟ್ಟ ಹೆಜ್ಜೆಗಳಲ್ಲಿ ಮೂರು ಹೆಜ್ಜೆ ಭೂಮಿಯನ್ನು ಮಾತ್ರ ಧಾರೇ ಎರೆದು ಕೊಡು, ಎಂದು ಕೇಳಲು; ಬಲಿ ಚಕ್ರವರ್ತಿಯು ಬಹಳ ಸಂತೋಷದಿಂದ ತನ್ನ ಹೆಂಡತಿಯನ್ನು ಕರೆದು, ಗಿಂಡಿಯಲ್ಲಿ ನೀರು ತೆಗೆದು ಕೊಂಡು ಬಾ, ಎಂದು ಹೇಳಿ, ತನ್ನ ಕೈಯಲ್ಲಿ ಶ್ರೀ ತುಲಸೀ ದಳವನ್ನು ತೆಗೆದು ಕೊಂಡು, ವಾಮನನ ಕೈಯ ಮೇಲೆ ತನ್ನ ಕೈ ಇಟ್ಟು,—ಇಗೋ, ನಿನ್ನ ಅಡಿಯಲ್ಲಿ ಮೂರಡಿ ಭೂಮಿಯನ್ನು ತ್ರಿ ವಾಚಾ ಕೊಟ್ಟು ಇದ್ದೇನೆ, ಎಂದು ಹೇಳಿ,—ನೀರು ಬಿಡು ಎಂದು ಹೆಂಡತಿಗೆ ಹೇಳಲು; ಆ ಗಿಂಡಿಯ ದ್ವಾರದಲ್ಲಿ ಶುಕ್ರಾಚಾರ್ಯನು ಹೋಗಿ, ಕುಳಿತು ಕೊಂಡದರಿಂದ, ನೀರು ಬೀಳದೆ ಹೋಯಿತು. ಅದನ್ನು ಈ ವಾಮನನು ಕಂಡು—ಓಹೋ! ಈ ಗಿಂಡಿಯ ಕನ್ನದಲ್ಲಿ ಏನೋ ಕಸ ಶಿಕ್ಕಿ ಕೊಂಡಿರ ಬೇಕೆಂದು, ಒಂದು ದರ್ಭೆಯನ್ನು ತೆಗೆದು ಕೊಂಡು, ಅದರ ಕನ್ನದಲ್ಲಿ ಚುಚ್ಚಲು; ಆ ದರ್ಭಾಗ್ರವು ಶುಕ್ರಾಚಾರ್ಯನ ಒಂದು ಕಣ್ಣಿಗೆ ತಗಲಿ, ಕಣ್ಣು ಹೋದ್ದರಿಂದ, ಆತನು ಘಾಬರಿಯಾಗಿ, ಈಚೆಗೆ ಹೊರಟು ಬಂದನು. ಆ ಬಳಿಕ ನೀರು ಬಿತ್ತು.

ಅನಂತರದಲ್ಲಿ ವಾಮನನು ತನ್ನ ಗುಜ್ಜಾರೀ ರೂಪನ್ನು ಬಿಟ್ಟು, ತ್ರಿ ವಿಕ್ರಮಾವತಾರವನ್ನು ಕೈ ಕೊಂಡು, ಆಕಾಶಕ್ಕೂ ಭೂಮಿಗೂ ಕೀಲು ಕೊಟ್ಟ ಹಾಗೆ ಬೆಳೆದು, ಒಂದು ಅಡಿಯಲ್ಲಿ ಭೂ ಲೋಕವನ್ನೆಲ್ಲಾ ಅಳೆದು, ಮತ್ತೊಂದು ಅಡಿಯಲ್ಲಿ ಮೇಲು ಲೋಕವೆಲ್ಲಾ ಅಳೆಯುವಾಗ ಬ್ರಹ್ಮಾಂಡ ಕಟಾಹಕ್ಕೆ ಈತನ ಕಾಲಿನ ಹೆಬ್ಬೆಟ್ಟಿನ ಉಗುರು ತಗಲಿ, ಅಲ್ಲಿಂದ ನಿರ್ಮಲವಾದ ಗಂಗೋದಕವು ಹೊರಟದ್ದರಿಂದ, ಚತುರ್ಮುಖ ಬ್ರಹ್ಮನು ಬೇಗ ಬಂದು, ಆ ಉದಕವನ್ನೆಲ್ಲಾ ತನ್ನ ಕಮಂಡಲದಲ್ಲಿ ತುಂಬಿ ಕೊಂಡು, ಸಮಸ್ತರಾದ ದೇವತೆಗಳಿಗೂ ಮುನಿಗಳಿಗೂ ಪ್ರೋಕ್ಷಿಸಿ, ತಾನೂ ಪ್ರೋಕ್ಷಿಸಿ ಕೊಂಡು, ಕಮಂಡಲದ ಉದಕವನ್ನು ತನ್ನ ಮನೆಯಲ್ಲಿ ಇಟ್ಟು ಕೊಂಡನು. ಆ ಬಳಿಕ ತ್ರಿವಿಕ್ರಮನು ಬಲೀಂದ್ರನನ್ನು ಕುರಿತು—ಎಲೈ, ದಾನ ಶೀಲನೇ, ಎರಡು ಅಡಿಯ ಭೂಮಿ ಆಯಿತು. ಇನ್ನೊಂದು ಅಡಿಯ ಭೂಮಿ ಎಲ್ಲಿ? ತೋರಿಸು, ಎಂದು ಕೇಳಲು;

ಬಲಿ ಚಕ್ರವರ್ತಿಯು ಸಾಷ್ಟಾಂಗವಾಗಿ ನಮಸ್ಕರಿಸಿ,—ಎಲೈ, ಜಗನ್ನಾಥನೇ, ನಿನ್ನ ಇನ್ನೊಂದಡಿಗೆ ಭೂಮಿಯನ್ನು ನಾನು ಎಲ್ಲಿಂದ ತರಲಿ? ಇಗೋ, ನನ್ನ ಬೆನ್ನಿನ ಮೇಲೆ ಇಟ್ಟು, ಇನ್ನೊಂದಡಿಗೆ ಅಳೆದುಕೋ, ಎಂದು ಹೇಳಲು; ವಾಮನನು ತನ್ನ ಪಾದವನ್ನು ಆತನ ಬೆನ್ನಿನ ಮೇಲೆ ಇಟ್ಟು, ರಸಾತಲಕ್ಕೆ ಮೆಟ್ಟಿದನು. ಅಲ್ಲಿ ಅಷ್ಟೊತ್ತಿಗೆ ದಿವ್ಯವಾದ ಮನೆಯನ್ನು ವಿಶ್ವಕರ್ಮನು ಮಾಡಿದ್ದನು. ಆಗ ತ್ರಿವಿಕ್ರಮನು ಆ ರೂಪನ್ನು ಬಿಟ್ಟು, ದಿವ್ಯ ಮಂಗಳ ವಿಗ್ರಹವನ್ನು ಧರಿಸಿ, ಶಂಖ, ಚಕ್ರ, ಗದಾ ಧರನಾಗಿ, ಬಲಿ ಚಕ್ರವರ್ತಿಗೆ ಪ್ರಸನ್ನನಾಗಿ, ಆತನನ್ನು ಆಲಿಂಗಿಸಿ ಕೊಂಡು, ಕೈ ಹಿಡಿದು ಕೊಂಡು, ಆ ಮನೆಯ ಒಳಗೆ ಕರೆದು ಕೊಂಡು ಹೋಗಿ, ದಿವ್ಯ ಸಿಂಹಾಸನದ ಮೇಲೆ ಕುಳ್ಳಿರಿಸಿ, ಮುನಿ ಜನಗಳು ಸಮೇತನಾಗಿ ಆತನನ್ನು ಮುಂದಣ ಇಂದ್ರ ಪದವಿಗೆ ಪಟ್ಟಾಭಿಷೇಕವನ್ನು ಮಾಡಿ,—ಎಲೈ ಪರಮ ಭಾಗವತನೇ, ನಿನ್ನ ಭಕ್ತಿಗೆ ನಾನು ಬಹಳವಾಗಿ ಮೆಚ್ಚಿದೆನು. ಈ ದಿವಸ ಕಾರ್ತೀಕ ಶುದ್ಧ ಪಾಡ್ಯವಾದ್ದರಿಂದ, ಸಮಸ್ತ ಜನರು ವರ್ಷೇ ವರ್ಷೇ ಈ ದಿನದಲ್ಲಿ ನಿನ್ನನ್ನು ಪೂಜಿಸಲಿ; ನೀನು ಮನಸ್ಸಿನಲ್ಲಿ ನೆನಸಿದ ಅಭೀಷ್ಟಗಳೆಲ್ಲಾ ನಿನಗೆ ಸಿದ್ಧಿಸಲಿ ಎಂದು, ವರವನ್ನು ಕೊಟ್ಟನು. ಆಗ ಬಲಿ ಚಕ್ರವರ್ತಿಯು—ಮಹಾ ವಿಷ್ಣುವೇ, ನಿನ್ನ ಭಕ್ತನಾದ ನನಗೆ ಒಂದು ಎಡರೂ ತಟ್ಟದಂತೆ ನನ್ನ ಬಾಗಲಲ್ಲಿ ನೀನು ಕಾದು ಕೊಂಡಿರ ಬೇಕೆಂದು, ಬೇಡಿ ಕೊಂಡದರಿಂದ,—ಹಾಗೇ ಆಗಲಿ ಎಂದು, ಆತನ ಬಾಗಿಲಿನಲ್ಲಿ ಗದಾ ದಂಡವನ್ನು ಧರಿಸಿ, ಆತನಿಂದ ಪೂಜೆಯನ್ನು ತೆಗೆದು ಕೊಳ್ಳುತ್ತಾ ಇದ್ದನು.

ತರುವಾಯ ವಿಷ್ಣುವು ಯಥಾ ಪ್ರಕಾರ ವಾಮನನಾಗಿ ತಂದೆ ತಾಯಿಗಳ ಬಳಿಗೆ ಬಂದು, ನಮಸ್ಕಾರ ಮಾಡಿ, ಇಂದ್ರನನ್ನು ಕರಿಸಿ, ಸ್ವರ್ಗ ಲೋಕಕ್ಕೆ ಕರೆದು ಕೊಂಡು ಹೋಗಿ, ತ್ರಿ ಲೋಕಾಧಿಪತ್ಯದಲ್ಲಿ ಇಟ್ಟು, ವೈಕುಂಠ ಲೋಕಕ್ಕೆ ಹೋದನು.

80. The Sixth or Parashu Rama Incarnation.

೮೦. ಪರಶು ರಾಮಾವತಾರದ ಕಥೆ.

ಶ್ರೀ ಮಹಾ ವಿಷ್ಣುವು ಶಂಖ ಚಕ್ರ ಗದಾ ಧರನಾಗಿ, ಕ್ಷೀರ ಸಮುದ್ರದಲ್ಲಿ ಶೇಷ ಶಾಯಿಯಾಗಿ, ಯೋಗ ನಿದ್ರೆಯನ್ನು ಮಾಡುತ್ತಿದ್ದನು. ಹೀಗಿರುವಲ್ಲಿ, ಒಂದು ದಿವಸ ಆ ಮಹಾ ವಿಷ್ಣುವಿನ ಆಯುಧವಾದ ಸುದರ್ಶನವೆಂದು ಹೆಸರುಳ್ಳ ಚಕ್ರವು ತನ್ನ ಮನಸ್ಸಿನಲ್ಲಿ—ಈ ಹರಿಯು ಮಧುಕೈಟಭಾದಿ ದೈತ್ಯರನ್ನು ನನ್ನ ಸಹಾಯದಿಂದ ಜೈಸಿ, ದೈತ್ಯಾಂತಕನೆಂದು ಸರ್ವ ಲೋಕಗಳಿಂದ ಕೊಂಡಾ

ಡಿಸಿ ಕೊಂಡಿದ್ಧಾನೆ. ನನ್ನ ಸಹಾಯವಿಲ್ಲದಿದ್ದರೆ, ದೈತ್ಯರನ್ನು ಹ್ಯಾಗೆ ಜೈಸು
ವನು? ಎಂದು, ಅಹಂಕಾರದಿಂದ ಒಂದು ದಿವಸ ಯೋಚಿಸಿತು. ಸರ್ವಾಂತ
ರ್ಯಾಮಿಯಾದ ವಿಷ್ಣುವಿಗೆ ಅದು ತಿಳಿದು, ಈ–ಚಕ್ರದ ಗರ್ವವನ್ನು ಪರಿಹರಿಸ
ಬೇಕು. ಲೋಕದಲ್ಲಿ ಪ್ರಭುತ್ವ ಮಾಡುವವರ ಮುದ್ರಾ ಶಕ್ತಿಯಿಂದ ಆ ಪ್ರಭು
ವಿನ ಕೈ ಕೆಳಗಿರುವ ಚಿಕ್ಕ ಉದ್ಯೋಗಸ್ಥರು ತಮ್ಮ ತಮ್ಮ ಅಧಿಕಾರದಲ್ಲಿ
ಜಾಗ್ರತೆಯಾಗಿ ಇದ್ದು ಕೊಂಡು, ಎಲ್ಲಾ ಕೆಲಸಗಳಲ್ಲಿಯೂ ಘಟ್ಟಿಗರಾಗಿ
ದ್ದಾಗ್ಯೂ, ಅವರನ್ನು ಅನ್ಯರು–ನೀವು ಅಂಥಾವರು, ಇಂಥಾವರು ಎಂದು ಹೊಗ
ಳಿದರೆ,–ನಾನು ಎಷ್ಟು ಮಾತ್ರದವನು? ಎಲ್ಲಾ ನಮ್ಮ ಪ್ರಭುಗಳ ಶಕ್ತಿಯಿಂದ
ನಡೆಯುತ್ತದೇ ಹೊರ್ತು, ನಮ್ಮಿಂದ ಎಷ್ಟು ಮಾತ್ರವು ನಡೆಯುವದಿಲ್ಲ. ಪ್ರಭು
ವಿನ ಕಟಾಕ್ಷವು ಬುದ್ಧಿ ಪರಾಕ್ರಮಗಳಿಲ್ಲದೆ ಮೂಢನಾಗಿರುವ ಒಬ್ಬ ಅಲ್ಪ
ಮನುಷ್ಯನ ಮೇಲೆ ಬಿದ್ದರೆ, ಅವನು ಬುದ್ಧಿವಂತನಾಗಿಯೂ, ಸಮರ್ಥನಾಗಿಯೂ
ಕಾರ್ಯ ದಕ್ಷನಾಗಿಯೂ, ಸಕಲ ಕಾರ್ಯಗಳನ್ನು ನಿರ್ವಹಿಸಿ, ಪ್ರಭುವಿನ ರಾಜ್ಯ
ಕೋಶಗಳನ್ನು ಅಭಿವೃದ್ಧೀ ಮಾಡಿ, ಪ್ರಭುವಿನಿಂದಲೇ ಹೊಗಳಿಸಿ ಕೊಳ್ಳುತ್ತಾ
ನೆ. ಪ್ರಭುವಿನ ಕಟಾಕ್ಷ ತಪ್ಪಿದವನು ಎಷ್ಟು ಸಮರ್ಥನಾದಾಗ್ಯೂ, ಎಷ್ಟು ಜಾಣ
ನಾದಾಗ್ಯೂ,–ಹೇಡಿಯು, ಹೆಡ್ಡನು, ಸೋಮಾರಿಯು, ಎಂದು ಎಲ್ಲರಿಂದ ಹೀಯಾ
ಳಿಸಿ ಕೊಳ್ಳುವನೆಂದು ಹೇಳಿ ಕೊಳ್ಳುತ್ತ, ತನ್ನ ಮನಸ್ಸಿನಲ್ಲಿಯೂ ಹಾಗೇ ತಿಳು
ಕೊಳ್ಳುತ್ತ, ತಾಗಿ ಬಾಗಿ ನಡೆದರೆ, ಅವನು ಮತ್ತು ಘಟ್ಟಿಗನು ಎನ್ನಿಸಿ ಕೊಳ್ಳುವ
ಹಾಗೆ, ಪ್ರಭುವು ಅವನಲ್ಲಿ ದಯ ಮಾಡಿ ನಡಿಸ ಬೇಕು. ಹಾಗೆ ನಡೆಯದೆ, ಕೊಬ್ಬಿ,
ಅಹಂಬ್ರಹ್ಮತ್ವದಿಂದ ತನ್ನಿಂದಲೇ ತನ್ನ ಪ್ರಭುವಿಗೆ ಪ್ರಭುತ್ವ ಉಂಟಾಯಿತೆಂದು
ಎಣಿಸುವ ಸೇವಕನಿಗೆ ಆ ಕೊಬ್ಬು ತಗ್ಗುವಂತೆ ಸ್ವಲ್ಪ ಶಿಕ್ಷೇ ಮಾಡಿ, ವಿಧೇಯ
ನಾಗಿ ಮಾಡಿ ಕೊಂಡು, ತಿರಿಗಿ ತನ್ನಲ್ಲಿ ಶೇರಿಸಿ ಕೊಂಡರೆ, ಪ್ರಭುತ್ವವು ಚನ್ನಾ
ಗಿ ನಡೆಯುವದು. ಹಾಗೆ ಮಾಡದೆ, ಉದಾಸೀನದಿಂದ ಇದ್ದರೆ, ಆತನ ಪ್ರಭುತ್ವ
ವೇ ಕ್ಷೀಣವಾಗಿ ಹೋಗುವದೆಂದು, ತನ್ನ ಮನಸ್ಸಿನಲ್ಲಿ ಆಲೋಚಿಸಿ, ನಿಶ್ಚೈಸಿ,
ಆ ಸುದರ್ಶನವನ್ನು ಕುರಿತು–ಎಲೈ, ಚಕ್ರ ರಾಜನೇ,–ನಾನು ಸಮಸ್ತ ದೈತ್ಯ
ರನ್ನು ಸಂಹರಿಸುವಂಥಾದ್ದು ನಿನ್ನ ಶಕ್ತಿಯಿಂದಲೋ? ಇಲ್ಲವೆ ನನ್ನ ಶಕ್ತಿಯಿಂ
ದಲೋ? ಎಂದು, ನನ್ನ ಮನಸ್ಸಿನಲ್ಲಿ ಒಂದು ಸಂಶಯವು ಹುಟ್ಟಿ ಇದೆ. ಅದನ್ನು
ಪರಿಕ್ಷೆ ಮಾಡಿ, ನೋಡ ಬೇಕು. ಆದ್ದರಿಂದ ನೀನು ನಿನ್ನ ಸಾವಿರ ಅರಗಳನ್ನು
ಸಾವಿರ ತೋಳುಗಳಾಗಿ ಮಾಡಿ ಕೊಂಡು, ಹೇಹಯ ದೇಶದ ಅರಸಾದ ಕೃತ
ವೀರ್ಯನ ರಾಣಿಯ ಗರ್ಭದಲ್ಲಿ ಹುಟ್ಟಿ, ಮಹಾ ಪರಾಕ್ರಮ ಶಾಲಿಯಾಗಿ, ಚಕ್ರ

ವರ್ತಿ ಅನ್ನಿಸಿ ಕೊಂಡು, ಮಹೋನ್ನತನಾಗಿ, ಕ್ಷತ್ರಿಯ ಸಾರ್ವಭೌಮನಾಗಿರು. ನಾನು ಎರಡು ತೋಳುಗಳಿಂದ ಒಬ್ಬ ಬ್ರಾಹ್ಮಣ ಮುನಿಯ ಮಗನಾಗಿ ಹುಟ್ಟಿ ನಿನ್ನೊಡನೆ ಏನೋ ಒಂದು ಸ್ವಲ್ಪ ಸೇವಾ ಮಾಡಿ ಕೊಂಡು, ಜಗಳಕ್ಕೆ ಬರುವೆನು. ಆಗ ನಮ್ಮಿಬ್ಬರಲ್ಲಿ ಜಯ ಶೀಲನಾದವನು ಯಾರೋ, ಆತನೇ ಶಕ್ತನೆಂದು ತಿಳಿಯ ಬಂದು, ನನ್ನ ಮನಸ್ಸಿನ ಸಂಶಯವು ಪರಿಹಾರವಾಗುತ್ತದೆ, ಎಂದು ಹೇಳಿದನು.

ಅದನ್ನು ಕೇಳಿ, ಚಕ್ರ ರಾಜನು ಹೆಮ್ಮೆಯಿಂದ—ಹಾಗೆ ಆಗಲಿ ಎಂದು ಹೇಳಿ, ವೈಕುಂಠದಿಂದ ಹೊರಟು, ಮಾಹಿಷ್ಮತೀ ನಗರದ ಅರಸಾದ ಕೃತವೀರ್ಯ್ಯನಿಗೆ ಸಾವಿರ ತೋಳುಗಳುಳ್ಳ ಮಗನಾಗಿ ಹುಟ್ಟಿ, ಕಾರ್ತಿವೀರ್ಯ್ಯಾರ್ಜುನನೆಂಬ ಹೆಸರಿನಿಂದ ಪ್ರಸಿದ್ಧನಾಗಿ, ಪ್ರಾಯದವನಾಗಿ, ತಂದೆಯ ಅಪ್ಪಣೆಯನ್ನು ತೆಗೆದು ಕೊಂಡು, ಸಕಲ ದಿಗ್ದೇಶಗಳನ್ನೂ ಇಂದ್ರಾದಿ ದಿಕ್ಪಾಲಕರನ್ನೂ ಜೈಸಿ, ಕಪ್ಪಗಳನ್ನು ತೆಗೆದು ಕೊಂಡು, ತನ್ನ ಪಟ್ಟಣಕ್ಕೆ ಬಂದು, ತಂದೆಗೆ ನಮಸ್ಕರಿಸಲು; ತಂದೆಯು ಶೂರನಾದ ಮಗನಿಗೆ ಹೈಹಯ ರಾಜ್ಯಾಭಿಷೇಕವನ್ನು ಮಾಡಿ, ತನ್ನ ಹೆಂಡತಿಯೊಡನೆ ತಪಸ್ಸಿಗೆ ಹೋದನು. ತರುವಾಯ ಕಾರ್ತಿವೀರ್ಯ್ಯಾರ್ಜುನನು—ಕೃತ ಯುಗಕ್ಕೆ ಚಕ್ರವರ್ತಿ ಅನ್ನಿಸಿ ಕೊಂಡು, ಜಗದೇಕ ವೀರನಾದ ರಾವಣಾಸುರನನ್ನು ಜೈಸಿ, ಲೋಕೈಕ ವಿಖ್ಯಾತನಾಗಿದ್ದನು.

ಹೀಗೆ ಕೆಲವು ಕಾಲ ನಡೆಯುತ್ತಿರುವಲ್ಲಿ, ಭೂಮಿ ದೇವಿಯು ದುಷ್ಟ ಕ್ಷತ್ರಿಯರ ಭಾರವನ್ನು ಸಹಿಸಲಾರದೆ, ಮಹಾ ವಿಷ್ಣುವಿನ ಬಳಿಗೆ ಹೋಗಿ, ಅಡ್ಡ ಬಿದ್ದು,—ಎಲೈ, ಸ್ವಾಮಿಯೇ, ದುರ್ಜನರಾದ ಅರಸುಗಳು ಬಹಳವಾಗಿ ಹೆಚ್ಚಿರುವದರಿಂದ, ಅವರ ಭಾರವನ್ನು ನಾನು ಹೊರಲಾರೆನು. ಅವರನ್ನೆಲ್ಲಾ ಸಂಹರಿಸಿ, ನನ್ನ ಹೊರೆಯನ್ನು ಇಳಿಸಿ, ಕಾಪಾಡ ಬೇಕೆಂದು ಬೇಡಿ ಕೊಳ್ಳಲು; ವಿಷ್ಣುವು—ಒಳ್ಳೇದು, ಹಾಗೆ ಮಾಡುವೆನೆಂದು ಭೂಮಿಗೆ ಅಭಯವನ್ನು ಕೊಟ್ಟು, ಕಳುಹಿಸಿದನು. ಅಷ್ಟರಲ್ಲಿ ಭೂ ಲೋಕದಲ್ಲಿ ಭೃಗು ಮುನಿಯ ವಂಶದಲ್ಲಿ ಹುಟ್ಟಿದ ಜಮದಗ್ನಿ ಎಂಬ ಮಹಾ ಋಷಿಯು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳನ್ನು ಕುಶಿಕ ಕುಲದಲ್ಲಿ ಹುಟ್ಟಿದ ಗಾಧಿ ರಾಯನೆಂಬ ಅರಸಿಗೆ ಮದುವೆಯನ್ನು ಮಾಡಿ ಕೊಟ್ಟನು. ಆ ಮಗಳು ಕೆಲವು ದಿವಸ ತನ್ನ ಗಂಡನ ಮನೆಯೊಳಗಿದ್ದು, ತಂದೆ ತಾಯಿಗಳನ್ನು ನೋಡುವ ಉದ್ದಿಶ್ಯ ತೌರು ಮನೆಗೆ ಬಂದಿದ್ದಳು. ಆ ವೇಳೆಯಲ್ಲಿ ಜಮದಗ್ನಿಯ ಹೆಂಡತಿಯು ಗಂಡನ ಬಳಿಗೆ ಹೋಗಿ,—ನನಗೂ, ನನ್ನ ಮಗಳಾದ ಗಾಧಿ ರಾಯನ ಹೆಂಡತಿಗೂ ಗಂಡು ಮಕ್ಕಳಾಗುವಂತೆ ತಾವು

ಅನುಗ್ರಹ ಮಾಡ ಬೇಕೆಂದು, ವಿನಯದಿಂದ ಬೇಡಿ ಕೊಂಡಳು. ಜಮದಗ್ನಿಯು —ಒಳ್ಳೇದು ಎಂದು ಹೇಳಿ, ಎರಡು ಬಟ್ಟಲಲ್ಲಿ ನೀರು ತರಿಸಿ, ಅದನ್ನು ಅಭಿಮಂತ್ರಿಸಿ, ಹೆಂಡತಿಯ ಕೈಯಲ್ಲಿ ಕೊಟ್ಟು,—ಈ ಬಟ್ಟಲಿನ ನೀರನ್ನು ನಿನ್ನ ಮಗಳಿಗೆ ಕೊಡು. ಈ ಕಿಣ್ಣದ ಉದಕವನ್ನು ನೀನು ಕುಡಿ. ಇಬ್ಬರಿಗೂ ಈ ಮಂತ್ರೋದಕದಿಂದ ಮಹಾ ತೇಜಸ್ವಿಗಳಾದ ಗಂಡು ಮಕ್ಕಳು ಹುಟ್ಟುವರೆಂದು ಹೇಳಿ ಕೊಟ್ಟು, ಕಳುಹಿಸಿದನು. ಅವಳು ಆ ಎರಡು ಬಟ್ಟಲಿನ ಉದಕವನ್ನು ತೆಗೆದು ಕೊಂಡು, ಮಗಳ ಬಳಿಗೆ ಬಂದು—ಇಗೊಳ್ಳೇ, ಅಮ್ಮಾ! ನಿಮ್ಮ ತಂದೆಯು ಈ ಎರಡು ಕಿಣ್ಣಗಳಲ್ಲಿರುವ ನೀರನ್ನು ಅಭಿಮಂತ್ರಿಸಿ, ಈ ಕಿಣ್ಣದ ನೀರನ್ನು ನಾನು ಕುಡಿಯುವಂತೆಯೂ, ಈ ಬಟ್ಟಲಿನ ನೀರನ್ನು ನೀನು ಕುಡಿಯುವಂತೆಯೂ, ಕೊಟ್ಟಿದ್ದಾನೆ. ತೆಗೆದುಕೋ, ಎಂದು ಕೊಟ್ಟಳು. ಆ ಮಗಳು ತನ್ನ ತಂದೆಯು ಹೆಂಡತಿಗೆ ಏನೋ ವಿಶೇಷವಾಗಿ ಅಭಿಮಂತ್ರಿಸಿ, ಕೊಟ್ಟಿರಬಹುದು, ಎಂದು ಮನಸ್ಸಿನಲ್ಲಿ ಎಣಿಸಿ, ತಾಯಿಯನ್ನು ಕುರಿತು—ಅಮ್ಮಾ, ನಮ್ಮ ತಂದೆಯು ನಿನಗೆ ಅಭಿಮಂತ್ರಿಸಿ ಕೊಟ್ಟಿರುವ ಬಟ್ಟಲಿನ ನೀರನ್ನು ನನಗೆ ಕೊಡು. ನನಗೆ ಕೊಟ್ಟಿರುವ ಬಟ್ಟಲಿನ ಜಲವನ್ನು ನೀನು ತೆಕ್ಕೊ, ಅನ್ನಲು; ತಾಯಿಯು ಮಗಳ ಮೇಲಿನ ವ್ಯಾಮೋಹದಿಂದ ಹಾಗೆ ಕೊಟ್ಟಳು. ಆ ಬಳಿಕ ಇಬ್ಬರು ಮಂತ್ರೋದಕ ಮಹಿಮೆಯಿಂದ ಇಬ್ಬರು ಗಂಡು ಮಕ್ಕಳನ್ನು ಹೆತ್ತರು. ಜಮದಗ್ನಿಯು ಹನ್ನೆರಡನೇ ದಿವಸದಲ್ಲಿ ತನ್ನ ಮೊಮ್ಮಗನಾದ ಕ್ಷತ್ರಿಯೋತ್ತಮನಾದ ಗಾಧಿ ರಾಯನ ಮಗನಿಗೆ ವಿಶ್ವಾಮಿತ್ರನೆಂದೂ, ತನ್ನ ಹೆಂಡತಿಯ ಹೊಟ್ಟೆಯಲ್ಲಿ ಭೂ ಭಾರ ನಿವಾರಣಾರ್ಥವಾಗಿ ವಿಷ್ಣುವಿನ ಅಂಶದಿಂದ ಹುಟ್ಟಿದ ಮಗನಿಗೆ ರಾಮನೆಂದೂ, ನಾಮ ಕರಣವನ್ನು ಮಾಡಿದನು.

ಗಾಧಿ ರಾಯನು ಈ ಸುದ್ದಿಯನ್ನು ಕೇಳಿ, ಸಂತೋಷ ಪಟ್ಟು, ಮಾವನ ಬಳಿಗೆ ಬಂದು, ಅತ್ತೆ ಮಾವಂದಿರಿಗೆ ನಮಸ್ಕರಿಸಿ, ತನ್ನ ಹೆಂಡತಿ ಮಕ್ಕಳನ್ನು ಪಟ್ಟಣಕ್ಕೆ ಕರೆದು ಕೊಂಡು ಹೋಗಿ, ಪ್ರಬುದ್ಧನಾದ ಮಗನಿಗೆ ಪಟ್ಟವನ್ನು ಕಟ್ಟಿ, ತಪಸ್ಸಿಗೆ ಹೋದನು. ಆ ಮೇಲೆ ವಿಶ್ವಾಮಿತ್ರನು ಅನೇಕ ಸಹಸ್ರ ವರ್ಷ ರಾಜ್ಯ ಭಾರವನ್ನು ಮಾಡಿ, ಮಂತ್ರೋದಕದ ಮಹಿಮೆಯಿಂದ—ಬ್ರಾಹ್ಮಣನಾಗ ಬೇಕೆಂದು ಬುದ್ಧಿ ಹುಟ್ಟಿ, ತನ್ನ ಮಗನಿಗೆ ಪಟ್ಟಾಭಿಷೇಕವನ್ನು ಮಾಡಿ, ಅನೇಕ ವರ್ಷ ಮಾಡಿದ ತಪಸ್ಸಿನಿಂದ ಬ್ರಹ್ಮ ದೇವನನ್ನು ಮೆಚ್ಚಿಸಿ, ಬ್ರಹ್ಮ ಋಷಿತ್ವವನ್ನು ಪಡೆದು, ಜಗದ್ವಿಖ್ಯಾತನಾದನು.

ಇತ್ತಲಾ ಜಮದಗ್ನಿಯ ಮಗನಾದ ರಾಮನು ಬ್ರಹ್ಮ ಕ್ಷೇತ್ರದಲ್ಲಿ ಹುಟ್ಟಿದ

ವನಾದಾಗ್ಯೂ, ಕ್ಷತ್ರಿಯು ಮಂತ್ರೋದಕದ ಮಹಿಮೆಯಿಂದ—ಜಗದೇಕ ವೀರ
ನೆನ್ನಿಸಿ ಕೊಳ್ಳ ಬೇಕೆಂದು ಬುದ್ಧಿ ಹುಟ್ಟಿ, ಕೈಲಾಸ ಪರ್ವತಕ್ಕೆ ಹೋಗಿ, ಘೋ
ರವಾದ ತಪಸ್ಸನ್ನು ಮಾಡಿ, ಪರಮೇಶ್ವರನನ್ನು ಮೆಚ್ಚಿಸಿ, ಆತನಲ್ಲಿ ಸಕಲ ಧ
ನುರ್ವೇದಗಳನ್ನು ಕಲಿತು, ಎಲ್ಲಾ ಮಂತ್ರಾಸ್ತ್ರಗಳ ಪ್ರಯೋಗೋಪಸಂಹಾ
ರಗಳನ್ನು ಉಪದೇಶಿಸಿ ಕೊಂಡು, ಆತನ ಸೇವೆಯನ್ನು ಮಾಡುತ್ತ, ಕೆಲವು ದಿ
ವಸವಿರುವಲ್ಲಿ, ಪರಮೇಶ್ವರನು ಶಿಷ್ಯನಾದ ರಾಮನ ಗುಣಕ್ಕೆ ಬಹಳ ಸಂ
ತೋಷ ಪಟ್ಟು,—ಇವನ ಸಾಮರ್ಥ್ಯವನ್ನು ಪರೀಕ್ಷಿಸಿ, ನೋಡ ಬೇಕೆಂದು ಎಣಿ
ಸಿ, ಒಂದು ದಿವಸ ಮಹಾ ಶೂರನಾದ ತನ್ನ ಮಗ ಷಣ್ಮುಖನನ್ನೂ ಶಿಷ್ಯನಾದ
ರಾಮನನ್ನೂ ಕರೆದು,—ನೀವಿಬ್ಬರೂ ಯುದ್ಧವನ್ನು ಮಾಡಿ, ನಿಮ್ಮಿಬ್ಬರ ಶಕ್ತಿ
ಯ ಹೆಚ್ಚು ಕುಂದನ್ನು ನನಗೂ ಪಾರ್ವತಿಗೂ ತೋರಿಸ ಬೇಕೆಂದು ಹೇಳಲು;
ಅವರಿಬ್ಬರು ಸೋಲು ಗೆಲುವು ಇಲ್ಲದೆ ಏಳು ದಿವಸದ ವರಿಗೂ ಜಗಳವಾಡಿ,
ಕಡೆಗೆ ಷಣ್ಮುಖನು ರಾಮನ ಜೃಂಭಣಾಸ್ತ್ರ ಪ್ರಯೋಗದಿಂದ ಸ್ತಂಭೀ ಭೂತ
ನಾದದ್ದನ್ನು ನೋಡಿ, ಪಾರ್ವತೀ ಪರಮೇಶ್ವರರು ರಾಮನನ್ನು ತಬ್ಬಿ ಕೊಂಡು,
ಮುದ್ದಾಡಿ, ಅಮೋಘವಾದ ಒಂದು ಕೊಡಲಿಯನ್ನು ಕೊಟ್ಟು,—ಈ ಆಯುಧ
ವನ್ನು ಸದಾ ನೀನು ಧರಿಸಿ ಕೊಂಡು, ಪರಶು ರಾಮನೆಂದು ಲೋಕದಲ್ಲಿ ಹೆಸ
ರನ್ನು ಹೊಂದಿ, ಜಗದ್ವಿಖ್ಯಾತನಾಗು. ನಿನ್ನ ತಾಯಿ ತಂದೆಗಳ ಬಳಿಗೆ ಹೋಗಿ,
ಅವರ ಶುಶ್ರೂಷೆಯನ್ನು ಮಾಡಿ ಕೊಂಡಿರು ಎಂದು ಹೇಳಿ, ಹರಸಿ, ಕಳುಹಿಸಿ
ದನು. ತರುವಾಯ ಪರಶು ರಾಮನು ಪಾರ್ವತೀ ಪರಮೇಶ್ವರರಿಗೆ ವಂದಿಸಿ,
ತಾಯಿ ತಂದೆಗಳ ಬಳಿಗೆ ಬಂದು, ನಮಸ್ಕಾರವನ್ನು ಮಾಡಿ, ತನ್ನಲ್ಲಿ ಪಾರ್ವತೀ
ಪರಮೇಶ್ವರರು ಅನುಗ್ರಹ ಮಾಡಿದ್ದನ್ನೂ ತಾನು ಷಣ್ಮುಖನನ್ನು ಜೈಸಿದ್ದನ್ನೂ
ತಿಳಿಸಿ, ಮಾತಾ ಪಿತೃಗಳ ಶುಶ್ರೂಷೆಯನ್ನು ಮಾಡಿ ಕೊಂಡಿದ್ದನು.

ಹೀಗಿರುವಲ್ಲಿ, ತಂದೆಯ ಯಜ್ಞಾಹುತಿಗೆ ದರ್ಭೆ ಸಮಿತ್ತುಗಳನ್ನು ತರುವ
ದಕ್ಕೆ ಕೊಡಲಿಯನ್ನು ಧರಿಸಿ, ರಾಮನು ಅರಣ್ಯಕ್ಕೆ ಹೋದ ಸಮಯದಲ್ಲಿ
ಕಾರ್ತವೀರ್ಯಾರ್ಜುನನು ದಿಗ್ವಿಜಯಾರ್ಥವಾಗಿ ಚತುರಂಗ ಬಲ ಸಮೇತನಾಗಿ
ಹೋಗಿದ್ದವನು ತಿರಿಗಿ ತನ್ನ ಮಾಹಿಷ್ಮತೀ ಪಟ್ಟಣಕ್ಕೆ ಬರುವಾಗ, ಮಧ್ಯೆ ಮಾ
ರ್ಗದಲ್ಲಿ ಜಮದಗ್ನಿ ಋಷಿಯ ಆಶ್ರಮವನ್ನು ಕಂಡು, ಒಳಗೆ ಹೋಗಿ, ಋಷಿ
ಯನ್ನು ಕಂಡು, ಪಾದಾಭಿವಂದನೆಯನ್ನು ಮಾಡಿದನು. ಜಮದಗ್ನಿ ಋಷಿಯು
ಚಕ್ರವರ್ತಿಯಾದ ಕಾರ್ತವೀರ್ಯಾರ್ಜುನನಿಗೆ ಅರ್ಘ್ಯಪಾದ್ಯಾಸನಾದಿ ಅತಿಥಿ
ಪೂಜೆಯನ್ನು ಮಾಡಿ, ಸವಿ ನುಡಿಗಳಿಂದ ಕುಶಲ ಪ್ರಶ್ನೆಯನ್ನು ಕೇಳಿ,—ಈ ದಿನ

ಇಲ್ಲಿ ಇದ್ದು, ಸೇನೆ ಸಹಿತ ನಿನಗೆ ನಾನು ಮಾಡುವ ಅತಿಥಿ ಸತ್ಕಾರವನ್ನು ಕೈಕೊಂಡು, ತೆರಳ ಬೇಕೆಂದು, ಬಹು ತರವಾಗಿ ಪ್ರಾರ್ಥಿಸಲು; ಕಾರ್ತಿವೀರ್ಯಾರ್ಜುನನು—ಹಾಗೆಯೇ ಆಗಲಿ ಎಂದು ಹೇಳಿ, ಆ ಮುನಿಯ ಪರ್ಣ ಶಾಲೆಗೆ ಸ್ವಲ್ಪ ದೂರದಲ್ಲಿ ಗುಡಾರಗಳನ್ನು ಹೊಡಿಸಿ, ತನ್ನ ಚತುರಂಗ ಬಲವನ್ನು ಬಿಡಿಸಿಕೊಂಡು, ನಿಂತನು. ಆಗ ಜಮದಗ್ನಿ ಋಷಿಯು ತನ್ನ ಹೋಮ ಧೇನುವಾದ ಕಾಮ ಧೇನುವನ್ನು ಕರೆದು—ಎಲೈ, ಸುರಭಿಯೇ, ಚಕ್ರವರ್ತ್ತಿಯಾದ ಕಾರ್ತಿವೀರ್ಯಾರ್ಜುನನನ್ನು ಚತುರಂಗ ಬಲ ಸಮೇತನಾಗಿ—ಸತ್ಕಾರವನ್ನು ಮಾಡುವೆನೆಂದು, ನಿಲ್ಲಿಸಿ ಕೊಂಡಿದ್ದೇನೆ. ನೀನು ಅವನ ದಂಡಿಗೆ ಹೋಗಿ, ಆ ದಂಡಿನಲ್ಲಿ ಸಕಲವಾದ ಪ್ರಾಣಿಗಳಿಗೂ, ಅವರ ಅಭೀಷ್ಟವಿದ್ದಂತೆ ಅನ್ನ, ಪಾನ, ವಸ್ತ್ರಾಭರಣ, ಗಂಧ, ಮಾಲ್ಯಾದಿಗಳಿಂದ ತೃಪ್ತಿ ಪಡಿಸ ಬೇಕೆಂದು, ಅಪ್ಪಣೇ ಕೊಟ್ಟನು. ಆ ಸುರಭಿಯು ಚಕ್ರವರ್ತ್ತಿಯ ದಂಡಿಗೆ ಬಂದು, ಕುದುರೆ, ಆನೆ, ಒಂಟೆ, ಎತ್ತು, ದನ, ಕರು, ಮೊದಲಾಗಿ ಸಮಸ್ತ ಪ್ರಾಣಿಗಳಿಗೂ, ಅವರವರಿಗೆ ಬೇಕಾದ ಪದಾರ್ಥಗಳನ್ನು ಒದಗಿಸಿ ಕೊಟ್ಟು, ಅವರವರ ಶುಶ್ರೂಷೆಯನ್ನು ಮಾಡುವದಕ್ಕೆ ಅನೇಕ ಸಹಸ್ರ ದಾಸೀ ದಾಸ ಜನರನ್ನು ಉಂಟು ಮಾಡಿ, ಕಾರ್ತ್ತಿವೀರ್ಯಾರ್ಜುನನಿಗೂ, ಆತನ ಜೊತೆಯಲ್ಲಿ ಬಂದಿದ್ದ ಸಾಮಂತ ಮಂಡಲಿಗೂ, ಅನೇಕ ವಿಧವಾದ ರಾಜೋಪಚಾರಗಳಿಂದ ತೃಪ್ತಿ ಪಡಿಸಿ, ಸರ್ವ್ವರನ್ನು ಸಂತೋಷ ಪಡಿಸಿ, ತಿರಿಗಿ ಮುನಿಯ ಬಳಿಗೆ ಬಂದು, ತಾನು ನಡ ಕೊಂಡ ವಿದ್ಯಮಾನವನ್ನು ತಿಳಿಸಿ, ಅವರ ಸನ್ನಿಧಿಯಲ್ಲಿ ನಿಂತು ಕೊಂಡಿತು.

ಆ ಮೇಲೆ ಕಾರ್ತ್ತಿವೀರ್ಯಾರ್ಜುನನು—ಒಬ್ಬ ಅರಣ್ಯವಾಸಿಯಾದ ಬಡ ಮುನಿಯು ನಮ್ಮ ಇಷ್ಟು ಸೇನೆಗೂ ತೃಪ್ತಿಯಾಗುವಂತೆ ರಾಜೋಪಚಾರಗಳನ್ನು ಮಾಡಿಸಿದನಲ್ಲ! ಹೀಗೆ ಯಾವ ಸಾಂಬ್ರಾಜ್ಯಾಧಿಪತಿಯಾದರೂ ಮಾಡಿಯಾನೇ? ಆಗಲಾರದು. ಇದೆಲ್ಲಾ ಆ ಧೇನುವಿನ ಸಾಮರ್ಥ್ಯವು; ಅದನ್ನು ನಾನು ತೆಗೆದು ಕೊಂಡು ಹೋದರೆ, ನನ್ನ ಚಕ್ರವರ್ತ್ತಿತ್ವವು ಬಹಳ ಪ್ರಸಿದ್ಧಿಯಾಗುವದೆಂದು ಎಣಿಸಿ, ಜಮದಗ್ನಿಯ ಬಳಿಗೆ ಬಂದು,—ಎಲೈ, ಮುನಿಯೇ, ಈಗ ನೀನು ಮಾಡಿಸಿದ ಸತ್ಕಾರದಿಂದ ನಾನೂ ನನ್ನ ಪರಿವಾರಗಳೂ ಬಹಳ ಸಂತುಷ್ಟರಾದೆವು. ಆದರೆ ನನ್ನದೊಂದು ಮಾತು ಇರುವದು; ಕೇಳು. ನಿನ್ನಲ್ಲಿರುವ ಸಕಲಾಭೀಷ್ಟವನ್ನು ಕೊಡುವ ಈ ಹೋಮ ಧೇನುವನ್ನು ನನಗೆ ಕೊಡ ಬೇಕು. ಇದಕ್ಕೆ ಬದಲಾಗಿ ನೀನು ಕೇಳಿದಷ್ಟು ಧನ ಕನಕ ವಸ್ತ್ರಾಭರಣ ದೇಶ ಕೋಶಗಳನ್ನು ಕೊಡುತ್ತೇನೆ, ಎನಲು; ಜಮದಗ್ನಿಯು—ಇದನ್ನು ಕೊಡುವದಕ್ಕೆ ನಾನು ಬಾ

ಧ್ಯನಲ್ಲ. ಇದು ಬಹಳ ತಪಸ್ಸು ಮಾಡಿದಂಥ ಮುನಿಗಳಿಗೆ, ಅವರು ಮಾಡ ತಕ್ಕ ಯಜ್ಞಕ್ಕೆ ಬೇಕಾದ ಹಾಲು, ಮೊಸರು, ಬೆಣ್ಣೆ, ತುಪ್ಪ, ಮೊದಲಾದ ಸಾಮಗ್ರೀಯುಗಳನ್ನು ಒದಗಿಸಿ ಕೊಡ ತಕ್ಕ ಬಗ್ಯೆ, ದೇವೇಂದ್ರನ ಅಪ್ಪಣೆಯಿಂದ ಮುನಿಗಳಲ್ಲಿ ಬಂದು, ಅವರು ಹೇಳಿದಂತೆ ನಡೆಯುವದು, ಎನ್ನಲು; ಕಾರ್ತಿವೀರ್ಯಾರ್ಜುನನು—ಹಾಗಾದರೆ, ನಿನಗೆ ಕೊಡುವದಕ್ಕೆ ಸ್ವತಂತ್ರವಿಲ್ಲದಿದ್ದಲ್ಲಿ, ನಾನೇ ಹಿಡಿದು ಕೊಂಡು ಹೋಗುವೆನೆಂದು ಹೇಳಿ, ಬಲಾತ್ಕಾರದಿಂದ ಆ ಸುರಭಿಯನ್ನು ಹಿಡಿಸಿ ಕೊಂಡು, ತನ್ನ ಪಟ್ಟಣಕ್ಕೆ ಹೋದನು.

ಇತ್ತ ಯಾಗ ಸಾಧಕವಾದ ಸಮಿತ್ತು, ದರ್ಭೆಗಳನ್ನು ತರುವದಕ್ಕೆ ಹೋಗಿದ್ದ ರಾಮನು ಅವುಗಳನ್ನೂ ಮತ್ತು ಗೋ ಗ್ರಾಸವನ್ನೂ ಹೊತ್ತು ಕೊಂಡು ಬಂದು, ದರ್ಭೆ ಸಮಿತ್ತುಗಳನ್ನು ಯಾಗ ಶಾಲೆಯಲ್ಲಿಟ್ಟು, ಗೋ ಗ್ರಾಸವನ್ನು ತೆಗೆದು ಕೊಂಡು, ಗೋವು ಇರುವ ಬಳಿಗೆ ಹೋಗಿ, ನೋಡಲು; ಅಲ್ಲಿ ಗೋವು ಇಲ್ಲದೆ ಇದ್ದ ಕಾರಣ ಜಮದಗ್ನಿಯ ಬಳಿಗೆ ಬಂದು,—ಎಲೈ, ತಂದೆಯೇ, ನಾನು ಗೋವಿಗೋಸ್ಕರ ಎಳೇ ಹುಲ್ಲನ್ನು ಬಹಳವಾಗಿ ತಂದಿದ್ದೇನೆ; ಗೋವು ಎಲ್ಲಿ? ಕಾಣುವದಿಲ್ಲವೆಂದು ಕೇಳಿದ್ದಕ್ಕೆ, ಆತನು ಗೋವಿನ ವಿಷಯದಲ್ಲಿ ಕಾರ್ತಿವೀರ್ಯಾರ್ಜುನನು ಮಾಡಿದಂಥ ಬಲಾತ್ಕಾರದ ಸಂಗತಿಯನ್ನು ತಿಳಿಸಿದನು. ಅದನ್ನು ಕೇಳಿ, ಪರಶು ರಾಮನು—ಅಕಟಕಟಾ! ನೀಚರಾದ ಅರಸುಗಳಿಗೆ ಬ್ರಾಹ್ಮಣರ ಸ್ವತ್ತನ್ನು ಬಲಾತ್ಕಾರದಿಂದ ಅಪಹರಿಸಿ ಕೊಂಡು ಹೋಗುವ ಶಕ್ತಿ ಉಂಟಾಯಿತೇ? ತನ್ನ ಚಕ್ರವರ್ತಿತನದ ಹೆಮ್ಮೆಯನ್ನು ನಮ್ಮಲ್ಲಿ ತೋರಿಸಿದನೇ? ನಮ್ಮನ್ನು ಜಪ ತಪಾ ಮಾಡಿ ಕೊಂಡು, ಆಶ್ರಮದ ಎಲೆ ಮನೆಯಲ್ಲಿ ಸೇರಿ ಕೊಂಡಿರುವ ಶುದ್ಧ ಬ್ರಾಹ್ಮಣರೆಂದು ತಿಳಿದನೇ? ಆಗಲಿ. ಇವನ ಶಕ್ತಿಯನ್ನು ನೋಡುವ ಎಂದು, ಅಮೋಘವಾದ ಕವಚವನ್ನು ತೊಟ್ಟು ಕೊಂಡು, ಬಿಲ್ಲು, ಬತ್ತಳಿಕೆ, ಕೊಡಲಿಗಳನ್ನು ಕೈಯಲ್ಲಿ ತೆಗೆದು ಕೊಂಡು, ಆ ಕ್ಷಣದಲ್ಲಿಯೇ ಕೋಪದಿಂದ ಪರವಶನಾಗಿ, ಆಶ್ರಮದಿಂದ ಹೊರಟು, ಮಾಹಿಷ್ಮತೀ ನಗರಕ್ಕೆ ಬಂದು, ಊರು ಬಾಗಲನ್ನು ಅತಿಕ್ರಮಿಸಿ, ಗೋಪುರ ದ್ವಾರವನ್ನು ದಾಟಿ, ರಾಜ ದ್ವಾರದ ಬಳಿಗೆ ಬಂದು, ನಿಂತು, ಬಾಗಲ ಕಾಯುವವರನ್ನು ಕರೆದು,—ಎಲೈ, ದ್ವಾರ ಪಾಲಕರಿರಾ, ನಿಮ್ಮ ಅರಸಿಗೆ ನಾವು ಹೇಳಿದ್ದಾಗಿ ಹೇಳ ತಕ್ಕದ್ದೇನೆಂದರೆ,—ಲೋಕದಲ್ಲಿ ಜನರಿಗೆ ವಿನಾಶ ಕಾಲಕ್ಕೆ ವಿಪರೀತ ಬುದಿಗಳು ಹುಟ್ಟುವವೆಂದು, ದೊಡ್ಡವರು ಹೇಳುವದು ಈಗ ಯಥಾರ್ಥವಾಯಿತು. ಕರೆದು, ನಮ್ಮ ತಂದೆಯು ನಿನಗೆ ಸತ್ಕಾರವನ್ನು ಮಾಡಿದ್ದಕ್ಕೆ—ಪಥ್ಯ ಇಕ್ಕಿ ಉ

ಣ್ಣಿಸಿದವರ ಕೈಯನ್ನು ಕಚ್ಚಿದನೆಂಬ ಗಾದೆಗೆ ಸರಿಯಾಗಿ ನಮ್ಮ ಹೋಮ ಧೇನುವನ್ನು ಬಲಾತ್ಕಾರದಿಂದ ಅಪಹರಿಸಿ ಕೊಂಡು ಬಂದೆಯಲ್ಲ! ಇದು ನ್ಯಾಯವೇ? ಸತ್ತ ದನವಿನ ಚರ್ಮದಲ್ಲಿ ಮಾಡಿದ ತಿದಿಯ ನಿಟ್ಟುಸುರುಗಳು ಪಂಚ ಲೋಹಗಳನ್ನು ಸುಟ್ಟು ಬೂದೀ ಮಾಡುವವು. ಹೀಗಿರುವಲ್ಲಿ ತಪಸ್ವಿಗಳಾಗಿಯೂ ತೇಜಸ್ವಿಗಳಾಗಿಯೂ ಇರುವ ಬ್ರಾಹ್ಮಣರ ಸಂತಾಪದ ಉಸುರುಗಳು ಆ ತಾಪವನ್ನು ಹುಟ್ಟಿಸಿದವನ ಕುಲ ಕೋಟಿಗಳನ್ನು ಸುಟ್ಟು, ಭಸ್ಮೀ ಭೂತವನ್ನು ಮಾಡದೆ ಇರುವವೇ? ಇಗೋ, ನಮ್ಮ ತಂದೆಯಾದ ಜಮದಗ್ನಿಗೆ ದ್ರೋಹವನ್ನು ಮಾಡಿ, ನಿಟ್ಟುಸುರುಗಳು ಹೊರಡುವ ಹಾಗೆ ಮಾಡಿದ ನಿನ್ನ ಪ್ರಾಣಗಳ ಉಸುರನ್ನೇ ನಿನ್ನ ಮೂಗಿನಲ್ಲಿ ಹೊರಡಿಸುವದಕ್ಕೆ ಆ ಋಷಿಯ ಹೊಟ್ಟೆಯಲ್ಲಿ ಹುಟ್ಟಿದ ಪರಶು ರಾಮನೆಂಬ ನಾನು ಬಂದಿದ್ದೇನೆ. ನಿನಗೆ ಪುತ್ರ ಮಿತ್ರ ಕಳತ್ರಾದಿಗಳೊಡನೆ ಕೂಡಿ, ಬಾಳ ಬೇಕೆಂಬ ಅಪೇಕ್ಷೆ ಇದ್ದರೆ, ಬೇಗ ನಮ್ಮ ಧೇನುವನ್ನು ತಂದು, ಒಪ್ಪಿಸಿ, ಶರಣಾಗತನಾದರೆ, ಮನ್ನಿಸಿ, ಬಿಡುವೆನು. ಅದು ನಿನ್ನ ಮನಸ್ಸಿಗೆ ಬಾರದೆ, ಸಾಯ ಬೇಕೆಂದು ಆಶೆ ಇದ್ದರೆ, ನಿನ್ನ ಚತುರಂಗ ಬಲದೊಡನೆ ಕೂಡಿ, ನಮ್ಮೊಡನೆ ಯುದ್ಧಕ್ಕೆ ಬರ ಬೇಕೆಂದು, ನಾನು ಕರೆಯುವದಾಗಿ ಹೇಳಿರೆಂದು, ಕಳುಹಿಸಲು; ಅವರು ಬಂದು, ಕಾರ್ತ್ತವೀರ್ಯಾರ್ಜುನನೊಡನೆ ಪರಶು ರಾಮು ಹೇಳಿದ ಹಾಗೆಯೇ, ತುಸವಾದರೂ ಹೆಚ್ಚು ಕಡಿಮೆ ಆಗದಂತೆ ಹೇಳಲು;—

ಅದನ್ನು ಕೇಳಿ, ಕಾರ್ತ್ತವೀರ್ಯಾರ್ಜುನನು—ಅಹಹ! ತಿಥಿಗಳಲ್ಲಿ ಮಂಡಿಸಿ, ಕುಳಿತು ಕೊಂಡು, ತಿನ್ನುತ್ತಾ, ಹೊಟ್ಟೆ ಹೊರೆಯುವ ಬಡ ಹಾರುವರಿಗೆ ಪರಮ ತೇಜಸ್ವಿಗಳಾದ ಚಕ್ರವರ್ತ್ತಿಗಳಾದ ನಮ್ಮಂಥ ಕ್ಷತ್ರಿಯೋತ್ತಮರೊಡನೆ ಸೆಣಸುವ ಶಕ್ತಿ ಉಂಟಾದದ್ದು ಇದೇನೋ? ಕಾಲಗತಿಯೇ ಸರಿ. ಈ ದುಷ್ಟ ಬ್ರಾಹ್ಮಣ ವಟುವಿನ ಕೆಟ್ಟ ಮಾತುಗಳಿಂದ ನಾನು ಯುದ್ಧಕ್ಕೆ ಹೋದರೆ, ಆ ಯುದ್ಧದಲ್ಲಿ ಅವನು ಕೋಪಿತನಾದ ನನ್ನಿಂದ ಹತನಾದರೆ, ಬ್ರಹ್ಮ ಹತ್ಯ ಬಂದು ಘಟಿಸುವದು. ಅದಲ್ಲದೆ, ಬ್ರಾಹ್ಮಣನ ಸ್ವತ್ತು ನಮಗೇಕೆ? ಎಂದು, ಆ ಧೇನುವನ್ನು ಹಿಂದಕ್ಕೆ ಕೊಟ್ಟು ಬಿಟ್ಟರೆ,—ಚಕ್ರವರ್ತ್ತಿಯಾದ ಕಾರ್ತ್ತವೀರ್ಯಾರ್ಜುನನು ಹಿಡಿದು ತಂದ ಧೇನುವನ್ನು, ಹಾರವ ಹುಡುಗನೊಡನೆ ಜಗಳವಾಡುವದಕ್ಕೆ ಕೈಯಲ್ಲಿ ಹರಿಯದೆ, ಪೋರನ ಮಾತಿಗೆ ಬೆದರಿ, ಧೇನುವನ್ನು ತಿರಿಗಿ ಕೊಟ್ಟು ಬಿಟ್ಟನು, ಎಂದು ಆಡಿ ಕೊಳ್ಳುವರು. ಈ ಅಸಂಗತವಾದ ಕಾರ್ಯಕ್ಕೆ ಹ್ಯಾಗೆ ಮಾಡುವ? ಎಂದು, ಒಂದು ಘಳಿಗೆ ಆಲೋಚಿಸಿ,—ಆ ಪೋರನನ್ನು ಕೊಂದು

ಹಾಕದೆ, ಅವನ ಕೊಬ್ಬು ಮುರಿದು, ಹಿಡಿದು ತಂದು, ಶೆರೆಯಲ್ಲಿಟ್ಟು, ಅವರಪ್ಪ ಜಮದಗ್ನಿಯು ಬಂದು, ಬೇಡಿ ಕೊಂಡರೆ, ಬಿಟ್ಟು ಬಿಡುವ ಎಂದು, ಮನಸ್ಸಿನಲ್ಲಿ ನಿಶ್ಚೈಸಿ ತನ್ನ ದಳ ಪತಿಗಳನ್ನು ಕರೆದು—ನೀವು ನಿಮ್ಮ ನಿಮ್ಮ ಸೇನೆಯಿಂದ ಕೂಡಿ, ಆ ಹಾರುವ ಪ್ಫೋರನ ಬಳಿಗೆ ಹೋಗಿ, ಜಗಳವಾಡಿ, ಅವನನ್ನು ಕೈ ಶೆರೆ ಹಿಡಿದು ಕೊಂಡು ಬನ್ನಿ ಎಂದು, ಅಪ್ಪಣೇ ಕೊಟ್ಟು, ಕಳುಹಿಸಿದನು.

ಅವರು ಚತುರಂಗ ಬಲ ಸಮೇತರಾಗಿ ಬಂದು, ಪರಶು ರಾಮನನ್ನು ಮುತ್ತಿ ಕೊಳ್ಳಲು; ಪರಶು ರಾಮನು ಬಂದ ಶತ್ರುವಿನ ಸೇನೆಯಲ್ಲಿ, ಹಿಂತಿರಿಗಿ ಹೋಗಿ, ಸುದ್ದಿ ಹೇಳುವದಕ್ಕೆ ಒಬ್ಬ ಉಳಿಯದಂತೆ ಎಲ್ಲರನ್ನು ತನ್ನ ಕೈ ಕೊಡಲಿಯಿಂದ ಕೊಂದು ಹಾಕಿದನು. ಆ ಸುದ್ದಿಯನ್ನು ಕಾರ್ತ್ತಿವೀರ್ಯ್ಯಾರ್ಜುನನು ಕೇಳಿ, ಪ್ರಳಯಾಗ್ನಿಯಂತೆ ಕೋಪಿಸಿ ಕೊಂಡು, ತಾನೇ ಬಂದು, ಪರಶು ರಾಮನೊಡನೆ ಇಪ್ಪತ್ತೇಳು ದಿವಸ ಅಹೋ ರಾತ್ರಿಯಲ್ಲಿಯೂ ಯುದ್ಧವನ್ನು ಮಾಡಿ, ಕಡೆಗೆ ಆತನ ಕೊಡಲಿಯಿಂದ ಕಡಿಯಲ್ಪಟ್ಟ ತೋಳು ತಲೆಗಳುಳ್ಳವನಾಗಿ ನೆಲದಲ್ಲಿ ಒರಗಿದನು. ಅದನ್ನು ಕಂಡು, ಆ ಪಟ್ಟಣದ ಜನವೆಲ್ಲಾ ಘಾಬರಿಯಾಗಿ, ದಿಕ್ಕು ದಿಕ್ಕಿಗೆ ಓಡಿ ಹೋದರು. ಆಗ ಪರಶು ರಾಮನು ಅವನ ಅರಮನೆಯನ್ನು ಹೊಕ್ಕು, ಅಲ್ಲಿ ಕಟ್ಟಿರುವ ತನ್ನ ಹೋಮ ಧೇನುವನ್ನು ನೋಡಿ, ಅದರ ಮೈಯೆಲ್ಲಾ ತುರಿಸಿ, ಗೊಂತನ್ನು ಬಿಚ್ಚಿ, ಅಲ್ಲಿಂದ ತನ್ನ ಆಶ್ರಮಕ್ಕೆ ಬಂದನು. ಆ ಧೇನುವು ಕೂಡ ಆತನ ಹಿಂದು ಗಡೆಯಲ್ಲಿಯೇ ಆಶ್ರಮಕ್ಕೆ ಬಂತು. ಅದನ್ನು ನೋಡಿ, ಜಮದಗ್ನಿಯು ಮಗನನ್ನೂ ಧೇನುವನ್ನೂ ತಬ್ಬಿ ಕೊಂಡು, ಮುದ್ದಾಡಿ, ಬಹಳ ಸಂತೋಷ ಪಟ್ಟನು.

ಆ ಬಳಿಕ, ಇತ್ತ ಮಾಹಿಷ್ಮತೀ ಪಟ್ಟಣದಲ್ಲಿ ಕಾರ್ತ್ತಿವೀರ್ಯ್ಯಾರ್ಜುನನ ಮಕ್ಕಳು ತಂದೆ ಸತ್ತು ಹೋದ್ದರಿಂದ ಬಹಳ ವ್ಯಸನ ಪಟ್ಟು ಕೊಂಡು,—ಒಬ್ಬ ಬ್ರಹ್ಮಚಾರಿ ಹುಡುಗನು ಬಂದು, ಮಹಾ ಶೂರನಾದ ಚಕ್ರವರ್ತ್ತಿಯಾದ ನಮ್ಮ ತಂದೆಯನ್ನು ಕೊಂದು ಹಾಕಿದನಲ್ಲ! ಇದಕ್ಕೆ ಬದಲಾಗಿ ನಾವೂ ಅವನ ತಂದೆಯನ್ನು ಕೊಂದು ಹಾಕಿದ ಹೊರ್ತು, ನಮ್ಮ ಅಳಲು ತೀರುವದಿಲ್ಲ. ಈ ಕೆಲಸ ಮಾಡುವದಕ್ಕೆ ಪರಶು ರಾಮನು ಆಶ್ರಮದಲ್ಲಿರುವಾಗ, ನಮಗೆ ಸಾಧ್ಯವಾಗುವದಿಲ್ಲ. ನಾವು ಮಾಡಿದ ಯೋಚನೆಯು ಸ್ವಲ್ಪ ತಿಳಿದಾಗ್ಯೂ, ಆ ಪರಶು ರಾಮನು ನಮ್ಮನ್ನು ಮೂಲೋತ್ಪಾಟನಾ ಮಾಡುವನು. ಅವನ ತಂದೆಯನ್ನು ನಾವು ಕೊಂದು ಹಾಕಿದ ಮೇಲೆ, ಆ ಪರಶು ರಾಮನು ನಮ್ಮನ್ನು ಕೊಂದರೂ, ಕೊಂದು ಕೊಳ್ಳಲಿ ಎಂದು, ತಮ್ಮ ಮನಸ್ಸಿನಲ್ಲಿ ನಿಶ್ಚೈಸಿ ಕೊಂ

ಡು, ಜಮದಗ್ನಿಯ ಆಶ್ರಮಕ್ಕೆ ಬಂದು, ಔತು ಕೊಂಡು, ಪರಶು ರಾಮನು ಆಶ್ರಮವನ್ನು ಬಿಟ್ಟು ಹೋಗುವ ಸಮಯವನ್ನು ನಿರೀಕ್ಷಿಸುತ್ತ ಇದ್ದು, ಒಂದು ದಿವಸ ಆ ರಾಮನು ಗೋ ಗ್ರಾಸಾರ್ಥವಾಗಿ ಹುಲ್ಲು ತರುವದಕ್ಕೆ ಕಾಡಿಗೆ ಹೋದದ್ದನ್ನು ತಿಳಿದು, ಜಮದಗ್ನಿಯ ಪರ್ಣ ಶಾಲೆಯನ್ನು ಹೊಕ್ಕು, ಕಣ್ಣು ಮುಚ್ಚಿಕೊಂಡು, ಯೋಗ ಧ್ಯಾನ ಪರನಾಗಿದ್ದ ಜಮದಗ್ನಿಯ ತಲೆಯನ್ನು ಕತ್ತಿಯಿಂದ ಕಡಿದು, ಓಡಿ ಹೋದರು.

ಆ ಬಳಿಕ ರಾಮನು ಗೋ ಗ್ರಾಸವನ್ನು ತೆಗೆದು ಕೊಂಡು, ಆಶ್ರಮಕ್ಕೆ ಬಂದು, ದುಃಖ ಪಡುತ್ತಲಿರುವ ತಾಯಿ ಮುಂತಾದವರನ್ನು ಕಂಡು, ವಿಸ್ಮಿತನಾಗಿ, ದುರಾತ್ಮರಾದ ಕಾರ್ತವೀರ್ಯಾರ್ಜುನನ ಮಕ್ಕಳು ಮಾಡಿದ ದುಷ್ಕೃತ್ಯವನ್ನು ಕೇಳಿ—ಅಕಟಕಟಾ! ಈ ಭೂಲೋಕದಲ್ಲಿ ಕ್ಷತ್ರಿಯರು ಬಹಳ ಉನ್ನತರಾಗಿ, ಸಜ್ಜನರನ್ನು ಬಾಧಿಸುತ್ತಾ ಇದ್ದಾರೆ. ಇವರ ಹುಟ್ಟನ್ನೇ ಕಿತ್ತು ಹಾಕಿ, ಈ ಭೂಮಂಡಲವನ್ನು ಬ್ರಾಹ್ಮಣರ ಸ್ವಾಧೀನಕ್ಕೆ ಕೊಡುವೆನು ಎಂದು, ಪ್ರಳಯಕಾಲದ ರುದ್ರನಂತೆ ಕೊಡಲಿಯನ್ನು ತೆಗೆದು ಕೊಂಡು, ಹೊರಟು, ಭೂ ಲೋಕದಲ್ಲಿರುವ ಒಂದು ಕ್ಷತ್ರಿಯ ಜಾತಿಯ ಪಿಳ್ಳೆಯನ್ನು ಬಿಡದೆ, ಇಪ್ಪತ್ತೊಂದು ಸಾರಿ ಕೊಡಲಿಯಿಂದ ಕಡಿದು, ಅವರ ರಕ್ತದ ನದೀ ಪ್ರವಾಹದಲ್ಲಿ ಮಿಂದು, ಆ ರಕ್ತೋದಕಗಳಿಂದಲೇ ತನ್ನ ಸತ್ತ ತಂದೆಗೆ ತರ್ಪಣವನ್ನು ಕೊಟ್ಟು, ಭೂ ಮಂಡಲವನ್ನೆಲ್ಲಾ ಕಶ್ಯಪರಿಗೆ ದಾನವಾಗಿ ಕೊಟ್ಟು,—ದಾನಾ ಕೊಟ್ಟ ಭೂಮಿಯಲ್ಲಿ ತಾನಿರ ಬಾರದೆಂದು ಪಡುವಣ ಕಡಲಿನ ಬಳಿಗೆ ಬಂದು, ಸಮುದ್ರ ರಾಜನಿಗೆ ಹನ್ನೆರಡು ಗಾವುದ ಹಿಂದಕ್ಕೆ ಹೋಗುವ ಹಾಗೆ ಹೇಳಿ, ಅವನು ಬಿಟ್ಟು ಹೋದ ಸ್ಥಳದಲ್ಲಿ ಇರುವ ಮಹೇಂದ್ರ ಪರ್ವತದಲ್ಲಿ ತಪಸ್ಸು ಮಾಡಿ ಕೊಂಡಿದ್ದನು.

ಇತ್ತಲಾ ಕಶ್ಯಪ ಮುನಿಯು ಪರಶು ರಾಮನು ದಾನವಾಗಿ ಕೊಟ್ಟ ಭೂಮಂಡಲವನ್ನು ಯಾರಿಗೆ ಕೊಡ ಬೇಕೆಂದು ಯೋಚಿಸುತ್ತ, ಲೋಕದಲ್ಲಿ ಯಾರಾದರೂ, ಕ್ಷತ್ರಿಯರಿದ್ದಾರೋ? ಎಂದು ಹುಡುಕುತ್ತ, ಅಯೋಧ್ಯಾ ಪಟ್ಟಣಕ್ಕೆ ಬಂದು, ಅಲ್ಲಿ ಪರಶು ರಾಮನ ಸಂಹಾರ ಕಾಲದಲ್ಲಿ ಒಬ್ಬ ಹತ್ತು ವರುಷದ ಗಂಡು ಹುಡುಗನಿಗೆ ಹೆಂಗಸರೆಲ್ಲಾ ಕೂಡಿ, ಹೆಣ್ಣು ವೇಷವನ್ನು ಹಾಕಿ, ಸೀರೆಯನ್ನು ಉಡಿಸಿ, ಮರಸಿ, ಇಟ್ಟದ್ದರಿಂದ ಈ ಭೂಮಂಡಲವನ್ನೆಲ್ಲಾ ಅವನಿಗೆ ಕೊಟ್ಟು, ತಪಸ್ಸಿಗೆ ಹೋದನು. ಆ ಸೂರ್ಯ ವಂಶದಲ್ಲಿ ಮಹಾ ವಿಷ್ಣುವು ತನ್ನ ಪೂರ್ಣಾಂಶದಿಂದ ರಾವಣ ಸಂಹಾರಾರ್ಥವಾಗಿ ರಾಮನಾಗಿ ಅವತರಿಸಿ, ಶಿವ ಧನುಸ್ಸನ್ನು ಮುರಿದು, ಸೀತೆಯನ್ನು ಮದುವೆಯಾಗಿ, ಬರುವ ದಾರಿಯಲ್ಲಿ ಪರಶು ರಾಮನು

ಆ ರಾಮನೊಡನೆ ಯುದ್ಧಕ್ಕೆ ನಿಂತು, ತನ್ನ ವಿಷ್ಣು ಅಂಶವನ್ನು ಆ ರಾಮನಲ್ಲಿ ಒಪ್ಪಿಸಿ, ತಪಸ್ಸಿಗೆ ಹೊರಟು ಹೋದನು. ಆ ಬಳಿಕ ಚಕ್ರ ರಾಜನು ಕಾರ್ತ ವೀರ್ಯಾರ್ಜುನನ ಜನ್ಮವನ್ನು ನೀಗಿ, ಅಹಂಕಾರವಡಗಿ, ವೈಕುಂಠವನ್ನು ಹೊಕ್ಕು, ಮಹಾ ವಿಷ್ಣುವಿಗೆ ನಮಸ್ಕರಿಸಿ,—ಎಲೈ, ಮಹಾತ್ಮನೇ, ನಾನು ಅಲ್ಪನು, ಹೆಮ್ಮೆಗಾರನು. ನಿನ್ನ ಪಾದದಲ್ಲಿ ನಾನು ಮಾಡಿದ ಅಪರಾಧವನ್ನು ಕ್ಷಮಿಸಿ, ನನ್ನನ್ನು ಮನ್ನಿಸ ಬೇಕೆಂದು ಬೇಡಿ ಕೊಂಡದರಿಂದ, ಕರುಣಾಳುವಾದ ವಿಷ್ಣುವು ಮನ್ನಿಸಿ, ಯಥಾ ಪ್ರಕಾರ ತನ್ನ ಬಲಗೈಯಲ್ಲಿ ಧರಿಸಿ ಕೊಂಡನು.

81. The Seventh or Rama Incarnation. See Page 281—475.

೮೧. ರಾಮಾವತಾರದ ಕಥೆ. ಪಕ್ಕೆ ೨೮೧—೪೭೫.

82. The Eighth or Krishna Incarnation.

೮೨. ಕೃಷ್ಣಾವತಾರದ ಕಥೆ.

ದ್ವಾಪರ ಯುಗದಲ್ಲಿ ಧರಣೀ ದೇವಿಯು, ದುಷ್ಟರಾದ ದಾನವರೂ ದೈತ್ಯರೂ ಧರಣೀ ಪಾಲಕರೂ ಇವರ ಭಾರವನ್ನು ಸಹಿಸಲಾರದೆ, ತನ್ನನ್ನು ಸೃಷ್ಟಿಸಿದ ಚತುರ್ಮುಖ ಬ್ರಹ್ಮನ ಬಳಿಗೆ ಹೋಗಿ, ನಮಸ್ಕರಿಸಿ,—ಎಲೈ, ಸೃಷ್ಟಿ ಕರ್ತನೇ, ಈಗ ನನ್ನಲ್ಲಿ ಅನೇಕ ದುಷ್ಟರು ಹುಟ್ಟಿ, ಅವರ ಭಾರವನ್ನು ನಾನು ಸಹಿಸಲಾರೆನು. ಅವರನ್ನು ನಿಗ್ರಹಿಸಿ, ನನಗೆ ಭಾರವು ತಪ್ಪುವ ಹಾಗೆ ಮಾಡ ಬೇಕೆಂದು ಬೇಡಿ ಕೊಳ್ಳಲು; ಆತನು ಆ ಭೂಮಿಯನ್ನು ಕರೆದು ಕೊಂಡು, ಸಕಲ ದೇವ ಗಣ ಸಮೇತನಾಗಿ ಕ್ಷೀರ ಸಮುದ್ರವನ್ನು ಶೇರಿ, ಶ್ರೀ ಮಹಾ ವಿಷ್ಣುವನ್ನು ಅನೇಕ ವಿಧವಾಗಿ ಸ್ತುತಿಸಿ,—ದುಷ್ಟರಿಂದ ಧರಣಿಗೆ ಉಂಟಾಗಿರುವ ಭಾರವನ್ನು ಪರಿಹರಿಸ ಬೇಕೆಂದು, ಬೇಡಿ ಕೊಂಡನು.

ಆಗ ಗರುಡಾರೂಢನಾಗಿ ಶ್ರೀ ಮಹಾ ವಿಷ್ಣುವು ಬ್ರಹ್ಮಾದಿಗಳಿಗೆ ಪ್ರತ್ಯಕ್ಷನಾಗಿ, ಮುಗುಳು ನಗೆಯಿಂದ ಕೂಡಿ, ಆ ಬ್ರಹ್ಮನನ್ನು ಕುರಿತು—ಎಲೈ, ಬ್ರಹ್ಮನೇ, ನಾನು ಅನೇಕ ಅವತಾರಗಳನ್ನು ಮಾಡಿ, ಕೃತ ಯುಗದಲ್ಲಿ ಕೊಂದು ಹಾಕಿದಂಥ ದೈತ್ಯ ದಾನವರೂ, ತ್ರೇತಾ ಯುಗದಲ್ಲಿ ಸಂಹರಿಸಿದ ದೈತ್ಯರೂ, ಈ ಯುಗದಲ್ಲಿ ತಿರಿಗಿ ಹುಟ್ಟಿ, ಭೂಮಿ ಭಾರಕರಾಗಿರುವದನ್ನು ನಾನು ಬಲ್ಲೆನು. ನಿಮಗೆ ಹೇಳುವೆನು; ಕೇಳಿ.—ಕಾಲನೇಮಿ ಎಂಬ ದೈತ್ಯನು ಕಂಸಾಸುರನಾಗಿಯೂ, ವರಾಹಾವತಾರದಲ್ಲಿ ನನ್ನ ಸಮ್ಮಂಧದಿಂದ ಭೂಮಿಗೆ ಉಂಟಾದ ಮಗನು ನರಕಾಸುರನಾಗಿಯೂ, ಕುಂಭ ಕರ್ಣನು ದಂತವಕ್ರನಾ

ಗಿಯೂ, ರಾವಣನು ಶಿಶುಪಾಲನಾಗಿಯೂ, ನಾನು ರಸಾತಲಕ್ಕೆ ಮೆಟ್ಟಿದ ಬಲಿ ಚಕ್ರವರ್ತಿಯ ಮಗನು ಬಾಣಾಸುರನಾಗಿಯೂ, ಇನ್ನೂ ಅನೇಕ ದೈತ್ಯರು ಸಾಲ್ವ ಮಗಧಾದಿ ದುಷ್ಟರಾಗಿ ಹುಟ್ಟಿರುವರು. ದ್ವಾದಶಾದಿತ್ಯರ ತಾಯಿ ತಂದೆಗಳಾದ ಅದಿತಿಯೂ ಕಶ್ಯಪನೂ ವರುಣನ ಶಾಪದಿಂದ ವಸುದೇವನೆಂದೂ, ದೇವಕೀ ದೇವಿ ಎಂದೂ, ಹುಟ್ಟಿ, ಗಂಡ ಹೆಂಡರಾಗಿರುವರು. ಅವರಿಗೆ —ನಾನು ಮಗನಾಗಿ ಹುಟ್ಟುವೆನೆಂದು ಮೊದಲು ವರವನ್ನು ಕೊಟ್ಟಿರುವೆನು. ಅದೇ ಪ್ರಕಾರ ಅವರಿಗೆ ಮಗನಾಗಿ ಅವತರಿಸಿ, ಕಂಸಾದಿಗಳನ್ನು ಕೊಲ್ಲುವೆನು. ನೀವೆಲ್ಲರು ದೇವತೆಗಳ ಅಂಶದಿಂದ ನನಗೆ ಸಹಾಯರಾಗಿ ಹುಟ್ಟಿರಿ, ಎಂದು ಹೇಳಿ, ಅಭಯವನ್ನು ಕೊಟ್ಟು, ಕಳುಹಿಸಲು; ಅವರೆಲ್ಲರು ತಮ್ಮ ತಮ್ಮ ಲೋಕಗಳನ್ನು ಶೇರಿದರು.

ಇತ್ತಲು, ಆರ್ಯಾವರ್ತವೆಂಬ ಪುಣ್ಯ ದೇಶದಲ್ಲಿ ಮಧುರಾ ಪುರವೆಂಬ ಪಟ್ಟಣದಲ್ಲಿ ಧರ್ಮದಿಂದ ರಾಜ್ಯ ಭಾರವನ್ನು ಮಾಡುತ್ತಿದ್ದ ಯದು ವಂಶೋತ್ಪನ್ನನಾದ ಉಗ್ರಸೇನನಿಗೆ ಕ್ಷೀರ ಸಮುದ್ರದಲ್ಲಿ ವಿಷವು ಹುಟ್ಟಿದಂತೆ ಕಂಸನೆಂಬ ಒಬ್ಬ ದುಷ್ಟ ಮಗನು ಹುಟ್ಟಿ, ಯೌವನವನ್ನು ಹೊಂದಿ, ಪರಾಕ್ರಮ ಶಾಲಿಯಾಗಿ, ದುರ್ಮಾರ್ಗನಾದದರಿಂದ, ತಂದೆಯಾದ ಉಗ್ರಸೇನನನ್ನು ನಿರ್ಬಂಧಿಸಿ, ತಾನೇ ರಾಜ್ಯ ಭಾರವನ್ನಾಳುತ್ತ, ದುಷ್ಟರಿಗೆ ಸಂತೋಷಕರನಾಗಿಯೂ, ಶಿಷ್ಟರಿಗೆ ಎದೇಶೂಲನಾಗಿಯೂ ಇರುತ್ತ, ದೇವಕೀ ದೇವಿ ಎಂಬ ತನ್ನ ತಂಗಿಯು ಪ್ರಾಯದವಳಾದದ್ದನ್ನು ನೋಡಿ, ವಸುದೇವನೆಂಬವನಿಗೆ ಅತಿ ಸಂಭ್ರಮದಿಂದ ಮದುವೆಯನ್ನು ಮಾಡಿ ಕೊಟ್ಟು, ನಾಗವಲ್ಲಿಯ ದಿವಸ ಆ ಮದವಣಿಗರನ್ನು ದಿವ್ಯ ರಥದ ಮೇಲೆ ಕೂರಿಸಿ, ತಾನೇ ಸಾರಥ್ಯವನ್ನು ಮಾಡುತ್ತ, ರಾಜ ಬೀದಿಯಲ್ಲಿ ಮೆರವಣಿಗೆಯನ್ನು ಮಾಡಿಸಿ ಕೊಂಡು, ಬಹಳ ಸಂತೋಷದಿಂದ ಬರುತ್ತಿದ್ದನು. ಆವಾಗ,—ಎಲೈ, ಬುದ್ಧಿ ಇಲ್ಲದ ಕಂಸನೇ, ಕಣ್ಣು ಕಾಣದೆ ಯಾಕೆ ಇಷ್ಟು ಸಂತೋಷ ಪಡುತ್ತೀ? ಈ ನಿನ್ನ ತಂಗಿಯಾದ ದೇವಕಿಯ ಹೊಟ್ಟೆಯಲ್ಲಿ ಎಂಟನೆಯ ಬಸುರಿನಲ್ಲಿ ನಿನ್ನನ್ನು ಕೊಂದು ಹಾಕುವ ಮಗನು ಹುಟ್ಟುವನು ಎಂದು, ಆಕಾಶ ವಾಣಿಯು ಕೇಳಿ ಬಂದದರಿಂದ, ಈ ಕಂಸಾಸುರನು ಚಿಂತಾಕ್ರಾಂತನಾಗಿ, ಏನೂ ಮುಂತೋಚದೆ, ಕ್ರೂರ ಕರ್ಮಿಯಾದ್ದರಿಂದ—ಈ ದೇವಕಿ ಇದ್ದರಷ್ಟೆ ಮಕ್ಕಳು ಹುಟ್ಟುವದು! ಇವಳನ್ನೇ ಕಡಿದು ಹಾಕುವೆನೆಂದು ಕತ್ತಿಯನ್ನು ಹಿರಿಯಲು; ವಸುದೇವನು ವ್ಯಾಕುಲ ಚಿತ್ತನಾಗಿ, ಕಂಸನನ್ನು ಕುರಿತು—ಎಲೈ, ಪರಾಕ್ರಮಿಯೇ, ನೀನು ಇಂಥ ಒಳ್ಳೇ ಯದು ವಂಶದಲ್ಲಿ

ಹುಟ್ಟಿ, ಶೂರ ಪುರುಷನಾಗಿ, ಸ್ತ್ರೀ ಹತ್ಯಕ್ಕೆ ಎಳಸ ಬಹುದೇ? ಇದು ನಿನ್ನ
ವಿಕ್ರಮಕ್ಕೆ ಹೇಸಿಗೆಯಲ್ಲವೇ? ಇಂಥಾ ಕೆಲಸವನ್ನು ಬಿಡು. ಈಕೆ ಬೇರೆ ನಿನ್ನ
ನ್ನು ಕೊಲ್ಲುವದಿಲ್ಲವಷ್ಟೆ! ಈಕೆಯ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳಷ್ಟೆ ನಿನ್ನ
ನ್ನು ಕೊಲ್ಲುವರು! ಆದ್ದರಿಂದ ಇವಳ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನೆಲ್ಲಾ
ಹುಟ್ಟಿದ ಕ್ಷಣದಲ್ಲಿ ನಿನ್ನ ವಶಕ್ಕೆ ಕೊಡುವೆನು. ಅವುಗಳನ್ನು ನಿನ್ನ ಮನಸ್ಸಿಗೆ
ಬಂದ ಹಾಗೆ ಮಾಡಿ ಕೊಂಡು, ನೀನು ಬದುಕುವ ಸಂಗತಿ ನೋಡಿ ಕೊಳ್ಳ
ಬಹುದೆಂದು, ಸಾಮ ವಚನಗಳನ್ನು ಹೇಳಿದನು. ಕಂಸನು ಆ ಮಾತಿಗೆ ಒಪ್ಪಿ,
ಅವರನ್ನು ಕರೆದು ಕೊಂಡು, ಅರಮನೆಗೆ ಬಂದು, ಆ ವಸುದೇವ ದೇವಕಿಗ
ಳನ್ನು ಒಂದು ಅರಮನೆಯಲ್ಲಿ ಇರಿಸಿ, ಅವರು ಹೊರಗೆ ಹೊರಡದ ಹಾಗೆ
ಜಿಗಿಬಿಗಿಯಾಗಿ ಕಾವಲಿಟ್ಟು, ಅವಳು ಗರ್ಭಿಣಿಯಾಗಿ ಹೆತ್ತ ಕ್ಷಣದಲ್ಲಿಯೇ,
ತನಗೆ ಬಂದು ತಿಳಿಸುವಂತೆ ಆಪ್ತರನ್ನು ಇಟ್ಟು, ನಿಶ್ಚಿಂತನಾಗಿದ್ದನು. ಅಲ್ಲಿ ವಸು
ದೇವ ದೇವಕಿಗಳು ಪರಸ್ಪರ ಪ್ರೀತಿಯಿಂದ ಇರುತ್ತ ಇರುವಲ್ಲಿ, ಕೆಲವು ಕಾ
ಲದ ಮೇಲೆ ಆಕೆಯು ಗಂಡು ಮೊಗುವನ್ನು ಹೆತ್ತಳು. ಆ ಸುದ್ದಿಯನ್ನು ಕಂ
ಸನು ಕೇಳಿ, ಆ ಕ್ಷಣವೇ ಹೊಲೆಯ ಮನೆಯ ಒಳಗೆ ಬಂದು, ಆ ಶಿಶುವನ್ನು
ತೆಗೆದು ಕೊಂಡು, ಕಾಲನ್ನು ಹಿಡಿದು, ಅರೇ ಬಂಡೆಯ ಮೇಲೆ ಬಡಿದು,
ಕೊಂದು, ಹಾಕಿದನು. ಹೀಗೆ ಹುಟ್ಟಿದ ಆರು ಮಕ್ಕಳ ವರಿಗೂ ಕೊಂದು
ಹಾಕಿದನು.

ಇತ್ತಲಾ ಶ್ರೀ ಮಹಾ ವಿಷ್ಣುವು ಬ್ರಹ್ಮಾದಿ ದೇವತೆಗಳಿಗೆ ಅಭಯ ವಚ
ನವನ್ನು ಕೊಟ್ಟ ಪ್ರಕಾರ, ವಸುದೇವ ದೇವಕಿಯರಿಗೆ ಮಗನಾಗಿ ಹುಟ್ಟಿ, ದು
ಷ್ಟರನ್ನು ಸಂಹರಿಸ ಬೇಕೆಂದು ಎಣಿಸಿ, ಮೊದಲು ತನಗೆ ಹಾಸಿಗೆಯಾಗಿರುವ
ಮಹಾ ಶೇಷನನ್ನು ನೋಡಿ,—ಎಲೈ, ಫಣಿ ರಾಜನೇ, ನೀನು ಈಗಲೇ ಭೂಲೋ
ಕಕ್ಕೆ ಹೋಗಿ, ಮಥುರಾ ಪುರಿಯಲ್ಲಿ ಇರುವ ವಸುದೇವನ ಹೆಂಡತಿಯಾದ ದೇ
ವಕೀ ದೇವಿಯ ಬಸುರನ್ನು ಹೊಗುವನಾಗು ಎಂದು ಅಪ್ಪಣೇ ಕೊಟ್ಟದ
ರಿಂದ, ಅವನು ಅದೇ ಪ್ರಕಾರ ನಡೆದು ಕೊಂಡನು. ಆ ಬಳಿಕ ತನ್ನ ನಿಜ ಮಾ
ಯೆಯನ್ನು ಕರೆದು—ಎಲೈ, ಮಾಯೆಯೇ, ಈಗ ನನ್ನ ಹಾಸಿಗೆಯಾದ ಮಹಾ
ಶೇಷನು ದೇವಕೀ ದೇವಿಯ ಗರ್ಭವನ್ನು ಹೊಕ್ಕು, ಅಲ್ಲಿ ಶಿಶುವಿನಾಕಾರದಿಂ
ದಿರುವನು. ಮೊದಲು ನೀನು ಅಲ್ಲಿಗೆ ಹೋಗಿ, ಆ ದೇವಕೀ ದೇವಿಯ ಬಸುರಿ
ನಿಂದ ಶೆಳೆದು, ನಂದ ಗೋಕುಲದಲ್ಲಿರುವ ಆ ವಸುದೇವನ ಹಿರೀ ಹೆಂಡತಿಯಾದ
ರೋಹಿಣಿ ದೇವಿಯ ಹೊಟ್ಟೆಯಲ್ಲಿ ಇಟ್ಟು, ಆ ಮೇಲೆ ಅದೇ ಗೋಕುಲದಲ್ಲಿ

ರುವ ನಂದಗೋಪನೆಂಬ ಗೊಲ್ಲರ ಒಡೆಯನ ಮಡದಿಯಾದ ಯಶೋದೆ ಎಂ
ಬವಳ ಹೊಟ್ಟೆಯಲ್ಲಿ ಭಾದ್ರಪದ ಬಹುಳ ಅಷ್ಟಮಿಯ ದಿವಸದ ಅರ್ಧ ರಾತ್ರಿ
ಯಲ್ಲಿ ಹೆಣ್ಣು ಶಿಶುವಾಗಿ ಹುಟ್ಟು. ನೀನು ನನಗೆ ತಂಗಿಯಾಗುವದರಿಂದ, ದುರ್ಗಿ,
ಚಾಮುಂಡಿ, ಪಾರ್ವತಿ, ಕಾತ್ಯಾಯನಿ, ಕಾಳಿ, ಎಂಬ ಇತ್ಯಾದಿ ಹೆಸರುಗಳನ್ನು
ಧರಿಸಿ, ಶಿವನಿಗೆ ಹೆಂಡತಿಯಾಗಿ, ಕುರಿ, ಕೋಣ, ಕೋಳಿ, ಮುಂತಾದ ಪ್ರಾಣಿ
ಗಳ ಬಲಿಯನ್ನು ನಿನಗೆ ಕೊಟ್ಟು, ಯಾರು ನಿನ್ನನ್ನು ಭಕ್ತಿಯಿಂದ ಪೂಜಿಸು
ವರೋ, ಅವರಿಗೆ ನೀನು ಬೇಕಾದ ಇಷ್ಟಾರ್ಥಗಳನ್ನು ಕೊಡುತ್ತ, ಲೋಕದ
ಜನಗಳಿಂದ ಪೂಜಿಸಿ ಕೊಂಡು ಇರು ಎಂದು, ಅಪ್ಪಣೆ ಕೊಟ್ಟು, ಕಳುಹಿಸಲು;
ಅವಳು ಅದೇ ಪ್ರಕಾರ ಮಧುರಾ ಪುರಿಗೆ ಬಂದು, ದೇವಕಿಯ ಬಸುರಿನಿಂದ
ಶಿಶುವನ್ನು ಸೆಳೆದು, ರೋಹಿಣಿಯ ಗರ್ಭದಲ್ಲಿ ಹಾಕಿ, ತಾನು ಯಶೋದೆಯ
ಹೊಟ್ಟೆಯನ್ನು ಹೊಕ್ಕಳು.

ಇತ್ತಲಾ ಮಧುರಾ ಪುರದಲ್ಲಿ ದೇವಕೀ ದೇವಿಯು ಏಳನೆ ಬಸುರಾಗಿದ್ದು,
ಮೈ ಇಳಿದಳು ಎಂದು ನೋಡಿದ್ದ ಹೆಂಗಸರು ತಿಳಿದು, ಕಂಸನಿಗೆ ಹೇಳಿದರು.
ಆ ಬಳಿಕ ಕೆಲವು ದಿವಸದ ಮೇಲೆ, ಮಹಾ ವಿಷ್ಣುವು ಆ ದೇವಕೀ ದೇವಿಯ
ಗರ್ಭವನ್ನು ಪ್ರವೇಶಿಸಲು; ಆಕೆಯು ಎಂಟನೇ ಬಸುರಾದಳೆಂದು ಕಂಸನಿಗೆ
ಸುದ್ದಿ ಹುಟ್ಟಿ,—ಈ ಬಸುರಿನಲ್ಲಿ ಹುಟ್ಟುವ ಕೂಸೇ ನನ್ನನ್ನು ಕೊಲ್ಲುವಂಥಾದ್ದು.
ಇದನ್ನು ಕೊಂದು ಬಿಟ್ಟರೆ, ನಾನು ಸುಖವಾಗಿರ ಬಹುದು ಎಂದು, ಮೊದಲಿಗಿಂ
ತಲು ಬಹಳವಾಗಿ ಅವರ ಮೇಲೆ ಕಾವಲನ್ನು ಇಟ್ಟು, ತಾನೂ ಬಹು ಜಾಗ
ರೂಕನಾಗಿ ವಿಚಾರಿಸಿ ಕೊಳ್ಳುತ್ತಾ ಇದ್ದನು.

ಇತ್ತಲಾ ನಂದ ಗೋಕುಲದಲ್ಲಿ ವಸುದೇವನ ಹಿರೀ ಹೆಂಡತಿಯಾದ ರೋಹಿ
ಣೀ ದೇವಿಯು ಪರಿಪೂರ್ಣ ಗರ್ಭಿಣಿಯಾಗಿ, ಶುಭ ಮುಹೂರ್ತದಲ್ಲಿ ಮಹಾ
ಶೇಷನು ಭಗವಂತನಿಗೆ ಸಹಾಯವಾಗಿ ಶಿಶು ರೂಪಿನಿಂದ ಶುಭ್ರ ವರ್ಣನಾಗಿ ಹು
ಟ್ಟಲು; ನೋಡಿದ ಸಮಸ್ತ ಜನರು—ಮೋಕ್ಷ ಮಾರ್ಗದಲ್ಲಿ ದಿನ ಚರಿಯಲ್ಲಿಯೂ
ನಡೆದು, ಅಲಸಿ, ವಿಶ್ರಮಿಸಿ ಕೊಳ್ಳುವದಕ್ಕಾಗಿ ಅಮೃತ ಕರನಾದ ಚಂದ್ರನು
ಭೂಮಿಯಲ್ಲಿ ಈ ಕೂಸಾಗಿ ಹುಟ್ಟಿದನೆಂದು ಊಹಿಸುತ್ತಿದ್ದರು. ಆ ಮೇಲೆ
ಮಧುರಾ ಪುರಿಯಲ್ಲಿ, ಭಾದ್ರಪದ ಬಹುಳ ಅಷ್ಟಮೀ ದಿವಸ ಅರ್ಧ ರಾತ್ರಿಯಲ್ಲಿ,
ಎಳ್ಳಗಸೇ ಹೂವಿನ ಹಾಗೆ ನೀಲವಾದ ಮೈ ಬಣ್ಣವುಳ್ಳವನಾಗಿ, ಹೊಂಬಟ್ಟೆ
ಯನ್ನು ಹೊದ್ದು, ಕೌಂಸ್ತುಭ ರತ್ನದಿಂದ ಹೊಳೆಯುವ ಎದೆಯೂ, ಶಂಖ,
ಚಕ್ರ, ಗದಾ, ಪದ್ಮಗಳೆಂಬ ಆಯುಧಗಳಿಂದ ಒಪ್ಪಿರುವ ಕೈಗಳೂ, ಉಳ್ಳವ

ನಾಗಿ, ದೈತ್ಯರೆಂಬ ಕಾಡಿಗೆ ಕಾಡ್ಗಿಚ್ಚಾದ ಮಹಾ ವಿಷ್ಣುವು ಆ ವಸುದೇವ ದೇವಕಿಗಳಿಗೆ ಪ್ರತ್ಯಕ್ಷವಾಗಿ ಕಾಣಿಸಿ ಕೊಂಡನು.

ಆತನನ್ನು ನೋಡಿ, ವಸುದೇವನು ಸಂತೋಷ ಸಮುದ್ರದಲ್ಲಿ ಮುಳುಗಿ, ಕಣ್ಣುಗಳಲ್ಲಿ ಆನಂದ ಬಾಷ್ಪವನ್ನು ಸುರಿಸುತ್ತ, ಬಾರಿ ಬಾರಿಗೂ ಅಡ್ಡ ಬಿದ್ದು, ಹೊಗಳುತ್ತ, ಎದ್ದು, ಕೈ ಮುಗಿದು ನಿಂತು ಕೊಂಡು, ಮೈಯೊಳಗೆದ್ದ ರೋಮಾಂಚಗಳಿಂದ ಕೂಡಿ, ಆ ಮಹಾ ವಿಷ್ಣುವನ್ನು ಕುರಿತು ತಮಗೆ ಕಂಸನು ಮಾಡಿದ ದ್ರೋಹಗಳನ್ನೆಲ್ಲಾ ಹೇಳಿ ಕೊಳ್ಳಲು; ಕಮಲ ನಾಭನು ಕರುಣಾಸಾರ ಹೃದಯನಾಗಿ,—ಮೊದಲು ನಿಮಗೆ ಹುಟ್ಟಿದ ಆರು ಮಕ್ಕಳು ಪಾತಾಳ ಲೋಕದಲ್ಲಿರುವ ಹಿರಣ್ಯಕಶಿಪುವಿನ ಮಕ್ಕಳು. ಅವರು ನನ್ನ ಅಪ್ಪಣೆಯಿಂದಲೇ ನಿಮ್ಮಲ್ಲಿ ಹುಟ್ಟಿ, ಸತ್ತು ಹೋದರು. ಏಳನೇ ಬಸುರಿನಲ್ಲಿದ್ದ ಶಿಶುವನ್ನು ಕಂಸನು ಕೊಲ್ಲುವನೆಂಬ ಎಣಿಕೆಯಿಂದ ನಾನೇ ತೆಗಿಸಿ, ನಿನ್ನ ಹಿರೀ ಹೆಂಡತಿಯಾದ ರೋಹಿಣಿಯಲ್ಲಿ ನನ್ನ ಮಾಯೆಯಿಂದ ನಿಲ್ಲಿಸಿದೆನು. ಆ ಮಹಾತ್ಮನು ಗೋಕುಲದಲ್ಲಿ ಹುಟ್ಟಿರುವನು. ನನ್ನ ಒಡ ಹುಟ್ಟುಗಳಾದ ಶಿಶುಗಳನ್ನು ಕೊಂದು, ತನ್ನ ತಂದೆಯಾದ ಉಗ್ರಸೇನನನ್ನು ಬಂಧನದಲ್ಲಿರಿಸಿ, ನಿಮ್ಮನ್ನು ಹಿಂಸಿಸುತ್ತ, ಲೋಕ ಕಂಟಕನಾಗಿರುವ ಈ ಕಂಸನನ್ನು ಕೊಂದು ಹಾಕುವೆನು. ನೀನು ಶಿಶುವಾಗುವ ನನ್ನನ್ನು ಎತ್ತಿ ಕೊಂಡು ಹೋಗಿ, ನಂದ ಗೋಕುಲದಲ್ಲಿ ಒಂದು ಹೆಣ್ಣು ಕೂಸನ್ನು ಹೆತ್ತು, ನನ್ನ ಮಾಯೆಯಿಂದ ಜ್ಞಾನ ತಪ್ಪಿ ಬಿದ್ದಿರುವ ನಂದಗೋಪನ ಹೆಂಡತಿಯಾದ ಯಶೋದೆಯ ಮಗ್ಗುಲಲ್ಲಿ ಇಟ್ಟು, ಅಲ್ಲಿ ಹುಟ್ಟಿರುವ ಹೆಣ್ಣು ಶಿಶುವನ್ನು ತೆಗೆದು ಕೊಂಡು, ತಿರಿಗಿ ಬಂದು, ದೇವಕೀ ದೇವಿಗೆ ಕೊಡು. ಈ ಕೆಲಸವನ್ನು ಮಾಡುವ ನಿನ್ನನ್ನು ಒಬ್ಬರೂ ಅರಿಯದಂತೆ ವಿಷ್ಣು ಮಾಯೆಯು ಮಾಡುವದು, ಎಂದು ಹೇಳಿ, ಆ ದಿವ್ಯ ರೂಪವನ್ನು ಅಡಗಿಸಿ, ಶಿಶು ರೂಪವನ್ನು ಕೈ ಕೊಂಡು, ವಸುದೇವ ದೇವಕಿಗಳನ್ನು ತನ್ನ ಮಾಯೆಯಿಂದ ಮುಚ್ಚಲು; ಅವರು ಮಾಯಾವಿಷ್ಟರಾಗಿ,—ಈಗ ನಾವು ಯಾರೊಡನೆ ಮಾತಾಡಿದೆವು? ನಮಗೆ ಯಾರು ಉತ್ತರವನ್ನು ಕೊಟ್ಟರು? ಈ ಶಿಶು ಬೇರೆ ಅಲ್ಲ; ನಾರಾಯಣನೇ ಬಂದು, ನುಡಿದು ಹೋದನೋ, ಏನೋ? ಎಂದು ಭ್ರಾಂತಿ ಗೊಂಡರು.

ಆ ಬಳಿಕ ವಸುದೇವನ ಕಾಲಿಗೆ ಕಂಸನು ಹಾಕಿದ್ದ ಸಂಕೋಲೆಯು ತನ್ನೊಳಗೆ ತಾನೇ ಕಳಚಿ, ನೆಲಕ್ಕೆ ಬಿದ್ದದರಿಂದ, ವಸುದೇವನು ಶಿಶುವನ್ನು ಬೇಗ ಎತ್ತಿ ಕೊಂಡು ಹೊರಡುವಲ್ಲಿ, ಕಾವಲುಗಾರರೆಲ್ಲರು ವಿಷ್ಣು ಮಾಯೆ

ಯಿಂದ ಮೋಹಿತರಾಗಿ, ಎಚ್ಚರವಿಲ್ಲದೆ ಬಿದ್ದಿದ್ದರು. ಅಗಣಿಗಳು ಹಾಕಿದ್ದ ಊರು ಬಾಗಿಲ ಕದಗಳು ತಮ್ಮೊಳಗೆ ತಾವೇ ತೆರೆದವು. ಆಕಾಶವು ಮೇಘಗಳಿಂದ ತುಂಬಿ, ತುಂತುರು ಹನಿಗಳನ್ನು ಸುರಿಸುತ್ತಿತ್ತು. ಈ ಪ್ರಕಾರವಾದ ಅದ್ಭುತ ವ್ಯಾಪಾರಗಳನ್ನು ನೋಡುತ್ತ, ಕಾರ ಕಗ್ಗತ್ತಲೆಯಲ್ಲಿ ಊರನ್ನು ಬಿಟ್ಟು, ಈಚೆಗೆ ಬರಲು; ಮಹಾ ಶೇಷನು ಬಂದು, ಮಗುವು ಮಳೆಯಿಂದ ನೆನೆಯದ ಹಾಗೆ ತನ್ನ ಸಾವಿರ ಹೆಡೆಗಳನ್ನು ವಸುದೇವನ ಮೇಲೆ ಕೊಡೆಯಾಗಿ ಹಿಡಿದು, ತನ್ನ ಹೆಡೆಗಳ ಮಾಣಿಕದ ಬೆಳಕಿನಿಂದ ಗೋಕುಲಕ್ಕೆ ಹೋಗುವ ದಾರಿಯನ್ನು ಚನ್ನಾಗಿ ಕಾಣಿಸುವ ಹಾಗೆ ಮಾಡಿದನು. ಆ ಮೇಲೆ ವಸುದೇವನು ವಿಷ್ಣು ಮಾಯಾ ಶಕ್ತಿಯಿಂದ ಕ್ಷಣ ಮಾತ್ರದಲ್ಲಿ ಗೋಕುಲದ ಬಳಿಗೆ ಬಂದು, ಅಲ್ಲಿ ಎರಡು ಧಡವೂ ಕೂಡಿ ಉಬ್ಬಿ ಹರಿಯುವ ಯಮುನಾ ನದಿಯು ಕಾಲುಹೊಳೆಯಾಗಿ, ದಾರಿಯನ್ನು ಕೊಡಲು; ಅದನ್ನು ದಾಟಿ, ನಂದಗೋಪನ ಹೆಂಡತಿ ಯಶೋದೆಯು ಹೆರುವ ಮನೆಯನ್ನು ಹೊಕ್ಕು, ಆ ಶಿಶುವನ್ನು ಅಲ್ಲಿಟ್ಟು, ಅಲ್ಲಿದ್ದ ಹೆಣ್ಣು ಶಿಶುವನ್ನು ಎತ್ತಿ ಕೊಂಡು, ಒಬ್ಬರೂ ಅರಿಯದಂತೆ ಯಮುನಾ ನದಿಯನ್ನು ದಾಟಿ, ಈಚೇ ಧಡಕ್ಕೆ ಬರುವದು, ಆ ನದಿಯು ಮೊದಲಿನಂತೆ ನೀರು ತುಂಬಿ ಹರಿಯಿತು. ಮತ್ತೆ ವಸುದೇವನು ಅಲ್ಲಿಂದ ಹೊರಟು, ಮಥುರಾಪುರಿಯನ್ನು ಹೊಗಲು; ಊರು ಬಾಗಿಲುಗಳ ಕದಗಳ ಅಗಣಿಗಳು ಮೊದಲಿನ ಹಾಗೆ ಹಾಕಿ ಕೊಂಡವು. ಅಲ್ಲಿಂದ ಅರಮನೆಯನ್ನು ಶೇರಿ, ಆ ಹೆಣ್ಣು ಶಿಶುವನ್ನು ತನ್ನ ಹೆಂಡತಿಯಾದ ದೇವಕೀ ದೇವಿಯ ಕೈಯಲ್ಲಿ ಕೊಟ್ಟು, ಕಳಚಿ ಹೋಗಿದ್ದ ಸಂಕೋಲೆಯನ್ನು ತೆಗೆದು, ತನ್ನ ಕಾಲುಗಳಿಗೆ ಕೂಡಿಸಿ ಕೊಳ್ಳುವಾಗ, ಅದು ಯಥಾ ಪ್ರಕಾರ ಶೇರಿ ಕೊಂಡಿತು.

ಅತ್ತ ಯಶೋದೆ ಎಚ್ಚತ್ತು, ಗಂಡು ಶಿಶುವನ್ನು ನೋಡಿ, ಸಂತೋಷ ಪಟ್ಟಳು. ಇತ್ತ ಆ ಹೆಣ್ಣು ಕೂಸು ಆರ್ಭಟಿಸಿ ಅಳುವದನ್ನು ಕೇಳಿ, ಕಾವಲುಗಾರರೆಲ್ಲರು ಎಚ್ಚತ್ತು ಎದ್ದು, ಮಲಗಿದ್ದ ಕಂಸನನ್ನು ಎಬ್ಬಿಸಿ,—ದೇವಕಿ ಹೆತ್ತಳೆಂದು ಸುದ್ದಿಯನ್ನು ಮುಟ್ಟಿಸಲು; ಆತನು ಎಡವಿ ಬೀಳುವದನ್ನು ಕಾಣದೆ, ಬೇಗನೆ ಓಡಿ ಬಂದು, ಆ ಹೆಣ್ಣು ಶಿಶುವನ್ನು ಶೆಳೆದು ಕೊಂಡು, ವಧ್ಯ ಸ್ಥಾನದ ಅರೇ ಬಂಡೆಯ ಬಳಿಗೆ ಬಂದು, ಶಿಶುವಿನ ಎರಡು ಕಾಲುಗಳನ್ನು ಕೈಯಲ್ಲಿ ಹಿಡು ಕೊಂಡು, ಬಂಡೆಯ ಮೇಲೆ ಬಡಿಯುವದಕ್ಕೆ ಎತ್ತಲು; ಆ ಶಿಶುವು ಇವನ ಕೈಯಿಂದ ನುಣುಚಿ ಕೊಂಡು, ಆಕಾಶಕ್ಕೆ ಹಾರಿ, ಅಲ್ಲಿ ದುರ್ಗಿಯ ಸ್ವರೂಪವನ್ನು ಧರಿಸಿ, ಎಂಟು ತೋಳುಗಳುಳ್ಳವಳಾಗಿ, ಅಟ್ಟಹಾಸವನ್ನು ಮಾಡಿ—ಎಲೈ,

ಹೆಡ್ಡನಾದ ಕಂಸನೇ, ನಾನು ನಿನ್ನ ಪ್ರಾಣವನ್ನು ಕೊಲ್ಲುವವಳಲ್ಲ; ನಿನ್ನ ಪ್ರಾಣಕ್ಕೆ ಮುನಿಯುವವನು ಭೂಮಿಯಲ್ಲಿ ಹುಟ್ಟಿ, ಬೆಳೆಯುತ್ತಿದ್ದಾನೆ, ಎಂದು ಹೇಳಿತು.

ಇತ್ತಲಾ ಕಂಸನು ದುರ್ಗಿಯ ಮಾತನ್ನು ಕೇಳಿ, ಬಹಳ ಆಶ್ಚರ್ಯ ಪಟ್ಟು, ಬಹು ಚಿಂತಾಕ್ರಾಂತನಾಗಿ,—ಅಯ್ಯೋ, ವ್ಯರ್ಥವಾಗಿ ಆಕಾಶ ವಾಣಿಯ ಸುಳ್ಳು ಮಾತನ್ನು ಕೇಳಿ, ತಂಗಿಯಾದ ದೇವಕೀ ದೇವಿಯನ್ನೂ ವಸುದೇವನನ್ನೂ ಬಹಳವಾಗಿ ಹಿಂಸಿಸಿ, ಅವರ ಶಿಶುಗಳನ್ನು ಕೊಂದೆನು ಎಂದು ಪಶ್ಚಾತ್ತಾಪ ಗೊಂಡು, ಅವರ ಬಳಿಗೆ ಹೋಗಿ, ಒಳ್ಳೇ ಮಾತುಗಳಿಂದ ಅವರನ್ನು ಸಮಾಧಾನ ಪಡಿಸಿ, ವಸುದೇವನ ಕಾಲುಗಳ ಸಂಕೋಲೆಯನ್ನು ತೆಗಿಸಿ, ಸೆರೆಯಿಂದ ಬಿಡಿಸಿ,—ಸುಖವಾಗಿರ್ರಿ ಎಂದು ಹೇಳಿ, ತಾನು ಏಕಾಂತದಲ್ಲಿ ಕುಳಿತು ಕೊಂಡು, ತನಗೆ ಬೇಕಾದ ಪೂತನಿ, ಶಕಟಾಸುರ, ಧೇನುಕಾಸುರ, ಪ್ರಲಂಬಾಸುರ, ಅರಿಷ್ಟಾಸುರ, ಕೇಶಿ, ಮೊದಲಾದವರನ್ನು ಕೂರಿಸಿ ಕೊಂಡು,—ನನ್ನ ಶತ್ರುವು ಒಂದು ಸ್ಥಾನದಲ್ಲಿ ಹುಟ್ಟಿರುವನಂತೆ. ನೀವೆಲ್ಲರು ಒಂದೊಂದು ನೆವದಿಂದ ಒಂದೊಂದು ವೇಷವನ್ನು ಹಾಕಿ ಕೊಂಡು, ಲೋಕದಲ್ಲೆಲ್ಲಾ ಕಡೆಯಲ್ಲಿಯೂ ತಿರುಗುತ್ತ, ಹುಟ್ಟಿರುವ ಶಿಶುಗಳನ್ನೆಲ್ಲಾ ಕೊಂದು ಹಾಕುತ್ತ, ಒಂದು ವೇಳೆಗೆ ತಪ್ಪಿಸಿ ಕೊಂಡ ಶಿಶುಗಳನ್ನು ಮತ್ತೊಂದು ವೇಳೆ ಕೊಲ್ಲುತ್ತ, ಹೀಗೆ ಈಗ ಲೋಕದಲ್ಲಿ ಹುಟ್ಟಿರುವ ಶಿಶುಗಳನ್ನೆಲ್ಲಾ ಕೊಂದಿಕ್ಕಿರಿ ಎಂದು ಹೇಳಿ, ಆತಂಕ ಹೃದಯನಾಗಿದ್ದನು.

ಹೀಗಿರುವಲ್ಲಿ, ಈ ಕಂಸನಿಗೆ ಕಟ್ಟಳೆಯ ಪ್ರಕಾರ ವರ್ಷ ವರ್ಷವು ಕೊಡುವ ಕಪ್ಪವನ್ನು ತೆಗೆದು ಕೊಂಡು, ಗೋಕುಲದಿಂದ ಬಂದು, ಕಪ್ಪವನ್ನು ಒಪ್ಪಿಸಿ, ಬಿಡಾರದಲ್ಲಿ ಇಳಿದು ಕೊಂಡಿರುವ ನಂದಗೋಪನ ಬಳಿಗೆ ವಸುದೇವನು ರಹಸ್ಯವಾಗಿ ಬಂದು,—ಎಲೈ, ಪ್ರಿಯನೇ, ನಿನ್ನ ಹೆಂಡತಿಯಾದ ಯಶೋದಾ ದೇವಿಯು ಗಂಡು ಮಗನನ್ನು ಹೆತ್ತಳು ಎಂಬ ಸುದ್ದಿಯನ್ನು ಕೇಳಿ, ನನಗೆ ಬಹಳ ಸಂತೋಷವಾಯಿತು. ಅಲ್ಲಿ ನನ್ನ ಹಿರೀ ಹೆಂಡತಿಯಾದ ರೋಹಿಣಿಯು ಹೆತ್ತಿರುವ ನನ್ನ ಮಗನನ್ನು ಕೂಡ ನಿಮ್ಮ ಮಗನ ಜೊತೆಯಲ್ಲಿ ಇವನೂ ಒಬ್ಬ ನಿಮ್ಮ ಮಗನೆಂದು ಎಣಿಸಿ, ನನ್ನ ಮಗನು ಪರಾಕ್ರಮಿಯಾಗುವ ವರಿಗೂ ಕಾಪಾಡ ಬೇಕೆಂದು ಹೇಳಲು; ನಂದಗೋಪನು ಬಹಳ ಸಂತೋಷ ಪಟ್ಟು, ವಸುದೇವನನ್ನು ಕುರಿತು—ಅದಕ್ಕೆ ಸಂದೇಹವೇ? ನನ್ನ ಮಗನಿಗಿಂತ ಹೆಚ್ಚಾಗಿ ನಿಮ್ಮ ಮಗನನ್ನು ಕಂಡು ಕೊಂಡಿರುವೆನು. ನೀವು ತುಸವಾದರೂ ನಿಮ್ಮ ಮ

ನಸ್ಸಿನಲ್ಲಿ ಅಂದೇಶ ಪಡ ಬೇಡಿರಿ, ಎಂದು ನಂಬುಗೆಯನ್ನು ಕೊಟ್ಟು, ಮನ್ನಿಸಿ, ಮನೆಗೆ ಕಳುಹಿಸಿ, ತಾನು ಕಂಸನ ಅಪ್ಪಣೆಯನ್ನು ತೆಗೆದು ಕೊಂಡು, ಗೋಕುಲಕ್ಕೆ ಬಂದು, ಯಶೋದಾ ರೋಹಿಣಿಯರ ಮಕ್ಕಳನ್ನು ನೋಡಿ, ಸಂತೋಷ ಪಟ್ಟು ಕೊಂಡಿದ್ದನು.

ಹೀಗಿರುವಲ್ಲಿ ಕಂಸನು ಕಳುಹಿಸಿದ್ದ ಪೂತನಿ ಎಂಬ ರಾಕ್ಷಸಿಯು ಯಶೋದೆಯ ಆಕಾರವನ್ನು ತಾಳಿ, ಆ ಯಶೋದೆಯು ಹೊರಗೆ ಹೋಗಿದ್ದ ವೇಳೆಯಲ್ಲಿ, ಹುಟ್ಟಿ ಆರು ದಿವಸವಾದ ಮಗುವನ್ನು ಎತ್ತಿ ಕೊಂಡು,—ವಿಷದ ಮೊಲೆಯನ್ನು ಉಣ್ಣಿಸಿ ಕೊಲ್ಲುವೆನು ಎಂದೆಣಿಸಿ, ಮೊಲೆಯನ್ನು ಉಣ್ಣ ಕೊಡಲು; ಆ ಬಾಲಕನು ಮೊಲೆಯ ತುದಿಯನ್ನು ಬಾಯಿಯಲ್ಲಿ ಕಚ್ಚಿ, ಅವಳ ನೆತ್ತರು ನೆಣ ಖಂಡಗಳನ್ನು ಹೀರಿ—ಓಹೋ, ಬಿಡು, ಬಿಡು! ಎಂದು ಒರಲುತ್ತ, ಕೆಳಗೆ ಬಿದ್ದ ಅವಳ ಜೀವವನ್ನು ಹೀರಿ ಬಿಟ್ಟನು. ಆಗ ಮಹಾ ಘೋರವಾದ ರಾಕ್ಷಸಿಯ ಆಕಾರದ ಹೆಣವನ್ನೂ, ಆ ಹೆಣದ ಮೊಲೆಯ ತೊಟ್ಟನ್ನು ತುದಿ ಬಾಯಿಯೊಳಗೆ ಇಟ್ಟು ಕಚ್ಚಿರುವ ಶಿಶುವನ್ನೂ, ಯಶೋದೆಯು ಕಂಡು, ಬೆದರಿ, ಬೆಜ್ಜರಗೊಂಡು, ಬೇಗ ಹೋಗಿ, ಮಗುವನ್ನು ಎತ್ತಿ ಕೊಂಡು, ಆ ರಾಕ್ಷಸಿಯ ಹೆಣವನ್ನು, ಗಂಡಗೆ ಹೇಳಿ ಹೊರಗೆ ಹಾಕಿಸಿ ಬಿಟ್ಟು, ಮಂತ್ರಜ್ಞರನ್ನು ಕರಿಸಿ, ಮಗುವಿಗೆ ಭೀತಿ ಶಂಕೆಯು ಪರಿಹರವಾಗುವ ಹಾಗೆ ಯಂತ್ರವನ್ನು ಕಟ್ಟಿಸಿ, ಮಂತ್ರಿಸಿ, ವಿಭೂತಿಯನ್ನು ಹಣೆಗೆ ಇಡಿಸಿದಳು. ನೆಂಟರಾದ ಮುದುಕಿಗಳು ಬಂದು, ಮಗುವನ್ನು ತೂಪಿರಿದು, ನೆಟ್ಟಿಗೆಗಳನ್ನು ಮುರಿದು, ಹರಸಿ ಹೋದರು. ಆ ಬಳಿಕ ವಸುದೇವನ ಅಪ್ಪಣೆಯಿಂದ ಯದು ವಂಶದ ಗಾರ್ಗ್ಯನೆಂಬ ಪುರೋಹಿತನು ವೇಷವನ್ನು ಮರಸಿ ಕೊಂಡು, ರಹಸ್ಯವಾಗಿ ಹನ್ನೆರಡನೇ ದಿವಸಕ್ಕೆ ಗೋಕುಲಕ್ಕೆ ಬಂದು, ರೋಹಿಣೀ ದೇವಕಿಯರ ಮಕ್ಕಳಿಗೆ ರಾಮ ಕೃಷ್ಣರೆಂಬ ಹೆಸರನ್ನಿಟ್ಟು, ಹರಸಿ ಹೋದನು. ಅನಂತರದಲ್ಲಿ ಯಶೋದೆಯು ನಂಟ ಇಷ್ಟರಾದ ಮುತ್ತೈದೆಯರನ್ನು ಕರಿಸಿ, ಬಾಯನಗಳನ್ನು ಕೊಟ್ಟು, ಚಿನ್ನದ ತೊಟ್ಟಿಲಿನಲ್ಲಿ ಮಗುವನ್ನು ಮಲಗಿಸಿ, ಉಡುಧಾರವನ್ನು ಕಟ್ಟಿ, ಜೋಗುಳವಾಡಿ, ಮಗುವಿಗೆ ತೊಟ್ಟಲಿಟ್ಟಳು. ಕೃಷ್ಣನು ಬೆಳೆದ ಕೆಲವು ದಿವಸಕ್ಕೆ ಅಕಾರಣವಾದ ನಗೆ ಅಳುವಿಕೆಗಳಿಂದಲೂ, ಉತ್ತಾನ ಶಯನದಿಂದಲೂ, ತಾಯಿ ತಂದೆಗಳನ್ನು ಸಂತೋಷ ಪಡಿಸುತ್ತ ಇದ್ದನು.

ಹೀಗಿರುವಲ್ಲಿ ಒಂದು ದಿವಸ ಯಶೋದೆಯು ಮಗುವನ್ನು ತೊಟ್ಟಿಲಿನಲ್ಲಿ ಮಲಗಿಸಿ, ಪರಿಚಾರಕಿಯನ್ನು ಕೂಡಿ ಕೊಂಡು, ಕಾಳಿಂದೀ ನದಿಗೆ ಹೋದ

ಕಾಲದಲ್ಲಿ, ಶಕಟಾಸುರನು ನಂದಗೋಪನ ಮನೆಯಲ್ಲಿ ಇಟ್ಟಿರುವ ಗಾಡಿಯ ಬಂಡಿಯಲ್ಲಿ ಸೇರಿ ಕೊಂಡು—ತೊಟ್ಟಿಲಿನಲ್ಲಿ ಮಲಗಿರುವ ಮೊಗುವನ್ನು ಕೊಲ್ಲು ವೆನೆಂದು, ಆ ಭಂಡಿಯನ್ನು ತೊಟ್ಟಿಲ ಮೇಲೆ ತಳ್ಳಲು; ಆ ಭಂಡಿಗೆ ಮೊಗುವಿನ ಕಾಲ ಉಂಗುಟವು ತಗಲಿ, ಆ ಶಕಟಾಸುರನು ಸತ್ತು, ಬಿದ್ದು, ಒಂದು ಪರ್ವತಾ ಕಾರದ ಹಾಗೆ ಅವನ ಹೆಣವು ಕಾಣಿಸಲು;—ಈ ಹಸು ಗೂಸಿನ ಸಾಹಸವೆಷ್ಟೋ! ಎಂದು,—ಕಂಡವರು ಆಶ್ಚರ್ಯ ಪಟ್ಟಾರು ಎನುತ್ತ, ಆ ಅಸುರನ ಹೆಣವನ್ನು ಹರಿ ಯು ಮಾಯವನ್ನು ಮಾಡಿ, ತೊಟ್ಟಿಲಲ್ಲಿ ಕಾಲ ಬೆರಳನ್ನು ಬಾಯಿಯಲ್ಲಿ ಇಟ್ಟು ಕೊಂಡು, ಚೀಪುತ್ತ, ಆಡುತ್ತಿದ್ದನು. ಅಷ್ಟರಲ್ಲಿ ಗೋಪಿಯು ಬಂದು, ನುಚ್ಚು ನುರಿಯಾಗಿರುವ ಭಂಡಿಯನ್ನು ನೋಡಿ—ಇದೇನು? ಈ ಭಂಡಿಯು ಇದ್ದಕ್ಕಿದ್ದ ಹಾಗೆ ಹೀಗೆ ಚೂರಾಯಿತು! ಮೊಗು ಎಷ್ಟು ಹೆದರಿ ಕೊಂಡಿತೋ? ಎಂದು ಎತ್ತಿ ಕೊಂಡು, ತೂಪಿರಿದು, ಗಂಡನಿಗೆ ಹೇಳಿ, ಬಹಳವಾಗಿ ಶಾಂತಿ ಕರ್ಮಗ ಳನ್ನು ಮಗುವಿಗೆ ಮಾಡಿಸಿದಳು.

ಆ ಮೇಲೆ ಕೃಷ್ಣನು ಮನೆಯಲ್ಲಿ ನಿಲ್ಲದೆ, ಬೀದಿ ಬೀದಿಗೆ ಓಡಿ ಓಡಿ ಹೋಗು ತ್ತಿರಲು; ಗೋಪಿಯು ಕೋಪ ಗೊಂಡು,—ಎಷ್ಟು ಹೇಳಿದರೂ, ಮನೇ ಬಿಟ್ಟು ಹೋಗುವದನ್ನು ಬಿಡುವದಿಲ್ಲವಲ್ಲಾ! ಎಂದು ಧಟ್ಟಿಸಿ, ಅವನ ಸೊಂಟಕ್ಕೆ ಒಂ ದು ಹಗ್ಗವನ್ನು ಕಟ್ಟಿ, ಆ ಹಗ್ಗದ ತುದಿಯನ್ನು ಒಂದು ಒರಳು ಕಲ್ಲಿಗೆ ಬಿಗಿದು, ಮನೇ ಕೆಲಸಕ್ಕೆ ಹೋಗಲು; ಕೃಷ್ಣನು ಆ ಒರಳನ್ನು ಎಳೆದು ಕೊಂಡು, ಹೊರಗೆ ಹೋಗಿ, ಬಾಗಲಿನ ಮುಂದೆ ಇರುವ ಮತ್ತೀ ಮರಗಳ ನಡುವೆ ಹೋ ಗಲು; ಆ ಮರಗಳಿಗೆ ಈ ಒರಳು ಕಲ್ಲು ತಗಲಿ, ಎರಡು ಮರಗಳು ಬೇರು ಸಹಿತ ಮುರಿದು, ಬಿದ್ದವು. ಆ ವೇಳೆಯಲ್ಲಿ ಹೊರಗೆ ಹೋಗಿದ್ದ ನಂದಗೋ ಪನು ಬರುತ್ತ ಬಿದ್ದಿರುವ, ಆ ದೊಡ್ಡ ಮರಗಳನ್ನೂ, ಅದರ ನಡುವೆ ಆಡುತ್ತ ಒರಳು ಕಲ್ಲಿನಿಂದ ಕೂಡಿ, ಸೊಂಟದಲ್ಲಿ ಕಟ್ಟಿರುವ ಹಗ್ಗವುಳ್ಳ ಕೃಷ ನನ್ನೂ ಕಂಡು, ಕೌತುಕಾನಂದ ಭರಿತನಾಗಿ ನೋಡುತ್ತಿರುವಷ್ಟರಲ್ಲಿಯೇ, ಮನೆಯಲ್ಲಿ ಯಶೋದೆಯು ಕಟ್ಟಿ ಹಾಕಿದ್ದ ಬಳಿಯಲ್ಲಿ ಕೃಷ್ಣನನ್ನು ಕಾಣದೆ, ಹೊರಗೆ ಓಡಿ ಬಂದು, ಬಿದ್ದಿರುವ ಮರಗಳ ಸಂದಿಯಲ್ಲಿರುವ ಕೃಷ್ಣನನ್ನು ಎತ್ತಿ ಕೊಂ ಡು, ಮುದ್ದಿಸಿ, ಮನೆಗೆ ಕರೆದು ಕೊಂಡು ಹೋದಳು.

ಹೀಗೆ ಕೆಲವು ದಿನಗಳು ಕಳೆದು, ಒಂದಾನೊಂದು ದಿವಸ ಬಲರಾಮನು ಬಂದು—ಕೃಷ್ಣನು ಬೀದಿಯ ಮಣ್ಣನ್ನು ತಿಂದನು ಎಂದು, ಗೋಪಿಯ ಸಂಗಡ ಚಾಡಿ ಹೇಳಲು; ಗೋಪಿ ದೇವಿಯು—ಏನೋ, ಮಣ್ಣು ತಿಂದಿಯಾ, ಕೃಷ್ಣಾ?

ಎಂದು ಧಟ್ಟಿಸಿ, ಕೇಳಿದ್ದಕ್ಕೆ—ಇಲ್ಲಮ್ಮಾ; ಅಣ್ಣನು ನನ್ನ ಮೇಲೆ ಸುಳ್ಳು ಚಾಡಿ ಹೇಳುತ್ತಾನೆ; ನೋಡು ಎಂದು ಬಾಯಿಯನ್ನು ತೆರೆದು, ತೋರಿಸಲು; ಆ ಬಾಯಿಯೊಳಗೆ ಏಳು ಸಮುದ್ರಗಳೂ, ಏಳು ಕುಲಾಚಲಗಳೂ, ಏಳು ದ್ವೀಪಗಳೂ ಬೆರಸಿ, ಹದಿನಾಲ್ಕು ಲೋಕವು ಕಾಣ ಬಂದದರಿಂದ,—ಈತನು ಮಹಾವಿಷ್ಣುವು ಎಂದು ಆತನ ಮಾಯೆಯಿಂದ ಅರಿಯದೆ,—ಬಾಯಿಯನ್ನು ಮುಚ್ಚಿಕೋ ಎಂದು, ಸಮುದಾಯಿಸಿದಳು.

ಅಷ್ಟರ ಮೇಲೆ ನಂದಗೋಪನು ಮುದುಕರಾದ ಗೊಲ್ಲರನ್ನು ಕೂಡಿಸಿ ಕೊಂಡು,—ಈ ಗೋಕುಲದಲ್ಲಿ ನಮಗೆ ಏನೇನೋ ದೈವೀಕದ ತೊಂದರೆಗಳು ಸಂಭವಿಸಿವೆ. ಇಲ್ಲಿಯೇ ನಾವು ಇದ್ದರೆ, ಮುಂದೆಯೂ, ಹೀಗೆ ವಿಡ್ಜ್ವರಗಳು ಉಂಟಾಗುವವು. ಇದಕ್ಕಿಂತ ಕಾಳಿಂದೀ ತೀರದ ಬೃಂದಾವನವೆಂಬ ಸ್ಥಳವು ಹುಲ್ಲು, ನೀರು, ಕಟ್ಟಿಗೆಗಳಿಂದ ನಮಗೂ, ನಮ್ಮ ದನ ಕರುಗಳಿಗೂ, ಬಹಳ ಕ್ಷೇಮವಾಗಿರುವದು, ಎಂದು ಹೇಳಿ, ಅವರನ್ನೆಲ್ಲಾ ಒಡಂಬಡಿಸಿ, ಗೋಕುಲದಲ್ಲಿರುವ ಪಳ್ಳಿಗಳನ್ನೆಲ್ಲಾ ಕಿತ್ತು, ಭಂಡಿಗಳ ಮೇಲೆ ಹೇರಿ ಕೊಂಡು, ದನ ಕರುಗಳನ್ನು ಅಟ್ಟಿ ಕೊಂಡು, ಬೃಂದಾವನಕ್ಕೆ ಬಂದು, ಅಲ್ಲಿ ಗೊಲ್ಲರ ಪಳ್ಳಿಗಳನ್ನು ಕಟ್ಟಿ ಕೊಂಡು, ಸುಖವಾಗಿದ್ದರು. ಹಾಗೆಯೇ ಕೃಷ್ಣನು ಕರುಗಳನ್ನು ಕಾಯುವ ಜೊತೆಯ ಹುಡುಗರ ಸಂಗಡ ತನ್ನ ಮನೆಯ ಕರುಗಳನ್ನು ಅಟ್ಟಿ ಕೊಂಡು ಮೇಯಿಸುವದಕ್ಕೆ ಹೋಗಿ, ಕಾಳಿಂದಿಯ ತೀರದಲ್ಲಿ ಎಳೇ ಹುಲ್ಲುಗಳನ್ನು ಮೇಯಿಸುತ್ತ, ಗೋಲಿ, ಗಜ್ಜುಗ, ಕಣ್ಣಾಮುಚ್ಚಾಲೆ, ಕುದುರೆ ಚಂಡು, ಪುಟ ಚಂಡು, ಲಗ್ಗೆ ಚಂಡು, ಮುಂತಾದ ಆಟಗಳನ್ನಾಡುತ್ತ, ಕಲ್ಲಿಯಲ್ಲಿರುವ ಮೊಸರನ್ನದ ಬುತ್ತಿಗಳನ್ನು ಉಣ್ಣುತ್ತ ಇರುವಲ್ಲಿ, ಒಂದಾನೊಂದು ದಿವಸ ಕರುಗಳನ್ನು ಅಟ್ಟಿ ಕೊಂಡು, ಮತ್ತೊಂದು ಕಾಳಿಂದಿಯ ಮಡುವಿನ ಬಳಿಗೆ ಮೇಯಿಸುವದಕ್ಕೆ ಹೋಗುತ್ತಿರುವಲ್ಲಿ, ಜೊತೆಯ ಹುಡುಗರು ಕಂಡು,—ಕೃಷ್ಣಾ, ಕೃಷ್ಣಾ! ಅಲ್ಲಿಗೆ ಕರುಗಳನ್ನು ಅಟ್ಟಿ ಕೊಂಡು ಹೋಗ ಬೇಡ. ಹೋದರೆ, ಕರುಗಳು ಸಹಿತ ನೀನು ಸತ್ತು ಹೋಗುವಿ. ಯಾಕಂದರೆ, ಈ ಮಡುವಿನಲ್ಲಿ ಕಾಳೀಯವೆಂಬ ಒಂದು ಘಟ ಸರ್ಪವು ತನ್ನ ಕುಟುಂಬ ಸಮೇತವಾಗಿ ವಾಸಾ ಮಾಡಿ ಕೊಂಡು, ಸಂಚರಿಸುತ್ತ ಇರುವದು. ಅದರ ನಂಜಿನಿಂದ ಈ ಕಾಳಿಂದೀ ನೀರನ್ನು ಹನ್ನೆರಡು ಗಾವುದದ ವರಿಗೂ ಯಾವ ಪ್ರಾಣಿಗಳು ಕುಡಿದಾಗ್ಯೂ, ಆ ನೀರಿನ ಘಾಳಿ ಬೀಸಿದಾಗ್ಯೂ, ಸತ್ತು ಹೋಗುವವು. ಆದ್ದರಿಂದ ಮೃಗ ಪಕ್ಷಿಗಳು ಮುಂತಾದ ಒಂದು ಪ್ರಾಣಿಯೂ ಇಲ್ಲಿ ಶೇರುವದಿಲ್ಲವೆಂದು

ಹೇಳಿದರು. ಅದನ್ನು ಕೃಷ್ಣನು ಕೇಳಿ,—ಓಹೋ! ಹಾಗೋ? ಹಾಗಾದರೆ, ಈ ಕೆಟ್ಟ ಹಾವನ್ನು ಇಲ್ಲಿಂದ ಓಡಿಸಿ, ಎಲ್ಲಾ ಪ್ರಾಣಿಗಳು ಈ ನೀರನ್ನು ಕುಡಿಯುವ ಹಾಗೆ ಮಾಡುವೆನೆಂದು, ಆ ಮಡುವಿಗೆ ಧೊಮ್ಮನೆ ಧುಮುಕಲು; ಆ ಕಾಳೀಯ ಬಂದು, ಕೃಷ್ಣನನ್ನು ಸುತ್ತಿ ಕೊಂಡಿತು. ಆಗ ಕೃಷ್ಣನು ಅದರ ಬಾಲವನ್ನು ಕೈಯಲ್ಲಿ ಹಿಡಿದು ಕೊಂಡು, ಅದರ ಹೆಡೆಯ ಮೇಲೆ ತನ್ನ ಎರಡು ಕಾಲುಗಳನ್ನು ಊರಿ, ಕುಣಿಯುತ್ತ ಇದ್ದದರಿಂದ, ಇವನ ಭಾರವನ್ನು ಸಹಿಸಲಾರದೆ, ಸಾಯುವ ಹಾಗಾಯಿತು. ಅಷ್ಟರೊಳಗೆ ಆ ಕಾಳೀಯ ನಾಗೇಂದ್ರನ ಹೆಂಡರಾದ ನಾಗ ಕನ್ನಿಕೆಯರು ಬಂದು, ಕೃಷ್ಣನಿಗೆ ಅಡ್ಡ ಬಿದ್ದು, ಬಹಳವಾಗಿ ಸ್ತೋತ್ರ ಮಾಡಿ,—ನಮ್ಮ ಗಂಡನನ್ನು ಕಾಪಾಡ ಬೇಕೆಂದು ಬೇಡಿ ಕೊಂಡದ್ದಕ್ಕೆ, ಕೃಷ್ಣನು ಬಿಟ್ಟು,—ಇನ್ನು ಇಲ್ಲಿ ಇರದೆ, ಈ ಕ್ಷಣವೇ ನಿನ್ನ ಕುಟುಂಬ ಸಮೇತನಾಗಿ ಸಮುದ್ರದಲ್ಲಿ ಹೋಗಿ ಸೇರಿಕೋ ಎಂದು ಅಪ್ಪಣೆ ಕೊಟ್ಟದರಿಂದ, ಅದು ತನ್ನ ಸಂಸಾರ ಸಹಿತವಾಗಿ ಸಮುದ್ರಕ್ಕೆ ಹೋಯಿತು. ಈ ಆಶ್ಚರ್ಯವನ್ನು ನಂದಗೋಪನೇ ಮೊದಲಾದ ಎಲ್ಲಾ ಗೊಲ್ಲರು ಕಂಡು,—ಈ ಮೊಗುವು ಮೊಗು ಮಾತ್ರವಲ್ಲ, ದೈವೀಕದ ಮೊಗುವು ಎಂದು, ಒಬ್ಬರೊಬ್ಬರು ಮಾತಾಡಿ ಕೊಂಡರು.

ಮತ್ತೊಂದು ದಿನದಲ್ಲಿ ಜೊತೆಯ ಹುಡುಗರೊಡನೆ ಶ್ರೀ ಕೃಷ್ಣನು ತನಗೆ ದನಾ ಕಾಯುವ ಪ್ರಾಯವಾದ್ದರಿಂದ, ಕರುಗಳ ಕಾಯುವದನ್ನು ಬಿಟ್ಟು, ದನಾ ಕಾಯುವವರ ಜೊತೆಯಲ್ಲಿ ಬಲರಾಮನೊಡನೆ ಕೂಡಿ, ತಮ್ಮ ದನಗಳನ್ನು ಅಟ್ಟಿ ಕೊಂಡು, ಗೋವರ್ಧನ ಗಿರಿಯ ತೊಪ್ಪಲಲ್ಲಿ ದನಗಳನ್ನು ಮೇಯಿಸುತ್ತ, ಅದರ ಸಮೀಪದಲ್ಲಿರುವ ತಾಳಾ ವನವನ್ನು ಕಂಡು, ಜೊತೆಯ ಹುಡುಗರನ್ನು ಕರೆದು—ಈ ಓಲೇ ಮರಗಳ ಹಣ್ಣನ್ನು ಕೆಡವಿ, ತಿನ್ನೋಣ, ಬನ್ನಿ, ಎಂದು ಹೇಳಲು; ಅವರೆಲ್ಲರು—ಅಯ್ಯೋ, ಅಪ್ಪಾ, ಆಗದಾಗದು. ಆ ಓಲೇ ವನದಲ್ಲಿ ಉಂಟಾಗುವ ಹೆಂಡವು ನಿತ್ಯದಲ್ಲಿಯೂ ಕಂಸಾಸುರನ ಹೆಂಡರು ಕುಡಿಯುವದಕ್ಕೆ ಸಾಗಿ ಹೋಗುವದು. ಆ ವನದಲ್ಲಿ ಧೇನುಕನೆಂಬ ಕತ್ತೆಯ ರೂಪಿನ ಒಬ್ಬ ರಾಕ್ಷಸನು ಇರುವನು. ಹಿಂದೆ ಒಂದು ವೇಳೆ, ಓಲೇ ಮರದ ಮದ್ಯವನ್ನು ಶಚೀ ಸಮೇತನಾಗಿ ಇಂದ್ರನು ಕುಡಿಯ ಬೇಕೆಂದು ಬಂದು, ಆ ಕತ್ತೆಯ ಕಾಲಲ್ಲಿ ಒದಿಸಿ ಕೊಂಡು, ಭಯ ಪಟ್ಟು, ಅಮರಾವತಿಗೆ ಓಡಿ ಹೋದನು. ಇಂಥ ಓಲೇ ವನಕ್ಕೆ ನಾವು ಹೋದರೆ, ಬದುಕೇವೇನಪ್ಪಾ? ಅಂದರು. ಅದಕ್ಕೆ ಕೃಷ್ಣನು ಅವರನ್ನು ಕುರಿತು—ಅಯ್ಯೋ, ಬಾಳೇ! ನಿಮ್ಮ

ಭವಿಷ್ಯವು ಕಂಡ ಹಾಗಾಯಿತು. ಒಂದು ಕತ್ತೆಗೆ ಹೆದರಿ ಕೊಂಡು, ಅಲ್ಲಿಗೆ ಹೋಗಿ, ಹಣ್ಣನ್ನು ತಿನ್ನದೆ ಇರುವದೋ? ಎಂದು ಹೇಳಿ, ಅಲ್ಲಿಗೆ ತಾನು ಹೋದನು. ಜೊತೆಯುವರೆಲ್ಲರು ಹೆದರಿ ಕೊಂಡು ಹೋಗದೆ, ದೂರದಲ್ಲಿಯೇ ನಿಂತರು. ಓಲೇ ವನಕ್ಕೆ ಬಂದ ಕೃಷ್ಣನನ್ನು ಕಂಡು, ಕತ್ತೆಯ ರೂಪಿನ ಧೇನುಕನೆಂಬ ರಾಕ್ಷಸನು—ಒದೆದು, ಕಚ್ಚಿ, ಕೊಂದು, ತಿನ್ನುವೆನೆಂದು, ಕೃಷ್ಣನ ಬಳಿಗೆ ಬರಲು; ಕೃಷ್ಣನು ಅದರ ಆರ್ಭಟೆಗೆ ಅಂಜದೆ, ನಾಲ್ಕು ಕಾಲುಗಳನ್ನು ತನ್ನ ಕೈಯಿಂದ ಹಿಡು ಕೊಂಡು,—ಓಲೇ ಮರದ ಹಣ್ಣಿನ ಗೊನೆಗಳನ್ನು ಕೆಡಹುವದಕ್ಕೆ ಇದೇ ದೊಣ್ಣೆ ಆಯಿತೆಂದು ಬೀಸಿ, ಗೊನೆಗಳ ಮೇಲೆ ಇಡುವದು; ಕೆಳಗೆ ಬಿದ್ದರೆ, ಎಚ್ಚತ್ತು ಗೊಳ್ಳದ ಹಾಗೆ ತಿರಿಗಿ ತೆಗೆದು ಕೊಂಡು ಇಡುವದು; ಹೀಗೆ ಇಡುತ್ತ ಇಡುತ್ತ ಬಂದದರಿಂದ, ಆ ರಕ್ಕಸನು ಬಳಲಿ, ಕಂಗೆಟ್ಟು, ಪ್ರಾಣವನ್ನು ಬಿಟ್ಟನು. ಕೃಷ್ಣನು ಜೊತೆಯ ದನಾ ಕಾಯುವವರನ್ನು ಕರೆದು—ಇಗೋ, ಕತ್ತೆಯ ರೂಪಿನ ರಕ್ಕಸನು ಸತ್ತು ಬಿದ್ದಿದ್ಧಾನೆ. ಬೇಕಾದಷ್ಟು ಓಲೇ ಹಣ್ಣಿನ ಗೊನೆಗಳು ಕೆಳಗೆ ಬಿದ್ದವೆ. ತಿನ್ನೋಣ, ಬನ್ನಿ, ಎಂದು ಕೂಗಲು; ಅವರೆಲ್ಲರು ಬಂದು, ನೋಡಿ, ಕೃಷ್ಣನ ಮಹಿಮೆಗೆ ಆಶ್ಚರ್ಯಪಟ್ಟು, ಸಂತೋಷದಿಂದ ಬೇಕಾದಷ್ಟು ಹಣ್ಣುಗಳನ್ನು ತಿಂದು, ಮುಜ್ಜಂಜೇ ವೇಳ್ಯದಲ್ಲಿ ಹಣ್ಣಿನ ಗೊನೆಗಳನ್ನು ಹೊತ್ತು ಕೊಂಡು, ಹಳ್ಳಿಗೆ ಬಂದು, ಈ ಸುದ್ದಿಯನ್ನು ನಂದಗೋಪಾದಿಗಳಿಗೆ ತಿಳಿಸಿದರು. ಅವರೆಲ್ಲರು ಕೇಳಿ, ಬಹಳ ಸಂತೋಷ ಪಟ್ಟರು.

ಮತ್ತೆ ಹೀಗಿರುವಲ್ಲಿ ಒಂದು ದಿನವು ಕೃಷ್ಣ ಬಲರಾಮರು, ಜೊತೆಯ ದನಾ ಕಾಯುವವರು ಸಹ, ಯಮುನಾ ನದಿಯ ಪ್ರಾಂತ್ಯದಲ್ಲಿ ದನಗಳಿಗೆ ಎಳೆ ಹುಲ್ಲುಗಳನ್ನು ಮೇಯಿಸುತ್ತ, ಮಟ್ಟ ಮಧ್ಯಾನ್ಹದಲ್ಲಿ ತಿಳಿ ನೀರುಗಳನ್ನು ಕುಡಿಸಿ, ಆ ಸಮೀಪದಲ್ಲಿರುವ ಒಂದು ದೊಡ್ಡ ಭಾಂಡೀರವೆಂಬ ಆಲದ ಮರದ ನೆಳಲಿಗೆ ಅಟ್ಟಿ ಕೊಂಡು ಬಂದು ನಿಲ್ಲಿಸಲು; ದನಗಳೆಲ್ಲಾ ಅಲ್ಲಿ ಮಲಗಿ ಕೊಂಡು, ಮೆಲಕು ಹಾಕುತ್ತಿದ್ದವು. ಆ ವೇಳೆಯಲ್ಲಿ ಕೃಷ್ಣ ಮೊದಲಾದವರೆಲ್ಲರು ಕೂಡಿ,—ಬಿಸಲು ಮಾಲುವ ವರಿಗೂ ಇಲ್ಲಿ ಕುದುರೆ ಚಂಡನ್ನಾಡುವ; ಸೋತವರು ಗೆದ್ದವರನ್ನು ಹೊತ್ತು ಕೊಂಡಿರ ಬೇಕೆಂದು ಕಟ್ಲೇ ಮಾಡಿ, ಆಡುತ್ತಿರುವಲ್ಲಿ, ಕಂಸನು ಕಳುಹಿಸಿದ ಪ್ರಲಂಬಾಸುರನೆಂಬ ಒಬ್ಬ ರಾಕ್ಷಸನು ಆ ದನಾ ಕಾಯುವ ಹುಡುಗರ ವೇಷವನ್ನು ಹಾಕಿ ಕೊಂಡು, ಅವರೊಳಗೆ ಬಂದು ಶೇರಿ,—ಕೃಷ್ಣನನ್ನು ಕೊಲ್ಲುವದಕ್ಕೆ ತನ್ನಿಂದ ಆಗದೆಂದೆಣಿಸಿ, ಬಲರಾಮನ ಜೊ

ತೆಯಲ್ಲಿ ಆಡುವದಕ್ಕೆ ತೊಡಗಿ, ಆತನಿಗೆ ತಾನು ಸೋತು, ಆತನನ್ನು ಹೊತ್ತು ಕೊಂಡು, ಆಕಾಶಕ್ಕೆ ಹಾರಿ ಹೋಗಲು; ಕೃಷ್ಣನು ಕಂಡು—ಎಲೇ, ಅಣ್ಣಾ, ಇವನು ರಾಕ್ಷಸನು; ನಿನಗೆ ಮೋಸಾ ಮಾಡಿದನು; ಇವನನ್ನು ಬೇಗ ಕೊಂದು ಹಾಕು ಎಂದು ಕೂಗಿ ಹೇಳಿದ್ದರಿಂದ, ಅವನ ಎರಡು ಕೈಗಳನ್ನೂ ಬಲರಾಮನು ಹಿಡು ಕೊಂಡು, ಕುಂಬಾರರ ತಿಗರಿಯ ಹಾಗೆ ತಿರ್ರನೆ ಬಹಳ ಹೊತ್ತು ತಿರುಗಿಸಿ, ನೆಲಕ್ಕೆ ಬಡಿದು, ಅಪ್ಪಳಿಸಿ, ಕೊಂದು ಹಾಕಿದನು. ಆ ಮೇಲೆ ಸಾಯಂಕಾಲವಾಗುವಾಗ ಎಲ್ಲರು ಹಳ್ಳಿಗೆ ಬಂದು, ಆ ದಿವಸ ನಡೆದ ಸಮಾಚಾರವನ್ನು ತಿಳಿಸಲು; ಗೋಪಾಲರೆಲ್ಲರು ಈ ಕೃಷ್ಣನನ್ನು ಮಹಾತ್ಮನೆಂದು ಭಾವಿಸಿ, ನಡೆದು ಕೊಳ್ಳುತ್ತಿದ್ದರು.

ಅಷ್ಟರಲ್ಲಿಯೇ ಶರತ್ಕಾಲವು ಬರಲು; ನಂದಗೋಪಾದಿ ಗೋಪಾಲರೆಲ್ಲರು ಕೂಡಿ, ಈ ಶರತ್ಕಾಲದಲ್ಲಿ ವರುಷಂ ಪ್ರತಿ ವರುಷದಲ್ಲಿಯೂ ತಾವು ಮಾಡುತ್ತಿದ್ದ ಕಟ್ಲೆಯ ಪ್ರಕಾರ, ದೇವೇಂದ್ರನನ್ನು ಕುರಿತು ಮಾಡುವ ಪೂಜೆಯನ್ನು ಮಾಡ ಬೇಕೆಂದು ಯೋಚಿಸಿ, ಎಲ್ಲರು ಆ ದೇವೇಂದ್ರನ ಹಬ್ಬಕ್ಕೆ ಬೇಕಾದ ಸೋಬಸ್ಕರಗಳನ್ನು ಕೂಡಿಸುತ್ತಿರುವಲ್ಲಿ, ಕೃಷ್ಣನು ಅವರ ಬಳಿಗೆ ಹೋಗಿ,—ಇದೆಲ್ಲಾ ಯಾಕೆ? ಎಂದು ಕೇಳಲು; ಅವರು—ಎಲೈ, ಕೃಷ್ಣನೇ, ದೇವೇಂದ್ರನು ಮಳೆಯನ್ನು ಕರೆಯುವದರಿಂದ, ಕಾಡುಗಳಲ್ಲಿ, ಬೆಟ್ಟಗಳಲ್ಲಿ, ಹುಲ್ಲು ನೀರು ಉಂಟಾಗಿ, ನಮ್ಮ ದನಗಳು ಸೊಂಪಿನಿಂದ ಮೇದು, ಹೆಚ್ಚುವದರಿಂದಷ್ಟೆ ನಾವು ಬದುಕುವದು! ಆದ್ದರಿಂದ ದೇವೇಂದ್ರನ ಹಬ್ಬವನ್ನು ಮಾಡುತ್ತೇವೆ, ಅಂದರು. ಅದಕ್ಕೆ ಕೃಷ್ಣನು—ದೇವೇಂದ್ರನಿಂದ ನಮಗೇನು ಪ್ರಯೋಜನ? ನಮ್ಮ ದನಗಳಿಗೆ ಹುಲ್ಲು ನೀರು ಕೊಡುವಂಥಾದ್ದು ಈ ಗೋವರ್ಧನ ಪರ್ವತವು. ಇದರ ಹಬ್ಬವನ್ನೇ ಮಾಡ ಬೇಕೆನಲು; ಅವರೆಲ್ಲರು ಕೃಷ್ಣನ ಮಾತಿನ ಮೇರೆ ಗೋವರ್ಧನ ಪರ್ವತಕ್ಕೆ ಹಬ್ಬಾ ಮಾಡಿದ್ದರಿಂದ, ದೇವೇಂದ್ರನು ಕೋಪಿಸಿ ಕೊಂಡು, ಗೊಲ್ಲರ ಹಳ್ಳಿಗಳೆಲ್ಲಾ ತೇಲಿ ಹೋಗುವ ಹಾಗೆ ಮಳೆಯನ್ನು ಕರೆಯುವದಕ್ಕೆ ಪ್ರಾರಂಭಾ ಮಾಡಿದ್ದರಿಂದ, ಕೃಷ್ಣನು ಗೋವರ್ಧನ ಪರ್ವತವನ್ನು ಎತ್ತಿ, ಕೊಡೆಯಾಗಿ ಹಿಡಿದು, ಗೋವುಗಳನ್ನೂ ಗೊಲ್ಲರನ್ನೂ ಕಾಪಾಡಿದನು.

ಆ ಬಳಿಕ ಮಥುರಾ ಪಟ್ಟಣದಲ್ಲಿ ಕಂಸಾಸುರನು ನಾರದ ಮಹಾ ಮುನಿಯ ಮುಖ ವಚನದಿಂದ ತನ್ನನ್ನು ಕೊಲ್ಲುವ ದೇವಕಿಯ ಎಂಟನೇ ಮಗನಾದ ಕೃಷ್ಣನು ಗೋಕುಲದಲ್ಲಿ ಬೆಳೆಯುವದಾಗಿಯೂ, ತಾನು ಕಳುಹಿಸಿದ್ದ ಪೂತನಿ ಮೊದಲಾದ ದೈತ್ಯರನ್ನೆಲ್ಲಾ ಆತನೇ ಕೊಂದದ್ದಾಗಿಯೂ ಕೇಳಿ, ಬಹಳ

ಚಿಂತಾಕ್ರಾಂತನಾಗಿ,—ಹಗೆಯನ್ನು ಹೆಚ್ಚಾಗಿ ಬೆಳಸ ಕೂಡದು, ಎಳಕಿನಲ್ಲಿಯೇ ಕೊಂದು ಹಾಕ ಬೇಕೆಂದೆಣಿಸಿ, ಅಕ್ರೂರನನ್ನು ಬೃಂದಾವನಕ್ಕೆ ಕಳುಹಿಸಿ, ಕೃಷ್ಣ ಬಲರಾಮರನ್ನು ಮಧುರಾ ಪುರಿಗೆ ಕರಿಸಿ ಕೊಂಡು, ಕುವಲಯಾಪೀಡವೆಂಬ ಆನೆಯನ್ನೂ ಮುಷ್ಟಿಕ, ಚಾಣೂರರೆಂಬ ಜಟ್ಟಿಗಳನ್ನೂ ಅವರನ್ನು ಕೊಂದು ಹಾಕುವ ಹಾಗೆ ಕಳುಹಿಸಲು; ಅವರಿಬ್ಬರು ಆ ಆನೆಯನ್ನೂ ಆ ಜಟ್ಟಿಗಳನ್ನೂ ಮಲ್ಲ ಯುದ್ಧದಲ್ಲಿ ಕೊಂದು ಹಾಕಿದರು.

ಆ ಮೇಲೆ ಶ್ರೀ ಕೃಷ್ಣನು ಸಿಂಹಾಸನದ ಮೇಲೆ ಕುಳಿತಿರುವ ಕಂಸನನ್ನು ಜುಟ್ಟು ಹಿಡಿದು, ಕೆಳಗೆ ಕೆಡವಿ ಕೊಂಡು, ತನ್ನ ಕಾಲಿನಿಂದ ಹೊರಚಿ, ತುಳಿದು, ಕೊಂದು ಹಾಕಿ, ಯಥಾ ಪ್ರಕಾರ ಅವನ ತಂದೆಯಾದ ಉಗ್ರಸೇನನಿಗೆ ಯಾದವರ ಪಟ್ಟವನ್ನು ಕಟ್ಟಿ, ರುಕ್ಮಿಣಿ ಸತ್ಯಭಾಮೆ ಮೊದಲಾದ ಅಷ್ಟ ಮಹಿಷಿಗಳನ್ನೂ, ನರಕಾಸುರನೆಂಬ ರಾಕ್ಷಸನನ್ನು ಕೊಂದು, ಅವನು ಶೆರೆಯಲ್ಲಿ ಇಟ್ಟಿದ್ದ ಹದಿನಾರು ಸಾವಿರ ದೇವ ಕನ್ನಿಕೆಗಳನ್ನೂ ಮದುವೆಯಾಗಿ, ಅವರಲ್ಲಿ ಮನ್ಮಥ, ಸಾಂಬ ಮೊದಲಾದ ಮಕ್ಕಳನ್ನು ಪಡೆದು, ಇನ್ನು ಹಂಸ, ಡಿಬಿಕ, ಮುರ, ಸಾಲ್ವ, ಮೊದಲಾದ ಅನೇಕ ದೈತ್ಯರನ್ನು ಸಂಹರಿಸಿ, ವೈಕುಂಠದ ದ್ವಾರಪಾಲಕರಾದ ಜಯ ವಿಜಯರು ಮೂರನೇ ಜನ್ಮದಲ್ಲಿ ಶಿಶುಪಾಲ ದಂತವಕ್ರರೆಂಬ ಹೆಸರಿನಿಂದ ಹುಟ್ಟಿ ಇದ್ದದರಿಂದ ಅವರಿಬ್ಬರನ್ನೂ ಸಂಹರಿಸಿ, ಪಾಂಡವರಿಗೆ ಸಹಾಯವನ್ನು ಮಾಡಿ, ಭಾರತ ಯುದ್ಧದಲ್ಲಿ ಜರಾಸಂಧ, ಕೌರವ, ಜಯದ್ರಥ, ಶಲ್ಯ, ದೃಪದ, ಕೇಕಯ, ವಿರಾಟ, ತ್ರಿಗರ್ತ, ಭೂರಿಶ್ರವ, ಮುಂತಾದ ಅನೇಕ ದುಷ್ಟ ಧೊರೆಗಳನ್ನು ಕೊಲ್ಲಿಸಿ, ಹಸ್ತಿನಾವತೀ ಪಟ್ಟಣದಲ್ಲಿ ಧರ್ಮರಾಯನಿಗೆ ಪಟ್ಟವನ್ನು ಕಟ್ಟಿ, ಭೂಮಿಯ ಭಾರವನ್ನು ಇಳಿಸಿ, ತನ್ನ ಮನುಷ್ಯ ಶರೀರವನ್ನು ಭೂಮಿಯಲ್ಲಿ ಬಿಟ್ಟು, ವೈಕುಂಠಕ್ಕೆ ತೆರಳಿದನು.

83. The Ninth or Bouddha Incarnation.

೮೩. ಬೌದ್ಧಾವತಾರದ ಕಥೆ.

ಪೂರ್ವದಲ್ಲಿ ತಾರಕಾಸುರನೆಂಬ ರಾಕ್ಷಸನು ಬಹು ಪರಾಕ್ರಮ ಶಾಲಿಯಾಗಿ, ಇಂದ್ರಾದಿ ದೇವತೆಗಳಿಗೆ ಬಹಳವಾಗಿ ತೊಂದರೆ ಪಡಿಸಿದ್ದರಿಂದ, ಈಶ್ವರನ ಮಗನಾದ ಷಣ್ಮುಖನು ದೇವತೆಗಳಿಗೆ ಸೇನಾ ಪತಿಯಾಗಿ, ಆತನನ್ನು ಸಂಹಾರ ಮಾಡಿದನು. ಆತನ ಮಕ್ಕಳಾದ ತಾರಕಾಕ್ಷನೂ, ಕಮಲ ಲೋಚನನೂ, ವಿದ್ಯುನ್ಮಾಲಿಯೂ, ಎಂಬ ಮೂರು ಮಂದಿಯು ಬ್ರಹ್ಮನನ್ನು ಕುರಿತು ಬಹಳವಾಗಿ ತಪಸ್ಸನ್ನು ಮಾಡಿ, ಮೆಚ್ಚಿಸಿ, ಪ್ರತ್ಯಕ್ಷವಾಗಿ ಬಂದ ಬ್ರಹ್ಮನನ್ನು ಕುರಿತು—ತ

ಮ್ಮ ತಂದೆಯಾದ ತಾರಕನನ್ನು ಕೊಲ್ಲಿಸಿದ ದೇವತೆಗಳೆಂಬ ಮೃಗಗಳ ಬೇಟೆ
ಯನ್ನು ಆಡ ಬೇಕೆಂದು, ತಮ್ಮ ಮನಸ್ಸಿನಲ್ಲಿ ಎಣಿಸಿ,—ಎಲೈ, ಚತುರ್ಮುಖನೇ,
ನಮಗೆ ಅಮರತ್ವವು ಉಂಟಾಗುವ ಹಾಗೆಯೂ, ದೇವಾಸುರರು ಮುಂತಾದವ
ರೆಲ್ಲರು ನಮಗೆ ಸೇವಕರಾಗಿ, ನಮ್ಮನ್ನು ಓಲೈಸಿ ಕೊಂಡಿರುವ ಹಾಗೆಯೂ,
ಯಾರಿಂದಲೂ ಜೈಸಲಶಕ್ಯವಾದ ಮೂರು ಪಟ್ಟಣಗಳು ಆಕಾಶ ಮಾರ್ಗದಲ್ಲಿ
ಉಂಟಾಗುವ ಹಾಗೆಯೂ, ಈ ಮೂರು ವರಗಳನ್ನು ಕೊಡ ಬೇಕೆಂದು ಬೇ
ಡಿ ಕೊಂಡದ್ದಕ್ಕೆ, ಬ್ರಹ್ಮ ದೇವನು—ಹುಲಿಗೆ ಧೈರ್ಯವನ್ನೂ, ಕತ್ತಲೆಗೆ ಕಾಠಿಣ್ಯ
ವನ್ನೂ, ಕುಲ ಗಿರಿ ಮುಂತಾದ ಬೆಟ್ಟಗಳಿಗೆ ಚೈತನ್ಯವನ್ನೂ, ಆನೆಗಳಿಗೆ ಸೂಕ್ಷ್ಮ
ಬುದ್ಧಿಯನ್ನೂ, ಕೊಲೆಗಡಿಕರಿಗೆ ನಿತ್ಯ ದೇಹವನ್ನೂ, ನಾನು ಒಲಿದು ಕೊ
ಟ್ಟರೆ, ಲೋಕಕ್ಕೆ ಲೇಸಾಗುವದೇ? ಈ ದುಷ್ಟರು ಇಂಥ ವರಗಳನ್ನು ಕೇಳಿದ
ರಲ್ಲ! ಶಿವ ಶಿವಾ! ಇದಕ್ಕೇನು ಮಾಡಲಿ? ಎಂದು ಒಂದು ಘಳಿಗೆ ಯೋಚಿಸಿ,
ನಿಶ್ಚೈಸಿ, ಬಳಿಕ ಆ ಮೂರು ಜನವನ್ನು ಕುರಿತು—ನಿಮಗೆ ಆಕಾಶದಲ್ಲಿ ಮೂ
ರು ಪುರಗಳು ಉಂಟಾಗುವವು. ಇಂದ್ರಾದಿ ನಿರ್ಜರರೆಂಬ ನೊರಜುಗಳನ್ನು
ನೀವು ಸದೆ ಬಡಿದು, ನಿಮ್ಮ ಸೇವೆ ಮಾಡಿಸಿ ಕೊಳ್ಳಿ. ನಿಮ್ಮ ಮೂರು ಪಟ್ಟ
ಣಗಳು ದಿವ್ಯ ಸಾವಿರ ವರುಷಕ್ಕೆ ಒಂದು ವೇಳೆ ಕೂಡುವವು. ಆ ವೇಳೆಯ
ಲ್ಲಿ ಯಾವ ಒಬ್ಬನು ಒಂದೇ ಬಾಣದಿಂದ ನಿಮ್ಮ ಪಟ್ಟಣವನ್ನು ಕಡಿದು ಹಾಕು
ವನೋ, ಆ ವೇಳೆಯಲ್ಲಿ ನಿಮಗೆ ಸಾವು ಉಂಟಾಗುವದೇ ಹೊರತು, ಅದ
ರ ನಡುವೆ ನೀವು ಸಾಯುುವದಿಲ್ಲ; ಹೋಗಿ! ಎಂದು ವರವನ್ನು ಕೊಟ್ಟು, ಅದೃ
ಶ್ಯನಾದನು.

ಆ ದುರುಳರು—ಅಂಥಾ ಕಾಲ ಬಂದಾಗ್ಯೆ ನೋಡಿ ಕೊಳ್ಳೋಣ ಎಂದು,
ಅಲ್ಲಿಂದ ಹೊರಟು ಬಂದು, ದೈತ್ಯರ ಬಡಗಿಯಾದ ಮಯನನ್ನು ಕರಿಸಿ, ಮೂ
ರು ಪುರವನ್ನು ರಚಿಸಿ ಕೊಂಡು, ಅದರಲ್ಲಿ ಇದ್ದು ಕೊಂಡು, ಇಂದ್ರಾದಿ ದೇವತೆ
ಗಳನ್ನೆಲ್ಲಾ ಸದೆ ಬಡಿದು, ಅವರ ಕಡೆಯಿಂದ ಸೇವೆಯನ್ನು ಮಾಡಿಸಿ ಕೊಳ್ಳುತ್ತ,
ಅತ್ಯುನ್ನತರಾಗಿ ಇದ್ದರು. ಆಗ ಇಂದ್ರಾದಿ ದೇವತೆಗಳೆಲ್ಲಾ ಕೂಡಿ, ಕೈಲಾಸ
ಕ್ಕೆ ಹೋಗಿ, ಶಿವನಿಗೆ ಅಡ್ಡ ಬಿದ್ದು, ತಮಗೆ ಉಂಟಾಗಿರುವ ತಾರಕನ ಮಕ್ಕಳ
ಬಾಧೆಯನ್ನು ಹೇಳಿ ಕೊಂಡು, ಮೊರೆ ಇಡಲು; ಶಂಕರನು ಆ ದೇವತೆಗಳನ್ನು
ಕುರಿತು—ಎಲೇ, ದೇವತೆಗಳಿರಾ, ಈ ಕೆಲಸವು ನನ್ನಿಂದ ಸಾಗದು. ಯಾಕಂ
ದರೆ, ಅವರ ಮೂರು ಪಟ್ಟಣಗಳು ದಿವ್ಯ ಸಹಸ್ರ ವರುಷಕ್ಕೆ ಒಂದು ವೇಳೆ
ಕೂಡುವವು. ಆ ಕೂಡಿದ ವೇಳೆಯಲ್ಲಿ ಒಂದೇ ಬಾಣದಿಂದ ಆ ಪುರವನು-

ಕಡಿದಾಗ, ಅವರಿಗೆ ಸಾವು ಬರುವದೆಂದು, ಬ್ರಹ್ಮನ ವರವಾಗಿರುವದು. ಅದು ಅಲ್ಲದೆ, ತಾರಕನ ಮಕ್ಕಳು ವೇದ ಮಾರ್ಗವನ್ನು ಎಳ್ಳಷ್ಟಾದರೂ ಮೀರದೆ, ವೇದಗಳಲ್ಲಿ ಹೇಳಿರುವ ಪ್ರಕಾರವೇ ಕರ್ಮಗಳನ್ನು ಮಾಡುತ್ತ, ಬಹಳ ಪರಿಶುದ್ಧರಾಗಿರುವರು. ಆದ್ದರಿಂದ ಆ ಪುರವನ್ನು ಕಡಿಯುವದಕ್ಕೆ ವಿಷ್ಣುವೇ ನನಗೆ ಬಾಣವಾಗಿ, ಆ ದೈತ್ಯರು ವೇದ ಮಾರ್ಗವನ್ನು ಬಿಟ್ಟು, ಯುಕ್ತಿ ಮಾರ್ಗವನ್ನು ಹಿಡಿದು ನಡೆಯುವ ಹಾಗೆ, ಯಾವ ಉಪಾಯದಿಂದಲಾದರೂ ಮಾಡಿದರೆ, ನಾನು ಅವರನ್ನು ಸಂಹರಿಸಿ, ನಿಮಗೆ ಸುಖವನ್ನು ಮಾಡುವೆನು ಎಂದು ಹೇಳಿ, ಅವರನ್ನು ಕರೆದು ಕೊಂಡು, ಮಹಾ ವಿಷ್ಣುವಿನ ಬಳಿಗೆ ಹೋಗಿ, ಈ ವಿವರಗಳನ್ನೆಲ್ಲಾ ತಿಳಿಸಲು;—ಒಳ್ಳೇದು, ಹಾಗೇ ಆಗಲಿ ಎಂದು, ಅಭಯವನ್ನು ಕೊಟ್ಟು, ಶಿವನಿಗೆ ಭೂಮಿಯನ್ನೇ ರಥವನ್ನು ಮಾಡಿ, ನಾಲ್ಕು ವೇದಗಳನ್ನೇ ಆ ರಥಕ್ಕೆ ಕುದುರೆಗಳಾಗಿಯೂ, ಚಂದ್ರ ಸೂರ್ಯರನ್ನೇ ರಥದ ಚಕ್ರಗಳಾಗಿಯೂ, ಬ್ರಹ್ಮ ದೇವರನ್ನೇ ಸಾರಥಿಯಾಗಿಯೂ, ಮಾಡಿಸಿ ಕೊಟ್ಟು, ಆ ರಥದಲ್ಲಿ ಆತನನ್ನು ಕೂರಿಸಿ, ಮಹಮ್ಮೇರು ಪರ್ವತವನ್ನು ಬಿಲ್ಲಾಗಿ ಮಾಡಿ, ಆ ಬಿಲ್ಲಿಗೆ ಮಹಾ ಶೇಷನು ಹೆದೆಯಾಗಿಯೂ, ತಾನು ಬಾಣವಾಗಿಯೂ, ಅವನ ಕೈಯಲ್ಲಿ ಇರುವ ಹಾಗೆ ಮಾಡಿ ಕೊಟ್ಟು, ದೇವತೆಗಳ ಸಮೂಹದೊಡನೆ ಹೋಗಿ, ತಾರಕನ ಮಕ್ಕಳೊಡನೆ ಕಾದುತ್ತಿದ್ದು,—ಆ ಪಟ್ಟಣಗಳು ಕೂಡಿದ ಕ್ಷಣದಲ್ಲಿ ಬಾಣವಾಗಿರುವ ನನ್ನನ್ನು ಪ್ರಯೋಗಿಸು. ಆಗ ನಾನು ಆ ಪಟ್ಟಣವನ್ನೂ ಅವರನ್ನೂ ಸುಟ್ಟು, ಬೂದಿಯಾಗಿ ಮಾಡುವೆನು ಎಂದು ಹೇಳಿ, ಶಂಕರಾದಿ ದೇವತೆಗಳನ್ನೆಲ್ಲಾ ಕಳುಹಿಸಿ, ತಾನು ಬೌದ್ಧಾವತಾರವನ್ನು ಮಾಡಿ, ಯುಕ್ತಿಯಿಂದ ಸಾಗತವೆಂಬ ಒಂದು ಶಾಸ್ತ್ರವನ್ನು ಕಲ್ಪಿಸಿ, ಆ ಪುಸ್ತಕವನ್ನು ಕೈಯಲ್ಲಿ ತೆಗೆದು ಕೊಂಡು, ತ್ರಿ ಪುರವನ್ನು ಹೊಕ್ಕು, ಆ ತಾರಕನ ಮಕ್ಕಳಿಗೆ ಕಾಣಿಸಿ ಕೊಳ್ಳಲು; ಅವರು ಈತನ ತೇಜಸ್ಸನ್ನು ನೋಡಿ—ಇವನ್ಯಾರೋ ಮಹಾ ಪುರುಷನೆಂದು ಎಣಿಸಿ, ಎದುರೆದ್ದು ಬಂದು, ಈತನಿಗೆ ಪಾದಾಭಿವಂದನೆಯನ್ನು ಮಾಡಿ, ಷೋಡಶೋಪಚಾರಗಳನ್ನು ರಚಿಸಿ,—ಎಲೈ, ಮಹಾನುಭಾವರೇ, ಎಲ್ಲಿಂದ ಬಂದಿರಿ? ಇಲ್ಲಿ ಬಂದ ಕೆಲಸವೇನು? ನಿಮ್ಮ ದರುಶನದಿಂದ ನಾವು ಧನ್ಯರಾದೆವು ಎಂದು, ಅತಿ ವಿನಯ ಭಯ ಭಕ್ತಿಯಿಂದ ಕುಶಲ ಪ್ರಶ್ನೆಯನ್ನು ಮಾಡಲು; ಈತನು ಅವರನ್ನು ಕುರಿತು—ನಾವು ಭಿಕ್ಷುಕರು. ನಮಗೆ ಊರೆಂಬುವದು ಯಾವದು? ನಮ್ಮ ತಪಸ್ಸು ನಿರಾತಂಕವಾಗಿ ನಡೆಯುವ ಹಾಗೆ ಯಾರು ಪ್ರೀತಿಯಿಂದ ಇರಿಸಿ ಕೊಂಡು ಇರುವರೋ, ಅವ

ರಲ್ಲಿಯೇ ಇದ್ದು ಕೊಂಡು, ತತ್ವ ನಿರ್ಣಯಗಳನ್ನೂ ಧರ್ಮ ಸಾರಗಳನ್ನೂ ಉಪದೇಶಿಸಿ, ಅವರಿಗೆ ಆಶೀರ್ವಾದವನ್ನು ಮಾಡುತ್ತ, ಅವರ ಶ್ರೇಯಸ್ಸನ್ನೇ ಪ್ರಾರ್ಥಿಸಿ ಕೊಂಡು ಇರುವೆವು ಎಂದು ಹೇಳಲು; ಅವರು ಆ ಮಾತನ್ನು ಕೇಳಿ, ಬಹು ಸಂತೋಷ ಪಟ್ಟು, ಈತನಿಗೆ ಒಂದು ಮಠವನ್ನು ಕಲ್ಪಿಸಿ, ಅಲ್ಲಿ ಇಟ್ಟು, ಸಾಯಂ ಪ್ರಾತಃ ಆತನಿಗೆ ವಂದನೇ ಮಾಡುತ್ತ ಬರುತ್ತಿದ್ದರು. ಈ ಬೌದ್ಧನು ಅವರಿಗೆ ಚದುರೋಪಾಯದಿಂದ ತಾನು ಮಾಡಿದ ಸೌಗತ ಶಾಸ್ತ್ರವನ್ನು ಬೋಧಿಸಿ, ಲೌಕಿಕ ಯುಕ್ತಿಯಿಂದ—ಈ ಸೌಗತ ಶಾಸ್ತ್ರವೇ ಸತ್ಯವಾದದ್ದು; ವೇದ ಶಾಸ್ತ್ರವೆಲ್ಲಾ ಸುಳ್ಳು, ಎಂದು ತಿಳಿಯುವ ಹಾಗೆ ಮಾಡಲು; ಅವರು ಮೋಹಿತರಾಗಿ, ವೇದೋಕ್ತ ಕರ್ಮಗಳನ್ನೆಲ್ಲಾ ಬಿಟ್ಟು, ಸೌಗತ ಧರ್ಮವನ್ನು ಕೈಕೊಂಡು, ತಮ್ಮ ಮನಸ್ಸಿಗೆ ಬಂದ ಹಾಗೆ ನಡೆಯುತ್ತಾ ಇದ್ದರು.

ಅಷ್ಟರಲ್ಲಿಯೇ, ಇತ್ತಲಾಗಿ ಯುದ್ಧ ಮಾಡುತ್ತಲಿರುವ ಈಶ್ವರನು ದೇವಮಾನದ ಸಾವಿರ ವರುಷ ಯುದ್ಧವಾಡುತ್ತಿರುವಲ್ಲಿ, ಆ ತ್ರಿಪುರಗಳು ಕೂಡಲು; ಆ ಕ್ಷಣದಲ್ಲಿ ಮಹಾ ವಿಷ್ಣು ಸ್ವರೂಪಾದ ತನ್ನ ಬಾಣವನ್ನು ಪ್ರಯೋಗಿಸಿ, ಆ ಮೂರು ಪಟ್ಟಣಗಳನ್ನೂ, ಮೂರು ಮಂದಿ ದೈತ್ಯರನ್ನೂ ಸುಟ್ಟು, ಭಸ್ಮೀಭೂತಾ ಮಾಡಿ, ದೇವತೆಗಳಿಗೆ ಸಂತೋಷವನ್ನು ಉಂಟು ಮಾಡಿದನು. ಆಗಿನಿಂದ ಲೋಕದಲ್ಲಿ ಬಹು ಜನರು ಸೌಗತ ಧರ್ಮವನ್ನು ಅನುಸರಿಸುತ್ತ, ನಡೆದು ಕೊಂಡು, ಬೌದ್ಧರೆನಿಸಿ ಕೊಂಡಿದ್ದಾರೆ.

84. The Tenth or Horse Incarnation.

೮೪. ಕಲ್ಕ್ಯವತಾರದ ಕಥೆ.

ಕಲಿ ಯುಗದ ಅಂತ್ಯದಲ್ಲಿ, ಭೂ ಲೋಕದೊಳಗೆ ಯವನ, ಮ್ಲೇಂಛ, ಪುಳಿಂದ, ಕಿರಾತ, ಶಕ, ಚೀಣ, ಮೊದಲಾದ ದುಷ್ಟರು ಪ್ರಭುಗಳಾಗಿ, ಪ್ರಬಲಿಸಿ, ವೇದ ಮಾರ್ಗವನ್ನೂ, ಬ್ರಾಹ್ಮಣ್ಯವನ್ನೂ, ಯಜ್ಞಾದಿ ಕರ್ಮಗಳನ್ನೂ ಕೆಡಿಸಿ, ಜಾತಿ ಸಂಕರಗಳನ್ನು ಮಾಡುತ್ತ, ಭೂ ಮಂಡಲವನ್ನೆಲ್ಲಾ ಆಕ್ರಮಿಸುತ್ತ ಇರಲು; ಕೆಲವು ಕಾಲದ ಮೇಲೆ ತಾಂಬ್ರಪರ್ಣಿ ಎಂಬ ಒಂದು ನದೀ ತೀರದಲ್ಲಿ ಅಗ್ರಹಾರ ವಾಸಿಯಾದ ಒಬ್ಬ ಬ್ರಾಹ್ಮಣನಿಗೆ ಕುಮಾರ ಭಾವದಿಂದ ಅಶ್ವ ಮುಖನಾಗಿ ಮಹಾ ವಿಷ್ಣುವು ಕಲ್ಕಿ ಎಂಬ ಹೆಸರಿನಿಂದ ಅವತರಿಸಿ, ಕುದುರೆಯ ಮೇಲೆ ಏರಿ ಕೊಂಡು, ಅಸಹಾಯ ಶೂರನಾಗಿ, ತನ್ನ ಕೈ ಕತ್ತಿಯಿಂದ ದುಷ್ಟರಾದ ಮ್ಲೇಂಛರನ್ನೆಲ್ಲಾ ಕೊಂದು, ಶಿಷ್ಟರನ್ನೆಲ್ಲಾ ಸಂರಕ್ಷಿಸಿ, ಧರ್ಮ ಸಂಸ್ಥಾಪನೆಯನ್ನು ಮಾಡಿ, ಭೂ ಮಂಡಲವನ್ನು ರಕ್ಷಿಸುವನು.

———:o———

PART VI.

—:o:—

Proverbs. ಗಾಥೆಗಳು.

ಅಂಕೆ ಇಲ್ಲದ ಕಪಿ ಲಂಕೆ ಸುಟ್ಟಿತು.

ಅಂಜಿದವನ ಮೇಲೆ ಕಪ್ಪೆ ಹಾಕಿದ ಹಾಗೆ.

ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ.

ಅಂದಿಗೆ ಅದೇ ಸುಖ, ಇಂದಿಗೆ ಇದೇ ಸುಖ.

ಅಂಬಲೀ ಕುಡಿಯುವವನಿಗೆ ಮೀಸೇ ತಿಕ್ಕುವವನೊಬ್ಬ.

ಅಕ್ಕ ತಂಗಿಯರದಾದಾಗ್ಯೂ ಅಕ್ಕಸಾಲೆ ಬಿಡ.

ಅಕ್ಕನ ಶಾಲೆ, ಭಾವನ ಕಠಾರಿ.

ಅಕ್ಕರದಿಂದ ಗಿಣೀ ಸಾಕಿ ಬೆಕ್ಕಿನ ಬಾಯಿಗೆ ಕೊಟ್ಟಾರೇ?

ಅಕ್ಕಸಾಲೆ ಕಿವಿ ಚುಚ್ಚಿದರೆ ನೋವಿಲ್ಲ.

ಅಕ್ಕಿ ಕೊಟ್ಟು ಅಕ್ಕನ ಮನೆಯೇ?

ಅಕ್ಕಿ ಜೋಕೆಯಾಗಿರ ಬೇಕು, ಅಕ್ಕನ ಮಕ್ಕಳು ಜೋಕೆಯಾಗಿರ ಬೇ[ಕು.

ಅಗಸರ ಕತ್ತೇ ಕೊಂಡು ಹೋಗಿ, ದೊಂಬರರಿಗೆ ತ್ಯಾಗಾ ಹಾಕಿದ ಹಾಗೆ.

ಅಜ್ಜೀ ಮನೆಗೆ ಅಜ್ಜ ಬಂದ ಹಾಗೆ.

ಅಟ್ಟದಿಂದ ಬಿದ್ದವನನ್ನು ದಡಿಯಿಂದ ಚಚ್ಚಿದ ಹಾಗೆ.

ಅಟ್ಟ ಪಾಯಸದಲ್ಲಿ ಕೆರಾ ಇಟ್ಟ ಹಾಗೆ.

ಅಡವಿಗೆ ಹೋದರೂ ಚಿಗಟನ ಕಾಟ ತಪ್ಪದು.

ಅಡಿಕೆಗೆ ಹೋದ ಮಾನ ಆನೇ ಕೊಟ್ಟರೂ ಬಾರದು.

ಅಡಿಕೆ ಉಡಿಯಲ್ಲಿ ಹಾಕ ಬಹುದು, ಮರವಾದ ಮೇಲೆ ಕೂಡದು.

ಅತಿ ಸ್ನೇಹ ಗತಿ ಕೆಡಿಸೀತು.

ಅತ್ತೆಯೊಡೆದ ಪಾತ್ರೆಗೆ ಬೆಲೆ ಇಲ್ಲ.

ಅದಕ್ಕದು, ಉಳಿ ಕೊಡತಿಯ ನ್ಯಾಯ.

ಅಪ್ಪ ನೆಟ್ಟ ಆಲದ ಮರವೆಂದು ನೇಣು ಹಾಕಿ ಕೊಳ್ಳ ಬಹುದೇ?

ಅಭ್ಯಾಸವಿಲ್ಲದ ಬ್ರಾಹ್ಮಣ ಹೋಮಾ ಮಾಡಿ, ಗಡ್ಡ ಮೀಸೆ ಸುಟ್ಟು ಕೊಂಡ.

ಅರಸನ ಕುದುರೆ ಕಾಲು ತುಳಿದರೆ, ಇವನಿಗೆ ಬಂದ ಭಾಗ್ಯವೇನು?

ಅರಸನ ಕುದುರೆ ಲಾಯದಲ್ಲಿಯೇ ಮುಪ್ಪಾಯಿತು.
ಅಲ್ಪ ಕಾರ್ಯಕ್ಕೆ ಅರಮನೆಗೆ ಹೋಗ ಬಾರದು.
ಅಲ್ಪನಿಗೆ ಐಶ್ವರ್ಯ ಬಂದಾಗ ಅರ್ಧ ರಾತ್ರಿಯಲ್ಲಿ ಕೊಡೇ ಹಿಡಿಸಿಕೊಂಡ.
ಅಲ್ಪರ ಸಂಗ ಅಭಿಮಾನ ಭಂಗ.
ಅಲ್ಲಾಡುವ ಹಲ್ಲಿನ ಮೇಲೆ ಹಲಿಗೇ ಕಲ್ಲು ಬಿದ್ದಂತೆ.
ಅವನ ಮಾತು ಕೆಸರಿನಲ್ಲಿ ನೆಟ್ಟ ಕಂಭದ ಹಾಗೆ.
ಅವನ ಸಾಕ್ಷಿ ಅಡ್ಡ ಗೋಡೆಯ ಮೇಗಣ ದೀಪದ ಹಾಗೆ.
ಅಶನ ವಸನ ಶಿಕ್ಕಿದ ಮೇಲೆ ವ್ಯಸನವ್ಯಾಕೆ?
ಅಳಿದ ಊರಿಗೆ ಉಳಿದವನೇ ಗೌಡ.
ಆಕಳು ಕಪ್ಪಾದರೆ ಹಾಲು ಕಪ್ಪೇ?
ಆಗದ ಕಾರ್ಯಕ್ಕೆ ಆಶೆ ಪಟ್ಟರೆ, ಸಾಗುವದಿಲ್ಲ ಹೋಗುವದಿಲ್ಲ.
ಆಟಕ್ಕೆ ತಕ್ಕ ವೇಷ, ವೇಷಕ್ಕೆ ತಕ್ಕ ಭಾಷೆ.
ಆನೆಗೆ ಗುಂಗುರು ಕಾಡಿದ ಹಾಗೆ.
ಆನೇ ಕಂಡು ಶ್ವಾನ ಬೊಗುಳಿದ ಹಾಗೆ.
ಆನೇ ಕೈಲಿ ಕಬ್ಬು ಕೊಟ್ಟ ಹಾಗೆ.
ಆನೇ ಮೇಲೆ ಹೋಗುವವನನ್ನು ಸುಣ್ಣಾ ಕೇಳಿದ ಹಾಗೆ.
ಆರಾಳು ಮೂರು ಫೌಜು.
ಆಶೆಗೆ ನಾಶವಿಲ್ಲ.
ಇಡೀ ಮುಳುಗಿದ ಮೇಲೆ ಛಳಿ ಉಂಟೇ?
ಇರುಳು ಕಂಡ ಭಾವಿಯಲ್ಲಿ ಹಗಲು ಬಿದ್ದ.
ಇಲಿ ಬೆಕ್ಕಿಗೆ ಸಾಕ್ಷಿ.
ಇಲಿಗೆ ಹೆದರಿ, ಹುಲಿಯ ಬಾಯಿಯಲ್ಲಿ ಬಿದ್ದ.
ಇವನವನಿಗೆ ಎಣ್ಣೆ ಶೀಗೆ.
ಈಚಲು ಮರದ ಕೆಳಗೆ ಮಜ್ಜಿಗೇ ಕುಡಿದರೆ, ನಾಚಿಕೆ ಗೇಡಾಗದೇ?
ಉಂಟು ಮಾಡಿದ ದೇವರು ಊಟವ ಕೊಡಲಾರನೋ?
ಉಂಡದ್ದು ಉಂಡ ಹಾಗೆ ಹೋದರೆ, ವೈದ್ಯನ ಹಂಗೇನು?
ಉಂಬೋಕ್ಕೆ ಉಡೋಕ್ಕೆ ಅಣ್ಣಪ್ಪ, ಕೆಲಸಕ್ಕೆ ಮಾತ್ರ ಡೊಣ್ಣಪ್ಪ?
ಊರೆಲ್ಲಾ ಸೂರೆ ಆದ ಮೇಲೆ ಬಾಗಲು ಹಾಕಿದರು.
ಎಣ್ಣೆ ಬರುವಾಗ ಗಾಣ ಮುರಿಯಿತು.

ಎಣ್ಣೇ ಅಳದ ಮಾನದ ಜಿಡ್ಡು ಹೋದೀತೇ?
ಎತ್ತ ಹೋದರೂ ಮೃತ್ಯು ಬಿಡದು.
ಎತ್ತಿನ ಮುಂದೆ ತೆಂಗಿನ ಕಾಯಿ ಹಾಕಿದ ಹಾಗೆ.
ಎತ್ತು ಹಾರುವದಕ್ಕಿಂತ ಮುಂಚೆ ಕೌದಿ ಹಾರಿತು.
ಎಮ್ಮೇ ಮೇಲೆ ಮಳೆ ಗರೆದ ಹಾಗೆ.
ಎಲ್ಲಾ ಹೊಕ್ಕಿತು, ಬಾಲ ಮಾತ್ರ ಉಳಿಯಿತು.
ಒಂದು ಕಣ್ಣಿಗೆ ಬೆಣ್ಣೆ, ಮತ್ತೊಂದು ಕಣ್ಣಿಗೆ ಸುಣ್ಣ ತೊಡೆಯಬಹುದೇ?
ಒಡಂಬಡಿಕೆಯಿಂದ ಆಗುವದು, ದಡಂಬಡಿಕೆಯಿಂದ ಆದೀತೇ?
ಒಪ್ಪೊತ್ತುಂಡವ ಯೋಗಿ, ಎರಡೊತ್ತುಂಡವ ಭೋಗಿ, ಮೂರ್ಹೊತ್ತುಂಡವ ರೋಗಿ, ನಾಲ್ಹೊತ್ತುಂಡವನ ಹೊತ್ತು ಕೊಂಡು ಹೋಗಿ.
ಒರಳಲ್ಲಿ ಕೂತರೆ ಒನಿಕೇ ಪೆಟ್ಟು ತಪ್ಪೀತೇ?
ಓದಿ ಓದಿ ಮರುಳಾದ.
ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಶರಣಾರ್ತಿ.
ಕಂಡದ್ದು ಮಾತಾಡಿದರೆ ಕೆಂಡದಂತ ಕೋಪ.
ಕಂಡವರ ಮಕ್ಕಳನ್ನು ಭಾವಿಯಲ್ಲಿ ದೂಡಿ, ಆಳಾ ನೋಡಿದ ಹಾಗೆ.
ಕಚೋ ನಾಯಿ ಬೊಗಳದು, ಬೊಗಳೋ ನಾಯಿ ಕಚ್ಚದು.
ಕಡು ಕೋಪ ಬಂದಾಗ ತಡ ಕೊಂಡವನೇ ಜಾಣ.
ಕಡ್ಲಿಗೆ ಬಾಯಿ ತೆರೆದು, ಕಡಿವಾಣಕ್ಕೆ ಬಾಯಿ ಮುಚ್ಚಿದರೆ, ಆದೀತೇ?
ಕತ್ತೆ ಕಸ್ತೂರೀ ಹೊತ್ತ ಹಾಗೆ.
ಕತ್ತೇ ಮೊಲೆಯಲ್ಲಿ ಖಂಡುಗ ಹಾಲಿದ್ದರೇನು?
ಕಪ್ಪೆ ಕೂಗಿ ಮಳೇ ಬರಿಸಿದ ಹಾಗೆ.
ಕಬ್ಬಿಣ ಗಡಾರೀ ನುಂಗಿ, ಶುಂಠೀ ಕಷಾಯಾ ಕುಡಿದ ಹಾಗೆ.
ಕಬ್ಬು ಡೊಂಕಾದರೆ, ಸವಿ ಡೊಂಕೇ?
ಕರಡಿಗೆ ಕೂದಲು ಯಾವದು, ರೋಮವು ಯಾವದು?
ಕರಡೀ ಕೈಗೆ ಹೆದರದವ ಕರೀ ಕಂಬಳಿಗೆ ಹೆದರ್ಯಾನೇ?
ಕರೆಯುವ ಹಸಾ ಕೊಟ್ಟು, ಒದೆಯುವ ಕತ್ತೇ ತಂದ ಹಾಗೆ.
ಕಳ್ಳ ಕಳ್ಳಗೆ ಬಲ್ಲ.
ಕಾಗೆ ಕೋಗಿಲೆಯ ಹಾಗಿದ್ದರೂ, ರಾಗದಲ್ಲಿ ಭೇದವಿಲ್ಲವೇ?
ಕಾಡಲ್ಲಿ ಹೊಂಬಾಳೆ ಬಯಸಿದ ಹಾಗೆ.

ಕಾಡಿನಲ್ಲಿ ತಿರುಗಿ, ಕಟ್ಟಿಗೆ ಇಲ್ಲ ಅಂದ ಹಾಗೆ.
ಕಿಚ್ಚಿದ್ದಾಗ ಭಾವೀ ತೋಡಿದ.
ಕಿಟಕಿಯಿಂದ ನುಸುಳುವವ ಹೆಬ್ಬಾಗಿಲಿಂದ ಬಾರನೇ?
ಕಿಡಿಯಿಂದ ಕಾಡ ಸುಡ ಬಹುದು.
ಕೀಟ ಸಣ್ಣದಾದರೂ ಕಾಟ ಬಹಳ.
ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.
ಕುರುಬನ ಮುಂದೇ ತೋಳ ಕಾದ ಹಾಗೆ.
ಕುಲವನ್ನು ನಾಲಿಗೆ ಹೇಳುವದು.
ಕೂಸು ಕಾಸ ಬಾಳದು, ಜೋಗುಳ ಮುಗಿಲ ಮುಟ್ಟಿತು.
ಕೂಳ ಚೆಲ್ಲಿದ ಕಡೆ ಸಾವಿರ ಕಾಗೆ.
ಕೆರದ ಅಳತೆಗೆ ಕಾಲು ಕೊಯಿಸಿದ ಹಾಗೆ.
ಕೈಗೆ ಬಂದ ತುತ್ತು ಬಾಯಿಗಿಲ್ಲ.
ಕೊಯಿದ ಕಾಲು ನಾಯಿ ತಿಂದರೇನು, ನರಿ ತಿಂದರೇನು?
ಕೋಟಿ ವಿದ್ಯೆಯೂ ಕೂಳಿಗೋಸ್ಕರವೇ.
ಕೋಣನ ಮುಂದೆ ಕಿನ್ನರೀ ಬಾರಿಸಿದ ಹಾಗೆ.
ಗಂಗೆಗೆ ಹೋಗಿ, ತೆಂಗಿನ ಓಟೆ ತಂದ ಹಾಗೆ.
ಗಂಡ ಹೆಂಡರ ಜಗಳದಲ್ಲಿ ಕೂಸು ನಾಶವಾಯಿತು.
ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೇ?
ಗುರುವಿನಂತೆ ಶಿಷ್ಯ, ತಂದೆಯಂತೆ ಮಗ.
ಗೇಣು ಬಿಟ್ಟು ಅಗಳು ದಾಟದ ಹಾಗೆ.
ಘಾಳಿ ಬಂದಾಗಲೇ ತೂರಿ ಕೊಳ್ಳ ಬೇಕು.
ಚರ್ಮ ತೊಳೆದರೆ ಕರ್ಮ ಹೋದೀತೇ?
ಚಿಂತೆಯೇ ಮುಪ್ಪು, ಸಂತೋಷವೇ ಯೌವನ.
ಚಿನ್ನದ ಚೂರಿ ಎಂದು ಕುತ್ತಿಗೆ ಕೊಯಿಸಿ ಕೊಳ್ಳ ಬಹುದೇ?
ಚೇಳಿನ ಮಂತ್ರವನ್ನರಿಯದವ ಹಾವಿನ ಹುತ್ತಕ್ಕೆ ಕೈ ಇಕ್ಕಿದ ಹಾಗೆ.
ಜಗದೀಶ್ವರನ ದಯೆ ಬಂದಿದ್ದರೆ, ಜಗತ್ತೆಲ್ಲಾ ನನ್ನದು.
ಜನ ಮರುಳೋ? ಜಾತ್ರೆ ಮರುಳೋ?
ಜೋಗಿಗೆ ಜೋಗಿ ತಬ್ಬಿ ಕೊಂಡರೆ, ಮೈಯೆಲ್ಲಾ ಬೂದಿ.
ಜ್ಞಾನವಂತನಿಗೆ ಸ್ನಾನವೇಕೆ?

ತಟಸ್ಥನಾದವನಿಗೆ ತಂಟೆ ಏನು?
ತರ್ಕಾ ಮಾಡುವವ ಮೂರ್ಖನಿಂದ ಕಡೆ.
ತಲೆ ಘಟ್ಟಿ ಎಂದು ಕಲ್ಲನ್ನು ಹಾಯ ಬಾರದು.
ತಾ ಕಳ್ಳನಾದರೆ ಪರರನ್ನು ನಂಬ.
ತಾನಾಗಿ ಬೀಳುವ ಮರಕ್ಕೆ ಕೊಡಲಿ ಯಾಕೆ?
ತಾನು ಮಾಡಿದ್ದು ಉತ್ತಮ, ಮಗ ಮಾಡಿದ್ದು ಮಧ್ಯಮ, ಆಳು ಮಾಡಿದ್ದು ಹಾಳು.
ತಾಸಿಗೊಂದು ಕೂಸು ಹೆತ್ತರೆ, ಈಸೀಸು ಮುತ್ತು.
ತಾಳಿದವ ಬಾಳಿಯಾನು.
ತಿಪ್ಪೇ ಮೇಲೆ ಮಲಗಿ, ಉಪ್ಪರಿಗೇ ಕನಸ ಕಂಡ ಹಾಗೆ.
ತೀರಕ್ಕೆ ಬಂದ ಮೇಲೆ ತೆರೆಯ ಭಯವೇ?
ತೀರದಲ್ಲಿರುವ ಮರಕ್ಕೆ ನೀರು ಯಾಕೆ?
ತುಂಟ ಕುದುರೆಗೆ ಗಂಟು ಲಗಾಮು.
ತುಂಡಿಲ್ಲದವನಿಗೆ ತುಂಟನ ಭಯವೇನು?
ತುಂತುರು ಮಳೆಯಿಂದ ತೂಬಿನ ಕೆರೆ ತುಂಬೀತೇ?
ತುಂಬಿದ ಕೊಡ ತುಳುಕುವದಿಲ್ಲ.
ತುಚ್ಛನ ಸಂಗಡ ಬಾಳೋದಕ್ಕಿಂತ ಹುಚ್ಚನ ಸಂಗಡ ಬೀಳೋದು ವಾಸಿ.
ತುಚ್ಛ ಮಾತಾಡುವವನು ಹುಚ್ಚನಿಂದ ಕಡೆ.
ತುದಿಯಲ್ಲಿ ಕಾಣುವದು ಮದುವೇ ಗುಣ.
ದಣಿದ ಎತ್ತಿಗೆ ಮಣುವೇ ಭಾರ.
ದಾರಿ ತಪ್ಪಿದ ಮೇಲೆ ಹಾರಿ ಏನು ಫಲ?
ದಾಸೈಯ ತಿರುಪತಿಗೆ ಹೋದ ಹಾಗೆ.
ದಾಹ ಹತ್ತಿದವನಿಗೆ ಹತ್ತೀ ಕುಡಿಯೋದಕ್ಕೆ ಕೊಟ್ಟ ಹಾಗೆ.
ದಿಕ್ಕಿಲ್ಲದ ಮನುಷ್ಯನಿಗೆ ದೇವರೇ ಗತಿ.
ದಿಕ್ಕು ದಿಕ್ಕಿಗೆ ಹೋದರೂ ದುಖ್ಖ ತಪ್ಪೀತೇ?
ದುಖ್ಖದ ಮೇಲೆ ಸುಖ; ಸುಖದ ಮೇಲೆ ದುಖ್ಖ.
ದುಮ್ಮಿನಿಂದ ಹಮ್ಮು ಕಳ ಕೊಂಡ.
ದೂರಕ್ಕೆ ಬೆಟ್ಟ ನುಣ್ಣಗೆ.
ದೆಬ್ಬೆ ಕೊಟ್ಟು, ಬೊಬ್ಬೇ ಕೊಂಡ.

ದೇವರು ಕೊಟ್ಟರೂ, ಪೂಜಾರಿ ಕೊಡ.
ದೇಶಾಂತರ ಹೋದರೆ, ದೈವ ಬಿಟ್ಟೀತೇ?
ದೊಣ್ಣೇ ಹಿಂಡಿದರೆ, ಎಣ್ಣೆ ಬೀಳುವದೇ?
ದೋತ್ರ ದೊಡ್ಡದಾದರೆ ಗೋತ್ರ ದೊಡ್ಡದೇ?
ದೋಷಾ ಮಾಡುವವನಿಗೆ ರೋಷ ಬಹಳ.
ದ್ರಾಕ್ಷಿ ಶೀ ಎಂದು ಬಳ್ಳಿ ಸಹ ತಿನ್ನ ಬಾರದು.
ಧರ್ಮಕ್ಕೆ ಕೊಟ್ಟ ಎಮ್ಮೇ ಹಲ್ಲು ಹಿಡಿದು ನೋಡಿದ.
ಧರ್ಮಕ್ಕೆ ಕೊಟ್ಟ ದಟ್ಟೀ ಹಿತ್ತಲಿಗೆ ಹೋಗಿ ಮೊಳಾ ಹಾಕಿ ನೋಡಿದ.
ಧೂಪಾ ಹಾಕಿದರೆ ಪಾಪ ಹೋದೀತೇ?
ಧೈರ್ಯ ಉಂಟಾದವನಿಗೆ ದೈವ ಸಹಾಯ ಉಂಟು.
ಧೊರೆಯಿಂದ ಆಗುವಂಥಾದ್ದು ನರಿಯಿಂದ ಆದೀತೇ?
ಧೊರೆ ಹೇಳಿದನೆಂದರೆ ಮರದ ಕಾಯಿ ಬಿದ್ದೀತೇ?
ನಡುಗುವವನ ಮೇಲೆ ಸತ್ತ ಹಾವು ಬಿದ್ದ ಹಾಗೆ.
ನಯವಿದ್ದಲ್ಲಿ ಭಯವಿಲ್ಲ.
ನಯ ಶಾಲಿಯಾದವ ಜಯ ಶಾಲಿಯಾದಾನು.
ನರಕಕ್ಕೆ ನವ ದ್ವಾರ, ನಾಕಕ್ಕೆ ಒಂದೇ ದ್ವಾರ.
ನರಿಯ ಹೊಟ್ಟೇ ಒಳಗೆ ಸಿಂಹದ ಮರಿ ಹುಟ್ಟೀತೇ?
ನರ್ಮದೆಗೆ ಹೋದರೆ ಕರ್ಮ ತಪ್ಪೀತೇ?
ನವಿಲು ಕುಣಿಯೋದ ನೋಡಿ ಕೆಂಬೋತಿ ಪುಕ್ಕಾ ತೆರೆಯಿತು.
ನಷ್ಟ ಬಿದ್ದರೂ ಭ್ರಷ್ಟನಾಗ ಬಾರದು.
ನಾಕದವರಿಗೆ ಲೋಕದ ಭಯವೇನು?
ನಾಕದ ಸಂತೋಷ ಸೂಕರಗೆ ತಿಳಿದೀತೇ?
ನಾಚಿಕೆ ಇಲ್ಲದವರ ಕಂಡರೆ ಆಚೆಗೆ ಹೋಗ ಬೇಕು.
ನಾಡಿಗೆ ಇಬ್ಬರು ಅರಸುಗಳಾದರೆ, ಕೇಡು ಬಪ್ಪುದು ತಪ್ಪದು.
ನಾಡೀ ನೋಡದೆ ಮದ್ದು ಕೊಟ್ಟರೆ, ಕಾಡು ರೋಗ ಬರೋದು.
ನಾಡೀ ಪರೀಕ್ಷೆ ಆಡು ಬಲ್ಲದೇ?
ನಾದವಿದ್ದರೆ ಘಂಟೆ, ವಾದವಿದ್ದರೆ ತಂಟೆ.
ನಾಮವಿದ್ದವಗೆ ಕಾಮ ಕಡಿಮೆಯೇ?
ನಾಯಿ ಕೂಗಿದರೆ ದೇವ ಲೋಕ ಹಾಳಾದೀತೇ?

ನಾಯಿ ಬಡೀಲಿಕ್ಕೆ ಬಣ್ಣದ ಕೋಲೇ?
ನಾಯಿಯ ಬಾಲಾ ಲಳಗೇಲಿ ಹಾಕಿದರೆ, ಡೊಂಕು ಬಿಟ್ಟೀತೇ?
ನಾಳೆ ಎಂಬೋದು ಗಣಪತೀ ಮದುವೆಯ ಹಾಗೆ.
ನಿಜವಾಡಿದರೆ ನಿಷ್ಠೂರ.
ನಿತ್ಯ ದರಿದ್ರನಿಗೆ ನಿಶ್ಚಿಂತೆ.
ನೀರಲ್ಲಿ ಬರೆದ ಬರಹದ ಹಾಗೆ.
ನೀರಿನ ಮೇಲಣ ಗುಳ್ಳೆಯ ಹಾಗೆ.
ನೀರಿಲ್ಲದ ತಾವಿನಲ್ಲಿ ಊರ ಕಟ್ಟಿದ ಹಾಗೆ.
ನೀರು ಇದ್ದರೆ ಊರು, ನಾರಿ ಇದ್ದರೆ ಮನೆ.
ನೀರುಳ್ಳಿ ನೀರಲ್ಲಿ ತೊಳೆದರೆ, ನಾರೋದು ತಪ್ಪೀತೇ?
ನೀರುಳ್ಳಿಯವನ ಸಂಗಡ ಹೋರಾಟಕ್ಕೆ ಹೋದರೆ, ಮೋರೆ ಎಲ್ಲಾ ನಾರದೇ?
ನೀರೊಳಗೆ ಹೋಮಾ ಮಾಡಿದ ಹಾಗೆ.
ನುಂಗಿದ ತುತ್ತಿನ ರುಚಿ ಮತ್ತೆ ಬಯಸಿದ ಹಾಗೆ.
ನುಗ್ಗಿದವನಿಗೆ ಹಗ್ಗ ತಪ್ಪೀತೇ?
ನುಡಿ ಪುರಾತನ, ನಡೆ ಕಿರಾತನ.
ನೆಚ್ಚಿದ ಎಮ್ಮೆ ಕೋಣನಾಯಿತು.
ನೋಟ ಇಲ್ಲದೆ ಓಟಾ ಮಾಡಿದರೆ, ಕಾಟ ತಪ್ಪದು.
ನೋಟ ನೆಟ್ಟಗಿದ್ದರೆ, ಕಾಟ ಹ್ಯಾಗೆ ಬಂದೀತು?
ನೋಡಿದರೆ ಕಾಣದ್ದು ಓಡಿದರೆ ಶಿಕ್ಕೀತೇ?
ನೋಡಿ ನಡಿಯೋನಿಗೆ ಕೇಡು ಬಾರದು.
ಪಂಜರದಲ್ಲಿ ಕಾಗೆ ಇಟ್ಟರೆ, ಪಂಚಮ ಸ್ವರ ಕೊಟ್ಟೀತೇ?
ಪರಡಿಯ ರುಚಿ, ಕರಡಿಗೆ ತಿಳಿದೀತೇ?
ಪಕ್ಷಿಗೆ ಆಕಾಶವೇ ಬಲ, ಮತ್ಸ್ಯಕ್ಕೆ ನೀರೇ ಬಲ.
ಪ್ರಾಯ ಹೆಚ್ಚಾದರೂ ಬಾಯಿ ಚಂದಾಗಿರ ಬೇಕು.
ಪ್ರೇತದ ಭೀತಿ ಹೋದರೂ, ನಾತದ ಭೀತಿ ಹೋಗಲಿಲ್ಲ.
ಬಂಕಾ ಪುರಕ್ಕೆ ಹೋದರೆ ಡೊಂಕು ಬಿಟ್ಟೀತೇ?
ಬಂದ ದಿವಸ ನಂಟ; ಮರು ದಿವಸ ಭಂಟ; ಮೂರನೇ ದಿವಸ ಕಂಟ.
ಬಲಾತ್ಕಾರದಿಂದ ತಂದ ನಾಯಿ ಮೊಲಾ ಹಿಡಿದೀತೇ?

ಬಲೆಗೆ ಶಿಕ್ಕದ್ದು ಕೋಲಿಗೆ ಶಿಕ್ಕೀತೇ?
ಬಲ್ಲವನೇ ಬಲ್ಲ ಬೆಲ್ಲದ ಸವಿ.
ಬಸವನ ಹಿಂದೆ ಬಾಲ.
ಬಾಣದ ಗುರಿ ನೊಣದ ಮೇಲೆಯೇ?
ಬಾಳೇ ತೋಟಕ್ಕೆ ಆನೆ ಬಂದ ಹಾಗೆ.
ಬಾಳೇ ಹಣ್ಣಿಗೆ ಗರಗಸವ್ಯಾಕೆ?
ಬುದ್ಧೀ ಹೇಳಿದವರ ಸಂಗಡ ಗುದ್ದ್ಯಾಟಕ್ಕೆ ಹೋದ ಹಾಗೆ.
ಬೂರುಗದ ಮರವನ್ನು ಗಿಣಿ ಕಾದ ಹಾಗೆ.
ಬೆಂದ ಮನೆಗೆ ಹಿರಿದದ್ದೇ ಲಾಭ.
ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ.
ಬೆಟ್ಟಾ ಅಗಿದು ಇಲೀ ಹಿಡಿದ ಹಾಗೆ.
ಬೆಟ್ಟಕ್ಕೆ ಹೋಗುವವನ ಸೊಂಟದಲ್ಲಿ ಕೊಡ್ಲೀ ಶಿಕ್ಕಿಸಿದ ಹಾಗೆ.
ಬೆರಳು ತೋರಿದರೆ ಮುಂಗೈ ತನಕ ನುಂಗುತ್ತಾನೆ.
ಬೆಳಗಾನಾ ರಾಮಾಯಣಾ ಕೇಳಿ, ಸೀತೆಯೂ ರಾಮನೂ ಏನಾಗ ಬೇಕೆಂದ ಹಾಗೆ.
ಬೆಳಗೂ ಕಡೆದ ಬೆಣ್ಣೆ ಮೋಳ ಬೆಕ್ಕಿನ ಪಾಲಾಯಿತು.
ಬೆಳೆಯ ಸಿರಿ ಮೊಳೆಯಲ್ಲೇ ಕಾಣುವದು.
ಬೇಕು ಅಂದಾಕ್ಷಣ ನಾಕಾ ಸೇರುವನೇ?
ಬೇರು ಬಲ್ಲಾತನಿಗೆ ಎಲೇ ತೋರಿಸ ಬೇಕೇ?
ಬೇಲಿ ಎದ್ದು ಹೊಲಾ ಮೇಯಿದರೆ, ಕಾಯುವವರ್ಯಾರು?
ಬೋರೇ ಗಿಡದಲ್ಲಿ ಕಾರೇ ಹಣ್ಣಾದೀತೇ?
ಭಲಾ ಜಟ್ಟಿ ಅಂದರೆ, ಕೆಮ್ಮಣ್ಣು ಮುಕ್ಕಿದ.
ಭಾಗ್ಯ ಬರುವದನ್ನು ಭಾಗಮ್ಮ ತಡೆದಾಳೇ?
ಭಾರವಾದ ಪಾಪಕ್ಕೆ ಘೋರವಾದ ನರಕ.
ಭಾವೀ ನೀರಾದರೆ ಭಾವಿಸಿದರೆ ಬಂದೀತೇ?
ಭೇದಾ ತಿಳಿಯದಿದ್ದರೂ ವಾದಾ ಬಿಡುವದಿಲ್ಲ.
ಭೋಗಿಗೆ ಯೋಗಿ ಮರುಳು; ಯೋಗಿಗೆ ಭೋಗಿ ಮರುಳು.
ಭ್ರಷ್ಟನಾದರೂ ಕಷ್ಟ ತಪ್ಪದು.
ಭ್ರಾಂತಿ ಹಿಡಿದವನಿಗೆ ವಾಂತೀ ಕೊಟ್ಟರೆ ಹೋದೀತೇ?

ಮಂಗನ ಕೈಯಲ್ಲಿ ಮಾಣಿಕ ಕೊಟ್ಟ ಹಾಗೆ.
ಮಂಗನ ಪಾರುಪತ್ಯ ಹೊಂಗೇ ಮರದ ಮೇಲೆ.
ಮಂತ್ರಿಸಿದರೆ ಮಾವಿನ ಕಾಯಿ ಬಿದ್ದೀತೇ?
ಮಂದೇ ಬಳಿಗೆ ತೋಳ ಬಂದರೆ, ತಂದೇ ಬಳಿಗೆ ಓಡಿ ಹೋದ ಹಾಗೆ.
ಮಕ್ಕಳಿಲ್ಲದವನಿಗೆ ಒಕ್ಕಳ ಹೊನ್ನಿದ್ದರೇನು?
ಮಜ್ಜಿಗೆಗೆ ಹೋದವನಿಗೆ ಎಮ್ಮೇ ಕ್ರಯವ್ಯಾಕೆ?
ಮಟ್ಟು ತಿಳಿಯದೆ ಮಾತಾಡ ಬಾರದು.
ಮಠಪತಿಯಾದರೂ ಶಠತನ ಬಿಡಲಿಲ್ಲ.
ಮಡಿಕೇ ಒಡೆಯುವದಕ್ಕೆ ಅಡಿಕೇ ಮರ ಬೇಕೇ?
ಮಣ್ಣಿ ಕಾಲು ನೀರಿಗಾಗದು; ಮರದ ಕಾಲು ಬೆಂಕಿಗಾಗದು.
ಮಣ್ಣಿ ದೇವರಿಗೆ ಮಜ್ಜನವೇ ಸಾಕ್ಷಿ.
ಮತಿ ಇಲ್ಲದವನಿಗೆ ಗತಿ ಇಲ್ಲ.
ಮತ್ತನಾದವನ ಹತ್ತರ ಕತ್ತಿ ಇದ್ದರೇನು?
ಮದುವೆಗೆ ತಂದ ಅಕ್ಕಿ ಎಲ್ಲಾ ಸೇಸೆಗೆ ತೀರಿ ಹೋಯಿತು.
ಮನೇ ಕಟ್ಟ ಬಹುದು, ಮನಸ್ಸು ಕಟ್ಟ ಕೂಡದು.
ಮನೇ ಕಟ್ಟಿ ನೋಡು, ಮದುವೇ ಮಾಡಿ ನೋಡು.
ಮನೆಗೆ ಮಾರಿ, ಹೆರರಿಗೆ ಉಪಕಾರಿ.
ಮನೇ ಬಲ್ಲೆ, ದಾರೀ ಅರಿಯೆ.
ಮನೇ ದೀಪವಾದರೆ ಮುತ್ತು ಕೊಡ ಬಹುದೇ?
ಮನೇ ತಿಂಬುವವನಿಗೆ ಕದ ಹಪ್ಪಳ ಸಂಡಿಗೆ.
ಮಳೆಗೆ ಹೆದರಿ, ಹೊಳೆಗೆ ಬಿದ್ದ ಹಾಗೆ.
ಮಳೆಗೆ ತಡೆಯದ ಕೊಡೆ ಶಿಡಿಲಿಗೆ ತಡೆದೀತೇ?
ಮಳೇ ನೀರು ಬಿಟ್ಟು ಮಂಜಿನ ನೀರಿಗೆ ಕೈ ಒಡ್ಡಿದ ಹಾಗೆ.
ಮಳೇ ಹನಿ ಬಿಟ್ಟರೂ ಮರದ ಹನಿ ಬಿಡಲಿಲ್ಲ.
ಮಾಡ ಬಾರದ್ದು ಮಾಡಿದರೆ, ಆಗ ಬಾರದ್ದಾಗುವದು.
ಮಾಡಿದ ಪಾಪಕ್ಕೆ ಮನವೇ ಸಾಕ್ಷಿ, ತೋಡಿದ ಭಾವಿಗೆ ಜಲವೇ ಸಾಕ್ಷಿ.
ಮಾಡೋದು ದುರಾಚಾರ, ಮನೆಯ ಮುಂದೆ ವೃಂದಾವನ.
ಮಾಣಿಕ್ಯವನ್ನು ಮಸೀ ಅರವೇಲಿ ಕಟ್ಟಿದ ಹಾಗೆ. [ದು ಬಂದ.
ಮಾತು ಕೊಂಡು ಹೋದವ ಉಂಡ; ಮಾಣಿಕ್ಯ ಕೊಂಡು ಹೋದವ ಹಸಿ

ಮಾತು ಬಂದಾಗ, ಸೋತು ಹೋದವನೇ ಜಾಣ.
ಮಾನದಲ್ಲಿ ಆನೆ ಹಿಡಿದೀತೇ?
ಮಾನ ಹೋದ ಮೇಲೆ ಮರಣವಾದ ಹಾಗೆ.
ಮಾರಿಯು ಕಣ್ಣು ಹೋತನ ಮೇಲೆ.
ಮಾರಿಯು ಮನೆಗೆ ಹೋತ ಕನ್ನಾ ಕೊರೆದ ಹಾಗೆ.
ಮಾರ್‍ಯಮ್ಮ ಅರಿಯದ ಕೋಣವೇ?
ಮೀನು ನೀರಿನಲ್ಲಿ ಮುಣಿಗಿದರೆ, ಸ್ನಾನದ ಫಲ ಬಂದೀತೇ?
ಮುತ್ತಿನ ಚಲುವು ಕತ್ತೆಗೆ ತಿಳಿದೀತೇ?
ಮುತ್ತು ಕೆಟ್ಟರೆ ಭತ್ತಕ್ಕಿಂತ ಕಡೆಯೇ?
ಮೂಕನಿದುರಿಗೆ ಮೂಗು ತುರಿಸಿ ಕೊಂಡ ಹಾಗೆ.
ಮೂಗಿಗಿಂತ ಮೂಗುತಿ ಭಾರ.
ಮೂಗು ಕೊಯಿದು ಮೊಗ್ಗಿನ ತುರಾಯಿ ಕೊಟ್ಟ ಹಾಗೆ.
ಮೂರ್ಖಗೆ ಹೇಳಿದ ಬುದ್ಧಿ ಗೋರ್ಕಲ್ಲಿನ ಮೇಲೆ ಮಳೆ ಹೊಯಿದ ಹಾಗೆ.
ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು.
ಮೂವರ ಕಿವಿಗೆ ಮುಟ್ಟಿದ್ದು ಮೂರು ಲೋಕಕ್ಕೆ ಮುಟ್ಟುವದು.
ಮೂರೆತ್ತಿನ ಬಂಡಿ ಹೊಲಕ್ಕೂ ಹೋಗದು, ಮನೆಗೂ ಬಾರದು.
ಮೆಚ್ಚಿದವನಿಗೆ ಮಸಣವೇ ಸುಖ.
ಮೆಟ್ಟಿದಲ್ಲದೆ ಹಾವು ಕಡಿಯದು.
ಮೆಟ್ಟಿದಾಕ್ಷಣ ಘಟ್ಟ ತಗ್ಗೀತೇ?
ಮೈಯಲ್ಲಿ ಹುಟ್ಟಿದ ರೋಗಕ್ಕಿಂತ ಕಾಡಲ್ಲಿ ಹುಟ್ಟಿದ ಔಷಧ ಮೇಲು.
ಮೊಗೇ ಮಾಡದ ಕುಂಬಾರ ಗುಡಾಣಾ ಮಾಡ್ಯಾನೇ?
ಮೊಳಕೈ ಆಡಿದರೆ ಮುಂಗೈ ಆಡುತ್ತದೆ.
ಯಾತ ತಲೇ ತೂಗಿದರೆ, ಪಾತಾಳದ ನೀರು ಹರಿಯುತ್ತದೆ. ತಾತ ತಲೇ ತೂಗಿದರೆ, ಪಾಗು ಬೀಳುತ್ತದೆ.
ಯಾರೂ ಇಲ್ಲದ ಊರಿಗೆ ಅಗಸರ ಮಾಳಿಯೇ ಮುತ್ತೈದೆ.
ಯಾರೂ ಇಲ್ಲದ ಊರಿಗೆ ಹೋಗಿ ನೀರ ಮಜ್ಜಿಗೇ ಬಯಸಿದ ಹಾಗೆ.
ಯಾವ ರಾಯನಿಗೆ ರಾಜ್ಯವಾದರೂ ರಾಗಿ ಬೀಸೋದು ತಪ್ಪದು.
ಯೋಗಿಯಾದರೂ ಭೋಗಾ ಬಿಡ.
ಯೋಗ್ಯತೆ ಅರಿಯದ ಧೊರೆಯೂ ರೋಗವರಿಯದ ವೈದ್ಯನೂ ಒಂದೇ.

ರಂಗನ ಮುಂದೆ ಶಿಂಗನೇ?

ರಾಗ ನುಡಿಸುವಾಗ ತಂತಿ ಹರಿಯಿತು.

ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡ.

ರಾಯರ ಪಾದದಾಣೆ ಹಾರೇ ನುಂಗು.

ರಾವಣನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆಯೇ?

ಲಂಗು ಹರಿದ ಮೇಲೆ ಜಂಗಮನ ಹಂಗೇನು?

ಲೆತ್ತಾ ಹಾಕಲಿಕ್ಕೆ ಹೋದರೆ, ಬೋಕಿ ಬಿತ್ತು.

ಲೋಕದವರೆಲ್ಲಾ ಸತ್ತರೆ ಶೋಕಾ ಮಾಡುವವರ್‍ಯಾರು?

ವಂಚಕನಿಗೆ ಸಂಚು ಕೊಟ್ಟ ಹಾಗೆ.

ವನವಾಸಕ್ಕೆ ಹೋದರೂ ಘನ ಕಷ್ಟ ಬಿಡಲಿಲ್ಲ.

ವಾಶಿ ಆಗದ ರೋಗಕ್ಕೆ ರಾಶಿ ಮದ್ದು ಮಾಡಿದರೂ ವ್ಯರ್ಥ.

ವಿತ್ತಕ್ಕೆ ತಕ್ಕ ವಿಭವ.

ವೀರನ ಶೌರ್ಯ ಹಾರುವನ ಮೇಲೆಯೇ?

ವೈರವಿದ್ದವನಿಂದ ಕ್ಷೌರಾ ಮಾಡಿಸಿ ಕೊಂಡ ಹಾಗೆ.

ವೈರಾಗ್ಯವುಳ್ಳವನಾದರೂ ವೈರತ್ವ ಬಿಡಲಿಲ್ಲ.

ಶಕುನದ ಹಕ್ಕಿಯು ಗೋಣು ಮುರಿದ ಹಾಗೆ.

ಶಕ್ತಿ ಇದ್ದವನಾದರೂ ಯುಕ್ತಿ ಇದ್ದವನ ಕೆಳಗೆ.

ಶಾಂತಿ ಮಾಡಿದರೂ ಭ್ರಾಂತಿ ಹೋಗಲಿಲ್ಲ.

ಶ್ಯಾನಭೋಗನ ಸಂಬಳ ಸಂತೋ? ಎಂದು ಕೇಳ ಬೇಡ. ಹೆಂಡತೀ ದೆಸೆಯುವರು ಉಂಡರೋ? ಎಂದು ಕೇಳ ಬೇಡ.

ಶಾಪಾ ಕೊಡುವವ ಪಾಪಕ್ಕೆ ಹೆದರ.

ಶಿಟ್ಟಿಗೆ ಕೊಯಿದ ಮೂಗು ಶಾಂತತ್ವದಿಂದ ಹತ್ತೀತೇ?

ಶಿವಾ ಅಂದರೆ ಶೆರಗು ಸುತ್ತಿ ಕೊಂಡ. ಭವಾ ಅಂದರೆ ಭೈರವಾಸು [ಹರಿದು ಬಿಟ್ಟ.

ಶೀತರೆ ಬೀಳುವ ಮೂಗು ಕೊಯಿದರೆ ನಿಂತೀತೇ?

ಶೀಸದ ಉಳಿಯಲ್ಲಿ ಶೈಲಾ ಒಡೆಯ ಬಹುದೇ?

ಶೆಕೆ ಹೆಚ್ಚಾಯಿತೆಂದು ಕಂಬಳಿ ಹೊದ್ದು ಕೊಂಡ.

ಶೆಟ್ಟಿ ಬಿಟ್ಟಲ್ಲೇ ಪಟ್ಟಣ.

ಶೆಟ್ಟಿಯು ಬಾಳು ಸತ್ತಲ್ಲದೆ ತಿಳಿಯದು.

ಶೆಟ್ಟಿ ಶೃಂಗಾರವಾಗುವಾಗ್ಯೆ ಪಟ್ಟಣವೆಲ್ಲಾ ಸೂರೆ ಹೋಯಿತು.

ಶೆಟ್ಟಿ ಸವಾ ಶೇರು, ಲಿಂಗ ಅಡಾ ಶೇರು.
ಶೇದಿದ ನೀರ ಹಾದೀಲಿ ಹಾಕ್ಯಾರೇ?
ಶೇರದ ಗಂಡನಿಗೆ ಮೊಸರಲ್ಲಿ ಕಲ್ಲು ಶಿಕ್ಕಿತು.
ಶ್ವಾನನ ಮುಂದೆ ಗಾನಾ ಹಾಡಿದ ಹಾಗೆ.
ಸಂಕಟ ಬಂದರೆ ವೆಂಕಟರಮಣ.
ಸಂಚು ನಡಿಸಲಿಕ್ಕೆ ಸಂಚಕಾರಾ ಕೊಡ ಬೇಕೇ?
ಸಂತೆ ನೆರೆಯುವದಕ್ಕಿಂತ ಮುಂಚೆ ಗಂಟು ಕಳ್ಳರು ನೆರೆದ ಹಾಗೆ.
ಸಂತೇ ಹೊತ್ತಿಗೆ ಮೂರು ಮೊಳಾ ನೇದ ಹಾಗೆ.
ಸಜ್ಜನನಿಗೂ ಸಜ್ಜನನಿಗೂ ಮೂರು ದಾರಿ. ಸಜ್ಜನನಿಗೂ ದುರ್ಜನನಿಗೂ ಎರಡು ದಾರಿ. ದುರ್ಜನನಿಗೂ ದುರ್ಜನನಿಗೂ ಒಂದೇ ದಾರಿ.
ಸಟೆ ಆಡುವವನಿಗೆ ಮಠದ ಪೂಜೆ ಶಿಕ್ಕೀತೇ?
ಸಣ್ಣ ತಲೆಗೆ ದೊಡ್ಡ ಮುಂಡಾಸು.
ಸತ್ತ ಕುರಿ ಕಿಚ್ಚಿಗೆ ಅಂಜೇತೇ?
ಸತ್ಯವಿದ್ದರೆ ಎತ್ತಲೂ ಭಯವಿಲ್ಲ.
ಸಮಯಕ್ಕಾಗದ ಅರ್ಥ ಸಹಸ್ರವಿದ್ದರೂ ವ್ಯರ್ಥ.
ಸಮಯಕ್ಕಾದವನೇ ನಂಟ, ಸಾಹಸಕ್ಕೊದಗಿದವನೇ ಬಂಟ.
ಸಮುದ್ರದ ನಂಟು, ಉಪ್ಪಿಗೆ ಬಡತನ.
ಸಮುದ್ರದ ಮುಂದೆ ಅರವಂಟಿಗೆ.
ಸಮುದ್ರ ದೊಡ್ಡದಾದರೂ ಪಾತ್ರೆ ಇದ್ದಷ್ಟೇ ನೀರು ಶಿಕ್ಕೀತು.
ಸಮುದ್ರ ಮೇರೆದಪ್ಪಿದರೆ ಯಾರೂ ಮಾಡೋದೇನು?
ಸರಕು ಒಪ್ಪಿಸಿದ ಮೇಲೆ ಸುಂಕವೇ?
ಸರ್ಪನ ಕೂಡೆ ಸರಸವೇ?
ಸಾಧು ಎತ್ತಿಗೆ ಎರಡು ಹೇರು.
ಸಾಧಿಸಿದರೆ ಸಬಳಾ ನುಂಗ ಬಹುದು.
ಸಾಯುವ ತನಕ ಸಾಮು ಕಲಿತರೆ, ಯುದ್ಧಾ ಮಾಡುವದ್ಯಾವಾಗ?
ಸಾಯುವವನ ಕಣ್ಣಿಗೆ ಸುಳಿದವನೇ ಜವರಾಯ.
ಸಾವಿಗಂಜದವನು ನೋವಿಗೆ ಹೆದರ್ಯಾನೇ?
ಸಾವಿರ ಕುದುರೇ ಸರದಾರನಾದರೂ, ಮನೇ ಹೆಂಡತೀ ಕಾಸ್ತಾರ.
ಸಾವಿರ ತನಕಾ ಸಾಲ; ಆ ಮೇಲೆ ಲೋಲ.

ಸಾವಿರ ವರಹಾ ತೂಕ ಚಿನ್ನಕ್ಕೆ ಹಾಗ ತೂಕ ಮಚ್ಚ.
ಸಾವಿರ ಬೆಕ್ಕು ಕೂಡಿದರೆ ಒಂದು ಹುಲಿಯಾದೀತೇ? [ದು ಕಷ್ಟ.
ಸಾವಿರ ಬಾರಿ ಗೋವಿಂದಾ ಎನ್ನ ಬಹುದು; ಒಬ್ಬ ದಾಸೈಯಗೆ ಇಕ್ಕೋ
ಸುಂಕದವನ ಸಂಗಡ ಸುಖ ದುಖ್ಖ ಹೇಳಿದರೆ, ಕಂಕುಳಲ್ಲಿ ಏನು? ಅಂದ.
ಸುಂಕದವನು ಸುಳ್ಳ, ಬಣಜಿಗ ಕಳ್ಳ.
ಸುಡುಗಾಡಿಗೆ ಹೋದ ಹೆಣ ತಿರಿಗಿ ಬಂದೀತೇ?
ಸುವ್ವೀ ಅಂದರೆ ತಿಳಿಯದೇ? ಒನಿಕೇ ರಾಗ.
ಸುಳ್ಳು ದೇವರಿಗೆ ಕಳ್ಳ ಪೂಜಾರಿ.
ಸೂಜಿಗೆ ಸೂಜಿ ಮುತ್ತು ಕೊಟ್ಟ ಹಾಗೆ.
ಸೂಜಿಯಷ್ಟು ಬಾಯಿ, ಗುಡಾಣದಷ್ಟು ಹೊಟ್ಟೆ.
ಸೂಲು ತಪ್ಪಿದರೆ ಗೊಡ್ಡೇ?
ಸೇರು ರಾಜ, ಮಣುವು ಬಂಟ.
ಸ್ಥಿತಿ ಇಲ್ಲದಿದ್ದರೂ, ಗತಿ ಕೆಡ ಬಾರದು.
ಸ್ಮರಣೆ ತಪ್ಪಿದರೂ, ಸೈರಣೆ ಇರ ಬೇಕು.
ಸ್ವಪ್ನದಲ್ಲಿ ದಂಡಿಗೇ ಏರಿ ಗೊಂಡೇ ಹಿಡಿದ ಹಾಗೆ.
ಸ್ವಾಮಿ ದ್ರೋಹೀ ಮನೆಗೆ ಪಂಚ ಮಹಾ ಪಾತಕದ ಬಾಗಲು.
ಹಂಗಾಳಾದ ಮೇಲೆ ಮಂಗನ ಹಾಗೆ ಮಾಡ ಬೇಕು.
ಹಂಗು ಹರಿದ ಮೇಲೆ ತೊಂಗೇನು? ತೊಡರೇನು?
ಹಂಚಿನಲ್ಲುಣ್ಣುವವನಿಗೆ ಹರಿವಾಣವೇಕೆ?
ಹಂದಿ ತೊಳೆದರೂ, ಕೆಸರಲ್ಲಿ ಹೊರಳೋದು ಬಿಡದು.
ಹಣವಿದ್ದವನಿಗೆ ಗುಣವಿಲ್ಲ, ಗುಣವಿದ್ದವನಿಗೆ ಹಣವಿಲ್ಲ.
ಹಣವಿಲ್ಲದವ ಹೆಣ.
ಹಣವಂದರೆ ಹೆಣ ಬಾಯಿ ಬಿಡುತ್ತೆ.
ಹಣ್ಣು ಜಾರಿ ಹಾಲಲ್ಲಿ ಬಿದ್ದ ಹಾಗೆ. ರೊಟ್ಟ ಜಾರಿ ತುಪ್ಪದಲ್ಲಿ ಬಿದ್ದ ಹಾಗೆ.
ಹಣ್ಣೊಂದು ಶಲಭ ದೀಪದ ಮೇಲೆ ಬಿದ್ದು ಸತ್ತ ಹಾಗೆ.
ಹತ್ತರ ಸಾವು ಮದುವೇ ಸಮಾನ.
ಹತ್ತರ ಹಲ್ಲ ಕಡ್ಡಿ ಒಬ್ಬನ ತಲೆ ಹೊರೆ.
ಹನಿ ಗೂಡಿದರೆ ಹಳ್ಳ; ತೆನೆ ಗೂಡಿದರೆ ಭತ್ತ.
ಹನುಮಂತರಾಯ ಹಗ್ಗಾ ತಿನ್ನುವಲ್ಲಿ ಪೂಜಾರೈಯ ಶ್ಯಾವಿಗೇ ಬಯಸಿದ.

ಹನ್ನೆರಡು ವರುಷ ಸಾಧಕಾ ಮಾಡಿ ಮನೆಯ ಮುದುಕಿ ಸೊಂಟಾ ಮು
ಹಬೆಗೆ ತಾಳದೆ ಉರಿಯೊಳಗೆ ಬಿದ್ದನಂತೆ. [ರಿದ ಹಾಗೆ.

ಹರವಿಯ ಅನ್ನದಲ್ಲಿ ಒಂದಗುಳು ನೋಡಿದರೆ ಸರಿ.

ಹರಿಯೋ ಪರಿಯಂತರ ಎಳೆಯ ಬಾರದು, ಮುರಿಯೋ ಪರಿಯಂತರ ಬೊಗ್ಗಿಸ ಬಾರದು.

ಹಲವು ಸಮಗಾರರು ಕೂಡಿ ತೊಗಲು ಹದಾ ಕೆಡಿಸಿದರು.

ಹಲ್ಲು ಇರುವಾಗಲೇ ಕಡ್ಲೇ ತಿನ್ನ ಬೇಕು.

ಹಶೀ ಗೋಡೆಗೆ ಕಲ್ಲು ಹೊಡೆದ ಹಾಗೆ.

ಹಳೆದು ಮೀರಿ ಹೊಸದಿಲ್ಲ. ಬಿಳಿದು ಮೀರಿ ಬಣ್ಣವಿಲ್ಲ.

ಹಳ್ಳೀ ಕುರುಬರಿಗೆ ಗಾಜೇ ಮಾಣಿಕ್ಯ.

ಹಾಕುವದಕ್ಕೆ ತೆಗೆಯುವದಕ್ಕೆ ಗೌಡನ ಕೋಳವೇ?

ಹಾಕೋದು ಬಿತ್ತೋದು ನನ್ನಿಚ್ಛೆ; ಆಗೋದು ಹೋಗೋದು ದೇವರಿಚ್ಛೆ.

ಹಾಗದ ಕೋತಿ ಮುಪ್ಪಾಗದ ಬೆಲ್ಲಾ ತಿಂತು.

ಹಾಗಲವಾಡಿಗೆ ಹೋದರೆಗೀದರೆ, ಹಾಗಕ್ಕೊಂಡೆಮ್ಮೆ ತಂದರೆಗಿಂದರೆ, ಕರೆದರೆಗಿರೆದರೆ, ನಿಮ್ಮವರಿಗೆ ಮಜ್ಜಿಗೆಗಿಜ್ಜಿಗೆ ಕೊಟ್ಟ್ಯುಗಿಟ್ಟ್ಯೇಯಾ?

ಹಾಡಿದ್ದೆ, ಹಾಡೊ, ಕಿಸುವಾಯಿ ದಾಸ.

ಹಾದೀ ಜಗಳ ಹಣವಡ್ಡಕ್ಕೆ ಕೊಂಡ.

ಹಾರೋ ಗುಬ್ಬಿಗೆ ಗೋಧೀ ಕಲ್ಲು ಕಟ್ಟಿದ ಹಾಗೆ.

ಹಾಲಕ್ಕಿಯಾದರೆ ಹಾಲ ಕರೆದೀತೇ?

ಹಾಲಿದ್ದಾಗಲೇ ಹಬ್ಬಾ ಮಾಡು.

ಹಾವಿಗೆ ಹಾಲೆರೆದರೆ, ತನ್ನ ವಿಷಾ ಬಿಟ್ಟೀತೇ?

ಹಾವಿನ ಕೂಡೆ ಕಪ್ಪೆಗೆ ಸರಸವೇ?

ಹಾವ ಕೊಂದು ಹದ್ದಿನ ಮುಂದೆ ಹಾಕಿದ ಹಾಗೆ.

ಹಾವು ಮುಪ್ಪಾದರೆ ವಿಷ ಮುಪ್ಪೇ?

ಹಾಸಿಗೇ ಅರಿತು ಕಾಲ್ನೀಡ ಬೇಕು.

ಹಾಳು ತೋಟಕ್ಕೆ ನೀರು ಹಾಕಿ, ಬೀಳು ರೆಟ್ಟೆ ಬಿದ್ದು ಹೋಯಿತು.

ಹಿಗ್ಗಿದವ ಮುಗ್ಗ್ಯಾನು, ತಗ್ಗಿದವ ಜೈಶ್ಯಾನು.

ಹಿಡಿದದ್ದು ತಪ್ಪಿತು; ಮೆಟ್ಟಿದ್ದು ಮುರಿಯಿತು.

ಹಿಡಿ ತುಂಬಾ ಹಣ ಕೊಟ್ಟರೂ ನುಡಿ ಚನ್ನಾಗಿರ ಬೇಕು.

ಹಿಡಿಯುವದಕ್ಕೆ ಪಟ್ಟಿಲ್ಲ, ನಿಲ್ಲುವದಕ್ಕೆ ಕೊನೆ ಇಲ್ಲ.

ಹಿರಿಯಕ್ಕನ ಚಾಳಿ ಮನೇ ಮಕ್ಕಳಿಗೆಲ್ಲ.

ಹುತ್ತಾ ಬಡಿದರೆ ಹಾವು ಸಾಯುವದೇ?

ಹುಬ್ಬೇ ಮಳೇಲಿ ಬಿತ್ತಿದರೆ, ಹುಲ್ಲೂ ಇಲ್ಲ, ಕಾಳ ಇಲ್ಲ.

ಹುರುಳೀ ಸಾರಿಗೆ ಹೋಗಿ ಕುದುರೆಯ ಬೆಲೇ ಕೇಳಿದ ಹಾಗೆ.

ಹುಲೀ ಬಣ್ಣಕ್ಕೆ ನರೀ ಮೈ ಸುಟ್ಟು ಕೊಂಡ ಹಾಗೆ.

ಹುಲೀ ಮರಿ ಹುಲ್ಲು ಮೇದೀತೆ?

ಹುಲ್ಲೆ ಹಾರಿದ್ದಕ್ಕೂ, ಹುಲಿ ಅಡಗಿದ್ದಕ್ಕೂ ಸರಿ ಬಂದೀತೇ?

ಹೂ ಮಾರಿದ ಊರಲ್ಲಿ ಹುರೀ ಮಾರ ಬಾರದು.

ಹೂವಿನಿಂದ ನಾರು ಮಂಡೇ ಮೇಲೆ.

ಹೆಗ್ಗಣ ಪರ ದೇಶಕ್ಕೆ ಹೋದರೆ, ನೆಲಾ ಕೆರೆಯುವದ ಬಿಟ್ಟೀತೇ?

ಹೆಣ್ಣು ಚಲ್ವೆ, ಕಣ್ಣು ಮಾತ್ರ ಕಾಣುವದಿಲ್ಲ.

ಹೆತ್ತೈಯನ ಅರಿಯದವ ಮುತ್ತೈಯನ ಬಲ್ಲನೇ?

ಹೆತ್ತವರಿಗೆ ಹೆಗ್ಗಣ ಮುದ್ದು.

ಹೆಸರು ಮಾತ್ರ ಗಂಗಾ ಭವಾನಿ, ಕುಡಿಯುವದಕ್ಕೆ ನೀರಿಲ್ಲ.

ಹೇಳಿ ಕೊಟ್ಟ ಬುದ್ಧಿ, ಕಟ್ಟಿ ಕೊಟ್ಟ ಬುತ್ತಿ, ಎಲ್ಲೀ ತನಕಾ ಬರುವದು?

ಹೇಳುವವರು ಹೆಡ್ಡರಾದರೆ, ಕೇಳುವವರಿಗೆ ಮತಿ ಇಲ್ಲವೇ?

ಹೊಟ್ಟು ಕುಟ್ಟಿ ಕೈಯೆಲ್ಲಾ ಗುಳ್ಳೆ.

ಹೊರಗೆ ಹೋಗುವ ಮಾರಿ ನನ್ನ ಮನೇ ಹೊಕ್ಕು ಹೋಗು ಅಂದ ಹಾಗೆ.

ಹೊಸ ವೈದ್ಯನಿಗಿಂತ ಹಳೇ ರೋಗಿ ವಾಶಿ.

ಹೊಸ್ತಿಲ ಸಾರಿಸಿದ ಮಾತ್ರದಲ್ಲಿಯೇ ಹಬ್ಬವಾಯಿತೋ?

ಹೊಳೆ ದಾಟಿದ ಮೇಲೆ ಅಂಬಿಗನ ಮಿಂಡ.

ಹೊಳೆಗೆ ನೆನೆಯದ ಕಲ್ಲು ಮಳೆಗೆ ನೆನೆದೀತೇ?

ಹೊಳೇ ನೀರಿಗೆ ದೊಣ್ಣಪ್ಪ ನಾಯಕನ ಅಪ್ಪಣೆಯೇ?

ಹೊಳೆ ಮೂಗಾವುದವನ್ನ ಕೆರಾ ಕಳಚುವರುಂಟೇ?

ಹೋಗದ ಊರಿಗೆ ದಾರೀ ಕೇಳಿದ ಹಾಗೆ.

ಹೋದರೆ ಒಂದು ಕಲ್ಲು, ಬಿದ್ದರೆ ಒಂದು ಹಣ್ಣು.

ಕ್ಷೌರ ಕತ್ತಿ ಚಲೋದು, ಯಾಕೆ ಅಳುತ್ತೀರಮ್ಮಾ?

ಕ್ಷೌರಕ್ಕೆ ಕೂತಲ್ಲಿ ಶೀನು ಬಂದ ಹಾಗೆ.

ERRATA.

PAGE.	LINE.	FOR.	READ.
1	19	ಕಷ	ಕಷ್ಟ
6	20	ನೋಡು—	—ನೋಡು,
12	5	ಕದುರೆ	ಕುದುರೆ
15	26	ಸುದಿ	ಸುದ್ದಿ
46	1	ಕಟೆ ಯ	ಕಟ್ಲೆಯ
47	last	ಹ್ಟುಟಿ	ಹುಟ್ಟಿ
66	8	ನಡಪಿ	ನಡಿಪಿ
67	14	ಜನವೆಲಾ	ಜನವೆಲ್ಲಾ
72	16	ಯೂದದನ್ನು	ಯೂವದ್ದನ್ನು
74	8	ತನಗೆ—	—ತನಗೆ
80	9	ತಗೆದು	ತೆಗೆದು
,,	24	ಪನಮೈ	ಏನಮ್ಮೈ
83	13	ತಾಯಿಯನ್ನೂ	ತಾಯಿಯನ್ನು
,,	23	ತುಂಬೀತೆ	ತುಂಬೀತೇ
85	last	ದಕೆ	ದಕ್ಕೆ
94	4	omit	ಯಾವ
102	11	ತ್ರಣ	ತೃಣ
,,	16	ಒಡಯು	ಒಡೆಯು
103	1	ಕ	ಕ್ರ
104	6	ಹೊಯಿ ಗೆ	ಹೊಯಿಲಿಗೆ
108	4	ಬುದ್ಗಭಿಮಾನ	ಬುದ್ಧ್ಯಭಿಮಾನ
,,	24	Do.	Do.
112	27	ವನ್ಯೆ	ವನ್ಯೈ
118	17	ಮದುಳ	ಮುದುಕ
120	12	ತ್ತು	ತ್ತ
123	16	ಕೇತನನ್ನು	ಕೇತನನು
126	20	ಫಲಹಾರ	ಫಲಾಹಾರ
132	22	ಎತ್ನಾ	ಯತ್ನಾ
134	19	omit	ವಿಷವೂ
136	22	ತಿಮಿಂಗಲ	ತಿಮಿಂಗಿಲ
144	26	ರವಳಿಂದ	ರವಗಳಿಂದ
157	4	ಪ್ರಶೀಸದೆ	ಪ್ರವೇಶಿಸದೆ
158	26	ವೇಷ	ವೇಶ
162	25	ಶತ್ರುವಾದವನ್ನು	ಶತ್ರುವಾದವನು
166	28	ಪರರಾಷ್ರ	ಪರರಾಷ್ಟ್ರ
175	19	ಕರಾಳವ ದನ	ಕರಾಳ ವದನ
176	8	ಸ್ಕಂದ	ಸ್ಕಂಧ
184	17	ನೀನು	ನೀನನು
191	13	ಸಂಪಾಧಿಸ	ಸಂಪಾದಿಸ
199	27	ಕಾಲಿನಿಂನ	ಕಾಲಿನಿಂದ
202	15	ವಾದ	ರಾದ
203	18	ವಾರ್ಚನಾ	ವಾಚನಾ
205	7	ಮದ್ಧಾನೆ	ಮದ್ದಾನೆ
209	1	put the — after ಭಯದಿಂದ	
210	3	ಎಚ್ಚೆತ್ತು	ಎಚ್ಚತ್ತು
215	22	ಸಂತೋಷವೂ	ಸಂತೋಷವು

PAGE.	LINE.	FOR.	READ.
224	28	ತಾಯಿ	ತಂಗಿ
230	8	ಅಟಂಕ	ಆಟಂಕ
+ ,,	23	ಚಾರನಾಗಿ	ಚಾರದವನಾಗಿ
233	6	ಶಿಲ್ಪ	ಶಿಲ್ಪಿ
,,	15	ಜೆಲುವಾಗಿ	ಚೆಲುವಾಗಿ
234	3	omit , after	ಬಂದ
237	11	ರಾಯನಿಗ	ರಾಯನಿಗೆ
240	21	ಹಕ್ಕಿಯು ನಾನು.	ಹಕ್ಕಿಯು. ನಾನು
243	5	ಸಳ್ಳಾಡದೆ	ಸುಳ್ಳಾಡದೆ
,,	6	ನಮ್ನನ್ನು	ನಮ್ಮನ್ನು
244	1	ಮುಗಳು	ಮುಗುಳು
245	28	ಸಂಕಲ್ಪ	ಸಂಕಟ
247	26	ವಿಂಗಡಪಿ	ವಿಂಗಡಿಪಿ
250	last	ಎಂದ	ಎಂದು
251	28	ವಾಷೇರ್	ವಾಷ್ಣೇರ್
252	18	put the — after ಪುಷ್ಕರನು	
254	9	ಪ್ರಿತಿ	ಪತ್ನಿ
,,	10	ಹೇತ	ಹೇಳ
265	8	—	,
274	14	after ಮಕ್ಕಳನ್ನು insert ನೋಡಿ,	
290	1	ಒಳೆ	ಒಳ್ಳೆ
291	11	ಸಾಕ್ಯ	ಸಾಖ್ಯ
300	9	ಆ ಕಾಲ	ಅಕಾಲ
303	13	ಫೆನಾದನೇ	ಫೆನಾವರೇ
314	9	ಲಾಂಕ	ಲಂಕಾ
324	26	ಭಾಹಿ	ಭಾಷೆ
331	15	ಜಡೆಯನು	ಜಡೆಯನ್ನು
332	14	ಸಂತೋಷ	ಸಂತೋಷ
333	16	ಮಂಗಳವನು	ಮಂಗಳವನ್ನು
335	1	ದಾರಿದ್ರ	ದಾರಿದ್ರ್ಯ
339	16	ಹೆಂಡೆರು	ಹೆಂಡರು
,,	last	ಕೊಂಯ	ಕೊಂಡು
344	26	ದುತ್ತಾ	ಡುತ್ತಾ
348	5	ರಾಜಿ	ರಾಕ್ಷೆ
,,	27	ನಿನ	ನಿನ್ನ
349	4	ನುನ	ನನ್ನ
356	23	ಯುವ್ವ	ಯುವ
358	11	ಉದುಕ	ಉದಕ
361	4	ಬಿಗಿಯು	ಬಿಗಿ
371	13	after ಳಿಂದಲೂ add ಕೂಡಿದ	
374	2	ರಾಮು	ರಾಮನ
392	8	ಶ್ರೇಷ ರು	ಶ್ರೇಷ್ಠರು
397	21	ರತ್ನಮಯು	ನವರತ್ನ
401	1	ರಾಘವೇಂ	ರಾಘವೇಂ
,,	29	ಸಾಹಸನ್ನ	ಸಾಹಸವನ್ನು
403	8	ಮೃ	ಮೈ

PAGE.	LINE.	FOR.	READ.
408	24	omit ೕ	
413	21	ಇವುಗಳೆಲ್ಲಾ	ಆಗ
415	29	ವಿಭೀಷ್ಣ	ವಿಭೀಷಣ
416	17	ಮುನ	ಮನು
420	12	ರಾಜ್ಯದ	ರಾಜ್ಯಶ್ರೀ
424	12	ನಿನು	ನಿನ್ನ
430	28	omit ಿ	
455	2	ಘೌ	ಘೂ
457	1	ಅಣ ನೇ	ಅಣ್ಣನೇ
461	25	ದುಖ ವು	ದುಖ್ಖವು
462	8	ಶೀ	ಶ್ರೀ
464	26	ದುಡಿ	ಡಿದು
465	15	ಮತು	ಮತ್ತು
469	10	ಅಯ್ಯೋಧೆ	ಅಯೋಧ್ಯೆ
472	1	ಗಳನೂ	ಗಳನ್ನೂ
474	21	ಇದ್ದ	ಇದ್ದನು. ಆ
476	last but one	ಸೃಷಿಸು	ಸೃಷ್ಟಿಸು
484	25	ದುಷ	ದುಷ್ಟ
492	11	ಗಭ	ರ್ಭ
495	last	ವಿಷು	ವಿಷ್ಣು
496	26	ಕೇಶ	ಕ್ಲೇಶ
500	1	ಹೊಟಿ	ಹೊಟ್ಟೆ
503	9	omit the first ರ	
,,	26	ರಿ	ಲಿ
507	15	ನಾ	ರಾ
509	19	ಮೆಚಿ	ಮೆಚ್ಚಿ
510	27	ದುಖ	ದುಖ್ಖ
520	3	ಈ–	–ಈ
521	17	ದುಷ	ದುಷ್ಟ
525	27	ಬುದಿ	ಬುದ್ಧಿ
529	14 & 15	ಸೃಷಿ	ಸೃಷ್ಟಿ
531	27	ಆ	ಆತನನ್ನು
537	22	ಕೃಷ	ಕೃಷ್ಣ
539	4	do.	do.
543	14	ಕೊಳ	ಕೊಳ್ಳ
547	27	?	.
548	16	ಕಚೋ	ಕಚ್ಚೋ
550	26	ದುಖ	ದುಖ್ಖ
555	6	ಕೋಣವೇ	ಕೋಣೆಯೇ
,,	8	omit	ಲು
560	4	ಕಾಳ	ಕಾಳೂ

KATHA SANGRAHA

OR

CANARESE SELECTIONS.

PROSE.

COMPILED BY

DANIEL SANDERSON,

WESLEYAN MISSIONARY.

BANGALORE:

PRINTED AT THE WESLEYAN MISSION PRESS,

1863.